EGISTERED No M 266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

...ಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

...ಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಜನವರಿ ೧೯೪೭ [ಸಂಚಿಕೆ ೩೮

...ರಾಜಕೀಯ ಸುಧಾರಣೆಯ ಬಗ್ಗೆ ...ಶ್ರೀಮನ್ಮಹಾರಾಜರವರ ಸಂದೇಶ

ಶ್ರೀಮನ್ಮಹಾರಾಜರವರು ಭಾರತದ ಇತರ ಕಡೆಗಳಲ್ಲಿ ...ರಾಜಕೀಯದ ಬಗ್ಗೆ ಉಂಟಾಗುತ್ತಿರುವ ಬದಲಾವಣೆ ...ಮೊದಲಾದವುಗಳನ್ನೆಲ್ಲಾ ತಮ್ಮ ಚಿತ್ತಕ್ಕೆ ತಂದು ...ಕೊಂಡು ಮೈಸೂರಿನ ರಾಜಕೀಯ ಸುಧಾರಣೆಗಳ ಬಗ್ಗೆ ...ಸಲಹೆಯನ್ನು ಕೊಡಲು ದಿವಾನರಾದ ಸರ್ ಎ ರಾಮ...ಸ್ವಾಮಿ ಮೊದಲಿಯಾರವರಿಗೆ ಅಪ್ಪಣೆಮಾಡಿದ್ದಾರೆ ...ಶ್ರೀಮನ್ಮಹಾರಾಜರವರ ಸಂದೇಶವನ್ನು ಈ ತಿಂಗಳು ...ನೆಯ ತಾರೀಖಿನ ದಿವಸ ಪತ್ರಿಕಾ ಪ್ರತಿನಿಧಿಗಳ ...ಸಮ್ಮೇಳನದಲ್ಲಿ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು ...ಓದಿ ಹೇಳಿದರು ಸಂದೇಶ ಈ ರೀತಿ ಇದೆ—

ನಮ್ಮನ್ನೆಲ್ಲ ಆವರಿಸಿಕೊಂಡಿದ್ದ ಮಹಾಸಂಗ್ರಾಮದ ...ಕಷ್ಟಗಳು, ಜವಾಬ್ದಾರಿಗಳು ಈಗ ಮುಗಿದಿರಲಾಗಿ, ...ಹೊಸ ಹೊಸ ಸಮಸ್ಯೆಗಳೀಗ ಕಾಣಿಸಿಕೊಳ್ಳುತ್ತಿವೆ ...ಎಲ್ಲಾ ಜನರ ಗಮನವೂ ರಾಜ್ಯಾಂಗ ಮತ್ತು ಆರ್ಥಿಕ ...ಪ್ರಗತಿಯ ಕಡೆ ಸೆಳೆಯಲ್ಪಟ್ಟಿದೆ ನಮ್ಮ ಪ್ರಜೆಗಳೂ ...ಅದೇ ರೀತಿಯಾದ ಆಶೋತ್ತರವನ್ನಿಟ್ಟುಕೊಂಡಿದ್ದಾರೆಂ...ಬುದು ನಮ್ಮ ಚಿತ್ತಕ್ಕೆ ಬಾರದೆ ಇಲ್ಲ ನಮ್ಮ ಪ್ರಜೆಗಳ ...ನ್ಯಾಯಸಮ್ಮತವಾದ ಆಶೋತ್ತರಗಳನ್ನು ನೆರವೇರಿಸಿ ...ಕೊಡುವ ಬಗೆ ಹೇಗೆ? ಎಂಬುದನ್ನು ಈಚೆಗೆ ಸ್ವಲ್ಪ ...ಕಾಲದಿಂದ ನಾವು ಆಲೋಚಿಸುತ್ತಿದ್ದೇವೆ ನಾವು ...ನೂತನ ರಾಜ್ಯಾಂಗವ್ಯವಸ್ಥೆಯನ್ನು ಆರಂಭಗೊಳಿಸುವ ...ಸಮಯದಲ್ಲಿ, ಶಾಸನಸಭೆಗಳ ಸಂಯುಕ್ತ ಅಧಿವೇಶನ...ದಲ್ಲಿ ಅಪ್ಪಣೆಕೊಡಿಸಿದ ಭಾಷಣದಲ್ಲಿ 'ರಾಜ್ಯಾಂಗ ಬೆಳ...ವಣಿಗೆಯ ನಂದಾದೀಪವು ನಮಗೆ ವಂಶಪಾರಂಪರ್ಯ...ವಾಗಿ ಬಂದಿದೆ —ಎಂದು ಸೂಚಿಸಿದೆವು ಈ ದೀಪವು ...ಕಾಲಕ್ರಮೇಣ ಮಸಕಾಗದಂತೆಯೂ, ದಿನೇ ದಿನೇ ...ಪ್ರಜ್ವಲ್ಯಮಾನವಾಗಿ ಪ್ರಕಾಶಮಾನವಾಗುವಂತೆಯೂ ...ಮಾಡುವುದೇ ನಮ್ಮ ಮಹದಾಕಾಂಕ್ಷೆ—ಎಂದೂ ...ನಾವು ಅಪ್ಪಣೆ ಕೊಡಿಸಿದೆವು ವಾಸ್ತವವಾಗಿ ಹೇಳ...ಬೇಕಾದರೆ, ಆಡಳಿತದಲ್ಲಿ ಪ್ರಜೆಗಳು ಹೆಚ್ಚು ಹೆಚ್ಚಾಗಿ ...ಭಾಗವಹಿಸುವಂತೆ ಅವರನ್ನು ಸೇರಿಸಿಕೊಳ್ಳುವುದೇ ...ಮೈಸೂರು ರಾಜಮನೆತನದ ನೀತಿಯಾಗಿದೆ

೧೯೪೧ ರಲ್ಲಿ ನಾವು ಆರಂಭಗೊಳಿಸಿದ ಶಾಸನ ಸಭೆ...ಗಳು ಈಗಾಗಲೇ ೫ ವರ್ಷಗಳ ಅವಧಿ ಪೂರೈಸಿವೆ ...ಬ್ರಿಟಿಷ್ ಹಿಂದೂಸ್ಥಾನದಲ್ಲಿ ರಾಜ್ಯಾಂಗ ಪರಿಸ್ಥಿತಿ ಈಗ ...ಪುನರ್ನಿರ್ಮಿಸಲ್ಪಡುತ್ತಿದೆ ಬ್ರಿಟಿಷ್ ಹಿಂದೂಸ್ಥಾನ...ಕ್ಕೆಂದು ರೂಪಿಸಲ್ಪಡುವ ವ್ಯವಸ್ಥೆಯಲ್ಲಿ ಮೈಸೂರು ...ಅಲಂಕರಿಸುವ ಸ್ಥಾನಮಾನ, ಮೈಸೂರು ನಿರ್ವಹಿಸುವ ...ಭಾಗ, ಇವುಗಳು ನಮ್ಮ ಸರ್ಕಾರದ ಮತ್ತು ನಮ್ಮ ...ಪ್ರಜೆಗಳ ಗಮನವನ್ನು ಸೆಳೆದಿವೆ ಈ ಎಲ್ಲಾ ವಿಚಾರ...ಗಳನ್ನೂ ಯೋಚಿಸಿ ಸಂಸ್ಥಾನದ ರಾಜ್ಯಾಂಗ ಶಿಸ್ತನ್ನು ...ಮೂಲಾಗ್ರವಾಗಿ ಪರಿಶೀಲಿಸಿ, ರಾಜ್ಯಾಂಗದ ಪ್ರಗತಿ...ಗೆ ಸಲಹೆಗಳನ್ನು ಸೂಚಿಸುವಂತೆ ನಮ್ಮ ದಿವಾನರಿಗೆ ...ಅಪ್ಪಣೆಮಾಡಿದ್ದೇವೆ

ನಮ್ಮ ದಿವಾನರು ರಾಜ್ಯಾಂಗ ವ್ಯವಸ್ಥೆಗಳ, ಅವುಗಳ ಫಲಾಫಲಗಳ ವಿಚಾರದಲ್ಲಿ ಪೂರ್ಣಜ್ಞಾನ ಪಡೆದಿದ್ದಾರ ಲ್ಲದೆ, ಅನುಭವವನ್ನೂ ಹೊಂದಿದ್ದಾರೆ ಅವರು ಭಾರತದ ಇತರ ಪ್ರದೇಶಗಳಲ್ಲಿ ಆಗುತ್ತಿರುವ ಕರ್ತವ್ಯಗಳನ್ನೂ ಸಂಭವಗಳನ್ನೂ ಉಪೇಕ್ಷಿಸುವುದಿಲ್ಲ ಇಲ್ಲದೆ ಅವರು ನಮ್ಮ ಪ್ರಜಾವರ್ಗದ ಎಲ್ಲ ಪಕ್ಷ ಪಂಗಡಗಳವರ ಸಮಾಲೋಚನೆಗಳನ್ನು ಪಡೆದು ಅವರು ಕೊಡುವ ಸಲಹೆ, ಸಮಾಲೋಚನೆ ಮುದ್ದಿವಾದ ಸಹಕಾರಗಳಿಂದ ನಮಗೆ ಒಪ್ಪಿಸಲು ಸಲಹೆಗಳನ್ನು ರಚಿಸಿ ನಮ್ಮ ಸಲಹೆ ಗಿಡುವರು ಈ ಸಲಹೆಗಳ ಸ್ವರೂಪ ಏನೇ ಇರಲಿ ಅವು ನಮ್ಮ ಮನಸ್ಸಿನಲ್ಲಿರುವ ಒಂದು ಮಹಾಧ್ಯೇಯವನ್ನೇ ಪೂರೈಸಿಕೊಡುತ್ತವೆಂದು ನಾವು ನಂಬಿದ್ದೇವೆ

ಆ ಧ್ಯೇಯವೇನೆಂದರೆ—ಎಲ್ಲರಿಗೂ ಸಮಾನಾವಕಾಶ ಲಭಿಸಬೇಕು ನಮ್ಮ ಪ್ರಿಯ ಪ್ರಜೆಗಳು ಸುಖಸಂತೃಪ್ತಿ ರಕ್ಷಣೆಗಳನ್ನು ಸಾಧಿಸಿಕೊಡಬೇಕು ಈ ಮಹಾಕಾರ್ಯದಲ್ಲಿ ನಮ್ಮ ಪ್ರಜೆಗಳೆಲ್ಲರೂ ಸಹಕರಿಸಬೇಕೆಂದು ನಾವು ಅಪ್ಪಣೆ ಮಾಡುತ್ತೇವೆ

ಮೈಸೂರು ದಿವಾನರ ಹೇಳಿಕೆ

ಮಹಾಪ್ರಭುಗಳ ಈ ದಿವ್ಯಸಂದೇಶದ ಬಗ್ಗೆ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಈ ರೀತಿ ಹೇಳಿದರು—

ನನ್ನ ಮೇಲೆ ಮಹಾಪ್ರಭುಗಳು ಹೊರಿಸಿರುವ ಕರ್ತವ್ಯವನ್ನು ನಿರ್ವಹಿಸಲು ನನ್ನ ಶಕ್ತಿಮೀರಿ ದುಡಿಯುತ್ತೇನೆ ಆ ಕೆಲಸದಲ್ಲ ನನಗೆ ರಾಜಕೀಯ ಪಕ್ಷಗಳವರೂ, ಗಣ್ಯಮಾನ್ಯರೂ, ಪತ್ರಿಕೆಗಳೂ ಸರ್ವಸಹಾಯ ನೀಡಬೇಕು ಪ್ರಭುಗಳು ಅಪ್ಪಣೆಕೊಡಿಸಿರುವ ಮಾರ್ಗವನ್ನು ನಾನು ಶಿರಸಾವಹಿಸಿ ಅನುಸರಿಸುವೆನು ಮಹಾಪ್ರಭುಗಳ ಸಂದೇಶದಲ್ಲಿ ಕೋಮುವಾರು ಸೌಹಾರ್ದ ಅಡಕವಾಗಿದೆ ಪ್ರಕೃತ ಪರಿಸ್ಥಿತಿಯಲ್ಲಿ ಕೋಮುವಾರು ಸೌಹಾರ್ದವು ಅಗತ್ಯ, ದೇವರ ಕೃಪೆಯಿಂದ ನಮ್ಮ ಸಂಸ್ಥಾನದಲ್ಲಿ ಶಾಂತಿ ನೆಲಸಿದೆ ಎಲ್ಲೋ ಒಂದೆರಡು ಕಡೆಗಳನ್ನು ಬಿಟ್ಟರೆ ಇಡೀ ಸಂಸ್ಥಾನದಲ್ಲಿ ಕೋಮುವಾರು ಸೌಹಾರ್ದವಿದೆ ಬ್ರಿಟಿಷ್ ಭಾರತದಲ್ಲಿ ಕೆಲವೆಡೆಗಳಲ್ಲಿ ಆಗಿರುವ ಗಲಭೆಗಳಿಗೆ ನಮ್ಮ ಸಂಸ್ಥಾನದ ಸ್ಥಿತಿಗತಿಗಳನ್ನು ಹೋಲಿಸಿ ನೋಡಿದರೆ, ನಮ್ಮ ಸಂಸ್ಥಾನದಲ್ಲಿ ಜನರು ಪೂರ್ಣ ಶಾಂತಿಯಿಂದ ಇದ್ದಾರೆಂದೇ ಹೇಳಬೇಕು ಅನೇಕ ಹಿಂದೂ ಮುಸ್ಲಿಂ ಪ್ರಮುಖರು ಎರಡು ಕೋಮುಗಳಲ್ಲೂ ಸೌಹಾರ್ದವಿದೆಯೆಂದೂ ಭ್ರಾತೃಭಾವವಿದೆಯೆಂದೂ ಹೇಳಿ ಅದರಂತೆ ನಡೆಸುತ್ತಿರುವುದೂ ಸಹ ನನಗೆ ಗೊತ್ತಿದೆ ಈ ರೀತಿ ಕೋಮುವಾರು ಶಾಂತಿಯು ಶಾಶ್ವತವಾಗಿ ನೆಲಸುವಂತೆ ಪತ್ರಿಕೆಗಳು ಸಹಾಯಮಾಡಬೇಕು. ಈಚೆಗೆ ಕೆಲ ಕನ್ನಡ ಮತ್ತು ಉರ್ದು ಪತ್ರಿಕೆಗಳಲ್ಲಿ ಬಂದಿರುವ ಕೆಲ ಕೋಮುವಾರು ಸಂಬಂಧದ ವರ್ತಮಾನಗಳನ್ನು ದಿವಾನರು ಸಭಿಕರ ಗಮನಕ್ಕೆ ತಂದರು ಬ್ರಿಟಿಷ್ ಭಾರತದ ನಾನಾ ಭಾಗಗಳಲ್ಲಿ ನಡೆದ ಘಟನೆಗಳ ಬಗ್ಗೆ ಅಲ್ಲಿಯ ಪತ್ರಿಕೆಗಳು ತಮಗೆ ತೋಚಿದಂತೆ ಬರೆಯುತ್ತಿವೆ ಪತ್ರಿಕೆಗಳಿಗೆ ಸ್ವಾತಂತ್ರ್ಯವಿರಬೇಕೆಂಬುದೇನೋ ನಿಜ ' ಆದರೆ ಪತ್ರಿಕೆಗಳು ಪ್ರತಿವಿಚಾರವನ್ನೂ ಚೆನ್ನಾಗಿ ಶೋಧಿಸಿ ನಿಜಾಂಶವನ್ನೇ ಪ್ರಕಟಿಸಬೇಕು ಅದರಲ್ಲೂ ಕೋಮುವಾರು ಗಲಭೆಗಳ ಸಂಬಂಧದಲ್ಲಿ ನಿಜಾಂಶಗಳನ್ನು ಸುಲಭವಾಗಿ ಕಂಡುಹಿಡಿಯಲು ಸಾಧ್ಯವಿಲ್ಲ ಕೋಮುವಾರು ಘಟನೆಗಳ ಬಗ್ಗೆ ಒಂದುವೇಳೆ ನಿಜಾಂಶಗಳು ದೊರೆತರೂ ಅವುಗಳನ್ನು ಪ್ರಕಟಿಸಬಾರದು ಏಕೆಂದರೆ ಅವುಗಳಿಂದಾಗುವ ದುಷ್ಪರಿಣಾಮಗಳನ್ನು ಊಹಿಸಲಾರಿಗೂ ಸಾಧ್ಯವಿಲ್ಲ ಆದ್ದರಿಂದ ಪತ್ರಿಕೆಗಳು ಈ ವಿಚಾರದಲ್ಲಿ ಬಹು ಬುದ್ಧಿವಂತಿಕೆಯಿಂದ ವರ್ತಿಸಬೇಕು ಉತ್ಪ್ರೇಕ್ಷೆಯಿಂದ ಕೂಡಿದ ವರದಿಗಳನ್ನಾಗಲಿ ಕೋಮುವಾರು ಸೌಹಾರ್ದ ಕೆಡಿಸುವ ಲೇಖನಗಳನ್ನಾಗಲಿ ಪ್ರಕಟಿಸಬಾರದು ಪತ್ರಿಕೆಗಳು ಈ ಮುಖ್ಯ ವಿಚಾರದಲ್ಲಿ ಸರ್ಕಾರಕ್ಕೂ ಅಧಿಕಾರಿಗಳಿಗೂ ಸಹಾಯ ನೀಡಬೇಕು ಎಂದು ಹೇಳಿದರು

ಘಾಟಿಸುಬ್ರಹ್ಮಣ್ಯ ದನಗಳ ಜಾತ್ರೆ

ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿ ಸುಬ್ರಹ್ಮಣ್ಯ ದನಗಳ ಜಾತ್ರೆಯ ಬಹುಮಾನ ವಿನಿಯೋಗ ಸಮಾರಂಭವು ೨ ನೇ ತಾ॥ ರೆವಿನ್ಯೂ ಮಂತ್ರಿಗಳಾದ ಶ್ರೀ ಜೆ ಅಪ್ಪಾಜಿಗೌಡರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿತು ಮಂತ್ರಿಗಳು ಅತ್ಯುತ್ಕೃಷ್ಟವಾದ ರಾಸುಗಳಿಗೆ ಬೆಳ್ಳಿ ಕಪ್ಪುಗಳು ಮತ್ತು ಮೆಡಲುಗಳನ್ನು ಬಹುಮಾನಿಸುತ್ತಾ, ತಮ್ಮ ಭಾಷಣದಲ್ಲಿ ದನಗಳ ಅಭಿವೃದ್ಧಿಗೆ ಉತ್ಕೃಷ್ಟವಾದ ಹೋರಿಗಳ ಆವಶ್ಯಕತೆಯನ್ನು ಒತ್ತಿ ಹೇಳಿದರು ದೇವಸ್ಥಾನದ ಕಾರ್ಯಕಲಾಪಗಳಿಗೆ ಹೆಚ್ಚಿನ ಸಹಾಯ ನೀಡುವ ಬಗ್ಗೆ ಸರ್ಕಾರದವರು ಸಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು ಆದರೂ ಉದಾರಿಗಳಾದ ಪುಣ್ಯವಂತರು ಹೆಚ್ಚು ಹೆಚ್ಚಾಗಿ ಮುಂದೆ ಬಂದು ಈ ಬಗ್ಗೆ ಭಗವತ್ಸೇವೆಯನ್ನು ನಡೆಸಬೇಕೆಂದು ತಿಳಿಸಿದರು

ಡೆಪ್ಯುಟಿ ಕಮಿಷನರುಗಳ ವರ್ಗಾವರ್ಗಿ

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಗಿರುವ ಶ್ರೀ ಜಿ ಸುಂದರರಾಯರನ್ನು ಲ್ಯಾಂಡ್ ರಿಕಾರ್ಡು ಡೈರೆಕ್ಟರನ್ನಾಗಿಯೂ, ಲ್ಯಾಂಡ್ ರಿಕಾರ್ಡು ಡೈರೆಕ್ಟರಾಗಿರುವ ಶ್ರೀ ಸೂರ್ಯನಾರಾಯಣಶೆಟ್ಟರನ್ನು ಕಡೂರು ಡೆಪ್ಯುಟಿ ಕಮಿಷನರನ್ನಾಗಿಯೂ, ಕಡೂರಿನಲ್ಲಿರುವ ಶ್ರೀ ಜಿ ಎನ್ ನಾಗರಾಜರಾಯರನ್ನು ಮೈಸೂರು ಡೆಪ್ಯುಟಿ ಕಮಿಷನರನ್ನಾಗಿಯೂ, ಮೈಸೂರಿನಲ್ಲಿರುವ ಶ್ರೀ ಸಿ ಎಂ ಹೆಚ್ ರಣಜೋಧ್‌ಸಿಂಗರವರನ್ನು ಪೋಲೀಸ್ ಐ. ಜಿ. ಪಿ. ಗಳನ್ನಾಗಿಯೂ ವರ್ಗಾಯಿಸಲಾಗಿದೆ

ಪಂಚಾಚಾರ್ಯಪ್ರಭಾ.

೧೯೪೭ನೆಯ ಜನವರಿ ತಾ|| ೧೩ನೇ ಸೋಮವಾರ

ಆಚಾರಃ ಪ್ರಥಮೋಧರ್ಮಃ

ಮಾನವಕೋಟಿಯ ಉದ್ಧಾರಕ್ಕೋಸ್ಕರ ಆಚಾರವೇ ಶ್ರೇಷ್ಠವಾದ ಸಾಧನವಾಗಿರುತ್ತದೆ. ಆಚಾರದಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಪ್ರಾಪ್ತವಾಗುತ್ತವೆ. ಪೂರ್ವಕಾಲದ ಮಹರ್ಷಿಗಳೂ, ಮಹಾತ್ಮರೂ, ಸತ್ಪುರುಷರೂ ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಜಗತ್ತಿನಲ್ಲಿ ಈ ಹೊತ್ತಿನವರೆಗೆ ತಮ್ಮ ಪವಿತ್ರನಾಮವನ್ನುಳಿಸಿಕೊಂಡು ಸರ್ವರಿಂದಲೂ ಸ್ತುತ್ಯರಾಗಿ ಪ್ರಕಾಶಿಸುತ್ತಿರುವರು. ಆದುದರಿಂದಲೇ ಭಗವತೀ ಶ್ರುತಿದೇವಿಯು "ಆಚಾರಃ ಪ್ರಥಮೋ ಧರ್ಮಃ" ಎಂದು ಈ ಆಚಾರದ ಶ್ರೇಷ್ಠತೆಯನ್ನು ನಾನಾವಿಧವಾಗಿ ಕೊಂಡಾಡಿರುವಳು. ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸುವಸಮಯದಲ್ಲಿ—

ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ॥

ಎಂದು ಬೋಧಿಸಿರುವರು. ಅಂದರೆ ಭಗವದ್ಭವಾನೀಪತಿಯು ಸದಾಚಾರದಿಂದಲೇ ಪ್ರೀತಿಯುಳ್ಳವನಾಗುವನೆಂದೂ, ಮಾನವನು ಸದಾಚಾರದಿಂದ ಮಾನ್ಯನಾಗುವನೆಂದೂ, ಸದಾಚಾರಶೂನ್ಯನಾದ ಮಾನವನಿಗೆ ಶಿವಪ್ರಸಾದವು ಲಭಿಸುವದಿಲ್ಲವೆಂದೂ, ಆದುದರಿಂದ ಮನುಷ್ಯನು ಮುಖ್ಯವಾಗಿ ಸದಾಚಾರಸಂಪನ್ನನಾಗಿ ಪರಮಪುರುಷಾರ್ಥವನ್ನು ಸಂಪಾದಿಸಿಕೊಳ್ಳಬೇಕೆಂದೂ ಬೋಧಿಸಿದ್ದಾರೆ. ಅಲ್ಲದೆ ಲೋಕವಿಖ್ಯಾತರಾದ ಗೌತಮಮಹರ್ಷಿಗಳೂ ಕೂಡ ಈ ಆಚಾರದ ಮಹತ್ವವನ್ನು ಬಹುರೀತಿಯಿಂದ ವರ್ಣಿಸಿದ್ದಾರೆ.

ಆಚಾರಃ ಪರಮೋಧರ್ಮ ಆಚಾರಃ ಪರಮಂ ಧನಂ।
ಆಚಾರಃ ಪರಮಾ ವಿದ್ಯಾ ಆಚಾರಃ ಪರಮಾ ಗತಿಃ।

ಸದಾಚಾರೇಣ ದೇವತ್ವಮೃಷಿತ್ವಂ ಚ ವರಾನನೇ।
ಉಪಾಗತಾಃ ಕುಯೋನಿತ್ವಂ ಮನುಷ್ಯಾಸ್ತದ್ವಿಪರ್ಯಯೇ।

ಜ್ಞಾನವನಾಚಾರಹೀನೇಷು ಸರ್ವಥೈವ ಸಮುಸ್ಥಿತಂ।
ಯಥಾ ಚಂಡಾಲಭಾಂಡೇಷು ಗಂಗಾ ಭಾಗೀರಥೀಜಲಂ॥

ಆಚಾರವೇ ಶ್ರೇಷ್ಠವಾದ ಧರ್ಮವೆಂದೂ, ಆಚಾರವೇ ಶ್ರೇಷ್ಠವಾದ ದ್ರವ್ಯವೆಂದೂ, ಆಚಾರವೇ ಶ್ರೇಷ್ಠವಾದ ಬ್ರಹ್ಮವಿದ್ಯೆಯೆಂದೂ, ಆಚಾರವೇ ಶ್ರೇಷ್ಠವಾದ ಮೋಕ್ಷವೆಂದೂ, ಇಂಥ ಸರ್ವೋತ್ತಮವಾದ ಆಚಾರದಿಂದಲೇ ಮನುಷ್ಯರು ದೇವತ್ವವನ್ನೂ ಹಾಗೂ ಮಹರ್ಷಿತ್ವವನ್ನೂ ಪಡೆಯುವರೆಂದೂ, ಆಚಾರಹೀನರಾದ ಮನುಷ್ಯರು ಶ್ವಾನಸೂಕರಾದಿ ಜನ್ಮಗಳನ್ನು ತಾಳುವರೆಂದೂ, ಚಂಡಾಲರ ಪಾತ್ರೆಯಲ್ಲಿ ಪವಿತ್ರವಾದ ಗಂಗಾಜಲವಿದ್ದರೂ ಆ ಜಲವು ಹೇಗೆ ಪ್ರಯೋಜನಕಾರಿಯಾಗುವದಿಲ್ಲವೋ, ಹಾಗೆ ಅನಾಚಾರಿಗಳಲ್ಲಿ ಜ್ಞಾನವಿದ್ದರೂ ಕೂಡ ಆ ಜ್ಞಾನವು ಪ್ರಯೋಜನಕಾರಿಯಲ್ಲವೆಂದೂ, ಬೋಧಿಸಿರುವರು. ಇದರ ಮೇಲಿಂದ ಆಚಾರದ ಆವಶ್ಯಕತೆಯು ಸನಾತನಧರ್ಮಾವಲಂಬಿಗಳಿಗೆ ಎಷ್ಟರಮಟ್ಟಿಗೆ ಇರಬಹುದೆನ್ನುವದು ಚಿಕ್ಕ ಬಾಲಕರಿಗೂ ಕೂಡ ತಿಳಿಯುವಂತಿದೆ. ಹೀಗಿದ್ದರೂ ಸಹ ಈ ಕಾಲದಲ್ಲಿ ಈ ಆಚಾರದ ಸ್ವರೂಪವನ್ನು ತಿಳಿದು ಅದರಂತೆ ವರ್ತಿಸುವವರು ಕೇವಲ ವಿರಳರಾಗಿದ್ದಾರೆ. ಪೂರ್ವಕಾಲದ ಜನರು ಸದಾಚಾರಸಂಪನ್ನರಾಗಿ ಧರ್ಮ ಕರ್ಮಗಳಿಗೆ ಭೀತರಾಗಿ ವರ್ತಿಸುತ್ತಿದ್ದರು. ಈಗಿನವರು ಅವೆಲ್ಲವನ್ನೂ ಬಹಿಷ್ಕಾರವನ್ನು ಹಾಕಿಬಿಟ್ಟಿದ್ದಾರೆ. ಈಗಿನವರಿಗೆ ತಮ್ಮ ಧರ್ಮ ಬೇಡ; ಕರ್ಮ ಬೇಡ; ಗುರುಗಳು ಬೇಡ; ಆಚಾರವು ಬೇಡ; ತಂದೆಯು ಬೇಡ; ತಾಯಿಯು ಬೇಡ; ಆಚಾರವನ್ನು ಬೋಧಿಸುವವರು ಮೊದಲೇ ಬೇಡವಾಗಿದೆ. ಯಾರು ಅನಾಚಾರವನ್ನು ಬೋಧಿಸುವರೋ ಅವರೇ ಈಗಿನವರಿಗೆ ತಂದೆ ತಾಯಿಗಳು, ಗುರುಹಿರಿಯರು, ಬಂಧುಬಳಗದವರಾಗಿದ್ದಾರೆ. ವೀರಶೈವಧರ್ಮಶಾಸ್ತ್ರದಲ್ಲಿ ಭವಿಗಳ ನೆರಳೂ ಸಹ ಇವರ ಮೇಲೆ ಬೀಳಕೂಡದೆಂದು ಇಷ್ಟು ಕಟ್ಟುನಿಟ್ಟಿನಿಂದಿರುವಲ್ಲಿ ಆ ಮಾರ್ಗವನ್ನು ತೊರೆದು ಅಲ್ಪರೀತಿಯಿಂದಾದರೂ ಕ್ರಿಯೆಗಳನ್ನು ನಾಗಿಸದ ಸ್ಥಿತಿಯಿಂದ ಅನ್ಯಮತೀಯರ ಕಾಫೀಕ್ಲಬ್ಬುಗಳಿಗೆ ಹೋಗಿ ಚಹಾ, ಕಾಫೀ, ಉಪ್ಪಿಟ್ಟು, ದೋಸೆ, ಕೇಸರಿಬಾತ, ವಾಂಗಿಭಾತ, ಮೊದಲಾದುವುಗಳನ್ನು ತಿಂದು ತೇಗುತ್ತ ಬರುತ್ತಿರುವುದನ್ನು ನೋಡಿದರೆ ಯಾರಿಗೆತಾನೇ ವ್ಯಸನವೆನಿಸಲಿಕ್ಕಿಲ್ಲ? ಈ ಧರ್ಮಭ್ರಷ್ಟರು ತಾವು ಕೆಡುವದಲ್ಲದೆ ತಮ್ಮ ಮನೆಯವರನ್ನೆಲ್ಲ ಕೆಡಿಸುವರು. ಅಲ್ಲದೆ ಸದಾಚಾರಿಗಳ ಮನೆಯಲ್ಲಿ ಹೋಗಿ ಅವರೊಡನೆ ಪಂಕ್ತಿಯಲ್ಲಿ ಕುಳಿತು ತಿಂದು ಅವರು ಅಲ್ಪಸ್ವಲ್ಪ ಆಚಾರವನ್ನು ಕಾಯ್ದುಕೊಂಡಿದ್ದರೂ ಅವರನ್ನು ಸಹ ಕೆಡಿಸುತ್ತಿರುವರು. ಈ ಕಾಲದಲ್ಲಿ ಇಂಥ ಧರ್ಮಲಂಪಟರ ಸಹವಾಸಕ್ಕೆ ಬಿದ್ದು ಅನೇಕರು ಕೆಡಲಿಕ್ಕೆ ಪ್ರಾರಂಭಿಸಿರುವರು. ಇದು ಕಲಿಕಾಲದ ಪ್ರಭಾವವೆಂದೇ ಹೇಳಬೇಕಾಗಿದೆ. ಈ ಜನರಲ್ಲಿ ಮೂರು ತರಗತಿಗಳಿವೆ. ಒಂದನೆಯ ತರಗತಿಯವರು ಉಡುಪಿಹೋಟಲ್ಲುಗಳಿಗೆ ಹೋಗುವವರು, ಎರಡನೆಯ ತರಗತಿಯವರು ಯೂರೋಪಿಯನ್ನರ ಹೋಟಲುಗಳಿಗೆ ಹೋಗುವವರು. ಮೂರನೆಯ ತರಗತಿಯವರು ಮುಸಲ್ಮಾನರ ಹೋಟಲ್ಲುಗಳಿಗೆ ಹೋಗುವವರು, ಇವರೇ ಹೆಚ್ಚಿನ ಗ್ರೇಡಿನವರು. ಇಂಥ ಅಧಮರು ಸಮಾಜದಲ್ಲಿ ಹಬ್ಬುತ್ತ ಹೋದರೆ ಸಮಾಜವು ಸುಧಾರಿಸುವ ಬಗೆಯೆಂತು? ಶಿವಪ್ರೀತಿಯಾಗುವದೆಂತು? ಕಂಡಕಂಡ ಜಾತಿಯವರು ಬಾಯಲ್ಲಿಟ್ಟುಕೊಂಡು ಕುಡಿದು ಎಂಜಲದಿಂದ ಕೂಡಿದ ಪಾತ್ರೆಯಲ್ಲೇ ಮತ್ತೊಬ್ಬನು ಕುಡಿಯುತ್ತಾನೆ. ಅದರಲ್ಲೇ ಬೇರೊಬ್ಬನು ಪಾನಮಾಡುತ್ತಾನೆ. ಇದೊಂದು ನೂತನ ಯಮಲೋಕವೆಂದೇ ಹೇಳಬೇಕಾಗಿದೆ. ಇಂಥ ಧರ್ಮವಿರುದ್ಧ ಅಸಹ್ಯದುಷ್ಕೃತಿಯನ್ನು ಮಾಡಲಿಕ್ಕೆ ಇವರ ಮನಸ್ಸು ಹೇಗೆ ಒಪ್ಪುವದೋ ಯಾರಿಗೂ ತಿಳಿಯದಾಗಿದೆ. ಇಂಥ ಪುಣ್ಯಾತ್ಮರಿಗೆ ಸದಾಚಾರಿಗಳು ಅವಶ್ಯವಷ್ಟಿಗೆ ಬುದ್ಧಿವಾದವನ್ನು ಹೇಳಿ ಅವರನ್ನು ಈ ದುರ್ಮಾರ್ಗದಿಂದ ತಪ್ಪಿಸುವ ಪ್ರಯತ್ನವನ್ನು ಮಾಡಬೇಕೆಂದು ಕೋರುತ್ತೇವೆ. ಈ ರೀತಿ ಅನಾಚಾರಶೀಲರಾಗಿ ನಡೆಯುವವರು ಇಹಲೋಕದ ಅಲ್ಪಸುಖದ ಕಡೆಗೆ ದೃಷ್ಟಿಯನ್ನಿಡದೆ ಪಾಪಪುಣ್ಯಗಳ ಮತ್ತು ಧರ್ಮಾಧರ್ಮಗಳ ಸ್ವರೂಪವನ್ನು ತಿಳಿದು ತಾವು ಯಾವ ಮತದಲ್ಲಿ ಜನ್ಮವೆತ್ತಿರುವರೋ ಆ ಮತದ ಕಟ್ಟಳೆಗಳನ್ನೂ ಮೇಲೆ ಹೇಳಿದಂತ ಆಚಾರದ ಶ್ರೇಷ್ಠತೆಯನ್ನೂ ತಿಳಿದುಕೊಂಡು ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಇಹಪರಸುಖಗಳೆರಡನ್ನೂ ಅನುಭವಿಸಿ ಧನ್ಯರಾಗಬೇಕೆಂದು ಆಶಿಸುತ್ತೇವೆ.

ವರ್ತಮಾನಸಂಗ್ರಹ

ವಿದೇಶಾಂಗ ಸಚಿವ ಬೈರನ್ಸ್‌ರ ರಾಜೀನಾಮೆ

ಅಮೆರಿಕದ ವಿದೇಶಾಂಗಮಂತ್ರಿ ಜೇಂಸ್ ಬೈರನ್ಸ್ ರಾಜೀನಾಮೆ ಇತ್ತಿದ್ದಾರೆ. ಅವರ ಸ್ಥಾನದಲ್ಲಿ ಜನರಲ್ ಜಾರ್ಜ್ ಮಾರ್ಷಲ್ ವಿದೇಶಾಂಗ ಮಂತ್ರಿಯಾಗಿ ನೇಮಕಹೊಂದಿದ್ದಾರೆ. ತಮ್ಮ ವೈದ್ಯರ ಸೂಚನೆಯಂತೆ ಕಳೆದ ಏಪ್ರಿಲ್ ತಿಂಗಳಲ್ಲೇ ಬೈರನ್ಸರು ರಾಜೀನಾಮೆ ಕೊಡಬೇಕೆಂದಿದ್ದರು. ಆದರೆ ಇಟಲಿ ಮೊದಲಾದ ರಾಷ್ಟ್ರಗಳೊಡನೆ ಶಾಂತಿಕರಾರುಗಳಾಗುವವರೆಗೆ ಅಧಿಕಾರದಲ್ಲಿರಲು ಟ್ರೂಮನ್ನರ ಅಪೇಕ್ಷೆಯಂತೆ ಅವರು ಒಪ್ಪಿದ್ದರು. ಫೆಬ್ರವರಿ ೧೦ನೇ ತಾ|| ಆ ಶಾಂತಿಕರಾರುಗಳಿಗೆ ಸಹಿ ಆಗುವುದರಿಂದ ಈಗ ಅವರು ನಿವೃತ್ತರಾಗಲು ಬಯಸಿದರು. ಅಧ್ಯಕ್ಷರು ಅತ್ಯಂತ ವಿಷಾದದಿಂದ ಅವರನ್ನು ಬಿಟ್ಟುಕೊಡಲು ಒಪ್ಪಿದ್ದಾರೆ.

ಅಮೇರಿಕಾ ಸರ್ಕಾರದ ನೂತನ ನೀತಿಯ ವಿವರಣೆ

ಅಮೇರಿಕನ್ ಕಾಂಗ್ರೆಸ್ಸಿನ ಸಂಯುಕ್ತ ಅಧಿವೇಶನದಲ್ಲಿ ಅಧ್ಯಕ್ಷ ಟ್ರೂಮನ್ನರು ಭಾಷಣ ಮಾಡುತ್ತಾ ದೇಶದ ಒಳಪಕ್ಷಗಳಲ್ಲೂ ವಿದೇಶಾಂಗ ವ್ಯವಹಾರಗಳಲ್ಲೂ ರಿಪಬ್ಲಿಕನ್ನರೂ ಡಿಮೊಕ್ರಾಟರೂ ಒಗ್ಗಟ್ಟಿನಿಂದ ಇರಬೇಕೆಂದು ತಿಳಿಸಿದರು.

ನಮ್ಮ ಕಾರ್ಯಗಳ ಜಯಾಪಜಯಗಳ ಪರಿಣಾಮ ಕೇವಲ ನಮಗೆ ಮಾತ್ರ ತಟ್ಟದೆ ವಿಶ್ವದ ಕೋಟ್ಯಂತರ ಜನರಿಗೂ ತಟ್ಟುವುದು ಎಂದು ಹೇಳಿದರು. ಅವರ ಭಾಷಣದ ಕೆಲಮುಖ್ಯಾಂಶಗಳಿವು—"ಘರ್ಷಣೆಗಳನ್ನು ತಪ್ಪಿಸಲು ರಾಜಕೀಯ ಸಮಸ್ಯೆಗಳ ಪರಿಶೀಲನೆಗೆ ಒಂದು ಕಮಿಷನ್ ನೇಮಿಸುವುದು. ವಿಶ್ವದ ಹಿತಕ್ಕೆ ವಿರೋಧವಾದ ಯಾವ ಒಪ್ಪಂದವನ್ನೂ ಅಮೇರಿಕ ಮಾಡಿಕೊಳ್ಳುವುದಿಲ್ಲ. ಆಟಾಮಿಕ್ ಶಕ್ತಿಯ ಒಗ್ಗಿ ಅಮೇರಿಕಕ್ಕೆ ಸರ್ವಸ್ವಾಮ್ಯವಿರಬೇಕೆಂದೇನೂ ಅಮೇರಿಕ ಆಶಿಸುತ್ತಿಲ್ಲವಾದರೂ, ಮತ್ತೆ ಯಾವ ರಾಷ್ಟ್ರವೂ ಇದನ್ನು ಯುದ್ಧದಲ್ಲಿ ಉಪಯೋಗಿಸುವಂತಿರಬಾರದು."

ಇನ್‌ಫ್ಲೂಯೆನ್ಝಾದಿಂದ ಕುದುರೆ ಮತ್ತು ಬೆಕ್ಕುಗಳ ಸಾವುಗಳು

ಲಂಡನ್ನಿನಲ್ಲಿ ಪ್ರಾಣಿಗಳಿಗೆ ಇನ್‌ಫ್ಲೂಯೆನ್ಝಾ ವ್ಯಾಧಿ ಸಾಂಕ್ರಾಮಿಕವಾಗಿ ಹರಡಿದೆ. ಕಳೆದ ವಾರಾಂತ್ಯದಲ್ಲಿ ಸಾವಿರಾರು ಕುದುರೆಗಳು ಈ ವ್ಯಾಧಿಯಿಂದ ನರಳುತ್ತಿವೆ. ಬ್ರಿಸ್ಟಲಿನಲ್ಲಿ ಬೆಕ್ಕುಗಳೂ ಈ ವ್ಯಾಧಿಯಿಂದ ಪರಿತಪಿಸುತ್ತಿವೆ. ಅವುಗಳೆಲ್ಲ ಬದುಕುವುದು ಕಷ್ಟವೆಂದು ವೈದ್ಯರು ಹೇಳುತ್ತಿದ್ದಾರೆ.

ಶ್ರೀಮತಿ ಕೃಪಲಾನಿಯವರನ್ನು ಅಪಹರಿಸುವ ಪ್ರಯತ್ನ

ಬಂಗಾಳದ ದತ್ತಪಾರಾ ಜಿಲ್ಲೆಯಲ್ಲಿ ನಿರಾಶ್ರಿತರಿಗೆ ಸಹಾಯಕರಾಗಿ ಕೆಲಸಮಾಡುತ್ತಿದ್ದ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರ ಪತ್ನಿ ಶ್ರೀಮತಿ ಸುಚೇತಾರವರನ್ನು ಅಪಹರಿಸಲು ಕೆಲವು ಮಹಮದೀಯರು ಪ್ರಯತ್ನ ಪಟ್ಟರಂತೆ! ಡಾ|| ದಾಸಗುಪ್ತರವರಿಗೆ ಈ ವಿಷಯವು ತಮ್ಮಿಂದ ಚಿಕಿತ್ಸೆ ಪಡೆಯುತ್ತಿದ್ದ ಒಬ್ಬ ಮುಸ್ಲಿಂ ವೃದ್ಧನಿಂದ ತಿಳಿಯಿತು. ಆಗ ಅವರು ಈ ಕೃತ್ಯಕ್ಕೆ ಸನ್ನಾಹ ಮಾಡಿಕೊಂಡು ಹೋಗುತ್ತಿದ್ದ ಮುಸ್ಲಿಂ ಪುಂಡರ ಗುಂಪನ್ನು ಮಿಲಿಟರಿ ಸಹಾಯದಿಂದ ಚದುರಿಸಿ, ಶ್ರೀಮತಿ ಸುಚೇತಾರವರನ್ನೂ ಅವರ ಅನುಯಾಯಿಗಳಾದ ಇತರ ಮಹಿಳೆಯರನ್ನೂ ರಕ್ಷಿಸಿದರೆಂದು ವರದಿಯಾಗಿದೆ.

ಬೊಂಬಾಯಿನಲ್ಲಿ ಗಲಭೆ

ಬೊಂಬಾಯಿನಲ್ಲಿ ಮತ್ತೆ ಇರಿತದ ಪ್ರಕರಣಗಳು ಜೋರಾಗಿವೆ. ಮುನಿಸಿಪಲ್ ಕಾರ್ಪೊರೇಷನ್ ಸದಸ್ಯರೂ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ಮುಖಂಡರೂ ಆದ ದೇವರೂಕರರವರು ಆಸ್ಪತ್ರೆಯಿಂದ ಬರುವಾಗ್ಗೆ ಇರಿಯಲ್ಪಟ್ಟುದರಿಂದ ಮೃತರಾದರು. ಇವರ ಗೌರವಾರ್ಥವಾಗಿ ಬೊಂಬಾಯಿಯ ೩೯ ಹತ್ತಿಯ ಗಿರಣಿಗಳೂ ೧೧ ಫ್ಯಾಕ್ಟರಿಗಳೂ ಶಾಲೆಕಾಲೇಜುಗಳೂ ಮುಚ್ಚಲ್ಪಟ್ಟಿದ್ದವು.

ಹೈದರಾಬಾದ್ ಸುಧಾರಣೆ

ಸರ್ ಅಲ್ಬಿಯನ್ ಬ್ಯಾನರ್ಜಿಯವರಿಗೆ ಆಹ್ವಾನ

ಹೈದರಾಬಾದಿನಲ್ಲಿ ರಾಜ್ಯಾಂಗ ಸುಧಾರಣೆಯನ್ನು ಯಾವರೀತಿ ಮಾಡಬಹುದೆಂಬ ಬಗ್ಗೆ ಸಲಹೆ ಕೊಡಲು ಮಿರ್ಜಾ ಇಸ್ಮೇಲ್‌ರವರು ಮೈಸೂರಿನ ಮಾಜಿ ದಿವಾನರಾದ ಸರ್ ಅಲ್ಬಿಯನ್ ರಾಜಕುಮಾರ್ ಬ್ಯಾನರ್ಜಿಯವರನ್ನು ಆಹ್ವಾನಿಸಿದ್ದಾರೆ.

ಡಾ|| ಸರ್ ಎಂ. ವಿಶ್ವೇಶ್ವರಯ್ಯನವರಿಗೂ ಆಹ್ವಾನ

ಸರ್ ಮಿರ್ಜಾರವರು ಮಾಜಿ ಮೈಸೂರು ದಿವಾನರಾದ ಡಾ|| ಸರ್ ಎಂ. ವಿಶ್ವೇಶ್ವರಯ್ಯನವರನ್ನು ಕೈಗಾರಿಕೆ ಮತ್ತು ನೀರಾವರಿ ಕಾರ್ಯಗಳ ವಿಷಯವಾಗಿಯೂ ಅದರಲ್ಲೂ ತುಂಗಭದ್ರಾಯೋಜನೆಯ ವಿಷಯವಾಗಿಯೂ ಹೈದರಾಬಾದ್ ಸರ್ಕಾರಕ್ಕೆ ಸಲಹೆಮಾಡಲು ಆಹ್ವಾನಿಸಿದ್ದಾರೆ.

ಜಿನ್ನಾರವರ ಹೇಳಿಕೆ

ಮಿ|| ಜಿನ್ನಾರವರು ಎ. ಐ. ಸಿ. ಸಿ ಠರಾವಿನ ಬಗ್ಗೆ ಅಭಿಪ್ರಾಯವನ್ನು ಈಗಲೇ ಕೊಡಲು ಸಾಧ್ಯ ವೆಂದೂ, ಶೀಘ್ರ ಲೀಗು ವರ್ಕಿಂಗ್ ಕಮಿಟಿಯನ್ನು ಸೇರಿಸಿ ಅದರ ಅಭಿಪ್ರಾಯವನ್ನು ಪಡೆಯುವುದಾಗಿಯೂ ಹೇಳಿಕೆಯನ್ನಿತ್ತಿದ್ದಾರೆ.

ಕಾಂಗ್ರೆಸ್ಸಿನವರ ಕೀಟಲೆ

ಒಬ್ಬನು ಸತ್ತನು, ಇಬ್ಬರಿಗೆ ಗಾಯ

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಶುಚೀಂದ್ರಂ ಎಂಬ ಊರಿನಲ್ಲಿ ದೇವರ ರಥೋತ್ಸವವು ನಡೆಯುತ್ತಿರು ವಾಗ್ಗೆ ಕಾಂಗ್ರೆಸ್ಸಿನವರು ಕಾಂಗ್ರೆಸ್ ಧ್ವಜವನ್ನು ರಥದ ಮೇಲೆ ಕೆಲವು ಕಟ್ಟಬೇಕೆಂದು ಯೋಚಿಸಿ ಗುಂಪಿನೊಳಗಿ ನಿಂದ ಬಂದು ದೇವರ ರಥವನ್ನು ನಿಲ್ಲಿಸಿ ಅದರ ಮೇಲೆ ಧ್ವಜವನ್ನು ಕಟ್ಟಿಬಿಟ್ಟರು. ಆದರೆ ದೇವಸ್ಥಾನದ ಅಧಿಕಾರಿ ಗಳು ಆ ಧ್ವಜವನ್ನು ಕಿತ್ತುಹಾಕಿದರು. ಆಗ್ಗೆ ಗುಂಪಿನ ಲ್ಲಿ ಕೆಲವರು ಯಾತ್ರಿಕರಮೇಲೂ ಪೋಲೀಸಿನವರ ಮೇಲೂ ಕಲ್ಲುಗಳನ್ನು ಬೀರಲಾರಂಭಿಸಿದರು ಇದರಿಂದ ಅನೇಕಜನ ಯಾತ್ರಿಕರಿಗೂ ಪೋಲೀಸರಿಗೂ ಗಾಯ ಗಳಾದವು. ಆಗ್ಗೆ ಪೋಲೀಸರು ಲಾಠಿ ಛಾರ್ಜು ಮಾಡಿ ದರು ಆದರೂ ಪ್ರಯೋಜನವಾಗದೇ ಇದ್ದುದರಿಂದ ಜನಗೆ ಎರಡುಸಾರೆ ಗುಂಡುಹಾರಿಸಿದರು ಇದರಿಂದ ಒಬ್ಬನು ಸತ್ತನು ಇಬ್ಬರಿಗೆ ಗಾಯಗಳಾಗಿವೆಯೆಂದು ಪ್ರಕಟವಾಗಿದೆ ದೇವರ ರಥದ ಮೇಲೆ ಕಾಂಗ್ರೆಸ್ಸಿನ ಧ್ವಜವೇಕೆ? ಇದು ಉದ್ಧಟತನವಲ್ಲವೆ? ಶಾಂತಿ ಯುತವಲ್ಲಿ ಅಶಾಂತಿಯನ್ನುಂಟುಮಾಡುವವು ಕಾಂಗ್ರೆಸ್ಸಿ ನವರಿಗೆ ಒಂದು ಆಟವಾದಂತೆ ತೋರುತ್ತದೆ "ಬೆಕ್ಕಿಗೆ ಚೆಲ್ಲಾಟನಾದರೆ ಇಲಿಗೆ ಪ್ರಾಣಸಂಕಟ" ಎಂಬ ಗಾದೆಯಂತೆ ಇವರ ಆಟವು ಇತರರಿಗೆ ಪ್ರಾಣಸಂಕಟವಾಗಿಬಿಡುವುದು ಕಾಂಗ್ರೆಸ್ಸಿನಲ್ಲಿ ಕೆಲವರು ಕುಚೇಷ್ಟೆಜನರು, ಮೊದಲು ಅಶಾಂತಿಯನ್ನೆಬ್ಬಿಸಿ ಆಮೇಲೆ ಮರೆಯಾಗಿಬಿಡುವರು ಆದರೆ ನಿರಪರಾಧಿಗಳು ಪ್ರಾಣನೀಗುವರು ಭರತಖಂಡದ ನಾನಾಭಾಗಗಳಲ್ಲಿ ಈವಿಧವಾದ ದೃಶ್ಯವು ಕಂಡುಬರು ತ್ತಿರುವುವು ಈವಿಧವಾದ ಜನರಿಗೆ ದೇವರು ಸದ್ಬುದ್ಧಿ ಯನ್ನಿತ್ತರೆ, ಭರತಖಂಡಕ್ಕೆ ಕಲ್ಯಾಣವುಂಟಾಗುವದೆಂದು ಬಹುಜನರು ಹಾರೈಸುತ್ತಿರುವರು

ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿ ಟ್ಯೂಟಿನ ವಿದ್ಯಾರ್ಥಿಗಳು ರಾಮೇಶ್ವರದವರೆಗೆ ಪ್ರವಾಸ ಮಾಡಿಕೊಂಡು ಬರಲು ಸರ್ಕಾರದವರು ಸೌಕರ್ಯಗಳ ನ್ನೊದಗಿಸಿರುವರೆಂದು ತಿಳಿದುಬಂದಿದೆ

ಮೈಸೂರು ಒಂಟಿಕೊಪ್ಪಲಿನಲ್ಲಿ ಸೌದೆ ಅಂಗಡಿಯನ್ನಿ ಟ್ಟಿರುವ ರಾಮಯ್ಯ ಎಂಬುವರು ಅನಧಿಕೃತವಾದ ತೂಕದ ಕಲ್ಲುಗಳನ್ನು ಉಪಯೋಗಿಸುತ್ತಿದ್ದುದು ರುಜು ವಾತಾಗಿ ರಾಜಧಾನಿಯ ಮೊದಲನೇ ಮ್ಯಾಜಿಸ್ಟ್ರೇಟರು ಅವರಿಗೆ ೫ ರೂ ಜುಲ್ಮಾನೆ ವಿಧಿಸಿದರು.

ಸೈಕಲ್ಲುಗಳಮೇಲೆ ಕಂಟ್ರೋಲ್ ವಜಾ

ಸೈಕಲ್ಲುಗಳ ಹಂಚಿಕೆ ಮತ್ತು ಸೈಕಲ್, ಅದಕ್ಕೆ ಸಂಬಂಧಪಟ್ಟ ಭಾಗಗಳು ಮತ್ತು ಅದಕ್ಕೆ ಬೇಕಾಗುವ ಇತರ ಸಾಮಾನುಗಳ ಮೇಲೆ ಇದ್ದ ಕಂಟ್ರೋಲ್ ಆಜ್ಞೆ ಯನ್ನು ಮೈಸೂರು ಸರಕಾರದವರು ೧೯೪೭ ನೇ ಜನ ವರಿ ತಿಂಗಳು ೩ ನೇ ತಾರೀಖಿನಿಂದ ತೆಗೆದುಹಾಕಿರು ವುದಾಗಿ ಅಧಿಕೃತ ಪ್ರಕಟನೆ ಹೊರಟಿದೆ.

ಕಮ್ಯೂನಿಸ್ಟ್ ಕೆಲಸಗಾರರಿಗೆ ಗಡೀಪಾರು

ಕೋಲಾರ ಚಿನ್ನದಗಣಿಯಲ್ಲಿ ಕಮ್ಯೂನಿಸ್ಟ್ ಮತ್ತು ಕಾರ್ಮಿಕನಾಯಕರಾದ ಶ್ರೀ ಕೆ. ಎಸ್. ವಾಸನ್ ಮತ್ತು ಎಂ. ವಿ ಗೋವಿಂದನ್‌ರವರನ್ನು ಪಬ್ಲಿಕ್ ಸೇಫ್ಟಿ ಕಾನೂನು ಪ್ರಕಾರ ಸಂಸ್ಥಾನದಿಂದ ಗಡೀಪಾರು ಮಾಡ ಲಾಗಿದೆ. ಇವರಿಬ್ಬರನ್ನು ಸೆಂಟ್ರಲ್ ಜೈಲಿನಿಂದ ಬಿಡು ಗಡೆ ಮಾಡಿ ಪೋಲೀಸು ಕಾವಲಿನಲ್ಲಿ ಸಂಸ್ಥಾನದ ಗಡಿ ಯಾಚೆಗೆ ಕರೆದುಕೊಂಡು ಹೋಗಿ ಬಿಡಲಾಯಿತು

ಗೋಪಾಲರಾಯರು ಕೊಡಬೇಕಾದ ಜಾಮೀನು

ಬೆಂಗಳೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರಾದ ಶ್ರೀ ಕಂದಸ್ವಾಮಿಪಿಳ್ಳೆಯವರು ಬಿ ಎಲ್ ಗೋಪಾ ಲರಾಯರ ಪೂರಿಟ ಅಪೀಲು ಅರ್ಜಿಯನ್ನು ಪರಿಶೀಲಿಸಿ ಆಜ್ಞೆಕೊಟ್ಟರು ಅರ್ಜಿದಾರರು ಸ್ವಂತವಾಗಿ ೭೦೦೦ರೂ ಜಾಮೀನು ಮತ್ತು ಇದರ ಜತೆಗೆ ತಲಾ ೭೦೦೦ ರೂ ಗಳ ಎರಡು ಜಾಮೀನುಗಳನ್ನು ಟ್ರಯಲ್ ಕೋರ್ಟಿಗೆ ತೃಪ್ತಿಕರವಾದ ರೀತಿಯಲ್ಲಿ ಒದಗಿಸಿದರೆ ಸಾಕು ಎಂದು ಈ ಆಜ್ಞೆಯಲ್ಲಿ ತೀರ್ಪಿತ್ತಿದ್ದಾರೆ

ಶ್ರೀ ಬಿ ಎಲ್ ಗೋಪಾಲರಾಯರ ಮೇಲೆ ಮತ್ತೊಂ ದು ಇನ್ಸಾಲ್ವೆನ್ಸಿ ಅರ್ಜಿ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ದಾಖಲಾಗಿದೆ ಈ ಅರ್ಜಿಗೆ ಸಂಬಂಧಿಸಿದ ಮೊಬಲಗು ೧ಲಕ್ಷ೨೫ಸಾವಿರ ರೂಗಳು

ಸಂಸ್ಥಾನದ ಆಹಾರ ಪರಿಸ್ಥಿತಿ

ಡಿ|| ೧೫ಕ್ಕೆ ಮುಕ್ತಾಯವಾದ ೧೫ ದಿನಗಳಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯ ಬಗ್ಗೆ ಹೊರಟಿರುವ ಸರ್ಕಾರದ ಪ್ರಕಟನೆಯಲ್ಲಿ ಈ ಅಂಶಗಳನ್ನು ತಿಳಿಸಲಾ ಗಿದೆ ಮೇಲ್ಕಂಡ ಅವಧಿಯಲ್ಲಿ ಬಂದ ಅಕಾಲ ಮಳೆ ಯಿಂದ ಸಂಸ್ಥಾನಾದ್ಯಂತವೂ ಪೈರಿಗೆ ನಷ್ಟವಾಯಿತು ಆಹಾರದ ಅರಿಕೆ ಪರಿಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಇಲ್ಲ ೧೩ ನಗರ ಗ್ರಾಮಗಳಲ್ಲಿ ರೇಷನ್ ವ್ಯವಸ್ಥೆ ಜಯ ಪ್ರದವಾಗಿ ನಡೆದುಕೊಂಡು ಬರುತ್ತಿದೆ ನೆಲಗಡಲೆ ಬೀಜ ಮತ್ತು ಎಣ್ಣೆಯ ಬೆಲೆಯ ಬಗ್ಗೆ ಪುನಃ ಯೋಚಿಸಲಾಗು ವುದು ಚಳ್ಳಕೆರೆಯಲ್ಲೊಂದು ಹೊರತು ಮಿಕ್ಕೆಲ್ಲಕಡೆ ಗಳಲ್ಲಿದ್ದ ಉಚಿತ ಭೋಜನಾಲಯಗಳನ್ನು ರದ್ದುಗೊಳಿಸ ಲಾಗಿದೆ

ಮೈಸೂರು ದೇಶದಲ್ಲಿ ಪ್ರತಿಯೊಬ್ಬರಿಗೆ ೫ ಗಜ ಬಟ್ಟೆ ಹಂಚಿಕೆ ಶುದ್ಧ ಅನ್ಯಾಯ

ಜವಳಿ ವರ್ತಕ ಸಂಘದ ಅಧ್ಯಕ್ಷರ ಅಭಿಪ್ರಾಯ

ಬೆಂಗಳೂರು ಜವಳಿ ವರ್ತಕ ಸಂಘದ ಅಧ್ಯಕ್ಷರಾದ ಶ್ರೀ ಮಿರ್ಜಾ ಅಜೀಜುಲ್ಲಾ ಬೇಗ್‌ರವರು ಪತ್ರಿಕಾ ಪ್ರತಿನಿಧಿಗಳನ್ನು ತಮ್ಮ ಸಂಘಕ್ಕೆ ಬರಮಾಡಿಕೊಂಡು ಭಾರತ ಸರ್ಕಾರದ ಬಟ್ಟೆ ಹಂಚಿಕೆ ವ್ಯವಸ್ಥೆಯಲ್ಲಿ ಮೈಸೂರಿಗೆ ಆಗಿರುವ ಅನ್ಯಾಯವನ್ನು ಮುಖ್ಯವಾಗಿ ಬೆಂಗಳೂರು ಮತ್ತು ಮೈಸೂರು ನಗರಗಳ ನಾಗರಿಕರಿಗೆ ಉಂಟಾಗಿರುವ ತೊಂದರೆಯನ್ನು ವಿವರಿಸಿದರು

ಕಳೆದವಾರ ಶ್ರೀ ಥ್ಯಾಕರ್ಸೆಯವರು ಇಲ್ಲಿನ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದಂತೆ ಭಾರತದ ಗಿರಣಿಗಳಲ್ಲಿ ಈಗ ಸರಾಸರಿ ೪೮೦ ಕೋಟಿ ಗಜ ಬಟ್ಟೆ ತಯಾರಾಗುತ್ತದೆ ಈ ಪೈಕಿ ೬೦ ಕೋಟಿ ಗಜ ಪರದೇಶಗಳಿಗೆ ಹೋಗು ತ್ತದೆ. ಉಳಿದ ೪೨೦ ಕೋಟಿ ಗಜಗಳನ್ನು ನಮ್ಮ ದೇಶದ ೪೦ ಕೋಟಿ ಪ್ರಜೆಗಳಿಗೆ ಸಮವಾಗಿ ಹಂಚುವು ದಾದರೆ ತಲೆಯೊಂದಕ್ಕೆ ೧೦ ಗಜಕ್ಕಿಂತಲೂ ಸ್ವಲ್ಪ ಹೆಚ್ಚಿಗೆ ಒದಗುವುದು

ಗಿರಣಿಗಳಲ್ಲಿ ಈಗ ವಾರಕ್ಕೆ ೪೮ ಗಂಟೆ ಕೆಲಸದ ವೇಳೆಯನ್ನು ಜಾರಿಗೆ ತಂದಿದ್ದಾರೆ. ತಯಾರಿಕೆಯ ಪ್ರಮಾಣ ಇಳಿಯದೆ ಒಂದೇ ಸಮನಾಗಿದೆ. ಆಹಮದಾ ಬಾದಿನಲ್ಲಿ ಈಗಾಗಲೇ ಗಿರಣಿ ಕೆಲಸವನ್ನು ಹೆಚ್ಚಿಸಿರು ವದರಿಂದ ಬಟ್ಟೆ ತಯಾರಿಕೆಯು ಇನ್ನೂ ಅಧಿಕಗೊಳ್ಳಲು ಅವಕಾಶವಾಗಿದೆ. ಅಲ್ಲದೆ ಮೈಸೂರಿಗೆ ಹೊರಗಿನಿಂದ ಬರುವ ಬಟ್ಟೆ ಪ್ರಮಾಣವನ್ನು ಇಳಿಸಿದ ಸೂಚನೆಯೂ ಕಾಣದು ಇಲ್ಲಿಯ ಗಿರಣಿಗಳಲ್ಲಿ ತಯಾರಾಗುವ ಬಟ್ಟೆ ಪ್ರಮಾಣವೂ ಇಳಿದಿಲ್ಲ.

ಬೊಂಬಾಯಿ ಪ್ರಾಂತದಲ್ಲಿ ಒಬ್ಬರಿಗೆ ೧೪ ಗಜ ಮತ್ತು ಸಂಯುಕ್ತ ಪ್ರಾಂತದಲ್ಲಿ ೧೧|| ಗಜದಂತೆ ಬಟ್ಟೆ ಹಂಚಿಕೆಯಿರುವಾಗ ಮೈಸೂರಿಗೆ ೫ ಗಜದಂತೆ ಹಂಚಿಕೆ ಏರ್ಪಡಿಸಿರುವುದು ನ್ಯಾಯವಲ್ಲ. ಮೈಸೂರಿನ ಹವಾ ಪರಿಸ್ಥಿತಿ ಜನರ ಸಂಪ್ರದಾಯಗಳನ್ನು ಸ್ವಲ್ಪವೂ ಗಮ ನಿಸದೆ ಬಟ್ಟೆ ಹಂಚಿಕೆಯಲ್ಲಿ ಮದರಾಸು ಪ್ರಾಂತ್ಯವನ್ನು ಅನುಕರಣ ಮಾಡುವುದು ಎಷ್ಟೂ ಸರಿಯಲ್ಲ ಈ ವಿಚಾರದಲ್ಲಿ ಮೈಸೂರಿನ ಆವಶ್ಯಕತೆಗಳು ಮದರಾಸಿ ಗಿಂತಲೂ ಭಿನ್ನವಾಗಿವೆ ಇಲ್ಲಿನ ಬಟ್ಟೆ ಹಂಚಿಕೆಯಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವೆಂದರೆ ಬೆಂಗ ಳೂರು ಮೈಸೂರು ನಗರಗಳ ಮತ್ತು ಗ್ರಾಮಾಂತರಗಳ ಪ್ರದೇಶಗಳ ಆವಶ್ಯಕತೆಗಳಿಗಿರುವ ವ್ಯತ್ಯಾಸವನ್ನು ಕಿಂಚಿತ್ತೂ ಪರಿಗಣಿಸದಿರುವುದು.

ಆಹಾರ ಹಂಚಿಕೆ ವಿಚಾರದಲ್ಲಿ ಗ್ರಾಮಾಂತರ ವಾಸಿ ಗಳಿಗೆ ಪಟ್ಟಣ ವಾಸಿಗಳಿಗಿಂತಲೂ ಹೆಚ್ಚಿಗೆ ಪಡಿತರ ಕೊಡಲಾಗುತ್ತಿದೆ ಅದು ನ್ಯಾಯವೇ ಆದರೆ ಹಳ್ಳಿಗರಿ ಗಿಂತಲೂ ಮೇಲ್ಪಟ್ಟದ ಜೀವನದ ದರ್ಜೆಯನ್ನುಳ್ಳ ನಗರ ವಾಸಿಗಳಿಗೆ ಬಟ್ಟೆ ವಿಚಾರದಲ್ಲಿ ಮೇಲ್ಕಂಡ ನ್ಯಾಯವನ್ನೇ ಅನುಸರಿಸುವುದು ಯೋಗ್ಯವಾಗಿದೆ

ಈಗ ಸಾರ್ವತ್ರಿಕವಾಗಿ ಏರ್ಪಡಿಸಿರುವ ೫ ಗಜ ಮಿಲ್ ಬಟ್ಟೆಯ ಹಂಚಿಕೆಯಲ್ಲಿ ಪವರ್‌ಲೂಂ ಬಟ್ಟೆಗಳೂ ಸೇರಿವೆ ಭಾರತದ ಇತರ ಕಡೆಗಳಲ್ಲಿ ಈರೀತಿಯಾಗಿರುವ ದಿಲ್ಲ ಸರಕಾರದವರು ಈ ನ್ಯೂನತೆಯನ್ನು ಅವಶ್ಯ ವಾಗಿ ಸರಿಪಡಿಸಬೇಕು

ಐದು ಜನರಿರುವ ಒಂದು ಕುಟುಂಬಕ್ಕೆ ಒಂದು ಜತೆ ಸೀರೆ, ಒಂದು ಜತೆ ಪಂಚೆ, ಒಂದು ಜತೆ ಟವಲ್ ಮಾತ್ರ ಕೊಡಲಾಗುವದು ಅದಕ್ಕೆ ಮೇಲ್ಪಟ್ಟಿದ್ದರೆ ಇದರ ಎರಡರಷ್ಟು ಕೊಡಲಾಗುವದು ಈ ಏರ್ಪಾಡಿ ನಿಂದ ನಗರವಾಸಿಗಳಿಗೆ ವಿಶೇಷ ತೊಂದರೆಯುಂಟಾಗು ವದು

ಬಿನ್ನಿ ಮಿಲ್ ಬಟ್ಟೆಯ ತಯಾರಿಕೆಯ ಮೇಲೆ ನಮ್ಮ ಸರ್ಕಾರಕ್ಕೆ ಯಾವ ಹತೋಟಿಯೂ ಇರುವುದಿಲ್ಲ ಆ ಮಿಲ್ಲಿನಿಂದ ಮೈಸೂರಿಗೆ ಆಗಬಹುದಾದಷ್ಟು ಸಹಾಯ ದೊರೆಯಲು ಅವಕಾಶವಿಲ್ಲವಾಗಿದೆಯೆಂದು ಹೇಳಿದರು

ಲಿಂಗೋದ್ಭವ ಲಾಕೆಟ್ಸ್

ಅನೇಕರ ಪ್ರಾರ್ಥನೆಯಂತೆ ಜಗದಾಚಾ ರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿ ಯಲ್ಲಿ ಪುನಃ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ ತಯಾ ರಿಸಲ್ಪಟ್ಟಿವೆ. ಗುರುಭಕ್ತರೆಲ್ಲರೂ ಇವುಗ ಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿ ಕೊಂಡು ಪ್ರತಿದಿವಸವೂ ಆ ಮಂಗಲಮೂ ರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯ ರಾಗಬೇಕೆಂದು ಕೋರಿಕೆ.

ಬೆಳ್ಳಿ ಲಾಕೆಟ್ ಬೆಲೆ ೧ಕ್ಕೆ ೧ ರೂ.
ಬೆಳ್ಳಿ ಕೋಟಿನ ಗುಂಡಿ ೧ಕ್ಕೆ ೧ ರೂ.
ರಟ್ಟೆಗೆ ಕಟ್ಟುವ ಮೂರ್ತಿ ೧ಕ್ಕೆ ೧ ರೂ.
ಮಕ್ಕಳ ಕೊರಳಲ್ಲಿ ಹಾಕುವ ಮೂರ್ತಿ ೧ಕ್ಕೆ ೧ ರೂ.

೭ ಕ್ಕಿಂತಲೂ ಕಡಿಮೆಯಾಗಿ ವಿ. ಪಿ. ಕಳಿಸುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ, ಮೈಸೂರು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣಪ್ರದವಾಗಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **ತ್ರಿಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೭೬೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಜನ್ಮದಿಂದ ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೦—೬
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೬
ಶ್ರೀ ಶಿವ ಪಾರ್ವತೀ ಸಹಿತರಾದ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೬
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಋಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಭದಿಂದ ಅವತರಿಸಿರುವ ಫೋಟೋ	೦—೧
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೨—೯
ಶ್ರೀಕಾಶೀಕ್ಷೇತ್ರದಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧
ಶ್ರೀ ಕಾಶೀ ಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೭ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಾದರ್ಶ (೭ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿ ಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹಪದ್ಧತಿ (೭ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
ಸದ್ಬೋಧರತ್ನಾವಳಿ	೮ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಎರಡು ಪ್ರತಿ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ ೪೦ ವರ್ಣಚಿತ್ರದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾಮಿಕಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य-संस्कृत)	१
सिद्धांतशिखामणि (मूल)	८ आ
मंत्रिकोपचारकारिका (संस्कृत)	२

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಶೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ

...ವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಜನವರಿ ೧೯೪೭ [ಸಂಚಿಕೆ ೩೯

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ...ಹಾಸ್ವಾಮಿಗಳವರ ಪುಣ್ಯದಿನ ಸಮಾರಂಭ

ಬಳ್ಳಾರಿ

ಬಳ್ಳಾರಿ ಟವನ್ನಿನಲ್ಲಿರುವ ಗುರುಭಕ್ತಶಿಖಾಮಣಿ ...ಎದ ಶ್ರೀ ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ಇದೇ ...ಷ್ಯ ಬ॥ ೪ ಶುಕ್ರವಾರ ದಿವಸ ತಮ್ಮ ಗೃಹದಲ್ಲಿ ಶ್ರೀ॥ ...ಜ್ಜಯಿನೀ ಜಗದ್ಗುರುಗಳವರ ಪುಣ್ಯದಿನದ ನಿಮಿತ್ತ ...ಗಿ ಪೂಜಾದಿಗಳನ್ನು ಮಹಾಭಕ್ತಿಯಿಂದ ನೆರವೇರಿ... ...ದರು ಆ ದಿವಸ ಕಲ್ಲುಹೊಳೆ ಮಠದ ವೇ॥ ಕೆ ಪಯ್ಯ... ...ವರನ್ನು ಬರಮಾಡಿಕೊಂಡು, ಅವರ ನೇತೃತ್ವದಲ್ಲಿ ...ೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿ ...ವರ ಭಾವಚಿತ್ರವನ್ನು ಉನ್ನತ ಪೀಠದಲ್ಲಿರಿಸಿ ನೂತನ ...ಸ್ತ್ರಾದಿಗಳಿಂದಲಂಕರಿಸಿ ಷೋಡಶೋಪಚಾರಗಳಿಂದ ...ಜಿಸಿದರು ಬಳಿಕ ಸದರಿ ಮಲ್ಲಿಕಾರ್ಜುನಪ್ಪನವರ ...ತ್ರರಾದ ವೀರಭದ್ರಪ್ಪ, ಬಸವಪ್ಪ, ಮಲ್ಲೇಶ್ವರಪ್ಪ, ...ಹಾದೇವಪ್ಪ ಇವರುಗಳ ಮತ್ತು ಇವರ ಬಂಧುಗಳ ...ಷ್ಟಲಿಂಗಮೂರ್ತಿಗಳಿಗೆ ರುದ್ರಾಭಿಷೇಕಾದಿಗಳು ನೆರವೇ... ...ದವು ಆಮೇಲೆ ಶ್ರೀ ಜಗದ್ಗುರು ದಾರುಕಾಚಾರ್ಯರ ...ಷ್ಟೋತ್ತರಶತನಾಮಪಠನಪೂರ್ವಕ ಬಿಲ್ವಪತ್ರ ಸಮ... ...ಣವು ನೆರವೇರಿತು. ಆಮೇಲೆ ಮಹಾಮಂಗಳಾರತಿ ...ಯಾಗಿ, ಗಣಾರಾಧನೆಯು ನೆರವೇರಿತು ಮೇಲ್ಕಂಡ ...ರುಭಕ್ತರಿಗೆಲ್ಲಾ ಶ್ರೀ ಜಗದಾಚಾರ್ಯರು ಸದಾ ಮಂಗಳ ...ನ್ನೀಯಲೆಂದು ಪ್ರಾರ್ಥಿಸುತ್ತೇನೆ ಈ ಪೂಜಾಸಮಯ ...ದಲ್ಲಿ ಪ್ರಭಾಪೋಷಣಕ್ಕೋಸ್ಕರ ಶ್ರೀ ಮಲ್ಲಿಕಾರ್ಜುನಪ್ಪ ...ನವರು ೨ ರೂಪಾಯಿಗಳನ್ನು ಸಮರ್ಪಿಸಿದರು

ಪ್ರತ್ಯಕ್ಷದರ್ಶಿ

ಗದಗ

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಶಾಖಾನು...ವರ್ತಿ ಶ್ರೀ॥ ಷ॥ ಬ್ರ॥ ಪಟ್ಟದ ಬಾಲಲೀಲಾ ಶಿವಶಂಕರ ...ಶಿವಾಚಾರ್ಯಸ್ವಾಮಿಗಳು ಯಾದವಾಡ ಮಳೆಮಠ ...ಇವರ ನೇತೃತ್ವದಲ್ಲಿ ಉಜ್ಜಯಿನೀ ಜಗದ್ಗುರುಗಳ ಪುಣ್ಯ...ತಿಥಿ ಸಮಾರಂಭವು ವಿಜೃಂಭಣೆಯಿಂದ ನೆರವೇರಿತು ಗುರುಭಕ್ತಶಿಖಾಮಣಿ ವೀರಪ್ಪ ಬಳಗಾರ ಇವರ ಗೃಹದಲ್ಲಿ ಪುಷ್ಯ ಬ॥ ೪ ಶುಕ್ರವಾರ ದಿವಸ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಭಾವಚಿತ್ರವನ್ನು ತಳಿರುತೋರಣಗಳಿಂದ ಅಲಂಕೃತವಾದ ಮಂಟಪದಲ್ಲಿರಿಸಿ ಅಷ್ಟವಿಧಾರ್ಚನೆಗಳಿಂದ ಪೂಜಿಸಿ ವಂದಿಸಿ ...ಠಿಸಿ ಗುರುಪುಂಗವರ ಅಷ್ಟೋತ್ತರಶತನಾಮಾವಳಿಯನ್ನು ಪಠಿಸಿ ಪ್ರಸಾದವಿನಿಯೋಗವಾದ ಬಳಿಕ ಗಣಾರಾಧನೆಯು ನೆರವೇರಿತು. ಸಾಯಂಕಾಲ ಮಳೆಮಠದಲ್ಲಿ ಸಭೆ ಸೇರಿತು. ಶ್ರೀ ಸ್ವಾಮಿಗಳು ಮಹಾಸ್ವಾಮಿಯವರ ಚರಿತ್ರೆಯನ್ನು [illegible] ವಿಸ್ತಾರವಾಗಿ ಮಾಡಿ

ದರು ಆಮೇಲೆ ಮಹಾಮಂಗಳವಾಗಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

ಎಸ್ ಬಿ ಶ್ರೀ ಲೀಸ್ ಪಾಟೀಲ ಗದಗ

ಹಾರನಹಳ್ಳಿ

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಇದೇ ಪುಷ್ಯ ಬ॥ ೪ (ತಾ॥ ೧೦ ೧ ೧೯೪೭) ಶುಕ್ರವಾರ ಪ್ರಾತಃಕಾಲ ಶ್ರೀ ಗುರುಸಾರ್ವಭೌಮರ ಭಾವಚಿತ್ರವನ್ನು ಸುಂದರವಾದ ಮಂಟಪದಲ್ಲಿ ಮೂರ್ತಗೊಳಿಸಿ ಅಷ್ಟವಿಧಾರ್ಚನೆಗಳಿಂದ ಪೂಜಿಸಿ ನಮಸ್ಕರಿಸಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ ಮಧ್ಯಾಹ್ನ ಗಣವರ್ಯರನ್ನು ಸಂತೃಪ್ತಿಗೊಳಿಸಿದರು ಸಾಯಂಕಾಲ ಜಗದಾಚಾರ್ಯರ ಪವಿತ್ರ ಜೀವನ ಚರಿತ್ರೆಯನ್ನು ನೀತಿ ಧರ್ಮೋದಾಹರಣೆಗಳೊಡನೆ ಓದಿ ಹೇಳಿ ನೆರೆದ ಜನರನ್ನು ಆನಂದಗೊಳಿಸಿದರು

ಗುರುಪದಪಂಕಜ

ಬೆಳಗಾಂವ

ಬೆಳಗಾಂವ ಟವನ ಖಡೇಬಜಾರದಲ್ಲಿರುವ ಉದಾಸ್ತಿ ಹಿರೇಮಠದ ವೇ॥ ಶ್ರೀಶೈಲನಾಥಶಾಸ್ತ್ರಿಗಳವರು ತಮ್ಮ ಮನೆಯಲ್ಲಿ ಉಜ್ಜಯಿನಿ ಜಗದ್ಗುರುಗಳವರ ಪುಣ್ಯದಿನವನ್ನು ಪುಷ್ಯ ಬ॥ ೪ ದಿವಸ ಬಹುಭಕ್ತಿಯಿಂದ ನೆರವೇರಿಸಿದರು ಶ್ರೀಜಗದ್ಗುರುಗಳವರ ಭಾವಚಿತ್ರಕ್ಕೆ ವೇದೋಕ್ತವಾಗಿ ಪೂಜೆಯು ನಡೆದು ಗಣಾರಾಧನೆಯು ನೆರವೇರಿತು ಈ ಸಮಯದಲ್ಲಿ ಅನೇಕ ಜನ ಸ್ತ್ರೀಪುರುಷರಾಗಮಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾದರು ಸಾಯಂಕಾಲ ೬ ಘಂಟೆಗೆ ಸಭೆ ಸೇರಿತು ಸಭೆಗೆ ಸ್ಥಳ ಪರಸ್ಥಳಗಳಿಂದ ಅನೇಕ ಜನರು ಆಗಮಿಸಿದ್ದರು ಆಗ ಶ್ರೀಶೈಲನಾಥಶಾಸ್ತ್ರಿಗಳು ಉಜ್ಜಯಿನಿ ಜಗದ್ಗುರುಗಳ ಮಹಿಮಾದಿಗಳನ್ನು ಹೇಳಿದರಲ್ಲದೆ, ಶ್ರೀಜಗದ್ಗುರು ಪಂಚಾಚಾರ್ಯರ ಮಹಿಮಾತಿಶಯಗಳನ್ನು ಬೋಧಿಸಿ ಇವರೇ ಚತುರಾಶ್ರಮಿಗಳಿಗೆಲ್ಲಾ ಮೂಲಗುರುಗಳೆಂದು ಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

ಗುರುಭಕ್ತ

[illegible]

[illegible] ವೀರಶೈವಸಮಾಜದಲ್ಲಿ ಪುಷ್ಯ ಬ॥ ೪ [illegible]

ಜಗದ್ಗುರುಗಳ ಪುಣ್ಯದಿನೋತ್ಸವವು ಮಹಾಸಂಭ್ರಮದಿಂದ ನೆರವೇರಿಸಲ್ಪಟ್ಟಿತು ಆ ಸಮಯದಲ್ಲಿ ಧರ್ಮಪ್ರಚಾರಕ ವೇ॥ ಬಂಗಿಸಿದ್ಧರಾಮಯ್ಯನವರು ಉಜ್ಜಯಿನಿ ಜಗದ್ಗುರುಗಳವರ ಮಹಿಮಾತಿಶಯಗಳನ್ನು ಹೇಳಿದ್ದಲ್ಲದೆ, ಮಹಾತ್ಮರ ಪುಣ್ಯತಿಥಿಯನ್ನು ಏಕೆ ಮಾಡಬೇಕು? ಎಂಬ ಬಗ್ಗೆ ಸರಸವಾಗಿ ಭಾಷಣಮಾಡಿದರು ಆಮೇಲೆ, ಗ ದ ಪಾರ್ವತವರು ವಿದ್ಯಾವಿನಯ ಸಂಪನ್ನರಾಗಿಯೂ ಆಚಾರಶೀಲರಾಗಿಯೂ ಇರಬೇಕೆಂದೂ ಹೀಗಿದ್ದರೇನೇ ಸಮಾಜ ಸುಧಾರಣೆಯಾಗುವದೆಂದೂ ಭಾಷಣಮಾಡಿದರು ಬಳಿಕ ಜಗದಾಚಾರ್ಯರ ಮಂಗಲದೊಡನೆ ಕಾರ್ಯವು ಸಮಾಪ್ತಿಗೊಂಡಿತು

ಗುರುಭಕ್ತ

ಸೊಲ್ಲಾಪುರ

ಸೊಲ್ಲಾಪುರ ನಂದೀಪಠ (ಹಿರೇಮಠ)ದ ಅಧ್ಯಕ್ಷರಾದ ಶ್ರೀ॥ಷ॥ಬ್ರ॥ ಷಡಕ್ಷರಶಿವಾಚಾರ್ಯರು, ತಮ್ಮ ಮಠದಲ್ಲಿ ಪುಷ್ಯ ಬ॥ ೪ ದಿವಸ ಉಜ್ಜಯಿನೀ ಜಗದ್ಗುರುಗಳ ಪುಣ್ಯದಿನವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು ಮಧ್ಯಾಹ್ನ ಗಣಾರಾಧನೆಯಾಗಿ ಸಾಯಂಕಾಲ ಸಭೆಗೂಡಿತು ಕುಂ॥ ಕಸ್ತೂರಿಬಾಯಿ ನಂದೀಮಠ ಮತ್ತು ಕುಂ॥ ಗುಣಸುಂದರಿ ಹುಂಡೇಕರಿ ಈ ಇಬ್ಬರು ಬಾಲಿಕೆಯರು ಶ್ರೀಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಹಾಡಿದರು. ಕುಂ॥ ಕಸ್ತೂರಿಬಾಯಿ, ಗುಣಸುಂದರಿ ಸುಗ್ಗಲಾಬಾಯಿ ಶಾಂತಾಬಾಯಿ, ಚತುರಾಬಾಯಿ ಸತ್ಯವತಿ ಇವರು ಸಂವಾದರೂಪವಾಗಿ ನಾಟಕವನ್ನಾಡಿ ತೋರಿಸಿದರು ಆಮೇಲೆ ವೇ॥ ಕೆ ಎಂ ಶಾಸ್ತ್ರಿ ಇವರು ಗುರುಮಹತ್ವದ ಬಗ್ಗೆಯೂ, ವೇ॥ ಶಿವಾನಂದ ದೇಶಿಕೇಂದ್ರ ಇವರು ಗುರುಭಕ್ತಿಯ ಬಗ್ಗೆಯೂ, ವೇ॥ ಅಚಲೇರಿ ಶರಣಯ್ಯಶಾಸ್ತ್ರಿಗಳು ವೀರಶೈವರ ಉನ್ನತಿಯ ಬಗ್ಗೆಯೂ ವೇ॥ ಮೃತ್ಯುಂಜಯ ಶಾಸ್ತ್ರಿಗಳು ಶ್ರೀ ದಿಗ್ಗಾವಿಸ್ವಾಮಿಗಳು, ಶ್ರೀಜೈನಾಪುರಸ್ವಾಮಿಗಳು, ಇವರು ಗುರುವರ್ಗದ ಜಾಗೃತಿ ಬಗ್ಗೆಯೂ, ವೇ॥ ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳವರು ಜಗದ್ಗುರುಗಳ ತಪಃಪ್ರಭಾವದ ಬಗ್ಗೆಯೂ ಭಾಷಣಮಾಡಿದರು ಬಳಿಕ ಸಾ॥ ಬಸಮ್ಮ ನಂದೀಮಠ ಇವರು ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಕರ್ತೃತ್ವಶಕ್ತಿಯಿಂದಲೂ, ಉಜ್ಜಯಿನೀ ಜಗದ್ಗುರುಗಳ ತಪಃ ಪ್ರಭಾವದಿಂದಲೂ, ಬಾರ್ಶಿ ಅಣ್ಣಾಸಾಹೇಬ ಕಥಳೆಯವರ ಅಸಾಧಾರಣವಾದ ಗುರುಭಕ್ತಿಯಿಂದಲೂ ಈ ಪ್ರಾಂತದಲ್ಲಿ ಧರ್ಮಜಾಗೃತಿಯುಂಟಾಯಿತೆಂದು ಭಾಷಣಮಾಡಿದರು ಶ್ರೀಗುರುಬಾಯಿ ವಳಸಂಗ ಇವರು ಜಗದ್ಗುರುಗಳವರ ಮಹಿಮಾತಿಶಯದ ಬಗ್ಗೆ ಭಾಷಣ ಮಾಡಿದರು. ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು.

ಬಸಮ್ಮ ನಂದೀಮಠ
ವೀರಶೈವ ಸದಾಚಾರ್ಯ[illegible].

ಸಂಸ್ಕೃತದ ಬಗ್ಗೆ ಡಾ|| ವಿಲ್ಸನ್‌ರ ನಿರತಿಶಯವಾದ ಪ್ರೇಮ

— —

ಸಂಸ್ಕೃತವು ಭರತಖಂಡದ ಎಲ್ಲಾ ಭಾಷೆಗಳಿಗೂ ಬೇಕಾದ ಶಬ್ದಸಂಪತ್ತನ್ನು ಒದಗಿಸುವ ಭಾಂಡಾಗಾರ ವೆಂತಿದ್ದು, ಪ್ರಪಂಚದಲ್ಲಿ ಒಂದು ವಿಶಿಷ್ಟಸ್ಥಾನವನ್ನು ಪಡೆದಿದೆ. ಪೌರಸ್ತ್ಯ ಪಾಶ್ಚಾತ್ಯದೇಶಗಳಲ್ಲಿರುವ ವಿಶ್ವ ವಿದ್ಯಾನಿಲಯಗಳಲ್ಲಿ ಸಂಸ್ಕೃತಭಾಷೆಗೆ ಗಣ್ಯಸ್ಥಾನವು ಕಲ್ಪಿಸಲ್ಪಟ್ಟಿವೆ. ಈ ಭಾಷೆಯು ಸಕಲ ಭಾಷೆಗಳಿಗೂ ಜೀವನಾಡಿಯಂತಿದೆ. ಸಕಲ ವೈದಿಕಮತಗಳ ಧರ್ಮ ಗ್ರಂಥಗಳು ಗೀರ್ವಾಣಭಾಷೆಯಲ್ಲಿಯೇ ರಚಿಸಲ್ಪಟ್ಟಿವೆ. ಪರಮವೈದಿಕರಾದ ವೀರಶೈವರಿಗಂತೂ ಈ ಭಾಷೆಯು ಪ್ರಾಣಸ್ವರೂಪವಾಗಿರುವದು. ಈ ವಿಷಯದಲ್ಲಿ ಈ ಮತಧರ್ಮಗ್ರಂಥಗಳೇ ಸಾಕ್ಷಿಯಾಗಿವೆ. ಇದುದರಿಂದ ಭಾರತೀಯರಾದ ನಾವು ಜನ್ಮಜನ್ಮಾಂತರದಲ್ಲಿಯೂ ಗೀರ್ವಾಣಭಾಷೆಯಿಂದ ದೂರಾಗುವಂತಿಲ್ಲ. ಆದರೆ ಕಾಲ ಮಹಿಮೆಯಿಂದ ಈಗ ದೂರಾಗುತ್ತಿರುವದು ಬಹು ಶೋಚನೀಯವಾಗಿದೆ. ಇದಕ್ಕೆ ಪಾಶ್ಚಾತ್ಯಸಂಸ್ಕೃತಿಯೇ ಮೂಲಕಾರಣ! ಈ ಪಾಶ್ಚಾತ್ಯಸಂಸ್ಕೃತಿಯು ಭಾರತೀಯರ ನೈತಿಕ ಮತ್ತು ಧಾರ್ಮಿಕದೃಷ್ಟಿಕೋಣಗಳಮೇಲೆ ಉಗ್ರವಾದ ಪರಿಣಾಮವನ್ನುಂಟುಮಾಡಿತು. ಭಾರತ ದಲ್ಲಿ ಎಲ್ಲೆಲ್ಲಿಯೂ ಇಂಗ್ಲೀಷ್ ಭಾಷೆಯ ಶಿಕ್ಷಣವು ಹೆಚ್ಚಾಯಿತು. ಪಾಶ್ಚಾತ್ಯಸಂಸ್ಕೃತಿಗೆ ಭಾರತೀಯ ಸುಶಿಕ್ಷಿತವರ್ಗವು ಮನಸೋತು ಭಾರತದ ಪ್ರಾಚೀನಸಂಸ್ಕೃತಿಯ ವಿಚಾರದಲ್ಲಿ ಹೆಚ್ಚು ಅಗೌರವವನ್ನು ತೋರ್ಪಡಿಸ ಹತ್ತಿತು. ೧೯ನೆಯ ಶತಮಾನದ ಆದಿಭಾಗದಲ್ಲಿ 'ಮೆಕಾಲೆ" ಎಂಬ ಇಂಗ್ಲೀಷ್ ವಿದ್ವಾಂಸನು ಆಂಗ್ಲ ಭಾಷೆಯನ್ನು ಭಾರತದಲ್ಲಿ ದೃಢಪಡಿಸಲು ಹಗಲಿರುಳೂ ಪ್ರಯತ್ನಪಟ್ಟನು. ಭಾರತದಲ್ಲಿ ಆಂಗ್ಲಭಾಷೆಯು ಪ್ರಚಾರ ವಾಗಬೇಕಾದರೆ ಮೊದಲು ಭಾರತೀಯರ ಸಂಸ್ಕೃತಿಯನ್ನು ನಾಶಮಾಡಬೇಕೆಂದೂ ಭಾರತೀಯರ ಸಂಸ್ಕೃತಿಗೆ ಸಂಸ್ಕೃತಭಾಷೆಯೇ ಪ್ರತಿಪಾದಕವಾದುದರಿಂದ ಮೊದಲು ಆ ಭಾಷೆಯನ್ನೇ ಬಹಿಷ್ಕರಿಸಬೇಕೆಂದೂ ನಿರ್ಧರಿಸಿದನು. ಕರ್ಮಧರ್ಮಸಂಯೋಗದಿಂದ ಆಗ್ಗೆ (೧೮೨೮ ರಿಂದ ೧೮೩೫) ಬಂಗಾಲ ಗವರ್ನರಾಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕರ ಸಹಾಯವು ಮೆಕಾಲೆ ಮಹಾಶಯನಿಗೆ ಸಿಕ್ಕಿತು. ಬೆಂಟಿಂಕರ ಸಹಾಯದಿಂದ ಸಂಸ್ಕೃತವಿದ್ಯಾಪ್ರಚಾರಕೇಂದ್ರಗಳನ್ನು ಮುಚ್ಚಲು ಶಾಸನಗಳನ್ನು ಹೊರಡಿಸಲ್ಪಟ್ಟಿದೆ. ಬಂಗಾಲಪ್ರಾಂತಕ್ಕೆ ಪ್ರಧಾನಸಂಸ್ಕೃತವಿದ್ಯಾಕೇಂದ್ರವಾದ ಕಲ್ಕತ್ತಾ ಸಂಸ್ಕೃತ ಮಹಾವಿದ್ಯಾಲಯವನ್ನೂ ಸಹ ಮುಚ್ಚುವುದಕ್ಕಾಗಿ ಸರ್ಕಾರ ಆಜ್ಞೆಯು ಹೊರಟಿತು. ಈ ಆಜ್ಞೆಯಿಂದ ಸಂತಾಪಗೊಂಡ ಮಹಾವಿದ್ಯಾಲಯದ ಪ್ರಧಾನಾಧ್ಯಾಪಕರಾದ ಶ್ರೀ ಪ್ರೇಮಚಂದ್ರವಾಗೀಶರು ಆಗತಾನೇ ಭಾರತ ದಿಂದ ಲಂಡನ್ನಿಗೆ ಹೋಗಿದ್ದ ಅಸಾಧಾರಣ ಸಂಸ್ಕೃತ ಭಾಷಾಭಿಮಾನಿಗಳಾದ ಡಾ|| ವಿಲ್ಸನ್ ಮಹಾಶಯರಿಗೆ ಈ ಕೆಳಗೆ ಉದಾಹರಿಸಿದಂತೆ ಒಂದು ಪತ್ರವನ್ನು ಸಂಸ್ಕೃತ ಪದ್ಯರೂಪವಾಗಿ ಬರೆದು ಕಳುಹಿಸಿದರು—

ಅಸ್ಮಿನ್ ಸಂಸ್ಕೃತಪಾಠಸದ್ಮಸರಸಿ ತ್ವತ್ಸ್ಥಾಪಿತಾ ಯೇ ಸುಧೀ
ಹಂಸಾಃ ಕಾಲವಶೇನ ಪಕ್ಷರಹಿತಾ ದೂರಂಗತೇ ತೇ ತ್ವಯಿ ||
ತತ್ತೀರೇ ನಿವಸಂತಿ ಸಂಹಿತಶರಾ ವ್ಯಾಧಾಸ್ತದುಚ್ಛಿತ್ತಯೇ |
ತೇಭ್ಯಸ್ತಾನ್ ಯದಿ ಪಾಸಿ ಪಾಲಕ ತದಾ ಕೀರ್ತಿಶ್ಚಿರಂ ಸ್ಥಾಸ್ಯತಿ||

"ಎಲೈ ವಿಲ್ಸನ್ ಮಹಾಶಯನೇ, ಸಂಸ್ಕೃತಪಾಠ ಶಾಲೆಯೆಂಬ ಸರೋವರದಲ್ಲಿ ನಿನ್ನಿಂದ ಸ್ಥಾಪಿಸಲ್ಪಟ್ಟ ಪಂಡಿತರೆಂಬ ಹಂಸಗಳು ನೀನು ದೂರದೇಶಕ್ಕೆ ಹೋಗಲು ಕಾಲಮಹಿಮೆಯಿಂದ ಪಕ್ಷರಹಿತಗಳಾದವು. ಆ ಸರೋವರದ ತೀರದಲ್ಲಿ ಹಂಸಗಳ ನಾಶಕ್ಕಾಗಿ ಬೇಡರು ಬಿಲ್ಲಿಗೆ ಬಾಣಗಳನ್ನೇರಿಸಿ ನಿಂತಿರುವರು. ಅದ ಕಾರಣ ಅವರಿಂದ ನೀನು ಈ ಹಂಸಗಳನ್ನು ರಕ್ಷಿಸಿದ್ದೇ ಆದರೆ ನಿನ್ನ ಕೀರ್ತಿಯು ಬಹುಕಾಲ ನಿಲ್ಲುವದು."

ಈ ಪತ್ರಕ್ಕೆ ವಿಲ್ಸನ್ ಮಹಾಶಯರು ಸಂಸ್ಕೃತದಲ್ಲಿ ಪದ್ಯರೂಪವಾಗಿ ಬಹು ಹೃದಯಂಗಮವಾದ ಉತ್ತರ ವನ್ನು ಕೊಟ್ಟರು. ಆ ಪದ್ಯಗಳು ಈ ಕೆಳಗೆ ಉದಾಹರಿ ಸಲ್ಪಟ್ಟಿವೆ.

ವಿಧಾತಾ ವಿಶ್ವನಿರ್ಮಾತಾ ಹಂಸಾಸ್ತತ್ಪ್ರಿಯವಾಹನಂ |
ಅತಃ ಪ್ರಿಯತರತ್ವೇನ ರಕ್ಷಿಷ್ಯತಿ ಸ ಏವ ತಾನ್ ||೧||

ಅಮೃತಂ ಮಧುರಂ ಸಮ್ಯಕ್ ಸಂಸ್ಕೃತಂ ಹಿ ತತೋಽಧಿಕಂ |
ದೇವಭೋಗ್ಯಮಿದಂ ಯಸ್ಮಾದ್ದೇವಭಾಷೇತಿ ಕಥ್ಯತೇ ||೨||

ನಜಾನೇ ವಿದ್ಯತೇ ಕಿಂ ತನ್ಮಾಧುರ್ಯಮತ್ರ ಸಂಸ್ಕೃತೇ |
ಸರ್ವದೈವ ಸಮುನ್ಮತ್ತಾ ಯೇನ ವೈದೇಶಿಕಾ ವಯಂ ||೩||

ಯಾವದ್ಭಾರತವರ್ಷಂ ಸ್ಯಾದ್ಯಾವದ್ವಿಂಧ್ಯಹಿಮಾಚಲೌ |
ಯಾವದ್ಗಂಗಾ ಚ ಗೋದಾ ಚ ತಾವದೇವಹಿ ಸಂಸ್ಕೃತಂ ||೪||

ಜಗತ್ತನ್ನು ನಿರ್ಮಿಸಿದವನು ಬ್ರಹ್ಮನು, ಹಂಸೆಗಳು ಆವನಿಗೆ ಪ್ರಿಯವಾದ ವಾಹನ, ಆದುದರಿಂದ ತನಗೆ ಅತ್ಯಂತ ಪ್ರಿಯವಾಗಿರುವ ಹಂಸಗಳನ್ನು ಆ ಬ್ರಹ್ಮನೇ ಕಾಪಾಡುವನು. ||೧||

ಅಮೃತವು ಬಹು ಮಧುರವಾದುದು. ಅದಕ್ಕಿಂತಲೂ ಸಂಸ್ಕೃತವು ಮಧುರವಾದುದು. ಈ ಭಾಷೆಯನ್ನು ದೇವತೆಗಳು ಉಪಯೋಗಿಸುವದರಿಂದ ಇದು ದೇವಭಾಷೆ ಯೆಂದು ಕರೆಲ್ಪಡುತ್ತದೆ. ||೨||

ಯಾವ ಭಾಷೆಯ ಮಾಧುರ್ಯದಿಂದ ವಿದೇಶೀಯರಾದ ನಾವು ಸಹ ಯಾವಾಗಲೂ ಸಮ್ಮೋಹಿತರಾಗಿದ್ದೇವೆಯೋ ಅಂತಹ ಮಾಧುರ್ಯವು ಈ ಸಂಸ್ಕೃತದಲ್ಲಿ ಯಾವುದಿದೆಯೋ ಎಂಬುದನ್ನು ನಾನು ತಿಳಿಯಲಾರೆ. ||೩

ಎಲ್ಲಿಯವರೆಗೂ ಭಾರತವರ್ಷವಿರುವದೋ, ಎಲ್ಲಿಯ ವರೆಗೂ ವಿಂಧ್ಯ ಹಿಮಾಚಲಪರ್ವತಗಳಿರುವವೋ, ಎಲ್ಲಿ ಯವರೆಗೂ ಗಂಗಾ, ಗೋದಾವರೀ ನದಿಗಳು ಇರುವವೋ, ಅಲ್ಲಿಯವರೆಗೂ ಸಂಸ್ಕೃತವು ಇದ್ದೇ ಇರುವದು ||೪||

ವಿಲ್ಸನ್ ಮಹಾಶಯರು ಸಂಸ್ಕೃತಭಾಷೆಯ ಪ್ರಭಾವವನ್ನು ಈ ವಿಧವಾಗಿ ಕೊಂಡಾಡಿ ಬರೆದ ಪತ್ರವನ್ನು ನೋಡಿ ಸಂತೋಷಗೊಂಡು, ಪ್ರಿನ್ಸಿಪಾಲರಾದ ಶ್ರೀ ಪ್ರೇಮಚಂದ್ರವಾಗೀಶರು ಈ ಕೆಳಗೆ ಕಂಡಂತೆ ಮತ್ತೊಂದು ಪತ್ರವನ್ನು ಪದ್ಯರೂಪವಾಗಿ ಬರೆದರು

ಗೋಲಿಶ್ರೀದೀರ್ಘಿಕಾಯಾ ಬಹುವಿಟಪಿತಟೇ ಕಾಲಿಕಾತಾ ನಗರ್ಯಾಂ |
ನಿಸ್ಸಂಗೋ ವರ್ತತೇ ಸಂಸ್ಕೃತಪಠನಗೃಹಾಖ್ಯಃ ಕುರಂಗಃ ಕೃಶಾಂಗಃ |
ಹಂತುಂ ತಂ ಜೀರ್ಣಚಿತ್ತಂ ನಿಧೃತಖರತರೋ "ಮೇಕಲೆ" ವ್ಯಾಧರಾಜಃ |
ಸಾಶ್ರುಬದ್ಧಃ ತತೋ ಸ ಭೋ ಭೋ "ಉಯಿಲಸನ" ಮಹಾಭಾಗ ಮಾಂ ರಕ್ಷ ರಕ್ಷ ||

ಕಲಕತ್ತಾ ಪಟ್ಟಣದಲ್ಲಿ ಅನೇಕ ವೃಕ್ಷಗಳಿಂದ ಯುಕ್ತ ವಾಗಿರುವ "ಗೋಲೀಶ್ರೀ" ಭಾವಿಯ ದಂಡೆಯ ಮೇಲೆ ಏಕಾಂಗಿಯಾಗಿರುವ ಸಂಸ್ಕೃತ ಮಹಾಪಾಠಶಾಲೆ ಯೆಂಬ ಕ್ಷೀಣವಾದ ಜಿಂಕೆಯು ಇರುತ್ತದೆ. ಭಯ ಗೊಂಡಿರುವ ಆ ಜಿಂಕೆಯನ್ನು ಸಂಹರಿಸುವದಕ್ಕಾಗಿ ತೀಕ್ಷ್ಣವಾದ ಬಾಣವನ್ನು ಹಿಡಿದುಕೊಂಡು "ಮೇಕಲೆ" ಎಂಬ ವ್ಯಾಧರಾಜನು ನಿಂತಿರುವನು. ಆ ಜಿಂಕೆಯು ಕಣ್ಣೀರಿನಿಂದ ಕೂಡಿದುದಾಗಿ 'ಎಲೈ ವಿಲ್ಸನ್ ಮಹಾ ಶಯನೇ, ನನ್ನನ್ನು ರಕ್ಷಿಸು, ರಕ್ಷಿಸು' ಎಂದು ಕೂಗುತ್ತಲಿದೆ"

ಶ್ರೀಪ್ರೇಮಚಂದ್ರವಾಗೀಶರ ಮೇಲ್ಕಂಡ ಪದ್ಯರೂಪ ಪತ್ರವನ್ನು ನೋಡಿ, ಶ್ರೀವಿಲ್ಸನ್ ಮಹಾಶಯರು ಪುನಃ ಈ ಕೆಳಗೆ ಕಂಡಂತೆ ಉತ್ತರವನ್ನು ಬರೆದರು.

ನಿಷ್ಪಿಷ್ಟಾಽಪಿ ಪರಂ ಪದಾಹತಿಶತೈಃ ಶಶ್ವದ್ಬಹುಪ್ರಾಣಿನಾಂ |
ಸಂತಪ್ತಾಽಪಿ ಕರೈಃ ಸಹಸ್ರಕಿರಣೇನಾಗ್ನಿಸ್ಫುಲಿಂಗೋಪಮೈಃ |
ಛಾಗಾದ್ಯೈಶ್ಚ ವಿಚರ್ವಿತಾಪಿ ಸತತಂ ಮೃಷ್ಟಾಽಪಿ ಕುದ್ದಾಲಕೈಃ |
ದೂರ್ವಾ ನ ಮ್ರಿಯತೇ ಕೃಶಾಪಿ ನಿತರಾಂ ಧಾತುರ್ದಯಾ ದುರ್ಬಲೇ ||

ಗರಿಕೆ (ಕರಿಕೆ)ಯು ಯಾವಾಗಲೂ ಅನೇಕ ಪ್ರಾಣಿ ಗಳ ತುಳಿತದಿಂದ ಪುಡಿಪುಡಿಯಾದರೂ, ಅಗ್ನಿಕಣಗಳಂ ತಿರುವ ಸೂರ್ಯನ ಕಿರಣಗಳಿಂದ ಬೆಂದುಹೋದರೂ, ಮೇಕೆ ಮೊದಲಾದವುಗಳಿಂದ ಯಾವಾಗಲೂ ತಿನ್ನಲ್ಪಟ್ಟರೂ, ಗುದ್ದಲಿಗಳಿಂದ ಅಗಿದು ಸ್ವಚ್ಛಮಾಡಲ್ಪಟ್ಟರೂ, ಕೃಶವಾದರೂ ಸಹ ಪೂರ್ಣವಾಗಿ ಎಂದೂ ನಾಶವಾಗು ವದಿಲ್ಲ. ಏಕೆಂದರೆ–ದುರ್ಬಲವಾದ ವಸ್ತುವಿನಲ್ಲಿ ಯಾವಾ ಗಲೂ ದೇವರ ದಯೆ ಇರುತ್ತದೆ.

ಇದು ವಿಲ್ಸನ್ನರ ಉತ್ತರ! ಈ ಮಹಾಶಯ[n] ಯಥಾರ್ಥಾಭಿಪ್ರಾಯವನ್ನು ಎಷ್ಟು ಕೊಂಡಾಡಿದ[ರೂ] ತೀರದು. ಅಸ್ತು!

ಕಲಕತ್ತಾ ಸಂಸ್ಕೃತಕಾಲೇಜಿನ ಪ್ರಿನ್ಸಿಪಾಲರು ಬ[ರೆದಿ]ರುವ ಶ್ಲೋಕಗಳು ಸಮಸ್ಯಾರೂಪದಂತಿದ್ದು ಶ್ರೀವಿಲ್ಸ[ನ್] ಮಹಾಶಯರು ಬರೆದಿರುವ ಶ್ಲೋಕಗಳು ಸಮಸ್ಯಾ ಪೂರ್ತಿರೂಪದಂತಿರುವವು. ಈ ಶ್ಲೋಕಗಳನ್ನು ನೋಡಿ ದರೆ ಭೋಜರಾಜನ ಸಮಸ್ಯೆಗಳೂ, ಅವುಗಳಿಗಿ[ರು] ರುವ ಕಾಳಿದಾಸನ ಸಮಸ್ಯಾಪೂರ್ತಿಗಳೂ ಸ್ಮರಣೆ[ಗೆ] ಬರುತ್ತವೆ. ಶ್ರೀವಿಲ್ಸನ್ ಮಹಾಶಯರ ಕವಿತಾಸರಣಿಯು ಕಾಲಿದಾಸನ ಕವಿತಾಸರಣಿಗೆ ಸಮವಾಗಿರುವದೆಂ[ದು] ಬರೆದರೆ ಎಷ್ಟೂ ತಪ್ಪಾಗದು. ಶ್ರೀವಿಲ್ಸನ್ನರ ಪದ್ಯಗಳನ್ನು ಓದಿದರೆ ಪ್ರತಿಯೊಬ್ಬ ಸಂಸ್ಕೃತ ಪಂಡಿತನ ಶರೀರದ[ಲ್ಲಿ] ರೋಮಾಂಚವುಂಟಾಗದೆ ಇರದು. ಶ್ರೀವಿಲ್ಸನ್ನರ ಕವಿ[ತೆ] ಯಲ್ಲಿರುವ ಲಾಲಿತ್ಯ, ಉಪಮಾ, ಅರ್ಥಗೌರವಾದಿಗಳು ಅನ್ಯಾದೃಶವಾದವುಗಳು. ಡಾ|| ವಿಲ್ಸನ್ನರು ತಾವು ಬರೆದಿ ರುವ ಮೇಲಿನ ಪದ್ಯದಲ್ಲಿ ಸಂಸ್ಕೃತಭಾಷೆಯು ಈ ಪ್ರಪಂಚವಿರುವ ವರೆಗೂ ಇರತಕ್ಕ ಭಾಷೆಯೆಂದೂ, ಈ ಭಾಷೆಗೆ ನಾಶವೇ ಇಲ್ಲವೆಂದೂ ಘಂಟಾಘೋಷವಾಗಿ ಸಾರಿ ರುವರು. ಇದನ್ನು ನೋಡಿದರೆ ಯಾವ ಭಾರತೀಯನ ಹೃದಯವು ಆನಂದದಿಂದ ಉಕ್ಕೇರಲಿಕ್ಕಿಲ್ಲ? ವಿದೇಶೀಯ ನಲ್ಲಿ ಈ ಎಥವಾದ ದೇವಭಾಷಾಸಂಸ್ಕೃತಿಯುಂಟಾದ ದನ್ನು ನೋಡಿದರೆ ಶ್ರೀವಿಲ್ಸನ್ ಮಹಾಶಯನು ದೇವಾಂಶಸಂಭೂತನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಸಂಸ್ಕೃತಭಾಷೆಯ ಅಭಿವೃದ್ಧಿಗೆ ಮಹೋಪಕಾರ ವನ್ನು ಮಾಡಿ ಚಿರಸ್ಮರಣೀಯರಾಗಿರುವ ಶ್ರೀವಿಲ್ಸನ್ ಮಹಾಶಯರಿಗೆ ಸಂಸ್ಕೃತಭಾಷಾಭಿಮಾನಿಗಳೆಲ್ಲರೂ ಸದಾ ಋಣಿಗಳೆಂದು ಹೇಳಬಹುದಾಗಿದೆ. ಅಸ್ತು!

ಮೆಕಾಲೆ ಮಹಾಶಯನು ಸಂಸ್ಕೃತದ ನಾಶಕ್ಕಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟನು. ಅಮೃತಭಾಷೆ ಯನ್ನು ಮೃತಭಾಷೆಯೆಂದು ಪ್ರಚಾರಮಾಡಿದನು. ಈರೀತಿ ಪ್ರಚಾರಮಾಡಿದ ಮೆಕಾಲೆಯವರೂ, ಆತನ ಅನುಯಾಯಿಗಳೂ ಮೃತರಾದರು. ಆದರೆ ಸಂಸ್ಕೃತ ಭಾಷೆಯು ಅಮೃತವಾಗಿ ಭಾರತದಲ್ಲಿಯೇ ಏಕೆ, ಇಡಿ ಪ್ರಪಂಚದಲ್ಲಿಯೇ ಪ್ರಕಾಶಮಾನವಾಗಿ ಈಗಲೂ ಮೆರೆ ಯುತ್ತಿರುವದು. ಮುಂದೆಯೂ ಮೆರೆಯುವದು.

ಸಂಸ್ಕೃತಭಾಷೆಯ ವಿಷಯದಲ್ಲಿ ಶ್ರೀ ಮ್ಯಾಕ್ಸ್ ಮುಲ್ಲರ್, ಡಾ|| ವಿಲಿಯಂ, ಡಾ|| ಹುಲ್‌ಷ್, ಶ್ರೀಮತಿ ಅನಿಬೆಸೆಂಟ್, ಡಾ|| ಕಿಟಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ತಾವು ಪೂಜ್ಯಬುದ್ಧಿಯನ್ನಿಟ್ಟುದಲ್ಲದೆ ಭಾರತೀಯರಲ್ಲಿಯೂ ಸಹ ಪೂಜ್ಯಬುದ್ಧಿಯನ್ನುಂಟು ಮಾಡಿದರು. ಸಂಸ್ಕೃತಭಾಷೆಯ ಬಗ್ಗೆ ಪಾಶ್ಚಾತ್ಯರಲ್ಲಿ ಈ ರೀತಿ ಅಸಾಧಾರಣವಾದ ಪ್ರೇಮವಿರುವಾಗ, ಬಸವ ಪಂಥಿಗಳು—

" ವೇದಗಳ ಹೊರೆಯು ಕಟ್ಟುವೆ, ಆಗಮಗಳ ಮೂಗು ಕೊಯ್ಯುವೆ," ಇತ್ಯಾದಿ ಬಸವನ ಅಮಂಗಲ ವಚನಗಳ ನ್ನು ನಾಚಿಕೆಯಿಲ್ಲದೆ ನುಡಿಯುತ್ತಾ ಸಂಸ್ಕೃತಭಾಷೆಯ ಬಗ್ಗೆ ದ್ವೇಷಸಾಧಿಸುತ್ತಿರುವದನ್ನು ನೋಡಿದರೆ, ಪರಮಾ ಶ್ಚರ್ಯವೆನಿಸುತ್ತದೆ. ದೇವರು ಇನ್ನಾದರೂ ಈ ವಿಧವಾದ ಜನರಿಗೆ ಸದ್ಬುದ್ಧಿಯನ್ನೀಯಲೆಂದು ಹಾರೈಸುತ್ತೇನೆ.

ಕೆಲವರು ಸಂಸ್ಕೃತವನ್ನು ಅಭ್ಯಾಸಮಾಡಿದ್ದರೂ ಕೂಡ, ಅಮೃತ ಸದೃಶವಾದ ಅದರ ಮಾಧುರ್ಯವನ್ನು ಸವಿಯದೆ, ವಿದ್ಯಾರ್ಥಿಗಳಿಗೆ ನವರಸಭರಿತವಾದ ಕಾವ್ಯ ನಾಟಕಾಲಂಕಾರಾದಿ ಪಾಠಗಳನ್ನು ಹೇಳಲು ಅಸಮರ್ಥ ರಾಗಿರುವರು. ಅವರ ಅಲ್ಪವಿದ್ಯೆಯು ಕೇವಲ ಆತ್ಮಸ್ತುತಿ ಯಲ್ಲಿಯೇ ಅಡಗಿ ಹೋಗಿರುವದು. ಈ ವಿಷಯವನ್ನು ಈ ಕಾಲದಲ್ಲಿ ವಿಮರ್ಶಿಸುವವರಾರು? ಅಸ್ತು.

ಜಗದಾದಿಯಿಂದಲೂ ಭಾರತೀಯರಿಗೆ ಮುಖ್ಯೋಪಾ ಸ್ಯವಾಗಿರುವ ಸಂಸ್ಕೃತ ಭಾಷೆಯ ಪ್ರಚಾರವು ಪೂರ್ವ ದಂತೆ ಭರದಿಂದ ಸಾಗಿ ಇದರ ಪ್ರಕಾಶವು ದಶದಿಕ್ಕುಗಳ ಲ್ಲಿಯೂ ವ್ಯಾಪಿಸಲೆಂದು ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇನೆ.

ವಿರೂಪಾಕ್ಷಶರ್ಮಾ ಅಧ್ಯಾಪಕ, ಕಾವ್ಯತೀರ್ಥ
ಶ್ರೀಮುಕ್ತಿಮಂದಿರ ಗುರುಕುಲ.

ಮುಕ್ತಿಮಂದಿರ

ಮುಕ್ತಿಮಂದಿರದಲ್ಲಿ ಗುರುಕುಲ ವಿದ್ಯಾರ್ಥಿಗಳು ...ಷ್ಯ ಬ|| ೪ (ತಾ|| ೧೦-೧-೪೭) ಶುಕ್ರವಾರ ...ಲ ಶ್ರೀ ಸಿದ್ಧಕುಲಚಕ್ರವರ್ತಿ ಸಿದ್ಧಲಿಂಗಶಿವ ...ಚಾರ್ಯರ ಭಾವಚಿತ್ರವನ್ನು ತಳಿರುತೋರಣ ...ಮಾಲಿಗಳಿಂದಲಂಕೃತವಾದ ಭವ್ಯ ಮಂಟಪದಲ್ಲಿ ...ಗೊಳಿಸಿ ವಿಧ್ಯುಕ್ತವಾಗಿ ರಾಜೋಪಚಾರಗಳಿಂದ ... ಮಂಗಲ ಪುಷ್ಪಾಂಜಲಿಯೊಡನೆ ಪುಣ್ಯದಿನ ...ತ್ಸವವನ್ನು ಬಹು ವೈಭವದಿಂದ ನೆರವೇರಿ ... ಆಮೇಲೆ ಅನ್ನಸಂತರ್ಪಣೆ ನೆರವೇರಿತು ಇದೇ ... ಶಿಗ್ಗಾವಿ ತಾಲೂಕು ಪೈಕಿ ಹುಲುಗೂರು ...ದ ಸಂಗಪ್ಪ ಅತ್ತಿಗೇರಿ ಇವರು ತಮ್ಮ ಗೃಹದಲ್ಲಿ ... ಜಗದ್ಗುರುಗಳ ಪುಣ್ಯತಿಥಿಯನ್ನು ಅತಿ ವಿಜೃಂಭಣೆ...ೆ ಪೂರೈಸಿದರು. ಆ ಸಮಯದಲ್ಲಿ ರಂಭಾಪುರೀ ...ಗ್ಗುರು ಪೀಠದ ಉತ್ತರಾಧಿಕಾರಿಗಳಾದ ಶ್ರೀ|| ಷ|| ... ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರು ... ಮನೆಗೆ ದಯಮಾಡಿಸಿದುದು ಇವರ ಪುಣ್ಯ...ವೆಂದೇ ಹೇಳಬಹುದು. ಅಂದು ಜಗದ್ಗುರುಗಳ ...ಚಿತ್ರಕ್ಕೆ ಷೋಡಶೋಪಚಾರಪೂಜಾದಿಗಳು ನೆರ... ಅನ್ನಸಂತರ್ಪಣೆಯಾಯಿತು.

ಹರ್ಲಾಪುರ

...ಾಲೀಕೊಪ್ಪ, ಹೊನ್ನಾಳಿ, ಬೂದಿಹಾಳ, ಹುಲು...ು ಮೊದಲಾದ ಗ್ರಾಮಗಳಿಗೆ ಧರ್ಮೋಪದೇಶಕ್ಕೆ ...ಮಾಡಿಸಿದ್ದ ಶ್ರೀ ಗಂಗಾಧರಶಿವಾಚಾರ್ಯಮಹಾ...ಮಿಗಳವರು ತಾ|| ೧೧-೧-೪೭ನೇ ಶನಿವಾರ ಹರ್ಲಾ...ಕ್ಕೆ ದಯಮಾಡಿಸಿದರು ಆದಿನ ಸಾಯಂಕಾಲ ಶ್ರೀ ...ದ್ಗುರುಗಳ ಪುಣ್ಯತಿಥಿ ಸ್ಮಾರಕವಾಗಿ ಶ್ರೀಗಳವರ ...ಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಅನೇಕ ಸ್ತ್ರೀ ...ುಷರು ನೆರೆದಿದ್ದರು ವೇ|| ವಿರೂಪಾಕ್ಷಶರ್ಮ ...ಧ್ಯಮರ ಕಾವ್ಯತೀರ್ಥ ಇವರು ಜಗದ್ಗುರುಗಳ ...ವನಚರಿತ್ರೆಯನ್ನು ಹೇಳಿದನಂತರ ಶ್ರೀಗಳು ಪಂಚ...ರಗಳ ಪ್ರಾಚೀನತ್ವ, ಶ್ರೀ ಜಗದ್ಗುರು ಸಿದ್ಧಲಿಂಗ ...ಯೋಗಿಗಳಿಂದ ವೀರಶೈವ ಮತದಲ್ಲಾದ ದರ್ಮ...ಂತಿ, ಪಂಚಾಚಾರ್ಯರ ಸಮ್ಮೇಲನ, ಕೇದಾರಪೀಠ, ...ಭಾಪುರೀಪೀಠದ ಉದ್ಧಾರ ಮೊದಲಾದ ವಿಷಯ...ದ ಒಗ್ಗೆ ಒಳ್ಳೇ ಸ್ಫೂರ್ತಿದಾಯಕವಾದ ಭಾಷಣ ಮಾಡಿ...ದು ಬಳಿಕ ಮಂಗಲದೊಡನೆ ಸಭಾಕಾರ್ಯಕ್ರಮವು ...ಮಾಪ್ತಿಗೊಂಡಿತು

ಚನ್ನವೀರದೇವರು ಬೆಟ್ಟಳ್ಳಿಮಠ

...ವಾನ್ ಸಾಹೇಬರವರಲ್ಲಿ ಪ್ರಾರ್ಥನೆ

ಪ್ರಗತಿ ಪರವಾದ ಸಂಸ್ಥಾನವೆಂದು ಖ್ಯಾತಿಗಳಿಸಿರುವ ...ೖಸೂರು ಸಂಸ್ಥಾನದಲ್ಲಿ ಸುಧಾರಣೆಗಳು ಆಚರಣೆಗೆ ...ರಲ್ಪಟ್ಟ ಆರು ವರ್ಷಗಳ ಅವಧಿಯಲ್ಲಿಯೇ ಮತ್ತಷ್ಟು ...ಸುಧಾರಣೆಗಳನ್ನು ಕೃಪೆಮಾಡಬೇಕೆಂದು ಶ್ರೀಮ...ಮಹಾರಾಜರವರು ನಿರ್ಧರಿಸಿ, ಆ ವಿಚಾರದಲ್ಲಿ ಸಲಹೆ...ಗಳನ್ನು ಮುಂದಿಡಲು ದಿವಾನರಾದ ಸರ್ ಆರ್ಕಾಟ್ ...ರಾಮಸ್ವಾಮಿ ಮೊದಲಿಯಾರ್ ಅವರಿಗೆ ಆಜ್ಞೆ ಮಾಡಿರು...ವದು ಮೈಸೂರಿನ ಪ್ರಜೆಗಳಿಗೆ ಪರಮಾನಂದವನ್ನುಂಟು ...ಮಾಡಿದೆ. ಮಹಾಪ್ರಭುಗಳು ಹೊರಡಿಸಿರುವ ಈ ಸಂದೇಶ...ಕ್ಕಾಗಿ ಮೈಸೂರಿನ ಪ್ರಜೆಗಳೆಲ್ಲರೂ ರಾಜಭಕ್ತಿಯುತ...ವಾದ ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ

ವಿಶ್ವವಿಖ್ಯಾತರಾಗಿರುವ ಮತ್ತು ರಾಜ್ಯಾಂಗ ವಿಚಾರ...ಗಳಲ್ಲಿ ಹೆಚ್ಚು ಅನುಭವ ಪಡೆದಿರುವ ಡಾ|| ಸರ್ ...ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರು ಶ್ರೀಮ...ಮಹಾರಾಜರು ವ್ಯಕ್ತಪಡಿಸಿರುವ ಮಹದಾಶಯದಂತೆ "ಎಲ್ಲರಿಗೂ ಸಮಾನಾವಕಾಶವನ್ನು ಕಲ್ಪಿಸಿಕೊಡು...ವಂತಹ, ಮತ್ತು ಎಲ್ಲರೂ ಸುಖಸಂಪದಗಳಿಂದ ಕೂಡಿ ಜೀವಿಸುವದಕ್ಕೆ ಅವಕಾಶ ಕಲ್ಪಿಸಿಕೊಡುವಂತಹ" ...ರಾಜ್ಯಾಂಗವ್ಯವಸ್ಥೆಗೆ ಸಂಬಂಧಪಟ್ಟ ಉತ್ತಮ ಸಲಹೆ...ಗಳನ್ನು ಎಲ್ಲ ಪಕ್ಷಗಳ ಎಲ್ಲ ವರ್ಗಗಳ ಎಲ್ಲ ಕೋಮುಗಳ ಮುಖಂಡರ ಸಲಹೆಗಳನ್ನು ಪಡೆದು ಮಹಾಪ್ರಭುಗಳ ಮುಂದಿಡುವರೆಂಬ ನಂಬಿಕೆ ನನಗಿದೆ. ಅವರ ಈ ಮಹಾಪ್ರಯತ್ನದಲ್ಲಿ ಅವರು ಬಯಸಿರುವಂತೆ ಎಲ್ಲರ ಸಹಕಾರವು ದೊರಕಲೆಂದು ಹಾರೈಸುತ್ತೇನೆ

ವರ್ತಕ ವೃಂದಕ್ಕೆ ಸೇರಿರುವ ನಾನು ನಮ್ಮ ವರ್ತಕ ಬಾಂಧವರ ಪರವಾಗಿ ಒಂದೆರಡು ಸಲಹೆಗಳನ್ನು ಮುಂದಿಡಬೇಕಾಗಿದ ವರ್ತಕರು ದೇಶದ ಆರ್ಥಿಕ ಸಂಪತ್ತಿನ ಆಧಾರಸ್ತಂಭದಂತಿದ್ದಾರೆ ಅವರು ತೆರಿಗೆಗಳ ರೂಪದಲ್ಲಿ ಸರ್ಕಾರದ ಬೊಕ್ಕಸವನ್ನು ತುಂಬುತ್ತಿದ್ದಾರೆ ಶ್ರೀಮನ್ ಮಹಾರಾಜರವರ ಕೃಪಾಶ್ರಯದಲ್ಲಿ ಇದುವರೆಗೂ ವರ್ತಕರು ತಮ್ಮ ವ್ಯಾಪಾರವೃತ್ತಿಯಲ್ಲಿ ಕ್ಷೇಮದಿಂದ ಜೀವಿಸುತ್ತಿದ್ದರು ವರ್ತಕರಾದರೂ ರಾಜಕೀಯದ ಗೋಜಿಗೆ ಹೋಗದ ತಮ್ಮ ವ್ಯಾಪಾರದಲ್ಲಿ ನಿರತರಾಗಿದ್ದರು ಈಗ, ಪರಿಸ್ಥಿತಿ ಬದಲಾಯಿಸಿದೆ. ವರ್ತಕರು ರಾಜಕೀಯದಲ್ಲಿ ಭಾಗವಹಿಸಿ, ತಮ್ಮ ರಕ್ಷಣೆಮಾಡಿಕೊಳ್ಳಬೇಕಾಗಿದೆ ತಮ್ಮ ನ್ಯಾಯವಾದ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬೇಕಾಗಿದೆ ಬ್ರಿಟಿಷ್ ಭಾರತದ ಪರಿಸ್ಥಿತಿಯನ್ನೂ, ಅಲ್ಲಿ ನಡೆಯುತ್ತಿರುವ ಕೋಮುವಾರು ಗಲಭೆಗಳ ಪ್ರಯುಕ್ತ ವರ್ತಕರಿಗೆ ಆಗುತ್ತಿರುವ ಅಪಾರ ನಷ್ಟವನ್ನೂ ಗಮನಿಸುವವಾದರೆ, ವರ್ತಕರು ಎಚ್ಚೆತ್ತು ತಮ್ಮ ರಕ್ಷಣೆಗೆ ಸಿದ್ಧಮಾಡಿಕೊಳ್ಳಬೇಕಾದುದು ಅಗತ್ಯವೆಂದು ಹೇಳಬೇಕಾಗಿದೆ. ಆದುದರಿಂದ ಮೈಸೂರಿನ ನೂತನ ರಾಜ್ಯಾಂಗ ವ್ಯವಸ್ಥೆಯು ಯಾವ ರೂಪವನ್ನೇ ತಾಳಲಿ, ಮೈಸೂರಿನಲ್ಲಿ ವ್ಯಾಪಾರಾದಿ ಉದ್ಯಮಗಳಲ್ಲಿ ನಿರತರಾಗಿರುವ ಸುಮಾರು ಶೇಕಡಾ 10 ರಷ್ಟು ಪ್ರಜಾವರ್ಗಕ್ಕೆ ತಕ್ಕ ರಕ್ಷಣೆಗಳನ್ನು ಕೊಟ್ಟಿರಬೇಕು ಅವರಿಗೆ ಶಾಸನ ಸಭೆಗಳಲ್ಲಿ ನ್ಯಾಯವಾದ ಪ್ರಾತಿನಿಧ್ಯ ದೊರೆಯಬೇಕು ಅವರ ಮಾತಿಗೆ ಪುರಸ್ಕಾರ ದೊರೆಯಬೇಕು. ದಿವಾನರು ಮುಖಂಡರೊಡನೆ ಸಮಾಲೋಚನೆ ನಡೆಸುವಾಗ, ವರ್ತಕ ಮುಖಂಡರನ್ನು ಬರಮಾಡಿಕೊಂಡು ಅವರ ಅಭಿಪ್ರಾಯಗಳಿಗೆ ಕಿವಿಗೊಡುವುದಲ್ಲದೆ ಅವರ ನ್ಯಾಯವಾದ ಬೇಡಿಕೆಗಳಿಗೂ ಮಾನ್ಯತೆಕೊಡಬೇಕು ವರ್ತಕರು ಕೂಡ ಈ ಸಂದರ್ಭದಲ್ಲಿ ಸುಸಂಘಟಿತರಾಗಿ ಕೆಲಸ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ

ಎನ್ ರುದ್ರಯ್ಯ, ಮಂಡಿಮರ್ಚೆಂಟ್
ಗ್ರೇನ್ ಮರ್ಚೆಂಟ್ ಬ್ಯಾಂಕ್ ಸೆಕ್ರೆಟರಿ

ಸ್ವೀಕಾರ

ಬೇಲೂರು ಟವನ್ನಿನಲ್ಲಿರುವ ವೇ|| ಮಾಳಿಗೆ ರುದ್ರಯ್ಯನವರು ಶಿವಾಧೀನರಾದ ನಿಮಿತ್ತ ನೆರವೇರಿದ ವಾರ್ಷಿಕ ಗಣಾರಾಧನೆಯ ಸಮಯದಲ್ಲಿ ಅವರ ಪುತ್ರರಾದ ವೇ|| ವೀರಭದ್ರಯ್ಯನವರು ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ|| ಎಂ ವಿ ಮುದ್ದೀರಯ್ಯನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಟವನ್ನಿನಲ್ಲಿರುವ ಮ|| ರಾ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ತಮ್ಮ ಮನೆಯಲ್ಲಿ ಉಜ್ಜಯಿನೀ ಜಗದ್ಗುರುಗಳವರ ಪುಣ್ಯತಿಥಿ ಸಮಾರಂಭವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಶಿವಮೊಗ್ಗಾ ಡಿ|| ನ್ಯಾಮತಿ ಗ್ರಾಮದಲ್ಲಿರುವ ಶ್ರೀ ಕುಡಪಲಿ ಬಸವಲಿಂಗಪ್ಪನವರು ತಾ|| ೧೩-೧-೪೭ನೆಯ ಸೋಮವಾರ ದಿವಸ ಶಿವಾಧೀನರಾದ ಸಮಯದಲ್ಲಿ ಅವರ ತಮ್ಮಂದಿರಾದ ಮ|| ರಾ|| ಕುಡಪಲಿ ಮುರಿಗಪ್ಪನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜೇರಿಗೆ ವೀರಭದ್ರಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗರಗ ಗ್ರಾಮದಲ್ಲಿರುವ ಮ|| ರಾ|| ಒಳಗೂರ ವೀರಭದ್ರಪ್ಪನವರ ಮನೆಯಲ್ಲಿ ಉಜ್ಜಯಿನೀ ಜಗದ್ಗುರುಗಳವರ ಪುಣ್ಯದಿನೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಯಾದವಾಡ ಮಳೆಮಠದ ಶ್ರೀ|| ಷ|| ಬ್ರ|| ಶಿವಶಂಕರಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ

ಅಂತರ ರಾಷ್ಟ್ರೀಯ ಆರ್ಥಿಕ ಕೌನ್ಸಿಲಿನ ಅಧಿವೇಶನಕ್ಕೆ ಮೈಸೂರು ದಿವಾನರು ಪ್ರಧಾನ ಪ್ರತಿನಿಧಿಗಳು

ಅಂತರ ರಾಷ್ಟ್ರೀಯ ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲಿನ ೪ನೆಯ ಅಧಿವೇಶನಕ್ಕೆ ಭಾರತದಿಂದ ಹೋಗುವ ಪ್ರತಿನಿಧಿಗಳ ನಾಯಕತ್ವವು ಮೈಸೂರು ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್ ಅವರಿಗೆ ವಹಿಸಲ್ಪಟ್ಟಿದೆ ಈ ಸಮ್ಮೇಳನವು ಫೆಬ್ರವರಿ ತಾ|| ೨೮ನೇ ದಿವಸ ನ್ಯೂಯಾರ್ಕಿನಲ್ಲಿ ಆರಂಭವಾಗುತ್ತದೆ. ಸರ್ ಆರ್ಕಾಟರು ಕೌನ್ಸಿಲಿನ ಪ್ರಥಮಾಧಿವೇಶನದಲ್ಲಿ ಅದರ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು.

ಮೈಸೂರು ಸಂಸ್ಥಾನದಲ್ಲಿ ಮೂಲ ಶಿಕ್ಷಣದ ಏರ್ಪಾಟು

ಪಾಂಚವಾರ್ಷಿಕಯೋಜನೆ

ಮೈಸೂರು ಸಂಸ್ಥಾನದಲ್ಲಿ ೨೫೦ ಮೂಲ ಶಿಕ್ಷಣ ಶಾಲೆಗಳನ್ನು ತೆರೆಯುವ ಪಾಂಚವಾರ್ಷಿಕ ಯೋಜನೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆ

ಬೆಂಗಳೂರಿನಬಳಿ ಕೃಷ್ಣರಾಜಪುರದಲ್ಲಿ ಮೂಲಶಿಕ್ಷಣ ಶಾಲೆಯೊಂದನ್ನು ತೆರೆಯಲು ಈಗಾಗಲೇ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಕೆಂಗೇರಿಯಲ್ಲಿ ಮೂಲ ಶಿಕ್ಷಣ ಕ್ರಮದಲ್ಲಿ ವ್ಯಾಸಂಗ ನಡೆಸಲು ಉಪಾಧ್ಯಾಯರನ್ನು ತರಪೇತು ಮಾಡುವ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಗ್ರಾಂಟನ್ನು ಮಂಜೂರು ಮಾಡಿದೆ

ಮೈಸೂರಿನಲ್ಲಿ ಆಗಲಿರುವ ಈ ವಿದ್ಯಾಭ್ಯಾಸ ಜಾಗೃತಿಯ ಬಗ್ಗೆ ಮೈಸೂರು ಸರ್ಕಾರವು ಒಂದು ವರದಿಯನ್ನು ತಯಾರುಮಾಡಿದೆ

ಯೋಜನೆಯ ವಿವರಗಳು

ಪ್ರತಿ ವರ್ಷ ೫೦೦ ಪ್ರೈಮರಿ ಸ್ಕೂಲುಗಳಂತೆ ಈಗಿರುವ ಸ್ಕೂಲುಗಳ ಸಂಖ್ಯೆ ೮೯೭೭ನ್ನು ೧೩,೪೦೦ಕ್ಕೆ ಹೆಚ್ಚಿಸುವುದಾಗಿಯೂ, ಮತ್ತು ಮೇಲಣ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ದ್ವಿತೀಯ ಭಾಷೆಯನ್ನಾಗಿ ಮಾಡಿ ಮಾತೃಭಾಷೆಯನ್ನು ಪ್ರಥಮ ಭಾಷೆ [ಫಸ್ಟ್ ಲಾಂಗ್ವೇಜ್] ಯನ್ನಾಗಿ ಮಾಡುವುದಾಗಿಯೂ ಉದ್ದೇಶಿಸಲಾಗಿದೆ. ಮಿಡ್ಲ್ ಸ್ಕೂಲಿನ ಪ್ರಾರಂಭದಿಂದಲೇ ಹಿಂದೂಸ್ಥಾನಿಯನ್ನು ಬೋಧಿಸುವ ವ್ಯವಸ್ಥೆ ಮಾಡಲಾಗುವುದು ಪ್ರತಿಯೊಬ್ಬ ವಿದ್ಯಾರ್ಥಿಯೂ ಇತರ ವಿದ್ಯಾಭ್ಯಾಸದ ಜತೆಗೆ ಔದ್ಯೋಗಿಕ ಶಿಕ್ಷಣ ಪಡೆಯಲೇಬೇಕೆಂಬ ನಿಯಮ ಮಾಡಲಾಗುವುದು ಮಹಿಳೆಯರಿಗೆ ಈ ಔದ್ಯೋಗಿಕ ಶಿಕ್ಷಣದ ಬದಲು ಗೃಹಕೃತ್ಯದಲ್ಲಿ ವಿಶೇಷ ಶಿಕ್ಷಣ ಕೊಡಲಾಗುವುದು

ವಯಸ್ಕರ ವಿದ್ಯಾಭ್ಯಾಸ ಕ್ರಮ

ಈಗಿರುವ ವಯಸ್ಕರ ವಿದ್ಯಾಭ್ಯಾಸ ಕ್ರಮದ ಪ್ರತಿಫಲವಾಗಿ ೧೯೪೧-೪೨ರಲ್ಲಿ ಒಟ್ಟು ೧,೫೭,೦೦೦ ಜನ ಅನಕ್ಷರಸ್ಥ ವಯಸ್ಕರನ್ನು ಅಕ್ಷರಸ್ಥರನ್ನಾಗಿ ಮಾಡಲಾಯಿತು. ಈಗ ಸರ್ಕಾರದವರು ತಯಾರಿಸಿರುವ ಪಾಂಚವಾರ್ಷಿಕ ಯೋಜನೆಯ ಪ್ರಕಾರ ವರ್ಷವೊಂದಕ್ಕೆ ೯೦,೦೦೦ ಗಂಡಸರು ಮತ್ತು ೬೦೦೦ ಹೆಂಗಸರನ್ನು ಅಕ್ಷರಸ್ಥರನ್ನಾಗಿ ಮಾಡಲಾಗುವುದು. ವಯಸ್ಕರಿಗೆ ೩,೦೦೦ ವಾಚನಾಲಯಗಳನ್ನು ತೆರೆಯಲಾಗುವುದಲ್ಲದೆ ಹಳ್ಳಿಯ ಸಮಾಜಕ್ಕೆ ಸರಿಹೋಗುವಂತೆ ನಾಯಕರನ್ನು ತರಪೇತುಮಾಡಲು ೧೦ ವಿದ್ಯಾ ಪೀಠಗಳನ್ನು ತೆರೆಯಲಾಗುವುದು.

ಇವೆಲ್ಲದರ ಒಟ್ಟು ಖರ್ಚು ಮೊದಲನೆಯ ವರ್ಷ ೮,೬೦,೦೦೦ ರೂಗಳಾಗುವುದೆಂದೂ, ಯೋಜನೆಯು ಜಾರಿಗೆ ಬಂದಮೇಲೆ ೫ನೇ ವರ್ಷದಲ್ಲಿ ೯,೧೦,೦೦೦ ರೂಪಾಯಿಗಳಾಗುವುದೆಂದು ಅಂದಾಜು ಮಾಡಲಾಗಿದೆ.

ಹಿಂದುಳಿದ ಜನಗಳ ಉದ್ಧಾರ

ಮತ್ತು, ಈ ಯೋಜನೆಯಂತೆ ಹಿಂದುಳಿದ ಜನಾಂಗಗಳ ಉದ್ಧಾರಕ್ಕೆಂದು ಈ ವರ್ಷ ೩ ಲಕ್ಷ ರೂಪಾಯಿ

ಗಳನ್ನು ಮಂಜೂರುಮಾಡಲಾಗಿದೆ ಅವರ ವಿದ್ಯಾಭ್ಯಾಸ, ಜೀವನಕ್ರಮ ಮತ್ತು ಆರ್ಥಿಕ ಮಟ್ಟವನ್ನು ಸುಧಾರಿಸುವುದೇ ಇದರ ಉದ್ದೇಶ

ನರ್ಸರಿ ವಿದ್ಯಾಭ್ಯಾಸ

ನರ್ಸರಿ ವಿದ್ಯಾಭ್ಯಾಸವನ್ನು ಉತ್ತಮ ಗೊಳಿಸುವ ಕ್ರಮವೂ ಈ ಪಾಂಚ ವಾರ್ಷಿಕ ಯೋಜನೆಯಲ್ಲಿ ಅಡಕವಾಗಿದೆ ವರ್ಷವೊಂದಕ್ಕೆ ೩೦ನರ್ಸರಿ ಶಾಲೆಗಳನ್ನು ಸ್ಥಾಪಿಸುವ ಯೋಚನೆ ಇದೆ ೩೦ಜನ ಸ್ತ್ರೀ ಶಿಕ್ಷಕಿಯರನ್ನು ತರಬೇತು ಮಾಡುವ ಶಾಲೆಯೊಂದನ್ನು ಈ ವರ್ಷ ಮೈಸೂರಿನಲ್ಲಿ ತೆರೆಯಲಾಗಿದೆ

ಕಮ್ಯೂನಿಸ್ಟರ ಬಗ್ಗೆ ಇಂಡಿಯಾ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮ

ಇಂಡಿಯಾ ಸರ್ಕಾರದ ಆಜ್ಞೆಯ ಪ್ರಕಾರ ಭಾರತಾದ್ಯಂತ ಕಮ್ಯೂನಿಸ್ಟ್ ಪಂಗಡದ ಕಚೇರಿಗಳ ಶೋಧನ ನಡೆದಿದೆ ಕಮ್ಯೂನಿಸ್ಟ್ ಪಂಗಡಕ್ಕೆ ಸಂಬಂಧಪಟ್ಟ ಕೃತಕ ಸಂಸ್ಥೆಗಳ ಮತ್ತು ರಷ್ಯ ಮಿತ್ರರ ಸಂಘಗಳ ಕಚೇರಿಗಳೂ ಸಹ ಶೋಧಿಸಲ್ಪಟ್ಟಿವೆ

ಕಮ್ಯೂನಿಸ್ಟ್ ಪಂಗಡದ ಪತ್ರಿಕೆಯಾದ 'ಪೀಪಲ್ಸ್ ಏಜ್" ಎಂಬುದರ ಸಂಪಾದಕರನ್ನೂ ಉಪಸಂಪಾದಕರನ್ನೂ ಇನ್ನೂ ಅನೇಕ ಮುಂದಿ ಕಮ್ಯೂನಿಸ್ಟ್ ನಾಯಕರನ್ನೂ ದಸ್ತಗಿರಿ ಮಾಡಲಾಗಿದ

ಭಾರತದಲ್ಲಿ ಮುಂದೆ ಅಶಾಂತಿ ಸಂಭವಿಸಿದರೆ ಅದನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಸೇನಾಗಳಿಗೆ ಪ್ರಧಾನ ಸೇನಾಪತಿಯು ರಹಸ್ಯವಾಗಿ ಕಳಿಸಿಕೊಟ್ಟಿದ್ದ ಪತ್ರಗಳೆಂದು ಹೇಳ ಕೆಲ ಲೇಖನಗಳನ್ನೂ ಪೀಪಲ್ಸ್ ಏಜ್ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು ಆ ಸಂಬಂಧದಲ್ಲಿ ಈ ಕ್ರಮ ಜರುಗಿಸಿದೆ

ಬೊಂಬಾಯಿನಲ್ಲಿರುವ ಕಮ್ಯೂನಿಸ್ಟ್ ಪಂಗಡದ ಪ್ರಧಾನ ಕಛೇರಿ ಪೀಪಲ್ಸ್ ಏಜ್ ಕಾರ್ಯಾಲಯ ಮತ್ತು ಮುದ್ರಣಾಲಯಗಳು, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಕಛೇರಿ ಅನೇಕ ಕಮ್ಯೂನಿಸ್ಟ್ ನಾಯಕರ ಭವನಗಳು ಶೋಧಿಸಲ್ಪಟ್ಟವು

ದೆಹಲಿಯಲ್ಲಿ ೬ಗಂಟೆಗಳ ಕಾಲ ಕಮ್ಯೂನಿಸ್ಟ್ ನಾಯಕರ ಮತ್ತು ಕೆಲಸಗಾರರ ಕಚೇರಿಗಳನ್ನೂ ಭವನಗಳನ್ನೂ ಶೋಧಿಸಿ ಅನೇಕ ಕಾಗದ ಪತ್ರಗಳನ್ನು ವಶಪಡಿಸಿಕೊಂಡರು

ಅಸಂಬದ್ಧ ಕಾಗದ ಪತ್ರಗಳನ್ನು ವಶಪಡಿಸಿಕೊಂಡ ಪೋಲೀಸರ ನಡವಳಿಕೆಯು ಅನ್ಯಾಯವೆಂದು ಬೊಂಬಾಯಿಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಸಮಕ್ಷಮ ಕಮ್ಯೂನಿಸ್ಟರು ಹಾಕಿಕೊಂಡ ಅರ್ಜಿ ತಿರಸ್ಕೃತವಾಯಿತು ಮದರಾಸಿನಲ್ಲಿ ಜನವರಿ ೮ನೇ ತಾ|| ಕಮ್ಯೂನಿಸ್ಟ್ ಕಚೇರಿಯ ಶೋಧನ ನಡೆಯಿತು ಲಾಹೋರಿನಲ್ಲಿ ಮೂರುವರೆ ಗಂಟೆ ಕಾಲ ಕಮ್ಯೂನಿಸ್ಟ್ ಕಚೇರಿ ಶೋಧಿಸಲ್ಪಟ್ಟು ಕೆಲವು ಲೇಖನದ ಪ್ರತಿಗಳನ್ನೂ, ಪಂಜಾಬಿನ ಪ್ರಮುಖ ಕಮ್ಯೂನಿಸ್ಟ್ ರಮೇಶಚಂದ್ರರು ಬರೆದಬಂದು ಕೈ ಪಿಡಿಯನ್ನೂ, ವಶಪಡಿಸಿಕೊಳ್ಳಲಾಯಿತು

ಕಲ್ಕತ್ತೆಯಲ್ಲಿ ಬೋಧನೆಗಳಾದವು ಟ್ರಾಂ ಕೆಲಸಗಾರರ ಸಂಘದ ಅಧ್ಯಕ್ಷ ಗೋಪಾಲ ಆಚಾರ್ಯ ಕೃಷಿಕ ಸಭಾ ಕಾರ್ಯದರ್ಶಿ ಬಿಜ್ಲಿ ಮುಂತಾದವರನ್ನು ದಸ್ತಗಿರಿ ಮಾಡಲಾಗಿದೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊ… ರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು … ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು … ದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತ… ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು … ಶೈವಮತದಲ್ಲಿ ಸದ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ … ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು … ಗ್ರಂಥ ವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿ … **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತ… ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕ… ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ … ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತ… ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆ… ಯನ್ನು ಪೂರಯಿಸುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ… ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ… ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ… ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು… ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು … ಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹು … ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ … ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ … ಈ ಗ್ರಂಥವು ಒಟ್ಟು ೭೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ… ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನು… ಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ … ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ … ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನ … ರವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ … ಓದಬೇಕು **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) ...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ ...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿರುವ ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ವರ್ತುಲ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಟೀಕಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ...	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
[illegible] (मराठी)	१ रु
[illegible] ([illegible]-संस्कृत)	१ रु.
सिद्धांतशिखामणि (मूल)	६ आ.
[illegible] (संस्कृत) ...	२ आ.

ಪ್ರಕಾಶಕರು—ಶ್ರೀ [illegible] ಮೈಸೂರು

ಮೈಸೂರು [illegible]

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಜನವರಿ ೧೯೪೭ [ಸಂಚಿಕೆ ೪೦

ಕೆಲವು ಕಾಯಿಪಲ್ಯಗಳಲ್ಲಿರುವ ಗುಣವಿಶೇಷಗಳು

ಬೇಯಿಸದೆ ಉಪಯೋಗಿಸಲು ಯೋಗ್ಯವಾದ ತರಕಾರಿಗಳಲ್ಲಿ ಪುಷ್ಟಿಜನಕವಾದ ವಸ್ತುವು ಹೆಚ್ಚಾಗಿಲ್ಲದಿದ್ದರೂ, ಅವುಗಳಲ್ಲಿ ಮತ್ತೊಂದು ವಿಶೇಷ ಪದಾರ್ಥವುಂಟು ಈಚೀಚೆಗೆ ಕಂಡುಹಿಡಿದಿರುವ "ವಿಟಮಿನ್" ಗಳೆಂಬ ಆಹಾರಸತ್ವಗಳು ಆ ತರಕಾರಿಗಳಲ್ಲಿ ವಿಶೇಷವಾಗಿರುವುವೆಂದು ಕಂಡುಬಂದಿದೆ ಆದುದರಿಂದ ಕಾಳುಗಳು, ಕೋಸ್‌ಗೆಡ್ಡೆ, ಸೌತೆಕಾಯಿ ಮುಂತಾದ ಬೇಯಿಸದ ಉಪಯೋಗಿಸಬಹುದಾಗಿರುವ ತರಕಾರಿಗಳನ್ನು ಪ್ರತಿ ಊಟದಲ್ಲಿಯೂ ಸೇವಿಸಬೇಕು ಅವುಗಳಲ್ಲಿ ಪೊಟ್ಯಾಷ್ ಕಬ್ಬಿಣ ಸುಣ್ಣ ಮತ್ತು ಬೇರೆ ಕೆಲವು ಖನಿಜಗಳು ಹೆಚ್ಚು ಪ್ರಮಾಣದಲ್ಲಿರುವುವು

ದಂಟು ಕೋಸ್‌ಗೆಡ್ಡೆ ಮುಂತಾದ ದಿಂಡುಗಳ ರೂಪದಿಂದುಪಯೋಗಿಸುವ ಜಾತಿಯ ತರಕಾರಿಗಳ ಸೇವನೆಯಿಂದ ಮಲಬದ್ಧತೆಯು ನಿವಾರಣೆಯಾಗುವುದು

ತರಕಾರಿಗಳಲ್ಲಿರುವ ಕ್ರಿಮಿದೋಷಗಳನ್ನು ನಿವಾರಿಸುವುದು

ಉಷ್ಣವಲಯಗಳಲ್ಲಿ ವಾಸಮಾಡುತ್ತಿರುವವರು ಹಣ್ಣುಗಳನ್ನೂ, ಹಸಿಯ ತರಕಾರಿಗಳನ್ನೂ ವಿಶೇಷವಾಗಿ ಉಪಯೋಗಿಸಬೇಕು. ಆದರೆ, ಹೊಟ್ಟೆಯಲ್ಲಿ ಕ್ರಿಮಿಗಳು ಸೇರಬಹುದೆಂಬ ಭೀತಿಯಿಂದ ಅನೇಕರು ಅವುಗಳನ್ನು ವಿಶೇಷವಾಗಿ ಸೇವಿಸುವುದಿಲ್ಲ. ಪರ್‌ಮ್ಯಾಂಗನೇಟ್ ಆಫ್ ಪೊಟ್ಯಾಷನ್ನು ಕರಗಿಸಿದ ನೀರಿನಲ್ಲಾಗಲಿ, ಕಾಂಡಿಯವರ ದ್ರಾವಕದಲ್ಲಾಗಲಿ ಮೊದಲು ಆ ತರಕಾರಿಗಳನ್ನು ಅದ್ದಿ ಕುದಿಸಿ ತಣ್ಣಗೆ ಮಾಡಿದ ನೀರಿನಲ್ಲಿ ತೊಳೆದರೆ, ಮೇಲಿನ ದೋಷಗಳಿಗೆ ಅವಕಾಶವಿಲ್ಲದಂತಾಗುವುದು

ಆರೋಗ್ಯಕರವಾದ ಒಳ್ಳೆಯ ಜಾತಿಯ ಹಣ್ಣುಗಳನ್ನು ಆರಿಸುವುದರಲ್ಲಿ ಬಹಳ ಜಾಗರೂಕರಾಗಿರಬೇಕು ಕೊಳೆಯುತ್ತ ಬರುವ ಹಣ್ಣುಗಳನ್ನಾಗಲಿ, ಅನೇಕ ದಿವಸಗಳವರೆಗೆ ಇಟ್ಟಿದ್ದು ಬಹಳ ಮಾಗಿದ ಹಣ್ಣುಗಳನ್ನಾಗಲಿ ಉಪಯೋಗಿಸಲೇ ಕೂಡದು.

ಆಲೂಗೆಡ್ಡೆಗಳು

ತರಕಾರಿಗಳಲ್ಲಿ ಆಲೂಗಡ್ಡೆಯು ಅತ್ಯುತ್ತಮವಾಗಿರುವುದರಿಂದ ಅದರ ಗುಣವಿಶೇಷಗಳನ್ನು ತಿಳಿಯಬೇಕಾದುದು ಮುಖ್ಯವು ಎಲ್ಲಾ ತರಕಾರಿಗಳಿಗಿಂತಲೂ ಇದು ಸದಾ ಸುಲಭವಾಗಿ ಸಿಕ್ಕುವುದು. ಮತ್ತು ಇದನ್ನು ಕೆಡದಂತೆ ಬಹಳಕಾಲ ಇಟ್ಟಿರಬಹುದು. ಸರಿಯಾದ ಕ್ರಮದಲ್ಲಿ ಅದನ್ನು ಅಡಿಗೆ ಮಾಡಿದರೆ ಅದು ಸುಲಭವಾಗಿ ಜೀರ್ಣಿಸಿ ರಕ್ತಗತವಾಗುವುದು. ಅದರಲ್ಲಿ ಕಾರ್ಬೋಹೈಡ್ರೇಟುಗಳೂ ಲವಣಗಳೂ, ಹೆಚ್ಚಾಗಿರುವುದರಿಂದ ದೇಹದಬೆಳವಣಿಗೆಗೂ ಬಹಳಮಟ್ಟಿಗೆ ಸಹಕಾರಿಯಾಗುವುದು.

ಆಲೂಗಡ್ಡೆಯಲ್ಲಿ ಪ್ರೋಟೀನ್‌ಭಾಗವು ಬಹಳ ಕಡಿಮೆಯಾಗಿರುವುದೆಂಬ ಭಾವನೆಯುಂಟು ಹಿನ್ಹೆಡ್ ಎಂಬ ಡೆನ್ಮಾರ್ಕಿನ ಪ್ರಖ್ಯಾತ ಶಾಸ್ತ್ರಜ್ಞನು ಬಹಳ ಕಷ್ಟಪಟ್ಟು ಕೆಲಸಮಾಡಿದ ಮೇಲೆ ನಶಿಸುವ ಪದಾರ್ಥಗಳನ್ನು ದೇಹಕ್ಕೆ ಒದಗಿಸಲು ತಕ್ಕ ಆಹಾರಪದಾರ್ಥಗಳೆಲ್ಲವೂ ಆಲೂಗಡ್ಡೆಯಲ್ಲಿರುವುವೆಂದು ಹೇಳಿರುವನು ಡೆನ್ಮಾರ್ಕಿನ ಸರಕಾರದ ಪರವಾಗಿ ಅನೇಕ ವರ್ಷಗಳ ಕಾಲ ಅತನು ಶೋಧನಮಾಡಿರುವನು

ಬಹಳ ಮಂದಿಗೆ ಅನೇಕ ತಿಂಗಳುಗಳವರೆಗೆ ಆಲೂಗಡ್ಡೆಯನ್ನೂ, ಕೊಬ್ಬನ್ನೂ ಮಾತ್ರ ಆಹಾರವಾಗಿ ಕೊಟ್ಟು ಅವರಿಂದ ಬಹಳ ಶ್ರಮಕರವಾದ ಕೆಲಸಗಳನ್ನೂ ಮಾಡಿಸಿರುವನು ಅನೇಕ ಶೋಧನೆಗಳಿಂದಲೂ ಅನುಭವದಿಂದಲೂ ತರಕಾರಿಗಳು, ಹಣ್ಣುಗಳು ಬೆಣ್ಣೆ ಅಥವಾ ಕೆನೆ, ರೊಟ್ಟಿ, ಅಥವಾ ಹಾಲು ಇವುಗಳನ್ನು ಆಲೂಗಡ್ಡೆಯೊಡನೆ ಸೇರಿಸಿ ಸೇವಿಸುವುದರಿಂದ ಅದು ಅತ್ಯುತ್ತಮ ಆಹಾರಪದಾರ್ಥವಾಗುವುದೆಂದು ನಿರ್ಧರವಾಗಿ ತಿಳಿದುಬಂದಿರುವುದು ಮೂತ್ರಕೋಶಗಳಲ್ಲಿ ತೋರುವ ವ್ಯಾಧಿಗಳಿಗೆ ಆಲೂಗಡ್ಡೆಯಿಂದ ಬಹಳ ಗುಣವುಂಟಾಗುವುದೆಂದು ನಿರ್ಧರವಾಗಿದೆ ಅಂತಹ ಸಂದರ್ಭಗಳಲ್ಲಿ ಅವುಗಳನ್ನು ಧಾರಾಳವಾಗಿ ಉಪಯೋಗಿಸುತ್ತಿರುವರು ಈ ವ್ಯಾಧಿಗಳಲ್ಲಿ ವ್ಯಾಧಿಗ್ರಸ್ತರಿಗೆ ಆಲೂಗಡ್ಡೆ, ಬೆಣ್ಣೆ ಮತ್ತು ಸ್ವಲ್ಪ ತರಕಾರಿಗಳನ್ನು ಮಾತ್ರ ಆಹಾರವಾಗಿ ಕೊಡುವರು ಆ ರೋಗಿಗಳು ಆಲೂಗಡ್ಡೆಯನ್ನು ಧಾರಾಳವಾಗಿ ಉಪಯೋಗಿಸುವುದರಿಂದ, ಮೂತ್ರದ್ರಾವಕವು ಸರಿಯಾದ ಪ್ರಮಾಣದಲ್ಲಿ ಉತ್ಪತ್ತಿಯಾಗಿ, ಅದರಲ್ಲಿರುವ ದೋಷಗಳೂ ಬೇಗ ಸುಲಭ ವಿಸರ್ಜನೆಯಾಗುವುದು

ಸರಿಯಾದ ರೀತಿಯಲ್ಲಿ ತಯಾರಿಸಿದ ಆಲೂಗಡ್ಡೆಯು ತಿನ್ನುವುದಕ್ಕೆ ಬಹಳ ರುಚಿಯಾಗಿರುವುದು ಅದನ್ನು ಪಕ್ವಮಾಡಿ, ಎಂದರೆ ನೀರಿನಲ್ಲಿ ಬೇಯಿಸಿ ಅಥವಾ ಸುಟ್ಟು ಉಪಯೋಗಿಸಬೇಕು ಎಣ್ಣೆ ಅಥವಾ ತುಪ್ಪದಲ್ಲಿ ಹುರಿಯುವುದರಿಂದ ಇದು ಸುಲಭವಾಗಿ ಜೀರ್ಣಿಸಲಾರದು ಆಲೂಗಡ್ಡೆಯಿಂದ ತಯಾರಿಸಿದ ಪದಾರ್ಥಗಳನ್ನು ಬಹಳ ಭದ್ರವಾಗಿ ಮುಚ್ಚಿದ ಪಾತ್ರೆಗಳಲ್ಲಿಟ್ಟಲ್ಲಿ ಅದು ಬಹಳ ಗಟ್ಟಿಯಾಗಿ ಹೋಗುವುದು ಆದುದರಿಂದ ಅದರಮೇಲೆ ಒಟ್ಟೆಯನ್ನು ಮುಚ್ಚಿಟ್ಟು ಅದರಲ್ಲಿನ ತೇವವು ಹೊರಗೆ ಹೋಗಲು ಅವಕಾಶವನ್ನೇರ್ಪಡಿಸಬೇಕು

ಸೀಮೆ ಬದನೇಕಾಯಿ (Tomatoes)

ಅನೇಕರು ಈ ತರಕಾರಿಯನ್ನು ಸೇವಿಸುವುದರಿಂದ ವ್ರಣರೋಗಗಳಿಗೆ ಕಾರಣವಾಗುವುದೆಂಬ ತಪ್ಪು ತಿಳುವಳಿಕೆಯುಳ್ಳವರಾಗಿರುವುದರಿಂದ ಇಲ್ಲಿ ಅದರ ಗುಣವಿಮರ್ಶೆಯನ್ನು ಸ್ವಲ್ಪಮಟ್ಟಿಗೆ ಮಾಡುವುದವಶ್ಯವು ಅಂಥವರು ಮಾಂಸವನ್ನು ಕಡಿಮೆಯ ಪ್ರಮಾಣದಲ್ಲಿ ಸೇವಿಸಿ ಈ ಸೀಮೆ ಬದನೆಯನ್ನು ಹೆಚ್ಚಾಗಿ ಸೇವಿಸುತ್ತಿದ್ದರೆ ವ್ರಣರೋಗಬಾಧೆಯಿಂದ ಸಾಯುವವರ ಸಂಖ್ಯೆಯು ಬಹಳ ಕಡಿಮೆಯಾಗುತ್ತಿದ್ದಿತು

ಪ್ರೋಟೀನ್‌ಭಾಗವು ವಿಶೇಷವಾಗಿ ಸೇರಿರುವ ಆಹಾರ ಪದಾರ್ಥಗಳನ್ನು ಸೇವನೆಮಾಡುವವರಲ್ಲಿ ಈ ಹುಣ್ಣಿನ ವ್ಯಾಧಿಯು ಬಹಳ ಪ್ರಬಲವಾಗಿರುವುದುಂಟು ಮಾಂಸಾಹಾರದ ಉಪಯೋಗವು ಹೆಚ್ಚಿದಂತೆಲ್ಲಾ ಈ ವ್ಯಾಧಿಯೂ ವೃದ್ಧಿಯಾಗುತ್ತಿರುವುದು ಆಹಾರಯೋಗ್ಯವಾದ ಪ್ರಾಣಿಗಳಲ್ಲಿ ಈ ಹುಣ್ಣಿನ ವ್ಯಾಧಿಯು ಹಚ್ಚಿದಾಗ ಅವುಗಳ ಮಾಂಸವನ್ನು ಸೇವಿಸುವ ಮನುಷ್ಯರಿಗೂ ಈ ವ್ಯಾಧಿಯು ವ್ಯಾಪಿಸುವುದು ಬಹು ಸ್ವಾಭಾವಿಕವೇ

ಸೀಮೆಬದನೆಕಾಯಿಯಲ್ಲಿ ದೇಹದ ಬೆಳವಳಿಕೆಗೆ ಅವಶ್ಯವಾದ ಎಲ್ಲಾ ಪದಾರ್ಥಗಳ ಭಾಗವು, ದೇಹರಕ್ಷಣೆಗೆ ಅವಶ್ಯವಾದ ಭಾಗಗಳೂ ಇರುವುದರಿಂದ ಉಷ್ಣದೇಶಗಳಲ್ಲಿ ವಾಸಮಾಡುತ್ತಿರುವವರಿಗೆ ಇದು ಬಹಳ ಆರೋಗ್ಯಕರವಾದ ಆಹಾರಪದಾರ್ಥವು

ಕೆ. ಹನುಮಂತಯ್ಯನವರಿಗೆ ಕಠಿನ ಶಿಕ್ಷೆ

ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂಬ ಆಪಾದನೆಯ ಮೇಲೆ ಮೈಸೂರು ಕಾಂಗ್ರೆಸ್ಸಿನ ಶ್ರೀ ಕೆ ಹನುಮಂತಯ್ಯನವರ ಮೇಲೆ ಬೆಂಗಳೂರು ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆದು ನ್ಯಾಯಾಧೀಶರು ಶ್ರೀ ಕೆ ಹನುಮಂತಯ್ಯನವರಿಗೆ ೧೮ ತಿಂಗಳು ಕಠಿನಶಿಕ್ಷೆ ಮತ್ತು ೫೦೦ ರೂ ದಂಡ, ದಂಡಕೊಡಲು ತಪ್ಪಿದಲ್ಲಿ ಮತ್ತೆ ಮೂರು ತಿಂಗಳ ಕಠಿನ ಶಿಕ್ಷೆಯನ್ನು ವಿಧಿಸಿದರು

ಮದರಾಸಿನಲ್ಲಿ ಗಲಭೆ

ಕಲ್ಕತ್ತಾದಲ್ಲಿ ನೆರವೇರಿದ 'ವಿಯಟ್ ನಾಂ' ದಿನಾಚರಣೆಯ ಸಂದರ್ಭದಲ್ಲಿ ಬಂಗಾಳ ಸರಕಾರದವರು ವಿದ್ಯಾರ್ಥಿಗಳ ಮೇಲೆ ಗುಂಡುಹಾರಿಸಿದುದನ್ನು ಪ್ರತಿಭಟಿಸಲು ಮದರಾಸ್ ನಗರದ ಕಾಲೇಜುಗಳ ಅನೇಕ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು "ವಿಯಟ್ ನಾಮಿಗೆ ವಂದಿಸುತ್ತೇನೆ" ಎಂಬ ಘೋಷಣೆಗಳನ್ನೊಳಗೊಂಡ ಬ್ಯಾಡ್ಜುಗಳನ್ನು ಧರಿಸಿ ವಿದ್ಯಾರ್ಥಿಗಳು ಬೀದಿಗಳಲ್ಲಿ ತಿರುಗಿದರು

ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಗಳು ತೆಗೆದುಕೊಂಡು ಹೋಗುತ್ತಿದ್ದ ಮೆರವಣಿಗೆಯನ್ನು ಪೋಲೀಸ್ ಅಧಿಕಾರಿಗಳು ತಡೆದಾಗ, ಅಧಿಕಾರಿಗಳಿಗೆ ಕಲ್ಲೇಟು ಬಿದ್ದಿತು. ಆಗ ಪೋಲೀಸರು ಲಾಠಿಛಾರ್ಜುಮಾಡಿ ವಿದ್ಯಾರ್ಥಿಗಳನ್ನು ಚದುರಿಸಿದರು. ೮ಜನ ಹುಡುಗರಿಗೆ ಸ್ವಲ್ಪ ಗಾಯವಾಗಿ, ೧೨ ಜನರು ದಸ್ತಗಿರಿಯಾಗಿದ್ದಾರೆ. ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಗಳು ಮಂತ್ರಿಗಳಿಗೆ ದೂರುಕೊಟ್ಟಿರುವರು. ಪೋಲೀಸ್ ಕಮೀಷನರು ಒಂದು ಆಜ್ಞೆಯನ್ನು ಹೊರಡಿಸಿ, ಮದ್ರಾಸ್ ನಗರದಲ್ಲಿ ಸಭೆ ಮೆರವಣಿಗೆಗಳನ್ನು ಪ್ರತಿಬಂಧಿಸಿದ್ದಾರೆ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಜನವರಿ ತಾ|| ೨೭ನೇ ಸೋಮವಾರ

ಪಂಚಾಚಾರ್ಯರೂ ಅಷ್ಟಾವರಣಗಳೂ

ಭಸ್ಮರುದ್ರಾಕ್ಷಲಿಂಗಾನಿ ಗುರುರ್ಮಂತ್ರಂ ತಥಾ ಚರಃ।
ಪಾದೋದಕಂ ಪ್ರಸಾದಶ್ಚ ಶೈವಾಷ್ಟಾವರಣಾನಿ ಹಿ ॥

ಎಂಬೀ ಶಿವಾಗಮೋಕ್ತಿಗನುಸಾರವಾಗಿ ಬ್ರಹ್ಮವಿದ್ಯಾಕಾಂಕ್ಷಿಗಳಾದ ವೀರಶೈವರಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ, ಮಂತ್ರಗಳೆಂಬ ಎಂಟು ವಸ್ತುಗಳು ಮುಖ್ಯ ಸಾಧನಗಳಾಗಿರುವವರಿಂದ ಈ ವಸ್ತುಗಳು ಪ್ರತಿಯೊಬ್ಬ ವೀರಶೈವನಿಗೂ ಮುಕ್ತಿಯೆಂಬ ರಾಜಧಾನಿಯನ್ನು ಪ್ರವೇಶಮಾಡಿಸಲು ರಾಜಮಾರ್ಗಗಳಂತಿರುವುವು. ಈ ಎಂಟು ವಸ್ತುಗಳನ್ನು ಬಿಟ್ಟು ಯಾರು ಮೋಕ್ಷವನ್ನು ಬಯಸುವರೋ ಅವರ ಬಯಕೆಯು ತಿರುಕನ ಬಯಕೆಯಂತಾಗುವುದು. ಈ ಅಷ್ಟಾವರಣಗಳು ಬ್ರಹ್ಮವಿದ್ಯೆಗೆ ಅಂಗಭೂತಗಳೆಂದು ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿಸಲ್ಪಟ್ಟಿರುವುವು. ಯಾವ ವರ್ಣಾಶ್ರಮದವನಾಗಿದ್ದರೂ ಯಾರು ವೈದಿಕರಲ್ಲವರೋ ಅವರಲ್ಲಿ ಈ ಅಷ್ಟಾವರಣಗಳು ಸಂಭವಿಸುವುದಿಲ್ಲ ಏಕೆಂದರೆ, ಅಷ್ಟಾವರಣಗಳು ವೈದಿಕಧರ್ಮದವರಿಂದ ಇವು ವರ್ಣಾಶ್ರಮಾಂಗೀಕಾರವುಳ್ಳವರಿಂದಲೆ, ಅನುಷ್ಠಿಸಲ್ಪಡತಕ್ಕವುಗಳಲ್ಲದ ವರ್ಣಾಶ್ರಮರಹಿತರಿಂದ ಅನುಷ್ಠಿಸಲ್ಪಡತಕ್ಕವುಗಳಲ್ಲವು. ವರ್ಣಾಶ್ರಮಶೂನ್ಯರಿಂದ ಅನುಷ್ಠಿಸಲ್ಪಡತಕ್ಕ ಅಷ್ಟಾವರಣಗಳು ಅವೈದಿಕಾಷ್ಟಾವರಣಗಳೆನಿಸುವವಲ್ಲದೆ ವೈದಿಕಾಷ್ಟಾವರಣಗಳೆನಿಸುವುದಿಲ್ಲ. ಅವೈದಿಕಗಳಾದ ಅಷ್ಟಾವರಣಗಳ ಉಪಾಸನೆಯನ್ನು ಮಾಡುವುದರಿಂದ ಯಾವೊಂದೂ ಫಲವಿಲ್ಲದೆ ಜಲತಾಡನಾದಿಗಳಂತೆ ನಿಷ್ಪ್ರಯೋಜನವಾಗುವುದು "ಬ್ರಾಹ್ಮಣೋಽಸ್ಯ ಮುಖಮಾಸೀತ್" ಎಂಬ ಶ್ರುತಿವಾಕ್ಯಾಭಿಪ್ರಾಯದಂತೆ ಪರಮೇಶ್ವರನ ಪಂಚಮುಖಗಳಿಂದ ಅವತರಿಸಿ ಬ್ರಾಹ್ಮಣೋತ್ತಮರೆನಿಸಿದ ಶ್ರೀಜಗದ್ಗುರು ಪಂಚಾಚಾರ್ಯರು ಭೂಲೋಕದಲ್ಲಿ ವೇದಮಾರ್ಗಾನುಸಾರವಾಗಿ ವೀರಶೈವಮತವನ್ನು ಸ್ಥಾಪಿಸಿ ಮೋಕ್ಷಸಾಧನಗಳಾದ ಅಷ್ಟಾವರಣಗಳನ್ನು ಅನುಗ್ರಹಿಸಿ ಈ ಮತಕ್ಕೆ ಮೂಲಗುರುಗಳಾಗಿರುವರು. ಕಲಿಕಾಲ ಪ್ರಭಾವದಿಂದ ಇಂತಹ ಬ್ರಹ್ಮವಿದ್ಯಾಂಗಗಳಾದ ಅಷ್ಟಾವರಣಗಳನ್ನು ಬೋಧಿಸಿದ ಮಹಾಚಾರ್ಯರಲ್ಲಿ ಕೆಲವರು ಭಕ್ತಿಯನ್ನಿಡದೆ ಸ್ವೇಚ್ಛಾವಿಹಾರಿಗಳಾಗುತ್ತ ನಡೆದಿರುವರು. ಇಂಥವರಿಗೆ ಎಂದಿಗೂ ಅಷ್ಟಾವರಣಸಿದ್ಧಿಯುಂಟಾಗಲಾರದು. ಈ ಅಷ್ಟಾವರಣಗಳಲ್ಲಿ ಭಸ್ಮವು ಮಂತ್ರಪೂತವಾಗಿ ಗುರುವಿನಿಂದಲೇ ಅನುಗ್ರಹಿಸಲ್ಪಡುವುದು. ಶಿವಲಿಂಗವು ಗುರುವಿನಿಂದಲೇ ಅನುಗ್ರಹಿಸಲ್ಪಡುವುದು. ರುದ್ರಾಕ್ಷಿಯು ಗುರುವಿನಿಂದಲೇ ಅನುಗ್ರಹಿಸಲ್ಪಡುವುದು. ಪಾದೋದಕ ಪ್ರಸಾದಗಳು ಗುರುವಿನಿಂದಲೇ ಅನುಗ್ರಹಿಸಲ್ಪಡುವುವು. ಮಂತ್ರವು ಗುರುವಿನಿಂದಲೇ ಉಪದೇಶಿಸಲ್ಪಡುವುದು. ಗುರುವಿನಿಂದಲೇ ಜಂಗಮತ್ವವು ಪ್ರಾಪ್ತವಾಗುವದು. ಈ ಅಷ್ಟಾವರಣಗಳು ಉಪನಯನದೀಕ್ಷಾದಿಸಂಸ್ಕಾರಗಳಿಂದ ಪರಿಶುದ್ಧಿಗೊಳಿಸಲ್ಪಟ್ಟ ದ್ವಿಜರಿಗೆ ಕೊಡಲ್ಪಟ್ಟರೆ ಅವುಗಳು ವೈದಿಕಾಷ್ಟಾವರಣಗಳೆನಿಸುವವು. ಅನಾದಿ ಸಂಸಿದ್ಧವಾದ ಗುರುಪರಂಪರೆಯಿಂದ ಬಂದ ತನ್ನ ವಂಶಗುರುಗಳಿಂದ ಶಿವಸಂಸ್ಕಾರಪೂರ್ವಕ ಅಷ್ಟಾವರಣಗಳನ್ನು ಪಡೆಯದೆ, ಕಂಡಕಂಡವರಿಂದ ಪಡೆಯುವುದು ಸಿದ್ಧಾಂತ ಮಾರ್ಗಕ್ಕೆ ಅತ್ಯಂತ ವಿರೋಧವಾದುದು. ತನ್ನ ವಂಶಗುರುವಿನಿಂದ ವೈದಿಕಸಂಸ್ಕಾರಪೂರ್ವಕವಾಗಿ ಅಷ್ಟಾವರಣಗಳನ್ನು ಪಡೆಯದಿದ್ದವನಲ್ಲಿ ಸ್ವೇಚ್ಛಾಕಲ್ಪಿತಗಳಾದ ಅವೈದಿಕಾಷ್ಟಾವರಣಗಳಿದ್ದರೂ ಅವರು ಎಂದಿಗೂ ವೀರಶೈವರೆಂದು ಹೇಳಿಸಿಕೊಳ್ಳಲಾರರು. ಒಂದುಪಕ್ಷ ಅಭ್ಯುತ್ಕರ್ಷಯುಕ್ತಾಗಿ ತಮಗೆ ತಾವೇ ವೀರಶೈವರೆಂದು ಹೇಳಿಕೊಂಡರೆ ಅಂಥವರಲ್ಲಿ ವೀರಶೈವತ್ವವು "ಹುಲ್ಲು ಇಲ್ಲದಿದ್ದರೂ ಹುಲ್ಲಿನ ಹಿರಣ್ಯಾಯಿಯೆನಿಸಿಕೊಳ್ಳುವಂತೆಯೂ, ಸುವರ್ಣವಿಲ್ಲದಿದ್ದರೂ ಸುವರ್ಣಕಾರನೆನಿಸಿಕೊಳ್ಳುವಂತೆಯೂ" ಕೇವಲ ವ್ಯಾವಹಾರಿಕವಾಗುವದಲ್ಲದೆ ಅನ್ವರ್ಥಕವಾಗುವುದಿಲ್ಲವು. ಇದೇ ಅಭಿಪ್ರಾಯವನ್ನು ಶ್ರೀಕರಭಾಷ್ಯಕಾರರು—

"ಸ್ಮೃತಕೋಶಾತಕೀಸುವರ್ಣಕಾರಾದೌ ಸ್ಮೃತತ್ವ ಸುವರ್ಣತ್ವಾಭಾವೇಽಪಿ ಪ್ರತೀತಿಮಾತ್ರವದತ್ರಾಪಿ ವೀರಶೈವತ್ವಂ ಪ್ರತೀಯತೇ" ಇತ್ಯಾದಿ ವಾಕ್ಯಗಳಿಂದ ಸ್ಪಷ್ಟಪಡಿಸಿ, ವೈದಿಕಾಷ್ಟಾವರಣರಹಿತರಾದ ವೀರಶೈವರನ್ನು ತಿರಸ್ಕರಿಸಿರುತ್ತಾರೆ. ಕೆಲವರು ವೀರಶೈವಮತವನ್ನು ಅವಲಂಬಿಸಿದ್ದರೂ ಕಲಿಕಾಲದ ಮಹಿಮೆಯಿಂದ ವೀರಶೈವಮತಸ್ಥಾಪಕರಾದ ಪಂಚಾಚಾರ್ಯರನ್ನು ಆರಾಧಿಸದೆ ಇರುವುದನ್ನು ನೋಡಿದರೆ ಬಹು ವ್ಯಸನವೆನಿಸುತ್ತದೆ. ಅಸ್ತು! ಜಗದಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದಲ್ಲಿ ಜನ್ಮವನ್ನು ಧರಿಸಿ ಆಚಾರ್ಯಭಗವತ್ಪಾದರಿಂದಲೇ ಸಂಸ್ಕಾರಪೂರ್ವಕ ಬ್ರಹ್ಮವಿದ್ಯಾಂಗಗಳಾದ ಅಷ್ಟಾವರಣಗಳನ್ನು ಪಡೆದು ಕೊಂಡಿರುವ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಮೊದಲಾದವರೆಲ್ಲರೂ ಆಚಾರ್ಯರ ಸಂಬಂಧವನ್ನು ಪ್ರತಿಕ್ಷಣದಲ್ಲಿಯೂ ಸರ್ವರೂ ಆ ಗುರುಗಳ ನಾಮವನ್ನು ಸ್ಮರಿಸಬೇಕು. ಅಷ್ಟಾವರಣಗಳಿಗೂ ಆಚಾರ್ಯರಿಗೂ ಜನ್ಯಜನಕಭಾವ ಸಂಬಂಧವಿರುತ್ತದೆ. ಆದುದರಿಂದ ಮೋಕ್ಷಾಪೇಕ್ಷಿಗಳು ವೈದಿಕಾಷ್ಟಾವರಣಮೂಲಭೂತರಾದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಅವರ ಪಾದಪದ್ಮಗಳನ್ನು ಪರಮಪೂಜ್ಯಬುದ್ಧಿಯಿಂದ ಪೂಜಿಸಿ ಅವರ ಕರುಣೆಗೆ ಪಾತ್ರರಾಗಿ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಬೇಕೆಂದಾಶಿಸುತ್ತೇವೆ.

ಸನಾತನ ಧರ್ಮ ಸಮ್ಮೇಳನ

ಅಖಿಲ ಭಾರತ ಧರ್ಮಸಂಘದ ಆರನೆಯ ಅಧಿವೇಶನವು ಕಳೆದ ೧೭ನೇ ತಾ|| ದಿವಸ ಬೊಂಬಾಯಿಯ ಧರ್ಮನಗರದಲ್ಲಿ ಸೇರಿತು. ದ್ವಾರಕಾ ಶಾರದಾ ಪೀಠಾಧಿಪತಿಗಳು, ಜ್ಯೋತಿರ್ಮಠದ ಶಂಕರಾಚಾರ್ಯರು ಮುಂತಾದವರು ಆಗಮಿಸಿದ್ದರು. ಅನೇಕರ ಭಾಷಣಗಳಾದ ಮೇಲೆ ಜ್ಯೋತಿರ್ಮಠದ ಶಂಕರಾಚಾರ್ಯರವರು ಧರ್ಮಸಂಘದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ನಿವೃತ್ತರಾದ ದ್ವಾರಕಾಪೀಠಾಧೀಶರು ಅಧ್ಯಕ್ಷಸ್ಥಾನವನ್ನು ಶ್ರೀ ಜ್ಯೋತಿರ್ಮಠದ ಶಂಕರಾಚಾರ್ಯರಿಗೆ ವಹಿಸಿಕೊಟ್ಟರು. ಹೊಸ ಮತ್ತು ಹಳೆಯ ಅಧ್ಯಕ್ಷರ ಭಾಷಣ, ಕರಪಾತ್ರಜೀ ಮಹಾರಾಜ್‌ರವರ ಭಾಷಣಗಳಾದ ಮೇಲೆ ಸಭೆ ಮುಕ್ತಾಯವಾಯಿತು.

ತಾ|| ೨೦ನೇ ಸೋಮವಾರದ ದಿನ ದ್ವಾರಕಾಧೀಶರ ಅಧ್ಯಕ್ಷತೆಯಲ್ಲಿ ರಚನಾಪರಿಷತ್ತು ಸೇರಿತು. ಜ್ಯೋತಿರ್ಮಠದ ಶಂಕರಾಚಾರ್ಯರು ಭಾಷಣಮಾಡಿ ಈಗಿನ ಆಡಳಿತದಲ್ಲಿ ಸನಾತನಿಗಳ ಪ್ರಪಂಚದ ಸ್ಥಾನಮಾನವನ್ನು ವಿವರಿಸಿ, ರಾಜ್ಯಾಂಗ ರಚನಾ ಸಮಿತಿಯಲ್ಲಿ ಸನಾತನಿಗಳಿಗಿರಬೇಕಾದ ಪ್ರಾತಿನಿಧ್ಯದ ಆವಶ್ಯಕತೆಯನ್ನು ತಿಳಿಸಿದರು. ಅನಂತರ ಧರ್ಮಸಂಘದ ಪರಿಷತ್ತು ಆರಂಭವಾಯಿತು. ಭಾರತದ ನಾನಾ ಕಡೆಗಳಿಂದ ಬಂದಿದ್ದ ಮುಖಂಡರುಗಳ ಉಜ್ವಲ ಭಾಷಣಗಳಾದ ಮೇಲೆ ಮುಖ್ಯ ನಿರ್ಣಯಗಳು ಪಾಸಾದವು.

ಕಲ್ಕತ್ತಾದಲ್ಲಿ ಗೋಲೀಬಾರು

ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳು ನಡೆಸಿದ "ವಿಯಟ್ನಾಂ" ದಿನಾಚರಣೆಯ ಸಂಬಂಧದಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಆವರಣಕ್ಕೆ ಹೋಗಲು ವಿದ್ಯಾರ್ಥಿಗಳು ಯತ್ನಿಸಿದಾಗ ಪೋಲೀಸರು ಗುಂಡುಹಾರಿಸಿದರು. ಇದರಿಂದ ಒಬ್ಬನು ಸತ್ತನು; ೧೫ ಜನ ಹೆಣ್ಣುಹುಡುಗಿಯರೂ ಸೇರಿ ೧೦೦ ಜನ ವಿದ್ಯಾರ್ಥಿಗಳನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ಬಂಗಾಳ ಸರ್ಕಾರದವರು ಒಂದು ಪ್ರಕಟನೆಯನ್ನು ಹೊರಡಿಸಿ, ವಿದ್ಯಾರ್ಥಿಗಳು ೧೪೪ನೇ ಸೆಕ್ಷನ್ ಉಲ್ಲಂಘಿಸಿದುದಲ್ಲದೆ ಪೋಲೀಸರಿಗೆ ಹಿಂಸಾತ್ಮಕ ಕಾರ್ಯಗಳನ್ನು ಮಾಡಲು ಯತ್ನಿಸಿದಾಗ ಪೋಲೀಸರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದರೆಂದು ತಿಳಿಸಿದ್ದಾರೆ.

ಶ್ರೀಮುಕ್ತಿಮಂದಿರಕ್ಕೆ ಭೂದಾನ

ಶ್ರೀಮುಕ್ತಿಮಂದಿರ ಗುರುಕುಲಕ್ಕೆ ಹೊಸ್ಕ… ನಿವಾಸಿಗಳಾದ ಶ್ರೀಮಾನ್ ಹಾಲಪ್ಪಗೌಡರವರು … ಜಗದ್ಗುರು ರಂಭಾಪುರೀ ಪೀಠದ ಉತ್ತರಾಧಿಕಾರಿಗಳಾದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಮಹಾಸ್ವಾಮಿಗಳನ್ನು ಬಿಜಯಂಗೈಸಿಕೊಂಡು ಪಾದಪೂಜಾದಿಗಳನ್ನು ಬಹು ವೈಭವದಿಂದಲೂ, ಅತಿ ಭಕ್ತಿಯಿಂದಲೂ ನೆರವೇರಿಸಿ ತೀರ್ಥಪ್ರಸಾದವನ್ನು ಸ್ವೀಕರಿಸಿದರು. ಶ್ರೀಗಳವರು ಧರ್ಮದೇಳ್ಗೆಗಾಗಿ ದುಡಿಯುತ್ತಿರುವುದನ್ನೂ, ಸರ್ವಜನಹಿತಕ್ಕಾಗಿ ಶ್ರೀಮುಕ್ತಿಮಂದಿರವನ್ನು ಸ್ಥಾಪಿಸಿರುವುದನ್ನೂ ತಿಳಿದು ತಮ್ಮ ಸೇವೆಯೂ ಸಹ ಮುಕ್ತಿಮಂದಿರದಲ್ಲಿ ನಡೆಯಲೆಂಬ ಸದುದ್ದೇಶದಿಂದ ಸುಮಾರು ೫-೬ ಎಕರೆ ಗದ್ದೆಯನ್ನು ಅತ್ಯಂತ ಭಕ್ತಿಪೂರ್ವಕ ಶ್ರೀಪಾದಕ್ಕೆ ಸಮರ್ಪಿಸಿರುವರು. ಶ್ರೀಮುಕ್ತಿಮಂದಿರ ಗುರುಕುಲದ ವಿಶಾಲಕಾರ್ಯಕ್ಷೇತ್ರಕ್ಕೆ ಇಂತಹ ಅನೇಕಾನೇಕ ಉದಾರಹೃದಯರಾದ ಧರ್ಮಾತ್ಮರ ಸಹಾಯವು ಅವಶ್ಯವಾಗಿ ಬೇಕಾಗಿದೆ. ಇವರ ಸೌಜನ್ಯತೆಯನ್ನು ಸರ್ವರೂ ಅನುಕರಿಸಬೇಕು. ಹರಗುರು ಭಕ್ತಪರಾಯಣರಾದ ಶ್ರೀಮಾನ್ ಹಾಲಪ್ಪಗೌಡರವರಿಗೆ ಶ್ರೀಪರಮಾತ್ಮನು ಮಂಗಲ ಪರಂಪರೆಯನ್ನೀಯಲೆಂದು ಹಾರೈಸುತ್ತೇನೆ.

ಶ್ರೀತಾಯಿಪಾರ್ವತೀ ಮಂದಿರಕ್ಕೆ ಧನಾರ್ಪಣ

ಸ್ತ್ರೀಯರ ಸುಧಾರಣೆಗಾಗಿ ಶ್ರೀಮುಕ್ತಿಮಂದಿರ ಗುರುಕುಲಕ್ಷೇತ್ರದಲ್ಲಿ ರಚಿಸಲ್ಪಡಬೇಕಾದ ಶ್ರೀತಾಯಿಪಾರ್ವತೀ ಮಂದಿರಕ್ಕೆ ಹುಲುಗೂರು ನಿವಾಸಿಗಳಾದ ಶ್ರೀಮತಿ ಪಟ್ಟಣಶೆಟ್ಟರ ಹಾಲಮ್ಮನವರು ಅಪ್ರೇರಿತರಾಗಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ಒಂದು ಸಾವಿರ (೧೦೦೦) ರೂಪಾಯಿಗಳನ್ನು ಸಮರ್ಪಿಸಲು ಶ್ರೀಗಳವರ ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡಿದ್ದಾರೆ. ಇವರು ಗುರುಲಿಂಗಜಂಗಮಪ್ರೇಮಿಗಳಾಗಿರುವರಲ್ಲದೆ ಇವರ ಮಕ್ಕಳಾದ ಶ್ರೀಮಾನ್ ವೀರಪ್ಪನವರು ಚಿಕ್ಕ ವಯಸ್ಸಿನವರಾದರೂ ಧರ್ಮದಲ್ಲಿ ತುಂಬಾ ಶ್ರದ್ಧೆಯುಳ್ಳವರಾಗಿ ತಾಯಿಯವರ ಸಂಕಲ್ಪವನ್ನು ಸಂತೋಷಪೂರ್ವಕವಾಗಿ ಅನುಮೋದಿಸಿದ್ದಲ್ಲದೆ ಶ್ರೀಗಳವರ ಲೋಕೋದ್ಧಾರಕಾರ್ಯದಲ್ಲಿ ತನುಮನಧನಗಳನ್ನು ಸಮರ್ಪಿಸಲು ಸಿದ್ಧರಾಗಿರುವರು. ಇವರಿಗೆ ಗುರುಕೃಪೆಯಿಂದ ಪುತ್ರರತ್ನವು ಜನಿಸಿದೆ. ಇವರಿಂದ ಇನ್ನೂ ಅನೇಕ ಧರ್ಮಕಾರ್ಯಗಳಾಗುವ ಸಂಕಲ್ಪವಿದೆ. ಇವರಿಗೆ ಶ್ರೀಜಗದಾಚಾರ್ಯರು ಸಮಸ್ತ ಸನ್ಮಂಗಲಗಳನ್ನೀಯಲೆಂದು ಕೋರುವ.

ವ್ಯವಸ್ಥಾಪಕ
ಶ್ರೀಮುಕ್ತಿಮಂದಿರ ಗುರುಕುಲಂ

ಶ್ರೀ ಜಗದ್ಗುರು ಕಾಶೀ ಪೀಠದಲ್ಲಿ ಶಿವರಾತ್ರಿ ಮಹೋತ್ಸವ

ಕಾಶಿ ಕ್ಷೇತ್ರದ ಜಂಗಮವಾಡಿಮಠ ಸಂಸ್ಥಾನದಲ್ಲಿ ಇದೇ ವ್ಯಯ ಸಂ|| ಮಾಘ ಶು|| ೧೪ ಬುಧವಾರ ಮಹಾಶಿವರಾತ್ರಿ ಶ್ರೀಜಗದ್ಗುರು ವಿಶ್ವಾರಾಧ್ಯಭಗವತ್ಪಾದರ ಜಯಂತೀಮಹೋತ್ಸವ ಮಹಾಪೂಜಾದಿಗಳೂ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಮತ್ತು ವಿದ್ವಾಂಸರ ಧಾರ್ಮಿಕ ಪ್ರವಚನಗಳೂ ವೈಭವದಿಂದ ನೆರವೇರತಕ್ಕ ಹಾಗಿವೆ. ನವ್ಯಭವ್ಯವಾದ ಜ್ಞಾನಮಂದಿರದ ಎರಡಂತಸ್ತುಗಳ ನಿರ್ಮಾಣ ಪೂರ್ತಿಯಾಗಿದ್ದು ಪಠನಾದಿಗಳು ಆರಂಭವಾಗಲಿವೆ. ಭರತಖಂಡದ ನಾನಾಭಾಗಗಳಿಂದ ಈ ಮಹಾಪರ್ವಕ್ಕಾಗಿ ಗುರುಭಕ್ತ ಶಿರೋಮಣಿಗಳು ಆಗಮಿಸುವವರಾಗಿದ್ದಾರೆ. ಎಂದಿನಂತೆ ಎಲ್ಲ ವ್ಯವಸ್ಥೆ ಮಾಡಲಾಗಿದೆ. ವಿಶೇಷ ಸಮಾಚಾರಗಳ ಬಗ್ಗೆ ಬೇಕಾದವರು ಮೊದಲೇ ತಿಳುಹಿಸಬೇಕಾಗಿ ಕೋರಿಕೆ.

ಜಂಗಮವಾಡಿಮಠ. ರಾಮಚಂದ್ರ ಶಾಸ್ತ್ರಿ
ವ್ಯವಸ್ಥಾಪಕ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

೧೦೧೧ ಎತ್ತುಗಳನ್ನು ಹೂಡಿದ ಪಂಚರಥಗಳಲ್ಲಿ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ

ಶ್ರೀಜಗದ್ಗುರು ಪಂಚಾಚಾರ್ಯರ ಪಂಚಲಿಂಗೋದ್ಭವ ಮೂರ್ತಿಗಳ

ಅಭೂತಪೂರ್ವ ಮಹೋತ್ಸವ

ಇದೇ ಮಾಘ ಶು॥ ೧೩ (ತಾ॥ ೩—೨—೧೯೪೭) ಸೋಮವಾರ

ಈ ಮಹೋತ್ಸವವು ಲಕ್ಷ್ಮೇಶ್ವರದಿಂದ ಮುಕ್ತಿಮಂದಿರದವರೆಗೆ ೬ ಮೈಲು ದೂರ ನೆರವೇರುವದು.

" ಸ್ವಾರ್ಥೋ ಯಸ್ಯ ಪರಾರ್ಥ ಏವ ಸ ಪುಮಾನೇಕಃ ಸತಾಮಗ್ರಣೀಃ " [ಪರೋಪಕಾರಕ್ಕಾಗಿ ಜೀವಿಸುವವರೇ ಸತ್ಪುರುಷಶ್ರೇಷ್ಠರು]

ಆಸ್ತಿಕ ಮಹಾಶಯರೇ,

ದೊಡ್ಡವರ ಸಂಕಲ್ಪವು ದೊಡ್ಡದಾಗಿಯೇ ಇರುತ್ತದೆ. ವಿಶ್ವಪ್ರೇಮವೇ ಅವರ ಜೀವನದ ಸಾರ. ಪರಹಿತಸಾಧನೆಯೇ ಅವರ ಪುರುಷಾರ್ಥ ಪ್ರಾಪ್ತಿ. ಲೋಕೋದ್ಧಾರಕ್ಕೋಸ್ಕರವಾಗಿ ಪ್ರಪಂಚರಂಗದಲ್ಲಿ ಗಂಧದ ಕೊರಡಿನಂತೆ ಶರೀರವನ್ನು ಸವಿಸುವದೇ ಅವರ ನಿತ್ಯಕರ್ಮ. ಜಗತ್ಕಲ್ಯಾಣಕ್ಕಾಗಿ ದುಡಿಯುವುದೇ ಅವರ ಉಗ್ರತಪಸ್ಸು. ಶ್ರೀರಂಭಾಪುರೀ ಪೀಠದ ಭಾವೀ ಜಗದ್ಗುರು ಪರಮತಪೋನಿಧಿ, ವೀರವೈರಾಗ್ಯಮೂರ್ತಿ ಶ್ರೀಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು ಬಾಲ್ಯದಿಂದಲೂ ಲೋಕಕಲ್ಯಾಣಕ್ಕೋಸ್ಕರವಾಗಿ ಶ್ರಮಿಸುತ್ತಿರುವುದು ಜಗತ್ಪ್ರಸಿದ್ಧವಾಗಿದೆ. ಅವರ ನಾಮವನ್ನು ಕೇಳದ ಜನರೇ ಇಲ್ಲ! ಜನಜಾಗೃತಿಗಾಗಿ ಒಂದು ತಪೋಭೂಮಿಯನ್ನು ನಿರ್ಮಿಸಬೇಕೆಂದು ಬಹು ದಿವಸಗಳಿಂದ ಅವರ ಹೃದಯ ಮಂದಿರದಲ್ಲಿ ವಾಸವಾಗಿದ್ದ ಮಹಾಸಂಕಲ್ಪವು ಈಗ **" ಶ್ರೀಮುಕ್ತಿಮಂದಿರ ಗುರುಕುಲ "** ವೆಂಬ ತಪೋವನರೂಪವಾಗಿ ಪರಿಣಮಿಸುತ್ತಿದೆ. ಶ್ರೀಮುಕ್ತಿಮಂದಿರವು ಶಾಂತಿಸುಖಗಳ ಬೀಡಾಗಬೇಕೆಂಬುದು ಶ್ರೀಗಳ ಹಾರೈಕೆ. ಶ್ರೀಮಂದಿರವು ಶ್ರೀಗಳವರ ತಪಃಫಲವಾಗಿ ಮೂರ್ತಿಗೊಂಡು ದಿನೇ ದಿನೇ ಮುಂದುವರಿಯುತ್ತಲಿದೆ. ಶ್ರೀಗಳವರ ಮಹಾಸಂಕಲ್ಪವನ್ನು ನೆರವೇರಿಸಲು ಅನೇಕ ಜನರು ನಾ ಮುಂದು ತಾ ಮುಂದು ಎಂದು ತವಕಪಡುತ್ತಿರುವರು. ಶ್ರೀಗಳವರ ಸಂಕಲ್ಪಾನುಸಾರವಾಗಿ ಶ್ರೀಮುಕ್ತಿಮಂದಿರಕ್ಕೆ ಸೇವಾ ಸಹಾಯಗಳನ್ನು ಸಲ್ಲಿಸದಿದ್ದರೆ ನಮ್ಮ ಜನ್ಮ ಐಶ್ವರ್ಯಗಳು ನಿರರ್ಥಕಗಳೆಂದು ಅನೇಕರು ತಿಳಿದುಕೊಂಡಿರುವರು. ಅವರಂತೆ ಸೇವೆಯನ್ನು ಸಹ ಸಲ್ಲಿಸುತ್ತಿರುವರು.

ಇಂತಹ ಗುರುಭಕ್ತಿ ಭೂಷಿತರಲ್ಲಿ ಶಿಗ್ಗಲಿಗ್ರಾಮನಿವಾಸಿಗಳಾದ ದೊಡ್ಡಮನೆಯ ಸಾವುಕಾರ **" ಪಾವಟೂರ ಸಿದ್ಧಯ್ಯನವರು "** ಒಬ್ಬರಾಗಿರುವರು. ಅವರು ತಮ್ಮ ಜನ್ಮ ಮತ್ತು ಐಶ್ವರ್ಯಗಳ ಸಾಫಲ್ಯಕ್ಕೋಸ್ಕರವಾಗಿ ಶ್ರೀಮುಕ್ತಿಮಂದಿರದಲ್ಲಿ ಅಪಾರ ಧನವ್ಯಯದಿಂದ ಒಂದು ಮಹಾಚಾರ್ಯಮಂದಿರವನ್ನು ನಿರ್ಮಿಸಬೇಕೆಂದು ಸಂಕಲ್ಪಿಸಿ ಶ್ರೀಗಳವರ ಅಪ್ಪಣೆಯನ್ನು ಪಡೆದು ಕಾರ್ಯೋನ್ಮುಖರಾಗಿರುವುದು ಸರ್ವಶ್ರುತವಾಗಿದೆ. ಶ್ರೀಮಂದಿರದಲ್ಲಿ ಸ್ಥಾಪಿಸಬೇಕಾದ ವೀರಶೈವಮಹಾಮತಸ್ಥಾಪಕ ಶ್ರೀಜಗದ್ಗುರು ಪಂಚಾಚಾರ್ಯ ಪಂಚಲಿಂಗೋದ್ಭವಮೂರ್ತಿಗಳು ಮೈಸೂರು ರಾಜಧಾನಿಯಲ್ಲಿ ಸಿದ್ಧವಾಗಿವೆ. ಮೂರ್ತಿಗಳ ಶಿಲ್ಪಸೌಂದರ್ಯವು ವರ್ಣನಾತೀತವಾಗಿದೆ. ಶ್ರೀಗಳವರ ಪರಿಶುದ್ಧ ಹೃದಯ, ಸಿದ್ಧಯ್ಯನವರ ಅಚಲ ಗುರುಭಕ್ತಿಗಳೇ ಇದಕ್ಕೆ ಕಾರಣ! ಶಿಲ್ಪಿಗಳಾದರೂ ಸಾಮಾನ್ಯರಲ್ಲ! ವಿಶ್ವಕರ್ಮ ಪರಾವತಾರಿಗಳೂ, ಪ್ರತ್ಯಕ್ಷ ಶಿಲ್ಪಶಾಸ್ತ್ರಮೂರ್ತಿಯೆಂತಿರುವವರೂ ಆದ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರು. ಅವರು ತಮ್ಮ ಶಿಲ್ಪಕಲಾಕೌಶಲವನ್ನೆಲ್ಲ ಶ್ರೀಮೂರ್ತಿಗಳಲ್ಲಿ ತುಂಬಿಬಿಟ್ಟಿರುವರು. ಆ ಶಿವಭಾವ, ಆ ಕೃಪಾಪೂರ್ಣದೃಷ್ಟಿ, ಆ ಶಾಂತಮುದ್ರೆ, ಗುರುಕಳೆಯಲ್ಲಿ ರಾಜವೈಭವ, ರಾಜವೈಭವದಲ್ಲಿ ವೈರಾಗ್ಯವೈಖರಿ, ಜಗನ್ಮೋಹಕ ಸೌಂದರ್ಯದಲ್ಲಿ ಶಿವಕಳಾಭಾಗ್ಯ ಇವುಗಳೆಲ್ಲವೂ ಪಂಚಮೂರ್ತಿಗಳಲ್ಲಿಯ ಕಲಾವಿಶೇಷಗಳು! ಪಂಚನಂದೀಶ್ವರಮೂರ್ತಿಗಳಲ್ಲಿರುವ ಭಕ್ತಿಭಾವವಂತೂ ನಿಮಾತೀತವಾಗಿದೆ. ಶ್ರೀಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರು ಭರತಖಂಡದಲ್ಲಿ ಮಾತ್ರವಲ್ಲದೆ ಪರದೇಶಗಳಲ್ಲಿಯೂ ತಮ್ಮ ಶಿಲ್ಪಕಲಾ ಪ್ರಚಾರದ್ವಾರಾ ಪ್ರಖ್ಯಾತರಾಗಿರುವರು. ಅವರ ಕೈಯಿಂದ ಹೊರಹೊಮ್ಮಿದ ಮೂರ್ತಿಗಳ ಗುಣವಿಶೇಷಗಳನ್ನು ವರ್ಣಿಸುವದು ಅಸದಳವೇ ಸರಿ! ಇಂತಹ ಜಗತ್ಪಾವನ ಮೂರ್ತಿಗಳ **ಮಹೋತ್ಸವವು ಇದೇ ವ್ಯಯನಾಮ ಸಂವತ್ಸರದ ಮಾಘ ಶುದ್ಧ ೧೩ (ತಾ॥ ೩-೨-೧೯೪೭)ನೇ ಸೋಮವಾರ** ಶುಭದಿನದಲ್ಲಿ ಲಕ್ಷ್ಮೇಶ್ವರದ ದೇಸಾಯಿಯವರ ವಾಡೆಯಿಂದ ೧೦೧೧ ಸುಂದರವಾದ ಎತ್ತುಗಳನ್ನು ಹೂಡಿದ ಪಂಚರಥಗಳಲ್ಲಿ ಬೆಳಗಿನ ೧೦ ಘಂಟೆಯಿಂದ ಹೊರಟು ರಾಮಗಿರಿ, ಹರಲಾಪುರಮಾರ್ಗವಾಗಿ ಸಾಯಂಕಾಲಕ್ಕೆ ಶ್ರೀಮುಕ್ತಿಮಂದಿರಕ್ಕೆ ತಲಪುವುದು. ಈ ಸುಸಂಧಿಯನ್ನು ಕಳೆದುಕೊಳ್ಳದೆ ಸರ್ವರೂ ಆಗಮಿಸಿ ಉತ್ಸವದಲ್ಲಿ ಭಾಗಿಗಳಾಗಿ ಪುಣ್ಯಭಾಜನರಾಗಬೇಕು.

ಸೂಚನೆಗಳು—(೧) ಎಲ್ಲರೂ ಮಹೋತ್ಸವದಲ್ಲಿ ಸರಕಾರೀ ಅಧಿಕಾರಿಗಳ ಅಥವಾ ಸ್ವಯಂಸೇವಕರ ಇಲ್ಲವೆ ವ್ಯವಸ್ಥಾಪಕರ ಸೂಚನೆಯಂತೆ ಶಾಂತರೀತಿಯಿಂದ ವರ್ತಿಸಬೇಕು. (೨) ಉತ್ಸವದ ದಿನ ಬೆಳಗಿನ ೮ ಘಂಟೆಗೆ ಸರಿಯಾಗಿ ಎಲ್ಲರೂ ತಮ್ಮ ಎತ್ತುಗಳನ್ನು ಶಿಂಗರಿಸಿಕೊಂಡು ಲಕ್ಷ್ಮೇಶ್ವರದ ದೇಸಾಯಿಯವರ ವಾಡೆಯ ಮುಂದಿನ ಬೈಲಿನಲ್ಲಿ ಸಿದ್ಧರಾಗಿರಬೇಕು. (೩) ಎತ್ತುಗಳನ್ನು ಹೂಡುವಾಗ ನನ್ನ ಎತ್ತು ಮುಂದೆ ನಿನ್ನ ಎತ್ತು ಹಿಂದೆ ಎಂದು ವಾದಿಸದೆ ಯಾವುದಾದರೊಂದು ರಥದ ಮುಂದೆ ಶಿಸ್ತಿನಿಂದ ಎತ್ತುಗಳನ್ನು ಹೂಡಬೇಕು. (೪) ಶ್ರೀಮೂರ್ತಿಗಳಿಗೆ ಕಾಯಿ ಹಣ್ಣುಗಳನ್ನರ್ಪಿಸುವವರು ದೂರದಿಂದೆಸೆಯದೆ ರಥದ ಸಮೀಪಕ್ಕೆ ಬಂದು ಶಾಂತರೀತಿಯಿಂದ ಸಮರ್ಪಿಸಿ ಆಶೀರ್ವಾದವನ್ನು ಪಡೆಯಬೇಕು. (೫) ಈ ಮಹಾಗುರು ಮಂಗಲಯಾತ್ರಾ ಮಹೋತ್ಸವದಲ್ಲಿ ನೆರೆದ ಜನರಿಗೆ ಅನ್ನ, ಎತ್ತುಗಳಿಗೆ ಹೊಟ್ಟು ಮೇವುಗಳನ್ನರ್ಪಿಸಿ ಪುಣ್ಯಗಳಿಸಲು ಸಿದ್ಧರಾಗಿರುವವರೆಲ್ಲರೂ ಈ ಮಾರ್ಗವನ್ನು ಅನುಸರಿಸಬೇಕು. (೬) ಉತ್ಸವ ಮುಗಿದ ಮೇಲೆ ಎತ್ತುಗಳನ್ನು ತಂದವರೆಲ್ಲರೂ ಶ್ರೀಗುರುಗಳವರ ಅಮೃತಹಸ್ತದಿಂದ ಶುಭಾಶೀರ್ವಾದವನ್ನು ಪಡೆದುಕೊಂಡು ಹೋಗಬೇಕು. (೭) ಲಕ್ಷ್ಮೇಶ್ವರ, ರಾಮಗಿರಿ, ಹರ್ಲಾಪುರಗಳ ಸ್ತ್ರೀಯರು ತಮ್ಮ ಊರಲ್ಲಿ ಮಾತ್ರ ಆರತಿಗಳನ್ನು ಬೆಳಗಬೇಕು. (೮) ಸಾಧ್ಯವಾದಮಟ್ಟಿಗೆ ಎಲ್ಲ ಊರವರೂ ಆಮಂತ್ರಣದ ದಾರಿಯನ್ನು ನೋಡದೆ ತಮ್ಮಲ್ಲಿರುವ ಭಜನಾಸಂಘ, ಕರಡೀಮಜಲು, ಬ್ಯಾಂಡು, ಡೊಳ್ಳು, ನಗಾರಿ, ಜಾಗಟೆ ಮೊದಲಾದ ವಾದ್ಯಗಳನ್ನು ತಂದು ಸೇವೆಯನ್ನು ಸಲ್ಲಿಸಿ ಆಶೀರ್ವಾದವನ್ನು ಪಡೆಯಬೇಕು. (೯) ಈ ಮಹೋತ್ಸವವು ತಪೋನಿಧಿಗಳ ಸಂಕಲ್ಪವಾದುದರಿಂದ ಸರ್ವರೂ ಸರ್ವಬಗೆಯ ಸೇವೆಯನ್ನು ಸಲ್ಲಿಸಿ ಶ್ರೀಹರಗುರುಕೃಪೆಗೆ ಪಾತ್ರರಾಗಬೇಕು. (೧೦) ಕಣ್ಣುಗಳ ಹಬ್ಬದಂತಿರುವ ಈ ಮಹೋತ್ಸವ ದಿನದ ರಾತ್ರಿ ಶ್ರೀಮುಕ್ತಿಮಂದಿರ ಗುರುಕುಲದ ವಿಶಾಲಮೈದಾನದಲ್ಲಿ ಹರಗುರುಭಕ್ತಿಪರಾಯಣರಾದ ಹರಲಾಪುರದ **" ಶಂಕರಸೇವಾ ನಾಟಕ ಮಂಡಳಿ "**ಯವರು **" ಕಿರಾತಾರ್ಜುನ ಯುದ್ಧ " ಅಥವಾ " ವೀರಪಾಂಡವ ಶಸ್ತ್ರಪರೀಕ್ಷಾ "** ಎಂಬ ಆಖ್ಯಾನವನ್ನು ಅಭಿನಯಿಸುವರು. ಈ ಮಹೋತ್ಸವದಲ್ಲಿ ಸರ್ವರೂ ಭಾಗಿಗಳಾಗಿ ಧನ್ಯರಾಗಲೆಂದು ಹಾರೈಸುವ—

ವ್ಯವಸ್ಥಾಪಕ,
ಶ್ರೀಮುಕ್ತಿಮಂದಿರ ಗುರುಕುಲ.

ಶ್ರೀಮುಕ್ತಿಮಂದಿರ ಗುರುಕುಲ,
ಹರ್ಲಾಪುರ, ತಾ॥ ಶಿರಹಟ್ಟಿ, ಜಿ॥ ಧಾರವಾಡ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣವಂತಿರುವದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗತ್ಪ್ರಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೬೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

- ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ** ಸೈಜು ೨೦ X ೧೪ ಬೆಲೆ ೧ಕ್ಕೆ ೦—
- ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ ೦—
- ಸದ್ಯೋಜಾತ-ವಾಮದೇವ-ಅಘೋರ-ತತ್ಪುರುಷ-ಈಶಾನರೆಂಬ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ** ಸೈಜು ೧೪ X ೧೦ ಬೆಲೆ ೦—
- ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ **ಫೋಟೋ** ೦—
- ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪ X ೧೦ ಬೆಲೆ ೧ಕ್ಕೆ ... ೦—
- ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ **ಫೋಟೋ** . ೦—
- ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ** .. ೦—೧
- ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ **ಫೋಟೋ** ೦—೧
- ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ **ಫೋಟೋ** . ೦—೧
- ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ **ಫೋಟೋ** . ೦—೧
- ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ** .. ೦—೧
- ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ** ... ೦—೨
- ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ** ೦—೧
- ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ ೦—೨
- ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ ೦—೪
- ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ** ೧ಕ್ಕೆ ... ೦—೧
- ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ **ಫೋಟೋ** ೧ಕ್ಕೆ .... ೦—೧
- ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ **ಫೋಟೋ** ... ೦—೧
- ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ** ... ೦—೧
- ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಡೆದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ** ೦—೧

ಸರ್ವೋತ್ತಮವಾದ ಮತಗ್ರಂಥಗಳು

- ಗೋತ್ರಸೂತ್ರಪಟ (೬ನೆಯ ಆವೃತ್ತಿ) ೧ ಆಣೆ
- ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ
- ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ೧ ಆಣೆ
- ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ) ೨ ಆಣೆ
- ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ) ೨ ಆಣೆ
- ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ೨ ಆಣೆ
- ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ) ೨ ಆಣೆ
- ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ೨ ಆಣೆ
- ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ) ೨ ಆಣೆ
- ಶ್ರೀರುದ್ರಮುನಿಶಿವಾಚಾರ್ಯಶತಕ ೨ ಆಣೆ
- ಶಿವಶಕ್ತಿವಿಲಾಸ .. ೨ ಆಣೆ
- ಪಂಚಾಚಾರ್ಯಪ್ರಕಾಶ ೩ ಆಣೆ
- ಪಂಚಾಚಾರ ಪ್ರಕಾಶಿಕಾ ... ೩ ಆಣೆ
- ವೀರಶೈವಾಚಾರವಿಧಿ (೪ನೆಯ ಆವೃತ್ತಿ) ೪ ಆಣೆ
- ಲಿಂಗಧಾರಣವಿಧಿ .. .. ೪ ಆಣೆ
- ವಿವಾಹವಿಧಿ (೩ನೆಯ ಆವೃತ್ತಿ) .. ೪ ಆಣೆ
- ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .. ೪ ಆಣೆ
- ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) .. ೪ ಆಣೆ
- ವೀರಶೈವ ಪ್ರಾಯಶ್ಚಿತ್ತವಿಧಿ .. .... ೪ ಆಣೆ
- ವೈದಿಕವಾಙ್ಮಯರಹಸ್ಯ .. .... ೪ ಆಣೆ
- ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ
- ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ .. .... ೬ ಆಣೆ
- ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ... ೮ ಆಣೆ
- ಶಿವಾದ್ವೈತಪರಿಭಾಷಾ (ಸಂಸ್ಕೃತ) .. .... ೮ ಆಣೆ
- ವೀರಶೈವಮಹಾತ್ಮರು .. .... ೮ ಆಣೆ
- ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) .. .... ೮ ಆಣೆ
- ನಿಗಮಪರಿಜ್ಞಾನ ೮
- ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮
- ಸದ್ಬೋಧರತ್ನಾವಳಿ ೮
- ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ೧೨
- ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ೧೨
- ಶಿಖಾಸೂತ್ರಸಿದ್ಧಾಂತದರ್ಪಣ ೧೨
- ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ) ೧|
- ಶ್ರೀಕರಭಾಷ್ಯಂ (ಚತುಸ್ಸೂತ್ರೀ) ೧||
- ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .. ೧||
- ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು) ೨
- ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟದು) ೨
- ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ... ೨
- ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು) ೨
- ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) .. ೮
- **A brief life-sketch of Pandit Sri Kashinatha Shastriji (*English*)** 4
- **The Philosophical Aspect of Virasaivism (*English*)** . 8
- **Speeches by Pandit Shri Kashinatha Shastriji (*English*)** 12
- **लिंगधारणचंद्रिका (संस्कृत)** ३
- **वीरशैवरत्न (मराठी)** १
- **महानारायणोपनिषत् (वीरशैवभाष्य-संस्कृत)** १
- **सिद्धांतशिखामणि (मूल)** .. ८
- **मंत्रिकैश्वरकारिका (संस्कृत)** २

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 • ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು • REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪಟಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

...ದವರಿಗೆ ೩ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

...ಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಫೆಬ್ರವರಿ ೧೯೪೭ [ಸಂಚಿಕೆ ೪೧

ಟೀ, (ಚಹಾ) ಕಾಫಿ, ಮತ್ತು ಕೋಕೋ ಇವುಗಳ ವಿಷಯದಲ್ಲಿ ಕೆಲವು ಪ್ರಸಿದ್ಧ ಡಾಕ್ಟರುಗಳ ಅಭಿಪ್ರಾಯಗಳು.

ಒಂದು ಬಟ್ಟಲು ಟೀ ಅಥವಾ ಕಾಫಿಯನ್ನು ತೆಗದು ...ಪರೆ ಅದರಲ್ಲಿ ೨|| ಗ್ರೇನಿನಷ್ಟು ಕಾಫೀನ್ ಎಂಬ ...ಯಕರವಾದ ವಸ್ತುವಿರುವುದು ಒಂದು ಒಗೆಯ ...ಪುಡಿಯ ರೂಪದಲ್ಲಿ ಇವುಗಳನ್ನು ಎಲ್ಲಾ ಔಷಧಿಯ ...ಗಳಲ್ಲಿಯೂ ಮಾರುವರು ಕೋಕೇನ್ನಂತೆಯೇ ...ಷ ನಿಮ್ಮ ಶಕ್ತ್ಯುತ್ಸಾಹವನ್ನು ಮೊದಲು ಸ್ವಲ್ಪ ...ಚ್ಚಿಸಿದರೂ, ಸ್ವಲ್ಪ ಹೊತ್ತಾದ ಮೇಲೆ ಅವುಗಳನ್ನು ...ಲಮಟ್ಟಿಗೆ ತಗ್ಗಿಸುವುದರಿಂದ ಆ ಶಕ್ತ್ಯುತ್ಸಾಹಗ...ನ್ನು ತಿರುಗಿ ಪೂರ್ವಸ್ಥಿತಿಗೆ ತರಲು ಮತ್ತಾವುದಾದರೂ ...ಪದಪದಾರ್ಥಗಳನ್ನು ಸೇವಿಸಬೇಕಾಗುವುದು ಈ ...ನೀಯಗಳಲ್ಲಿ ವಿಶೇಷವಾಗಿ ಟೀಯಲ್ಲಿ ಟ್ಯಾನಿಕ್ ...ಸಿಡ್" ಎಂಬ ಕೆಟ್ಟ ಆಮ್ಲವಸ್ತುವಿರುವುದು ಇದು ...ರ್ಣಶಕ್ತಿಯನ್ನು ಬಹಳಮಟ್ಟಿಗೆ ಕಡಿಮೆಮಾಡು...ವುದು ಕಾಫೀನ್ ಎಂಬುದು ಬಹಳ ಸುಲಭವಾಗಿ ...ರಿನಲ್ಲಿ ಕರಗತಕ್ಕುದಾದುದರಿಂದ ಟೀಯನ್ನು ತಯಾ...ವ ಕ್ಷಣವೇ ಆ ಸಾರವು ಆ ನೀರಿನಲ್ಲಿ ಕರಗುವುದು ...ಂಪತೆ ಮೂರು ನಿಮಿಷಗಳ ಕಾಲದಲ್ಲಿಯೇ ಇಪ್ಪತ್ತು ...ಮಿಷಗಳಲ್ಲಿ ಕರಗಬಹುದಾದಷ್ಟು ಪ್ರಮಾಣವು ಕರಗು...ವುದು 'ಟಾನಿನ್' ಎಂಬ ವಸ್ತುವು ಅಷ್ಟು ಸುಲಭ...ವಾಗಿ ಕರಗದಿದ್ದರೂ, ಕೆಲವು ನಿಮಿಷಗಳಲ್ಲಿಯೇ ಅದರ ...ವರಪೆಲ್ಲವೂ ಬಹಳಮಟ್ಟಿಗೆ ನೀರಿಗೆ ಬರುವುದು ಟೀ ...ಎಲೆಯನ್ನು ಬಹಳ ಕಾಲ ಬೇಯಿಸಿದುದಕ್ಕೂ, ಮುಂ...ದಾಗಿ ಎತ್ತುವುದಕ್ಕೂ ಆಹಾರದಲ್ಲಿ ತೋರಿಬರುವ ಗುಚಿ...ಸ್ವಾಸಕ್ಕೆ ಟಾನಿಕ್ ಕಾರಣವಲ್ಲ ಅದು ಟೀಯ ಸ್ವಭಾವ...ಗುಣವು

ಒಬ್ಬನಿಗೆ ರಕ್ತದಲ್ಲಿ ಮೂತ್ರದ್ರಾವಕವು ವಿಶೇಷವಾಗಿ ...ರಿದ್ದು, ಆತನು ಬಳಲಿ ದಣಿದಿರುವಾಗ ಒಂದು ...ಬಟ್ಟಲು ಟೀಯನ್ನು ಕುಡಿದ್ದರೆ, ಒಡನೆ ಆ ಶ್ರಮವು ಪರಿಹಾರವಾದಂತಾಗುವುದು ಮತ್ತು ಆ ರಕ್ತದಲ್ಲಿರುವ ಮೂತ್ರದ್ರಾವಕವು ಅದೃಶ್ಯವಾದಂತಾಗಿ ರಕ್ತವು ಶುದ್ಧ...ವಾಗುವುದರಿಂದ, ಬಾಧೆಯು ನಿವಾರಣೆಯಾಗುವುದು ಸ್ವಲ್ಪ ಹೊತ್ತು ಕಳೆದಮೇಲೆ ರಕ್ತನಾಳಗಳಲ್ಲಿ ಸೇರಿದ್ದ ಆ ದ್ರಾವಕವೆಲ್ಲ ತಿರುಗಿ ರಕ್ತಕ್ಕೆ ಬರುವುದು ಅಲ್ಲದೆ, ಟೀಯಲ್ಲಿರುವ ಮೂತ್ರದ್ರಾವಕವೂ ಅದರೊಡನೆ ಸೇರು...ವುದು ಇದರಿಂದ ಆತನಿಗೆ ಮೊದಲಿಗಿಂತ ಬಾಧೆಯು ಇನ್ನೂ ಹೆಚ್ಚಿ ಟೀ, ಕಾಫಿ, ಹೊಗೆಸೊಪ್ಪು, ಮದ್ಯ ಮುಂತಾದ ಮಾದಕ ದ್ರವ್ಯಗಳನ್ನು ಉಪಯೋಗಿಸಬೇ...ಕಾಗುವುದು. ಈ ರೀತಿಯಲ್ಲಿ ನಿರುತ್ಸಾಹ, ಅತೃಪ್ತಿ, ಚಪಲಭಾವ, ಅಜೀರ್ಣ, ನಿದ್ರಾಭಂಗ, ಮಲಬದ್ಧತೆ, ಕ್ಷಯ ಮುಂತಾದ ವ್ಯಾಧಿಗಳಿಗೆ ಟೀಯೇ ಕಾರಣವಾಗಿ, ಕ್ರಮೇಣ ಮಕ್ಕಳಿಗೆ ಪಿತ್ರಕ್ಕೂ ಮೂಲವಾಗುವುದು. ಈ ಕೆಟ್ಟಗುಣಗಳಲ್ಲಿ ಕಾಫಿ, ಕೋಕೋ ಮುಂತಾದವೂ ಟೀಗೆ ಸಮಾನವೇ.

ಡಾಕ್ಟರ್ ಜೆ ಬಾಪ್ಟಿಸ್ಟ್ಯೂಕ್ "ಹೆಂಡದ ಗಡಿಗೆಗಳಿಂದಲೂ, ವಿಸ್ಕಿ ಬಾಟಲ್‌ಗಳಿಂದಲೂ, ಲೋಕಕ್ಕೆ ಆಗುತ್ತಿರುವ ಅಪಾಯಗಳು ಹೆಚ್ಚೋ, ಟೀಯ ಪಾತ್ರೆಯಿಂದಾಗುವ ಅಪಾಯವು ಹೆಚ್ಚೋ ಎಂಬುದು ಸಂಶಯಾಸ್ಪದ" ವೆಂದು ಬರೆದಿರುವರು

ಆನರಬಲ್ ಆರ್ ರೆಸಲ್ ಎಂಬುವರು 'ಟೀ ಮತ್ತು ಕಾಫಿಯಲ್ಲಿರುವ ಮಾದಕಗುಣವು ಇನ್ನ... ...ನೇಕರಿಗೆ ತಿಳಿಯದು ಈ ಪಾನೀಯಗಳು ಜನರ ದೇಹಶಕ್ತಿಯನ್ನು ಕ್ರಮೇಣ ತಗ್ಗಿಸುತ್ತ ಬರುವುದಲ್ಲದೆ, ...ದರ ನರಗಳು, ಮಿದುಳು, ಜೀರ್ಣಾವಯವಗಳು, ಪಿತ್ತಕೋಶ ಮೇದೋಜೀರಕ ಮುಂತಾದ ...ವುಗಳ ರಕ್ತಿಯನ್ನು ತಗ್ಗಿಸಿ, ...ವರನ್ನು ದುರ್ಬಲರನ್ನಾಗಿ ಮಾಡುವುದು ಕಡಿಮೆ ಪ್ರಮಾಣದಲ್ಲಿ ಸೇವಿಸಿದರೂ ಇದು ಅನೇಕ ಜನರುಗಳಲ್ಲಿ ನಿದ್ರೆಯನ್ನು ಕೆಡಿಸುವುದು ಸಹಜವಾದ ದುರ್ಬಲವ್ಯಕ್ತಿಯಾಗಲಿ, ಇದರ ಸೇವನೆಯಲ್ಲಿ ವಿಶೇಷ ಅಭ್ಯಾಸವುಳ್ಳವರಾಗಲಿ, ಇದನ್ನು ಹೆಚ್ಚು ಪ್ರಮಾಣದಲ್ಲಿ ಕುಡಿದರೂ ಅವರಿಗೆ ಮಾತ್ರ ತತ್ಕಾಲಕ್ಕೆ ಬಾಧಕವೇನೂ ತೋರದಿರಬಹುದು ಆದರೆ ಅವು ದೇಹದ ಒಳಭಾಗದಲ್ಲಿಯೇ ಕೆಲಸಮಾಡುತ್ತ ಬಂದು ...ವರಿಗೆ ಸ್ವಲ್ಪ ವಯಸ್ಸಾದಮೇಲೆ ಅದರ ದುರ್ಗುಣಗಳು ಅಜೀರ್ಣ ನರಗಳ ಬಾವೆ, ಮಿದುಳಿನ ಬಾಧೆ, ಕಿವಿಬಾಧೆ, ಏಡಿಹುಣ್ಣು ಮುಂತಾದ ವ್ಯಾಧಿಗಳ ರೂಪದಲ್ಲಿ ಕಾಣಿಸುವುವು ಎಂದು ಬರೆದಿರುವರು

ಡಾಕ್ಟರ್ ಎ ಪ್ರೈಸ್ ಎಂಬುವರು 'ಟೀ ಕುಡಿಯುವದನ್ನು ಅಭ್ಯಾಸಮಾಡಿಕೊಂಡಿರುವವರಲ್ಲಿಯೇ ಪ್ರಾಯಕವಾಗಿ ಮುಂದೆ ಮುಂದ ನಿರುತ್ಸಾಹವು ಕಾಣಿಸುವುದು ಆದರೆ ಇವರು ಮದ್ಯಪಾನಮಾಡಿದವರಂತೆ ಬೀದಿಗಳಲ್ಲಿ ಬಿದ್ದು ಹೊರಳಾಡದಿದ್ದರೂ ಹೃದಯದ ಬಲಹೀನತೆ, ಮೇಲುಸಿರು, ನರಗಳ ಬಲಹೀನತೆ, ತಲೆನೋವು, ಕಿವಿಗಳಲ್ಲಿ ರಚ್ಚು, ಅಜೀರ್ಣ, ಮಲಬದ್ಧತೆ ಮುಂತಾದ ಅನೇಕ ಮನೋವ್ಯಾಧಿಗಳಿಗೂ, ದೇಹದುರ್ಬಲತೆಗಳಿಗೂ ಕಾರಣವಾಗಬಹುದು" ಎಂದು ಬರೆದಿರುವರು

ಮತ್ತೊಬ್ಬ ವೈದ್ಯರು 'ನನ್ನ ಜೀವಮಾನದಲ್ಲಿ ಸುಮಾರು ಇಪ್ಪತ್ತು ವರುಷಗಳು ಕಳೆದುಹೋದ ಮೇಲೆಯೇ ಟೀಯನ್ನು ಸೇವಿಸುವದರಿಂದಾಗುವ ಅಪಾಯವು ನನಗೆ ತಿಳಿಯಿತು" ಎಂದು ಬರೆದಿರುವರು

ಆರೋಗ್ಯಶಾಸ್ತ್ರ ದೃಷ್ಟಿಯಿಂದ ಮಧ್ಯಾಹ್ನ ಕಾಲದಲ್ಲಿ ಟೀಯನ್ನು ಸೇವಿಸುವುದು ಬಹಳ ಅಪಾಯಕಾರಣವು ಬೆಳಗ್ಗೆ ತಿಂದ ಆಹಾರವು ಸಂಪೂರ್ಣವಾಗಿ ಜೀರ್ಣವಾಗುವುದಕ್ಕೆ ಮೊದಲೇ, ಕೆಲವರು ಬೆಣ್ಣೆ ಸವರಿ ಹುರಿದ ರೊಟ್ಟಿಯನ್ನು ಬಹಳ ಹೊತ್ತು ಕುದಿಸಿದ ಟೀಯೊಡನೆ ಸೇವಿಸುವರು ಇದರಿಂದ, ಅಜೀರ್ಣವು ತಪ್ಪದೆ ಪ್ರಾರಂಭವಾಗುವುದು ಮತ್ತು ಹೊಟ್ಟೆಯಲ್ಲಿ ಆಹಾರವು ಹುಳಿತು, ರಾತ್ರಿಯ ಊಟದಲ್ಲಿಯೂ ಜಿಹಾಸೆಯನ್ನು ಹುಟ್ಟಿಸುವುದು. ಇದರಿಂದ ಮೂರು ಊಟದ ಫಲವೂ ಕೆಡುವುದು ರಸದ ಭಾಗವೇ ಹೆಚ್ಚಾಗಿರುವ ಯಾವುದಾದರೂ ಹಣ್ಣುಗಳನ್ನು ಸೇವಿಸುವುದು ಬಹಳ ಉತ್ತಮವು.

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ||

ಯರೆಹಂಚಿನಾಳ

ತ್ರಿಪಂದುಷ್ಟಯಿನೀ ಜಗದ್ಗುರು ಸಿದ್ಧಲಿಂಗಮಹಾಸ್ವಾಮಿಗಳವರ ಪುಣ್ಯದಿನವನ್ನು ಪುಷ್ಯ ಬ|| ೪ ದಿವಸ ಸರ್ವ ಸದ್ಭಕ್ತರೊಡನೆ ಹಿರೇಮಠದ ವೇ|| ರುದ್ರಯ್ಯನವರು ತಮ್ಮ ಮನೆಯಲ್ಲಿ ಬಹು ಭಕ್ತಿಯಿಂದ ನೆರವೇರಿಸಿದರು ಆ ದಿನ ಪಂಚಾಚಾರ್ಯ ಶ್ರೀಗಳವರ ಭಾವಚಿತ್ರವನ್ನು ಶೃಂಗರಿಸಿ ಪಲ್ಲಕ್ಕಿಯಲ್ಲಿಟ್ಟು ಜಯಘೋಷದಿಂದ ಗಗನಮಂಡಲವು ತುಂಬುವಂತೆ ವಾದ್ಯಸಮೇತ ಉತ್ಸವವು ಮಠಕ್ಕೆ ತಲ್ಪಿದ ನಂತರ ಮಂಗಲವನ್ನು ಮಾಡಿ ಸರ್ವರೂ ಸಲಾಶೀರ್ವಾದವನ್ನು ತೆಗೆದುಕೊಂಡರು

ಗುರುಭಕ್ತ,
Sharp… Badihal

ಸಂಜಾರು

ಪ್ರತಿ ವರ್ಷದ ಪದ್ಧತಿಯಂತೆ ಶ್ರೀ ಮಲೆಯ ಶಾಂತೇಶ್ವರ ಪುಣ್ಯತಿಥಿಯು ಇದೇ ಮಾಘ ಶು|| ೬ ರವಿವಾರ ವೈಭವದಿಂದ ನೆರವೇರಿತು ಪ್ರಾತಃಕಾಲ ರುದ್ರಾಭಿಷೇಕವಾಗಿ ಮಧ್ಯಾಹ್ನ ಅನ್ನಸಂತರ್ಪಣೆಯು ನೆರವೇರಿತು ಸಾಯಂಕಾಲ ಸಭೆಕೂಡಿತು ಮೊದಲು ಸಂಗೀತರತ್ನ ಪಂಚಾಕ್ಷರ ಗವಾಯಿ ಗಳ ಗಾಯನವಾದ ಮೇಲೆ ಮೊರಬ, ಎಮ್ಮಿಗನೂರು, ಹಂಪಸಾಗರ ಮೊದಲಾದ ಶ್ರೀಸ್ವಾಮಿಗಳು ಹಾಗು ಯಾದಗಿರಿಯ ವೇ|| ಜಿ ಯಂ ಗುರುಸಿದ್ಧ ಶಾಸ್ತ್ರೀ ಕಾವ್ಯತೀರ್ಥ ಮುಂತಾದವರ ಭಾಷಣಗಳಾದವು ಆಮೇಲೆ ತೋಪಕಟ್ಟ ಹಿರೇಮಠಾಧ್ಯಕ್ಷರಾದ ಶ್ರೀ ಸದಾಶಿವಶಿವಾಚಾರ್ಯರಿಂದ ಶ್ರೀ ಪಂಚಾಕ್ಷರ ಗವಾಯಿಗಳಿಗೆ 'ಸಂಗೀತಶಾರ್ದೂಲ' ಎಂಬ ಬಿರುದು ಕೊಡಲ್ಪಟ್ಟಿತು ಪಂಚಮಿ ಸೋಮವಾರ ಉದಯ ಪಲ್ಲಕ್ಕಿ ಉತ್ಸವವೂ ಸಾಯಂಕಾಲ ೫ ಘಂಟೆಗೆ ಶ್ರೀ ಹಳಮುರ್ಗ ಶ್ರೀಗಳ ಪುರಾಣಪ್ರವಚನವೂ ನೆರವೇರಿದವು

ಪ್ರತ್ಯಕ್ಷದರ್ಶಿ

ದುಃಖವಾರ್ತೆ

ಧಾರವಾಡ ಜಿಲ್ಲಾ ಹಿರೇಕೇರೂರು ತಾಲೂಕು ಮಾಸೂರು ಗ್ರಾಮದಲ್ಲಿರುವ ಹಿರೇಮಠದ ವೇ|| ಚನ್ನವೀರಾರಾಧ್ಯರು ತಾ|| ೧೦-೧-೪೭ನೇ ಶುಕ್ರವಾರ ದಿವಸ ಶಿಕಾರಿಪುರ ತಾಲೂಕು ಕೋಡಿಕೊಪ್ಪದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ವಿಷಾದವೆನಿಸುತ್ತದೆ. ನಮ್ಮ ಪ್ರಾಂತದಲ್ಲಿ ಸದರಿಯವರು ಪಂಚಾಚಾರ್ಯತತ್ವವನ್ನು ತೋರಿಸಿ ಪುನೀತರನ್ನಾಗಿ ಮಾಡಿದರು. ಇಂಥ ಗುರುಮೂರ್ತಿಯನ್ನು ಕಳೆದುಕೊಂಡದ್ದು ಬಹಳ ದುಃಖವೆನಿಸುತ್ತದೆ. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುವ,

ಪರ್ವತಪ್ಪ ಲಂಗೋಟಿಶೆಟ್ರ ಮಾಸೂರು.

ಷಟ್‌ತ್ರಿಂಶತ್ತತ್ತ್ವವಿವೇಕ

ಪ್ರಸರದ್ಬಿಂದುನಾದಾಯ ಶುದ್ಧಾಮೃತಮಯಾತ್ಮನೇ |
ಷಟ್ತ್ರಿಂಶತ್ತತ್ತ್ವದೇಹಾಯ ನಮಶ್ಚಿನ್ಮಾತ್ರಮೂರ್ತಯೇ || ೫

(ಸ್ಕಾಂದ ಸೂ ಖಂ ಕೇದಾರಖಂ ಅ ೬)

ಶ್ರೀ ಸುಬ್ರಹ್ಮಣ್ಯಸ್ವಾಮಿಯು ವಾಮದೇವ ಮಹರ್ಷಿಯನ್ನು ಕುರಿತು ೩೬ ತತ್ತ್ವರೂಪವಾದ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿದ ವಿಷಯವು ಶಿವಪುರಾಣದಲ್ಲಿ ವಿರಾಜಿಸುತ್ತದೆ ಆ ವಿಷಯವನ್ನೇ ಇಲ್ಲಿ ಪ್ರತಿಪಾದಿಸುವೆವು ಶಕ್ತಿಮಂತನಾದ ಪರಶಿವನು ಸೃಷ್ಟಿ ಸ್ಥಿತಿ ಲಯ ತಿರೋಭಾವ ಅನುಗ್ರಹಗಳೆಂಬ ಪಂಚಕೃತ್ಯ ಪಾಂಡಿತ್ಯವಶಾತ್ 'ಲೋಕವತ್ತು ಲೀಲಾಕೈವಲ್ಯಮ್' ಎಂಬ ಬ್ರಹ್ಮಸೂತ್ರಾನುಸಾರವಾಗಿ ಲೀಲಾಮೂರ್ತಿಯಾಗಿ ನಟಿಸುತ್ತಾನೆ 'ಸ ಏಕಾಕೀ ನ ರಮತೇ ಸ ದ್ವಿತೀಯಮೈಚ್ಛತ್ ಸ ಏತಾವಾನಾಸ ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್' ಎಂಬ ಶ್ರುತಿವಾಕ್ಯದಂತೆ ಆ ಪರಶಿವನು ತಾನೊಬ್ಬನೇ ರಮಿಸದೆ ಮತ್ತೊಂದು ವಸ್ತುವನ್ನು ಅಪೇಕ್ಷಿಸಿ ಶಿವಾದಿ ಪೃಥಿವ್ಯಂತವಾದ ೩೬ ತತ್ತ್ವಗಳನ್ನು ನಿರ್ಮಿಸಿ ಅವೆಲ್ಲವುಗಳನ್ನು ಪ್ರವೇಶಮಾಡುತ್ತ ಆಯಾ ಸ್ವರೂಪವಾರಣ ಮಾಡಿ ಸ್ವಶಕ್ತಿವಶಾತ್ ಲೀಲಾಲೋಲನಾಗಿ ಕ್ರೀಡಿಸುತ್ತಾನೆ ಈ ಅಭಿಪ್ರಾಯವು ಶಿವಪುರಾಣ ಕೈಲಾಸ ಸಂಹಿತೆಯಲ್ಲಿರುವ ಈ ಕೆಳಗಿನ ಶ್ಲೋಕದಲ್ಲಿ ಉಕ್ತವಾಗಿರುವದು.

ಅನುಗ್ರಹತಿರೋಭಾವಸಂಹೃತಿಸ್ಥಿತಿಸೃಷ್ಟಯಃ
ಕರೋತ್ಯವಿರತಂ ಲೀಲಾಮೇಕ [illegible]

([illegible])

ಶಿವಪುರಾಣ ಕೈಲಾಸಸಂಹಿತೆಯಲ್ಲಿ—

[illegible]
ಪಂಚಾವಯವಯುಕ್ತಸ್ಯ [illegible] || ೯೬ ||
[illegible]
ಪ್ರತ್ಯಕ್ಷಸ್ಯ ಪ್ರಪಂಚಸ್ಯ ದರ್ಶನಾ[illegible] || ೯೭ ||
ಜ್ಞಾತವ್ಯಃ ಪರಮೇಶಾನಃ ಪರಮಾತ್ಮಾ ನ ಸಂಶಯಃ
ಸ್ತ್ರೀಪುಂರೂಪಮಿದಂ ವಿಶ್ವಂ ಪ್ರತ್ಯಕ್ಷೇಣೈವ ದೃಶ್ಯತೇ || ೧೦೦ ||
ಷಟ್ಕೋಶರೂಪಪಿಂಡೋಽಪಿ ತತ್ರ ಚಾದ್ಯತ್ರಯಂ ಭವೇತ್ |
ಪಿತ್ರಂಶಜಂ ಪುನಸ್ತ್ವನ್ಯನ್ಮಾತ್ರಂಶಜಮಿತಿ ಶ್ರುತಿಃ || ೧೦೩ ||
ಏವಂ ಸರ್ವಶರೀರೇಷು ಸ್ತ್ರೀಪುಂಭಾವವಿದೋ ಜನಾಃ |
ಪರಮಾತ್ಮನ್ಯಪಿ ತಥಾ ಸ್ತ್ರೀಪುಂಭಾವಂ ವಿದುರ್ಬುಧಾಃ || ೧೦೪ ||
ಸಚ್ಚಿದಾನಂದರೂಪತ್ವಂ ವದತಿ ಬ್ರಹ್ಮಣಃ ಶ್ರುತಿಃ |
ಅಸತ್ಪ್ರತಿವರ್ತಕಃ ಶಬ್ದಃ ಸದಾತ್ಮೇತಿ ನಿಗದ್ಯತೇ || ೧೦೭ ||
ನಿವರ್ತನಂ ಜಡತ್ವಸ್ಯ ಚಿಚ್ಛಬ್ದೇನ ವಿಧೀಯತೇ
ತ್ರಿಲಿಂಗನೀತಸಚ್ಛಬ್ದಃ ಪುಂರೂಪೋಽತ್ರ ವಿಧೀಯತಾಮ್ ||
ಪ್ರಕಾಶವಾಚೀ ಸ ಭವೇತ್ ಸನ್ ಪ್ರಕಾಶ ಇತಿ ಸ್ಫುಟಮ್ |
ಜ್ಞಾನಶಬ್ದಸ್ಯ ಪರ್ಯಾಯಶ್ಚಿಚ್ಛಬ್ದಃ ಸ್ತ್ರೀತ್ವಮಾಗತಃ || ೧೦೯ ||
ಪ್ರಕಾಶಶ್ಚಿಚ್ಚ ಮಿಥುನಂ ಜಗತ್ಕಾರಣತಾಂ ಗತಮ್ |
ಸಚ್ಚಿದಾತ್ಮನ್ಯಪಿ ತಥಾ ಜಗತ್ಕಾರಣತಾಂ ಗತೇ || ೧೧೦ ||
ಏಕತ್ರೈವ ಶಿವಃ ಶಕ್ತಿರಿತಿ ಭಾವೋ ವಿಧೀಯತೇ ||

(ಅ ೯೦)

ಧೂಮ ದರ್ಶನದಿಂದ ಪರ್ವತದಲ್ಲಿ ಅಗ್ನಿಮತ್ತ್ವವು ಅನುಮಾನ ಪ್ರಯೋಗದಿಂದ ಹೇಗೆ ಸಿದ್ಧಿಸುವದೋ ಹಾಗೆಯೇ ಪರಮೇಶ್ವರಾಸ್ತಿತ್ವವು ಈ ಪ್ರತ್ಯಕ್ಷ ಪ್ರಪಂಚದ ದರ್ಶನದಿಂದ ಸಿದ್ಧಿಸುವದು

ವಿಶ್ವವು ಸ್ತ್ರೀಪುಂರೂಪದಿಂದ ಪ್ರತ್ಯಕ್ಷವಾಗಿ ತೋರುವದು. ಪಿಂಡವು ಷಟ್‌ಕೋಶರೂಪವಾದುದು. ಆದ್ಯತ್ರಯವು ಪಿತ್ರಂಶಜವು. ಮಿಕ್ಕದು ಮಾತ್ರಂಶಜವು. ಎಂಬುದಾಗಿ ಶ್ರುತಿಯು ಹೇಳುವದರಿಂದ ಪಂಡಿತರು ಸರ್ವ ಶರೀರಗಳಲ್ಲಿಯೂ ಸ್ತ್ರೀಪುಂಭಾವವನ್ನು ತಿಳಿಯುತ್ತಾರೆ ಅದರಂತೆಯೇ ಪರಮಾತ್ಮನಲ್ಲಿಯೂ ಸ್ತ್ರೀಪುಂಭಾವವನ್ನು ತಿಳಿಯುತ್ತಾರೆ

ಶ್ರುತಿಯು ಬ್ರಹ್ಮವು ಸಚ್ಚಿದಾನಂದಸ್ವರೂಪವಾದುದೆಂದು ಬೋಧಿಸುತ್ತದೆ. 'ಸತ್' ಶಬ್ದವು ಅಸತ್ತ್ವನಿವರ್ತಕವಾದುದು. 'ಚಿತ್', ಶಬ್ದವು ಅಜ್ಞಾನನಿವರ್ತಕವಾದುದು ತ್ರಿಲಿಂಗಗಳಲ್ಲಿ ಪ್ರಯೋಗಿಸುವ ಸಚ್ಛಬ್ದವು ಇಲ್ಲಿ ಪುಂರೂಪವಾಗಿ ವಿಧಿಸಲ್ಪಟ್ಟಿದೆ 'ಸತ್' ಶಬ್ದವು ಪ್ರಕಾಶವಾಚಕವು ಚಿಚ್ಛಬ್ದವು ಜ್ಞಾನಶಬ್ದದ ಪರ್ಯಾಯವಾಚಕವಿದ್ದು ಸ್ತ್ರೀಲಿಂಗವಾಗಿರುವದರಿಂದ ಸ್ತ್ರೀವಾಚಕವಾಗಿರುವದು ಈ ಪ್ರಕಾಶ ಮತ್ತು ಚಿಚ್ಛಕ್ತಿಯ ಮಿಥುನವು ಜಗತ್ತಿಗೆ ಕಾರಣವಾಗಿದ ಈ ಅಭಿಪ್ರಾಯವನ್ನು ಸುಬ್ರಹ್ಮಣ್ಯಸ್ವಾಮಿಯು ಕೈಲಾಸಸಂಹಿತೆಯಲ್ಲಿ ಮೇಲ್ಕಂಡ ಶ್ಲೋಕಗಳಿಂದ ಬೋಧಿಸಿರುತ್ತಾನೆ ಇವಲ್ಲದೆ ೩೬ ತತ್ತ್ವಗಳ ಸ್ವರೂಪವನ್ನು ಈ ಕೆಳಗೆ ಉಲ್ಲೇಖಿಸಿರುವಂತೆ ಬೋಧಿಸಿದ್ದಾನೆ

ಸೃಷ್ಟಿಯಿಂದ ಜಗಜ್ಜಾಲವನ್ನು ನಿರ್ಮಿಸಲುದ್ಯುಕ್ತನಾದ ಮಹೇಶ್ವರನ ಪ್ರಥಮ ಸ್ಪಂದವೇ ಶಿವತತ್ತ್ವವೆನಿಸುವದು ಪರಮೇಶ್ವರನ ಇಚ್ಛೆಯೇ ಸರ್ವಕೃತ್ಯಕಾರಿಣಿಯಾದ ಶಕ್ತಿತತ್ತ್ವವೆನಿಸುವದು ಜ್ಞಾನ ಕ್ರಿಯಾ ಶಕ್ತಿದ್ವಯಗಳಲ್ಲಿ ಜ್ಞಾನಾಂಶಾಧಿಕ್ಯದಿಂದ ಸದಾಶಿವತತ್ತ್ವವೆನಿಸುವದು. ಕ್ರಿಯಾಶಕ್ತಿಯ ಉದ್ರೇಕದಿಂದ ಈಶ್ವರತತ್ತ್ವವೆನಿಸುವದು ಜ್ಞಾನಕ್ರಿಯಾಶಕ್ತಿಸಾಮ್ಯವು ಶುದ್ಧವಿದ್ಯಾತತ್ತ್ವವೆನಿಸುವದು ಸ್ವಾಂಶರೂಪಭಾವಗಳಲ್ಲಿ ಪರಸ್ಪರ ತತ್ತ್ವಗಳ ಭಿನ್ನಬುದ್ಧ್ಯುತ್ಪತ್ತಿಕವಾದುದು ಮಾಯಾತತ್ತ್ವವೆನಿಸುವದು

ಶಿವನು ಮಾಯಾಶಕ್ತಿಯುತನಾಗಿ ಸ್ವಪರವೈಶ್ವರ್ಯದಿಂದ ನ್ಯೂನನಾಗಿ ಮೋಹವಶಾತ್ ಪುರುಷ, ಸಂಸಾರಿ, ಪಶು, ಜೀವ ಪ್ರತ್ಯಗಿನಾದ ವಾಚ್ಯನಾಗಿ ತನಗಿಂತಲೂ ಭಿನ್ನವಾಗಿದ ಜಗತ್ತನ್ನೂ ಮತ್ತು ತನ್ನನ್ನೂ ಭಿನ್ನವಾಗಿ ತಿಳಿದುಕೊಳ್ಳುವ[illegible] ಮೋಹವನ್ನು ಹೊಂದುತ್ತಾನೆ ಅಂತಹ ಮೋಹಬದ್ಧನಾದ ಜೀವನು [illegible] ಪರಮೈಶ್ವರ್ಯವುಳ್ಳವನಾಗಿ ಚಿದ್ಘನ ಶಿವಸ್ವರೂಪನಾಗಿದ್ದನೆ ಶಿವನ ಸರ್ವಜ್ಞತ್ವ ಸರ್ವಕರ್ತೃತ್ವ ಪೂರ್ಣತ್ವ ನಿತ್ಯತ್ವ ವ್ಯಾಪಕತ್ವಗಳೆಂಬ ಶಕ್ತಿಗಳೇ ಸಂಕುಚಿತರೂಪಗಳಾಗಿ ಪಂಚಕಂಚುಕರೂಪದಿಂದ ಕಲಾ, ವಿದ್ಯಾ ರಾಗ ಕಾಲ, ನಿಯತಿಗಳೆಂಬ ಪಂಚತತ್ತ್ವನಾಮಗಳಿಂದ ಪ್ರಖ್ಯಾತವಾಗಿರುತ್ತವೆ

ಈರೀತಿಯಾಗಿ ಸ್ವಮಾಯೆಯಿಂದ ತಾನು ಸಂಕುಚಿತರೂಪವುಳ್ಳವನೋ ಎಂಬಂತೆ ಇದ್ದುಕೊಂಡು ಪಂಚಕಂಚುಕಯುಕ್ತನಾಗಿ ಭೋಕ್ತೃವಾಗಿ ಪುರುಷತತ್ತ್ವವೆಂದು ಹೇಳಿಸಿಕೊಳ್ಳುತ್ತಾನೆ ಗುಣತ್ರಯ ಸಾಮ್ಯಾವಸ್ಥೆಯುಳ್ಳ ಪ್ರಕೃತಿಯು ಪ್ರಧಾನ (ಪ್ರಕೃತಿ) ತತ್ತ್ವವೆನಿಸುತ್ತದ ಪ್ರಕೃತಿಯು ಕ್ರಮವಾಗಿ ಅಹಂಕಾರ ಬುದ್ಧಿ ಮನಸ್ಸುಗಳೆಂಬ ತತ್ತ್ವರೂಪವಾಗಿ ಪರಿಣಮಿಸುವದು ಶ್ರೋತ್ರ ತ್ವಕ್ ಚಕ್ಷು ಜಿಹ್ವಾ ಘ್ರಾಣಗಳೆಂಬ ಜ್ಞಾನೇಂದ್ರಿಯ ಪಂಚಕವು, ತದ್ವಿಷಯಗಳಾದ ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಪಂಚತನ್ಮಾತ್ರೆಗಳು, ವಾಕ್ ಪಾಣಿ ಪಾದ ಪಾಯೂಪಸ್ಥಗಳೆಂಬ ಕರ್ಮೇಂದ್ರಿಯ ಪಂಚಕವು, ಆಕಾಶ ವಾಯು ವಹ್ನಿ ಸಲಿಲ ಭೂಮಿಗಳೆಂಬ ಪಂಚಭೂತಗಳು. ಈರೀತಿಯಾಗಿ ಶಿವತತ್ತ್ವವೇ ಆದಿಯಾಗಿ ಪೃಥ್ವೀಪರ್ಯಂತವಾದ ೩೬ ತತ್ತ್ವಗಳು ಆ ಪರಮಶಿವಪ್ರಕಾಶವಿಮರ್ಶವೈಭವವೆಂದು ತಿಳಿಯತಕ್ಕದ್ದು ಆದುದರಿಂದಲೇ ಶಿವಭಕ್ತರಾದ ಶಿವಯೋಗಿಗಳು ಶಿವತತ್ತ್ವವೇತ್ತೃಗಳಾದ ಶಿವಾಚಾರ್ಯರಿಂದ ಗುರೂಪದೇಶವನ್ನು ಪಡೆದು ಶಿವೋಽಹಂಭಾವನಾಭರಿತರಾಗಿ ಶಿವಾದ್ವೈತ ಸಿದ್ಧಾಂತವನ್ನು ಅನುಸರಿಸಿ ಪರಮಶಿವಕೈವಲ್ಯವನ್ನು ಪಡೆದು ಜೀವನ್ಮುಕ್ತರಾಗಿ ವಿರಾಜಿಸುತ್ತಾರೆ. ಈ ಮೇಲ್ಕಂಡ ವಿಷಯವೆಲ್ಲವೂ ಶಿವಪುರಾಣದಲ್ಲುಕ್ತವಾಗಿದೆ.

ಗರುಡಪುರಾಣದಲ್ಲಿ—

... ...ತತ್ತ್ವಾನಿ ಪೃಥಿವೀ ಜಲಮ್ || ೩೧ ||
ತೇಜೋ ವಾಯುರ್ವ್ಯೋಮ ಗಂಧೋ ರಸರೂಪೇ ಚ ಶಬ್ದಕಃ |
ಸ್ಪರ್ಶೋ ವಾಕ್ ಪಾಣಿಪಾದಾಶ್ಚ ಪಾಯೂಪಸ್ಥಾ ಶ್ರುತಿಸ್ತ್ವಚೌ ||
ಚಕ್ಷುರ್ಜಿಹ್ವಾಘ್ರಾಣಮನೋಬುದ್ಧ್ಯಹಂಪ್ರಕೃತ್ಯಪಿ |
ಪುಮಾನ್ ರಾಗಸ್ತಥಾ ವಿದ್ಯಾ ಕಲಾಕಾಲೌ ನಿಯತ್ಯಪಿ || ೩೩ ||
ಮಾಯಾ ಚ ಶುದ್ಧವಿದ್ಯಾ ಚ ಈಶ್ವರಶ್ಚ ಸದಾಶಿವಃ |
ಶಕ್ತಿಃ ಶಿವಶ್ಚ ತಾನ್ ಜ್ಞಾತ್ವಾ ಮುಕ್ತೋ ಜ್ಞಾನೀ ಶಿವೋ ||
ಭವೇತ್ || ೩೪ ||

(ಪೂರ್ವಖಂಡ ಅ ೨೩)

ಪೂರ್ವೋಕ್ತ ಶಿವಪುರಾಣದ ಭಾವಾನುಸಾರವಾಗಿಯೇ ಗರುಡಪುರಾಣದ ಶ್ಲೋಕಗಳ ಭಾವಾರ್ಥವಿರುವುದು

ಪಶು ಪಾಶ ಪತಿಗಳೆಂಬ ತ್ರಿಪದಾರ್ಥಗಳನ್ನು ಬೋಧಿಸುವ ನಾರದೀಯ ಮಹಾಪುರಾಣ ಪೂರ್ವಭಾಗ ಬೃಹದುಪಾಖ್ಯಾನದ ತೃತೀಯಪಾದ ೬೩ ನೆಯ ಅಧ್ಯಾಯದಲ್ಲಿಯೂ ಈ ಷಟ್‌ತ್ರಿಂಶತ್ತತ್ತ್ವವಿಚಾರವು ಸಕ್ರಮವಾಗಿ ಪ್ರತಿಪಾದಿತವಾಗಿದೆ.

ಭೋಜರಾಜಕೃತತತ್ತ್ವಪ್ರಕಾಶವೆಂಬ ಷಟ್‌ತ್ರಿಂಶತ್ತತ್ತ್ವಪ್ರತಿಪಾದಕ ಗ್ರಂಥವು ಈ ನಾರದೀಯ ಮಹಾಪುರಾಣದ ಆಧಾರದಿಂದಲೇ ರಚಿತವಾಗಿರಬಹುದೆಂದು ತೋರುತ್ತದೆ

ಈ ಷಟ್‌ತ್ರಿಂಶತ್ತತ್ತ್ವವಿಚಾರವು ತಂತ್ರಾಲೋಕ ಮೊದಲಾದ ಗ್ರಂಥಗಳಲ್ಲಿಯೂ ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿದೆ 'ಅಹಮ್' ಎಂಬ ಮಾತೃಕೆಯು ಶಿವಾದಿ ಪೃಥಿವ್ಯಂತ ಷಟ್‌ತ್ರಿಂಶತ್ ತತ್ತ್ವಗಳನ್ನು ಗರ್ಭೀಕರಿಸಿಕೊಂಡಿದೆ ಈ ವಿಷಯವನ್ನು ಬ್ರಹ್ಮವಿದ್ಯೋಪನಿಷತ್ತು ಈ ಕೆಳಗೆ ಉದಾಹರಿಸಿರುವ ಶ್ಲೋಕದಲ್ಲಿ ಮಂತ್ರರಹಸ್ಯವನ್ನಾಗಿ ಬೋಧಿಸುತ್ತಲಿದೆ.

ಪೃಥಿವ್ಯಾದಿಶಿವಾಂತಂ ತು ಅಕಾರಾದ್ಯಾಶ್ಚ ವರ್ಣಕಾಃ |
ಕೂಟಾಂತಾ ಹಂಸ ಏವ ಸ್ಯಾತ್ ಮಾತೃಕೇತಿ ವ್ಯವಸ್ಥಿತಾ ||[illegible]

'ಅಹಂ' ಎಂಬ ಮಹಾಮಂತ್ರವನ್ನು ಶಿವರಹಸ್ಯದಲ್ಲಿ ದೇವೀಮಹಿಮ್ನಸ್ತೋತ್ರಕಾರರಾದ ದೂರ್ವಾಸ ಮಹರ್ಷಿಗಳು ಮಾತೃಕಾರೂಪದಿಂದ ಈ ಕೆಳಗಿನಂತೆ ಸ್ತುತಿಸಿರುತ್ತಾರೆ.

ಪಂಚಾಶನ್ನಿಜದೇಹಜಾಕ್ಷರಭವೈರ್ನಾನಾವಿಧೈರ್ಧಾತುಭಿಃ |
ಬದ್ಧೈರ್ಭೈಃ ಪದವಾಕ್ಯಮಾನಜನಕೈರರ್ಥಾವಿನಾಭಾವಿಭಿಃ ||
ಸಾಭಿಪ್ರಾಯಪದಾರ್ಥಕರ್ಮಫಲದೈಃ ಖ್ಯಾತ್ಯೈತನಂತ್ಯೈರಿದಂ |
ವಿಶ್ವಂ ವ್ಯಾಪ್ಯ ಚಿದಾತ್ಮನಾ ಹಮಹಮಿತ್ಯುಜ್ಜೃಂಭಸೇ
ಮಾತೃಕೇ ||೪೬||

'ಅಹಂ' ಶಬ್ದವು ಪರಬ್ರಹ್ಮವಾಚಕವೆಂಬುದನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿರುವ ಈ ಕೆಳಗೆ ಉದಾಹರಿಸಿರುವ ಶ್ಲೋಕದಲ್ಲಿ ಅಪ್ಪಣೆಕೊಡಿಸಿರುತ್ತಾರೆ.

ಅಕಾರಃ ಶಿವ ಆಖ್ಯಾತೋ ಹಂಕಾರಃ ಶಕ್ತಿರುಚ್ಯತೇ |
ಶಿವಶಕ್ತಿಮಯಂ ಬ್ರಹ್ಮ ಸ್ಥಿತಮೇಕಮಹಂಪದೇ ||

(ಸಿ ಶಿ. ಪರಿ. ೨೦)

ಶಿವೋ ಗುರುಃ ಶಿವೋ ವೇದಃ ಶಿವೋ ದೇವಃ ಶಿವಃ ಪ್ರಭುಃ |
ಶಿವೋಽಸ್ಮ್ಯಹಂ ಶಿವಃ ಸರ್ವಂ ಶಿವಾದನ್ಯನ್ನ ಕಿಂಚನ ||೩೪||

(ವರಾಹಪುರಾಣ ಉ ಅ. ೯)

ಶಿವೋ ದಾತಾ ಶಿವೋ ಭೋಕ್ತಾ ಶಿವಃ ಸರ್ವಮಿದಂ ಜಗತ್ |
ಶಿವೋ ಜಯತಿ ಸರ್ವತ್ರ ಯಃ ಶಿವಃ ಸೋಽಹಮೇವ ಚ ||೨೮||

(ಗರುಡಪುರಾಣ ಪೂ ಖಂ ಅ. ೨೨)

ಈ ಮೇಲೆ ವಿವರಿಸಿರುವ ೩೬ ತತ್ತ್ವಗಳ ವಿಷಯವು ವ್ಯಾಸೋಕ್ತಸಕಲಪುರಾಣಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ, ಶಿವಾಗಮಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವದರಿಂದ ಸರ್ವರೂ ಈ ತತ್ತ್ವಗಳ ಸ್ವರೂಪವನ್ನು ತಿಳಿದುಕೊಂಡು ಧನ್ಯರಾಗಬೇಕೆಂದಾಶಿಸುತ್ತೇವೆ.

ಕೈಲಾಸಲಿಂಗಶಿವಾಚಾರ್ಯ,
ಶ್ರೀಕೇದಾರಕ್ಷೇತ್ರ

ಲಂಡನ್ನಿನಲ್ಲಿ ಅತ್ಯಂತ ಶೀತ ಹವೆ

ಲಂಡನ್ನಿನಲ್ಲಿ ಹಿಂದೆ ಏಳು ವರ್ಷಗಳಿಂದಿಲ್ಲದಿದ್ದಷ್ಟು ವಿಪರೀತ ಚಳಿ ಬಿದ್ದಿದೆ. ಕೆಂಟ್‌ಪ್ರದೇಶದಲ್ಲಿ ಎಲ್ಲ ಪ್ರದೇಶಗಳಿಗಿಂತಲೂ ವಿಪರೀತ ಚಳಿಯಾಗಿದೆ. ನದಿಗಳು ಮಂಜುಗಡ್ಡೆಯಿಂದ ಕೂಡಿರುವುದರಿಂದ, ಪ್ರಯಾಣವನ್ನೇ ಅನೇಕ ಪ್ರದೇಶಗಳಲ್ಲಿ. ತಡೆಗಟ್ಟಲಾಗಿದೆ. ಸ್ಥಳೀಯ ಪಾರ್ಲಿಮೆಂಟಿನ ಕಾರ್ಯಕ್ರಮಗಳನ್ನು ಸಹ, ಇದರಿಂದ ಮುಂದುವರಿಸಲಾಗಿದೆ. ಬಿಗ್ ಬೆನ್ ಗಡಿಯಾರವೂ ಸಹ ಚಳಿಯಿಂದ ಕೆಲಸ ಮಾಡದೆ ನಿಂತಿದೆ. ಇದೇ ರೀತಿ ಚಳಿಯು ಇನ್ನೂ ಕೆಲವು ದಿನಗಳು ಮುಂದುವರಿಯುವುದೆಂದು ಪ್ರಕಟವಾಗಿದೆ.

ವರ್ತಮಾನಸಂಗ್ರಹ

ಅಲಹಾಬಾದ್ ವಿಶ್ವವಿದ್ಯಾನಿಲಯದ ೩೦೦೦ ವಿದ್ಯಾರ್ಥಿಗಳ ಮುಷ್ಕರ

ಸ್ವಾತಂತ್ರ್ಯ ದಿನಾಚರಣೆಯ ದಿನ ಸೆನೆಟ್ ಹಾಲಿನ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದರೆಂದು ಅಲಹಾಬಾದ್ ವಿಶ್ವವಿದ್ಯಾಲಯದ ಅಧಿಕಾರಿಗಳು ೩೦೦೦ ರೂ ಜುಲ್ಮಾನೆ ಹಾಕಿರುವರು ಇದನ್ನು ಪ್ರತಿಭಟಿಸಿ ಸುಮಾರು ೩೦೦೦ ವಿದ್ಯಾರ್ಥಿಗಳು ಹರತಾಳವನ್ನಾಚರಿಸಿದ್ದಾರೆ.

ಪಂಜಾಬ್ ಲೀಗು ನಾಯಕರು ದಸ್ತಗಿರಿಯಾದರು

ಲಾಹೋರಿನಲ್ಲಿ ಪೋಲೀಸರು ಅನೇಕ ಮುಸ್ಲಿಂಲೀಗ್ ಪ್ರಮುಖರನ್ನು ದಸ್ತಗಿರಿಮಾಡಿದರು. ಬಂಧಿತರ ಸರಿಯಾದ ಸಂಖ್ಯೆಯು ತಿಳಿದಿರುವುದಿಲ್ಲ. ಖಾನ್ ಇಫ್ತಿಖಾರ್ ಹುಸೇನ್, ಫಿರೋಜ್ ಖಾನ್ ನೂನ್, ಬೇಗಂ ಷಾ ನವಾಜ, ಸರ್ದಾರ್ ಷಾ ಶೌಕತ್, ಹಯಾತ್ ಖಾನ್, ಮಿಯಾನ್ ಇಫ್ತಿಖರುದ್ದೀನ್ ಮುಂತಾದ ಪ್ರಮುಖರು ದಸ್ತಗಿರಿಯಾಗಿರುವರು

ಮುಸ್ಲಿಂ ಮಹಿಳೆಯ ದಸ್ತಗಿರಿ

ಲಾಹೋರ್ ಅಸೆಂಬ್ಲಿ ಭವನದ ಬಳಿ ಮೆರವಣಿಗೆಯಲ್ಲಿದ್ದ ಮಿಸ್ ಜಾಹಿರ್ ಹಯಾತ್ ಎಂಬಾಕೆಯು ದಸ್ತಗಿರಿಮಾಡಲ್ಪಟ್ಟಳು. ಈಕೆಯು ಪಂಜಾಬ್ ಸರಕಾರದ ಮಾಜೀ ಮಂತ್ರಿ ಸರ್ದಾರ್ ಷೇಕರ್ ಖಾನರ ಸಹೋದರಿ ಈಕೆಯು ಬೇಗಂ ನೂನ್‌ರ ಜೊತೆಯಲ್ಲಿ ಮೆರವಣಿಗೆಯಲ್ಲಿದ್ದಳು. ಅಲ್ಲದೆ ರಾಷ್ಟ್ರೀಯ ಸ್ವಯಂ ದಳದ ೭ ಮಂದಿ ಸ್ವಯಂಸೇವಕರೂ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ.

ಮಾಜೀ ಸದಸ್ಯರ ಪತ್ನಿಯ ದಸ್ತಗಿರಿ

ಪಂಜಾಬಿನ ಸಾರ್ವಜನಿಕ ರಕ್ಷಣೆ ಕಾನೂನನ್ನು ಉಲ್ಲಂಘಿಸಿ ಗೋಷಾ ಮುಸ್ಲಿಂ ಮಹಿಳೆಯರ ಮೆರವಣಿಗೆಯೊಂದನ್ನು ಏರ್ಪಡಿಸಿದ್ದಕ್ಕಾಗಿ, ವೈಸರಾಯರ ಮಂತ್ರಿ ಮಂಡಲದ ಮಾಜೀ ಸದಸ್ಯರಾದ ಸರ್ ಫಿರೋಜಖಾನ್ ನೂನ್‌ರವರ ಆಂಗ್ಲೇಯ ಪತ್ನಿ ಎಲಿಜಬೆತ್ ವಿಕ್ಟೋರಿಯಾ ನೂನ್ ಎಂಬಾಕೆಯನ್ನು ಅಸೆಂಬ್ಲಿ ಭವನದಬಳಿ ದಸ್ತಗಿರಿ ಮಾಡಲಾಯಿತು.

ಬರ್ಮಾ ಮೇಲಿನ ಶ್ವೇತ ಪತ್ರಕ್ಕೆ ಅಮೆರಿಕದ ಸ್ವಾಗತ

ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸರ್ಕಾರದ ಸ್ಟೇಟ್ ಡಿಪಾರ್ಟ್‌ಮೆಂಟ್ ಪ್ರಕಟನೆಯು ಬ್ರಿಟನ್ ಮತ್ತು ಬರ್ಮಾ ಮಾತುಕತೆಗಳು ಸೌಹಾರ್ದಯುತವಾಗಿ ಕೊನೆಗೊಂಡುದಕ್ಕೆ ಸಂತೋಷಗೊಂಡಿದೆ. ಅಮೆರಿಕಕ್ಕೂ, ಬರ್ಮಾದೇಶಕ್ಕೂ ಇನ್ನೂ ಹೆಚ್ಚಿನ ಮಧುರ ಬಾಂಧವ್ಯವಿರಲೆಂದು ಹಾರೈಸಿದೆ.

ಭಾರತದ ಮಾದರಿಯಲ್ಲೇ ಬರ್ಮಾದಲ್ಲಿ ತಾತ್ಕಾಲಿಕ ಸರ್ಕಾರದ ರಚನೆ

ಬ್ರಿಟಿಷ್ ಸಾರ್ವಭೌಮ ಸರ್ಕಾರದವರು ಹೊರಡಿಸಿರುವ ಶ್ವೇತಪತ್ರದಲ್ಲಿ ಬರ್ಮಾದ ರಾಜಕೀಯ ಭವಿಷ್ಯತ್ತಿನ ರೂಪುರೇಷೆಗಳಿವೆ. ಮುಖ್ಯವಾಗಿ ಬರ್ಮಾ ದೇಶದಲ್ಲಿ ಭಾರತದ ಮಾದರಿಯಲ್ಲಿಯೇ ರಾಜ್ಯಾಂಗ ರಚನಾ ಸಭೆಯನ್ನೇರ್ಪಡಿಸುವುದು, ತಾತ್ಕಾಲಿಕ ಸರ್ಕಾರ ಸ್ಥಾಪನೆ ವಿದೇಶಾಂಗ ನೀತಿ, ಸೈನ್ಯಗಳು, ಎಲ್ಲೆಗಳ ವಿಚಾರ ಮುಂತಾದುವುಗಳು ಶ್ವೇತಪತ್ರದ ಮುಖ್ಯಾಂಶಗಳಾಗಿವೆ.

ರಾಜ್ಯಾಂಗ ರಚನಾ ಸಭೆಯ ಕರ್ತವ್ಯವು ಬರ್ಮಾದ ಭಾವಿ ರಾಜ್ಯಾಂಗವನ್ನು ರಚಿಸುವುದೇ ಆಗಿದೆ ರಾಜ್ಯಾಂಗ ರಚನಾ ಸಭೆಗೆ ಚುನಾವಣೆಯು ೧೯೩೫ರ ಪದ್ಧತಿಯ ಮೇರೆಗೆ ಆಗುವುದು ಹೊಸ ರಾಜ್ಯಾಂಗ ರಚನೆಯಾಗುವವರೆಗೆ ಭಾರತ ತಾತ್ಕಾಲಿಕ ಸರ್ಕಾರದ ಮಾದರಿಯಲ್ಲಿಯೇ ಬರ್ಮಾದಲ್ಲಿಯೂ ಗವರ್ನರ್ ಮತ್ತು ಕಾರ್ಯನಿರ್ವಾಹಕ ಸಮಿತಿಯುಳ್ಳ ತಾತ್ಕಾಲಿಕ ಸರ್ಕಾರ ಏರ್ಪಡುವುದು

ತಾತ್ಕಾಲಿಕ ಸರ್ಕಾರದ ಮಂತ್ರಿಗಳ ಅಥವಾ ಗವರ್ನರ್‌ರವರ ಅಧಿಕಾರಗಳಲ್ಲಿ ಬದಲಾವಣೆ ಮಾಡಲು ಈಗ ಸಾಧ್ಯವಿಲ್ಲದಿದ್ದರೂ ಭಾರತ ತಾತ್ಕಾಲಿಕ ಸರ್ಕಾರದ ಮಾದರಿಯಲ್ಲಿಯೇ ಬರ್ಮಾ ತಾತ್ಕಾಲಿಕ ಸರ್ಕಾರವೂ ನಡೆಯುವುದು ತಾತ್ಕಾಲಿಕ ಸರ್ಕಾರಕ್ಕೆ ಡೊಮಿನಿಯನ್ ಸರ್ಕಾರಕ್ಕೆ ಕೊಡುವ ಗೌರವಮರ್ಯಾದೆಗಳುಂಟು, ದೈನಂದಿನ ಆಡಳಿತದಲ್ಲಿ ಸಾಧ್ಯವಾದಷ್ಟು ಹೆಚ್ಚು ಸ್ವಾತಂತ್ರ್ಯ ಕೊಡಲಾಗುವುದು ಬ್ರಿಟಿಷ್ ಸರ್ಕಾರದವರು ಬರ್ಮಾ ಸರ್ಕಾರಕ್ಕೆ ಹಣಕಾಸಿನ ವಿಚಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬ ತತ್ವವನ್ನು ಒಪ್ಪಿದ್ದಾರೆ.

ಈಗ ಬರ್ಮಾದಲ್ಲಿರುವ ಬ್ರಿಟಿಷ್ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ವಿಚಾರದಲ್ಲಿ ಮುಂದೆ ರಚಿತವಾಗಲಿರುವ ಬರ್ಮಾ ಸರ್ಕಾರವೂ, ಬ್ರಿಟಿಷ್ ಸರ್ಕಾರವೂ ಒಂದು ತೀರ್ಮಾನಕ್ಕೆ ಬರುವುವು

ಸಹಕಾರ, ಸಲಹೆಯ ಮಾರ್ಗಗಳಿಂದಲೇ ಬರ್ಮಾಕ್ಕೆ ಸ್ವಾತಂತ್ರ್ಯವು ಶೀಘ್ರ ಲಭಿಸುವುದೆಂದು ಬರ್ಮಾ ನಿಯೋಗದವರು ಮನಗಂಡಿದ್ದಾರೆ ಎಂದು ಶ್ವೇತಪತ್ರವು ತಿಳಿಸುತ್ತದೆ ಬರ್ಮಾದ ಎಲ್ಲೆಗಳ ವಿಚಾರದಲ್ಲಿ ಪ್ರಜೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದು

ಈ ರಾಜಕೀಯ ಕರಾರಿಗೆ ಬ್ರಿಟಿಷ್ ಮುಖ್ಯಮಂತ್ರಿ ಅಟ್ಲಿಯವರೂ ಬರ್ಮಾ ಪರವಾಗಿ ಆಂಗ್‌ಸಾನವರೂ ಸಹಿ ಹಾಕಿದ್ದಾರೆ

ಭಾರತ ಮತ್ತು ಬರ್ಮಾದ ಸೆಕ್ರೆಟರಿಗಳಾದ ಲಾರ್ಡ್ ಪೆಥಿಕ್ ಲಾರೆನ್ಸ್‌ರವರು ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಹೇಳಿಕೆ ಕೊಡುತ್ತಾ ಮಾತುಕತೆಗಳು ಸಹಕಾರ ಮನೋಭಾವದಿಂದ ಕೂಡಿದ್ದವೆಂದು ಹೇಳಿದರು

ನರೇಂದ್ರ ಮಂಡಲದ ತೀರ್ಮಾನ

ಸಾರ್ವಭೌಮತ್ವವು ಸಂಸ್ಥಾನಗಳಿಗೇ ಸೇರಿದ್ದು

ದೆಹಲಿಯಲ್ಲಿ ಸೇರಿದ್ದ ನರೇಂದ್ರಮಂಡಲದ ಸಭೆಯಲ್ಲಿ ದೇಶೀಯ ಸಂಸ್ಥಾನಗಳು ಭಾವಿ ಭಾರತದ ಸಂಯುಕ್ತ ರಾಜ್ಯಾಂಗವನ್ನು ಸೇರಲು ಕೆಲವು ಷರತ್ತುಗಳನ್ನು ಹಾಕಿ, ಆ ಷರತ್ತುಗಳ ಆಧಾರದಮೇಲೆ ಬ್ರಿಟಿಷ್ ಭಾರತದ ಸಂಧಾನ ಸಮಿತಿಯೊಂದಿಗೆ ಸಂಸ್ಥಾನಗಳ ಸಂಧಾನ ಸಮಿತಿಯು ಫೆಬ್ರವರಿ ೮ ರಲ್ಲಿ ಚರ್ಚೆ ನಡೆಸಬೇಕೆಂದು ನಿರ್ಣಯವಾಯಿತು ಸಭೆಯಲ್ಲಿ ದೇಶೀಯ ಸಂಸ್ಥಾನಗಳ ಅರಸರ ಸ್ಥಾನಮಾನಗಳ ಮೇಲೆಯೂ, ಸಾರ್ವಭೌಮತ್ವದ ಮೇಲೆಯೂ ಚರ್ಚೆಗಳಾದುವು

ಪ್ರಾರಂಭ ಭಾಷಣದಲ್ಲಿ ಛಾನ್ಸೆಲರ್‌ರವರು ದೇಶದ ರಾಜಕೀಯ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ ಸಂಸ್ಥಾನಗಳ ಸಂಧಾನ ಸಮಿತಿಯು ಬ್ರಿಟಿಷ್ ಭಾರತ ಸಂಧಾನ ಸಮಿತಿಯೊಂದಿಗೆ ಚರ್ಚೆಮಾಡುವಾಗ ಅನುಸರಿಸಬೇಕಾದ ನೀತಿಯನ್ನೊಳಗೊಂಡ ನಿರ್ಣಯವನ್ನು ಸಭೆಯ ಪರಿಶೀಲನೆಗಿಟ್ಟರು.

ಸಾರ್ವಭೌಮತ್ವದ ಮೇಲೆ ಚರ್ಚಿಸುತ್ತಾ, ಸಭೆಯು ಬ್ರಿಟಿಷ್ ಅಧಿಕಾರವು ಕೊನೆಗಂಡಮೇಲೆ ಸಾರ್ವಭೌಮತ್ವವು ಸಂಸ್ಥಾನಗಳಿಗೆ ಸೇರಬೇಕೇ ಹೊರತು ಭಾವಿ ಭಾರತ ಸಂಯುಕ್ತ ರಾಜ್ಯಾಂಗಕ್ಕೆ ಖಂಡಿತ ಸೇರತಕ್ಕದ್ದಲ್ಲವೆಂಬ ನಿರ್ಣಯವು ಅನುಮೋದಿಸಲ್ಪಟ್ಟಿತು. ಕೇಂದ್ರ ಸರ್ಕಾರಕ್ಕೆ ಸಂಸ್ಥಾನಗಳು ಒಪ್ಪಿ ವರ್ಗಾಯಿಸಬಹುದಾದ ವಿಷಯಗಳ ಹೊರತು ಇತರ ಯಾವ ವಿಷಯಗಳಲ್ಲಿಯೂ ಸಂಸ್ಥಾನದ ಮೇಲೆ ಅಧಿಕಾರ ನಡೆಯಿಸುವ ಅಧಿಕಾರವಿರಕೂಡದೆಂದು ನಿರ್ಣಯಿಸಲಾಯಿತು.

ಅನೇಕ ದೇಶೀಯ ಸಂಸ್ಥಾನಾಧೀಶರು ಸಭೆಯಲ್ಲಿ ಮಾತನಾಡಿದರು. ಸಂಸ್ಥಾನಗಳಿಗೆಲ್ಲಾ ಅನ್ವಯಿಸುವ ಒಂದು ಖಚಿತ ನೀತಿಯಿರಬೇಕೆಂದೂ, ದೂರದರ್ಶಿತ್ವ ಮತ್ತು ಸ್ಥಿರವಾದ ಧ್ಯೇಯಗಳನ್ನು ಅರಸರು ಆಚರಣೆಗೆ ತರಬೇಕೆಂದೂ ಭಾಷಣಗಳಾದುವು ಸ್ವತಂತ್ರ ಭಾರತದಲ್ಲಿ ನರೇಂದ್ರರು ತಮ್ಮ ಸ್ಥಾನಮಾನಗಳಿಗೆ ಚ್ಯುತಿ ಬರದಂತೆ ತಮ್ಮ ಪಾತ್ರವಹಿಸಿ ಭಾರತವು ಪ್ರಪಂಚದ ಮಹಾರಾಷ್ಟ್ರಗಳಲ್ಲೊಂದಾಗುವಂತೆ ಮಾಡಬೇಕೆಂದು ಕೆಲವರು ತಮ್ಮ ಭಾಷಣದಲ್ಲಿ ಸೂಚಿಸಿದರು.

ತಿರುವಾಂಕೂರು ರಾಜ್ಯದಲ್ಲಿ ನೂತನ ಸುಧಾರಣೆ

ತಿರುವಾಂಕೂರಿನಲ್ಲಿ ರಾಜಕೀಯ ಸುಧಾರಣೆ ನಡೆಯಲಿದೆ ಈ ಸುಧಾರಣೆಯ ಮುಖ್ಯ ಅಂಶಗಳಿವು -

೧) ೨೧ ವಯಸ್ಸು ಮೀರಿದ ಹೆಂಗಸರಿಗೂ ಗಂಡಸರಿಗೂ ಓಟಿನ ಹಕ್ಕು ದೊರೆತಿದೆ

೨) ಎರಡು ಸಭೆಗಳ ರಚನೆ ಆಗುತ್ತಿದೆ ಒಂದನೆಯದು ಪ್ರತಿನಿಧಿಸಭೆ ಇದರ ಉಮೇದುವಾರರನ್ನು ಆರಿಸಲು ಎಲ್ಲ ವಯಸ್ಕರಿಗೂ ಹಕ್ಕಿದೆ

ಎರಡನೆಯದು ಕೌನ್ಸಿಲ್‌ಸಭೆ ಇದರ ಉಮೇದುವಾರರನ್ನೂ ಆರಿಸಲು ಕೆಲವು ಕ್ಷೇತ್ರಗಳಿಂದ ಮತದ ಹಕ್ಕು ಪಡೆದವರಿಗೆ ಮಾತ್ರ ಅಧಿಕಾರವುಂಟು

೩) ಈ ಎರಡು ಶಾಸನಸಭೆಗಳೂ ಸೇರಿ ೬ ಕಾರ್ಯ ಸಮಿತಿಗಳನ್ನು ರಚಿಸಿಕೊಳ್ಳುವುವು ಒಂದೊಂದು ಸಮಿತಿಗೂ ಒಬ್ಬೊಬ್ಬ ಅಧ್ಯಕ್ಷರು ಈ ಸಮಿತಿಗಳು ಸರಕಾರದ ವಿವಿಧ ಇಲಾಖೆಯ ಆಡಳಿತವನ್ನು ನೋಡಿಕೊಳ್ಳುವುವು

೪) ದೇಶದ ಪೂರ್ಣ ಆಡಳಿತವು ದಿವಾನರ ಅಧೀನದಲ್ಲಿರುವುದು ದಿವಾನರ ನೇಮಕವು ಮಹಾರಾಜರವರಿಗೆ ಸೇರಿದ್ದು ಶಾಸನ ಸಭೆಗಳ ಮುಂದೆ ಮಸೂದೆಗಳನ್ನು ತರಬೇಕಾದರೆ ದಿವಾನರ ಅಂಗೀಕಾರವು ಅವಶ್ಯವಾಗಿ ಬೇಕು ಮಸೂದೆಗಳು ಶಾಂತಿಗೆ ಭಂಗತರುತ್ತವೆಂದು ಹೇಳುವ ಅಧಿಕಾರವೂ ಸಹ ದಿವಾನರಿಗೇ ಸೇರಿದ್ದು ಅವರ ಒಪ್ಪಿಗೆ ಪಡೆದೇ ಮಸೂದೆಗಳು ಕಾನೂನಾಗಬೇಕು.

೫) ಮಹಾರಾಜರ ಗೃಹಕೃತ್ಯ, ಸೈನ್ಯ, ಕರಾರು ಬ್ರಿಟಿಷ್ ಸರಕಾರದೊಡನೆ ಸಂಬಂಧ ಇವುಗಳ ಮೇಲೆ ಶಾಸನ ಸಭೆಗೆ ಅಧಿಕಾರವಿರುವದಿಲ್ಲ

ಸ್ವೀಕಾರ

ಧಾರವಾಡ ಜಿಲ್ಲಾ ಹಿರೇಕೆರೂರು ತಾಲೂಕು ಮಾಸೂರು ಗ್ರಾಮದ ಕೈ|| ಹಿರೇಮಠದ ಚನ್ನವೀರಾರಾಧ್ಯರ ಗಣಾರಾಧನೆಯ ಸಮಯದಲ್ಲಿ ಅವರ ಮಕ್ಕಳಾದ ವೇ|| ಹಾಲಾರಾಧ್ಯರು ಹಿರೇಮಠ ಇವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಪರ್ವತಪ್ಪ ಲಂಗೋಟಿಕಟ್ರಿ ಇವರ ದ್ವಾರಾ ತಲ್ಪಿರುತ್ತವೆ

ಹೂವಿನಹಡಗಲಿ ತಾ|| ನಂದಿಹಳ್ಳಿ ಗ್ರಾಮದಲ್ಲಿ ಬಳ್ಳಾರಿ ಡಾಕ್ಟರ್ ಟಿ. ಎಂ. ಮದ್ದಾನಯ್ಯನವರಿಗೆ ಎಂ. ಸಿದ್ದಪ್ಪನವರ ಪುತ್ರಿ ಚಿ|| ಸೌ|| ಗುರುಶಾಂತಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಪಾಟೀಲ ವೀರಭದ್ರಗೌಡರು ತೆಗೆಯಿಸಿದ 2 ರೂಪಾಯಿಗಳು ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ

ಗುಲ್ಬರ್ಗಾ ಜಿ|| ನಂದೂರು ಗ್ರಾಮದ ಹೋಪಕಟ್ಟಿ ಹಿರೇಮಠದಲ್ಲಿ ಪ್ರತಿ ವರ್ಷ ಪದ್ಧತಿಯಂತೆ ಶ್ರೀಮಲಯ ಶಾಂತೇಶ್ವರ ರಥೋತ್ಸವವು ನೆರವೇರಿದ ಸಮಯದಲ್ಲಿ ಸದರಿ ಮಠಾಧಿಪತಿಗಳು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ವೇ|| ಜಿ. ಯಂ ಗುರುಸಿದ್ಧಶಾಸ್ತ್ರೀ ಕಾವ್ಯತೀರ್ಥ ಯಾದಗಿರಿ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬೆಂಗಳೂರಿನಲ್ಲಿ ಕಳ್ಳರ ಗುಂಪನ್ನು ಹಿಡಿಯಲಾಗಿದೆ

ಬೆಂಗಳೂರು ಮತ್ತು ಕಾನಕಾನಹಳ್ಳಿ ಮೊದಲಾದ ಕಡೆಗಳಲ್ಲಿ ಕಳ್ಳತನವನ್ನು ನಡೆಸುತ್ತಿದ್ದ ಒಂದು ಕಳ್ಳರ ಗುಂಪನ್ನು ಬೆಂಗಳೂರಿನ ಕ್ರೈಂಬ್ರಾಂಚ್ ಪೋಲೀಸಿನವರು ಬಹಳ ಸಾಹಸಮಾಡಿ ಪತ್ತೆ ಹಚ್ಚಿ ಅವರುಗಳನ್ನು ಬಂಧಿಸಿದ್ದಾರೆ ಅವರುಗಳಲ್ಲಿ ಟ್ಯಾಕ್ಸಿ ಮಾಲಿಕ ಅಲ್ಲೈಸ್ ಸೈಯದ್ ಅಹಮದ್ ಮೊದಲಾದವರಿರುವರು ಇವರು ಕಾನಕಾನಹಳ್ಳಿಯ ರೇಷ್ಮೆ ಡಿಪೋದಲ್ಲಿ ಕಳ್ಳತನ ನಡೆಸಿದ್ದರು ಇವರ ದಿನಚರಿಯ ಕೆಲಸಗಳೆಂದರೆ ಮನೆಗಳ ಬೀಗಗಳನ್ನು ಒಡೆದು ಮನೆಯಲ್ಲಿದ್ದ ಸಾಮಾನುಗಳನ್ನು ಕದ್ದುಕೊಂಡು ಟ್ಯಾಕ್ಸಿಯಲ್ಲಿ ಹಾಕಿಕೊಂಡು ಹೋಗುವುದು ಈ ಕಾರಣದಿಂದ ಟ್ಯಾಕ್ಸಿಯ ಮಾಲೀಕನನ್ನು ಬಂಧಿಸಲಾಗಿದೆ ಈ ಜನರು ಕುಮಾರ ಪಾರ್ಕಿನ ಕೇಂದ್ರ ಆಹಾರ ಡಿಪೋವಿನಿಂದ ೪೦ ಮೂಟೆ ಅಕ್ಕಿಯನ್ನು ಕದ್ದು ಕೆಲವು ಮುಸ್ಲಿಂ ಹೋಟಲುಗಳಿಗೆ ಮಾರುತ್ತಿದ್ದರಂತೆ! ಸಿಟಿ ಪೋಲೀಸ್ ಸೂ|| ರಾದ ಶ್ರೀ ಎಸ್ ವಿ ಬಾಬುರೆಡ್ಡಿಯವರ ನೇತೃತ್ವದಲ್ಲಿ ಕ್ರೈಂಬ್ರಾಂಚ್ ಪೋಲೀಸರು ಇವರನ್ನೆಲ್ಲಾ ಬಂಧಿಸಿ ಮುಂದಿನ ತನಿಖೆ ನಡೆಸುತ್ತಿದ್ದಾರೆ ಇವರುಗಳು ೨೦೦೦ರೂ ಬೆಲೆಬಾಳುವಷ್ಟು ಸಾಮಾನುಗಳನ್ನು ಕಳ್ಳತನ ಮಾಡಿದ್ದಾರೆ ಚಾಮರಾಜ ರಸ್ತೆಯಲ್ಲಿರುವ ಶ್ರೀ ಕೆ ವಿ ಅಯ್ಯರ್‌ರವರ ಅಂಗಡಿಯಿಂದ ರೇಡಿಯೋ ಸೆಟ್ ಸಮೇತ ೩೦೦೦ರೂಗಳ ಬೆಲೆಬಾಳುವ ಪದಾರ್ಥಗಳನ್ನು ಅಪಹರಿಸಿದ್ದವರೂ ಇವರೇ ಎಂದು ಆಪಾದಿಸಲಾಗಿದೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—
ಶ್ರೀರೇಣುಕಾಚಾರ್ಯರ ಲಿಂಗ ನಿರ್ಗಮದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ	೦—೬—
ಶಿಷ್ಯ ೩ ತಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೬—
ಶ್ರೀಜಗದ್ಗುರು ಪಂಚಾಚಾರ್ಯರು ಪಂಚ ಗುರುವರ್ಗಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೬—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಶೈಲ ಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ಕೇದಾರಪೀಠ ಸದನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—
ಬೆಂಗಳೂರು ... ಶ್ರೀ ರಂಭಾಪುರೀ ... ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೮ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಒಸವಾದಿನಿಜತತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ...	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ...	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) ...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆ…
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ…
ಸಮ್ಮೋದರತ್ನಾವಳಿ	೮ ಆ…
ಸಿದ್ಧಾಂತರತ್ನಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ…
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ…
ಶಿವಸೂತ್ರಸಿದ್ಧಾಂತದರ್ಪಣ	೧೨ ಆ…
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೩ನೆಯ ಆವೃತ್ತಿ)	೧| ರೂ…
ಶ್ರೀ ಕರಭಾಷ್ಯಂ (ಚತುಸ್ಸೂತ್ರೀ)	೧|| ರೂ…
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ…
ವೀರಶೈವತತ್ವ (೨ನೆಯ ಆವೃತ್ತಿ, ೫೦ ಮಹತ್ವದ ಫೋಟೋಗಳಿರುವುವು)	೨ ರೂ…
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ)	೨ ರೂ…
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ…
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ…
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ...	೮ ರೂ…
A brief life-sketch of Pandit Sri Kashinatha Shastriji (*English*)	4 A…
The Philosophical Aspect of Virasaivism (*English*) ...	8 A…
Speeches by Pandit Shri Kashinatha Shastriji (*English*)	12 A…
लिंगधारणचन्द्रिका (संस्कृत)	३ रु…
वीरशैवरत्न (मराठी)	१ रु…
महानारायणोपनिषद् (वीरशैवभाष्य–संस्कृत)	१ रु…
सिद्धांतशिखामणि (मूल)	८ आ…
… (संस्कृत) ...	२ आ…

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ... ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯವದನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಮುಂಗಡವಾಗಿ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ಫೆಬ್ರವರಿ ೧೯೪೭ | ಸಂಚಿಕೆ ೪೨

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವೀರಶೈವಬಾಂಧವರಲ್ಲಿ ವಿಜ್ಞಾಪನೆ

ಆಸ್ತಿಕಮಹಾಶಯರೇ,

ಈ ನಮ್ಮ ಆರ್ಯಾವರ್ತದಲ್ಲಿ ವೇದಮಾರ್ಗಾವಲಂಬಿಗಳಾದ ಪ್ರತಿಯೊಂದು ಜನಾಂಗದವರೂ ತಮ್ಮ ತಮ್ಮ ಮತಸ್ಥಾಪನಾಚಾರ್ಯರ ಜಯಂತಿಯನ್ನು ಆಯಾ ಪವಿತ್ರ ದಿವಸಗಳಲ್ಲಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ನೆರವೇರಿಸಿ ಧನ್ಯರಾಗುವುದು ಪ್ರಥಮ ಕರ್ತವ್ಯವಾಗಿರುವದ.

ಸದ್ಯಃ ನಮ್ಮ ವೀರಶೈವ ಮತಸ್ಥಾಪಕರಲ್ಲೊಬ್ಬರಾದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಜಯಂತಿಯು ತಾ॥ ೬-೩-೧೯೪೭ ನೇ ಗುರುವಾರ ಪ್ರಾಪ್ತವಾಗುವದು. ಆ ಪವಿತ್ರ ದಿನದಲ್ಲಿ ಪ್ರತಿಯೊಬ್ಬರೂ ತನುಮನಧನಗಳಿಂದ ಜಯಂತಿಯನ್ನು ವಿಶೇಷ ವೈಭವದ ಜನೆ ನೆರವೇರಿಸಿ ಶ್ರೀ ಗುರುವಿನ ಕೃಪೆಗೆ ಪಾತ್ರರಾಗಬೇಕು. ಬರೀ ಪೂಜೆ ಉತ್ಸವಾದಿಗಳನ್ನು ಮಾಡಿದ ಮಾತ್ರದಿಂದ ಜಯಂತಿಯನ್ನು ನೆರವೇರಿಸಿದಂತಾಗುವುದಿಲ್ಲ. ಆದರೆ ಆಯಾ ದಿನಗಳಲ್ಲಿ ಸಭೆ ಸೇರಿ ಆ ಮಹಾತ್ಮರ ಅವತಾರವು ಯಾವ ಉದ್ದೇಶದಿಂದ ಆಯಿತು? ಆ ಮಹಿಮರು ಜಗತ್ತಿಗೇನು ಬೋಧ ಮಾಡಿದರು? ಎಂಬುದನ್ನು ಸಭೆಗಳ ಮೂಲಕ ಜನರಿಗೆ ತಿಳಿಹಿಸಬೇಕೆಂಬುವುದೇ ಜಯಂತಿಯ ಮುಖ್ಯೋದ್ದೇಶವು. ಆದ ಪ್ರಯುಕ್ತ ಪ್ರತಿಯೊಂದು ಗ್ರಾಮ ನಗರಗಳಲ್ಲಿ ಸಭೆ ಸೇರಿ ಭಾಷಣಗಳನ್ನು ಮಾಡಿ, ಮಾಡಿಸಿ ತನ್ಮೂಲಕ ಧರ್ಮಜಾಗೃತಿಯನ್ನುಂಟುಮಾಡಿ ಧನ್ಯರಾಗಬೇಕೆಂದು ಕೇಳುತ್ತೇನೆ.

ಆರ್ ಯಂ ಮಲ್ಲಿಕಾರ್ಜುನಾರಾಧ್ಯ,
ತಿಪಟೂರು

ಅಖಿಲ ಭಾರತ ಧರ್ಮಪೀಠ ಸಮ್ಮೇಲನ ಮದ್ರಾಸ್

ತಾ॥ ೧೨-೧೨-೪೬ ರಲ್ಲಿ ಮದ್ರಾಸ ನಗರದ ಮೈಲಾಪೂರ್ ರಸಿಕರಂಜಿನೀ ಹಾಲಿನಲ್ಲಿ ಪೂರೀ ಗೋವರ್ಧನ ಪೀಠಾಧ್ಯಕ್ಷರಾದ ಶ್ರೀ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಧರ್ಮಪೀಠಗಳ ಪ್ರತಿನಿಧಿ ಮಹಾಸಮ್ಮೇಲನವು ಬಹಳ ಉತ್ಸಾಹಪೂರ್ವಕವಾಗಿ ನೆರವೇರಿತು. ದಕ್ಷಿಣ ದೇಶದ ಪ್ರಾಯಃ ಎಲ್ಲ ವೈದಿಕ ಧರ್ಮಪೀಠಗಳ ಪ್ರತಿನಿಧಿಗಳೂ ಇದರಲ್ಲಿ ಭಾಗವಹಿಸಿದ್ದರು.

ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದ ಪ್ರತಿನಿಧಿಗಳಾಗಿ ಅಹುಗೊಂಡ ಕಾಲಾಮಠದ ವೇ॥ ಪಂ॥ ಗಂಗಾಧರಶಾಸ್ತ್ರಿಗಳು ಹೋಗಿದ್ದರು. ವರ್ಣಾಶ್ರಮ ಸ್ವರಾಜ್ಯ ಸಂಘ, ಧರ್ಮ ಸಂಘ, ಗೋಕುಲನಾಥಜೀ ಪೀಠ ಮುಂತಾದವರ ಪ್ರತಿನಿಧಿಗಳೂ ಅನೇಕ ನಗೀಲರೂ ಅನೇಕ ಪ್ರಮುಖರೂ ಬಂದಿದ್ದರು. ಅಧ್ಯಕ್ಷರ ಭಾಷಣವು ಬಹು ಉದ್ಬೋಧಕರವಾಗಿಯೂ, ಧರ್ಮತತ್ತ್ವ ರಾಜನೀತಿಪರಿತರಾಗಿಯೂ ಇತ್ತು. ಮಹತ್ವಪೂರ್ಣವಾದ ಅನೇಕ ಠರಾವುಗಳು ಮಾಡಲ್ಪಟ್ಟವು. ಧರ್ಮಪೀಠಗಳು ತಮ್ಮ ತಮ್ಮ ಧರ್ಮಾಚರಣೆಗಳ ಬಗ್ಗೆ ಸ್ವತಂತ್ರನಾದವುಗಳೆಂತಲೂ, ಇವುಗಳ ಮೇಲೆ ಕಾನೂನು ಮಾಡಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರದವರು ಅನುಸರಿಸುತ್ತಿರುವ ಮಾರ್ಗವು ಅನುಚಿತವೆಂತಲೂ, ಮಠಾಧಿಕಾರಿಗಳು ಎಚ್ಚೆತ್ತು ಸಬಲವಾದ ಆಂದೋಲನವನ್ನು ನಡೆಸಬೇಕೆಂತಲೂ ಈ ಮಹಾಸಭೆಯ ಮುಖ್ಯಾಭಿಪ್ರಾಯವಾಗಿದೆ. ಬಹು ದೂರದೇಶದಿಂದ ತಮ್ಮ ಪ್ರತಿನಿಧಿಯನ್ನು ಕಳುಹಿ ಸಂದೇಶ ಸಲಹೆಗಳನ್ನು ಕೊಟ್ಟುದಕ್ಕಾಗಿ ಶ್ರೀ ವಿಶ್ವಾರಾಧ್ಯ ಪೀಠಾಧೀಶ್ವರರನ್ನು ಪ್ರಶಂಸಿದರಲ್ಲದೆ ಶ್ರೀ ಮದಾಸನ್ನಿಧಿಯವರು ಪೂರ್ವಾಶ್ರಮದಲ್ಲಿ ರಚಿಸಿದ ಮಠಗಳು ಮತ್ತು ಮಂದಿರಗಳು (Mutts & Mandirs) ಎಂಬ ಇಂಗ್ಲೀಷ್ ಪುಸ್ತಕವನ್ನು ಪ್ರಮಾಣಕ್ಕಾಗಿ ಸ್ವೀಕರಿಸಿದರು. ವೀರಶೈವ ಮಠಗಳ ಪ್ರತಿನಿಧಿಗಳು ಇತರರಾರೂ ಬಾರದಿರುವದು ಅಸಮಾಧಾನಕರವಾಗಿತ್ತು. ಕಾಶೀ ಪೀಠದ ಪ್ರತಿನಿಧಿಗಳೊಡನೆ ವಿಶೇಷವಾಗಿ ಪರಾಮರ್ಶ ಮಾಡಿದರು. ಮುಂದೆ ದಿಲ್ಲಿಯಲ್ಲಿ ಕೂಡಲಿರುವ ಮಹಾಸಮ್ಮೇಲನಕ್ಕಾದರೂ ಎಲ್ಲರೂ ತಪ್ಪದೆ ಭಾಗವಹಿಸಬೇಕು. ಸದ್ಯಃ ಈ ಮಹಾಸಭೆಯು ಸ್ಥಾಯಿಯಾಗಲು "ಆಲ್ ಇಂಡಿಯಾ ಧರ್ಮಪೀಠ ಸಮ್ಮೇಲನ ೭ ವಸ್ಟ್ ಅಬಿರ್ ಸ್ಟ್ರೀಟ್ ಕುಂಭಕೋಣಂ" ಎಂಬಲ್ಲಿದ್ದ ಬೇಕಾದವರು ಇವರೊಡನೆ ಇಂಗ್ಲೀಷಿನಿಂದ ಪತ್ರವ್ಯವಹಾರ ಮಾಡಬಹುದು.

ಒರ್ವ ಸನಾತನಧರ್ಮಾಭಿಮಾನಿ

ವಿಶ್ವಶಾಂತಿಗೆ ಅಟಾಮಿಕ್ ಬಾಂಬಿನ ಹತೋಟಿಯೇ ಮುಖ್ಯ

ಎಲ್ಲ ರಾಷ್ಟ್ರಗಳಿಗೂ ಸಮಾನವಾಗಿ ಅನ್ವಯಿಸುವ ಶಸ್ತ್ರ ತ್ಯಾಗ ಯೋಜನೆಯನ್ನು ತಯಾರಿಸುವುದಕ್ಕಾಗಿ ಸಂಯುಕ್ತ ಸಂಸ್ಥಾನ, ರಷ್ಯ, ಫ್ರಾನ್ಸ್, ಆಸ್ಟ್ರೇಲಿಯ ಮತ್ತು ಕೊಲಂಬಿಯ ರಾಷ್ಟ್ರಗಳ ಪ್ರತಿನಿಧಿಗಳು ನ್ಯೂಯಾರ್ಕಿನಲ್ಲಿ ಖಾಸಗಿಯಾಗಿ ಸಭೆ ಸೇರಲಿರುವರು. ಅವರು ಒಪ್ಪಿಗೆಗೆ ಒಂದು ಜಯಶಾಲಿಗಳಾದಲ್ಲಿ, ಈ ಯೋಜನೆಯನ್ನು ಸೆಕ್ಯೂರಿಟಿ ಕೌನ್ಸಿಲ್ಲಿನ ಮುಂದೆ ಇಡಲಾಗುವುದು.

ಮುಖ್ಯ ಸಮಸ್ಯೆಗಳನ್ನು ವಿವರಿಸಿ ಸರ್ ಅಲೆಗ್ಸಾಂಡರ್ ಕೆಡೋಗನ್‌ರವರು ಒಂದು ಪ್ರಕಟಣೆ ಹೊರಡಿಸಿ, ಅಟಂಬಾಂಬಿನ ಹತೋಟಿಯನ್ನು ಹೊಂದಿದಲ್ಲಿ ವಿಶ್ವ ಕೆಲಸವೆಲ್ಲ ಸುಲಭವಾಗುವುದೆಂದು ಹೇಳಿರುವರು. ಶಾಂತರೀತಿಯಿಂದಲಾಗಲಿ ಬಲಾತ್ಕಾರದಿಂದಲಾಗಲಿ ವಿಶ್ವ ಶಾಂತಿಯನ್ನು ಪಾಲಿಸುವ ಬಗ್ಗೆ ಸಂಯುಕ್ತ ಸಂಸ್ಥಾನದ ಶಕ್ತಿಯಲ್ಲಿ ನಂಬಿಕೆ ಬಂದ ಹೊರತು ಮುಂದುವರಿಯಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವರು.

ಸಂಯುಕ್ತರಾಷ್ಟ್ರ ಅಟಾಮಿಕ್ ಹತೋಟಿ ಸಮಿತಿಯ ಕಾರ್ಯವನ್ನು ವಿವರಿಸುತ್ತ, ಅಟಾಮಿಕ್ ಬಾಂಬಿನ ಹತೋಟಿಯ ಬಗ್ಗೆ ತುಂಬ ಸಮರ್ಪಕವಾದ ಕೆಲಸ ನಡೆದಿದೆಯೆಂದು ಹೇಳಿದರು. ಆದರೂ ಸರಿಯಾದ ಅಂತರರಾಷ್ಟ್ರೀಯ ಹತೋಟಿ ವಿಧಾನವನ್ನು ನಿರ್ಮಿಸಿ ಒಂದು ಒಪ್ಪಂದಕ್ಕೆ ಬರಲು ಇನ್ನೂ ಬಹಳ ಕೆಲಸ ನಡೆಯಬೇಕಾಗಿದೆಯೆಂದು ಹೇಳಿದರು. ಅಂತರರಾಷ್ಟ್ರೀಯ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವುದರಲ್ಲಿ ರಕ್ಷಣ ಸಮಿತಿಯು ಮೊದಲನೆಯ ವರ್ಷದಲ್ಲಿ ಒಳ್ಳೆ ಪ್ರಭಾವವನ್ನು ತೋರಿಸಿ ಅನೇಕ ಬೇಳೆ ಅಪಾಯಕರವಾಗುತ್ತಿದ್ದ ಪರಿಸ್ಥಿತಿಯನ್ನು ಕೂಡ ಹತೋಟಿಗೆ ತಂದಿದೆಯೆಂದು ಹೇಳಿದರು.

ವರದಿಯೊಡನೆ ಕಳುಹಿಸಲಾಗಿದ್ದ ಪತ್ರದಲ್ಲಿ ಪ್ರೆಸಿಡೆಂಟ್ ಟ್ರೂಮನ್ನರು ಸಂಯುಕ್ತರಾಷ್ಟ್ರ ಸಮಿತಿಯ ಕಾರ್ಯಕಲಾಪಗಳನ್ನು ಸರಿಯಾಗಿ ನಡೆಯಿಸುವುದರಲ್ಲಿ ಅಮೆರಿಕವಲ್ಲದೆ ಮತ್ತಾವ ರಾಷ್ಟ್ರವೂ ಹೆಚ್ಚು ತ್ಯಾಗಬುದ್ಧಿಯಿಂದ ವರ್ತಿಸಲಿಲ್ಲವೆಂದು ಹೇಳಿ ಮುಂದೆಯೂ ಕೂಡ ದೇಶದ ಸಕಲ ಸಂಪತ್ತನ್ನೂ ವಿನಿಯೋಗಿಸಿ ಸಂಯುಕ್ತ ರಾಷ್ಟ್ರ ಸಂಘವನ್ನು ಪೋಷಿಸುವುದೇ ತಮ್ಮ ದೇಶದ ನೀತಿಯಾಗಿದೆಯೆಂದು ತಿಳಿಸಿದ್ದಾರೆ.

ಮಿ॥ ಚರ್ಚಿಲ್ಲರ ಸಂಯುಕ್ತ ಯೂರೋಪಿನ ಸಮಿತಿಗೆ ಲೇಬರ್ ಪಕ್ಷದ ಬೆಂಬಲವಿಲ್ಲ

ಯುದ್ಧ ಕಾಲದ ಪ್ರಧಾನ ಮಂತ್ರಿಗಳಾಗಿದ್ದ ಮಿ॥ ವಿನ್‌ಸ್ಟನ್ ಚರ್ಚಿಲ್ಲರ ನಾಯಕತ್ವದಲ್ಲಿ ಏರ್ಪಡಿಸಿರುವ ಸಂಯುಕ್ತ ಯೂರೋಪಿನ ಸಮಿತಿಯಲ್ಲಿ ಸದಸ್ಯತ್ವ ಸ್ಥಾನ ಕೊಡದೆ ಇರುವುದರಿಂದ ಬ್ರಿಟಿಷ್ ಲೇಬರ್ ಪಾರ್ಟಿಯ ಕಾರ್ಯಕಾರೀ ಸಮಿತಿಯವರು ತಮ್ಮ ಸದಸ್ಯರು ಸಂಯುಕ್ತ ಯೂರೋಪಿನ ಸಮಿತಿಗೆ ಬೆಂಬಲ ಕೊಡಕೂಡದೆಂದು ತಿಳಿಸಿದ್ದಾರೆ.

ಸ್ವೀಕಾರ

ಧಾರವಾಡ ಜಿ॥ ಗದಗ ತಾ॥ ಹೊಂಬಳ ಹಿರಿಯ ಮಠದ ವೇ॥ ವೀರಭದ್ರಯ್ಯನವರ ಪುತ್ರ ಚಿ। ಸಿದ್ಧಲಿಂಗಾರ್ಯನಿಗೆ ರೋಣ ತಾ॥ ಗಾರವಾಡ ಹಡಗಲಿ ಹಿರೇಮಠದ ವೇ॥ ಚಂದ್ರಶೇಖರಯ್ಯನವರ ಪುತ್ರಿ ಚಿ॥ ಸೌ। ಕಾಶೀಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೩ ರೂಪಾಯಿಗಳು ಬೇವಿನಕಿ ಹಿರಿಯಮಠದ ವೇ॥ ಗುರುದೇವಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಫೆಬ್ರವರಿ ತಾ|| ೧೦ನೇ ಸೋಮವಾರ

ಮಂತ್ರಜಪ

ಶಿವಲಿಂಗೇ ಮನ್ನಸ್ತ್ರಿ ಶಿವಯೋಗಾತ್ತ ಮಾನಸಂ।
ಶಿವಮಂತ್ರಸ್ಮೀಕೃತಂ ಶಿವಜ್ಞಾನೀ ನ ಪಾತಯೇತ್ ॥
ಜಪಕಾಲೇ ಚ ಜಪಿನಂ ಯೋ ಪಾತಯತಿ ಮೋಹತಃ।
ನ ತಸ್ಯ ನಿಷ್ಕೃತಿಃ ಶಾಸ್ತ್ರ ಶತಕಲ್ಪಶತೈರಪಿ ॥

ಅಂದರೆ—ಶಿವಲಿಂಗದಲ್ಲಿ ದೃಷ್ಟಿಯನ್ನಿಟ್ಟು ಶಿವಯೋಗದಲ್ಲಿ ಮನಸ್ಸನ್ನು ಸ್ಥಿರಗೊಳಿಸಿದ ಹಾಗು ಶಿವಮಂತ್ರವನ್ನು ಜಪಿಸುತ್ತಿರುವ ಮನಸನನ್ನು ಯಾರೂ ಮಾತಾಡಿಸಬಾರದೆಂದೂ ಯಾವನು ಜಾಪಕನನ್ನು ಜಪಮಾಡುವ ಸಮಯದಲ್ಲಿ ಅಜ್ಞಾನದಿಂದ ಮಾತನಾಡಿಸುತ್ತಾನೆಯೋ ಅವನಿಗೆ ನೂರುವರ್ಷಗಳವರೂ ಪ್ರಾಯಶ್ಚಿತ್ತವು ದೊರೆಯಲಾರದೆಂದೂ ಧರ್ಮಶಾಸ್ತ್ರಗಳು ಶಾಸನಮಾಡುತ್ತಿರುವವು ಇದರಿಂದ ಜಪದ ಮಹತ್ತ್ವವು ಅಸಾಧಾರಣವಾದುದೆಂದು ಬೇರೆ ಹೇಳಬೇಕಾಗಿಲ್ಲ ಜಪಮಾಡತಕ್ಕವನು ಆದಿಯಲ್ಲಿ ದೀಕ್ಷಾಗುರುವಿನ ಕಡೆಯಿಂದ ಋಷಿ ದೇವತಾ ಛಂದಸ್ಸು ಬೀಜ ಶಕ್ತಿ-ಕೀಲಕಾದಿಗಳನ್ನೂ, ಕರನ್ಯಾಸ ದೇಹನ್ಯಾಸ ಅಂಗನ್ಯಾಸಾದಿಗಳನ್ನೂ ತಿಳಿದುಕೊಂಡು ಜಪಿಸಬೇಕು ಆಶ್ರಮಾನುಸಾರವಾಗಿ ನ್ಯಾಸಾದಿಗಳಿರುವವಲ್ಲದೆ ಸರ್ವರಿಗೂ ಒಂದೇರೀತಿಯಾಗಿರುವದಿಲ್ಲ ಆದಿಯಲ್ಲಿ ದೀಕ್ಷಾಗುರುವು ದೀಕ್ಷಿತನಾದ ಬ್ರಹ್ಮಚಾರಿಗೆ ಸೃಷ್ಟಿನ್ಯಾಸಕ್ರಮವನ್ನು ಬೋಧಿಸಬೇಕು ಕೆಲವು ದಿವಸಗಳು ಕಳೆದಮೇಲೆ ಆ ಬ್ರಹ್ಮಚಾರಿಯು ವಿವಾಹಿತನಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸುತಾನಷ್ಟೆ! ಆಗ್ಗೆ ದೀಕ್ಷಾಗುರುವೇ ಪುನಃ ಅವನಿಗೆ ಗೃಹಸ್ಥಾಶ್ರಮಕ್ಕೆ ಯೋಗ್ಯವಾದ ಸ್ಥಿತಿನ್ಯಾಸವನ್ನು ಬೋಧಿಸಬೇಕು ಕೆಲವು ದಿವಸಗಳು ಕಳೆದ ಮೇಲೆ ಕೆಲಕೆಲವರು ಸಂಸಾರದಲ್ಲಿ ಹೇಯಬುದ್ಧಿಯು ಹುಟ್ಟಿ ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮವನ್ನು ಸ್ವೀಕರಿಸುವರು ಅವರಿಗೆ ಅದೇ ದೀಕ್ಷಾಗುರುವೇ ಆ ಆಶ್ರಮಗಳಿಗೆ ಯೋಗ್ಯವಾದ ಸಂಹಾರನ್ಯಾಸಕ್ರಮವನ್ನು ಬೋಧಿಸಬೇಕು ಮತ್ತೆ ಕೆಲವರು ಬ್ರಹ್ಮಚರ್ಯಾಶ್ರಮದಲ್ಲಿ ವೇದೋಪನಿಷದಾದಿಗಳ ಅಭ್ಯಾಸದಿಂದಾಗಲಿ ಅಥವಾ ಪೂರ್ವಜನ್ಮಕೃತ ಪುಣ್ಯವಿಶೇಷದಿಂದಾಗಲಿ ಒಮ್ಮೆಲೆ ವೈರಾಗ್ಯಶಾಲಿಗಳಾಗಿ ಸನ್ಯಾಸಿಗಳಾಗುವದುಂಟು ಅವರಿಗಾದರೂ ಈ ದೀಕ್ಷಾಗುರುವೇ ಅವರ ನಿಜವಾದ ಸನ್ಯಾಸವೃತ್ತಿಯನ್ನು ಪರೀಕ್ಷಿಸಿ, ಸಂಹಾರಕ್ರಮವನ್ನು ಬೋಧಿಸಬೇಕು ಇದು ಶಾಸ್ತ್ರೀಯಪದ್ಧತಿಯಾಗಿರುತ್ತದೆ ಶಾಸ್ತ್ರಸಂಪ್ರದಾಯವು ಹೀಗಿದ್ದರೂ ಸದ್ಯ ವೀರಶೈವಜನರಲ್ಲಿ ಪದ್ಧತಿಯು ವಿಲಕ್ಷಣವಾಗಿಯೇ ನಡೆದಿರುತ್ತದೆ ಇದಕ್ಕೆ ಗುರುವರ್ಗದವರ ಅಜ್ಞಾನವೇ ಮುಖ್ಯಕಾರಣವು ಕೆಲವು ಗುರುಗಳು ಹೀಗೆ ಇರುತ್ತಾರಲ್ಲ! ತಮ್ಮ ಗುರುಗಳು ತಮಗೆ ಸೃಷ್ಟಿನ್ಯಾಸವನ್ನು ಹೇಳಿದ್ದರೆ, ತಾವು ಎಲ್ಲ ಆಶ್ರಮದವರಿಗೂ ಅದನ್ನೇ ಉಪದೇಶಮಾಡುತ್ತಾರೆ ಸಂಹಾರಕ್ರಮವನ್ನು ಹೇಳಿದ್ದರೆ, ಅದನ್ನೇ ಉಪದೇಶಮಾಡುತ್ತಾರೆ ಹೀಗಾದಮೇಲೆ ಆಶ್ರಮದ ಕಟ್ಟುಗಳು ಹೇಗೆ ಉಳಿಯಬೇಕು? ಹಾಗೂ ಆ ಆಶ್ರಮದವರು ಹೇಗೆ ಉದ್ಧಾರವಾಗಬೇಕು? ಆದಕಾರಣ ಎಲೈ ಗುರುಮೂರ್ತಿಗಳೇ, ಸಮಾಜೋದ್ಧಾರಕರಾದ ನೀವು ಸೃಷ್ಟಿ-ಸ್ಥಿತಿ ಸಂಹಾರ ಕ್ರಮಗಳನ್ನು ತಿಳಿದುಕೊಂಡು, ಆಶ್ರಮಕ್ಕನುಗುಣವಾಗಿ ಬೋಧಿಸುವ ಕ್ರಮವನ್ನಿಟ್ಟುಕೊಳ್ಳಿರಿ, ಮನಸ್ಸಿಗೆ ಬಂದುದನ್ನೇ ಬೋಧಿಸಬೇಡಿರಿ ಇದರಿಂದ ಸಮಾಜವು ಕ್ಷೀಣಾವಸ್ಥೆಯನ್ನು ಹೊಂದುವುದು ನಮ್ಮಾ ಸಮಾಜದಲ್ಲಿ ವಿರಕ್ತರೆಂಬುವರು ಮಂತ್ರೋಪದೇಶವನ್ನು ಮಾಡಲಿಕ್ಕೆ ಅನಧಿಕಾರಿಗಳಾಗಿದ್ದರೂ, ಧರ್ಮಶಾಸ್ತ್ರವಿರುದ್ಧವಾಗಿ ತಮ್ಮಲ್ಲಿ ಭಕ್ತಿಯುಳ್ಳ ಕೆಲಕೆಲ ಭಕ್ತರಿಗೆ ಸಂಹಾರಕ್ರಮವನ್ನು ಬೋಧಿಸಿ, ಅವರ ವಂಶವನ್ನೇ ನಾಶಮಾಡಲುದ್ಯುಕ್ತರಾಗಿದ್ದಾರೆ ಈ ಮಹಾಶಯರು ಈಗ್ಗೆ ೨೦೦ ವರ್ಷಗಳಿಂದ ನೂತನವಾಗಿ ಕಲ್ಪಿಸಲ್ಪಟ್ಟು ಆಗಮಾದಿಗಳಿಗೆ ಅತಿವಿರುದ್ಧವಾಗಿರುವ ೧೩ ಅಕ್ಷರಗಳುಳ್ಳ ಒಸವಮಂತ್ರವನ್ನು ಬೋಧಿಸಿ ಸಮಾಜವನ್ನು ರಸಾತಲಕ್ಕೆ ತುಳಿಯುತ್ತಿದ್ದಾರೆ ಶಿವಾಗಮಪ್ರಸಿದ್ಧವಾದ ಪಂಚಾಕ್ಷರಮಂತ್ರವನ್ನು ನಿರಾಕರಿಸಿ ಕಲ್ಪಿತಮಂತ್ರದಲ್ಲಿ ಭಕ್ತಿಯನ್ನಿಟ್ಟು ನಡೆಯುವ ಪುಣ್ಯಾತ್ಮರಿಗೆ ಯಾವ ಗತಿಯಾಗುವದೋ ತಿಳಿಯದು ಅಸ್ತು! ಇನ್ನು ಜಪವು ವಾಚಿಕ ಉಪಾಂಶು ಮಾನಸಿಕ ಭೇದದಿಂದ ಮೂರು ಪ್ರಕಾರವಾಗಿರುವದು ತನ್ನ ಸಮೀಪದಲ್ಲಿರುವವರಿಗೆ ಮಾತ್ರ ಕೇಳಿಸುವಂತೆ ಜಪಿಸುವದಕ್ಕೆ ವಾಚಿಕಜಪವೆನ್ನುತ್ತಾರೆ ಇದು ಕನಿಷ್ಠವು ಬೇರೊಬ್ಬರಿಗೆ ಕೇಳಿಸದಂತೆ ತುಟಿಗೆ ತುಟಿಯು ಹತ್ತುವ ಹಾಗೆ ಜಪಿಸುವದಕ್ಕೆ ಉಪಾಂಶುಜಪವೆನ್ನುತಾರೆ ಇದು ಮಧ್ಯಮವು ಜಿಹ್ವಾಪ್ರಚಲನೆಯೂ ಸಹ ಇಲ್ಲದ ಕೇವಲ ಮನಸ್ಸಿನಿಂದ ಜಪಿಸುವದಕ್ಕೆ ಮಾನಸಿಕ ಜಪವೆನ್ನುತ್ತಾರೆ ಇದು ಅತ್ಯುತ್ತಮವು ಮಂತ್ರವನ್ನು ಈ ಪ್ರಕಾರವಾಗಿ ಜಪಿಸಬೇಕೆಂದು ಶಿವಾಗಮಗಳು ಬೋಧಿಸುತ್ತಿದ್ದರೂ ಕೆಲಜನರು ಈ ಪವಿತ್ರಮಂತ್ರವನ್ನು ಬಹಿರಂಗವಾಗಿ ಪಠಿಸುತ್ತಿರುವರು ಇದು ಶಾಸ್ತ್ರವಿರುದ್ಧವಾದುದು ಮೋಕ್ಷದಾಯಕವಾದ ಪವಿತ್ರಮಂತ್ರವನ್ನು ರಹಸ್ಯವಾಗಿ ಜಪಿಸುವುದು ಶ್ರೇಯಸ್ಕರವಾದುದು

ಗುರುಂ ಪ್ರಕಾಶಯೇನ್ನೈವ ಮಂತ್ರಂ ಚೈವ ವಿಶೇಷತಃ।
ಪ್ರಕಾಶನಾದ್ವಿಹಾನಿಃ ಸ್ಯಾದಿತ್ಯಾಹ ಭಗವಾನ್ ಶಿವಃ।

ಅಂದರೆ—ಗುರುವನ್ನೂ ಹಾಗೂ ಮಂತ್ರವನ್ನೂ ಆದಷ್ಟು ಗೋಪ್ಯವಾಗಿಡಬೇಕೆಂತಲೂ, ಪ್ರಕಾಶಮಾಡಿದಲ್ಲಿ ಸಿದ್ಧಿಯಾಗಲಾರದೆಂತಲೂ ಧರ್ಮಗ್ರಂಥಗಳು ಸಾರುವವು ಆದುದರಿಂದ ಮಂತ್ರವನ್ನು ಪ್ರಕಾಶವಾಗಿ ಉಚ್ಚರಿಸದೆ ಮನಸ್ಸಿನಲ್ಲಿ ಜಪಿಸುವದೇ ಸದ್ಗತಿದಾಯಕವಾಗಿರುವದು ಮಂತ್ರವನ್ನು ಜಪಿಸುವ ಕಾಲದಲ್ಲಿ ಸೀನು ಆಕಳಿಸುವಿಕೆ ಕ್ಯಾಕರಿಸುವಿಕೆ, ಸಿಟ್ಟು ಗರ್ವ ಇವುಗಳನ್ನು ಬಿಡಬೇಕು ಜಪಕಾಲದಲ್ಲಿ ನಾಯಿ, ಬೆಕ್ಕು ಮೊದಲಾದ ಕೆಟ್ಟಪ್ರಾಣಿಗಳನ್ನೂ, ನೀಚಕುಲೋತ್ಪನ್ನರನ್ನೂ, ಆಚಾರಹೀನರನ್ನೂ, ಪತಿತರನ್ನೂ ನೋಡಬಾರದು ಆಕಸ್ಮಾತ್ ನೋಡಿದರೆ ಆಚಮನವನ್ನು ಮಾಡಿ ಶಿವನನ್ನು ಸ್ಮರಿಸಬೇಕು

ಶಿವತತ್ತ್ವಾತ್ಪರಂ ನಾಸ್ತಿ ಯಥಾ ತತ್ತ್ವಾಂತರಂ ಮಹತ್।
ತಥಾ ಪಂಚಾಕ್ಷರೀಮಂತ್ರಾನ್ನಾಸ್ತಿ ಮಂತ್ರಾಂತರಂ ಮಹತ್ ॥
ಜ್ಞಾತೇ ಪಂಚಾಕ್ಷರೀಮಂತ್ರೇ ಕಿಂ ವಾ ಮಂತ್ರಾಂತರೈಃ ಫಲಂ
ಜ್ಞಾತೇ ಶಿವೇ ಜಗನ್ಮೂಲೇ ಕಿಂ ಫಲಂ ದೇವತಾಂತರೈಃ ॥
ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯಾದಿಕರ್ಮಣಿ।
ಮಂತ್ರಸ್ಯಾಸ್ಯೈವ ಮಾಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ॥

ಶಿವತತ್ತ್ವಕ್ಕಿಂತಲೂ ಹೆಚ್ಚಿನ ತತ್ತ್ವವು ಹೇಗೆ ಇಲ್ಲವೋ ಹಾಗೆಯೇ ಪಂಚಾಕ್ಷರೀಮಂತ್ರಕ್ಕಿಂತಲೂ ಹೆಚ್ಚಿನ ಮಂತ್ರವಿಲ್ಲವೆಂದೂ ಜಗತ್ಕಾರಣನಾದ ಶಿವನನ್ನು ತಿಳಿದ್ದಾದರೆ ಅನ್ಯದೇವತೆಗಳಿಂದ ಹೇಗೆ ಫಲವಿಲ್ಲವೋ ಹಾಗೆಯೇ ಪಂಚಾಕ್ಷರೀಮಂತ್ರವನ್ನು ತಿಳಿದ್ದಾದರೆ ಇತರ ಮಂತ್ರಗಳಿಂದ ಯಾವ ಪ್ರಯೋಜನವಿಲ್ಲವೆಂದೂ, ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಗೆ ಜಗತ್ತುಗಳ ಸೃಷ್ಟಿ ರಕ್ಷಣಾದಿ ಕಾರ್ಯಗಳಲ್ಲಿ ಸಾಮರ್ಥ್ಯವು ಈ ಮಂತ್ರದಿಂದಲೇ ಪ್ರಾಪ್ತವಾಯಿತೆಂದೂ ಶ್ರೀಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಬೋಧಿಸಿರುವರು ಆದಕಾರಣ ಪ್ರತಿಯೊಂದು ಆಶ್ರಮದ ವೀರಶೈವರು ಶ್ರೀಮದಾಚಾರ್ಯಪಾದರ ಶಾಸನದಮೇರೆಗೆ ಈ ಮಹಾಮಂತ್ರದಲ್ಲಿ ಭಕ್ತಿಯನ್ನಿಟ್ಟು ಜಪಕ್ರಮವನ್ನು ಗುರುಮುಖದಿಂದ ಸಾಂಗವಾಗಿ ತಿಳಿದುಕೊಂಡು ತಮ್ಮ ತಮ್ಮ ಆಶ್ರಮಾನುಸಾರವಾಗಿ ನ್ಯಾಸಾದಿಗಳನ್ನು ಮಾಡಿ ಮುಕ್ತಿಭಾಗಿಗಳಾಗಬೇಕು

ಶ್ರೀಸಿದ್ಧಲಿಂಗ ವಿಜಯನಾಟಕ

ಒಳ್ಳಾರಿ ಡಿ| ಕೊಟ್ಟೂರು ಗ್ರಾಮದಲ್ಲಿರುವ ಸಂಗೀತವಿದ್ವಾನ್ ವೇ|| ಕೆಂಬಾವಿ ಮಠದ ಚನ್ನಬಸವಶಾಸ್ತ್ರಿಗಳು, ಅಸಾಧಾರಣ ಮಹಿಮಶಾಲಿಗಳೆಂದು ಲೋಕವಿಖ್ಯಾತರಾಗಿ ಹೋಗಿರುವ ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ನಾಟಕವನ್ನು ತಯಾರಿಸಿ ಇದೇ ತಿಂಗಳು ೧೬ನೆಯ ತಾರೀಖಿನ ದಿವಸ ಕೊಟ್ಟೂರೇಶ್ವರನ ಜಾತ್ರೆಯ ಸಮಯದಲ್ಲಿ ಅಭಿನಯಿಸುವರೆಂದು ತಿಳಿ- ಬರುತ್ತದೆ ಈ ಗುರುಸಾರ್ವಭೌಮರ ನಾಟಕವನ್ನು ಅನೇಕ ಕನ್ನಡ ನಾಟಕಗಳನ್ನು ಬರೆದು ಕರ್ನಾಟ- ದೇಶದಲ್ಲೆಲ್ಲಾ ಮಹಾ ಕೀರ್ತಿಯನ್ನು ಗಳಿಸಿರು- ಕರ್ನಾಟಕಕವಿಚಂದ್ರ ವೇ|| ನಲವಡಿ ಹಿರಿಯಮಠದ ಶ್ರೀಕಂಠಶಾಸ್ತ್ರಿಗಳು ಬಹು ಮನೋಹರವಾಗಿ ರಚಿ- ಸ್ದಾರೆ ಸದರಿ ಶಾಸ್ತ್ರಿಗಳು ನಾಟಕ ರಚನಾಕಲೆಯಲ್ಲಿ ಅಪ್ರತಿಮವಾದ ಪ್ರತಿಭೆಯನ್ನು ಪಡೆದಿರುವದರಿಂ- ಅವರಿಂದ ರಚಿತವಾಗಿರುವ ಈ ನಾಟಕವು ಅದ್ವಿತೀಯ- ವಾಗಿರುವದೆಂದು ಹೇಳುವದರಲ್ಲಿ ಯಾವ ಸಂ- ಯವೂ ಇರುವದಿಲ್ಲ ವೇ|| ಚನ್ನಬಸವಶಾಸ್ತ್ರಿಗಳು ಮತ್ತು ಶ್ರೀಕಂಠಶಾಸ್ತ್ರಿಗಳು ಸಾಕ್ಷಾತ್ ಪರಶಿವಾವತಾರಿಗಳೆಂ- ಶ್ರೀಸಿದ್ಧಲಿಂಗ ಜಗದ್ಗುರುಗಳವರ ವಿಷಯದಲ್ಲಿ, ಅ- ಧಾರಣವಾದ ಭಕ್ತಿಯನ್ನಿಟ್ಟು ಲೋಕೋದ್ಧಾರಕವಾ- ಕಾರ್ಯವನ್ನು ಕೈಗೊಂಡಿರುವದನ್ನು ನೋಡಿದ- ಪರಮಾನಂದವೆನಿಸುತ್ತದೆ ಶ್ರೀಜಗದ್ಗುರು ಸಿದ್ಧಲಿಂ- ಶನ ಅದ್ಭುತಲೀಲೆಗಳು ಸಕಲರಿಗೂ ನಾಟಕರೂಪವಾ- ತಿಳಿಯಲೆಂಬ ಸದುದ್ದೇಶದಿಂದ ವೇ|| ಚನ್ನಬಸವಶಾ- ಗಳು ವಿಶೇಷ ದ್ರವ್ಯವನ್ನು ವ್ಯಯಮಾಡಿ ಇದಕ್ಕೋಸ್ಕರ ಅತ್ಯುತ್ತಮವಾಗಿ ಅಭಿನಯಿಸುವ ಪಾತ್ರಧಾರಿಗಳನ್ನು ಈ ನಾಟಕದಲ್ಲಿ ಸಂಯೋಜಿಸಿರುವದರಿಂದ ನಾಟಕ- ಸರ್ವಾಂಗಸುಂದರವಾಗಿರುವದೆಂದು ಹೇಳಿದರೆ ಅ- ಯೋಕ್ತಿಯೆನಿಸಲಾರದು ಆದುದರಿಂದ ವೀರಶೈ- ಸಮಾಜದವರೆಲ್ಲರೂ ಈ ಗುರುಚಕ್ರವರ್ತಿಯ ನಾಟ- ವನ್ನು ಅವಶ್ಯವಾಗಿ ನೋಡಬೇಕೆಂದೂ, ತಮ್ಮ- ನಾಟಕ ಕಂಪೆನಿಯ ಅಧ್ಯಕ್ಷರಿಗೂ ನಾಟಕವನ್ನು - ವರಿಗೂ ಪ್ರೋತ್ಸಾಹವನ್ನೀಯಬೇಕೆಂದೂ, ಇ- ಕೈಕೊಂಡಿರುವ ಕಾರ್ಯಕ್ಕೆ ಶ್ರೀಜಗದಾಚಾರ್ಯರು ಉ- ರೋತ್ತರ ಶ್ರೇಯೋಭಿವೃದ್ಧಿಯನ್ನುಂಟು ಮಾಡಲೆಂದು ಹಾರೈಸುತ್ತೇವೆ

೧೦೧೧ ಎತ್ತುಗಳನ್ನು ಹೂಡಿದ ಪಂಚರಥಗಳಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಪಂಚಲಿಂಗೋದ್ಭವ ಮೂರ್ತಿಗಳ ಮಹೋತ್ಸವ.

ಈ ಮೊದಲು ನಮ್ಮ ಪತ್ರಿಕೆಯಲ್ಲಿ ಪ್ರಕಟವಾದಂತೆ ಮೇಲ್ಕಂಡ ಮಹೋತ್ಸವವು ಕಳೆದ ಸೋಮವಾರ ದಿವಸ ೧೦೧೧ ಎತ್ತುಗಳನ್ನು ಹೂಡಿದ ಪಂಚರಥಗಳಲ್ಲಿ ಲಕ್ಷಾಂತರ ಜನಗಳಿಂದೊಡಗೂಡಿ ಲಕ್ಷ್ಮೇಶ್ವರದಿಂದ ಮುಕ್ತಿಮಂದಿರದವರೆಗೆ ೭ ಮೈಲು ದೂರ ಅಭೂತಪೂರ್ವವೈಭವದೊಡನೆ ನೆರವೇರಿತು ಈ ಮಹೋತ್ಸವದಲ್ಲಿ ಭಾಗಿಗಳಾದವರೆಲ್ಲರಿಗೂ ಶ್ರೀಜಗದಾಚಾರ್ಯರು ಮಂಗಳವನ್ನೀಯಲಿ

ವರ್ತಮಾನಸಂಗ್ರಹ

ಬಂಗಾಳ ಪ್ರಾ|| ಹಿಂದೂಮಹಾ ಸಭೆಯ ನಿರ್ಣಯಗಳು

ಬಂಗಾಳ ಪ್ರಾಂತೀಯ ಹಿಂದೂ ಮಹಾಸಭೆಯ ಕಾರ್ಯಕಾರೀ ಸಮಿತಿಯು ಕಲ್ಕತ್ತೆಯಲ್ಲಿ ಸೇರಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ನಿರ್ಣಯ ಮಾಡಿತು. ನಿರ್ಣಯದ ವಿವರಗಳು ಈರೀತಿ ಇವೆ

"ಬಂಗಾಳ ಪ್ರಾಂತೀಯ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯು ಈಗಿನ ರಾಜಕೀಯ ಪರಿಸ್ಥಿತಿಯನ್ನೂ ಅಖಿಲ ಭಾರತ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯು ರಾಜ್ಯಾಂಗ ರಚನಾ ಸಭೆಗೆ ಬಹಿಷ್ಕಾರ ಹಾಕಿರುವುದನ್ನೂ ಪರಿಶೀಲಿಸಿದೆ. ಬಂಗಾಳದ ಹಿಂದುಗಳಿಗೆ ಒಂದು ಪ್ರತ್ಯೇಕ ಪ್ರಾಂತವನ್ನು ರಚಿಸುವ ಸಾಧಕ ಬಾಧಕಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನಿಯಮಿಸಿದೆ. ಬಂಗಾಳ ಹಿಂದೂಗಳ ಹಿತಗಳನ್ನು ಕಾಪಾಡಲು ಅವಶ್ಯಕವಾದ ರಾಜಕೀಯ ಭದ್ರತೆಗಳನ್ನು

ತೀಲಿಸಿ ರಾಜ್ಯಾಂಗ ರಚನಾ ಸಭೆಯು ಮುಂದಿಡಲು ದು ಸಮಿತಿ ನೇಮಕವಾಗಿದೆ

ಬಂಗಾಳ ಲೀಗ್ ಮಂತ್ರಿಮಂಡಲವು ಪಶ್ಚಿಮ ಬಂಗಾಳದಲ್ಲಿ ೧೫೦೦೦೦ ಬಿಹಾರಿನ ಮುಸ್ಲಿಮರಿಗೆ ಆಶ್ರಯ ಕೊಟ್ಟು ಪಶ್ಚಿಮ ಬಂಗಾಳವನ್ನು ಮುಸ್ಲಿಂ ಬಹುಸಂಖ್ಯಾತ ಪ್ರದೇಶವನ್ನಾಗಿ ಪರಿವರ್ತಿಸುತ್ತಿರುವ ಪ್ರಯತ್ನವನ್ನು ಖಂಡಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು ಮುಸ್ಲಿಂ ಲೀಗ್ ಮಂತ್ರಿ ಮಂಡಲದ ಈ ವರ್ತನೆಯಿಂದ ಹಿಂದೂ ... ಮುಸ್ಲಿಮೇತರರನ್ನು ಬಂಗಾಳದಲ್ಲಿ ನೆಲಸುವಂತೆ ಮಾಡಬೇಕಾಗುತ್ತದೆಂದು ನಿರ್ಣಯದಲ್ಲಿ ಹೇಳಿದೆ

ಬರೋಡವು ಸಂಸ್ಥಾನಗಳ ಸಂಧಾನ ಸಮಿತಿಯಲ್ಲಿ ಭಾಗ ವಹಿಸುವುದಿಲ್ಲ

ಬರೋಡದ ದಿವಾನರಾದ ಸರ್ ಬ್ರಜೇಂದ್ರಲಾಲ ಮಿತ್ತರ್‌ರವರಿಗೆ ಸಂಸ್ಥಾನಗಳ ಸಮಿತಿಯಲ್ಲಿ ಭಾಗವಹಿಸಬೇಕೆಂದು ಬಂದಿದ್ದ ಆಹ್ವಾನಕ್ಕೆ ಗಾಯಕವಾಡರು ತಮ್ಮ ಅಂಗೀಕಾರವನ್ನು ನಿರಾಕರಿಸಿದರು ಬರೋಡ ಸಂಸ್ಥಾನವು ಬ್ರಿಟಿಷ್ ಸಮಿತಿಯೊಡನೆ ಪ್ರತ್ಯೇಕವಾಗಿ ಸಂಧಿಸುವುದಾಗಿ ತಿಳಿದುಬಂದಿದೆ ಇದಕ್ಕಾಗಿ ಸರ್ ಬ್ರಜೇಂದ್ರಮಿತ್ತರ್‌ರವರು ಈ ವಾರದಲ್ಲಿ ದೆಹಲಿಗೆ ಹೋಗುವರೆಂದು ಗೊತ್ತಾಗಿದೆ

ಮುಸ್ಲಿಮರಲ್ಲಿ ಷಿಯಾ-ಸುನ್ನಿಗಳ ಹೊಡೆದಾಟ

ಲಕ್ನೋದಲ್ಲಿ ಮುಸ್ಲಿಮರ ಷಿಯಾ ಮತ್ತು ಸುನ್ನಿ ಪಂಗಡಗಳಲ್ಲಿ ಹೊಡೆದಾಟವಾಗಿ ಕೆಲವರಿಗೆ ಗಾಯವಾಗಿವೆ ಈ ಸಂಬಂಧದಲ್ಲಿ ೬೫೦ ಜನರ ದಸ್ತಗಿರಿಯಾಗಿದ ಮಾಧೆ ತಹಬಾದ್ ಮೇಲಿನ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ಸುನ್ನಿಗಳು ಮೆರವಣಿಗೆ ನಡೆಸಿದ್ದರಿಂದ ಈ ಘರ್ಷಣೆಯುಂಟಾಯಿತು ಮೆರವಣಿಗೆಯಲ್ಲಿ ಕೆಲವರ ಬಳಿ ಚೂರಿಗಳಿದ್ದವೆಂದು ಹೇಳಲಾಗಿದೆ

ಬೆಂಕಿ ಅನಾಹುತ

ಶಾಂಘಾಯಿನಿಂದ ಕ್ಯಾಂಟನ್ನಿಗೆ ಹೊರಡಬೇಕೆಂದಿದ್ದ ಹಡಗಿಗೆ ಆಕಸ್ಮಾತ್ತಾಗಿ ಬೆಂಕಿಹತ್ತಿ ಅದರಲ್ಲಿದ್ದ ಪೆಟ್ರೋಲಿಗೂ ಬೆಂಕಿ ಬಿದ್ದು ಸ್ಫೋಟನವಾಗಿ ೧೯೫೦೦ ಟನ್ ತೂಕವುಳ್ಳ ಹಡಗು ನಾಲ್ಕುಗಂಟೆಕಾಲ ಉರಿದು ಮುಳುಗಿತು ಅನೇಕ ಪ್ರಯಾಣಿಕರನ್ನು ತಕ್ಷಣ ದಡಕ್ಕೆ ಕರೆದೊಯ್ಯಲಾಯಿತು ಆದರೆ ಒಟ್ಟು ಎಷ್ಟು ಜನರು ಸತ್ತಿರುವರೆಂದು ಗೊತ್ತಾಗಿಲ್ಲ ಇದುವರೆಗೆ ನೀರಿನಲ್ಲಿ ೧೭೧ ಹೆಣಗಳು ಸಿಕ್ಕಿವೆ ಇನ್ನೂ ಸಿಕ್ಕುತ್ತಲಿವೆಯಂತೆ

ಎಕ್ಸ್‌ಛೇಂಜ್ ಕಂಟ್ರೋಲ್ ಬಗ್ಗೆ ಲಾರ್ಡ್ಸ್ ಸಭೆಯಲ್ಲಿ ಚರ್ಚೆ

ಲಾರ್ಡ್ಸ್ ಸಭೆಯಲ್ಲಿ ಎಕ್ಸ್‌ಛೇಂಜ್ ಕಂಟ್ರೋಲ್ ಮಸೂದೆಯ ಮೇಲೆ ನಡೆದ ಚರ್ಚೆಯಲ್ಲಿ ಮಾತನಾಡುತ್ತಾ ಲಾರ್ಡ್ ಪೆಥಿಕ್ ಲಾರೆನ್ಸ್‌ರವರು ಬ್ರಿಟನ್ನಿನ ಆರ್ಥಿಕ ಪರಿಸ್ಥಿತಿಯ ವಿವರಣೆ ಇತ್ತರು ಭಾರತವು ಶತ್ರುಗಳ ಘೋರ ಹಾವಳಿಗೆ ಸಿಕ್ಕುವುದನ್ನು ಅಪಾರ ದ್ರವ್ಯ ವೆಚ್ಚಮಾಡಿ ತಪ್ಪಿಸಿದ್ದೇವೆಂದು ಹೇಳಿದರು

ಪ್ರಶ್ನೋತ್ತರಗಳ ಕಾಲದಲ್ಲಿ ಪ್ರತಿಪಕ್ಷ ನಾಯಕರಾದ ಮಿ|| ಚರ್ಚಿಲ್‌ರವರು ಭಾರತದ ಸ್ಟರ್ಲಿಂಗ್ ನಿಧಿಯ ವಿಚಾರವೆತ್ತಿ ಹಿಂದಿನ ಟೋರಿ ಸರ್ಕಾರವು ಭಾರತವನ್ನು ಶತ್ರುಗಳಿಂದ ಸಂರಕ್ಷಿಸಿದುದಕ್ಕಾಗಿ ತಮ್ಮ ಬೇಡಿಕೆಯನ್ನು ಭಾರತದ ಸರ್ಕಾರದ ಮುಂದಿಡುವುದಾಗಿ ಆಗ ಭಾರತದಲ್ಲಿದ್ದ ಗವರ್ನರ್ ಜನರಲ್‌ರವರಿಗೆ ತಿಳಿಸಿದ್ದಿತೆಂದು ಹೇಳಿದರು ಮಿ|| ಹ್ಯೂ ಡಾಲ್ಟನ್‌ರವರು ಪ್ರಶ್ನೆಗೆ ಉತ್ತರ ಕೊಡುತ್ತಾ ಈ ಪ್ರಶ್ನೆಯು ಮಿ|| ಚರ್ಚಿಲ್ಲರು ಮುಖ್ಯ ಮಂತ್ರಿಗಳಾಗಿದ್ದ ಕಾಲಕ್ಕೆ ಸಂಬಂಧಪಟ್ಟುದರಿಂದ ತಾವು ಚರ್ಚಿಲ್‌ರವರ ಅಭಿಮತವನ್ನು ತಿರಸ್ಕರಿಸುವುದಿಲ್ಲವೆಂದು ಹೇಳಿದರು. ಮಿ|| ಚರ್ಚಿಲ್‌ರವರು ಮುಂದುವರಿದು ಮಾತನಾಡುತ್ತಾ ಬ್ರಿಟನ್ ಅಮೇರಿಕಾದಿಂದ ಅಪಾರ ಸಹಾಯಕಾಂಕ್ಷೆಗಳನ್ನು ಪಡೆದಿರುವಾಗ ಭಾರತೀಯರಿಗೆ ತೆರಬೇಕಾದ ಸಾಲದ ಕಡೆ ಗಮನ ಕೊಡುವುದು ಹೇಗೆ? ಎಂದು ಪ್ರಶ್ನಿಸಿದರು ಮಿ|| ಡಾಲ್ಟನ್‌ರವರು ಭಾರತದಲ್ಲಿ ಈಗ ನಡೆಯುತ್ತಿರುವ ಪೂರ್ವಭಾವಿ ಮಾತುಕತೆಗಳು ಮುಗಿಯುವವರೆಗೂ ಕಾದು ನೋಡುವುದಾಗಿ ಹೇಳಿದರು

ಲಂಡನ್ನಿನ ಮೋಟಾರು ಕಾರ್ಖಾನೆಗಳು ಮುಚ್ಚಿದವು

ಇಂಗ್ಲೆಂಡಿನಲ್ಲಿ ಕಲ್ಲಿದ್ದಲಿನ ಅಭಾವ ಜಾಸ್ತಿಯಾಗಿರುವುದರಿಂದ ಬರ್ಮಿಂಗ್ಹಾಮಿನ ಜಗತ್ಪ್ರಸಿದ್ಧವಾದ ಆಸ್ಟಿನ್ ಮೋಟಾರು ಕಾರ್ಖಾನೆಯನ್ನು ಮುಚ್ಚಿದ್ದಾರೆ ಇದರಂತೆ ಡನ್‌ಲಪ್ ಟೈರ್ ಕಂಪೆನಿ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರಿಯವರ ಲೋಹಶಾಲೆಗಳು ಮುಚ್ಚಲ್ಪಟ್ಟಿವೆ ರೋಲ್ಸ್‌ರಾಯಸ್ ಮೋಟಾರು ಕಾರ್ಖಾನೆಯು ಒಂದು ವಾರಕ್ಕೆ ನಾಲ್ಕು ದಿನ ಮಾತ್ರ ಕೆಲಸ ಮಾಡುತ್ತಿದೆ. ಈ ವಿಚಾರವನ್ನು ಕುರಿತು ಬ್ರಿಟಿಷ್ ಮಂತ್ರಿಮಂಡಲದ ಸಭೆಯಲ್ಲಿ ಕಲ್ಲಿದ್ದಲಿನ ಪರಿಸ್ಥಿತಿ ವಿಷಯವಾಗಿ ದೀರ್ಘ ಚರ್ಚೆ ನಡೆಯಿತು

ತೆಂಗಿನಕಾಯಿ ಮತ್ತು ಕೊಬ್ಬರಿಗಳ ಬೆಲೆ ಹತೋಟಿ

ತೆಂಗಿನಕಾಯಿ, ಕೊಬ್ಬರಿ, ಮತ್ತು ಕೊಬ್ಬರಿ ಎಣ್ಣೆ ಇವುಗಳ ಬೆಲೆ ಮತ್ತು ಅವುದು ರಫ್ತುಗಳ ಹತೋಟಿಯ ವಿಚಾರದಲ್ಲಿ ಮದರಾಸ್ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿರುತ್ತಾರೆ ಅದರ ಸಾರಾಂಶ ಹೀಗಿದೆ ಮದ್ರಾಸ್ ಮತ್ತು ಕೊಚಿನ್ ಪ್ರಾಂತಗಳಲ್ಲಿ ಕೊಬ್ಬರಿಯ ಪರಮಾವಧಿ ಬೆಲೆ ೯೩-೦ ರೂ ಮತ್ತು ೧೪೫-೭ ರೂ ಗಳೂ ಕೊಬ್ಬರಿ ಎಣ್ಣೆಯ ಬೆಲೆ ೭೩ ಮತ್ತು ೧೩೯-೦ ರೂಗಳೂ ಇರಬೇಕೆಂದು ಕೇಂದ್ರ ಸರ್ಕಾರದವರು ನಿರ್ಧರಿಸಿದ್ದಾರೆ ಈ ಆಧಾರದ ಮೇಲೆ ಮದ್ರಾಸ್ ಸರ್ಕಾರದವರ ಈ ಪದಾರ್ಥಗಳ ಹೋಲ್‌ಸೇಲ್ ಮತ್ತು ರೀಟೇಲ್ ಬೆಲೆಗಳನ್ನು ಈರೀತಿ ವಿಧಿಸಿದ್ದಾರೆ ತೆಂಗಿನಕಾಯಿ ಇವರಕ್ಕೆ ಮಲಬಾರ್ ಮತ್ತು ದ ಕನ್ನಡ ಜಿಲ್ಲೆಗಳಲ್ಲಿ ೧೩೫ ಒಂದಕ್ಕೆ ಎರಡೂ ಕಾಲಾಣೆ ಇತರ ಜಿಲ್ಲೆಗಳಲ್ಲಿ ೧೬೦ ರೂ ಒಂದಕ್ಕೆ ಮೂರಾಣೆ ಕೊಬ್ಬರಿ-ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದೊಡ್ಡ ಮಣ ರೂ ೩೨೭೬ ೧೨೦ ತೊಲದ ವೀಸೆಗೆ ರೂ ೭ ೧ ಇತರ ಜಿಲ್ಲೆಗಳಲ್ಲಿ ರೂ ೩೪-೬-೨, ೧-೬ ೯

ಕೊಬ್ಬರಿ ಎಣ್ಣೆ—ಮಲಬಾರ್ ಮತ್ತು ದ ಕನ್ನಡ ಜಿಲ್ಲೆಗಳಲ್ಲಿ ೩೫ ಪೌಂಡಿನ ಟಿನ್ನಿನ ಟಿನ್ ಸಹಿತ ೩೯-೮-೦ ೭೨೦ ತೊಲದ ವೀಸೆಗೆ ೩-೩-೩ ರೂ ಇತರ ಜಿಲ್ಲೆಗಳಲ್ಲಿ ರೂ ೨೬-೨-೩ ೨ ೭ ೦

ಮೇಲ್ಕಂಡ ದರಗಳಲ್ಲಿ ಮಾರಾಟದ ತೆರಿಗೆ ಸೇರಿಸಿಲ್ಲ ಡಿಸ್ಟ್ರಿಕ್ಟಿನಿಂದ ಡಿಸ್ಟ್ರಿಕ್ಟಿಗೂ ಪ್ರಾಂತದಿಂದ ಹೊರಕ್ಕೂ ಈ ಪದಾರ್ಥಗಳನ್ನು ರಫ್ತು ಮಾಡಬೇಕಾದರೆ ಡಿಸ್ಟ್ರಿಕ್ಟಿನ ಕಲೆಕ್ಟರಿಂದ ಅಥವಾ ಸಿವಿಲ್ ಸಪ್ಲೈಸ್ ಕಮೀಷನರಿಂದ ಪರ್ಮಿಟ್‌ಗಳನ್ನು ಹೊಂದಬೇಕು ಸೋಪು, ಹೇರ್ ಆಯಿಲ್, ಮತ್ತು ಇತರ ಕೈಗಾರಿಕೆಗಳಿಗಾಗಿ ಕೊಬ್ಬರಿ ಎಣ್ಣೆ ಬೇಕಾದರೆ ಮಲಬಾರಿನ ಕಲೆಕ್ಟರಿಗೂ ಅಥವಾ ಜಿಲ್ಲೆಯ ಕೈಗಾರಿಕೆ ಆಫೀಸರಿಗೂ ಅರ್ಜಿ ಹಾಕಿಕೊಳ್ಳಬೇಕು

ಬಟ್ಟೆಯ ಹಂಚಿಕೆ ಮತ್ತು ಪ್ರಮಾಣದ ವಿಷಯ

ಸಿವಿಲ್ ಸಪ್ಲೈಸ್ ಕಂಟ್ರೋಲರು ಪತ್ರಿಕಾ ಪ್ರತಿನಿಧಿಗಳ ಸಭೆಯನ್ನು ಏರ್ಪಡಿಸಿ ಬಟ್ಟೆಯ ಪ್ರಮಾಣ ಮತ್ತು ಹಂಚಿಕೆಯ ವಿಷಯ ರೀಟೇಲ್ ಕ್ಲಾತ್ ಮರ್ಚೆಂಟ್ಸ್ ಅಸೋಸಿಯೇಷನ್‌ರವರ ಅಭಿಪ್ರಾಯಗಳಿಗೆ ಉತ್ತರವಾಗಿ ಕೆಲವು ವಿವರಣೆಗಳನ್ನು ಕೊಟ್ಟರು ೧೯೪೩ರಲ್ಲಿ ಬಟ್ಟೆಯ ಕೂಪನ್ನುಗಳನ್ನು ಮೊದಲು ಕೊಟ್ಟಾಗ ಪ್ರತಿಯೊಬ್ಬರಿಗೂ ೧೬ಗಜ ಬಟ್ಟೆಯನ್ನು ಹಂಚಬೇಕೆಂದಿದ್ದರೂ ಕಾರಣಾಂತರದಿಂದ ಸಾಧ್ಯವಾಗಲಿಲ್ಲವೆಂದು ತಿಳಿಸಿದರು ಈಗ ಬಟ್ಟೆಯ ಪ್ರಮಾಣವನ್ನು ಕಡಿಮೆ ಮಾಡಲಿಕ್ಕೆ ಮುಖ್ಯಕಾರಣಗಳನ್ನು ತಿಳಿಸಿದರು ಮೊದಲನೆಯದಾಗಿ ಸರ್ಕಾರದವರ ಕೋಟಗಳಲ್ಲದೆ ಕೆಲವು ಮಿಲ್ ಏಜಂಟರುಗಳು ತಮಗೆ ಸಲ್ಲತಕ್ಕ ಕೋಟಗಳನ್ನು ಇಲ್ಲಿಗೆ ತರಿಸಿ ಮಾಡುತ್ತಿದ್ದರು ಇದರಿಂದ ಕಳೆದ ಒಂದೆರಡು ವರ್ಷಗಳಲ್ಲಿ ಮಿಲ್ ಬಟ್ಟೆಯು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿತ್ತು ಈಗ ಕೇಂದ್ರ ಸಮಿತಿಯವರು ನಮ್ಮ ಸರ್ಕಾರಕ್ಕೆ ಸಲ್ಲತಕ್ಕ ಕೋಟಿ ಹೊರತು ಬೇರೆ ಮಿಲ್ ಕೋಟಗಳನ್ನು ಇಲ್ಲಿ ಮಾರಾಟಮಾಡಬಾರದೆಂದು ನಿಯಮಿಸಿರುವುದರಿಂದ ಮಿಲ್ ಬಟ್ಟೆಯ ಸರಬರಾಜು ನಮಗೆ ಕಡಿಮೆಯಾಗಿದೆ ಎರಡನೆಯದಾಗಿ ಈಗಿನ ಪರಿಸ್ಥಿತಿಯಲ್ಲಿ ಭಾರತದಲ್ಲಿ ಪ್ರತಿಯೊಬ್ಬರಿಗೂ ೧೦ ಗಜ ಮಿಲ್ ಬಟ್ಟೆಯು ದೊರೆಯುವುದಾದರು ಮುಂಬಾಯಿ, ಸಿಂಧ್ ಅಸ್ಸಾಂವ್ ಮುಂತಾದ ಪ್ರಾಂತಗಳಿಗೆ ಅಲ್ಲಿನ ಪರಿಸ್ಥಿತಿಗನುಸಾರವಾಗಿ ಹೆಚ್ಚು ಪ್ರಮಾಣದಲ್ಲಿ ಬಟ್ಟೆಯನ್ನು ಹಂಚಿರುವುದರಿಂದ ನಮಗೆ ದೊರೆತಿರುವ ಮಿಲ್ ಬಟ್ಟೆಯ ಕೋಟ ಪ್ರಕಾರ ಪ್ರತಿಯೊಬ್ಬನಿಗೂ ಐದು ಗಜ ಮಾತ್ರ ದೊರೆಯುತ್ತದೆ ಬಟ್ಟೆಯ ಪ್ರಮಾಣದಲ್ಲೂ ಹಂಚಿಕೆಯ ವಿಷಯದಲ್ಲೂ ಗ್ರಾಮಸ್ಥರಿಗೂ, ಪಟ್ಟಣಿಗರಿಗೂ ವ್ಯತ್ಯಾಸಮಾಡುವ ಅಭಿಪ್ರಾಯ ಅವರಿಗಿಲ್ಲವೆಂದು ತಿಳಿಸಿದರು ಮಿಲ್ ಬಟ್ಟೆಯ ಪರಿಸ್ಥಿತಿಯನ್ನು ಸಾಧ್ಯವಾದಷ್ಟು ಉತ್ತಮಗೊಳಿಸಲು ಪ್ರಯತ್ನಪಡುತ್ತಿರುವುದಾಗಿ ತಿಳಿಸಿ ಸಭೆಯನ್ನು ಮುಕ್ತಾಯಮಾಡಿದರು

ದಿವಾನರ ಕಾರ್ಯಕ್ರಮ

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರು ೧೨ನೇ ತಾರೀಖು ದೆಹಲಿಯಿಂದ ವಾಪಸ್ಸು ಬರುವುದು ಸರಿಯಷ್ಟೆ ಅವರು ೧೩ನೇ ತಾರೀಖು ಅಠಾರ ಕಛೇರಿಯಲ್ಲಿ ನಡೆಯುವ ಮಂತ್ರಿ ಮಂಡಲದ ಸಭೆಯಲ್ಲಿ ಅಧ್ಯಕ್ಷತೆ ವಹಿಸುವರು ೧೪ನೇ ತಾರೀಖು ಪ್ರಾತಃಕಾಲ ಮೋಟಾರಿನಲ್ಲಿ ಮಾಲೂರಿಗೆ ದಯಮಾಡಿಸಿ (ಕೋಲಾರ ಜಿಲ್ಲೆ) ಇಶಾನ್ ಟೈಲ್ಸ್ ಕಾರ್ಖಾನೆಯ ಶಂಖುಸ್ಥಾಪನೆ ಮಾಡಿ, ಹಾಗೂ ಅಲ್ಲಿ ಏರ್ಪಡಿಸಿರುವ ರೈತರ ಸಮ್ಮೇಳನದ ಪ್ರಾರಂಭೋತ್ಸವ ನಡೆಸಿ ಅದೇ ಸಂಜೆ ಬೆಂಗಳೂರಿಗೆ ವಾಪಸ್ಸು ಬರುವರು, ೧೫ ನೇ ತಾರೀಖು ರಾಜಧಾನಿಗೆ ಪ್ರಯಾಣ ಮಾಡುವರೆಂದೂ, ೧೭ನೇ ತಾರೀಖು ವಾಪಸು ಬಂದು ೨೭ನೇ ತಾರೀಖು ಅಮೆರಿಕಕ್ಕೆ ಹೊರಡುವರೆಂದೂ ಹೇಳಲಾಗಿದೆ.

ತಾತಾ ವಿಜ್ಞಾನ ಸಂಸ್ಥೆಯ ಗೌವರ್ನಿಂಗ್ ಕೌನ್ಸಿಲ್

ತಾತಾ ವಿಜ್ಞಾನ ಸಂಸ್ಥೆಯ ಗವರ್ನಿಂಗ್ ಕೌನ್ಸಿಲ್ ಸಭೆಯು ಸದರಿ ಕೌನ್ಸಿಲ್‌ನ ಅಧ್ಯಕ್ಷರಾದ ಬ್ರಿಟಿಷ್ ರೆಸಿಡೆಂಟ್ ಸರ್ ವಾಲ್ಟರ್ ಕ್ಯಾಂಪೆಲ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಕೇಂದ್ರ ಸರ್ಕಾರವು ತಾತಾ ವಿಜ್ಞಾನ ಸಂಸ್ಥೆಯಲ್ಲಿ ಅರ್ಥ ಮತ್ತು ಸಮಾಜ ಶಾಸ್ತ್ರದ ಭಾಗವೊಂದನ್ನು ಸ್ಥಾಪಿಸುವುದಕ್ಕಾಗಿ ೭೧,೦೦೦ ರೂ. ಮೂಲಖರ್ಚನ್ನೂ ೬೦,೦೦೦ ರೂ ಗಳ ರಿಕರಿಂಗ್ ಖರ್ಚನ್ನೂ ಮಂಜೂರ್ಮಾಡಿದ್ದಕ್ಕಾಗಿ ಆ ಸರ್ಕಾರವನ್ನು ವಂದಿಸಿ ಸಭೆಯಲ್ಲಿ ಠರಾವು ಮಾಡಲ್ಪಟ್ಟಿತು ಮತ್ತು ತಾತಾ ಸಂಸ್ಥೆಯ ಪವರ್ ಎಂಜನೀರಿಂಗ್ ಇಲಾಖೆಗೆ ಮುಖ್ಯಾಧಿಕಾರಿಗಳೊಬ್ಬರನ್ನು ನೇಮಿಸಬೇಕೆಂದು ವೈಸ್ರಾಯರಿಗೆ ಶಿಫಾರಸುಮಾಡಲ್ಪಟ್ಟಿತು

ಆಪಾದಿತರ ಖುಲಾಸೆ

ಹೊಳೇನರಸೀಪುರದ ಟ್ರೆಜರಿಯಲ್ಲಿ ಹಣ ಖಯಾಖತಿ ಆದ ಸಂಬಂಧದಲ್ಲಿ ಬಂದಿದ್ದ ಅಪೀಲಿನಲ್ಲಿ ಆಪಾದಿತರಾಗಿದ್ದ ಟ್ರೆಜರಿ ಸರಾಫ್ ಶ್ರೀ ಪಾರ್ಶ್ವನಾಥ್ ಮತ್ತು ಶಿರಸ್ತೇದಾರ್ ಶ್ರೀ ಶೇಷಾದ್ರಿಐಯ್ಯಂಗಾರ್‌ರವರನ್ನು ನಿನ್ನೆ ಮೈಸೂರು ಸೆಷನ್ಸ್‌ಜಡ್ಜರಾದ ಶ್ರೀ ಬಿ ಆರ್ ರಾಮಲಿಂಗಯ್ಯನವರು ಖುಲಾಸೆಮಾಡಿದರು ಮದ್ರಾಸಿನ ಶ್ರೀ ವಿ ವಿ ಶ್ರೀನಿವಾಸ ಐಯ್ಯಂಗಾರ್‌ರವರು ಆಪಾದಿತರ ಪರ ವಕಾಲತ್ತು ವಹಿಸಿದ್ದರು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣಸಮಾನವಾದುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಆಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **ಶಿಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಈ ದಿನದವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಒದಗಿಸಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ತಾನೇ ಗೋಚರವಾಗುವುದು. ಪಂಡಿತರ ಅನುಕೂಲಕ್ಕಾಗಿ ಒಂದು ಕ್ರಮವನ್ನಿಟ್ಟು ಬರೆದಿರುವ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೦ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಪೂರ್ವ ಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಸಂಪೂರ್ಣ ಚರಿತ್ರೆಯ ಚಿತ್ರಗಳಿಂದ ಕೂಡಿದ ಫೋಟೋ ಸೈಜು ೩೦×೧೪ ಬೆಲೆ ಒಂದಕ್ಕೆ	೦—೬—
ಶ್ರೀರೇಣುಕಾ ಕಾಶ್ಯಪರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—
ಕಲ್ಯಾಣ ಪಟ್ಟಣದಲ್ಲಿ ವೀರಶೈವ ಶರಣರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವದ ಫೋಟೋ ಸೈಜು ೧೪×೧೦ ಬೆಲೆ ಒಂದಕ್ಕೆ	೦—೩—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಂದಕ್ಕೆ	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಂದಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಂದಕ್ಕೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ಒಂದಕ್ಕೆ	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಸರ್ಜನ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಸುಪ್ರಭಾತಸ್ತೋತ್ರಾವಳಿ (ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಚರಿತ್ರೆ (ನೆಯ ಆವೃತ್ತಿ)	೨ ಆಣೆ
ಬಸವಾದಿಸಿದ್ಧಪತ್ರ ದರ್ಪಣ (ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಚರಿತೆ (ನೆಯ ಆವೃತ್ತಿ)	೨ ಆಣೆ
ಶ್ರೀಗುರು ಪತ್ರಿಕಾ (ನೆಯ ಆವೃತ್ತಿ)	೨ ಆಣೆ
ಶ್ರೀರುದ್ರ ಪ್ರಶ್ನೋತ್ತರ ರತ್ನಾಕರ	೨ ಆಣೆ
ಶಿವಭಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರನಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪಾಸನಾಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಸರ್ಜನತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಸಾರಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಧರ್ಮರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಪ್ರದೋಷಶಿವಪೂಜಾವಿಧಿ (ವೈದಿಕ ಮಂತ್ರಸಹಿತ ನೆಯ ಆವೃತ್ತಿ)	೧| ರೂ.
ಶ್ರೀಕರಭಾಷ್ಯಂ (ತೆಲುಗು)	೧|| ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ.
ವೀರಶೈವ ಪರತತ್ತ್ವ (೩ನೆಯ ಆವೃತ್ತಿ ೪೦ ಹಸ್ತದ ಫೋಟೋಗಳಿರುವದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*)	8 As.
Speeches by Pandit Shri Kashinatha Shastriji (*English*)	12 As.
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ಕಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ನೇ ಫೆಬ್ರವರಿ ೧೯೪೭ [ಸಂಚಿಕೆ ೪೩

ಧನದ ವಿನಿಯೋಗ

ಲೇ—ಶ್ರೀಪಟ್ಟದಸ್ವಾಮಿಗಳು ಹಿರೇಪುರ, ಕೊಣ್ಣೂರು

ಧನವು ಗೋಪಾಲನಿಂದ ಭೂಪಾಲನವರೆಗೂ, ಭೋಗಿಯಿಂದ ಯೋಗಿಯವರೆಗೂ ಬೇಕೇಬೇಕು ಲೌಕಿಕಕಾರ್ಯಕ್ಕೂ, ಪಾರಮಾರ್ಥಿಕಕಾರ್ಯಕ್ಕೂ ಧನವು ಅವಶ್ಯ ಬೇಕು ಧನದಿಂದಲೇ ಸರ್ವ ಕೆಲಸಗಳು ಸಾಧ್ಯವಾಗುತ್ತವೆ ಧನವೊಂದಿಲ್ಲದಿದ್ದರೆ ಯಾವ ಕಾರ್ಯಗಳೂ ಸರಿಯಾಗಿ ನಡೆಯಲಾರವು ಇಂಥ ಧನವನ್ನು ದೇಹ ದಂಡನಮಾಡಿ ಪ್ರಾಮಾಣಿಕತನದಿಂದ ಸಂಪಾದಿಸಬೇಕಲ್ಲದ ಅನ್ಯಾಯದಿಂದ ಗಳಿಸಬಾರದು ಪರರನ್ನು ಮೋಸಗೊಳಿಸಿ, ಗಳಿಸಿದ ಧನದಿಂದ ಸದ್ಯಃ ಸುಖವಾಗುವದೇ ಹೊರತು, ನಿರಂತರ ಸೌಖ್ಯವು ದೊರೆಯಲಾರದು ಸತ್ಪಾತ್ರ ಅದು ಸ್ಥಿರವಾಗಿಯೂ ಉಳಿಯಲಾರದು ಅಂಥ ಧನವನ್ನು ದಾನಮಾಡುವುದರಿಂದ ದಾತೃವಿಗೆ ಅದರ ಸತ್ಫಲವೂ ದೊರೆಯಲಾರದು

ನ್ಯಾಯಮಾರ್ಗದಿಂದಲೂ, ಪ್ರಾಮಾಣಿಕತನದಿಂದಲೂ, ಸಂಪಾದಿಸಿದ ಧನದಲ್ಲಿ ಒಂದು ಕಾಸನ್ನಾದರೂ, ದಾನ ಧರ್ಮ ಪರೋಪಕಾರವನ್ನು ಮಾಡದೆ ಪೈಗೆ ಪೈ ಕೂಡಿಸಿ, ನಮ್ಮ ಹೆಂಡರು ಮಕ್ಕಳಿಗಾಗಿ ಕೂಡಿಟ್ಟರೆ ಸಾರ್ಥಕವಾಗಲಿ, ಅಥವಾ ನಿರರ್ಥಕವಾಗಲಿ ಆಗಬಹುದು ಯಾಕಂದರೆ ನಾವಂತೂ ಇದರ ಪುಣ್ಯದ ಫಲವನ್ನು ತೆಗೆದುಕೊಂಡಿರುವದಿಲ್ಲ. ನಮ್ಮ ಮರಣವನಂತರ ಧನವು ಹೆಂಡರು ಮಕ್ಕಳ ಬಂಧುಬಾಂಧವರ ಕೈ ಸೇರುವದು ಅವರು ಸನ್ಮಾರ್ಗದರ್ಶಕರಾಗಿ ಆ ಧನವನ್ನು ಸರಿಯಾದ ಕಾರ್ಯಕ್ಕೆ ವಿನಿಯೋಗಮ್ಮಾಡಿದ್ದಾದರೆ, ನಾವು ಗಳಿಸಿಟ್ಟದ್ದಕ್ಕೂ ಸಾರ್ಥಕವಾಗುವದು ಹಾಗೆ ಮಾಡದೆ ವ್ಯಭಿಚಾರ ಮುಂತಾದ ದುಷ್ಟಕಾರ್ಯಗಳಿಗೆ ವಿನಿಯೋಗಮಾಡಿದ್ದಾದರೆ, ನಾವು ಗಳಿಸಿಟ್ಟದ್ದು ಅಸಾರ್ಥಕವಾಗುವದು

ನಾವು ನ್ಯಾಯಮಾರ್ಗದಿಂದ ಗಳಿಸಿದ ಹಣದಲ್ಲಿ ೪ ಆಣೆ ಭಾಗ ಹಣವನ್ನು ಸತ್ಪಾತ್ರಕ್ಕೆ ದಾನಮಾಡಿ, ಆತ್ಮೋದ್ಧಾರಮಾಡಿಕೊಂಡು ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು ಭಗವಂತನು ಭಕ್ತಿಯಿಂದ ಮಾಡಿದ ದಾನಕ್ಕೆ ಮೆಚ್ಚುವನಲ್ಲದೆ, ತಮ್ಮ ಮುಂದಿನ ಕಾರ್ಯ ಸಾಧನೆಗಾಗಿ ಅವರ ಪ್ರೇಮಸಂಪಾದಿಸಿಕೊಂಡು ಡಾಂಭಿಕತನದಿಂದ ಮಾಡಿದ ದಾನಕ್ಕೆ ಎಂದೂ ಮೆಚ್ಚುವದಿಲ್ಲ ಧನವನ್ನು ತನ್ನ ಶರೀರಸುಖಕ್ಕೂ ಸತ್ಕಾರ್ಯಕ್ಕೂ ವಿನಿಯೋಗ ಮಾಡಬೇಕೇ ಹೊರತು, ದುಷ್ಕಾರ್ಯಕ್ಕೂ ನಿರರ್ಥಕವಾದ ಕೆಲಸಕ್ಕೂ ವಿನಿಯೋಗಮಾಡಬಾರದು

> ಚತ್ವಾರಸ್ತ್ವರ್ಥದಾಯಾದಾ ಧರ್ಮರಾಜಾಗ್ನಿತಸ್ಕರಾಃ ।
> ಜ್ಯೇಷ್ಠಪುತ್ರಾವಮಾನೇನ ತ್ರಯಃ ಕುಪ್ಯಂತಿ ಸೋದರಾಃ ॥

ಅಂದರೆ ಧನಕ್ಕೆ ಧರ್ಮ, ರಾಜ, ಅಗ್ನಿ, ತಸ್ಕರ ಎಂಬ ನಾಲ್ಕು ಮಂದಿ ಅಣ್ಣತಮ್ಮಂದಿರುಂಟು. ಇವರಲ್ಲಿ ಧರ್ಮನೆಂಬ ಹಿರಿಯ ಅಣ್ಣನಿಗೆ ಅವಮಾನಮಾಡಿದರೆ ಉಳಿದ ಮೂರುಮಂದಿ ಅಣ್ಣತಮ್ಮಂದಿರು ಸಿಟ್ಟಾಗುವರು ರಾಜನು ಸಿಟ್ಟಾಗುವದರಿಂದ ಧನವು ರಾಜರ ಪಾಲಾಗುವದು ಅಗ್ನಿಯು ಸಿಟ್ಟಾಗುವದರಿಂದ ಧನವು ಬೆಂಕಿಯ ಪಾಲಾಗುವದು ಕಳ್ಳನು ಸಿಟ್ಟಾಗುವದರಿಂದ ಧನವು ಕಳ್ಳರ ಪಾಲಾಗುವದು

> ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ
> ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ ॥
> (ಭರ್ತೃಹರಿ)

ಅಂದರೆ ಹಣಕ್ಕೆ ದಾನ, ಭೋಗ ಮತ್ತು ನಾಶ ಎಂಬ ಮೂರು ಗತಿಗಳುಂಟು ಯಾವ ಮನುಷ್ಯನು ತನ್ನ ಕೈಯೆತ್ತಿ ಒಂದು ಕಾಸನ್ನಾದರೂ ಸತ್ಪಾತ್ರಕ್ಕೂ ಒಡಹುಟ್ಟಿದವರಿಗೂ ಕೊಡುವದಿಲ್ಲವೋ ಅಥವಾ ಯಾವನು ತನ್ನ ಹಣದಿಂದ ಸುಖವನ್ನಾದರೂ ಉಪಯೋಗಿಸುವದಿಲ್ಲವೋ ಅಂಥವನು ಕೂಡಿಸಿಟ್ಟ ಹಣಕ್ಕೆ ನಾಶದ ಹೊರತು ಬೇರೊಂದು ಗತಿಯಿಲ್ಲ ಲೋಭಿಯ ಹಣವು ಅಡವಿಯ ಪಾಲಾಗುತ್ತದೆಂಬ ಮಾತು ಎಂದೂ ಸುಳ್ಳಾಗಲಾರದು ಹುಲಿಯ ಉಗುರು, ಶೂರನ ಕೈಯಲ್ಲಿರತಕ್ಕ ಖಡ್ಗ ಇವುಗಳೆಲ್ಲಾ ಮರಣಾನಂತರ ಪರರ ಕೈಸೇರುವವಲ್ಲದೆ, ಜೀವಿತಕಾಲದಲ್ಲಿ ಎಂದೂ ಕೈ ಸೇರಲಾರವು ಇದರಂತೆ ಲೋಭಿಯ ಹಣವು ಅವನ ಮರಣದ ನಂತರ ಎರಡನೆಯವರ ಹಸ್ತಗತವಾಗುವದಲ್ಲದೆ, ಜೀವಿತಕಾಲದಲ್ಲಿ ಎಂದಿಗೂ ಆಗಲಾರದು ಲೋಭಿಯು ತಾನು ಗಳಿಸಿದ ಹಣದಿಂದ ಎಳ್ಳಷ್ಟಾದರೂ ಸುಖವನ್ನು ಹೊಂದುವದಿಲ್ಲ

> ಉಣ್ಣ ಕೊಟ್ಟವರೊಳಿದ್ದು ಉಣ್ಣದವು ಸೂಕರನಾಳ
> ಪುಣ್ಯವ ಮಾಡಿ ಉಣಕೊಲ್ಲವನೊರವು ।
> ಉಣ್ಣಗೂ ಕಷ್ಟ ಸರ್ವಜ್ಞ ।

ಎಂಬೀ ಸರ್ವಜ್ಞಕವಿಯ ವಚನದಂತೆ ಉಣ್ಣೆಯ ಸ್ಥಿತಿಯೂ ಲೋಭಿಯ ಸ್ಥಿತಿಯೂ ಒಂದೇ ಆಗಿರುವದು ಉದಾರಿಯು ತಾನು ಗಳಿಸಿದ ಹಣವನ್ನು ಪ್ರೀತಿಯಿಂದ ದಾನ, ಧರ್ಮ, ಪರೋಪಕಾರಮಾಡುತ್ತ, ತಾನೂ ಅದರ ಸುಖವನ್ನು ಅನುಭವಿಸುತ್ತ ಆನಂದದಿಂದ ಭ್ರಮರದಂತೆ ಕಾಲವನ್ನು ಕಳೆದು, ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ ಹೊಂದುವನು ಲೋಭಿಯು ತಾನು ಗಳಿಸಿದ ಹಣವನ್ನು ಪ್ರೀತಿಯಿಂದ ದಾನ-ಧರ್ಮ ಪರೋಪಕಾರ ಮಾಡದೆ, ತಾನೂ ಅದರ ಸುಖವನ್ನು ಅನುಭವಿಸದೆ, ಕೂಡಿಡಬೇಕೆಂಬ ದುರ್ವ್ಯಾಸಕ್ಕೆ ಬಿದ್ದು, ಕಷ್ಟದಿಂದ ಜೇನಹುಳದಂತೆ ಬಂಧನಕ್ಕೊಳಗಾಗಿ, ಇಹದಲ್ಲಿ ಅಪಕೀರ್ತಿಯನ್ನೂ, ಪರದಲ್ಲಿ ಅಧೋಗತಿಯನ್ನೂ ಹೊಂದುವನು

ಮನುಷ್ಯನಿಗೆ ಬೇಕಾದಷ್ಟು ಹಣವು ಕೂಡಿದರೂ ಸಾಕೆನ್ನುವದಿಲ್ಲ ಮನಸ್ಸಿಗೆ ತೃಪ್ತಿಯೇ ಇಲ್ಲ ಕೂಡುತ್ತ ಹೋದಹಾಗೆಲ್ಲಾ ಇನ್ನೂ ಕೂಡಿಸಬೇಕೆಂಬ ಹಂಬಲವೇ ಹೆಚ್ಚುವದು ಆಶೆಗೆ ಪಾರವೇ ಇರುವದಿಲ್ಲ

ಮನುಷ್ಯನಿಗೆ ಎಷ್ಟು ಅನುಕೂಲತೆಯಿದ್ದರೇನು ? ಅದನ್ನು ಅವನು ಪರಮಾತ್ಮನ ಪ್ರೀತಿಗಾಗಿಯೂ, ಪರರ ಹಿತಕ್ಕಾಗಿಯೂ, ವಿನಿಯೋಗಿಸದಿದ್ದರೆ ಅದು ನಿಶ್ಚಯವಾಗಿಯೂ ಅವನದಾಗಲಾರದು. ಆದರೆ ನಾವು ಯಾವುದನ್ನು ಸದ್ವಿನಿಯೋಗ ಮಾಡುತ್ತೇವೆಯೋ ಅದೇ ನಮ್ಮದು ಈ ವಿಷಯದಲ್ಲಿ ನೀತಿಕಾರರು ಹೇಳಿರುವ ಕೆಳಗಿನ ವಿಷಯವು ಬಹು ಯುಕ್ತಿಯುಕ್ತವಾಗಿರುವದು ಅದೇನಂದರೆ—ಲೋಭಿಯನ್ನು ಲೋಭಿಯೆಂದು ಕರೆಯುವದು ತಪ್ಪು ಏಕೆಂದರೆ, ಹೊಟ್ಟೆಬಟ್ಟೆಗಳನ್ನು ಕಟ್ಟಿ ಕೃಪಣತನದಿಂದ ಕೂಡಿಟ್ಟಿದ್ದ ಹಣದಲ್ಲಿ ಒಂದು ಪೈಯನ್ನಾದರೂ ಸಾಯುವಾಗ ಅವನು ತೆಗೆದುಕೊಂಡು ಹೋಗುವದಿಲ್ಲ ಹಣದ ಗಂಟನ್ನು ಸಿಕ್ಕವರ ಪಾಲಿಗೆ ಬಿಟ್ಟು ತಾನು ಮಾತ್ರ ಬರಿಗೈಯಿಂದಲೇ ಭಿಕಾರಿಯಂತೆ ಹೋಗುತ್ತಾನೆ ಉದಾರಿಯು ಹಾಗಲ್ಲ ಉದಾರಿಯನ್ನು ಉದಾರಿಯೆಂದೆನ್ನ ಕೂಡದು ಅವನು ಪರಮ ಲೋಭಿಯು ಸಾಯುವಾಗ ಅವನು ಒಂದು ಕಾಸನ್ನಾದರೂ ಬಿಟ್ಟಿರುವದಿಲ್ಲ ತನ್ನ ಜೀವಿತಕಾಲದಲ್ಲಿಯೇ ತಾನು ಸಂಪಾದಿಸಿದ್ದನ್ನೆಲ್ಲಾ ಸದ್ವಿನಿಯೋಗಮಾಡಿ, ಅಪಾರವಾದ ಪುಣ್ಯವನ್ನು ಸಂಪಾದಿಸಿ ತಾನು ಸಾಯುವಾಗ ಪುಣ್ಯರೂಪದಲ್ಲಿರುವ ತನ್ನ ಹಣವನ್ನೆಲ್ಲಾ ತಾನೇ ತೆಗೆದುಕೊಂಡು ಹೋಗುವನು ಪುಣ್ಯವೆಂಬುದು ಒಂದು ನೋಟು ಇದ್ದಹಾಗೆ ಇದು ಇಹಲೋಕದ ಖಜಾನೆಯಲ್ಲಿ ನಡೆಯದಿದ್ದರೂ ಪರಲೋಕದ ಖಜಾನೆಯಲ್ಲಾ ತನ್ನದು. ಪರಲೋಕದ ಸುಖವನ್ನಪೇಕ್ಷಿಸತಕ್ಕವರು ಇಹಲೋಕದಲ್ಲಿ ಸತ್ಕಾರ್ಯಮಾಡಿ ತಮ್ಮ ಹಣಕ್ಕೆಲ್ಲಾ ಪುಣ್ಯರೂಪವಾದ ನೋಟನ್ನು ಮಾಡಿಟ್ಟುಕೊಳ್ಳಬೇಕು ಎಷ್ಟು ಹಣಕ್ಕೆ ಪುಣ್ಯರೂಪವಾದ ನೋಟನ್ನು ಪಡೆಯುತ್ತೇವೆಯೋ ಅಷ್ಟುಮಾತ್ರ ನಮ್ಮದು ಉಳಿದದ್ದೇನೂ ನಮ್ಮದಲ್ಲ ಪುಣ್ಯರೂಪವಾದ ನೋಟು ಶಿಥಿಲವಾಗುವದಿಲ್ಲ ಸುಡುವುದಿಲ್ಲ ನೆನೆಯುವದಿಲ್ಲ ಕಳ್ಳರಿಗೆ ಸಿಗುವದಿಲ್ಲ ಕಳೆದುಹೋಗುವದಿಲ್ಲ ಆದ್ದರಿಂದ ಪ್ರತಿಯೊಬ್ಬ ಧನಿಕಮಹಾಶಯರು ತಮ್ಮ ಹಣವನ್ನೆಲ್ಲಾ ನಿರರ್ಥಕವಾದ ದುಷ್ಟ ಚಟಕ್ಕೆ ಹಾಳುಮಾಡದೆ, ಸತ್ಕಾರ್ಯಕ್ಕೆ ವಿನಿಯೋಗ ಮಾಡಿ ಶಾಶ್ವತವಾದ ಕೀರ್ತಿಯನ್ನೂ, ಧರ್ಮವನ್ನೂ, ಸಂಗ್ರಹಿಸಿಕೊಂಡು ನಿತ್ಯಸುಖವನ್ನು ಪಡೆಯಬೇಕೆಂದು ಹಾರೈಸುತ್ತೇವೆ

ಚನ್ನಪಟ್ಟಣದ ಗಲಭೆಯಲ್ಲಿ ಮೃತರಾದವರ ಬಗ್ಗೆ ಪರಿಹಾರ

ಚನ್ನಪಟ್ಟಣದ ಗಲಭೆಗಳ ಸಂಬಂಧದಲ್ಲಿ ಮೃತರಾದ ಶ್ರೀ ಎಂಬಾರ್ ಶ್ರೀನಿವಾಸಾಚಾರ್ರ (ಹೈಸ್ಕೂಲು ಮುಖ್ಯೋಪಾಧ್ಯಾಯರು) ಇವರ ಹೆಂಡತಿಗೆ ತಿಂಗಳೊಂದಕ್ಕೆ ೧೦೦ ರೂ ಗಳಂತೆ ಸರ್ಕಾರದವರು ವಿಶೇಷ ಪೆನ್ಷನ್ ಮಂಜೂರು ಮಾಡಿದ್ದಾರೆ ಅಲ್ಲದೆ ಅವರ ೫ ಮಂದಿ ಪುತ್ರರಿಗೆ ಅವರ ವಿದ್ಯಾಭ್ಯಾಸ ಮುಗಿಯುವವರೆಗೆ ತಿಂಗಳೊಂದಕ್ಕೆ ೧೦ ರೂ. ಗಳಂತೆ ಪ್ರತಿಯೊಬ್ಬರಿಗೂ ವಿದ್ಯಾರ್ಥಿ ವೇತನವನ್ನು ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ ಇದಲ್ಲದೆ ಅವರ ಪತ್ನಿಯವರ ಬಾಣಂತನದ ಖರ್ಚಿಗೆಂದು ಸರ್ಕಾರದವರು ೨೦೦ ರೂ ಗಳನ್ನು ಮಂಜೂರು ಮಾಡಿದ್ದಾರೆ

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾ ಶಿವ ರಾತ್ರಿ

ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಈ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ಮಹಾಶಿವರಾತ್ರಿ ನಿಮಿತ್ತವಾಗಿ ಮುಂದಿನ (ತಾ|| ೨೪-೨-೪೭) ವಾರದ ಪತ್ರಿಕೆಯು ಹೊರಡುವುದಿಲ್ಲ.

—ವ್ಯಾ

ಶ್ರೀ ಕೇದಾರಪೀಠದ ಸಮಾಚಾರ

ಗಢವಾಲ ಡಿ|| ಚಮೋಲಿ ಕೋರ್ಟಿನಲ್ಲಿ ಶ್ರೀ ಕೇದಾರ ಪೀಠದ ರಾವಲ್ ಪದವಿಯ ಒಗ್ಗೆ ವ್ಯಾಜ್ಯವು ನಡೆಯುತ್ತಿರುವದು ಸರಿಯಷ್ಟೆ ವಿಚಾರಣೆಯು ಮಾರ್ಚಿ ೧೦ ನಯ ತಾರೀಖಿನ ದಿವಸ ನಡೆಯುವದು ಈ ಮಹಾ ಪೀಠದ ವ್ಯಾಜ್ಯಕ್ಕಾಗಿ ನಮ್ಮ ಸೂಚನೆಯಂತೆ ಬಳ್ಳಾರಿ ಡಿ|| ಆದವಾನಿಯಲ್ಲಿರುವ ಶ್ರೀಮಂತ ಎಲೆ ಮಲ್ಲೇಶಪ್ಪನವರು ೧೦೦ ರೂಪಾಯಿ, ಸದರಿ ಗ್ರಾಮದ ಪೈನವರು ೧೫೦ ರೂಪಾಯಿ ಬಳ್ಳಾರಿಯಲ್ಲಿರುವ ಮ|| ರಾ| ಪನ್ನಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ೫೦ ರೂಪಾಯಿ ಬಳ್ಳಾರಿ ಡಿ|| ಕಂಪ್ಲಿ ಗ್ರಾಮದಲ್ಲಿರುವ ಶ್ರೀಗಿನ ಮಠದ ಶ್ರೀ ಪಟ್ಟದಸ್ವಾಮಿಗಳವರು ೫೦ ರೂಪಾಯಿ ಸದರಿ ಗ್ರಾಮದ ಭಕ್ತರು ೪೧ ರೂಪಾಯಿ, ವೇ| ತೋರಣಗಲ್ಲು ಹಿರೇಮಠದ ನಂಜುಂಡಾರಾಧ್ಯರ ಪ್ರೋತ್ಸಾಹದ ಮೇರೆಗೆ ಬಳ್ಳಾರಿಯಲ್ಲಿರುವ ಶ್ರೀಮತಿ ಗಾಳಿ ಗಂಗಮ್ಮನವರು ೧೦೧ ರೂಪಾಯಿ ಈರೀತಿ ಸಮರ್ಪಿಸಿ ಶ್ರೀ ಕೇದಾರನಾಥನ ಕೃಪೆಗೆ ಪಾತ್ರರಾಗಿರುತ್ತಾರೆ ಈ ಗುರುಪೀಠಾಭಿಮಾನಿಗಳೆಲ್ಲರಿಗೂ ಶ್ರೀ ಜಗದಾಚಾರ್ಯರು ಮಂಗಲವನ್ನೀಯಲೆಂದು ಹಾರೈಸುತ್ತೇವೆ ಇದಲ್ಲದೆ ನಾವು ಇನ್ನೂ ಕೆಲವು ಗ್ರಾಮಗಳಿಗೆ ಸಹಾಯಕ್ಕೋಸ್ಕರ ಪತ್ರಗಳನ್ನು ಕೊಟ್ಟಿದ್ದೇವೆ ಅವರೆಲ್ಲರೂ ತಮ್ಮ ಶಕ್ತಿಮೀರಿ ಸಹಾಯ ಮಾಡಿ ಶ್ರೀ ಕೇದಾರನಾಥನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ವರ್ತಮಾನಸಂಗ್ರಹ

ಮೈಸೂರು ದಿವಾನರು ಅಮೇರಿಕಾಕ್ಕೆ ಪ್ರಯಾಣಮಾಡುವರು

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಈದಿವಸ ಬೆಂಗಳೂರಿನಿಂದ ಹೊರಟು ಬೊಂಬಾಯಿಗೆ ಹೋಗಿ ಅಲ್ಲಿಂದ ಈ ತಿಂಗಳು ೨೦ ನೇ ತಾ|| ವಿಮಾನದಲ್ಲಿ ಅಮೇರಿಕಾಕ್ಕೆ ಪ್ರಯಾಣ ಮಾಡುವರೆಂದೂ, ಏಪ್ರಿಲ್ ಮೊದಲನೇ ವಾರದಲ್ಲಿ ಬೆಂಗಳೂರಿಗೆ ತಿರುಗಿ ಬರುವರೆಂದೂ ತಿಳಿದುಬರುತ್ತದೆ

ಮದ್ರಾಸಿನ ಮುಖ್ಯಮಂತ್ರಿ ಶ್ರೀ|| ಪ್ರಕಾಶಂರವರಮೇಲೆ ಅವಿಶ್ವಾಸ ಸೂಚನೆ

ಮದ್ರಾಸಿನ ಪ್ರಧಾನಿ ಶ್ರೀ ಪ್ರಕಾಶಂ ಅವರ ನಾಯಕತ್ವದ ಒಗ್ಗೆ ಅವಿಶ್ವಾಸವನ್ನು ಸೂಚಿಸುವ ಒಂದು ಮಸೂದೆಯನ್ನು ಕಾಂಗ್ರೆಸ್ ಶಾಸನ ಪಕ್ಷದವರು ಮುಂದಿಸಿರುತ್ತಾರೆ ಕಾಂಗ್ರೆಸ್ ಪಕ್ಷದ ಒಟ್ಟು ನೂರತೊಂಬತ್ತು ಸದಸ್ಯರ ಪೈಕಿ ನೂರುಹತ್ತು ಜನ ಇದಕ್ಕೆ ಸಹಿ ಹಾಕಿರುತ್ತಾರೆ

ಈ ಅವಿಶ್ವಾಸ ಸೂಚನೆಯನ್ನು ವಿಮರ್ಶಿಸಿ ಬೇರೆ ನಾಯಕರನ್ನು ಚುನಾಯಿಸುವ ಒಗ್ಗೆ ಒಂದು ವಿಶೇಷ ಸಭೆಯನ್ನು ಕೂಡಿಸಬೇಕೆಂದು ಶ್ರೀಪ್ರಕಾಶಂರವರನ್ನು ಕೇಳಲಾಗಿ ಅವರು ಇದನ್ನು ಪರಿಶೀಲಿಸಿ ಉತ್ತರ ಕೊಡುವುದಾಗಿ ತಿಳಿಸಿದರು.

ಅವಿಶ್ವಾಸ ಠರಾವಿಗೆ ಸಹಿ ಹಾಕಿರುವವರ ಪೈಕಿ ತಮಿಳುನಾಡು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀಕಾಮರಾಜ ನಾಡಾರ್, ಮತ್ತು ಶ್ರೀಗಳಾದ ಬಿ. ಗೋಪಾಲರೆಡ್ಡಿ, ಎ. ಬಿ ಮುನಿಸ್ವಾಮಿ ಪಿಳ್ಳೆ, ಡಾ|

ಎಸ್ ಎಸ್ ರಾಜನ್, ವಿ ಕಾಳೇಶ್ವರರಾವ್, ಮಾಧವಮೆನನ್ ಕಾಲವೆಂಕಟರಾವ್, ಎ ವೈದ್ಯ ಯ್ಯರ್, ಎಸ್ ಎಸ್ ಭರದಾಚಾರಿ ಮೊದಲಾದವರು ರುತ್ತಾರೆ ವಿಶೇಷಸಭೆ ನಡೆಸಬೇಕೆಂದು ಮನವಿಯನ್ನು ತ್ರಿಸಿದ ಮೇಲೆ ಅ ಭಾ ಕಾಂಗ್ರೆಸ್ ಅಧ್ಯಕ್ಷರಿಗೂ ದಾ ರ್ ಪಟೇಲರಿಗೂ ಈ ವಿಚಾರವನ್ನು ತಿಳಿಸಿ ತಂತಿ ಳನ್ನು ಕಳುಹಿಸಲಾಯಿತು.

ಶ್ರೀ ಪ್ರಕಾಶಂ ಅವರು ಫೆಬ್ರವರಿ ಹದಿನೈನೆಯ ರೀಖಿನ ದಿವಸ ದೆಹಲಿಗೆ ಹೋಗುವುದಾಗಿಯೂ ಲ್ಲಿಂದ ಬಂದಮೇಲೆ ಈ ಮನವಿಯನ್ನು ಪರಿಶೀಲಿಸು ವುದಾಗಿಯೂ ತಿಳಿಸಿದರು ಆ ಅವಿಶ್ವಾಸ ಸೂಚನೆಗೆ ಂಗೀಕಾರವು ದೊರೆತರೆ ಶ್ರೀ ಪಿ ರಾಮಸ್ವಾಮಿರೆಡ್ಡಿ ಯಾರ್ ಅವರನ್ನು ಕಾಂಗ್ರೆಸ್ ಶಾಸನಪಕ್ಷದ ನಾಯಕ ನನ್ನಾಗಿ ಆರಿಸಲಾಗುವುದೆಂದು ತಿಳಿದುಬಂದಿದೆ

ಅಕ್ಕಿ ಗಿರಣಿಗಳನ್ನು ಸ್ಥಾಪಿಸಲು ಮದ್ರಾಸ್ ಸರಕಾರದ ಪ್ರತಿಬಂಧಕ

ಮದ್ರಾಸ್ ಸರ್ಕಾರದವರು ಹೊಸದಾಗಿ ಅಕ್ಕಿ ಗಿರಣಿ ಗಳನ್ನು ಸ್ಥಾಪಿಸಲು ಪ್ರತಿಬಂಧಕ ಆಜ್ಞೆಯನ್ನು ಹೊರಡಿ ಸಿದ್ದಾರೆ ಅಕ್ಕಿಯನ್ನು ಕೈಯಿಂದ ಕುಟ್ಟುವುದಕ್ಕೆ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ ಈ ಆಜ್ಞೆ ಯನ್ನು ಹೊರಡಿಸಲಾಗಿದೆಯೆಂದು ಸರ್ಕಾರಿ ಪ್ರಕಟನೆ ಪ್ರಸುತ್ತದೆ

ಆಯಿಲ್ ಮೇಲಿರುವ ಕಂಟ್ರೋಲ್ ವಜಾ

ಕೇಂದ್ರಭಾರತ ಸರ್ಕಾರದವರು ಫ್ಯೂಯಲ್ ಆಯಿಲ್ ಡ್ರ್ಯೂಡ್ ಡೀಸಲ್ ಆಯಿಲ್ ಮತ್ತು ಫರ್ನೇಸ್ ಆಯಿಲ್‌ಗಳ ಹಂಚಿಕೆಯ ಬಗ್ಗೆ ಇದ್ದ ಹತೋಟಿಯನ್ನು ಮಾರ್ಚಿ ೨೫ ರಿಂದ ತೆಗೆದುಹಾಕುವುದಾಗಿ ಒಂದು ಪ್ರಕಟನೆ ತಿಳಿಸುತ್ತದೆ

ಬೊಂಬಾಯಿಯಲ್ಲಿ ಶಾಂತಪರಿಸ್ಥಿತಿ

ಬೊಂಬಾಯಿ ಸರ್ಕಾರದ ಮುಖಂಡರೊಬ್ಬರು ಬೊಂಬಾಯಿ ಗಲಭೆ ನಡೆದ ಪ್ರದೇಶಗಳಲ್ಲಿ ಎಲ್ಲಾ ಕೋಮಿನವರೂ ತಮ್ಮ ತಮ್ಮ ಅಂಗಡಿಗಳನ್ನು ತೆಗೆದು ಯಾವ ತೊಂದರೆಯೂ ಇಲ್ಲದೆ ವ್ಯಾಪಾರ ನಡೆಸುತ್ತಿರು ವುದನ್ನು ನೋಡಿದರೆ ಪರಿಸ್ಥಿತಿಯು ಶಾಂತವಾಗಿರುವು ದಲ್ಲದೂ, ಮುಂದೆ ಶಾಂತಿ ಭಂಗವಾಗುವ ಸೂಚನೆ ಇರು ವುದಿಲ್ಲವೆಂದೂ ತಿಳಿಸುತ್ತಾರೆ

ಶಸ್ತ್ರತ್ಯಾಗನಿಯಮದ ಮೇಲೆ ಓಟಿಂಗ್

ಅಂತರರಾಷ್ಟ್ರೀಯ ರಕ್ಷಣ ಸಮಿತಿಯ ಸಭೆಯಲ್ಲಿ ಶಸ್ತ್ರತ್ಯಾಗ ನಿಯಮದಮೇಲೆ ಓಟಿಂಗ್ ಪ್ರಾರಂಭವಾ ಯಿತು ಶಸ್ತ್ರತ್ಯಾಗ ಯೋಜನಾ ಸಮಿತಿಗೆ ಅಟಾಮಿಕ್ ಶಸ್ತ್ರಗಳ ವಿಚಾರವು ಸೇರತಕ್ಕದಲ್ಲವೆಂದು ಅಮೆರಿಕದ ಸಂಯುಕ್ತಸಂಸ್ಥಾನಗಳು ಮಾಡಿರುವ ಸಲಹೆಗೆ, ಬ್ರಿಟ್ ಫ್ರಾನ್ಸ್, ಚೈನಾ, ಬ್ರೆಸಿಲ್ ಮತ್ತು ಕೊಲಂಬಿಯಾ ರಾಷ್ಟ್ರಗಳು ಬೆಂಬಲ ಕೊಟ್ಟವು ಆಸ್ಟ್ರೇಲಿಯಾ ಪ್ರತಿನಿ ಧಿಯು ರಕ್ಷಣ ಸಮಿತಿ ಮತ್ತು ಶಸ್ತ್ರತ್ಯಾಗ ಯೋಜನಾ ಸಮಿತಿಗಳ ಕಾರ್ಯ ಕಲಾಪಗಳನ್ನು ಬಹಳ ಸೂಕ್ಷ್ಮ ವಾಗಿ ಬೇರೆಮಾಡುವುದು ಬೇಡವೆಂಬ ತಿದ್ದುಪಡಿ ತಂ ದರೆ ರಷ್ಯಾ ಪ್ರತಿನಿಧಿಯು ಈ ಎರಡು ಸಮಿತಿಗಳ ಕಾರ್ಯ ಕಲಾಪಗಳೂ ಒಂದಕ್ಕೊಂದು ಸಂಬಂಧಪಟ್ಟಿರಬೇಕೆಂದು ಹೇಳಿದರು

ಸರ್ ಅಲೆಗ್ಸಾಂಡರ್ ಕ್ಯಾಡಗೀರವರು ಬ್ರಿಟಿಷರ ಅಭಿ ಪ್ರಾಯವನ್ನು ವ್ಯಕ್ತಪಡಿಸುತ್ತಾ ಅಂತರ ರಾಷ್ಟ್ರೀಯ ಪರಿ ಹತ್ತು ಶಸ್ತ್ರತ್ಯಾಗ ಮತ್ತು ಆಟಾಮಿಕ್ ಶಕ್ತಿ ಸಮಿತಿಗಳ ಕಾರ್ಯಕಲಾಪಗಳು ಬೇರೆ ಬೇರೆಯೆಂದು ತೀರ್ಮಾನಿ ಸಿದೆಯಾದುದರಿಂದ ರಷ್ಯಾ ಪ್ರತಿನಿಧಿಯು ತಮ್ಮ ಆಕ್ಷೇ ಪಣೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಪ್ರಾರ್ಥಿ ಸಿದರು

ಭೂ, ಜಲ, ವಾಯುಪಡೆಗಳಿಗೆ ಭಾರತೀಯರು

ಭಾರತ ಸೈನ್ಯದ, ಭೂ, ಜಲ, ವಾಯು ಪಡೆಗಳಿಗೆ ಬೇಕಾಗುವ ಸೇನಾಧಿಕಾರಿಗಳ ಆಯ್ಕೆಯ ವಿವರಗಳನ್ನು ಸೆಲೆಕ್ಷನ್ ಬೋರ್ಡಿನ ಡೈರೆಕ್ಟರ್ ಆದ ಬ್ರಿಗೇಡಿಯರ್ ನಾಥುಸಿಂಗ್‌ರವರು ಬೆಂಗಳೂರಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಈರೀತಿ ವಿವರಿಸಿದರು

ಪ್ರತಿ ವರ್ಷದಲ್ಲಿಯೂ ಭೂ ಸೈನ್ಯಕ್ಕೆ ೫೦೦ ಜನ, ವಾಯು ಸೈನ್ಯಕ್ಕೆ ೩೦೦ ಜನ, ನೌಕಾ ಸೈನ್ಯಕ್ಕೆ ೬೦ ಜನ ಅಧಿಕಾರಿಗಳು ಬೇಕಾಗುವರೆಂದೂ ಭಾರತೀಯರು ಸೇನಾ ಪಡೆಗಳ ವಿಷಯವಾಗಿ ತೋರಿಸುತ್ತಿರುವ ಉದಾಸೀನ ಮನೋಭಾವದಿಂದಲೂ, ಯುವಕರು ಮುಂದೆ ಬಾರದ ಇರುವುದರಿಂದಲೂ ಅಧಿಕಾರ ಸ್ಥಾನಗಳಿಗೆ ಸಾಕಾದಷ್ಟು ಜನರನ್ನು ಪಡೆಯುವುದು ಕಷ್ಟವಾಗುತ್ತಿದೆಯೆಂದೂ, ಭಾರತೀಯರು ಸಹಕರಿಸಿ ಹೆಚ್ಚು ಹೆಚ್ಚಾಗಿ ಒದಗಿದ್ದೇ ಆದರೆ ಭಾರತ ಸೇನೆಯಲಿ ಉತ್ಕೃಷ್ಟವಾದ ಅಧಿಕಾರಿಗಳ ಪ್ರವಾಹವನ್ನೇ ನಿರ್ಮಿಸಬಹುದೆಂದೂ ಅಧಿಕಾರಿಗಳನ್ನು ಆರಿಸಲು ರಾವಲ್ಪಿಂಡಿ, ಮೀರತ್ ಡೇಹರಾಡೂನ್, ಡೆಹಲಿ, ಪೂನಾ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಸಮಿತಿಗಳು ಏರ್ಪಟ್ಟಿವೆಯೆಂದೂ ದೇಹದಾರ್ಢ್ಯ ಮನೋ ಭಾವ ಮೇಧಾಶಕ್ತಿ ವಿಷಯಗಳಲ್ಲಿ ಅನುಭವಸ್ಥರಿಂದ ಪರೀಕ್ಷಿಸಲ್ಪಟ್ಟನಂತರ ತಕ್ಕ ಅಧಿಕಾರಸ್ಥಾನಗಳಿಗೆ ಸಮಿತಿ ಯಿಂದ ನೇಮಿತರಾಗುವರೆಂದೂ ತಿಳಿಸಿದರು

ಮೇಲ್ಕಂಡ ಪರೀಕ್ಷೆಯ ಕ್ರಮಗಳನ್ನು ಪರಿಶೀಲಿಸಲು ಖಾಸಗೀ ವಿದ್ಯಾಸಂಸ್ಥೆಗಳವರಿಗೆ ಎಲ್ಲಾ ಅನುಕೂಲತೆ ಗಳನ್ನೂ ಕಲ್ಪಿಸಲಾಗಿದೆಯೆಂದೂ ಅನುಕೂಲತೆಗಳನ್ನು ಅವರು ಉಪಯೋಗಿಸುತ್ತಿಲ್ಲವೆಂದೂ ಹೆಚ್ಚು ಜನರು ಈ ಅವಕಾಶವನ್ನು ಉಪಯೋಗಿಸಬೇಕೆಂದೂ ತಿಳಿ ಸಿದರು

ನಮ್ಮ ಯುವಕರು ಉತ್ತಮ ದರ್ಜೆಯ ಸೇನಾಧಿ ಕಾರಿಗಳಾಗುವಂತೆ ಅವರ ಮನೋಭಾವವನ್ನು ಪರಿವರ್ತಿ ಸಲು ಎಲ್ಲಾ ಸ್ಕೂಲು ಕಾಲೇಜುಗಳಲ್ಲಿ ಮಿಲಿಟರಿ ಶಿಕ್ಷಣ ವನ್ನು ಒತ್ತಾಯಪಡಿಸಬೇಕೆಂದೂ, ಪ್ರಪಂಚದ ಜನ ಸಂಖ್ಯೆಯಲ್ಲಿ ಐದನೇ ಒಂದು ಭಾಗವಾಗಿರುವ ಸಂಸ್ಕೃತಿ ನಾಗರಿಕತೆಯಲ್ಲಿ ಬೇರೆ ಯಾವ ದೇಶಕ್ಕೂ ಕಡಿಮೆ ಯಾಗದಿರುವ ನಮ್ಮ ದೇಶದಲ್ಲಿ ಸೇನಾಧಿಕಾರಿಗಳನ್ನು ಪಡೆಯುವುದು ಕಷ್ಟವೆಂದರೆ ನಂಬಲಾಗದ ವಿಷಯ ವೆಂದೂ ಹೇಳಿದರು

ಬ್ರಿಟನ್ನಿನಲ್ಲಿ ಕಟ್ಟಿಗೆ ಮತ್ತು ಕಲ್ಲಿದ್ದಲಿನ ಉತ್ಕಟ ಪರಿಸ್ಥಿತಿ

ಬ್ರಿಟನ್ನಿನಲ್ಲಿ ಚಳಿಯ ಪರಿಣಾಮವಾಗಿ ದೇಶಾ ದ್ಯಂತ ಸೌದೆ ಮತ್ತು ಕಲ್ಲಿದ್ದಲಿನ ಅಭಾವ ಹೆಚ್ಚಾಗಿದೆ ಕಳೆದ ೫೦ ವರುಷಗಳಿಂದಲೂ ಇಂತಹ ಭೀಕರ ಚಳಿಗಾಲ ಒದಗಿರಲಿಲ್ಲವೆಂದು ಹೇಳಲಾಗಿದೆ ದೇಶದಲ್ಲೆಲ್ಲಾ ನೂರಾರು ಸಾವಿರ ಟನ್ ಕಲ್ಲಿದ್ದಲು ಮಂಜಿನಿಂದ ಮುಚ್ಚಿ ಹೋಗಿದೆ ವಿದ್ಯುಚ್ಛಕ್ತಿ ಸರಬರಾಜು ಕಡಿಮೆಯಾಗುವು ದೆಂದೂ, ಪರಿಸ್ಥಿತಿಯನ್ನು ಎದುರಿಸಲು ಜನರು ಸಿದ್ಧ ರಾಗಿರಬೇಕೆಂದೂ ಸರ್ಕಾರವು ಎಚ್ಚರಿಕೆ ಕೊಟ್ಟಿದೆ

ಸುಮಾರು ೫ಲಕ್ಷ ಟನ್ ಕಲ್ಲಿದ್ದಲು ಉತ್ತರ ರೈಲ್ವೆ ಸ್ಟೇಷನ್ನಿನಲ್ಲಿ ರಾಶಿಯಾಗಿ ಬಿದ್ದು ಮಂಜಿನಿಂದ ಮುಚ್ಚಿ ಹೋಗಿದೆ ಟೈನ್ ನದಿಯಮೇಲೆ ನೂರು ಹಡಗುಗಳ ಗಿಂತಲೂ ಹೆಚ್ಚಾಗಿ ತಡೆಯಲ್ಪಟ್ಟಿವೆ ಮಂಜಿನ ಅಡಚಣೆ ಯನ್ನು ನಿರ್ಮೂಲಮಾಡಲು ಮಿಲಿಟರಿ ಸಹಾಯ ಕೋರಲಾಗುವುದು

ಯೂರೋಪಿನಲ್ಲೆಲ್ಲಾ ಶೀತಮಾರುತವು ಹರಡಿ ಎಲ್ಲಿ ಅನಾಹುತವುಂಟಾಗುವುದೋ ಎಂದು ಭೀತಿ ಹಬ್ಬಿದೆ ಜರ್ಮನಿಯಲ್ಲಿಯೂ ಪರಿಸ್ಥಿತಿ ಕೆಡಹತ್ತಿದೆ.

ಹಾಸನ ಡಿ|| ಆಲೂರು ಟವನ್ನಿನಲ್ಲಿರುವ ಮ|| ರಾ|| ಜವಳಿ ಅಂಗಡಿ ಕೆ ಓ. ಪುಟ್ಟಸ್ವಾಮಿಗೌಡರು ಪ್ರತಿಸ್ಪರ್ಧಿಗಳಿಲ್ಲದೆ ಆಲೂರು ಟವನ್ ಮುನಿಸಿಪಲ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು.

ಶ್ರೀ|| ಉಜ್ಜಯಿನೀ ಜಗದ್ಗುರುಗಳ ಪುಣ್ಯತಿಥಿ ಸಮಾರಂಭಗಳು.

ಕಾಶೀಕ್ಷೇತ್ರ

ಶ್ರೀಮಜ್ಜಗದ್ಗುರು ವಿಶ್ವಾರಾಧ್ಯಸಿಂಹಾಸನ ಜಂಗಮ ವಾಡಿ ಮಠದಲ್ಲಿ ತಾ| ೧೦ ೧ ೪೭ನೆಯ ದಿವಸ ಪಂಚ ಪೀಠಗಳ ಉದ್ಧಾರಕರೂ ಮಹಾತಪಸ್ವಿಗಳೂ, ಶಿವ ಯೋಗಿಶ್ರೇಷ್ಠರೂ ಆದ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶಿವೈಕ್ಯ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿ ಮಹೋ ತ್ಸವವು ಮಹಾವೈಭವದಿಂದ ನೆರವೇರಿತು ಅಂದು ಪ್ರಾತಃಕಾಲ ಪದ್ಧತಿಯಂತೆ ಅಭಿಷೇಕಾದಿ ಕಾರ್ಯಕ್ರಮ ಗಳು ನಡೆದವು ಸಾಯಂಕಾಲ ಚಿತ್ರಭವನದಲ್ಲಿ ಸಭೆ ಸೇರಿತು ಶ್ರೀ ಕಾಶೀಪೀಠಾಧೀಶ್ವರ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ವಿದ್ವಾಂ ಸರ ವೇದಘೋಷದೊಂದಿಗೆ ಆಗಮಿಸಿ, ಸಿಂಹಾಸನವ ನ್ನಲಂಕರಿಸಿದರು ಭವ್ಯವಾದ ಉನ್ನತ ಪೀಠದಲ್ಲಿ ಉಜ್ಜಯಿನೀ ಜಗದ್ಗುರುಗಳವರ ಭಾವಚಿತ್ರವು ವಿರಾಜಿಸು ತ್ತಿತ್ತು ಭಾವಚಿತ್ರಕ್ಕೆ ಪೂಜಾದಿಗಳಾದ ಮೇಲೆ ಶ್ರೀ ಸಿದ್ಧಲಿಂಗಜಗದ್ಗುರುಗಳ ತಪಸ್ಸು ವೈರಾಗ್ಯ ಜನಾನು ಗ್ರಹ ಯೋಗಸಿದ್ಧಿ ಶಿವಸಿದ್ಧಾಂತಪಾಂಡಿತ್ಯ ಮುಂತಾದ ವಿಷಯಗಳನ್ನು ಕುರಿತು ಶ್ರೀ ಸಿದ್ಧರಾಮಶಿವಾಚಾರ್ಯರು ರೌಡಕುಂದಿ ಶ್ರೀಪಂಚಾಕ್ಷರಶಿವಾಚಾರ್ಯರು, ವೈರಾಗ್ಯ ಕರ್, ಶ್ರೀ ಕ್ಯಾಸನೂರು ಸ್ವಾಮಿಗಳು, ಶ್ರೀಗುರುಲಿಂಗ ಶಿವಾಚಾರ್ಯರು, ಶ್ರೀ ಸೋಮಶೇಖರಶರ್ಮರು ಮುಂತಾ ದವರು ಉಪನ್ಯಾಸಮಾಡಿದರು ಆಮೇಲೆ ಶ್ರೀಜಗದ್ಗುರು ಮಹಾಸನ್ನಿಧಿಯವರ ಶ್ರೀ ಸಿದ್ಧಲಿಂಗಜಗದ್ಗುರುಗಳವರ ಪ್ರಕೃತಿಸಿದ್ಧವಾದ ಮಹಾವಿಭೂತಿತ್ವವನ್ನೂ, ಮಹಾತ್ಮ ತ್ವವನ್ನೂ ಅಮೋಘವಾಗಿ ವಿವೇಚಿಸಿ ವಿದ್ವಾಂಸರ ಮನೋಮಂದಿರದಲ್ಲಿ ಅದು ಚಿರಕಾಲ ಸ್ಥಿರವಾಗುವಂತೆ ಅಪ್ಪಣೆಕೊಡಿಸಿದರು ಪ್ರಸಾದವಿನಿಯೋಗ ಮಂಗಲ ದೊಂದಿಗೆ ಕಾರ್ಯಕ್ರಮವು ಪೂರ್ಣವಾಯಿತು

ಸೆಕ್ರೆಟರಿ, ಗುರುಲಿಂಗಶಿವಾಚಾರ್ಯ ರಾಯಚೂರು,

ಕಾ ವೀ ವಿ ಸಂಘ

ಹರಪನಹಳ್ಳಿ

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿ ಗಳವರ ಪುಣ್ಯತಿಥಿ ಮಹೋತ್ಸವವು ಪುಷ್ಯ ಬ| ೮ ದಿನಸ ಹರಪನಹಳ್ಳಿ ಗ್ರಾಮದಲ್ಲಿರುವ ತೆಗ್ಗಿನ ಮಠದ ಶ್ರೀ ಚಂದ್ರಶೇಖರಶಿವಾಚಾರ್ಯಸ್ವಾಮಿಗಳವರ ನೇತೃತ್ವ ದಲ್ಲಿ ಬಹು ವೈಭವದೊಡನೆ ನೆರವೇರಿತು ಪ್ರಾತಃಕಾಲ ಶ್ರೀಗಳವರ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆ ಯಾಗಿ, ಮಧ್ಯಾಹ್ನ ಆರಾಧನೆಯು ನೆರವೇರಿತು ಸಾಯಂಕಾಲ ಶ್ರೀಗಳವರ ಭಾವಚಿತ್ರವನ್ನು ಶಿಂಗರಿಸಿದ ಪಲ್ಲಕ್ಕಿಯಲ್ಲಿಟ್ಟು ವಾದ್ಯವೈಭವದೊಡನೆ ಉತ್ಸವವನ್ನು ನೆರವೇರಿಸಲಾಯಿತು ಉತ್ಸವವು ತೆಗ್ಗಿನ ಮಠಕ್ಕೆ ಬಂದು ತಲಪಿದ ಮೇಲೆ ಸಭೆಗೂಡಿತು ಅಗ್ಗಿ ತೆಗ್ಗಿನ ಮಠದ ಪಂಚಾಕ್ಷರಯ್ಯನವರು ಗುರುಮಹತ್ವದ ಬಗ್ಗೆಯೂ, ಹೈಸ್ಕೂಲ್ ಮಾಸ್ಟರ್ ಗುರುಪಾದ ದೇವರಮಠದ ಕೊಟ್ರಬಸಯ್ಯನವರು ಗುರುಭಕ್ತಿಯ ಬಗ್ಗೆಯೂ, ಹೈಸ್ಕೂಲ್ ಮಾಸ್ಟರ್ ಚೋರನೂರು ಮಠದ ಸಿದ್ಧಲಿಂಗಯ್ಯನವರು ವೀರಶೈವರ ಉನ್ನತಿಯ ಬಗ್ಗೆಯೂ, ತೆಗ್ಗಿನ ಮಠದ ಸದಾಶಿವಯ್ಯನವರು ಗುರುವರ್ಗದ ಜಾಗೃತಿಯ ಬಗ್ಗೆಯೂ, ಹೈಸ್ಕೂಲ್ ಮಾಸ್ಟರ್ ಕಲ್ಲುಮಠದ ಕೊಟ್ರಯ್ಯನವರು ಪಂಚಾಚಾರ ಗಳ ಬಗ್ಗೆಯೂ, ಎಲಿಮೆಂಟರಿ ಸ್ಕೂಲ್ ಹೆಡ್ ಮಾಸ್ಟರ್ ಗುರುಪಾದದೇವರ ಮಠದ ಶಾಂತವೀರಯ್ಯನವರು ಪಂಚಸೂತಕಗಳ ಬಗ್ಗೆಯೂ, ಸ್ಕೂಲ್ ಮಾಸ್ಟರ್ ಹರಿಯಮ್ಮನಹಳ್ಳಿ ಮಠದ ಬಸವಲಿಂಗಯ್ಯನವರು ಆಚಾರದ ಬಗ್ಗೆಯೂ, ಹೈಸ್ಕೂಲ್ ಕನ್ನಡ ಪಂಡಿತರಾದ ನೀಲಕಂಠಶಾಸ್ತ್ರಿಗಳು ವರ್ಣಾಶ್ರಮಧರ್ಮಗಳ ಬಗ್ಗೆಯೂ ಭಾಷಣ ಮಾಡಿದರು ಬಳಿಕ ಶ್ರೀಜಗದ್ಗುರುಗಳವರ ಭಾವಚಿತ್ರಕ್ಕೆ ಮಂಗಲವು ನೆರವೇರಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಭಕ್ತ, ಕಾಶಪ್ಪ ಅಂಗಡಿ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣನಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಳ್ಳಲು ಸಮಂಜಸವಾಗಿರುವುದು. ಈ ಗ್ರಂಥವು ಈಗ್ಗೆ ಸುಮಾರು ೫೦೦ನೇ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ಬರೆದು ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರೇ ಈ ವ್ಯಾಖ್ಯಾನದ ಮಹತ್ವವು ಗೊತ್ತಾಗುವುದು. ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಗಳ ಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೭೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈಯಲ್ಲಿ ಕಲ್ಪತರುವಿನಂತಿರುವ ಈ ಅನರ್ಘ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧಕತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦ × ೧೪ ಬೆಲೆ ೧ಕ್ಕೆ	೦—೬—
ಶ್ರೀರೇಣುಕಾಚಾರ್ಯರ ಲಿಂಗ ಸಂಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—
ಶ್ರೀ ಪಂಚಾಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—
ಶ್ರೀಜಗದ್ಗುರು ಪಂಚಾಚಾರ್ಯರು ಸಂತಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—
ಶ್ರೀ ರೇಣುಕಾಚಾರ್ಯರು ರುದ್ರ ಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ..	೦—೧—
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ನೀಲಕಂಠ ಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ .	೦—೧—
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ..	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ..	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .	೦—೨—
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೭ನೆಯ ಆವೃತ್ತಿ) .	೨ ಆಣೆ
ಶ್ರೀಗುರುತತ್ವಪದಗಳು (೭ನೆಯ ಆವೃತ್ತಿ) —	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ —	೨ ಆಣೆ
ಶಿವಶಕ್ತಿವಿಲಾಸ —	೨ ಆಣೆ
ಪಂಚಾಚಾರ್ಯಪ್ರಕಾಶ — —	೩ ಆಣೆ
ಪಂಚಾಚಾರ ಪ್ರಕಾಶಿಕಾ — —	೩ ಆಣೆ
ವೀರಶೈವಾಚಾರಸಿದ್ಧಿ (೪ನೆಯ ಆವೃತ್ತಿ) — —	೪ ಆಣೆ
ಲಿಂಗಧಾರಣವಿಧಿ — —	೪ ಆಣೆ
ವಿವಾಹವಿಧಿ (ನೆಯ ಆವೃತ್ತಿ) — —	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ —	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) ..	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ ..	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು) ..	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ..	೮ ಆಣೆ
ವೀರಶೈವಮಹಾತ್ಮರು ...	೮ ಆಣೆ
ಬಸವಧ್ವಾಂತದಿವಾಕರ (೭ನೆಯ ಆವೃತ್ತಿ) .. —	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು, ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) .	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत) .	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ
षट्स्थलशिवकारिका (संस्कृत) ..	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೮ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ಮಾರ್ಚಿ ೧೯೪೭ [ಸಂಚಿಕೆ ೪೪

ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳು

ಕುಂದಗೋಳ

ಜಮಖಂಡಿ ಸ್ಟೇಟ್ ಕುಂಕಗೋಳ ಪಂಚಗೃಹ ಹಿರೇಮಠದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಮಹಾಶಿವರಾತ್ರಿ ದಿವಸ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀ ಮಹೋತ್ಸವವು ಮಹಾಸನಾರಂಬದಿಂದ ನೆರವೇರಿತು ಅಂದು ಲಿಂಗೋದ್ಭವಮೂರ್ತಿಗೂ, ಮಠದ ಪೂರ್ವಾಚಾರ್ಯರ ಗದ್ದುಗೆಗೂ, ರುದ್ರಾಭಿಷೇಕ, ಬಿಲ್ವಾರ್ಚನಾದಿಗಳು ನೆರವೇರಿದವು. ರಾತ್ರಿ ೮ ರಿಂದ ೧೦ ಘಂಟೆಯವರೆಗೆ ಶ್ರೀಜಗದ್ಗುರುಗಳ ಲಿಂಗೋದ್ಭವಮೂರ್ತಿಯ ಆಂದೋಲಿಕೋತ್ಸವವು ವಾದ್ಯವೈಭವದೊಡನೆ ನೆರವೇರಿತು ಬಳಿಕ ಮಠಾಧಿಪತಿಗಳಾದ ಶ್ರೀ॥ ಷ॥ ಬ್ರ॥ ಚರಪಟ್ಟಾಧ್ಯಕ್ಷ ಗುರುಪಾದ ಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಸಭೆಸೇರಿತು ಜಮಖಂಡಿ ಸ್ಟೇಟ್ ಅಸೆಂಬ್ಲಿ ಮೆಂಬರರಾದ ಮ॥ ರಾ॥ ರಾಯರ ಸಕ್ರೆಪ್ಪನವರ ಸೂಚನೆಯ ಮೇರೆಗೆ ಅಂದಿನ ಸಭಾಧ್ಯಕ್ಷತೆಯನ್ನು ಪ್ರವಚನಪಟು ಶ್ರೀಸಿದ್ಧಲಿಂಗದೇವರು ಹಿರೇಮಠ ಹಿರೇಹರಕುಣಿ ಇವರು ವಹಿಸಿದ್ದರು. ಪ್ರಾರಂಭದಲ್ಲಿ ಜಗದಾಚಾರ್ಯರ ಮಂಗಲಗೀತೆಯಾದನಂತರ, ಶ್ರೀಜಗದ್ಗುರುವಿಶ್ವಾರಾಧ್ಯ ಫ್ರೀಬೋರ್ಡಿಂಗಿನ ವಿದ್ಯಾರ್ಥಿಮುಗಳ ಇವರು ಗುರುಭಕ್ತಿ ವಿಷಯವಾಗಿಯೂ, ಮಂತ್ರಯ್ಯ ಐಗಳ ಹಿರೇಮಠ ಇವರು ಜಯಂತಿಯ ವಿಷಯವಾಗಿಯೂ, ವೇ॥ ಶಿವಯೋಗಯ್ಯ ಹಿರೇಮಠ ಕರ್ತಕೋಟಿ ಇವರು ಆಚಾರ್ಯ ಪೀಠಗಳಿಗೆ ಇರತಕ್ಕ ಶಿಲಾಶಾಸನ, ತಾಮ್ರಶಾಸನಗಳ ವಿಷಯವಾಗಿಯೂ, ವೇ॥ ಕಲ್ಲಯ್ಯನವರು ಕುಲಕರ್ಣಿ ಇವರು ಮತಾಚಾರ್ಯರ ಅಗಾಧವಾದ ಮಹಿಮೆಗಳ ವಿಷಯವಾಗಿಯೂ ಮನೋಹರವಾಗಿ ಮಾತನಾಡಿದರು ಅನಂತರ ಅಧ್ಯಕ್ಷರು ಶ್ರೀಜಗದ್ಗುರು ಪಂಚಾಚಾರ್ಯರ ಅವತಾರ ಮತ್ತು ವೀರಶೈವಮತದ ಪ್ರಾಶಸ್ತ್ಯ ವಿಷಯವಾಗಿ ಒಂದು ಘಂಟೆಯವರೆಗೆ ತಮ್ಮ ಅಸ್ಖಲಿತ ವಾಣಿಯಿಂದ ಪಂಡಿತ ಪಾಮರರಿಗೆ ಬೋಧೆಯಾಗುವಂತೆ ಬೋಧಿಸಿದರು ಬಳಿಕ ಜಾಗರಣೆಯ ನಿಮಿತ್ತವಾಗಿ ಬೆಳಗಿನ ನಾಲ್ಕು ಘಂಟೆಯವರೆಗೆ ಸದರಿ ಗ್ರಾಮದ ಪಂಚಾಚಾರ್ಯ ಭಜನಸಂಘದವರು ಭಕ್ತಿರಸಭರಿತವಾದ ಭಜನೆಯನ್ನು ಮಾಡಿದರು. ವೇ॥ ಸಿದ್ಧಲಿಂಗದೇವರಿಂದ ರಾಘವಾಂಕ ಕಾವ್ಯಪ್ರವಚನವು ಇಂಪಾದ ಸಂಗೀತದೊಡನೆ ನೆರವೇರಿತು. ಆ ಸಮಯದಲ್ಲಿ ಗ್ರಾಮದ ಪ್ರಮುಖ ಮಹಾಜನಗಳು ಆಗಮಿಸಿ ಅಂದಿನ ಆನಂದದಲ್ಲಿ ಭಾಗಿಗಳಾಗಿದ್ದರು. ಬಳಿಕ ಕಾರ್ಯಕ್ರಮವು ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಮಾಪ್ತಿಗೊಳಿಸಲ್ಪಟ್ಟಿತು.

ಒರ್ವ ಗುರುಭಕ್ತ.

ಹುಮನಾಬಾದ್

ನಿಜಾಂ ಇಲಾಖಾ ಹುಮನಾಬಾದ ಗ್ರಾಮದಲ್ಲಿರುವ ವೀರಶೈವ ಮಹಾಜನಗಳು, ಮಹಾಶಿವರಾತ್ರಿಯ ದಿವಸ ಜಗದಾಚಾರ್ಯರ ಜಯಂತಿಯನ್ನು ಬಹು ಉತ್ಸಾಹದಿಂದ ನೆರವೇರಿಸಿದರು ಆಗ್ಗೆ ವೀರಶೈವ ಧರ್ಮಪ್ರಚಾರಕರಾದ ವೇ। ಒಂಗಿ ಸಿದ್ಧರಾಮಯ್ಯನವರು ಭಾಷಣ ಮಾಡುತ್ತಾ ವೀರಶೈವ ಮಹಾಜನಗಳು ಶ್ರೀಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ದೊಡ್ಡ ಹಬ್ಬದಂತೆ ನೆರವೇರಿಸಬೇಕೆಂದೂ, ಪ್ರತಿಯೊಂದು ಗ್ರಾಮದಲ್ಲಿರುವ ಗುರುವರ್ಗದವರು ಜಾಗ್ರತರಾಗಿ ಜಯಂತಿ ಪ್ರಚಾರವನ್ನು ಬೆಳೆಸಬೇಕೆಂದೂ ಗುರುವರ್ಗದವರು, ತಮ್ಮ ಕರ್ತವ್ಯದಿಂದ ದೂರರಾಗಿ ಮನಸ್ಸಿಗೆ ಬಂದಂತೆ ನಡೆಯಹತ್ತಿದ್ದರಿಂದ ಸಮಾಜವು ಬಹಳ ದುಃಸ್ಥಿತಿಗೆ ಬಂದಿರುವದೆಂದೂ, ಇನ್ನಾದರೂ ಗುರುವರ್ಗದವರು ಎಚ್ಚೆತ್ತು ವಿದ್ಯಾವಂತರಾಗಿ ಈ ಸಮಾಜದಲ್ಲಿ ಅಂಟಿಕೊಂಡಿರುವ, ಅನೇಕ ಕೆಟ್ಟ ಪದ್ಧತಿಗಳನ್ನು ದೂರಮಾಡಬೇಕೆಂದೂ ಹೇಳಿದರು ಬಳಿಕ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಸಿದ್ದಪ್ಪ ಬಮಣ

ರಾಣೇಬೆನ್ನೂರು

ಈ ಗ್ರಾಮದಲ್ಲಿರುವ ರೇಣುಕಮಂದಿರದಲ್ಲಿ ಮಹಾಶಿವರಾತ್ರಿಯ ದಿವಸ ಉಭಯ ಜಗದ್ಗುರುಗಳ ಭಾವಚಿತ್ರಗಳಿಗೆ ರುದ್ರಾಭಿಷೇಕ ಷೋಡಶೋಪಚಾರ ಪೂಜಾದಿಗಳೂ ಮಂಗಲಕರವಾದ ಭಜನಾದಿಗಳೂ ಮಹಾ ಸಂಭ್ರಮದೊಡನೆ ನೆರವೇರಿದವು ಮರುದಿವಸ ಗುರುವಾರ ಗಣಾರಾಧನೆಯು ನಡೆಯಿತು ಪ್ರತಿವರ್ಷವೂ ಇದರಂತೆಯೇ ಐದು ಜನ ಆಚಾರ್ಯರ ಜಯಂತಿಗಳನ್ನು ಸರ್ವರೂ ಭಕ್ತಿಯಿಂದ ನೆರವೇರಿಸಬೇಕೆಂದು ಬೋಧಿಸಲಾಯಿತು

ಗುರುಭಕ್ತ

ಹೊಸಪೇಟೆ

ಬಳ್ಳಾರಿ ಡಿ॥ ಹೊಸಪೇಟೆ ಟವನ್ನಿನಲ್ಲಿರುವ ವೀರಶೈವ ಮಹಾಜನಗಳು ಮತ್ತು ಇತರ ಜನಗಳೂ ಕೂಡಿ ಮಹಾಶಿವರಾತ್ರಿಯ ದಿವಸ ಶ್ರೀಜಗದಾಚಾರ್ಯರ ಜಯಂತೀ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು ಸಾಯಂಕಾಲ ೬-೩೦ ಗಂಟೆಗೆ ಉತ್ಸವವು ಶ್ರೀರೇಣುಕನಿಲಯದಿಂದ ಜಗದಾಚಾರ್ಯರ ಜಯಘೋಷದಿಂದಲೂ ಭಜನ ಸಂಘದವರ ಭಜನೆಯಿಂದಲೂ ಹೊರಟು, ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ರಾತ್ರಿ ೯ ಗಂಟೆಗೆ ಸ್ವಸ್ಥಾನವನ್ನು ತಲಪಿತು. ಬಳಿಕ ವೇ॥ ವಿದ್ವಾನ್ ಗುರುಪಾದಶರ್ಮರ ಅಧ್ಯಕ್ಷತೆಯಲ್ಲಿ ಸಭೆಗೂಡಿತು ಆಗ್ಗೆ ವೇ॥ ಕುರುಗೋಡು ಮೇಲುಮಠದ ಬಸವರಾಜಸ್ವಾಮಿಯವರು ಶ್ರೀಜಗದಾಚಾರ್ಯರ ಬಗ್ಗೆ ಹೃದಯಂಗಮವಾದ ಭಾಷಣವನ್ನು ಮಾಡಿ, ಸರ್ವರನ್ನೂ ಸಂತೋಷಪಡಿಸಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಪಂಚಾಚಾರ್ಯ ಪಾದಸೇವಕ
ಮೈಸೂರು ಸಿದ್ದಯ್ಯ, ವೈದ್ಯಪಂಡಿತ

ಹಾರನಹಳ್ಳಿ

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ವೇ। ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಮಹಾಶಿವರಾತ್ರಿ ಬುಧವಾರ ಪ್ರಾತಃಕಾಲ ಶ್ರೀಜಗದ್ಗುರು ಪಂಡಿತಾರಾಧ್ಯ, ವಿಶ್ವಾರಾಧ್ಯರ ಭಾವಚಿತ್ರಗಳನ್ನು ಮನೋಹರಪೀಠದಲ್ಲಿ ಮೂರ್ತಗೊಳಿಸಿ ಅಷ್ಟವಿಧಾರ್ಚನಗಳಿಂದ ಪೂಜಿಸಿ, ವಂದಿಸಿ, ನುತಿಸಿ, ಉಭಯ ಜಗದ್ಗುರುಗಳವರ ಅಷ್ಟೋತ್ತರಶತನಾಮಾವಲಿಯನ್ನು ಪಠಿಸಿ ಪ್ರಸಾದವನ್ನು ವಿನಿಯೋಗಿಸಿದರು

ಒರ್ವ ಗುರುಭಕ್ತ

ಶಿವಕಥಾ ಕಾಲಕ್ಷೇಪ

ಕುಂಸಿ ತಾಲ್ಲೂಕು ಬಾಳೆಕೊಪ್ಪದಲ್ಲಿರುವ ಶ್ರೀಬಸವೇಶ್ವರದೇವಾಲಯದಲ್ಲಿ ಶ್ರೀಯುತ ಶಾಂತವೀರಪ್ಪನವರು ಮಹಾಶಿವರಾತ್ರಿಯ ದಿನ ಶ್ರೀಬಸವೇಶ್ವರಮೂರ್ತಿಗೆ ಅಭಿಷೇಕಪೂಜಾದಿಗಳನ್ನು ನಡೆಸಿದರು ರಾತ್ರಿ ಕೀರ್ತನಕೇಸರಿ ವೇ॥ ಗುಬ್ಬೀ ಶಿವರುದ್ರಶಾಸ್ತ್ರಿಗಳವರು "ಭೂಕೈಲಾಸ" ಎಂಬ ಶಿವಸಂಕೀರ್ತನೆಯನ್ನು ಅನುವಾದ ಮಾಡಿ ಸರ್ವರನ್ನೂ ಹರ್ಷಗೊಳಿಸಿದರು ಗುರುವಾರ ದಿವಸ ಹಾರನಹಳ್ಳಿ ಶ್ರೀಬಸವೇಶ್ವರದೇವಾಲಯದಲ್ಲಿ "ಉಪದೇಶಪ್ರಭಾವ" ಎಂಬ ಕೀರ್ತನೆಯನ್ನು ಮಾಡಿದರು

ಪ್ರತ್ಯಕ್ಷದರ್ಶಿ

ಗದಗ

ಶ್ರೀಜಗದ್ಗುರು ರಂಭಾಪುರೀ ಪೀಠದ ಉತ್ತರಾಧಿಕಾರಿಗಳಾಗಿರುವ ಶ್ರೀ॥ಷ॥ಬ್ರ॥ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರು ತಾ॥ ೨೧-೨-೪೭ನೆಯ ದಿವಸ ರೋಣ ತಾಲೂಕು ಹಡಗಲಿ ಗ್ರಾಮಕ್ಕೆ ದಯಮಾಡಿಸುವ ಸಮಯದಲ್ಲಿ ಶ್ರೀ॥ಷ॥ಬ್ರ॥ ಚಿಕ್ಕಮಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳವರ ಮತ್ತು ಗದಗಿನಲ್ಲಿರುವ ಮಲ್ಲಸಮುದ್ರ ಹೊನ್ನಪ್ಪನವರ ಪ್ರಾರ್ಥನೆಯ ಮೇರೆಗೆ ಅವರ ಮನೆಗೆ ದಯಮಾಡಿಸಿ ಅವರಿಂದ ಸಮರ್ಪಿಸಲ್ಪಟ್ಟ ಕಾಣಿಕಾದಿಗಳನ್ನು ಸ್ವೀಕರಿಸಿ ಅವರ ಭಕ್ತಿಗೆ ಮೆಚ್ಚಿ, ನಿಮ್ಮ ಭವನವು ನಿಮ್ಮ ಹೆಸರಿಗೆ ತಕ್ಕಂತೆ ಹೊನ್ನಿನಿಂದ ತುಂಬಲೆಂದು ಆಶೀರ್ವದಿಸಿದರು.

ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಫಾಲ್ಗುನ ಶುದ್ಧ ೧೪ (6—3—47) ಗುರುವಾರ

ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ೧೪ ಗುರುವಾರ **(ತಾ|| ೬-೩-೪೭) ದಿವಸ** ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾತಿಶಯದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವುದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ, ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾತಿಶಯದಿಂದ ಸ್ಥಿರಗೊಳಿಸಿ ಚೋಲಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಶ್ರೀಕೇದಾರಪೀಠಕ್ಕೆ ಸಹಾಯ

ನಮ್ಮ ಸೂಚನೆಯ ಮೇರೆಗೆ ಶ್ರೀಜಗದ್ಗುರು ಕೇದಾರ ಪೀಠದ ವ್ಯಾಜ್ಯದ ಸಹಾಯಕ್ಕಾಗಿ ಬಳ್ಳಾರಿ ಡಿ|| ಹೊಸಪೇಟೆ ತಾ|| ಕಾಕಬಾಳಗ್ರಾಮದಲ್ಲಿರುವ ಶ್ರೀಮಂತ ರಾಜಾಪುರದ ಸಿದ್ಧಪ್ಪನವರು ೧೦೧ ರೂಪಾಯಿಗಳನ್ನೂ, ಬಳ್ಳಾರಿ ಡಿ|| ಮೆಟ್ರಿಗ್ರಾಮದ ದೈವದವರು ೧೦೩ ರೂ.ಗಳನ್ನೂ, ಆಲೂರು ತಾ|| ಹೊಳಲಗುಂದಿ ಗ್ರಾಮದಲ್ಲಿರುವ ಶ್ರೀಮಂತ ಬಸವನಗೌಡರು ೧೦೦ ರೂಪಾಯಿಗಳನ್ನೂ, ಬಳ್ಳಾರಿ ಡಿ|| ಕುಡತನಿಗ್ರಾಮದವರು ೫೩ ರೂಪಾಯಿಗಳನ್ನೂ ಸಮರ್ಪಿಸಿರುವರು ಇದಲ್ಲದೆ ಧಾರವಾಡ ಡಿ|| ಹಳ್ಳೂರು ಗ್ರಾಮದವರು ೫೦ ರೂಪಾಯಿಗಳನ್ನು ಸಮರ್ಪಿಸಿರುವರು. ಈ ಗುರುಪೀಠಾಭಿಮಾನಿಗಳಿಗೆಲ್ಲಾ ಶ್ರೀಜಗದಾಚಾರ್ಯರು ಮಂಗಳವನ್ನೀಯಲೆಂದು ಹಾರೈಸುತ್ತೇವೆ

ವರ್ತಮಾನಸಂಗ್ರಹ

೧೯೪೮ರಲ್ಲಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ!

ಬ್ರಿಟಿಷ್ ಮುಖ್ಯ ಮಂತ್ರಿ ಶ್ರೀಯುತ ಅಟ್ಲೆಯವರು ಕಳೆದ ತಿಂಗಳು ೨೦ನೇ ತಾರೀಖಿನ ದಿವಸ ಪಾರ್ಲಿಮೆಂಟನಲ್ಲಿ ಹೇಳಿಕೆಯಿತ್ತು ಬ್ರಿಟಿಷ್ ಸರ್ಕಾರವು ೧೯೪೮ನೆ ಜೂನ ತಿಂಗಳಿಗೆ ಮುಂಚೆ ಭಾರತಕ್ಕೆ ಅಧಿಕಾರವನ್ನು ವರ್ಗಾಯಿಸುವುದೆಂದೂ, ಲಾರ್ಡ್ ಮೌಂಟ್‌ಬ್ಯಾಟನ್‌ರವರು ಮುಂದಿನ ವೈಸರಾಯ್ ಆಗಿ ನೇಮಿಸಲ್ಪಟ್ಟಿರುವರೆಂದೂ ತಿಳಿಸಿದರು

ಪಾರ್ಲಿಮೆಂಟ್ ಭವನವು ಕಿಕ್ಕಿರಿದಿದ್ದಿತು ಪ್ರತಿಪಕ್ಷದ ನಾಯಕರಾದ ಮಿ|| ಚರ್ಚಿಲ್ಲರು ವೈಸರಾಯರ ಬದಲಾವಣೆಗೆ ಕಾರಣವೇನೆಂದು ಒತ್ತಾಯಪಡಿಸಲಾಗಿ ಸಭೆಯಲ್ಲಿ ಕೋಲಾಹಲವೆದ್ದಿತು ಆಗ್ಗೆ ಅಟ್ಲೀಯವರು ಜೂನ ೧೯೪೮ರ ಒಳಗೆ ಭಾರತದಲ್ಲಿ ಜವಾಬ್ದಾರಿಯುತರಾದವರ ಅಧೀನಕ್ಕೆ ಅಧಿಕಾರವನ್ನು ವರ್ಗಾಯಿಸಬೇಕೆಂದು ಬ್ರಿಟಿಷ್ ಸರ್ಕಾರವು ದೃಢನಿಶ್ಚಯ ಮಾಡಿದೆಯೆಂದೂ ಇದಕ್ಕಾಗಿ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ನಿಶ್ಚಯಿಸಿದೆಯೆಂದೂ, ಲಾರ್ಡ್ ವೇವಲ್‌ರವರು ಮಾರ್ಚಿ ೧೯೪೭ರಲ್ಲಿ ವಿಶ್ರಾಂತಿ ಹೊಂದುವರೆಂದೂ, ಲಾರ್ಡ್ ಮೌಂಟ್‌ಬ್ಯಾಟನ್ನರು ಆಪದವಿಗೆ ನೇಮಿಸಲ್ಪಟ್ಟಿರುವರೆಂದೂ, ಬ್ರಿಟಿಷ್ ಭಾರತದ ಯಾವ ಸರ್ಕಾರಕ್ಕೂ ತಮ್ಮ ಸಾರ್ವಭೌಮಾಧಿಕಾರಗಳನ್ನು ವರ್ಗಾಯಿಸುವ ಉದ್ದೇಶವನ್ನು ಹೊಂದಿಲ್ಲವೆಂದೂ ಹೇಳಿದರು.

“ವೈಸರಾಯರನ್ನು ತೆಗೆದು ಹಾಕಿದ್ದಕ್ಕೆ ಕಾರಣವೇನು? ಅವರಿಗೂ ಸರ್ಕಾರಕ್ಕೂ ಉಂಟಾಗಿರುವ ಭಿನ್ನಾಭಿಪ್ರಾಯಗಳೇನು? ಈ ಬದಲಾವಣೆಯು ಈಗಲೇ ಏಕೆ ಆಗಬೇಕಾಯಿತು?” ಎಂಬುವಕ್ಕೆ ಅಟ್ಲೀಯವರು ಉತ್ತರ ಕೊಟ್ಟು “ಈ ಬದಲಾವಣೆಗೆ ಇದು ಸಕಾಲವೆಂದು ನಾವು ಭಾವಿಸಿದ್ದೇವೆ. ಅದಕ್ಕಿಂತ ಹೆಚ್ಚು ಏನೂ ಹೇಳುವುದಿಲ್ಲ ಎಂದು ನುಡಿದರು.

ದೇಶೀಯ ಸಂಸ್ಥಾನಗಳ ಬಗ್ಗೆ ಪ್ರಕಟನೆ

ಸಂಸ್ಥಾನಗಳಿಗೂ, ಬ್ರಿಟಿಷ್ ಸರ್ಕಾರಕ್ಕೂ ಇರುವ ಸಂಬಂಧ ವಿಚಾರವಾಗಿ ಬ್ರಿಟಿಷ್ ಪ್ರಕಟನೆಯು ಹೇಳುವುದೇನೆಂದರೆ ಸಾರ್ವಭೌಮತ್ವದ ವ್ಯಾಪ್ತಿಗೆ ಸೇರಿದ ಅಧಿಕಾರವನ್ನೂ ಕರ್ತವ್ಯಗಳನ್ನೂ ಬ್ರಿಟಿಷ್ ಭಾರತದ ಯಾವ ಸರ್ಕಾರಕ್ಕೂ ವರ್ಗಾಯಿಸುವದಿಲ್ಲ, ಸಾರ್ವಭೌಮತ್ವದ ವ್ಯವಸ್ಥೆಯನ್ನು ಕೊನೆಯದಾಗಿ ಅಧಿಕಾರ ವರ್ಗಾಯಿಸುವ ಕಾಲಕ್ಕಿಂತಲೂ ಮುಂಚಿತವಾಗಿ ಪರಿಸಮಾಪ್ತಿ ಮಾಡಬೇಕೆಂಬುದು ಬ್ರಿಟಿಷ್ ಸರ್ಕಾರದ ಉದ್ದೇಶವಲ್ಲ.

ಮಧ್ಯವರ್ತಿ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ಮತ್ತು ಪ್ರತಿಯೊಂದು ದೇಶೀಯ ಸಂಸ್ಥಾನಗಳ ಸಂಬಂಧವನ್ನು ಒಪ್ಪಂದದ ಮೂಲಕ ಹೊಂದಿಸಿಕೊಳ್ಳಬಹುದೆಂದು ಪ್ರಕಟನೆ ತಿಳಿಸುತ್ತದೆ.

ಭಾರತದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಚರ್ಚೆ

ಭಾರತದ ಬಗ್ಗೆ ಬ್ರಿಟಿಷ್ ಸರ್ಕಾರವು ಹೊರಡಿಸಿರುವ ಪ್ರಕಟನೆಯನ್ನು ಕಾಮನ್ಸ್ ಸಭೆಯಲ್ಲಿ ಚರ್ಚಿಸಲಾಯಿತು

ಜೂನ ೧೯೪೮ರ ಅನಂತರ ಭಾರತವನ್ನು ಹೊರಗಿನವರ ಆಕ್ರಮಣದಿಂದ ರಕ್ಷಿಸುವ ಜವಾಬ್ದಾರಿಯನ್ನು ಬ್ರಿಟಿಷ್ ಸರ್ಕಾರ ಹೊಂದಿರುವುದೇ? ಎಂದು ಕನ್ಸರ್ವೇಟಿವ್ ಪಕ್ಷದ ಸದಸ್ಯರೊಬ್ಬರು ಕೇಳಿದ್ದಕ್ಕೆ ಮಿ|| ಅಟ್ಲೀಯವರು ಉತ್ತರಕೊಟ್ಟು ಜೂನ ೧೯೪೮ರ ವೇಳೆಗೆ ಭಾರತಕ್ಕೆ ಎಲ್ಲ ಅಧಿಕಾರಗಳನ್ನೂ ವರ್ಗಾಯಿಸಬೇಕೆಂದು ಸರ್ಕಾರವು ನಿಶ್ಚಯಿಸಿದೆ ಆದ್ದರಿಂದ ರಕ್ಷಣೆಯ ಭಾರವು ಅಂದಿನಿಂದ ಭಾರತದಮೇಲೆ ಬೀಳುವುದು

ಮುಂದುವರಿಯುತ್ತ “ಭಾರತವು ಬ್ರಿಟಿಷ್ ಮಿತ್ರರಾಷ್ಟ್ರಗಳಲ್ಲಿ ಸೇರಲು ನಿಶ್ಚಯಿಸಿದಲ್ಲಿ ಇತರ ಬ್ರಿಟಿಷ್ ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳ ಅಂತಸ್ತನ್ನು ಅದೂ ಹೊಂದುವುದು ಬ್ರಿಟಿಷ್ ಕಾಮನ್‌ವೆಲ್ತನ್ನು ಬಿಡಬೇಕೆಂದು ನಿಶ್ಚಯಿಸುವುದಾದರೆ, ಆಗ ಭಾರತದ ಭವಿಷ್ಯದ ವಿಚಾರವನ್ನು ಆಸಕ್ತಿಯಿಂದ ಪರಿಶೀಲಿಸಬೇಕಾಗುತ್ತದೆ. ಇಂಡಿಯಾದೊಡನೆ ಚರ್ಚೆ ನಡೆಸಲು ಬ್ರಿಟನ್ನು ಸಿದ್ಧವಿರುವುದು” ಎಂದು ಹೇಳಿದರು

ಲಾರ್ಡ್ಸ್ ಸಭೆಯಲ್ಲಿ ಪೆಥಿಕ್‌ಲಾರೆನ್ಸರ ವಿವರಣೆ

ಇಂದಿಲ್ಲ ನಾಳೆಯಾದರೂ ಸ್ವರಾಜ್ಯವನ್ನು ಕೊಟ್ಟೇ ಕೊಡಬೇಕಾಗುವದು ೧೯೪೮ರ ಆಚೆಗೆ ಈಗಿನಂತೆ ರಾಜ್ಯಭಾರವನ್ನು ನಡೆಸುವುದು ಸಾಧ್ಯವಾಗುವುದಿಲ್ಲವೆಂದು ಬ್ರಿ|| ಸರ್ಕಾರಕ್ಕೆ ಸಲಹೆ ಬಂದಿತ್ತು ಕಾಲವನ್ನು ನಿರ್ಣಯ ಮಾಡಿದುದರಿಂದ ಏನೊಂದೂ ತೊಂದರೆಗೆ ಅವಕಾಶವಿಲ್ಲ ಎಂದು ಲಾ ಪೆಥಿಕ್‌ಲಾರೆನ್ಸರು ತಿಳಿಸಿದರು

ಮೊದಲನೆಯ ದಿನದ ಚರ್ಚೆಯಲ್ಲಿ ಲಾ| ಪೆಥಿಕ್ ಲಾರೆನ್ಸರು ಮಾತನಾಡುತ್ತ ಈರೀತಿ ಹೇಳಿದರು

‘೧೯೪೮ರಮೇಲೆ ಬ್ರಿಟಿಷ್ ಸರ್ಕಾರವು ಭಾರತದಲ್ಲಿ ಈಗಿರುವಂತೆ ರಾಜ್ಯಭಾರ ನಡೆಸಿಕೊಂಡು ಬರಲು ಸಾಧ್ಯವಾಗುವುದಿಲ್ಲವೆಂದು ಸರ್ಕಾರಕ್ಕೆ ಸಲಹೆ ಬಂದಿತ್ತು ಇತ್ತೀಚಿನ ವರ್ಷಗಳಲ್ಲಿ ಬ್ರಿಟಿಷ್ ಸರ್ಕಾರವು ಅನುಸರಿಸುತ್ತಿರುವ ನೀತಿಯ ಪ್ರಕಾರ ಸ್ವಲ್ಪ ಮುಂಚೆಯೋ ಅಥವಾ ತಡವಾಗಿಯೋ ಪೂರ್ಣ ಸ್ವಾತಂತ್ರ್ಯವನ್ನು ಕೊಡಲೇಬೇಕಾಗುವುದು ಮತ್ತು ಅಂತಹ ಸಮಯಕ್ಕೆ ಭಾರತೀಯರು ಅಧಿಕಾರವನ್ನು ನಿರ್ವಹಿಸಲು ಸಮರ್ಥರಾಗುತ್ತಾರೆಂದೂ ಭಾವಿಸಲಾಗಿತ್ತು. ಈಗ ಅದನ್ನು ಒದಲಾಯಿಸಿ ಭಾರತೀಯರು ಅಧಿಕಾರ ಜವಾಬ್ದಾರಿಯನ್ನು ವಹಿಸಲು ಅಶಕ್ತರೆಂದು ಭಾವಿಸಲು ಸಾಧ್ಯವಿಲ್ಲ ಸ್ವಾತಂತ್ರ್ಯವನ್ನು ಕೊಡಲು ಹತ್ತಿರದ ತಾರೀಖನ್ನು (ಜೂನ ೧೯೪೮) ಗೊತ್ತುಮಾಡಿರುವದರ ಆಶಯ ಈ ರೀತಿ ಇದೆ

ಬ್ರಿ|| ಸರ್ಕಾರದ ವಾಗ್ದಾನವು ಹೃತ್ಪೂರ್ವಕವಾಗಿದೆಯೆಂದು ಭಾರತಕ್ಕೆ ತೋರಿಸುವದು ಮೊದಲನೆಯದು

ಎರಡನೆಯದಾಗಿ ಬ್ರಿಟನ್ನಿನ ಸಹಾಯ ಅಥವಾ ಹಸ್ತಕ್ಷೇಪವಿಲ್ಲದೆ ಭಾರತೀಯರು ತಮ್ಮಲ್ಲಿಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಜರೂರು ಆವಶ್ಯಕತೆಯನ್ನು ಸೂಚಿಸಿಕೊಡುವುದು

ಇನ್ನು ಸ್ವಲ್ಪ ತಡಮಾಡಿದ್ದಲ್ಲಿ ವಿಶದವಾದ ರಾಜ್ಯಾಂಗದ ರಚನೆಗೆ ಯಾವ ವಿಧದಲ್ಲೂ ಹೆಚ್ಚು ಅನುಕೂಲವಾಗುತ್ತಿರಲಿಲ್ಲ ಅಧಿಕಾರ ಬದಲಾವಣೆಯ ಕಾಲವು ಹತ್ತಿರ ಬರುತ್ತಿದೆ, ಕಳೆದ ೨೦ವರ್ಷಗಳಿಂದ ನಿಧಾನವಾಗಿ ಮುಂದುವರಿಯುತ್ತಿದೆಯೆಂಬುದು ತಿಳಿದೇ ಇರಬೇಕು ಹೀಗಿರುವಲ್ಲಿ ಕೇವಲ ಹೆಸರಿಗೆ ಜವಾಬ್ದಾರಿಯನ್ನು ಹೊತ್ತು ಪೂರ್ಣವಾಗಿ ಅದನ್ನು ಚಲಾಯಿಸಲೀ ಸಾಧ್ಯವಿಲ್ಲದೆ ಇರುವದರಿಂದ ಹೆಚ್ಚುಕಾಲ ತಳ್ಳಲು ಸಾಧ್ಯವಿಲ್ಲ

ಸ್ವಾತಂತ್ರ್ಯ ಕೊಡಲು ಹೆಚ್ಚು ವರ್ಷಗಳ ಅವಧಿಯನ್ನು ಗೊತ್ತುಮಾಡಿದ್ದಲ್ಲಿ ಭಾರತೀಯ ಪಂಗಡಗಳ ಮನಸ್ಸಿನಮೇಲೆ ಉದ್ದಿಷ್ಟ ಪರಿಣಾಮವು ಆಗುತ್ತಿರಲಿಲ್ಲ. ಒಂದು ಅವಧಿಯನ್ನು ಗೊತ್ತು ಮಾಡಿರುವುದರಿಂದ ವಿವಿಧ ಪಕ್ಷಗಳು ಒಂದು ಒಪ್ಪಂದಕ್ಕೆ ಬರುವದಿದ್ದಲ್ಲಿ ಒರಲು, ಸಾಕಷ್ಟು ಕಾಲಾವಕಾಶವು ಸಿಕ್ಕುವದು

ಮುಂದುವರಿಯುತ್ತ “ಹೀಗೆ ಮುಂದಕ್ಕೆ ಒರದೇ ಹೋದಲ್ಲಿ ಮುಂದಿನ ಕೆಲಸ ಮಾಡಲು ಅರ್ಹವಾದ ಒಂದು ತಾತ್ಕಾಲಿಕ ಸರ್ಕಾರಕ್ಕೆ ಅಧಿಕಾರ ಕೊಡಲು ಸಾಧ್ಯವಾಗುವುದು

ಬ್ರಿಟಿಷ್ ಸರ್ಕಾರವು ಮುಂದಕ್ಕೆ ಹೆಜ್ಜೆಯಿಡಬೇಕು, ಇಲ್ಲವೇ ಹಿಂದಕ್ಕೆ ಬರಬೇಕು ಬೇರೆದಾರಿ ಸಾಧ್ಯವೇ ಇಲ್ಲ

(೮ನೇ ಪುಟವನ್ನು ನೋಡಿ)

ಪತ್ರವ್ಯವಹಾರಮಾಡುವವರಿಗೆ ಸೂಚನೆ

ಶ್ರೀ ಜಗದ್ಗುರು ರಂಭಾಪುರೀಪೀಠದ ಉತ್ತರಾಧಿಕಾರಿಗಳಾದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರು ಸದ್ಯಃ ರಂಭಾಪುರೀಪೀಠಕ್ಕೆ ದಯಮಾಡಿಸಿರುತ್ತಾರೆ ಅವರೊಡನೆ ಪತ್ರವ್ಯವಹಾರಮಾಡುವವರು ಈ ಕೆಳಗಿನ ಅಡ್ರೆಸ್ಸಿಗೆ ಮಾಡಬೇಕು

ಶ್ರೀ ಜಗದ್ಗುರು ವೀರಸಿಂಹಾಸನಮಠ
ಪೋ|| ಬಾಳೆಹೊನ್ನೂರು
ಡಿ|| ಕಡೂರು

ಸ್ವೀಕಾರ

ಚಿಕ್ಕಮಗಳೂರು ತಾ|| ಕದರಮಿದರಿ ಗ್ರಾಮದ ಚಿ| ರಾಮೇಗೌಡನಿಗೂ ನಂದೀಕೆರೆ ಗ್ರಾಮದ ಚಿ| ಸೌ|| ಸಿಂಗಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ವರನ ಕಡೆಯವರು ಸಮರ್ಪಿಸಿದ 2 ರೂಪಾಯಿ ವಧುವಿನ ಕಡೆಯವರು ಸಮರ್ಪಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ವಸ್ತಾರೆ ಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿ ಟವನ್ನಿನಲ್ಲಿರುವ ವೇ|| ಕಲ್ಯಾಣಿ ತಿರಕಯ್ಯನವರ ಪುತ್ರಿ ಚಿ| ಸೌ| ನೀಲಾದೇವಿಗೂ ಸಂಕ್ಲೇಶ್ವರ ಹಿರೇಮಠದ ವೇ|| ಗುರುಪಾದಯ್ಯನವರ ಪುತ್ರ ಚಿ|| ಮುರಿಗೇಶ್ವರನಿಗೂ, ಪಾಲಿಕೊಪ್ಪ ಗ್ರಾಮದಲ್ಲಿ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ವೀರಭದ್ರಯ್ಯನವರು ಹೊಸಮಠ ಕ್ಯಾಂಪ್ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತವೆ.

ಗುಲಬರ್ಗಾ ಡಿ|| ಜಹಗೀರ್ ಜೇವರಗಿ ಗ್ರಾಮದಲ್ಲಿರುವ ಮ|| ರಾ|| ನಾಗೂರು ಗುಂಡಪ್ಪನವರ ತಾಯಿಯವರಾದ ಶ್ರೀ ಶಿವಲಿಂಗಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಕಾಶೀನಾಥ ಮಾಸ್ತರ ಅರಜುಟಗಿಕರ್ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಗರಗ ಗ್ರಾಮದಲ್ಲಿರುವ ಮ|| ರಾ|| ವೀರಪ್ಪಾ ಬಳಿಗಾರ ಇವರ ಗೃಹದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಗದಗ ಟವನ್ನಿನಲ್ಲಿರುವ ಮ|| ರಾ|| ಮುಳ್ಳಸಮುದ್ರದ ತೋನ್ನಪ್ಪನವರು ತಮ್ಮ ಮನೆಗೆ ಶ್ರೀಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರನ್ನು ದಯಮಾಡಿಸಿಕೊಂಡು ಪಾದಪೂಜಾದಿಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ ಚಿಕ್ಕಮಣ್ಣೂರು ಬೃಹನ್ಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮುಂದಕ್ಕೆ ಅಡಿಯಿಟ್ಟರೆ, ಭಾರತೀಯ ಪಕ್ಷಗಳ ವಿವೇಕ ಮತ್ತು ಸಹಕಾರಗಳ ಬಗ್ಗೆ ನಂಬಿಕೆಯಿಡಬೇಕು ಇಲ್ಲದಿದ್ದರೆ ಪುನಃ ಇದೆಲ್ಲವನ್ನೂ ಬಿಟ್ಟು ಹಿಂದಕ್ಕೆ ಒಂದು ದುಃಖಕರವಾದ ದಸ್ತಗಿರಿ, ಬಂಧನ ಶೋಕದ ನೆಯಿಲ್ಲದ ಜೈಲಿನಲ್ಲಿಡುವುದು ಮೊದಲಾದ ಕೆಲಸಗಳನ್ನು ಮಾಡಿ ದೃಢಸಂಕಲ್ಪ ಹೊಂದಿರುವ ಎಚ್ಚೆತ್ತ ಭಾರತೀಯರೊಡನೆ ಜಗಳಕ್ಕೆ ನಿಲ್ಲಬೇಕಾಗುವುದು ಇನ್ನು ಸ್ವಲ್ಪ ಕಾಲ ಮೊದಲಿನ ಪರಿಸ್ಥಿತಿಗೆ ತಂದು ಬ್ರಿಟಿಷ್ ಹಕೋಟಿಯನ್ನು ಮುಂದುವರಿಸಬೇಕೆಂದರೂ ಇನ್ನು ಹತ್ತು ಹದಿನೈದು ಅಥವಾ ಹೆಚ್ಚು ವರ್ಷಗಳಕಾಲ ಬ್ರಿಟಿಷರು ಭಾರತದಲ್ಲಿ ಇರುವರೆಂದು ಹೇಳಬೇಕಾಗುತ್ತಿತ್ತು

ಬ್ರಿಟಿಷ್ ಸರ್ಕಾರವು ಮುಂದಕ್ಕೆ ಹಜ್ಜೆಯಿಡಬೇಕೆಂದು ನಿರ್ಧರಿಸಿತ್ತು ಅಧಿಕಾರಕ್ಕೆ ಬಂದ ಕೂಡಲೆ ಭಾರತದಲ್ಲಿ ಪೂರ್ಣ ಸ್ವಪ್ರಭುತ್ವದ ಸ್ಥಾಪನೆಗೆ ಸಹಾಯಕವಾಗುವ ಮಾರ್ಗವನ್ನು ಅನುಸರಿಸಬೇಕೆಂದು ನಿಶ್ಚಯಿಸಲಾಯಿತು

ನಾವು ಭಾರತಕ್ಕೆ ಹೋದಾಗ ಬಹಳ ಅಪಾಯಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು ಕಾಂಗ್ರೆಸ್ಸಿನಲ್ಲಿ ಬಹಳ ಉಗ್ರ ಹೋರಾಟದ ಅಭಿನಿವೇಶವಿತ್ತು ತೀವ್ರಗಾಮಿ ಪಕ್ಷವು ಸ್ವಾತಂತ್ರ್ಯ ಸಂಪಾದನೆ ಬಂದ ಕ್ರಾಂತಿಕಾರಕ ಮಾರ್ಗವನ್ನು ಅನುಸರಿಸುವ ಸೂಚನೆಯೂ ನಿಯೋಗದವರಿಗೆ ಕಂಡು ಬಂದಿತು

ಸಂಯುಕ್ತ ರಾಜ್ಯಾಂಗ ಸಭೆಯನ್ನು ಕೂಡಿಸಿ ಕೇಂದ್ರದಲ್ಲಿ ಸಂಯುಕ್ತ ಸರ್ಕಾರವನ್ನು ಸ್ಥಾಪಿಸುವ ಉದ್ದೇಶದ ವಿಷಯದಲ್ಲಿ ಜಯ ದೊರೆತಿದ್ದರೂ ಬ್ರಿಟಿಷ್ ಸರ್ಕಾರದ ವಿಷಯದಲ್ಲಿ ಅಪನಂಬಿಕೆಯನ್ನು ಹೋಗಲಾಡಿಸುವ ವಿಷಯದಲ್ಲಿ ಮಾತ್ರ ನಿಯೋಗಕ್ಕೆ ಪೂರ್ಣ ಜಯ ದೊರಕಿತು ಎಂದು ಹೇಳಿದರು

ಈ ಅಧಿಕಾರ ಬದಲಾವಣೆಯ ಬಗ್ಗೆ ಸೂಕ್ತ ಶಾಸನಗಳನ್ನು ಮಾಡಬೇಕಾದಾಗ ಪಾರ್ಲಿಮೆಂಟು ಏನು ಕೆಲಸ ಮಾಡಬೇಕಾಗುತ್ತದೆಯೆಂಬ ಪ್ರಶ್ನೆಗೆ ಉತ್ತರವಾಗಿ ಈಗ ಏನನ್ನೂ ಹೇಳಲಾಗುವುದಿಲ್ಲ ಈ ಪ್ರಕಟನೆಯಿಂದ ಭಾರತದಲ್ಲಿ ಏನು ಬದಲಾವಣೆಗಳು ನಡೆಯುತ್ತವೆಯೆಂಬುದನ್ನು ನೋಡಿಕೊಂಡು ಮುಂದಿನ ಕಾರ್ಯವನ್ನು ನಿರ್ಧರಿಸಬೇಕಾಗುತ್ತದೆಯೆಂದು ಹೇಳಿದರು

ಅಲ್ಪಸಂಖ್ಯಾತರ ಪ್ರಶ್ನೆಯು ಭಾರತೀಯ ಮುಖಂಡರ ವಿವೇಕದ ಮೇಲೂ ಪ್ರಪಂಚಾಭಿಪ್ರಾಯದ ಮೇಲೆಯೂ ನಿಂತಿದೆ ಪಂಡಿತ ನೆಹರು ಅವರ ಭಾಷಣಗಳು ಈ ಬಗ್ಗೆ ಪೂರ್ಣ ಭರವಸೆಯನ್ನು ಕೊಡುತ್ತವೆ ಸಾಮಾನ್ಯವಾಗಿ ಕಾಂಗ್ರೆಸ್ಸಿನ ಅಭಿಪ್ರಾಯದಲ್ಲಿ ಮುಸ್ಲಿಂ ಲೀಗನ್ನೂ ಸೇರಿಸಿಕೊಂಡು ಭಾರತದ ಭವಿಷ್ಯ ರಾಜ್ಯಾಂಗವನ್ನು ರಚಿಸುವ ಉದ್ದೇಶವೇ ಮುಖ್ಯವಾಗಿ ಕಂಡು ಬಂದಿದೆ

ಭಾರತವು ಬ್ರಿಟಿಷ್ ಕಾಮನ್‌ವೆಲ್ತಿಗೆ ಸೇರಲಿ, ಸೇರದೆ ಹೋಗಲಿ ಈ ಎರಡು ರಾಷ್ಟ್ರಗಳ ಸಹಕಾರದಿಂದ ಇಬ್ಬರಿಗೂ ಬಹಳ ಲಾಭವಿದೆ ಈ ತೊಂದರೆಗಳೆಲ್ಲ ಕಳೆದ ಮೇಲೆ ಭಾರತಕ್ಕೆ ನಿಜವಾಗಿಯೂ ಯಾವ ಬಗೆಯ ಸ್ವಾತಂತ್ರ್ಯ ಬೇಕಾಗಿತ್ತೋ ಮತ್ತು ಯಾವುದಕ್ಕೆ ಅದು ನಿಜವಾಗಿ ಅರ್ಹವಿದೆಯೋ ಅದೇ ಬಗೆಯ ಸ್ವಾತಂತ್ರ್ಯವು ಸಿಕ್ಕುವುದೆಂಬ ಭರವಸೆ ತಮಗಿದೆಯೆಂದು ತಿಳಿಸಿದರು

ದುಃಖವಾರ್ತೆ

ಗುಲ್ಬರ್ಗಾ ಡಿ|| ಜಹಗೀರ ಜೇವರಗಿಗ್ರಾಮದಲ್ಲಿರುವ ಮ|| ರಾ|| ನಾಗೂರು ಗುಂಡಪ್ಪನವರ ಧರ್ಮಪತ್ನಿಯವರಾದ ಶಿವಲಿಂಗವ್ವನವರು ಮಹಾಶಿವರಾತ್ರಿಯ ದಿವಸ ಶಿವಾಧೀನರಾದರು ಇವರು ಒಳ್ಳೇ ಶಾಂತಸ್ವಭಾವದವರಾಗಿಯೂ ಶಿವಪೂಜಾಸಕ್ತರಾಗಿಯೂ ಇದ್ದು ಜನಗಳ ಪ್ರೀತಿಗೆ ಪಾತ್ರರಾಗಿದ್ದರು ಮಹಾಪುಣ್ಯದಿನವೆನಿಸಿರುವ ಮಹಾಶಿವರಾತ್ರಿಯ ದಿವಸ ಇವರು ಶಿವಾಧೀನರಾದುದನ್ನು ನೋಡಿದರೆ, ಇವರ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಹೇಳಬೇಕಾಗಿದೆ. ಜಗದಾಚಾರ್ಯರು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಕಾಶೀನಾಥಮಾಸ್ತರ ಅಂಬುಟಗೀಕರ್

ಶ್ರೀಸಿದ್ಧಲಿಂಗವಿಜಯನಾಟಕ

ನಮ್ಮ ಪತ್ರಿಕೆಯಲ್ಲಿ ಮೊದಲೇ ಪ್ರಕಟವಾದಂತೆ ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿ ತಾ|| ೧೬-೩-೪೭ ನಯ ದಿವಸ ಮೇಲ್ಕಂಡ ನಾಟಕವು ಬಹು ಮನೋಹರವಾಗಿ ಅಭಿನಯಿಸಲ್ಪಟ್ಟಿತು ಈ ನಾಟಕದಲ್ಲಿ ಶ್ರೀಸಿದ್ಧಲಿಂಗ ಜಗದ್ಗುರುಗಳ ಬಾಲಲೀಲಾ, ಉಜ್ಜಯಿನಿ ಧರ್ಮಪೀಠಕ್ಕೆ ಪಟ್ಟಾಭಿಷೇಕ ದೇಶಸಂಚಾರ ಸಮಯದಲ್ಲಿ ನಡೆದ ಕೆಲವು ಅದ್ಭುತಮಹಿಮಾತಿಶಯಗಳು, ರಂಭಾಪುರೀ ಪೀಠದ ಪಟ್ಟಾಭಿಷೇಕ ಸಮಾರಂಭ ಮೊದಲಾದವುಗಳು ಅಭಿನಯಿಸಲ್ಪಡುವವು ಈ ನಾಟಕದಲ್ಲಿ ಪಾರಮಾರ್ಥಿಕ ವಿಷಯಗಳು ಹೆಚ್ಚಾಗಿದ್ದರೂ ನಾಟಕವನ್ನು ಬರೆದಿರುವವರು ಅವುಗಳನ್ನು ಸಾಮಾನ್ಯ ಜನರಿಗೂ ಸಹ ಸುಲಭರೀತಿಯಿಂದ ತಿಳಿದುಕೊಳ್ಳುವಂತೆ ಪ್ರತಿಪಾದಿಸಿರುವದರಿಂದ ನಾಟಕವು ಕೊನೆಯವರೆಗೂ ನೋಡುವವರಿಗೆ ಬೇಸರವನ್ನುಂಟುಮಾಡುವದಿಲ್ಲ ಈ ನಾಟಕದಲ್ಲಿ ಭವಿಷ್ಯವಾದಿಯ ಪಾತ್ರವು ಮುಖ್ಯವಾಗಿದ್ದು, ಅದನ್ನು ಸಂಗೀತ ವಿದ್ವಾನ್ ಎರೆಬೂದಿಹಾಳು ಗ್ರಾಮದ ಶಿವಲಿಂಗಯ್ಯನವರು ವಹಿಸಿ ಚೆನ್ನಾಗಿ ಅಭಿನಯಿಸುತ್ತಿರುವರು ಇವರ ಅಭಿನಯವು ಬಹು ವರ್ಣನೀಯವಾಗಿರುವದು ಬಸವಯ್ಯ ಕಾನೂರು ಎಂಬವರು ಶ್ರೀಸಿದ್ಧಲಿಂಗ ಜಗದ್ಗುರುಗಳ ಪಾತ್ರವನ್ನು ವಹಿಸಿರುವರು ಇವರೂ ಸಹ ತಮ್ಮ ಪಾತ್ರವನ್ನು ಬಹು ಸಮರ್ಪಕವಾಗಿ ಅಭಿನಯಿಸುತ್ತಿರುವರು ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ಮರುಳಸಿದ್ಧಸ್ವಾಮಿಗಳವರ ಮತ್ತು ಗತಿಸಿದ ರಂಭಾಪುರೀ ಪೀಠದ ಜಗದ್ಗುರುಗಳವರ (ಪೂರ್ವಾಶ್ರಮದ ಹೆಸರು ಪಂಡಿತ ಶ್ರೀ ಸದಾಶಿವಶಾಸ್ತ್ರಿಗಳವರ) ಹಾಗೂ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಪಾತ್ರಗಳು ಅಭಿನಯಿಸಲ್ಪಡುವವು ಒಟ್ಟಿಗೆ ಎಲ್ಲ ಪಾತ್ರಧಾರಿಗಳೂ, ತಮ್ಮ ತಮ್ಮ ಪಾತ್ರಗಳನ್ನು ಉತ್ಕೃಷ್ಟವಾಗಿ ಅಭಿನಯಿಸುತ್ತಿರುವದು ಸ್ತೋತ್ರಾರ್ಹವಾಗಿದೆ ಈ ನಾಟಕ ಕಂಪನಿಯವರು ಈ ನಾಟಕವನ್ನು ಕನ್ನಡ ದೇಶದ ಎಲ್ಲಾ ಭಾಗಗಳಲ್ಲಿಯೂ ಅಭಿನಯಿಸಿ, ಆ ಮಹಾತ್ಮನ ಪ್ರಭಾವವನ್ನು, ಸರ್ವತ್ರ ಪ್ರಕಾಶಿತವಾಗುವಂತೆ ಮಾಡಲೆಂದು ಆಶಿಸುವ

ಒಬ್ಬ ಪ್ರೇಕ್ಷಕ

ವಿವಾಹಮಹೋತ್ಸವ

ಪಾಲಿಕೊಪ್ಪ

ಧಾರವಾಡ ಡಿ|| ಪಾಲಿಕೊಪ್ಪ ಗ್ರಾಮದಲ್ಲಿ ಮಾಘ ಬಹುಳ ೫ ಸೋಮವಾರ ದಿವಸ, ಮಾಹೇಶ್ವರ ವಟುಗಳಿಗೆ ದೀಕ್ಷೋಪನಯನಾದಿಗಳು ನಡೆದವಲ್ಲದೆ, ಅದೇ ದಿವಸ ಹುಬ್ಬಳ್ಳಿಯಲ್ಲಿರುವ ವೇ|| ಕಲ್ಯಾಣಿ ಶಿರಕಯ್ಯನವರ ಪುತ್ರಿ ಚಿ|| ಸೌ|| ನೀಲಾದೇವಿಗೂ ಸಂಕ್ಲೀಪಕ ಹಿರೇಮಠದ ವೇ|| ಗುರುಪಾದಯ್ಯನವರ ಪುತ್ರ ಚಿ|| ಮುರಿಗೇಶ್ವರನಿಗೂ ವಿವಾಹಮಹೋತ್ಸವವು ವೈಭವದಿಂದ ನೆರವೇರಿತು. ಈ ಕಾರ್ಯಕ್ರಮಗಳೆಲ್ಲವೂ ಶ್ರೀ ಜಗದ್ಗುರು ರಂಭಾಪುರೀ ಪೀಠದ ಉತ್ತರಾಧಿಕಾರಿಗಳಾಗಿರುವ ಶ್ರೀ ಗಂಗಾಧರಶಿವಾಚಾರ್ಯಶಿವಯೋಗೀಶ್ವರರ ಗುರುತ್ವದಲ್ಲಿಯೂ, ಶ್ರೀ ಮುಕ್ತಿಮಂದಿರಗುರುಕುಲದಲ್ಲಿ ಅಧ್ಯಾಪಕರಾಗಿರುವ ವೇ|| ಪಿ ಎಂ ಗಂಗಾಧರಶಾಸ್ತ್ರಿಗಳ ಪೌರೋಹಿತ್ಯದಲ್ಲಿಯೂ ವಿಧ್ಯುಕ್ತವಾಗಿ ನೆರವೇರಿದವು ಈ ಮಹಾಸಮಾರಂಭಕ್ಕೆ ಅನೇಕ ಗ್ರಾಮಗಳಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನ ಸಂಘದವರು ಆಗಮಿಸಿದ್ದರು ಅವರೆಲ್ಲರೂ ಪರಮಾನಂದದಿಂದ ಭಜನೆಯನ್ನು ಮಾಡುತ್ತಿದ್ದರು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತ್ತು ಈರೀತಿ ಕಾರ್ಯಗಳು ೨ ೩ ದಿವಸಗಳವರೆಗೆ ಬಹು ಸಂಭ್ರಮದಿಂದ ನೆರವೇರಿದವು ಈ ಮಹೋತ್ಸವದಲ್ಲಿ ಭಾಗಿಗಳಾದವರೆಲ್ಲರಿಗೂ ಶ್ರೀ ಜಗದಾಚಾರ್ಯರು ಸಕಲ ಸಂಪತ್ಸಮೃದ್ಧಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತ

ಬೌರಿಂಗ್‌ಪೇಟೆ ತಾ|| ರಾಬರ್ಟ್‌ಸನ್‌ಪೇಟೆ ಹೋಬಳಿಗೆ ಸೇರಿದ ಪವ್ವನಹಳ್ಳಿ ಶ್ರೀರಂಗಮ್ಮದೇವರ ಜಾತ್ರೆಯ ಸಂದರ್ಭದಲ್ಲಿ ಸಂಪೂರ್ಣವಾಗಿ ಪ್ರಾಣಿವಧೆಯನ್ನು ನಿಲ್ಲಿಸಿ ಸಾತ್ವಿಕರೀತಿಯಿಂದ ಪೂಜಾದಿಕೈಂಕರ್ಯಗಳನ್ನು ನಡೆಯಿಸಲಾಯಿತೆಂದು ತಿಳಿದುಬರುತ್ತದೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ×೧೪ ಚಿಕ್ಕದು	೧—೩—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೩—೦
ಶ್ರೀ ಶಂಕರಾಚಾರ್ಯರು ಪರಾಭವಮಾಡಿದರೆಂಬ ವಿವರ ಅಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಗೋತ್ರಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀ ಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ಶಿವಶಂಕರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ

ಸ್ಥಳದವರಿಗೆ ೨ ರೂ ೮ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ಮಾರ್ಚಿ ೧೯೪೭ | ಸಂಚಿಕೆ ೪೫

ಮಹಾಶಿವರಾತ್ರಿವ್ರತಾಚರಣೆ

ಶ್ರೀ ಮುಕ್ತಿಮಂದಿರಗುರುಕುಲದಲ್ಲಿ ಮಹಾಶಿವರಾತ್ರಿ ವ್ರತಾಚರಣೆಯು ಕಳೆದ ತಿಂಗಳು ೧೯ ನೆಯ ತಾರೀಖಿನ ದಿವಸ ಬಹು ವೈಭವದಿಂದ ನೆರವೇರಿತು ಅಂದು ಪ್ರಾತಃಕಾಲ ಗುರುಕುಲ ವಿದ್ಯಾರ್ಥಿಗಳಿಂದ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಮೂರ್ತಿಗಳಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳು ನೆರವೇರಿದವು ಮಧ್ಯಾಹ್ನ ೩ ಘಂಟೆಯಿಂದ ೬ ಘಂಟೆಯವರೆಗೆ ಜಯಂತೀಮಹೋತ್ಸವ ನಿಮಿತ್ತವಾದ ರಥೋತ್ಸವವು, ನಾನಾವಿಧ ವಾದ್ಯವೈಭವದೊಡನೆ ಮಹಾಸಂಭ್ರಮದಿಂದ ನೆರವೇರಿತು ಆ ಕಾಲಕ್ಕೆ ಸಾವಿರಾರು ಜನರು ಆಗಮಿಸಿದ್ದರು ಶ್ರೀಗಳವರಿಂದ ಧರ್ಮೋಪದೇಶವು ನಡೆಯಿತು ರಾತ್ರಿ ೬ ಘಂಟೆಯಿಂದ ಬೆಳಗ್ಗೆ ೬ ಘಂಟೆಯವರೆಗೆ ರುದ್ರಾಭಿಷೇಕ ಶಿವಭಜನೆ ಗುರುಭಜನೆ ಮೊದಲಾದವುಗಳು ಮಹಾ ಭಕ್ತಿಯಿಂದ ನೆರವೇರಿದವು ಜಯಂತಿ ವ್ರತಾಚರಣೆಗಾಗಿ ಶಿಗ್ಗಲಿ ಗ್ರಾಮದ ವೇ॥ ದಾನಶೂರ ಸಿದ್ಧಯ್ಯನವರು ಸುಂದರವಾದ ರಥವನ್ನು ಕಟ್ಟಿಸಿ ಕಳುಹಿಸಿದ್ದರು ಬೆಂಗಳೂರು ನಗರದ ವೇ॥ ಚಿಂತಾಮಣಿ ಲಿಂಗಾರಾಧ್ಯರು ಕಳುಹಿಸಿದ ೧॥ ಅಡಿ ಎತ್ತರವಿರುವ ಪಂಚಲೋಹದ ಲಿಂಗೋದ್ಭವಮೂರ್ತಿಯು ಅದೇ ಸಮಯಕ್ಕೆ ಬಂದುದರಿಂದ ಉತ್ಸವಕ್ಕೆ ಬಹಳ ಶೋಭೆಯುಂಟಾಯಿತು ಈ ಉತ್ಸವ ಸಮಯದಲ್ಲಿ ಅನೇಕ ಜನ ಅಂಗಡಿಕಾರರು ಆಗಮಿಸಿದ್ದರು ಗುರುವಾರ ಬೆಳವಣಕಿ ಗ್ರಾಮದ ವೇ॥ ಮೃತ್ಯುಂಜಯ ಶಾಸ್ತ್ರಿಗಳವರು ಅನ್ನದಾನ ಮಾಹಾತ್ಮ್ಯದ ಬಗ್ಗೆ ಹೃದಯಂಗಮವಾದ ಕೀರ್ತನವನ್ನು ಮಾಡಿದರು ಮಹಾಶಿವರಾತ್ರಿವ್ರತಾಚರಣೆಗಾಗಿ ಬಹು ಸಾವಿರಾರು ರೂಪಾಯಿಗಳ ಖರ್ಚಿನ ಭಾರವನ್ನು ಚಿಂಚಲಿ ಗ್ರಾಮದ ಶ್ರೀಮಾನ್ ಕತ್ತಿ ಲಿಂಗಪ್ಪನವರು ವಹಿಸಿಕೊಂಡರು ಈ ಶ್ರೀಮಂತರು ಎರಡು ದಿನ ಮುಂಚಿತವಾಗಿಯೇ ಸಾವಿರಾರು ಜನ ಇಷ್ಟಮಿತ್ರರೊಡನೆ ಶ್ರೀ ಮುಕ್ತಿಮಂದಿರಕ್ಕಾಗಮಿಸಿ ಪರಮೋತ್ಸಾಹದಿಂದ ಎಲ್ಲ ಕಾರ್ಯಗಳನ್ನು ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರು ಇವರಿಗೆ ಶ್ರೀ ಜಗದಾಚಾರ್ಯರು ಸದಾ ಮಂಗಲಪರಂಪರೆಯನ್ನೀಯಲೆಂದು ಪ್ರಾರ್ಥಿಸುವ,

ವ್ಯವಸ್ಥಾಪಕ,
ಶ್ರೀ ಮುಕ್ತಿಮಂದಿರಗುರುಕುಲ

ಶ್ರೀ ಮುಕ್ತಿಮಂದಿರಕ್ಕೆ ಭೂದಾನ

ಶ್ರೀ ಮುಕ್ತಿಮಂದಿರದ ಕಾರ್ಯಕ್ಷೇತ್ರವು ಅದರ ಹೆಗ್ಗುರಿಯಂತೆ ಅತಿ ವಿಶಾಲವಾದುದು ಆದರ ಸ್ಥಾಪಕರಾದ ಶ್ರೀ ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರ ಮನೋವೃತ್ತಿಯು ಜಗತ್ಕಲ್ಯಾಣ ದೃಷ್ಟಿಯಿಂದ ಕಾರ್ಯಸಿದ್ಧಿಯನ್ನನುಲಕ್ಷಿಸಿ ಸದ್ಧರ್ಮಶಾಂತಿಪ್ರಚಾರದ ರಾಜಮಾರ್ಗದಲ್ಲಿ ಧಾವಿಸುತ್ತಲಿದೆ "ಮನಸ್ವೀ ಕಾರ್ಯಾರ್ಥೀ ನ ಗಣಯತಿ ದುಃಖಂ ನ ಚ ಸುಖಂ" ಎಂಬಂತೆ ಶ್ರೀಗಳವರು ಲೋಕಹಿತಕ್ಕೋಸ್ಕರವಾಗಿ ಸುಖದುಃಖಗಳನ್ನು ಸಮೀಕರಿಸಿ ಶ್ರಮಿಸುತ್ತಿರುವರು ಮನೋವೃತ್ತಿಯು ಗಂಭೀರವಾದರ ಜನಾನುರಾಗವು ಅಧಿಕವಾಗುವುದು ಸಹಜ! ಶ್ರೀಗಳವರ ಸಂಕಲ್ಪಸಿದ್ಧಿಗಾಗಿ ಅನೇಕರು ಸೇವೆಯನ್ನು ಸಲ್ಲಿಸುತ್ತಿರುವರು ಚಿಂಚಲಿ ಗ್ರಾಮವಾಸಿಗಳಾದ ಶ್ರೀಮಾನ್ ಕತ್ತಿ ಲಿಂಗಪ್ಪನವರು ಅತ್ಯುತ್ತಮವಾದ ೧೨ ಎಕರೆ ಭೂಮಿಯನ್ನು ಶ್ರೀ ಮುಕ್ತಿಮಂದಿರದ ಕಾರ್ಯಸಿದ್ಧಿಗಾಗಿ ಉತ್ಪ್ರೇರಿತ ಭಕ್ತಿಭಾವದಿಂದ ಶ್ರೀಗಳವರಿಗೆ ಸಲ್ಲಿಸಿರುವರು ಶ್ರೀಮಂತರ ದಾನವು ಸ್ತುತ್ಯವಾಗಿದೆ ಶ್ರೀ ಪರಮಾತ್ಮನು ಇವರಿಗೆ ಸಮಸ್ತ ಸನ್ಮಂಗಳಗಳನ್ನೀಯಲಿ

ವ್ಯವಸ್ಥಾಪಕ,
ಶ್ರೀ ಮುಕ್ತಿಮಂದಿರಗುರುಕುಲ

ಕನಕಗಿರಿಯ ದಿವ್ಯಜ್ಯೋತಿಯೊಂದು ನಂದಿತು.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕುವಿಧ ಪುರುಷಾರ್ಥಗಳು ಮಾನವನಿಂದ ಪಡೆಯತಕ್ಕವುಗಳಾಗಿರುವವು ಈ ಚತುರ್ವಿಧ ಪುರುಷಾರ್ಥಗಳೊಳಗೆ ಅರ್ಥ ಕಾಮಗಳು ಇಹಲೋಕಕ್ಕೆ ಸಂಬಂಧಪಟ್ಟವುಗಳು ಮೋಕ್ಷವು ಪರಲೋಕಕ್ಕೆ ಸಂಬಂಧಿಸಿದುದು. ಧರ್ಮವು ಎರಡಕ್ಕೂ ಸಂಬಂಧಪಟ್ಟುದು ಧರ್ಮವು ಇಹಪರಗಳೆರಡನ್ನೂ ಸಾಧಿಸಿಕೊಡುವ ಹಿರಿಯ ಸಾಧನವಾಗಿರುವದು ಇಂಥ ಪುರುಷಾರ್ಥಗಳ ಸಾರವನ್ನು ಸಹಾ ಪಡೆದು ಇಹಪರಗಳಲ್ಲಿ ಉತ್ತಮವಾದ ಕೀರ್ತಿಯನ್ನು ಪಡೆಯುವದು ಮಾನವನ ಆದ್ಯಕರ್ತವ್ಯವಾಗಿರುವದು ಇಂಥ ಪುರುಷಾರ್ಥಗಳನ್ನು ಪಡೆದ ಧನ್ಯಜೀವಿಗಳಾದವರಲ್ಲಿ ರಾಯಚೂರು ಜಿಲ್ಲಾ ಕನಕಗಿರಿಯ ಪತ್ರದ ಯಜಮಾನ ಬಸಪ್ಪನವರೆಂದು ಹೇಳಬಹುದು ಈ ಮಹೋದಯರು ತಾ॥ ೭-೧-೧೯೪೭ನೇ ಮಂಗಳವಾರದ ದಿನ ಮಧ್ಯಾಹ್ನ ೩ ಘಂಟೆಯ ಸಮಯಕ್ಕೆ ೭೫ನೆಯ ವಯಸ್ಸಿನಲ್ಲಿ ತಮ್ಮ ಭೌತಿಕಶರೀರವನ್ನು ತ್ಯಜಿಸಿದರೆಂದು ಬರೆಯಲು ಅತ್ಯಂತ ದುಃಖವೆನಿಸುತ್ತದೆ ಇವರು ಮಿಕ್ಕ ಜನಗಳಂತೆ ಪ್ರಾಪಂಚಿಕಸುಖದಲ್ಲಿ ಮಗ್ನರಾಗದೆ ಲೌಕಿಕ ಪಾರಮಾರ್ಥಿಕವೆರಡನ್ನೂ ಸಾಧಿಸಿ ಧನ್ಯಜೀವಿಗಳಾದರು ಇವರು ಗುರುಲಿಂಗಜಂಗಮಪ್ರೇಮಿಗಳೂ ಆಚಾರ್ಯಪೀಠಾಭಿಮಾನಿಗಳೂ ಶಿವಪೂಜಾಲೋಲರೂ ಆಗಿದ್ದರು ಇವರಲ್ಲಿ ದೇವಭಕ್ತಿಯು ತಾಂಡವವಾಡುತ್ತಿತ್ತು ಇವರು ಅನ್ನದಾನದಲ್ಲಿ ಮಹಾ ತ್ಯಾಗಿಗಳಾಗಿದ್ದರು ಯಾವ ಕಾಲದಲ್ಲಿಯೇ ಆಗಲಿ ಎಷ್ಟು ಜಂಗಮರು ಬಂದರೂ ಅವರಿಗೆ ತೃಪ್ತಿಪಡಿಸಿ ಕಳುಹಿಸುತ್ತಿದ್ದರು ಇವರು ಅನೇಕ ಧರ್ಮಸಂಸ್ಥೆಗಳಿಗೆ ದ್ರವ್ಯರೂಪವಾಗಿ ಸೇವೆಯನ್ನು ಸಲ್ಲಿಸಿರುವರು ಇಂತಹ ಮಹಾವ್ಯಕ್ತಿಯನ್ನು ಕಳೆದುಕೊಂಡದ್ದು ಕನಕಗಿರಿಯ ವೀರಶೈವರ ದುರ್ದೈವವೇ ಸರಿ! ಇವರ ಕೀರ್ತಿಯು ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಬೇಕೆಂಬ ಸದುದ್ದೇಶದಿಂದ ಕನಕಗಿರಿ ಹಿರೇಮಠದ ಶ್ರೀ ಷ॥ ಬ್ರ॥ ಪಂಚಾಕ್ಷರಶಿವಾಚಾರ್ಯ ಸ್ವಾಮಿಗಳು ಮರಣಕಾಲದ ಪೂರ್ವದಲ್ಲಿಯೇ ಶ್ರೀಬಸಟ್ಟೆಪ್ಪನವರಿಗೂ ಇವರ ಮಕ್ಕಳಿಂದಿರಾದ ಶ್ರೀಯುತ ದೊಡ್ಡಬಸವಪ್ಪನವರಿಗೂ ಮರಿಬಸವಪ್ಪನವರಿಗೂ ಬೋಧಿಸಿ ಕಾಶೀ ಜಗದ್ಗುರು ಮಹಾಪೀಠದಲ್ಲಿ ನೂತನವಾಗಿ ನಿರ್ಮಿತವಾಗುತ್ತಿರುವ ವೀರಶೈವಜ್ಞಾನಮಂದಿರಕ್ಕೆ ೧೦೧ ರೂಪಾಯಿಗಳನ್ನೂ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಸಮ್ಮಾನಗ್ರಂಥವಾದ 'ವೀರಶೈವಸಿದ್ಧಾಂತ' ಗ್ರಂಥಕ್ಕೆ ೧೦೧ ರೂಪಾಯಿಗಳನ್ನೂ, ಇಲ್ಲಿಯ ಗುರುವರ್ಯರಾದ ಶ್ರೀಶಿವಯೋಗಿ ಬಾಲಕ್ಕ ಸ್ವಾಮಿಗಳ ಮಠಕ್ಕೆ ೧೦೧ ರೂಪಾಯಿಗಳನ್ನೂ ದಾನಮಾಡಿಸಿದರು ಧನ್ಯ, ಧನ್ಯ ಧರ್ಮಕಾರ್ಯಕ್ಕಾಗಿ ಹಗಲಿರುಳು ದುಡಿಯುತ್ತಿರುವ ತಂದೆಮಕ್ಕಳ ಜನ್ಮವೇ ಧನ್ಯವಾದುದು ಇಷ್ಟೇ! ತಾರೀಕು ೮-೧-೧೯೪೭ನೇ ಬುಧವಾರ ಉದಯ ೧೦ ಘಂಟೆಗೆ ಸಮಾಧಿಕ್ರಿಯೆಯು ಹಿರೇಮಠದ ಶ್ರೀಪಂಚಾಕ್ಷರ ಶಿವಾಚಾರ್ಯರ ನೇತೃತ್ವದಲ್ಲಿ ಶಾಸ್ತ್ರೀಯವಾಗಿ ನೆರವೇರಿತು ಕಳೇಬರದ ಅಂತ್ಯ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ಸ್ಮಶಾನಯಾತ್ರೆಗೆ ಸ್ವಮತ ಪರಮತೀಯರು ೧ ಸಾವಿರದವರೆಗೆ ಸೇರಿದ್ದರು ಆಗ ಶ್ರೀದೊಡ್ಡಬಸವಪ್ಪನವರು ವಿಪುಲವಾಗಿ ದಾನಧರ್ಮಗಳನ್ನು ಮಾಡಿ ಕೀರ್ತಿಭಾಜನರಾದರು ಶ್ರೀಜಗದ್ಗುರು ಪಂಚಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬವರ್ಗಕ್ಕೆ ದುಃಖಶಮನವನ್ನೂ ಇತ್ತು ಕಾಪಾಡಲೆಂದು ಪ್ರಾರ್ಥಿಸುವ

ರಾಮಲಿಂಗಯ್ಯ ಬಿಲ್ಲಕೊಂಡಿಮಠ

ದುಃಖವಾರ್ತೆ

ಧಾರವಾಡ ಟೌನಿನಲ್ಲಿರುವ ಧರ್ಮತರಂಗಿಣಿ ಮತ್ತು ಕರ್ಣಾಟಕ ಪ್ರಿಂಟ್ ಪತ್ರಿಕೆಗಳ ಒಡೆಯರೂ ಸಂಪಾದಕರೂ ಆಗಿದ್ದ ವೇ॥ ಕನವಳ್ಳಿ ಹಿರೇಮಠದ ಶಿವಲಿಂಗಶಾಸ್ತ್ರಿಗಳ ಪುತ್ರರಾದ ಶ್ರೀ ವೃಷಭೇಂದ್ರಾರ್ಯರು ಕಳೆದ ತಿಂಗಳು ೧೭ ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ ಇವರಿಗೆ ಅವಸಾನ ಕಾಲದಲ್ಲಿ ೩೦ ವಯಸ್ಸಾಗಿತ್ತು ಇವರು ವ್ಯವಹಾರಕುಶಲರೂ ಕಾರ್ಯದಕ್ಷರೂ ಆಗಿದ್ದರು ಇವರಿಗೆ ೨ ವರುಷದ ಒಬ್ಬ ಪುತ್ರನೂ ೬ ವರುಷದ ಒಬ್ಬ ಪುತ್ರಿಯೂ ಇರುವರು ಅತ್ಯಂತ ವೃದ್ಧರಾಗಿರುವ ತಂದೆತಾಯಿಗಳಿಗೆ ಇವರ ವಿಯೋಗದಿಂದ ವಿಶೇಷ ದುಃಖ ಉಂಟಾಗಿರುವದು ಈಶ್ವರೇಚ್ಛೆಗೆ ಉಪಾಯವಿಲ್ಲ ಇವರ ಸ್ಮಶಾನಯಾತ್ರೆಗೆ ಬಹುಜನರು ಆಗಮಿಸಿದ್ದರು ಅನೇಕ ದಾನಧರ್ಮಗಳು ಮಾಡಲ್ಪಟ್ಟವು ಆ ಸಮಯದಲ್ಲಿ ಬಡ ವಿದ್ಯಾರ್ಥಿಗಳ ಸ್ಕಾಲರ್ ಶಿಪ್ ಸಲುವಾಗಿ, ಲಿಂಗಾಯತ ವಿದ್ಯಾವರ್ಧಕ ಫಂಡಿಗೆ ೧೦೦೦ ರೂಪಾಯಿಗಳು ಸಮರ್ಪಿಸಲ್ಪಟ್ಟವು ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ, ದುಃಖಿತಾಗಿ

ಪಂಚಾಚಾರ್ಯಪ್ರಭಾ.

೧೯೪೭ನೆಯ ಮಾರ್ಚಿ ತಾ|| ೧೦ನೇ ಸೋಮವಾರ

ಶಿವಯೋಗ

ಶಿವಯೋಗವೆಂದರೆ ಶಿವನಲ್ಲಿ ಚಿತ್ತವೃತ್ತಿಗಳನ್ನು ಲಯಗೊಳಿಸಿ ಬಾಹ್ಯಾಕಾರವೃತ್ತಿಗಳನ್ನು ಶಿವಾಕಾರಗಳನ್ನಾಗಿ ಮಾಡುವುದೆಂದು ಅರ್ಥವಾಗುತ್ತದೆ. ಹೀಗೆ ಮಾಡುವುದು ಸುಲಭಸಾಧ್ಯವಲ್ಲ. ಒಂದು ಘನ ಪರ್ವತದ ಮೇಲ್ಭಾಗದಿಂದ ಅತಿವೇಗದಿಂದ ಹರಿಯುವ ದೊಡ್ಡ ಪ್ರವಾಹವನ್ನು ತಡೆದು ಅದನ್ನು ಮೇಲಕ್ಕೆ ತಿರುಗಿಸುವದು ಎಷ್ಟು ಕಷ್ಟವೋ, ಸ್ರಕ್ಚಂದನ ವನಿತಾದಿ ವಿಷಯದೇಶವೆಂಬ ತಗ್ಗಿಗೆ ಬೀಳುತ್ತಿರುವ ಚಿತ್ತವೃತ್ತಿಪ್ರವಾಹವನ್ನು ತಡೆದು ಶಿವನೆಂಬ ಊರ್ಧ್ವಪ್ರದೇಶಕ್ಕೆ ತಿರುಗಿಸುವುದು ಅಷ್ಟೇ ಕಷ್ಟಸಾಧ್ಯವಾಗಿರುವುದು. ಇಂಥ ಕಷ್ಟತರವಾದ ಶಿವಯೋಗವು ಯಾವನಿಗೆ ಸಾಧ್ಯವಾಗುವುದೋ ಅವನೇ ವೀರನು. ಇವನಿಗೆ ಬಾಹ್ಯಶತ್ರುಗಳಿಲ್ಲದಿದ್ದರೂ ಕಾಮಕ್ರೋಧಾದ್ಯಂತಃಶತ್ರುಗಳು ಇದ್ದೇ ಇರುವರು. ಶಿವಯೋಗವನ್ನು ಸಾಧಿಸಿದ ವೀರನು ಮಾತ್ರ ಅಜಾತಶತ್ರುವೆಂದೆನಿಸುವನು. ಇವನು ಕಾಮಕ್ರೋಧಾದಿ ಷಡ್ರಿಪುಗಳಿಗೆ ಜನಕ (ಉಪಾದಾನಕಾರಣ)ವಾದ ಚಿತ್ತವೆಂಬ ಪ್ರಬಲಶತ್ರುವನ್ನೇ ಜಯಿಸಿಬಿಟ್ಟಿರುವಾಗ ಕಾಮಾದಿಗಳೆಲ್ಲಿಂದ ಒದಗಬೇಕು? ಚಿತ್ತವನ್ನು ಜಯಿಸಿದವನು ಕೇವಲ ಬಾಹ್ಯೇಂದ್ರಿಯಗಳನ್ನು ಜಯಿಸಿಯೇ ಇರುವನು. ಚಿತ್ತವನ್ನು ಜಯಿಸುವದೆಂದರೆ ಅದರ ಸ್ವಾಭಾವಿಕವಾದ ವಿಷಯಗಳಲ್ಲಿಯ ಹರಿದಾಟವನ್ನು ನಿಲ್ಲಿಸಿ ಶಿವನಲ್ಲಿ ಲಯಗೊಳಿಸುವಿಕೆ. ಇದೇ ಶಿವಯೋಗವು. ಇಂಥ ಶಿವಯೋಗವುಳ್ಳವನೇ ಪ್ರತ್ಯಗಾತ್ಮನಾದ ಶಿವನನ್ನು ಸಾಕ್ಷಾತ್ಕರಿಸುವನು. ಶಿವನನ್ನು ಸಾಕ್ಷಾತ್ಕರಿಸಿದವನೇ ಮುಕ್ತನು. ಈ ಬಗ್ಗೆ "ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್ ||" ಎಂಬ ಶ್ರುತಿಯು ಪ್ರಮಾಣವಾಗಿದೆ. ಈ ಶಿವಯೋಗವು ಸಾಧನರೂಪವೆಂತಲೂ ಸಾಧ್ಯರೂಪವೆಂತಲೂ ಎರಡು ಪ್ರಕಾರವಾಗಿರುವುದು. ಸಾಧನರೂಪವಾದ ಶಿವಯೋಗದಲ್ಲಿ ಭಕ್ತಾದಿ ಷಟ್‌ಸ್ಥಲಗಳೂ ಅವುಗಳಲ್ಲಿ ಅಡಕವಾಗಿರುವ ಯಮಾದಿ ಧಾರಣಾಂತಗಳಾದ ಏಳು ಅಂಗಗಳೂ ಅಂತರ್ಗತಗಳಾಗುವವು. ಸಾಧ್ಯರೂಪವಾದ ಶಿವಯೋಗವು [illegible] ದರ್ಶನದಲ್ಲಿ ಸಮಾಧಿಯೆಂದು ಹೇಳಿಸಿಕೊಳ್ಳುವ ಐಕ್ಯಸ್ಥಲವೆನಿಸುವದು. ಈ ಐಕ್ಯಸ್ಥಲವನ್ನು ಹೊಂದಿದವನೇ ಜೀವಭಾವವನ್ನು ಬಿಟ್ಟು ಶಿವನಾಗುವನು. ಇವನು ಸರ್ವೋಪಾಧಿಗಳಿಂದ ಬಿಡಲ್ಪಟ್ಟವನಾದಕಾರಣ ಶಿವನೆನಿಸಿಕೊಳ್ಳುವನು. ಆದ್ದರಿಂದ "ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತೋ ಭವೇಚ್ಛಿವಃ" ಎಂದು ಶಿವಾಗಮವು ಸಾರುತ್ತದೆ. ಕೀಟವು ಭ್ರಮರಯೋಗದಿಂದ ಭ್ರಮರವೇ ಆಗುವಂತೆ ಮನುಷ್ಯನು ಸಾಧನರೂಪವಾದ ಶಿವಯೋಗದಿಂದ ಶಿವನೇ ಆಗುವನು. ಸಾಧನರೂಪವಾದ ಶಿವಯೋಗವು ಬಾಹ್ಯವೆಂತಲೂ ಅಭ್ಯಂತರವೆಂತಲೂ ಎರಡು ಪ್ರಕಾರವಾಗಿರುವದು. ಬಾಹ್ಯಶಿವಯೋಗವೆಂದರೆ ಬಾಹ್ಯಶರೀರದಲ್ಲಿ ಇಷ್ಟಲಿಂಗಧಾರಣವೆನಿಸುಕೊಳ್ಳುವುದು. ಇದು ಮುಮುಕ್ಷುವಾದ ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರಬೇಕು. ಇಲ್ಲದಿದ್ದರೆ ಕಾರ್ಮಿಕಮಲವೆಂಬ ಪಾಶವು ನಾಶವಾಗಿ ಹೋಗುವುದೇ ಇಲ್ಲವು. ಅದು ಉಳಿದರೆ ಮುಕ್ತಿಯು ಲಭಿಸುವದಿಲ್ಲ. ಈ ವಿಷಯವನ್ನು "ಅಮೃತಸ್ಯ ದೇವ ಧಾರಣೋ ಭೂಯಾಸಂ" "ಅತಪ್ತತನೂರ್ನತದಾಮೋ ಅಶ್ನುತೇ" ಇತ್ಯಾದಿ ಶ್ರುತಿಗಳು ಉದ್ಘೋಷಿಸುವವು. ಧನುರ್ಧಾರಿಗೆ ಆದಿಯಲ್ಲಿ ಸ್ಥೂಲಗುರಿಯು ಸಿದ್ಧಿಸದೆ ಸೂಕ್ಷ್ಮಗುರಿಯು ಸಿದ್ಧಿಸದಿರುವಂತೆ ಮಾನವನಿಗೆ ಬಾಹ್ಯಯೋಗವಿಲ್ಲದೆ ಅಭ್ಯಂತರ ಸೂಕ್ಷ್ಮಯೋಗವು ಸಿದ್ಧಿಸಲಾರದು. ಈ ಉಭಯವಿಧ ಶಿವಯೋಗಕ್ಕೆ ಅಷ್ಟಾವರಣಗಳೂ, ಪಂಚಾಚಾರಗಳೂ, ಅಂಗಗಳಾಗಿರುವವು. ಈ ಶಿವಯೋಗಕ್ಕೆ ಲಿಂಗಾಂಗಸಾಮರಸ್ಯವೆಂದು ಬೇರೊಂದು ಹೆಸರುಂಟು. ಮೋಕ್ಷಾಪೇಕ್ಷಿಯು ಮೊದಲು ಸಾಧನಸಂಪನ್ನನಾಗಬೇಕು. ಸಾಧನವಿಲ್ಲದೆ ಸಾಧ್ಯರೂಪವಾದ [illegible] ಲೋಕಾನುಭವ [illegible] ಸಾಧನಗಳಿಲ್ಲದೆ ಘಟವು ಸಿದ್ಧಿಸ[illegible] ಅಷ್ಟಾವರಣಾದಿ [illegible] ಈ ಸಂಪಾದನೆ [illegible] ಅನುಸರಿಸಿ [illegible] ಸಾಧನಸಹಿತ [illegible] (ಲಿಂಗಾಂಗಸಾಮರಸ್ಯವು) ಪ್ರಾಪ್ತ [illegible] ಶಿವಯೋಗದಲ್ಲಿಯೇ ಶಿವಭಕ್ತಿ ಶಿವಜ್ಞಾನ ಶಿವಧ್ಯಾನ ಶಿವಾರ್ಚನ, ಶಿವ [illegible] ಅಂತರ್ಗತಗಳಾಗುವವು. ಈ ಸಾಧನಸಹಿತ ಶಿವಯೋಗವು ದೀಕ್ಷಾಕಾಲದಲ್ಲಿ ಶಿಷ್ಯನಿಗುಂಟಾಗತಕ್ಕದ್ದು. ಆ ಕಾಲದಲ್ಲಿ ಉಪದೇಶಿಸಿದ ಪ್ರಕಾರ ಆ ಸಾಧನಗಳನ್ನು ಆಚರಿಸುತ್ತ ಹೋದರೆ ಸಾಧ್ಯರೂಪವಾದ ಮೋಕ್ಷವು ಲಭಿಸುವದು. ಗುರುವಿನ ಅಪ್ಪಣೆಗೆ ವಿರುದ್ಧವಾಗಿ ಆಚರಿಸಿದ್ದಾದರೆ ಮೋಕ್ಷವು ದೊರೆಯದು. ಗುರುವಿನ ಆಜ್ಞಾಭಂಗದೋಷಕ್ಕೆ ಪಾತ್ರನಾಗುವನು. ಕ್ರಿಯಾಸಾರಕಾರರು ಲಿಂಗಾಂಗಸಾಮರಸ್ಯವು ಎರಡು ಪ್ರಕಾರವೆಂದು ಹೇಳಿ ಆಮೇಲೆ ಸಾಧನಸಹಿತವಾದ ಸಾಮರಸ್ಯವು ಗುರುವಿನಿಂದಲೇ ದೀಕ್ಷೆಯಲ್ಲಿ ಮಾಡಲ್ಪಡುವದೆಂತಲೂ ಎರಡನೆಯದು ಫಲರೂಪವಾದುದೆಂತಲೂ ಹೇಳಿದ್ದಾರೆ. '[illegible] ಗುರುವಾಕ್ಯಸ್ಯ ಪಾಲನಂ ತತ್' ಎಂದು ಹೇಳಿರುವದರಿಂದ ತನ್ನ ದೀಕ್ಷಾಗುರುವಿನ ಅಪ್ಪಣೆಯನ್ನು ಯಾವಜ್ಜೀವವೂ ಪಾಲಿಸಲೇಬೇಕು. ಯಾವ ಮಾನವನು ತನಗೆ ದೀಕ್ಷಾಕಾಲದಲ್ಲಿ ಒದಗಿದ ಅಷ್ಟಾವರಣಗಳನ್ನು ಬಿಡುವನೋ ಅವನು ಎಂದಿಗೂ ವೀರಶೈವನೆನಿಸಿಕೊಳ್ಳಲಾರನು ಮತ್ತು ಸಾಧನಾವಸ್ಥಾಸಹಿತ ಶಿವಯೋಗಸಂಪನ್ನನೆಂತಲೂ ಹೆಸರಿಸಿಕೊಳ್ಳಲಾರನು. ಸಾಧಕನೆನಿಸದಿದ್ದರೆ ಸಾಧ್ಯ (ಮೋಕ್ಷ) ಪ್ರಾಪ್ತನೂ ಸಹ ಆಗಲಾರನು. ಆದ್ದರಿಂದ ಸಾಧನಾವಸ್ಥಾಸಹಿತ ಶಿವಯೋಗಿಯೆನಿಸಿಕೊಂಡು ಸಾಧ್ಯರೂಪವಾದ ಶಿವಯೋಗಸಂಪನ್ನನಾಗಬೇಕು. ಇದೇ ಶಿವಯೋಗದ ರಹಸ್ಯ! ಆದ್ದರಿಂದ ವೀರಶೈವರೆನಿಸುವ ಸರ್ವರೂ ಗುರೂಪದೇಶದಂತೆ ಶಿವಯೋಗಸಾಧನೆಯನ್ನು ಮಾಡಿ ಪುನರಾವೃತ್ತಿರಹಿತವಾದ ಮೋಕ್ಷಸಾಮ್ರಾಜ್ಯವನ್ನು ಪಡೆಯಬೇಕು.

ಕಾಮನ್ಸ್ ಸಭೆಯಲ್ಲಿ ಕ್ರಿಪ್ಸರ ಹೇಳಿಕೆ

ಭಾರತದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಕ್ರಿಪ್ಸ್‌ರವರು ಚರ್ಚೆಯನ್ನು ಆರಂಭಿಸುತ್ತಾ "ಸರಕಾರದವರು ಮುಂದಿನ ವರ್ಷದ ಜೂನ್ ಒಳಗಾಗಿ ಭಾರತಾಡಳಿತದ ಅಧಿಕಾರವನ್ನು ತ್ಯಜಿಸಲು ನಿರ್ಧರಿಸುವುದಕ್ಕೆ ಕಾರಣ, ಇದರಿಂದ ಭಾರತದ ನಾನಾ ಪಂಗಡಗಳೂ, ಅವುಗಳ ನಾಯಕರೂ ನೇರವಾಗಿ ಪರಿಶೀಲಿಸಿ, ಯುಕ್ತವಾದ ರಾಜಕೀಯ ನಿರ್ಧಾರಕ್ಕೆ ಬರಲು ಅವಕಾಶವನ್ನು ಕಲ್ಪಿಸಬೇಕೆಂಬುದೇ ಸರಕಾರದ ಉದ್ದೇಶ. ಇದನ್ನು ನಿರವಕಾಶ ಮಾಡಲಾಗುವುದಿಲ್ಲ. ಮುಂದಿನ ಹಲವು ತಿಂಗಳುಗಳಲ್ಲಿ ಭಾರತದ ೪೦ ಕೋಟಿ ನಿವಾಸಿಗಳ ಸುಖಾಭಿವೃದ್ಧಿಗೆ ಅವಶ್ಯವಾದ ಅಂಶಗಳು ನಿರ್ಧಾರವಾಗಬೇಕಾಗಿದೆ" ಎಂದು ಹೇಳಿದರು.

ಈ ಸಭೆಯು ಸರ್ಕಾರದ ನೀತಿಯನ್ನು ಒಪ್ಪಬೇಕೆಂಬುದಾಗಿ ಕೇಳುತ್ತಾ ಕ್ರಿಪ್ಸ್‌ರವರು ಈ ವಿಚಾರದಲ್ಲಿ ಸರ್ಕಾರಕ್ಕೆ ಅನುಕೂಲವಾಗಿದ್ದ ಮಾರ್ಗಗಳೆರಡು (೧) ಭಾರತದಲ್ಲಿ ಬ್ರಿಟಿಷ್ ಸೈನ್ಯಬಲವನ್ನು ಹೆಚ್ಚಿಸಿ, ಅದರ ಸಹಾಯದಿಂದ ಭಾರತದಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಕನಿಷ್ಠಪಕ್ಷ ಇನ್ನೂ ೧೫ ೨೦ ವರ್ಷಕಾಲ ಮುಂದುವರಿಸುವುದು. (೨) ಒಂದು ಗೊತ್ತಾದ ಅವಧಿಯನ್ನು ನಿರ್ಧರಿಸಿ, ಆ ಅವಧಿಯ ಒಳಗಾಗಿ ಭಾರತಕ್ಕೆ ಸ್ವಾತಂತ್ರ್ಯಾಧಿಕಾರವನ್ನು ವಹಿಸುವುದು. ಇದಾಗದಿದ್ದರೆ ಭಾರತವನ್ನು ಹಲವು ಸಣ್ಣ ಸಣ್ಣ ಬಲಹೀನವಾದ ಪ್ರತ್ಯೇಕ ಭಾಗಗಳಾಗಿ ವಿಂಗಡಿಸುವುದು' ಎಂಬುದಾಗಿ ಸರಕಾರದ ನೀತಿಯನ್ನು ಸೂಚಿಸಿದರು.

ಹೀಗೆ ಖಂಡಿತವಾಗಿ ವಿಷಯಗಳನ್ನು ತಿಳಿಯಪಡಿಸುವುದರಿಂದ ಭಾರತದ ನಾನಾ ಪಕ್ಷಗಳು ತಮ್ಮ ಭೇದ ವ್ಯತ್ಯಾಸಗಳನ್ನು ಮರೆತು, ಒಟ್ಟಿಗೆ ಸೇರಿ, ಒಗ್ಗಟ್ಟಿನ ನಿರ್ಧಾರಕ್ಕೆ ಬರಲು ಒತ್ತಾಯವಾಗುತ್ತದೆ. ಭಾರತದ ಪಕ್ಷಗಳು ಈಗಿನಿಂದಲೇ ಈ ಮುಖ್ಯವಾದ ಕಾರ್ಯದಲ್ಲಿ ನಿರತವಾದರೆ, ಮುಂದಿನ ಜೂನ್ ಒಳಗಾಗಿ ತಮ್ಮ ರಾಜ್ಯಾಂಗವನ್ನು ನಿರ್ಧರಿಸಬಲ್ಲರು ಎಂಬ ನಂಬಿಕೆ ಸರ್ಕಾರಕ್ಕಿದೆ ಎಂಬುದಾಗಿ ತಿಳಿಸಿದರು. ಅಲ್ಲದೆ ಬ್ರಿಟಿಷ್ ಪ್ರಕಟನೆಯು ಬ್ರಿಟನ್ ಮತ್ತು ಭಾರತಗಳಿಗೆ ಮಾತ್ರವೇ ಅಲ್ಲದೆ ಸಮಸ್ತ ಪ್ರಪಂಚದ ಶಾಂತಿಯುತವಾದ ಪ್ರಗತಿಗೆ ಸಹಾಯಕರವಾಗಿದೆ ಎಂದು ಹೇಳಿದರು.

ಈ ಹೇಳಿಕೆಯು ಹಿನ್ನೆಲೆಯ ವಿಚಾರವನ್ನೆತ್ತಿ ೧೯೪೨ರಿಂದ ಬ್ರಿಟನ್ ಮತ್ತು ಭಾರತಗಳ ಸಂಬಂಧವು ಹೇಗೆ ಆಗಿ ಬಂದಿದೆ ಎಂಬುದನ್ನು ವಿಶದಗೊಳಿಸಿದರು. ೧೯೪೬ ರಲ್ಲಿ ಸಂಯುಕ್ತ ಸರ್ಕಾರದ ಏರ್ಪಾಟನ್ನು ಮಾಡಿಕೊಟ್ಟದ್ದು, ಕ್ಯಾಬಿನೆಟ್ ನಿಯೋಗದವರ ಪ್ರವಾಸ, ಭಾರತದ ಭವಿಷ್ಯ ರಾಜ್ಯಾಂಗದ ಬಗ್ಗೆ ಅವರು ಕೊಟ್ಟ ಸಲಹೆಗಳು ಎಲ್ಲವನ್ನೂ ಪ್ರಸ್ತಾಪಿಸಿ ರಾಜ್ಯಾಂಗ ರಚನಾ ಸಭೆಯನ್ನು ಕೂಡಿಸುವ ಬಗ್ಗೆ ಇಲ್ಲಿನ ವಿವಿಧ ಪಂಗಡಗಳು ಬಹಳಮಟ್ಟಿಗೆ ಏಕಾಭಿಪ್ರಾಯ ಹೊಂದಿದುವೆಂದೂ ಅನಂತರವೇ ತಾತ್ಕಾಲಿಕ ಸರ್ಕಾರವನ್ನು ರಚಿಸಲಾಯಿತೆಂದೂ ಹೇಳಿದರು. ಆದರೆ ಇದಾದ ಮೇಲೆ ಮುಖ್ಯ ಪಂಗಡಗಳ ಸೌಹಾರ್ದವು ಕಡಿಮೆಯಾಯಿತೆಂದೂ ಲಂಡನ್ ಮಾತುಕತೆಗಳಿಂದ ಮುಸ್ಲಿಂಲೀಗು ರಾಜ್ಯಾಂಗ ಸಭೆಯನ್ನು ಸೇರುವಂತೆ ಮಾಡಲು ಸಾಧ್ಯವಾಗಲಿಲ್ಲವೆಂದೂ ತಿಳಿಸಿದರು.

"ಡಿಸೆಂಬರ್ ೬ರ ಹೇಳಿಕೆಯು ಭಾರತೀಯರಲ್ಲಿ ಒಗ್ಗಟ್ಟನ್ನುಂಟುಮಾಡಿತು. ಆದರೆ ಕಾಂಗ್ರೆಸ್ಸಿನವರು ಅದನ್ನು ಪೂರ್ತಿ ಒಪ್ಪಿಲ್ಲವೆಂದು ಲೀಗಿನವರು ಭಾವಿಸಿದರು.

ಜನವರಿ ಕೊನೆಯಲ್ಲಿ ಮುಸ್ಲಿಮೇತರ ಮಂತ್ರಿಗಳು ತಾತ್ಕಾಲಿಕ ಮಂತ್ರಿ ಮಂಡಲದಿಂದ ಮುಸ್ಲಿಂ ಲೀಗಿನ ಮಂತ್ರಿಗಳನ್ನು ತೆಗೆದುಹಾಕಬೇಕೆಂದು ಒತ್ತಾಯಪಡಿಸಿದರು. ಈ ಒತ್ತಾಯವು ಸನ್ನಿವೇಶಕ್ಕೆ ತಕ್ಕಂತೆ ನ್ಯಾಯಬದ್ಧವಾಗಿಯೇ ಇತ್ತು. ಏಕೆಂದರೆ, ಅವರು ರಾಜ್ಯಾಂಗ ಸಭೆಯನ್ನು ಸೇರುವರೆಂಬ ಭರವಸೆಯಮೇಲೆ ಅವರನ್ನು ತಾತ್ಕಾಲಿಕ ಸರ್ಕಾರಕ್ಕೆ ಆಹ್ವಾನಿಸಿದೆಯೆಂಬ ಆಧಾರವನ್ನು ಆಶ್ರಯಿಸಿ ಕಾಂಗ್ರೆಸ್ಸಿನವರು ಈ ರೀತಿ ಒತ್ತಾಯಪಡಿಸಿದರು. ಈ ಆಹ್ವಾನದ ವಿಚಾರವನ್ನು ಕಾಂಗ್ರೆಸ್ಸಿನವರಿಗೆ ತಿಳಿಸಿದಾಗ, ಮುಸ್ಲಿಂ ಲೀಗು ತಾತ್ಕಾಲಿಕ ಸರ್ಕಾರಕ್ಕೆ ಸೇರುವ ಮುನ್ನ ಈ ನಿರ್ಬಂಧಕ್ಕೆ ಸ್ಪಷ್ಟವಾದ ಒಪ್ಪಿಗೆಯನ್ನು ಕೊಟ್ಟಿರಲಿಲ್ಲವಾದರೂ ನಿರಾಕರಿಸಿರಲಿಲ್ಲವಾದ ಕಾರಣ ಸಂಬಂಧಪಟ್ಟವರು ಅವರ ಒಪ್ಪಿಗೆಯಿದೆಯೆಂದೇ ಭಾವಿಸಿದರು.

ತೀರ್ಮಾನವು ಸರಿಯೇ ಇರಲಿ, ತಪ್ಪೇ ಇರಲಿ ಎಲ್ಲ ಪಂಗಡಗಳೂ ಏಕಮತ್ಯದಿಂದ ರಾಜ್ಯಾಂಗ ಸಭೆಯಲ್ಲಿ ಸೇರುವ ಆಸೆಯಿರುವವರೆಗೆ ಈ ವಿಚಾರದಲ್ಲಿ ಖಚಿತವಾದ ನಿರ್ಣಯವನ್ನು ಕೊಡುವುದು ಸರಿಯೆಂದು ಬ್ರಿಟಿಷ್ ಸರ್ಕಾರವು ಭಾವಿಸಲಿಲ್ಲ. ಆದರೂ ನೇತೃತ್ವವನ್ನು ಬಿಡದೆ ಒಂದೇ ನಿರ್ಧಾರಕ್ಕೆ ಬಂದೇ ಬರಬೇಕಾಯಿತು. ಮುಖ್ಯವಾಗಿ ಎರಡು ದಾರಿ ಇತ್ತು. ಮೊದಲನೆಯದು ವಿವಿಧ ಪಂಗಡಗಳು ಒಂದು ಒಪ್ಪಂದಕ್ಕೆ ಬರುವವರೆಗೆ ಆಡಳಿತ ಜವಾಬ್ದಾರಿಯನ್ನು ವಹಿಸಿ ಬ್ರಿಟಿಷ್ ಸೈನ್ಯವನ್ನು ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಇಲಾಖೆಯನ್ನೂ ಹೆಚ್ಚಿಸಿ ಪರಿಸ್ಥಿತಿಯನ್ನು ಹತೋಟಿಯಲ್ಲಿಡುವುದು. ಇದನ್ನು ಮಾಡಬೇಕಾದರೆ ಇನ್ನು ೧೫-೨೦ ವರ್ಷಗಳಾದರೂ ಬ್ರಿಟಿಷರು ಭಾರತದಲ್ಲಿರಬೇಕಾಗುತ್ತಿತ್ತು. ಈ ನೀತಿಯು ತಾವು ಹಿಂದೆ ಹೇಳಿದ್ದಕ್ಕೆಲ್ಲಾ ವಿರುದ್ಧವಾದುದರಿಂದ ಬ್ರಿಟಿಷ್ ಸರ್ಕಾರವು ಈ ಯೋಜನೆಯನ್ನು ನಿರಾಕರಿಸಲು ಸ್ವಲ್ಪವೂ ಹಿಂಜರಿಯಲಿಲ್ಲ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದೃಷ್ಟಿಯಿಂದ ಇಂತಹ ರಾಜಕೀಯ ನೀತಿಯು ಅಸಾಧ್ಯ ಮತ್ತು ಎಲ್ಲಪಕ್ಷಗಳ ವಿರೋಧಕ್ಕೂ ಕಾರಣವಾಗುವುದು. ಆದ್ದರಿಂದ ಇನ್ನೊಂದು ಮಾರ್ಗವನ್ನು ಆಶ್ರಯಿಸಿ ಭಾರತದ ಪಕ್ಷಗಳನ್ನು ಒಂದು ಒಪ್ಪಂದಕ್ಕೆ ತರುವ ಬಗ್ಗೆ ಮತ್ತೊಂದು ಸಲ ಪ್ರಯತ್ನಮಾಡಿ, ಆಡಳಿತ ಜವಾಬ್ದಾರಿಯನ್ನು ವಹಿಸುವುದಕ್ಕೆ ಒಂದು ಅವಧಿಯನ್ನು ಕಲ್ಪಿಸಿ ಎಚ್ಚರಿಕೆಯನ್ನೂ ಕೊಡಲಾಯಿತು. ಅವರವರಲ್ಲಿ ಒಪ್ಪಂದಕ್ಕೆ ಬರುವದಕ್ಕೆ ಇದು ಸಾಕಷ್ಟು ಪ್ರೋತ್ಸಾಹ ಕೊಡುವದೆಂದು ಬ್ರಿಟಿಷ ಸರ್ಕಾರವು ಅಭಿಪ್ರಾಯಪಟ್ಟಿತು.

ಈ ನಿರ್ಣಯವನ್ನು ಒಂದು ಮಹತ್ತರವಾದ ಪರೀಕ್ಷೆಯೆಂದು ವರ್ಣಿಸಲಾಗಿದೆ ಮತ್ತು ಅಪಾಯಕರವಾದ ಹೆಜ್ಜೆಯನ್ನು ಇಡಲಾಗಿರುವುದೇನೋ ನಿಜ. ಆದರೆ ಇಲ್ಲಿ ಎರಡು ಉದ್ದೇಶಗಳು ಇವೆ. (೧) ತೊಂದರೆ ಬರುತ್ತೆಂದು

...ಕಾರ್ಯ ವಿಧಾನವನ್ನು ಬಿಡದಿರುವದೊಂದು ಮತ್ತು (೨) ಭಾರತೀಯರಿಗೆ ಮೋಸ ಮಾಡದಿರುವದಿನ್ನೊಂದು.

ಭಾರತೀಯರು ಮನಸ್ಸಿಟ್ಟು ಕೂಡಲೆ ಪ್ರಯತ್ನ ಮಾಡಿದರೆ ಹೊಸ ರಾಜ್ಯಾಂಗದ ಬಗ್ಗೆ ಸೂಕ್ತ ನಿರ್ಧಾರಕ್ಕೋ ಇಲ್ಲದಿದ್ದರೆ ಆಡಳಿತ ವಹಿಸಿಕೊಳ್ಳುವ ಯೋಗ್ಯತೆ ಹೊಂದಿದ ಕೇಂದ್ರ ಸರ್ಕಾರದ ವಿಷಯದಲ್ಲಿ ಒಂದು ಒಪ್ಪಂದಕ್ಕೋ ಬಂದೇ ಬರುವರೆಂಬ ಭರವಸೆ ಬ್ರಿಟಿಷ್ ಸರ್ಕಾರಕ್ಕಿದೆ

ಅಧಿಕಾರವನ್ನು ವರ್ಗಾಯಿಸುವ ವೇಳೆಗೆ ಏನು ಮಾಡಬೇಕೆಂದು ಈಗ ಹೇಳುವುದಕ್ಕೆ ಪರಿಸ್ಥಿತಿಯು ಸಾಕಷ್ಟು ವಿಶದಗೊಂಡಿಲ್ಲ ಎಂದು ಹೇಳಿದರು

ಮುಂದುವರಿದು, ಭಾರತದ ವಿವಿಧ ಪಕ್ಷಗಳು ಒಪ್ಪಂದಕ್ಕೆ ಬರದೇಹೋದಲ್ಲಿ ರಾಜ್ಯಾಂಗ ಸಭೆಯಲ್ಲಿ ಪ್ರಾತಿನಿಧ್ಯ ಹೊಂದಿರುವ ಭಾಗಗಳಿಗೆ ಪ್ರತ್ಯೇಕವಾಗಿ ಆಡಳಿತಾಧಿಕಾರವನ್ನು ಕೊಡಬೇಕಾಗುವ ಪರಿಸ್ಥಿತಿ ಬರಬಹುದೆಂದೇ ಸರ್ಕಾರವು ನಿರ್ಧರಿಸಿದೆ ಮತ್ತು ಇದಕ್ಕೆ ಕಾಂಗ್ರೆಸ್ಸಿನ ಸಮ್ಮತಿಯೂ ಇದೆ ಎಂದು ತಿಳಿಸಿದರು

ವೈಸರಾಯರ ಪ್ರಶ್ನೆಯನ್ನೆತ್ತಿ ಎಲ್ಲ ಅಲ್ಪ ಸಂಖ್ಯಾತ ಪಂಗಡಗಳಿಗೂ ರಾಜ್ಯಾಂಗ ಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕಿದೆಯೆಂದೂ ಅವರ ಹಿತರಕ್ಷಣೆಗಾಗಿ ಏರ್ಪಡಿಸಿರುವ ಸಮಿತಿಯ ಕಾರ್ಯ ನೀತಿಯನ್ನು ನೋಡಿದರೆ ಭಾರತ ರಾಜ್ಯಾಂಗದಲ್ಲಿ ಅಲ್ಪ ಸಂಖ್ಯಾತರ ಹಿತಕ್ಕೆ ಎಂದೂ ಧಕ್ಕೆ ಒದಗಲಾರದೆಂದು ಹೇಳಬಹುದು ಎಂದರು

ಸಂಸ್ಥಾನಗಳ ವಿಷಯದಲ್ಲಿ ಸಾರ್ವಭೌಮತ್ವ' ಅಧಿಕಾರ ಆಕಾಂಕ್ಷೆಗಳನ್ನು ಬೇರಾರಿಗೂ ಕೊಡುವುದಿಲ್ಲವೆಂದು ಪದೇ ಪದೇ ಹೇಳಿದೆ ಎಂದು ಕ್ರಿಪ್ಸರವರು ಘೋಷಿಸಿದರು

'ಬ್ರಿಟನ್ ಭಾರತಗಳ ಭವಿಷ್ಯ ಬಾಂಧವ್ಯ ಹೇಗಿರಬೇಕೆಂಬ ಬಗ್ಗೆ ಸಭೆಯ ಎಲ್ಲ ಸದಸ್ಯರಿಗೂ ಆಸಕ್ತಿಯಿದೆ ಬ್ರಿಟಿಷ್ ಕಾಮನ್‌ವೆಲ್ತಿಗೆ ಭಾರತವು ಸೇರುವುದನ್ನು ನಾನು ಸ್ವಾಗತಿಸುವೆನಾದರೂ ಇಷ್ಟವಿಲ್ಲದವರನ್ನು ಭಾಗಿಗಳಾಗಬೇಕೆಂದು ಒತ್ತಾಯಪಡಿಸುವ ಆಶಯ ಖಂಡಿತ ಇಲ್ಲ ಮತ್ತು ಮುಂದಿನ ಸ್ನೇಹದ ಬಗ್ಗೆ ಎರಡು ಕಡೆಯವರಿಗೂ ಪೂರ್ಣ ಸ್ವಾತಂತ್ರ್ಯವಿದೆ" ಎಂದು ಹೇಳಿದರು

ಇಂಡಿಯಾ ಸರ್ಕಾರದ ಬಡ್ಜೆಟ್

ಭಾರತದ ಕೇಂದ್ರ ಸರಕಾರದಲ್ಲಿ ಶ್ರೀ ಲಿಯಾಖತ್ ಅಲಿಖಾನ್‌ರವರು ಹಣಕಾಸಿನ ಮಂತ್ರಿಗಳಾಗಿರುವರು ಇವರು ಮುಂದಿನ ವರ್ಷದ, ಎಂದರೆ ೧೯೪೭-೪೮ ರ ಕೇಂದ್ರ ಸರಕಾರದ ಆದಾಯ ಮತ್ತು ಖರ್ಚುಗಳ ಅಂದಾಜನ್ನು ತಯಾರಿಸಿರುವರು ಈ ಅಂದಾಜು ಅನೇಕ ವಿಷಯಗಳಲ್ಲಿ ಹೊಸರೀತಿಯದಾಗಿದೆ

ನಮ್ಮ ದೇಶದ ಸುತ್ತಲೂ ನೂರು ಕಡೆ ಸಮುದ್ರವಿದೆ ಪಂಜಾಬಿನಲ್ಲಿ ಉಪ್ಪಿನ ಗಣಿ ಇದೆ ಅಲ್ಲದೆ ದೇಶದ ಅನೇಕ ಭಾಗಗಳಲ್ಲಿ ಚೌಳುಮಣ್ಣಿನಿಂದಲೂ ಇನ್ನೂ ಅನೇಕ ರೀತಿಯಿಂದಲೂ ನಮ್ಮ ಜನರು ಉಪ್ಪು ತಯಾರು ಮಾಡಿಕೊಳ್ಳುತ್ತಿದ್ದರು ಇಂಗ್ಲೀಷರು ಒಂದ ಮೇಲೆ ಉಪ್ಪುಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕಿತ್ತುಕೊಂಡರು ಉಪ್ಪಿನ ಮೇಲೆ ಸುಂಕ ಹಾಕಿದರು ಉಪ್ಪು ಎಲ್ಲರಿಗೂ ಬೇಕಾದ ವಸ್ತು ಆದ್ದರಿಂದ ಉಪ್ಪಿನ ತೆರಿಗೆ ಬಡವರ ಹೊರೆಯಾಯಿತು

ಇದು ಅನ್ಯಾಯ, ಈ ತೆರಿಗೆ ಹೋಗಬೇಕು ಅನುಕೂಲವಿದ್ದ ಕಡೆ ಉಪ್ಪುಮಾಡಿಕೊಳ್ಳುವ ಸ್ವಾತಂತ್ರ್ಯವು ನಮ್ಮ ಜನರಿಗೆ ಬೇಕು ಎಂದು ಗಾಂಧಿಯವರು ಬಹಳ ವರ್ಷಗಳಿಂದ ಹೇಳುತ್ತಿದ್ದರು ಆದರೆ ಈಗ ಹಣಕಾಸಿನ ಮಂತ್ರಿಗಳು ಈ ತೆರಿಗೆಯನ್ನು ತೆಗೆದುಹಾಕಿದರು.

ಉಪ್ಪಿನ ತೆರಿಗೆ ಹೋದುದರಿಂದ ನಮ್ಮ ದೇಶದ ಬಡಜನರಿಗೆ ಬಹಳ ಅನುಕೂಲವಾಯಿತು ಆದರೆ ಅದರಿಂದ ಕೇಂದ್ರ ಸರಕಾರಕ್ಕೆ ಎಂಟು ಕೋಟಿ ರೂಪಾಯಿ ನಷ್ಟವಾಯಿತು ಇದಲ್ಲದೆ ಇನ್ನೂ ಅನೇಕ ಕಾರಣಗಳಿಂದ ಕೇಂದ್ರ ಸರಕಾರದ ಆದಾಯಕ್ಕಿಂತ ಖರ್ಚೇ ಹೆಚ್ಚಾಗಿದೆ

ಆದಾಯ ಸುಮಾರು ೩೮೦ ಕೋಟಿ ರೂಪಾಯಿ ಖರ್ಚು ಸುಮಾರು ೩೨೮ ಕೋಟಿ ರೂಪಾಯಿ ಸುಮಾರು ನಲವತ್ತೆಂಟು ಕೋಟಿ ರೂಪಾಯಿ ಸಾಲದೆ ಬರುತ್ತದೆ

ಈ ಬೇಕಾದ ಹಣವನ್ನು ಎಲ್ಲಿಂದ ತರುವುದು? ಸರಕಾರಕ್ಕೆ ಎರಡು ಮಾರ್ಗಗಳಿವೆ ಸಾಲ ಮಾಡಬಹುದು ಅಥವಾ ಹೆಚ್ಚು ತೆರಿಗೆ ಹಾಕಿ ಸಂಪಾದಿಸಬಹುದು ಶ್ರೀ ಲಿಯಾಖತ್ ಅಲಿಖಾನರು ಎರಡನೇ ಮಾರ್ಗವನ್ನು ಅನುಸರಿಸಿರುವರು

ತೆರಿಗೆ ಹೇಗೆ ಹಾಕಬೇಕು? ಯಾರಮೇಲೆ ಅದರ ಹೊರೆ ಬೀಳಬೇಕು? ಇದು ಮುಖ್ಯವಾದ ವಿಷಯ ಬಡವರ ಮೇಲೆ ಅದರ ಹೊರೆಬಿದ್ದರೆ ಅವರು ಸಹಿಸಲಾರರು ಆದ್ದರಿಂದ ಸಾಹುಕಾರರಮೇಲೆ ಬೀಳುವಂತೆಯೇ ತೆರಿಗೆ ಹಾಕಿದ್ದಾರೆ

ಹಿಂದೆ ವರ್ಷಕ್ಕೆ ೨೦೦೦ರೂ ಆದಾಯ ಬರುತ್ತಿದ್ದವರು ರೂಪಾಯಿಗೆ ಇಷ್ಟು ಕಾಸೆಂದು ತೆರಿಗೆ ಕೊಡಬೇಕಾಗಿತ್ತು ಈಗ ವರ್ಷಕ್ಕೆ ೨೫೦೦ರೂಗಿಂತ ಹೆಚ್ಚು ಆದಾಯ ಬರುವವರು ಮಾತ್ರ ತೆರಿಗೆ ಕೊಡಬೇಕು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಆದಾಯ ಪಡೆಯುವವರು ತಮ್ಮ ಆದಾಯದ ಕಾಲುಭಾಗವನ್ನು (ನೂರಕ್ಕೆ ೨೫ರಂತೆ) ಸರಕಾರಕ್ಕೆ ಕೊಡಬೇಕು ಎಂದು ನಿಶ್ಚಯಿಸಿದ್ದಾರೆ

ನಮ್ಮ ದೇಶದಿಂದ ಹೊರಗೆ ಹೋಗುವ ಟೀ (ಚಹಾ) ಮೇಲೆ ಸುಂಕ ಹೆಚ್ಚುಮಾಡಿದ್ದಾರೆ. ಇದರಿಂದಲೇ ಸುಮಾರು ೮೦ಕೋಟಿ ರೂಪಾಯಿ ಆದಾಯ ಬರುವುದಂತೆ! ಇದರಿಂದ ಹಣವಂತರಿಗೆ ಕೋಪ! ಬಡವರಿಗೆ ಅನುಕೂಲ!

ಕೃತಕ ಅನ್ನನಾಳದಿಂದ ಬದುಕಿಸಿದರು

ಅನ್ನನಾಳದಲ್ಲಿ ಸರಿಯಾಗಿ ಆಹಾರ ಇಳಿಯದೆ ಸಾಯುವುದರಲ್ಲಿದ್ದ ಸಿಪಾಯಿಯೊಬ್ಬನಿಗೆ ಕೃತಕ ಅನ್ನನಾಳ ಕೊಟ್ಟು ಆಸ್ಟ್ರೇಲಿಯಾದ ಮುಖ್ಯಪಟ್ಟಣವಾದ ಸಿಡ್ನಿಯಲ್ಲಿ ಬದುಕಿಸಿದ್ದಾರೆ. ಎದೆಯ ಮುಂಭಾಗದ ಚರ್ಮದೊಳಗೆ ಈ ಅನ್ನನಾಳ ಅಂಟಿಕೊಂಡಿದ್ದು ಅಲ್ಲಿಂದ ಸಣ್ಣ ಕರಳುಗಳಿಗೆ ಸಂಬಂಧಿಸಲಾಗಿದೆ ಆಹಾರ ಒಳಗಡೆ ಹೋಗುವುದು ಮಾತ್ರ ಈಚೆಗೆ ಚನ್ನಾಗಿ ಕಾಣಿಸುತ್ತದೆ.

ಸ್ವೀಕಾರ

ರಾಯಚೂರು ಡಿ|| ಕನಕಗಿರಿ ಗ್ರಾಮದ ಮ|| ರಾ|| ಬತ್ತದ ಒಸೆಟ್ಟೆಪ್ಪನವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ಮ|| ರಾ|| ದೊಡ್ಡಬಸವಪ್ಪನವರು ಮತ್ತು ಮರಿಬಸವಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **5** ರೂಪಾಯಿಗಳು ಕನಕಗಿರಿ ಹಿರಿಯ ಮಠದ ಶ್ರೀ|| ಷ|| ಬ್ರ|| ಪಂಚಾಕ್ಷರಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ವೇ|| ಎಸ್ ಎಂ ಮರಿಸೋಮಾರಾಧ್ಯರು ತಾ|| ೬-೩-೪೭ನೆಯ ಗುರುವಾರ ದಿವಸ ಶ್ರೀ ಜಗದ್ಗುರು ರೇಣುಕಭಗವತ್ಪಾದಾಚಾರ್ಯರ ಜಯಂತೀಮಹೋತ್ಸವವನ್ನು ತಮ್ಮ ಗೃಹದಲ್ಲಿ ವಿಶೇಷ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಬಳ್ಳಾರಿ ಟವನ್ನಿನಲ್ಲಿರುವ ಮ|| ರಾ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ತಮ್ಮ ಗೃಹದಲ್ಲಿ ಫಾಲ್ಗುಣ ಶು|| ೧೪ ಗುರುವಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಮಹಾಸಂಭ್ರಮದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಅಗ್ನಿಪರ್ವತದಲ್ಲಿ ಅಗ್ನಿಜ್ವಾಲೆಯ ಪ್ರವಾಹ

ಯೂರೋಪು ಖಂಡದ ದಕ್ಷಿಣಭಾಗದಲ್ಲಿ ಇಟಲಿ ದೇಶವಿದೆ ಅದರ ಬಳಿ ಇರುವ ಸಿಸಿಲಿ ದ್ವೀಪದಲ್ಲಿ ಎಟ್ನ ಎಂಬ ಅಗ್ನಿ ಪರ್ವತವಿದೆ. ಅದರಲ್ಲಿ ಅನೇಕ ವರ್ಷಗಳಿಗೊಮ್ಮೆ ಅದ್ಭುತವಾದ ಅಗ್ನಿಜ್ವಾಲೆಯು ಉತ್ಪನ್ನವಾಗುವದು ಈಗ ಆ ಜ್ವಾಲೆಯು ಉತ್ಪನ್ನವಾಗಿರುವದು ಆ ಮಹಾಜ್ವಾಲೆಯಿಂದ ಕರಗಿದ ಲೋಹಗಳು ಕಲ್ಲು ಮೊದಲಾದವು ಆ ಪರ್ವತದ ಬಾಯಿಂದ ಹೊರಕ್ಕೆ ಹರಿದುಬರುತ್ತಿವೆ ಈ ಕುದಿಯುವ ಲೋಹದ ಹೊಳೆಯು ದಾರಿಯಲ್ಲಿ ಸಿಕ್ಕಿದುದನ್ನೆಲ್ಲಾ ನಾಶಮಾಡುತ್ತಿದೆ

ಜನರು ವಿಮಾನದಲ್ಲಿ ಹಾರಿ ಹೋಗಿ ಬಾಂಬುಗಳನ್ನು ಆ ಅಗ್ನಿಪರ್ವತದ ಬಾಯಿಗೆ ಹಾಕಿ ಬೆಂಕಿಯನ್ನು ನಿಲ್ಲಿಸಲು ಪ್ರಯತ್ನಮಾಡುತ್ತಿದ್ದಾರೆ. ಇನ್ನೂ ಅಗ್ನಿಪ್ರವಾಹವು ನಿಂತಿಲ್ಲ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಮಾರ್ಚಿ ತಾ|| ೧೦ನೇ ಸೋಮವಾರ

ಶಿವಯೋಗ

ಶಿವಯೋಗವೆಂದರೆ ಶಿವನಲ್ಲಿ ಚಿತ್ತವೃತ್ತಿಗಳನ್ನು ಲಯಗೊಳಿಸಿ ಬಾಹ್ಯಾಕಾರವೃತ್ತಿಗಳನ್ನು ಶಿವಾಕಾರಗಳನ್ನಾಗಿ ಮಾಡುವುದೆಂದು ಅರ್ಥವಾಗುವುದು ಹೀಗೆ ಮಾಡುವುದು ಸುಲಭಸಾಧ್ಯವಲ್ಲ ಒಂದು ಪರ್ವತದ ಮೇಲ್ಭಾಗದಿಂದ ಅತಿವೇಗದಿಂದ ಕೆಳಗೆ ಬೀಳುವ ದೊಡ್ಡ ಪ್ರವಾಹವನ್ನು ತಡೆದು ಅದನ್ನು ಮೇಲಕ್ಕೆ ತಿರುಗಿಸುವದು ಎಷ್ಟು ಕಷ್ಟವೋ, ಸ್ರಕ್ಚಂದನ ವನಿತಾದಿ ವಿಷಯದೇಶದ ಕಡೆ ತಗ್ಗಿಗೆ ಬೀಳುತ್ತಿರುವ ಚಿತ್ತವೃತ್ತಿಪ್ರವಾಹವನ್ನು ತಡೆದು ಶಿವನೆಂಬ ಊರ್ಧ್ವಪ್ರದೇಶಕ್ಕೆ ತಿರುಗಿಸುವುದು ಅಷ್ಟೇ ಕಷ್ಟಸಾಧ್ಯವಾಗಿರುವುದು ಇಂಥ ಕಷ್ಟತರವಾದ ಶಿವಯೋಗವು ಯಾವನಿಗೆ ಸಾಧ್ಯವಾಗುವುದೋ ಅವನೇ ವೀರನು ಇವನಿಗೆ ಬಾಹ್ಯಶತ್ರುಗಳಿಲ್ಲದಿದ್ದರೂ ಕಾಮಕ್ರೋಧಾದ್ಯಂತಃಶತ್ರುಗಳು ಇದ್ದೇ ಇರುವವು ಶಿವಯೋಗವನ್ನು ಸಾಧಿಸಿದ ವೀರನು ಮಾತ್ರ ಅಜಾತಶತ್ರುವೆಂದೆನಿಸುವನು ಇವನು ಕಾಮಕ್ರೋಧಾದಿ ಷಡ್ರಿಪುಗಳಿಗೆ ಜನಕ (ಉಪಾದಾನಕಾರಣ)ವಾದ ಚಿತ್ತವೆಂಬ ಪ್ರಬಲಶತ್ರುವನ್ನೇ ಜಯಿಸಿಬಿಟ್ಟಿರುವಾಗ ಕಾಮಾದಿಗಳಲ್ಲಿ ಭಯವೇಕೆ ? ಚಿತ್ತವನ್ನು ಜಯಿಸಿದವನು ಕೇವಲ ಬಾಹ್ಯೇಂದ್ರಿಯಗಳನ್ನು ಜಯಿಸಿದವನಲ್ಲ [illegible] ಚಿತ್ತವನ್ನು ಜಯಿಸುವದೆಂದರೆ ಅದರ ಸ್ವಾಭಾವಿಕವಾದ ವಿಷಯಗಳಲ್ಲಿಯ ಹರಿದಾಟವನ್ನು ನಿಲ್ಲಿಸಿ ಶಿವನಲ್ಲಿ ಲಯಗೊಳಿಸುವಿಕೆ ಇದೇ ಶಿವಯೋಗ ಇಂಥ ಶಿವಯೋಗವುಳ್ಳವನೇ ಪ್ರತ್ಯಗಾತ್ಮನಾದ ಶಿವನನ್ನು ಸಾಕ್ಷಾತ್ಕರಿಸುವನು ಶಿವನನ್ನು ಸಾಕ್ಷಾತ್ಕರಿಸಿದವನೇ ಮುಕ್ತನು ಈ ಬಗ್ಗೆ " ಕಶ್ಚಿದ್ಧೀರ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್ ॥ " ಎಂಬ ಶ್ರುತಿಯು ಪ್ರಮಾಣವಾಗಿದೆ ಈ ಶಿವಯೋಗವು ಸಾಧನರೂಪವೆಂತಲೂ ಸಾಧ್ಯರೂಪವೆಂತಲೂ ಎರಡು ಪ್ರಕಾರವಾಗಿರುವುದು ಸಾಧನರೂಪವಾದ ಶಿವಯೋಗದಲ್ಲಿ ಭಕ್ತ್ಯಾದಿ ಷಟ್‌ಸ್ಥಲಗಳೂ ಅವುಗಳಲ್ಲಿ ಅಡಕವಾಗಿರುವ ಪಿಂಡಾದಿ ಜ್ಞಾನಾಂತರಗಳಾದ ಏಳು ಅಂಗಗಳೂ ಅಂತರ್ಗತವಾಗಿವೆ ಸಾಧ್ಯರೂಪವಾದ ಶಿವಯೋಗವು [illegible] ದರ್ಶನದಲ್ಲಿ ಸಮಾಧಿಯೆಂದು ಹೇಳಿಸಿಕೊಳ್ಳುವ ಐಕ್ಯಸ್ಥಲವೆನಿಸುವದು ಈ ಐಕ್ಯಸ್ಥಲವನ್ನು ಹೊಂದಿದವನು ಜೀವಭಾವವನ್ನು ಬಿಟ್ಟು ಶಿವನಾಗುವನು ಇವನು ಸರ್ವೋಪಾಧಿಗಳಿಂದ ಬಿಡಲ್ಪಟ್ಟವನಾದ ಕಾರಣ ಶಿವನೆನಿಸಿಕೊಳ್ಳುವನು ಅದ್ದರಿಂದ " ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತೋ ಭವೇಚ್ಛಿವಃ " ಎಂದು ಶಿವಾಗಮವು ಸಾರುತ್ತದೆ ಕೀಟವು ಭ್ರಮರಯೋಗದಿಂದ ಭ್ರಮರವೇ ಆಗುವಂತೆ ಮನುಷ್ಯನು ಸಾಧನರೂಪವಾದ ಶಿವಯೋಗದಿಂದ ಶಿವನೇ ಆಗುವನು ಸಾಧನರೂಪವಾದ ಶಿವಯೋಗವು ಬಾಹ್ಯವೆಂತಲೂ ಅಭ್ಯಂತರವೆಂತಲೂ ಎರಡು ಪ್ರಕಾರವಾಗಿರುವದು ಬಾಹ್ಯಶಿವಯೋಗವೆಂದರೆ ಬಾಹ್ಯಶರೀರದಲ್ಲಿ ಇಷ್ಟಲಿಂಗಧಾರಣವೆನಿಸುಕೊಳ್ಳುವುದು ಇದು ಮುಮುಕ್ಷುವಾದ ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರಬೇಕು ಇಲ್ಲದಿದ್ದರೆ ಕಾರ್ಮಿಕಮಲವೆಂಬ ಪಾಶವು ನಾಶವಾಗಿ ಹೋಗುವುದೇ ಇಲ್ಲವು ಅದು ಉಳಿದರೆ ಮುಕ್ತಿಯು ಲಭಿಸುವದಿಲ್ಲ ಈ ವಿಷಯವನ್ನು ' ಅಮೃತಸ್ಯ ದೇವ ಧಾರಣೋ ಭೂಯಾಸಂ ' ಅತಪ್ತತನೂರ್ನತದಾಮೋ ಅಶ್ನುತೇ " ಇತ್ಯಾದಿ ಶ್ರುತಿಗಳು ಉದ್ಘೋಷಿಸುವವು ಧನುರ್ಧಾರಿಗೆ ಆದಿಯಲ್ಲಿ ಸ್ಥೂಲಗುರಿಯು ಸಿದ್ಧಿಸದೆ ಸೂಕ್ಷ್ಮಗುರಿಯು ಸಿದ್ಧಿಸದಿರುವಂತೆ ಮಾನವನಿಗೆ ಬಾಹ್ಯಯೋಗವಿಲ್ಲದೆ ಅಭ್ಯಂತರ ಸೂಕ್ಷ್ಮಯೋಗವು ಸಿದ್ಧಿಸಲಾರದು ಈ ಉಭಯವಿಧ ಶಿವಯೋಗಕ್ಕೆ ಅಷ್ಟಾವರಣಗಳೂ, ಪಂಚಾಚಾರಗಳೂ, ಅಂಗಗಳಾಗಿರುವವು ಈ ಶಿವಯೋಗಕ್ಕೆ ಲಿಂಗಾಂಗಸಾಮರಸ್ಯವೆಂದು ಬೇರೊಂದು ಹೆಸರುಂಟು ಮೋಕ್ಷಾಪೇಕ್ಷೆಯು ಮೊದಲು ಸಾಧನಸಂಪನ್ನನಾಗಬೇಕು ಸಾಧನವಿಲ್ಲದೆ ಸಾಧ್ಯರೂಪವಾದ ಫಲವು ಪಡೆಯಲಾರದು ಈ ಲೋಕದ ಭವಸಿದ್ಧನು ಆಗಿರುವನು ಈ ಸಾಧನಗಳನ್ನೆಲ್ಲ ತಿಳಿಸುವನು ತನ್ನಿಂದ ಅಧಿಕ ಅನುಭವಿಗಳಾದ [illegible]ಗಳನ್ನು ಮಾಡಲು ಸಮರ್ಥನಲ್ಲ ಈ ಸಾಧನೆಗೆ ಗುರುವಿನ ಕೃಪೆಯನ್ನು ಆಶ್ರಯಿಸಿ ಅವನಿಂದ ಶಿವದೀಕ್ಷೆಯನ್ನು ಪಡೆಯಬೇಕು ಸಾಧನಸಹಿತ ಶಿವಯೋಗವು (ಲಿಂಗಾಂಗಸಾಮರಸ್ಯವು) ಪ್ರಾಪ್ತವಾಗುವುದು ಸಾಧನಸಹಿತವಾದ ಶಿವಯೋಗದಲ್ಲಿಯೇ ಶಿವಭಕ್ತಿ ಶಿವಧ್ಯಾನ ಶಿವವ್ರತ ಶಿವಾರ್ಚನ, ಶಿವಜ್ಞಾನಗಳು ಅಂತರ್ಗತಗಳಾಗುವವು ಈ ಸಾಧನಸಹಿತ ಶಿವಯೋಗವು ದೀಕ್ಷಾಕಾಲದಲ್ಲಿ ಶಿಷ್ಯನಿಗುಂಟಾಗುವದು ಗುರುವು ಆ ಕಾಲದಲ್ಲಿ ಉಪದೇಶ ಮಾಡಿದ ಪ್ರಕಾರ ಆ ಸಾಧನಗಳನ್ನು ಆಚರಿಸುತ್ತ ಹೋದರೆ ಸಾಧ್ಯರೂಪವಾದ ಮೋಕ್ಷವು ಲಭಿಸುವುದು ಗುರುವಿನ ಅಪ್ಪಣೆಗೆ ವಿರುದ್ಧವಾಗಿ ಆಚರಿಸಿದ್ದಾದರೆ ಮೋಕ್ಷವು ದೊರೆಯದೆ ಗುರುವಿನ ಆಜ್ಞಾಭಂಗದೋಷಕ್ಕೆ ಪಾತ್ರನಾಗುವನು ಕ್ರಿಯಾಸಾರಕಾರರು ಲಿಂಗಾಂಗಸಾಮರಸ್ಯವು ಎರಡು ಪ್ರಕಾರವೆಂದು ಹೇಳಿ ಆಮೇಲೆ ಸಾಧನಸಹಿತವಾದ ಸಾಮರಸ್ಯವು ಗುರುವಿನಿಂದಲೇ ದೀಕ್ಷೆಯಲ್ಲಿ ಮಾಡಲ್ಪಡುವದೆಂತಲೂ ಎರಡನೆಯದು ಫಲರೂಪವಾದುದೆಂತಲೂ ಹೇಳುತ್ತ ದ್ವಿತೀಯ ನೂನಂ ಶಿಷ್ಯಸ್ಯ ಗುರುವಾಕ್ಯಸ್ಯ ಪಾಲನಾತ್ ಎಂದು ಹೇಳಿದವರಿಂದ ತನ್ನ ದೀಕ್ಷಾಗುರುವಿನ ಅಪ್ಪಣೆಯನ್ನು ಯಾವಜ್ಜೀವವೂ ಪಾಲಿಸಬೇಕು ಯಾವ ಮಾನವನು ತನಗೆ ದೀಕ್ಷಾಕಾಲದಲ್ಲಿ ಒದಗಿದ [illegible]ಗಳನ್ನು ಬಿಡುವನೋ ಅವನು ಎಂದಿಗೂ ಶಿವಯೋಗಿಯೆನಿಸಿಕೊಳ್ಳಲಾರನು ಮತ್ತು ಸಾಧನಾಸಹಿತ ಶಿವಯೋಗಸಂಪನ್ನನೆಂತಲೂ ಕರೆಯಿಸಿಕೊಳ್ಳಲಾರನು ಸಾಧನಸಂಪನ್ನನೆನಿಸದಿದ್ದರೆ ಸಾಧ್ಯ (ಮೋಕ್ಷ) ಕ್ಕೆ ಪಾತ್ರನೂ ಆಗಲಾರನು ಆದ್ದರಿಂದ ಸಾಧನಾವಸ್ಥಾಸಹಿತ ಶಿವಯೋಗಿಯೆನಿಸಿಕೊಂಡು ಸಾಧ್ಯರೂಪವಾದ ಶಿವಯೋಗಸಂಪನ್ನನಾಗಬೇಕು ಇದೇ ಶಿವಯೋಗದ ರಹಸ್ಯ! ಆದ್ದರಿಂದ ವೀರಶೈವರೆನಿಸುವ ಸರ್ವರೂ ಗುರೂಪದೇಶದಂತೆ ಶಿವಯೋಗಸಾಧನೆಯನ್ನು ಮಾಡಿ ಪುನರಾವೃತ್ತಿರಹಿತವಾದ ಮೋಕ್ಷಸಾಮ್ರಾಜ್ಯವನ್ನು ಪಡೆಯಬೇಕು

ಕಾಮನ್ಸ್ ಸಭೆಯಲ್ಲಿ ಕ್ರಿಪ್ಸರ ಹೇಳಿಕೆ

ಭಾರತದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಕ್ರಿಪ್ಸ್‌ರವರು ಚರ್ಚೆಯನ್ನು ಆರಂಭಿಸುತ್ತಾ ಸರಕಾರದವರು ಮುಂದಿನ ವರ್ಷದ ಜೂನ್ ಒಳಗಾಗಿ ಭಾರತಾಡಳಿತದ ಅಧಿಕಾರವನ್ನು ತ್ಯಜಿಸಲು ನಿರ್ಧರಿಸುವುದಕ್ಕೆ ಕಾರಣ ಇದರಿಂದ ಭಾರತದ ನಾನಾ ಪಂಗಡಗಳೂ, ಅವುಗಳ ನಾಯಕರೂ ನೇರವಾಗಿ ಪರಿಶೀಲಿಸಿ ಯುಕ್ತವಾದ ರಾಜಕೀಯ ನಿರ್ಧಾರಕ್ಕೆ ಬರಲು ಅವಕಾಶವನ್ನು ಕಲ್ಪಿಸಬೇಕೆಂಬುದೇ ಸರಕಾರದ ಉದ್ದೇಶ ಇದನ್ನು ಸಾವಕಾಶ ಮಾಡಲಾಗುವುದಿಲ್ಲ ಮುಂದಿನ ಹಲವು ತಿಂಗಳುಗಳಲ್ಲಿ ಭಾರತದ ೪೦ ಕೋಟಿ ನಿವಾಸಿಗಳ ಸುಖಾಭಿವೃದ್ಧಿಗೆ ಅವಶ್ಯವಾದ ಅಂಶಗಳು ನಿರ್ಧಾರವಾಗಬೇಕಾಗಿದೆ " ಎಂದು ಹೇಳಿದರು

ಈ ಸಭೆಯು ಸರ್ಕಾರದ ನೀತಿಯನ್ನು ಒಪ್ಪಬೇಕೆಂಬುದಾಗಿ ಕೇಳುತ್ತಾ ಕ್ರಿಪ್ಸ್‌ರವರು ಈ ವಿಚಾರದಲ್ಲಿ ಸರ್ಕಾರಕ್ಕೆ ಅನುಕೂಲವಾಗಿದ್ದ ಮಾರ್ಗಗಳೆರಡು. (೧) ಭಾರತದಲ್ಲಿ ಬ್ರಿಟಿಷ್ ಸೈನ್ಯಬಲವನ್ನು ಹೆಚ್ಚಿಸಿ, ಅದರ ಸಹಾಯದಿಂದ ಭಾರತದಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಕನಿಷ್ಠಪಕ್ಷ ಇನ್ನೂ ೧೫ ೨೦ ವರ್ಷಕಾಲ ಮುಂದುವರಿಸುವುದು (೨) ಒಂದು ಗೊತ್ತಾದ ಅವಧಿಯನ್ನು ನಿರ್ಧರಿಸಿ, ಆ ಅವಧಿಯ ಒಳಗಾಗಿ ಭಾರತಕ್ಕೆ ಸ್ವಾತಂತ್ರ್ಯಾಧಿಕಾರವನ್ನು ವಹಿಸುವುದು ಇದಾಗದಿದ್ದರೆ ಭಾರತವನ್ನು ಹಲವು ಸಣ್ಣ ಸಣ್ಣ ಬಲಹೀನವಾದ ಪ್ರತ್ಯೇಕ ಭಾಗಗಳಾಗಿ ವಿಂಗಡಿಸುವುದು " ಎಂಬುದಾಗಿ ಸರಕಾರದ ನೀತಿಯನ್ನು ಸೂಚಿಸಿದರು

ಹೀಗೆ ಖಂಡಿತವಾಗಿ ವಿಷಯಗಳನ್ನು ತಿಳಿಯಪಡಿಸುವುದರಿಂದ ಭಾರತದ ನಾನಾ ಪಕ್ಷಗಳು ತಮ್ಮ ಭೇದ ವ್ಯತ್ಯಾಸಗಳನ್ನು ಮರೆತು, ಒಟ್ಟಿಗೆ ಸೇರಿ, ಒಗ್ಗಟ್ಟಿನ ನಿರ್ಧಾರಕ್ಕೆ ಬರಲು ಒತ್ತಾಯವಾಗುತ್ತದೆ ಭಾರತದ ಪಕ್ಷಗಳು ಈಗಿನಿಂದಲೇ ಈ ಮುಖ್ಯವಾದ ಕಾರ್ಯದಲ್ಲಿ ನಿರತವಾದರೆ, ಮುಂದಿನ ಜೂನ್ ಒಳಗಾಗಿ ತಮ್ಮ ರಾಜ್ಯಾಂಗವನ್ನು ನಿರ್ಧರಿಸಬಲ್ಲರು ಎಂಬ ನಂಬಿಕೆ ಸರಕಾರಕ್ಕಿದೆ ಎಂಬುದಾಗಿ ತಿಳಿಸಿದರು ಅಲ್ಲದೆ ಬ್ರಿಟಿಷ್ ಪ್ರಕಟನೆಯು ಬ್ರಿಟನ್ ಮತ್ತು ಭಾರತಗಳಿಗೆ ಮಾತ್ರವೇ ಅಲ್ಲದೆ ಸಮಸ್ತ ಪ್ರಪಂಚದ ಶಾಂತಿಯುತವಾದ ಪ್ರಗತಿಗೆ ಸಹಾಯಕರವಾಗಿದೆ ಎಂದು ಹೇಳಿದರು

ಈ ಹೇಳಿಕೆಯು ಹಿನ್ನೆಲೆಯ ವಿಚಾರವನ್ನೆತ್ತಿ ೧೯೩೯ರಿಂದ ಬ್ರಿಟನ್ ಮತ್ತು ಭಾರತಗಳ ಸಂಬಂಧವು ಹೇಗೆ ಆಗಿ ಬಂದಿದೆ ಎಂಬುದನ್ನು ವಿಶದಗೊಳಿಸಿದರು ೧೯೪೨ ರಲ್ಲಿ ಸಂಯುಕ್ತ ಸರ್ಕಾರದ ಏರ್ಪಾಟನ್ನು ಮಾಡಿಕೊಟ್ಟಿದ್ದು, ಕ್ಯಾಬಿನೆಟ್ ನಿಯೋಗದವರ ಪ್ರವಾಸ ಭಾರತದ ಭವಿಷ್ಯ ರಾಜ್ಯಾಂಗದ ಬಗ್ಗೆ ಅವರು ಕೊಟ್ಟ ಸಲಹೆಗಳು ಎಲ್ಲವನ್ನೂ ಪ್ರಸ್ತಾಪಿಸಿ ರಾಜ್ಯಾಂಗ ರಚನಾ ಸಭೆಯನ್ನು ಕೂಡಿಸುವ ಬಗ್ಗೆ ಇಲ್ಲಿನ ವಿವಿಧ ಪಂಗಡಗಳು ಬಹಳಮಟ್ಟಿಗೆ ಏಕಾಭಿಪ್ರಾಯ ಹೊಂದಿದುವೆಂದೂ ಅನಂತರವೇ ತಾತ್ಕಾಲಿಕ ಸರ್ಕಾರವನ್ನು ರಚಿಸಲಾಯಿತೆಂದೂ ಹೇಳಿದರು ಆದರೆ ಇದಾದ ಮೇಲೆ ಮುಖ್ಯ ಪಂಗಡಗಳ ಸೌಹಾರ್ದವು ಕಡಿಮೆಯಾಯಿತೆಂದೂ ಲಂಡನ್ ಮಾತುಕತೆಗಳಿಂದ ಮುಸ್ಲಿಂಲೀಗು ರಾಜ್ಯಾಂಗ ಸಭೆಯನ್ನು ಸೇರುವಂತೆ ಮಾಡಲು ಸಾಧ್ಯವಾಗಲಿಲ್ಲವೆಂದೂ ತಿಳಿಸಿದರು

ಡಿಸಂಬರ್ ೬ರ ಹೇಳಿಕೆಯು ಭಾರತೀಯರಲ್ಲಿ ಒಗ್ಗಟ್ಟನ್ನುಂಟುಮಾಡಿತು , ಆದರೆ ಕಾಂಗ್ರೆಸ್ಸಿನವರು ಅದನ್ನು ಪೂರ್ತಿ ಒಪ್ಪಿಲ್ಲವೆಂದು ಲೀಗಿನವರು ಭಾವಿಸಿದರು

ಜನವರಿ ಕೊನೆಯಲ್ಲಿ ಮುಸ್ಲಿಮೇತರ ಮಂತ್ರಿಗಳು ತಾತ್ಕಾಲಿಕ ಮಂತ್ರಿ ಮಂಡಲದಿಂದ ಮುಸ್ಲಿಂ ಲೀಗಿನ ಮಂತ್ರಿಗಳನ್ನು ತೆಗೆದುಹಾಕಬೇಕೆಂದು ಒತ್ತಾಯಪಡಿಸಿದರು ಈ ಒತ್ತಾಯವು ಸನ್ನಿವೇಶಕ್ಕೆ ತಕ್ಕಂತೆನ್ಯಾಯಬದ್ಧವಾಗಿಯೇ ಇತ್ತು ಏಕೆಂದರೆ, ಅವರು ರಾಜ್ಯಾಂಗ ಸಭೆಯನ್ನು ಸೇರುವರೆಂಬ ಭರವಸೆಯಮೇಲೆ ಅವರನ್ನು ತಾತ್ಕಾಲಿಕ ಸರ್ಕಾರಕ್ಕೆ ಆಹ್ವಾನಿಸಿದೆಯೆಂಬ ಆಧಾರವನ್ನು ಆಶ್ರಯಿಸಿ ಕಾಂಗ್ರೆಸ್ಸಿನವರು ಈ ರೀತಿ ಒತ್ತಾಯಪಡಿಸಿದರು ಈ ಆಹ್ವಾನದ ವಿಚಾರವನ್ನು ಕಾಂಗ್ರೆಸ್ಸಿನವರಿಗೆ ತಿಳಿಸಿದಾಗ ಮುಸ್ಲಿಂ ಲೀಗು ತಾತ್ಕಾಲಿಕ ಸರ್ಕಾರಕ್ಕೆ ಸೇರುವ ಮುನ್ನ ಈ ನಿರ್ಬಂಧಕ್ಕೆ ಸ್ಪಷ್ಟವಾದ ಒಪ್ಪಿಗೆಯನ್ನು ಕೊಟ್ಟಿರಲಿಲ್ಲವಾದರೂ ನಿರಾಕರಿಸಿರಲಿಲ್ಲವಾದ ಕಾರಣ ಸಂಬಂಧಪಟ್ಟವರು ಅವರ ಒಪ್ಪಿಗೆಯಿದೆಯೆಂದೇ ಭಾವಿಸಿದರು

ತೀರ್ಮಾನವು ಸರಿಯೇ ಇರಲಿ, ತಪ್ಪೇ ಇರಲಿ ಎಲ್ಲ ಪಂಗಡಗಳೂ ಐಕಮತ್ಯದಿಂದ ರಾಜ್ಯಾಂಗ ಸಭೆಯಲ್ಲಿ ಸೇರುವ ಆಸೆಯಿರುವವರೆಗೆ ಈ ವಿಚಾರದಲ್ಲಿ ಖಚಿತವಾದ ನಿರ್ಣಯವನ್ನು ಕೊಡುವುದು ಸರಿಯೆಂದು ಬ್ರಿಟಿಷ್ ಸರ್ಕಾರವು ಭಾವಿಸಲಿಲ್ಲ ಆದರೂ ನೇತೃತ್ವವನ್ನು ಬಿಡದೆ ಒಂದೇ ನಿರ್ಧಾರಕ್ಕೆ ಬಂದೇ ಬರಬೇಕಾಯಿತು ಮುಖ್ಯವಾಗಿ ಎರಡು ದಾರಿ ಇತ್ತು. ಮೊದಲನೆಯದು ವಿವಿಧ ಪಂಗಡಗಳು ಒಂದು ಒಪ್ಪಂದಕ್ಕೆ ಬರುವವರೆಗೆ ಆಡಳಿತ ಜವಾಬ್ದಾರಿಯನ್ನು ವಹಿಸಿ ಬ್ರಿಟಿಷ್ ಸೈನ್ಯವನ್ನು ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಇಲಾಖೆಯನ್ನೂ ಹೆಚ್ಚಿಸಿ ಪರಿಸ್ಥಿತಿಯನ್ನು ಹತೋಟಿಯಲ್ಲಿಡುವುದು ಇದನ್ನು ಮಾಡಬೇಕಾದರೆ ಇನ್ನು ೧೫ ೨೦ ವರ್ಷಗಳಾದರೂ ಬ್ರಿಟಿಷರು ಭಾರತದಲ್ಲಿರಬೇಕಾಗುತ್ತಿತ್ತು ಈ ನೀತಿಯು ತಾವು ಹಿಂದೆ ಹೇಳಿದ್ದಕ್ಕೆಲ್ಲಾ ವಿರುದ್ಧವಾದುದರಿಂದ ಬ್ರಿಟಿಷ್ ಸರ್ಕಾರವು ಈ ಯೋಜನೆಯನ್ನು ನಿರಾಕರಿಸಲು ಸ್ವಲ್ಪವೂ ಹಿಂಜರಿಯಲಿಲ್ಲ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದೃಷ್ಟಿಯಿಂದ ಇಂತಹ ರಾಜಕೀಯ ನೀತಿಯು ಅಸಾಧ್ಯ ಮತ್ತು ಎಲ್ಲಪಕ್ಷಗಳ ವಿರೋಧಕ್ಕೂ ಕಾರಣವಾಗುವುದು ಅದ್ದರಿಂದ ಇನ್ನೊಂದು ಮಾರ್ಗವನ್ನು ಆಶ್ರಯಿಸಿ ಭಾರತದ ಪಕ್ಷಗಳನ್ನು ಒಂದು ಒಪ್ಪಂದಕ್ಕೆ ತರುವ ಬಗ್ಗೆ ಮತ್ತೊಂದು ಸಲ ಪ್ರಯತ್ನಮಾಡಿ, ಆಡಳಿತ ಜವಾಬ್ದಾರಿಯನ್ನು ವಹಿಸುವುದಕ್ಕೆ ಒಂದು ಅವಧಿಯನ್ನು ಕಲ್ಪಿಸಿ ಎಚ್ಚರಿಕೆಯನ್ನೂ ಕೊಡಲಾಯಿತು ಅವರವರಲ್ಲಿ ಒಪ್ಪಂದಕ್ಕೆ ಬರುವದಕ್ಕೆ ಇದು ಸಾಕಷ್ಟು ಪ್ರೋತ್ಸಾಹ ಕೊಡುವದೆಂದು ಬ್ರಿಟಿಷ್ ಸರ್ಕಾರವು ಅಭಿಪ್ರಾಯಪಟ್ಟಿತು

ಈ ನಿರ್ಣಯವನ್ನು ಒಂದು ಮಹತ್ತರವಾದ ಪರೀಕ್ಷೆಯೆಂದು ವರ್ಣಿಸಲಾಗಿದೆ ಮತ್ತು ಅಪಾಯಕರವಾದ ಹೆಜ್ಜೆಯನ್ನು ಇಡಲಾಗಿರುವುದೇನೋ ನಿಜ ಆದರೆ ಇಲ್ಲಿ ಎರಡು ಉದ್ದೇಶಗಳು ಇವೆ. (೧) ತೊಂದರೆ ಬರುತ್ತಿಂದು

ಕಾರ್ಯ ವಿಧಾನವನ್ನು ಬಿಡದಿರುವದೊಂದು ಮತ್ತು (೨) ಭಾರತೀಯರಿಗೆ ಮೋಸ ಮಾಡದಿರುವದಿನ್ನೊಂದು, ಭಾರತೀಯರು ಮನಸ್ಸಿಟ್ಟು ಕೂಡಲೆ ಪ್ರಯತ್ನ ಮಾಡಿದರೆ ಹೊಸ ರಾಜ್ಯಾಂಗದ ಬಗ್ಗೆ ಸೂಕ್ತ ನಿರ್ಧಾರಕ್ಕೆ ಇಲ್ಲದಿದ್ದರೆ ಆಡಳಿತ ವಹಿಸಿಕೊಳ್ಳುವ ಯೋಗ್ಯತೆ ಹೊಂದಿದ ಕೇಂದ್ರ ಸರ್ಕಾರದ ವಿಷಯದಲ್ಲಿ ಒಂದು ಒಪ್ಪಂದಕ್ಕೋ ಬಂದೇ ಬರುವರೆಂಬ ಭರವಸೆ ಬ್ರಿಟಿಷ್ ಸರ್ಕಾರಕ್ಕಿದೆ

ಅಧಿಕಾರವನ್ನು ವರ್ಗಾಯಿಸುವ ವೇಳೆಗೆ ಏನು ಮಾಡಬೇಕೆಂದು ಈಗ ಹೇಳುವುದಕ್ಕೆ ಪರಿಸ್ಥಿತಿಯು ಸಾಕಷ್ಟು ವಿಶದಗೊಂಡಿಲ್ಲ ಎಂದು ಹೇಳಿದರು

ಮುಂದುವರಿದು, ಭಾರತದ ವಿವಿಧ ಪಕ್ಷಗಳು ಒಪ್ಪಂದಕ್ಕೆ ಬರದೇಹೋದಲ್ಲಿ ರಾಜ್ಯಾಂಗ ಸಭೆಯಲ್ಲಿ ಪ್ರಾತಿನಿಧ್ಯ ಹೊಂದಿರುವ ಭಾಗಗಳಿಗೆ ಪ್ರತ್ಯೇಕವಾಗಿ ಆಡಳಿತಾಧಿಕಾರವನ್ನು ಕೊಡಬೇಕಾಗುವ ಪರಿಸ್ಥಿತಿ ಬರಬಹುದೆಂದೇ ಸರ್ಕಾರವು ನಿರ್ಧರಿಸಿದೆ ಮತ್ತು ಇದಕ್ಕೆ ಕಾಂಗ್ರೆಸ್ಸಿನ ಸಮ್ಮತಿಯೂ ಇದೆ ಎಂದು ತಿಳಿಸಿದರು

ಮೈನಾರಿಟಿಗಳ ಪ್ರಶ್ನೆಯನ್ನೆತ್ತಿ ಎಲ್ಲ ಅಲ್ಪ ಸಂಖ್ಯಾತ ಪಂಗಡಗಳಿಗೂ ರಾಜ್ಯಾಂಗ ಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕಿದೆಯೆಂದೂ ಅವರ ಹಿತರಕ್ಷಣೆಗಾಗಿ ಏರ್ಪಡಿಸಿರುವ ಸಮಿತಿಯ ಕಾರ್ಯ ನೀತಿಯನ್ನು ನೋಡಿದರೆ ಭಾರತ ರಾಜ್ಯಾಂಗದಲ್ಲಿ ಅಲ್ಪ ಸಂಖ್ಯಾತರ ಹಿತಕ್ಕೆ ಎಂದೂ ಧಕ್ಕೆ ಬರಲಾರದೆಂದು ಹೇಳಬಹುದು ಎಂದರು

ಸಂಸ್ಥಾನಗಳ ವಿಷಯದಲ್ಲಿ ಸಾರ್ವಭೌಮತ್ವ" ಅಧಿಕಾರ ಆಕಾಂಕ್ಷೆಗಳನ್ನು ಬೇರಾರಿಗೂ ಕೊಡುವುದಿಲ್ಲವೆಂದು ಸದೇ ಸದೇ ಹೇಳಿದೆ ಎಂದು ಕ್ರಿಪ್ಸ್‌ರವರು ಘೋಷಿಸಿದರು

ಬ್ರಿಟನ್ ಭಾರತಗಳ ಭವಿಷ್ಯ ಬಾಂಧವ್ಯ ಹೇಗಿರಬೇಕೆಂಬ ಒಗ್ಗೆ ಸಭೆಯ ಎಲ್ಲ ಸದಸ್ಯರಿಗೂ ಆಸಕ್ತಿಯಿದೆ ಬ್ರಿಟಿಶ್ ಕಾಮನ್‌ವೆಲ್ತಿಗೆ ಭಾರತವು ಸೇರುವುದನ್ನು ನಾನು ಸ್ವಾಗತಿಸುವೆನಾದರೂ ಇಷ್ಟವಿಲ್ಲದವರನ್ನು ಭಾಗಿಗಳಾಗಬೇಕೆಂದು ಒತ್ತಾಯಪಡಿಸುವ ಆಶಯ ಖಂಡಿತ ಇಲ್ಲ ಮತ್ತು ಮುಂದಿನ ಸ್ನೇಹದ ಬಗ್ಗೆ ಎರಡು ಕಡೆಯವರಿಗೂ ಪೂರ್ಣ ಸ್ವಾತಂತ್ರ್ಯವಿದೆ" ಎಂದು ಹೇಳಿದರು

ಇಂಡಿಯಾ ಸರ್ಕಾರದ ಬಜೆಟ್

ಭಾರತದ ಕೇಂದ್ರ ಸರಕಾರದಲ್ಲಿ ಶ್ರೀ ಲಿಯಾಖತ್ ಅಲಿಖಾನ್‌ರವರು ಹಣಕಾಸಿನ ಮಂತ್ರಿಗಳಾಗಿರುವರು ಇವರು ಮುಂದಿನ ವರ್ಷದ, ಎಂದರೆ ೧೯೪೭-೪೮ ರ ಕೇಂದ್ರ ಸರಕಾರದ ಆದಾಯ ಮತ್ತು ಖರ್ಚುಗಳ ಅಂದಾಜನ್ನು ತಯಾರಿಸಿರುವರು ಈ ಅಂದಾಜು ಅನೇಕ ವಿಷಯಗಳಲ್ಲಿ ಹೊಸರೀತಿಯದಾಗಿದೆ

ನಮ್ಮ ದೇಶದ ಸುತ್ತಲೂ ಮೂರು ಕಡೆ ಸಮುದ್ರವಿದೆ ಪಂಜಾಬಿನಲ್ಲಿ ಉಪ್ಪಿನ ಗಣಿ ಇದೆ ಅಲ್ಲದೆ ದೇಶದ ಅನೇಕ ಭಾಗಗಳಲ್ಲಿ ಚೌಳುಮಣ್ಣಿನಿಂದಲೂ ಇನ್ನೂ ಅನೇಕ ರೀತಿಯಿಂದಲೂ ನಮ್ಮ ಜನರು ಉಪ್ಪು ತಯಾರು ಮಾಡಿಕೊಳ್ಳುತ್ತಿದ್ದರು ಇಂಗ್ಲೀಷರು ಬಂದ ಮೇಲೆ ಉಪ್ಪುಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕಿತ್ತುಕೊಂಡರು ಉಪ್ಪಿನ ಮೇಲೆ ಸುಂಕ ಹಾಕಿದರು ಉಪ್ಪು ಎಲ್ಲರಿಗೂ ಬೇಕಾದ ವಸ್ತು ಆದ್ದರಿಂದ ಉಪ್ಪಿನ ತೆರಿಗೆ ಬಡವರ ಹೊರೆಯಾಯಿತು

ಇದು ಅನ್ಯಾಯ, ಈ ತೆರಿಗೆ ಹೋಗಬೇಕು ಅನುಕೂಲವಿದ್ದ ಕಡೆ ಉಪ್ಪುಮಾಡಿಕೊಳ್ಳುವ ಸ್ವಾತಂತ್ರ್ಯವು ನಮ್ಮ ಜನರಿಗೆ ಬೇಕು ಎಂದು ಗಾಂಧಿಯವರು ಬಹಳ ವರ್ಷಗಳಿಂದ ಹೇಳುತ್ತಿದ್ದರು ಆದರೆ ಈಗ ಹಣಕಾಸಿನ ಮಂತ್ರಿಗಳು ಈ ತೆರಿಗೆಯನ್ನು ತೆಗೆದುಹಾಕಿದರು

ಉಪ್ಪಿನ ತೆರಿಗೆ ಹೋದುದರಿಂದ ನಮ್ಮ ದೇಶದ ಬಡಜನರಿಗೆ ಬಹಳ ಅನುಕೂಲವಾಯಿತು ಆದರೆ ಅದರಿಂದ ಕೇಂದ್ರ ಸರಕಾರಕ್ಕೆ ಎಂಟು ಕೋಟಿ ರೂಪಾಯಿ ನಷ್ಟವಾಯಿತು ಇದಲ್ಲದೆ ಇನ್ನೂ ಅನೇಕ ಕಾರಣಗಳಿಂದ ಕೇಂದ್ರ ಸರಕಾರದ ಆದಾಯಕ್ಕಿಂತ ಖರ್ಚೇ ಹೆಚ್ಚಾಗಿದೆ

ಆದಾಯ ಸುಮಾರು ೨೮೦ ಕೋಟಿ ರೂಪಾಯಿ ಖರ್ಚು ಸುಮಾರು ೩೨೮ ಕೋಟಿ ರೂಪಾಯಿ ಸುಮಾರು ನಲವತ್ತೆಂಟು ಕೋಟಿ ರೂಪಾಯಿ ಸಾಲದೆ ಬರುತ್ತದೆ

ಈ ಬೇಕಾದ ಹಣವನ್ನು ಎಲ್ಲಿಂದ ತರುವುದು? ಸರಕಾರಕ್ಕೆ ಎರಡು ಮಾರ್ಗಗಳಿವೆ ಸಾಲ ಮಾಡಬಹುದು ಅಥವಾ ಹೆಚ್ಚು ತೆರಿಗೆ ಹಾಕಿ ಸಂಪಾದಿಸಬಹುದು ಶ್ರೀ ಲಿಯಾಖತ್ ಅಲಿಖಾನರು ಎರಡನೇ ಮಾರ್ಗವನ್ನು ಅನುಸರಿಸಿರುವರು

ತೆರಿಗೆ ಹೇಗೆ ಹಾಕಬೇಕು? ಯಾರಮೇಲೆ ಅದರ ಹೊರೆ ಬೀಳಬೇಕು, ಇದು ಮುಖ್ಯವಾದ ವಿಷಯ ಬಡವರ ಮೇಲೆ ಅದರ ಹೊರೆಬಿದ್ದರೆ ಅವರು ಸಹಿಸಲಾರರು ಆದ್ದರಿಂದ ಸಾಹುಕಾರರಮೇಲೆ ಬೀಳುವಂತೆಯೇ ತೆರಿಗೆ ಹಾಕಿದ್ದಾರೆ

ಹಿಂದೆ ವರ್ಷಕ್ಕೆ ೨೦೦೦ರೂ ಆದಾಯ ಬರುತ್ತಿದ್ದವರು ರೂಪಾಯಿಗೆ ಇಷ್ಟು ಕಾಸೆಂದು ತೆರಿಗೆ ಕೊಡಬೇಕಾಗಿತ್ತು ಈಗೆ ವರ್ಷಕ್ಕೆ ೨೫೦೦ರೂಗಿಂತ ಹೆಚ್ಚು ಆದಾಯ ಬರುವವರು ಮಾತ್ರ ತೆರಿಗೆ ಕೊಡಬೇಕು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಆದಾಯ ಪಡೆಯುವವರು ತಮ್ಮ ಆದಾಯದ ಕಾಲುಭಾಗವನ್ನು (ನೂರಕ್ಕೆ ೨೫ರಂತೆ) ಸರಕಾರಕ್ಕೆ ಕೊಡಬೇಕು ಎಂದು ನಿಶ್ಚಯಿಸಿದ್ದಾರೆ

ನಮ್ಮ ದೇಶದಿಂದ ಹೊರಗೆ ಹೋಗುವ ಟೀ (ಚಹಾ) ಮೇಲೆ ಸುಂಕ ಹೆಚ್ಚುಮಾಡಿದ್ದಾರೆ ಇದರಿಂದಲೇ ಸುಮಾರು ೪ಂಕೋಟಿ ರೂಪಾಯಿ ಆದಾಯ ಬರುವುದಂತೆ! ಇದರಿಂದ ಹಣವಂತರಿಗೆ ಕೋಪ! ಬಡವರಿಗೆ ಅನುಕೂಲ!

ಕೃತಕ ಅನ್ನನಾಳದಿಂದ ಬದುಕಿಸಿದರು

ಅನ್ನನಾಳದಲ್ಲಿ ಸರಿಯಾಗಿ ಆಹಾರ ಇಳಿಯದೆ ಸಾಯುವುದರಲ್ಲಿದ್ದ ಸಿಪಾಯಿಯೊಬ್ಬನಿಗೆ ಕೃತಕ ಅನ್ನನಾಳ ಕೊಟ್ಟು ಆಸ್ಟ್ರೇಲಿಯಾದ ಮುಖ್ಯಪಟ್ಟಣವಾದ ಸಿಡ್ನಿಯಲ್ಲಿ ಬದುಕಿಸಿದ್ದಾರೆ ಎದೆಯ ಮುಂಭಾಗದ ಚರ್ಮದೊಳಗೆ ಈ ಅನ್ನನಾಳ ಅಂಟಿಕೊಂಡಿದ್ದು ಅಲ್ಲಿಂದ ಸಣ್ಣ ಕರಳುಗಳಿಗೆ ಸಂಬಂಧಿಸಲಾಗಿದ ಆಹಾರ ಒಳಗಡೆ ಹೋಗುವುದು ಮಾತ್ರ ಈಚೆಗೆ ಚನ್ನಾಗಿ ಕಾಣಿಸುತ್ತದೆ.

ಅಗ್ನಿಪರ್ವತದಲ್ಲಿ ಅಗ್ನಿಜ್ವಾಲೆಯ ಪ್ರವಾಹ

ಯೂರೋಪು ಖಂಡದ ದಕ್ಷಿಣಭಾಗದಲ್ಲಿ ಇಟಲಿ ದೇಶವಿದೆ ಅದರ ಬಳಿ ಇರುವ ಸಿಸಿಲಿ ದ್ವೀಪದಲ್ಲಿ ಎಟ್ನ ಎಂಬ ಅಗ್ನಿ ಪರ್ವತವಿದೆ ಅದರಲ್ಲಿ ಅನೇಕ ವರ್ಷಗಳಿಗೊಮ್ಮೆ ಅದ್ಭುತವಾದ ಅಗ್ನಿಜ್ವಾಲೆಯು ಉತ್ಪನ್ನವಾಗುವದು ಈಗ ಆ ಜ್ವಾಲೆಯು ಉತ್ಪನ್ನವಾಗಿರುವದು ಆ ಮಹಾಜ್ವಾಲೆಯಿಂದ ಕರಗಿದ ಲೋಹಗಳು ಕಲ್ಲು ಮೊದಲಾದವು ಆ ಪರ್ವತದ ಬಾಯಿಂದ ಹೊರಕ್ಕೆ ಹರಿದುಬರುತ್ತಿವೆ ಈ ಕುದಿಯುವ ಲೋಹದ ಹೊಳೆಯು ದಾರಿಯಲ್ಲಿ ಸಿಕ್ಕಿದುದನ್ನೆಲ್ಲಾ ನಾಶಮಾಡುತ್ತಿದೆ

ಜನರು ವಿಮಾನದಲ್ಲಿ ಹಾರಿ ಹೋಗಿ ಬಾಂಬುಗಳನ್ನು ಆ ಅಗ್ನಿಪರ್ವತದ ಬಾಯಿಗೆ ಹಾಕಿ ಬೆಂಕಿಯನ್ನು ನಿಲ್ಲಿಸಲು ಪ್ರಯತ್ನ ಮಾಡುತ್ತಿದ್ದಾರೆ ಇನ್ನೂ ಅಗ್ನಿಪ್ರವಾಹವು ನಿಂತಿಲ್ಲ

ಸ್ವೀಕಾರ

ರಾಯಚೂರು ಡಿ|| ಕನಕಗಿರಿ ಗ್ರಾಮದ ಮ|| ರಾ|| ಬತ್ತದ ಬಸಟ್ಟೆಪ್ಪನವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ಮ|| ರಾ|| ದೊಡ್ಡಬಸವಪ್ಪನವರು ಮತ್ತು ಮರಿಬಸವಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂಪಾಯಿಗಳು ಕನಕಗಿರಿ ಹಿರಿಯ ಮಠದ ಶ್ರೀ| ಷ|| ಬ್ರ|| ಪಂಚಾಕ್ಷರಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ವೇ|| ಎಸ್ ಎಂ ಮರಿಸೋಮಾರಾಧ್ಯರು ತಾ| ೬-೩-೪೭ನೆಯ ಗುರುವಾರ ದಿವಸ ಶ್ರೀ ಜಗದ್ಗುರು ರೇಣುಕಭಗವತ್ಪಾದಾಚಾರ್ಯರ ಜಯಂತೀಮಹೋತ್ಸವವನ್ನು ತಮ್ಮ ಗೃಹದಲ್ಲಿ ವಿಶೇಷ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಬಳ್ಳಾರಿ ಟವನ್ನಿನಲ್ಲಿರುವ ಮ|| ರಾ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ತಮ್ಮ ಗೃಹದಲ್ಲಿ ಫಾಲ್ಗುನ ಶು|| ೧೪ ಗುರುವಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಮಹಾಸಂಭ್ರಮದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಬಹು ಪ್ರಾಚೀನವಾದ ಪ್ರಮಾಣಗ್ರಂಥವಾಗಿಯೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಸಿದ್ಧವಾಗಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳೆಲ್ಲಕ್ಕೂ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಈ ದಿನದವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನವಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳ ಸರಿಯಾದ ಅರ್ಥವು ತಿಳಿಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡ ಪ್ರವರ್ತಿಸಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ... ಪಾತ್ರರಾಗಿರುತ್ತಾರೆ. ... ಓದಿನೋಡಿದಮಾತ್ರದಿಂದಲೇ ವ್ಯಾಖ್ಯಾನದ ಮಹತ್ತ್ವವು ಗೊತ್ತಾಗುವುದು. ... ಶ್ರಮವಹಿಸಿ ... ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ... ಪುಟಗಳುಳ್ಳದ್ದು. ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಮರ್ಪಣವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ... ಮನೋಹರವಾದ ಚಿತ್ರಗಳು ಸೇರಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ... ಇರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಪಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು ೧	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ನಿಗಮಸಂಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು (ಕನ್ನಡ)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಸಂಸ್ಕೃತ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ ೩೦ ಕ್ಕೂ ಹೆಚ್ಚಾದ ಫೋಟೋಗಳಿರುವ ಪುಸ್ತಕ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವುಳ್ಳದ್ದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿದ ಪುಸ್ತಕ)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु.
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯನನಪಂಕಜಾತಜನ್ಮಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಮಾರ್ಚಿ ೧೯೪೭ [ಸಂಚಿಕೆ ೪೬

ಬೇಕಾಗಿದೆ

ನಮ್ಮ ಪ್ರೆಸ್ಸು ಮತ್ತು ಪತ್ರಿಕೆಯ ಆಫೀಸಿನ ಕೆಲಸಗಳನ್ನು ನಡೆಯಿಸಿಕೊಂಡು ಹೋಗಲು ಒಬ್ಬ ಅನುಭವಶಾಲಿಗಳು ಬೇಕಾಗಿದೆ ಅವರಿಗೆ ಕನ್ನಡಭಾಷಾಜ್ಞಾನವು ಚನ್ನಾಗಿರಬೇಕಲ್ಲದೆ ಲೇಖನಗಳನ್ನು ಸ್ವತಃ ಬರೆಯುವಶಕ್ತಿಯಿರಬೇಕು ಸಾಧಾರಣ ಮಟ್ಟಿಗೆ ಇಂಗ್ಲಿಷ್ ಭಾಷಾಜ್ಞಾನವಿದ್ದರೆ ಉತ್ತಮ ಅವರ ಯೋಗ್ಯತಾನುಸಾರವಾಗಿ ೩೫ ರಿಂದ ೪೦ ರೂಪಾಯಿಗಳವರೆಗೆ ಸಂಬಳವನ್ನು ಕೊಡಲಾಗುವದು ಅವರು ಶಾಂತಸ್ವಭಾವದವರಾಗಿಯೂ, ನಂಬಿಗೆಗೆ ಅರ್ಹರಾಗಿಯೂ, ಗುರುಸೇವಾಭಿಮಾನಿಗಳಾಗಿಯೂ ಇರಬೇಕು ತಮ್ಮ ವಯಸ್ಸು ಯೋಗ್ಯತೆ ಮೊದಲಾದವುಗಳನ್ನು ಸರ್ಟಿಫಿಕೇಟಿನೊಂದಿಗೆ ತಿಳಿಸಬೇಕು

ಪ್ರೊಪ್ರೈಟರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸು
ಮೈಸೂರು

ಶ್ರೀಸಿದ್ಧಲಿಂಗವಿಜಯ ನಾಟಕಕ್ಕೆ ಸಹಾಯ

ಶ್ರೀ|| ಉಜ್ಜಯಿನೀ - ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ನಾಟಕವನ್ನು ಕೊಟ್ಟೂರು ಗ್ರಾಮದಲ್ಲಿರುವ ವೇ|| ಸಂಗೀತವಿದ್ವಾನ್ ಕೆಂಬಾವಿಮಠದ ಚನ್ನಬಸವಶಾಸ್ತ್ರಿಗಳವರು ಬಹುವಿಧವಾಗಿ ಪ್ರಯತ್ನಪಟ್ಟು ತಯಾರಿಸಿ ಕೊಟ್ಟೂರು ನಗರದಲ್ಲಿ ಬಹು ಮನೋಹರವಾಗಿ ಅಭಿನಯಿಸಿದ ವಿಷಯವು ಪ್ರಭಾ ಪತ್ರಿಕೆಯ ವಾಚಕರಿಗೆಲ್ಲಾ ನೇದ್ಯವೇ ಆಗಿದೆ. ಸದರಿ ಶಾಸ್ತ್ರಿಗಳವರು ಈ ನಾಟಕದ ಬಗ್ಗೆ ವಿಶೇಷ ಪರಿಶ್ರಮವನ್ನು ತೆಗೆದುಕೊಂಡಿರುವರಲ್ಲದೆ, ಬಹಳ ದ್ರವ್ಯವನ್ನು ಸಹ ವೆಚ್ಚಮಾಡಿರುವರು ಗುರುಭಕ್ತಿಯ ಉತ್ಸಾಹದಲ್ಲಿ ಬಿದ್ದು ಇದಕ್ಕಾಗಿ ವಿಶೇಷವಾದ ಸಾಲವನ್ನು ಸಹ ಮಾಡಿಕೊಂಡಿರುವರು. ಸಿದ್ಧಲಿಂಗಜಗದ್ಗುರುವಿನ ಕೀರ್ತಿಯನ್ನು ಪ್ರಕಾಶಪಡಿಸುವದಕ್ಕಾಗಿ ಬಹಳ ಕಷ್ಟಪಟ್ಟಿರುವ ಮೇಲ್ಕಂಡ ಶಾಸ್ತ್ರಿಗಳವರೊಬ್ಬರ ಮೇಲೆಯೇ ಋಣಭಾರವನ್ನು ಹೊರಿಸದೆ, ಗುರುಭಕ್ತರೆಲ್ಲರೂ ಆ ಭಾರವನ್ನು ಹೊರುವದು ನ್ಯಾಯವಾಗಿದೆ. ಈ ಯಥಾರ್ಥವಿಷಯವನ್ನೆಲ್ಲ ತಿಳಿದುಕೊಂಡು ಗುರುವರ್ಗೋದ್ಧಾರಕರಾದ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ನಾಟಕದ ಸಹಾಯಕ್ಕಾಗಿ ವೇ|| ಚನ್ನಬಸವಶಾಸ್ತ್ರಿಗಳವರಿಗೆ ೨೦೦ ರೂಪಾಯಿಗಳನ್ನು ಕಳುಹಿಸಿರುವರು. ಮತ್ತು ಶಿರ್ಶಿ ಶ್ರೀ ಚರಮೂರ್ತಿಸ್ವಾಮಿಗಳವರು ೫೦ ರೂಪಾಯಿಗಳನ್ನೂ, ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಚರಮೂರ್ತಿಸ್ವಾಮಿಗಳವರು ೨೫ ರೂಪಾಯಿಗಳನ್ನೂ ಕಳುಹಿಸಿರುವರು. ಇದರಂತೆಯೇ ಶ್ರೀ ಸಿದ್ಧಲಿಂಗಮಹಾಗುರುವಿನಲ್ಲಿ ಭಕ್ತಿಯನ್ನಿಟ್ಟಿರುವ ಎಲ್ಲ ಪಟ್ಟಚರಾಧಿಕಾರಿಗಳೂ, ಭಕ್ತಮಾಹೇಶ್ವರರೂ ಸದರಿ ಶಾಸ್ತ್ರಿಗಳವರಿಗೆ ತಮ್ಮ ಕೈಲಾದಮಟ್ಟಿಗೆ ದ್ರವ್ಯಸಹಾಯ ಮಾಡಿ (ಮನಿಯಾರ್ಡರ್ ಮೂಲಕ ಕಳಿಸಿ) ಸದರಿ ಶಾಸ್ತ್ರಿಗಳಿಗೆ ಉತ್ತೇಜನವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ

ಜಗದ್ಗುರು ಸಿದ್ಧಲಿಂಗನ ಭಕ್ತ

ಮನಿಯಾರ್ಡರ್ ಮಾಡತಕ್ಕ ಅಡ್ರೆಸ್—

ವೇ|| ಸಂಗೀತವಿದ್ವಾನ್ ಕೆಂಬಾವಿ ಮಠದ
ಚನ್ನಬಸವಶಾಸ್ತ್ರಿಗಳು
ಪೋ|| ಕೊಟ್ಟೂರು ಡಿ| ಬಳ್ಳಾರಿ

ಕುಂದಗೋಳ ಹಿರೇಮಠದ ಉತ್ತರಾಧಿಕಾರ ಪತ್ರ

ಕುಂದಗೋಳ ಪಂಚಗೃಹ ಹಿರೇಮಠದ ಅಧಿಕಾರಿಗಳಾದ ಶ್ರೀ|| ಷ|| ಬ್ರ|| ಗುರುಪಾದಸ್ವಾಮಿಗಳವರು ಮುಪ್ಪಿನವರಾಗಿರುವದರಿಂದ ತಮ್ಮ ತರುವಾಯ ಮಠದ ಸಕಲ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುವದಕ್ಕಾಗಿ ಒಬ್ಬ ಯೋಗ್ಯ ವಟುವನ್ನು ಶೋಧಮಾಡುತ್ತಿದ್ದರು. ಕರ್ನಾಟಕದ ಬಹುಭಾಗಗಳಲ್ಲಿ ಸಂಚರಿಸಿ ತಮ್ಮ ಪ್ರವಚನ ಮತ್ತು ಧರ್ಮಬೋಧೆಯಿಂದ ಹೆಸರುಪಡೆದಿರುವ ವೇ|| ಸಿದ್ಧಲಿಂಗದೇವರು ಹಿರೇಮಠ ಹಿರೇಹರಕುಣಿ ಇವರು ತಮ್ಮ ಮಠಕ್ಕೆ ಮಠದ ಸಕಲ ಆಸ್ತಿಗಳಿಗೆ ಯೋಗ್ಯ ಮತ್ತು ಸಮರ್ಥ ಅಧಿಕಾರಿಗಳಾಗುವರೆಂದು ತಿಳಿದು ಸದರಿ ಸಿದ್ಧಲಿಂಗದೇವರನ್ನು ತಾ|| ೧೫ ೭-೪೬ನೆಯ ದಿವಸ ಶುಭ ಮುಹೂರ್ತದಲ್ಲಿ ಧರ್ಮಪದ್ಧತಿಯ ಮೇರೆಗೆ ಶಿಷ್ಯಸಂಸ್ಕಾರದಿಂದ ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದ್ದಲ್ಲದೆ ಸದರಿ ಸಿದ್ಧಲಿಂಗದೇವರನ್ನು ತಾ|| ೧೧-೩-೪೭ನೆಯ ದಿವಸ ತಮ್ಮ ತರುವಾಯ ತಮ್ಮ ಮಠದ ಉತ್ತರಾಧಿಕಾರಿಗಳನ್ನಾಗಿ ನಿಯಮಿಸಿಕೊಂಡು ನೇಮಣೂಕಿ ಪತ್ರವನ್ನು ಬರೆದು ನೋಂದಾಯಿಸಿ ಕೊಟ್ಟರು. ಈ ಸಮಾರಂಭವು ಶ್ರೀ|| ಷ|| ಬ್ರ|| ಚರಮೂರ್ತಿಸ್ವಾಮಿಗಳು ಹನ್ನೆರಡುಮಠ ಹುಬ್ಬಳ್ಳಿ ಮತ್ತು ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರು ಹಿರೇಮಠ ಸತ್ತಿಗೇರಿ ಮತ್ತು ಕುಂದಗೋಳ ಗ್ರಾಮದ ಜಾಹಗೀರದಾರರಾದ ದೇಸಾಯಿ, ದೇಶಪಾಂಡೆ, ಸಾಡಗೀರ ಮತ್ತು ಇತರ ಪ್ರಮುಖ ಸದ್ಗೃಹಸ್ಥರ ಮತ್ತು ಸರಕಾರಿ ಅಧಿಕಾರಿಗಳ ಸಮ್ಮುಖದಲ್ಲಿ ಯಶಸ್ವಿಯಾಗಿ ಜರುಗಿತು ಮಠದಲ್ಲಿ ನೆರೆದ ಸಕಲ ಮಹಾಜನಗಳು ಮತ್ತು ಮಠದ ಶಿಷ್ಯರು ಮಠದ ಉತ್ತರಾಧಿಕಾರಿಗಳಾದ ಸಿದ್ಧಲಿಂಗದೇವರ ಗುಣ, ಶೀಲ, ವಿದ್ಯಾ, ಸಾಮರ್ಥ್ಯವನ್ನು ಅರಿತವರಿದ್ದುದರಿಂದ ಮಠದ ಸ್ವಾಮಿಗಳವರ ಉತ್ತರಾಧಿಕಾರನಿಯಮನವನ್ನು ಬಹಳೇ ಸಂತೋಷದಿಂದ ಸ್ವಾಗತಿಸಿದರು ಕುಂದಗೋಳ ಹಿರೇಮಠವು ಗುರುಕುಲತಿಲಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಪ್ರಾರಂಭಿಸಲ್ಪಟ್ಟ ಗುರುವರ್ಗ ಪ್ರಗತಿಯ ಮೆಟ್ಟಾಗಿದ್ದು, ನಮ್ಮ ಮಠದ ಉತ್ತರಾಧಿಕಾರಿಗಳ ಉಜ್ವಲ ಗುರುವರ್ಗಾಭಿಮಾನದಿಂದಲೂ ಅವರ ವಿದ್ವತ್ಪ್ರಭೆಯಿಂದಲೂ ಹೆಚ್ಚೆಚ್ಚಾಗಿ ಬೆಳಗಲೆಂದು ಹಾರೈಸುವ,

ಮಹಾದೇವಪ್ಪ, ಕೋಳಿವಾಡ,
ಶಿವಯೋಗಯ್ಯ, ಹಿರೇಮಠ

ಸ್ವೀಕಾರ

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ ಬೃಹನ್ಮಠದ ಅಧಿಪತಿಗಳಾಗಿರುವ ಶ್ರೀ|| ಷ|| ಬ್ರ|| ಗುರುಪಾದಶಿವಾಚಾರ್ಯಸ್ವಾಮಿಗಳವರು ತಮ್ಮ ಉತ್ತರಾಧಿಕಾರ ವಿಷಯಕವಾದ ಪತ್ರವನ್ನು ಹಿರೇಹರಕುಣಿ ಹಿರೇಮಠದ ವೇ|| ಸಿದ್ಧಲಿಂಗದೇವರ ಹೆಸರಿಗೆ ಬರೆದುಕೊಟ್ಟ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಕಡೂರು ಡಿ|| ದೇವನೂರು ಗ್ರಾಮದಲ್ಲಿರುವ ಸಮಸ್ತ ಶೈವದವರೂ ಶ್ರೀರೇಣುಕಜಯಂತಿಯನ್ನು ಮಹಾವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವೇ|| ಮಠದ ಸಿದ್ಧರಾಮಯ್ಯನವರು ಸಮರ್ಪಿಸಿದ 2 ರೂಪಾಯಿ, ಮ|| ರಾ|| ಹೊಸೂರೇಗೌಡರ ಮಕ್ಕಳು ರಾಮೇಗೌಡರು ಸಮರ್ಪಿಸಿದ 2 ರೂಪಾಯಿ ಒಟ್ಟು 4 ರೂಪಾಯಿಗಳು ವೇ|| ಸಿದ್ಧರಾಮಯ್ಯನವರ ದ್ವಾರಾ ತಲ್ಪಿರುತ್ತವೆ

ಕಡೂರು ಡಿ|| ವಡೆಯರ ಹಳ್ಳಿ, ಗ್ರಾಮದಲ್ಲಿ ಶ್ರೀರೇಣುಕಜಯಂತಿಯು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಮ|| ರಾ|| ಗಂಗಾಧರಪ್ಪನವರು ಸಮರ್ಪಿಸಿದ 1 ರೂಪಾಯಿ, ಮ|| ರಾ|| ಚಂದಪ್ಪನವರು ಸಮರ್ಪಿಸಿದ 1 ರೂಪಾಯಿ ಒಟ್ಟು 2 ರೂಗಳು ವೇ|| ಮಠದ ಬಸವಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ್ ಟವನ್ನಿನಲ್ಲಿ ನೆರವೇರಿದ ಶ್ರೀರೇಣುಕಜಯಂತಿಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಅರಸೀಕೆರೆ ತಾ|| ರಾಮಪುರಗ್ರಾಮದ ವೀರಶೈವರು ನೆರವೇರಿಸಿದ ಶ್ರೀರೇಣುಕಜಯಂತೀ ಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಆರ್ ಎಸ್. ಮಹಾದೇವಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಚಿಕ್ಕಮಗಳೂರು ತಾ|| ವಸ್ತಾರೆ ಹುಲುವಳೆ ಪಟೇಲ್ ನಿರ್ವಾಣೇಗೌಡರು ಶಿವಸಾಯುಜ್ಯವನ್ನು ಹೊಂದಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ವಸ್ತಾರೆ ಪಟೇಲ್ ಚಾಡೇಗೌಡರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಯುಗಾದಿ

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

ಶ್ರೀಪರಮಾತ್ಮನ ಅನುಗ್ರಹದಿಂದ ನಾವೆಲ್ಲರೂ ವ್ಯಯನಾಮಸಂವತ್ಸರವನ್ನು ಅನೇಕಾನೇಕ [illegible] ಗಳಿಂದ ಕೂಡಿದ್ದಾಗ್ಯೂ [illegible] ವಿನ ರವಿವಾರ ಹೊಸವರ್ಷವಾದ ಸರ್ವಜಿತ್ ಸಂವತ್ಸರವನ್ನು ಕಾಣುವೆವು. ಹೊಟ್ಟೆಬಟ್ಟೆಗಳ [illegible] ಬಿರನ ಈ ಅದ್ಭುತಪ್ರಪಂಚವು ಚಕ್ರನೇಮಿಕ್ರಮ [illegible] ಕಾಲವನ್ನು ಸವೆಸುತ್ತಲೇ ಇದೆ. ದರಿದ್ರರು [illegible] ಬಳಲುತ್ತಲೇ ಇದ್ದಾರೆ. ಧನಿಕರು [illegible] ಸುತ್ತಲೇ ಇದ್ದಾರೆ. ಪಂಡಿತರು ತಮ್ಮ ಪಾಂಡಿತ್ಯವನ್ನು ತೋರಿಸುವುದರಲ್ಲಿಯೇ ಇದ್ದಾರೆ. ಕವಿಗಳು ಕವನಗಳನ್ನು ಕಟ್ಟುವುದರಲ್ಲಿಯೇ ಇದ್ದಾರೆ. [illegible] ಭಕ್ತಿಶ್ರದ್ಧೆಗಳಿಂದ ತ್ರಿಕಾಲಗಳಲ್ಲಿಯೂ ಲಿಂಗಾರ್ಚನೆ ಜಪ-ತಪೋನುಷ್ಠಾನಗಳನ್ನು ಮಾಡುತ್ತಲೇ ಇದ್ದಾರೆ. ಒಕ್ಕಲಿಗರು ಬಿಸಿಲು-ಮಳೆ-ಗಾಳಿ ಎನ್ನದೆ ಭೂಮಾತೆಯನ್ನು ಸೇವಿಸುತ್ತಲಿದ್ದಾರೆ. [illegible] ಪ್ರತಿಯೊಬ್ಬರೂ ತಮ್ಮ ತಮ್ಮ [illegible] ವಿರತರಾಗಿದ್ದಾರೆ. [illegible] ಸಂತೋಷ! [illegible] ಶಂಕರನು ವಿಷಪಾನಮಾಡಿ, [illegible] ಸ್ಮಾರಕವೆಂದು ಪುರಾಣೇತಿಹಾಸಗಳು [illegible]

ಸಮುದ್ರಮಥನೋದ್ಭೂತ ಹಾಲಾಹಲ ಮಹಾಭಯಾತ್
ತ್ರಿಜಗದ್ರಕ್ಷಿತಂ [illegible] ॥

ದೇವದಾನವರು ಕ್ಷೀರಸಮುದ್ರವನ್ನು ಮಥನ ಮಾಡಿದ ಸಮಯದಲ್ಲಿ, ಆವಿರ್ಭವಿಸಿದ ಮಹಾ ಕಾಲಕೂಟವಿಷವನ್ನು ಕೊರಳಲ್ಲಿ ಧರಿಸಿ ತ್ರಿಲೋಕವನ್ನು ಪರಿಪಾಲಿಸಿದ ಶ್ರೀಕಂಠನಿಗೆ ನಮಸ್ಕಾರವು ಎಂದು ಒಬ್ಬ ಕವಿಯು ಶಿವನನ್ನು ಸ್ತುತಿಸಿದ್ದಾನೆ.

ಪೂರ್ವದಲ್ಲಿ ದೂರ್ವಾಸಮುನಿಯ ಶಾಪದಿಂದ ದೇವೇಂದ್ರನ ಸಂಪತ್ತೆಲ್ಲವೂ ಶತ್ರುವಶವಾಗಲು, ಆಗ್ಗೆ ಮಹಾದುಃಖಿಯಾದ ಇಂದ್ರನು ತಪಸ್ಸಿನಿಂದ ಶಿವನನ್ನು ಪ್ರತ್ಯಕ್ಷಮಾಡಿಕೊಂಡು, ಶಿವನ ಅಪ್ಪಣೆಯ ಪ್ರಕಾರ ದೇವದಾನವರನ್ನೊಟ್ಟುಗೂಡಿಸಿ, ಮಂದರವನ್ನೇ ಮಂಥನದಂಡವನ್ನಾಗಿಯೂ, ಆದಿಶೇಷನನ್ನೇ ಹಗ್ಗವನ್ನಾಗಿಯೂ ಮಾಡಿ, ಕ್ಷೀರಸಾಗರವಂ ಮಥನಮಾಡಿಸಿದನು. ಆಗ ಅಲ್ಲಿ ಹುಟ್ಟಿದ ಕೌಸ್ತುಭಾದಿ ಶ್ರೇಷ್ಠವಸ್ತುಗಳನ್ನು ವಿಷ್ಣು-ಬ್ರಹ್ಮ ಇಂದ್ರ ಮೊದಲಾದವರು ತಮಗೆ ತಮಗೆ [illegible] ತೆಗೆದುಕೊಂಡರು. ಕೊನೆಗೆ ಅತಿ ಭೀಕರವಾದ ಕಾಲಕೂಟವಿಷವು ಹುಟ್ಟಿತು. ಅದನ್ನು ಮಾತ್ರ [illegible] ಗ್ರಹಿಸಲಿಲ್ಲ. ಅದು ಲೋಕತ್ರಯವನ್ನು [illegible] ಪ್ಪುಗಿಸಿತು. ಆಗ್ಗೆ ವಿಷ್ಣು-ಬ್ರಹ್ಮ [illegible] ದೇವತೆಗಳು ಸದಾಶಿವನನ್ನು [illegible] ಈ ವಿಪತ್ತನ್ನು ತಪ್ಪಿಸಿ ಸರ್ವರನ್ನೂ [illegible] ಎಂದು ಬೇಡಿಕೊಂಡರು. ಆಗ್ಗೆ [illegible] ಶಂಕರನು ಅವರುಗಳಿಗೆ ಅಭಯಪ್ರದಾನ ಮಾಡಿ [illegible] ಘೋರವಿಷವನ್ನು ಸ್ವೀಕರಿಸಿ ಕಂಠದಲ್ಲಿ ಧರಿಸಿದನು.

ಈ ಹಬ್ಬದಲ್ಲಿ [illegible] ಸೇವಿಸುವದು ವಾಡಿಕೆಯಾಗಿದೆ. [illegible] ಕಹಿಯಾದುದನ್ನು [illegible] ' [illegible] ಎಂಬ ವಿಚಾರವು [illegible] ಸ್ವಭಾವವೇ [illegible] ಕವಿಯು " [illegible] ರೂಪತಾ " ಎಂದು [illegible]

ಸಂಸಾರದಲ್ಲಿ ಸುಖದುಃಖಗಳೆರಡೂ ಒದಗುವುದು ಸಹಜವು. ಮಾನವನು ಅವೆರಡನ್ನೂ ಬೇವು-ಬೆಲ್ಲಗಳ ಸಮ್ಮಿಶ್ರಣದಂತೆ ಅನುಭವಿಸಲೇಬೇಕಾಗುವುದೆಂಬ ಪಾಠವನ್ನು ಈ ಯುಗಾದಿಯು ಸರ್ವರಿಗೂ ಕಲಿಸುತ್ತದೆ. ಅರ್ಜುನನಂತಹ ದಿವ್ಯಜ್ಞಾನಿಗೆ ಸುಖ-ದುಃಖಗಳನ್ನೂ, ಲಾಭಾಲಾಭಗಳನ್ನೂ, ಜಯಾಪಜಯಗಳನ್ನೂ ಸಮಗೊಳಿಸಿ ಸಾಗಬೇಕೆಂದು ಶ್ರೀಕೃಷ್ಣನು ಉಪದೇಶ ಮಾಡಿದ ಕಾರಣವೂ ಇದೆ.

ಕಷ್ಟದನಂತರ ಸುಖವೂ, ಸುಖದನಂತರ ಕಷ್ಟವೂ ಜನನಾಂತರ ಮರಣವೂ ಮರಣಾನಂತರ ಜನನವೂ ಪ್ರತಿ ಪ್ರಾಣಿಗೂ ತಪ್ಪಿದುದಲ್ಲ. ಪೂರ್ವಪುಣ್ಯಬಲದಿಂದಲೋ, ಪೂರ್ವದುಷ್ಕರ್ಮದಿಂದಲೋ ಒಬ್ಬ ವ್ಯಕ್ತಿಯು ಕೊನೆಯವರೆಗೆ ಸುಖವಾಗಿಯೇ ಇರಬಹುದು ದುಃಖಿಯಾಗಿಯೇ ಇರಬಹುದು. ಆದರೆ ಇವೆರಡಕ್ಕೂ ಮಧ್ಯವರ್ತಿಗಳಾದ ಮಾನವರೇ ಲೋಕದಲ್ಲಿ ಹೆಚ್ಚು. ಆದುದರಿಂದ ನಾವು ಪರಮೇಶ್ವರನನ್ನು ಬೇಡಿಕೊಳ್ಳುವದಾದರೆ ' ದೇವರೇ ಮಿತಿಮೀರಿದ ಸುಖವನ್ನಾಗಲಿ, ಮಿತಿಮೀರಿದ ದುಃಖವನ್ನಾಗಲಿ ಎಂದಿಗೂ ಕೊಡದಂತೆ ಕಾಪಾಡು " ಎಂದು ಪ್ರಾರ್ಥಿಸಬೇಕು. ಅದಕ್ಕೆ ಸರಿಯಾದ ಫಲಗಳನ್ನು ದಯಪಾಲಿಸುವುದು ಈಶ್ವರನ ಇಷ್ಟ. ಈ ವಿಷಯವನ್ನು ಶ್ರೀಕೃಷ್ಣನು

" ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ "

ಎಂಬೀ ವಾಕ್ಯದಿಂದ ಸ್ಪಷ್ಟಪಡಿಸಿದ್ದಾನೆ.

ನಮ್ಮ ಜ್ಯೋತಿಷ್ಕರಾದರೂ ಒಂದುವರ್ಷದ ಅಥವಾ ಒಂದು ತಿಂಗಳ ಭವಿಷ್ಯವನ್ನು ಹೇಳುವುದಾದರೆ, ಯಾವನೊಬ್ಬ ರಾಶಿಗೆ ಶನಿ ಕೆಟ್ಟವನೆಂದು ಹೇಳಿದರೆ ಗುರು ಒಳ್ಳೆಯವನೆಂದೂ ಗುರು ಕೆಟ್ಟವನಿದ್ದರೆ ಶನಿ ಒಳ್ಳೆಯವನೆಂದೂ ಹೇಳಿ ಅರ್ಧ ಸುಖ, ಅರ್ಧ ದುಃಖವನ್ನು [illegible] ದ್ದಾರೆ. ಭಗವಂತನ ಸೃಷ್ಟಿಕ್ರಮವನ್ನು ನೋಡಿದರೆ ಒಂದು ದಿನದಲ್ಲಿ ೧೨ ತಾಸು ಪ್ರಕಾಶದಿಂದ [illegible] ದುದಾದರೆ ೧೨ ತಾಸು ಅಂಧಕಾರಮಯವಾಗಿರುವುದು. ಸೂರ್ಯೋದಯವನ್ನು ಕಂಡು ಹಿಗ್ಗಿ ಯಾವಾಗಲೂ ನಮಗೆ ಹಗಲೇ ಇರುವದೆಂದು ಭಾವಿಸಿದರೆ ಎಷ್ಟು ತಪ್ಪಾಗುವದೋ ಹಾಗೆಯೇ ನಾವು ಯಾವಾಗಲೂ ಒಂದೇ ವಿಧವಾದ ಸುಖದಲ್ಲಿಯೇ ಇರುವೆವೆಂದು ನಿಶ್ಚಯಿಸಿದರ ಅಷ್ಟೇ ತಪ್ಪಾಗುವದು. ನಮ್ಮ ನೇತ್ರದ ಮುಂದೆಯೇ ಬೆಳಕು ಹೋಗಿ ಕತ್ತಲು ಬರುವಂತೆಯೂ, ಕತ್ತಲುಹೋಗಿ ಬೆಳಕು ಬರುವಂತೆಯೂ, ಸುಖವು ಹೋಗಿ ದುಃಖವೂ, ದುಃಖವು ಹೋಗಿ ಸುಖವೂ ಬರುವದು ಈಶ್ವರನ ನಿಯಮವಾಗಿದೆ. ಆದುದರಿಂದ ಈ ಸರ್ವಜಿತ್ ಸಂವತ್ಸರದಲ್ಲಿಯೂ ಉಂಟಾಗುವ ಕಷ್ಟ ಸುಖಗಳೆರಡಕ್ಕೂ ನಾವು ಭಾಗಿಗಳಾಗಲೇಬೇಕಾಗಿರುವುದು.

ಈ ನೂತನವರ್ಷದಲ್ಲಿ ಮಳೆ ಬೆಳೆ ಸಮೃದ್ಧಿಯಾಗಿ ಯಾವ ರೋಗಾದಿಗಳ ಬಾಧೆಯಿಲ್ಲದೆ, ಸರ್ವಜನರೂ ಆಯುರಾರೋಗ್ಯೈಶ್ವರ್ಯಾದಿಗಳಿಂದ ಸುಖವಾಗಿ ಬಾಳಲೆಂದೂ, " ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲ " ಎಂಬ ತತ್ತ್ವವನ್ನರಿತು ಮತ ಪರಮತವೆನ್ನದೆ ಪ್ರಾಂತ-ಪರಪ್ರಾಂತವೆನ್ನದೆ ಐಕ್ಯದಿಂದ ಭರತವರ್ಷದ ಮುನ್ನೋಟ [illegible] ಗಳು ಅಳಿದು ಸರ್ವರೂ [illegible] ಭಾವದಿಂದ ನಡೆಯುತ್ತ ತಮ್ಮ ತಮ್ಮ [illegible] ಲೋಕಕಲ್ಯಾಣವನ್ನುಂಟು [illegible] ಪರಮೇಶ್ವರನು ಭರತಖಂಡಕ್ಕೆ [illegible] ಸುಖವನ್ನುಂಟುಮಾಡಲೆಂದೂ [illegible] ಪ್ರಾರ್ಥಿಸುತ್ತೇವೆ.

" ಸರ್ವೇ ಜನಾಸ್ಸುಖಿನೋ ಭವಂತು "

ಶ್ರೀ[illegible] ಪಾದುಕಾಚಾರ್ಯಾಯ ನಮಃ ॥

ನೀತಿಮಂಜರಿ

ಪರಹಿತಕೆ ಮಿಡಿದಿರ್ಪುದುಂ ।
ಪರಮೋತ್ತಮರ್ಗೆ ತಮಗೆ ಭೂಷಣವೆಂದುಂ ॥
ಪರದುಃಖದೆ ಸುಖವೆಂದುಂ ।
ಪರಿಭಾವಿಸುತಿರ್ಪರಲ್ತೆ ದುರ್ಜನರಿಳೆಯೊಳ್ ॥೧॥

ಮದದಿಂದುಬ್ಬಿದ ಮೂರ್ಖರ ।
ಹೃದಯದೊಳಿರ್ಪ ಮೂರ್ಖಭಾವಮನಿಳಿಪಲ್ ।
ಮೃದುವಚನಂಗಳನೊರೆದೊಡೆ ।
ಕುದಿಪೆಣ್ಣೆಗೆ ನೀರನೆರೆದ ತೆರನಾಗದೆ ಪೇಳ್ ॥೨॥

ಪೆರರೊಡವೆಗಾಸೆಗೈಯದೆ ।
ಪರನಿಂದೆಯ ಮಾಡದಾಡದನೃತಮನೆಂದುಂ ॥
ಪರರಂ ದ್ವೇಷಿಸದಿರ್ದೊಡೆ ।
ಧರೆಯೊಳ್ ನೆರೆ ಸಾಧುವಾತನೊರ್ವನೆನಿಸಿದಂ ॥೩॥

ಸಲೆ ನೀಚನಾದೊಡಂ ತಾ ।
ನಿಳೆಯೊಳ್ ಸತ್ಸಂಗದಿಂದಮುನ್ನತಿವಡೆವಂ ॥
ನಳಿನೀಪತ್ರದೊಳೆರಗಿದ ।
ಜಳಬಿಂದುವ ಪೊಳೆವ ಮುತ್ತಿನಂದದ ಪೋಲುಂ ॥೪॥

ಸುಗುಣಂಗಳ್ ತನಗಿರ್ದೊಡೆ ।
ಜಗದೊಳ್ ತಾನಾಗಿ ನೆಗಳ್ದು ರಂಜಿಸುತಿರ್ಕುಂ ॥
ಮೊಗೆಯೊಳ್ ಮುಚ್ಚಿಟ್ಟೊಡಮೇಂ ।
ಮಗಮಗಿಸುವ ಕಂಪು ತೋರದೇ ಕಸ್ತುರಿಯೊಳ್ ॥೫॥

ಎನಿತೆನಿತೈ ಸಿರಿಯಿರ್ದೊಡೆ ।
ಮನಿತನಿತುಂ ನಮ್ರನಪ್ಪುದುಚಿತಂ ಧರೆಯೊಳ್ ॥
ಎನಿತೆನಿತು ಫಲಮನಾಂತೊಡೆ ।
ಮನಿತನಿತುಂ ಮಣಿಗುಮಲ್ತೆ ಫಲತರುನಿವಹಂ ॥೬॥

ಧರೆಯ ರಜಃಕಣಮಂ ನಿಜ ।
ಚರಣಾಹತಮಾಗಿ ತನ್ನ ತಲೆಮೆಟ್ಟುವವೊಲ್ ॥
ಕಿರುಕುಳತನದಿಂ ಪೆರರಂ ।
ಪರಿಭವಿಸಲ್ಕವರದೆಂತು ಸೈರಿಪರಿಳೆಯೊಳ್ ॥೭॥

ಎರೆಯರ್ಗೀಯದೆ ತಾನುಂ ।
ಪರಿಭೋಗಿಸಲಾರದೈದೆ ಗಳಿಸಿದ ಧನಮೇಂ ? ॥
ಪರಮೇ ಗಳಿಸಿಟ್ಟ ಜೇನಂ ।
ತಿರೆ ತಾನದು ಕಡೆಗೆ ಪೆರರ ಪಾಲಾಗದಿರದೇಂ ? ॥೮॥

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ,
ತಿಪ್ಟೂರ್.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಬಳ್ಳಾರಿ

ಬಳ್ಳಾರಿ ಟವನ್ನಿನಲ್ಲಿರುವ ಗುರುಭಕ್ತಶಿಖಾಮಣಿ ಶ್ರೀಮಂತ ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ತಮ್ಮ ಗೃಹದಲ್ಲಿ ಫಾಲ್ಗುಣ ಶುದ್ಧ ೧೪ ಗುರುವಾರ ದಿವಸ, ಶ್ರೀ ರೇಣುಕ ಜಯಂತಿಯನ್ನು ಮಹಾ ಸಂಭ್ರಮದಿಂದ ನೆರವೇರಿಸಿದರು. ಈ ಸಮಯಕ್ಕೆ ತಮ್ಮ ವಂಶಗುರುಗಳಾದ, ವೇ|| ರಾಡಕುಂದಿ ಹಿರೇಮಠದ ವಿರೂಪಾಕ್ಷಯ್ಯನವರನ್ನು ಕರೆಯಿಸಿಕೊಂಡಿದ್ದರಲ್ಲದೆ ವೇ|| ಕಲ್ಲು ಹೊಳೆಮಠದ ಕೆಂಪಯ್ಯನವರನ್ನೂ ಸಹ ಕರೆಯಿಸಿಕೊಂಡಿದ್ದರು. ಶ್ರೀ ರೇಣುಕಾಚಾರ್ಯರ ಮೂರ್ತಿಗೆ ಮೋಕ್ಕಂಡ ಮಹೇಶ್ವರರು ಮತ್ತು ಮಲ್ಲಿಕಾರ್ಜುನಪ್ಪನವರೂ ಇವರ ಪುತ್ರ ವೀರಭದ್ರಪ್ಪ, ಸೊಸೆ ಸೌ|| ವೀರಮ್ಮ, ಪುತ್ರಿ ಸೌ|| ರುದ್ರಮ್ಮ ಸೇವಕ ಹೊನ್ನಪ್ಪ ಇವರೆಲ್ಲರೂ ಸೇರಿ ಮಹಾಭಕ್ತಿಯಿಂದ ಪೂಜಾದಿಗಳನ್ನು ನೆರವೇರಿಸಿದರು. ಶ್ರೀ ರೇಣುಕರ ನಾಮಾವಳಿ ಪಠನಾನಂತರ ಸರ್ವರೂ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು. ಇವರಿಗೂ ಇವರ ಪುತ್ರಪೌತ್ರಾದಿಗಳಿಗೂ ಶ್ರೀ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುವ

ಕೊಂಚಗೇರಿಮಠದ
ಗುರುಬಸವಯ್ಯ

ರಾಣೇಬೆನ್ನೂರು

ಧಾರವಾಡ ಡಿ|| ರಾಣೇಬೆನ್ನೂರು ಟವನ್ನಿನಲ್ಲಿರುವ ಶ್ರೀ ಜಗದ್ಗುರು ರೇಣುಕಮಂದಿರದ ಪಂಚಾಚಾರ್ಯ ಭಜನ ಸಂಘದವರು, ಈ ತಿಂಗಳು ೬ ನೆಯ ತಾರೀಖಿನ ದಿವಸ ರೇಣುಕಜಯಂತಿಯನ್ನು ಮಹಾ ವಿಜೃಂಭಣೆಯಿಂದ ನೆರವೇರಿಸಿದರು. ಅಂದು, ಗ್ರಾಮದಲ್ಲಿರುವ ಎಲ್ಲಾ ದೇವರಿಗೂ ಪೂಜಾದಿಗಳು ನೆರವೇರಿದವು. ಮಧ್ಯಾಹ್ನ ಗಣಾರಾಧನೆಯಾಯಿತು, ಸಾಯಂಕಾಲ ರಥೋತ್ಸವವು ಜರುಗಿದಮೇಲೆ ಕಾರ್ಯಕ್ರಮವು ಸಮಾಪ್ತಿಗೊಂಡಿತು.

ವ್ಯವಸ್ಥಾಪಕ
ಶ್ರೀ ಜಗದ್ಗುರು ಪಂಚಾಚಾರ್ಯ ಭಜನ ಸಂಘ.

ಮುಕ್ತಿಮಂದಿರ

ಪ್ರತಿವರ್ಷದ ಪದ್ಧತಿಯಂತೆ ಇದೇ ವ್ಯಯನಾಮ ಸಂವತ್ಸರದ ಫಾಲ್ಗುನ ಶುದ್ಧ ೧೪ ಗುರುವಾರ (ತಾ|| ೬-೩-೪೭) ದಿವಸ ಶ್ರೀ ಮುಕ್ತಿಮಂದಿರ ಗುರುಕುಲದಲ್ಲಿ ಜಯಂತೀಮಹೋತ್ಸವವು ಬಹು ವೈಭವದಿಂದ ನೆರವೇರಿತು ಆದಿನ ಪ್ರಾತಃಕಾಲ ಗುರುಕುಲ ವಿದ್ಯಾರ್ಥಿಗಳಿಂದ ಶ್ರೀ ಜಗದ್ಗುರು ರೇಣುಕಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನಾದಿಗಳು ವಿಧ್ಯುಕ್ತವಾಗಿ ನೆರವೇರಿದವು ಅನಂತರ ಅನ್ನಸಂತರ್ಪಣೆಯಾಯಿತು. ಸಾಯಂಕಾಲ ಸಭೆಗೂಡಿ ಶ್ರೀಜಗದ್ಗುರುವಿನ ಅವತಾರ ವಿಷಯಕವಾಗಿ ಭಾಷಣಗಳಾದವು

ರುದ್ರಮುನಿಶರ್ಮಾ,
ಶ್ರೀ ಮುಕ್ತಿಮಂದಿರಗುರುಕುಲ ವಿದ್ಯಾರ್ಥಿ

ಮುದಗಲ್ಲು

ನಿಜಾಮಸ್ಟೇಟ್ ರಾಯಚೂರು ಜಿ| ಮುದಗಲ್ಲ ಶ್ರೀಮಠದ ಗಂಗಾಧರಮಠಾಧ್ಯಕ್ಷರಾದ ವೇ| ಸಿದ್ಧರಾಮಾಚಾರ್ಯರು ವಾರ್ಷಿಕ ಪದ್ಧತಿಯಂತೆ ಈ ವರ್ಷವೂ ಮಾರ್ಚ ೫| ೧೪ ಬುಧವಾರ ಮಹಾಶಿವರಾತ್ರಿ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯ ಹಾಗು ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಯನ್ನು ಫಾಲ್ಗುಣ ಶು|| ೧೪ ಗುರುವಾರ ರೇಣುಕಜಗದ್ಗುರುಗಳವರ ಜಯಂತಿಯನ್ನು ವಿಧ್ಯುಕ್ತವಾಗಿ ಆಚರಿಸಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾದರು

ಗುರುಭಕ್ತ

ಸುಲ್ತಾನಪುರ

ಲಕ್ಷ್ಮೇಶ್ವರ ತಾಲೂಕಪೈಕಿ ಸುಲ್ತಾನಪುರದ ಸದ್ಭಕ್ತ ಮಂಡಳಿಯವರು ರೇಣುಕ ಭಗವತ್ಪಾದರ ಮಹೋತ್ಸವವನ್ನು ಇದೇ ಫಾಲ್ಗುಣ ಶುದ್ಧ ಚತುರ್ದಶಿ ಗುರುವಾರ ದಿವಸ ಬಹುವೈಭವದೊಡನೆ ನೆರವೇರಿಸಿದರು ಶ್ರೀ ಜಗದ್ಗುರು ರೇಣುಕಾಚಾರ್ಯರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ತಳಿರುತೋರಣಗಳಿಂದಲಂಕೃತವಾದ ಮಾರ್ಗದಲ್ಲಿ ವಾದ್ಯಘೋಷದಿಂದಲೂ ಪಂಚಾಚಾರ್ಯರ ಜಯಘೋಷದಿಂದಲೂ ನೆರವೇರಿಸಿದರು ಅಲ್ಲಲ್ಲಿ ಸುಮಂಗಲೆಯರು ಆರತಿಯನ್ನು ಬೆಳಗಿ ಫಲಪುಷ್ಪಗಳನ್ನು ಅರ್ಪಿಸಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದರು. ದೇವಾಲಯಕ್ಕೆ ಬಂದಮೇಲೆ ಬೆಳವಣಿಕೆ ಗ್ರಾಮದ ಶ್ರೀ ಮೃತ್ಯುಂಜಯಶಾಸ್ತ್ರಿಗಳು ಗುರುಭಕ್ತಿವಿಷಯದಲ್ಲಿ ಸರಸವಾದ ಕೀರ್ತನೆಯನ್ನು ಮಾಡಿದರು

ಓರ್ವ ಉತ್ಸವಭಾಗಿ

ಹೊಸಪೇಟೆ

ಪ್ರತಿವರ್ಷಪದ್ಧತಿಯ ಮೇರೆಗೆ ಶ್ರೀ ರೇಣುಕ ಜಯಂತೀಮಹೋತ್ಸವವು ಫಾಲ್ಗುಣ ಶುದ್ಧ ೧೪ ದಿವಸ ವೇ|| ಕುರುಗೋಡು ಮೇಲುಮಠದ ಬಸವರಾಜಸ್ವಾಮಿಗಳ ಗೃಹದಲ್ಲಿ ನೆರವೇರಿತು ಶ್ರೀಗುರುವಿನ ಭಾವಚಿತ್ರಕ್ಕೆ ವೇದೋಕ್ತವಾಗಿ ಅಭಿಷೇಕವು ಸಕಲ ವಾದ್ಯವೈಭವದೊಡನೆ ನಡೆದು ಗಣಾರಾಧನೆಯು ಪೂರೈಸಿತು. ಸಾಯಂಕಾಲ ಪೂಜೆಯಾದನಂತರ ಭಜನೆ ಮತ್ತು ಸಕಲ ವಾದ್ಯಗಳು, ಛತ್ರಚಾಮರ ಮೊದಲಾದ ವೈಭವದೊಡನೆ ಅತಿ ವಿಜೃಂಭಣೆಯಿಂದ ಉತ್ಸವವು ಶ್ರೀ ರೇಣುಕನಿಲಯದಿಂದ ಹೊರಟು ಪುರದ ಮುಖ್ಯ ಬೀದಿಗಳಲ್ಲಿ ಮೆರೆದು ರಾತ್ರಿ ೮|| ಘಂಟೆಗೆ ಸ್ವಸ್ಥಾನವನ್ನು ತಲುಪಿತು. ಟ್ರೇನಿಂಗ್ ಕಾಲೇಜಿನ ಹೈಸ್ಕೂಲಿನ ಮತ್ತು ಊರೊಳಗಿನ ಜನರು ಕೂಡಿದ ಸಭೆಯಲ್ಲಿ ಸಂಗೀತ ಉಪಾಧ್ಯಾಯರಾದ ವೇ|| ಬಸವರಾಜಸ್ವಾಮಿಯವರು ಶ್ರೀ ರೇಣುಕರ ಲಿಂಗೋದ್ಭವದ ವಿಷಯವನ್ನು ಸಪ್ರಮಾಣವಾಗಿ ಹೇಳಲು ಸಕಲರೂ ಭಕ್ತಿಯಿಂದ ಆನಂದಸಾಗರದಲ್ಲಿ ಓಲಾಡಿದರು ಅನಂತರ ಶ್ರೀ ರೇಣುಕರು ಮೂರುಕೋಟಿ ಗುರುರೂಪಧರಿಸಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ಅವನ ತಮ್ಮನಾದ ವಿಭೀಷಣನನ್ನೂ ಉದ್ಧರಿಸಿದ ವಿಷಯವನ್ನು ಹೇಳಿದ ಮೇಲೆ ಶ್ರೀಗುರುವಿನ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಶ್ರೀ ಪಂಚಾಚಾರ್ಯ ಪಾದಸೇವಕ,
ಎಸ್ ಸಿದ್ದಣ್ಣ (ಮೈಸೂರು)

ಜಮಖಂಡಿ

ಪ್ರತಿವರುಷದ ಪದ್ಧತಿಯಂತೆ ಇಲ್ಲಿಯ ಮುಕ್ತಿನ ಕಂಥೆ ಹಿರೇಮಠದಲ್ಲಿ ಶ್ರೀ ಜಗದ್ಗುರು ರೇಣುಕರ ಜಯಂತಿಯು ಒಳ್ಳೆ ವೈಭವದಿಂದ ನೆರವೇರಿತು. ಬೆಳಗ್ಗೆ ಶ್ರೀ ಜಗದ್ಗುರು ಲಿಂಗೋದ್ಭವಮೂರ್ತಿಗೆ, ಮಲ್ಲಿಕಾರ್ಜುನಶರ್ಮರಿಂದ ವಿಧ್ಯುಕ್ತ ಪೂಜೆ ನಡೆದು, ನಾಲ್ಕು ಪಂಟೆಗೆ ಸಭೆ ನೇರಿತು ಅಗ್ಗಿ ಮಠಾಧಿಕಾರಿಗಳಾದ ಶ್ರೀ|| ಷ| ಬ್ರ|| ಚರಮೂರ್ತಿಸ್ವಾಮಿಗಳವರು, ಪರಶಿವನ ಅಪ್ಪಣೆ ಮೇರೆಗೆ, ಶ್ರೀ ಜಗದ್ಗುರು ರೇಣುಕರು ಕುಲ್ಯಪಾಕ ಸೋಮನಾಥ ಲಿಂಗದಿಂದ ಭೂಲೋಕಕ್ಕವತರಿಸಿ, ೧೪೦೦ ವರ್ಷಗಳವರೆಗಿದ್ದು ಅಗಸ್ತ್ಯಮುನಿಗಳಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿದ್ದಲ್ಲದ ತ್ರಿಕೋಟಿ ಲಿಂಗಸ್ಥಾಪನ, ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗಪ್ರದಾನ, ಗೋರಕ್ಷಗರ್ವಹರಣ, ೧೨೦೦ ಬಾಲಿಕೆಯರ ಜೀವದಾನ, ರುದ್ರಮುನೀಶ್ವರ ಉತ್ಪತ್ತಿ ಮೊದಲಾದ ಅಗಾಧ ಲೀಲೆಗಳನ್ನು ಬೋಧಿಸಿದರು ಅಲ್ಲದೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತ, ಶಿವಜೀವರ ಸಾಮರಸ್ಯ, ಅಷ್ಟಾವರಣಗಳ ಮಹಿಮೆಗಳನ್ನು ಎಲ್ಲರಿಗೂ ತಿಳಿಯುವಂತೆ ಬೋಧಿಸಿದರು. ಆಮೇಲೆ ವೇ|| ಕಾಡಯ್ಯನವರು ಹಿಟ್ಟನಮಠ ಇವರ ವಿದ್ಯಾರ್ಥಿಗಳ ಸಂವಾದ, ವೇ| ಚರಂತಯ್ಯನವರು, ಮತ್ತು ರಾ ರಾ|| ಲಿಂಗಪ್ಪ ಮಾಸ್ತರ ಕಲ್ಯಾಣಿ ಇವರು ವೀರಶೈವ ಶಬ್ದವಿಚಾರ ಕಾಂಚೀ ನಿಸ್ಸೀಮೂರ್ತಿಯ ಮಸ್ತಕವನ್ನು ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದ ಸಂಗತಿಯನ್ನು ಎಲ್ಲರಿಗೂ ತಿಳಿಯುವಂತೆ ಹೇಳಿದರು ಅನಂತರ ಮಂಗಳಾರತಿಯಾಗಿ, ಎಲ್ಲರಿಗೂ ಪ್ರಸಾದ ವಿನಿಯೋಗವಾಗಿ ರಾತ್ರಿ ೮ ಘಂಟೆಗೆ ಸಭೆ ಸಮಾಪ್ತಿಗೊಂಡಿತು ಈ ಉತ್ಸವದಲ್ಲಿ ಜಮಖಂಡಿ, ಕಡಪಟ್ಟಿ, ಹುಚಿನಾಳ ಗ್ರಾಮಗಳ ಭಕ್ತಮಹಾಜೇಶ್ವರ ಸ್ತ್ರೀಪುರುಷರೂ ವಿದ್ಯಾರ್ಥಿಗಳೂ ಭಾಗಿಯಾಗಿದ್ದರು ಸರ್ವರಿಗೂ ಶ್ರೀ ಜಗದ್ಗುರು ರೇಣುಕರು ಮಂಗಲವನ್ನುಂಟುಮಾಡಲೆಂದು ಹಾರೈಸುವ,

ಉತ್ಸವಭಾಗಿ

ಅಹಮದಾಬಾದ (ಗುಜರಾತ್)

ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯ ಹಿರೇಮಠ ದಿಗ್ಗಾವಿ ಇವರು ೧೨ ಜ್ಯೋತಿರ್ಲಿಂಗಗಳಲ್ಲೊಂದಾದ ಸೌರಾಷ್ಟ್ರ ಶ್ರೀ ಸೋಮನಾಥನ ದರ್ಶನಕ್ಕೆ ಮಹಾಶಿವರಾತ್ರಿಗೆ ಭಕ್ತಮಂಡಳಿ ಸಮೇತ ಬಂದು ಈ ಭಾಗದಲ್ಲಿರತಕ್ಕ ದ್ವಾರಕಾ, ಗಿರಿನಾರ ನೊದಲಾದ ಪವಿತ್ರ ಸ್ಥಾನಗಳನ್ನು ನೋಡಿಕೊಂಡು ಅಹಮದಾಬಾದಕ್ಕೆ ಬಂದು ಇಲ್ಲಿ ವಾಸಮಾಡತಕ್ಕ ಕರ್ನಾಟಕ, ಮಹಾರಾಷ್ಟ್ರ, ಆಂಧ್ರದೇಶದ ಜನರನ್ನು ನೋಡಿ ನೀವೆಲ್ಲರೂ ಕೂಡಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಭಕ್ತಿಭಾವದಿಂದ ನೆರವೇರಿಸಿ ಜನ್ಮಸಾರ್ಥಕಮಾಡಿಕೊಳ್ಳಬೇಕೆಂದು ಗುರು-ಲಿಂಗ-ಜಂಗಮ ಪ್ರೇಮಿಗಳಾದ ಶ್ರೀಯುತ ಬಸಪ್ಪಾ ಪಾಲಿ ಬನ್ನೂರ ಇವರಿಗೆ ತಿಳಿಸಲು ಸರ್ವರ ಮನಸ್ಸಿಗೆ ಆನಂದವಾಯಿತು ಭಕ್ತರ ಇಚ್ಛೆಯಂತೆ ಶ್ರೀಗಳು ೫ ದಿವಸ ಅನುಷ್ಠಾನ ಮಾಡಿದರು ಜಯಂತಿಯ ದಿವಸ ಶ್ರೀ ಸ್ವಾಮಿಯ ಮೂರ್ತಿಗೆ ರುದ್ರಾಭಿಷೇಕ ಮಾಡಿ ಗಣಾರಾಧನೆ ನಡೆಸಲಾಯಿತು. ಆ ಸಮಯಕ್ಕೆ ಸಾವಿರಾರು ಜನಗಳ ಸಮೂಹವು ಕೂಡಿತ್ತು ಆಗ್ಯೆ ಶ್ರೀ ಸ್ವಾಮಿಗಳು ವೀರಶೈವ ಸಿದ್ಧಾಂತ ಮತ್ತು ಅಷ್ಟಾವರಣ ಪಂಚಾಚಾರ ಮೊದಲಾದ ವಿಷಯಗಳನ್ನೂ ಮತ್ತು ಶ್ರೀ ಜಗದಾಚಾರ್ಯರು ತೋರಿದ ಲೀಲೆಗಳನ್ನೂ ಸರಸವಾಗಿ ಹೇಳಿ ಸರ್ವರನ್ನೂ ಸಂತೋಷಪಡಿಸಿದರು. ತನುಮನಧನಗಳಿಂದ ಸೇವಿಸಿದ ಮ|| ರಾ|| ಸೋಮಪ್ಪಾ, ಶೇಜಪ್ಪಾ, ಮಹಾದೇವಪ್ಪ, ಶಿವಪ್ಪಾ, ಭೋಜಪ್ಪಾ, ವೀರಬಸಪ್ಪಾ, ಮಲ್ಲಪ್ಪಾ ಹುಬ್ಬಳ್ಳಿ ಮಂಡಲಿ, ಮ|| ರಾ| ತಿಪ್ಪಣ್ಣಾ ಲಕ್ಷ್ಮೇಶ್ವರ, ಬಸವಣ್ಣಪ್ಪಾ, ತಮ್ಮಣ್ಣ, ಶಂಕರಪ್ಪಾ, ಜಯಂತಪ್ಪಾ ವಗೈರೆ ಧಾರವಾಡ ಮಂಡಳಿ, ಮತ್ತು ಮಾಸ್ತರ ಹರಿಶ್ಚಂದ್ರರಾವ ಸಾವಂತ ಮ|| ಸ್ಟೈಯ್ಯದ ನೂರಮಿಯಾ ಗುಜರಾಥ ಹಾಗು ವಕ್ತಭಜನಾಮಂಡಳಿ ಇವರೆಲ್ಲರಿಗೂ ಶ್ರೀಪರಮೇಶ್ವರನು ಮಂಗಲವನ್ನೀಯಲಿ

ಎಸ್. ಬಿ ತಿವಾರಿ

ಬೆಳಗಾಂವ

ತಾ|| ೬-೩-೪೭ ಕ್ಕೆ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಇಲ್ಲಿಯ ಶ್ರೀ ಹೂಲಿ ಸಂಗಮೇಶ್ವರ ಫ್ರೀ ಬೋರ್ಡಿಂಗಿನಲ್ಲಿ ವೈಭವದಿಂದ ಆಚರಿಸಲಾಯಿತು. ಶ್ರೀ ರೇಣುಕಾಚಾರ್ಯರ ಭಾವಚಿತ್ರದೊಂದಿಗೆ ಖಾಸಬಾಗದಿಂದ ಶಹಪುರದಲ್ಲೆಲ್ಲ ಉತ್ಸವ ಮಾಡಿ ಮರಳಿ ಬಂದನಂತರ ಮಂಗಳೂರು ಅರಕೆಲೆ ಮಠದ ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭಸೇರಿತು ಶ್ರೀ ಎಸ್ ಎಸ್ ಮಠದ ಬಿ.ಎಸ್‌ಸಿ, ಇವರು ಉಪಾಧ್ಯಕ್ಷರಾಗಿದ್ದರು. ಫ್ರೀ ಬೋರ್ಡಿಂಗ್ ಸ್ಥಾಪಕರಾದ ಶ್ರೀ ಹೂಲಿ ಸ್ವಾಮಿಗಳವರು ತಮ್ಮ ಮನೋಹರವಾದ ಆಕರ್ಷಕ ಶೈಲಿಯಲ್ಲಿ ಜಗದಾಚಾರ್ಯ ಶ್ರೀ ರೇಣುಕರ ಬಗ್ಗೆ ಅನೇಕ ವಿಷಯಗಳನ್ನು ಹೇಳಿ ಮತಸ್ಥಾಪಕರ ಮಹಿಮೆಯನ್ನು ಮಾರ್ಮಿಕವಾಗಿ ಅರುಹಿದರು. ಅದರಂತೆ ಜೈನಾಪುರದ ಶ್ರೀಗಳು, ಗುರುಲಿಂಗಯ್ಯನವರು ಮಹಿಮೆಯ ಒಗ್ಗೆ ಮಾತನಾಡಿದರು ಇದಲ್ಲದೆ ಶ್ರೀಯುತ ಸವದತ್ತಿ, ಪರಸನಾಯ್ಕ ಹೂವಿನ, ಮುಂತಾದವರು ರೇಣುಕರ ಒಗ್ಗೆ ಕೆಲಮಾತುಗಳನ್ನಾಡಿದ ಮೇಲೆ ಉಪಾಧ್ಯಕ್ಷರು ತಮ್ಮ ಸರಳಶೈಲಿಯಲ್ಲಿ ರೇಣುಕರ ಉತ್ಪತ್ತಿ ಮತದ ಮಹತ್ವ, ಧರ್ಮದ ಧ್ಯೇಯ, ಸಮಾಜ ಉದ್ಧಾರ, ವೀರಶೈವರ ಕರ್ತವ್ಯ ಮುಂತಾದ ಮಹತ್ವದ ವಿಷಯಗಳನ್ನು ವಿಶದೀಕರಿಸಿದರು ಅನಂತರ ಅಧ್ಯಕ್ಷರು ರೇಣುಕರ ಒಗ್ಗೆ ಅನೇಕ ಮಹತ್ತ್ವ ವಿಷಯಗಳನ್ನು ತಿಳಿಸಿದರು ಹೂಲಿ ಶ್ರೀಗಳವರು ಈ ಸುದಿನದ ಸುಸಮಯಕ್ಕೆ ತಕ್ಕಂತೆ ವಸ್ತ್ರದಾನ ಮಾಡಿದರು ಬಳಿಕ ರೇಣುಕರ ಜಯಘೋಷದೊಂದಿಗೆ ಸಭೆಯು ಕೊನೆಗೊಂಡಿತು.

ಸೆಕ್ರೆಟರಿ ಫ್ರೀ ಬೋರ್ಡಿಂಗ್

ವಡೇರಹಳ್ಳಿ

ಕಡೂರು ಡಿ|| ಯಗಟಿ ಹೋಬಳಿ ವಡೇರಹಳ್ಳಿ ಗ್ರಾಮದಲ್ಲಿ ತಾ|| ೬-೩-೪೭ ನೇ ಗುರುವಾರ ಪ್ರತಿವರ್ಷ ಪದ್ಧತಿ ಮೇರೆಗೆ ಈ ಗ್ರಾಮದ ಸಮಸ್ತ ವೀರಶೈವ ಮಹಾಜನಗಳು ಸೇರಿ ಈ ಗ್ರಾಮಪಾಕೀಜಿನಿಂದ ೧೦-೧೫ ತಳಿರುಚಪ್ಪರ ತೋರಣಗಳಿಂದ ಗ್ರಾಮವನ್ನು ಅಲಂಕರಿಸಿ ೩ ದಿವಸ ರೇಣುಕವಿಜಯ ಪುರಾಣವನ್ನು ಮತ್ತು ಪಂಚಾಚಾರ್ಯರ ಭಜನೆಯನ್ನು ನಡೆಸುತ್ತ ಶ್ರೀ ರುದ್ರೇಶ್ವರಸ್ವಾಮಿಯವರಿಗೂ ಜಗದ್ಗುರು ರೇಣುಕಾಚಾರ್ಯರ ವಿಗ್ರಹಕ್ಕೂ ಅಭಿಷೇಕ ಪೂಜಾವಿಗಳನ್ನು ೩ ದಿವಸವೂ ತ್ರಿಕಾಲದಲ್ಲಿ ಮಾಡಿ ಗುರುವಾರ ಪುರಾಣ ಸಮಾಪ್ತಿ ಗಣಸಂತರ್ಪಣೆಯನ್ನು ಮಾಡಿದರು ಗುರುವಾರ ಮಧ್ಯಾಹ್ನ ಶ್ರೀ ರುದ್ರೇಶ್ವರಸ್ವಾಮಿಯ ಮತ್ತು ರೇಣುಕಾಚಾರ್ಯರ ವಿಗ್ರಹಗಳನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವದಿಂದ ಉತ್ಸವವನ್ನು ನೆರವೇರಿಸಿದರು. ರುದ್ರೇಶ್ವರ ದೇವಸ್ಥಾನದಲ್ಲಿ ರಾತ್ರಿ ೮ ಘಂಟೆಗೆ ಸಭೆಸೇರಿತು ಈ ಗ್ರಾಮದ ವೇ|| ವೀರಭದ್ರಾರ್ಯರು ರೇಣುಕಾಚಾರ್ಯರು ಮಾಡಿರುವ ಗೋರಕ್ಷನಾಥ ಗರ್ವಹರಣದ ಬಗ್ಗೆ ಮನೋಹರವಾಗಿ ಭಾಷಣ ಮಾಡಿದರು. ಪುರಾಣಪ್ರವಚನವನ್ನು ಮನೋಹರವಾಗಿ ನಡೆಯಿಸಿದ ವೇ|| ಯಾ. ಬಸವಾರಾಧ್ಯರಿಗೂ, ಈ ಕಾರ್ಯದಲ್ಲಿ ಭಾಗವಹಿಸಿದ ಸೂ|| ಮ|| ಗಂಗಾಧರಪ್ಪನವರಿಗೂ, ಮ|| ಅಂಗಡಿ ಚಂದಪ್ಪನವರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ

ಬೆಂಗಳೂರು

"ಆಚಾರ್ಯವಾನ್ ಪುರುಷೋವೇದ" ಎಂಬ ವಾಕ್ಯಾನುಸಾರವಾಗಿ ಪ್ರತಿಯೊಬ್ಬ ಬದ್ಧ ಸಂಸ್ಕಾರಯುತ ಮಾನವನೂ ಸ್ವಮತಾಚಾರ್ಯರನ್ನು ಸೇವಿಸಿ ಜ್ಞಾನವನ್ನು ಪಡೆದು ಅಸಾರವಾದ ಸಂಸಾರ ಸಾಗರದಿಂದ ಬಿಡುಗಡೆಯನ್ನು ಹೊಂದಬೇಕಾಗಿದೆ ಅನೇಕ ವಿಧಗಳಾದ ಸೇವೆಗಳಲ್ಲಿ ಮತಸ್ಥಾಪನಾಚಾರ್ಯರ ಜಯಂತೀ ಹಬ್ಬವನ್ನಾಚರಿಸುವುದೂ ಒಂದಾಗಿದೆ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತೀ ಮಹೋತ್ಸವಗಳನ್ನು ಭರತಖಂಡ ನಿವಾಸಿಗಳಾದ ವೀರಶೈವರೆಲ್ಲರೂ ಅತ್ಯುತ್ಸಾಹದಿಂದ ನೆರವೇರಿಸುವಂತೆ ಬೆಂಗಳೂರುನಗರ ನಿವಾಸಿಗಳಾದ ವೀರಶೈವರು ನೆರವೇರಿಸಿದರು ತಾ|| ೬-೩-೪೭ನೆಯ ಗುರುವಾರದ ದಿವಸ ಚಿಕ್ಕಪೇಟೆಯಲ್ಲಿ ವಿರಾಜಿಸುತ್ತಿರುವ ಶ್ರೀಮಹಂತಿನ ಮಠದಲ್ಲಿ ಪ್ರಾತಃಕಾಲ ಶ್ರೀಜಗದ್ಗುರು ರೇಣುಕ ಭಗವತ್ಪಾದರ ಲಿಂಗೋದ್ಭವ ಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳು ನಡೆದವು ಸಾಯಂಕಾಲ ಶ್ರೀಮಾನ್ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ರಿಟೈರ್ಡ್ ಚೀಫ್ ಜಸ್ಟೀಸ್ ಸಿ ಮಹಾದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು ಬಿ ಬಿ ರೇಣುಕಾಂಬೆಯೆಂಬ ಬಾಲಿಕೆಯು ಶ್ರೀಜಗದ್ಗುರು ರೇಣುಕಾಚಾರ್ಯರ ಮೇಲೆ ಹಾಡನ್ನು ಹಾಡಿದಳು ಅನಂತರ ವೈದಿಕ ವಿದ್ವಾನ್ ವಿ ರಾಜೇಶ್ವರ ಏ ಓ ನಿವಾಸಿಯಿಂದ ಶ್ರೀಜಗದಾಚಾರ್ಯರ ಬಗ್ಗೆ ಕೀರ್ತನವು ನಡೆಯಿತು. ಬಳಿಕ ವಾರವಾಲಾ ಸಕ್ರೆಟರಿಯವರಾದ ಪೇ ಎಂ ಬಸವಯ್ಯನವರು ಸ್ರೀ ಬೋರ್ಡಿಂಗಿನ ವರದಿಯನ್ನೋದಿದರು ಅನಂತರ ಅಧ್ಯಕ್ಷರು ಶ್ರೀ ಜಗದಾಚಾರ್ಯರ ವಿಷಯವಾಗಿ ಅಮೋಘವಾದ ಭಾಷಣಮಾಡಿದರು ಅನಂತರ ಪುಷ್ಪದಿಂದ ತಯಾರಿಸಿದ ರಥದಲ್ಲಿ ಶ್ರೀಜಗದಾಚಾರ್ಯರ ಮೂರ್ತಿಯನ್ನಿಟ್ಟು ನಂದಿಧ್ವಜಸಹಿತ ವಿವಿಧ ವಾದ್ಯಗಳೊಡನೆ ನಗರದ ನಾನಾ ಕಡೆಯಲ್ಲಿ ಉತ್ಸವವು ನೆರವೇರಿ ಶ್ರೀಮಠಕ್ಕೆ ರಥವು ಹಿಂತಿರುಗಿದ ಮೇಲೆ ಶ್ರೀಮನ್ಮಹಾರಾಜರವರ ಜಯಘೋಷವಾಗಿ ಉತ್ಸವವು ಸಮಾಪ್ತಿಗೊಂಡಿತು.

ಹಾರ್ನಹಳ್ಳಿ

ಶಿವಮೊಗ್ಗ ಡಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬಿ ಶಿವಲಿಂಗ ಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಇದೇ ಫಾಲ್ಗುಣ ಶುದ್ಧ ೧೪ ತಾ||(೬-೩-೪೭) ಗುರುವಾರ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರ ಚಾವಚಿತ್ರವನ್ನು ತಳಿರು ತೋರಣ ಪುಷ್ಪಗುಚ್ಛಗಳಿಂದಲಂಕೃತವಾದ ಭವ್ಯ ಮಂಟಪದಲ್ಲಿ ಮೂರ್ತಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ ವಂದಿಸಿ ನುತಿಸಿ ಸ್ವರಚಿತ ಮಹಾಗುರು ಮಂಗಲ ಪದ್ಯವಂ ಪಾಡಿ ಕೊಂಡಾಡಿ ಬೇಡಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ ಮಧ್ಯಾಹ್ನ ಸಂತರ್ಪಣೆಯು ನಡೆದು ಸಾಯಂಕಾಲ ಮತಸ್ಥಾಪನಾಚಾರ್ಯರ ಅವತಾರದ ವಿಷಯವಾಗಿ ಸರ್ವರೂ ಶ್ಲಾಘಿಸುವಂತೆ ಬಹು ಮನೋಜ್ಞವಾಗಿ ಭಾಷಣಮಾಡಿ ಮಹಾತ್ಮರ ಕೆಲವು ಲೀಲೆಗಳನ್ನು ಓದಿಹೇಳಿ ಶ್ರವಣೇಚ್ಛುಗಳಾದ ಭಾವುಕರನ್ನು ಧನ್ಯರನ್ನಾಗಿ ಮಾಡಿದರು

ಓರ್ವ ಗುರುಸೇವಕ

ದೇವನೂರು

ಕಡೂರು ತಾ' ದೇವನೂರು ರೇವಣಸಿದ್ಧೇಶ್ವರಸ್ವಾಮಿಯವರ ಮಠದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಮಹಾಶಿವರಾತ್ರಿಯ ದಿವಸ ಜಗದಾಚಾರ್ಯರ ಜಯಂತೀ ಮಹೋತ್ಸವವು ನೆರವೇರಿತು ಜಗದ್ಗುರುಗಳವರ ಮೂರ್ತಿಗೆ ರುದ್ರಾಭಿಷೇಕ ಬಿಲ್ವಾರ್ಚನಾದಿಗಳು ನೆರವೇರಿದುವು ರಾತ್ರಿ ೭ರಿಂದ ೧೦ ಘಂಟೆವರೆಗೆ ಶ್ರೀ ಜಗದ್ಗುರುಗಳವರ ಲಿಂಗೋದ್ಭವ ಮೂರ್ತಿಯ ಆಂದೋಲಿಕೋತ್ಸವವು ವಾದ್ಯವೈಭವದೊಡನೆ ನೆರವೇರಿತು ವೇ ಮಠದ ಸಿದ್ಧರಾಮಯ್ಯನವರ ಧರ್ಮಪತ್ನಿ ಸೌ|| ಗಂಗಮ್ಮನವರು ಬಹಳ ಸತ್ಯಸ್ವಭಾವವುಳ್ಳವರು ಎಂದು ತಿಳಿದು ಒಂದು ಶಿವಲಿಂಗ ಶಿವಮೂರ್ತಿಯನ್ನು ನೇವಾಳದಿಂದ ಬರಮಾಡಾಯಿಗೆ ತರಿಸಿ ಶಿವಪೂಜಾ ಗೃಹಕ್ಕೆ ಒಪ್ಪಿಸಿ ಅವರಿಗೆ ಮಲ್ಲಮ್ಮನವರೆಂದು ನಾಮವನ್ನಿಟ್ಟರು ಹೊಸೂರೇಗೌಡರಿಗೆ ಗಂಡು ಮಗನು ಹುಟ್ಟಿದ ಒಂದು ತಿಂಗಳಲ್ಲಿ ಆತನು ನೇವಾಳದಿಂದ ಬಂದ ರೂಪಾಯಿಗೆ ಒಂದು ಶಿವಲಿಂಗ ಮೂರ್ತಿಯನ್ನು ತರಿಸಿ ಮ[…] ರಾಮೇಗೌಡನೆಂದು ನಾಮವನ್ನಿಟ್ಟು ಮಗುವಿನ ಹ[…]ದಿಂದ ಪೂಜಾಕ್ರಮಗಳನ್ನು ಮಾಡಿಸಿ ಶ್ರೀ ಸ್ವಾಮಿಯವ[…] ಸನ್ನಿಧಿಗೆ ಒಪ್ಪಿಸಿ ಧನ್ಯರಾದರು ರೇಣುಕಾಚಾರ್ಯ[…] ಜಯಂತಿಯನ್ನು ತಾ|| ೬-೩-೪೭ನೇ ಗುರುವಾ[…] ವಾಮೂಲು ಪದ್ಧತಿಯಂತೆ ರೇವಣಸಿದ್ಧೇಶ್ವರಸ್ವಾ[…]ಯವರ ಮಠದಲ್ಲಿ ನೆರವೇರಿಸಿದರು ಪಲ್ಲಕ್ಕಿ ಮಹೋ[…]ವವು ನೆರವೇರಿತು ಮತ್ತು ಕೆಂಡದರ್ಚನೆ ರುದ್ರಾಭಿ[…]ಕವು ನೆರವೇರಿದವು. ಪ್ರತಿಕಾರ್ಯಕ್ಕೂ ಮತಿಭಟ್ಟ ಹಿ[…] ಮಠದ ವೇ|| ಶಿವರುದ್ರಾರಾಧ್ಯರು ಆಗಮಿಕರಾಗಿದ್ದ[…] ಸ್ವಾಮಿಯವರ ಪ್ರತಿಕಾರ್ಯಕ್ಕೂ ಮ|| ಪ| ಹಯಾ[…] ಸಾಹೇಬರವರು ಹೊಸೂರೇಗೌಡರು ಮುಂದಾ[…] ನಿಂತು ಪ್ರತಿಜನರಿಗೂ ಪ್ರೋತ್ಸಾಹಕೊಟ್ಟು ಸ್ವಾ[…]ಯವರ ಕಾರ್ಯವನ್ನು ಬಹಳ ವಿಜೃಂಭಣೆಯಿಂದ ನೆ[…]ವೇರಿಸಿದರು

ಪ್ರತ್ಯಕ್ಷದ[…]

ತುಮಕೂರು

ಇಲ್ಲಿಯ ವೀರಶೈವ ಮತಬಾಂಧವರು ಈ ತಿಂಗಳು ೬ ನೆಯ ತಾರೀಖಿನದಿವಸ, ಶ್ರೀ ರೇಣುಕಜಯಂತಿಯನ್ನು ಮಹಾಭಕ್ತಿಯೊಡನೆ ನೆರವೇರಿಸಿದರು ಸಾಯಂಕಾಲ ಶ್ರೀ ರೇಣುಕಸ್ವಾಮಿಯ ಮೂರ್ತಿಯನ್ನು ಪುಷ್ಪಮಂಟಪದಲ್ಲಿರಿಸಿ, ರಾಜಬೀದಿಗಳಲ್ಲಿ ನಾನಾವಿಧವಾದ್ಯ ವೈಭವದೊಡನೆ ಉತ್ಸವವನ್ನು ನಡೆಯಿಸಿದರು ಅದೇ ದಿವಸ ಶ್ರೀ ವೀರಭದ್ರಸ್ವಾಮಿಯದೇವಾಲಯದಲ್ಲಿ ವೇ|| ಕೀರ್ತನರತ್ನ ಎಚ್ ಎಂ ಶಿವಲಿಂಗಸ್ವಾಮಿಯವರು "ಗುರುಭಕ್ತ ಭದ್ರಾಯು" ಎಂಬ ಕೀರ್ತನೆಯನ್ನು ಬಹು ಇಂಪಾಗಿ ಪಾಡಿ ಸರ್ವರನ್ನೂ ಸಂತೋಷಪಡಿಸಿದರು ಬಳಿಕ ಶ್ರೀ ರೇಣುಕರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಎಂ ನಂಜುಂಡಯ್ಯ

ಕಿರಗಾವಲು

ಮಳವಳ್ಳಿ ತಾಲ್ಲೂಕು ಕಿರುಗಾವಲು ಗ್ರಾಮದಲ್ಲಿ ೬ ನೆಯ ತಾರೀಖು ಗುರುವಾರದಿವಸ ಅಲ್ಲಿಯ ವೀರಶೈವ ಮಠಾಧಿಪತಿಗಳು ಶ್ರೀ ರೇಣುಕಜಯಂತಿಯನ್ನು ಭಕ್ತಿಯಿಂದ ನೆರವೇರಿಸಿದರು ಸಾಯಂಕಾಲ ಶ್ರೀಯುತ ಶಿವಣ್ಣನವರ ಅಧ್ಯಕ್ಷತೆಯಲ್ಲಿ ಸಭೆಜರುಗಿ, ರೇಣುಕರ ಮಹಿಮೆಯ ಬಗ್ಗೆ ಭಾಷಣಗಳಾದವು ಬಳಿಕ ಜಗದಾಚಾರ್ಯರ ಪ್ರಾರ್ಥನೆಯೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು

ಕೆ ಜಿ ರುದ್ರಸ್ವಾಮಿ

ದುಃಖವಾರ್ತೆ

ಚಿಕ್ಕಮಗಳೂರು ತಾ|| ವಸ್ತಾರೆ ಹುಲುವಳೆ ಪಟೇ[…] ನಿರ್ವಾಣೇಗೌಡರು ಈ ತಿಂಗಳು ೭ ನೆಯ ತಾರೀ[…] ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತವಿಷಾದವೆನಿಸುತ್ತದೆ. ಇವರು ಪಂಚಾಚಾರ್ಯ[…] ಪರಮಭಕ್ತರಾಗಿದ್ದರು ಸದಾ ಅವರ ಧ್ಯಾನವನ್ನು ಮಾಡುತ್ತಿದ್ದರು ಬಂಧುಬಾಂಧವರೆಲ್ಲ ಸೇರಿ ಇವ[…] ಅಂತ್ಯೇಷ್ಟಿಕ್ರಿಯೆಯನ್ನು ಬಹಳ ವಿಜೃಂಭಣೆಯಿಂದ ನೆ[…]ವೇರಿಸಿದರು, ಜಗದೀಶ್ವರನು ಮೃತರ ಆತ್ಮಕ್ಕೆ ಶಾಂ[…]ಯನ್ನೀಯಲೆಂದು ಪ್ರಾರ್ಥಿಸುವ

ಪಟೇಲ್ ಚೌಡೇಗೌ[…]

ಹೊಸ ವೈಸರಾಯರ ಆಗಮನ

ಹೊಸ ವೈಸರಾಯರು ಈ ತಿಂಗಳು ೨೨ನೇ ತಾರೀ[…] ಮಧ್ಯಾಹ್ನ ೪-೩೦ ಗಂಟೆಗೆ ಡೆಹಲಿಗೆ ವಿಮಾನದಲ್ಲಿ ಬ[…]ವರು. ಜೊತೆಯಲ್ಲಿ ಅವರ ಪತ್ನಿಯೂ, ಮಗಳೂ ಬ[…]ವರಂತೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೩—೦
ಸದ್ಯೋಜಾತಾರೋಹಣಮಾಡಿತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರ ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೮ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ಮಾರ್ಚಿ ೧೯೪೭ [ಸಂಚಿಕೆ ೪೭

ಕಾಶೀಪೀಠದಲ್ಲಿ ಶ್ರೀ ಶಿವರಾತ್ರಿ ಮಹೋತ್ಸವ

— —

ಶ್ರೀ ಭೂಕೈಲಾಸ ವಾರಾಣಸೀಕ್ಷೇತ್ರ ವಿರಾಜಮಾನ ಶ್ರೀ ವಿಶ್ವಾರಾಧ್ಯಸಿಂಹಾಸನ ಜಂಗಮ ವಾಟಿಕಾ ಮಹಾಪುರದಲ್ಲಿ ಶಿವರಾತ್ರಿ ಮಹೋತ್ಸವವು ಮಹಾ ವೈಭವದಿಂದ ನೆರವೇರಿತು

ಮಾಘ ಬ॥ ೧೪ ಬುಧವಾರ ಬ್ರಾಹ್ಮಮುಹೂರ್ತದಲ್ಲಿ ಶ್ರೀ ಜಗದ್ಗುರುಗಳು ಆಂದೋಲಿಕಾರೂಢರಾಗಿ ಸಮಸ್ತ ವೈದಿಕ ವೃಂದದೊಡನೆ ಗಂಗಾಸ್ನಾನಾದಿಗಳನ್ನು ನೆರವೇರಿಸಿ ಶ್ರೀ ಮಠಕ್ಕೆ ಆಗಮಿಸಿದರು ಬಳಿಕ ಶ್ರೀ ವಿಶ್ವಾರಾಧ್ಯ ಭಗವತ್ಪಾದರ ಮೂರ್ತಿಗೆ ಏಕಾದಶರುದ್ರಾಭಿಷೇಕ ಜ್ಞಾನ ಸಿಂಹಾಸನಕ್ಕೆ ಅಭಿಷೇಕ, ಹರೀಶ್ವರ ಮಂದಿರದಲ್ಲಿ ಅಭಿಷೇಕ, ಇತ್ತ ಶ್ರೀ ಮುಕ್ತಿಮಂಟಪದಲ್ಲಿ ಶ್ರೀ ಸನ್ನಿಧಿಯವರ ಶಿವಲಿಂಗರುದ್ರಾಭಿಷೇಕಾದಿಗಳು ವಿಧ್ಯುಕ್ತವಾಗಿ ನೆರವೇರಿದವು

ಆ ಮೇಲೆ ರಜತರಥದಲ್ಲಿ ಶ್ರೀ ವಿಶ್ವಾರಾಧ್ಯ ಭಗವತ್ಪಾದರ ಉತ್ಸವವು ಹೊರಟಿತು. ಮಂಗಲ ವಾದ್ಯಗಳು ಘೋರ್ಗರೆಯುತ್ತಿರಲು ಛತ್ರಚಾಮರ ಪತಾಕೆಗಳೇ ಮೊದಲಾದ ಅನೇಕ ಬಿರುದಾವಲಿಗಳೊಡನೆಯೂ ಸಾವಿರಾರು ಜನಯಾತ್ರಿಕರೊಡನೆಯೂ ರಥೋತ್ಸವವು ಕಾಶೀಕ್ಷೇತ್ರದ ಮುಖ್ಯಬೀದಿಗಳಲ್ಲೆಲ್ಲ ಸಾಗಿ ಮೂರುವರೆ ಘಂಟೆಗೆ ಮಹಾಪೀಠಕ್ಕೆ ತಲಪಿತು

ಯಾತ್ರಿಕರೆಲ್ಲರೂ ಶ್ರೀ ಜಗದ್ಗುರು ಮಹಾಸನ್ನಿಧಿಯವರ ದರ್ಶನಾಶೀರ್ವಾದಗಳನ್ನು ಪಡೆದು ಗುರುದಕ್ಷಿಣೆಯನ್ನು ಸಮರ್ಪಿಸುತ್ತಿದ್ದರು ನಾನಾ ದೇಶಗಳಿಂದ ಬಂದ ಯಾತ್ರಿಕರು ಈ ಮಹೋತ್ಸವದಲ್ಲಿ ಭಾಗವಹಿಸಿದ್ದರಲ್ಲದೆ ಬನ್ಹಟ್ಟಿಯ ಶ್ರೀ ಶಿವಾನಂದ ಯಾತ್ರಾ ಕಂಪನಿಯವರು ಪ್ರತ್ಯೇಕವಾಗಿ ಭಾಗವಹಿಸಿ, ವಿಶೇಷ ಶೋಭೆಯನ್ನುಂಟು ಮಾಡಿದರು.

ಸಾಯಂಕಾಲ ಸಮಸ್ತಯಾತ್ರಿಕರ ಶಿವಲಿಂಗಗಳಿಗೆ ವಿಧಿವತ್ ಪೂಜೆಯಾದಮೇಲೆ ಎಲ್ಲರೂ ಪ್ರಸಾದವನ್ನು ಸೇವಿಸಿದರು. ಆ ಮೇಲೆ ಜ್ಞಾನಮಂದಿರದಲ್ಲಿ ಜಯಂತೀ ಸಭಾ ಕಾರ್ಯಕ್ರಮ ಆರಂಭವಾಯಿತು. ಸೊಲ್ಲಾಪುರ ಸದಾಚಾರ ಸ್ತ್ರೀಸಮಾಜದ ಕಾರ್ಯದರ್ಶಿನಿ ಸೌ॥ ನಂದಿಮಠದ ಬಸಮ್ಮನವರು ಬಾಲ ಬಾಲಕಿಯರಿಂದ ಪಂಚಾಚಾರ್ಯರ ಅವತಾರ ಸಿದ್ಧಲಿಂಗ ಜಗದ್ಗುರುಗಳ ಬುಕ್ಕಾಂಬುಧಿ ಮಹಿಮೆ" ಎಂಬೆರಡು ಚಿಕ್ಕರೂಪಕಗಳನ್ನು ಪ್ರದರ್ಶನಮಾಡಿಸಿದರು ಶ್ರೀ ವಿಶ್ವಾರಾಧ್ಯಗುರುಕುಲದ ಶ್ರೀ ಗುರುಲಿಂಗ ಶಿವಾಚಾರ್ಯ ಶ್ರೀ ಪಂಚಾಕ್ಷರ ಶಿವಾಚಾರ್ಯ ಶ್ರೀ ಜಯವೃಷಭ ಶಿವಾಚಾರ್ಯ ಶ್ರೀ ಸೋಮಶೇಖರಶರ್ಮರು, ಶ್ರೀ ಗಂಗಾಧರ ಶಾಸ್ತ್ರಿಗಳು ಮುಂತಾದ ವಿದ್ವಾಂಸರು " ಶಿವಯೋಗಮಹತ್ವ "ಶಿವರಾತ್ರಿಮಹಿಮೆ" " ಯಾತ್ರಿಕರ ಕರ್ತವ್ಯ " ಜ್ಞಾನಮಂದಿರದ ಪರಿಚಯ" ಶ್ರೀ ವಿಶ್ವಾರಾಧ್ಯ ಜಯಂತೀ" ಮುಂತಾದ ವಿಷಯಗಳನ್ನು ಕುರಿತು ಭಾಷಣಮಾಡಿದರು ನಂದಿಮಠದ ಸೌ॥ ಬಸಮ್ಮನವರು " ಗುರುಲಿಂಗ ' ಮಹಿಮೆಯನ್ನು ಕುರಿತು ಚನ್ನಾಗಿ ಭಾಷಣಮಾಡಿದರು. ಕೊನೆಗೆ ಜಗದ್ಗುರುಗಳವರು " ಶಿವತತ್ವ " ವನ್ನು ಕುರಿತು ಒಂದುವರೆಘಂಟೆಯವರೆಗೆ ಭಕ್ತವೃಂದವು ಆನಂದ ತುಂದಿಲವಾಗುವಂತೆ ಉಪದೇಶವನ್ನು ಮಾಡಿದರು ಎಲ್ಲರಿಗೂ ಕೇಳುವಂತೆ " ಧ್ವನಿವರ್ಧಿನಿ '(ಲೌಡಸ್ಪೀಕರ್)ಯ ವ್ಯವಸ್ಥೆ ಮಾಡಲಾಗಿತ್ತು ಅಷ್ಟಕ್ಕೆ ಮಧ್ಯರಾತ್ರಿಯಾದ್ದರಿಂದ ಸಭೆಯು ಮುಗಿದು ಕೈಲಾಸಮಂಟಪದಲ್ಲಿ ಧ್ಯಾನ ಭಜನಾದಿಗಳಿಂದ ಜಾಗರಣೆಮಾಡಲಾಯಿತು.

ಮರುದಿನ ಸಾಯಂಕಾಲದಲ್ಲಿಯೂ ಸಭೆಸೇರಿತು ಶ್ರೀ ಸೌ॥ ನಂದಿಮಠದ ಬಸವಮ್ಮನವರು ಸ್ತ್ರೀ ವಿದ್ಯಾಭ್ಯಾಸ ಧರ್ಮಜಾಗೃತಿ ಬಗ್ಗೆ ಭಾಷಣಮಾಡಿದರು ರತ್ನಗಿರಿಯ ಶ್ರೀ ಲಿಂಗಪ್ಪ ಉಚಲೇ ಎಂಬವರು ಪೀಠಗಳ ಸುಧಾರಣೆಯ ಬಗ್ಗೆ ಭಾಷಣಮಾಡಿ ಜ್ಞಾನಮಂದಿರಕ್ಕಾಗಿ ೧೦೮ರೂ ಸಮರ್ಪಿಸಿದರು ಶ್ರೀ ರುದ್ರಪಶುಪತಿ ಮಠದ ಕೋಟೀಶ್ವರ ಸ್ವಾಮಿಗಳವರು ಭಾಷಣಮಾಡಿ ಶ್ರೀ ಜಗದ್ಗುರು ಮಹಾಸನ್ನಿಧಿಯ ಸ್ತೋತ್ರರೂಪವಾಗಿ ರಚಿಸಿದ ಮರಾಠೀಪದ್ಯಗಳನ್ನು ಹಾಡಿ ತಮ್ಮ ಮೂಲಾಚಾರ್ಯ ವಿಶ್ವಾರಾಧ್ಯರಲ್ಲಿ ಅಪಾರ ಭಕ್ತಿಯನ್ನು ಪ್ರಕಟಿಸಿ ಜ್ಞಾನಮಂದಿರಕ್ಕಾಗಿ ೧೦೮ರೂ ಸಮರ್ಪಿಸಿದರು ಮುಸಾಯಪೇಟದ ಮಿಡಿಜಿಲ್ಲಿ ಬಸಪ್ಪನವರೂ ರಾಜಾಪುರದ ಸಾಧುರಾಯಗೌಡರೂ ಪ್ರತ್ಯೇಕವಾಗಿ ೧೦೮ರೂ ಸಮರ್ಪಿಸಿದರು ಆಮೇಲೆ ಶ್ರೀ ಜಗದ್ಗುರು ಮಹಾಸನ್ನಿಧಿಯ ಅಮೋಘವಾದ ಉಪದೇಶವಾಗಿ ಸಭೆಯು ಪೂರ್ಣವಾಯಿತು

ಶನಿವಾರ ಸಾಯಂಕಾಲ ಪುನಃ ಸಭೆಸೇರಿತು ಬನ್ಹಟ್ಟಿ ಶ್ರೀ ಶಿವಾನಂದ ಯಾತ್ರಾಕಂಪನಿಯ ಮೇನೇಜರ್ ಶ್ರೀ ಶಿವರುದ್ರಯ್ಯ ಬಂಗಿ ಮಿರ್ಜಿಯ ಶ್ರೀ ಗುರುಸಿದ್ಧಪ್ಪಗಾಥವೆ ಶ್ರೀ ಅಣ್ಣಪ್ಪ ಚಿರಮರೆ ಗೋಟೆಯ ವೇ॥ ಲಿಂಗಯ್ಯ ದಿಗಂಬರಮಠ ಪಂಢರಪುರದ ಶ್ರೀ ಅಗ್ನಪ್ಪ ಪೋಹೋರಿನ ಶ್ರೀ ತ್ರ್ಯಂಬಕರಾವ್ ಶೇಟೆ, ಕನಕಗಿರಿಯ ಶ್ರೀ ಕರಿಬಸಪ್ಪ ಭತ್ತದ ಮುಂತಾದ ಪ್ರಮುಖರು ಜ್ಞಾನಮಂದಿರಕ್ಕಾಗಿ ೧೦೮ರೂಗಳಂತೆ ಸಮರ್ಪಿಸಲು ವಾಗ್ದಾನ ಮಾಡಿದರು ಶ್ರೀ ಶಿವಾನಂದ ಯಾತ್ರಾ ಮಂಡಳಿಯವರಿಗೆ ಆಶೀರ್ವಾದ ಸಮ್ಮಾನವೂ ನಂದಿಮಠದ ಶ್ರೀ ಸೌ ಬಸಮ್ಮನವರಿಗೆ ಗುರುಧರ್ಮದೀಪಿಕಾ ಎಂಬ ಪದವಿಯೂ ಸದಾಚಾರ ಸಮಾಜದ ಬಾಲಬಾಲಿಕೆಯರಿಗೆ ೧೧ರೂಗಳಂತೆ ಪಾರಿತೋಷಕವೂ ಶ್ರೀ ಜಗದ್ಗುರು ಮಹಾಸನ್ನಿಧಾನದಿಂದ ಅನುಗ್ರಹಿಸಲ್ಪಟ್ಟವು

ವೀರಶೈವಧರ್ಮದ ಬಗ್ಗೆ ಉಂಟಾದ ಸಮಸ್ತ ಸಂದೇಹಗಳನ್ನು ನಿವಾರಿಸಿಕೊಂಡು ಸಂಪೂರ್ಣ ಶಿವಜ್ಞಾನದಿಂದ ಸಮಾಧಾನ ಹೊಂದಲಿಕ್ಕಾಗಿಯೂ ಸಮಾಜದಲ್ಲಿ ನಡೆದಿರುವ ಕೋಲಾಹಲವು ಸತ್ಯಸಂಧರ್ಶನದಿಂದ ಶಾಂತವಾಗಲಿಕ್ಕಾಗಿಯೂ ಕೆಲವು ಪ್ರಮುಖರ ಕೋರಿಕೆಯ ಮೇರೆಗೆ ' ವಿಜ್ಞಾನ ಚರ್ಚಾಗೋಷ್ಠಿಯು ಶ್ರೀಜಗದ್ಗುರು ಮಹಾಪಾದರಿಂದ ಪ್ರಾರಂಭಿಸಲ್ಪಟ್ಟಿತು ಈ ಗೋಷ್ಠಿಯ ಆರಂಭೋತ್ಸವವು ಪ್ರಾಚೀನ ಭಾರತದ ಋಷ್ಯಾಶ್ರಮಗಳ ಸುಂದರ ಸನ್ನಿವೇಶವೇ ಮೂರ್ತಿಭವಿಸಿದೆಯೋ ಎಂಬಂತೆ ಕಂಗೊಳಿಸುತ್ತಿತ್ತು ಈ ಗೋಷ್ಠಿಯು ೩ ದಿವಸ ನಡೆಯಿತು ಇದರಲ್ಲಿ ಗುರುಕುಲದ ವಿದ್ವಾಂಸರೂ, ಪ್ರಮುಖರೂ, ಸ್ತ್ರೀಯರೂ ಭಾಗವಹಿಸಿ ಧಾರ್ಮಿಕ ಸಂದೇಹಗಳನ್ನು ಪ್ರಶ್ನರೂಪವಾಗಿ ಬಿನ್ನವಿಸಿಕೊಳ್ಳುತ್ತಿದ್ದರು ಶ್ರೀಜಗದ್ಗುರು ಮಹಾಸನ್ನಿಧಿಯವರು ಪ್ರಮಾಣಪುರಸ್ಸರವಾಗಿ ಅಪ್ಪಣೆಕೊಡಿಸುತ್ತಿದ್ದರು ಇದರಲ್ಲಿ ವೀರಶೈವ ಧರ್ಮದ ಮೂಲ ಸಂಸ್ಕೃತಿ, ವೇದಪ್ರಾಮಾಣ್ಯ ಶಿವತತ್ತ್ವ, ಪೀಠಗಳ ಕರ್ತವ್ಯ, ಗುರುವರ್ಗದ ಇತಿಹಾಸ, ರೇಣುಕರ ಚರಿತ್ರೆ, ಶಕ್ತಿವಿಶಿಷ್ಟಾದ್ವೈತ, ಮತತ್ರಯ ತಾರತಮ್ಯ, ಪಂಚಪೀಠಗಳಸಾಮರಹಸ್ಯ ಪಾದೋದಕ ಸ್ವೀಕಾರವಿಧಾನ, ಮುಂತಾದ ಅನೇಕ ಸಮಸ್ಯೆಗಳು ಸುಲಭವಾಗಿ ವಿವೇಚಿತಗಳಾದವು ಈ ಶಿವರಾತ್ರಿ ಮಹಾಪರ್ವಕಾಲದಲ್ಲಿ ಶ್ರೀಪೀಠದಲ್ಲಿ ಒಂದು ಸಪ್ತಾಹ ಪರ್ಯಂತವಾಗಿ ಕಾರ್ಯಕ್ರಮಗಳು ಮಹಾವೈಭವದಿಂದ ನೆರವೇರಿ ಸರ್ವರ ಮನಸ್ಸನ್ನು ಸಂತೈಸಿದವು

ಎರಡು ಅಂತಸ್ತುಗಳಿಂದ ಸಿದ್ಧವಾಗಿ ಸುಂದರವೂ ಭವ್ಯವೂ ಆಗಿ ರಾರಾಜಿಸುತ್ತಿರುವ ಜ್ಞಾನಮಂದಿರವನ್ನೂ ಪೀಠದ ಎಲ್ಲ ಕಟ್ಟಡಗಳ ಸುವ್ಯವಸ್ಥೆಯನ್ನೂ ನೋಡಿ ಯಾತ್ರಿಕರೆಲ್ಲರೂ ಪರಮಾನಂದಭರಿತರಾಗಿ ಶ್ರೀವಿಶ್ವಾರಾಧ್ಯ ಭಗವತ್ಪಾದರ ಅಮೋಘವಾದ ಲೀಲಾಜಾಲವನ್ನು ಕೊಂಡಾಡುತ್ತಿದ್ದರು.

ಜ್ಞಾನಮಂದಿರವು ೪೦ ಬೀರೋಗ್ರಂಥಗಳಿಂದಲೂ, ಶ್ರೀಜಗದ್ಗುರು ಪಂಚಾಚಾರ್ಯರಿಂದಲೂ, ಮಹಾತ್ಮರ ಮನೋಜ್ಞ ವರ್ಣಚಿತ್ರಗಳಿಂದಲೂ ತಾಳೆಯೋಲೆ ಗ್ರಂಥರಾಶಿಗಳಿಂದಲೂ ಪರಿಶೋಭಿಸುತ್ತ ' ಶಿವಜ್ಞಾನ ಶಿವಧರ್ಮ ಶಿವಸಂಸ್ಕೃತಿಗಳ " ಪ್ರಾಚ್ಯಮಹಾವಿದ್ಯಾಲಯ " ದಂತೆ ಕಂಗೊಳಿಸುತ್ತಿದೆ

ಜ್ಞಾನಮಂದಿರಕ್ಕಾಗಿ ಒಟ್ಟು ಇಪ್ಪತ್ತಾರು ಸಾವಿರ ರೂ ಗಳು ವಿನಿಯೋಗವಾಗಿಸಲಾಗಿದೆ ದಾತೃಮಹಾಜನರಿಂದ ೧೪ ಸಾವಿರ ಮಾತ್ರ ಬಂದಿದೆ. ಉಳಿದ ದ್ರವ್ಯವನ್ನೂ ಸಮಾಜಾಭಿಮಾನಿಗಳೂ ಧರ್ಮಾಭಿಮಾನಿಗಳೂ ಆದ ಮಹನೀಯರು ಸಮರ್ಪಿಸಿ, ಕಾಶೀ ಮಹಾಪೀಠದಲ್ಲಿ ತಮ್ಮ ಶುಭನಾಮವು ಶಾಶ್ವತವಾಗಿ ಮೆರೆಯುವಂತೆ ಮಾಡಬೇಕೆಂದು ಕೋರುವ

ವಿಶ್ವಲಿಂಗಯ್ಯಾ ಮುನ್ನಿ
ಜಂಗಮವಾಡೀಮಠ ಕಾಶೀ

|| ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ||

ಪಂಚಸಹಸ್ರ ವೃಷಭ (೫೦೦೦ ಎತ್ತು) ಗಳನ್ನು ಹೂಡಿದ ಪಂಚರಥಗಳಲ್ಲಿ ಶ್ರೀಜಗದ್ಗುರು ಪಂಚಾಚಾರ್ಯಪಂಚಲಿಂಗೋದ್ಭವ ಮೂರ್ತಿಗಳ

ಅಭೂತಪೂರ್ವ ಮಹೋತ್ಸವ

ಉತ್ಸವವು ಲಕ್ಷ್ಮೇಶ್ವರದಿಂದ ಮುಕ್ತಿಮಂದಿರದ ವರೆಗೆ ೩ ಮೈಲು ದೂರ ನೆರವೇರಿತು. ೨ ಲಕ್ಷದ ವರೆಗೆ ಜನಸಮುದಾಯವು ಸೇರಿತ್ತು.

"ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ" ಎಂಬ [illegible] ಉಕ್ತಿಯಂತೆ ಕ್ರಿಯಾಸಿದ್ಧಿಯುಳ್ಳ ಪುರುಷಪುಂಗವರಿಗೆ ಅಸಾಧ್ಯವಾವುದೂ ಇಲ್ಲ. ಸಾತ್ವಿಕಸ್ವಭಾವವುಳ್ಳ [illegible] ಸದಾಚಾರವನ್ನು ಶ್ರೀ ಪರಮಾತ್ಮನಿಗರ್ಪಿಸಿ ನಡೆಯುತ್ತಿರುವುದರಿಂದ ಅವರ ಸಂಕಲ್ಪಗಳೆಲ್ಲವೂ [illegible] ಗುಣವಾಗಿ ಫಲಿಸದೆ ಇರುವುದಿಲ್ಲ. ಉದಾರಚರಿತಾನಾಂತು ಜಗದೇವ ಕುಟುಂಬಕಂ ಎಂಬಂತೆ [illegible] ತ್ಮರು ಪಾರತಮ್ಯಾನ ಗುಣವಾಗಿ ಪ್ರಪಂಚದ [illegible] ಹಸ್ತರಿಗೆ [illegible] ಶಿವಾಚಾರ್ಯಮಹಾಸ್ವಾಮಿಗಳವರು ಶ್ರೀ [illegible] ಗುರುಕುಲವನ್ನು ಬಹು ದೂರದೃಷ್ಟಿಯಿಂದ [illegible] ಸುತ್ತಿರುವರು [illegible] ಲೋಕ ಪಾರಮಾರ್ಥಿಕ [illegible] ದ್ವಾರಾ [illegible] ಕರಿಸುವುದೇ ಶ್ರೀ ಮುಕ್ತಿಮಂದಿರದ ಲಕ್ಷ್ಯವಾಗಿದೆ. ಭಾರತ ಭೂಮಿಯು [illegible] ಧರ್ಮದ [illegible] ಎಂದು ಹೆಸರಾಗಿದೆ. ಬಾಹ್ಯಶರೀರಾಲಂಕಾರವನ್ನೇ ಬಹು ಮನ್ನಿಸಿ ಕಟ್ಟಕಡೆಯಿಲ್ಲದ ಇಂದ್ರಿಯಸುಖವನ್ನೇ ಜೀವನದ ಪರಮೋದ್ದೇಶ ಎಂದೆಣಿಸಿದ ಅಸತ್ಯಜನರ ಸಹವಾಸವು ದೊರೆತದ್ದಾಗಿಲ್ಲ. ಧರ್ಮದ ಕಟ್ಟಳೆಗಳು ನದೀತೀರದಲ್ಲಿರುವ ವೃಕ್ಷಗಳಂತೆ ಕ್ರಮೇಣ ಕ್ಷೀಣದಶೆಯನ್ನು [illegible] ಪಾಠಶಾಲೆಯೂ ನಿಸ್ಸಾರವಾಗತೊಡಗಿತು. ಕಾಮಸುಖಪರವಶರಾದ ಜನರಿಗೆ ಸುಖ-ಶಾಂತಿಗಳ ಧ್ಯೇಯಗಳಾದ ಧಾರ್ಮಿಕಾಚರಣೆಗಳು [illegible] ಮಾರ್ಗಪದ್ಧತಿಯು ಸೇರದಂತೆ ಧಾರಣೆಯಾದವು. ಇದೇ ಮಾರ್ಗದಲ್ಲಿ ನಡೆದರೆ ಸಾರ್ವತ್ರಿಕವಾದ ಅನರ್ಥವು ಅತಿ ಶೀಘ್ರದಲ್ಲಿಯೇ ಸಮೀಪಿಸುವುದರಲ್ಲಿ ಸಂದೇಹವೇ ಇಲ್ಲ. ಐಶ್ವರ್ಯ, ಆಯುಷ್ಯ, ಆರೋಗ್ಯ ಇವುಗಳ ಉನ್ನತಿಗೆ ಧರ್ಮಾಚರಣೆಗಳೇ ಕಾರಣಗಳಾಗಿವೆ. ಧರ್ಮಾಚರಣೆಯಿಂದ ಆತ್ಮಶಕ್ತಿಯು ವೃದ್ಧಿಗೊಳ್ಳುವದು. ಘರ್ಷಣ ವಿಶೇಷದಿಂದ ಕಲ್ಲು ಕಟ್ಟಿಗೆ ಬಿದಿರು ಮೊದಲಾದವುಗಳಲ್ಲಿ ಅಗ್ನಿಯು ಆವಿರ್ಭವಿಸಿ ಕಾರ್ಯಾನುಕೂಲವಾಗುವಂತೆ ಜೀವನ [illegible] ಶಕ್ತಿಯು ಅಭ್ಯಾಸವಿಶೇಷದಿಂದ ಹೊರಹೊಮ್ಮಿ ಪ್ರಕಟಾಕಾರವನ್ನು ಧರಿಸಿ ಕಲ್ಯಾಣಕಾರಿಯಾಗುವುದು. ಕಲ್ಯಾಣ ಅಕಲ್ಯಾಣದ ಮಾರ್ಗಗಳೆರಡೂ ಮನುಷ್ಯಶಕ್ತಿಯಲ್ಲಿಯೇ ಅಡಗಿರುವವು. ಅವುಗಳನ್ನು ಕಂಡು ಹಿಡಿದು ಕಲ್ಯಾಣಮಾರ್ಗದಲ್ಲಿ ನಡೆದು ಧನ್ಯನಾಗುವುದು ಮನುಷ್ಯನ ಆದ್ಯ ಕರ್ತವ್ಯವಾಗಿದೆ. ಅಕಲ್ಯಾಣದ ಮಾರ್ಗವು ಯಾವಾಗಲೂ ಸುಲಭವಾಗಿದ್ದು ಇಂದ್ರಿಯ ಪರವಶತೆಯೇ ಅದಕ್ಕೆ ಮೂಲವಾಗಿದೆ. ವಿಧಿ, ನಿಷೇಧಗಳಿಲ್ಲದೆ ನಡೆಯುವುದೇ ಅಕಲ್ಯಾಣದ ಮಾರ್ಗವಾಗಿದೆ. ಈ ಮಾರ್ಗವು ಪ್ರಾರಂಭದಲ್ಲಿ ಸುಖಕಾರಿಯಾಗಿದ್ದರೂ ಪರಿಣಾಮದಲ್ಲಿ ತಾಪಹೇತುವಾಗಿರುವುದು. ಇಂದ್ರಿಯಗಳ ಓಟವು ಸ್ವಾಭಾವಿಕವಾಗಿ ಯಾವಾಗಲೂ ಅಧೋಮಾರ್ಗದ (ಅಕಲ್ಯಾಣದ) ಕಡೆಗೇ ಇರುತ್ತದೆ. ಅದನ್ನು ತಡೆದು ಊರ್ಧ್ವಮಾರ್ಗ (ಕಲ್ಯಾಣಮಾರ್ಗ) ವನ್ನವಲಂಬಿಸುವುದೇ ಮನುಷ್ಯನ ಸಾಧನವಾಗಿದೆ. ದುಃಖ ದುರ್ಗತಿಗಳ ಅಪೇಕ್ಷೆಯು ಯಾರಿಗೂ ಇಲ್ಲದಿದ್ದರೂ "ಯೋಜಕಸ್ತತ್ರ ದುರ್ಲಭಃ" ಎಂಬಂತೆ ಜನರನ್ನು ಸಾಧುಮಾರ್ಗದಲ್ಲಿ ನಡೆಯಿಸಿಕೊಂಡು ಹೋಗುವವರು ದುರ್ಲಭರಾಗಿರುವರು. [illegible] ನೇತೃಗಳಿದ್ದರೂ ಅನುಕರಣ ಶಕ್ತಿಯು ಜನರಲ್ಲಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಈ ಅನುಕರಣ ಶಕ್ತಿಯು ಜೀವನಲ್ಲಿ ಅನಾದಿಕಾಲದಿಂದಲೂ ಪ್ರವಹಿಸುತ್ತ ಬಂದಿದೆ. ಈಗಿನ ಕಾಲವಂತೂ ಅನುಕರಣಯುಗವಾಗಿದೆ. ಯಾವುದನ್ನು ಹೆಚ್ಚಾಗಿ ಕೇಳುತ್ತಾರೋ [illegible] ಓದುತ್ತಾರೆಯೋ ಇಲ್ಲವೆ ನೋಡುತ್ತಾರೆಯೋ ಅವರ ಸಂಸ್ಕಾರವೇ ಪ್ರಬಲವಾಗಿ [illegible] ಬಾಹ್ಯಾಡಂಬರದಲ್ಲಿ [illegible] ತಕ್ಕೆ ಅದರ ಸಂಸ್ಕಾರವೇ [illegible] ಕೋಲಾಹಲಗಳಿಗೆ ಕಾರಣವಾಗಿದೆ. [illegible] ಧರ್ಮದ ಆಶ್ರಯವು [illegible] ವಾಗಿ [illegible] ಗುವುದು ರೋಗಪ್ರಾಬಲ್ಯದಲ್ಲಿ ಔಷಧೋಪಯೋಗವಲ್ಲವೇ? ಧರ್ಮವು ತಾನಾಗಿಯೇ ಪ್ರಕಾರಕ್ಕೆ ಬರುವುದಿಲ್ಲ. ಅದು ಭಗವಂತನ ಆಜ್ಞಾರೂಪವಾಗಿ [illegible] ರದಿಂದ ಒಂದೆಡೆಯಲ್ಲಿರುತ್ತದೆ. ಯೋಜಕನಿಲ್ಲದ ಔಷಧಿಯು ಎಷ್ಟು ಸತ್ವಶಾಲಿಯಾಗಿದ್ದರೇನು ಪ್ರಯೋಜನ? ಹಾಗೆಯೇ ಅನುಭವವುಳ್ಳ ಬೋಧಕರಿಲ್ಲದಿದ್ದರೆ ಭೋಗಮೋಕ್ಷೈಕಸಾಧನೀಭೂತವಾದ ಧರ್ಮದಲ್ಲಿ ಎಷ್ಟು ಸಾರವಿದ್ದರೆ ಯಾರಿಗೆ ತಾನೇ [illegible] ದರಿಂದ ಸುಖವಾದೀತ? "ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಂ" ಎಂಬಂತೆ ಧರ್ಮಾಶ್ರಯದಿಂದ ಮನುಷ್ಯನು ದುಸ್ತರವಾದ ದುಃಖಸಾಗರವನ್ನು ದಾಟುತ್ತಾನೆ. ಇದರಲ್ಲಿ ಲೇಶಮಾತ್ರವೂ ಸಂದೇಹವಿಲ್ಲ. ಆದರೆ ಬೋಧಕರಿಲ್ಲದ ಧರ್ಮವು ಧರಿಸುವವರಿಲ್ಲದ ರತ್ನಾಭರಣಗಳಂತೆ ಇದ್ದೆಡೆಯಲ್ಲಿಯೇ ಇರುವುದು. ಆಚರಣೆಯಿಲ್ಲದ ಧರ್ಮವು ಯಾವ ಫಲವನ್ನೂ ಕೊಡುವುದಿಲ್ಲ. ಈಗಿನ ಜನರ ಮನೋವೃತ್ತಿಯನ್ನು ತಿದ್ದಲು ಅಲ್ಲಲ್ಲಿ ಧರ್ಮಾಶ್ರಮಗಳು ಬೇಕಾಗಿವೆ. ಅವುಗಳಲ್ಲಿ ಸರಿಯಾದ ಧರ್ಮಬೋಧೆಯಾಗಬೇಕು. ಸರ್ವರಿಗೂ ಧರ್ಮಶಿಕ್ಷಣವನ್ನು ಕೊಡಬೇಕು. ಈ ಬಗೆಯ ಪ್ರಯತ್ನದಿಂದ ಸ್ವಲ್ಪಾದರೂ ಫಲವು ದೊರೆಯದಿರದು. ಅಸ್ತು!

ಶ್ರೀ ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರು "ಶ್ರೀ ಮುಕ್ತಿಮಂದಿರ ಗುರುಕುಲ" ವನ್ನು ಸದ್ಧರ್ಮಶಿಕ್ಷಣಕ್ಕೋಸ್ಕರವಾಗಿಯೇ ಸ್ಥಾಪಿಸಿರುವರು. ನಾಮಕ್ಕೆ ತಕ್ಕಂತೆ ಸ್ಥಾನವೂ ರಮಣೀಯವಾಗಿರುವುದು. ಆರೋಗ್ಯಕರವಾದ ಗಾಳಿ, ಅಮೃತದಂತಹ ರೋಗನಿವಾರಕ ನೀರು, ಸ್ವಾಭಾವಿಕವಾದ ಶಾಂತತೆ, ಇವೆಲ್ಲವೂ ಶ್ರೀ ಮುಕ್ತಿಮಂದಿರ ಮಂಗಳನಾಮಕ್ಕೆ ಪೋಷಕಾಲಂಕಾರಗಳಾಗಿವೆ. ಶ್ರೀಗಳವರು ಜನಹಿತಕ್ಕಾಗಿಯೇ ತಮ್ಮ ಜೀವನವನ್ನು ವಿನಾಸಲಾಗಿಟ್ಟಿರುವರು. ಹಳ್ಳಿಗಳಲ್ಲಿ ಸಂಚರಿಸಿ ಜನರ ಕಷ್ಟಸುಖಗಳನ್ನು ಚೆನ್ನಾಗಿ ತಿಳಿದುಕೊಂಡಿರುವರು. ಅವರ ಹಿತಸಾಧನೆಗಾಗಿ ಬಾಲ್ಯದಿಂದಲೂ ದುಡಿಯುತ್ತ ಬಂದಿರುವರು. ಈ ವರ್ತನವೇ ಅವರನ್ನು ಶಿವಾನುಗ್ರಹ ಗುರುಕೃಪೆ ಜನಾನುರಾಗಗಳಿಗೆ ಗುರಿಮಾಡಿದೆ. ಶಿವಾರ್ಚನ ಸದುಪದೇಶಗಳನ್ನು ಮಾಡುವುದೇ ಗುರುಗಳ ಕರ್ತವ್ಯವೆಂಬಂಶವನ್ನು ಶ್ರೀಗಳು ಚೆನ್ನಾಗಿ ತಿಳಿದುಕೊಂಡಿರುವರು. ಸ್ತುತಿ ನಿಂದೆಗಳನ್ನು ಲೆಕ್ಕಿಸದೆ ಸ್ವಕರ್ತವ್ಯವನ್ನು ನಿರ್ವಹಿಸುವುದು ಅವರ ಸ್ವಭಾವ! ಜೀವನವು ಅಶಾಶ್ವತವಾಗಿರುವುದರಿಂದ ಲೋಕಕಲ್ಯಾಣದ ಕಾರ್ಯಗಳನ್ನು ಬೇಗನೇ ನೆರವೇರಿಸಬೇಕೆಂಬುದೇ ಅವರ ಆಶೆ! ಶ್ರೀಗಳವರ ಕಾರ್ಯಕ್ಕೆ ಅನೇಕ ಉದಾರಹೃದಯರು ಸೇವೆಯನ್ನು ಸಲ್ಲಿಸುತ್ತಲಿರುವರು. ಲಕ್ಷಾಂತರ ರೂಪಾಯಿಗಳ ಕಾರ್ಯಗಳು ನಡೆಯುತ್ತಲಿವೆ. ಶ್ರೀ ಮುಕ್ತಿಮಂದಿರಕ್ಕೆ ಪ್ರಧಾನವಾಗಿ ಗುರುದೇವತಾಮಂದಿರಗಳು ಬೇಕಾಗಿವೆ. ಅನೇಕರು ೧೦ ೧೨ ಸಾವಿರ ರೂಪಾಯಿಗಳನ್ನು ಸಲ್ಲಿಸುತ್ತಿರುವಂತೆ ಶಿಗ್ಗಲಿ ಕೂಡ್ಲ ಮಠದ "ದಾನಶೂರ" ವೇ|| ಸಿದ್ಧಯ್ಯನವರು ಶ್ರೀ ಮುಕ್ತಿಮಂದಿರದಲ್ಲಿ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಸುಂದರ ಮಂದಿರವನ್ನು ಕಟ್ಟಿಸಿ ಪಂಚಾಚಾರ್ಯರ ಪಂಚಲಿಂಗೋದ್ಭವ ಮೂರ್ತಿಗಳನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿರುವುದನ್ನು ಸರ್ವರೂ ಬಲ್ಲರು. ಅವರ ಸಂಕಲ್ಪಾನುಗುಣವಾಗಿ ದೇವಸ್ಥಾನದ ನಿರ್ಮಾಣ ಕಾರ್ಯವೂ ನಡೆಯುತ್ತಲಿದೆ. ಸ್ಥಾಪನೀಯ ಪಂಚಾಚಾರ್ಯ ಪಂಚಲಿಂಗೋದ್ಭವ ಮೂರ್ತಿಗಳನ್ನು ಮೈಸೂರು ರಾಜಧಾನೀ ನಿವಾಸಿಗಳಾದ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರು ಬಹು ಸುಂದರವಾಗಿ ನಿರ್ಮಿಸಿರುವರು. ಅವರ ಶಿಲ್ಪಕಲಾನೈಪುಣ್ಯವು ಹಿಂದೆ ಅನೇಕಸಾರೆ ಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿದೆ. ನಿರ್ಜೀವ ವಸ್ತುವಿನಲ್ಲಿ ಜೀವಕಳೆಯು ಕಾಣುವ ಹಾಗೆ ಮಾಡುವುದು ಸಾಮಾನ್ಯ ಶಿಲ್ಪಿಗಳಿಗೆ ಸಾಧ್ಯವಲ್ಲ. ಅದು ವಿಶ್ವಕರ್ಮನ ಪೂರ್ಣಾಂಶಸಂಭೂತರಾದ ಪುರುಷಪುಂಗವರಿಗೆ ಮಾತ್ರ ಸಾಧ್ಯ! ಅಸ್ತು! ಶ್ರೀಗಳವರ ಭಕ್ತಿಪೂರ್ಣವಾದ ಸಂಕಲ್ಪ, ಸಿದ್ಧಯ್ಯನವರ ಶ್ರದ್ಧಾಯುತವಾದ ಸೇವೆ, ಶಿಲ್ಪಿಗಳವರ ಅನುಭವಪೂರ್ಣವಾದ ಕಲಾನೈಪುಣ್ಯ, ಇವುಗಳೆಲ್ಲವೂ ಪಂಚಲಿಂಗೋದ್ಭವ ಮೂರ್ತಿಗಳ ನಿರ್ಮಾಣ ಸೌಂದರ್ಯಕ್ಕೆ ಸಾಧನಗಳಾಗಿದ್ದರೂ, ಶ್ರೀ ಜಗದ್ಗುರು ಪಂಚಾಚಾರ್ಯರನ್ನೇ ಪಂಚಪ್ರಾಣಗಳನ್ನಾಗಿಟ್ಟುಕೊಂಡಿರುವವರೂ, ಗುರುವರ್ಗಸುಧಾರಣೆಗಾಗಿಯೇ ವೀರಬ್ರಹ್ಮಚರ್ಯವ್ರತವನ್ನು ಕೈಕೊಂಡಿರುವವರೂ, ತ್ಯಾಗಮೂರ್ತಿಗಳೂ ಆಗಿರುವ ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿ ಮಹೋದಯರ ಸೂಕ್ತ ಸಲಹೆಗಳು ಶ್ರೀ ಮೂರ್ತಿಗಳಿಗೆ ಮಹಾಲಂಕಾರಪ್ರಾಯಗಳಾಗಿವೆ. ಇಂತಹ ಮೂರ್ತಿಗಳನ್ನು ರಾಜಧಾನಿಯಿಂದ ವ್ಯಯ ಸಂ|| ಮಾಘ ಶುದ್ಧ ರಾಜಯೋಗದ ತ್ರಯೋದಶೀ ಶುಭ ಸೋಮವಾರ ದಿನದಲ್ಲಿ ಮಹೋತ್ಸವಪೂರ್ವಕವಾಗಿ ಬಿಜಮಾಡಿಸಿಕೊಳ್ಳಲಾಯಿತು. ಈ ಮಹೋತ್ಸವದ ವರ್ಣನೆಯು ಕಲ್ಪನಾತೀತವಾದುದು, ೨ ಲಕ್ಷದವರೆಗೆ ಜನರು ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದರು. ಜನರ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ೧೦೧೧ ಎತ್ತುಗಳನ್ನು ಹೂಡಿದ ಪಂಚರಥಗಳಲ್ಲಿ ಈ ಮಹೋತ್ಸವವು ನಡೆಯಬೇಕೆಂದು ಶ್ರೀಗಳವರ ಸಂಕಲ್ಪವಿದ್ದಿತು. ಅದರಂತೆ ಗುರುಭಕ್ತಿಪರವಶರಾದ ಜನರು ಬಹಳ ದೂರದೂರದ ಗ್ರಾಮಗಳಿಂದ ೫-೬ ಸಾವಿರ ಎತ್ತುಗಳನ್ನು ತಂದುಬಿಟ್ಟರು. ಶ್ರೀ ಮೂರ್ತಿಗಳು ಮೈಸೂರಿನಿಂದ ತಾ|| ೩೦ ೧ ೧೯೪೭ ನೇ ಶುಕ್ರವಾರ ಮಧ್ಯಾಹ್ನ ೪ ಘಂಟೆಗೆ ಲಕ್ಷ್ಮೇಶ್ವರಕ್ಕೆ ತಲುಪಿದವು. ಸ್ತ್ರೀಪುರುಷರೆಲ್ಲರೂ ಆರತಿ ಬ್ಯಾಂಡು ಮೊದಲಾದವುಗಳಿಂದ ಎದುರ್ಗೊಂಡು ಶ್ರೀಮಾನ್ ಎಸ್ ಕೆ ಬಹದ್ದೂರ ದೇಸಾಯಿಯವರ ವಾಡೆಗೆ ಕರೆತಂದರು. ವಾಡೆಯ ಮುಂದೆ ತಾಯಿ ಪಾರ್ವತೀ ಬಳಗದ ಮುಂದಾಳುಗಳಾದ ಸೌ|| ಪಾರ್ವತೀಬಾಯಿ ಬಹದ್ದೂರ ದೇಸಾಯಿಣಿಯವರು ಶ್ರೀ ಮೂರ್ತಿಗಳಿಗೆ ಫಲಪುಷ್ಪಹಾರಗಳನ್ನರ್ಪಿಸಿ ಮಂಗಳಾರತಿಯನ್ನೆತ್ತಿದರು. ತಾ|| ೧-೨-೧೯೪೭ ನೇ ಶನಿವಾರ ಮಧ್ಯಾಹ್ನ ೩ ಘಂಟೆಗೆ ದೇಸಾಯಿ ವಾಡೆಯ "ನವರಂಗ" ವೆಂಬ ಸುಂದರ ಸಭಾಮಂಟಪದಲ್ಲಿ ರಚಿಸಿರುವ ಪಂಚಸಿಂಹಾಸನಗಳಲ್ಲಿ ಪಂಚಲಿಂಗೋದ್ಭವ ಮೂರ್ತಿಗಳನ್ನೂ ಮುಂಭಾಗದಲ್ಲಿ ಪಂಚ ನಂದಿಮೂರ್ತಿಗಳನ್ನೂ ಇರಿಸಿ ಸ್ವಹಸ್ತದಿಂದ ಪೂಜಿಸಿ ಪುಷ್ಪಹಾರಾದಿಗಳಿಂದಲಂಕರಿಸಿದರು. ಸೌ|| ಪಾರ್ವತೀಬಾಯಿಯವರು ಬಹು ಮೂಲ್ಯಗಳಾದ ಚಿನ್ನ, ರನ್ನ, ಮುತ್ತುಗಳ ಆಭರಣಗಳಿಂದ ಶ್ರೀ ಮೂರ್ತಿಗಳನ್ನು ಸ್ವಹಸ್ತದಿಂದಲೇ ಭಕ್ತಿಪೂರ್ವಕವಾಗಿ ಅಲಂಕರಿಸಿದರು. ಶ್ರೀ ದೇಸಾಯಿ ದಂಪತಿಗಳ ಆನಂದಕ್ಕಂತೂ ಪಾರವೇ ಇರಲಿಲ್ಲ. ಶ್ರೀಗಳವರ ಆಜ್ಞಾನುಸಾರವಾಗಿ ಲಕ್ಷ್ಮೇಶ್ವರ ನಗರ

ದಲ್ಲಿರುವ ಹಿಂದೂ, ಜೈನ, ಮುಸಲ್ಮಾನರ ನೂರಾರು ದೇವಸ್ಥಾನಗಳಿಗೆ ಅವವರರ ಮತಾನುಸಾರವಾಗಿ ವ್ಯವಸ್ಥೆಯಾಗಿದ್ದಿತು ಈ ಮಹೋತ್ಸವವು ಸುತ್ತುಮುತ್ತಿನ ಎಲ್ಲ ಊರಿನವರಿಗೂ ದೊಡ್ಡ ಹಬ್ಬವಾಗಿದ್ದಿತು ಎಲ್ಲರ ಮನೆಗಳಲ್ಲಿಯೂ ಅತಿಥಿಸತ್ಕಾರ ವ್ಯವಸ್ಥೆ, ಎಲ್ಲರ ಮನೆಯಲ್ಲಿಯೂ ಹಿಡಿಸಲಾರದಷ್ಟು ಆಪ್ತ ಬಂಧುಗಳು, ಇಷ್ಟ ಮಿತ್ರರು ತುಂಬಿಕೊಂಡಿದ್ದರು ಕಠಿಣಕಾಲವೆಂಬ ಭಾವನೆಯು ಯಾರಿಗೂ ಉಳಿಯಲೇ ಇಲ್ಲ ಲಕ್ಷ್ಮೇಶ್ವರ ನಗರವು ಲತಾಪಲ್ಲವಗಳಿಂದ ಅಲಂಕರಿಸಲ್ಪಟ್ಟಿದ್ದಿತು ಆ ದಿವಸ ಸೂರ್ಯನು ಮರೆಯಾಗುತ್ತಲೇ ಬಹು ದೂರ ದೂರದಿಂದ ಜನರು ಗಾಡಿಗಳಲ್ಲಿಯೂ ಕಾಲ್ನಡಿಗೆಯಲ್ಲಿಯೂ ಬರಹತ್ತಿದರು ವಿಶಾಲಗಳಾದ ರಾಜಮಾರ್ಗಗಳು ಹಿಡಿಸದಾದವು ಸೋಮವಾರ ಸೂರ್ಯೋದಯವಾಗುವುದರೊಳಗಾಗಿ ಲಕ್ಷ್ಮೇಶ್ವರ ನಗರವು ಜನಸಂದಣಿಯಿಂದ ತುಂಬಿ ಶ್ರೀ ಮುಕ್ತಿಮಂದಿರದವರೆಗೆ ೮ ೧೦ ಮೈಲು ಮೈದಾನವೆಲ್ಲ ಜನಭರಿತವಾಯಿತು. ಆಗಿನ ದೃಶ್ಯವನ್ನು ಎಷ್ಟೆಂದು ವರ್ಣಿಸಲಿ!

ಶ್ರೀ ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರು ಭಾನುವಾರ ಸಾಯಂಕಾಲಕ್ಕೆ ದೇಸಾಯಿ ವಾಡೆಗೆ ದಯಮಾಡಿಸಿ ಸೋಮವಾರ ಪ್ರಾತಃಕಾಲದ ೮ ಘಂಟೆಯೊಳಗಾಗಿ ಶಿವಾರ್ಚನಾದಿಗಳನ್ನು ಪೂರೈಸಿಕೊಂಡು ಶ್ರೀ ಪಂಚಲಿಂಗೋದ್ಭವಮೂರ್ತಿಗಳ ಪೂಜಾಕ್ರಮವನ್ನು ಸಹ ಮುಗಿಸಿದರು ೧೦ ಘಂಟೆಗೆ ಸರಿಯಾಗಿ ಶಿಗ್ಗಲಿ, ಹರಲಾಪುರ, ಕಳಸ, ಪಶುಪತಿಹಾಳ, ಬೂದಿಹಾಳ, ಕಲ್ಲೂರು, ಚಿಂಚಲಿ, ಮಾದಾಪುರ ಮೊದಲಾದ ಗ್ರಾಮಗಳಿಂದ ರಥಗಳು ಬಂದವು ಎಲ್ಲ ರಥಗಳೂ ಬಹು ಸುಂದರವಾಗಿ ಕಟ್ಟಲ್ಪಟ್ಟಿದ್ದವು ಇದರಲ್ಲಿ ಕೆಲವು ರಥಗಳು ಗಾಲಿಗಳನ್ನು ಮಾತ್ರ ಬಿಟ್ಟು ಎಡಬಲ ಸುತ್ತುಗಳಲ್ಲಿ ಭರದಿಂದ ತಿರುಗುವ ದೃಶ್ಯವು ಹೃದಯಂಗಮವಾಗಿದ್ದಿತು ಈ ಹೊತ್ತಿಗೆ ಸರಿಯಾಗಿ ಶಿಗ್ಗಲಿ 'ದಾನಶೂರ' ಸಿದ್ದಯ್ಯನವರು ತಮ್ಮ ಪರಿವಾರದೊಡನೆ ಬಂದು ಶ್ರೀ ಮೂರ್ತಿಗಳಿಗೆ ಪುಷ್ಪಹಾರಗಳನ್ನರ್ಪಿಸಿ ಮೂರ್ತಿಗಳನ್ನು ನೋಡಿ ಆನಂದಪರವಶರಾಗಿ ಕಣ್ಣುಂಬ ನೀರು ಸುರಿಸಿದರು ಶ್ರೀಗಳವರು ಶ್ರೀ ಮೂರ್ತಿಗಳಿಗೆ ಮಹಾಮಂಗಳಾರತಿಯನ್ನೆತ್ತಿ ಪುಷ್ಪಾಂಜಲಿಯನ್ನಿತ್ತ ಕೂಡಲೆ ಜಯಘೋಷವು ನವರಂಗವನ್ನು ಭೇದಿಸಿತು ಎಲ್ಲ ದೇವಸ್ಥಾನಗಳಲ್ಲಿಯೂ ದೇವತಾರಾಧನೆ ಪ್ರಾರ್ಥನಾದಿಗಳು ನೆರವೇರಿದವು ಹನ್ನೊಂದು ಘಂಟೆಗೆ ಸರಿಯಾಗಿ ಪಂಚರಥಗಳಲ್ಲಿ ಪಂಚಮೂರ್ತಿಗಳನ್ನಿರಿಸಲಾಯಿತು ಆಗಿನ ಕಾಲದಲ್ಲಿ ಆನಂದೋದ್ರೇಕದಿಂದ ಹೊರಹೊಮ್ಮಿದ ಜಗದಾಚಾರ್ಯರ ಜಯಘೋಷವು ನಭೋಮಂಡಲವನ್ನು ಪ್ರತಿಧ್ವನಿಗೊಳಿಸಿತು ಇನ್ನುಳಿದ ರಥಗಳಲ್ಲಿ ಜಗದಾಚಾರ್ಯರ ಜಗಜ್ಜನನಿ ಪಾರ್ವತೀ ದೇವಿಯ ಫೋಟೋಗಳನ್ನಿಡಲಾಯಿತು ಜನರ ಉತ್ಸಾಹಕ್ಕೆ ಪಾರವೇ ಇರಲಿಲ್ಲ ೫ ಸಾವಿರ ಎತ್ತುಗಳನ್ನು ಬಹು ಬೇಗನೇ ಜೋಡಿಸಿಬಿಟ್ಟರು ಶ್ರೀಗಳವರು ಇತರ ಪಟ್ಟಚರಾಧಿಗಳನ್ನು ದೊಡ್ಡ ಕುದುರೆಗಳ ಮೇಲೆ ಕುಳ್ಳಿರಿಸಿ ತಾವೂ ಒಂದು ಮಹಾಶ್ವವನ್ನೇರಿ ಜನಸಂದಣಿಯನ್ನು ದಾಟುತ್ತ ಮಹೋತ್ಸವದ ಮುಂಭಾಗವನ್ನು ತಲುಪಿದರು ಉತ್ಸವವು ಬಹು ಶಾಂತತೆಯಿಂದ ಸಾಗಿತು ನಾನಾವಿಧ ಬ್ಯಾಂಡುಗಳು, ಕರಡಿಮಜಲುಗಳು, ವೀರವಾದ್ಯಗಳು, ಕಹಳೆ ತುತ್ತೂರಿಗಳು, ಚೌಘಡಗಳು, ಜಯಘಂಟೆ, ಶಂಖಗಳು ಭೋರೆಂದು ಮೊಳಗಹತ್ತಿದವು. ಇವುಗಳ ಸಂಖ್ಯೆಗೆ ಪಾರವೇ ಇಲ್ಲ ಭಜನಾ ಸಂಘಗಳಿಗೆ ಮಿತಿಇಲ್ಲ ಈ ಮಹೋತ್ಸವದಲ್ಲಿ ಹತ್ತಾರು ಸಾವಿರ ಜಗದಾಚಾರ್ಯರ ವಿಜಯಧ್ವಜಗಳು ಹಾರಾಡುತ್ತಿದ್ದವು ೩-೪ ಸಾವಿರ ಸ್ವಯಂಸೇವಕರು ಉತ್ಸವವನ್ನು ಶಿಸ್ತಿನಿಂದ ಸಾಗಿಸುತ್ತಿದ್ದರು ಸರಕಾರದ ವ್ಯವಸ್ಥೆಯು ತೃಪ್ತಿಕರವಾಗಿತ್ತು. ಮಹೋತ್ಸವವು ಮಂದಗತಿಯಿಂದ ಸಾಗಿತು ಉತ್ಸವದ ವೈಭವವನ್ನು ಎವೆಯಿಕ್ಕದೆ ನೋಡುವ ಜನರ ಆಶ್ಚರ್ಯಮುದ್ರೆಯಲ್ಲಿ ಆನಂದಪರಂಪರೆಯು ಒಡೆದು ಕಾಣುತ್ತಿದ್ದಿತು ಫಲಪುಷ್ಪಗಳನ್ನರ್ಪಿಸುವ ಸಂಭ್ರಮವು ಮನನೀಯವಾದುದು ಎಲ್ಲರ ಮನೆಯ ಮುಂದೆಯೂ ಅನ್ನೋದಕ ದಾನದ ಸುವ್ಯವಸ್ಥೆಯಿದ್ದಿತು. ಲಕ್ಷ್ಮೇಶ್ವರದ ತಾಯಿ ಪಾರ್ವತೀ ಬಳಗದವರು ಅಪಾರವಾದ ಅನ್ನಸಾಮಗ್ರಿಯನ್ನು ಜನತೆಗೆ ಸಲ್ಲಿಸಿ ಸತ್ಕರಿಸಿದರು. ಅಂದಾಜು ಮಧ್ಯಾಹ್ನ ೩ ಘಂಟೆಗೆ ಉತ್ಸವವು ಲಕ್ಷ್ಮೇಶ್ವರ ನಗರವನ್ನು ದಾಟಿತು ವಿಶಾಲವಾದ ರಾಜಮಾರ್ಗದಲ್ಲಿ ಆನೆ ಕುದುರೆ ರಥಗಳಿಂದ ಕೂಡಿದ ಮಹೋತ್ಸವವು ಹೋಗುವ ಅಂದವನ್ನು ವರ್ಣಿಸುವರಾರು? ಫೋಟೋಗ್ರಾಫರರು ಅಲ್ಲಲ್ಲಿ ಫೋಟೋಗಳನ್ನು ತೆಗೆಯುತ್ತಿದ್ದರು "ಬೋಲೋ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಧ್ವನಿಗಳು ದಿಕ್ತಟಗಳನ್ನು ನಡುಗಿಸುತ್ತಿದ್ದವು ೪ ಘಂಟೆಗೆ ಸರಿಯಾಗಿ ಉತ್ಸವದ ಮುಂಭಾಗವು ರಾಮಗಿರಿಗ್ರಾಮಕ್ಕೆ ತಲುಪಿತು ಗ್ರಾಮದ ಜನರೆಲ್ಲರೂ ಎಲ್ಲ ರಥಗಳಿಗೂ ಫಲ ಪುಷ್ಪಹಾರಗಳನ್ನರ್ಪಿಸಿದರು ಇಲ್ಲಿ ನೆರೆದ ಜನಸಂದಣಿಯು ಗಣನಾತೀತವಾದುದು ರಾಮಗಿರಿ ಭಕ್ತರು ಆಗ್ರಹಪೂರ್ವಕವಾಗಿ ಸತ್ಕಾರವನ್ನು ಸಲ್ಲಿಸಿದರು ದಾರಿಯುದ್ದಕ್ಕೂ ಎಡಬಲಗಳಲ್ಲಿ ಗಾಡಿ, ಎತ್ತು, ಜನರು ಕಿಕ್ಕಿರಿದಿದ್ದರು ಎಲ್ಲರೂ ಕೈಮುಗಿದು ಉಚ್ಚಧ್ವನಿಯಿಂದ ಜಯಘೋಷವನ್ನು ಮಾಡುತ್ತಿದ್ದರು ಶ್ರೀ ಪಂಚಲಿಂಗೋದ್ಭವ ಮೂರ್ತಿಗಳ ಸೌಂದರ್ಯಾತಿಶಯವನ್ನೂ ರಥಗಳ, ಎತ್ತುಗಳ, ಆನೆ ಕುದುರೆಗಳ ಅಲಂಕಾರವನ್ನೂ ನೋಡಿ ಜನರು ಆನಂದ ಪರವಶರಾಗುತ್ತಿದ್ದರು ಎತ್ತುಗಳಿಗೆ ದಾರಿಯುದ್ದಕ್ಕೂ ಹೊಟ್ಟು, ಮೇವು, ನೀರುಗಳನ್ನೂ ಜನರಿಗೆ ಅನ್ನೋದಕಗಳನ್ನೂ ಕೊಡುವವರ ಗಲಾಟೆಯೋ ಗಲಾಟೆ! ೫ ಘಂಟೆಗೆ ಸರಿಯಾಗಿ ಮಹೋತ್ಸವವು ಹರಲಾಪುರಕ್ಕೆ ಬಂದಿತು ಅಲ್ಲಿ ಬುಧಗಾಂವ್ ಸ್ಟೇಟ್ ಗುಡಗೇರಿ ತಾಲೂಕಿನ ಪೋಲಿಸ್ ಅಧಿಕಾರಿಗಳು ಸರಿಯಾಗಿ ವ್ಯವಸ್ಥೆಯನ್ನಿಟ್ಟಿದ್ದರು ಹರಲಾಪುರದ ಕೂಲಿಕಾರರೆಲ್ಲರೂ ಸೇರಿ ಅಭೂತಪೂರ್ವವಾದ ಅನ್ನೋದಕ ವ್ಯವಸ್ಥೆಯನ್ನಿಟ್ಟಿದ್ದರು ಹರಲಾಪುರವನ್ನು ಪ್ರವೇಶಿಸುತ್ತಲೇ ಶ್ರೀಮಾನ್ ಕೊರಡೂರ 'ಗುರುಭಕ್ತಿಭೂಷಣ' ಕಲ್ಲಪ್ಪನವರ ಮನೆಯ ಮುಂದೆ ಶ್ರೀಗಳಿಗೂ ಮೂರ್ತಿಗಳಿಗೂ ಫಲ ಪುಷ್ಪಹಾರಗಳನ್ನರ್ಪಿಸಿದರು ಉತ್ಸವವು ಊರನ್ನು ದಾಟಿತು ಅಲ್ಲಿಯ ಕೆರೆಯ ಹತ್ತಿರ ಹರಲಾಪುರದ ಹಾಲುಮತದವರು ತೃಪ್ತಿಕರವಾದ ಅನ್ನೋದಕ ವ್ಯವಸ್ಥೆಯನ್ನಿಟ್ಟಿದ್ದರು ೪ ಘಂಟೆಗೆ ಉತ್ಸವದ ಮುಂಭಾಗವು ಮುಕ್ತಿಮಂದಿರಕ್ಕೆ ತಲುಪಿತು ಅಲ್ಲಿಯ ಜನಸಂದಣಿಯನ್ನು ಗಣಿಸುವವರಾರು? ವಿಶಾಲವಾದ ಭೂಪ್ರದೇಶವೆಲ್ಲವೂ ಅಂಗಡಿ ಗಾಡಿ, ಜನಗಳಿಂದ ತುಂಬಿಹೋಗಿತ್ತು ಕಣ್ಣಿಗೆ ಕಾಣಿಸುವವರೆಗೂ ಜನಸಂದಣಿ, ಅನ್ನಸಾಮಗ್ರಿಯ ಗಾಡಿಗಳು ಒಂದರಹಿಂದೊಂದಾಗಿ ನೆಲೆಸಿ ಜನರನ್ನು ಸತ್ಕರಿಸುವುದನ್ನು ನೋಡಿದರೆ ಶ್ರೀ ಹರಗುರು ಕರುಣೆಯ ಮಹತ್ವವು ಗೊತ್ತಾಗದಿರಲಿಲ್ಲ ಅಲ್ಲಲ್ಲಿ ನೂರಾರು ಮೇವಿನ ಗಾಡಿಗಳು ಕಂಗೊಳಿಸುತ್ತಿದ್ದವು ಮುಷ್ಠೀ ಗ್ರಾಮದವರು ಕೃತ್ರಿಮವಾಗಿ ಕಟ್ಟಿಕೊಂಡು ಒಂದ ಕಬ್ಬಿನ ಹಾಲನ್ನೂ ಕಬ್ಬುಗಳನ್ನೂ ತುಂಬಿದ ಬಿಳಿಯ ದೊಡ್ಡಾನೆಯೂ ರಾಮಗಿರಿಯವರ ನೀರಿನ ಕರಿಯ ದೊಡ್ಡಾನೆಯೂ ಇತರ ಸಂಘಾನೆಗಳೂ ವರ್ಣನಾತೀತವಾಗಿದ್ದವು ಅನ್ನದ ರಾಶಿಯನ್ನು ನೋಡಿ ಶ್ರೀಗಳಂತೂ ಭಕ್ತಿಪರವಶರಾಗಿ ಆನಂದಾಶ್ರುಗಳನ್ನು ದುರಿಸಿದರು ರಾಜಮಾರ್ಗದಲ್ಲಿ ಮುಕ್ತಿಮಂದಿರದಿಂದ ಲಕ್ಷ್ಮೇಶ್ವರದವರೆಗೂ ಉತ್ಸವದ ಪರಂಪರೆಯು ಮಹಾನದೀಪ್ರವಾಹದಂತೆ ಅವಿಚ್ಛಿನ್ನವಾಗಿ ರಾರಾಜಿಸುತ್ತಿದ್ದಿತು ನದಿಗಳು ನಾನಾಮುಖಗಳಿಂದ ಸಮುದ್ರಕ್ಕೆ ಸೇರುವಂತೆ ಶ್ರೀ ಮುಕ್ತಿಮಂದಿರಕ್ಕೆ ನಾನಾಮಾರ್ಗಗಳಿಂದ ಜನಸಂದಣಿಯು ನೆರೆಯುತ್ತಲಿದ್ದಿತು ಉತ್ಸವದ ಹಿಂದಿನ ರಥವು ರಾತ್ರಿ ೧೦ ಘಂಟೆಗೆ ಮುಕ್ತಿಮಂದಿರಕ್ಕೆ ತಲುಪಿತು ಮಂಗಳಾರತಿಯಾದಮೇಲೆ ಶ್ರೀ ಪಂಚಮೂರ್ತಿಗಳನ್ನು ರಥಗಳಿಂದಿಳಿಸಿ ಉಚ್ಚ ಸುಂದರ ಪೀಠಗಳಲ್ಲಿರಿಸಲಾಯಿತು ಶ್ರೀಗಳವರ ಸನ್ನಿಧಿಯಲ್ಲಿ ಸಭಾಕಾರ್ಯಕ್ಕೆ ಪ್ರಾರಂಭವಾಯಿತು ಶ್ರೀ ಮುಕ್ತಿಮಂದಿರ ಗುರುಕುಲ ವಿದ್ಯಾರ್ಥಿಗಳಿಂದ ವೇದಘೋಷವಾಯಿತು ಲಕ್ಷ್ಮೇಶ್ವರದ ಮಹಾಜನಶೆಟ್ಟಿ ಶ್ರೀಮಾನ್ ಜೋಗಪ್ಪನವರು ಆವೇಶಪೂರ್ಣವಾದ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು ಅನಂತರ ಸುತ್ತಕಟ್ಟಿ, ಹುಣಸೀಕಟ್ಟಿ, ಮೊದಲಾದ ಶ್ರೀಗಳವರು ಶ್ರೀ ಮುಕ್ತಿಮಂದಿರ ಮಹೋತ್ಸವಾಂಗಭೂತಗಳಾದ ವಿಷಯಗಳ ಮೇಲೆ ರಸಭರಿತವಾದ ಉಪನ್ಯಾಸವನ್ನು ಮಾಡಿದರು ಜಯಘೋಷದೊಡನೆ ಸಭಾಕಾರ್ಯವು ಮುಗಿಯಿತು ಒಳಿಕ ಎತ್ತು ರಥಗಳನ್ನು ತಂದವರಿಗೂ ಮಜಲಿನವರಿಗೂ, ಭಜನಾಸಂಘಗಳಿಗೂ ಯಾತ್ರಿಕರಿಗೂ ಬೆಳಗಿನ ೬ ಘಂಟೆಯವರೆಗೆ ಶ್ರೀಗಳವರು ಫಲಾಶೀರ್ವಾದವನ್ನು ಮಾಡಿದರು ತಿಪಟೂರು ನಿವಾಸಿಗಳಾದ ಶ್ರೀಮಾನ್ ಸಾರ್ಥವಳ್ಳಿ ಕಲ್ಲಪ್ಪನವರೂ ಅರಸೀಕೆರೆ ಶ್ರೀ ಶಿವಶಂಕರಯ್ಯನವರೂ ಜನರಿಗೆ ಆಶೀರ್ವಾದಕೊಡುವುದಕ್ಕಾಗಿ ಉತ್ತಮವಾದ (೧೦೦೦) ತೆಂಗಿನಕಾಯಿಗಳನ್ನು ತಂದಿದ್ದರು ರಾತ್ರಿಯೆಲ್ಲವೂ ಹಾಲಿನಂತಹ ಬೆಳದಿಂಗಳು, ಜನರಿಗೆ ಯಾವ ತೊಂದರೆಯೂ ಇದ್ದಿಲ್ಲ ರಾತ್ರಿಯಲ್ಲಿ ಹರಲಾಪುರದ 'ಶಂಕರಸೇವಾ ನಾಟಕಮಂಡಳಿ'ಯವರು 'ಶಿವಾರ್ಜುನಯುದ್ಧ' ಎಂಬ ಆಖ್ಯಾನವನ್ನು ಅಭಿನಯಿಸಿದರು ಹರಲಾಪುರದಲ್ಲಿ 'ಶಿವಭಕ್ತ ಪ್ರಚಾರಕ ನಾಟಕ' ಮಂಡಳಿಯವರು 'ಹೇಮರೆಡ್ಡಿ ಮಲ್ಲಮ್ಮ' ಎಂಬ ನಾಟಕವನ್ನು ಅಭಿನಯಿಸಿದರು ವ್ಯಾಪಾರಿಗಳಂತೂ ಲಾಭದ ಪರಮಾವಧಿ ಸುಂಕದ ಕಟ್ಟೆಯವರೂ ಧನ್ಯರೇ! ಒಟ್ಟಿನಲ್ಲಿ ಈ ಮಹೋತ್ಸವಕ್ಕೆ ಬಂದವರೆಲ್ಲರೂ ಧನ್ಯ! ಧನ್ಯ!! ಪರಮ ಧನ್ಯರೇ ಸರಿ ೩ ದಿವಸಗಳವರೆಗೂ ಎಲ್ಲ ಕಾರ್ಯಗಳೂ ಸಾಂಗವಾಗಿ ನೆರವೇರಿದವು ಎಲ್ಲರೂ ಆನಂದ ಸಾಗರದಲ್ಲಿ ಮುಳುಗಿದರು ಶ್ರೀ ಮುಕ್ತಿಮಂದಿರದಲ್ಲಿ ಹೆಚ್ಚಾದ ನೀರಿನ ಸಂಚಯವಿಲ್ಲದಿದ್ದರೂ 'ಕಾಶೀತೀರ್ಥ'ವೆಂಬ ಶ್ರೀಗಳವರ ಖಾಸಾಬಾವಿಯೊಂದೇ ಎಲ್ಲರಿಗೂ ನೀರನ್ನಿತ್ತಿತು ಇದು ಗಂಗಾದೇವಿಯ ಕೃಪೆ! ಅನ್ನಸಮೃದ್ಧಿಯು ಅನ್ನಪೂರ್ಣಾದೇವಿಯ ಅನುಗ್ರಹ! ಇವೆಲ್ಲವೂ ಶ್ರೀ ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರ ತಪಃಪ್ರಭಾವದ ಸತ್ಫಲಗಳು ಶ್ರೀಗಳವರು ಮುಂದೆ ಶ್ರೀ ಮುಕ್ತಿಮಂದಿರದಲ್ಲಿ ನೆರವೇರಿಸಲಿರುವ ಪಂಚಬ್ರಹ್ಮ ರಥೋತ್ಸವ, ೧೦೧ ಮಂಟಪ ಪೂಜೆ, ಲಕ್ಷದೀಪಾರಾಧನಾಮಹೋತ್ಸವಗಳನ್ನು ನೋಡಲು ಸರ್ವರೂ ಸಿದ್ಧರಾಗಿರಬೇಕು ಈಗಾಗಲೇ ಅನೇಕರು ಸೇವಾಕಾರ್ಯಗಳನ್ನು ಆನಂದದಿಂದ ಒಪ್ಪಿಕೊಳ್ಳುತ್ತಿರುವರು ಇಂತಹ ಸೇವಾಯೋಗವು ಪುಣ್ಯವಂತರಿಗೆ ಮಾತ್ರ ಲಭಿಸುವುದು ಸರ್ವಜಿತ್ ಸಂ|| ವೈಶಾಖ ಶುದ್ಧದಲ್ಲಿ ನೆರವೇರಲಿರುವ ಶ್ರೀ ರಂಭಾಪುರೀ ಜಗದ್ಗುರು ಪೀಠದ ಪಟ್ಟಾಧಿಕಾರಮಹೋತ್ಸವವನ್ನು ನೋಡಲು ಯಾರೂ ಮರೆಯಬಾರದು ಇದು ಸುವರ್ಣಸಂಧಿ! ಅಮೃತಸಿದ್ಧಿಯೋಗ!! ಶ್ರೀ ಮುಕ್ತಿಮಂದಿರವು ಅಭಿವೃದ್ಧಿಗೊಳ್ಳಲಿ! ಶ್ರೀಗಳವರ ತಪಃಕಲ್ಪವೃಕ್ಷವು ಫಲಿಸಲಿ!! ಜಗತ್ತಿನಲ್ಲಿ ಸುಖಶಾಂತಿಗಳು ಪಸರಿಸಲಿ!!! ಬೋಲೋ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ!!

ಪ್ರತ್ಯಕ್ಷದರ್ಶಿ

ಸ್ವೀಕಾರ

ಶಿವಮೊಗ್ಗಾ ಡಿ|| ನ್ಯಾಮತಿ ಟವನ್ನಿನಲ್ಲಿರುವ ಮ|| ರಾ|| ಯನ್ ಯನ್ ಜಯದೇವಪ್ಪನವರು ಮತ್ತು ಮ|| ರಾ|| ಎಚ್ ಶಂಕರಪ್ಪನವರು ಟವನ್ ಮುನಿಸಿಪಲ್ ಚುನಾವಣೆಯಲ್ಲಿ ಆರಿಸಿ ಬಂದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **4** ರೂ ಗಳು ಮ|| ಜೇರಿಗೆ ವೀರಭದ್ರಪ್ಪನವರ ದ್ವಾರಾ ತಲ್ಪಿರುತ್ತವೆ

ತಿಪಟೂರು ಟೌನ್ ವೀರಶೈವಮಹಿಳಾಲಿಯವರು ಶ್ರೀ ಜಗದ್ಗುರು ರೇಣುಕಭಗವತ್ಪಾದರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ ಗಳು ವೇ|| ಆರ್ ಎಂ ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಕೂಡ್ಲಿಗಿ ತಾ|| ಸೂಲದ ಹಳ್ಳಿಯಲ್ಲಿರುವ ಮ|| ರಾ|| ಕೊಟ್ರಯ್ಯಗಳ ಕೊಟ್ರಪ್ಪನು ಈ ತಿಂಗಳು ೮ ನೆಯ ತಾರೀಖಿನ ದಿವಸ ಕೊಡದ ಗುಡ್ಡದ ವೀರೇಶನ ರಥೋತ್ಸವ ನಿಮಿತ್ತವಾಗಿ ನೆರವೇರಿಸಿದ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂಪಾಯಿಯು ವೇ|| ಬಿ ಎಂ ಸಿದ್ಧಲಿಂಗಯ್ಯ ಹೆಡ್‌ಮಾಸ್ಟರ್ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

॥ ಶ್ರೀಜಗದ್ಗುರುರೇಣುಕಾಚಾರ್ಯಾಯ ನಮಃ ॥

ತಿಪಟೂರು

ಇಲ್ಲಿಯ ವೀರಶೈವ ಮಂಡಲಿಯವರು ತಾ॥ ೬-೩-೧೯೪೭ ನೇ ಗುರುವಾರ ಶ್ರೀ ವೃಷಭೇಶ್ವರಾಲಯದಲ್ಲಿ ಶ್ರೀ ಜಗದ್ಗುರು ರೇಣುಕಭಗವತ್ಪಾದರ ಜಯಂತ್ಯುತ್ಸವವನ್ನು ಬಹು ವೈಭವದೊಡನೆ ನೆರವೇರಿಸಿದರು ಅದೇ ದಿವಸ ಸಾಯಂಕಾಲ ಸುಂದರನಾಗಿ ರಚಿಸಲ್ಪಟ್ಟ ಮಂಟಪದಲ್ಲಿ ಗುರುಮೂರ್ತಿಯು ಉತ್ಸವವು ನಂದಿಧ್ವಜ ಸಹಿತ ಸಕಲ ವಾದ್ಯವೈಭವನೊಡನೆ ಹೊರಟು ಭಕ್ತಾದಿಗಳ ಆತಿಥ್ಯವನ್ನು ಸ್ವೀಕರಿಸುತ್ತ ನೋಟಕರ ಕಣ್ಮನಂಗಳಿಗೆ ಆನಂದವನ್ನೀಯುತ್ತಾ ರಾತ್ರಿ ೧ ಘಂಟೆಗೆ ಸ್ವಸ್ಥಾನವನ್ನು ಸೇರಿತು ಅನಂತರ ಮಹಾಮಂಗಳಾರತಿಯಾಗಿ ಸರ್ವರಿಗೂ ಪ್ರಸಾದವಿನಿಯೋಗವಾಯಿತು

ಮರುದಿವಸ ಅದೇ ವೃಷಭೇಶ್ವರಾಲಯದಲ್ಲಿ ರಿ॥ ಇಂಜಿನಿಯರ್ ಶ್ರೀಮಾನ್ ರುದ್ರಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿತು ಸೊಲ್ಲಾಪುರದ ಸೌ॥ ಭಾಗೀರಥೀಬಾಯಿ ಕಳಾಪ ಇವರು ಭಗವತ್ಪಾದರ ಅವತಾರದ ವಿಷಯವಾಗಿಯೂ, ಗೋರಕ್ಷನಾಥ ಗರ್ವಹರಣದ ವಿಷಯವಾಗಿಯೂ ಸಪ್ರಮಾಣವಾಗಿಯೂ ಯುಕ್ತಿಯುಕ್ತವಾಗಿಯೂ ಸರಸವಾದ ಭಾಷಣವನ್ನು ಮಾಡಿದ ದಲ್ಲದೆ ಸಂಕ್ಷಿಪ್ತವಾಗಿ ಸ್ತ್ರೀಧರ್ಮ ನೀತಿಯನ್ನೂ ಬೋಧಿಸಿದರು ಅನಂತರ ಅಧ್ಯಕ್ಷರ ಭಾಷಣವಾಯಿತು ಬಳಿಕ ಮಹಾಮಂಗಳಾರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು ಈ ಮಹಾಕಾರ್ಯದಲ್ಲಿ ಭಾಗವಹಿಸಿದವರಿಗೆಲ್ಲ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಆರ್ ಎಂ. ಮಲ್ಲಿಕಾರ್ಜುನಾರಾಧ್ಯ, ತಿಪಟೂರು

ಮನೋಹರವಾದ ಫೋಟೋಗಳು.

ಶ್ರೀ [illegible] ಅನ್ಯ ಚಿತ್ರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಪಂಚ ಜಗದ್ಗುರು ಮಹಾಚಾರ್ಯರು ಐದು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೪—೦
ಶ್ರೀ ಜಗದ್ಗುರು [illegible]ಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
षट्स्थलकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ನೇ ಮಾರ್ಚಿ ೧೯೪೭ | ಸಂಚಿಕೆ ೪೮

ಬೇಕಾಗಿದೆ

ನಮ್ಮ ಪ್ರೆಸ್ಸು ಮತ್ತು ಪತ್ರಿಕೆಯ ಆಫೀಸಿನ ಕೆಲಸಗಳನ್ನು ನಡೆಯಿಸಿಕೊಂಡು ಹೋಗಲು ಒಬ್ಬ ಅನುಭವಶಾಲಿಗಳು ಬೇಕಾಗಿದೆ ಅವರಿಗೆ ಕನ್ನಡಭಾಷಾಜ್ಞಾನವು ಚನ್ನಾಗಿರಬೇಕಲ್ಲದೆ ಲೆಖಗಳನ್ನು ಸ್ವತಃ ಒರೆಯುವನ್ನು ಶಕ್ತಿಯಿರಬೇಕು. ಸಾಧಾರಣ ಮಟ್ಟಿಗೆ ಇಂಗ್ಲಿಷ್ ಭಾಷಾಜ್ಞಾನವಿದ್ದರೆ ಉತ್ತಮ ಅವರ ಯೋಗ್ಯತಾನುಸಾರವಾಗಿ ೨೫ ರಿಂದ ೪೦ ರೂಪಾಯಿಗಳವರೆಗೆ ಸಂಬಳವನ್ನು ಕೊಡಲಾಗುವದು ಅವರು ಶಾಂತಸ್ವಭಾವದವರಾಗಿಯೂ, ನಂಬಿಗೆಗೆ ಅರ್ಹರಾಗಿಯೂ, ಗುರುಪೀಠಾಭಿಮಾನಿಗಳಾಗಿಯೂ ಇರಬೇಕು ತಮ್ಮ ವಯಸ್ಸು, ಯೋಗ್ಯತೆ ಮೊದಲಾದವುಗಳನ್ನು ಸರ್ಟಿಫಿಕೇಟಿನೊಂದಿಗೆ ತಿಳಿಸಬೇಕು

ಪ್ರೊಪ್ರೈಟರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಆಯುರ್ವೇದ ಪರೀಕ್ಷೆಯ ಫಲಿತಾಂಶ ಬೆಳಗಾಂವ

ಆಯುರ್ವೇದಾಚಾರ್ಯ

ಪ್ರಥಮಶ್ರೇಣಿ

ಶ್ರೀ|| ಷ|| ಬ್ರ|| ಷಡಕ್ಷರಶಿವಾಚಾರ್ಯ ಅರಳೆಲೆಮಠ ಮುಗಳೂರು
ಎಸ್. ಎಸ್. ಹಿರೇಮಠ ಜೈನಾಪುರ
ಸಿ. ಜಿ. ದೇವಣಗಾಂವ

ದ್ವಿತೀಯಶ್ರೇಣಿ

ಜಿ. ಕೆ. ಕಂಠೀಮಠ

ವೈದ್ಯಭೂಷಣ—ಪ್ರಥಮಶ್ರೇಣಿ

ಹೂವಿನ ಎಸ್. ಜಿ.

ದ್ವಿತೀಯಶ್ರೇಣಿ

ನಂದಿ ವಿ. ವಾಯ್.
ವೈದ್ಯಮಠ ಸಿ. ಎಸ್.
ಸಿರೂರ ವಾಯ್. ಸಿ.
ಹಿರೇಮಠ ಪಿ. ಬಿ.
ಹಿರೇಮಠ ಸಿ. ಆರ್.
ಗೊರಲೇ ಎಲ್. ಜಿ.

ತೃತೀಯಶ್ರೇಣಿ

ಶ್ರೀಮಾಡಾಳು ಪೋತದಾರ

ಸೆಕ್ರೆಟರಿ,
ಕೆ. ಎ. ವಿ. ಪಿ. ಮಾಹಮಂಡಳ, ಬೆಳಗಾಂವ.

ಶ್ರೀಜಗದ್ಗುರು ರೇಣುಕ ಜಯಂತೀಮಹೋತ್ಸವ ಶ್ರೀಕ್ಷೇತ್ರ ಕಾಶೀ

ಶ್ರೀಜಗದ್ಗುರು ವಿಶ್ವಾರಾಧ್ಯ ಮಹಾಪೀಠದಲ್ಲಿ ಶ್ರೀಜಗದ್ಗುರು ರೇಣುಕ ಭಗವತ್ಪಾದರ ಜಯಂತೀ ಮಹೋತ್ಸವವು ಮಹಾವೈಭವದಿಂದ ಆಚರಿಸಲ್ಪಟ್ಟಿತು ಶ್ರೀರೇಣುಕಾಚಾರ್ಯರ ಮೂರ್ತಿಗೂ ಶ್ರೀಕಾಶೀ ಮಹಾಪೀಠದಲ್ಲಿ ಬಹು ಪುರಾತನಕಾಲದಿಂದಲೂ ಪರಿಶೋಭಿಸುತ್ತಿರುವ ಶ್ರೀಸೋಮನಾದಲಿಂಗಕ್ಕೂ ಅಭಿಷೇಕಾದಿಗಳು ನೆರವೇರಿದವು ರಾತ್ರಿ ೮ ಘಂಟೆಗೆ ಸಭೆ ಸೇರಿತು ಯಾತ್ರಿಕ ಸ್ತ್ರೀಪುರುಷರಿಂದ ಸಭೆಯು ಕಿಕ್ಕಿರಿದಿತ್ತು ವೈದಿಕರ ಮಂಗಲಸ್ತುತಿಯಾದಮೇಲೆ—"ಶ್ರೀಜಯಗುರು ವೃಷಭಶಿವಾಚಾರ್ಯರು ಶ್ರೀಪಂಚಾಕ್ಷರಶಿವಾಚಾರ್ಯರು, ವೇ|| ಗಂಗಾಧರಶಾಸ್ತ್ರಿಗಳು, ಬೀರೂರು ವೇ|| ಸೋಮಶೇಖರಶರ್ಮರು, ಶ್ರೀವಿಶ್ವನಾಥ ಪಾಟೀಲ ಒಡೆಯರ್, ಶ್ರೀಗುರುಲಿಂಗಶಿವಾಚಾರ್ಯರು, ಮುಂತಾದವರು "ರೇಣುಕರ ಮಹಿಮೆ' 'ರೇಣುಕರ ಜಗದ್ಗುರುತ್ವ" "ಸಿದ್ಧಿಸಾಮರ್ಥ್ಯ, "ಜಯಂತೀತತ್ವಮೀಮಾಂಸ' "ರೇಣುಕರ ಕಾಲ" 'ರೇಣುಕರ ಶಿವಜೀವೈಕ್ಯತತ್ವಜ್ಞಾನ' ಮುಂತಾದ ವಿಷಯಗಳನ್ನು ಕುರಿತು ಅನುಕ್ರಮವಾಗಿ ಅಮೋಘ ಭಾಷಣಗಳನ್ನು ಮಾಡಿದರು ಅಗಸ್ತ್ಯ, ಮೊದಲಾದ ಋಷಿಗಳನ್ನೂ ಶಂಕರಾಚಾರ್ಯ ಮೊದಲಾದ ಆಚಾರ್ಯರನ್ನೂ ಶಿವಜ್ಞಾನಸುಬೋಧೆಯಿಂದ ಉದ್ಧರಿಸಿರುವದೇ ಆತನು "ಮಹಾಚಾರ್ಯನೆಂಬುದಕ್ಕೆ ನಿದರ್ಶನವು ಏಕಕಾಲದಲ್ಲಿಯೇ ತ್ರಿಕೋಟಿ ಲಿಂಗಸ್ಥಾಪನರೂಪವಾದ ವಿಭೀಷಣನ ಮಹಾಸಂಕಲ್ಪಸಾಫಲ್ಯದಲ್ಲಿ ವಿರಾಡ್ರೂಪಧಾರಣೆಯೇ ಆತನು "ಸಿದ್ಧ"ನೆಂಬುದಕ್ಕೆ ಸಾಧಕವು ಸಚ್ಚಿದಾನಂದನಾದ ಶಿವನ ಅಂತರಂಗದ ಮಾನಸಸರೋವರದಿಂದ ಹರಿದುಬಂದಿರುವ ವಿವಿಧ ನಿಗಮಾಗಮವಾಹಿನಿಗಳು ಆ ರೇಣುಕನ ಜ್ಞಾನಸಮುದ್ರದಲ್ಲಿ ಸಂಲಗ್ನಗಳಾಗಿ ಚಿರಿದೇಕಮಯವಾಗಿದ್ದವೆನ್ನುವದಕ್ಕೆ ಅಗಸ್ತ್ಯನೆಂಬ ಮೇಘದ್ವಾರವಾಗಿ ಶಿವ ಮಹಾಪ್ರಪಂಚಕ್ಕೆ ಅಮೃತಧಾರಾರೂಪವಾಗಿ ಬಂದಿರುವ "ಸಿದ್ಧಾಂತಶಿಖಾಮಣಿ"ಯೇ ಪ್ರತ್ಯಕ್ಷಪ್ರಮಾಣವು ಇಂತು ಆಚಾರ್ಯನಾಗಿ, ಸಿದ್ಧನಾಗಿ, ತೇಜೋನಿಧಿಯಾಗಿ, ಮಹಿಮಶಾಲಿಯಾಗಿ, ಕೊನೆಗೆ ಶಿವಜ್ಞಾನಸಮುದ್ರನಾಗಿ ತಾನೇ ತಾನಾಗಿ ಮೆರೆಯುತ್ತಿರುವ ಆ ರೇಣುಕನ ಶ್ರೀಚರಣಾರವಿಂದಗಳಿಗೆ—ಇಂದು ಈ ಜಯಂತೀ ಮಹಾಪರ್ವಕಾಲದಲ್ಲಿ ಹಳ್ಳಿಪಳ್ಳಿಗಳಿಂದ ಪುರಪತ್ತನಗಳಿಂದ ಮನೆಮಠಗಳಿಂದ, ಪರ್ಣಕುಟೀರಗಳಿಂದ ಪ್ರಾಸಾದಗಳಿಂದ ಕಿಂಬಹುನಾ ಅಖಂಡ ಭರತಖಂಡದ ಸಮಸ್ತ ಶಿವಪ್ರಪಂಚದಿಂದ–ಹತ್ತಿರದಿಂದಲೂ ಬಹು ದೂರದಿಂದಲೂ ಸಂದೋಹಸಂದವಾಗಿ ವಿವಿಧಪ್ರಕಾರವಾಗಿ ಯಾತ್ರೆ ಹೋಗುತ್ತಿರುವ ಅಗಣಿತ ಪ್ರಣಾಮಾವಳಿಗಳೊಡನೆ ವಿಶ್ವಾರಾಧ್ಯ ಗುರುಕುಲೀಯ ವಿದ್ವತ್ಸಂಘವೂ ಪರಾಭಕ್ತಿಯ ಸಂಪ್ರದಾಯ [illegible] ಒಂದು ಪ್ರಣಾಮಾವಳಿಯನ್ನು ಸಮರ್ಪಿಸುತ್ತದೆ ವ್ಯಾಖ್ಯಾನಗಳಾದಮೇಲೆ ಗುರುಕುಲ ವಿದ್ವಾಂಸರ ಮನೋಹರವಾದ ಗುರುಭಜನೆಯು ಸಾಂಗವಾಗಿ ನಡೆದು ಮಂಗಲಪ್ರಸಾದ ವಿನಿಯೋಗದೊಂದಿಗೆ ಸಭೆಯು ಮುಗಿಯಿತು.

ಶಿ. ಮ ಗುರುಲಿಂಗಶಿವಾಚಾರ್ಯ ಕಾರ್ಯದರ್ಶೀ
ಕಾಶೀ ವೀ ವಿದ್ವತ್ಸಂಘ.

ಗದಗ

ಗದಗಪಟ್ಟಣದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಶ್ರೀ ಸನಾತನ ಧರ್ಮಬೋಧಕರಾದ ಶ್ರೀರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು ಬ್ಯಹಟ್ಟಿರ ಚಿಕ್ಕಮಣ್ಣೂರು ಇವರ ಅಧ್ಯಕ್ಷತೆಯಲ್ಲಿ ತಾ|| ೬ ೩ ೪೭ ನೇ ದಿವಸ ಬಹು ಸಂಭ್ರಮದಿಂದ ನಡೆಯಿತು ಪ್ರಾತಃಕಾಲ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಮತ್ತು ಶ್ರೀರಾಜೋಟಿ ವೀರಭದ್ರದೇವರಿಗೆ ರುದ್ರಾಭಿಷೇಕ ಪೂಜಾಮಂಗಲಾದಿಗಳು ನಡೆದವು ಬಳಿಕ ಶ್ರೀಮುಕ್ತಿಮಂದಿರದಿಂದ ತಂದಲಿಂಗೋದ್ಭವ ಜಗದ್ಗುರು ರೇಣುಕಾಚಾರ್ಯ ಮೂರ್ತಿಯ ರಥೋತ್ಸವವು ೧೧೧ ಎತ್ತುಗಳನ್ನು ಹೂಡಿ ಡೊಳ್ಳುಬ್ಯಾಂಡು ಕಹಳೆ ಮೊದಲಾದ ವಾದ್ಯಗಳಿಂದಲೂ ದುಂದೂರಿನ ಸ್ಥಳೀಯ ಜಗದ್ಗುರು ಪಂಚಾಚಾರ್ಯರ ಭಜನಾಮಂಡಳಿಯವರ ಭಜನೆಯಿಂದಲೂ ನೂರಾರು ಗ್ಯಾಸುದೀಪಗಳಿಂದಲೂ ನೇತ್ರಾನಂದಕರವಾಗಿದ್ದು ಮಹೋತ್ಸವವು ಎರಡುಮೈಲಿನವರೆಗೆ ವ್ಯಾಪಿಸಿತ್ತು ಪೋಲೀಸರು ಒಳ್ಳೆ ಶಿಸ್ತಿನಿಂದ ಉತ್ಸವವನ್ನು ಸಾಗಿಸುತ್ತಿದ್ದರು ಉತ್ಸವದಲ್ಲಿ ಶ್ರೀಜಗದ್ಗುರು ರಂಭಾಪುರೀ ಪೀಠದಿಂದ ಒಂದ ಆನೆಯು ಚವರಿಯನ್ನು ಹಾಕುತ್ತ ಉತ್ಸವಕ್ಕೆ ಬಹುಶೋಭೆಯನ್ನುಂಟುಮಾಡಿತ್ತು. ಇಂತಹ ಉತ್ಸವವು ಈ ಪಟ್ಟಣದಲ್ಲಿ ಯಾವ ಕಾಲಕ್ಕೂ ನಡೆದೇ ಇಲ್ಲವೆಂದು ಭಕ್ತರು ಅನ್ನುತ್ತಿದ್ದರು. ಮಧ್ಯಾಹ್ನ ೪ ಘಂಟೆಗೆ ಹೊರಟ ಉತ್ಸವ ರಾಜೋಟಿ ವೀರಭದ್ರದೇವರ ಗುಡಿಗೆ ರಾತ್ರಿ ೧೨ ಘಂಟೆಗೆ ಸೇರಿತು. ಆ ಮೇಲೆ ಶ್ರೀಜಗದ್ಗುರು ರೇಣುಕಾಚಾರ್ಯರ ಪುರಾಣವನ್ನು ಪ್ರವಚನಪಟು ವೇ|| ಹಿರೇಹರಕುಣಿ ಶ್ರೀಸಿದ್ಧಲಿಂಗದೇವರು ಬಹು ಜನರಿಗೆ ಆನಂದವಾಗುವಂತೆ ೫ ದಿನಗಳವರೆಗೆ ಹೇಳಿದರು ಚಿಕ್ಕಮಣ್ಣೂರು ಸ್ವಾಮಿಗಳವರ ವ್ಯಾಖ್ಯಾನಗಳು ನಡೆಯುತ್ತಲೇ ಇದ್ದವು. ಶ್ರೀಸಿದ್ಧಲಿಂಗದೇವರು ಶ್ರೀಜಗದ್ಗುರುಗಳು ಲಿಂಗೋದ್ಭವರೆಂಬ ಬಗ್ಗೆ ಅನೇಕ ಉದಾಹರಣೆಕೊಟ್ಟು ಬೋಧ ಮಾಡಿದರು. [illegible] ಶ್ರೀ[illegible] [illegible] [illegible] ಇತರು [illegible] ಒಳ್ಳೆ[illegible] ಇದ್ದು ಗುರುಗಳ ಜಯಂತಿ [illegible] ವ್ಯಾಖ್ಯಾನ ಮಾಡಿದರು. ಅಷ್ಟೊತ್ತಿಗೆ ರಾತ್ರಿ ಬಹಳ [illegible] ಮಂಗಲದೊಡನೆ ಜಯಂತೀ [illegible] ಕೊಂಡಿತು.

ಶ್ರೀಜಗದ್ಗುರು ಪಂಚಾಚಾರ್ಯ [illegible] [illegible]

ಪಂಚಾಚಾರ್ಯಪ್ರಭಾ.

೧೯೪೭ನೆಯ ಮಾರ್ಚಿ ತಾ|| ೩೧ನೇ ಸೋಮವಾರ

ಜಾತಿಸಾಂಕರ್ಯವು ದುರ್ಗತಿಗೆ ಕಾರಣವು

ಹಿಂದೂಧರ್ಮವು ವೇದೋಕ್ತಗಳಾದ ವರ್ಣಾಶ್ರಮ ಗಳ ಆಧಾರದಲ್ಲಿ ನಿಂತಿರುವುದು. ವರ್ಣಾಶ್ರಮಗಳು ಈ ಭಾರತಭೂಮಿಯಲ್ಲಿ ಎಂದು ಶಿಥಿಲವಾದುವೋ ಅಂದೇ ವೇದಧರ್ಮಗಳು ನಾಶಹೊಂದುವವು. ಅವರವರ ವರ್ಣಾಶ್ರಮಪಾಲನೆಯಿಂದಲೇ ಐಹಿಕಸಂಪತ್ತುಗಳು ಆಮುಷ್ಮಿಕಸಂಪತ್ತುಗಳು ದೊರೆಯುತ್ತವೆಯೆಂದು ವೇದಾಗಮಗಳು ಮುಕ್ತಕಂಠದಿಂದ ಸಾರುವುವು. ಪ್ರಾಚೀನ ಕಾಲದಿಂದ ವ್ಯವಹಾರದಲ್ಲಿಯೂ ಇದು ಸಿದ್ಧವಾಗಿದೆ. ಇದಕ್ಕೆ ವಿರುದ್ಧವಾಗಿ ವರ್ಣಸಾಂಕರ್ಯವನ್ನು ಮಾಡುವುದರಿಂದ ಕುಲಧರ್ಮಗಳು ನಷ್ಟಗಳಾಗಿ ಅತ್ಯಂತ ನರಕಗಾಮಿಗಳಾಗಬೇಕಾಗುವುದು.

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ

ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ।

ಯಾರು ಜಾತಿಗಳನ್ನು ಸಾಂಕರ್ಯಗೊಳಿಸುವರೋ ಅಂತಹ ಕುಲಘಾತಿಗಳಿಗೆ ನರಕವು ತಪ್ಪುವುದಿಲ್ಲ. ಅವರ ಪಿತೃಗಳು ಪಿಂಡೋದಕಕ್ರಿಯಾವಿಹೀನರಾಗಿ ಪಿತೃಲೋಕದಿಂದ ಪತಿತರಾಗುವರು ಇತ್ಯಾದಿಯಾಗಿ ಸಾಂಕರ್ಯದ ದೋಷವನ್ನು ಗೀತೆಯು ಒಳ್ಳೆಯದಾಗಿ ಬಿಂಬಿಸಿರುತ್ತದೆ. ... ಸಮಯದಲ್ಲಿ ಭಾರತೀಯರಿಗೆ ... ಧರ್ಮಶಾಸ್ತ್ರಗಳಿಂದ ... ವನ್ನು ... ಕಂಠದಿಂದ ಖಂಡಿಸುತ್ತಿರುವವು. ಇವರು ಕೇವಲ ಐಹಿಕಸೌಖ್ಯಕ್ಕೆ ಸಾಧನವಾದ ರಾಜಕೀಯ ... ಣದಲ್ಲಿ ನಿಂತು ಕೆಲಸಮಾಡುತ್ತಿರುವ ಕೆಲವು ... ಹಿತಾರ್ಥವಾಗಿ ಕೈಕೊಂಡಿರುವ ಸ್ವರಾಜ್ಯಲಾಭವೆಂಬ ಪರಮಧ್ಯೇಯವನ್ನು ಸಾಧಿಸಲೋಸುಗವಾಗಿ ಭಾರತೀಯರ ಸಮುಚಿತವಾದ ಏಕೀಕರಣವನ್ನು ಅಪೇಕ್ಷಿಸುತ್ತಿರುವುದು ಸ್ತುತ್ಯವಾದರೂ, ಮಾನವಜನ್ಮಕ್ಕೆಲ್ಲಾ ಇದೊಂದೇ ಧ್ಯೇಯವಲ್ಲ. ಇದಲ್ಲದೆ ಅವಾಂತರಶ್ರೇಯಸ್ಸುಗಳಾದ ಪರಂಪರೆ ನಿಶ್ರೇಯಸವಾದ ಮೋಕ್ಷ ಮುಕ್ತಿಯೆಂಬುದೊಂದು ಶಿಷ್ಟವಾದುದೆಂದೂ ಅಂತಹ ಮುಕ್ತಿಗೆ ಧರ್ಮ, ಅರ್ಥ, ಕಾಮಗಳು ಅಂಗಗಳೆಂದೂ ಶಾಸ್ತ್ರವು ಹೇಳುತ್ತಿರುವುದರಿಂದ ಮಾನವನಿಗೆ ಮುಖ್ಯ ಪುರುಷಾರ್ಥವೆನಿಸಿದ ಮೋಕ್ಷಕ್ಕೆ ಪ್ರತಿಬಂಧಕವಿಲ್ಲದಂತೆ ಯಾವ ಐಹಿಕಸೌಖ್ಯವನ್ನಾದರೂ ಪಡೆಯಬೇಕಲ್ಲದೆ ಕೇವಲ ಸ್ವರಾಜ್ಯಲಾಭಾದಿ ಐಹಿಕಸೌಖ್ಯವೊಂದರಲ್ಲಿಯೇ ವಿಶ್ರಾಂತರಾಗಿ ಜಾತಿಸಾಂಕರ್ಯಗೊಳಿಸುವುದುಚಿತವಲ್ಲ. ತನ್ನ ಗೃಹಕೃತ್ಯದ ಅಭಿವೃದ್ಧಿಗಾಗಿ ತನ್ನ ಗೃಹದಲ್ಲಿರುವ ಚಿಕ್ಕಪುಟ್ಟ ಮಕ್ಕಳೆಲ್ಲರೂ ಏಕಮತ್ಯದಿಂದ ಕೆಲಸಮಾಡುವುದು ಆವಶ್ಯಕವಾಗಿದ್ದರೂ ಇವನು ಚಿಕ್ಕವನು, ಇವನು ದೊಡ್ಡವನು, ಇವನು ಯಜಮಾನನು, ಇವನು ಭೃತ್ಯನು, ಈಕೆಯು ಪತ್ನಿಯು ಮುಂತಾದ ಪೂಜ್ಯ ಪೂಜಕ ಭಾವನೆಗಳು ಆವಶ್ಯಕವಾಗಿ ಇರುವಂತೆ, ನಮ್ಮ ಭಾರತದೇಶವೆಂಬ ಮಹಾಮಂದಿರದಲ್ಲಿ ವಾಸಮಾಡಿರುವ ಭಾರತೀಯ ಸಹೋದರರು ಏಕಮತ್ಯದಿಂದ ದೇಶೋದ್ಧಾರ ಕಾರ್ಯದಲ್ಲಿ ತೊಡಗುವುದುಚಿತವಾದರೂ ಅನಾದಿಕಾಲದಿಂದ ಬಂದ ಭಾರತದೇಶವೆಂಬ ಮಹಾಮಂದಿರಕ್ಕೆ ತಳಹದಿಯಾಗಿರುವ ಪೂಜ್ಯಪೂಜಕ ಭಾವವನ್ನು ಪ್ರತಿಪಾದಿಸುತ್ತಿರುವ ವರ್ಣಧರ್ಮಗಳನ್ನು ನಾಶಪಡಿಸುವುದರಿಂದ ಈ ಮಹಾಮಂದಿರವು ನಿಲ್ಲುವ ಬಗೆ ಹೇಗೆ? ರಾಜಕೀಯ ದೃಷ್ಟಿಗೂ ಧಾರ್ಮಿಕ ದೃಷ್ಟಿಗೂ ಮೇರುಸರ್ಷಪದಷ್ಟು ಅಂತರವಿರುವುದರಿಂದ ಇವೆರಡನ್ನೂ ಏಕತ್ರ ಉಪಯೋಗಿಸುವುದರಿಂದ ವಿಷ ಮಿಶ್ರವಾದ ಅನ್ನದಂತೆ ಅನರ್ಥಕಾರಿಯಾಗಿ ಪರಿಣಮಿಸುವುದೆಂಬುದರಲ್ಲಿ ಸಂಶಯವಿಲ್ಲ. ರಾಜಕೀಯ ದೃಷ್ಟಿಯು ದೇಶೋದ್ಧಾರಸಾಧಕವು ಧಾರ್ಮಿಕ ದೃಷ್ಟಿಯು ಆತ್ಮೋದ್ಧಾರಸಾಧಕವು ಇವೆರಡು ದೃಷ್ಟಿಗಳನ್ನು ಒಂದೆಡೆಯಲ್ಲಿ ಯೋಜಿಸಲು ಆಗುವುದಿಲ್ಲ. ಅಥವಾ ಕೆಲವಂಶಗಳಲ್ಲಿ ಸಂಗತವಾದರೂ ಕೆಲವಂಶಗಳಲ್ಲಿ ಧರ್ಮವಿರುದ್ಧಗಳಾಗಿಯೇ ಇವೆ. ಈ ಧರ್ಮಸೂಕ್ಷ್ಮವನು ... ವಿಚಾರಮಾಡಿ ಯಾವ ಭಾಗದಲ್ಲಿ ರಾಜಕೀಯ ಧಾರ್ಮಿಕಗಳೆರಡನ್ನೂ ಒಂದು ಮಾಡಬೇಕೋ ... ಒಂದುಮಾಡಬೇಕಲ್ಲದೆ ಎಲ್ಲ ... ತಲೆಗೆಲ್ಲಾ ಒಂದೇ ಶಾಸ್ತ್ರ ... ವನ್ನು ಮುಂದೆ ಅನುಭವಿಸಬೇಕಾಗುವುದು. ... ನಮ್ಮ ಭಾರತೀಯರಲ್ಲಿ ಅನೇಕರು ಧರ್ಮವಿರುದ್ಧವಾಗಿ ಕೋಲಾಹಲವನ್ನೆಬ್ಬಿಸುತ್ತಿರುವುದು ... ವಿಷಯವಾಗಿದೆ. ಆದರೆ 'ಕಲೌ ... ಜಾಯತೇ ವರ್ಣಸಂಕರಃ' ಎಂದು ... ವರ್ಣಸಾಂಕರ್ಯವನ್ನು ಭವಿಷ್ಯತ್ಪುರಾಣ ... ಮಹರ್ಷಿಗಳ ವಾಕ್ಯವನ್ನು ಪರ್ಯಾಲೋಚಿಸಿದರೆ ಇದು ಕಾಲಪರಿಪಾಕದಿಂದ ಒದಗಿದ ಸನ್ನಿವೇಶವೆಂದು ಹೇಳಬೇಕಾಗಿದೆ. ಪ್ರಾಯಶಃ ಇಂತಹ ಅನಾಹುತಗಳಿಗೆಲ್ಲಾ ಈಗಿನ ಆಂಗ್ಲವಿದ್ಯಾಭ್ಯಾಸವೇ ಬಹುಮಟ್ಟಿಗೆ ಕಾರಣವೆಂದು ಹೇಳಬಹುದು. ಭರತಖಂಡದಲ್ಲಿ ಬೀಸುತ್ತಿರುವ ಇಂಗ್ಲೀಷ್ ವಿದ್ಯಾಭ್ಯಾಸವೆಂಬ ಝಂಝಾಮಾರುತವು ಪ್ರಾಚೀನಕಾಲದಿಂದ ಭಾರತೀಯರ ಹೃದಯಾಕಾಶದಲ್ಲಿ ಘನೀಭೂತವಾಗಿರುವ ಧರ್ಮಮೇಘಮಂಡಲವನ್ನು ಒಡೆದು ಛಿದ್ರಗೊಳಿಸುತ್ತಿರುವುದನ್ನು ನೋಡಿದರೆ ಪ್ರತಿಯೊಬ್ಬ ಆಸ್ತಿಕನ ಮನೋಭಾವವು ಚಿಂತೆಯಿಂದ ಕಲುಷಿತವಾಗಿ ಹೋಗುತ್ತಲಿದೆ. ಜನಗಳು ಎಷ್ಟು ಎಷ್ಟು ಆಂಗ್ಲವಿದ್ಯಾವಿಶಾರದರಾಗುತ್ತ ಬರುವರೋ ಅಷ್ಟು ಅಷ್ಟು ಬಾಹ್ಯವಿಷಯಸೌಖ್ಯಾಭಿಲಾಷೆಯೊಂದರಲ್ಲಿಯೇ ಆಸಕ್ತಿಯು ಹೆಚ್ಚಿ ಅದೃಷ್ಟವಾದ ಆಮುಷ್ಮಿಕ ಸೌಖ್ಯ ವಿಷಯದಲ್ಲಿ ದೃಷ್ಟಿಯು ಕಡಿಮೆಯಾಗುತ್ತ ತಮ್ಮ ಸ್ವೇಚ್ಛಾಚಾರಕ್ಕೆ ಪ್ರತಿಕೂಲವಾದುದನ್ನೆಲ್ಲಾ ಅವನತಿಗೂ ಅನುಕೂಲವಾದುದನ್ನೆಲ್ಲಾ ಧರ್ಮವೆಂದೂ ತಿಳಿಯುತ್ತ ಧರ್ಮದಲ್ಲಿ ಅಧರ್ಮಬುದ್ಧಿಯೂ ಅಧರ್ಮದಲ್ಲಿ ಧರ್ಮಬುದ್ಧಿಯೂ ಬಲಗೊಳ್ಳುತ್ತ ಎಲ್ಲಿ ನೋಡಿದರೂ ಪುನರ್ವಿವಾಹ ಪ್ರೌಢಾವಿವಾಹ ವಿಧವಾ ವಿವಾಹ, ಅಸ್ಪೃಶ್ಯತಾನಿವಾರಣೆ, ಅಸ್ಪೃಶ್ಯಸಹಭೋಜನ ಮುಂತಾದ ಧರ್ಮವಿರುದ್ಧ ಕಾರ್ಯಗಳು ನಡೆಯಲಾರಂಭವಾಯಿತು. ಈ ವಿಷಮ ಸ್ಥಿತಿಯು ನರ್ತನದಲ್ಲಿ ಧರ್ಮಸುಧಾರಣೆಗಾಗಿ ಅವಕಾಶಮಾಡಿರುವೆವೆಂದು ಹೇಳಿಕೊಳ್ಳುತ್ತಿರುವ ಧ್ರುವ್ಯಾಕರ್ಷಣೆ ... ಕೆಲಜನರು ಆ ನರ್ತನಾನುಗುಣವಾಗಿ ಮೃದಂಗವನ್ನು ಬಾರಿಸಲಿಕ್ಕೆ ಹತ್ತಿದರು. ಇದರಿಂದ ಪ್ರಪಂಚದಲ್ಲಿ ಕುಲಧರ್ಮಗಳ ನಾಮಾವಶೇಷವಾಗಿ ನಾಸ್ತಿಕ್ಯನರ್ತನವು ವಿಶ್ವರೂಪವನ್ನು ಧರಿಸಿ ಎಲ್ಲಿ ನೋಡಿದರೂ ಇದರ ಶಬ್ದವೇ ಕೇಳಿಬರುತ್ತಲಿರುವದು ಅತಿ ಶೋಚನೀಯವಾಗಿದೆ.

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।

ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥

ಉತ್ಪನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।

ನರಕೇ ನಿಯತಂ ವಾಸಃ ಭವತೀತ್ಯನುಶುಶ್ರುಮ ॥

ಎಂಬ ಗೀತಾಪ್ರಮಾಣದಂತೆ ಕುಲಘಾತಕರಗಳ ವರ್ಣಸಂಕರ ಕಾರಕಗಳಾದ ಇಂತಹ ದೋಷಗಳಿಂದ ಜಾತಿಧರ್ಮಗಳೂ ಕುಲಧರ್ಮಗಳೂ ನಾಶವಾಗುತ್ತವೆ. ಕುಲಧರ್ಮಗಳನ್ನು ನಾಶಮಾಡಿಕೊಂಡ ಮಾನವರಿಗೆ ಯಾವಾಗಲೂ ನರಕದಲ್ಲಿ ವಾಸವು ತಪ್ಪುವುದಿಲ್ಲವೆನ್ನುವುದು ಸಿದ್ಧ! ಆದುದರಿಂದ ಜಾತಿಸಂಕರಕಾರಕರು ಈ ವಿಷಯವನ್ನೆಲ್ಲಾ ಪೂರ್ಣವಾಗಿ ಆಲೋಚಿಸಬೇಕೆಂದೂ, ನರಕದ ಕೋಟೆಗೆ ಹೆಬ್ಬಾಗಿಲಂತಿರುವ ಜಾತಿಸಾಂಕರ್ಯ ಕಾರ್ಯದಲ್ಲಿ ಪ್ರವರ್ತಿಸಬಾರದೆಂದೂ, ಶ್ರೀಪರಮೇಶ್ವರನು ಇಂತಹ ಜನರಿಗೆ ಸದ್ಬುದ್ಧಿಯನ್ನೀಯಲೆಂದೂ ಆಶಿಸುತ್ತೇವೆ.

ಮಜ್ಜಿಗೆಯ ಮಹತ್ವ!

ಮಜ್ಜಿಗೆಯನ್ನು ಕುಡಿದರೆ ಕಾಲರಾ ಮೊದಲಾದ ರೋಗಗಳನ್ನು ತರುವ ಕ್ರಿಮಿಗಳು ನಾಶವಾಗುವುವು; ಎಂಬುದಾಗಿ ಒಬ್ಬ ಪ್ರಸಿದ್ಧ ವೈದ್ಯರು ಹೇಳಿರುತ್ತಾರೆ.

ವರ್ತಮಾನಸಂಗ್ರಹ

ಮುದಿಪಲ್ಲಿ ಗ್ರಾಮದ ಬಾವಿಯ ನೀರಿನಿಂದ ದಮ್ಮು, ಕ್ಷಯ ರೋಗಗಳು ನಾಶವಾಗುವವಂತೆ!

ಹಿಂದೂಪುರಕ್ಕೆ ಆನೈಲಿ ದೂರದಲ್ಲಿರುವ ಮುದಿಪಲ್ಲಿ ಎಂಬ ಗ್ರಾಮದಲ್ಲಿ ಒಂದು ಭಾವಿಯಿದೆಯೆಂದೂ, ಈ ಭಾವಿಯನೀರನ್ನು ಕುಡಿದರೆ ಕಠಿಣವಾದ ದಮ್ಮು, ಕ್ಷಯ, ಮೊದಲಾದ ರೋಗಗಳು ಗುಣವಾಗುವುವೆಂದೂ, ಅನೇಕ ರೋಗಿಗಳು ಈ ನೀರನ್ನು ಗಾಡಿಗಳಲ್ಲಿಯೂ ಲಾರಿಗಳಲ್ಲಿಯೂ ತರಿಸಿಕೊಂಡು ಕುಡಿಯುತ್ತಿರುವರೆಂದೂ, ಈ ನೀರನ್ನು ಕೆಡಿಸದಂತೆ ಕಾಯಲು ಇಬ್ಬರು ಕಾವಲುಗಾರರನ್ನು ಸರಕಾರದವರು ನೇಮಿಸಿರುವರೆಂದೂ ತಿಳಿದು ಬರುತ್ತದೆ.

ಡಚ್ ಇಂಡೋನೇಷಿಯಾ ಒಪ್ಪಂದ

ಡಚ್ ರಾಜಪ್ರಭುತ್ವದ ಆಶ್ರಯದಲ್ಲಿ ಇಂಡೋನೇಷಿಯಾದಲ್ಲಿ ಒಂದು ಸಂಯುಕ್ತ ರಾಜ್ಯಾಂಗ ಸ್ಥಾಪನೆಗೆ ಡಚ್ ಇಂಡೋನೇಷಿಯಾ ಒಪ್ಪಂದವಾಯಿತು. ಅನೇಕ ತಿಂಗಳ ಕಾಲ ಇಲ್ಲಿನ ರಿಪಬ್ಲಿಕ್ ಮತ್ತು ಡಚ್ ಸೈನ್ಯಗಳಿಗೆ ನಡೆಯುತ್ತಿದ್ದ ನಿರಂತರವಾದ ಕದನವನ್ನು ಕೊನೆಗಾಣಿಸಲು ಜಾವಾದ್ವೀಪದಲ್ಲಿರುವ ಚೆರಿಬಾನ್ ಎಂಬಲ್ಲಿ ಈ ಒಪ್ಪಂದವು ರಚಿತವಾಯಿತು. ಈ ಒಪ್ಪಂದಕ್ಕೆ ಎರಡು ರಾಷ್ಟ್ರಗಳೂ ಸಹಿ ಮಾಡಿದುವು.

ಒಪ್ಪಂದದ ವಿವರಗಳು

ಇದರ ಪ್ರಕಾರ, ಇಂಡೋನೇಷಿಯಾದ ಪ್ರಜಾಪ್ರಭುತ್ವರಾಷ್ಟ್ರಕ್ಕೆ ಜಾವಾ ಮತ್ತು ಸುಮಾತ್ರಾ ದ್ವೀಪಗಳಮೇಲೆ ಪೂರ್ಣ ಆಡಳಿತಾಧಿಕಾರವಿರಬೇಕೆಂಬುದಾಗಿ ಡಚ್ ರಾಷ್ಟ್ರವು ಒಪ್ಪುತ್ತದೆ. ಪರಸ್ಪರ ಸಹಾಯ ಮೂಲಕವಾದ ಡಚ್ ಸೈನ್ಯಗಳಿಂದ ಆಕ್ರಮಿತವಾಗಿರುವ ಪ್ರದೇಶಗಳು ಕ್ರಮವಾಗಿ ಈ ಇಂಡೊನೇಷಿಯಾ ಸರಕಾರಕ್ಕೆ ಸೇರಬೇಕು. ಈ ಸಂಯುಕ್ತ ರಾಜ್ಯಾಂಗವು ೧೯೪೯ ನೇ ಜನವರಿ ಹೊತ್ತಿಗೆ ಪೂರ್ಣವಾಗಿ ಸ್ಥಾಪಿತವಾಗಲು ಸೂಕ್ತ ಕ್ರಮಗಳನ್ನು ಕೈಕೊಳ್ಳಲಾಗುವದು. ನೆದರ್ಲೆಂಡ್ ಸರಕಾರ ಮತ್ತು ಈ ಇಂಡೊನೇಷಿಯಾ ಪ್ರಜಾಪ್ರಭುತ್ವ ಸರಕಾರಗಳ ಪರಸ್ಪರ ಸಹಾಯದಿಂದ ಸಂಯುಕ್ತ ರಾಜ್ಯಾಂಗದ ಆಧಾರದಮೇಲೆ ಇಲ್ಲಿ ಪೂರ್ಣಾಧಿಕಾರವುಳ್ಳ ಪ್ರಜಾಪ್ರಭುತ್ವ ರಾಷ್ಟ್ರವನ್ನು ಶೀಘ್ರ ಏರ್ಪಡಿಸಲಾಗುವುದು. ಈ ರಾಷ್ಟ್ರವನ್ನು ಇಂಡೊನೇಷಿಯಾ ಸಂಯುಕ್ತ ರಾಷ್ಟ್ರಗಳೆಂದು ಕರೆಯಲಾಗುವುದು. ಈ ಹೊಸ ರಾಷ್ಟ್ರದ ರಾಜ್ಯಾಂಗ ರಚನೆಗಾಗಿ ಒಂದು ರಾಜ್ಯಾಂಗ ಸಭೆಯನ್ನು ಏರ್ಪಡಿಸಲಾಗುವುದು. ಇದರಲ್ಲಿ ಪ್ರಜಾಪ್ರತಿನಿಧಿ ತತ್ವದ ಮೇಲೆ ರಿಪಬ್ಲಿಕನ್ ಸರಕಾರದಿಂದ ನೇಮಿತರಾದ ಪ್ರತಿನಿಧಿಗಳೂ ಮತ್ತು ಸಂಯುಕ್ತ ರಾಜ್ಯಾಂಗದಲ್ಲಿ ಭಾಗವಹಿಸುವ ಇತರ ಪ್ರತಿನಿಧಿಗಳೂ ಸದಸ್ಯರಾಗುವರು.

ಒಪ್ಪಂದದ ವಿಚಾರದಲ್ಲಿ ಪ್ರಮುಖರ ಅಭಿಪ್ರಾಯ

ಈ ಒಪ್ಪಂದಕ್ಕೆ ಸಹಿಯಾಗುವ ಸಮಾರಂಭದಲ್ಲಿ ಡಾ|| ವ್ಯಾನ್‌ಮೂಕ್‌ರವರು—"ಕಳೆದ ಯುದ್ಧದ ಫಲವಾಗಿ ಪ್ರತ್ಯೇಕವಾಗಿದ್ದ ಡಚ್ ಮತ್ತು ಇಂಡೊನೇಷಿಯಾ ಜನಾಂಗಗಳು ಈಗ ಒಟ್ಟಿಗೆ ಬಂದಿರುತ್ತವೆ. ಇದರಿಂದ ಈ ದ್ವೀಪಗಳ ಅಭಿವೃದ್ಧಿಗೆ ಆತಂಕವಾಗಿದ್ದ ಕದನಗಳು ನಿಲ್ಲಲು ಅವಕಾಶವಿದೆ." ಎಂದರು. ಇಂಡೋನೇಷಿಯಾ ನಾಯಕರಾದ ಡಾ|| ಷಾರಿಯರ್‌ರವರು ಇನ್ನೂ ಯಾವುದೂ ದೃಢವಾಗಿಲ್ಲ, ಆದರೆ ಭವಿಷ್ಯವು ಆಶಾದಾಯಕವಾಗಿದೆ ಎಂಬುದಾಗಿ ತಿಳಿಸಿ, ಮಧ್ಯಸ್ಥಿಕೆಯನ್ನು ವಹಿಸಿದ ಲಾರ್ಡ್ ಕಿಲ್ಲರ್ನ್‌ರವರನ್ನು ಅಭಿನಂದಿಸಿದರು.

ಕೆನಡಾ ಗೋಧಿ

ಕೆನಡಾದಿಂದ ಬಂದರುಗಳಿಗೆ ಗೋಧಿ ರವಾನೆ ಮಾಡಲು ವ್ಯಾಗನ್ನುಗಳ ಅಭಾವದಿಂದ ತಡೆಯಾಗಿದೆ.

ಗೋಧಿಯನ್ನು ತುಂಬಿಕೊಂಡು ಹೋಗಲು ಎಂಟು ಹಡಗುಗಳು ಬಂದರಿನಲ್ಲಿ ಕಾದಿವೆ. ಮುಂದಿನ ವಾರದಲ್ಲಿ ಇನ್ನೂ ಒಂಭತ್ತು ಹಡಗುಗಳು ಬರುವ ಸಂಭವವಿದೆ ರವಾನೆಯ ಸೌಕರ್ಯವು ಉತ್ತಮಗೊಳ್ಳದಿದ್ದರೆ ಲಕ್ಷಾಂತರ ಬುಸಲ್‌ಗಳಷ್ಟು ಗೋಧಿಯು ನಷ್ಟವಾಗುವುದೆಂದು ಕೆನಡಿಯನ್ ಗೋಧಿ ಸಮಿತಿಯ ಉನ್ನತಾಧಿಕಾರಿಗಳೊಬ್ಬರು ತಿಳಿಸಿದ್ದಾರೆ

ಅಧಿಕ ವೃಷ್ಟಿಯಿಂದ ಬೆಳೆಗೆ ನಷ್ಟ

ಹೋದ ಸೆಪ್ಟೆಂಬರಿನಲ್ಲಿ ಅಧಿಕ ವೃಷ್ಟಿಯಿಂದ ಮದರಾಸಿನಲ್ಲಿ ಬೆಳೆಗಳು ನಷ್ಟಹೊಂದಿದುವು ಮಧ್ಯ ಪ್ರಾಂತದಲ್ಲಿ ಜೋಳ ಮತ್ತು ಭತ್ತದ ಬೆಳೆಗಳು ನಷ್ಟ ಹೊಂದಿದರೂ ಇವು ಅಷ್ಟು ಮುಖ್ಯವಲ್ಲ. ಈ ಪ್ರಾಂತದಲ್ಲಿ ಗೋಧಿ ಬೆಳೆ ಮುಖ್ಯವಾಗಿ ನಷ್ಟಹೊಂದಿದೆ ರೂಪಾಯಿಯಲ್ಲಿ ನಾಲ್ಕಾಣೆ ಬೆಳೆ ಕೈಗೆ ಬರುವ ನಿರೀಕ್ಷಣೆಯೂ ಇರಲಿಲ್ಲ. ಈ ಕಾರಣದಿಂದ ಈ ಪ್ರಾಂತದಲ್ಲಿ ಗೋಧಿ ಉಳಿತಾಯವಾಗುವ ಬದಲು ಕೇಂದ್ರದಿಂದ ಒದಗಿಸಬೇಕಾಗಿದೆ ಆದರೆ ಮದರಾಸಿನಲ್ಲಿ ಮಾತ್ರ ಭತ್ತದ ಬೆಳೆಯು ಹೋದವರ್ಷಕ್ಕಿಂತ ಚೆನ್ನಾಗಿ ಬಂದಿದೆ ಎಂದು ಕೇಂದ್ರ ಸರ್ಕಾರದ ಆಹಾರ ಇಲಾಖೆಯ ಕಾರ್ಯದರ್ಶಿಯವರು ಕೇಂದ್ರ ಅಸೆಂಬ್ಲಿಯಲ್ಲಿ ತಿಳಿಸಿದರು

ಬಂಗಾಳಾ ಸರಕಾರದ ಪುನರ್ರಚನೆಗಾಗಿ ಮನವಿ

ಅಮೃತ ಬಜಾರ್ ಪತ್ರಿಕೆಯ ವರದಿಯ ಪ್ರಕಾರ ಬಂಗಾಳಾ ಶಾಸನ ಸಭೆಯ ೮೦ ಜನ ಲೀಗ್ ಸದಸ್ಯರು, ಬಂಗಾಳ ಮಂತ್ರಿ ಮಂಡಲವು ಪುನಃ ರಚಿತವಾಗಬೇಕೆಂದು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ

ಈ ಹೇಳಿಕೆಯನ್ನು ಮಿ|| ಜಿನ್ನಾರವರಿಗೂ, ಮುಸ್ಲಿಂ ಲೀಗಿನ ಪಾರ್ಲಿಮೆಂಟರಿ ಕಮಿಟಿಯವರಿಗೂ, ಮಂಡಲದ ಪುನರ್ವ್ಯವಸ್ಥೆಗಾಗಿ ಒತ್ತಾಯಪಡಿಸಬೇಕೆಂಬ ಉದ್ದೇಶದಿಂದ ಕಳುಹಿಸಲಾಗಿದೆ

ಈ ವೃತ್ತಪತ್ರಿಕೆಯಪ್ರಕಾರ ಈಗಿನ ಮಂತ್ರಿಮಂಡಲದ ಮೇಲಿನ ವಿರೋಧಕ್ಕೆ ಕಾರಣ ೧ ಪೋಲೀಸರ ಕ್ರೂರ ಕೃತ್ಯಗಳನ್ನು ಈ ಮಂತ್ರಿ ಮಂಡಲವು ನಿಲ್ಲಿಸಲಾಗಲಿಲ್ಲ ೨ ಸಿವಿಲ್ ಸಪ್ಲೈ ಇಲಾಖೆಯ ಲಂಚ, ಮೊದಲಾದ ದುರ್ವ್ಯಾಪಾರಗಳನ್ನು ಈ ಮಂತ್ರಿ ಮಂಡಲವು ತಪ್ಪಿಸಿಲ್ಲ ೩. ಹಲವು ಶಾಸನ ನಿಂಬಂಧನೆಗಳನ್ನು ಜಾರಿಗೆ ತರುವುದಾಗಿ ಮಾಡಿದ ವಾಗ್ದಾನವನ್ನು ಪಾಲಿಸಿಲ್ಲ ೪ ಮಂತ್ರಿಗಳ ಆಯ್ಕೆಯು ಯೋಗ್ಯತೆ, ಸಾಮರ್ಥ್ಯ ಆಡಳಿತದ ಅನುಭವ ಇವುಗಳ ಆಧಾರದ ಮೇಲೆ ಆಗಿಲ್ಲ ಇದರಿಂದ ಈ ಮಂತ್ರಿ ಮಂಡಲವು ಸರ್ವರ ವಿಶ್ವಾಸಕ್ಕೆ ಪಾತ್ರವಾಗಿಲ್ಲ

ಪ್ರಾಂತದಲ್ಲಿರುವ ಕೋಮುವಾರು ಪರಿಸ್ಥಿತಿಗೆ ಈ ಮಂತ್ರಿಮಂಡಲದ ನೀತಿಯೇ ಕಾರಣ ಇದರಿಂದ ಮಂತ್ರಿ ಮಂಡಲದಲ್ಲಿ ಬದಲಾವಣೆ ಅಗತ್ಯವಾಗಿದೆ

ನೂತನ ವೈಸ್ರಾಯರ ಹೇಳಿಕೆ

ಬ್ರಿಟಿಷ್ ಸರ್ಕಾರವು ಭಾರತಕ್ಕೆ ಮುಂದಿನ ವರ್ಷದ ಜೂನ್ ವೇಳೆಗೆ ಅಧಿಕಾರವನ್ನು ವರ್ಗಾಯಿಸುವ ದೃಢ ನಿಶ್ಚಯ ಮಾಡಿರುವುದರಿಂದ ಕಾಲವಿಳಂಬವಿಲ್ಲದೆ ಎಲ್ಲಾ ರಾಜಕೀಯ ಜಟಿಲ ಸಮಸ್ಯೆಗಳೂ ಬಗೆಹರಿಸಲ್ಪಡಬೇಕಾದುದು ಅತ್ಯಗತ್ಯವೆಂದು ತಿಳಿಸಿದರು

"ನಾನು ಅಸಾಧಾರಣ ಪರಿಸ್ಥಿತಿಯಲ್ಲಿ ಈ ಪದವಿಯನ್ನು ಅಂಗೀಕರಿಸಿದ್ದೇನೆ. ಈಗಿನ ವಾಸ್ತವಾಂಶಗಳನ್ನು ಗಮನಕ್ಕೆ ತಂದುಕೊಂಡು ಭಾರತ ಸಮಸ್ಯೆಯನ್ನು ಶೀಘ್ರವಾಗಿ ಬಗೆ ಹರಿಸುವ ಅವಶ್ಯಕತೆಯನ್ನು ಎಲ್ಲಾ ರಾಜಕೀಯ ಪಕ್ಷಗಳೂ ಪ್ರಮುಖರೂ ತಿಳಿಯಬೇಕು ಏತನ್ಮಧ್ಯೆ ಶಾಂತಿ, ಸೌಹಾರ್ದಗಳಿಗೆ ಧಕ್ಕೆ ತಂದೊಡ್ಡುವ ಭಾಷಣಗಳನ್ನೂ ಕಾರ್ಯವನ್ನೂ ಮಾಡಬಾರದೆಂದು ಪ್ರಾರ್ಥಿಸುತ್ತೇನೆ" ಎಂದು ಹೇಳಿದರು

ವೇವಲ್ಲರ ಬಗ್ಗೆ ಪ್ರಶಂಸೆ

ಸ್ವಾತಂತ್ರ್ಯ ಪಥದಲ್ಲಿ ಭಾರತವನ್ನು ವೇವಲ್ಲರು ಬಹುದೂರ ಒಯ್ದಿದ್ದಾರೆ. ಅವರ ಸ್ಥಾನಕ್ಕೆ ಬರುವುದು ಸಾಧಾರಣ ಕೆಲಸವಲ್ಲ ಅವರ ವಿಚಾರದಲ್ಲಿ ನನಗೆ ಹೆಮ್ಮೆಯಿದೆ, ಗೌರವವಿದೆ ಅವರು ಪ್ರಾರಂಭಿಸಿರುವ ಕಾರ್ಯವನ್ನು ನಾನು ಮುಕ್ತಾಯಗೊಳಿಸುತ್ತೇನೆ, ಎಂದು ವೇವಲ್ಲರ ಬಗ್ಗೆ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು

ಭಾರತೀಯರಲ್ಲಿ ಮನವಿ

"ನಾನು ನನಗೆ ವಹಿಸಿರುವ ಕಾರ್ಯದ ಮಹತ್ವವನ್ನರಿತಿದ್ದೇನೆ ಅದು ಬಹಳ ಗುರುತರ ಜವಾಬ್ದಾರಿಯಾಗಿದೆ ಈ ಕರ್ತವ್ಯ ನಿರ್ವಹಣೆಯಲ್ಲಿ ಭಾರತದ ಪ್ರಜಾವರ್ಗದಲ್ಲಿ ಹೆಚ್ಚು ಜನರು ಸಹಕಾರ, ಸೌಹಾರ್ದಗಳನ್ನು ನೀಡಬೇಕು' ಎಂದು ಭಾರತೀಯರಲ್ಲಿ ಮನವಿಮಾಡಿಕೊಂಡಿದ್ದಾರೆ

ಸಾಲೂರು

ಶಿಕಾರಿಪುರ ತಾಲ್ಲೂಕು ಸಾಲೂರು ಆರಾಧ್ಯಮಠದ ಎಂ ಶಿವಮೂರ್ತ್ಯಾರಾಧ್ಯರು ಪ್ರತಿವರ್ಷ ಪದ್ಧತಿಯಂತೆ ತಮ್ಮ ಗೃಹದಲ್ಲಿ ಫಾಲ್ಗುಣ ಶುದ್ಧ೧೪ ಗುರುವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ತಳಿರು ತೋರಣಗಳಿಂದ ಅಲಂಕರಿಸಿದ ಮನೋಹರವಾದ ಪೀಠದಲ್ಲಿ ಮೂರ್ತಗೊಳಿಸಿ ಅಷ್ಟವಿಧಾರ್ಚನೆಗಳಿಂದ ಪೂಜಿಸಿ ವಂದಿಸಿ ನುತಿಸಿ ಅಷ್ಟೋತ್ತರ ಶತನಾಮಗಳನ್ನು ಪಠಿಸಿ ಪ್ರಸಾದವನ್ನು ಸ್ವೀಕರಿಸಿದರು

ಸೊಲ್ಲಾಪುರ

ಫಾಲ್ಗುನ ಶುದ್ಧ ೧೪ದಿವಸ ಸೊಲ್ಲಾಪುರದಲ್ಲಿ ನಂದಿಮಠದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಜಯಂತಿಯು ನೆರವೇರಿಸಲ್ಪಟ್ಟಿತು ಪ್ರಾತಃಕಾಲ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಪೂಜಾದಿಗಳೂ ಮಧ್ಯಾಹ್ನ ಗಣಾರಾಧನೆಯೂ ನೆರವೇರಿದವು ಸಾಯಂಕಾಲ ಶ್ರೀ ಷ|| ಬ್ರ|| ಷಡಕ್ಷರಶಿವಾಚಾರ್ಯಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಜರುಗಿತು ವೀರಶೈವ ಸದಾಚಾರ ಸ್ತ್ರೀ ಸಮಾಜದ ಬಾಲಿಕೆಯರು. ಆಚಾರ್ಯರ ಪದಗಳನ್ನು ಹಾಡಿ ಪಂಚಾಚಾರ್ಯರ ಲಿಂಗಾವತಾರ ನಾಟಕವನ್ನು ಸಂವಾದರೂಪದಿಂದ ಆಡಿ ತೋರಿಸಿದರು ಶ್ರೀ ರಾಮಚಂದ್ರಪ್ಪ ಜಾಡೇ ಮಲ್ಲಿಕಾರ್ಜುನಪ್ಪ ಮಾಲೀ ಗುರುಲಿಂಗಪ್ಪ ನಡಗಿರಿ, ವೀರಭದ್ರಪ್ಪ ಇವರು ಗುರುಭಕ್ತಿ ವಿಷಯದಮೇಲೆ ಭಾಷಣಗಳನ್ನು ಮಾಡಿದರು ಶ್ರೀ ಗುರುಬಾಯಿಮಠಪತ್ತಿ ಸೌ|| ಬಸಮ್ಮಾ ನಂದಿಮಠ ಇವರ ಭಾಷಣಗಳು ಆದಮೇಲೆ ಅಧ್ಯಕ್ಷರ ಭಾಷಣವಾಯಿತು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು

ಸೌ|| ಬಸಮ್ಮಾ ನಂದಿಮಠ

ಬಮ್ಮಿಗಟ್ಟಿ

ಧಾರವಾಡ ಜಿ|| ಕಲಘಟಗಿ ತಾ|| ಬಮ್ಮಿಗಟ್ಟಿ ಗ್ರಾಮದಲ್ಲಿ ಇದೇ ಫಾಲ್ಗುನ ಶು|| ೧೪ ದಿವಸ ಶ್ರೀ ಅಂಕಲಗಿ ಮಠದಲ್ಲಿ ಶ್ರೀ ಜಗದ್ಗುರು ಮೂರ್ತಿಗೆ ರುದ್ರಾಭಿಷೇಕ ಬಿಲ್ವಾರ್ಚನಾದಿಗಳು ವೇ|| ಚಿಕ್ಕಮಠದ ಗಂಗಾಧರಯ್ಯನವರಿಂದ ನೆರವೇರಿಸಲ್ಪಟ್ಟವು ಅಂದು ಗ್ರಾಮವೆಲ್ಲವೂ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿತು ಅಲ್ಲದೆ ಪರಮತೀಯರೂ ಕೂಡ ತಮ್ಮ ತಮ್ಮ ಮನೆಗಳನ್ನು ಶೃಂಗರಿಸಿದ್ದರು ಸಾಯಂಕಾಲ ೫ ಘಂಟೆಗೆ ಜಗದ್ಗುರು ಲಿಂಗೋದ್ಭವಮೂರ್ತಿಯ ಆಂದೋಲಿಕಾ ಮಹೋತ್ಸವವು ಸದರಿ ಮಠದಿಂದ ಶ್ರೀ ಗುರುಸೇವಾ ಭಜನಾಸಂಘದವರಿಂದಲೂ ಹಾಗೂ ಸಕಲ ವಾದ್ಯ ವೈಭವಗಳಿಂದಲೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾಯ್ದು ರಾತ್ರಿ ೮ ಘಂಟೆಗೆ ಗ್ರಾಮದೇವತೆಯ ದೇವಾಲಯಕ್ಕೆ ತಲ್ಪಿತು ಅಲ್ಲಿ ರೇಣುಕ ಜಯಂತಿ ಕಮಿಟಿಯವರ ವಿನಂತಿಯ ಮೇರೆಗೆ ದಯಮಾಡಿಸಿದ ಪರಮ ತಪಸ್ವಿ ಷ|| ಬ್ರ|| ಹುಬ್ಬಳ್ಳಿ ಹನ್ನೆರಡುಮಠದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಮೊದಲು ಕಂಬಿ ಮಲ್ಲಯ್ಯನವರ ಪ್ರಾಸ್ತಾವಿಕ ಭಾಷಣವಾದನಂತರ ಸತ್ತಿಗೇರಿ ಶ್ರೀ ಪಟ್ಟಾಧ್ಯಕ್ಷರ ಭಾಷಣವಾಯಿತು ಅನಂತರ ಅಧ್ಯಕ್ಷರು ರೇಣುಕ ಜಯಂತಿಯ ಬಗ್ಗೆ ವಿಸ್ತಾರವಾಗಿ ಬೋಧಿಸಿದರು ಸಭಿಕರೆಲ್ಲರೂ ಶ್ರೀ ರೇಣುಕರ ಮಹಾಮಹಿಮೆಯನ್ನು ಶ್ರೀಗಳವರ ಅಮೃತವಾಣಿಯಿಂದ ಕೇಳಿ ಆನಂದಭರಿತರಾದರು ಅನಂತರ ಸದರಿ ಶ್ರೀಗಳವರು ತಾವು ಶ್ರೀ ಗೋಕರ್ಣಕ್ಷೇತ್ರದಲ್ಲಿ ಕಟ್ಟುತ್ತಿರುವ ವೀರಶೈವ ಮಠದ ವಿಷಯವನ್ನು ತಿಳಿಸಿ ಹೇಳಿದ ನಂತರ ಸದರಿ ಮಠದ ಸಹಾಯಾರ್ಥವಾಗಿ ೩೦೦ ರೂಪಾಯಿಗಳ ವಾಗ್ದಾನವಾಯಿತು ಬಳಿಕ ಸಭಾಕಾರ್ಯವು ಮುಕ್ತಾಯವಾಯಿತು ಜಯಂತಿಯ ಕಾರ್ಯಕ್ಕೆ ಸಹಾಯ ಸಹಕಾರಗಳನ್ನಿತ್ತ ಸರಪಂಚರಾದ ಬಿ ಪಿ ನೆನಕ್ಕಿಯವರಿಗೂ ರೇಶನ್ ಅಂಗಡಿಯ ಚೇರಮನ್ನರಾದ ಮಲ್ಲನಕೊಪ್ಪದ ವೀರಭದ್ರಪ್ಪನವರಿಗೂ ಜಗದ್ಗುರು ರೇಣುಕನು ಆಯುರಾರೋಗ್ಯಭಾಗ್ಯಗಳನ್ನೀಯಲೆಂದು ಹಾರೈಸುತ್ತೇನೆ

ದೊಡ್ಡಮನೆ ಕಲ್ಲಪ್ಪ

ಶ್ರೀ ಸಿದ್ಧಲಿಂಗ ವಿಜಯನಾಟಕ

ಬಳ್ಳಾರಿ ಜಿ| ಕೊಟ್ಟೂರು ಗ್ರಾಮದಲ್ಲಿ ಕಳೆದ ಮಹಾಶಿವರಾತ್ರಿಯ ದಿವಸ ಮೇಲ್ಕಂಡ ನಾಟಕವು ಬಹು ಮನೋಹರವಾಗಿ ಅಭಿನಯಿಸಲ್ಪಟ್ಟಿತು ನಾಟಕವನ್ನು ನೋಡಲಿಕ್ಕೆ ಬಹು ಜನರು ಆಗಮಿಸಿದ್ದರು ಈ ನಾಟಕದಲ್ಲಿ ಬಾಲ ಸಿದ್ಧಲಿಂಗನ ಪಾರ್ಟನ್ನು ವಹಿಸಿರುವ ಕೆ ಎಂ ರೇವಣಶಾಸ್ತ್ರಿ ಎಂಬ ಬಾಲಕನೂ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪಾರ್ಟನ್ನು ವಹಿಸಿರುವ ಭದ್ರಯ್ಯನೆಂಬಾತನೂ ತಮ್ಮ ಪಾತ್ರಗಳನ್ನು ಬಹು ಸಮರ್ಪಕವಾಗಿ ಅಭಿನಯಿಸಿದರು. ಆಗ್ಗೆ ಅನೇಕರು ಆನಂದಭರಿತರಾಗಿ ಭಾಷಣಮಾಡಿದರು ನಾಟಕ ಕಂಪೆನಿಯ ಪ್ರೊಪ್ರೈಟರರಾದ ವೇ|| ಚನ್ನಬಸವಶಾಸ್ತ್ರಿಗಳವರು ಭಾಷಣಮಾಡುತ್ತಾ ಈ ನಾಟಕವು ಈರೀತಿ ಯಶಸ್ವಿಯಾಗಿ ನೆರವೇರುವದಕ್ಕೆ ಆ ಜಗದ್ಗುರು ಸಿದ್ಧಲಿಂಗನ ಅನುಗ್ರಹವೇ ಮೂಲಕಾರಣವೆಂದೂ ನಿಮ್ಮಂತಹ ಗುರುಪೀಠಾಭಿಮಾನಿಗಳ ಸಹಾಯ ಮತ್ತು ಸಹಕಾರಗಳು ಇವಕ್ಕೆ ಸಾಧನವೆಂದೂ ಇದರಿಂದುಂಟಾಗುವ ಯಶಸ್ಸೆಲ್ಲವೂ ಪಂ| ಶ್ರೀ ಕಾಶೀನಾಥಶಾಸ್ತ್ರಿಗಳವರಿಗೆ ಸಲ್ಲಬೇಕಾದುದೆಂದೂ ಭಾಷಣಮಾಡಿ ಸರ್ವರನ್ನೂ ಸಂತೋಷಪಡಿಸಿದರು ಶ್ರೀ ಜಗದ್ಗುರು ಸಿದ್ಧಲಿಂಗನ ಮಹಿಮಾತಿಶಯಗಳನ್ನು ನೋಡಿ ಪ್ರೇಕ್ಷಕರು, ಪರಮಾನಂದ ಭರಿತರಾದರು ಈಗಿನ ನಾಸ್ತಿಕ ಕಾಲದಲ್ಲಿ ಈ ವಿಧವಾದ ಭಕ್ತಿಪ್ರಧಾನ ನಾಟಕವನ್ನು ಅಭಿನಯಿಸಿ ಮಹಾಜನಗಳಲ್ಲಿ ಗುರುಭಕ್ತಿಯನ್ನು ಅಭಿವೃದ್ಧಿಗೊಳಿಸುವ ಕಾರ್ಯದಲ್ಲಿ ನಿರತರಾಗಿರುವ ಶ್ರೀ ಚನ್ನಬಸವಶಾಸ್ತ್ರಿಗಳವರಿಗೆ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನೀಯಲೆಂದು ಹಾರೈಸುವ

ಪಿ ಎಂ ಮರುಳಾರಾಧ್ಯ ಕೊಟ್ಟೂರು

ಸ್ವೀಕಾರ

ಧಾರವಾಡ ಜಿ|| ಲಕ್ಷ್ಮೇಶ್ವರಗ್ರಾಮದಲ್ಲಿರುವ ಮ|| ರಾ|| ಕಲ್ಲೂರು ಬಸಪ್ಪನವರ ಜ್ಯೇಷ್ಠ ಪುತ್ರ ಚಿ| ಲಿಂಗಪ್ಪನಿಗೂ ಬೆಟಗೇರಿಗ್ರಾಮದಲ್ಲಿರುವ ಮ|| ರಾ|| ಆಲೂರು ಬಸಪ್ಪನವರ ಪುತ್ರಿ ಚಿ|| ಸೌ|| ಪಾರ್ವತೆವ್ವನಿಗೂ ಮತ್ತು ಮ|| ರಾ|| ಕಲ್ಲೂರು ಬಸಪ್ಪನವರ ಜ್ಯೇಷ್ಠ ಪುತ್ರಿ ಚಿ| ಸೌ|| ಕಾಶವ್ವನಿಗೂ, ಆದರಗುಂಚಿಗ್ರಾಮದಲ್ಲಿರುವ ಮ|| ರಾ|| ತೋಟದ ರಾಚಪ್ಪನವರ ಜ್ಯೇಷ್ಠ ಪುತ್ರ ಚಿ| ಬಸವಣ್ಣೆಪ್ಪನಿಗೂ, ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ|| ರಾ|| ಕಲ್ಲೂರು ಬಸಪ್ಪನವರ ಸ್ವಗೃಹದಲ್ಲಿ ತಾ|| 9 2 1947 ನೆಯ ರವಿವಾರ ದಿವಸ ವಿವಾಹ ಮಹೋತ್ಸವವು ವೈಭವದಿಂದ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರು ಸಮರ್ಪಿಸಿದ 5 ರೂಪಾಯಿಗಳು ಲಕ್ಷ್ಮೇಶ್ವರ ಹಿರಿಯಮಠದ ವೇ|| ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಗೌಡಕುಂದಿ

ರಾಯಚೂರು ಡಿ|| ಸಿಂಧನೂರು ತಾಲೂಕು ಗೌಡಕುಂದಿ ಹಿರೇ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀಮಹೋತ್ಸವವನ್ನು ಮಹಾ ವೈಭವದಿಂದ ಜರುಗಿಸಲಾಯಿತು ಮೊದಲೇ ಪ್ರಕಟಿಸಿದಂತೆ ಆಜುಬಾಜು ಗ್ರಾಮಗಳ ಭಕ್ತ ಮಾಹೇಶ್ವರರೂ, ಭಜನಸಂಘದವರೂ, ಸಾವಿರಾರು ಜನರೂ ಸಮ್ಮಿಲಿತರಾಗಿದ್ದರು ಅಂದು ಪ್ರಾತಃಕಾಲ ೫ ಘಂಟೆಯಿಂದ ೧೦ ಘಂಟೆಯವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ರಜತಲಿಂಗೋದ್ಭವಮೂರ್ತಿಗೆ ಪರಮ ತಪೋನಿಧಿ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಶ್ರೀ ಶಿವಯೋಗಿಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಪೂಜಾದಿಗಳು ನೆರವೇರಿ ಗಣಾರಾಧನೆಯು ಜರುಗಿತು ಇದೇ ಸಮಯಕ್ಕೆ ಮಧ್ಯಪ್ರಾಂತ ಚಿತ್ರಕೂಟಪರ್ವತ ಯೋಗಾಶ್ರಮ ನಿವಾಸಿಗಳಾದ ಶ್ರೀಮತ್ಪರಮಹಂಸ ಜಯರಾಮಬಾಬಾಜಿ, ಶ್ರೀಮತ್ಪರಮಹಂಸ ಜಯಸೀತಾರಾಮ ತೀರ್ಥಜೀ ಎಂಬ ಇಬ್ಬರು ವಿದ್ಯಾವಂತರಾದ ಬ್ರಾಹ್ಮಣ ಸಾಧುಗಳು ಬಂದಿದ್ದರಿಂದ ದಿನ ಕಳೆಯು ಪ್ರಾಪ್ತವಾಗಿತ್ತು ಸಾಯಂಕಾಲ ೫ ಘಂಟೆಗೆ ಮಠದಲ್ಲಿ ಸಭೆಯು ಕೂಡಿತು ಸಭಾಧ್ಯಕ್ಷತೆಯನ್ನು ಸಿಂಧನೂರಿನ ಸುಪ್ರಸಿದ್ಧ ವಕೀಲರಾದ ಶ್ರೀಮಾನ್ ಸಿದ್ಧಲಿಂಗಪ್ಪನವರು ವಹಿಸಿದ್ದರು ಪ್ರಥಮದಲ್ಲಿ ಪಂಚಾಚಾರ್ಯರ ಮಂಗಲಗೀತೆಯಾದನಂತರ ಶ್ರೀಗಳವರು "ವಿಶ್ವರಂಗದಲ್ಲಿ ವೀರಶೈವರ ಸ್ಥಾನ ಮತ್ತು ಜಗದ್ಗುರುತ್ವ" ಎಂಬ ವಿಷಯಗಳ ಮೇಲೆ ಪಂಡಿತ ಪಾಮರರಿಗೂ ಸುಲಭವಾಗಿ ತಿಳಿಯುವಂತೆ ಸರಸವಾಗಿ ಬೋಧಿಸಿದರು ಅನಂತರ ಪರಮಹಂಸ ಜಯ ಸೀತಾರಾಮತೀರ್ಥಜೀಯವರು "ಜಗದ್ಗುರು ರೇಣುಕರು" ಎಂಬ ವಿಷಯದ ಮೇಲೆ ಹಿಂದೀ ಭಾಷೆಯಲ್ಲಿ ೨ ಘಂಟೆಯವರೆಗೆ ಭಾಷಣ ಮಾಡಿದರು ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗಪ್ರದಾನ ವಿಭೀಷಣ ವರಪ್ರದಾನ, ಅಗಸ್ತ್ಯರಿಗೆ ಶಿವಾದ್ವೈತೋಪದೇಶ ಇವೇ ಮೊದಲಾದ ಮಹತ್ವದ ವಿಷಯಗಳನ್ನು ತೆಗೆದುಕೊಂಡು ಸಪ್ರಮಾಣವಾಗಿ ವಿವರಿಸಿದರು ಮತ್ತು ಭರತಖಂಡದಲ್ಲಿರುವ ಸಮಸ್ತ ಕ್ಷೇತ್ರಗಳನ್ನು ಸಂದರ್ಶಿಸಿದರೂ ಉಂಟಾಗದ ಆನಂದವು [illegible] ಆತಿಥ್ಯವನ್ನು ಸ್ವೀಕರಿಸಲು ದಯಮಾಡಿಸಿದ್ದ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಉಪದೇಶಾಮೃತವನ್ನು ಸವಿದಾಗ ಉಂಟಾಗಿತ್ತೆಂದೂ ಇಂದಿನ ದಿನವು ನನ್ನ ಜನ್ಮದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ಶುಭದಿನವಾಗಿದೆಯೆಂದೂ, ಅಂಥ ಗುರುಸಾರ್ವಭೌಮರು ಇಹಲೋಕದಿಂದ ಕಣ್ಮರೆಯಾದುದು ಭಾರತದ ದುರ್ದೈವವೆಂದೂ ಹೇಳುತ್ತಿರುವಾಗ ಪರಮಹಂಸಜೀಯವರಿಗೆ ದುಃಖವು ಪ್ರವಾಹದಂತೆ ಒತ್ತರಿಸಿ ಒಂದು ಮುಂದೆ ಮಾತಾಡಲು ಶಕ್ತಿಯಿಲ್ಲದೆ ಗಳಗಳನೆ ಅತ್ತುಬಿಟ್ಟರು ಮಹಾಗುರುಗಳ ಅಗಲುವಿಕೆಯಿಂದ ಪರಮತೀಯರೂ ಸರ್ವಸಂಗಪರಿತ್ಯಾಗಮಾಡಿದವರೂ ಜ್ಞಾನಿಗಳೂ ಆದ ಪರಮಹಂಸಜೀಯವರಿಗೆ ಇಷ್ಟು ದುಃಖವಾಗುತ್ತಿರುವಾಗ ಸ್ವಮತೀಯರಿಗೆ ಎಷ್ಟು ದುಃಖವಾಗಿರುವದೆಂಬದನ್ನು ಹೇಳಲಿಕ್ಕೆ ಬರುವಂತಿಲ್ಲ ಅಧ್ಯಕ್ಷರು ಸಮಾರೋಪ ಭಾಷಣ ಮಾಡಿದನಂತರ ಮಹಾಮಂಗಳಾರತಿಯಾಗಿ ಪ್ರಸಾದವಿನಿಯೋಗವಾಯಿತು ಬಳಿಕ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಸಕಲವಿಧ ದೇಶವಿದೇಶ ವಾದ್ಯಗಳಿಂದ ಮಹೋತ್ಸವವನ್ನು ನೆರವೇರಿಸಲಾಯಿತು

ಕೆ ಗಾದಿ ಲಿಂಗಪ್ಪ ಜಹಾಗೀರ, ಸಾಲಗುಂದ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ 'ಸಿದ್ಧಾಂತಶಿಖಾಮಣಿ'ಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಹಸ್ರಾರು ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ ಮತ್ತು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನಪದ್ಧತಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಹೇಳಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ **ಈ ಗ್ರಂಥಕ್ಕೆ** ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದ ಕೂಡಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಒಪಾಧಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುಭಕ್ತಿಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಪಾಕೆಟ್ಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ	೮ ಆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
ಸದ್ಬೋಧರತ್ನಾವಳಿ	೮ ಆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದ, ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
[illegible] (संस्कृत)	३
[illegible] (मराठी)	१
[illegible] (वीरशैवभाष्य-संस्कृत)	१
सिद्धांतशिखामणि (मूल)	८
[illegible] (संस्कृत)	२

ವ್ಯವಸ್ಥಾಪಕರು—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

-ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ಏಪ್ರಿಲ್ ೧೯೪೭ [ಸಂಚಿಕೆ ೪೯

ಪುಣ್ಯದಿನಮಹೋತ್ಸವ, ಧಾರವಾಡ

ಧಾರವಾಡ ನಗರದಲ್ಲಿ ಡಾ॥ ಶಾಂತವೀರಸ್ವಾಮಿ ಕಿತ್ತೂರು ಇವರ ಮನೆಯಲ್ಲಿ ಪರಮತಪೋನಿಧಿಗಳೂ, ಸದಾಚಾರಸಂಪನ್ನರೂ, ಶಿವಪೂಜಾನಿಷ್ಠರೂ, ಭಕ್ತೋದ್ಧಾರನಿರತರೂ ಆದ ಮಂಗಳೂರ ಅರಳೆಲೆ ಮಠದ ಕೈ॥ ಪಟ್ಟದಸ್ವಾಮಿಗಳ ಪುಣ್ಯದಿನೋತ್ಸವವು ಯುಗಾದಿಯ ದಿವಸ ಒಳ್ಳೆ ವೈಭವದಿಂದ ನೆರವೇರಿಸಲ್ಪಟ್ಟಿತು. ಬೆಳಗ್ಗೆ ಶ್ರೀಗಳವರ ಭಾವಚಿತ್ರಕ್ಕೆ ಪೂಜೆಯಾದ ಮೇಲೆ ಗಣಾರಾಧನೆ ಆಯಿತು ಸಾಯಂಕಾಲ ೮ ಘಂಟೆಗೆ ನಾನಾ ಪುಷ್ಪಗಳಿಂದಲಂಕೃತವಾದ ಮೋಟಾರ ಕಾರಿನಲ್ಲಿ ಶ್ರೀಗಳವರ ಭಾವಚಿತ್ರದ ಉತ್ಸವವು ಧಾರವಾಡದ ಮುಖ್ಯ ಬೀದಿಗಳಲ್ಲಿ ಜರುಗಿ ಮರಳಿ ಬಂದನಂತರ ಭಾವಚಿತ್ರವನ್ನು ಉನ್ನತಾಸನದಲ್ಲಿ ಮಂಡಿಸಿ ಸಭೆಯು ಪ್ರಾರಂಭವಾಯಿತು ವೇ॥ ತೋಟಪ್ಪಯ್ಯಶಾಸ್ತ್ರಿಗಳು ಅವರ ಮಹಿಮೆಯ ಮೇಲೆ, ವೇ॥ ಸಿದ್ಧವೀರಶಾಸ್ತ್ರಿ ಬೈನಾಪುರ ಗುರುಗಳ ಕರ್ತವ್ಯ, ಸೌ॥ ಸಿದ್ದಕ್ಕ ಟ್ರೇನಿಂಗ್ ಕಾಲೇಜ ಅಧ್ಯಾಪಿಕೆ ಇವರು ಶ್ರೀಗಳ ಲೀಲಾ ಸಂಬಂಧವಾಗಿ ಅತ್ಯಂತ ಮನೋಹರವಾಗಿ ಭಾಷಣ ಮಾಡಿದರು ಶ್ರೀಗಳವರ ಗದ್ದಿಗೆ ಕಟ್ಟಡದ ಬಗ್ಗೆ ಈಗಿನ ಅರಳೆಲೆ ಮಠದ ಪಟ್ಟದಸ್ವಾಮಿಗಳು ಶ್ರೀಗಳಲ್ಲಿ ಭಕ್ತಿಹುಟ್ಟುವಂತೆ ಆವೇಶಪೂರ್ಣನಾಗಿ ಭಾಷಣ ಮಾಡಿದ್ದನ್ನು ಕೇಳಿ ಶ್ರೀ ಡಾ॥ ಶಾಂತವೀರಸ್ವಾಮಿ ಕಿತ್ತೂರು ಮತ್ತು ಅವರ ಧರ್ಮಪತ್ನಿ ಸೌ॥ ಸಿದ್ಧಕ್ಕನವರು ಗುರುಗದ್ದಿಗೆಯ ಕಟ್ಟಡದ ಹತ್ತರ ೧ ಖೋಲಿಯನ್ನು ಕಟ್ಟಿಸಿಕೊಡಲು ವಾಗ್ದಾನಮಾಡಿ ತಮ್ಮ ಗುರುಭಕ್ತಿಯನ್ನು ವ್ಯಕ್ತಗೊಳಿಸಿದರು ವೇ॥ ಅರಳೆಲೆ ಮಠದ ತೋಟಪ್ಪಯ್ಯನವರ ಪುತ್ರರಾದ ವೇ॥ ಷಡಕ್ಷರಯ್ಯನವರು ಒಂದು ಖೋಲಿ ಕಟ್ಟಿಸಿಕೊಡಲು ಅತ್ಯಂತ ಉತ್ಸಾಹದಿಂದ ವಾಗ್ದಾನ ಮಾಡಿದರು ಇವರಿಗೆ ಜಗದಾಚಾರ್ಯರು ಸನ್ಮಂಗಲವನ್ನೀಯಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ

ಪುಣ್ಯದಿನಸಮಾರಂಭ, ಗದಗ

ನಿಜಾಮ ಇಲಾಖಾ ಕೊಪ್ಪಳ ಜಿಲ್ಲಾ ಮಂಗಳೂರು ಅರಳೆಲೆ ಮಠದ ಕೈ॥ ಶ್ರೀ ಪಟ್ಟದಸ್ವಾಮಿಗಳವರ ಪುಣ್ಯದಿನವು ಯುಗಾದಿ ದಿವಸ ಗದಗಿನಲ್ಲಿರುವ ವೇ॥ ಅರಳೆಲೆ ಮಠದ ಚಂದ್ರಶೇಖರಯ್ಯನವರ ಮನೆಯಲ್ಲಿ ವೈಭವದಿಂದ ನೆರವೇರಿತು. ಪ್ರಾತಃಕಾಲ ಶಿವೈಕ್ಯ ಗುರುಗಳ ಭಾವಚಿತ್ರಕ್ಕೆ ಪೂಜೆಯಾದ ಮೇಲೆ ಗಣಾರಾಧನೆಯು ನಡೆಯಿತು. ಸಾಯಂಕಾಲ ೭ ಘಂಟೆಗೆ ಶ್ರೀ ಚಿಕ್ಕಮಣ್ಣೂರುಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಸೇರಿ ಮೂರು ತಾಸುಗಳವರೆಗೆ ಗುರುಭಕ್ತಿಯ ಬಗ್ಗೆ ಉಪನ್ಯಾಸಗಳು ನಡೆದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀಜಗದ್ಗುರು ಪಂಚಾಚಾರ್ಯ ಸೇವಾಸಂಘ ಗದಗ

ಸ್ತುತ್ಯವಾದ ದಾನ

ಬಳ್ಳಾರಿ ಜಿಲ್ಲಾ ಆದ್ವಾನಿ ತಾಲೂಕು ಎಮ್ಮಿಗನೂರು ಗ್ರಾಮದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಶಾಲೆಯು ಪ್ರಾರಂಭವಾಗಿ ೮-೧೦ ವರ್ಷಗಳು ಗತಿಸಿದ್ದರೂ ಆ ಪಾಠಶಾಲೆಗೆ ತಕ್ಕ ಕಟ್ಟಡವು ಪ್ರಾಪ್ತವಾಗುವ ಸುಯೋಗವು ಈವರೆಗೂ ಒದಗಿದ್ದಿಲ್ಲ

ಈವರ್ಷ ಸ್ಥಳದ ವರ್ತಕ ಮಹಾಜನರಿಂದಲೂ ಪುರಜನರಿಂದಲೂ ಐವತ್ತೈದು ಸಾವಿರ ರೂಪಾಯಿಗಳು ಶೇಖರಿಸಲ್ಪಟ್ಟವು ಈ ಹಣವು ಕಟ್ಟಡಕ್ಕೆ ಸಾಲದಾಯಿತು ಈ ಕೊರತೆಯನ್ನು ತಿಳಿದು ಆಗರ್ಭಶ್ರೀಮಂತರಾದ ವೀರಶೈವ ಧರ್ಮಾಗ್ರಣಿ ಶ್ರೀ ನೌಲಿ ಕೈರೂಪಪ್ಪನವರು ತಮ್ಮ ಆತ್ಮೀಯರಾದ ಮಾನಿಡಿ ಈಶ್ವರಮ್ಮ ಮತ್ತು ಜ॥ ತಿಪ್ಪಣ್ಣ ಇವರೀರ್ವರ ಸ್ಮಾರಕವಾಗಿ ಐವತ್ತೈದುಸಾವಿರ ರೂಪಾಯಿಗಳನ್ನು ಹೈಸ್ಕೂಲಿನ ನೂತನ ಭವನ ನಿರ್ಮಾಣಕ್ಕಾಗಿ ದಾನರೂಪವಾಗಿ ಕೊಡಲು ವಾಗ್ದಾನವನ್ನಿತ್ತಿರುವರು ಈ ಮಹಾಶಯರ ದಾನವು ಚಿರಸ್ಮರಣೀಯವಾಗಿರುವದು

ವಜ್ರಗಿರಿ ಬಸವಣ್ಣ

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಧ್ವಜಾರೋಹಣ ಸಮಾರಂಭ ಗೌಡಕುಂದಿ

ರಾಯಚೂರು ಡಿ॥ ಶಿಂದನೂರು ತಾಲೂಕು ಗೌಡಕುಂದಿ ಹಿರೇಮಠದಲ್ಲಿ ಯುಗಾದಿ ದಿವಸ ಪ್ರತಿವರ್ಷ ಪದ್ಧತಿಯಂತೆ ಪೂರ್ವದ ಪಟ್ಟಾಧಿಕಾರಿಗಳವರ ಗದ್ದುಗೆಗಳ ಗೋಪುರಕ್ಕೆ ಪಂಚವರ್ಣದ ಧ್ವಜಾರೋಹಣ ಸಮಾರಂಭವನ್ನು ಮಹಾ ವೈಭವದಿಂದ ನೆರವೇರಿಸಲಾಯಿತು ಪ್ರಾತಃಕಾಲ ಮಠಾಧಿದೈವತವಾದ ಶ್ರೀ ಮರುಳಸಿದ್ಧೇಶ್ವರಸ್ವಾಮಿಗೆ ಏಕಾದಶ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನಾದಿಗಳು ಜರುಗಿದನಂತರ ಗಣಾರಾಧನೆಯು ನಡೆಯಿತು ಮಧ್ಯಾಹ್ನ ೫ ಘಂಟೆಗೆ ಸಭೆಯು ಕೂಡಿತು ಸಭೆಗೆ ಸಾವಿರಾರು ಜನರು ಸಮ್ಮಿಳಿತರಾಗಿದ್ದರು ಮೊದಲು ಜಗದಾಚಾರ್ಯರ ಮಂಗಲಗೀತೆಯೂ, ವಿ ಆರ್ ಹಿರೇಮಠ, ಇವರ ಪಿಟೀಲು, ಕೊಳಲು, ವಾದ್ಯಗಳೊಡನೆ ಸಂಗೀತವೂ ನಡೆದನಂತರ ವೇ॥ ಬಿ ಎಮ್ ರುದ್ರಾರಾಧ್ಯಶಾಸ್ತ್ರಿಗಳಿಂದ ಹೊಸ ವರ್ಷದ ಪಂಚಾಂಗಶ್ರವಣವು ನಡೆಯಿತು ಆಮೇಲೆ ಮಠಾಧಿಪತಿಗಳಾದ ಪರಮತಪೋನಿಧಿ ಚರಪಟ್ಟಾಧ್ಯಕ್ಷ ಶ್ರೀ ಶಿವಯೋಗಿಶಿವಾಚಾರ್ಯಸ್ವಾಮಿಗಳವರು "ಮಾನವ ಧರ್ಮ" ಎಂಬ ವಿಷಯವಾಗಿ ೧ ಘಂಟೆಯವರೆಗೆ ಭಾಷಣಮಾಡಿದರು ಅನಂತರ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಭಾವಚಿತ್ರವನ್ನು ಮೂರ್ತಿಮಾಡಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಲಾಯಿತು ಅಂದಿನ ವಿಶೇಷ ಖರ್ಚುಗಳನ್ನೆಲ್ಲ ಪೋಲೀಸ್ ಪಾಟೀಲ ಪಂಪನಗೌಡರೇ ಮೊದಲಾದ ಭಕ್ತಮಂಡಲಿಯವರು ವಹಿಸಿಕೊಂಡರು ಈ ಪ್ರಾಂತದಲ್ಲಿ ೪ ೫ ವರುಷಗಳಿಂದ ದುರ್ಭಿಕ್ಷೆಯಿದ್ದರೂ ಇಲ್ಲಿಯ ಭಕ್ತಮಂಡಲಿಯವರು ಶ್ರೀ ಜಗದಾಚಾರ್ಯರ ಜಯಂತಿ ಮೊದಲಾದ ಮಹೋತ್ಸವಗಳನ್ನು ಜರುಗಿಸುತ್ತಿರುವುದು ಸ್ತುತ್ಯವಾಗಿದೆ ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ

ಪಟವಾರಿ ಗಾದಿ ಲಿಂಗಪ್ಪ ಜಹಗೀರದಾರ
ಸಂಸ್ಥಾನ ಸೋಮಲಾಪುರ

ಸ್ವೀಕಾರ

ಶಿವಮೊಗ್ಗ ಡಿ॥ ನ್ಯಾಮತಿ ಗ್ರಾಮದಲ್ಲಿರುವ ಮ॥ ರಾ॥ ಮೊಡ್ನೇಕಾರ ಶಿವಲಿಂಗಪ್ಪನವರ ಧರ್ಮಪತ್ನಿ ವೀರಮ್ಮನವರು ವಿವಾಹಿತರಾದ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ॥ ರಾ। ಜೀರಿಗೆ ವೀರಭದ್ರಪ್ಪನವರ ದ್ವಾರಾ ತಲ್ಪಿರುತ್ತವೆ

ಧಾರವಾಡದಲ್ಲಿರುವ ಡಾ ಶಾಂತವೀರಸ್ವಾಮಿ ಕಿತ್ತೂರ ಇವರ ಪುತ್ರಿ ಬಿ ಸೌ। ಜಗನ್ಮೋಹಿನಿಯನ್ನು ಮಂಗಳೂರು ಅರಳೆಲೆ ಮಠದ ವೇ॥ ತೋಟಪ್ಪಯ್ಯನವರ ಪುತ್ರ ಚಿ॥ ಪಂಚಾಕ್ಷರಯ್ಯನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವಧೂವರರ ಕಡೆಯವರು ಪ್ರಭಾಪ್ರೋತ್ಸಾಹಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಮಂಗಳೂರು ಅರಳೆಲೆ ಮಠದ ಶ್ರೀಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ॥ ಗೌಡಕುಂದಿ ಹಿರೇಮಠದಲ್ಲಿ ಯುಗಾದಿ ಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ ಪೋಲೀಸ್ ಪಾಟೀಲ ಪಂಪನಗೌಡರು 1 ರೂ ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ರಾಜಧಾನಿಯಲ್ಲಿ ಸೌದೆಯ ಅಭಾವ

ರಾಜಧಾನಿಯಲ್ಲುಂಟಾಗಿರುವ ಸೌದೆಯ ಅಭಾವವನ್ನು ಹೋಗಲಾಡಿಸಲು ಇಲ್ಲಿಗೆ ಗಾಡಿಯಲ್ಲಿ ಬರುವ ಸೌದೆಗಳ ಬೆಲೆಯನ್ನು ನಿಗದಿಮಾಡುವುದು, ದಲ್ಲಾಳಿಗಳ ಕೈವಾಡವನ್ನು ತಪ್ಪಿಸುವುದು ಮತ್ತು ಒಂದು ತಿಂಗಳಿಗೆ ಬೇಕಾಗುವುದಕ್ಕಿಂತ ಜಾಸ್ತಿಯಾಗಿ ಜನಗಳು ಸೌದೆ ದಾಸ್ತಾನು ಮಾಡುವುದನ್ನು ನಿಷೇಧಿಸುವುದು ಈ ವಿಚಾರಗಳಲ್ಲಿ ಮೈಸೂರು ಜಿಲ್ಲಾಧಿಕಾರಿಗಳೂ ಪೌರಸಭಾಧ್ಯಕ್ಷರೂ ಸರಕಾರಕ್ಕೆ ಬರೆದಿರುವುದಾಗಿ ತಿಳಿದುಬರುತ್ತದೆ. ಶಿ

ಪಂಚಾಚಾರ್ಯಪ್ರಭಾ.

೧೯೪೭ನೆ ಏ ಏಪ್ರಿಲ್ ತಾ|| ೭ನೇ ಸೋಮವಾರ

ಶಿವಯೋಗರಹಸ್ಯ

ಯೋಗಶಾಸ್ತ್ರಪ್ರವರ್ತಕರಾದ ಪತಂಜಲಿ ಮಹರ್ಷಿಗಳು 'ಯೋಗಶ್ಚಿತ್ತವೃತ್ತಿನಿರೋಧಃ' ಎಂಬ ಸೂತ್ರದಲ್ಲಿ ಚಿತ್ತವೃತ್ತಿಯನ್ನು ನಿರೋಧಮಾಡುವುದೇ 'ಯೋಗ'ವೆಂದು ಉಲ್ಲೇಖಿಸಿರುವರು ಚಿತ್ತವೃತ್ತಿನಿರೋಧಸಾಧನೀಭೂತವಾದ ಈ ಯೋಗವು ಮಂತ್ರಯೋಗ ಲಯಯೋಗ-ಹಠಯೋಗ ರಾಜಯೋಗ ಶಿವಯೋಗ ಎಂದು ಐದು ಪ್ರಕಾರವಾಗಿರುವುದು

ಏಕಾಕ್ಷರಂ ದ್ವ್ಯಕ್ಷರಂ ವಾ ಷಡಕ್ಷರಮಥಾಪಿ ವಾ
ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಯೋಗೀ ಜಪೇತ್ಸದಾ ||

ಏಕಾಕ್ಷರಾತ್ಮಕವಾದ 'ಓಂ' ಎಂಬ ಮಂತ್ರವನ್ನಾಗಲಿ, ದ್ವ್ಯಕ್ಷರಾತ್ಮಕವಾದ 'ಹಂಸ' ಅಥವಾ 'ಸೋಹಂ' ಎಂಬ ಮಂತ್ರವನ್ನಾಗಲಿ, ಷಡಕ್ಷರಾತ್ಮಕವಾದ 'ಓಂ ನಮಃ ಶಿವಾಯ' ಎಂಬ ಮಂತ್ರವನ್ನಾಗಲಿ, ಅಷ್ಟಾಕ್ಷರಾತ್ಮಕವಾದ 'ಓಂ ಹ್ರಾಂ ಹ್ರೀಂ ನಮಃ ಶಿವಾಯ' ಎಂಬ ಮಂತ್ರವನ್ನಾಗಲಿ ಮಂತ್ರಶಾಸ್ತ್ರಕ್ರಮವನ್ನನುಸರಿಸಿ ಮುಕ್ತಿಗೋಸುಗ ಜಪಿಸುವುದೇ 'ಮಂತ್ರಯೋಗ'ವೆನಿಸುವುದು

ಯಸ್ಯ ಚಿತ್ತಂ ನಿಜಧ್ಯೇಯೇ ಮನಸಾ ಮರುತಾ ಸಹ
ಲೀನಂ ಭವತಿ ನಾದೇ ವಾ ಲಯಯೋಗೀ ಸ ಏವ ಹಿ ||

ಯಾವನ ಚಿತ್ತವು ತನ್ನ ಧ್ಯಾನಕ್ಕೆ ಯೋಗ್ಯವಾದ ಮೂರ್ತಿಯಲ್ಲಾಗಲಿ ಅಥವಾ ಪ್ರಾಣಾಯಾಮದಿಂದ ಅಭಿವ್ಯಕ್ತವಾದ ನಾದದಲ್ಲಿಯಾಗಲಿ, ಮನೋಮಾರುತಗಳೊಡನೆ ಕೂಡಿ ಲಯವಾಗುವುದೋ ಅದು ಲಯಯೋಗವೆನಿಸುವುದು

ಭಕ್ತ್ಯಷ್ಟಾಂಗಮಾರ್ಗೇಣ ಮುದ್ರಾಬಂಧಾದಿಭಿಸ್ತಥಾ
ತಥಾ ಕೇವಲಕುಂಭೇನ ಹಠಯೋಗೀ ಪ್ರಕಾಶತೇ ||

ಯಮ ನಿಯಮ ಆಸನ ಪ್ರಾಣಾಯಾಮ-ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬ ಅಷ್ಟಾಂಗಗಳಿಂದಾಗಲಿ, ಮಹಾಮುದ್ರಾ ಮಹಾಬಂಧ ಮಹಾವೇಧ ಖೇಚರೀ-ಉಡ್ಡಿಯಾನ ಮೂಲಬಂಧ-ಜಾಲಂಧರಬಂಧ ವಿಪರೀತಕರಣೀ ವಜ್ರೋಲೀ ಶಕ್ತಿಚಾಲನಗಳೆಂಬ ದಶವಿಧ ಬಂಧಗಳಿಂದಾಗಲಿ, ಧೌತಿ-ಬಸ್ತಿ ನೇತಿ ತ್ರಾಟಕ ನೌಲಿ ಕಪಾಲಭಾತಿಗಳೆಂಬ ಷಟ್ಕರ್ಮಗಳಿಂದಾಗಲಿ ಅಥವಾ ರೇಚಕ ಪೂರಕ ಪ್ರಾಣಾಯಾಮಗಳಿಲ್ಲದೆ ಕೇವಲ ಕುಂಭಕಪ್ರಾಣಾಯಾಮದಿಂದಾಗಲಿ ವಾಯುವನ್ನು ವಶಮಾಡಿಕೊಳ್ಳುವುದು "ಹಠಯೋಗ"ವೆನಿಸುವುದು.

ತ್ರಿಷು ಲಕ್ಷ್ಯೇಷು ಯೋ ಬ್ರಹ್ಮಸಾಕ್ಷಾತ್ಕಾರಂ ಗಮಿಷ್ಯತಿ |
ಜ್ಞಾನೇನಾಥಮನೋವೃತ್ತಿರಹಿತೋ ರಾಜಯೋಗವಿತ್ ||

ಯಾವನು ಬಾಹ್ಯಲಕ್ಷ್ಯ ಮಧ್ಯಲಕ್ಷ್ಯ-ಅಂತರ್ಲಕ್ಷ್ಯಗಳಿಂದಾಗಲಿ ಅಥವಾ ಅಮನಸ್ಕಜ್ಞಾನ (ಅಂತರ್ಮುದ್ರಾಜ್ಞಾನ) ದಿಂದಾಗಲಿ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವನೋ, ಅವನು ಮನೋವ್ಯಾಪಾರಶೂನ್ಯನಾದ ರಾಜಯೋಗಿಯೆನಿಸುವನು ಈ ರೀತಿಯಾಗಿ ಆಚರಿಸುವುದೇ "ರಾಜಯೋಗ"ವೆನಿಸುವುದು

ಈ ನಾಲ್ಕುವಿಧವಾದ ಯೋಗಗಳಲ್ಲಿ ರಾಜಯೋಗವೇ ಶ್ರೇಷ್ಠವಾಗಿರುವುದು

ನ ಭೇದಃ ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತಃ |
ಶಿವಾರ್ಥಿನಾಂ ತಥಾಪ್ಯೇವಮುಕ್ತೋ ಬುದ್ಧೇಃ ಪ್ರವೃದ್ಧಯೇ ||

ರಾಜಯೋಗಕ್ಕೂ ಶಿವಯೋಗಕ್ಕೂ ಪಾರಮಾರ್ಥಿಕವಾಗಿ ಯಾವ ಭೇದವೂ ಇರುವುದಿಲ್ಲ ಆದರೂ ಪರಶಿವಬ್ರಹ್ಮಸಾಕ್ಷಾತ್ಕಾರಾಪೇಕ್ಷಿಗಳಾದ ಮುಮುಕ್ಷುಗಳ ಜ್ಞಾನಾಭಿವೃದ್ಧಿಗೋಸ್ಕರ ಶಿವಯೋಗವು ಬೇರೆಯಾಗಿ ಹೇಳಲ್ಪಟ್ಟಿದೆ

ಪ್ರತಿಪಾದ್ಯಸ್ತಯೋರ್ಭೇದಸ್ತಥಾ ಶಿವರತಾತ್ಮನಾಂ |
ತಸ್ಮಾನ್ನಸೀತಿಭಿರ್ಗ್ರಾಹ್ಯಃ ಶಿವಯೋಗಸ್ತು ಕೇವಲಃ ||

ಶಿವಪ್ರೀತ್ಯರ್ಥವಾಗಿ ರಾಜಯೋಗ ಶಿವಯೋಗಗಳಲ್ಲಿ ಭೇದವು ಹೇಳಲ್ಪಟ್ಟಿರುವುದರಿಂದ ಮೋಕ್ಷಾಪೇಕ್ಷಿಗಳು ಶಿವಯೋಗವನ್ನೇ ಆಚರಿಸಬೇಕು ರಾಜಯೋಗಕ್ಕೂ ಶಿವಯೋಗಕ್ಕೂ ಇರುವ ಭೇದವೇನೆಂದರೆ, ಪಾತಂಜಲಯೋಗಶಾಸ್ತ್ರದಲ್ಲಿ ಗುಣತ್ರಯಸಾಕ್ಷಾತ್ಕಾರವೇ ತಾರಕತ್ರಯವೆಂತಲೂ ಪ್ರಕೃತಿಯಲ್ಲಿ ಮನೋಲಯವೇ ಅಮನಸ್ಕವೆಂತಲೂ ಶಿವದು ಪುರುಷಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದೇ ರಾಜಯೋಗವೆಂದು ಹೇಳಲ್ಪಡುವುದು ಆದರೆ ಶಿವಾಗಮಗಳಲ್ಲಿ ಶಿವಶಕ್ತ್ಯಾಧಾರವಾದ ಮಹಾಕುಂಡಲಿನೀಜನಿತತಾರಕತ್ರಯಸಾಕ್ಷಾತ್ಕಾರದ್ವಾರಾ ಶಕ್ತಿಯಲ್ಲಿ ವೃತ್ತಿಜ್ಞಾನವನ್ನು ಲಯಗೊಳಿಸಲು ಸರ್ವತೋಮುಖವಾಗಿ ವ್ಯಾಪ್ತವಾಗುವ ಶಿವತ್ವಾಭಿವ್ಯಕ್ತಿಯೇ ಶಿವಯೋಗವೆಂದು ಹೇಳಲ್ಪಡುವುದು

ಜ್ಞಾನಂ ಶಿವಮಯಂ ಭಕ್ತಿಃ ಶೈವೀ ಧ್ಯಾನಂ ಶಿವಾತ್ಮಕಂ |
ಶಿವವ್ರತಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ |

ಈ ಶಿವಯೋಗವು—ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಪೂಜಾ ಎಂದು ಐದುಬಗೆಯಾಗಿದೆ ಶಿವಪೂಜೆಯು ಶಿವಜ್ಞಾನಾದಿಗಳನ್ನು ಗರ್ಭೀಕರಿಸಿಕೊಂಡಿರುವುದರಿಂದ, ಶಿವಪೂಜೆಯೇ ಮುಖ್ಯವಾಗಿ ಶಿವಯೋಗವೆನಿಸುವುದು

ಶಿವಾರ್ಚನವಿಹೀನೋ ಯಃ ಪಶುರೇವ ನ ಸಂಶಯಃ |
ಸ ತು ಸಂಸಾರಚಕ್ರೇಽಸ್ಮಿನ್ನಜಸ್ರಂ ಪರಿವರ್ತತೇ |

ಯಾವನು ಶಿವಪೂಜಾರೂಪವಾದ ಶಿವಯೋಗದಿಂದ ವಿಮುಖನಾಗುವನೋ ಅವನು ಪಶುವೆನಿಸಿಕೊಳ್ಳುವನು ಅವನು ಈ ಸಂಸಾರಚಕ್ರದಲ್ಲಿ ಜನನಮರಣರೂಪದಿಂದ ಯಾವಾಗಲೂ ಸುತ್ತುತ್ತಿರುವನು

ಅಂತರ್ಯಾಗೋ ಬಹಿರ್ಯಾಗೋ ದ್ವಿವಿಧಂ ತಚ್ಛಿವಾರ್ಚನಂ|
ಮುಖ್ಯಾಭ್ಯಂತರೀ ಪೂಜಾ ಸಾ ಚ ಬಾಹ್ಯಾರ್ಚನೋದಿತಾ ||

ಶಿವಪೂಜೆಯು ಅಂತಃಪೂಜಾ ಬಹಿಃಪೂಜಾ ಎಂದು ಎರಡು ಬಗೆಯಾಗಿರುವದು ಅಂತಃಪೂಜೆಯೇ ಮುಖ್ಯವಾದುದು ಈ ಅಂತಃಪೂಜೆಯು ಬಾಹ್ಯಲಿಂಗಪೂಜೆಯಿಂದಲೇ ಉತ್ಪನ್ನವಾಗುವುದು ಬಾಹ್ಯವಾದ ಇಷ್ಟಲಿಂಗಪೂಜೆಯಿಲ್ಲದೆ ಅಂತರ್ಲಿಂಗಪೂಜೆಯು ಸಿದ್ಧಿಸುವುದಿಲ್ಲ ಅಂತರ್ಲಿಂಗಪೂಜೆಗೆ ಇಷ್ಟಲಿಂಗಪೂಜೆಯೇ ಮೂಲಸಾಧನವಾಗಿರುವದು

ತ್ರಿನೇತ್ರಂ ತ್ರಿಗುಣಾಧಾರಂ ತ್ರಿಮಲಕ್ಷಯಕಾರಣಂ |
ಸರ್ವಮಂಗಲಯಾ ದೇವ್ಯಾ ನಿಜವಾಮಾಂಗಶೋಭಿತಂ ||
ಪರಂ ಶಿವಂ ಹೃದಿ ಧ್ಯಾತ್ವಾ ನಿಶ್ಚಲೀಭೂತಮಾನಸಃ |
ಯಜೇದಾಭ್ಯಂತರದ್ರವ್ಯೈರವಧಾನೇನ ತನ್ಮಥಾ ||
ಶಮಾಂಬುಪರಿಷೇಚನಂ ಸಕಲಪೂರ್ಣಭಾವಾಂಬರಂ
ತ್ರಿಶಕ್ತಿಗುಣಸಂಯುತಂ ವಿಹಿತಯಜ್ಞಸೂತ್ರಂ ತಥಾ |
ಸ್ವಸಂವಿದನುಲೇಪನಂ ಸಮಧಿಕಾನುಕಂಪಾಕ್ಷತಾನ್
ಶಿವಾಯ ವಿನಿವೇದಯೇತ್ ಪ್ರಕಟಭಕ್ತಿಪುಷ್ಪಾಣಿ ಚ ||

ಧೂಪಮಾಂತರಚತುಷ್ಟಯೇನ ತ
ದ್ದೀಪಮಿಂದ್ರಿಯಗುಣೋತ್ಕರೇಣ ತು |
ಕಲ್ಪಯೇಚ್ಚ ಸುಖದುಃಖವರ್ಜಿತಂ
ಜೀವರೂಪಮುಪಹಾರಮಾಂತರೇ ||

ರಜಸ್ತಮಸ್ಸತ್ತ್ವಗುಣತ್ರಯಾಖ್ಯ
ತಾಂಬೂಲಕಂ ಪ್ರಾಣನಮಸ್ಕೃತಿಂ ಚ |
ಇತ್ಯೇವಮಾಭ್ಯಂತರಮುಖ್ಯಪೂಜಾ
ದ್ರವ್ಯಾಣಿ ಸಂಪಾದಯ ಶಂಕರಾಯ ||

ಶಿವಲಿಂಗಪೂಜಕನು ತ್ರಿನೇತ್ರಭೂಷಿತನೂ, ತ್ರಿಗುಣಾಧಾರನೂ, ಆಣವಾದಿಮಲತ್ರಯನಾಶಕಾರಣನೂ, ತನ್ನ ವಾಮಭಾಗದಲ್ಲಿ ಉಮಾದೇವಿಯಿಂದ ಶೋಭಿಸುತ್ತಿರುವವನೂ ಆದ ಪರಶಿವನನ್ನು ಹೃತ್ಕಮಲದಲ್ಲಿ ಧ್ಯಾನಿಸುತ್ತ ನಿಶ್ಚಲ ಮನಸ್ಸುಳ್ಳವನಾಗಿ, ಅಭ್ಯಂತರೋಪಚಾರಗಳಿಂದ ಪೂಜಿಸಬೇಕು ಅಭ್ಯಂತರೋಪಚಾರಗಳಾವುವೆಂದರೆ—ಶಾಂತಿಯೇ ಅಭಿಷೇಕಜಲ, ವಿಶ್ವವ್ಯಾಪಕಭಾವವೇ ವಸ್ತ್ರ, ಇಚ್ಛಾ, ಜ್ಞಾನ, ಕ್ರಿಯಾರೂಪಶಕ್ತಿತ್ರಯವೇ ಯಜ್ಞೋಪವೀತ, ಸ್ವಸ್ವರೂಪಜ್ಞಾನವೇ ಗಂಧ, ಅಧಿಕವಾದ ಭೂತದಯೆಯೇ ಅಕ್ಷತ, ಪರಿಶುದ್ಧವಾದ ಭಕ್ತಿಯೇ ಪುಷ್ಪ, ಅಂತಃಕರಣಚತುಷ್ಟಯವೇ ಧೂಪ, ಇಂದ್ರಿಯಗುಣೋತ್ಕರವೇ ದೀಪ, ಸುಖದುಃಖವರ್ಜಿತವಾದ ಆತ್ಮಸ್ವರೂಪವೇ ನೈವೇದ್ಯ, ಸತ್ವರಜಸ್ತಮೋಗುಣಗಳೇ ತಾಂಬೂಲ, ಪ್ರಾಣವೇ ನಮಸ್ಕಾರ

ಶಿವಯೋಗಸಾಧಕರಿಗೆ ಶಿವಯೋಗವು ಸಾಧ್ಯವಾಗಿಯೂ ಹಠಯೋಗವು ಸಾಧನವಾಗಿಯೂ ಇರುವುದು ಹಠಯೋಗವು ಬಾಹ್ಯಾಷ್ಟಾಂಗ-ಅಂತರಷ್ಟಾಂಗಗಳಿಂದ ಯುಕ್ತವಾಗಿರುವದು ವೀರಶೈವನು ಅಂತರಷ್ಟಾಂಗಾತ್ಮಕ ಹಠಯೋಗದ್ವಾರಾ ಶಿವಯೋಗವನ್ನು ಸಾಧಿಸಬೇಕು

ಯಮನಿಯಮಗುಣೈಶ್ಚ ಸ್ವಾತ್ಮಶುದ್ಧಿಂ ವಿಧಾಯ
ಸ್ವವಶವಿವಿಧಪೀಠೈರೇವ ಭೂತ್ವಾ ಸ್ಥಿರಾತ್ಮಾ |
ಅಸುನಿಯಮಜಲೇನ ಸ್ನಾಪಯೇದ್ದಿವ್ಯಲಿಂಗಂ
ಪ್ರಕಟಿತಚತುರಂಗಂ ಬಾಹ್ಯಮೇತದ್ವಿಧಾನಂ ||

ಶಂಭೋರಥೇಂದ್ರಿಯನಿವರ್ತನಮೇವ ಗಂಧೋ
ಧ್ಯಾನಂ ಪ್ರಸೂನನಿಚಯೋ ದೃಢಧಾರಣಾ ಸಾ |
ಧೂಪಃ ಸಮಾಧಿರಥ ಶುದ್ಧಮಹೋಪಹಾರ
ಮಾಭ್ಯಂತರಾಖ್ಯಚತುರಂಗವಿಧಾನಮೇತತ್ ||

ಏವಮಷ್ಟಾಂಗಯೋಗೇನ ಸದಾಽಂತಃಪದ್ಮಸದ್ಮನಿ |
ಪೂಜಯೇತ್ಪರಮಂ ದೇವಂ ಕಿಂ ಬಾಹ್ಯೈರ್ದೇವಪೂಜನೈಃ ||

ಯಮ-ನಿಯಮಗಳಿಗೆ ಸಂಬಂಧಪಟ್ಟ ಇಪ್ಪತ್ತು ಗುಣಗಳಿಂದ ಆತ್ಮಶುದ್ಧಿಯನ್ನು ಮಾಡಿಕೊಂಡು, ತನಗೆ ವಶಗಳಾದ ಪದ್ಮಾಸನಾದ್ಯಾಸನಗಳಿಂದ ಸ್ಥಿರವಾದ ದೇಹವುಳ್ಳವನಾಗಿ, ಪ್ರಾಣಾಯಾಮವೆಂಬ ಜಲದಿಂದ ದಿವ್ಯಲಿಂಗವನ್ನು ಅಭಿಷೇಚಿಸಬೇಕು ಇದು ಬಾಹ್ಯಚತುರಂಗವೆನಿಸುವುದು ಶಿವನಿಗೆ ನೇತ್ರಾದೀಂದ್ರಿಯವಿಷಯನಿವೃತ್ತಿರೂಪ ಪ್ರತ್ಯಾಹಾರವೇ ಗಂಧವು, ಆ ಇಂದ್ರಿಯವಿಷಯನಿವೃತ್ತಿಯಿಂದ ಅಂತರ್ಮುಖವಾದ ಮನಸ್ಸಿನಲ್ಲಿ ಮಾಡಲ್ಪಡುವ ಶಿವಧ್ಯಾನವೇ ಪುಷ್ಪವು, ಶಿವನನ್ನು ಧೃಢವಾಗಿ ಧರಿಸುವುದೇ ಧಾರಣವು, ಜ್ಞಾತೃಜ್ಞಾತರೂಪಸಮಾಧಿಯೇ ನೈವೇದ್ಯವು, ಇದೇ ಅಭ್ಯಂತರಚತುರಂಗವೆನಿಸುವುದು ಶಿವಯೋಗಸಾಧಕನು ಈರೀತಿಯಾಗಿರುವ ಅಷ್ಟಾಂಗಯೋಗದಿಂದ ತನ್ನ ಹೃತ್ಕಮಲದಲ್ಲಿ ಶಿವನನ್ನು ಪೂಜಿಸಬೇಕು

ವೀರಶೈವಮತದಲ್ಲಿ ಶಿವಯೋಗಕ್ಕೆ ಭಕ್ತ-ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ-ಐಕ್ಯ ಎಂಬ ಷಟ್‌ಸ್ಥಲಗಳೇ ಮುಖ್ಯಾಂಗಗಳಾಗಿರುತ್ತವೆ ಯಮನಿಯಮಾದ್ಯಷ್ಟಾಂಗಗಳು ಈ ಆರುಸ್ಥಲಗಳಲ್ಲಿಯೇ ಸಮಾವೇಶವಾಗುತ್ತವೆ

ಯಮೇನ ನಿಯಮೇನೈವ ಮನ್ಯೇ ಭಕ್ತ ಇತಿ ಸ್ವಯಂ |
ಸ್ಥಿರಾಸನಸಮಾಯುಕ್ತೋ ಮಾಹೇಶ್ವರಪದಾನ್ವಿತಃ ||
ಚರಾಚರಲಯಸ್ಥಾನಂ ಲಿಂಗಮಾಕಾಶಸಂಜ್ಞಕಂ |
ಪ್ರಾಣೇ ತದ್ವ್ಯೋಮ್ನಿ ಸಂಲೀನೇ ಪ್ರಾಣಲಿಂಗೀ ಭವೇತ್ ಪುಮಾನ್ ||
ಪ್ರತ್ಯಾಹಾರೇಣ ಸಂಯುಕ್ತಃ ಪ್ರಸಾದೀತಿ ನ ಸಂಶಯಃ |
ಧ್ಯಾನಧಾರಣಸಂಪನ್ನಃ ಶರಣಸ್ಥಲವಾನ್ ಸುಧೀಃ ||
ಲಿಂಗೈಕ್ಯೋಽದ್ವೈತಭಾವಾತ್ಮಾ ನಿಶ್ಚಲೈಕಸಮಾಧಿನಾ |
ಏವಮಷ್ಟಾಂಗಯೋಗೇನ ವೀರಶೈವೋ ಭವೇನ್ನರಃ ||

ಯಮನಿಯಮಗಳುಳ್ಳವನೇ 'ಭಕ್ತ'ನೆನಿಸುವನು ಆಸನದಿಂದ ಯುಕ್ತನಾದವನೇ 'ಮಾಹೇಶ್ವರ'ನೆನಿಸುವನು ಚರಾಚರಪ್ರಪಂಚಲಯಸ್ಥಾನಭೂತವಾದ ಲಿಂಗಾಕಾಶದಲ್ಲಿ ಪ್ರಾಣವು ಲೀನವಾಗಲು ಅವನು 'ಪ್ರಾಣಲಿಂಗಿ'ಯೆನಿಸುವನು. ಪ್ರತ್ಯಾಹಾರದಿಂದ ಕೂಡಿದವನು 'ಪ್ರಸಾದಿ' ಯೆನಿಸುವನು ಶಿವಧ್ಯಾನಧಾರಣಗಳಿಂದ ಕೂಡಿದವನು 'ಶರಣ'ನೆನಿಸುವನು. ನಿಶ್ಚಲಸಮಾಧಿಯಿಂದ ಕೂಡಿದವನು ಅದ್ವೈತಭಾವಾಪನ್ನನಾದ 'ಐಕ್ಯ'ನೆನಿಸುವನು ಈ ರೀತಿಯಾಗಿ ಅಷ್ಟಾಂಗರೂಪವಾಗಿರುವ ಷಟ್‌ಸ್ಥಲಗಳ ಆಚರಣೆಯುಳ್ಳವನೇ ವೀರಶೈವನೆನಿಸುವನೆಂದು ಲಿಂಗಪುರಾಣವು ಬೋಧಿಸುತ್ತಿರುವುದು

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ |
ಮಾನವಃ ಶಿವಯೋಗೇನ ಶಿವೋ ಭವತಿ ನಿಶ್ಚಯಂ ||
(ಲಿಂ. ಪು. ಉ. ಭಾ. ಅ. ೨೦)

ಕೀಟವು ಭ್ರಮರಯೋಗದಿಂದ ಸಾಕ್ಷಾತ್ ಭ್ರಮರವಾಗುವಂತೆ, ಮಾನವನು ಶಿವಯೋಗದಿಂದ ಕೇವಲ ಶಿವನೇ ಆಗುವನೆಂದು ಲಿಂಗಪುರಾಣದಲ್ಲಿ ಹೇಳಲ್ಪಟ್ಟಿರುವುದು. ಇದೇ ಶಿವಯೋಗದ ರಹಸ್ಯವು.

ವರ್ತಮಾನಸಂಗ್ರಹ

ಮದ್ರಾಸ್ ಸರ್ಕಾರದ ಆರ್ಥಿಕ ಮಂತ್ರಿಗಳು ನೆಲ್ಲೂರಿನಿಂದ ಮದ್ರಾಸಿಗೆ ಕಾರಿನಲ್ಲಿ ಬರುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಪುಂಡರು ಅವರ ಕಾರಿನ ಮೇಲೆ ಕಲ್ಲೆಸೆದರು ಆಗ್ಗೆ ಮಂತ್ರಿಗಳು ಹತ್ತಿರವಿದ್ದ ಮಿಲಿಟರಿ ಬಂಗಲೆಗೆ ಹೋಗಿ ಮಿಲಿಟರಿಯವರ ಸಹಾಯದಿಂದ ಬೇರೆ ರಸ್ತೆಯ ಮೂಲಕ ಮದರಾಸ್ ತಲುಪಿದರು

ಮೌಂಟ್ ಬ್ಯಾಟನ್ನರು ತಾವೇ ಕಡೆಯ ವೈಸರಾಯರೆಂದು ಹೇಳಿದರಂತೆ!

ನೂತನ ವೈಸರಾಯರಾದ ಲಾರ್ಡ್ ಮೌಂಟ್‌ಬ್ಯಾಟನ್ನರು ತಾವೇ ಭಾರತದ ಕಟ್ಟ ಕಡೆಯ ವೈಸರಾಯರೆಂದು ತಮ್ಮೊಡನೆ ಹೇಳಿರುವುದಾಗಿ ಗಾಂಧಿಯವರು ತಿಳಿಸಿದ್ದಾರಲ್ಲದೆ ಇದನ್ನು ತಾವು ಸಂಪೂರ್ಣವಾಗಿ ನಂಬುವುದಾಗಿಯೂ ಸಹ ಹೇಳಿದ್ದಾರೆ

ಗ್ರೀಸ್ ದೊರೆಯ ಮರಣ

ಗ್ರೀಸಿನ ರಾಜರಾದ ಎರಡನೇ ಜಾರ್ಜ್‌ರವರು ನಿಧನರಾದರು ಇವರ ತಮ್ಮಂದಿರಾದ ರಾಜಕುಮಾರ ಪಾಲ್‌ರವರು ಸಿಂಹಾಸನಾರೋಹಣ ಮಾಡಿದರು

ನರೇಂದ್ರರ ಸಭೆಯಿಂದ ಬಿಕಾನೇರ ರಾಜರ ಪರಿತ್ಯಾಗ

ಬೊಂಬಾಯಿಯಲ್ಲಿ ನಡೆಯುತ್ತಿರುವ ನರೇಂದ್ರರ ಸ್ಥಾಯಿ ಸಮಿತಿಯ ಸಭೆಯಿಂದ ಬಿಕಾನೇರ ಮಹಾರಾಜರು ಸಭಾಪರಿತ್ಯಾಗ ಮಾಡಿದರೆಂದು ವರದಿಯಾಗಿದೆ ಭಾರತದ ಭವಿಷ್ಯ ರಾಜ್ಯಾಂಗದ ಅಂತಿಮ ಘಟ್ಟದಲ್ಲಿ ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು ರಾಜ್ಯಾಂಗ ಸಭೆಯ ಮುಂದಿನ ಅಧಿವೇಶನದಲ್ಲಿ ಭಾಗ ವಹಿಸಬಹುದೆಂದು ಹಿಂದೆಯೇ ತೀರ್ಮಾನವಾಗಿದ್ದುದಕ್ಕೆ ಈಗಿನ ನಿರ್ಧಾರವು ವಿರೋಧವಾಗಿದೆಯೆಂದೂ, ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರಲು ತಡಮಾಡುವುದು ಸರಿಯಲ್ಲವೆಂದೂ, ಹೇಳಿ ಅವರು ಸಭೆಯಿಂದ ಹೊರಟುಹೋದರೆಂದು ತಿಳಿದುಬಂದಿದೆ.

ಮದರಾಸಿನಲ್ಲಿ ಮುಷ್ಕರ

ಮದರಾಸಿನ ಬಕಿಂಗ್‌ಹ್ಯಾಂ ಮತ್ತು ಕರ್ನಾಟಕ ಮಿಲ್ಸ್ ಕೆಲಸಗಾರರ ಮುಷ್ಕರಕ್ಕೆ ಸಹಾನುಭೂತಿಯನ್ನು ತೋರುವ ಸಲುವಾಗಿ ಮದ್ರಾಸ್ ನಗರದ ಅನೇಕ ಕಾರ್ಮಿಕರು ಮುಷ್ಕರ ಹೂಡಿದ್ದಾರೆ ಕಾರ್ಮಿಕರು ಮುಷ್ಕರ ಹೂಡದಂತೆ ಮುಖ್ಯ ಮಂತ್ರಿಗಳೂ ಮಂತ್ರಿವರ್ಗವೂ ಪಟ್ಟ ಪ್ರಯತ್ನವು ನಿಷ್ಫಲವಾಯಿತು ಗಲಭೆಯಾಗದಂತೆ ಪೋಲೀಸರು ಮದ್ರಾಸ್ ನಗರವನ್ನು ಕಾಯುತ್ತಿದ್ದಾರೆ ೧೪೪ ನೇ ಸೆಕ್ಷನ್ ಜಾರಿಮಾಡಲಾಗಿದೆ. ನಗರದಲ್ಲಿ ಸಂಚರಿಸುತ್ತಿದ್ದ ವಾಹನಗಳ ಮೇಲೆ ಕಲ್ಲೆಸೆದರೆಂದು ೨೨ ಜನರನ್ನು ದಸ್ತಗಿರಿ ಮಾಡಲಾಗಿದೆ

ಬೊಂಬಾಯಿಯಲ್ಲಿ ಗೋಳೀಬಾರು

೪೭ ಜನರ ಮರಣ ; ೧೩೭ ಜನರಿಗೆ ಗಾಯಗಳಾಗಿವೆ.

ಬೊಂಬಾಯಿಯ ಮೂರು ಪ್ರದೇಶಗಳಲ್ಲಿ ೩೦ ನೇ ತಾ|| ದಿನ ಹಠಾತ್ತಾಗಿ ಕೋಮುವಾರು ಗಲಭೆ ಆರಂಭವಾಗಿ ಪೋಲೀಸರು ೨೦ ಸಾರಿ ಗುಂಡುಹಾರಿಸಿದರು ಗಲಭೆಯಲ್ಲಿ ೪೭ ಮಂದಿ ಸತ್ತು ೧೩೭ ಮಂದಿಗೆ ಗಾಯಗಳಾಗಿವೆ

ಲಾಲ್‌ಬಾಗ್, ಬೆಂಡಿಬಜಾರ್, ನಳಬಜಾರ್‌ಗಳಲ್ಲಿ ಗಲಭೆ ಪ್ರಾರಂಭವಾಯಿತು. ಅಗ್ರಿಪಾಡ, ಮಹಾರ್ ಚಾಳ, ಪರೇಲ್, ಬೈಕುಲ್ಲಾಗಳಲ್ಲಿ ಇರಿತದ ಪ್ರಕರಣಗಳು ಸಂಭವಿಸಿವೆ. ವಾಹನಗಳಲ್ಲಿ ಹೋಗುತ್ತಿದ್ದವರ ಮೇಲೆ ಪುಂಡರು ಕಲ್ಲೆಸೆದರು ವಾಹನಗಳಿಗೆ ಬೆಂಕಿಯಿಟ್ಟರು ನಗರದಲ್ಲಿ ಮಿಲಿಟರಿ ಪಡೆಗಳು ಸಿದ್ಧವಾಗಿ ನಿಂತಿವೆ ಪರಿಸ್ಥಿತಿ ಹತೋಟಿಯಲ್ಲಿದೆ ಸಂಜೆ ೭ ರಿಂದ ಬೆಳಗ್ಗೆ ೯ ರ ವರೆಗೆ ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ

ಏಕ ವಿಶ್ವಕ್ಕಾಗಿ ದುಡಿಯಬೇಕು

ಏಕವಿಶ್ವವಿಲ್ಲದಿದ್ದಲ್ಲಿ ನಾನು ಬದುಕಲು ಆಶಿಸುವುದಿಲ್ಲ ನನ್ನ ಜೀವಮಾನದಲ್ಲೇ ಏಕ ವಿಶ್ವ ಸ್ಥಾಪನೆಯ ಕನಸು ನನಸಾಗಬೇಕೆಂಬುದು ನನ್ನ ಹಂಬಲ ಇಲ್ಲಿ ನೆರೆದಿರುವ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳೆಲ್ಲರೂ ದೃಢ ನಿರ್ಧಾರದಿಂದ 'ಏಕ ವಿಶ್ವದ' ಗುರಿಯ ಸಾಧನೆಗಾಗಿ ದುಡಿದರೆ ನನ್ನ ಆಶೆ ಈಡೇರುವುದರಲ್ಲಿ ಸಂದೇಹವಿಲ್ಲ ಎಂದು ಗಾಂಧಿಯವರು ಅಂತರ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ

ನೂಲಿನ ಹತೋಟಿ ಆಜ್ಞೆ ಉಲ್ಲಂಘನೆಗೆ ಶಿಕ್ಷೆ

ಅಪಾದಿತರಿಗೆ ಒಟ್ಟು ೨೪೯೦೦೦ ರೂಪಾಯಿಗಳ ಜುಲ್ಮಾನೆ

ಕೊಯಮುತ್ತೂರು ನಗರದಲ್ಲಿ ಹೋದ ಮೇ ತಿಂಗಳಲ್ಲಿ ೧೨೩ಕಟ್ಟು ನೂಲನ್ನು ಮಾರಿ ನೂಲಿನ ಹತೋಟಿಯ ಆಜ್ಞೆಗೆ ವಿರುದ್ಧವಾಗಿ ನಡೆದರೆಂಬ ಅಪಾದನೆಯ ಮೇಲೆ ಕೊಯಮುತ್ತೂರಿನ ಅಡಿಷನಲ್ ಡಿ|| ಮಾಜಿಸ್ಟ್ರೇಟ್‌ರವರು, ಲೋಟಸ್ ಮಿಲ್ಲಿನ ಡೈರೆಕ್ಟರುಗಳಿಗೆ ಮತ್ತು ಇತರರಿಗೆ ಶಿಕ್ಷೆ ವಿಧಿಸಿದರು

ಮೊದಲನೆ ಅಪಾದಿತರಾದ ರಾಜಾ ಸರ್ ಅಣ್ಣಾಮಲೈ ಚೆಟ್ಟಿಯಾರ್‌ರವರಿಗೆ ಮೂರು ಅಪಾದನೆಗಳ ಮೇಲೆ ೧೫,೦೦೦ರೂಪಾಯಿ ಜುಲ್ಮಾನೆ ಇವರು ವಿರುದ್ಧವಾಗಿ ನಡೆದುದು ಮತ್ತು ಕಾರ್ಖಾನೆಯ ಮಾರಾಟದ ದರಕ್ಕಿಂತಲೂ ಹೆಚ್ಚಿನ ದರದಲ್ಲಿ ನೂಲನ್ನು ಮಾರಿದುದು

ಮತ್ತಿಬ್ಬರು ಅಪಾದಿತರಾದ ಶ್ರೀ ಎಂ ಎ ಮುತ್ತಯ್ಯ ಚೆಟ್ಟಿಯಾರ್ ಮತ್ತು ಶ್ರೀ ರಾಮನಾಥ ಚೆಟ್ಟಿಯಾರ್ ರವರಿಗೆ ತಲಾ ೧೫,೦೦೦ ರೂಪಾಯಿ ಜುಲ್ಮಾನೆ ನಾಲ್ಕನೇ ಅಪಾದಿತರಾದ ಶ್ರೀ ಎಂ ಎ ಚಿದಂಬರ ಚೆಟ್ಟಿಯಾರ್‌ರವರಿಗೆ ಒಟ್ಟು ೭೦,೦೦೦ರೂಪಾಯಿ ಜುಲ್ಮಾನೆ

ಮತ್ತೆ ಮೂರು ಜನ ಚೆಟ್ಟಿಯಾರ್‌ರವರಿಗೂ ಮತ್ತು ಆಫೀಸ್ ಮ್ಯಾನೇಜರ್‌ರವರಿಗೂ ತಲಾ ೧೫,೦೦೦ ರೂ ಜುಲ್ಮಾನೆ ಒಂಭತ್ತನೇ ಅಪಾದಿತರಾದ ವಳ್ಳಿಯಪ್ಪ ಚೆಟ್ಟಿಯಾರ್ ಅವರಿಗೆ, ಹತೋಟಿಯ ಆಜ್ಞೆಯ ಉಲ್ಲಂಘನೆಯಲ್ಲಿ ಸಹಾಯ ಮಾಡಿದ ಅಪಾದನೆಯಮೇಲೆ ಮೂರು ತಿಂಗಳ ಕಠಿಣ ಶಿಕ್ಷೆ ಮತ್ತು ೭೦೦೦ ರೂಪಾಯಿ ಜುಲ್ಮಾನೆ

ಮತ್ತೊಂದು ಮೊಕದ್ದಮೆಯಲ್ಲೂ ಈ ಒಂಭತ್ತು ಜನ ಅಪಾದಿತರಿಗೂ ಮತ್ತು ಬಾಲವೆಂಕಟರಾಮಚೆಟ್ಟಿಯಾರ್‌ರವರಿಗೂ ಶಿಕ್ಷೆಯಾಯಿತು ಇದರಲ್ಲಿ ವಳ್ಳಿಯಪ್ಪ ಚೆಟ್ಟಿಯಾರ್ ಮತ್ತು ವೆಂಕಟರಾಮಚೆಟ್ಟಿಯಾರ್‌ರವರಿಗೆ ತಲಾ ೩ತಿಂಗಳ ಕಠಿಣ ಸಜಾ ಮತ್ತು ೪,೦೦೦ರೂಪಾಯಿ ಜುಲ್ಮಾನೆ ಇತರರಿಗೆ ೧೦,೦೦೦ ದಿಂದ ೪೦೦೦೦ ರೂಪಾಯಿ ವರೆಗೆ ಜುಲ್ಮಾನೆ

ಈ ಮೊಕದ್ದಮೆಗಳಲ್ಲಿ ಒಟ್ಟು ಜುಲ್ಮಾನೆ ೨,೪೯,೦೦೦ ರೂಪಾಯಿ ವಿಧಿಸಲಾಗಿದೆ. ಹಿಡಿದಿದ್ದ ನೂಲಿನ ಕಟ್ಟುಗಳು ಸರ್ಕಾರಕ್ಕೆ ಸಲ್ಲಬೇಕೆಂದು ತೀರ್ಮಾನವಾಯಿತು

ಬೆಂಗಳೂರು ನಗರದಲ್ಲಿ ಕೋಮುವಾರ ಗಲಭೆ

ಬೆಂಗಳೂರು ನಗರದಲ್ಲಿ ಗಲಭೆಯಾದ ನಿಮಿತ್ತವಾಗಿ ಕಳೆದ ಬುಧವಾರ ಮಧ್ಯಾಹ್ನ ೧೨ಗಂಟೆಯಿಂದ ೪೮ ಗಂಟೆಗಳಕಾಲ ಹಾಕಿದ್ದ ಕರ್ಫ್ಯೂ ಆಜ್ಞೆಯು ಶುಕ್ರವಾರ ಮಧ್ಯಾಹ್ನ ೧೨ಗಂಟೆಗೆ ಮುಗಿಯಿತು ಪುನಃ ೧೨ನೆಯ ತಾರೀಖಿನವರೆಗೆ ರಾತ್ರಿ ೯ ಘಂಟೆಯಿಂದ ಬೆಳಗ್ಗೆ ೫ ಘಂಟೆಯುವರೆಗೆ ಸದರಿ ಆಜ್ಞೆಯನ್ನು ಜಾರಿಮಾಡಿದ್ದಾರೆ. ಮಿಲಿಟರಿಯವರೂ ಪೋಲೀಸಿನವರೂ ಗಲಭೆಯಾದ ಸ್ಥಳಗಳಲ್ಲಿ ಗಸ್ತು ತಿರುಗುತ್ತಿದ್ದಾರೆ ಇದುವರೆಗೆ ಒಟ್ಟು ೬೯ ಜನ ಗಾಯಗೊಂಡಿದ್ದಾರೆ ೭ ಜನರು ಸತ್ತಿರುವರು ೭೫ ಜನರ ದಸ್ತಗಿರಿಯಾಗಿದೆ ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಅಪಾದನೆಯ ಮೇಲೆ ಪೋಲೀಸಿನವರು ೬೦ ಜನರನ್ನು ಅಡಿಷನಲ್ ಡಿ|| ಮ್ಯಾಜಿಸ್ಟ್ರೇಟರಾದ ಶ್ರೀ ಕೆ ಪಿ ರಾಮನಾಥಯ್ಯನವರ ಕೋರ್ಟಿಗೆ ಹಾಜರುಪಡಿಸಿ ಅವರಮೇಲೆ ಛಾರ್ಜು ಷೀಟು ಹಾಕಿದ್ದಾರೆ ಈಗ ನಗರವು ಶಾಂತವಾಗಿದೆ

ಗಲಭೆಗೆ ಕಾರಣರಾದವರಿಗೆ ದಂಡ

ಬೆಂಗಳೂರು ಅಡಿಷನಲ್ ಡಿ|| ಮ್ಯಾಜಿಸ್ಟ್ರೇಟರಾದ ಶ್ರೀ ಕೆ ಪಿ ರಾಮನಾಥಯ್ಯನವರು ಬೆಂಗಳೂರಿನಲ್ಲಿ ಗಲಭೆಗೆ ಕಾರಣರೆಂದು ಒಟ್ಟು ೫೦ ಜನರಿಗೆ ಶಿಕ್ಷೆ ವಿಧಿಸಿದ್ದಾರೆ ಕರ್ಫ್ಯೂ ಆಜ್ಞೆಯನ್ನು ಮೀರಿ ನಡೆದುದಕ್ಕಾಗಿ ೪೦ ಜನರಿಗೆ ತಲಾ ೨೦ರೂ ಜುಲ್ಮಾನೆ ತಪ್ಪಿದರೆ ಒಂದು ದಿವಸ ಸಾದಾಶಿಕ್ಷೆ, ಭಯೋತ್ಪಾದಕವಾದ ಆಯುಧಗಳನ್ನು ಹೊಂದಿದ್ದರೆಂಬ ಆಪಾದನೆ ಮೇಲೆ ೧೫ ಜನರಿಗೆ೫ರೂ ನಿಂದ ೨೦೦ರೂ ವರೆಗೆ ಜುಲ್ಮಾನೆಯನ್ನು ವಿಧಿಸಿದ್ದಾರೆ

ರಾಜಧಾನಿಯಲ್ಲಿ ಶಾಂತಿಪಾಲನ ಸಭೆ

ಮೈಸೂರು ಜಿಲ್ಲಾಧಿಕಾರಿಗಳು ಬೆಂಗಳೂರಿನಲ್ಲಿ ಉಂಟಾಗಿರುವ ಕೋಮುವಾರು ಪರಿಸ್ಥಿತಿಯಿಂದ ರಾಜಧಾನಿಯಲ್ಲಿಯೂ ಮುಂಜಾಗರೂಕತೆ ಕ್ರಮವನ್ನು ಕೈಗೊಳ್ಳಲು ಸಲಹೆಗಳನ್ನು ಕೇಳುವುದಕ್ಕಾಗಿ ನಾನಾ ಕೋಮಿನ ಮತ್ತು ರಾಜಕೀಯ ಪಂಗಡಗಳ ಮುಖಂಡರನ್ನೂ ಪತ್ರಿಕಾ ಪ್ರತಿನಿಧಿಗಳನ್ನೂ ಕರೆದು ಒಂದು ಸಭೆಯನ್ನು ಸೇರಿಸಿದ್ದರು ಪೌರಸಭಾಧ್ಯಕ್ಷರಾದ ಶ್ರೀ ಆರ್ ರಾಮಚಂದ್ರರಾವ್ ಬಾಂಧೋರೆಯವರೂ ಜಿಲ್ಲಾ ಪೋ|| ಸೂ|| ಶ್ರೀ ಹೆಬ್ಬೀಕರ್‌ರವರೂ ಹಾಜರಿದ್ದರು ಸುಮಾರು ೨|| ಘಂಟೆಗಳ ಕಾಲ ಸೌಹಾರ್ದಯುತವಾದ ಚರ್ಚೆನಡೆದು ಹಂಗಾಮಿಯಾಗಿ ಈ ಕೆಳಗೆ ಕಂಡ ಸಲಹೆಗಳಂತೆ ಕಾರ್ಯಕ್ರಮವನ್ನು ಕೈಗೊಳ್ಳಬಹುದೆಂದು ನಿರ್ಧರಿಸಲಾಯಿತು ಅವು ಯಾವುವೆಂದರೆ —

ನಗರದ ನಾನಾ ಮೊಹಲ್ಲಾಗಳಲ್ಲಿ ಹತ್ತು ಜನರಿಂದ ಕೂಡಿರತಕ್ಕ ಶಾಂತಿಪಾಲನ ಸಮಿತಿಗಳನ್ನೇರ್ಪಡಿಸುವುದು, ಹೆಂಡದ ಅಂಗಡಿಗಳನ್ನು ಊರಹೊರಗೆ ಹಾಕುವುದು, ಸರಾಯಿ ಅಂಗಡಿಗಳು, ಜೂಜಿನಕಟ್ಟೆ, ಮದತ್ ಖಾನಾಗಳು ಮತ್ತು ಗುಂಡಾಗಳಮೇಲೆ ನಿಗಾಇಡುವುದು, ಅರಾಕ್ ಷಾಪುಗಳನ್ನು ಸಾಯಂಕಾಲ ೭ ಘಂಟೆಗೆ ಮುಚ್ಚುವುದು, ಸಿನಿಮಾ ಮತ್ತು ನಾಟಕ ಮಂದಿರಗಳನ್ನೂ ೯ ಘಂಟೆಗೆ ನಿಲ್ಲಿಸುವುದು, ಜಟಕಾ ರೇಸುಗಳು ಮತ್ತು ಕುಸ್ತಿ ಪಂದ್ಯಗಳನ್ನು ನಿಲ್ಲಿಸುವುದು, ಹೊರಗಿನಿಂದ ಬರುವ ಕಮ್ಯೂನಿಷ್ಟರುಗಳ ಮೇಲೆ ನಿಗಾಇಡುವುದು, ಸುಳ್ಳು ವದಂತಿಗಳನ್ನು ತಡೆಗಟ್ಟುವುದು, ಶಾಂತಿಪಾಲನ ಕಾರ್ಯಗಳಲ್ಲಿ ಪತ್ರಿಕೆಗಳ ಸಹಕಾರವನ್ನು ಕೋರುವುದು ಇತ್ಯಾದಿ

ಮೈಸೂರು, ಚಾಮರಾಜನಗರ ಮತ್ತು ಬನ್ನೂರುಗಳಲ್ಲಿ ಪ್ರತಿಬಂಧಕಾಜ್ಞೆ

ಮೈಸೂರು ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರು ಮೈಸೂರು ಪೋಲೀಸ್ ಆಕ್ಟ್ ೩೯ನೇ ಸೆಕ್ಷನ್ ಪ್ರಕಾರ ಮೈಸೂರು ಸಿಟಿ, ಚಾಮರಾಜನಗರ ಮತ್ತು ಬನ್ನೂರು ಟೌನುಗಳೂ, ಮತ್ತು ಅವುಗಳ ಸುತ್ತುಮುತ್ತ ೫ ಮೈಲಿ ಫಾಸಲೆ ಅನ್ವಯಿಸುವಂತೆ ಒಂದು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದ್ದಾರೆ ಈ ಆಜ್ಞೆಯು ಮೂರು ತಿಂಗಳವರೆಗೆ ಜಾರಿಯಲ್ಲಿರುವುದು ಮೇಲ್ಕಂಡ ಸ್ಥಳಗಳಲ್ಲಿ ಕೋಮುವಾರು ಗಲಭೆಗೆ ಅವಕಾಶವಾಗಬಹುದಾದ್ದರಿಂದ ಯಾರೇ ಆಗಲೀ ಹಾನಿಕರವಾದ ಆಯುಧಗಳನ್ನು ಹಿಡಿದುಕೊಂಡು ತಿರುಗಾಡಕೂಡದು ಕಲ್ಲುಗಳನ್ನು ಶೇಖರಿಸಕೂಡದು ಘೋಷಣೆಗಳನ್ನು ಮಾಡಕೂಡದು. ಒಂದು ಕೋಮಿನವರು ಮತ್ತೊಂದುಕೋಮಿನವರನ್ನು ಉದ್ರೇಕಗೊಳಿಸುವಂತಹ ವೇಷಗಳನ್ನು ಧರಿಸಕೂಡದು ಉದ್ರೇಕಪೂರಿತವಾದ ಭಾಷಣಗಳನ್ನು ಮಾಡಲಾಗದು ರಸ್ತೆಯಲ್ಲಿ ಬಾಜಾಬಜಂತ್ರಿಗಳನ್ನು ನಡೆಸಕೂಡದು ಮುಂತಾಗಿ ಆಜ್ಞೆಯಲ್ಲಿ ನಮೂದಿಸಲಾಗಿದೆ.

ಸಿದ್ಧಾಂತಶಿಖಾಮಣಿ

—

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಆಗ ದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವದು. ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲಾ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವದು. ಈ ಗ್ರಂಥವು ಈಗ್ಗೆ ಸುಮಾರು ೫ಸಾವಿರ ವರ್ಷಗಳ ಪೂರ್ವದಲ್ಲಿ **ಶ್ರೀಶಿವಯೋಗಿಶಿವಾಚಾರ್ಯರಿಂ**ದ ... ರಚಿಸಲ್ಪಟ್ಟಿರುವದು. ... ... ಅನೇಕ ... ... ಯನ್ನು ... **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ... ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ಬರೆದು ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರೇ ಪಂಡಿತರ ... ... ಪಾತ್ರರ ಅನುಕೂಲಕ್ಕಾಗಿ ಬಹು ಕ್ರಮವಹಿಸಿ ... ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೫೦ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲೆಗಳನ್ನು ... ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿ ... ಇಂಥ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ... ... ಕಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯ ... ... ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಪಂಚ ... ... ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀಜಗದ್ಗುರು ... ... ಅಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀಜಗದ್ಗುರು ... ... ಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀರುದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
... ರೂರು ... ... ನಲ್ಲಿ ನೆರೆದಿದ್ದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸುಪ್ರಭಾತ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೨ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೭ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಸದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೬ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಶಿವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವ ಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಾಹತ್ವದ ಫೋಟೋಗಳ ಸಹಿತ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ
षट्स्थलकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಅಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೬ ಅಣೆ

ಸಂಪುಟ ೨೦ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ನೇ ಏಪ್ರಿಲ್ ೧೯೪೭ | ಸಂಚಿಕೆ ೫೦

ಶ್ರೀ ಕಾಶೀಪೀಠದಲ್ಲಿ ಯುಗಾದಿಮಹೋತ್ಸವ

ಶ್ರೀ ಭೂಕೈಲಾಸ ವಾರಾಣಸೀಕ್ಷೇತ್ರ ವಿರಾಜಮಾನ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಮಹಾಪೀಠದಲ್ಲಿ ೨೩-೩-೪೭ ದಿವಸ ಯುಗಾದಿಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ಅಂದು ಪ್ರಾತಃಕಾಲ ಗುರುಕುಲ ವಿದ್ವಾಂಸರು ಗಂಗಾಸ್ನಾನ ವಿಶ್ವನಾಥದರ್ಶನಾನುಷ್ಠಾನಗಳನ್ನು ನೆರವೇರಿಸಿದರು ಆಮೇಲೆ ಶ್ರೀ ವಿಶ್ವಾರಾಧ್ಯಭಗವತ್ಪಾದರಿಗೆ ಅಭಿಷೇಕಾದಿಗಳು ಸಾಂಗವಾದವು ಮಧ್ಯಾಹ್ನ ಸಕಲ ಯಾತ್ರಿಕರಿಗೂ ಸಂತರ್ಪಣೆಯಾಯಿತು

ಸಾಯಂಕಾಲ ಜ್ಞಾನಮಂದಿರದಲ್ಲಿ ಸಭೆಸೇರಿತು ಸಭೆಗೆ ನಾನಾಪ್ರಾಂತಗಳಿಂದ ಬಂದ ಯಾತ್ರಿಕರು ಕಿಕ್ಕಿರಿದು ಸೇರಿದ್ದರು ಜಗದ್ಗುರುಗಳು ಪೀಠವನ್ನಲಂಕರಿಸಿದರು ವೈದಿಕ ಮಂಗಲಸ್ತುತಿಯಾದಮೇಲೆ ಪಂಚಾಂಗಶ್ರವಣವು ಆರಂಭವಾಯಿತು ಶಿಖರಮಠದ ಶ್ರೀಗುರುಲಿಂಗಶಿವಾಚಾರ್ಯರು ಪಂಚಾಂಗಶ್ರವಣಮಾಡಿ ಭೂತಭವಿಷ್ಯದ್ವರ್ತಮಾನ ಕಾಲಗಳ ಧರ್ಮಾಧರ್ಮಾದಿ ಸಕಲ ವಿಚಾರಗಳನ್ನು ತಿಳಿಸಿ ಸರ್ವಜಿತ್ಸಂವತ್ಸರದ ಫಲವನ್ನು ಹೇಳಿದರು ಆಮೇಲೆ ವೀರಭದ್ರ ಜಗದ್ಗುರು, ಪಂ॥ ಕಾಶೀನಾಥ ಶಾಸ್ತ್ರೀಜೀ, ಪಂಡಿತ ಕೈಲಾಸಲಿಂಗಶಿವಾಚಾರ್ಯಜೀ ಮುಂತಾದವರ ಗ್ರಹಚಾರಫಲವನ್ನು ಹೇಳುವದಾಯಿತು

ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರಿಗೆ ಗ್ರಹಚಾರಫಲವು ಸರ್ವೋತ್ಕೃಷ್ಟವಾಗಿರುವದರಿಂದ ಈ ವರ್ಷದಲ್ಲಿ ಭಕ್ತೋದ್ಧಾರ, ಗುರುಕುಲೋದ್ಧಾರಾದ್ಯನಂತಕಾರ್ಯಗಳು ಇತ್ಯೋಪ್ಯತಿಶಯವಾಗಿ ಮಹಾವೈಭವದಿಂದ ನೆರವೇರುವವೆಂದು ಹೇಳಿದೊಡನೆ ಪ್ರಚಂಡ ಕರತಾಡನಗಳಾದವು ಆಮೇಲೆ ಪಂ॥ ಶ್ರೀ ಕೈಲಾಸಲಿಂಗಶಿವಾಚಾರ್ಯಸ್ವಾಮಿಗಳವರು ಸಕಲ ಅನಿಷ್ಟನಿವಾರಣಕ್ಕೆ ಶಿವಧ್ಯಾನ, ಶಿವಾನುಷ್ಠಾನಗಳೇ ಮುಖ್ಯಸಾಧನಗಳೆಂದೂ, ಅವುಗಳಿಂದಲೇ ಪರಮ ಸುಖ ಶಾಂತಿಗಳು ಸಾಧ್ಯಗಳೆಂದೂ ಹೇಳುತ್ತ ಜ್ಞಾನಮಂದಿರದ ವೈಭವವನ್ನು ಆನಂದವಾಗಿ ವರ್ಣಿಸಿ ಅದಕ್ಕೆ ಕಾರಣರಾದ ಜಗದ್ಗುರುಗಳವರ ಮಹಿಮೆಯನ್ನು ಶ್ಲಾಘಿಸಿದರು. ಅನಂತರ ಶ್ರೀ ಜಗದ್ಗುರುಗಳು ಸರ್ವಜಿತ್ಸಂವತ್ಸರ, ಇದರ ಕಷ್ಟನಷ್ಟಗಳು, ಮಾನವನು ಆಚರಿಸಬೇಕಾದ ಧರ್ಮಕೃತ್ಯ, ಶಿವವ್ರತ, ಮುಂತಾದ ಅನೇಕ ವಿಷಯಗಳನ್ನು ಸಮಸ್ತ ಭಕ್ತರು ಆನಂದಿತರಾಗುವಂತೆ ಅಪ್ಪಣೆಕೊಡಿಸಿದರು. ಆಮೇಲೆ ಮಂಗಲದೊಂದಿಗೆ ಸಭೆಯು ಪೂರ್ಣವಾಯಿತು.

ಓರ್ವ ಪ್ರತ್ಯಕ್ಷದರ್ಶಿ

ಕೊಂಡಕುಂದಿಸ್ವಾಮಿಗಳವರ ಆಗಮನ

ಕೊಂಡಕುಂದಿ ಗ್ರಾಮದ ಶಿಲಾಮಠದ ಶ್ರೀ ಶಿವಶಂಕರಶಿವಾಚಾರ್ಯಸ್ವಾಮಿಗಳವರು ಬಳ್ಳಾರಿ ತಾಲೂಕು ದಾಸರನಾಗೇನಹಳ್ಳಿ ಗ್ರಾಮಕ್ಕೆ ಯುಗಾದಿಯ ದಿವಸ ಆಗಮಿಸಿದರು ಅಲ್ಲಿಯ ಭಕ್ತಾದಿಗಳು ಇವರ ಉತ್ಸವಾದಿಗಳನ್ನು ನೆರವೇರಿಸಿದರು ಸ್ವಾಮಿಗಳು ಭಕ್ತಿಯ ವಿಷಯದಲ್ಲಿ ಅಮೋಘವಾದ ಭಾಷಣವನ್ನು ಮಾಡಿ ಸರ್ವರನ್ನು ಸಂತೋಷಪಡಿಸಿದರು ಅಲ್ಲಿಂದ ಇವರು ಬೆಣಕಲ್ಲು ಗ್ರಾಮಕ್ಕೆ ಉತ್ಸವದೊಡನೆ ಆಗಮಿಸಿ, ಅಲ್ಲಿಯೂ ಧರ್ಮಬೋಧೆಯನ್ನು ಮಾಡಿ ಭಕ್ತಾದಿಗಳಿಗೆ ಸಂತೋಷವನ್ನುಂಟು ಮಾಡಿದರು ಇವರು ತಮ್ಮ ಗ್ರಾಮದಲ್ಲಿ ಒಂದು ವೈದಿಕ ಜ್ಯೋತಿಷ ಪಾಠಶಾಲೆಯನ್ನು ಸ್ಥಾಪಿಸಿರುವರು ಅಲ್ಲಿ ೬ ೧೦ ಜನ ವಿದ್ಯಾರ್ಥಿಗಳಿದ್ದು ವೇ॥ ಶಿವಯೋಗಶಾಸ್ತ್ರಿಗಳು ಅಧ್ಯಾಪಕರಾಗಿರುವರು ಸದರಿ ಪಾಠಶಾಲೆಯ ವ್ಯವಸ್ಥೆಗಾಗಿ ಇವರು ಅಲ್ಲಲ್ಲಿ ಸಂಚರಿಸುತ್ತಿರುವರು ಸರ್ವರೂ ಇವರು ಕೈಕೊಂಡಿರುವ ಧರ್ಮಕಾರ್ಯಕ್ಕೆ ಸಹಾಯಮಾಡಿ ಪುಣ್ಯಭಾಗಿಗಳಾಗಬೇಕೆಂದು ಆಶಿಸುತ್ತೇನೆ

ಬೆಣಕಲ್ಲ ಮಠದ
ದೊಡ್ಡಬಸವಯ್ಯ

ಕೈಲಾಸ ಸಮಾರಾಧನೆ ಶ್ರೀ ಕ್ಷೇತ್ರ ಕಾಶೀ

ಶ್ರೀ ವಿಶ್ವಾರಾಧ್ಯಗುರುಕುಲದಲ್ಲಿ ಅಧ್ಯಯನ ಮಾಡುತ್ತಿರುವ ಕ್ಯಾಸನೂರು ಬೃಹನ್ಮಠದ ಶ್ರೀ ಜಯಗುರು ವೃಷಭ ಶಿವಾಚಾರ್ಯರ ತಂದೆಯವರಾದ ಧಾರವಾಡ ಡಿ॥ ಮಾಸೂರು ಹಿರೇಮಠದ ವೇ॥ ಪರಮೇಶ್ವರಪ್ಪಯ್ಯನವರು ೧೯-೩-೧೯೪೭ನೆಯ ದಿವಸ ಮಾಸೂರಲ್ಲಿ ಶಿವಾಧೀನರಾದರು ಇವರ ದೊಡ್ಡಪ್ಪನವರಾದ ನಿಸ್ರಾಣಿ ಮಠದ ವೇ॥ ಹಾಲಯ್ಯನವರು ೧೫ ೩ ೧೯೪೭ನೆಯ ದಿವಸ ನಿಸ್ರಾಣಿಯಲ್ಲಿ ಶಿವಾಧೀನರಾದರು ಎಂಬೀ ಉಭಯವಾರ್ತೆಗಳನ್ನು ತಿಳಿಸಲು ಅತ್ಯಂತ ವ್ಯಥೆಯಾಗುತ್ತದೆ ಈ ಉಭಯರ ಆತ್ಮಕ್ಕೆ ಶಿವಾನಂದ ಪ್ರಾಪ್ತ್ಯರ್ಥವಾಗಿ ಶ್ರೀ ಕ್ಯಾಸನೂರು ಶ್ರೀಗಳವರು ಶ್ರೀ ಕಾಶೀ ಜಗದ್ಗುರು ಮಹಾಪೀಠದಲ್ಲಿ ೩೦ ೩ ೪೭ನೆಯ ದಿವಸ ಕೈಲಾಸ ಸಮಾರಾಧನೆಯನ್ನೇರ್ಪಡಿಸಿ ಸರ್ವರನ್ನು ಮಿಷ್ಟಾನ್ನಗಳಿಂದ ತೃಪ್ತಿಪಡಿಸಿದರು

ಸಾಯಂಕಾಲದಲ್ಲಿ ಚಿತ್ರಭವನದಲ್ಲಿ ಪಂಡಿತ ಶ್ರೀ ಕೈಲಾಸಲಿಂಗ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಂತಾಪ ಸೂಚಕ ಸಭೆ ಸೇರಿತು ಶ್ರೀ ಸೋಮಶೇಖರ ಶರ್ಮರು ಬೀರೂರು, ಶ್ರೀ ಪಂಚಾಕ್ಷರ ಶಿವಾಚಾರ್ಯರು, ಶ್ರೀ ಗಂಗಾಧರಶಾಸ್ತ್ರಿಗಳು ಶ್ರೀ ಕ್ಯಾಸನೂರು ಜಯಗುರು ವೃಷಭ ಶಿವಾಚಾರ್ಯರು ಮುಂತಾದವರು ಶಿವೈಕ್ಯರ ಧರ್ಮನಿಷ್ಠೆ ಆಚಾರ್ಯಭಕ್ತಿ, ಸನಾತನ ಧರ್ಮ ಪರಿಪಾಲನೆ ಮುಂತಾದ ಗುಣಗಳನ್ನು ಶ್ಲಾಘಿಸಿ ಪರಶಿವನು ಇವರ ಆತ್ಮಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸಿದರು ಆಮೇಲೆ ಅಧ್ಯಕ್ಷರು ಕಾಲನ ಅದ್ಭುತಲೀಲೆ ಮಾನವನ ಕರ್ತವ್ಯ ಶಿವೈಕ್ಯರ ಆದರ್ಶ ಮುಂತಾದವುಗಳನ್ನು ಹೃದಯಂಗಮವಾಗಿ ವ್ಯಾಖ್ಯಾನಮಾಡಿದರು ವಿದ್ವತ್ಸಂಘದ ಕಾರ್ಯದರ್ಶಿಗಳು ಸಂತಾಪ ಸೂಚಕ ಠರಾವನ್ನು ಓದಿದರು ಅಧ್ಯಕ್ಷರ ಅಪ್ಪಣೆ ಮೇರೆಗೆ ಎಲ್ಲರೂ ಒಂದು ನಿಮಿಷ ಎದ್ದುನಿಂತು ಶಿವೈಕ್ಯರ ಆತ್ಮಕ್ಕೆ ಶಾಂತಿಯನ್ನು ಕೋರಿದರು ಆಮೇಲೆ ಸಭೆಯು ಪೂರ್ಣವಾಯಿತು

ಕಾರ್ಯದರ್ಶಿ
ಕಾ ವೀ ವಿ ಸಂಘ

ಸ್ವೀಕಾರ

ಶಿವಮೊಗ್ಗಾ ಡಿ। ನ್ಯಾಮತಿ ಗ್ರಾಮದಲ್ಲಿರುವ ಮ॥ರಾ॥ ಬಿದರಕಟ್ಟೆ ವೀರಭದ್ರಪ್ಪನವರ ಮಕ್ಕಳು ಮ॥ ರಾ॥ ಬಸವಣ್ಣಪ್ಪನವರು ನ್ಯಾಮತಿ ಟವನ್ ಮುನಿಸಿಪಲ್ ಮೇಂಬರರಾಗಿ ಆರಿಸಿಬಂದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ಮ॥ ರಾ॥ ಜೇರಿಗೆ ವೀರಭದ್ರಪ್ಪನವರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿ ಟವನ್ನಿನಲ್ಲಿರುವ ವೇ॥ ಚನ್ನಯ್ಯನವರು ಉಮನಾಬಾದಿ ಇವರ ದ್ವಿತೀಯಪುತ್ರಿ ಚಿ॥ ಸೌ॥ ಗುರುಸಿದ್ಧವ್ವನನ್ನು ಧಾರವಾಡ ಡಿ॥ ಅಕ್ಕಿಆಲೂರು ಮುತ್ತಿನಪೆಂಡಿಮಠದ ವೇ॥ ಗಂಗಾಧರಯ್ಯನವರ ಪುತ್ರ ಚಿ॥ ಮೃತ್ಯುಂಜಯಸ್ವಾಮಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ವೇ॥ ಹುಬ್ಬಳ್ಳಿ ಹಿರೇಮಠದ ಸೋಮನಾಥಯ್ಯನವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂಪಾಯಿಗಳು ವೇ॥ ಹೊಸಮಠದ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ತಾ। ಬೆಣಕಲ್ಲ ಗ್ರಾಮಕ್ಕೆ ಶ್ರೀಕೊಂಡಕುಂದಿ ಶಿಲಾಮಠದ ಸ್ವಾಮಿಗಳವರು ಆಗಮಿಸಿ ಧರ್ಮಬೋಧೆಯನ್ನು ಮಾಡಿದ ಸಮಯದಲ್ಲಿ ಸದರಿ ಗ್ರಾಮದ ದೈವದವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ॥ ಮಠದ ದೊಡ್ಡಬಸವಯ್ಯನವರ ದ್ವಾರಾ ತಲ್ಪಿರುತ್ತವೆ

ಶ್ರೀಕಾಶೀಕ್ಷೇತ್ರದಲ್ಲಿರುವ ಶ್ರೀಕ್ಯಾಸನೂರು ಸ್ವಾಮಿಗಳವರು ತಮ್ಮ ತಂದೆಯವರ ಮತ್ತು ದೊಡ್ಡಪ್ಪನವರ ಆತ್ಮಶಾಂತಿಗಾಗಿ ಶ್ರೀಜಗದ್ಗುರು ಕಾಶೀಪೀಠದಲ್ಲಿ ಕೈಲಾಸ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂಪಾಯಿಯು ಶಿಖರಮಠದ ಶ್ರೀಗುರುಲಿಂಗ ಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು॥ ೪ ಬುಧವಾರ ವೈಶಾಖ ಶು॥ ೬ ಶುಕ್ರವಾರ

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀದ್ರಾಕ್ಷಾರಾಮ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮನಾಥ, ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು॥ ೪ ಬುಧವಾರ ತಾ॥ ೨೩—೪—೧೯೪೭** ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೬ ಶುಕ್ರವಾರ ತಾ॥ ೨೫—೪—೧೯೪೭** ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಶ್ರೀ ರಂಭಾಪುರೀಪೀಠದ ಪಟ್ಟಾಧಿಕಾರಮಹೋತ್ಸವ

ಶ್ರೀ ಜಗದ್ಗುರು ರಂಭಾಪುರೀಪೀಠದ ಪಟ್ಟಾಧಿಕಾರ ಮಹೋತ್ಸವವು ಎಂದು ನೆರವೇರುವದೆಂದೂ, ಈವರೆಗೂ ಪ್ರಭಾಪತ್ರಿಕೆಯಲ್ಲಿ ಪಟ್ಟಾಧಿಕಾರದ ವಿಷಯವು ಏಕೆ ಪ್ರಕಟವಾಗಲಿಲ್ಲವೆಂದೂ, ಇಂಡಿಯಾದೇಶದ ನಾನಾ ಭಾಗಗಳಿಂದ ಅನೇಕ ಜನರು ನಮ್ಮನ್ನು ವಿಚಾರಿಸುತ್ತಲಿರುವರು ಈ ಪಟ್ಟಾಧಿಕಾರಮಹೋತ್ಸವದ ಬಗ್ಗೆ ಬೆಂಗಳೂರಿನಲ್ಲಿ ಒಂದು ಸ್ವಾಗತಸಂಘವು ರಚಿತವಾಗಿರುವದು. ಸ್ವಾಗತಸಂಘದವರು ಪಟ್ಟಾಭಿಷೇಕ ಪತ್ರಿಕೆಗಳನ್ನು ಮುದ್ರಿಸಿ ಪ್ರಕಟಿಸಿದ ಮೇಲೆ ಆ ವಿಷಯವನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದು ಉತ್ತಮವೆಂದು ಭಾವಿಸಿ, ಪ್ರಕಟಿಸಲಿಲ್ಲ ಆದರೆ ಈವರೆಗೂ ಬೆಂಗಳೂರಿನಿಂದ ಪ್ರಸಿದ್ಧಪತ್ರಿಕೆಗಳು ಹೊರಬೀಳಲಿಲ್ಲವಾದುದರಿಂದಲೂ, ಅಧಿಕಾರದ ದಿವಸಗಳು ಬಹು ಸಮೀಪಿಸಿರುವುದರಿಂದಲೂ ಮಹಾಜನರ ತಿಳುವಳಿಕೆಯ ಬಗ್ಗೆ ನಮಗೆ ತಿಳಿದ ಮಟ್ಟಿಗೆ ಆ ವಿಷಯವನ್ನು ಈ ಕೆಳಗೆ ವಿವರಿಸಿದ್ದೇವೆ.

ವೈಶಾಖ ಶುದ್ಧ ೧೦ (ತಾ॥ ೩೦–೪–೧೯೪೭) ಬುಧವಾರ ನೂತನಮಠ ಪ್ರವೇಶೋತ್ಸವ.

ವೈಶಾಖ ಶುದ್ಧ ೧೧ (ತಾ॥ ೧-೫–೧೯೪೭) ಗುರುವಾರ ಶ್ರೀಜಗದ್ಗುರು ರೇಣುಕಾಚಾರ್ಯಮೂರ್ತಿ ಪ್ರತಿಷ್ಠೆ.

ವೈಶಾಖ ಶುದ್ಧ ೧೨ (ತಾ॥ ೨–೫–೧೯೪೭) ಶುಕ್ರವಾರ ಪಟ್ಟಾಭಿಷೇಕ.

ಈರೀತಿ ಕಾರ್ಯಕ್ರಮವಿರುವದು. ಸ್ವಾಗತಸಂಘದವರಿಂದ ಪತ್ರಿಕೆಗಳು ಪ್ರಿಂಟಾದ ಮೇಲೆ ಈ ವಿಷಯವನ್ನು ಮುಂದಿನ ವಾರದ ಪತ್ರಿಕೆಯಲ್ಲಿ ಸಂಪೂರ್ಣವಾಗಿ ಪ್ರಕಟಿಸುವೆವು.

ವರ್ತಮಾನಸಂಗ್ರಹ

ಬೆಳ್ಳಿಯ ರೂ. ನಾಣ್ಯಗಳಿಗೆ ಬದಲಾಗಿ ನಿಕ್ಕಲ್ ನಾಣ್ಯಗಳು

ಕೇಂದ್ರ ಶಾಸನ ಸಭೆಯಲ್ಲಿ ಹಣಕಾಸಿನ ಸಚಿವರು ಮಂಡಿಸಿದ್ದ ನಿಕ್ಕಲ್ ರೂಪಾಯಿಗಳ ತಯಾರಿಕೆಯ ಮಸೂದೆಗೆ ಸಭೆಯ ಅಂಗೀಕಾರ ದೊರಕಿತು.

ಈ ಮಸೂದೆಯ ಮೇಲೆ ಕೆಲವು ಸದಸ್ಯರು ಟೀಕೆ ಮಾಡಿದರು. ಈ ಹೊಸಯೋಜನೆಯನ್ನು ಕಾರ್ಯಗತ ಮಾಡಲು ತಗಲುವ ವೆಚ್ಚ ಅಪಾರವಾಗುತ್ತದೆ. ಸಾರ್ವಜನಿಕರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಪದಾರ್ಥಗಳನ್ನು ಆಮದು ಮಾಡಲು ಉಪಯೋಗಿಸುತ್ತಿರುವ ನೌಕಾ ಸೌಕರ್ಯಗಳನ್ನು ನಿಕ್ಕಲ್ ಲೋಹವನ್ನು ಕೆನಡಾದಿಂದ ತರಿಸಲು ಉಪಯೋಗಿಸಬೇಕಾಗುತ್ತದೆ ಈ ಕಾರಣಗಳಿಂದ ಈ ಯೋಜನೆಗೆ ಇದು ಸಮಯವೇ? ಎಂದು ಆಲೋಚಿಸಬೇಕಾಗಿದೆ ಎಂದು ಶ್ರೀಯುತ ಮನುಸುಬೇದಾರರು ತಮ್ಮ ಅಭಿಪ್ರಾಯ ಸೂಚಿಸಿದರು

ಈ ಯೋಜನೆಗೆ ಗ್ರಾಮಾಂತರ ನಿವಾಸಿಗಳು ಪ್ರತಿಭಟಿಸುವರೆಂದು ಶ್ರೀಯುತರಾದ ಆರ್. ಕೆ. ಚೌಧರಿ ಮತ್ತು ರಾಮನಾರಯಣ ಸಿಂಗ್‌ರವರು ಅಭಿಪ್ರಾಯಪಟ್ಟರು.

ಬೆಳ್ಳಿಯ ನಾಣ್ಯಗಳಿಗಿರುವಷ್ಟೇ ನಿಕ್ಕಲ್‌ಗಳಿಗೂ ಬೆಲೆಯಿದ್ದಮೇಲೆ ರೂಪಾಯಿ ನಾಣ್ಯ ಯಾವ ಲೋಹದಲ್ಲಿದ್ದರೇನು? ಜನರು ಬೆಳ್ಳಿಯ ರೂಪಾಯಿಗಳನ್ನು ಶೇಖರಿಸಿಡುವುದರ ಬದಲು ನಿಕ್ಕಲ್ ರೂಪಾಯಿಗಳಿಗೆ ಬೆಳ್ಳಿಕೊಂಡು ಶೇಖರಿಸಲಿ ಎಂದು ಶ್ರೀ ಎಸ್. ವಿ. ಗಾಡ್ಗಿಲ್‌ರವರು ಆಕ್ಷೇಪಣೆಗಳಿಗೆ ಉತ್ತರ ಕೊಟ್ಟರು.

ಅರ್ಥಿಕ ಸಚಿವರ ಸಮಾಧಾನ

"ಈ ಮಸೂದೆಯನ್ನು ಈಗಿನ ಅರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಪರಿಶೀಲಿಸಬೇಕಾದುದು ಅಗತ್ಯವಾಗಿದೆ" ಎಂದು ಮಿ|| ಲಿಯಾಖತ್. ಅಲಿಖಾನರವರು ತಮ್ಮ ಭಾಷಣದಲ್ಲಿ ತಿಳಿಸಿದರು.

"ನಾಣ್ಯವು ಕೇವಲ ಒಂದು ಚಿಹ್ನೆ ಎಂಬುದನ್ನು ಸರ್ವರೂ ಒಪ್ಪಿದ್ದಾರೆ. ಆದುದರಿಂದ ಅಮೂಲ್ಯವಾದ ಲೋಹವನ್ನು ಚಲಾವಣೆಗೆ ಏಕೆ ಉಪಯೋಗಿಸಿ ವ್ಯರ್ಥ ಮಾಡಬೇಕು? ಯುದ್ಧಕಾಲದಲ್ಲಿ ಭಾರತಕ್ಕೆ ಅಮೇರಿಕವು ೬೦ ಕೋಟಿ ತೊಲೆಗಳಷ್ಟು ಬೆಳ್ಳಿಯನ್ನು ಸಾಲ ಕೊಟ್ಟಿದೆ. ಅದನ್ನು ತಿರುಗಿ ಕೊಡುವ ಉದ್ದೇಶವೇ ಈ ಯೋಜನೆಗೆ ಕಾರಣ. ಈ ಮಸೂದೆಗೆ ಸಭೆಯ ಅಂಗೀಕಾರ ದೊರೆತರೂ ಅದನ್ನು ಕಾರ್ಯರೂಪಕ್ಕೆ ತರಲು ಇನ್ನೂ ಕಾಲ ಬೇಕು" ಎಂದು ಸಭಿಕರಿಗೆ ಸಮಾಧಾನ ಇತ್ತರು.

ಬಂಗಾಳದ ವಿಭಜನೆಯ ಬಗ್ಗೆ ಸುಹ್ರವರ್ದಿಯವರು

ಬಂಗಾಳದ ವಿಭಜನೆಯನ್ನು ಕುರಿತು ಪ್ರಧಾನಿಗಳಾದ ಸುಹ್ರವರ್ದಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಪೂರ್ವ ಮತ್ತು ಪಶ್ಚಿಮ ಬಂಗಾಳದಲ್ಲಿ ಜನರು ಒಂದೇ ಸಂಸ್ಕೃತಿಗೆ ಸೇರಿದವರೆಂದೂ ಒಂದೇ ಭಾಷೆಯಾಡತಕ್ಕವರೆಂದೂ ಮತ್ತು ವ್ಯಾಪಾರದಲ್ಲಿ ಪರಸ್ಪರ ಸಹಕಾರವುಳ್ಳವಾದ್ದರಿಂದ ಬಂಗಾಳವನ್ನು ವಿಭಜಿಸಿದಲ್ಲಿ ತನ್ನ ಒಗ್ಗಟ್ಟನ್ನೂ ಗೌರವವನ್ನೂ ಕಳೆದುಕೊಳ್ಳಬೇಕಾಗುತ್ತದೆಯೆಂದೂ ತಿಳಿಸಿದರು

ರಾಜ್ಯಾಂಗರಚನಾ ಸಭೆಯ ಬಗ್ಗೆ ಪಾಟಿಯಾಲಾ ಮಹಾರಾಜರು

ಸಂಸ್ಥಾನಗಳ ರಾಜರು ರಾಜ್ಯಾಂಗರಚನಾ ಸಭೆಗೆ ಸೇರುವ ವಿಚಾರದ ಬಗ್ಗೆ ಹೆಚ್ಚು ಕಾಲವನ್ನು ಕಳೆಯಬಾರದೆಂದೂ ಶೀಘ್ರ ರಾಜ್ಯಾಂಗ ರಚನಾ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಿದ್ದರೆ ಅದರಿಂದ ಸಂಸ್ಥಾನಗಳಿಗಾಗಬಹುದಾದ ಅನುಕೂಲಗಳನ್ನು ಕಳೆದುಕೊಳ್ಳಬೇಕಾಗುವದೆಂದೂ ಪಾಟಿಯಾಲಾ ಮಹಾರಾಜರು ವಾಣಿಜ್ಯಸಂಘದಲ್ಲಿ ಭಾಷಣ ಮಾಡುತ್ತ ತಿಳಿಸಿದರು

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡ ವಜ್ರ

ಸುಮಾರು ಎರಡು ಕೋಟಿ ರೂಪಾಯಿಗಿಂತಲೂ ಹೆಚ್ಚು ಬೆಲೆ ಬಾಳುವ, ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಜೋಡಿ ವಜ್ರವನ್ನು ಇಂದೂರಿನ ಹೋಳ್ಕರ್ ಮಹಾರಾಜರು ಮಾರಿದರೆಂದು ತಿಳಿದು ಬರುತ್ತದೆ. ಈ ಜೋಡಿ ವಜ್ರವು ಪ್ಲಾಟಿನಂನಲ್ಲಿ ಸೆಟ್ ಮಾಡಿದ ಗಟ್ಟಿಹಿಡಿಯ ರೂಪದಲ್ಲಿರುವುದು ಇದು ಸುಮಾರು ಎರಡು ಶತಮಾನಗಳ ಹಿಂದಿನದು

ಅಧಿಕಾರವರ್ಗದ ಬಗ್ಗೆ ಬ್ರಿಟಿಷ್ ಸರ್ಕಾರದ ಕಾರ್ಯಕ್ರಮ

ಭಾರತಕ್ಕೆ ಅಧಿಕಾರವರ್ಗದ ಬದಲಾವಣೆಗಾಗಿ ಬ್ರಿಟಿಷ್ ಮಂತ್ರಿಮಂಡಲದವರು ಕೈಗೊಳ್ಳುವ ಕಾರ್ಯಕ್ರಮದಲ್ಲಿ ವಿದೇಶಾಂಗ ಸಚಿವರಾದ ಮಿ|| ಬೆವಿನ್‌ರವರು ಮಾಸ್ಕೊ ಸಮ್ಮೇಳನದಿಂದ ಹಿಂತಿರುಗಿದ ಕೂಡಲೇ ಹೆಚ್ಚು ಭಾಗವನ್ನು ವಹಿಸುವ ನಿರೀಕ್ಷೆಯಿದೆ. ಎಂದು ಲಂಡನ್ನಿನಲ್ಲಿ ವಿಷಯಪರಿಚಯವುಳ್ಳ ಕಡೆಗಳಿಂದ ತಿಳಿದುಬಂದಿರುವುದಾಗಿ ರಾಜಕೀಯ ಸುದ್ದಿಗಾರರು ತಿಳಿಸುತ್ತಾರೆ. ಭಾರತದ ರಾಜಕೀಯವಾಗಿ ನಡೆದ ಈಚಿನ ಸಂಧಾನಗಳಲ್ಲಿ ಮಿ|| ಬೆವಿನ್ನರು ಇತರ ಬ್ರಿಟಿಷ್ ಮಂತ್ರಿಮಂಡಳದ ಸದಸ್ಯರಷ್ಟು ಪಾತ್ರವಹಿಸದಿದ್ದರೂ, ಭಾರತದ ಸ್ವಾತಂತ್ರ್ಯ ನಿರ್ಧಾರದ ಹಕ್ಕಿನಲ್ಲಿ ಅತ್ಯಂತ ಉತ್ಸಾಹಶಾಲಿಗಳಾಗಿದ್ದವರಲ್ಲಿ ಮಿ|| ಬೆವಿನ್ನರು ಒಬ್ಬರು ಎಂಬುದಾಗಿ ಈ ಸುದ್ದಿಗಾರರು ಸೂಚಿಸುತ್ತಾರೆ. ಅಲ್ಲದೆ ರೀತಿನೀತಿಗಳ ಕೊನೆಯ ತೀರ್ಮಾನದ ಅಧಿಕಾರವು ಪ್ರಧಾನಿಗಳಾದ ಮಿ|| ಅಟ್ಲಿಯವರ ವಶದಲ್ಲಿಯೇ ಇರುತ್ತದೆ. ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರಿಗೆ ಇತರ ಕಾರ್ಯಕಲಾಪಗಳಿದ್ದರೂ ಕೂಡ ಅವರು ಪ್ರಧಾನಮಂತ್ರಿಗಳೊಡನೆಯೂ ಮತ್ತು ಇಂಡಿಯಾ ಸೆಕ್ರೆಟರಿ ಲಾರ್ಡ್ ಪೆಥಿಕ್‌ಲಾರೆನ್ಸ್‌ರವರೊಡನೆಯೂ ಕೆಲಸಮಾಡುವರು ಭಾರತ ಸಮಸ್ಯೆಗಳ ವಿಚಾರವಾಗಿ ನಡೆದ ಅನೇಕ ಸಂಧಾನಗಳಲ್ಲೆಲ್ಲಾ ಸರ್ ಕ್ರಿಪ್ಸ್‌ರವರೇ ಬ್ರಿಟಿಷ್ ಸರಕಾರದ ಪ್ರಧಾನ ಪ್ರತಿನಿಧಿಗಳಾಗಿದ್ದರು. ಈ ವಿಚಾರಗಳಲ್ಲಿ ಪೂರ್ಣಾನುಭವವಿರುವ ಸರ್ ಕ್ರಿಪ್ಸ್‌ರವರ ಸಹಾಯದ ಆವಶ್ಯಕತೆ ಪ್ರಧಾನ ಮಂತ್ರಿಗಳಿಗೂ ಮತ್ತು ಇಂಡಿಯಾ ಸೆಕ್ರೆಟರಿಯವರಿಗೂ ಬಹುವಾಗಿರುತ್ತದೆ ಎಂಬುದಾಗಿ ಈ ಸುದ್ದಿಗಾರರು ತಿಳಿಸುತ್ತಾರೆ

೧೯೪೭ ನೇ ಇಸವಿ ಏಪ್ರಿಲ್ ತಾರೀಖು ೧೪ ನೇ ಸೋಮವಾರ ಮದ್ರಾಸಿನಲ್ಲಿ ನಡೆದ ಮದ್ರಾಸು ದೇಶೀಯ ವೀರಶೈವ ಸಮ್ಮೇಳನದಲ್ಲಿ ಮೈಸೂರಿನಲ್ಲಿರುವ ಆತ್ಮವಿಚಾರಮಂದಿರದ ಅಧ್ಯಕ್ಷರಾದ

ಶ್ರೀಮಾನ್ ಎಂ. ಎಲ್. ನಾಗಣ್ಣನವರು ಮಾಡಿದ ಭಾಷಣ

ಆತ್ಮಬಂಧುಗಳೇ,

ವೀರಶೈವ ಮತೀಯರಲ್ಲಿ ಐಕಮತ್ಯವುಂಟಾಗಿ ಈ ಜನಾಂಗವು ಸಾಮಾಜಿಕ, ಅರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಉನ್ನತಿಗಳನ್ನು ಪಡೆಯಬೇಕೆಂಬ ಉದ್ದೇಶದಿಂದಲೇ ವೀರಶೈವ ಸಮ್ಮೇಳನಗಳು ಆಗಾಗ್ಗೆ ಅಲ್ಲಲ್ಲಿ ನಡೆಯುತ್ತಲಿವೆ ನಾವು ನೋಡಿದಹಾಗೆ ಒಬ್ಬ ತಾಯಿ ತಂದೆ ಮಕ್ಕಳಾದ ಅಣ್ಣತಮ್ಮಂದಿರಲ್ಲೇ ಐಕಮತ್ಯವಿಲ್ಲದಿರುವಾಗ ಬೇರೆ ಬೇರೆ ದೇಶದವರು, ಬೇರೆ ಬೇರೆ ಊರಿನವರು, ಬೇರೆ ಬೇರೆ ತಾಯಿ ತಂದೆ ಮಕ್ಕಳುಗಳು ಆದವರಲ್ಲಿ ಐಕಮತ್ಯವು ಬರೀ ಮಾತಿನಿಂದ ಉಂಟಾಗುವದು ಸಾಧ್ಯವಿಲ್ಲ ಅಲ್ಲದೆ ಭೂಮಿಯಲ್ಲಿ ಬೀಜವನ್ನು ಬಿತ್ತದೆ ಅದಕ್ಕೆ ಎಷ್ಟು ವ್ಯವಸಾಯವನ್ನು ಮಾಡಿದರೂ ಫಲವು ಹೇಗೆ ಸಿಗುವದಿಲ್ಲವೋ ಹಾಗೆ ಈಶ್ವರನ ಕೃಪೆಯನ್ನು ಸಂಪಾದನೆಮಾಡದ ಎಷ್ಟು ಪ್ರಯತ್ನ ಪಟ್ಟರೂ ಒಬ್ಬ ವ್ಯಕ್ತಿಯಾಗಲಿ ಅಥವಾ ಒಂದು ಜನಾಂಗವಾಗಲಿ ಯಾವ ವಿಧವಾದ ಉನ್ನತಿಯನ್ನು ಪಡೆಯುವದಕ್ಕೂ ಸಾಧ್ಯವಿಲ್ಲ ಆದರೆ, ವೀರಶೈವ ಮತತತ್ವವನ್ನು ತಿಳಿದು ವೀರಶೈವ ಮತಧರ್ಮವನ್ನು ಆಚರಿಸುತ್ತ ಬಂದರೆ ವೀರಶೈವ ಮತೀಯರಲ್ಲಿ ಸಹಜವಾದ ಐಕಮತ್ಯವುಂಟಾಗುವದಲ್ಲದೆ ಅವರು ಈಶ್ವರ ಕೃಪೆಯಿಂದ ಈ ಲೋಕದಲ್ಲಿ ಎಲ್ಲಾ ವಿಧವಾದ ಉನ್ನತಿಗಳನ್ನೂ ಹೊಂದುವುದಲ್ಲದೆ ಅಂತ್ಯದಲ್ಲಿ ಜನನಮರಣಾದಿ ಸರ್ವ ದುಃಖರಹಿತವಾದ ಮತ್ತು ಶಾಶ್ವತವಾದ ಆನಂದವನ್ನೂ ಅಂದರೆ ಮೋಕ್ಷವನ್ನೂ ಪಡೆಯುವರು.

ಒಂದು ಬೀಜವು ತನ್ನಲ್ಲಿರುವ ಶಕ್ತಿಯಿಂದ ತಾನೇ ವೃಕ್ಷವಾಗಿ ರೆಂಬೆ, ಎಲೆ, ಹುವ್ವು, ಕಾಯಿ, ಹಣ್ಣುಗಳ ರೂಪವಾಗಿ ಹೇಗೆ ತೋರುವುದೋ ಹಾಗೆ ಈಶ್ವರನು ತನ್ನಲ್ಲಿರತಕ್ಕ ಅಘಟನಘಟನ ಶಕ್ತಿಯ ಸಾಮರ್ಥ್ಯದಿಂದ ತಾನೇ ಪ್ರಪಂಚರೂಪನಾಗಿಯೂ, ಸರ್ವಪ್ರಾಣಿಗಳ ರೂಪನಾಗಿಯೂ ತೋರುತ್ತಾನೆ. ವೃಕ್ಷದಲ್ಲಿರತಕ್ಕ ರೆಂಬೆ, ಎಲೆ ಮುಂತಾದವುಗಳು ಹೇಗೆ ಬೀಜಕ್ಕೆ ಅನ್ಯವಾಗಿಲ್ಲವೋ ಹಾಗೆಯೇ ಪ್ರಪಂಚವೂ ಸರ್ವ ಪ್ರಾಣಿಗಳೂ ಈಶ್ವರನಿಗೆ ಅನ್ಯವಲ್ಲ ಇದೇ ವೀರಶೈವಮತತತ್ವರಹಸ್ಯ! ಆದುದರಿಂದ ವೀರಶೈವ ಮತೀಯರು ತಾವಾದಿಯಾಗಿ ಸರ್ವಪ್ರಾಣಿಗಳೂ ಈಶ್ವರನ ಸ್ವರೂಪ ಎಂದು ತಿಳಿದರೆ ತಮ್ಮ ಮತೀಯರಲ್ಲೇ ಏಕೆ! ಸರ್ವಪ್ರಾಣಿಗಳಲ್ಲಿಯೂ ಸಹಜವಾದ ಸಂಬಂಧವು ತೋರಿ ಇತರರ ಸುಖವೇ ತಮ್ಮ ಸುಖ, ಇತರರ ದುಃಖವೇ ತಮ್ಮ ದುಃಖ ಎಂಬುದಾಗಿ ತಿಳಿಯುತ್ತಾರೆ. ಅಂದರೆ ಪ್ರಾರಂಭದಲ್ಲಿ ತನ್ನ ಮತ್ತು ತಮ್ಮ ಕುಟುಂಬದವರಲ್ಲಿ ಮಾತ್ರ ಪ್ರೇಮವು ಇರುತ್ತದೆ. ತತ್ವವನ್ನು ತಿಳಿದು ಅದನ್ನು ಅನುಭವಕ್ಕೆ ತೆಗೆದುಕೊಂಡಹಾಗೆಲ್ಲ ಆ ಪ್ರೇಮವು ತಮ್ಮ ಬಂಧುವರ್ಗದವರಲ್ಲಿಯೂ, ಅನಂತರ ತಮ್ಮ ಮತೀಯರಲ್ಲಿಯೂ, ಅಮೇಲೆ ತಮ್ಮ ದೇಶದವರಲ್ಲಿಯೂ, ಕೊನೆಗೆ ಇಡೀ ಪ್ರಪಂಚದಲ್ಲಿರತಕ್ಕ ಸರ್ವ ಪ್ರಾಣಿಗಳಲ್ಲಿಯೂ ಹಬ್ಬುತ್ತದೆ ಇದೇ ವಿಶ್ವಪ್ರೇಮ. ಇದೇ ಸಹಜವಾದ ಐಕಮತ್ಯ. ಈ ಸ್ಥಿತಿಯನ್ನು ಪಡೆದವರಿಗೆ ಎಲ್ಲದರಲ್ಲಿಯೂ ಈಶ್ವರ ಭಾವನೆ ಇರುವದರಿಂದ ನಾನು ನನ್ನದು ಎಂಬುದು ಹೋಗಿ ಇವರು ಮೋಕ್ಷವನ್ನು ಸುಲಭವಾಗಿ ಪಡೆಯುವರು.

ಸ್ವಾರ್ಥವಿಲ್ಲದೆ ಅಂದರೆ ಇತರರಿಗೆ ನಷ್ಟವನ್ನುಂಟು ಮಾಡಿ ತಾನು ಲಾಭವನ್ನು ಪಡೆಯದೆ ಅದಕ್ಕೆ ಬದಲಾಗಿ ಕಷ್ಟಪಡತಕ್ಕ ಪ್ರಾಣಿಗಳಿಗೆ ಕೇವಲ ಕರುಣೆಯಿಂದ ತನ್ನ ಕೈಲಾದಮಟ್ಟಿಗೆ ಸಹಾಯ ಮಾಡತಕ್ಕದ್ದೇ ಪ್ರತಿಯೊಬ್ಬ ವೀರಶೈವನ ಮುಖ್ಯ ಕರ್ತವ್ಯವಾಗಿದೆ. ಒಂದು ಕುಟುಂಬವನ್ನು ಸಂರಕ್ಷಣೆಮಾಡತಕ್ಕ ಯಜಮಾನನಲ್ಲಿ ಆ ಕುಟುಂಬದವರೂ, ಒಂದು ರಾಜ್ಯವನ್ನು ರಕ್ಷಿಸತಕ್ಕ ರಾಜನಲ್ಲಿ ಆ ರಾಜ್ಯದ ಪ್ರಜೆಗಳೂ ಹೇಗೆ ಕೃತಜ್ಞತೆಯುಳ್ಳವರಾಗಿ ಪೂಜ್ಯಬುದ್ಧಿಯನ್ನಿಡುತ್ತಾರೋ ಹಾಗೆಯೇ ಪ್ರಪಂಚವನ್ನು ಸೃಷ್ಟಿಮಾಡಿ ಮನುಷ್ಯರೇ ಆದಿಯಾಗಿ ಸರ್ವಪ್ರಾಣಿಗಳಿಗೆ ಅವರವರ ಕರ್ಮಾನುಸಾರ ಭೋಗಗಳನ್ನು ಕೊಟ್ಟು ಅವರುಗಳನ್ನು ರಕ್ಷಿಸುತ್ತಲಿರುವ ಈಶ್ವರನಲ್ಲಿ ಕೃತಜ್ಞತೆಯುಳ್ಳವರಾಗಿ ಅವನಲ್ಲಿ ಪರಮಪೂಜ್ಯಬುದ್ಧಿಯನ್ನಿಟ್ಟು ಸದಾ ಅವನ ಸ್ಮರಣೆಯನ್ನು ಮಾಡತಕ್ಕದ್ದು ಭಕ್ತಿಯೆನಿಸಿಕೊಳ್ಳುತ್ತದೆ. ಆದುದರಿಂದ ವೀರಶೈವರೆಂಬವರು ಮೇಲೆ ಹೇಳಿದ ಕರ್ತವ್ಯದಲ್ಲಿ ನಿರತರಾಗಿ ಈಶ್ವರನಲ್ಲಿ ಭಕ್ತಿಯನ್ನು ಇಡತಕ್ಕದ್ದೇ ವೀರಶೈವಮತಧರ್ಮವಾಗಿದೆ ಮೇಲೆ ಹೇಳಿದ ವೀರಶೈವ ಮತತತ್ವವನ್ನು ತಿಳಿದು ವೀರಶೈವ ಮತಧರ್ಮವನ್ನು ಆಚರಿಸುವದೇ ಪಾರಮಾರ್ಥಿಕೋನ್ನತಿಯು ಈ ಪಾರಮಾರ್ಥಿಕೋನ್ನತಿಯೇ ವೀರಶೈವ ಮತೀಯರ ಐಕಮತ್ಯಕ್ಕೂ, ಅವರ ಎಲ್ಲವಿಧವಾದ ಲೌಕಿಕೋನ್ನತಿಗಳಿಗೂ ಕಾರಣವೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

ಇದಕ್ಕೆ ನಿದರ್ಶನವಾಗಿ ಯಾರು ಹಿಂದಿನ ಜನ್ಮದಲ್ಲಿ ಧರ್ಮವನ್ನು ಆಚರಿಸುತ್ತಿದ್ದರೋ ಅವರು ಈ ಜನ್ಮದಲ್ಲಿ ಈಶ್ವರ ಕೃಪೆಯಿಂದ ಎಲ್ಲವಿಧವಾದ ಉನ್ನತಿಗಳನ್ನೂ ಪಡೆದು ಸುಖವಾಗಿರುತ್ತಾರೆ. ಯಾರು ಹಿಂದಿನ ಜನ್ಮದಲ್ಲಿ ಅಧರ್ಮವನ್ನು ಆಚರಿಸುತ್ತಿದ್ದರೋ ಅವರು ಈ ಜನ್ಮದಲ್ಲಿ ದರಿದ್ರರಾಗಿಯೂ, ರೋಗಗ್ರಸ್ತರಾಗಿಯೂ ದುಃಖಪಡುತ್ತಲಿದ್ದಾರೆ. ಈಗ ನಾವು ನೋಡಿದ ಹಾಗೆ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಯುದ್ಧ, ಕೋಮುವಾರು ಕಲಹಗಳು, ಕ್ಷಾಮ, ಸಾಂಕ್ರಾಮಿಕ ರೋಗಗಳು ಇವೇ ಮುಂತಾದ ಮಹಾದುಃಖಗಳಿಗೆ ಜನಗಳು ಈಡಾಗಿದ್ದಾರೆ. ಈ ದುಃಖಗಳಿಗೆ ಜನಗಳ ಅಧರ್ಮ (ಸ್ವಾರ್ಥ) ಮತ್ತು ಪರಸ್ಪರ ಮತದ್ವೇಷಗಳೇ ಕಾರಣವಾಗಿವೆ ಇದರಿಂದ ಸರ್ಕಾರದವರು ಮೇಲ್ಕಂಡ ದುಃಖಗಳನ್ನು ನಿವಾರಣೆಮಾಡುವದಕ್ಕೋಸ್ಕರ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಜನಗಳಲ್ಲಿ ಪರಸ್ಪರ ಮತದ್ವೇಷವು ಹೋಗಿ ಅವರು ಧರ್ಮನಿರತರಾದ ಹೊರತು ಸರ್ಕಾರದವರ ಪ್ರಯತ್ನಗಳು ಸಫಲವಾಗುವದಿಲ್ಲ ವೀರಶೈವಮತೀಯರಲ್ಲಿ ಕೆಲಜನ ನೂತನ ಸುಧಾರಕರು ವೀರಶೈವ ಮತದ ನಿಜತತ್ವವನ್ನು ತಿಳಿಯದೆ ವೀರಶೈವ ಮತವೆಂಬುದು ಸಹಭೋಜನ ಮತ್ತು ದೇಹಸಂಬಂಧ ಮಾಡುವದಕ್ಕೆ ಏರ್ಪಾಟಾದ ಒಂದು ಸಂಗಡವಾಗಿದೆಯೆಂದು ಭ್ರಮಿಸಿ ವೀರಶೈವ ಮತೀಯರ ಸಂಖ್ಯೆಯು ಹೆಚ್ಚಿದಹಾಗೆಲ್ಲ ತಮಗೆ ರಾಜಕೀಯ ಸ್ಥಾನಮಾನಗಳು ದೊರೆಯುವವೆಂಬ ದೃಷ್ಟಿಯಿಂದ ಇತರ ಮತೀಯರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಬೇಕೆಂದು ಅಭಿಪ್ರಾಯಪಡುತ್ತಲಿದ್ದಾರೆ

ಶಿವಭಕ್ತಿ ಮತ್ತು ಸದ್ಧರ್ಮಾಚರಣೆಯಿಲ್ಲದ ಇತರ ಮತೀಯರ ಸಂಪರ್ಕವಿಲ್ಲದಿರುವಾಗಲೇ ಈ ಮತದಲ್ಲಿರುವ ಅನೇಕ ಜನರಲ್ಲಿ ವೀರಶೈವಧರ್ಮವು ನಾಮಮಾತ್ರ ಶೇಷವಾಗಿರುವಾಗ ಇತರಮತೀಯರ ಸಂಪರ್ಕವುಂಟಾದರೆ ಕೆಲವುಕಾಲದಲ್ಲಿ ವೀರಶೈವಧರ್ಮವು ನಿರ್ನಾಮವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ ಆದುದರಿಂದ ವೀರಶೈವಮತಧರ್ಮವು ಲೋಪವಾಗದೆ ವೀರಶೈವಮತೀಯರೆಲ್ಲರೂ ಅದನ್ನು ಆಚರಿಸುವ ಹಾಗೆ ಏರ್ಪಾಡು ಮಾಡತಕ್ಕದ್ದೇ ವೀರಶೈವಸಮ್ಮೇಳನಗಳ ಮುಖ್ಯ ಗುರಿಯಾಗಿರತಕ್ಕದ್ದು

ಅಲ್ಲದೆ ಲೋಕದಲ್ಲಿರತಕ್ಕ ಎಲ್ಲಾ ಮತಗಳ ಸಾಧಾರಣತತ್ವವು "ಒಳ್ಳೆಯದನ್ನು ಮಾಡು, ಕೆಟ್ಟದ್ದನ್ನು ಮಾಡಬೇಡ" ಎಂಬುದು ಮತ್ತು ಅವುಗಳ ಗುರಿಯು ದುಃಖವಿಲ್ಲದ ಮತ್ತು ಶಾಶ್ವತವಾದ ಆನಂದವನ್ನು ತಮ್ಮ ಅನುಯಾಯಿಗಳು ಹೊಂದತಕ್ಕದ್ದು ಎಂಬುದು ಆಗಿರು

ತ್ತದೆ ಸರ್ವವ್ಯಾಪಕನು ಮತ್ತು ಅದ್ವಿತೀಯನು ಆದ ಒಬ್ಬ ಈಶ್ವರನೇ ಅನೇಕ ನಾಮರೂಪಗಳಿಂದ ಎಲ್ಲಾ ಮತೀಯರಿಗೂ ಉಪಾಸ್ಯನಾಗಿರುವನಲ್ಲದ ತಾನೇ ಮತ ಸ್ಥಾಪಕರುಗಳಾದ ಮಹಾಪುರುಷರ ಮೂಲಕ ತನ್ನ ವಿಶೇಷಾಂಶದಿಂದ ಆಯಾಯ ದೇಶ, ಆಯಾಯ ಕಾಲ, ಆಯಾಯ ಜನಗಳ ಸಂಸ್ಕೃತಿಯನ್ನು ಅನುಸರಿಸಿ ಅವರವರ ವೇದದಲ್ಲಿ ಒಂದೇ ತತ್ವವನ್ನೇ ಅನೇಕವಿಧವಾಗಿ ಬೋಧಿಸಿ ಅನೇಕ ಮತಗಳನ್ನು ಸ್ಥಾಪಿಸಿದ್ದಾನೆ ಆದುದರಿಂದ ಪ್ರತಿಯೊಬ್ಬರೂ (ಪುರುಷ ಇರಲಿ ಸ್ತ್ರೀ ಎಂಬ ವ್ಯತ್ಯಾಸವಿಲ್ಲದೆ) ಅನ್ಯಮತೀಯರಲ್ಲಾಗಲಿ ಅಥವಾ ಅನ್ಯಮತೀಯರ ದೈವವಲ್ಲಾಗಲಿ ದ್ವೇಷವನ್ನಿಡದೆ ತನ್ನ ತನ್ನ ಮತವನ್ನೇ ಇಟ್ಟುಕೊಂಡು ತನ್ನ ತನ್ನ ಮತಧರ್ಮವನ್ನು ಆಚರಿಸುತ್ತಲೂ ತನಗೆ ಇಷ್ಟವಾದ ಆಕಾರದಿಂದ ಈಶ್ವರನ ಉಪಾಸನೆಗಳನ್ನು ಮಾಡುತ್ತಲೂ ಮನುಷ್ಯರೇ ಮೊದಲಾಗಿ ಸರ್ವ ಪ್ರಾಣಿಗಳನ್ನು ತನ್ನಂತೆಯೇ ತಿಳಿದು ಯಾವ ಪ್ರಾಣಿಗೇ ಆಗಲಿ ಯಾವ ವಿಧವಾಗಿಯೂ ಹಿಂಸೆಯನ್ನು ಮಾಡದೆ ತನ್ನ ಕೈಲಾದಮಟ್ಟಿಗೆ ಕಷ್ಟಪಡತಕ್ಕ ಪ್ರಾಣಿಗಳಿಗೆ ಕೇವಲ ಕರುಣೆಯಿಂದ ಉಪಕಾರವನ್ನು ಮಾಡುತ್ತಲೂ ಇದ್ದರೆ ಲೋಕದಲ್ಲಿ ಅಧರ್ಮವು ಹೋಗಿ ಧರ್ಮವು ವೃದ್ಧಿಯಾಗಿ ಪರಸ್ಪರ ಯುದ್ಧ, ಕೋಮುವಾರು ಕಲಹಗಳು, ಕ್ಷಾಮ, ಸಾಂಕ್ರಾಮಿಕರೋಗಗಳಿಲ್ಲದೆ ಎಲ್ಲರೂ ಈಶ್ವರಾನುಗ್ರಹದಿಂದ ಈ ಲೋಕದಲ್ಲಿ ಸುಖವಾಗಿರುವದಲ್ಲದೆ ಈ ಲೋಕವನ್ನು ಬಿಟ್ಟನಂತರವೂ ಅವರು ದುಃಖವಿಲ್ಲದ ಮತ್ತು ಶಾಶ್ವತವಾದ ಆನಂದವನ್ನು ಹೊಂದುವರು

ಸರ್ವೇಶ್ವರನು ವೀರಶೈವಮತೀಯರಲ್ಲಿ ಐಕಮತ್ಯವನ್ನುಂಟುಮಾಡಿ ಅವರಿಗೆ ಸರ್ವಮಂಗಳಗಳನ್ನುಂಟುಮಾಡಲಿ

|| ಓಂ ತತ್ಸತ್ ||

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಇಪ್ಪತ್ತೆಂಟು ಶಿವಾಗಮಗಳನ್ನು ಹೇಳಿದ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೬ನೆಯ ಆವೃತ್ತಿ)	೨ ಆಣೆ
ಬಸವಾದಿಶಿವಶತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ...	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಲಿ ..	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ) ..	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ...	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी) ...	१ रु.
महानारायणोपनिषद् (वीरशैवभाष्य–संस्कृत) ..	१ रु.
सिद्धांतशिखामणि (मूल) ...	८ आ.
चंद्रिकोत्तरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಶ್ರೀ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೦] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೧ನೇ ಏಪ್ರಿಲ್ ೧೯೪೭ [ಸಂಚಿಕೆ ೫೧

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವೀರಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚ ಯಃ
ರೇವಣಾರಾಧ್ಯಸನ್ನಾಮಾ ಜಗದ್ಗುರುತಮಶ್ಚ ಸಃ ॥
(ಸುಪ್ರಭೇದಾಗಮೇ)

ಶ್ರೀಮದ್ರೇವಣಸಿದ್ಧಸ್ಯ ಕುಲ್ಯಪಾಕಾಭಿಧೇ ಪುರೇ ।
ಸೋಮೇಶಲಿಂಗಾಜ್ಜನನಂ ನಿವಾಸಃ ಕದಲೀಪುರೇ ॥
(ಸ್ವಾಯಂಭುವಾಗಮೇ)

ಶ್ರೀಮದ್ರಂಭಾಪುರೀ ವೀರಸಿಂಹಾಸನಮಹಾಸಂಸ್ಥಾನದ

ಶ್ರೀಜಗದ್ಗುರು ಪಟ್ಟಾಧಿಕಾರಮಹೋತ್ಸವಪತ್ರಿಕಾ

ಶ್ರೀಮದ್ರಂಭಾಪುರೀ ಜಗದ್ಗುರು ಪೀಠಕ್ಕೆ ಶಿವೈಕ್ಯರಾದ ಶ್ರೀಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರಿಂದ ತಮ್ಮ ಉತ್ತರಾಧಿಕಾರಿಗಳಾಗಿ ನಿಯಮಿಸಲ್ಪಟ್ಟು, ನಮ್ಮನ್ನಾಳುವ ಧರ್ಮಪ್ರಭುಗಳವರಿಂದ ಅನುಮೋದಿಸಲ್ಪಟ್ಟಿರುವ, ಬೆಂಗಳೂರು ಶ್ರೀಮಹಾಂತಿನ ಮಠದ ಪಟ್ಟಾಧ್ಯಕ್ಷ ಶ್ರೀ॥ ಷ॥ ಬ್ರ॥ ಶ್ರೀಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಪಟ್ಟಾಧಿಕಾರ ಮಹೋತ್ಸವವು ಇದೇ ಸರ್ವಜಿತನಾಮಸಂವತ್ಸರದ ವೈಶಾಖ ಶುದ್ಧ ೧೨ ಶುಕ್ರವಾರ (ತಾ॥ ೨-೫-೧೯೪೭) ಪ್ರಾತಃಕಾಲ ಸೂರ್ಯೋದಯಾನಂತರ ೬ ಗಳಿಗೆಯಮೇಲೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ಶ್ರೀಮದ್ರಂಭಾಪುರೀಪೀಠದಲ್ಲಿ ನೆರವೇರುವಂತೆ ನಿಶ್ಚಯಿಸಲ್ಪಟ್ಟಿದೆ ಈ ಮಹಾಸಮಾರಂಭಕ್ಕೆ ಶ್ರೀಮದುಜ್ಜಯಿನೀ ಜಗದ್ಗುರುಗಳವರೂ, ಶ್ರೀಶೈಲ ಜಗದ್ಗುರುಗಳವರೂ ದಯಮಾಡಿಸುವವರಾಗಿದ್ದಾರೆ.

ಆದುದರಿಂದಈ ಮಹೋತ್ಸವಕ್ಕೆ ತಾವು ತಮ್ಮ ಸಕಲ ಪರಿವಾರದೊಡನೆ ಆಗಮಿಸಿ ಶ್ರೀಜಗದಾಚಾರ್ಯರ ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ

ತಾ॥ 16-4-1947
ಬಾಳೆಹೊನ್ನೂರು, ಕಡೂರು ಡಿಸ್ಟ್ರಿಕ್ಟ್

ಶ್ರೀರಂಭಾಪುರೀ ಮಹಾಸಂಸ್ಥಾನದ ಏಜೆಂಟ್,
ಬಿ. ನಂಜುಂಡಪ್ಪ.

ಸೂಚನೆ—ಬಾಳೆಹೊನ್ನೂರು ಮಠವು ಕಡೂರು ರೈಲ್ವೆಸ್ಟೇಷನ್ನಿನಿಂದ 66 ಮೈಲಿ ಮತ್ತು ಶಿವಮೊಗ್ಗಾ ರೈಲ್ವೆ ಸ್ಟೇಷನ್ನಿನಿಂದ 48 ಮೈಲಿ ದೂರದಲ್ಲಿರುತ್ತದೆ ಸದರಿ ಸ್ಥಳಗಳಿಂದ ಒಂದೊಂದು ಬಸ್ಸು ಸರ್ವಿಸ್ಸು ಮಾತ್ರ ಇದೆ ಶಿವಮೊಗ್ಗದಲ್ಲಿ ಟ್ಯಾಕ್ಸಿ ಕಾರುಗಳು ಬಾಡಿಗೆಗೆ ದೊರಕುತ್ತವೆ ತರೀಕೆರೆಯಿಂದ ನರಸಿಂಹರಾಜಪುರಕ್ಕೆ (ಟ್ರಾಂವೆ) ಸಣ್ಣ ರೈಲಿದೆ ನರಸಿಂಹರಾಜಪುರದಿಂದ ಮಠವು 22 ಮೈಲಿ ದೂರವಿರುತ್ತದ ಒಂದು ಬಸ್ ಸರ್ವಿಸ್ಸಿದೆ. ಇಲ್ಲಿ ಎತ್ತಿನ ಗಾಡಿಗಳು ಬಾಡಿಗೆಗೆ ದೊರೆಯುತ್ತವೆ ಪೆಟ್ರೋಲಿನ ಅಭಾವದಿಂದ ಸ್ಪೆಷಲ್ ಬಸ್ಸುಗಳನ್ನೇರ್ಪಡಿಸಲು ಸಾಧ್ಯವಿಲ್ಲವಾಗಿದೆ ಮಠಕ್ಕೆ ಬರತಕ್ಕವರು ತಮ್ಮ ವಾಹನಸೌಕರ್ಯಗಳನ್ನು ತಾವೇ ಒದಗಿಸಿಕೊಳ್ಳಬೇಕು ಶೀತಪ್ರದೇಶವಾದುದರಿಂದ ಹಾಸಿಗೆ ಮೊದಲಾದ ಸಾಮಾನುಗಳನ್ನೂ, ಕಂಬಳಿ ಮೊದಲಾದವುಗಳನ್ನೂ ತೆಗೆದುಕೊಂಡು ಬರತಕ್ಕದ್ದು

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ||

ಇಂದ್ರಿಯಗಳು

ಲೇ—ವೇ|| ಮಲ್ಲಿಕಾರ್ಜುನಶಾಸ್ತ್ರಿ ರಾಜೇಂದ್ರ ಕನ್ನಡ ಪಂಡಿತರು ಮುದೇನೂರು

“ಇದಿ ಪರಮೈಶ್ವರ್ಯೇ” ಎಂಬ ಧಾತುವಿನಿಂದ ಹುಟ್ಟಿರುವ ಇಂದ್ರಿಯ ಶಬ್ದವು ಇಂದ್ರಿಯಗಳ ಪರಮ ಸಾಮರ್ಥ್ಯವನ್ನು ತೋರಿಸುತ್ತದೆ. ವಿಚಿತ್ರ ಸಾಮರ್ಥ್ಯವುಳ್ಳ ಈ ಇಂದ್ರಿಯಗಳು ಮನಸ್ಸಿಗೆ ಸಹಾಯಕಾರಿಗಳಾಗಿರುತ್ತವೆ. ಮನಸ್ಸಿಗೆ ಇವುಗಳ ಸಹಾಯವಿಲ್ಲದೆ ಯಾವ ವಸ್ತುಜ್ಞಾನವೂ ಆಗುವುದಿಲ್ಲ. ಮನಸ್ಸೆಂಬುವನು ಒಬ್ಬ ರಾಜನೆಂದೂ, ಇಂದ್ರಿಯಗಳು ಅವನ ಪರಿಚಾರಕರೆಂದು ಕಲ್ಪಿಸಬಹುದು. ರಾಜನಿಗೆ ಪರಿಚಾರಕರು ಜ್ಞಾನವನ್ನುಂಟುಮಾಡುವಂತೆ ಇಂದ್ರಿಯಗಳು ಮನಸ್ಸಿಗೆ ವಸ್ತುಜ್ಞಾನವನ್ನುಂಟುಮಾಡಿಕೊಡುತ್ತವೆ. ಈ ವಸ್ತುಜ್ಞಾನವನ್ನುಂಟುಮಾಡಿಕೊಡುವ ಇಂದ್ರಿಯಗಳು (ನೇತ್ರ ಶ್ರೋತ್ರ ಘ್ರಾಣ ಜಿಹ್ವೆ ಚರ್ಮಗಳು) ಜ್ಞಾನೇಂದ್ರಿಯಗಳೆಂದು ಹೇಳಲ್ಪಡುವವು. ಇವಲ್ಲದೆ ಕರ್ಮೇಂದ್ರಿಯಗಳು (ವಾಕ್ ಪಾಣಿ ಪಾದ ಪಾಯು ಉಪಸ್ಥ) ಬೇರೆ ಇರುತ್ತವೆ. ಜ್ಞಾನೇಂದ್ರಿಯಗಳು ಮನಸ್ಸಿಗೆ ವಸ್ತುಜ್ಞಾನವನ್ನುಂಟುಮಾಡಿಕೊಟ್ಟಮೇಲೆ ಮನಸ್ಸು ಕಾರ್ಯಾಕಾರ್ಯ ವಿವೇಚನೆಯನ್ನು ಮಾಡಿ ಕರ್ತವ್ಯದ ವಿಷಯವಾಗಿ ಆಜ್ಞಾಪಿಸಿದ ಕೂಡಲೆ ಕಾರ್ಯ ಮಾಡಲಿಕ್ಕೆ ಮುಂದುವರಿಯುವ ಇಂದ್ರಿಯಗಳು ಕರ್ಮೇಂದ್ರಿಯಗಳು. ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು ಹೀಗೆ ಒಟ್ಟು ಹತ್ತು ಇಂದ್ರಿಯಗಳು ಮನಸ್ಸಿನ ಕಿಂಕರರಾಗಿ ಈ ದೇಹದಲ್ಲಿರುತ್ತವೆ.

ಜ್ಞಾನೇಂದ್ರಿಯಗಳಲ್ಲಿ ನೇತ್ರೇಂದ್ರಿಯವು ರೂಪವೆಂಬ ವಿಷಯವನ್ನು ಗ್ರಹಿಸುತ್ತದೆ. ಇದಕ್ಕೆ ಇದೊಂದೇ ಕೆಲಸವು. ಈ ಇಂದ್ರಿಯವು ಕಣ್ಣುಗುಡ್ಡೆಯಿಂದ ಹೊರ ಹೊರಟು ರೂಪವಿದ್ದಲ್ಲಿ ಹೋಗಿ ಆ ರೂಪವನ್ನು ಗ್ರಹಿಸುತ್ತದೆ. ಈ ಇಂದ್ರಿಯವು ತೇಜೋಮಯವಾದದರಿಂದ ಇದರ ಗತಿಯು ಬಹು ಶೀಘ್ರವಿರುತ್ತದೆ. ಆದರೆ ಇದು ಹೊರಹೊರಟು ರೂಪವಿದ್ದಲ್ಲಿ ಹೋಗಿ ಅದನ್ನು ಗ್ರಹಿಸುವುದು ಸಹಸಾ ಮನಸ್ಸಿನ ಕಲ್ಪನೆಯಲ್ಲಿಯೇ ಬರುವುದಿಲ್ಲ. ಈ ನೇತ್ರೇಂದ್ರಿಯಕ್ಕೆ ‘ಗತ್ವಾಗ್ರಾಹಿ’ ಎಂದು ಹೇಳುವರು. ಉಳಿದ ನಾಲ್ಕು ಜ್ಞಾನೇಂದ್ರಿಯಗಳು ತಾವು ಇದ್ದಲ್ಲಿಯೇ ಇದ್ದು, ತಮ್ಮ ಹತ್ತಿರ ವಿಷಯಗಳು ಬಂದಾಗ ಅವನ್ನು ಗ್ರಹಿಸುವವು. ಆದ್ದರಿಂದ ಇವಕ್ಕೆ ‘ಸ್ಥಿತ್ವಾಗ್ರಾಹಿ’ಗಳೆಂದು ಹೇಳುವರು.

ಜ್ಞಾನೇಂದ್ರಿಯಗಳೇ ಆಗಲಿ, ಕರ್ಮೇಂದ್ರಿಯಗಳೇ ಆಗಲಿ ಪ್ರತಿಯೊಂದು ಇಂದ್ರಿಯಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುವುದಕ್ಕೆ ಸಮರ್ಥಗಳಾಗಿದ್ದರೂ ಅವುಗಳ ಕಡೆಗೆ ಮನಸ್ಸಿನ ಒಲವು ಇರಬೇಕಾಗುತ್ತದೆ. ಇವು ಕಾರ್ಯಮಾಡುವಾಗ ಮನಸ್ಸು ಬೇರೆ ಎಲ್ಲಿಯಾದರೂ ಹೋಗಿದ್ದರೆ ಕಣ್ದೆರೆದಿದ್ದರೂ ರೂಪವೇ ಕಾಣುವುದಿಲ್ಲ, ಇದರಂತೆ ಶಬ್ದವೂ ಕೇಳುವುದಿಲ್ಲ. ಎಲ್ಲಾ ಇಂದ್ರಿಯಗಳ ಸ್ಥಿತಿಯೂ ಹೀಗೆಯೇ. ಈ ಅಭಿಪ್ರಾಯವನ್ನು ಭಗವದ್ಗೀತೆಯು—“ಇಂದ್ರಿಯಾಣಾಂ ಹಿ ಚರತಾಂ ಯನ್ಮನೋನುವಿಧೀಯತೆ | ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ||” “ಯಾವಾಗಲೂ, ಇಂದ್ರಿಯಗಳು ವಿಷಯಗಳಲ್ಲಿ ಸಂಚರಿಸತಕ್ಕ ಸ್ವಭಾವವುಳ್ಳವುಗಳಾಗಿರುತ್ತವೆ. ಅವುಗಳ ಕರ್ತವ್ಯ ಕರ್ಮವೇ ಅದಾಗಿರುವುದು. ಆದರೆ ಆ ಇಂದ್ರಿಯಗಳ ಸಂಗಡ ಮನಸ್ಸನ್ನು ಕಳುಹಿಸಿದರೆ ಸಾಕು, ನೀರಿನಲ್ಲಿರುವ ನಾವೆಯನ್ನು ಮಾರುತವು ಜಾರಿಸುವಂತೆ ಅದು ಮನುಷ್ಯನ ಕರ್ತವ್ಯಾಕರ್ತವ್ಯವನ್ನು ಅಪಹರಿಸುತ್ತದೆ. ಅಂದರೆ ಮನುಷ್ಯನು ಇಂದ್ರಿಯವಶನಾಗಿ ವ್ಯವಹರಿಸಿದರೆ ಸದ್ವಿಚಾರಭ್ರಷ್ಟನಾಗುವನೆಂದು ಬೋಧಿಸುವುದು. ಇಂದ್ರಿಯಗಳ ಗುಂಪು ಬಲಾಢ್ಯವಾಗಿರುವುದರಿಂದ ಎಂತಹ ಪ್ರಜ್ಞಾವಂತನನ್ನಾದರೂ ಲೋಹಚುಂಬಕದಂತೆ ಕೂಡಲೇ ಎಳೆದೇಬಿಡುತ್ತವೆ. ಸದ್ಯಃ ಜಗತ್ತಿನಲ್ಲಿ ಜನರು ತಮ್ಮ ಧರ್ಮ, ನೀತಿ, ಆಶ್ರಮಗಳ ಹದ್ದನ್ನು ಮೀರಿ ಇಂದ್ರಿಯಗಳ ವಶರಾಗಿ ಸ್ತ್ರೀವ್ಯಾಮೋಹ ಪಾಶದಿಂದ ಬದ್ಧರಾಗಿ ಅವರ ಕಾಲಲ್ಲಿ ಬಿದ್ದು ಹೊರಳಾಡುತ್ತಿರುವವನ್ನು ನೋಡಿದರೆ “ವಿಶ್ವಾಮಿತ್ರ ಪರಾಶರ ಪ್ರಭೃತಯೋ ವಾತಾಂಬು ಪರ್ಣಾಶಿನಃ | ತೇಪಿ ಸ್ತ್ರೀ ಮುಖಪಂಕಜಂ ಸುಲಲಿತಂ ದೃಷ್ಟ್ವೈವ ಮೋಹಂಗತಾಃ || ಶಾಲ್ಯನ್ನಂ ಸಘೃತಂ ಪಯೋದಧಿಯುತಂ ಭುಂಜಂತ್ಯಮೀ ಮಾನವಾಃ ತೇಷಾಮಿಂದ್ರಿಯನಿಗ್ರಹೋ ಯದಿ ಭವೇತ್ ವಿಂಧ್ಯ ಸ್ತರೇತ್ ಸಾಗರೇ” ಗಾಳಿ ನೀರು ಎಲೆಗಳನ್ನು ಸೇವಿಸುತ್ತಿದ್ದ ವಿಶ್ವಾಮಿತ್ರ ಪರಾಶರಾದಿ ಮಹರ್ಷಿಗಳು ಸ್ತ್ರೀ ಮುಖಕಮಲವನ್ನು ನೋಡಿದ ಕೂಡಲೆ ಮೋಹಿತರಾಗಿರುವಲ್ಲಿ ಸಣ್ಣಕ್ಕಿ ಅನ್ನ, ತುಪ್ಪ, ಹಾಲು, ಮೊಸರು ಇವುಗಳನ್ನು ಸೇವಿಸುವ ಮಾನವರು ಇಂದ್ರಿಯನಿಗ್ರಹ ಮಾಡುವರೆಂದರೆ ವಿಂಧ್ಯಪರ್ವತವು ಸಮುದ್ರದಲ್ಲಿ ತೇಲಾಡಿದಂತೆಯೇ ಸರಿ! ಎಂದು ಒಬ್ಬ ಮಹಾತ್ಮರ ನುಡಿದಿರುವುದು ಅಕ್ಷರಶಃ ನಿಜವಿರುವುದು. ಮತ್ತಲ್ಲದೆ ಶ್ರೀಪರಾಶರಸ್ಮೃತಿಯಲ್ಲಿ “ಈ ಕಾಲದಲ್ಲಿ ದುಷ್ಟರು ಕಾಮುಕರಾಗಿ ತಮ್ಮ ತಾಯಿಯರ ಸಂಬಂಧವನ್ನು ಮಾಡಲೂ ಹೆದರುವುದಿಲ್ಲ. ಮತ್ತು ಇವರು ಸೊಸೆ, ಮಗಳು, ಸೋದರಿಯರನ್ನು ಮೋಹಿಸಲೂ ಸಹ ಅಸಹ್ಯಪಡುವುದಿಲ್ಲ”ವೆಂದು ಹೇಳಿರುವುದು. ಅದು ಕಾರಣವೇ ಸ್ವಸ್ತ್ರೀ ಹೊರತು ಅನ್ಯಸ್ತ್ರೀಯೊಡನೆ ಏಕಾಂತದಲ್ಲಿ ಕುಳಿತುಕೊಳ್ಳಬಾರದು, ಮಾತಾಡಬಾರದೆಂದು ಮಹಾತ್ಮರು ಹೇಳಿರುವರು. ಅವರ ಉದ್ದೇಶವೇನೆಂದರೆ— “ಅಗ್ನಿ ಕುಂಡಸಮಾ ನಾರೀ ಘೃತಕುಂಭಸಮೋ ನರಃ” ಎಂಬ ಸ್ಮೃತಿಯಂತೆ ಸ್ತ್ರೀಯು ಅಗ್ನಿಕುಂಡಕ್ಕೆ ಸಮವಾಗಿಯೂ ಪುರುಷನು ತುಪ್ಪದ ಕೊಡಕ್ಕೆ ಸಮವಾಗಿಯೂ ಇರುವುದರಿಂದ ಮನಸ್ಸು ಸ್ತ್ರೀ ಮೋಹಕ್ಕೆ ಅವಶ್ಯವಾಗಿ ಒಳಗಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಭಾಗವತದಲ್ಲಿಯೂ ಸಹ “ಮಾತ್ರಾ ಸ್ವಸ್ರಾ ದುಹಿತ್ರಾ ವಾ ನೈಕಶಯ್ಯಾಸನೋ ಭವೇತ್ | ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ||” ತಾಯಿಯಾಗಲಿ, ಸೋದರಿಯಾಗಲಿ ಮಗಳೇ ಆಗಲಿ, ಇವರೊಡನೆ ಪುರುಷನು ಒಂದೇ ಹಾಸಿಕೆಯಲ್ಲಿ ಎಂದೂ ಕುಳಿತುಕೊಳ್ಳಬಾರದೆಂದು ಹೇಳಿರುವುದು.

ಜೀವಾತ್ಮನೇ ರಥಿಕನೆಂದೂ, ಬುದ್ಧಿಯೇ ಸಾರಥಿಯೆಂದೂ, ದೇಹವೇ ರಥವೆಂದೂ, ಇಂದ್ರಿಯಗಳೇ ಕುದುರೆಗಳೆಂದೂ, ಮನಸ್ಸೇ ಹಗ್ಗವೆಂದೂ ಶ್ರುತಿಯು ಸಾರುತ್ತಿರುವುದು. ಇಲ್ಲಿ ಇಂದ್ರಿಯಗಳಿಗೆ ಅಶ್ವದೃಷ್ಟಾಂತವನ್ನು ಕೊಟ್ಟಿರುವುದರಿಂದ, ಅಶ್ವಗಳಂತೆ ಇಂದ್ರಿಯಗಳು ವಿಚಿತ್ರ ಗತಿಯುಳ್ಳವೆಂಬ ಅಭಿಪ್ರಾಯವಾಗುತ್ತದೆ. ಇಂತಹ ಇಂದ್ರಿಯಗಳು ನಮ್ಮನ್ನು ಎಲ್ಲಿಯಾದರೂ ಒಂದು ಹಳ್ಳದಲ್ಲಿ ಕೆಡವದ ಹಾಗೆ ಬಿಗಿಹಿಡಿಯುವುದಕ್ಕೆ ವಿಚಾರಶಕ್ತಿಯುಳ್ಳ ಮನಸ್ಸೇ ಹಗ್ಗವಾಗಿರುವುದೆಂದು ಅಭಿಪ್ರಾಯವು. ವಿವೇಕಿಯಾದವನು ವಿಚಾರಯುಕ್ತವಾದ ಮನಸ್ಸಿನ ಸಹಾಯದಿಂದ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗದಂತೆ ತಡೆದಿಟ್ಟುಕೊಂಡರೆ, ಅವನಿಗೆ ಸದ್ಗತಿಯಾಗುತ್ತದೆಂಬ ಅಭಿಪ್ರಾಯವು. ಬೃಹದಾರಣ್ಯಕ ಶ್ರುತಿಯಲ್ಲಿ ಉಕ್ತವಾಗಿರುವುದು. ಇಂದ್ರಿಯಗಳಿಗೆ ಗ್ರಹವೆಂತಲೂ, ವಿಷಯಗಳಿಗೆ ಅತಿಗ್ರಹವೆಂತಲೂ, ಅಲ್ಲಿ ಹೆಸರುಕೊಟ್ಟಿರುವರು. “ಗೃಹ್ಣಂತಿ ಬಧ್ನಂತಿ ಪುರುಷಪಶೂನಿತಿ ಗ್ರಹಾಃ ಇಂದ್ರಿಯಾಣಿ” ಅಂದರೆ, ಅವಿವೇಕಿಗಳಾದ ಪುರುಷರನ್ನು ಇಂದ್ರಿಯಗಳು ಪಶುಗಳಂತೆ ಕಟ್ಟಿಹಾಕುತ್ತವೆ, ತಮ್ಮ ಸ್ವಾಧೀನರನ್ನಾಗಿ ಮಾಡಿಕೊಳ್ಳುತ್ತವೆ ಎಂದು ಭಾವವು. ಅತಿಗ್ರಹಗಳೆಂದರೆ, ಇದಕ್ಕೂ ಹೆಚ್ಚಿನ ಗ್ರಹಗಳು ವಿಷಯಗಳು. ವಿಷಯಗಳಿದ್ದರೆಯೇ ಇಂದ್ರಿಯಗಳ ಕಾರ್ಯವು ನಡೆಯುತ್ತದೆ. ಇಲ್ಲದಿದ್ದರೆ ಅವುಗಳಿಂದಾವಕಾರ್ಯವೂ ನಡೆಯುವುದಿಲ್ಲ.

ವಾಚಕರೇ, ಜಗತ್ತಿನಲ್ಲಿ ಒಂದೊಂದು ಇಂದ್ರಿಯಕ್ಕೆ ವಶವಾಗಿ ಒಂದೊಂದು ಪ್ರಾಣಿಯು ನಷ್ಟವಾಗುವುದನ್ನು ನಾವು ನೋಡುತ್ತಲಿದ್ದೇವೆ. ಆನೆಯು ಒಂದು ಉಪಸ್ಥೇಂದ್ರಿಯಕ್ಕೆ ವಶವಾಗಿ ಕಾಡಿನಲ್ಲಿ ಗಜಗ್ರಾಹಿಗಳು ಮಾಡಿಟ್ಟ ಕೃತ್ರಿಮವಾದ ಹೆಣ್ಣಾನೆಯನ್ನು ಮೋಹಿಸಿ ಹಳ್ಳದಲ್ಲಿ ಬಿದ್ದು ಪ್ರಾಣವನ್ನು ಬಿಡುವುದು. ಪತಂಗವು ನೇತ್ರೇಂದ್ರಿಯದ ದೋಷದಿಂದ ದೀಪವನ್ನು ಹಣ್ಣೆಂದು ಭ್ರಮಿಸಿ ಸುಟ್ಟು ಬೂದಿಯಾಗುವುದು. ಭ್ರಮರವು ಘ್ರಾಣೇಂದ್ರಿಯದೋಷದಿಂದ ಸಂಪಿಗೆಯ ಹೂವಿಗೆರಗಿ ಮೃತಿಯನ್ನು ಹೊಂದುವುದು. ಜಿಂಕೆಯು ಶ್ರೋತ್ರೇಂದ್ರಿಯದ ಚಾಪಲ್ಯದಿಂದ ಕೊಳಲಿನ ಮಧುರಶಬ್ದವನ್ನು ಕೇಳಿ ಬಲೆಯೊಳಗೆ ಸಿಕ್ಕಿಬೀಳುವದು. ಮತ್ಸ್ಯಗಳು ನಾಲಗೆಯ ರುಚಿಗಾಗಿ ಬೆಸ್ತರವನ ಗಾಳಕ್ಕೆ ಸಿಕ್ಕಿ ಪ್ರಾಣವನ್ನು ನೀಗುವುವು. ಹೀಗೆ ಒಂದೊಂದು ಇಂದ್ರಿಯಗಳಿಗೆ ವಶವಾಗಿ ಒಂದೊಂದು ಜಾತಿಯ ಪ್ರಾಣಿಗಳೇ ನಷ್ಟವಾಗುತ್ತಿರುವಲ್ಲಿ ಇನ್ನು ಮನುಷ್ಯನು ಪಂಚ ಜ್ಞಾನೇಂದ್ರಿಯಗಳಿಂದಲೂ ಪಂಚ ಕರ್ಮೇಂದ್ರಿಯಗಳಿಂದಲೂ ಅಂತಃಕರಣದಿಂದಲೂ ಕೂಡಿರುವುದರಿಂದ ಈತನು ಅಂತಹ ಇಂದ್ರಿಯಸಮೂಹವನ್ನು ತಡೆಯುವದೆಂದರೆ ಬಹು ಕಷ್ಟತರವಾದ ಕೆಲಸವೇ ಸರಿ!

ಒಂದು ಚರ್ಮದ ತಿತ್ತಿಯಲ್ಲಿ ತುಂಬಿದ್ದ ನೀರು ತಿತ್ತಿಯ ಯಾವುದಾದರೊಂದು ಭಾಗದಲ್ಲಿ ಸೂಜಿಯ ಮೊನೆಯಷ್ಟು ತೂತು ಬಿದ್ದರೂ ಸಹ ಆ ರಂಧ್ರದ ಮೂಲಕ ಒಳಗಿದ್ದ ನೀರೆಲ್ಲಾ ಕ್ರಮವಾಗಿ ಸೋರಿ ಬರಿದಾಗುವಂತೆ, ಇಂದ್ರಿಯಗಳಲ್ಲಿ ಯಾವುದಾದರೊಂದು ಇಂದ್ರಿಯವು ವಿಷಯಕ್ಕೆರಗಿದರೂ ಒಳಗೆ ತುಂಬಿರುವ ಪ್ರಜ್ಞಾ ಶಕ್ತಿಯೆಲ್ಲವೂ ಕ್ರಮವಾಗಿ ನಶಿಸಿಹೋಗುವುದು. “ಜ್ಞಾನಾದೇವ ತು ಕೈವಲ್ಯಂ” ಎಂಬುಕ್ತಿಯಂತೆ ಮೋಕ್ಷಕ್ಕೆ ಜ್ಞಾನವೇ ಸಾಕ್ಷಾತ್ ಕಾರಣವು. ಜ್ಞಾನಾಭಿವೃದ್ಧಿಗೆ ಮನಸ್ಸಂಯಮನವೇ ಕಾರಣವು. ಈ ಮನಸ್ಸಂಯಮನಕ್ಕೆ ಚಕ್ಷುರಾದಿ ಬಾಹ್ಯೇಂದ್ರಿಯಗಳ ನಿಗ್ರಹವೇ ಕಾರಣವು. ಬಾಹ್ಯೇಂದ್ರಿಯಗಳ ನಿಗ್ರಹ ಮಾಡದವನು ಮನೋನಿಗ್ರಹ ಮಾಡಲಾರನು. ಮನೋನಿಗ್ರಹವಿಲ್ಲದವನು ಜ್ಞಾನಶೂನ್ಯನಾಗುವನು. ಜ್ಞಾನಶೂನ್ಯನಾದವನಿಗೆ ಮೋಕ್ಷವೆಂಬುದು ಗಗನಕುಸುಮವೇ ಸರಿ. ಅನ್ಯಾದೃಶರೂಪಲಾವಣ್ಯಮಯಿಯಾದ ಪ್ರೌಢಾಂಗನೆಯು ಏಕಾಂತದಲ್ಲಿ ರತಿಕ್ರೀಡೆಗೆ ಬಲಾತ್ಕರಿಸಿದರೂ ಯಾವನು ಚಂಚಲಚಿತ್ತನಾಗದೆ ಮರದ ತುಂಡಿನಂತಿರುವನೋ ಅವನೇ ಜನನೇಂದ್ರಿಯವನ್ನು ನಿಗ್ರಹಿಸಿದವನು. ಮತ್ತು ಘಮಘಮಿಸುವ ಭಕ್ಷ್ಯಭೋಜ್ಯಗಳು ಎದುರಿಗಿದ್ದರೂ ಯಾವನ ನಾಲಿಗೆಯು ನೀರು ಸುರಿಸುವುದಿಲ್ಲವೋ, ರೋಷವು ಉಕ್ಕೇರಿಬರುತ್ತಿದ್ದರೂ ಯಾವನು ಕ್ರೂರವಾದ ಮಾತುಗಳನ್ನಾಡುವುದಿಲ್ಲವೋ, ಅವನೇ ಜಿಹ್ವೇಂದ್ರಿಯವನ್ನು ನಿಗ್ರಹಿಸಿದವನು. ಮುಖ್ಯವಾಗಿ ಇವೆರಡು ಇಂದ್ರಿಯಗಳನ್ನು ನಿಗ್ರಹಿಸುವುದು ಕಷ್ಟ! ಕಡುಕಷ್ಟವು!! “ಅಹೋ ಉಪಸ್ಥ ಜಿಹ್ವಾಭ್ಯಾಂ ದ್ವಾಭ್ಯಾಮೇವ ಹತಂಜಗತ್” ಅಂದರೆ ಜನನೇಂದ್ರಿಯ ಮತ್ತು ನಾಲಗೆ ಎಂಬ ಎರಡು ಇಂದ್ರಿಯಗಳಿಂದಲೇ ಜಗತ್ತಿನಲ್ಲಿ ಭಯಂಕರ ಅನಾಹುತಗಳು ಸಂಭವಿಸುವವೆಂದು ಒಬ್ಬ ಮಹಾತ್ಮರು ಹೇಳಿರುವರು.

ವಿಷಯೇಂದ್ರಿಯಗಳ ಸಂಸ್ಪರ್ಶದಿಂದುದಯಿಸುವ ಉಪಭೋಗಗಳು ದುಃಖಕ್ಕೆ ಕಾರಣೀಭೂತಗಳು. ಆದುದರಿಂದ ಪ್ರಜ್ಞಾಶಾಲಿಯಾದವನು ಅಂತರಿಂದ್ರಿಯ ಬಹಿರಿಂದ್ರಿಯಗಳ ನಿಗ್ರಹದಲ್ಲಿ ಜಾಗರೂಕನಾಗಿರಬೇಕಲ್ಲದೆ ಅವುಗಳಲ್ಲಾಸಕ್ತನಾಗಬಾರದು. ಈ ಜಗತ್ತು ಸುಖರಹಿತವಾದುದೆಂದು ಎಲ್ಲ ಸುವಿಚಾರಿಗಳೂ ಒಪ್ಪುತ್ತಾರೆ, ಸುಖವಿಲ್ಲೆಂಬಂಶವು ಪ್ರಸಂಗತ್ವೇನ ನಮ್ಮೆಲ್ಲರ ಅನುಭವಕ್ಕೂ ಬರುತ್ತದೆ; ಆದರೆ ಆ ನಿಶ್ಚಯವು ದೃಢವಾಗಿ ಉಳಿಯುವುದಿಲ್ಲ. ಒಂದು ಸಮಯದಲ್ಲಿ ನಮ್ಮಷ್ಟಕ್ಕೆ ನಾವೇ “ನಾವು ಎಷ್ಟು ಸುಖಿಗಳಾಗಿದ್ದೇವೆ!” ಎಂದು ಹಿರಿಹಿರಿ ಹಿಗ್ಗುತ್ತೇವೆ. ಮತ್ತೊಂದು ಸಮಯದಲ್ಲಿ ಅದೇ ನಾವೇ “ಎಷ್ಟು ದುಃಖಿಗಳಾಗಿದ್ದೇವೆ!” ಎಂದು ಗುಳುಗುಳು ಅಳುತ್ತೇವೆ. ಸೃಷ್ಟಿಯ ರಚನೆಯೇ ಹೀಗಿರುವದು. ಭೂಮಿಯಲ್ಲಿ ಉತ್ತಮವಾದ ಫಸಲನ್ನು ಪಡೆಯಬೇಕೆಂಬ ಕೃಷಿಕನು ಮೊದಲು ಕಳೆಗಳನ್ನು ಕಿತ್ತುಹಾಕುವುದು ಆಗತ್ಯವಾಗಿರುವಂತೆ ನಿಜಸುಖಾರ್ಥಿಯು ಮನಸ್ಸಿನಿಂದ ವಿಷಯಗಳನ್ನು ನಿರ್ಮೂಲಮಾಡುವುದು ಮುಖ್ಯವಾಗಿರುವುದು.

ಬೆಂಗಳೂರುದಂಡು ಮೈಸೂರಿಗೆ

ಬರುವ ಜೂನ್ ತಿಂಗಳ ಕೊನೆಯಲ್ಲಿ ಬೆಂಗಳೂರು ದಂಡು ಮೈಸೂರು ಸರ್ಕಾರಕ್ಕೆ ವಾಪಸ್ಸು ಕೊಡಲಾಗುವದೆಂದು ತಿಳಿದುಬರುತ್ತದೆ.

ಸೂಚನೆ

ಕಳೆದ ವಾರ ನಮ್ಮ ಪತ್ರಿಕೆಯಲ್ಲಿ ಶ್ರೀ ಜಗದ್ಗುರು ರಂಭಾಪುರೀಪೀಠದಲ್ಲಿ ನಡೆಯುವ ಕಾರ್ಯಕ್ರಮವನ್ನು ಪ್ರಕಟಿಸಿದ್ದುದು ಸರಿಯಷ್ಟೆ! ಆದರೆ ನೂತನ ಮಠದಲ್ಲಿ ಇನ್ನೂ ಕೆಲಸವು ಪೂರ್ತಿಯಾಗದೆ ಇರುವುದರಿಂದಲೂ, ಪಟ್ಟಾಧಿಕಾರ ಸಮಯಕ್ಕೆ ಆ ಕೆಲಸವನ್ನು ಮುಗಿಸಲು ಸಾಧ್ಯವಿಲ್ಲದೆ ಇರುವುದರಿಂದಲೂ ನೂತನ ಮಠ ಪ್ರವೇಶೋತ್ಸವ ಮತ್ತು ಶ್ರೀ ರೇಣುಕಭಗವತ್ಪಾದಾಚಾರ್ಯರ ಮೂರ್ತಿಪ್ರತಿಷ್ಠೆ ಈ ಎರಡು ಕಾರ್ಯಗಳನ್ನು ಸದ್ಯಃ ನಿಲ್ಲಿಸಲಾಗಿದೆ ಎಂದು ತಿಳಿದುಬರುತ್ತದೆ. ಆದರೆ ವೈಶಾಖ ಶುದ್ಧ ೧೨ (ತಾ|| ೨-೫-೧೯೪೭) ಶುಕ್ರವಾರ ದಿವಸ ಪಟ್ಟಾಭಿಷೇಕವು ನೆರವೇರುವುದು. ಪಟ್ಟಾಭಿಷೇಕ ಪತ್ರಿಕೆಯು ಈ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಅದನ್ನು ಸರ್ವರೂ ಓದಿ ನೋಡಿಕೊಳ್ಳಬೇಕೆಂದು ಆಶಿಸುತ್ತೇವೆ.

ಜ್ಞಾನಗುರುವಿದ್ಯಾಪೀಠ

ಪರಮತಪೋನಿಧಿ ಶ್ರೀ|| ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಗುರುವಂಶೀಯರ ಉದ್ಧಾರಕ್ಕಾಗಿ ಸ್ಥಾಪಿಸಬೇಕೆಂದು ಸಂಕಲ್ಪಿಸಿದ್ದ ಮೇಲ್ಕಂಡ ವಿದ್ಯಾಪೀಠವು ಸದ್ಯಃ ಉಜ್ಜಯಿನೀ ಸದ್ಧರ್ಮಪೀಠವನ್ನಲಂಕರಿಸಿರುವ ಶ್ರೀಜಗದ್ಗುರು ಸಿದ್ಧೇಶ್ವರಶಿವಾಚಾರ್ಯ ಮಹಾಸ್ವಾಮಿಗಳವರಿಂದ ಈಗ ಸ್ಥಿರಗೊಳಿಸಲ್ಪಟ್ಟಿರುವುದೆಂಬ ವಿಷಯವನ್ನು ತಿಳುಹಿಸಲು ಅತ್ಯಾನಂದವೆನಿಸುತ್ತದೆ. ತಾ|| ೧೫-೪-೧೯೪೭ನೆಯ ದಿವಸ ಬಳ್ಳಾರಿ ರಿಜಿಸ್ಟರ್ ಆಫೀಸಿನಲ್ಲಿ ಮೇಲ್ಕಂಡ ವಿದ್ಯಾಪೀಠವು "ಶ್ರೀಜಗದ್ಗುರು ಉಜ್ಜಯಿನೀ ಸದ್ಧರ್ಮ ಸಿಂಹಾಸನ ಜ್ಞಾನಗುರುವಿದ್ಯಾಪೀಠ" ಎಂಬ ಹೆಸರಿನಿಂದ ರಿಜಿಸ್ಟರ್ ಮಾಡಿಸಲ್ಪಟ್ಟಿತು. ಅಲ್ಲದೆ ಈ ವರ್ಷ ಈ ಕೆಳಗೆ ಕಂಡಂತೆ ಕಮಿಟಿಯನ್ನು ರಚಿಸಲಾಗಿದೆ

ಅಧ್ಯಕ್ಷರು—ಶ್ರೀಜಗದ್ಗುರು ಸಿದ್ಧೇಶ್ವರರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು

ಉಪಾಧ್ಯಕ್ಷರು—ಹೊಳಲಗುಂದಿ ಪಾಟೀಲ ಬಸವನಗೌಡರು

ಕೋಶಾಧ್ಯಕ್ಷರು—ಬಳ್ಳಾರಿ ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು.

ಸೆಕ್ರೆಟರಿ—ಬಳ್ಳಾರಿ ಗಡಿಗಿ ಮರಿಸ್ವಾಮಪ್ಪನವರು.

ಜಾಯಿಂಟ್ ಸೆಕ್ರೆಟರಿ—ಮುಂಗಾಪುರ ಮಠದ ಚನ್ನಬಸವಯ್ಯನವರು.

ಮೆಂಬರರು

ಶ್ರೀರಂಭಾಪುರೀಪೀಠದ ಪತಿಯಿಂದ ಬಳ್ಳಾರಿ ಕೆ ಎಂ ದಕ್ಷಿಣಾಮೂರ್ತಿಯವರು.

ಶ್ರೀಕೇದಾರಪೀಠದ ಪತಿಯಿಂದ ಬಳ್ಳಾರಿ ಸಿದ್ಧಾಪುರ ಮಠದ ವೀರಭದ್ರಯ್ಯನವರು

ಶ್ರೀಶ್ರೀಶೈಲಪೀಠದ ಪತಿಯಿಂದ ಗುಂತಕಲ್ಲುಮಠದ ಏಜೆಂಟ್ ಎಂ. ನಾಗಯ್ಯನವರು.

ಶ್ರೀಕಾಶೀಪೀಠದ ಪತಿಯಿಂದ ಬಳ್ಳಾರಿ ಮರಿಸ್ವಾಮಿ ಮಠದ ಮರಿಬಸವಾರಾಧ್ಯರು.

ಬಳ್ಳಾರಿ ಗಡಿಗಿ ರುದ್ರಪ್ಪನವರು.

ಕಂಪ್ಲಿ ತೆಗ್ಗಿನಮಠದ ಪಟ್ಟದ ಕೊಟ್ಟೂರುಸ್ವಾಮಿಗಳು

ಹರಪನಹಳ್ಳಿ ತೆಗ್ಗಿನಮಠದ ಪಟ್ಟದ ಚಂದ್ರಶೇಖರ ಸ್ವಾಮಿಗಳು

ಚಿಂತಗುಂಟೆ ರಾಮಗಿರಿಮಠದ ಪಟ್ಟದ ಗುರುಸಿದ್ಧ ಸ್ವಾಮಿಗಳು

ರೌಡಕುಂದಿ ಹಿರೇಮಠದ ಚರಪಟ್ಟದ ಶಿವಯೋಗಿ ಶಿವಾಚಾರ್ಯರು

ಹಿರೇಹಾಳು ಮಳೇಮಠದ ಚರಪಟ್ಟದ ವಿರೂಪಾಕ್ಷ ಸ್ವಾಮಿಗಳು

ಈ ರೀತಿಯಾಗಿ ನಿಯಮಿಸಲ್ಪಟ್ಟಿದ್ದಾರೆ. ಹೆಚ್ಚಿನ ವಿಷಯಗಳನ್ನು ಮುಂದೆ ಪ್ರಕಟಿಸಲಾಗುವುದು.

ಏಜೆಂಟ್, ಶ್ರೀಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀವರದಶಂಕರ ಪೂಜಾಸಮಾರಂಭ ತಡಗಳಲೆ

ಸಾಗರ ತಾಲೂಕು ತಡಗಳಲೆಯಲ್ಲಿರುವ ಶ್ರೀಮಾನ್ ಬಿ ಚನ್ನಬಸಪ್ಪಗೌಡರು ಸುಬ್ರಾಯಗೌಡರು ತಮ್ಮ ಗೃಹದಲ್ಲಿ ಇದೇ ಚೈತ್ರ ಶು|| ಪೌರ್ಣಿಮಾ ಶನಿವಾರ ದಿವಸ ಶ್ರೀವರದಶಂಕರಪೂಜೆಯನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿದರು. ಸದರಿ ಚನ್ನಬಸಪ್ಪಗೌಡರ ಧರ್ಮಪತ್ನಿ ಸೌ|| ಗಂಗಮ್ಮನವರು ಗರ್ಭವತಿಯಾಗಿರುವದರಿಂದ ವೀರಶೈವ ಪದ್ಧತಿಯಂತೆ ೭ ನೇ ತಿಂಗಳಲ್ಲಿ ಚೈತ್ರ ಶು|| ಚತುರ್ದಶಿ ಶುಕ್ರವಾರ ಪ್ರಾತಃಕಾಲ ವೇ|| ಶಿತಿಕಂಠಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಲಿಂಗಧಾರಣವು ಶಾಸ್ತ್ರೋಕ್ತವಾಗಿ ನೆರವೇರಿತು. ಮರುದಿವಸ ಸಾಯಂಕಾಲ ೮ಗಂಟೆಯಿಂದ ಶಂಕರನ ರಜತಮೂರ್ತಿಗೆ ರುದ್ರಾಭಿಷೇಕವೂ ಅಷ್ಟವಿಧಾರ್ಚನೆಗಳೂ ನಡೆದವು. ಪೂಜೆಯು ಸಮಾಪ್ತಿಗೊಂಡಮೇಲೆ ಸದರಿ ಶಾಸ್ತ್ರಿಗಳು ವರದಶಂಕರ ವ್ರತದ ಮಹಿಮೆಯನ್ನು ೧೧ ಘಂಟೆಯವರೆಗೆ ಒಳ್ಳೆಸೊಗಸಾಗಿ ಹೇಳಿ ಜನರ ಮನಸ್ಸನ್ನು ಸಂತೋಷಗೊಳಿಸಿದರು. ಆ ದಿವಸ ಜನರು ಬಹಳವಾಗಿ ನೆರೆದಿದ್ದರು. ಮಹಾಮಂಗಳಾರತಿಯಾದಮೇಲೆ ಪ್ರಸಾದವು ಸರ್ವರಿಗೂ ಹಂಚಲ್ಪಟ್ಟು ಆಶ್ವರಸ್ತೋತ್ರದೊಡನೆ ಸಮಾಪ್ತಿಗೊಂಡಿತು. ಈ ಸಮಯದಲ್ಲಿ ಧರ್ಮಜಾಗೃತಿ ಮಾಡುತ್ತಿರುವ ಪ್ರಭೆಗೆ ೨ರೂಪಾಯಿಗಳೂ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಗೆ ಶಿವಾರ್ಪಣ ಬುದ್ಧಿಯಿಂದ ೩ ರೂಪಾಯಿಗಳೂ ಸಮರ್ಪಿಸಲ್ಪಟ್ಟವು. ಬಳಿಕ ಬಂದ ಮಹೇಶ್ವರಿಗೂ ಬಡವರಿಗೂ ಅನ್ನಸಂತರ್ಪಣೆಯಾಯಿತು. ಧರ್ಮಾಭಿಮಾನಿಗಳಾದ ಈ ದಂಪತಿಗಳಿಗೆ ಶ್ರೀವರದಶಂಕರನೂ ಶ್ರೀಜಗದ್ಗುರು ಪಂಚಾಚಾರ್ಯರೂ ಆಯುರಾರೋಗ್ಯೈಶ್ವರ್ಯ ಸುಪುತ್ರಾದಿಗಳನ್ನು ಅನುಗ್ರಹಿಸಲೆಂದು ಹಾರೈಸುವ,

ಓರ್ವ ಪ್ರತ್ಯಕ್ಷದರ್ಶಿ

ವರ್ತಮಾನಸಂಗ್ರಹ

ದಕ್ಷಿಣ ಧ್ರುವದಿಂದ ವೈಜ್ಞಾನಿಕರ ಪುನರಾಗಮನ

ದಕ್ಷಿಣ ಧ್ರುವ ಪ್ರದೇಶದ ಖನಿಜಸಂಪತ್ತನ್ನು ಪರಿಶೀಲಿಸಲು ಸಂಯುಕ್ತ ಸಂಸ್ಥಾನಗಳಿಂದ ಕಳೆದ ಡಿಸೆಂಬರ್ ತಿಂಗಳಲ್ಲಿ ಹೊರಟಿದ್ದ ವೈಜ್ಞಾನಿಕರು ಈಗ ಹಿಂತಿರುಗಿ ಬಂದಿರುತ್ತಾರೆ.

ವೈಟ್ ಹಾಲಿಗೆ ಬಾಂಬು ಹಾಕಲು ಪ್ರಯತ್ನ

ಡೂವ್ ಗ್ರನ್ನರನ್ನು ಗಲ್ಲಿಗೆ ಏರಿಸಿದ ಪರಿಣಾಮವಾಗಿ ಲಂಡನ್ನಿನಲ್ಲಿರುವ ಯೆಹೂದ್ಯದಂಗೆಕಾರರು ವೈಟ್ ಹಾಲಿನ ಕಲೋನಿಯಲ್ ಆಫೀಸಿಗೆ ಬಾಂಬು ಹಾಕಲು ಪ್ರಯತ್ನ ಪಟ್ಟಿದ್ದರು. ಆದರೆ ಬಾಂಬು ಆಸ್ಫೋಟನೆಯಾಗುವುದಕ್ಕೆ ಮುಂಚೆಯೇ ಬತ್ತಿಯು ಆರಿಹೋಗಿದ್ದರಿಂದ ಏನೂ ಅಪಾಯ ಸಂಭವಿಸಲಿಲ್ಲ.

ಹಿಂಸಾಕೃತ್ಯಗಳನ್ನು ನಿಲ್ಲಿಸಲು ಗಾಂಧಿ-ಜಿನ್ನಾ ಮನವಿ

ರಾಜಕೀಯ ಧ್ಯೇಯ ಸಾಧನೆಯು ಹಿಂಸಾಮಾರ್ಗದಿಂದ ನೆರವೇರುವುದಿಲ್ಲ. ಹಿಂಸಾಮಾರ್ಗಾವಲಂಬನೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಯಾವ ಕೋಮಿನವರಾಗಲಿ, ಮತದವರಾಗಲಿ, ಹಿಂಸಾಕೃತ್ಯಗಳಲ್ಲಿ ಭಾಗವಹಿಸಬಾರದು. ಕಾಯಾ ವಾಚಾ ಮನಸಾ ಹಿಂಸಾ ಮನೋಧರ್ಮವನ್ನು ತ್ಯಜಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ ಎಂದು ಗಾಂಧಿ ಮತ್ತು ಜಿನ್ನಾರವರು ಸಹಿಹಾಕಿದ ಮನವಿಯೊಂದನ್ನು ವೈಸರಾಯರು ಸೂಚನೆಯಂತೆ ಹೊರಡಿಸಿದ್ದಾರೆ.

ಟ್ರೂಮನ್ನರ ಯೋಜನೆಗೆ ಒಪ್ಪಿಗೆ

ಅಮೇರಿಕಾ ಪ್ರತಿನಿಧಿಗಳ ಸಭೆಯ ವಿದೇಶಾಂಗ ವಿಚಾರ ಪರಿಶೀಲನ ಸಮಿತಿಯಲ್ಲಿ ಗ್ರೀಸ್ ಮತ್ತು ಟರ್ಕಿ ರಾಷ್ಟ್ರಗಳಿಗೆ ಸಹಾಯಮಾಡಲು ಅಧ್ಯಕ್ಷ ಟ್ರೂಮನ್ನರು ಸೂಚಿಸಿರತಕ್ಕ ಯೋಜನೆಗೆ ಒಪ್ಪಿಗೆ ದೊರೆಯಿತು.

ಇದಕ್ಕೆ ಸಂಬಂಧಪಟ್ಟ ಚರ್ಚೆ ನಡೆಯುತ್ತಿರುವಾಗ ಈಸಮಿತಿಯ ಅಧ್ಯಕ್ಷರಾದ ವಾಂಡೆನ್‌ಬರ್ಗರವರು, ಈ ಯೋಜನೆಯನ್ನು ತ್ವರೆಗೊಳಿಸಬೇಕೆಂದು ಒತ್ತಾಯಪಡಿಸಿದರು. ಓರ್ವ ರಿಪಬ್ಲಿಕನ್ ಪಕ್ಷದ ಸದಸ್ಯರು ಈ ಯೋಜನೆಯನ್ನು ಖಂಡಿಸಿ, ಈ ನೀತಿಯಿಂದ ಅಮೇರಿಕಾಕ್ಕೆ ಯುದ್ಧ ಮತ್ತು ಹಣದ ಅಭಾವ ಉಂಟಾಗಿರುವ ಸಂಭವವಿದೆ ಎಂದರು.

ಈ ವಿರೋಧಕ್ಕೆ ಉತ್ತರವಾಗಿ ವಾಂಡೆನ್ ಬರ್ಗರವರು ಅಮೇರಿಕಾಕ್ಕಾಗಲಿ ರಷ್ಯಾಕ್ಕಾಗಲೀ ಯುದ್ಧದ ಚಾಪಲ್ಯವಿಲ್ಲ. ಆದರೆ ತಾವೂ ಇದ್ದು, ಇತರರೂ ತಮ್ಮಂತೆಯೇ ಇರಲಿ, ಎಂಬ ಧ್ಯೇಯದ ಮೇಲೆ ರಷ್ಯಾದೊಡನೆ ಸಂಧಾನ ನಡೆಸಲುಮಾರ್ಗವೆಂದರೆ ಅಮೇರಿಕಾ ತನ್ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಬೇಕು ಮತ್ತು ತನ್ನ ಮಾತಿಗನುಸಾರವಾಗಿ ನಡೆಯಬೇಕು ಎಂದು ಹೇಳಿದರು.

ಲೀಗಿಗೆ ಸರ್ದಾರರ ಮನವಿ

"೧೯೪೮ನೇ ಜೂನ್ ತಿಂಗಳೊಳಗೆ ಭಾರತೀಯರು ಅಧಿಕಾರ ಸ್ವೀಕಾರ ಮಾಡಬೇಕಾದರೆ, ಕಾಂಗ್ರೆಸ್ಸು ಸ್ವಾಗತಿಸಿರುವಂತೆ ಮುಸ್ಲಿಂಲೀಗಿನವರು, ಬ್ರಿಟಿಷ್ ಸರ್ಕಾರ ಇತ್ತಿರುವ ಹೇಳಿಕೆಯಿಂದೊದಗಿರುವ ಬಿಕ್ಕಟ್ಟನ್ನು ಪರಿಶೀಲಿಸಲು ಸಹಕರಿಸಬೇಕು. ನಮ್ಮನಮ್ಮೊಳಗೆ ಒಮ್ಮತವು ದೊರೆಯದಿದ್ದರೆ ಈ ಸಮಸ್ಯೆಯನ್ನು ಮೂರನೆಯವರಿಗೊಪ್ಪಿಸೋಣ! ಅಲ್ಲಿಯೂ ಸಮಾಧಾನ ದೊರೆಯದಿದ್ದಲ್ಲಿ ವಿಧಿಯಿದ್ದಂತಾಗಲಿ"

"ಬ್ರಿಟಿಷ್ ಸರ್ಕಾರವೇ ಸಾರ್ವಭೌಮತ್ವವನ್ನು ಕೊನೆಗಾಣಿಸಲು ಪ್ರಯತ್ನಿಸಿರುವಾಗ ರಾಜರು ಬ್ರಿಟಿಷ್ ಸರ್ಕಾರದೊಡನೆ ವ್ಯವಹರಿಸುತ್ತಾ ಭಾರತದಲ್ಲಿ ಯಾರಿಗೆ ಅಧಿಕಾರ ಬದಲಾವಣೆಯಾಗುವುದೆಂದು ಕಾದು ನೋಡುತ್ತಿರುವುದು ಶೋಚನೀಯ! ಈಗಲಾದರೂ ಅವರು ರಾಜ್ಯಾಂಗ ರಚನಾ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಸಹಕರಿಸಲಿ, ಕಾಂಗ್ರೆಸ್ ಎಲ್ಲರಿಗೂ ನ್ಯಾಯ ದೊರಕಿಸಿಕೊಡುವುದು. ಒತ್ತಾಯ ಮಾಡುವುದಿಲ್ಲ. ಆದರೆ ಬ್ರಿಟಿಷರ ಅಲ್ಪಿಕೆಯ ಮೇಲೆಯೇ ಹೋರಾಡಿದ ಕಾಂಗ್ರೆಸ್ಸು ಗೊಡ್ಡು ಹೆದರಿಕೆಗಳಿಗೆ ತಲೆಬಾಗುವುದಿಲ್ಲ" ಎಂದು ಭಾಷಣ ಮಾಡಿದರು.

ಕಮ್ಯೂನಿಸ್ಟ್ ಕಚೇರಿಯ ಝಡತಿ

ಅಫಿಸಿಯಲ್ ಸೀಕ್ರೆಟ್ ಆಕ್ಟನ್ನು ಮೀರಿ, ಆಕ್ಷೇಪಕರವಾದ ಲೇಖನವೊಂದನ್ನು ಪ್ರಕಟಿಸಿದ್ದದಕ್ಕಾಗಿ ಬೊಂಬಾಯಿಯಲ್ಲಿ ಪ್ರಕಟವಾಗುವ ಕಮ್ಯೂನಿಸ್ಟ್ ಪಕ್ಷದ ಪತ್ರಿಕೆಯಾದ 'ಪೀಪಲ್ಸ್ ಏಜ್' ಮುದ್ರಣವಾಗುವ ಪ್ರೆಸ್ಸನ್ನೂ ಕಮ್ಯೂನಿಸ್ಟರ ಕಚೇರಿಯನ್ನೂ ಪೋಲೀಸರು ಜಪ್ತಿಮಾಡಿ ಪ್ರಕಟವಾದ ಲೇಖನದ ಪತ್ರಿಕೆಯ ಪ್ರತಿಗಳನ್ನೂ ವಶಪಡಿಸಿಕೊಂಡರು. ಮಾಜಿ ಸಂಪಾದಕರಾದ ಡಾ|| ಅಧಿಕಾರಿ ಮತ್ತು ಎಂ. ಬಿ ರಾವ್ ಇವರನ್ನು ದಸ್ತಗಿರಿ ಮಾಡಿ ಅನಂತರ ಬಿಡುಗಡೆ ಮಾಡಲಾಯಿತು.

ಸ್ವೀಕಾರ

ಶಿವಮೊಗ್ಗಾ ಡಿ|| ಸಾಗರತಾ|| ತಡಗಳಲೆ ಗ್ರಾಮದಲ್ಲಿರುವ ಮ|| ರಾ|| ಚನ್ನಬಸವಪ್ಪಗೌಡರು ತಮ್ಮ ಗೃಹದಲ್ಲಿ ಚೈತ್ರ ಶುದ್ಧ ಪೌರ್ಣಿಮೆಯ ದಿವಸ ಶ್ರೀ ವರದಶಂಕರನ ಪೂಜೆಯನ್ನು ಮಹಾವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ|| ಹಂಚಿನಾಳ ಹಿರಿಯ ಮಠದ ಶಿತಿಕಂಠಶಾಸ್ತ್ರಿಗಳ ದ್ವಾರಾ ತಲ್ಪಿತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಜಾಸ್ತಿ ಬಾಡಿಗೆ ತೆಗೆದುಕೊಂಡಿದ್ದಕ್ಕೆ ಜುಲ್ಮಾನೆ

ರಾಜಧಾನಿಯ ೩೭ನೇ ನಂಬರಿನ [illegible] ಮಾಲಿಕನು ಮೈಸೂರು ರೈಲ್ವೆ ನಿಲ್ದಾಣದಿಂದ [illegible] ಪುರಕ್ಕೆ ನಿಗದಿಬೆಲೆ ಬಿಟ್ಟು ೧-೪-೦ರೂ. ಬಾಡಿಗೆ ತೆಗೆದುಕೊಂಡನೆಂದು ಪೌರಸಭೆಯ ಹೆಲ್ತ್ ಇನ್ಸ್ಪೆಕ್ಟರ್ ಶ್ರೀ ಶ್ರೀನಿವಾಸರಾಯರು ನಗರನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ೨ನೇ ನ್ಯಾಯಾಧೀಶರು ಆಪಾದಿತನಿಗೆ ೧೦ರೂ ಜುಲ್ಮಾನೆ ವಿಧಿಸಿದರು

ದಿವಾನ್ ಸಾಹೇಬರ ಹೇಳಿಕೆ

ಮೈಸೂರು ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರರು ಪತ್ರಿಕಾಪ್ರತಿನಿಧಿಗಳಿಗೆ ಇತ್ತ ಭೇಟಿಯಲ್ಲಿ ಈ ರೀತಿ ತಿಳಿಸಿದ್ದಾರೆ

ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮೈಸೂರು ಕಾಂಗ್ರೆಸ್ ಹೂಡಬೇಕೆಂದಿರುವ ಸತ್ಯಾಗ್ರಹದ ವಿಷಯದಲ್ಲಿ ಪ್ರಸ್ತಾಪಿಸುತ್ತಾ ದಿವಾನರು—ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವ ಚಳವಳಿಯನ್ನೇ ಆಗಲಿ ಹೂಡುವುದು ದೋಷಾಸ್ಪದ. ಈಗಿನ ರಾಜಕೀಯ ಪರಿಸ್ಥಿತಿ ಮತ್ತು ಕೋಮುವಾರು ವಾತಾವರಣದಲ್ಲಿ ಒಂದು ಬಾರಿ ಪ್ರಾರಂಭವಾದ ಚಳವಳಿಯು ಅದು ಅಹಿಂಸಾತ್ಮಕವಾಗಿರಬೇಕೆಂದು ಮುಖಂಡರು ಎಷ್ಟೇ ಬಯಸಿದರೂ, ಅವರ ಹತೋಟಿ ತಪ್ಪಬಹುದು. ಶ್ರೀಮನ್ಮಹಾರಾಜರವರು ಅಪ್ಪಣೆಯಿತ್ತಿರುವ ರಾಜಕೀಯ ಮತ್ತು ರಾಜ್ಯಾಂಗ ಯೋಜನೆಗಳನ್ನು ತಯಾರಿಸುವ ಸ್ರಕ್ಸಿಯ [illegible] ನನಗೆ [illegible]" ಎಂದು ಹೇಳಿ [illegible] ನಡೆವ ಕೋಮುವಾರು [illegible] ವ್ಯಕ್ತಪಡಿಸಿದರು.

ಏರ್ ಕ್ರಾಫ್ಟ್ ವಿಷಯ

[illegible] ಏರ್ ಕ್ರಾಫ್ಟ್‌ನಲ್ಲಿ ಮೈಸೂರು [illegible] ಒಂದು ಭಾಗ ಸೇರು [illegible] ಭಾರತ ಸರ್ಕಾರದವರು ಮೈಸೂರಿಗೆ ತನ್ನ [illegible] ಆಕಾಂಕ್ಷೆಯಿದೆ.

ವಿಮಾನ ಕಾರ್ಖಾನೆಯ ಅಭಿವೃದ್ಧಿಯೋಜನೆಯಲ್ಲಿ ಮೈಸೂರು ಭಾಗವಹಿಸುವುದು. ನಾನು ಕಳೆದ ಸಾರಿ [illegible] ಈ ಪ್ರಶ್ನೆಯನ್ನು ಚರ್ಚಿಸಿ, ಇತ್ಯರ್ಥ ಮಾಡಿ. ೧೯೪೭ನೇ ನವೆಂಬರ್ ನ ಳಗೆ ವಿಮಾನವನ್ನು [illegible] ತಯಾರಿಸಬೇಕೆಂದು ನಿರ್ಧರಿಸಿದೆವು. ಸಿವಿಲ್ ಏರ್ ಕ್ರಾಫ್ಟ್ [illegible] ಪ್ರವೀಣರೊಬ್ಬರು [illegible] ಭಾರತ ಸರ್ಕಾರದ ಕೈಗಾರಿಕಾ ಸಚಿವರು, ಮೈಸೂರು ದಿವಾನರು, ಮತ್ತು ಉದ್ಯಮದಾರರೊಬ್ಬರನ್ನೊಳಗೊಂಡ ಡೈರೆಕ್ಟರುಗಳ ಸಮಿತಿಯೊಂದನ್ನು ರಚಿಸಲಾಗಿದೆ. ಕಾರ್ಖಾನೆಯ ದಿನದ ಆಡಳಿತವನ್ನು ಜನರಲ್ ಮ್ಯಾನೇಜರ್, ಟೆಕ್ನಿಕಲ್ ಮ್ಯಾನೇಜರ್ ಮತ್ತು ಭಾರತ ಮತ್ತು ಮೈಸೂರು ಸರ್ಕಾರದ ಒಬ್ಬೊಬ್ಬ ಪ್ರತಿನಿಧಿಗಳನ್ನೊಳಗೊಂಡಸಮಿತಿ ವಹಿಸಲಾಗುವುದು-ಎಂದು ತಿಳಿಸಿದರು.

ಭಟ್ಕಲ್ ಬಂದರದ ಯೋಜನೆಗೆ ಬೆಂಬಲ

"ಮೈಸೂರು ಸಂಸ್ಥಾನದ ಆರ್ಥಿಕಾಭಿವೃದ್ಧಿಗೂ, ವಾಣಿಜ್ಯಕ್ಕೂ ಭಟ್ಕಲ್ ಬಂದರವು ಮಹಾದ್ವಾರದಂತಿದೆ. ಇದರ ಸಮೀಪದಲ್ಲಿ ಸಂಪತ್ತಿನ ನಾಡಾದ ಮೈಸೂರು ಬೆಂಬಲ ಪ್ರದೇಶವಾಗಿರುವುದರಿಂದ ಈ ಯೋಜನೆಯು ಆರ್ಥಿಕ ದೃಷ್ಟಿಯಿಂದ ಬಹಳ ಶ್ಲಾಘನೀಯವಾಗಿದೆ." ಎಂದು ಭಾರತ ಸರಕಾರದವರು ನೇಮಿಸಲ್ಪಟ್ಟಿರುವ ಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ ಈ ಯೋಜನೆಯು ಜಯಪ್ರದವಾಗಲು ಮೈಸೂರಿಗೆ ಎರಡು ರಿಯಾಯಿತಿಗಳು ಮುಖ್ಯ—

೧. ಭಟ್ಕಲ್‌ನಲ್ಲಿ ಬಂದರದ ತಯಾರಿಕೆ ಮತ್ತು ೧೪ ಮೈಲಿಗಳ ಉದ್ದ ರೈಲು ಮಾರ್ಗವೇರ್ಪಡಿಸಲು ಅನುಮತಿ.

೨. ೯೦ ವರ್ಷಗಳ ವರೆಗೆ ಅವಿಚ್ಛಿನ್ನವಾಗಿ ೨೦೦ ಚದರ ಮೈಲಿಗಳ ಪ್ರದೇಶವನ್ನು ಬಿಟ್ಟುಕೊಡುವುದು.

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆ

"ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆ" ಯ ಸಂದರ್ಭದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ತ್ಯಾಗರಾಜ ಭಾಗವತರ್ ಮತ್ತು ಎಸ್. ಎಸ್. ಕೃಷ್ಣನ್ ಇವರ ಅಪೀಲಿನ ಪುನರ್ವಿಚಾರಣೆ ನಡೆಸಬೇಕೆಂದು ಪ್ರೀವಿಕೌನ್ಸಿಲ್ ಮದ್ರಾಸ್ ಶ್ರೇಷ್ಠ ನ್ಯಾಯಸ್ಥಾನಕ್ಕೆ ಸೂಚನೆ ಇತ್ತಿದ್ದುದು ಸರಿಯಷ್ಟೆ! ಅದರಂತೆ ಈದಿವಸ ಪುನರ್ವಿಚಾರಣೆಯು ಮದ್ರಾಸ್ ಹೈಕೋರ್ಟಿನಲ್ಲಿ ನಡೆಯುವುದೆಂದು ತಿಳಿದು ಬಂದಿದೆ.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೭ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಟಿಪ್ಪಣಿಯು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು, ೭ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಃಸೂತ್ರೀ)	೧।। ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧।। ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As.
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
षट्स्थलकारिका: (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಜಾಸ್ತಿ ಬಾಡಿಗೆ ತೆಗೆದುಕೊಂಡಿದ್ದಕ್ಕೆ ಜುಲ್ಮಾನೆ

ರಾಜಧಾನಿಯ ೩೨ನೇ ನಂಬರಿನ ಟಾಂಗಾಗಾಡಿ ಮಾಲಿಕನು ಮೈಸೂರು ರೈಲ್ವೆ ನಿಲ್ದಾಣದಿಂದ ಲಕ್ಷ್ಮೀಪುರಕ್ಕೆ ನಿಗದಿಪೆಲೆ ಬಿಟ್ಟು ೧-೪ ೦ರೂ ಬಾಡಿಗೆ ತೆಗದುಕೊಂಡನೆಂದು ಪೌರಸಭೆಯ ಹೆಲ್ತ್ ಇನ್ಸ್‌ಪೆಕ್ಟರ್ ವಿ ಶ್ರೀನಿವಾಸರಾಯರು ನಗರನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ೨ನೇ ನ್ಯಾಯಾಧೀಶರು ಆಪಾದಿತನಿಗೆ ೧೦ರೂ ಜುಲ್ಮಾನೆ ವಿಧಿಸಿದರು

ದಿವಾನ್ ಸಾಹೇಬರ ಹೇಳಿಕೆ

ಮೈಸೂರು ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರರು ಪತ್ರಿಕಾಪ್ರತಿನಿಧಿಗಳಿಗೆ ಇತ್ತ ... ಯಲ್ಲಿ ಈ ರೀತಿ ತಿಳಿಸಿದ್ದಾರೆ

ಜವಾಬ್ದಾರಿ ಸರಕಾರ ಸ್ಥಾಪನೆಗೆ ಮೈಸೂರು ಕಾಂಗ್ರೆಸ್ ಮಾಡಬೇಕೆಂದಿರುವ ಸತ್ಯಾಗ್ರಹದ ವಿಷಯದಲ್ಲಿ ಪ್ರಸ್ತಾಪಿಸುತ್ತಾ ದಿವಾನರು—ಈ ಸಮಯದ ಪರಿಸ್ಥಿತಿಯಲ್ಲಿ ಯಾವ ಚಳವಳಿಯನ್ನೇ ಆಗಲಿ ಹೂಡುವುದು ಆಕ್ಷೇಪಾರ್ಹವಾದ ಈಗಿನ ರಾಜಕೀಯ ಪರಿಸ್ಥಿತಿ ಮತ್ತು ಕೋಮುವಾರು ವಾತಾವರಣದಲ್ಲಿ ಒಂದು ವೇಳೆ ಪ್ರಾರಂಭವಾದ ಚಳವಳಿಯು ಅದು ಅಹಿಂಸಾತ್ಮಕವಾಗಿರಬೇಕೆಂದು ಮುಖಂಡರು ಎಷ್ಟೇ ಬಯಸಿದರೂ ಅವರ ಹತೋಟಿ ತಪ್ಪಬಹುದು ಶ್ರೀ ಚೆನ್ನಯ್ಯ ... ರವರು ಒಪ್ಪಿಕೊಂಡಿರುವ ರಾಜಕೀಯ ಮತ್ತು ... ಭಾಗ್ಯಾಂಗ ಯೋಜನೆಗಳನ್ನು ತಯಾರಿಸುವ ಪ್ರಶ್ನೆಯ ಬಗ್ಗೆ ಒಂದೇ ಮನಸ್ಸಿನಿಂದ ಕೆಲಸಮಾಡಲು ನನಗೆ ಶಾಂತ ವಾತಾವರಣ ಅತ್ಯಾವಶ್ಯಕ ಎಂದು ಹೇಳಿ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕೋಮುವಾರು ಗಲಭೆಯ ಬಗೆ ವಿಷಾದವನ್ನು ವ್ಯಕ್ತಪಡಿಸಿದರು

ಏರ್‌ಕ್ರಾಫ್ಟ್ ವಿಷಯ

... ಏರ್‌ಕ್ರಾಫ್ಟ್ ಫ್ಯಾಕ್ಟರಿಯ ವಿಸ್ತರಣದ ... ಹಿಂದೂಸ್ಥಾನ್ ಏರ್‌ಕ್ರಾಫ್ಟ್‌ನಲ್ಲಿ ಮೈಸೂರು ಸರ್ಕಾರದ ಮೂರನೇ ಒಂದು ಭಾಗ ಷೇರು ... ಭಾರತ ಸರ್ಕಾರದವರು ಮೈಸೂರಿಗೆ ತನ್ನ ... ನ್ನು ಉಳಿಸಿಕೊಳ್ಳುವ ಆಕಾಂಕ್ಷೆಯಿದೆ

ವಿಮಾನ ಕಾರ್ಖಾನೆಯ ಅಭಿವೃದ್ಧಿಯೋಜನೆಯಲ್ಲಿ ಮೈಸೂರು ಭಾಗವಹಿಸುವುದು ನಾನು ಕಳೆದ ಸಾರೆ ದಿಹಲಿಯಲ್ಲಿದ್ದಾಗ ಈ ಪ್ರಶ್ನೆಯನ್ನು ಚರ್ಚಿಸಿ, ಇತ್ಯರ್ಥ ಮಾಡಿ, ೧೯೪೭ನೇ ನವೆಂಬರ್ ವೇಳೆಗೆ ವಿಮಾನವನ್ನು ಫ್ಯಾಕ್ಟರಿಯು ತಯಾರಿಸಬೇಕೆಂದು ನಿರ್ಧರಿಸಿದೆವು ಪರ್ಸಿವಲ್ ಏರ್‌ಕ್ರಾಫ್ಟ್ ಫ್ಯಾಕ್ಟರಿಯ ಪ್ರವೀಣರೊಬ್ಬರು ಈಗಾಗಲೇ ಒಂದು ಕಾರ್ಯನಿರ್ವಾಹಕರಾಗಿದ್ದಾರೆ ಭಾರತ ಸರ್ಕಾರದ ಕೈಗಾರಿಕಾ ಸಚಿವರು, ಮೈಸೂರು ದಿವಾನರು, ಮತ್ತು ಉದ್ದಿಮೆದಾರರೊಬ್ಬರನ್ನೊಳಗೊಂಡ ಡೈರೆಕ್ಟರುಗಳ ಸಮಿತಿಯೊಂದನ್ನು ರಚಿಸಲಾಗಿದೆ ಕಾರ್ಖಾನೆಯ ದಿನದ ಆಡಳಿತವನ್ನು ಜನರಲ್ ಮ್ಯಾನೇಜರ್, ಟೆಕ್ನಿಕಲ್ ಮ್ಯಾನೇಜರ್ ಮತ್ತು ಭಾರತ ಮತ್ತು ಮೈಸೂರು ಸರ್ಕಾರದ ಒಬ್ಬೊಬ್ಬ ಪ್ರತಿನಿಧಿಗಳನ್ನೊಳಗೊಂಡಸಮಿತಿ ವಹಿಸಲಾಗುವುದು ಎಂದು ತಿಳಿಸಿದರು

ಭಟ್ಕಳ್ ಬಂದರದ ಯೋಜನೆಗೆ ಬೆಂಬಲ

' ಮೈಸೂರು ಸಂಸ್ಥಾನದ ಆರ್ಥಿಕಾಭಿವೃದ್ಧಿಗೂ ವಾಣಿಜ್ಯಕ್ಕೂ ಭಟ್ಕಲ್ ಬಂದರವು ಮಹಾದ್ವಾರದಂತಿದೆ ಇದರ ಸಮೀಪದಲ್ಲಿ ಸಂಪತ್ತಿನ ನಾಡಾದ ಮೈಸೂರು ಬೆಂಬಲ ಪ್ರದೇಶವಾಗಿರುವುದರಿಂದ ಈ ಯೋಜನೆಯು ಆರ್ಥಿಕ ದೃಷ್ಟಿಯಿಂದ ಬಹಳ ಶ್ಲಾಘನೀಯವಾಗಿದೆ" ಎಂದು ಭಾರತ ಸರಕಾರದವರು ನೇಮಿಸಲ್ಪಟ್ಟಿರುವ ಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ ಈ ಯೋಜನೆಯು ಜಯಪ್ರದವಾಗಲು ಮೈಸೂರಿಗೆ ಎರಡು ರಿಯಾಯಿತಿಗಳು ಮುಖ್ಯ—

೧ ಭಟ್ಕಲ್‌ನಲ್ಲಿ ಬಂದರದ ತಯಾರಿಕೆ ಮತ್ತು ೧೪ ಮೈಲಿಗಳ ಉದ್ದ ರೈಲು ಮಾರ್ಗವೇರ್ಪಡಿಸಲು ಅನುಮತಿ

೨ ೯೦ ವರ್ಷಗಳ ವರೆಗೆ ಅವಿಚ್ಛಿನ್ನವಾಗಿ ೨೦೦ ಚದರ ಮೈಲಿಗಳ ಪ್ರದೇಶವನ್ನು ಬಿಟ್ಟುಕೊಡುವುದು

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆ

" ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆ " ಯ ಸಂದರ್ಭದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ತ್ಯಾಗರಾಜ ಭಾಗವತರ್ ಮತ್ತು ಎನ್. ಎಸ್ ಕೃಷ್ಣನ್ ಇವರ ಅಪೀಲಿನ ಪುನರ್ವಿಚಾರಣೆ ನಡೆಸಬೇಕೆಂದು ಪ್ರೀವಿಕೌನ್ಸಿಲ್ ಮದ್ರಾಸ್ ಶ್ರೇಷ್ಠ ನ್ಯಾಯಸ್ಥಾನಕ್ಕೆ ಸೂಚನೆ ಇತ್ತಿದ್ದುದು ಸರಿಯಷ್ಟೆ ! ಅದರಂತೆ ಈದಿವಸ ಪುನರ್ವಿಚಾರಣೆಯು ಮದ್ರಾಸ್ ಹೈಕೋರ್ಟಿನಲ್ಲಿ ನಡೆಯುವುದೆಂದು ತಿಳಿದು ಬಂದಿದೆ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಒಸವಾದಿಪ್ರಮಥತತ್ತ್ವದರ್ಪಣ (೬ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೭ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವದರ್ಪಣ (೭ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೬ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೬ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
क्रियासारकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

[illegible]

21

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಸತತಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರೆಮ್ಮಂ ಪಾಲಿಪ್ಪುದೀಲೋಕವಂ ॥

ಸ್ಥಳದವರಿಗೆ ೨ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೮ನೇ ಏಪ್ರಿಲ್ ೧೯೪೭ [ಸಂಚಿಕೆ ೧

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಪ್ರಭಾದೇವಿಯ ಪ್ರಭೆಯು ಸರ್ವತ್ರ ಬೆಳಗಲಿ

— —

ವೇ॥ ಮಲ್ಲಿಕಾರ್ಜುನಶಾಸ್ತ್ರಿ ಶಾಸ್ತ್ರಿಮಠರವರು ಹಿರೇಮಠ ಮುದೇನೂರು

ಯಾವನು ಚರಾಚರಾತ್ಮಕವಾದೀ ಜಗತ್ತಿಗೆ ಮೂಲ ಕಾರಣೀಭೂತನಾಗಿಯೂ, ಪ್ರಾಣಿಗಳ ಅಜ್ಞಾನಾಂಧಕಾರನಾಶಕನಾಗಿಯೂ ಇರುವನೋ, ಯಾವನು ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿ ಏಕನಾಗಿದ್ದರೂ ಪ್ರತಿರೂಪದಲ್ಲಿಯೂ ಭಿನ್ನಾತ್ಮನಾಗಿ ತೋರುವನೋ, ಯಾವನ ದಿವ್ಯಪ್ರಕಾಶದ ಪರಮಾಣುಮಾತ್ರದಿಂದಲೇ ಅನ್ನಾದರೂ ರವಿಚಂದ್ರರು ಪ್ರದರ್ಶಿಸಲಾರದ ದಿವಾರಾತ್ರಿಗಳಲ್ಲಿ ದಣಿವು ದೃತಿಗೆಡುತ್ತಿರುವರೋ, ಯಾವನ ಅವ್ಯಕ್ತನಾಮವನ್ನು ವಿಹಂಗಮ ಗಣವೂ, ನದನದೀ ನಿರ್ಝರಿಣಿಗಳೂ ಕಲಕಲಧ್ವನಿಯಿಂದ ಕೀರ್ತಿಸುತ್ತಿವೆಯೋ, ಯಾವನ ದಿವ್ಯದರ್ಶನವನ್ನು ಹೊಂದುವುದಕ್ಕಾಗಿ ಮೋಡಗಳು ಆಕಾಶದಲ್ಲಿ ಅಲೆದಲೆದು ಕೊನೆಗದು ಲಭ್ಯವಾಗದಿರಲು ಗದ್ಗದ ಕಂಠದಿಂದ ಧ್ವನಿಗೈಯುತ್ತ ಅಶ್ರುಜಲವನ್ನು ವರ್ಷಿಸುತ್ತವೆಯೋ, ಯಾವನ ಚರಣಾರ್ಚನೆಗೆ ಪರಿಪೂರ್ಣವಸನಗಳಿಂದ ಸಮಾವೃತವಾದ ತರುಲತಾನಿಕರವು ಫಲಪುಷ್ಪಗಳನ್ನರ್ಪಿಸುತ್ತವೆಯೋ ಆ ಮಹಾಪುರುಷನ ಕೃಪಾಕಟಾಕ್ಷದಿಂದ ಈ ನಮ್ಮ ಪ್ರಭಾದೇವಿಗೆ ಇದೇ ಸರ್ವಜಿತ್‌ಸಂವತ್ಸರದ ವೈಶಾಖ ಶು' ೫ ಗೆ ಇಪ್ಪತ್ತೊಂದನೆಯ ವರ್ಷವು ಪ್ರಾರಂಭವಾಗಿರುವುದು ಸ್ವಧರ್ಮಾನುರಾಗಿಗಳಾದ ಗ್ರಾಹಕ ಅನುಗ್ರಾಹಕರುಗಳ ನಿಜಮಂದಿರಗಳಲ್ಲಿ ಸಾದರದಿಂದ ಸತ್ಕರಿಸಲ್ಪಡುತ್ತಿರುವಳು. ಸುಜ್ಞರಾದ ಲೇಖಕರು ಪ್ರಭೆಯನ್ನು ವಿವಿಧ ಪ್ರಬಂಧರೂಪವಾದ ಗದ್ಯವಸನಗಳಿಂದಲೂ, ಪದ್ಯಭೂಷಣಗಳಿಂದಲೂ ಪ್ರಸಾಧಿಸಿ ಸಾಹಿತ್ಯ ಸಮಾಜಕ್ಕೂ ಪ್ರಭಾಮಾತೆಗೂ ಸಾಮರಸ್ಯವು ಸಂಜನಿಸುವಂತೆ ಸಂಕಲ್ಪಿಸುತ್ತಿರುವರು

ಸಾರಾಸಾರ ವಿಚಾರಶೀಲರೇ! ಅಪ್ರಾರ್ಥನೀಯ ಗಳಿಂದ ಪೂರ್ಣವಾದ ಜಗತ್ತಿನ ಈಗಿನ ಪರಿಸ್ಥಿತಿಯಲ್ಲಿ ಪ್ರಭೆಯು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ವೃದ್ಧಿಯನ್ನೈದುತ್ತ ಬಂದಿರುವುದಕ್ಕೆ ಜಗದಾಚಾರ್ಯರ ಕೃಪಾಶೀರ್ವಾದವೂ, ಪ್ರಭಾ ಜನ್ಮದಾತರೂ, ಧರ್ಮಾವತಾರಿಗಳೂ, ಗುರುಕುಲತಿಲಕರೂ, ವಿದ್ವನ್ಮಣಿಗಳೂ ಆದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರೀಜಿಯವರ ಆತ್ಮಶಕ್ತಿಯ ತೇಜಸ್ಸಿನ ಪ್ರಭಾವವೂ ಮತ್ತು ಲೇಖಕರ ಗ್ರಾಹಕರ ಅಭಿಮಾನೌದಾರ್ಯಗಳೂ ಕಾರಣಗಳೆಂದು ಹೇಳಿದರೆ ಅತಿಶಯೋಕ್ತಿಯೆನಿಸದು ಅಷ್ಟೆ!

ಭರತಖಂಡದಲ್ಲಿರುವ ಸನಾತನ ಮತಗಳಲ್ಲಿ ಒಂದಾದ ನಮ್ಮೀವೀರಶೈವಮತವು ಪರಮ ಶ್ರೇಷ್ಠವೂ ಅತಏವ ಮೋಕ್ಷದಾಯಕವೂ ಆಗಿರುವುದು. ಇಂತಹ ಮತಕ್ಕೆ ಕಲಿದೋಷದಿಂದ ಉಚ್ಚನೀಚ ತಾರತಮ್ಯವಿಲ್ಲದ ಸೋಂಕು ವಜ್ರಲೇಪದಂತೆ ಬಲವಾಗಿ ಅಂಟಿಕೊಂಡು ಬಂದಿತ್ತು ಜನಗಳಾದರೂ ನಿಜತತ್ವವನ್ನು ಮರೆತು ಗಾಢಾಂಧಕಾರದಲ್ಲಿ ಮುಳುಗಿ ಗಾಢನಿದ್ರೆಯಲ್ಲಿದ್ದರು. ಜನಸಂಖ್ಯೆಯಲ್ಲಿ ಈ ವಿಧವಾದ ಜನರೇ ಬಹಳವಾಗಿದ್ದರು. ನಿಜತತ್ವವನ್ನರಿತ ಒಬ್ಬಿಬ್ಬರು ನಿಜತತ್ವವನ್ನು ಬೋಧಿಸಲು ಅವರ ನಾಲಗೆಯು ಕುಂಠಿತವಾಗಿತ್ತು. ಧರ್ಮದ ಗ್ಲಾನಿಯೂ ಅಧರ್ಮದ ಏಳಿಗೆಯೂ ಆದಕಾಲದಲ್ಲಿ ಮಹಾಪುರುಷರ ಅವತಾರವು ಈಶ್ವರಸಂಕೇತವಾಗಿರುವಂತೆ ಇಂತಹ ವಿಷಮ ಕಾಲದಲ್ಲಿ ಶ್ರೀ ಕಾಶೀನಾಥ ಪಂಡಿತರು ಅವತರಿಸಿ ಪ್ರಭಾದೇವಿಯ ಮೂಲಕ ಜಗತ್ತಿಗೆ ನಿಜತತ್ವಾಮೃತ ಪಾನವಂ ಮಾಡಿಸಿ ಎಚ್ಚರಗೊಳಿಸಿದರು. ಪ್ರಭಾದೇವಿಯು ಈ ಮತದ ಪ್ರಾಚೀನತೆಯನ್ನೂ ಶ್ರೇಷ್ಠತೆಯನ್ನೂ ಮತಸ್ಥಾಪನಾಚಾರ್ಯರ ಅಗಾಧ ಮಹಿಮೆಗಳನ್ನೂ ಬೋಧಿಸುತ್ತ ಬಂದದ್ದರಿಂದ ಸೂರ್ಯೋದಯದಿಂದ ಅಂಧಕಾರವು ಮರೆಯಾಗುವಂತೆ ದುರ್ಮಾರ್ಗವು ಮೆಲ್ಲಮೆಲ್ಲನೆ ಮರೆಯಾಗುತ್ತ ಬಂದಿತು ಈರೀತಿಯಲ್ಲಿ ವೀರಶೈವ ಮತಕ್ಕೆ ಮಹೋಪಕಾರವಂ ಮಾಡಿರುವ ಮಾಡುತ್ತಿರುವ ಪ್ರಭಾಮಾತೆಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಕಿರಿದಾಗಿದೆ ಅಲ್ಲದೆ ಪ್ರತಿ ವಾರವೂ ನಮ್ಮ ಮನೆಗೆ ಬಂದು ಬೋಧಿಸುತ್ತಿರುವ ಮತ್ತು ಅಹೋರಾತ್ರಿ ಈ ಮತದ ಏಳಿಗೆಗಾಗಿ ಅವಿಶ್ರಾಂತವಾಗಿ ಶ್ರಮಪಡುತ್ತಿರುವ ಬೋಧಕ ಗುರುರೂಪವಾದ ಈ ಪತ್ರಿಕೆಗೆ ಚಂದಾದಾರರಾಗುವುದೂ ಶುಭಾಶುಭ ಕಾರ್ಯಗಳಲ್ಲಿ ಇದರ ಪೋಷಣಕ್ಕಾಗಿ ಧನಸಹಾಯ ಮಾಡುವುದೂ ಪ್ರತಿಯೊಬ್ಬ ವೀರಶೈವನ ಆದ್ಯ ಕರ್ತವ್ಯವಾಗಿರುವುದು

ಜಯವಾಗಲಿ, ಜಯವಾಗಲಿ, ಜಗದಾಚಾರ್ಯರ ಪವಿತ್ರ ನಾಮದಿಂದ ಮೆರೆವ ಪ್ರಭೆಗೆ ಜಯವಾಗಲಿ, ಜಗದಾಚಾರ್ಯರ ಸದ್ಭಕ್ತರಿಗೆ ಜಯವಾಗಲಿ, ಪಂಡಿತ ಶ್ರೀ ಕಾಶೀನಾಥಶಾಸ್ತ್ರೀಜಿಯವರ ಆಯುರಾರೋಗ್ಯ ವೃದ್ಧಿಯಾಗಲಿ, ಧರ್ಮದ್ರೋಹಾದಿಗಳು ಫಲಾಯನವಾಗಲಿ ವರ್ಣಾಶ್ರಮ ಧರ್ಮಗಳು ಸರ್ವತ್ರ ಪ್ರಕಾಶಿಸಲಿ, ಗುರುವರ್ಗದವರು ಸತತರ್ಪ್ಯನಿಷ್ಠರಾಗಲಿ, ಮಳೆಗಳು ಸುರಿಯಲಿ, ಭೂಮಿಗಳು ಬೆಳೆಯಲಿ, ಲೋಕದ ಬಡತನವು ಬಯಲಾಗಲಿ, ಸಿರಿತನವು ಹಿರಿದಾಗಲಿ, ಸರ್ವತ್ರ ಸುಖಶಾಂತಿಗಳು ನೆಲಸಲಿ, ಜಗದಾಚಾರ್ಯರ ಜಯಭೇರಿಯು ನಿನಾದವು ಸರ್ವತ್ರ ಮೊಳಗಲಿ

ಲೋಕಾಃ ಸಮಸ್ತಾಸ್ಸುಖಿನೋ ಭವಂತು

ಶ್ರೀಮಹಾಂತೇಶ್ವರ ರಥೋತ್ಸವ

— —

ರಾಯಚೂರ ಜಿಲ್ಲಾ ಬಿಜ್ಜಾಲಿ ಗ್ರಾಮದ ಸಾವಿರದೇವರು ಸಂಸ್ಥಾನಮಠದಲ್ಲಿ ಪದ್ಧತಿಯಂತೆ ಚೈತ್ರ ಬ॥ ೫ ಗುರುವಾರ ತಪೋನಿಧಿ ಶ್ರೀಮಹಾಂತೇಶ್ವರಸ್ವಾಮಿಯ ರಥೋತ್ಸವ ಸಮಾರಂಭವು ಅತಿ ವಿಜೃಂಭಣೆಯಿಂದ ಜರುಗಿತು ಗುರುವಾರ ಉದಯ ೬ ಘಂಟೆಗೆ ಶ್ರೀಗುರುವರ್ಯರ ರಜತಮೂರ್ತಿಗೆ ಮಹಾರುದ್ರಾಭಿಷೇಕವೂ, ಮಧ್ಯಾಹ್ನ ೧೧ರಿಂದ ೫ ಘಂಟೆಯವರೆಗೆ ಗಣಸಂತರ್ಪಣೆಯೂ ಜರುಗಿದವು. ಆಕಳೆ ಸಾಯಂಕಾಲ ೪ ಘಂಟೆಗೆ ನೆಂದಿಧ್ವಜನೃತ್ಯ ಸಂಘದವರ ಶಿವಭಜನೆ, ನಾನಾವಿಧ ಮಂಗಲವಾದ್ಯಗಳಿಂದ ಕಂಗೊಳಿಸುತ್ತಿರುವ ಶ್ರೀಸ್ವಾಮಿಯ ಅಂದೋಲಿಕೋತ್ಸವವು ರಥಾಂಗಣಕ್ಕೆ ತಲುಪಿ ರಥಾರೋಹಣವಾದ ಮೇಲೆ, ರಥೋತ್ಸವ ಕಾರ್ಯವು ರಾತ್ರಿ ೧ ಘಂಟೆಯವರೆಗೂ ಅಭೂತಪೂರ್ವವಾಗಿ ಜರುಗಿತು

ಮರುದಿನ ಶುಕ್ರವಾರ ಉದಯ ೮ ಘಂಟೆಗೆ ಶ್ರೀಚನ್ನವೀರಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಯುತರಾದ ವೇ ಶಾಂತಮೂರ್ತಯ್ಯನವರು ಮತ್ತು ವೇ ಮಹಾದೇವಯ್ಯನವರು ಗುರುಮಾಹಾತ್ಮ್ಯಬೋಧಕ ಆಖ್ಯಾನಗಳನ್ನು ಇಂಪಾದ ಗಾನದೊಂದಿಗೆ ಒಪ್ಪಿಸಿದರು. ಆಮೇಲೆ ಪಂ ರಾಜವೈದ್ಯ ಕೇಶವಾಚಾರ್ಯರು 'ಧರ್ಮಶಾಸ್ತ್ರ''ದ ಬಗ್ಗೆ ಬಹಳ ಗಂಭೀರವಾಗಿ ಭಾಷಣಮಾಡಿದರು. ಆಚಾರ್ಯರ ಶೈಲಿಯು ಬಹಳ ಚಿತ್ತಾಕರ್ಷಕವಾಗಿದ್ದಿತು ಕಡೆಗೆ ಅಧ್ಯಕ್ಷ ಶ್ರೀಗಳವರು 'ವ್ಯಾಪಕಧರ್ಮ''ವೆಂಬ ವಿಷಯವನ್ನು ವಿಸ್ತರಿಸುತ್ತ ಧಾರ್ಮಿಕರ ದೃಷ್ಟಿಯು ಕುಲಾಚಾರಾನುಷ್ಠಾನದ ಮೂಲಕ ಸಂಕುಚಿತವಾಗಿರುವುದರಿಂದ ಇವರ ಸಾಹಸ ಚಟುವಟಿಕೆಗಳಿಂದ ಇಂದಿನ ಜಗತ್ತಿಗೆ ಏನೊಂದು ಪ್ರಯೋಜನವಿಲ್ಲವೆಂದು ಬಡಬಡಿಸುತ್ತಿರುವ ನೂತನ ಸುಧಾರಕರ ಮೋಸಕ್ಕೆ ಗುರಿಯಾಗಕೂಡದೆಂದೂ 'ಮೊಳೆಯನ್ನು ಹಾಕುವವನಿಗೆ ಮನುಷ್ಯನು ನೌಕೆಯು ಸಹಾಯವನ್ನು ಬಯಸುವಂತೆ'' ಘೋರಸಂಸಾರದಿಂದ ನಿವೃತ್ತಿಯನ್ನು ಹೊಂದುವವರಿಗೆ ವರ್ಣವ್ಯವಸ್ಥೆಯ ಸಹಾಯವನ್ನು ಧಾರ್ಮಿಕನು ಬಯಸುತ್ತಿರುವುದು ಲೋಕದ ಕಲ್ಯಾಣಕ್ಕಾಗಿರುವದೆಂದೂ, "ಪಂಡಿತಾಸ್ಸಮದರ್ಶಿನಃ'' ಎಂಬುಕ್ತಿಯಂತೆ ಧಾರ್ಮಿಕರಿಗಿರುವ ವಿಶಾಲದೃಷ್ಟಿಯನ್ನು ಯಾವ ಸುಧಾರಕರೂ ಪಡೆಯಲು ಸಾಧ್ಯವಿಲ್ಲವೆಂದೂ ಹೃದಯಂಗಮವಾಗಿ ಬೋಧಿಸಿದರು ಕಡೆಗೆ ಮಂಗಲದೊಂದಿಗೆ ಸಭೆಯು ಮುಕ್ತಾಯವಾಯಿತು

ಶ್ರೀಮಾನ್ ಊದೂರ ನಾಗರಡ್ಡಿಗೌಡರು, ಶ್ರೀಯುತ ಹನುಮಾಪೂರಗೌಡರು, ಶ್ರೀಯುತ ಬಿಜ್ಜಾಲಿ ತಿಪ್ಪಯ್ಯನವರು ಈ ಮಹಾಶಯರು ಮೂರುದಿನದ ಜನಸಂತರ್ಪಣೆಗಾಗಿ ಪೂರ್ಣ ಸಹಾಯಮಾಡಿದರು ಶ್ರೀಮತೀ ಇಂದುವಾಸಿ ಮಹಾದೇವಮ್ಮಗೌಡರು ಶ್ರೀಯುತ ಬಿಜ್ಜಾಲಿ ವೀರನಗೌಡರು ಶ್ರೀಯುತ ಗಿಲಿಕೆ ಸೂಗೂರ ಸೋಮರಡ್ಡಿಗೌಡರು ಮಠದ ಜೀರ್ಣೋದ್ಧಾರಕಾರ್ಯಕ್ಕಾಗಿ ಧನಸಹಾಯಮಾಡಿರುವರು ಮೇಲ್ಕಂಡ ಗುರುಭಕ್ತರಿಗೆ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪಿ ಎಂ. ಬಸವರಾಜಶಾಸ್ತ್ರಿ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೨೦ ವರ್ಷಗಳು ತುಂಬಿ ೨೧ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ ವಿಳಾಸದ [illegible] ವನ್ನು ಮಾತ್ರ ಬರೆಯಿಟ್ಟು [illegible]

[illegible]

ಪಂಚಾಚಾರ್ಯಪ್ರಭಾ.

೧೯೪೭ನೆಯ ಏಪ್ರಿಲ್ ತಾ [illegible]

೨೧ ನೆಯ ವರ್ಷ ಪ್ರಾರಂಭ

ಪಂಚಾಚಾರ್ಯಪ್ರಭಾಪತ್ರಿಕೆಗೆ ಈ [illegible] ಸ್ವಾನುಸಂವತ್ಸರದ ವೈಶಾಖ ಶುದ್ಧ [illegible] ೨೦ ವರ್ಷಗಳು ತುಂಬಿ [illegible] ವರ್ಷವು ಪ್ರಾರಂಭವಾಗಿರುವುದು. ಪ್ರಭಾಪತ್ರಿಕೆಯು ೨೦ ವರ್ಷಗಳ ವರೆಗೆ ಯಾವ [illegible] ಇಲ್ಲದಂತೆ ತಾನು ಕೈಕೊಂಡ ಕಾರ್ಯವನ್ನು ಅತ್ಯಾನಂದದಿಂದ ನೆರವೇರಿಸಿರುವುದು ಶ್ಲಾಘನೀಯವಾದ. ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಇಂದಿನವರೆಗೆ [illegible] ಸಮಾಜದಲ್ಲಿ ವಿಶೇಷವಾದ ಜಾಗೃತಿಯನ್ನುಂಟುಮಾಡಿ[illegible] ವೀರಶೈವಮತಸ್ಥಾಪಕರ ಸ್ವರೂಪವೇ ಜನಗಳಿಗೆ ಗೋಚರವಿದ್ದಿಲ್ಲ. ಮತಾಚಾರ್ಯರ ನಾಮವೇ ಲೋಪವಾಗುವ ಸಂಭವವೊದಗಿತ್ತು. ಇಂಥ ಸಮಯದಲ್ಲಿ ಈ ಪತ್ರಿಕೆಯು ಅವತರಿಸಿ ಮತಾಚಾರ್ಯರ ಸ್ವರೂಪವನ್ನೂ ಆ ಮಹನೀಯರ ಮಹಿಮಾತಿಶಯಗಳನ್ನೂ ಇಡೀ ಜಗತ್ತಿನಲ್ಲಿ ಪ್ರಕಾಶಿಸುವಂತೆ ಮಾಡಿತು. ಆಂಧ್ರ ಮಹಾರಾಷ್ಟ್ರ ಮೊದಲಾದ ದೇಶಗಳಲ್ಲಿಯೂ ತನ್ನ ಪ್ರಭೆಯನ್ನು ಪಸರಿಸಿ ಅಲ್ಲಿಯ ವೀರಶೈವ ಜನಾಂಗವನ್ನುದ್ಧರಿಸುವಂತೆ ಮಾಡಿತು. ಪ್ರತಿ ವಾರದಲ್ಲಿಯೂ ತಪ್ಪದೆ ಪ್ರಸಿದ್ಧವಾಗತಕ್ಕ ಧರ್ಮಸಂಬಂಧವಾದ ಲೇಖಗಳಿಂದ ವೀರಶೈವ ಸಿದ್ಧಾಂತಜ್ಞಾನವನ್ನು ಸರ್ವರಲ್ಲಿಯೂ ಅಂಕುರಿಸುವಂತೆ ಮಾಡಿತು. ತನ್ನಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಲೇಖಗಳಿಂದ ಪರಮತೀಯರನ್ನೂ ಸಹ ಸಂತೋಷಸಾಗರದಲ್ಲಿ ಮುಳುಗಿಸಿತು. ವೀರಶೈವರ ಉದ್ಧಾರಕ್ಕಾಗಿ ಜನ್ಮವೆತ್ತಿದ ಈ ಪತ್ರಿಕೆಯ ವಿಷಯದಲ್ಲಿ ಅನೇಕ ಜನ ಮತಾಭಿಮಾನಿಗಳು ಇದರ ಪ್ರಗೋಭಿವೃದ್ಧಿಗಾಗಿ ವಿಶೇಷ ಪ್ರಯತ್ನವನ್ನು ಮಾಡುತ್ತಿರುವುದು ಅತ್ಯಾನಂದಕರವಾದ ವಿಷಯವಾಗಿದೆ. ನಾನಾವಿಧವಾದ ತೊಂದರೆಗಳ ಮೂಲಕ ಈ ಕಾಲದಲ್ಲಿ ಅನೇಕ ಪತ್ರಿಕೆಗಳು ನಿಂತುಹೋಗಿರುವವು ಮತ್ತು ಹೋಗುತ್ತಿರುವವು. ಇಂತಹ ಕಠಿಣ ಸಮಯದಲ್ಲಿಯೂ ಕೂಡ ಈ ಪತ್ರಿಕೆಯು ನಿರ್ವಿಘ್ನವಾಗಿ ಕಾರ್ಯವನ್ನು ಮಾಡುತ್ತಿರುವುದಕ್ಕೆ ಶ್ರೀ ಜಗದ್ಗುರು ರೇಣುಕಾದಿ ಭಗವತ್ಪಾದರ ಅನುಗ್ರಹವೇ ಮೂಲಕಾರಣವೆಂದು ಹೇಳಬಹುದಾಗಿದೆ.

ಭರತಖಂಡದಲ್ಲಿರುವ ಗುರುವರ್ಗಾಭಿಮಾನಿಗಳು ಈ ಪತ್ರಿಕೆಯ ಪೋಷಣಕ್ಕಾಗಿ ಲಿಂಗಧಾರಣ ದೀಕ್ಷಾ ವಿವಾಹಾದಿಕಾರ್ಯಗಳಲ್ಲಿ ಹೆಚ್ಚು ಸ್ವೀಕಾರ ದ್ರವ್ಯಸಹಾಯವನ್ನು ಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂದಾಶಿಸುತ್ತೇವೆ. ಈ ವಿಷಯದಲ್ಲಿ ಸರ್ವರೂ ವಿಶೇಷವಾದ ಉತ್ಸಾಹವನ್ನು ತೋರಿಸಬೇಕು. ಮತಾಚಾರ್ಯರ ಪ್ರಭಾವವನ್ನು ಪ್ರಕಾಶವಡಿಸಲು ಕಂಕಣಬದ್ಧವಾಗಿ ಕಾರ್ಯಮಾಡುತ್ತಿರುವ ಈ ಪತ್ರಿಕೆಯ ಅಭಿವೃದ್ಧಿಯ ಬಗ್ಗೆ ಸಮಸ್ತ ಗುರುಭಕ್ತರೂ ಸಹಾಯಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಜಗದಾಚಾರ್ಯರ ಆಶೀರ್ವಾದಬಲದಿಂದ ಪ್ರಭಾಪತ್ರಿಕೆಯು [illegible] ಬಾಳಿ ತನ್ನ ಪ್ರಭೆಯಿಂದ ಜನಸ್ತೋಮದ ಅಜ್ಞಾನಾಂಧಕಾರವನ್ನು [illegible] ತನ್ನ ಪ್ರಭಾಮಯವನ್ನಾಗಿ ಮಾಡಲೆಂದು [illegible] ಪೂಜ್ಯಪಾದರನ್ನು ಪ್ರಾರ್ಥಿಸುವೆವು.

ವರ್ತಮಾನಸಂಗ್ರಹ

ಕರ್ನಾಟಕ ವಿಶ್ವವಿದ್ಯಾನಿಲಯ

ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆಯ ಪ್ರಶ್ನೆಯನ್ನು ಕುರಿತು ವರದಿಮಾಡಲು ಬೊಂಬಾಯಿ ಸರಕಾರವು ಜಸ್ಟಿಸ್ ನಾರಾಯಣರಾವ್ ಕೋರ್ಟಿರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿದೆ.

ರಾಮಪ್ರಸಾದ ಸಾಗರದ ಯೋಜನೆ

ರಾಮಪ್ರಸಾದ ಸಾಗರ ಯೋಜನೆಯು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೂ ವಿದ್ಯುತ್ ತಯಾರಿಕೆಗೂ ಬಹಳ ಅನುಕೂಲವಾಗುವುದೆಂಬುದನ್ನು ಅರಿತು, ಕೇಂದ್ರ ಸರಕಾರವು ಈ ಯೋಜನೆಗೆ ಹತ್ತು ಕೋಟಿ ರೂ ಗಳನ್ನು ಮದ್ರಾಸ್ ಸರ್ಕಾರಕ್ಕೆ ಕೊಡಲು ಭರವಸೆಯಿತ್ತಿದೆಯಂತೆ!

ಭಾಗವತರ್ ಮತ್ತು ಕೃಷ್ಣನ್ ಬಿಡುಗಡೆ

ಲಕ್ಷ್ಮೀಕಾಂತಂ ಎಂಬವನನ್ನು ಮದ್ರಾಸಿನಲ್ಲಿ ಕೊಲೆಮಾಡಿದರೆಂಬ ಆಪಾದನೆಯ ಮೇಲೆ ಶಿಕ್ಷೆಗೊಳಗಾಗಿದ್ದ ಚಲನಚಿತ್ರ ನಟರಾದ ಎನ್ ಎಸ್ ಕೃಷ್ಣನ್ ಮತ್ತು ಎಂ ಕೆ ತ್ಯಾಗರಾಜಭಾಗವತರ ಅಪೀಲಿನ ಮೇಲೆ ಹೈಕೋರ್ಟಿನವರು ತೀರ್ಪಿತ್ತು, ಅವರು ನಿರ್ದೋಷಿಗಳೆಂದು ಅವರನ್ನು ಬಿಡುಗಡೆ ಮಾಡಿದರು.

ಬೊಂಬಾಯಿ ಕೋರ್ಟಿನಲ್ಲಿ ಗಲಭೆಗೆ ಮರಣದಂಡನೆ

ಬೊಂಬಾಯಿ ಪ್ರಾಂತದ ಗಲಭೆ ಪ್ರಸಂಗದಲ್ಲಿ ಭಾಗವಹಿಸಿದವರಿಗೆ ಮರಣ ದಂಡನೆ ವಿಧಿಸಲು ಶಾಸನವಾಗಿದೆಯಷ್ಟೆ! ಇದರ ವಿಚಾರಣೆಗೋಸ್ಕರವಾಗಿಯೇ ಏರ್ಪಡಿಸಿರುವ ಕೋರ್ಟಿನಲ್ಲಿ ಬಹಳ ಜನಗಳ ವಿಚಾರಣೆ ನಡೆದು ಈಚೆಗೆ ೩ ಜನರಿಗೆ ಮರಣದಂಡನೆಯನ್ನೂ, ೫ ಜನರಿಗೆ ಗಡೀಪಾರು ಆಜ್ಞೆಯನ್ನೂ ನ್ಯಾಯಾಧೀಶರು ಇತ್ತಿದ್ದಾರೆ. ಇದಲ್ಲದೆ ಅನೇಕರಿಗೆ ೨ ವರ್ಷದಿಂದ ೧೦ ವರ್ಷಗಳವರೆಗೆ ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ.

ಆಹಾರಾಭಾವವಾದರೆ ಯುದ್ಧವೇ?

ಪ್ರಪಂಚದಲ್ಲಿ ವ್ಯವಸಾಯದ ಉತ್ಪನ್ನವನ್ನು ಜಾಸ್ತಿ ಮಾಡಿ, ಪ್ರಜೆಗಳಿಗೆ ಮೊದಲು ಹೊಟ್ಟೆತುಂಬಾ ಆಹಾರವನ್ನು ಸರಬರಾಜು ಮಾಡಬೇಕು. ಹಾಗಿಲ್ಲದಿದ್ದರೆ ಮೂರನೇ ಮಹಾಯುದ್ಧ ಸಿದ್ಧ—ಎಂದು ಸಂಯುಕ್ತ ರಾಷ್ಟ್ರಸಂಸ್ಥೆಯ ಆಹಾರದ ಡೈರೆಕ್ಟರ್ ಸರ್ ಜಾನ್ ಬಾಯ್ಡ್ ಓರರವರು ತಿಳಿಸಿದ್ದಾರೆ.

ಮುಸ್ಲಿಂ ಸ್ತ್ರೀಯರ ಪ್ರದರ್ಶನ

ಮುಸ್ಲಿಂ ಲೀಗ್ ಸ್ತ್ರೀ ಪ್ರದರ್ಶನಕಾರರು ತಮ್ಮ ಬೋರ್ಖಾ ಉಡುಪಿನಲ್ಲಿ ಕಳೆದ ೨೨ ನೇ ತಾ| ಮಂಗಳವಾರ ಪೆಶಾವರಿನ ಆಲ್ ಇಂಡಿಯಾ ರೇಡಿಯೋ ಸ್ಟೇಷನ್ನಿಗೆ ನುಗ್ಗಿ, ಕಿಟಕಿಗಾಜುಗಳನ್ನೂ ಹೂವಿನ ಕುಂಡಗಳನ್ನೂ ಒಡೆದು, ಆಫೀಸಿನ ಫೈಲುಗಳನ್ನೂ ಹಾಳುಮಾಡಿ, ಕಟ್ಟಡದ ಮೇಲೆ ಲೀಗ್ ಧ್ವಜವನ್ನು ಹಾರಿಸಿ ಗಲಾಟೆಮಾಡಿದರು.

ಪಂಡಿತ ನೆಹರೂರವರ ಕಾರಿನಮೇಲೆ ಪುಂಡರ ದಾಳಿ

ಅಖಿಲ ಭಾರತ ಸಂಸ್ಥಾನದ ಪ್ರಜೆಗಳ ಪರಿಷತ್ತಿನಲ್ಲಿ ಭಾಗವಹಿಸಲು ಪಂ| ನೆಹರೂರವರು ದಿಲ್ಲಿಯಿಂದ ಗ್ವಾಲಿಯರಿಗೆ ವಿಮಾನದಲ್ಲಿ ಬಂದು ಗ್ವಾಲಿಯರಿನಲ್ಲಿ ಅಧಿವೇಶನಕ್ಕೆ ಕಾರಿನಲ್ಲಿ ಬರುತ್ತಿದ್ದಾಗ ಸುಮಾರು ೮೦ ಜನ ಹಿಂದೂಮಹಾಸಭೆಯವರು ಮಹಾಸಭಾ ಧ್ವಜವನ್ನೂ, ಕಪ್ಪುಬಾವುಟವನ್ನೂ ಹಿಡಿದು 'ನೆಹರೂರವರೇ ಹಿಂತಿರುಗಿ' ಎಂದು ಘೋಷಣೆಗಳನ್ನು ಮಾಡುತ್ತ ಬಂದು ನೆಹರೂರವರ ಕಾರಿನ ಮೇಲೆ ದಾಳಿಮಾಡಿ ಗಾಡಿನ ಕಿಟಕಿಗಳನ್ನು ಮುರಿದು ಕಾರಿನ ಮುಂದುಗಡೆ ಇದ್ದ ತ್ರಿವರ್ಣಧ್ವಜವನ್ನು ಕಿತ್ತುಹಾಕಿ ಗಲಾಟೆ ಮಾಡಿದರು. ಪಂ ನೆಹರೂರವರ ಗೌರವಾರ್ಥವಾಗಿ ನಿರ್ಮಿಸಲಾಗಿದ್ದ ಪ್ರವೇಶ ದ್ವಾರಗಳನ್ನು ಪ್ರದರ್ಶನಕಾರರು ಸುಟ್ಟುಹಾಕಿದರು. ಪಂ|| ನೆಹರೂರವರೂ, ಸ್ವಾಗತ ಸಮಿತಿ ಸದಸ್ಯರಾದ ಬಾಬು ರಾಮಸಹಾಯರವರೂ ಸ್ವಲ್ಪ ಗಾಯಗೊಂಡು ಕಷ್ಟದಿಂದ ಪಾರಾದರು.

ಕೋಮುವಾರು ಗಲಭೆಗಳಿಂದ ಭಾರತಕ್ಕೆ ೧೦೦ಕೋಟಿ ರೂ.ಗಳ ನಷ್ಟ

ನಿರಂತರವಾದ ಕೋಮುವಾರು ಗಲಭೆಗಳಿಂದ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೋದ್ಯಮಗಳಲ್ಲಿ ೧೦೦ಕೋಟಿ ರೂಪಾಯಿಗಿಂತಲೂ ಹೆಚ್ಚಿನ ನಷ್ಟವುಂಟಾಗಿದೆ ಎಂದು ಇಂಡಿಯನ್ ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷರಾದ ಶ್ರೀ ಎಂ ಡಿ ಜಲಾನ್‌ರವರು ತಿಳಿಸುತ್ತಾರೆ. ಇದೇ ಪರಿಸ್ಥಿತಿ ಬಹುಕಾಲ ಮುಂದುವರಿದ ಪಕ್ಷದಲ್ಲಿ ಭಾರತದಲ್ಲಿ ಆರ್ಥಿಕಪ್ರಗತಿ ಕೈಗಾರಿಕೆಗಳ ಬೆಳವಣಿಗೆಗೆ ಅವಕಾಶವೇ ಇಲ್ಲದಂತಾಗುವುದೆಂದು ಅವರ ಅಭಿಪ್ರಾಯಪಡುತ್ತಾರೆ. ಈ ಕೋಮುವಾರು ಗಲಭೆಗಳಿಂದ ವ್ಯಾಪಾರೋದ್ಯಮಗಳಿಗೆ ಧಕ್ಕೆಬಂದಿದೆ ಮತ್ತು ಈ ಗಲಭೆ ಪ್ರದೇಶಗಳಲ್ಲಿ ಕಾರ್ಖಾನೆಗಳನ್ನು ಮುಚ್ಚಲಾಗಿದೆ.

ಕೂಡಲೆ ಈ ಗಲಭೆಗಳನ್ನು ನಿಲ್ಲಿಸದಿದ್ದ ಪಕ್ಷದಲ್ಲಿ ದೇಶದಲ್ಲೆಲ್ಲಾ ಉಗ್ರವಾದ ನಿರುದ್ಯೋಗ ತಲೆದೋರಿ, ಈ ತಲೆಮಾರಿನಲ್ಲೆಲ್ಲಾ ಜನರು ಕಷ್ಟಪಡಬೇಕಾಗುವುದೆಂದು ಶ್ರೀ ಜಲಾನರು ತಿಳಿಸಿರುತ್ತಾರೆ.

ದೇಶದ ಅತಿ ಜಟಿಲವಾದ ಪ್ರಶ್ನೆ ೪೦ ಕೋಟಿ ಜನರ ಜೀವನಮಟ್ಟವನ್ನು ಹೆಚ್ಚಿಸುವುದಾಗಿರುವಾಗ ಈ ನಿರರ್ಥಕ ಕಲಹಗಳಲ್ಲಿ ನಮ್ಮ ಶಕ್ತಿಯನ್ನೆಲ್ಲಾ ವಿನಿಯೋಗಿಸುತ್ತಿರುವುದು ಅತಿಶೋಚನೀಯ. ದೇಶದ ಪುನರುದ್ಧಾರಕ್ಕಾಗಿ ನಮ್ಮ ಸರ್ವ ಶಕ್ತಿಯನ್ನೂ ಒಂದುಗೂಡಿ ಉಪಯೋಗಿಸುವ ಕಾಲವಿದು, ಎಂಬುದಾಗಿ ಹೇಳಿ, ವ್ಯಾಪಾರ ಕೈಗಾರಿಕೆಗಳು ಸುಗಮವಾಗಿ ನಡೆಯಬೇಕಾದರೆ, ಶಿಸ್ತು, ಜನರಲ್ಲಿ ಶಾಂತಿ ನಂಬಿಕೆಗಳು ಅತ್ಯಾವಶ್ಯಕ. ಜನಜೀವನಮಟ್ಟವೇರಬೇಕಾದರೆ ಈ ಉದ್ಯಮಗಳ ಅಭಿವೃದ್ಧಿಯೊಂದೇ ಸರಿಯಾದ ಮಾರ್ಗವೆಂಬುದನ್ನು ಒತ್ತಿ ಹೇಳಿದರು.

ಮಿರ್ಜಿಯಲ್ಲಿ ಗೊಂದಲ

ಮಿರ್ಜಿಯಲ್ಲಿ ಮರಾಠಾಮಂಡಳದವರು ಶ್ರೀಶಿವಾಜಿ ಜಯಂತ್ಯುತ್ಸವದ ಮೆರವಣಿಗೆ ತೆಗೆದುಕೊಂಡು ಹೋಗುತ್ತಿದ್ದಾಗ ಮೆರವಣಿಗೆಯ ಮೇಲೆ ಕಲ್ಲುಗಳು ಬಿದ್ದು ಉಭಯಸಂಗಡದವರಲ್ಲಿ ಹೋರಾಟ ಆರಂಭವಾಯಿತು ಪೋಲೀಸರು ಕೂಡಲೆ ಸ್ಥಳಕ್ಕೆ ಒಂದು ಪರಿಸ್ಥಿತಿಯನ್ನು ಶಾಂತಿಗೆ ತಂದರು

ಸಾಕಷ್ಟು ದವಸಧಾನ್ಯಗಳ ಉತ್ಪತ್ತಿಯಿಲ್ಲ

ಭಾರತದೇಶದ ಆಹಾರ ಪರಿಸ್ಥಿತಿಯನ್ನು ಇಂಡಿಯಾ ಸರ್ಕಾರದವರು ಪರಿಶೀಲಿಸುತ್ತಾರೆ ಭಾರತದಲ್ಲಿ ಈಗ ವರ್ಷಕ್ಕೆ ಸುಮಾರು ೬ ಕೋಟಿ ೮೦ ಲಕ್ಷ ಟನ್ನುಗಳಷ್ಟು ಧಾನ್ಯಗಳು ಬೇಕಾಗಿವೆ ಆದರೆ ವರ್ಷದ ಉತ್ಪತ್ತಿ ಸರಾಸರಿ ಕೇವಲ ೫ ಕೋಟಿ ೫೦ ಲಕ್ಷ ಟನ್‌ಗಳಷ್ಟು ಈಗಿನ ಪ್ರಜಾಸಂಖ್ಯೆಗೆ ಅನುಗುಣವಾಗಿ ವರ್ಷಕ್ಕೆ ೧೦-೧೫ ಲಕ್ಷ ಟನ್‌ಗಳಷ್ಟು ದವಸಧಾನ್ಯಗಳು ಕಡಿಮೆಯಾಗಿವೆ

ಆದರೆ ಜನಸಂಖ್ಯೆ ವರ್ಷಕ್ಕೆ ೫೦ಲಕ್ಷದಷ್ಟು ಹೆಚ್ಚುತ್ತಿದೆ ಇದರಿಂದ ಆದಷ್ಟು ಜಾಗ್ರತೆಯಾಗಿ ಆಹಾರ ವಿಚಾರದಲ್ಲಿ ದೇಶಕ್ಕೆ ಬೇಕಾಗುವ ಆಹಾರ ವಸ್ತುಗಳು ದೇಶದಲ್ಲಿಯೇ ಉತ್ಪತ್ತಿಯಾಗುವಂತೆ ದವಸ ಧಾನ್ಯಗಳ ಬೆಳೆಯನ್ನು ಹೆಚ್ಚಿಸುವುದೇ ಆಹಾರ ಉತ್ಪತ್ತಿ ನೀತಿಯ ಮುಖ್ಯ ಅಂಶವಾಗಿದೆ ಎರಡನೆಯದಾಗಿ ದಿನದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಗೆ ಬೇಕಾದ ದವಸಧಾನ್ಯಗಳನ್ನು ಒದಗಿಸಲು ನಾನಾಬಗೆಯ ಕಾರ್ಯಕ್ರಮಗಳು ದೀರ್ಘ ಕಾಲದ ಯೋಜನೆಯ ಮುಖ್ಯ ಭಾಗವಾಗಿದೆ

ಸರ್ಕಾರದ "ಅಧಿಕ ಆಹಾರ ಉತ್ಪತ್ತಿ" ಪ್ರಚಾರ ಕಾರ್ಯದ ಪರಿಣಾಮವಾಗಿ ಪ್ರತಿವರ್ಷ ಸುಮಾರು ೩೦ ಲಕ್ಷ ಟನ್‌ಗಳಷ್ಟು ದವಸಧಾನ್ಯಗಳು ಉತ್ಪತ್ತಿ ಹೆಚ್ಚಿದೆ ಈ ಅಧಿಕ ಆಹಾರ ಉತ್ಪತ್ತಿಯ ಯೋಜನೆಯನ್ನು ಭಾರತ ಸರ್ಕಾರದವರು ಇನ್ನೂ ೫ ವರ್ಷ ಕಾಲ ಮುಂದುವರಿಸಬೇಕೆಂದು ನಿಶ್ಚಯಿಸುತ್ತಾರೆ ನಾನಾ ಮಾರ್ಗಗಳಿಂದ ವಾಸ್ತವಿಕವಾದ ರೀತಿಯಲ್ಲಿ ಶೀಘ್ರ ಫಲ ಪಡೆಯಬೇಕೆಂಬುದೇ ಈ ಯೋಜನೆಗಳ ಉದ್ದೇಶವಾಗಿರುತ್ತದೆ

ಮಿ|| ಲಿಯಾಖತ್ ಆಲಿಖಾನರ ಹೇಳಿಕೆಗೆ ಬಿಕಾನೇರ್ ಮಹಾರಾಜರ ಉತ್ತರ

ಭಾರತದ ಹಿತದೃಷ್ಟಿಯಿಂದಲೂ, ನಮ್ಮ ಹಿತಸಾಧನೆಗಾಗಿಯೂ, ಆತ್ಮಸಂತೋಷದಿಂದ ರಾಜ್ಯಾಂಗಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ನಿರ್ಧರಿಸಿದ್ದೇವೆಯೇ ಹೊರತು ಯಾರ ಬೆದರಿಕೆಗೂ ತಲೆಬಾಗಿ ನಾವು ಈ ನಿರ್ಧಾರ ತೆಗೆದುಕೊಳ್ಳಲಿಲ್ಲ ಎಂದು ಏಪ್ರಿಲ್ ೨೧ರ ಮಿ|| ಲಿಯಾಖತ್ ಆಲಿಖಾನರ ಹೇಳಿಕೆಗೆ ಉತ್ತರವಾಗಿ ಬಿಕಾನೇರ್ ಮಹಾರಾಜರು ತಿಳಿಸಿದ್ದಾರೆ ಈ ಮಹತ್ವಪೂರಿತ ಸನ್ನಿವೇಶದಲ್ಲಿ ನಮ್ಮ ಮಾತೃಭೂಮಿಯು ಸ್ವತಂತ್ರವಾಗಲು ನಾವೂ ನೆರವಾಗಬೇಕು ಎಂಬ ಉಜ್ವಲರಾಷ್ಟ್ರಪ್ರೇಮದಿಂದ ನಾವು ಸಹಕರಿಸಲು ಒಪ್ಪಿದೆವು ಭಾರತದ ಸ್ವಾತಂತ್ರ್ಯಪಥದಲ್ಲಿ ಸಂಸ್ಥಾನಗಳು ಅಡಚಣೆ ತಂದೊಡ್ಡುವವೆಂಬ ಕಳಂಕವು ಶಾಶ್ವತವಾಗಿ ನಿಂತುಹೋದಿತೆಂದು ತಿಳಿದು, ಅಂತಹ ಆರೋಪಣೆಗೆ ಎಡೆಗೊಡಬಾರದೆಂದು ಸಂಸ್ಥಾನಗಳು ಘೋಷಿಸಿವೆ ಅಮಾತ್ಯಪ್ರಣಾಳಿಕೆಯಲ್ಲಿ ನಿರೂಪಿಸಿರುವ ರಾಜ್ಯಾಂಗ ರಚನಾ ಸಾಧನಕ್ಕೆ ಮೊದಲೇ ನಮ್ಮ ಪೂರ್ಣ ಒಪ್ಪಿಗೆ ಕೊಟ್ಟಮೇಲೆ, ರಾಜ್ಯಾಂಗ ರಚನಾ ಸಭೆಯ ವಿಚಾರದಲ್ಲಿ ಸಹಕಾರ, ಸಹಾನುಭೂತಿ ತೋರಿಸುವುದು ಸಮಂಜಸವಾಗಿಯೇ ಇದೆ ಎಲ್ಲೋ ಕೆಲವು ಸಂಸ್ಥಾನಗಳು ಮಾತ್ರ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಿಲ್ಲವೆಂಬ ಲಿಯಾಖತ್ ಆಲಿಖಾನರ ಹೇಳಿಕೆ ಸತ್ಯಕ್ಕೆ ದೂರವಾಗಿದೆ ನಮ್ಮ ಸಂಧಾನವೆಲ್ಲವೂ ಅತ್ಯಂತ ಸ್ನೇಹಸೌಹಾರ್ದದ ವಾತಾವರಣದಲ್ಲಿ ನಡೆಯಿತು ಅಂತಹ ಮಧುರ ಸನ್ನಿವೇಶದಲ್ಲಿ ಬಲವಂತಕ್ಕಾಗಲೀ ಅಥವಾ ಕ್ರೋಧಕ್ಕಾಗಲೀ ಎಡೆಯೇ ಇರಲಿಲ್ಲ ವಾತಾವರಣವು ಭಾರತೀಯರ ಘನತೆಗನುಗುಣವಾದ ಸ್ನೇಹ, ಪರಸ್ಪರ ಸಹಾನುಭೂತಿ, ನ್ಯಾಯ ಇವುಗಳಿಂದ ಕೂಡಿದ್ದಿತು ನಾವೆಲ್ಲರೂ ಒಂದೇ ಗುರಿಯನ್ನು ಮುಟ್ಟಲು ತವಕಪಡುತ್ತಿದ್ದ ಸೋದರರಂತೆ ವರ್ತಿಸಿದೆವು ಎಂದು ಹೇಳಿದ್ದಾರೆ

ಅಖಿಲ ಭಾರತ ಪಾರಿಭಾಷಿಕ ಶಿಕ್ಷಣ

ಅಖಿಲಭಾರತಪಾರಿಭಾಷಿಕಶಿಕ್ಷಣಸಮಿತಿಯು ಮೈಸೂರು ಸರ್ಕಾರದ ಬೇಡಿಕೆಯಂತೆ ಮೇ ೨೭ ರಿಂದ ೩೦ ರ ವರೆಗೆ ಬೆಂಗಳೂರು ನಗರದಲ್ಲಿ ನಡೆಯುವುದು ಕೇಂದ್ರ ಸರ್ಕಾರ, ಪ್ರಾಂತ್ಯ ಸರ್ಕಾರ, ಸಂಸ್ಥಾನಗಳಿಂದಲೂ ಮತ್ತು ಇತರ ವಿಜ್ಞಾನ ಶಾಲೆಗಳಿಂದಲೂ ಸುಮಾರು ೩೦ಜನ ಪ್ರತಿನಿಧಿಗಳು ಬರುವ ಸಂಭವವಿದೆ ಈ ಸಮಿತಿಯು ೧೯೪೫ನೇ ಡಿಸಂಬರ್ ತಿಂಗಳಲ್ಲಿ ಇಂಡಿಯಾ ಸರ್ಕಾರದಿಂದ ರಚಿತವಾಯಿತು ಇದಕ್ಕೆ ಮಿ|| ಎ. ಆರ್ ಸರ್ಕಾರ್‌ರವರು ಅಧ್ಯಕ್ಷರು ಇಂಡಿಯಾದಲ್ಲಿ ಹೆಚ್ಚಿನ ಪಾರಿಭಾಷಿಕ ಶಿಕ್ಷಣಕ್ಕೆ ಇರುವ ಅಗತ್ಯವನ್ನು ಸೂಚಿಸುವುದೇ ಇದರ ಮುಖ್ಯೋದ್ದೇಶ

ಔದ್ಯೋಗಿಕ ಶಿಕ್ಷಣ ಶಾಲೆಯ ಅಧ್ಯಾಪಕರಾದ ಶ್ರೀ ಎಸ್ ವೆಂಕಣ್ಣನವರನ್ನು ಈ ಸಭೆ ಸೇರುವುದಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ನೇಮಿಸಲಾಗಿದೆ

ಗದಗ ಜಿಟಿಗೇರಿ ಶ್ರೀಜಗದ್ಗುರು ಪಂಚಾಚಾರ್ಯ ಸೇವಾ ಸಂಸ್ಥೆ

ಸನಾತನ ಧರ್ಮಬೋಧಕರಾದ ಷಂ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಚಿಕ್ಕಮಣ್ಣೂರು ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಗದುಗಿನಲ್ಲಿರುವ ಮುಕ್ತಿನಪೇಟಿ ಮಠದಲ್ಲಿ ತಾ ೯-೩-೧೯೪೭ನೇ ದಿವಸ ಸಭೆ ಸೇರಿ ಮೇಲ್ಕಂಡ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು

ಅಧ್ಯಕ್ಷರು

ವೇ|| ತೋಟಪ್ಪಯ್ಯಶಾಸ್ತ್ರಿ ಶಂಬ್ರಳ್ಳಿ ಹಿರೇಮಠ

ಉಪಾಧ್ಯಕ್ಷರು

ಮ|| ರಾ|| ಬಸಪ್ಪ ಕನಕೇರಾಯ

ಮ|| ರಾ|| ಮಲ್ಲಿಗಪ್ಪ ಹಮ್ಮಿಗರ

ಸೆಕ್ರೆಟರಿ

ಮ|| ರಾ|| ಬಸನಗೌಡ ರಾಮನಗೌಡರ

ಟ್ರೆಜರರ್

ಮ|| ರಾ|| ಹೊನ್ನಪ್ಪ ಮುಳಗುಂದ

ಸದಸ್ಯರು

ವೇ|| ಸಿ ಬಿ ರಾಚಯ್ಯನವರ ವಕೀಲ ಬಿ ಎ ಎಲ್.ಎಲ್.ಬಿ.,
„ ಸಂಗಯ್ಯ ಗುಡ್ಡಿಮಠ
„ ಕರಿಬಸಯ್ಯ ಕಲ್ಮಠ
„ ಚಂದ್ರಶೇಖರಯ್ಯ ಅರಳೆಲೆಮಠ
„ ರುದ್ರಯ್ಯ ಹಂಚಿನಾಳ ಹಿರೇಮಠ
„ ರುದ್ರಯ್ಯ ಮಾಳೇಕೊಪ್ಪಮಠ
„ ಈಶ್ವರಯ್ಯ ಹೊಸಮಠ
„ ನೀಲಕಂಠಯ್ಯ ಹಿರೇಮಠ
ಮ|| ರಾ|| ವಿರೂಪಾಕ್ಷಗೌಡ ಪಾಟೀಲ
„ ಚಂದ್ರಶೇಖರಗೌಡ ಪಾಟೀಲ
„ ನೀಲಪ್ಪಗೌಡ ಪಾಟೀಲ (ಹಿರೇಮನಿ)
„ ಬಸಪ್ಪ ಅಬ್ಬಿಗೇರಿ
„ ಸೋಮಪ್ಪ ಕಳಸಣ್ಣವರ
„ ಸಂಗನಬಸಪ್ಪ ಬೇಲೇರಿ
„ ಮಲಕಾಜಪ್ಪ ಬೇಲೇರಿ
„ ಪರಪ್ಪ ಹೊನಗೊಂಣನವರ
„ ಶಿವಪ್ಪ ಅಂಗಡಿ
„ ಶಿವನಗೌಡ ಹಿರೇಗೌಡರ
„ ಅಂಬಾನಪ್ಪ ಕರಮುಡಿ
„ ರೇವಣಸಿದ್ಧಪ್ಪಾ ಲಕ್ಕುಂಡಿ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ದಕ್ಷಿಣಕಾಶಿ, ಶಿವಗಂಗೆ

ಶ್ರೀಮದ್ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಭಾವಿ ಜಗದ್ಗುರು ಶ್ರೀ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರು ಇಲ್ಲಿಯ ಶ್ರೀಮೇಲಣ ಗವಿಮಠದ ಪಟ್ಟಾಧ್ಯಕ್ಷರಾದ ಶ್ರೀ ಚನ್ನವೀರದೇಶಿಕೇಂದ್ರಸ್ವಾಮಿಗಳವರ ಮತ್ತು ಶಿವಗಂಗಾ ಭಕ್ತಮಂಡಲಿಯವರ ಪ್ರಾರ್ಥನೆ ಮೇರೆಗೆ ತಾ|| ೨೯-೩-೧೯೪೭ನೇ ಸ್ಥಿರವಾರ ಪರಿವಾರ ದೊಡನೆ ಕಾರಿನಲ್ಲಿ ದಯಮಾಡಿಸಿದರು ಶಿವಗಂಗಾ ಪೇಟೆ ಭಕ್ತರು ಮಹಾಸ್ವಾಮಿಯವರನ್ನು ಶ್ರೀಮೇಲಣ ಗವಿಮಠಕ್ಕೆ ಬಿಜಮಾಡಿಸಿಕೊಂಡು ಹೋದರು ಮಠದ ಶ್ರೀಗಳವರು ಭಾವಿಜಗದ್ಗುರುಗಳವರನ್ನು ಮಹಾದ್ವಾರದ ಮುಂಭಾಗದಲ್ಲಿ ಅಂದರೆ ಶ್ರೀರುದ್ರಮುನಿ ಶಿವಾಚಾರ್ಯರ ಗುಹೆಯ ಮುಂಭಾಗದಲ್ಲಿ ವಾದ್ಯಾದಿಗಳಿಂದ ಉಪಚರಿಸಿ ಕರಾವಲಂಬದಿಂದ ಶ್ರೀಗಳವರಿಗಾಗಿ ಏರ್ಪಡಿಸಿದ್ದ ಭದ್ರಪೀಠದಲ್ಲಿ ಮೂರ್ತಗೊಳಿಸಿದರು ಕುಶಲಪ್ರಶ್ನೆಗಳಾದ ನಂತರ ಶ್ರೀರುದ್ರಮುನೀಶ್ವರ ಶಿವಾಚಾರ್ಯರ ಗುಹೆಗೆ ದಯಮಾಡಿಸಿ ಪೂಜಾದಿಗಳನ್ನು ತೀರಿಸಿಕೊಂಡು ಅಲ್ಲಿ ನೆರೆದಿದ್ದ ಭಕ್ತಮಂಡಲಿಯವರಿಗೂ ಮತ್ತು ಶ್ರೀಸ್ವಾಮಿಗಳವರಿಗೂ ಫಲಾಶೀರ್ವಾದ ಮಾಡಿ ಮಠದ ಸಮಸ್ತ ಭಾಗಗಳನ್ನೆಲ್ಲಾ ಪರಾಮರ್ಶಿಸಿ ಸರ್ವಭಕ್ತಮಂಡಲಿಗೆಲ್ಲಾ ಇದೇ ರೀತಿ ಶ್ರೀಜಗದ್ಗುರುಪೀಠದಲ್ಲಿ ಭಕ್ತಿ ಸದಾ ಇರಬೇಕೆಂದು ಅಪ್ಪಣೆಕೊಡಿಸಿ ಬೆಂಗಳೂರಿಗೆ ದಯಮಾಡಿಸಿದರು ದಯಮಾಡಿಸುವಾಗ್ಗೆ ಸಾಹುಕಾರ್ ರೇವಣ್ಣನವರು ತಳಿರುತೋರಣಗಳಿಂದ ಅಲಂಕೃತವಾಗಿದ್ದ ತಮ್ಮ ನಿವಾಸಸ್ಥಾನಕ್ಕೆ ಮಹಾಸ್ವಾಮಿಯವರನ್ನು ಬಹು ಭಕ್ತಿಯಿಂದ ಬಿಜಮಾಡಿಸಿಕೊಂಡು ಫಲಪುಷ್ಪ ಕಾಣಿಕಾದಿಗಳನ್ನು ಸಮರ್ಪಿಸಿ ಆಶೀರ್ವಾದವನ್ನು ಪಡೆದರು

ಪ್ರತ್ಯಕ್ಷದರ್ಶಿ.

ಸ್ವೀಕಾರ

ಚಿಕ್ಕಮಗಳೂರು ತಾಲ್ಲೂಕು ವಸ್ತಾರ ಹೋಬಳಿ ಹೆಡದಾಳು ಗ್ರಾಮದಲ್ಲಿರುವ ಮ|| ರಾ|| ಗುಡ್ಡದಕೆರೆ ಪಟೇಲ ಅಣ್ಣೇಗೌಡರ ದ್ವಿತೀಯ ಪುತ್ರ ಚಿ|| ಮಲ್ಲೇಗೌಡನಿಗೆ ಇದೇ ಹೋಬಳಿ ನಂದೀಕೆರೆ ಪಟೇಲ ಮ|| ರಾ|| ಮಲ್ಲೇಗೌಡರ ದ್ವಿತೀಯ ಪುತ್ರಿ ಚಿ|| ಸೌ|| ಮಂಜಮ್ಮನನ್ನು ಕೊಟ್ಟು ತಾ|| ೧೬-೪-೪೭ ಬುಧವಾರ ಪ್ರಾತಃಕಾಲ ವಧುವಿನ ಗೃಹದಲ್ಲಿ ಶ್ರೀಈಶನ ಅನುಗ್ರಹದಿಂದ ವಿವಾಹಮಹೋತ್ಸವವು ನಿರ್ವಿಘ್ನವಾಗಿ ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯವರು ಸಮರ್ಪಿಸಿದ 2 ರೂ ವಧುವಿನ ಕಡೆಯವರು ಸಮರ್ಪಿಸಿದ 2 ರೂ. ಒಟ್ಟು 4 ರೂಪಾಯಿಗಳು ಮ|| ರಾ|| ವಸ್ತಾರೆ ಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ|| ಬಿಚ್ಚಾಲೆ ಗ್ರಾಮದ ಸಾವಿರದೇವರ ಮಠದಲ್ಲಿ ಚೈತ್ರ ಬ|| ೫ ದಿವಸ ಶ್ರೀಮಹಾಂತೇಶ್ವರ ರಥೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ಮಿರ್ಜಾಪುರದ ಬಸವರಾಜಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಸೂಚನೆ

ಶ್ರೀಜಗದ್ಗುರು ರಂಭಾಪುರೀ ಪೀಠಕ್ಕೆ ಹೋಗತಕ್ಕವರ ಸೌಕರ್ಯಕ್ಕಾಗಿ ಸರಕಾರದವರು ಕಡೂರು ಸ್ಟೇಷನ್ನಿನಿಂದ ಬಾಳೇಹೊನ್ನೂರಿಗೆ ಬಸ್ಸು-ಲಾರಿಗಳ ವ್ಯವಸ್ಥೆ ಮಾಡಿರುವರೆಂದು ಮಠದ ಏಜಂಟರು ತಾರಿನ ಮೂಲಕ ತಿಳಿಸಿದ್ದಾರೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸರ್ವ ಜೋಡಿಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು [illegible] ಯಲ್ಪಟ್ಟಿಲ್ಲ ಈ ಕೊರತೆಯನ್ನು ಪೂರಯಿಸುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** [illegible] ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ [illegible] ಈ ಗ್ರಂಥವನ್ನು ಓದಿನೋಡಿದವರೆಲ್ಲ ಪಂಡಿತರ ವ್ಯಾಖ್ಯಾನದ [illegible] ಕರಿಗೆ [illegible] ಅನುಕೂಲವಾಗಿ ಬಹು ಕ್ರಮವಾಗಿ [illegible] ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು [illegible] ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ [illegible] ಸಾದವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ [illegible] ಮನೋಹರವಾದ ಚಿತ್ರವು ಜೋಡಿಸಲ್ಪಟ್ಟಿದೆ [illegible] ಸೌಂದರ್ಯವು ವರ್ಣನಾತೀತವಾಗಿದೆ [illegible] ರುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ಒಂದಕ್ಕೆ	೨—೮—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೮—೦
ಸರ್ವ ಶಿವಾಚಾರ್ಯರು ... ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೨—೮—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೮—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ಒಂದಕ್ಕೆ	೨—೮—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಂದಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಂದಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
[illegible] ಶ್ರೀರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿವರ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೬ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೬ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೭ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಒಪವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತನಾಮಸಹ, ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ತೆಲುಗುಲಿಪಿ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥। ರೂ.
ವೀರಶೈವರತ್ನ (೨ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As.
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धान्तशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಮೇ ೧೯೪೭ [ಸಂಚಿಕೆ-೨

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಮತ್ತು ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ಕೊಂಡಕುಂದಿ

ಪ್ರತಿವರ್ಷ ಪದ್ಧತಿಯಂತೆ ತಾ|| ೨೩-೪-೪೭ ಮತ್ತು ೨೫-೪-೪೭ ರಲ್ಲಿ ಕೊಂಡಕುಂದಿ ಶಿಲಾಮಠದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಅತಿ ವೈಭವದಿಂದ ಆಚರಿಸಲ್ಪಟ್ಟವು. ಪ್ರಾತಃಕಾಲ ಶಿಲಾಮಠದ ಸಾಂಗವೇದ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಂದ ಜಗದಾಚಾರ್ಯರ ಭಾವಚಿತ್ರಗಳಿಗೆ ಅರ್ಚನಾದಿಗಳು ಆಚರಿಸಲ್ಪಟ್ಟವು ಮಧ್ಯಾಹ್ನ ಗಣ ಸಂತರ್ಪಣೆಯಾಯಿತು ಸಾಯಂಕಾಲ ೫ ಘಂಟೆಗೆ ಶಿಲಾಮಠದಲ್ಲಿ ಸಭೆಯು ನಡೆಯಿತು ಕೊಟ್ಟೂರು ಕೆಂಭಾವಿಮಠದ ಸಂಗೀತ ವಿದ್ವಾನ್ ವೇ|| ಚನ್ನಬಸವ ಶಾಸ್ತ್ರಿಗಳು ಸಭಾಧ್ಯಕ್ಷರಾಗಿದ್ದರು. ಸಾಂಗವೇದ ಸಂಸ್ಕೃತಪಾಠಶಾಲಾಧ್ಯಾಪಕರಾದ ಶಿಲಾಮಠದ ವೇ|| ಶಿವಯೋಗಿಶಾಸ್ತ್ರಿಗಳು ವೀರಶೈವರ ಕರ್ತವ್ಯದ ಬಗ್ಗೆ ಭಾಷಣ ಮಾಡಿದರು ಅನಂತರ ರಾವಲುಡಕಿ ಬೃಹನ್ಮಠದ ವೇ|| ಸದಾಶಿವಶಾಸ್ತ್ರಿಗಳು ಮತಾಚಾರ್ಯರ ಬಗ್ಗೆ ಮಹೋಪನ್ಯಾಸವನ್ನು ಮಾಡಿದರು. ತರುವಾಯ ಸಭಾಧ್ಯಕ್ಷರು ಜಯಂತೀ ವ್ರತಾಚರಣೆಯನ್ನು ಕುರಿತು ಭಾಷಣ ಮಾಡಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು. ಜಯಂತೀ ವ್ರತಾಚರಣೆಯನ್ನು ಭಕ್ತಿಪೂರ್ವಕವಾಗಿ ಆಚರಿಸಿದ ಶಿಲಾಮಠದ ಬಂಡಮ್ಮನವರಿಗೆ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇನೆ

ಓರ್ವ ಉತ್ಸವಭಾಗಿ

ಹುಮನಾಬಾದ್

ನಿಜಾಂ ಇಲಾಖಾ ಹುಮನಾಬಾದ್ ನಗರದಲ್ಲಿ ಇದೇ ವೈಶಾಖ ಶು|| ೩ ಮತ್ತು ಶು|| ೫ ದಿವಸ ಉಭಯ ಜಗದ್ಗುರುಗಳ ಜಯಂತೀಮಹೋತ್ಸವಗಳು ಇಲ್ಲಿಯ ವೀರಶೈವ ಸಮಾಜದವರಿಂದ ಮಹಾ ಸಂಭ್ರಮದೊಡನೆ ನೆರವೇರಿಸಲ್ಪಟ್ಟವು ಸಾಯಂಕಾಲ ೫ ಘಂಟೆಗೆ ಸಭೆ ಕೂಡಿತು. ಧರ್ಮಪ್ರಚಾರಕರಾದ ವೇ|| ಬಂಗಿ ಸಿದ್ಧರಾಮಯ್ಯನವರು ಮತಾಚಾರ್ಯರ ಮಹತ್ವವನ್ನು ಕುರಿತು ಭಾಷಣ ಮಾಡಿದರು. ಬಳಿಕ ಜಗದಾಚಾರ್ಯರ ಭಾವಚಿತ್ರಕ್ಕೆ ಮಂಗಳಾರತಿಯಾಗಿ ಸಭೆಯು ಮುಕ್ತಾಯಗೊಂಡಿತು.

ಗುರುಭಕ್ತ

ಕಿರುಗಾವಲು

ದಿನಾಂಕ ೨೩-೪-೪೭ ನೇ ದಿವಸ ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವು ಅತ್ಯಂತ ಭಕ್ತಿಯಿಂದ ನೆರವೇರಿತು ಸಾಯಂಕಾಲ ಶ್ರೀ ವೀರಶೈವ ಶಿವಾನಂದ ಸಂಘದ ಆಶ್ರಯದಲ್ಲಿ ಶ್ರೀಯುತ ಎಂ ರಾಜಶೇಖರಪ್ಪನವರ ಅಧ್ಯಕ್ಷತೆಯಲ್ಲಿ ಜಗದಾಚಾರ್ಯರ ವಿಷಯವಾಗಿ ಶ್ರೀಯುತ ಕೆ ಜಿ ರುದ್ರಸ್ವಾಮಿ ಅವರಿಂದ ಭಾಷಣವಾದ ಮೇಲೆ ಜಗದಾಚಾರ್ಯರ ಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಯಿತು.

ದಿನಾಂಕ ೨೫-೪-೪೭ ನೇ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲಾಯಿತು ಸಾಯಂಕಾಲ ಶ್ರೀಯುತ ಬಿ ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಜಗದಾಚಾರ್ಯರ ವಿಚಾರವಾಗಿ ಶ್ರೀಯುತ ಕೆ ಜಿ ರುದ್ರಸ್ವಾಮಿಯವರು ಭಾಷಣಮಾಡಿದರು ಬಳಿಕ ಜಗದಾಚಾರ್ಯರ ಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಯಿತು.

ಕೆ. ಯಸ್ ಮಹಾದೇವಪ್ಪ

ಸಿರುಗುಪ್ಪ

ಬಳ್ಳಾರಿ ಡಿ| ಸಿರುಗುಪ್ಪ ಗ್ರಾಮದಲ್ಲಿ ತಾ|| ೨೫-೪-೪೭ ನೆ ದಿನ ಜಯಂತಿಯು ಶ್ರೀ ಹಿರೇಹಾಳ ಮಳೆಮಠದ ಶ್ರೀ ವಿರೂಪಾಕ್ಷಸ್ವಾಮಿಗಳವರ ನೇತೃತ್ವದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಶಿರಿಗೇರಿ ಮಠದ ರೇವಣಸಿದ್ಧಶರ್ಮ ಮತ್ತು ಬಲಕುಂದಿ ಓಬಳಶಾಸ್ತ್ರಿಗಳು ಇವರೇ ಮೊದಲಾದ ಅನೇಕ ವಿದ್ವಾಂಸರು ಭಾಷಣ ಮಾಡಿದರು. ಶ್ರೀಮಾನ್ ಉಂತಕಲ್ ಷಣ್ಮುಖಪ್ಪನವರೂ, ಶ್ರೀಮಾನ್ ಕೌತಾಳದ ಐಯ್ಯಪ್ಪನವರು ಶ್ರೀಮಾನ್ ಶಿರಿವಾರದ ವೀರಭದ್ರಪ್ಪನವರು ಇವರೇ ಮೊದಲಾದವರು ಸಭೆಗೆ ಆಗಮಿಸಿದ್ದರು ಅಧ್ಯಕ್ಷರು ಭಾವಗರ್ಭಿತವಾದ ಭಾಷಣ ಮಾಡಿದ ಮೇಲೆ ಸಭೆಯು ಮುಕ್ತಾಯವಾಯಿತು

ಕಾರ್ಯದರ್ಶಿ

ಉರವಕೊಂಡ

ಅನಂತಪುರ ಜಿಲ್ಲಾ ಉರವಕೊಂಡ ಗ್ರಾಮದಲ್ಲಿರುವ ಕಂಬಾಳಿಮಠದ ಶ್ರೀ ವಿಶ್ವೇಶ್ವರ ಪಟ್ಟಾಧ್ಯಕ್ಷರು ನಿಂಬಗಲ್ಲು ಗ್ರಾಮದಲ್ಲಿ ಶ್ರೀ ದಾರುಕಾಚಾರ್ಯರ ಜಯಂತಿಯನ್ನು ವಿಜೃಂಭಣೆಯಿಂದ ನೆರವೇರಿಸಿದರು. ಆ ಕಾಲಕ್ಕೆ ಧಾರವಾಡ ಜಿಲ್ಲಾ ಕುಮಾರಗೊಪ್ಪದ ಬಸವರಾಜ ಹಿರೇಮಠ ಇವರು "ವೀರಶೈವಧರ್ಮ ಮತ್ತು ಪಂಚಾಚಾರ್ಯರು" ಎಂಬ ವಿಷಯದಲ್ಲಿ ಸ್ವಾರಸ್ಯವಾದ ಭಾಷಣವಿತ್ತರು.

ಕಾರ್ಯದರ್ಶಿ, ಶಂಕರಶಾಸ್ತ್ರಿ.

ಬಾರ್ಸಿ

ಮಹಾರಾಷ್ಟ್ರ ದೇಶದಲ್ಲಿರುವ ಬಾರ್ಸಿ ನಗರದಲ್ಲಿ ವೈಶಾಖ ಶುದ್ಧ ೩ ಬುಧವಾರ ಮತ್ತು ವೈಶಾಖ ಶು|| ೫ ಶುಕ್ರವಾರ ಶ್ರೀ ಜಗದಾಚಾರ್ಯರ ಜಯಂತೀಮಹೋತ್ಸವಗಳು ಇಲ್ಲಿಯ ವೀರಶೈವ ಸ್ತ್ರೀ ಸಮಾಜದಿಂದ ಶ್ರೀ ರುದ್ರಪಶುಪತಿಸ್ವಾಮಿ ಮಠದಲ್ಲಿ ಮಹಾ ವೈಭವದೊಡನೆ ನೆರವೇರಿಸಲ್ಪಟ್ಟವು. ಈ ಕಾರ್ಯಕ್ರಮವೆಲ್ಲವೂ ಶ್ರೀ ಪರಾಂಡಕರಸ್ವಾಮಿಗಳವರ ನೇತೃತ್ವದಲ್ಲಿ ಯಶಸ್ವಿಯಾಗಿ ನೆರವೇರಿದವು ಮಧ್ಯಾಹ್ನ ೩ ಘಂಟೆಗೆ ಕೀರ್ತನಕಾರಿಣಿ ಸೌ|| ಲಿಂಬಾಬಾಯಿ ಪಕಾಲೆ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು ಸಭೆಗೆ ಸುಮಾರು ೭-೮ ನೂರು ಜನ ಸ್ತ್ರೀಯರು ಆಗಮಿಸಿದ್ದರು. ಅಗ್ಗೆ ಅನೇಕ ಜನ ಸ್ತ್ರೀಯರು ಭಾಷಣ ಮಾಡಿದರು. ಅನಂತರ ಶ್ರೀ ಪರಾಂಡಕಸ್ವಾಮಿಯವರು ಸ್ತ್ರೀ ಸುಧಾರಣೆ ಬಗ್ಗೆಯೂ, ಶ್ರೀ ಜಗದಾಚಾರ್ಯರ ಭಕ್ತಿಯ ಬಗ್ಗೆಯೂ ಭಾಷಣ ಮಾಡಿ ಇದೇರೀತಿ ಸ್ತ್ರೀಯರು ಪ್ರತಿವರ್ಷ ಜಗದಾಚಾರ್ಯರ ಜಯಂತಿಗಳನ್ನು ತಪ್ಪದೆ ನಡೆಸಬೇಕೆಂದು ಹೇಳಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ಹೊಸಪೇಟೆ

ಬಳ್ಳಾರಿ ಡಿಸ್ಟ್ರಿಕ್ಟ್ ಹೊಸಪೇಟೆ ಟೌನಿನಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಮತ್ತು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಸಾಂಗವಾಗಿ ನೆರವೇರಿದವು ಆ ಸಮಯದಲ್ಲಿ ಕೆಲವರು ಜಗದಾಚಾರ್ಯರ ಮಹಿಮೆಯ ಬಗ್ಗೆ ಭಾಷಣ ಮಾಡಿದರು. ಕೊನೆಗೆ ಸಂಗೀತದೊಡನೆ ಜಗದಾಚಾರ್ಯರ ಮಂಗಲವಾಗಿ ಸಭೆಯು ಮುಕ್ತಾಯಗೊಂಡಿತು.

ಕೆ. ಎಂ ಬಸವರಾಜಸ್ವಾಮಿ, ಟೀಚರ್

ಗರಗ

ಧಾರವಾಡ ಡಿ|| ಗರಗ ಗ್ರಾಮದಲ್ಲಿರುವ ಮ|| ರಾ|| ವೀರಪ್ಪ ಬಳಿಗಾರ ಇವರು ತಮ್ಮ ಮನೆಯಲ್ಲಿ ಉಭಯ ಜಗದ್ಗುರುಗಳ ಜಯಂತೀಮಹೋತ್ಸವವನ್ನು ಬಹಳ ವೈಭವದಿಂದ ನೆರವೇರಿಸಿದರು. ವೇ|| ಚನ್ನಮಲ್ಲಯ್ಯನವರು ಹಿರೇಮಠ ಇವರು ವೇದೋಕ್ತವಾಗಿ ಷೋಡಶೋಪಚಾರಗಳಿಂದ ಪೂಜಿಸಿದರು. ಚಿ|| ಮಹಾದೇವಪ್ಪ ಮೊದಲಾದ ಎಲ್ಲ ಕುಟುಂಬವರ್ಗದವರೂ ಬಹು ಭಕ್ತಿಯಿಂದ ಜಯಂತೀ ಕಾರ್ಯವನ್ನು ನೆರವೇರಿಸಿದರು. ಈ ಕಾರ್ಯದಲ್ಲಿ ಭಾಗಿಗಳಾದವರೆಲ್ಲರಿಗೂ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನು ಅನುಗ್ರಹಿಸಲಿ.

ಚನ್ನಮಲ್ಲಯ್ಯಸ್ವಾಮಿ ಹಿರೇಮಠ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು| ಪಂಚಮಿಗೆ ೨೦ ವರ್ಷಗಳು ತುಂಬಿ ೨೧ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವವರ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

ಸಂ —

ಪಂಚಾಚಾರ್ಯಪ್ರಭಾ

೧೯೪೭ನೆಯ ಮೇ ತಾ|| ೫ನೇ ಸೋಮವಾರ

ವೀರಶೈವರಿಗೆ ಪತಿಕರ್ಮಗಳೇ ಮುಖ್ಯ

ವೀರಶೈವಸಿದ್ಧಾಂತವು ಯಾವಾಗಲೂ ಮೋಕ್ಷಸುಖವನ್ನಧಿಕರಿಸಿರುತ್ತದೆಯೇ ಹೊರತು ಸ್ವರ್ಗಾದ್ಯಾಮುಷ್ಮಿಕ ಸೌಖ್ಯವನ್ನಧಿಕರಿಸಿಲ್ಲವು ವೈದಿಕಮತಗಳಿಗೆಲ್ಲ ಮೂಲಾಧಾರವಾದ ವೇದವು ಕರ್ಮಕಾಂಡ, ಜ್ಞಾನಕಾಂಡವೆಂಬ ಎರಡು ಭಾಗಗಳಿಂದೊಡಗೂಡಿರುತ್ತದೆ ಕರ್ಮಕಾಂಡವು ಜ್ಯೋತಿಷ್ಟೋಮಾದಿ ಕರ್ಮಗಳನ್ನು ವಿಧಿಸುವುದು ಈ ಕರ್ಮಗಳನ್ನು ಅನುಷ್ಠಿಸುವುದರಿಂದ ಆತ್ಮನಲ್ಲಿ ಒಂದು ವಿಧವಾದ ಸಂಸ್ಕಾರ (ಅಪೂರ್ವ)ವು ಸಂಬಂಧಿಸುವದು ದೇಹವನ್ನು ಬಿಟ್ಟ ಅನಂತರದಲ್ಲಿ ಆ ಕರ್ಮಜನ್ಯವಾದ ಅಪೂರ್ವವು ಆತ್ಮನಿಗೆ ಸ್ವರ್ಗಸುಖವನ್ನುಂಟುಮಾಡುವುದು ಆ ಪುಣ್ಯಬಲವಿರುವವರೆಗೂ ಸ್ವರ್ಗಸುಖಾನುಭವಮಾಡುತ್ತ ಪುಣ್ಯ ತೀರಿದೊಡನೆಯೇ ಪುನಃ ಆ ಆತ್ಮವು ಜನ್ಮವೆತ್ತಬೇಕಾಗುವುದು ಈ ವಿಷಯದಲ್ಲಿ "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಇತ್ಯಾದ್ಯನಂತಪ್ರಮಾಣವಾಕ್ಯಗಳಿರುತ್ತವೆ 'ನ ಕರ್ಮಣಾ' ಇತ್ಯಾದಿ ಶ್ರುತಿಪ್ರಮಾಣಾನುಸಾರವಾಗಿ ಮೋಕ್ಷವೆಂಬ ಮಹಾಪುರುಷಾರ್ಥವು ಅಂಥ ಕರ್ಮಗಳಿಂದುಂಟಾಗುವುದಿಲ್ಲ

ಆತ್ಯಂತಿಕದುಃಖನಿವೃತ್ತಿಪೂರ್ವಕ ಶಿವತ್ವಪ್ರಾಪ್ತಿರೇವ ಮೋಕ್ಷಃ |

ಅಸ್ವತಂತ್ರತೆ ಅಲ್ಪಜ್ಞತೆ-ಅಪೂರ್ಣತೆ ಮುಂತಾದ ದುಃಖಹೇತುಭೂತಜೀವಧರ್ಮಗಳು ಸಂಪೂರ್ಣ ನಾಶವಾಗಿ, ಸರ್ವಜ್ಞನೂ, ಪರಿಪೂರ್ಣನೂ, ಸ್ವತಂತ್ರನೂ ಆನಂದಮಯನೂ ಆದ ಶಿವನ ಸ್ವರೂಪವನ್ನು ಪಡೆಯುವುದೇ ಮೋಕ್ಷವು ಇಂತಹ, ಮೋಕ್ಷಸಾಮ್ರಾಜ್ಯವನ್ನು ಸಂಪಾದಿಸುವುದೇ ವೀರಶೈವನ ಪರಮಧ್ಯೇಯವೆಂದು ಭಾಷ್ಯಕಾರರು ಅಭಿಪ್ರಾಯಪಟ್ಟಿರುತ್ತಾರೆ

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ |
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಃ ಪ್ರಕೀರ್ತಿತಾಃ ||

ಈರೀತಿ ಶಿವಾಗಮಗಳೂ ಸಹ "ವೀರಶೈವ" ಎಂಬ ಪದದ ನಿರ್ವಚನವನ್ನು ಮಾಡಿ ಇದೇ ಅರ್ಥವನ್ನೇ ಪ್ರಕಾಶಪಡಿಸಿರುವುವಲ್ಲದೆ—

"ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಯಃ ಪೂಜಯತ್ಯಂಗ
ಸ ವೀರಶೈವಃ"

ಎಂದು ಸ್ಕಾಂದಾದಿ ಪುರಾಣಗಳು ಕೂಡ ಸ್ವರ್ಗಸ್ವಾರಾಜ್ಯಾದಿಸಾಧನವಾದ ಜ್ಯೋತಿಷ್ಟೋಮಾದಿ ಕರ್ಮಗಳನ್ನು ನಿಷೇಧಿಸಿ ಮೋಕ್ಷವನ್ನೇ ಸಮರ್ಥಿಸಿರುತ್ತವೆ ಇಂತಹ ಮುಕ್ತಿಸುಖವಾದರೋ ವೇದದ ಜ್ಞಾನಕಾಂಡೋಕ್ತವಾದ ಧರ್ಮಾನುಷ್ಠಾನಗಳಿಂದಲೇ ಸಿದ್ಧಿಸುತ್ತದೆಯಲ್ಲದೆ ಕರ್ಮಕಾಂಡೋಕ್ತವಾದ ಧರ್ಮಾನುಷ್ಠಾನಗಳಿಂದ ಸಿದ್ಧಿಸುವುದಿಲ್ಲ ಭಾಷ್ಯಕಾರರು ಕರ್ಮವನ್ನು ಪಶುಕರ್ಮವೆಂದೂ ಪತಿಕರ್ಮವೆಂದೂ ಎರಡು ಭಾಗಗಳನ್ನು ಮಾಡಿರುವರು ಜೀವಭಾವನಿವೃತ್ತಿಯನ್ನು ಮಾಡದಿರುವುದರಿಂದ ಪಶುಕರ್ಮವೆಂದೂ, ಜೀವಭಾವನಿವೃತ್ತಿಮಾಡುವುದರಿಂದ ಪತಿಕರ್ಮವೆಂದೂ ಹೆಸರುಂಟಾಗಿದೆ ಈ ಪತಿಕರ್ಮಗಳೆಲ್ಲವೂ ಜ್ಞಾನಕಾಂಡದಲ್ಲಿ ಹೇಳಲ್ಪಟ್ಟ ಧರ್ಮಗಳಾಗಿರುತ್ತವೆ ಪ್ರಪಂಚದಲ್ಲಿ ಯಾವನು ಯಾವ ಫಲವನ್ನಪೇಕ್ಷಿಸುತ್ತಾನೆಯೋ ಆ ಫಲಾನುಗುಣವಾದ ಕರ್ಮಗಳನ್ನೇ ಮಾಡಬೇಕು ಮಾವಿನಹಣ್ಣನ್ನು ಅಪೇಕ್ಷಿಸುವವನು ಮಾವಿನ ಬೀಜವನ್ನೇ ಬಿತ್ತಿ ವ್ಯವಸಾಯ ಮಾಡಬೇಕು ಅದಕ್ಕೆ ವಿರುದ್ಧವಾಗಿ ಹಲಸಿನ ಬೀಜವನ್ನು ಬಿತ್ತಿ ಮಾವಿನ ಹಣ್ಣನ್ನು ಪಡೆಯುವುದು ಅಸಾಧ್ಯವಷ್ಟೆ! ಆದುದರಿಂದ ಮೋಕ್ಷಾಪೇಕ್ಷಿಯಾದವನು ಪತಿಕರ್ಮವನ್ನೇ ಆಚರಿಸಬೇಕು ಸ್ವರ್ಗಾದಿಫಲವನ್ನು ಅಪೇಕ್ಷಿಸುವವನು ಅವುಗಳಿಗೆ ಸಾಧನವಾದ ಪಶುಕರ್ಮಗಳನ್ನೇ ಅನುಷ್ಠಿಸಬೇಕು ಪರಮಾತ್ಮನು ಅವರವರ ಅಧಿಕಾರಕ್ಕನುಗುಣವಾಗಿ ಒಂದೇ ವೇದವನ್ನು ಎರಡು ಭಾಗವಾಗಿ ಮಾಡಿರುವನು ಶ್ರೀ ಜೈಮಿನ್ಯಾಚಾರ್ಯರು ಕೇವಲ ಕರ್ಮಕಾಂಡವನ್ನವಲಂಬಿಸಿ ಪೂರ್ವಮೀಮಾಂಸೆಯನ್ನು ಬರೆದರು ಶ್ರೀವ್ಯಾಸರು ಜ್ಞಾನಕಾಂಡವನ್ನವಲಂಬಿಸಿ ಉತ್ತರಮೀಮಾಂಸೆಯನ್ನು ಬರೆದರು ಇವುಗಳಲ್ಲಿ ಉತ್ತರಮೀಮಾಂಸೆಯೇ ಮೋಕ್ಷವೆಂಬ ಪುರುಷಾರ್ಥಕ್ಕೆ ಮುಖ್ಯಕಾರಣವಾಗಿರುವದು ಆದುದರಿಂದ ಪರಮಾತ್ಮಸಾಕ್ಷಾತ್ಕಾರಮಾರ್ಗವನ್ನನುಸರಿಸಿದ ಶ್ರೀ ವ್ಯಾಸಮಹರ್ಷಿಗಳನ್ನು

ಅತಸ್ಸರ್ವದಶೀ ಬ್ರಹ್ಮಾ ದ್ವಿವಾಹುರಪರೋ ಹರಿಃ
ಅಫಾಲಲೋಚನಶ್ಶಂಭುರ್ಭಗವಾನ್ ಬಾದರಾಯಣಃ ||

ಎಂದು ಅನೇಕ ಕವಿಗಳು ತ್ರಿಮೂರ್ತಿಗಳಿಗೆ ಹೋಲಿಸಿರುತ್ತಾರೆ ಸ್ವರ್ಗಾದ್ಯನಿತ್ಯಫಲಗಳನ್ನಪೇಕ್ಷಿಸದ ವೀರಶೈವ ಭಾಷ್ಯಕಾರರು ಪೂರ್ವಮೀಮಾಂಸೆಯೆಂಬ ಮಹಾಕಾಂತಾರವನ್ನು ಪ್ರವೇಶಿಸದೆ ನಿತ್ಯಫಲಪ್ರದವಾದ ವೇದದ ಜ್ಞಾನಕಾಂಡವೆಂಬ ಉತ್ತರಮೀಮಾಂಸೆಯೆಂಬ ನಂದನವನವನ್ನು ಪ್ರವೇಶಿಸಿ ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ' 'ಅಮೃತಸ್ಯ ದೇವಧಾರಣೋ ಭೂಯಾಸಂ' ಸರ್ವಲಿಂಗಂ ಸ್ಥಾಪಯತು ಪಾಣಿಮಂತ್ರಂ ಪವಿತ್ರಂ ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ ಇತ್ಯಾದ್ಯನಂತಶ್ರುತಿವಾಕ್ಯಗಳಿಂದ ಪರಶಿವಪ್ರತ್ಯಭಿಜ್ಞಾನವುಂಟಾಗುವದರಿಂದಲೇ ದುಃಖನಿವೃತ್ತಿಪೂರ್ವಕವಾಗಿ, ಮಹಾಪುರುಷಾರ್ಥವೆನಿಸಿದ ಪರಶಿವತ್ವಪ್ರಾಪ್ತಿಯೇ ವೀರಶೈವಮತದ ಮುಖ್ಯೋದ್ದೇಶವೆಂದು ಸ್ಪಷ್ಟಪಡಿಸಿ ಅದಕ್ಕೆ ಅಂಗಭೂತವಾದ ಪತಿಕರ್ಮಾಚರಣೆಯಲ್ಲಿ ಪ್ರವೃತ್ತಿಯನ್ನುಂಟುಮಾಡಿರುತ್ತಾರೆ ವೇದದಲ್ಲಿ ಹೇಳಿರುವ ಸಮಸ್ತಕರ್ಮೋಪಾಸನೆಗಳನ್ನಾಗಲಿ, ಸಮಸ್ತಜ್ಞಾನೋಪಾಸನೆಗಳನ್ನಾಗಲಿ, ಯಾವ ಮತೀಯರೂ ಅನುಷ್ಠಿಸಲಾರರು ಶ್ರೀನೀಲಕಂಠಶಿವಾಚಾರ್ಯರು ವೇದವನ್ನು ಒಂದು ವಿಶಾಲವಾದ ರತ್ನದ ಅಂಗಡಿಗೆ ಹೋಲಿಸಿದ್ದಾರೆ ರತ್ನದ ಅಂಗಡಿಗೆ ಹೋದ ಮನುಷ್ಯನು ತನ್ನಲ್ಲಿ ಎಷ್ಟು ಯೋಗ್ಯತೆಯಿದೆಯೋ ಅದಕ್ಕನುಗುಣವಾಗಿ ತನಗೆ ಬೇಕಾದ ರತ್ನಗಳನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತಾನಲ್ಲದೆ ಅಲ್ಲಿರುವ ರತ್ನಗಳನ್ನೆಲ್ಲಾ ತೆಗೆದುಕೊಳ್ಳುವುದಿಲ್ಲ ಇದರಿಂದ ತಾನು ತೆಗೆದುಕೊಂಡ ರತ್ನಗಳು ಮಾತ್ರ ಉತ್ತಮರತ್ನಗಳು, ಉಳಿದ ರತ್ನಗಳು ಉತ್ತಮರತ್ನಗಳಲ್ಲವೆಂದು ಯಾರೂ ಹೇಳಲಾರರು ಮತ್ತೊಬ್ಬನಿಗೆ ಆ ಉಳಿದ ರತ್ನಗಳೇ ಉತ್ತಮವಾಗಿ ತೋರುವುವು ಅದರಂತೆ ವೇದವೆಂಬ ಮಹಾರತ್ನದಂಗಡಿಯಲ್ಲಿ ವೀರಶೈವರು ತಮತಮಗೆ ಬೇಕಾದ ಮುಕ್ತಿಸಾಧನಗಳಾದ ಶಿವಧ್ಯಾನ ಶಿವಜ್ಞಾನ ಶಿವಭಕ್ತಿ ಶಿವವ್ರತ ಶಿವಪೂಜಾ ಭಸ್ಮ-ರುದ್ರಾಕ್ಷ-ಶಿವಪಂಚಾಕ್ಷರ ಶಿವಲಿಂಗಾದಿಗಳನ್ನು ಸ್ವೀಕರಿಸಿ ಉಳಿದವುಗಳನ್ನು ಬಿಟ್ಟಿರುತ್ತಾರೆ ಹೀಗೆ ವೈದಿಕಮತಗಳೆಲ್ಲವೂ ಇದರಂತೆಯೇ ಇರುತ್ತವೆಯಲ್ಲದೆ ವೇದದಲ್ಲಿರುವ ಎಲ್ಲ ಭಾಗಗಳನ್ನನುಷ್ಠಿಸುವ ಮತವೊಂದೂ ಕಾಣುವುದಿಲ್ಲ ಇದೇ ಅಭಿಪ್ರಾಯವನ್ನು ಶ್ರೀನೀಲಕಂಠ ಶಿವಾಚಾರ್ಯರು,

"ಯಾವತಾಂ ಸಮನುಷ್ಠಾನಂ ಸಪ್ತಸಾಗರಶೋಷಣಂ"

ವೇದದಲ್ಲಿ ಹೇಳಿರುವ ಎಲ್ಲ ಕರ್ಮಗಳನ್ನೂ ನಾವೊಬ್ಬರೇ ಅನುಷ್ಠಿಸುವೆನೆಂದು ಯಾರು ಹೇಳುವರೋ ಅವರು ಏಳು ಸಮುದ್ರಗಳನ್ನೇ ಒಣಗಿಸಿಬಿಡುವೆವೆಂದು ಹೇಳುವವರಿಗೆ ಸಮಾನರೆಂದು ಪರಿಹಾಸಮಾಡಿರುವರು ವೀರಶೈವ ಮತಾಚಾರ್ಯರು ವೇದದ ಕರ್ಮಕಾಂಡದಲ್ಲಿ ಹೇಳಿರುವ ನಶ್ವರಫಲಪ್ರದವಾದ ಶ್ರುತಿಗಳಿಗಿಂತಲೂ ಬ್ರಹ್ಮಪ್ರಕರಣದಲ್ಲಿ ಹೇಳಿದ ನಿತ್ಯಫಲಪ್ರದವಾದ ಶ್ರುತಿಗಳಿಗೆ ಪ್ರಾಬಲ್ಯವನ್ನು ಒಪ್ಪುವುದರಿಂದಲೂ, ಅಲ್ಲದೆ ಅಹಿಂಸಾವ್ರತವನ್ನು ಪಾಲಿಸುವುದರಲ್ಲಿ ಅಗ್ರಗಣ್ಯರೆಂದು ಖ್ಯಾತಿಪಡೆದಿರುವುದರಿಂದಲೂ ವೀರಶೈವ ಸಿದ್ಧಾಂತವು ಸ್ವರ್ಗಾದಿಸಾಧನವಾದ ಪಶುವಿಶಸನಾದಿ ಕರ್ಮಗಳನ್ನು ಅನುಷ್ಠಿಸಕೂಡದೆಂದೂ ಜ್ಞಾನಕಾಂಡೋಕ್ತವಾದ ಲಿಂಗಧಾರಣ ಲಿಂಗಪೂಜಾದಿ ಪತಿಕರ್ಮಗಳನ್ನೇ ಅನುಷ್ಠಿಸಬೇಕೆಂದೂ ನಿಯಮನ ಮಾಡುತ್ತಿರುವುದು.

ವರ್ತಮಾನಸಂಗ್ರಹ

ನೇಪಾಳ ಮತ್ತು ಸಂಯುಕ್ತ ಸಂಸ್ಥಾನಗಳ ಒಪ್ಪಂದ

ಸಂಯುಕ್ತ ಸಂಸ್ಥಾನವು ನೇಪಾಲವು ಸ್ವತಂತ್ರ ದೇಶವೆಂಬುದನ್ನು ಒಪ್ಪಿ ಅದರೊಡನೆ ಸ್ನೇಹಭಾವ ಮತ್ತು ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿರುತ್ತದೆ.

ವಜ್ರಗಳ ವ್ಯಾಪಾರವು ಕಡಿಮೆಯಾಗಿದೆ

ನ್ಯೂಯಾರ್ಕ್ ವರದಿಯ ಪ್ರಕಾರ ವಜ್ರಕ್ಕೆ ಇದುವರೆಗೂ ಇದ್ದ ಗಿರಾಕಿ ಈಗ ಇಲ್ಲವೆಂದು ಹೇಳಲಾಗಿದೆ ೧೯೪೬ ರ ಅಂತ್ಯಕ್ಕೆ ಇದ್ದ ಗಿರಾಕಿಯಲ್ಲಿ ಶೇಕಡಾ ೨೫ ರಷ್ಟು ಕಡಿಮೆ ಬಿದ್ದಿದೆ ಎಂದು ನ್ಯೂಯಾರ್ಕಿನ ವಜ್ರ ವ್ಯಾಪಾರ ಸಂಘದವರು ತಿಳಿಸುತ್ತಾರೆ

ಗುಂಡಿನೇಟಿಗೆ ಜಗ್ಗದ ಗಾಜು

ಗುಂಡಿನೇಟಿಗೆ ಜಗ್ಗದ ಗಾಜು, ಈಗ ಯುದ್ಧದ ಉಪಯೋಗಕ್ಕೆ ಬೇಡವಾಗಿದ್ದರೂ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ತಯಾರಿಕೆಯು ಏಳರಷ್ಟು ಜಾಸ್ತಿಯಾಗಿದೆ ಇದರಲ್ಲಿ ಎಂಟನೇ ಒಂದು ಭಾಗವು ಟರ್ಕಿಗೆ ಹೋಗುತ್ತದೆ ದಕ್ಷಿಣ ಅಮೆರಿಕಾಕ್ಕೂ ಯಥೇಚ್ಛವಾಗಿ ಹೋಗುತ್ತದೆ

ವೈಸ್ರಾಯರ ಹೇಳಿಕೆ

ಭಾರತದ ಕಾರ್ಯದರ್ಶಿಗಳ ಅಧಿಕಾರಿ ವರ್ಗಕ್ಕೆ ಸೇರಿದ ಅಧಿಕಾರಿಗಳ ಸೇವೆಯನ್ನು ಅಕಾಲದಲ್ಲಿ ಮುಕ್ತಾಯಗೊಳಿಸುವ ಸಂದರ್ಭದಲ್ಲಿ ಈ ಅಧಿಕಾರಿಗಳಿಗೆ ದೊರೆಯಬೇಕಾದ ಪರಿಹಾರದ ವಿವರಣೆಗಳನ್ನೊಳಗೊಂಡ ಒಂದು ಹೇಳಿಕೆಯನ್ನು ವೈಸರಾಯರು ಹೊರಡಿಸಿದ್ದಾರೆ. ಪರಿಹಾರ ಯೋಜನೆಯ ಗಮನಾರ್ಹವಾದ ಅಂಶಗಳಿವು -

೧) ಭಾರತೀಯರಿಗೆ ಅಧಿಕಾರವನ್ನು ಪೂರ್ಣವಾಗಿ ವರ್ಗಾಯಿಸಲು ಗೊತ್ತುಮಾಡಿರುವ ಕಾಲಕ್ಕೆ ಮುಂಚಿತವಾಗಿಯೇ ಸಹಜವಾಗಿ ನಿವೃತ್ತರಾಗಲಿರುವ ಅಧಿಕಾರಿಗಳು ಈ ಪರಿಹಾರಕ್ಕೆ ಬಾಧ್ಯರಲ್ಲ

೨) ಭಾರತೀಯ ಅಧಿಕಾರಿಗಳಲ್ಲಿ ಯಾರಿಗೆ ಅಧಿಕಾರ ವರ್ಗವಾದ ಮೇಲೆ ಸೇವೆ ಸಲ್ಲಿಸಲು ಆಹ್ವಾನ ಕೊಡುವುದಿಲ್ಲವೋ ಅಂತಹವರಿಗೂ ಪರಿಹಾರಕ್ಕೆ ಹಕ್ಕುಂಟು ಮತ್ತು ತಾವು ಅಧಿಕಾರದಲ್ಲಿರುವಾಗ ಕರ್ತವ್ಯ ದೃಷ್ಟಿಯಿಂದ ಮಾಡಿದ ಕೆಲವು ಕೆಲಸಗಳಿಂದ ಸ್ವತಂತ್ರ ಭಾರತದಲ್ಲಿ ತಮ್ಮ ಹಿತಕ್ಕೆ ಧಕ್ಕೆ ಬರುವದೆಂಬುದರ ವಿಚಾರದಲ್ಲಿ ಗವರ್ನರ್-ಜನರಲ್‌ರವರಿಗೆ ಸಮಾಧಾನವನ್ನುಂಟುಮಾಡುವ ಮತ್ತು ತಮ್ಮ ಸ್ಥಾನಮಾನಗಳಿಗೆ ಸರಿಹೋಗುವ ಪದವಿ ದೊರೆಯುವುದು ಅಸಂಭವವೆಂಬು

ದನ್ನು ಪುಷ್ಟೀಕರಿಸುವ ಭಾರತೀಯ ಅಧಿಕಾರಿಗಳೂ ಸಹ ಈ ಪರಿಹಾರಕ್ಕೆ ಅರ್ಹರಾಗುತ್ತಾರೆ.

ಭಾರತ ಕಾರ್ಯದರ್ಶಿಗಳ ಅಧಿಕಾರಿ ವರ್ಗಕ್ಕೆ ಸೇರಿದ ಅಧಿಕಾರಿಗಳಲ್ಲಿ ಯಾರ ಸೇವೆಯು ಅಧಿಕಾರ ವರ್ಗಾವಣೆಯ ನಂತರವೂ ಮುಂದುವರಿಯುವುದೋ ಅಂತಹ ಅಧಿಕಾರಿಗಳ ಈಗಿನ ವೇತನ ರಜದ ನಿಯಮಗಳು, ಶಿಸ್ತು ಇವುಗಳಿಗೆ ಧಕ್ಕೆ ಬರದಂತೆ ಕೌಲಿನಲ್ಲಿ ರಕ್ಷಣೆ ಒದಗಿಸಲಾಗುವುದೆಂದು ಭಾರತ ಸರ್ಕಾರವು ಭರವಸೆ ಕೊಟ್ಟಿದೆಯಂತೆ!

ಸೆಕ್ರೆಟರಿ ಆಫ್ ಸ್ಟೇಟ್‌ರವರ ಸೇವೆಯಲ್ಲಿದ್ದ ಸಿವಿಲ್ ಅಧಿಕಾರಿಗಳ ಮತ್ತು ರಕ್ಷಣೆ ಇಲಾಖೆಯ ಅಧಿಕಾರಿಗಳ ವಿಶ್ರಾಂತಿ ವೇತನ (ಪೆನ್ಷನ್) ಹಕ್ಕನ್ನು ಒಪ್ಪಿರುವರಲ್ಲದೆ ಅದರ ಜವಾಬ್ದಾರಿಯನ್ನು ವಹಿಸಲೂ ಸಿದ್ಧರಿದ್ದಾರೆ ಬೇರೆ ಆಡಳಿತದಲ್ಲಿ ಶಾಶ್ವತವಾದ ವಿಶ್ರಾಂತಿವೇತನದ ಪ್ರಯೋಜನವುಳ್ಳ ಅಧಿಕಾರ ವಹಿಸಿಕೊಳ್ಳುವ ಬ್ರಿಟಿಷ್ ಅಧಿಕಾರಿಗಳಿಗೆ 'ರಿಸೆಟ್ಲ್‌ಮೆಂಟ್ ಗ್ರಾಂಟ್' ಕೊಡಲಾಗುವುದು

ಈ ಯೋಜನೆಯ ಇತರ ವಿವರಗಳು. ಅವಿಚ್ಛಿನ್ನವಾಗಿ ೧೬ ವರ್ಷಗಳು ಸೇವೆ ಸಲ್ಲಿಸಿರುವ ಐ ಸಿ ಎಸ್; ಮಿಲಿಟರಿ, ಪೋಲೀಸು ಅಧಿಕಾರಿಗಳಿಗೆ ೮,೦೦೦ ಪೌಂಡುಗಳ ಪರಿಹಾರ.

ಇಂಡಿಯನ್ ಸಿವಿಲ್ ಸರ್ವಿಸ್ಸಿನಲ್ಲಿ ೩೨ ವರುಷಗಳು ಕೆಲಸ ಮಾಡಿರುವವರಿಗೂ ೫೨ ವರುಷ ವಯಸ್ಸಾಗಿರುವ ಇತರ ಇಲಾಖಾ ಅಧಿಕಾರಿಗಳಿಗೂ ಯಾವ ಪರಿಹಾರವೂ ಇಲ್ಲ

ಮೈಸೂರು ದಿವಾನರ ಹೇಳಿಕೆ

ಮೈಸೂರು ದಿವಾನರಾದ ಸರ್ ಅರ್ಕಾಟರು ದೆಹಲಿಗೆ ಪ್ರಯಾಣಮಾಡುವ ಪೂರ್ವದಲ್ಲಿ, ಪತ್ರಿಕೆಗಳಿಗೆ ಕೆಳಗೆ ಕಂಡ ಹೇಳಿಕೆ ಕೊಟ್ಟಿದ್ದಾರೆ.

'ಶ್ರೀಮನ್ಮಹಾರಾಜರವರು ಪ್ರಜಾವರ್ಗಕ್ಕೆ ಇತ್ತ ಘನ ಸಂದೇಶವು ಮಹಾಜನಗಳ ಮುಂದೆ ಕೆಲಕಾಲದಿಂದಿದೆ ನನ್ನ ಅಭಿಪ್ರಾಯದಲ್ಲಿ ಆ ಸಂದೇಶದ ಬಗ್ಗೆ ವಿವರಣೆಯು ಅನಾವಶ್ಯಕ ರಾಜಕೀಯ ಸುಧಾರಣೆಗಳ ಬಗ್ಗೆ ಮಹಾಪ್ರಭುಗಳವರಿಗೆ ಸಲಹೆಗಳನ್ನು ಮಾಡಿ, ಮಹಾಪ್ರಭುಗಳ ಮುಂದಿಡುವ ಕೆಲಸದಲ್ಲಿ ನಾನು ಆ ಸಲಹೆಗಳ ಆದರ್ಶ, ಉದ್ದೇಶವೇನಿರಬೇಕೆಂಬುದನ್ನು ಮರೆಯದೆ ಇರುವುದು ನನ್ನ ಕರ್ತವ್ಯ. ಆ ಆದರ್ಶವೇನೆಂದರೆ, ಸಂಸ್ಥಾನದ ಸಮಸ್ತ ಪ್ರಜಾ ವರ್ಗಕ್ಕೂ ಸೇವೆಗೆ ಸಮಾನವಾದ ಅವಕಾಶಗಳನ್ನು ಕಲ್ಪಿಸುವುದು ಮತ್ತು ಸಂಸ್ಥಾನದೊಳಗೆ, ಶಾಂತಿ, ತೃಪ್ತಿ ಮತ್ತು ರಕ್ಷಣೆಯನ್ನು ಅಭಿವೃದ್ಧಿಪಡಿಸುವುದು"

ಈ ಉದ್ದೇಶವನ್ನು ಸಾಧಿಸುವುದಕ್ಕಾಗಿ, ಯಾವ ವಿಧವಾದ ಸರ್ಕಾರವನ್ನು ಸ್ಥಾಪಿಸಲು ಆಲೋಚನೆ ಮಾಡಲಾಗಿದೆಯೆಂದು ನನ್ನನ್ನು ಕೇಳಲಾಗಿದೆ. ಮುಂದಿನ ಮಂತ್ರಿಗಳು ಶಾಸನ ಸಭೆಗಳಿಂದ ಚುನಾಯಿತರಾಗಿರಬೇಕೆಂಬುದು ನನ್ನ ಅಭಿಪ್ರಾಯ ಶಾಸನ ಸಭೆಗಳಿಗೆ ಮಂತ್ರಿಗಳ ಜವಾಬ್ದಾರಿ ಯಾವ ರೀತಿಯಲ್ಲಿರಬೇಕು? ಎಂಬ ವಿಚಾರಗಳು ನಾನಾತರಹ ರಾಜ್ಯಾಂಗಗಳಲ್ಲಿ, ನಾನಾ ವಿಧವಾಗಿರುತ್ತವೆ ಒಂದು ರಾಜ್ಯಾಂಗ ರಚನೆಯಲ್ಲಿರಬೇಕಾದ "ಚೆಕ್‌ಗಳು ಮತ್ತು ಬ್ಯಾಲೆನ್ಸ್‌ಗಳು", ಹತೋಟಿ, ಇವು ಒಂದು ವಿಧವಾದ ರಾಜ್ಯಾಂಗಕ್ಕೂ ಇನ್ನೊಂದು ವಿಧವಾದ ರಾಜ್ಯಾಂಗಕ್ಕೂ ವ್ಯತ್ಯಾಸವಾಗುತ್ತವೆ ನಾನು ಮೇಲೆ ಸೂಚಿಸಿರುವ ಅಂಶಗಳೇ ದೊಡ್ಡ ಪ್ರಶ್ನೆಗಳಾಗಿವೆ (ಒಂದು ರಾಜ್ಯಾಂಗ ರಚನೆಯಲ್ಲಿ) ಈ ಪ್ರಶ್ನೆಗಳ ವಿಚಾರದಲ್ಲಿ ಸಂಸ್ಥಾನದ ನಾನಾ ರಾಜಕೀಯ ಪಕ್ಷಗಳವರ ಅಭಿಪ್ರಾಯಗಳನ್ನು ತೆಗೆದುಕೊಂಡು, ನಾನು ಒಂದು ನಿರ್ಧಾರವನ್ನೂ, ಅಭಿಪ್ರಾಯವನ್ನೂ ರೂಪುಗೊಳಿಸುವೆನೆಂದು ನನ್ನ ನಂಬಿಕೆಯಾಗಿದೆ.

ಈ ಮಾತುಕತೆಯ ಪರಿಣಾಮವಾಗಿ ಅತ್ಯಂತ ಹೆಚ್ಚಿನ ಐಕ್ಯ, ಕ್ರೋಢೀಕೃತವಾದ ಬಹುಮತ, ಬರಲೆಂದು ನನ್ನ ನಂಬಿಕೆಯಾಗಿದೆ. ಈ ಮಾತುಕತೆ ಮತ್ತು ಸಮಾಲೋಚನೆಯ ಫಲವಾಗಿ, ಸಂಸ್ಥಾನಕ್ಕೆ ತಕ್ಕಂತೆ ಸಂಸ್ಥಾನದ ಜನಗಳು ಒಪ್ಪುವಂಥ, ಸಂಸ್ಥಾನದ ಸ್ಥಿತಿಗತಿಗಳಿಗೆ ಹೊಂದುವಂಥ ಈ ಮೊದಲೇ ಅನೇಕಾವರ್ತಿ ಸಮಸ್ತ ವೇದಿಕೆಗಳಿಂದಲೂ ವಿಶದಪಡಿಸಿರುವಂತೆ, ಶ್ರೀಮನ್ಮಹಾರಾಜರವರ ಪ್ರಭುತ್ವಕ್ಕೆ ಚ್ಯುತಿಬಾರದಂಥ ಜವಾಬ್ದಾರಿ ಸರ್ಕಾರವು ರೂಪುಗೊಳ್ಳುವುವೆಂದು ನನ್ನ ನಂಬಿಕೆಯಾಗಿದೆ"

ಮೈಸೂರು ಸಂಸ್ಥಾನದ ಒಂದು ಹಳ್ಳಿಯಲ್ಲಿ ೧೫೦,೦೦೦ ಟನ್ ಗಳಷ್ಟು ಗಂಧಕ

ಮೈಸೂರು ಸಂಸ್ಥಾನದ ಭೂಗರ್ಭ ಇಲಾಖೆಯವರು ನಡೆಸಿರುವ ಸಂಶೋಧನೆಯ ಪ್ರಕಾರ ಬೆಂಗಳೂರಿಗೆ ೧೫೦ ಮೈಲಿ ದೂರದಲ್ಲಿರುವ ಇಂಗಳದಾಳು ಎಂಬ ಸ್ಥಳದಲ್ಲಿ ಗಂಧಕ ಮಿಶ್ರವಾದ ಕಬ್ಬಿಣದ ಅದಿರು ಸಿಕ್ಕಿರುವದು. ಇದರಿಂದ ೧೫೦,೦೦೦ ಟನ್ ಗಳಷ್ಟು ಗಂಧಕ ಪಡೆಯಲು ಸಾಧ್ಯವೆಂದು ಹೇಳಲಾಗಿದೆ

ಗದಗ

ಧಾರವಾಡ ಡಿ|| ಗದಗ ಸಿಟಿಯಲ್ಲಿ ತಾ|| ೨೩-೪-೪೭ ದಿವಸ ಮುತ್ತಿನಪೆಂಡಿ ಮಠದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯು ವೈಭವದೊಡನೆ ನೆರವೇರಿತು ಸಾಯಂಕಾಲ ೬ ಘಂಟೆಗೆ ವೇ|| ಗುಡ್ಡಿಮಠದ ಸಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು ಅಗ್ಗಿ ಹಳ್ಳಿಕೇರಿ ಬಿ ಎ ವೀರಪ್ಪನವರು ಜಗದಾಚಾರ್ಯರ ವಿಷಯದ ಬಗ್ಗೆ ಭಾಷಣ ಮಾಡಿದರು ತಾ|| ೨೫-೪-೪೭ ದಿವಸ ಮೇಲ್ಕಂಡ ಮಠದಲ್ಲಿ ಮ|| ರಾ|| ಹಂಚಿನಾಳ ಮುರಿಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವು ನೆರವೇರಿಸಲ್ಪಟ್ಟಿತು ಈ ಎರಡು ಉತ್ಸವಗಳನ್ನು ಇಲ್ಲಿಯ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದವರು ಬಹು ಭಕ್ತಿಯಿಂದ ನೆರವೇರಿಸಿದರು.

ಪ್ರತ್ಯಕ್ಷದರ್ಶಿ

ಸುಲೇಪೇಟೆ

ಇದೇ ವೈಶಾಖ ಶು|| ೩ (ತಾ|| ೨೩-೪-೪೭) ಬುಧವಾರ ಶ್ರೀ ಜಗದ್ಗುರು ಏಕೋರಾಮ ಶಿವಾಚಾರ್ಯರ ಜಯಂತ್ಯುತ್ಸವವು ಅತ್ಯಂತ ವೈಭವದಿಂದ ಆಚರಿಸಲ್ಪಟ್ಟಿತು. ಅನಂತರ ಜಗದಾಚಾರ್ಯರ ಪಲ್ಲಕ್ಕಿ ಮಹೋತ್ಸವವು ಶ್ರೀ ವೀರಭದ್ರೇಶ್ವರ ದೇವಾಲಯದಿಂದ ಬಹು ವಿಜೃಂಭಣೆಯಿಂದ ಸಾಗಿ ರಾತ್ರಿ ೧೨ ಘಂಟೆಗೆ ಮಂದಿರಕ್ಕೆ ತಲ್ಪಿತು ಇಲ್ಲಿಯ ಶ್ರೀ ಜಗದ್ಗುರು ರೇಣುಕ ಭಜನ ಮಂಡಳಿಯವರು ತಮ್ಮ ಮಂಜುಳವಾದ ಧ್ವನಿಯಿಂದ ಆಚಾರ್ಯರ ಸ್ತುತಿಗಳನ್ನು ಹಾಡಿ ಜನರನ್ನು ಆನಂದಗೊಳಿಸಿದರು. ಉತ್ಸವವಾದಮೇಲೆ ಸಭೆಸೇರಿತು. ಶ್ರೀ ಚಂದ್ರಯ್ಯ ಮಠಪತ್ತಿ 'ಸಾಹಿತ್ಯರತ್ನ' ಇವರು ವೀರಶೈವ ಮತದ ಪ್ರಾಚೀನತೆ, ಜಗದಾಚಾರ್ಯರ ಅವತಾರದ ಬಗ್ಗೆ ಭಾಷಣ ಮಾಡಿದರು ಬಳಿಕ ಮಹಾಮಂಗಳಾರತಿಯಾಗಿ ಜಗದಾಚಾರ್ಯರ ಜಯಜಯಕಾರಗಳೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು.

ಕಾರ್ಯದರ್ಶಿ

ಶ್ರೀ ವೀರಭದ್ರೇಶ್ವರ ವಾಚನಾಲಯ

ಹಾರ್ನಹಳ್ಳಿ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಇದೇ ವೈಶಾಖ ಶುದ್ಧ ೩ ಬುಧವಾರ ಶು|| ೫ ಶುಕ್ರವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವಗಳನ್ನು ವೈಭವದಿಂದ ನೆರವೇರಿಸಿದರು. ಆಯಾ ದಿವಸ ಪ್ರಾತಃಕಾಲ ಶ್ರೀ ಭಗವತ್ಪಾದರ ಭಾವಚಿತ್ರವನ್ನು ಪೂಜಿಸಿ ಗುರುಸಾರ್ವಭೌಮರ ನಾಮಾವಲಿಯನ್ನು ಪಠಿಸಿದರು ಸಾಯಂಕಾಲ ಧಾರ್ಮಿಕ ವಿಷಯಗಳನ್ನು ಲೌಕಿಕೋದಾಹರಣೆಗಳೊಡನೆ ಎಲ್ಲರ ಮನಸ್ಸಿನ ಮೇಲೂ ಪರಿಣಾಮವಾಗುವ ಹಾಗೆ ಬೋಧಿಸಿ ಮಹಾಜನರನ್ನು ಆನಂದಗೊಳಿಸಿದರು

ಓರ್ವ ಧರ್ಮಾಭಿಮಾನಿ

ಸ್ವೀಕಾರ

ಧಾರವಾಡ ಡಿ|| ಗರಗಗ್ರಾಮದಲ್ಲಿರುವ ಮ|| ರಾ|| ಬಳಿಗಾರ ವೀರಪ್ಪನವರು ತಮ್ಮ ಮನೆಯಲ್ಲಿ ಜಗದಾಚಾರ್ಯರ ಜಯಂತೀಮಹೋತ್ಸವವನ್ನು ಬಹಳ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ|| ಗದಗ ಬೆಟಗೇರಿ ನಗರದ ಶ್ರೀಜಗದ್ಗುರು ಪಂಚಾಚಾರ್ಯ ಸೇವಾಸಂಘದವರು ತಮ್ಮಲ್ಲಿ ಜಗದಾಚಾರ್ಯರ ಜಯಂತೀಮಹೋತ್ಸವಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಸಂಗಯ್ಯನವರು ಗುಡ್ಡಿಮಠ ಮತ್ತು ಮ|| ರಾ|| ಬಸವನಗೌಡರು ರಾಮನಗೌಡರ ಇವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ನ್ಯಾಮತಿ ಗ್ರಾಮದಲ್ಲಿರುವ ಚಿ|| ಹಲಗೇರಿ ಲೋಕೇಶ್ವರಪ್ಪನಿಗೂ, ಚಿ|| ಸೌ|| ಬಸವಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜೀರಿಗೆ ವೀರಭದ್ರಪ್ಪನವರ ದ್ವಾರಾ ತಲಪಿರುತ್ತವೆ.

ಧಾರವಾಡ ಡಿ|| ಹುಬ್ಬಳ್ಳಿ ತಾ|| ಶಿಶುವಿನಹಳ್ಳಿ, ಗ್ರಾಮದಲ್ಲಿರುವ ವೇ|| ಹಿರೇಮಠದ ಬಸವಣ್ಣಯ್ಯನವರು ತಮ್ಮ ಸಹೋದರ ಬಸವಯ್ಯನವರ ಪುತ್ರ ಚಿ|| ಗುರುಶಾಂತಯ್ಯನನ್ನು ದತ್ತಪುತ್ರನನ್ನಾಗಿ ವೈಶಾಖ ಶು|| ೭ ರವಿವಾರ ದಿವಸ ಸ್ವೀಕರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಷ|| ಬ್ರ|| ಚರಮೂರ್ತಿ ಸ್ವಾಮಿಗಳ ದ್ವಾರಾ ತಲುಪಿರುತ್ತವೆ.

ತಿಪಟೂರು ತಾಲ್ಲೂಕು ಗುರುಗದಹಳ್ಳಿಯಲ್ಲಿರುವ ಶ್ರೀಮಾನ್ ಜಿ ಆರ್ ಹುಚ್ಚವೀರಯ್ಯನವರು ತಾರೀಖು ೨೫-೪-೪೭ನೇ ದಿವಸ ನೂತನ ಗೃಹಪ್ರವೇಶೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಆರ್. ಎಂ ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀಜಗದ್ಗುರು ರಂಭಾಪುರೀಪೀಠದ ಪಟ್ಟಾಧಿಕಾರಮಹೋತ್ಸವ

ಶ್ರೀ ಜಗದ್ಗುರು ಪೀಠದ ಪಟ್ಟಾಧಿಕಾರಮಹೋತ್ಸವವು ಇದೇ ತಿಂಗಳು ೨ ನೆಯ ತಾರೀಖಿನ ದಿವಸ ಶ್ರೀ ರಂಭಾಪುರೀ ಪೀಠದಲ್ಲಿ ಅಭೂತಪೂರ್ವವೈಭವದೊಡನೆ ನೆರವೇರಿತು ಈ ಮಹೋತ್ಸವಕ್ಕೆ ಭರತಖಂಡದ ನಾನಾ ಭಾಗಗಳಿಂದ ೮-೧೦ ಸಾವಿರ ಜನರು ಆಗಮಿಸಿದ್ದರು. ಎಲ್ಲ ಕಾರ್ಯಗಳೂ ಮಹಾಸಂಭ್ರಮದೊಡನೆ ನೆರವೇರಿದವು. ಹೆಚ್ಚಿನ ಸಮಾಚಾರದ ಬಗ್ಗೆ ಅಲ್ಲಿಂದ ಲೇಖವು ಬಂದಮೇಲೆ ಪ್ರಕಟಿಸುವದಾಗುವದು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲಕ್ಕೂ ಇದೆ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಒದಗಿಸಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ... ಸಮಸ್ತ ವೀರಶೈವರ ಕೃತಜ್ಞ... ಗ್ರಂಥವನ್ನು ಓದಿನೋಡಿದಮೇಲೆ ಪಂಡಿತ ... ವಾಚಕರಿಗೆ ವೇದ್ಯವಾಗುವುದು. ... ಶ್ರಮವಹಿಸಿ ... ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ೧೦೮ ಅದ್ಭುತಲೀಲೆಗಳಿಂದ ಕೂಡಿದ **ಫೋಟೋ** ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೩—೦
ಸದ್ಯಃ ಪಟ್ಟಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ** ಸೈಜು ೧೪×೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ **ಫೋಟೋ**	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಚಿಕ್ಕ ಸೈಜು ಬೆಲೆ	೦—೧—೬
ಶ್ರೀಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ **ಫೋಟೋ**	೦—೧—೬
ಶ್ರೀರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ**	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ **ಫೋಟೋ**	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ **ಫೋಟೋ**	೦—೧—೬
ಶ್ರೀಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ **ಫೋಟೋ**	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ**	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ **ಫೋಟೋ** ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ **ಫೋಟೋ**	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—೬
ಬೆಂಗಳೂರು ... ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಃಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ
षट्स्थलकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ. ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ಮೇ ೧೯೪೭ [ಸಂಚಿಕೆ ೩

ಅಧರ್ಮವು ನಾಶಕ್ಕೆ ಕಾರಣ

ಲೇ—ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

"ಧರ್ಮೇಣ ಗಮನಮೂರ್ಧ್ವಂ" ಎಂಬ ಶಾಸ್ತ್ರೋಕ್ತಿಯಂತೆ ಧರ್ಮವು ಮಿತ್ರನಂತೆ ಉನ್ನತಸ್ಥಾನಕ್ಕೂ, ಅಧರ್ಮವು ಶತ್ರುವಿನಂತೆ ಅಧೋಗತಿಗೂ ಕರೆದುಕೊಂಡು ಹೋಗುವದು ಲೋಕದಲ್ಲಿ ಮಾನವ ಜನ್ಮವನ್ನು ತಾಳಿದ ಜೀವಾತ್ಮರಿಗೆಲ್ಲ ಧರ್ಮವು ಬೇಕೇ ಬೇಕು ಒಟ್ಟಿಗೆ ಜಗತ್ತಿನಲ್ಲಿ ಧರ್ಮವಿಲ್ಲದ ಮಾನವನೇ ಕಂಡುಬರುವದಿಲ್ಲ ಆತ್ಮರು ಈ ದೇಹವನ್ನು ಬಿಟ್ಟು ಹೋಗುವ ಸಮಯದಲ್ಲಿ ಯಾರೂ ತಡೆದು ನಿಲ್ಲಿಸಲಾರರು ಮತ್ತು ಆದರ ಜೊತೆಗೆ ಯಾರೂ ಹೋಗಲಾರರು ಧರ್ಮ ಹಾಗೂ ಅಧರ್ಮ ಇವೆರಡು ಮಾತ್ರ ಹಿಂಬಾಲಿಸಿ ಸುಖವನ್ನಾಗಲಿ, ದುಃಖವನ್ನಾಗಲಿ ಕೊಡುತ್ತವೆ

ಸುಕೃತಂ ದುಷ್ಕೃತಂ ಚೈವ ಗಚ್ಛಂತಮನುಗಚ್ಛತಿ ।

ಆತ್ಮನು ದೇಹವನ್ನು ಬಿಟ್ಟು ಹೋಗುವಾಗ್ಗೆ ದುಡ್ಡು ಮನೆಯಲ್ಲಿಯೇ ಉಳಿಯುವದು ಮಿತ್ರ ಬಾಂಧವರೆಲ್ಲರೂ ಸ್ಮಶಾನದವರೆಗೆ ಹೋಗುವರು ಆತ್ಮನ ಸಂಗಡ ಪುಣ್ಯ ಪಾಪ ಇವೆರಡೇ ಹಿಂಬಾಲಿಸುವವೆಂದು ಈ ಶ್ಲೋಕದ ಅಭಿಪ್ರಾಯವಾಗಿದೆ

ಧರ್ಮದಲ್ಲಿ ಇಷ್ಟೊಂದು ಶಕ್ತಿ ಮತ್ತು ಮಹತ್ತ್ವ ಆದೆಯೆಂದೇ ತಿಳಿದು ಪ್ರತಿಯೊಂದು ಧರ್ಮದಲ್ಲಿರತಕ್ಕ ಕೋಟ್ಯಂತರ ಜನರು ತಮ್ಮ ತಮ್ಮ ಧರ್ಮದಂತೆ ನಡೆದುಕೊಳ್ಳುತ್ತಾರೆ ಇಂಥ ಶ್ರೇಷ್ಠವಾದ ಸನಾತನ ಧರ್ಮವನ್ನು ಯಾರು ನಾಶಮಾಡುವರೋ ಅಂಥವರನ್ನು ಧರ್ಮವು ನಾಶಮಾಡುತ್ತದೆ ಯಾರು ರಕ್ಷಿಸುವರೋ ಅಂಥವರನ್ನು ಆ ಧರ್ಮವೇ ರಕ್ಷಿಸುತ್ತದೆ

ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।

ಎಂಬ ವಾಕ್ಯವು ಮೇಲಿನ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ

ಯಶ್ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನಪರಾಂ ಗತಿಂ ॥

ಅಂದರೆ —ಯಾವನು ಶಾಸ್ತ್ರನಿಯಮವನ್ನು ಅತಿಕ್ರಮಿಸಿ ತನ್ನ ಇಚ್ಛಾನುಸಾರವಾಗಿ ವರ್ತಿಸುವನೋ ಅಂಥವನು ಯಾವ ಸಿದ್ಧಿಯನ್ನೂ, ಯಾವ ಸುಖವನ್ನೂ, ಯಾವ ಸದ್ಗತಿಯನ್ನೂ ಹೊಂದಲಾರನೆಂದು ಗೀತಾಕಾರರು ಸ್ಪಷ್ಟವಾಗಿ ಹೇಳಿದ್ದಾರೆ ದೇವರಿಲ್ಲವೆಂದು ತಿಳಿದವರೂ, ಅಥವಾ ಉಂಟೆಂದು ತಿಳಿದಾಗ್ಯೂ ಅಲಕ್ಷ್ಯ ಮಾಡುವವರೂ ಎಷ್ಟೋ ದುಷ್ಕಾರ್ಯಗಳನ್ನು ಮಾಡಿ ಸುಖವನ್ನನುಭವಿಸುವರಲ್ಲಾ ಎಂದರೆ ಆ ದುಷ್ಕಾರ್ಯದಿಂದ ಪರಿಣಾಮದಲ್ಲಿ ಅವರಿಗೆ ನಷ್ಟವೇ ಎಂದು ತಿಳಿಯಬೇಕು ಈ ವಿಷಯದಲ್ಲಿ ಒಂದು ಇತಿಹಾಸವುಂಟು ಇಬ್ಬರು ಸ್ನೇಹಿತರು ಅರಣ್ಯದಲ್ಲಿ ಸಂಚಾರಮಾಡುತ್ತಿದ್ದು ಸೂರ್ಯಾಸ್ತಂಗತನಾದಮೇಲೆ ಅದೇ ಅರಣ್ಯದಲ್ಲಿದ್ದ ಒಂದಾನೊಂದು ಜೀರ್ಣ ದೇವಾಲಯದಲ್ಲಿ ಉಳಿದುಕೊಂಡರು ಮಧ್ಯರಾತ್ರಿಯಲ್ಲಿ ಒಬ್ಬ ಸ್ನೇಹಿತನು ಮೂತ್ರವಿಸರ್ಜನೆಗಾಗಿ ತನ್ನ ಸ್ನೇಹಿತನನ್ನೆಬ್ಬಿಸಿದನು ಆದಕ್ಕವನು ಇಲ್ಲಿಯೇ ಮೂತ್ರವಿಸರ್ಜನವನ್ನು ಮಾಡೆಂದು ಬಹುವಿಧವಾಗಿ ಹೇಳಿದರೂ ಇದು ದೇವಾಲಯ, ಇಲ್ಲಿ ಮೂತ್ರವಿಸರ್ಜನೆ ಮಾಡಕೂಡದೆಂದು ಹೇಳಿ, ತಾನೊಬ್ಬನೇ ದೇವಸ್ಥಾನದ ಹೊರಗೆ ಹೋಗಿ ಮೂತ್ರವಿಸರ್ಜನೆ ಮಾಡಿದನು ತಿರುಗಿ ಬರುವ ಸಮಯದಲ್ಲಿ ಒಂದು ಮಹತ್ತರವಾದ ಮುಳ್ಳು ಅವನ ಕಾಲಿಗೆ ಚುಚ್ಚಲು ಅತ್ಯಂತ ವ್ಯಥೆಯಿಂದ ಸ್ನೇಹಿತನಿಗೆ ಈ ವಿಷಯವನ್ನು ಹೇಳಿದನು ಅದಕ್ಕವನು ನಾನು ಎಷ್ಟೋ ವಿಧವಾಗಿ ಹೇಳಿದರೂ ನನ್ನ ಮಾತನ್ನು ನಿರಾಕರಿಸಿ ಹೊರಗೆ ಹೋಗಿ ನಷ್ಟಕ್ಕೆ ಗುರಿಯಾದೆ, ನಾನು ದೇವಸ್ಥಾನದಲ್ಲಿಯೇ ಮೂತ್ರವಿಸರ್ಜನೆಯನ್ನು ಮಾಡುತ್ತ ಸ್ವಲ್ಪ ನೆಲವನ್ನು ಅಗೆಯಲು ದ್ರವ್ಯ ಸಿಕ್ಕಿತು ಎಂದು ತೋರಿಸಿ ಆತನನ್ನು ಬಹಳವಾಗಿ ಹಾಸ್ಯ ಮಾಡುವುದಕ್ಕೆ ಪ್ರಾರಂಭಿಸಿದನು ಈ ಬಗ್ಗೆ ಪಾರ್ವತೀ ದೇವಿಯು ಪರಮೇಶ್ವರನನ್ನು ಕುರಿತು ಇದೇನನ್ಯಾಯ? ಆತನು ದೇವಸ್ಥಾನವೆಂದು ಭಕ್ತಿಯಿಂದ ಹೊರಗೆ ಮೂತ್ರವಿಸರ್ಜನೆ ಮಾಡುವುದಕ್ಕೆ ಹೋದವನು ಅತ್ಯಂತ ಕಷ್ಟಕ್ಕೆ ಗುರಿಯಾದನು ದೇವಸ್ಥಾನದಲ್ಲಿಯೇ ಮೂತ್ರ ವಿಸರ್ಜನೆ ಮಾಡಿದವನು ಅಲ್ಲಿ ದ್ರವ್ಯಲಾಭವಾದುದರಿಂದ ಬಹು ಸಂತುಷ್ಟನಾಗಿ ಆತನನ್ನು ಹಾಸ್ಯಮಾಡುತ್ತಿರುವನಲ್ಲಾ!" ಎಂದು ಪ್ರಶ್ನೆಮಾಡಿದುದಕ್ಕೆ ಈಶ್ವರನು ಹಾಗಲ್ಲ, ಆ ಕಷ್ಟಕ್ಕೆ ಗುರಿಯಾದವನಿಗೆ ಈ ದಿವಸ ಮೃತ್ಯುವು ಪ್ರಾಪ್ತವಾಗಬೇಕಾಗಿತ್ತು ಅದು ಸ್ವಲ್ಪ ಕಷ್ಟದಲ್ಲಿಯೇ ಪರಿಹಾರವಾಯಿತು ಇನ್ನೊಬ್ಬನಿಗೆ ರಾಜ್ಯಾಧಿಕಾರವಾಗಬೇಕಾಗಿತ್ತು, ಅದು ತಪ್ಪಿ ಸ್ವಲ್ಪ ದ್ರವ್ಯಪ್ರಾಪ್ತಿಯಲ್ಲಿಯೇ ಪೂರ್ಣವಾಯಿತು ಎಂದು ಹೇಳಿದನು

ಒಟ್ಟಿನ ಮೇಲೆ ಇಲ್ಲಿ ಹೇಳುವದಿಷ್ಟೇ! ಮನುಷ್ಯನು ಧರ್ಮರಹಿತನಾದರೆ ಹಿಂದಿನ ಪುಣ್ಯಪ್ರಭಾವದಿಂದ ದೊರೆಯಬೇಕಾದ ಮಹತ್ತರವಾದ ಕಾರ್ಯವು ಕೂಡ ನಾಶವಾಗಿ ಸ್ವಲ್ಪದರಲ್ಲಿಯೇ ತೃಪ್ತಿಯನ್ನು ಹೊಂದುವನು ಧಾರ್ಮಿಕಭಾವನೆಯುಳ್ಳವನಾದರೆ ಹಿಂದಿನ ಪಾಪಕರ್ಮದಿಂದ ಒದಗಬೇಕಾಗಿದ್ದ ಭಯಂಕರವಾದ ಕಷ್ಟವೂ ಸಹ ದೂರಾಗಿ ಸುಖದಿಂದ ಬಾಳುವನು ಆದ್ದರಿಂದ ಪ್ರತಿಯೊಬ್ಬ ಮಾನವರೂ ತಮ್ಮ ತಮ್ಮ ಧರ್ಮದಂತೆ ನಡೆದು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ ಹೊಂದಿ ಸುಖಿಗಳಾಗಬೇಕೆಂದು ಆಶಿಸುತ್ತೇವೆ

ಲಿಂಗೋದ್ಭವಮೂರ್ತಿ ಸ್ಥಾಪನಸಮಾರಂಭ

ಕಲಾದಗಿ

ವಿಜಾಪುರ ಜಿಲ್ಲಾ, ಕಲಾದಗಿ ಹಿರೇಮಠದಲ್ಲಿ ಮಹಾಮಹಿಮರಾದ ಶ್ರೀಗುರುಲಿಂಗಶಿವಾಚಾರ್ಯ ಶಿವಯೋಗಿಗಳ ಗದ್ದಿಗೆಯ ಮೇಲೆ ಲಿಂಗೋದ್ಭವ ಮೂರ್ತಿಯನ್ನು ತಾ|| ೨೫-೪-೪೭ ರಲ್ಲಿ ಸ್ಥಾಪಿಸಲಾಯಿತು ೨೦೧ ಎತ್ತಿನ ಮೆರವಣಿಗೆ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ಈ ಮಹಾಕಾರ್ಯಕ್ಕೆ ಶ್ರೀಸನಾತನ ಧರ್ಮಬೋಧಕರಾದ ಶ್ರೀ|ಷ|ಬ್ರ|| ಶ್ರೀರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ಆಗಮಿಸಿ ಸಿದ್ಧಾಂತಶಿಖಾಮಣಿ ೫ ದಿವಸಗಳವರೆಗೆ ವ್ಯಾಖ್ಯಾನಮಾಡಿದರು ಪ್ರವಚನವಟು ಶ್ರೀ ವೇ|| ಸಿದ್ಧಲಿಂಗದೇವರು ಪಂಚಗೃಹ ಹಿರೇಮಠ ಕುಂದಗೋಳ ಇವರು ೫ ದಿವಸಗಳ ವರೆಗೆ ಪುರಾಣ ಹೇಳಿದರು. ಬನ್ನೂರು, ಸತ್ತಿಗೇರಿ, ಗಿರಿಸಾಗರ, ಹೂಲಿ, ರಾಮದುರ್ಗ, ಜಂಬಗಿ, ಮುತ್ತೂತ್ತಿ, ಮುಧೋಳ ಮೊದಲಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರು ಆಗಮಿಸಿದ್ದರು ವೇ|| ಗಂಗಾಧರಶರ್ಮಾ ಬಿಕ್ಷಾವರ್ತಿ ಮಠ ಗಲಗಲಿ ಇವರು ಪೌರೋಹಿತ್ಯವನ್ನು ಮಾಡಿದರು ಶ್ರೀಮಾನ್ ಬಾಳಪ್ಪಾ ಹುಕ್ಕೇರಿ ಮುರುಗೋಡ ಇವರು ಮನೋಹರವಾಗಿ ಸಂಗೀತವನ್ನು ಹಾಡಿದರು ಇವರಿಗೆ ಕಲಾದಗಿ ಸ್ವಾಮಿಗಳವರು ಅರ್ಧ ತೊಲೆ ಬಂಗಾರದ ಮೆಡ್ಲು ಮಾಡಿಸಿ "ಸಂಗೀತ ರತ್ನ" ಎಂಬ ಬಿರುದನ್ನು ಕೊಟ್ಟು ಗೌರವಿಸಿದರು ಗದಗ ಸೋಮಕ್ಷತ್ರಿಯ ಧರ್ಮದ ಮಾಸ್ತರರು ಮಂಜುಳವಾಗಿ ಹಾಡಿದರು ಇವರಿಗೆ "ಸಂಗೀತ ಧುರೀಣ" ಎಂಬ ಪದವಿಯು ಕೊಡಲ್ಪಟ್ಟಿತು ಈ ಉತ್ಸವಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹನೀಯರಿಗೆಲ್ಲ ಶ್ರೀಜಗದಾಚಾರ್ಯರು ಮಂಗಲವನ್ನೀಯಲೆಂದು ಹಾರೈಸುವ,

ಓರ್ವ ಉತ್ಸವಭಾಗಿ.

ಕಾಯಿ ಕೊಬರಿ ದಲಾಲಿ ಅಂಗಡಿ ಸ್ಥಾಪನೆ,

ತಿಪಟೂರು

ತಿಪಟೂರು ನಿವಾಸಿಗಳಾದ ಸಾಸಲು ಮ|| ರಾ|| ನೀಲಕಂಠಪ್ಪ ಸಿದ್ಧಲಿಂಗಪ್ಪ ಈ ಸಹೋದರರು ತಾ|| ೨೪-೪-೪೭ನೇ ಗುರುವಾರ "ಸಾಸಲು ಬ್ರದರ್ಸ್" ಎಂಬ ಹೆಸರಿನಿಂದ ಕಾಯಿ ಕೊಬರಿ ದಲಾಲಿ ಅಂಗಡಿಯನ್ನು ಸ್ಥಾಪಿಸಿದರು ಆ ದಿವಸ ಪ್ರಾತಃಕಾಲ ೯|| ಘಂಟೆಗೆ ಶ್ರೀಗಣಪತಿ, ಲಕ್ಷ್ಮಿ, ಸರಸ್ವತಿಪೂಜೆಯನ್ನು ಮಾಡಿ ಅತಿಥಿಗಳನ್ನು ಗಂಧ ಪುಷ್ಪ ಫಲ ತಾಂಬೂಲಾದಿಗಳಿಂದ ಸತ್ಕರಿಸಿದರು ಶ್ರೀಜಗದಾಚಾರ್ಯರ ಕೃಪೆಯಿಂದ ಇವರ ವ್ಯವಹಾರವು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ವೃದ್ಧಿಯಾಗಲೆಂದು ಹಾರೈಸುತ್ತೇನೆ,

ಆರ್ ಎಂ ಮಲ್ಲಿಕಾರ್ಜುನಾರಾಧ್ಯ,
ತಿಪಟೂರು

ಭಾರತದಲ್ಲಿ ಪಾಕೀಸ್ಥಾನ ಪ್ರಾಂತವು ಏರ್ಪಟ್ಟದ್ದೇ ಆದರೆ ಅದು ಬ್ರಿಟಿಷ್ ಕಾಮನ್‌ವೆಲ್ತಿನ ಒಳಗಿರುವದೆಂದು ಮಿ|| ಜಿನ್ನಾರವರು ವೈಸ್ರಾಯರಿಗೆ ತಿಳಿಸಿದ್ದಾರಂತೆ!

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ೨೦ ವರ್ಷಗಳು ತುಂಬಿ ೨೧ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ.ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ [illegible] ಒಟ್ಟು ಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವುದರಿಂದ [illegible] ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು.

ಸಂ —

|| ಶ್ರೀಜಗದ್ಗುರು [illegible]

ವಿಷಯಗಳ ಸ್ವರೂಪ

ಲೇ॥ ಮಲ್ಲಿಕಾರ್ಜುನಾರಾಧ್ಯ [illegible]

"ವಿಸಿನ್ವಂತಿ ಒಪ್ನಂತಿ [illegible] ಅಂದರೆ ವಿಷಯಗಳು [illegible] ಗಳೆಂದು ವ್ಯಕ್ತವಾಗುತ್ತವೆ [illegible] ದೂಡಗೂಡಿದ ಇಂದ್ರಿಯ [illegible] ಸೂಚನೆಯನ್ನು ಸೂಚಿಸಿ [illegible] ಗಳನ್ನು ಎಡೆಬಿಡದೆ [illegible] ಉಪಭೋಗಿಸಲಿಚ್ಛಿಸುತ್ತವೆ [illegible] ಮಾತ್ರಕ್ಕೆ ಮುಟ್ಟುತ್ತವೆ [illegible] ಪರಮಾತ್ಮನ ಅತಿ ವಿಲಕ್ಷಣವಾದ [illegible] ವಿಷಯಗಳನ್ನು [illegible] ಉಪಭೋಗಿಸಿ ಕೊಳ್ಳುವ [illegible] ಗಿರುತ್ತವೆ [illegible] ಇತರ ಪ್ರಾಣಿಗಳಿಗಿಂತಲೂ ಮನುಷ್ಯನನ್ನು ವಿಷಯಗಳು ಅತಿ ತೀವ್ರನಾಗಿ ವಜ್ರ [illegible] ಹಿಡಿದುಕೊಳ್ಳುತ್ತವೆ ಮನುಷ್ಯನು ಒಂದು ಸಾರೆ ವಿಷಯಗಳ ವಶವರ್ತಿಯಾದನೆಂದರೆ, ಅವನಿಗೆ ಅವನ್ನು ತುಚ್ಛೀಕರಿಸಿ ವಿಮುಖನಾಗುವುದಕ್ಕೆ ಆಗುವುದಿಲ್ಲ ವಿಷಯಗಳಲ್ಲಿ ಕಿಂಚಿನ್ಮಾತ್ರವೂ ಸ್ವಾರಸ್ಯವಿಲ್ಲದಿದ್ದರೂ ಅವನ್ನು ಮಾತ್ರ ಬಿಡುವನಾಗಿಲ್ಲ ಈ ಪ್ರಬಲತರವಾದ ಕಾರಣದಿಂದಲೇ ಸಕಲ ಪ್ರಾಣಿಗಳು ವಿಷಯಗಳಲ್ಲಿ ಬಿದ್ದು ಹೊರಳಾಡುತ್ತಿರುವುದು ಸರ್ವಾನುಭವಸಿದ್ಧವಾಗಿರುವುದು ಎಲ್ಲಿ ನೋಡಿದರೂ ಜನರು ಒಂದಿಲ್ಲೊಂದು ವಿಷಯೋಪಭೋಗದಲ್ಲಿ ತೊಡಗಿರುವವರೇ ಕಾಣುತ್ತಿರುವರಲ್ಲದೆ ವಿಷಯಪರಾಙ್ಮುಖರಾದವರು ಕಾಣುವುದೇ ಇಲ್ಲ ಈ ಸಂಗತಿಯನ್ನರಿತ ವಿದ್ವನ್ಮಣಿಗಳು "ವೇಧಾ ದ್ವೇಧಾ ಭ್ರಮಂ ಚಕ್ರೇ ಕಾಂತಾಸು ಕನಕೇಷು ಚ | ತಾಸು ತೇಷ್ವಪ್ಯನಾಸಕ್ತಃ ಸಾಕ್ಷಾದ್ಭರ್ಗೋ ನರಾಕೃತಿಃ॥" ಅಂದರೆ ಸೃಷ್ಟಿಕರ್ತನಾದ ಬ್ರಹ್ಮನು ಸೃಷ್ಟಿ ಮಾಡುವಾಗಲೇ ಪುರುಷರ ಉದ್ದೇಶವಾಗಿ ಸ್ತ್ರೀ ಮತ್ತು ಕಾಂಚನಗಳೆಂಬ ಎರಡು ಸ್ಥಳಗಳಲ್ಲಿ ಮೋಹವನ್ನಿಟ್ಟನು, ಆದರೆ ಆವೆರಡರಲ್ಲಿಯೂ ಅನಾಸಕ್ತನಾದ ಪುರುಷನು ಮನುಷ್ಯದೇಹವನ್ನು ಧರಿಸಿದ್ದರೂ ಸಾಕ್ಷಾತ್ ಪರಮೇಶ್ವರನೇ ಎಂದು ತಿಳಿಯಬೇಕೆಂದು ಹೇಳಿರುವರು. ಸಾರಾಂಶ, ಜಗತ್ತಿನಲ್ಲಿ ವಿಷಯಾಸ್ತನಾಗದಿರುವ ಪುರುಷನೇ ದುರ್ಲಭನೆಂದು ತಾತ್ಪರ್ಯವು

ಪಾಶುಪತರು—"ಪಶು ಪಾಶ ಪತಿ" ಎಂಬ ಈ ಮೂರೇ ವಸ್ತುಗಳು ಜಗತ್ತಿನಲ್ಲಿರುವವು. ಈ ಮೂರು ವಸ್ತುಗಳಿಂದಲೇ ಜಗತ್ತು ತುಂಬಿರುವುದು ಮನುಷ್ಯ ಮೊದಲ್ಗೊಂಡು ದೇವತೆಗಳವರೆಗಿರುವ ಪ್ರಾಣಿಗಳೆಲ್ಲ ಪಶುಗಳೆನಿಸುವವು. ಪಾಶವೆಂದರೆ ಇವರು ಉಪಭೋಗಿಸುವ ವಿಷಯಗಳು ಪತಿಯೆಂದರೆ ಪಾಶಗಳಲ್ಲಿ ತೊಡಗಿದ ಪಶುಗಳನ್ನುದ್ಧರಿಸುವ ದೇವರು. ಚತುಷ್ಪಾದಪಶುಗಳನ್ನು ಹಗ್ಗದಿಂದ ಕಟ್ಟಿಹಾಕುದವರಿಂದ ಮಲಮೂತ್ರಗಳನ್ನು ಕಟ್ಟಿದ ಸ್ಥಳದಲ್ಲಿಯೇ ಬಿಟ್ಟು, ಹಸಿವಾದರೆ ಅಲ್ಲಿಯೇ ಹುಲ್ಲನ್ನು ತಿನ್ನುತ್ತ ನಿದ್ರೆಬಂದರೆ ಆ ಹೊಲಸಿನಲ್ಲಿಯೇ ಮಲಗುತ್ತ, ಮೈಯೆಲ್ಲ ಕೊಳೆಮಾಡಿಕೊಂಡು ದುರ್ಗಂಧವನ್ನನುಭವಿಸುತ್ತ ಜುಗುಪ್ಸೆಗೊಂಡಿರುವಾಗ ಪ್ರಾತಃಕಾಲದಲ್ಲಿ ಜನರು ಹೇಗೆ ಹಗ್ಗವನ್ನು ಬಿಚ್ಚುವರೋ ಹಾಗೆ ಪರಮಕಾರುಣಿಕನಾದ ಪರಮೇಶ್ವರನು ವಿಷಯಾಸಕ್ತರಾಗಿ ಸಂಸಾರದಲ್ಲಿ ಹೊರಳಾಡುತ್ತ ಅನೇಕ ಯಾತನೆಗಳನ್ನನುಭವಿಸುತ್ತ ಗತಿಗಾಣದೆ ಜುಗುಪ್ಸೆಗೊಂಡು ವೈರಾಗ್ಯವನ್ನು ತಾಳಿ ತನ್ನನ್ನು ಸ್ಮರಿಸುವ ಜನಗಳನ್ನು ಉದ್ಧರಿಸಲು ಸದ್ಗುರುರೂಪವನ್ನು ಧರಿಸಿ ಪ್ರತ್ಯಕ್ಷನಾಗಿ ಒಂದು ವಿವೇಕೋಪದೇಶದಿಂದ ಪಾಶಗಳೆನಿಸುವ ವಿಷಯಗಳಿಂದ ಮುಕ್ತಮಾಡುವನು. ಆದ್ದರಿಂದಲೇ ಪರಮೇಶ್ವರನಿಗೆ "ಪಶುಪತಿ" ಯೆಂಬ ಹೆಸರುಂಟಾಗಿರುವದು ನಾವು ಪಶುಗಳು, ವಿಷಯಗಳೇ ಪಾಶಗಳು, ನಾವೆಲ್ಲರೂ ವಿಷಯಾಧೀನರಾಗಿರುವುದರಿಂದ ನಮಗೆ ಪಶು ಎಂಬ ಹೆಸರು ಬಂದಿದೆ ಈ ಅಭಿಪ್ರಾಯವನ್ನು "ಶಿವಕಲ್ಪವಲ್ಲೀ' ಎಂಬ ಗ್ರಂಥದಲ್ಲಿ "ಶಿಪಿವಿಷ್ಟ,' ಎಂಬ ನಾಮದ ಅರ್ಥವನ್ನು ವಿವರಿಸುವಾಗ ಪರಮಾತ್ಮನ ವಿಷಯಕವಾದ ಜ್ಞಾನವಿಲ್ಲದ್ದರಿಂದ ಎರಡು ಕಾಲುಗಳುಳ್ಳ ಮನುಷ್ಯರೂ, ದೇವತೆಗಳೂ [illegible] ಗಳೆನಿಸುವರು ನಾಲ್ಕು ಕಾಲುಗಳುಳ್ಳ ದನ [illegible] ಮನುಷ್ಯರಿಗೂ, ದೇವತೆಗಳಿಗೂ ಪರಮಾತ್ಮನ ಜ್ಞಾನವಿಲ್ಲದ [illegible] ಪರಮಾತ್ಮನ ಜ್ಞಾನವಿಲ್ಲದವ [illegible] ಪ್ರವಕ್ಕಾಗಿ ಅನವರತ ಹೃದಯವನ್ನು [illegible] ಪರಮೇಶ್ವರನೇ ನಿನಗೆ [illegible] ಒಂದಿರುವುದೆಂದು ಬರೆ [illegible] 'ವಿಷ್ಟ' ಅಂದರೆ [illegible] ಎಂದ ಭಾಸ್ಕರಾಚಾರ್ಯರು [illegible]

[illegible] ಹಿಡಿದು ಬೆದರಿಸಿದರೆ ಇವನು [illegible] ರೀತಿಯಿಂದ ಪಶುಗಳು [illegible] ಹುಲ್ಲನ್ನು ಕೈಯಲ್ಲಿ ಹಿಡಿದು ತೋರಿಸುತ್ತ [illegible] ದಿಂದ ಪ್ರೀತಿಸುತ್ತ [illegible] ಹತ್ತರಕ್ಕೆ ಬರುತ್ತವೆ ಇವರ ನೇರೆಗೆ ಕೈಯಲ್ಲಿ ಶಸ್ತ್ರವನ್ನು ಹಿಡಿದು ಉಗ್ರನಾಗಿ ಬೆದರಿಸುತ್ತಿರುವ [illegible] ಪುರುಷನನ್ನು ಕಂಡರೆ ತಿಳುವಳಿಕೆಯುಳ್ಳ ಮನುಷ್ಯನಾದರೂ ಹಿಮ್ಮಟ್ಟ [illegible] ಸುತ್ತಾನೆ, ಪ್ರೀತಿಯಿಂದ ಕರೆಯುವ ಸೌಮ್ಯನಾದ ಪುರುಷನ ಹತ್ತಿರ ಮೆಲ್ಲನೆ ಹೋಗುತ್ತಾನೆ ಆದ್ದರಿಂದ ಪಶುಗಳು ಹೇಗೆ ದೇಹಾಭಿಮಾನಿಗಳಾಗಿ ವಿಷಯಾಸಕ್ತಗಳೋ, ಇದರಂತೆಯೇ ತಿಳುವಳಿಕೆಯುಳ್ಳ ಮನುಷ್ಯನಾದರೂ ದೇಹಾಭಿಮಾನಿಯಾಗಿ ವಿಷಯಾಸಕ್ತನಾದರೆ ಇವನನ್ನು ಪಶುವೆಂದೇಕೆ ಹೇಳಬಾರದು? ಇನ್ನು ದೇವತೆಗಳಿಗೂ ದೇಹಾಭಿಮಾನವೂ ವಿಷಯಾಸಕ್ತಿಯೂ ಇದೆಯೋ ಇಲ್ಲವೋ ಎಂಬುದನ್ನು ಕುರಿತು ವಿಚಾರಿಸುವಾ, ದೇವತೆಗಳು ದೈತ್ಯರ ಸಂಗಡ ಹೋರಾಡಿದುದು ಪುರಾಣೇತಿಹಾಸಗಳಲ್ಲಿ ಕಂಡುಬರುತ್ತದೆ. ಈ ದೇವತೆಗಳು ಬ್ರಹ್ಮಜ್ಞಾನಿಗಳೇ ಆಗಿದ್ದ ಪಕ್ಷದಲ್ಲಿ ದೈತ್ಯರ ಸಂಗಡ ಏಕೆ ಹೋರಾಡುತ್ತಿದ್ದರು? ಇದಕ್ಕೆ ವಿಷಯಾಭಿಲಾಷೆಯೇ ಕಾರಣವು ದೇವೇಂದ್ರನು ಗೌತಮನ ಹೆಂಡತಿಯನ್ನು ಮೋಹಿಸಿ ಮೋಸದಿಂದ ರಮಿಸಿದನು ಚಂದ್ರನು ಗುರುವಿನ ಪತ್ನಿಯನ್ನು ಅಪಹರಿಸಿ ಮನೆಯಲ್ಲಿಟ್ಟುಕೊಂಡನು. ಬ್ರಹ್ಮನು ತನ್ನ ಮಗಳನ್ನೇ ಮೋಹಿಸಿದನು ಹೀಗೆ ವಿಷಯಗಳು ಬ್ರಹ್ಮಾದಿದೇವತೆಗಳನ್ನೂ ಮುನಿಶ್ರೇಷ್ಠರನ್ನೂ ಸಹ ಅಪಮಾರ್ಗಕ್ಕೆ ಎಳೆದ ಮೇಲೆ ಮಿಕ್ಕವರ ಪಾಡೇನು?

ಪಾರಕರೇ, ಸ್ತ್ರೀಭೋಗಾನಂದವು ನಾಯಿಯು ಒಣಗಿದ ಎಲುಬನ್ನು ಕಡಿಕಡಿದು ಆನಂದಪಡುವಂತಿರುವುದು. ಹೇಗೆಂದರೆ ನಾಯಿಯು ಎಲುಬನ್ನು ಕಡಿಯುತ್ತಿರುವಾಗ ಅದರ ಬಾಯೊಳಗಣ ಲಾಲಾರಸವು ಎಲುಬಿನ ಮೇಲೆ ಸುರಿಯುತ್ತದೆ ನಾಯಿಯು ಆ ರಸವು ತನ್ನ ಬಾಯೊಳಗಿನದು ಎಂದರಿಯದೆ ಎಲುಬಿನಿಂದ ಬರುತ್ತದೆಂದು ಭ್ರಮಿಸಿ ಅದನ್ನು ಬಿಡದೇ ಕಡಿಯುತ್ತಿರುವಂತೆ, ಮನುಷ್ಯನು ಸ್ತ್ರೀಯನ್ನು ರಮಿಸುವ ಸಮಯದಲ್ಲಿ ವೀರ್ಯವು ಸ್ರವಿಸುವಾಗ ಉಂಟಾಗುವ ಮನಸ್ಸಿನ ವಿಕಲ್ಪವನ್ನೇ ಆನಂದವೆಂದೂ ಅದು ಸ್ತ್ರೀಯಿಂದಲೇ ಉಂಟಾಗುವುದೆಂದೂ ತಿಳಿಯುತ್ತಾನೆ. ಇದೇ ಅಜ್ಞಾನದ ಬೀಜವು.

ವಿಚಾರಮಾಡಿನೋಡಿದರೆ ಯಾವ ಪ್ರಾಪಂಚಿಕ ವಿಷಯದಲ್ಲಿಯೂ ನಿಜವಾದ ಸುಖವಿಲ್ಲ ವಿಷಯಗಳಲ್ಲಿ ಸುಖವಿರುವ ಪಕ್ಷದಲ್ಲಿ ಯಾವುದಾದರೊಂದು ವಿಷಯವು ಪ್ರಾಪ್ತವಾದಾಗ ನಮ್ಮ ಅನುಭವಕ್ಕೆ ಬರುವ ಸುಖವು ಆ ವಿಷಯವು ನಮ್ಮಲ್ಲಿರುವವರೆಗೂ ತೋರಬೇಕಾಗಿತ್ತು, ಆದರೆ ಅನುಭವದಲ್ಲಿ ಹಾಗಿಲ್ಲ. ಅದು ನಮ್ಮ ಸ್ವಾಧೀನವಾದ ಮೇಲೆ ಉತ್ಸಾಹವು ಕಡಿಮೆಯಾಗಿ ಅನಾದರವು ಹುಟ್ಟುವದೆಂಬುವದು ಸರ್ವಾನುಭವದ ಮಾತಾಗಿದೆ. ಹಬ್ಬಗಳು ಬರುವ ಪೂರ್ವದಲ್ಲಿದ್ದ ಉತ್ಸಾಹವು ಅವು ಬಂದ ಮೇಲೆ ತೋರುವುದಿಲ್ಲ ಸಂಸಾರದ ಆಯಾ ವಸ್ತುಗಳಿಂದ ಜನಿಸುವದು ಸುಖವಲ್ಲದೆ ದುಃಖದ ಪ್ರತೀಕಾರಮಾತ್ರವಾಗಿರುವದು ಇದಕ್ಕೆ ನಾವು ಸುಖವೆಂದು ವಿಪರ್ಯಾಸ ಮಾಡುವೆವು; ಆದರೆ ಅದಕ್ಕೂ ಸುಖಕ್ಕೂ ಬಹು ಅಂತರವಿರುವದು. ಈ ವಿಷಯದಲ್ಲಿ ಶ್ರೀಭರ್ತೃಹರಿಯು "ಮಾನವನು ವ್ಯಾಧಿನಿವಾರಣೆಯನ್ನು (ಹಸಿವು, ನೀರಡಿಕೆ, ಭೋಗಾಸಕ್ತಿ ಇತ್ಯಾದಿಗಳು) ಸೌಖ್ಯವೆಂದೇ ತಪ್ಪು ಅಭಿಪ್ರಾಯಪಟ್ಟುಕೊಳ್ಳುತ್ತಾನೆಂದು ಹೇಳುವದೂ ಸಹಜ! ಸಾಲವುಳ್ಳವನು ಧನವನ್ನು ಸಂಪಾದಿಸಿ ಅದರಿಂದ ಋಣವಿಮೋಚನೆಮಾಡಿಕೊಂಡರೂ ಅವನು ಧನಿಕನಾಗದಂತೆ ಯಾವುದಾದರೊಂದು ವಿಷಯದಿಂದ ದುಃಖದ ಪ್ರತೀಕಾರವನ್ನು ಮಾಡಿಕೊಂಡವನಿಗೆ ಸುಖಿಯೆನ್ನಲಾಗದು ಋಣಮುಕ್ತನಾದವನು ಪುನಃ ಸಾಲವನ್ನು ಮಾಡದಿದ್ದರೆ ಮುಂದೆ ಧನವಂತನಾಗಬಹುದು. ಹಾಗೆಯೇ ದುಃಖನಿವೃತ್ತಿಯನ್ನು ಮಾಡಿಕೊಂಡವನು ಪುನಃ ದುಃಖದ ಮಾರ್ಗವನ್ನು ಹಿಡಿಯದಿದ್ದರೆ ಮುಂದೆ ಅವನು ಸುಖಿಯಾಗಬಹುದು. ಆದರೆ ನಾವು ನೀರಿನಿಂದ ದಾಹವನ್ನೂ, ಅನ್ನದಿಂದ ಹಸಿವನ್ನೂ, ಕಾಂತಾಲಿಂಗನದಿಂದ ಕಾಮೋದ್ರೇಕವನ್ನೂ ನಿವಾರಣೆಮಾಡಿಕೊಂಡರೂ ಸಮುದ್ರದ ತರಂಗಗಳಂತೆ ಉತ್ತರಕ್ಷಣದಲ್ಲಿಯೇ ಮತ್ತೊಂದೇನಾದರೂ ಇಚ್ಛೆಯು ನಮ್ಮಲ್ಲಿ ಹುಟ್ಟಿ ಪುನಃ ದುಃಖಿತರನ್ನಾಗಿಮಾಡುವದು ಈ ಪರಿಯಲ್ಲಿ ಸಂಸಾರದಲ್ಲಿ ಯಾವ ವಸ್ತುವಿನಿಂದಲೂ ದುಃಖದ ಆತ್ಯಂತಿಕ ನಿವೃತ್ತಿಯಾಗುವುದಿಲ್ಲ ಆದಕಾರಣ ಋಣದಿಂದ ಸಂಪೂರ್ಣ ಮುಕ್ತನಾಗದವನು ಧನಿಕನಾಗದಂತೆ ದುಃಖದಿಂದ ಪೂರ್ಣವಾಗಿ ಬಿಡುಗಡೆ ಹೊಂದದ ನಾವು ಸುಖಿಗಳಾಗಲಾರೆವು ಇಂತಹ ಸುಖವೆಂಬುದು ನಮಗೆ ಸ್ವಪ್ನಪ್ರಾಯವೇ ಸರಿ

ಆಯಾಯ ವಸ್ತುಗಳ ಇಚ್ಛೆಯ ದುಃಖದಿಂದ ಬೆಂದು ಕಂದಿ ಕುಂದಿ ಬೆಂಡಾಗಿ ಏತನ್ಮಧ್ಯೆ ಇಷ್ಟವಸ್ತುಗಳ ಪ್ರಾಪ್ತಿಯಿಂದಾಗುವ ಕ್ಷಣಿಕ ದುಃಖನಿವೃತ್ತಿಗೆ ಸುಖವೆಂದು ಭ್ರಮಿಸುತ್ತಿರುವೆವು. ಆದಾಯಮಾತ್ರದಿಂದ ಧನಸಂಗ್ರಹವಾಗುವುದಿಲ್ಲ; ಆದರೆ ಆದಾಯಕ್ಕಿಂತಲೂ ವ್ಯಯವು ಕಡಿಮೆಯಾಗುವುದರಿಂದ ಮಾತ್ರ ಆಗುವದು ಹೇಗಾದರೂ ಸಾಲಗಾರನ ಕಾಟವನ್ನು ತಪ್ಪಿಸಿಕೊಂಡಮಾತ್ರದಿಂದ ಯಾವನಿಗಾದರೂ ಧನಿಕನೆನ್ನಬಹುದೋ? ಸಾಲವುಳ್ಳವನು ಎಷ್ಟು ಗಳಿಸುತ್ತಿದ್ದರೂ ಅವನನ್ನು ಶ್ರೀಮಂತನೆನ್ನಲಿಕ್ಕೆ ಬರುವುದಿಲ್ಲ. ಅರ್ಥಾತ್ ಇಚ್ಛೆಯ ತೃಪ್ತಿಯು ಸುಖಕರವಲ್ಲವು. ಆದುದರಿಂದ ನಮ್ಮ ಮನಸ್ಸನ್ನು ಮೋಹಗೊಳಿಸಿ ಇಚ್ಛೆಯನ್ನು ಹುಟ್ಟಿಸಿ ದುಃಖಕ್ಕೆ ಗುರಿಮಾಡುತ್ತಿರುವ ವನಿತಾದಿ ಪ್ರಾಪಂಚಿಕವಸ್ತುಗಳಿಗೆ ಸುಖಸಾಧನಗಳೆನ್ನುವುದಕ್ಕಿಂತಲೂ ದುಃಖಸಾಧನಗಳೆನ್ನುವದು ಯುಕ್ತಿಯುಕ್ತವಾಗಿರುವದು ಆಹುತಿಯಿಂದ ಅಗ್ನಿಯು ಶಾಂತವಾಗದೆ ವೃದ್ಧಿಯಾಗುವಂತೆ ಈ ವಸ್ತುಗಳನ್ನು ಉಪಭೋಗಿಸುತ್ತಿರುವವರ ಇಚ್ಛೆಯೂ ಅಧಿಕಾಧಿಕವಾಗಿ ವೃದ್ಧಿಯಾಗುತ್ತಿರುವುದರಿಂದ ಅವರಿಗೆ ತೃಪ್ತಿಯಿಲ್ಲ ಇವುಗಳನ್ನು ಬಯಸಿ ಹೊಂದದಿದ್ದವರಿಗಂತೂ ತೃಪ್ತಿಯಿಲ್ಲವೆಂದು ಹೇಳಬೇಕಾದುದೇ ಇಲ್ಲ. ಹೀಗೆ ಉಭಯತಃ ಅತೃಪ್ತಿಯನ್ನೇ ಉಂಟುಮಾಡುತ್ತಿರುವ ಸಾಂಸಾರಿಕವಸ್ತುಗಳಲ್ಲಿ ಸಹ ಅವುಗಳಿಂದಾಗುವ ಕ್ಷಣಿಕದುಃಖನಿವೃತ್ತಿಗೆ ಮೋಹಿಸಿ ನಾವು ಪ್ರವರ್ತಿಸುತ್ತಿರುವುದನ್ನೂ ಮತ್ತು ಅಂತಹ ದುಃಖನಿವೃತ್ತಿಯಿಂದ ತೃಪ್ತರಾಗದೆ ಮತ್ತೂ ಅತ್ತಿತ್ತ ಚಲಿಸುತ್ತಿರುವುದನ್ನೂ ವಿಚಾರಮಾಡಿ ನೋಡಿದರೆ

ನಾವು ಯಾವಾಗಲೂ ಸುಖವನ್ನೇ ಹುಡುಕುತ್ತಿರುವೆವೆಂದು ನಿದರ್ಶನಕ್ಕೆ ಬರುವದು. ಆ ನಿಜಾನಂದವು ಒಂದುಸಾರಿ ನಮಗೆ ಈಶ್ವರಾನುಗ್ರಹದಿಂದ ಪ್ರಾಪ್ತವಾಯಿತೆಂದರೆ ಪೂರ್ಣತೃಪ್ತಿಯನ್ನುಂಟುಮಾಡಿ ವಿಷಯಗಳ ಬಯಕೆಯನ್ನು ಯಾವಕಾಲಕ್ಕೂ ಅಂಕುರಿಸದಂತೆ ಮಾಡುವಂಥಾದ್ದೇ ಇರಬೇಕೆಂದು ಮನವರಿಕೆಯಾಗುವುದು ಯಾವುದಾದರೂ ಪ್ರಾಪಂಚಿಕವಿಷಯವು ನಮಗೆ ಬೇಕಾಗಿ ಅಸಹ್ಯತೆ ತೋರುವಾಗ ಇನ್ನೂ ಹೆಚ್ಚಿನದಾದ ಮತ್ತೊಂದು ವಸ್ತುವನ್ನು ಸಂಪಾದಿಸಬೇಕೆಂಬ ಬಯಕೆಯನ್ನು ಹುಟ್ಟಿಸಿಯೇ ಹೋಗುವುದು ಆದ್ದರಿಂದ ವಿಷಯಾತೀತವಾದ ಯಾವುದೋ ಒಂದು ಆನಂದವು ಇರುವುದೆಂಬುದಕ್ಕೂ ಆ ಆನಂದವನ್ನೇ ನಾವು ಹುಡುಕುತ್ತಿದ್ದೇವೆಂಬುದಕ್ಕೂ ಈ ಮಾತೇ ಪ್ರಬಲವಾದ ಪ್ರಮಾಣವು.

ನಿದ್ರಾಹಾರಭಯಮೈಥುನಾದಿಗಳಲ್ಲಿ ಮನುಷ್ಯನು ಪಶುಸಮಾನನೇ ಆಗಿದ್ದರೂ "ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ । ಪಶುಭ್ಯೋಪಿನರಾಃ ಶ್ರೇಷ್ಠಾಃ" ಎಂಬ ವಾಕ್ಯದಂತೆ ಇವನಲ್ಲಿ ಪ್ರಜ್ಞೆಯಿರುವುದರಿಂದ ಶ್ರೇಷ್ಠನೆನಿಸಿಕೊಂಡಿರುವನು ಆದರೆ ಪ್ರಜ್ಞೆಯಿಲ್ಲದ ಪಶುಗಳು ಗರ್ಭಧಾರಣೆಕಾಲದಲ್ಲಿ ಮಾತ್ರ ಕಾಮಕೃತ್ಯವನ್ನು ಮಾಡುತ್ತವೆ. ಈ ಪ್ರಜ್ಞಾಶಾಲಿಯಾದ ಮಾನವನಾದರೋ ಸ್ತ್ರೀಯನ್ನು ಒಂದು ಕ್ರೀಡಾಬೊಂಬೆಯನ್ನಾಗಿ ಮಾಡಿಕೊಂಡು ವಿಧಿನಿಷೇಧಗಳಿಲ್ಲದೆ ಹಗಲು ರಾತ್ರಿಗಳೆನ್ನದೆ ಕ್ರೀಡಿಸುತ್ತಿರುವುದನ್ನು ನೋಡಿದರೆ ಈ ವಿಷಯದಲ್ಲಿ ಪಶುಗಳಿಗಿಂತಲೂ ಇವನು ನಿಕೃಷ್ಟನಾಗಿರುವನೆಂದು ಹೇಳಿದರೆ ತಪ್ಪಾಗದು.

ಈ ರೀತಿಯಾಗಿ ಮಾನವರು ಅಜ್ಞಾನದಿಂದ ಸುಖವಲ್ಲದ್ದನ್ನು ಸುಖವೆಂದು ಭಾವಿಸಿ, ಪದೇ ಪದೇ ಜನನ-ಮರಣಾತ್ಮಕಸಂಸಾರವೆಂಬ ಕಾರಾಗೃಹವನ್ನು ಪ್ರವೇಶಿಸುತ್ತಿರುವರು ಇದೆಲ್ಲವೂ ಅಜ್ಞಾನದ ಪ್ರಭಾವವು. ಆದಪ್ರಯುಕ್ತ ಮಾನವನು ಶ್ರೋತ್ರಿಯ ಬ್ರಹ್ಮನಿಷ್ಠನಾದ ಗುರುವನ್ನು ಆಶ್ರಯಿಸಿ ಅವರ ಉಪದೇಶವನ್ನು ಗ್ರಹಿಸಿ ಜ್ಞಾನವನ್ನು ಸಂಪಾದಿಸಬೇಕು ಈ ರೀತಿ ಮಾಡಿದರೆ ಅನಾವೃಷ್ಟಿಯಿಂದ ಕಾದಿದ್ದ ಭೂಮಿಗೆ ಅತಿವೃಷ್ಟಿಯಿಂದ ತೃಪ್ತಿಯುಂಟಾಗುವಂತೆ ಅಂತರಂಗದಲ್ಲಿ ಅಜ್ಞಾನವಡಗಿ ಪರಮಾನಂದವುಂಟಾಗುವುದು

ಫಕೀರನ ಬುದ್ಧಿ ಪ್ರತಿಭೆ

ಒಂದು ಊರಿನಲ್ಲಿ ಒಬ್ಬ ಫಕೀರನಿದ್ದನು ಅವನು ಸದಾ ಮೌನವಾಗಿರುತ್ತಿದ್ದನು. ಯಾರಾದರೂ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳಬೇಕೆಂಬ ಆಸೆ ಇದ್ದಪಕ್ಷದಲ್ಲಿ 'ಹು' ಎಂದು ತಲೆ ಹಾಕುತ್ತಿದ್ದನು ಒಂದು ದಿವಸ ಒಬ್ಬನು ಸ್ವಲ್ಪ ಕೀಟಲೆ ಮಾಡಬೇಕೆಂದು ಈ ಫಕೀರನೆಡೆಗೆ ಬಂದು "ಪೂಜ್ಯರೆ, ತಮಗೆ ಸ್ವಲ್ಪ ತೊಂದರೆ ಕೊಡುತ್ತೇನೆ, ದಯವಿಟ್ಟು ನನ್ನ ಮೂರು ಪ್ರಶ್ನೆಗಳಿಗೆ ಉತ್ತರ ಹೇಳುವಿರಾ ?" ಎಂದು ಕೇಳಿದನು.

ಫಕೀರನು ಒಪ್ಪಿ ತಲೆ ಹಾಕಿದನು.

ಮೊದಲನೆಯ ಪ್ರಶ್ನೆ—'ದೇವರಿದ್ದಾನೆ ಎಂದು ಜನರು ಹೇಳುತ್ತಾರೆ. ಆದರೆ ನಾನು ಅವನನ್ನು ನೋಡಲಾರೆ ಯಾರೂ ಅವನನ್ನು ನನಗೆ ತೋರಿಸಲಾರರು. ಆದ್ದರಿಂದ ದೇವರಿದ್ದಾನೆ ಎಂದು ನಾನು ಹೇಗೆ ನಂಬಲಿ ?'

ಫಕೀರನು ಅದಕ್ಕೆ ಒಪ್ಪಿ ಪುನಃ ತಲೆಹಾಕಿದನು

ಎರಡನೆಯ ಪ್ರಶ್ನೆ—'ದೆವ್ವ ಬೆಂಕಿಯಿಂದ ಆಗಿದೆ, ಎಂದು ಕೊರಾನು ಹೇಳುತ್ತದೆ. ಹಾಗಾದರೆ ಬೆಂಕಿ ದೆವ್ವವನ್ನೇನು ಮಾಡೀತು ಅಲ್ಲವೇ ?"

ಪುನಃ ಫಕೀರನು ತಲೆಹಾಕಿದನು

ಮೂರನೆಯ ಪ್ರಶ್ನೆ—"ನಾವು ಮಾಡುವ ಕೆಲಸವೆಲ್ಲವೂ ದೇವರಿಂದ ಪ್ರೇರಿತವಾದುದು. ವಿಧಿ ನಮ್ಮ ಕೈಯಿಂದ ಮಾಡಿಸುತ್ತದೆ, ಹಾಗಿಲ್ಲದೆ ನಾವು ಏನೂ ಮಾಡಲಾರೆವು ಎಂದು ಕೊರಾನು ಹೇಳುತ್ತದೆ ಹಾಗಾದರೆ ನಾನು ಮಾಡಿದ ಕೆಲಸ ಸರಿಯೆ, ತಪ್ಪೆ! ಎಂದು ದೇವರು ಏಕೆ ಪರೀಕ್ಷಿಸಬೇಕು? ಆತನೇ ಕೆಲಸ ಮಾಡಿಸುತ್ತಿರುವಾಗ ಅವನೇ ಹೇಗೆ ನ್ಯಾಯಾಧಿಪತಿ ಆಗಬಲ್ಲ?"

ಫಕೀರನು ಈ ಪ್ರಶ್ನೆಗೂ ಸುಮ್ಮನೆ ತಲೆಹಾಕಿ ಒಂದು ಹಿಡಿಮಣ್ಣನ್ನು ಕೈಗೆ ತೆಗೆದುಕೊಂಡು ಕೂಡಲೆ ಅವನ ಮುಖಕ್ಕೆ ಎರಚಿದನು. ಕಣ್ಣಿಗೆ ಮಣ್ಣು ಬಿದ್ದಕೂಡಲೆ ಯುವಕನಿಗೆ ತುಂಬ ಕೋಪಬಂತು. ಫಕೀರನನ್ನು ಬಂಧಿಸಿ ನ್ಯಾಯಾಧಿಪತಿಯ ಮುಂದೆ ವಿಚಾರಣೆಗೆ ತರಿಸಿದನು "ಪ್ರಶ್ನೆ ಕೇಳಲು ಹೋದ ನನಗೆ ಫಕೀರನು ಈರೀತಿ ಮಾಡಿದನು ಕಣ್ಣಿನ ಉರಿಯನ್ನು ಸಹಿಸಲಾರೆ" ಎಂದು ನ್ಯಾಯಾಧೀಶನ ಮುಂದೆ ತರುಣನು ದೂರು ಹೇಳಿಕೊಂಡನು.

ನ್ಯಾಯಾಧಿಪತಿ "ಇದೆಲ್ಲ ನಿಜವೆ?" ಎಂದು ಫಕೀರನನ್ನು ಕೇಳಿದನು.

ಆಗ ಫಕೀರನು 'ನಿಜ ಸ್ವಾಮಿ. ಈತನು ನನ್ನ ಹತ್ತಿರ ಬಂದು ಮೂರು ಪ್ರಶ್ನೆಗಳನ್ನು ಕೇಳಿದನು. ನಾನು ಮೂರಕ್ಕೂ ಬಹಳ ಎಚ್ಚರಿಕೆಯಿಂದ ಉತ್ತರ ಕೊಟ್ಟೆನು. ಜನರು ದೇವರಿದ್ದಾನೆ ಎಂದು ಹೇಳುತ್ತಾರೆ. ಆದರೆ ಈತನು ಆ ದೇವರನ್ನು ಕಣ್ಣಾರೆ ನೋಡಿಲ್ಲವಂತೆ! ಆದ್ದರಿಂದ ಕಣ್ಣಿಗೆ ಕಾಣದ ದೇವರು ಇದ್ದಾನೆ ಎಂದು ಹೇಗೆ ನಂಬಲಿ? ಎನ್ನುತ್ತಾನೆ. ಹಾಗೆಯೇ, ಈಗ ಈತನು ತನಗೆ ತುಂಬ ನೋವಾಗುತ್ತಿದೆ ಎನ್ನುತ್ತಾನೆ. ಅದನ್ನು ನೋಡಲಾರದ ನಾವು ಇವನು ಹೇಳುತ್ತಿರುವುದು ನಿಜ ಎಂದು ಹೇಗೆ ನಂಬುವುದು? ನನ್ನ ಕಣ್ಣಿಗೆ ಕಾಣದೇ ಇರುವುದನ್ನು ಇದೆ ಎಂದು ನಾನು ಹೇಗೆ ಹೇಳಲಿ?'

ನ್ಯಾಯಾಧಿಪತಿ ಈ ಚಮತ್ಕಾರದ ಉತ್ತರವನ್ನು ಕೇಳಿ ಬೆರಗಾದನು.

ಈ ತರುಣನು ತನ್ನ ಎರಡನೆಯ ಪ್ರಶ್ನೆಯಲ್ಲಿ "ಬೆಂಕಿಯಿಂದ ಮಾಡಿದ ದೆವ್ವಕ್ಕೆ ಬೆಂಕಿ ಏನುಮಾಡೀತು?" ಎಂದು ಕೇಳಿದನು ಹಾಗಾದರೆ ಮಣ್ಣಿನಿಂದ ಆದ ಈ ದೇಹಕ್ಕೆ ಮಣ್ಣು ಏನು ಮಾಡೀತು? ಈತನ ಕಣ್ಣಿಗೆ ಎರಚಿದ ಮಣ್ಣು ಈತನಿಗೆ ಏನನ್ನೂ ಮಾಡಲಾರದಷ್ಟೆ!

ಮೂರನೆಯ ಪ್ರಶ್ನೆಯಲ್ಲಿ "ನಮ್ಮ ಎಲ್ಲ ಕೆಲಸಗಳೂ ದೇವರಿಂದ ಪ್ರೇರಿತವಾದುವು, ವಿಧಿ ನಮ್ಮ ಕೈಯಿಂದ ಮಾಡಿಸುತ್ತದೆ ಅಲ್ಲವೆ?" ಎಂದು ಕೇಳಿದನು. ಈತನ ಮುಖಕ್ಕೆ ಮಣ್ಣು ಎರಚಬೇಕೆಂದು ವಿಧಿ ಬಯಸಿ ಮಾಡಿರುವಾಗ ನನ್ನನ್ನೇಕೆ ಇಲ್ಲಿಗೆ ಹಿಡಿಸಿತಂದ? ವಿಧಿಗೆ ಎದುರಾಗಿ ಹೊರಡುವ ಇವನಿಗೆ ಎಷ್ಟು ಧೈರ್ಯವಪ್ಪ, ಎಂದು ಉತ್ತರ ಕೊಟ್ಟನು

ಫಕೀರನ ಜಾಣ್ಮೆಗೆ ನ್ಯಾಯಾಧಿಪತಿಯು ತಲೆದೂಗಿದನು

ವರ್ತಮಾನಸಂಗ್ರಹ

ರಾವಲ್ಪಿಂಡಿ ಜಿಲ್ಲೆಯ ಮುಸಲ್ಮಾನ ನಾಗರಿಕರಮೇಲೆ ಪಂಜಾಬ್ ಗೌರ್ನರು ೩೦ ಲಕ್ಷ ರೂ.ಗಳ ಸಾಮೂಹಿಕ ದಂಡವನ್ನು ಹೇರಿದ್ದಾರೆ.

ಪಂಜಾಬನ್ನು ವಿಭಾಗಿಸುವುದೆಂದರೆ ಮುಂದಿನ ಯುದ್ಧಗಳಿಗೆ ಬೀಜವನ್ನು ಬಿತ್ತಿದಂತೆಯೇ—ಎಂದು ಫಿರೋಜ್ ಖಾನನೂನರು ತಿಳಿಸಿದ್ದಾರೆ.

ಸಿಂಧ್ ಮತ್ತು ರಾಜಪುಟಾಣದಲ್ಲಿರುವ ಮರಳುಕಾಡು ಉತ್ತರಕ್ಕೆ ಮತ್ತು ಪೂರ್ವಕ್ಕೆ ಪ್ರತಿವರ್ಷ ೩೦೦ ಚದರ ಮೈಲಿಗಳಂತೆ ವಿಸ್ತಾರ ಹೊಂದುತ್ತಿದೆಯೆಂದೂ, ಇದನ್ನು ತಪ್ಪಿಸಲು ಅಲ್ಲಿ ಮರಗಳನ್ನು ಹೆಚ್ಚಿಸಬೇಕೆಂದೂ ಡೆಹರಾಡೂನಿನ ಅರಣ್ಯಶಾಖಾ ಸಂಸ್ಥೆ ತಿಳಿಸಿದೆ.

ಭಾರತದ ಕೋಮುವಾರು ಸಮಸ್ಯೆಯನ್ನು ಬಿಡಿಸಲು ಹಲವು ಮಾರ್ಗಗಳನ್ನು ಸೂಚಿಸಿ ೧೯೪೮ ನೇ ಜೂನ್ ತಿಂಗಳ ಮೊದಲೇ ಅಧಿಕಾರವನ್ನು ದಾನಮಾಡುವುದು ಉತ್ತಮವೆಂದು ವೈಸ್ರಾಯರು ಬ್ರಿಟಿಷ್ ಸರಕಾರಕ್ಕೆ ಸೂಚಿಸಿದ್ದಾರಂತೆ!

ಚಿಕ್ಕವಯಸ್ಸಿನ ಬಾಲಕರು ಬೀಡಿ ಸೇದದಂತೆ ಪಂಜಾಬ್ ಸರಕಾರವು ಪ್ರಚಾರ ಮಾಡುತ್ತಿದೆ ೧೬ ವರ್ಷದ ಕೆಳಗಿನ ಬಾಲಕರಿಗೆ ಬೀಡಿ ಮಾರಬಾರದೆಂದೂ, ಬೀಡಿ ಅಂಗಡಿಗಳಲ್ಲಿ ಕೆಲಸಕ್ಕಿಟ್ಟುಕೊಳ್ಳಬಾರದೆಂದೂ ಆಜ್ಞೆಮಾಡಲಾಗಿದೆ.

ಪಂಢರಪುರದಲ್ಲಿ ಉಪವಾಸ

ಪಂಢರಪುರದ ವಿಠೋಬ ದೇವಸ್ಥಾನಕ್ಕೆ ಅಸ್ಪೃಶ್ಯರನ್ನು ಬಿಡದಂತೆ ಒತ್ತಾಯ ಮಾಡಲು ಉಪವಾಸ ಮಾಡುತ್ತಿರುವ ಸಾನೆ ಗುರೂಜಿಯವರಿಗೆ ಸಹಾನುಭೂತಿ ತೋರಿಸಲು ಬೊಂಬಾಯಿಯ ನಾನಾ ಕಾರ್ಖಾನೆಗಳ ೫೦ ಸಾವಿರ ಕೆಲಸಗಾರರು ಕೆಲಸಕ್ಕೆ ಹೋಗಲಿಲ್ಲ

ಆಭರಣಗಳ ಪತ್ತೆ

ಡಚ್ ಹಡಗೊಂದರಲ್ಲಿ ಪ್ರಯಾಣಮಾಡುತ್ತಿದ್ದ ಎಂಟು ಮಂದಿ ಬ್ರಿಟಿಷ್ ಮತ್ತು ಭಾರತ ಪ್ರಯಾಣಿಕರ ಹತ್ತಿರ ಸುಮಾರು ಎರಡು ಲಕ್ಷ ಗಿಲ್ಡರ್ ಬೆಲೆಬಾಳುವ ಚಿನ್ನದ ಉಂಗುರ ವಜ್ರದ ಹರಳು ದೊರೆತಿವೆ. ಈ ಪ್ರಯಾಣಿಕರು ತಮ್ಮ ಕಾಲ್ಬೆರಳುಗಳಿಗೆ ಉಂಗುರ ಹಾಕಿಕೊಂಡು ಬೂಟುಗಳಲ್ಲಿ ಬಚ್ಚಿಟ್ಟಿದ್ದರಂತೆ!

ಸರ್ ಸಿ. ಪಿ. ಯವರು ಲಂಡನ್ನಿಗೆ ಹೋಗುವರು

ತಿರುವಾಂಕೂರಿನ ಮುಂದಿನ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸುವ ಸಲುವಾಗಿ ಅಲ್ಲಿಯ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಈ ತಿಂಗಳು ಲಂಡನ್ನಿಗೆ ಪ್ರಯಾಣ ಮಾಡಲಿರುವರು.

ಮೋತಾ ದೇವಾಲಯವು ಮುಚ್ಚಲ್ಪಟ್ಟಿತು

ಬೊಂಬಾಯಿ ಸರಕಾರದ ಹರಿಜನ ದೇವಾಲಯ ಪ್ರವೇಶ ಮಸೂದೆಯನ್ನು ಪ್ರತಿಭಟಿಸಲು ಸೂರತ್ತಿನ ವೈಷ್ಣವ ದೇವಾಲಯವಾದ ಮೋತಾ ಮಂದಿರವು ಮೊನ್ನೆದಿನ ಮುಚ್ಚಲ್ಪಟ್ಟಿತು. ಸೂರತ್ತಿನಲ್ಲಿ ಇತ್ತೀಚೆಗೆ ವೈಷ್ಣವರ ಸಭೆ ಸೇರಿ ಸರಕಾರವು ಅಭಿವೃದ್ಧಿ ಮತ್ತು ಸುಧಾರಣೆಗಳ ನೆವದಲ್ಲಿ ಧಾರ್ಮಿಕ ವಿಚಾರದಲ್ಲಿ ಕೈ ಹಾಕುವುದನ್ನು ನಿಲ್ಲಿಸಬೇಕು ಎಂದು ನಿರ್ಣಯ ಮಾಡಲಾಯಿತು

ಸ್ವೀಕಾರ

ಶಿವಮೊಗ್ಗಾ ಡಿ|| ನ್ಯಾಮತಿ ಗ್ರಾಮದಲ್ಲಿರುವ ಚಿ|| ಜಿ ಶಾಂತಪ್ಪನಿಗೂ ಚಿ|| ಸೌ|| ಸರ್ವಮ್ಮನಿಗೂ, ಚಿ|| ಕೆ. ರಾಚಪ್ಪನಿಗೂ ಚಿ|| ಸೌ|| ಗೌರಮ್ಮನಿಗೂ ಮತ್ತು ಚಿ|| ಎಸ್. ರಾಜೋಟಪ್ಪನಿಗೂ ಚಿ|| ಸೌ|| ಚನ್ನಮ್ಮನಿಗೂ ನೆರವೇರಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 6 ರೂ. ಗಳು ಮತ್ತು ಚಿ|| ಬಿ. ಪರಮೇಶ್ವರಪ್ಪನಿಗೂ ಚಿ|| ಸೌ|| ರುದ್ರಮ್ಮನಿಗೂ ನೆರವೇರಿದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಒಟ್ಟು 7 ರೂಪಾಯಿಗಳು ನ್ಯಾಮತಿಯಲ್ಲಿರುವ ಮ|| ರಾ|| ಹೊಸಕಟ್ಟಿ ಶಿವಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ತಿಪಟೂರು ನಿವಾಸಿಗಳಾದ ಮ|| ರಾ|| ಎಸ್. ಪಿ. ನೀಲಕಂಠಪ್ಪ ಮತ್ತು ಸಿದ್ಧಲಿಂಗಪ್ಪ ಸಹೋದರರು ತಾ|| ೨೪-೪-೪೭ ರಲ್ಲಿ "ಸಾಸಲು ಬ್ರದರ್ಸ" ಎಂಬ ಹೆಸರಿನಿಂದ ಕಾಯಿ ಕೊಬರಿ ವಲಾಲಿ ಅಂಗಡಿಯನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂಪಾಯಿಗಳು ವೇ|| ಆರ್ ಎಂ ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಕಲಾದಗಿ ಹಿರೇಮಠದಲ್ಲಿ ಶ್ರೀಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಚಿಕ್ಕಮಣ್ಣೂರು ಬೃಹನ್ಮಠದ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಲೋಕಪ್ರಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಧ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಓದುಗರಿಗೆ ವೇದ್ಯವಾಗುವುದು ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೧೬೨೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ [illegible] ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು [illegible] ರುವ ಈ ಅಪೂರ್ವಗ್ರಂಥವನ್ನು [illegible] ಓದಬೇಕು. **ಬೆಲೆ ೩ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ [illegible]ಚಾರ್ಯರ ಒಂಭತ್ತು ಅವ[illegible]ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕ [illegible]ರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪×೧೦ ಬೆಲೆ	೦—೬—೦
[illegible] ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೨—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ಒಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀ [illegible] ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
[illegible] ಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ..	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ..	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಒಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ) ..	೮ ಆಣೆ
ಆಗಮಪರಿಜ್ಞಾನ ..	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ).	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
षट्स्थलकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪಟಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ನೇ ಮೇ ೧೯೪೭ [ಸಂಚಿಕೆ ೪

ಸ್ವೀಕಾರ

ರಾಯಚೂರ ಡಿ। ಮಟಮರಿ ಗ್ರಾಮದ ಪ್ರೋ॥ ಪಾ॥ ಮಾ॥ ಶ್ರೀಮತಿ ವೀರಮ್ಮನವರು ತಮ್ಮ ದತ್ತ ಪುತ್ರ ಚಿ॥ ಸೂಗನಗೌಡನಿಗೆ ಕಾರೇಕಲ್ಲು ವೀರಾಪೂರ ಗ್ರಾಮದ ಮ॥ ರಾ॥ ಪೂರತಿಪ್ಪಲಿ ವೀರನಗೌಡರ ಪುತ್ರಿ ಚಿ॥ ಸೌ॥ ನಾಗಮ್ಮನನ್ನು ತಂದು ನರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಶ್ರೀ॥ ಷ॥ ಬ್ರ॥ ಬಿಚ್ಚಾಲಿ ಸಾವಿರ ದೇವರು ಚನ್ನವೀರಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ। ಹಾನಗಲ್ಲ ತಾ। ಇನಾಮುಗ್ರಾಮ ಕಲ್ಲಾಪುರದಲ್ಲಿರುವ ವೇ॥ ಚಿಕ್ಕಮಠದ ಶಿವಯ್ಯನವರ ತಮ್ಮ ಚಿ॥ ಬಸವಣ್ಣಯ್ಯನಿಗೆ ಹಾನಗಲ್ಲ ತಾ॥ ಹೇರೂರ ಗ್ರಾಮದ ಹಿರೆಯಮಠದ ವೇ॥ ವೀರಪ್ಪಯ್ಯನವರ ಪುತ್ರಿ ಚಿ॥ ಸೌ॥ ಕೊಟ್ರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 5 ರೂಪಾಯಿಗಳು ವೇ॥ ಮಳೆಯಯ್ಯನವರು ರಾಚಯ್ಯನವರು ಹಿರೇಮಠ ಆಲೂರು ಇವರ ದ್ವಾರಾ ತಲ್ಪಿರುತ್ತವೆ

ತುಮಕೂರು ಟವನ್ನಿನಲ್ಲಿರುವ ವೇ॥ ಶೀತಕಲ್ಲು ಮಠದ ಯಸ್ ರೇವಣಾರಾಧ್ಯರು ತಮ್ಮ ಪುತ್ರ ಶ್ರೀಮಾನ್ ಆರ್ ಯಸ್. ಆರಾಧ್ಯರಿಗೆ ವಿಜಾಪುರ ಡಿ॥ ಬಾಗಲಕೋಟೆಯಲ್ಲಿರುವ ಜಂಗಿನ ಲಿಂಗಯ್ಯನವರ ಪುತ್ರಿ ಚಿ॥ ಸೌ॥ ಕುಮಾರಿ ಸುಲೋಚನಾದೇವಿಯನ್ನು ತಂದು ಮಹಾ ಸಂಭ್ರಮದಿಂದ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಬೆಂಗಳೂರು ಡಿ॥ ಬಿಡದಿ ಗ್ರಾಮದಲ್ಲಿರುವ ಶ್ರೀಮಾನ್ ಬಿ. ಸಿ ರೇವಣ್ಣಶಾಸ್ತ್ರಿಗಳು ತಮ್ಮ ಪುತ್ರಿ ಚಿ॥ ಸೌ॥ ಕಮಲಾಂಬೆಯನ್ನು ಬೆಂಗಳೂರು ಸೂಶೆಟ್ಟರು ನೀಲಕಂಠಪ್ಪನವರ ಭಾವಂದಿರಾದ ಮುಳಬಾಗಿಲು ಟೇಟ್ ಚಂದ್ರಶೇಖರಯ್ಯನವರ ತೃತೀಯ ಪುತ್ರ ಚಿ॥ ಸೋಮಶೇಖರಯ್ಯನವರಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ 4 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಮ॥ ರಾ॥ ಗಿರಿಮಲ್ಲಪ್ಪ ಶೆಟ್ಟರ ಬನ್ನಟ್ಟಿ ಇವರ ಪುತ್ರ ಚಿ॥ ಬಸಪ್ಪನಿಗೂ ಕುಳ್ಳೊಳ್ಳಿ ಗ್ರಾಮದ ಮ॥ ರಾ॥ ಬಾಳಪ್ಪ ಗಡೆಣ್ಣನವರ ಇವರ ಪುತ್ರಿ ಚಿ॥ ಸೌ॥ ಭಾಗೀರಥೀಬಾಯಿಗೂ ಮೇಲ್ಕಂಡವರ ದ್ವಿತೀಯ ಪುತ್ರ ಚಿ॥ ಬಸವಲಿಂಗಪ್ಪನಿಗೂ ತೇರದಾಳ ಗ್ರಾಮದ ಮ॥ ರಾ॥ ಮಹಾಲಿಂಗಪ್ಪ ಮಾಟಳಶೆಟ್ಟಿ ಇವರ ಪುತ್ರಿ ಚಿ॥ ಸೌ॥ ಗಂಗೂಬಾಯಿಗೂ ವೈಶಾಖ ಶು॥ ೧೨ ಶುಕ್ರವಾರ ದಿವಸ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 4 ರೂಪಾಯಿಗಳು ತೇರದಾಳ ಗ್ರಾಮದಲ್ಲಿರುವ ಮಹರಖಂಡಿ ಹಿರೇಮಠದ ಶ್ರೀ॥ ಷ॥ ಬ್ರ॥ ಚರಮೂರ್ತಿಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ತಿಪಟೂರು ಟೌನಿನಲ್ಲಿರುವ ವೇ॥ ತ್ಯಾಗಟೂರ ಮಠದ ಜಿ ತಮ್ಮಯ್ಯನವರ ಪುತ್ರಿ ಚಿ॥ ಸೌ॥ ಶಾರದಾದೇವಿಗೂ ಚಿತ್ರದುರ್ಗ ಜಿ॥ ಕಾಟೇನಹಳ್ಳಿ ಮಲ್ಲಾಪುರ ಮಠದ ವೇ॥ ಚಂದ್ರಶೇಖರಯ್ಯನವರ ಪುತ್ರ ಚಿ। ಚನ್ನಬಸವಯ್ಯ ಯಲ್ ಯಮ್ ಪಿ ಇವರಿಗೂ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ॥ ಎ ಎಮ್ ಶಿವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಗರಗ ಗ್ರಾಮದಲ್ಲಿರುವ ಮ। ರಾ॥ ವೀರಪ್ಪ ಬಳಿಗಾರ ಇವರು ತಮ್ಮ ಮನೆಯಲ್ಲಿ ವೈಶಾಖ ಶು॥ ೫ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತೀಮಹೋತ್ಸವವನ್ನು ಒಳ್ಳೆ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿ ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಧರ್ಮದ ಆವಶ್ಯಕತೆ

“ವೇದೋಽಖಿಲೋ ಧರ್ಮಮೂಲಂ” ವೇದವಾಙ್ಮಯವೆಲ್ಲವೂ ಧರ್ಮಮೂಲವಾದುದೆಂದು ನಮ್ಮ ಪ್ರಾಚೀನರ ನಂಬಿಕೆ ಅವರು ತಾತ್ವಿಕ, ಸಾಮಾಜಿಕ, ನೈತಿಕ, ರಾಜಕೀಯಾದಿ ಸರ್ವವಿಚಾರಗಳಿಗೂ ಧರ್ಮಸ್ವರೂಪವನ್ನು ಕೊಟ್ಟು ಅವುಗಳೆಲ್ಲವನ್ನೂ ಧಾರ್ಮಿಕ ದೃಷ್ಟಿಯಿಂದಲೇ ನೋಡಿರುವರೆಂದು ಕಂಡುಬರುವದು ಪ್ರಜಾಧರ್ಮ, ರಾಜಧರ್ಮ, ವರ್ಣಧರ್ಮ, ಆಶ್ರಮಧರ್ಮ, ಮತಧರ್ಮ, ಮೋಕ್ಷಧರ್ಮ ಇತ್ಯಾದಿಗಳಿಗೆಲ್ಲಾ ಧರ್ಮಶಬ್ದವನ್ನು ಜೋಡಿಸಿರುವುದೇ ನಿದರ್ಶನವಾಗಿದೆ ಇದರಿಂದ ಧರ್ಮಶಬ್ದದ ಅರ್ಥವು ಬಹಳ ವ್ಯಾಪಕವಾದುದೆಂದು ತಿಳಿದುಬರುವುದು ವೇದಾದಿಗಳಲ್ಲುಕ್ತವಾದ ಧರ್ಮಶಬ್ದದ ವ್ಯಾಖ್ಯೆಯನ್ನು ವಿಚಾರಮಾಡಿ ನೋಡಿದರೆ ಅದರ ವ್ಯಾಪ್ತಿಯು ಎಷ್ಟಿರುವದೆಂಬುದು ಕಂಡುಬರುವದು ಮಾನವ ಜೀವನವೇ ಧರ್ಮಮಯವಾದುದೆಂದು ನಮ್ಮವರ ಹೇಳಿಕೆ. ಮನುಷ್ಯಜನ್ಮವು ಎಂದು ಪ್ರಾಪ್ತವಾಯಿತೋ ಅಂದೇ ಧರ್ಮವು ಗಂಟು ಬಿದ್ದಿರುವದು ಧರ್ಮವೆಂಬುದು ಮುಖ್ಯವಾಗಿ ಪರಲೋಕದಲ್ಲಿ ಉತ್ತಮಾವಸ್ಥೆಯನ್ನು ಅಥವಾ ದೇಹವಿರುವಾಗಲೇ ಜೀವನು ತನ್ನ ಮೂಲಸ್ವರೂಪಭೂತವಾದ ಶಿವತ್ವಾಭಿವ್ಯಕ್ತಿಯನ್ನು ಪಡೆಯುವದಕ್ಕೆ ಸಾಧನವಾಗಿರುವದು. “ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ” ಧರ್ಮವನ್ನು ಯಾರು ನಾಶಮಾಡುವರೋ ಅವರನ್ನು ಧರ್ಮವು ನಾಶಮಾಡುವದು ಯಾರು ಧರ್ಮವನ್ನು ಕಾಪಾಡುವರೋ ಅವರನ್ನು ಧರ್ಮವು ಕಾಪಾಡುವದು ಎಂದು ಮಹಾತ್ಮರು ನುಡಿದಿರುವರು ಈ ಕಲಿಕಾಲದಲ್ಲಿ ಕೆಲವರು ಧರ್ಮದಲ್ಲಿಯೂ, ಗುರುಗಳಲ್ಲಿಯೂ ದೇವರಲ್ಲಿಯೂ ವಿಶ್ವಾಸಶೂನ್ಯರಾಗಿರುವರು ಇದರಿಂದ ಧರ್ಮಕ್ಕೆ ಯಾವ ಹಾನಿಯೂ ಇಲ್ಲ ಆಯುರ್ವೇದವು ಯಾವುದಾದರೂ ರೋಗಕ್ಕೆ ಔಷಧವನ್ನು ಹೇಳದಿದ್ದ ಪಕ್ಷದಲ್ಲಿ ಅದು ಅಪರಾಧಿಯೆನಿಸಿಕೊಳ್ಳುತ್ತಿದ್ದಿತು ಆಯುರ್ವೇದ ಬಲ್ಲವನು ರೋಗಿಗೆ ಔಷಧವನ್ನು ಹೇಳದಿದ್ದರೆ ಆ ವೈದ್ಯನು ದೋಷಾರೋಪಣೆಗೆ ಗುರಿಯಾಗುತ್ತಿದ್ದನು ಆದರೆ ಆಯುರ್ವೇದವು ಯೋಗ್ಯಔಷಧವನ್ನು ಹೇಳಿದ್ದರೂ ವೈದ್ಯನು ರೋಗಿಗೆ ಆ ಔಷಧವನ್ನು ತೆಗೆದುಕೊಳ್ಳುವಂತೆ ಹೇಳಿದರೂ ಕೂಡ ರೋಗಿಯು ಅಶ್ರದ್ಧೆಯಿಂದ ಔಷಧವನ್ನು ಸೇವಿಸದಿದ್ದರೆ ಆಯುರ್ವೇದದ ಮತ್ತು ವೈದ್ಯನ ಹಾನಿಯೇನಿದೆ ? ಆದ್ದರಿಂದ ಪರಶಿವನು ಜೀವಾತ್ಮರು ನಿಜಸ್ವರೂಪವನ್ನರಿಯಲೆಂದು ವೇದಾಗಮೋಪನಿಷತ್ತುಗಳನ್ನೂ ತನ್ನನ್ನು ಪೂಜಿಸಲೆಂದು ದೇಹವನ್ನೂ, ತನ್ನನ್ನು ಧ್ಯಾನಿಸಲೆಂದು ಮನಸ್ಸನ್ನೂ, ಮಾನವನ ಉದ್ಧಾರಕ್ಕಾಗಿ ತತ್ತ್ವೋಪದೇಶವನ್ನು ಮಾಡುವ ಉತ್ತಮ ಗುರುಮೂರ್ತಿಗಳನ್ನೂ ಅನುಗ್ರಹಿಸಿರುವನು ಆದರೂ ನಾವು ಅವನ್ನೆಲ್ಲಾ ಲೆಕ್ಕಿಸದೆ ಜನನಮರಣಾತ್ಮಕ ಸಂಸಾರದಲ್ಲಿ ತೊಳಲಿ ಬಳಲುವೆರಾದರೆ ಸರ್ವೇಶ್ವರನ ತಪ್ಪೇನು ? ಆದ್ದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದಲ್ಲಿ ಶ್ರದ್ಧೆಯುಳ್ಳವರಾಗಿ ವರ್ತಿಸಿದ್ದಾದರೆ ಅವರವರ ಮನೋಭೀಷ್ಟಗಳು ಸಿದ್ಧಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ

ಶ್ರೀಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು, ಹೋಗುಂದಿ

ವಿವಾಹಮಹೋತ್ಸವ

ರಾಯಚೂರ ಜಿಲ್ಲಾ ಮಟಮರಿ ಗ್ರಾಮದ ಪ್ರೋ॥ ಪಾ॥ ಮಾ॥ ಶ್ರೀಮತಿ ವೀರಮ್ಮನವರ ಗೃಹದಲ್ಲಿ ದತ್ತಕ ಪುತ್ರ ಚಿ॥ ಸೂಗನಗೌಡನಿಗೂ ಕಾರೇಕಲ್ಲು ವೀರಾಪೂರ ಗ್ರಾಮದ ಪೂರತಿಪ್ಪಲಿ ವೀರನಗೌಡರ ಪುತ್ರಿ ಚಿ॥ ಸೌ॥ ನಾಗಮ್ಮನೆಂಬ ಕನ್ಯಾಮಣಿಗೂ ಇದೇ ಸರ್ವಜಿನ್ನಾಮ ಸಂ॥ ವೈ॥ ಶು॥ ೧೨ ಶುಕ್ರವಾರ ಉದಯ ೮ ಘಂಟೆಗೆ ಸಲ್ಲುವ ಮಿಥುನಲಗ್ನದ ಶುಭಮುಹೂರ್ತದಲ್ಲಿ ವಿಧಿಪೂರ್ವಕವಾಗಿ ವಿವಾಹ ಕಾರ್ಯವು ವಿಜೃಂಭಣೆಯಿಂದ ಜರುಗಿತು ಈ ಶುಭಸಮಯದಲ್ಲಿ ಶ್ರೀ ವೀರಭದ್ರಸ್ವಾಮಿಗೆ ರುದ್ರಾಭಿಷೇಕವೂ, ತಮ್ಮ ಗುರುಗಳಾದ ಶ್ರೀ॥ ಷ॥ ಬ್ರ॥ ಬಿಚ್ಚಾಲಿ ಸಾವಿರದೇವರು ಚನ್ನವೀರಶಿವಾಚಾರ್ಯಸ್ವಾಮಿಗಳವರ ಪಾದಪೂಜೆಯೂ, ಸಂತರ್ಪಣೆಯೂ ವೈಭವದಿಂದ ನೆರವೇರಿದವು ಜಗದಾಚಾರ್ಯರು ನೂತನ ವಧೂವರರಿಗೆ ಸಮಸ್ತ ಸನ್ಮಂಗಲಗಳನ್ನೀಯಲಿ.

ವ್ಯವಸ್ಥಾಪಕ ವೆಂಕಯ್ಯಶೆಟ್ಟಿ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ೨೦ ವರ್ಷಗಳು ತುಂಬಿ ೨೧ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ ಮಾಡಬೇಕಾಗುತ್ತದ ವಿ ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದ ತಿಳಿಸಬೇಕು

ಸಂ —

ಪಂಚಾಚಾರ್ಯಪ್ರಭಾ.

೧೯೪೭ನೆಯ ಮೇ ತಾ ೧೯ನೇ ಸೋಮವಾರ

ಶ್ರೀಗುರುವಿನ ಶ್ರೇಷ್ಠತೆ

೨

ಜೀವನು ಅನಾದಿಕಾಲದಿಂದ ಅವಿದ್ಯೆಯಿಂದ ಆವರಿಸಲ್ಪಟ್ಟವನಾಗುದರಿಂದ, ತ ಪಿತ ಯಿ ಗ ಗಿ ತಲೂ ಸಾವಿರಪಾಲಾಗಿ ವಾತ್ಸಲ್ಯವುಳ್ಳವನಾದ ಪರಮಾತ್ಮನನ್ನು ಮರೆತು ಜನನಮರಣರೂಪ ದ ಖಗ ಗೊಳಗಾಗಿರುವನು ಇದರಿಂದ ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ಪ್ರೇಮಬಂಧವು ತಪ್ಪಿಹೋಗಿರುತ್ತದೆ ತಂದೆಯು ಮಗನನ್ನು ಉದ್ಧರಿಸಬೇಕೆಂಬ ನಿರ್ವ್ಯಾಜಪ್ರೇಮವುಳ್ಳವನಾಗಿದ್ದರೂ ತಂದೆಯನ್ನೇ ಮರೆತು ದುಸ್ಸಹವಾಸದಲ್ಲಿರುವ ಮಗನ ವಿಷಯದಲ್ಲಿ ತಂದೆಯ ಪ್ರೇಮಭಾವವು ಕಡಿಮೆಯಾಗುತ್ತ ಬರುವಲ್ಲಿ ಆಪ್ತನಾದ ವಿವೇಕಿ ಪುರುಷನು ಆ ತಂದೆಮಕ್ಕಳಿಗೆ ಪರಸ್ಪರ ಉಂಟಾಗಿರುವ ವಿಯೋಗದುಃಖವನ್ನು ತಪ್ಪಿಸುವುದಕ್ಕಾಗಿ ಮಗನಿಗೆ ಹಿತೋಕ್ತಿಗಳನ್ನು ಬೋಧಿಸಿ ಅತನ ದುಷ್ಟ ಮಿತ್ರರನ್ನು ತಪ್ಪಿಸಿ ಆ ಮಗನನ್ನು ತಂದೆಯ ಬಳಿಗೆ ಕರೆದುಕೊಂಡು ಹೋಗಿ ತಂದೆಮಕ್ಕಳನ್ನೊಟ್ಟುಗೂಡಿಸುತ್ತಾನೆ ಇದರಿಂದ ತಂದೆಯು ಸುಖಸಂಪತ್ತಿಗೆ ವಾರಸನಿಗೂ ದೊರೆತು ತಂದೆಯಂತೆ ಮಗನೂ ಅಭ್ಯುದಯಾವಸ್ಥೆಗೆ ಬರುತ್ತಾನಷ್ಟೆ! ಅದರಂತೆ ಪರಮಾತ್ಮನಿಂದ ಉತ್ಪನ್ನನಾದ ಈ ಜೀವಾತ್ಮನು ಮಧ್ಯಕಾಲದಲ್ಲಿ ಅವಿದ್ಯಾದಿ ಮಹಾಮಾಯೆಗಳ ಕೈಗೆ ಸಿಕ್ಕು ಪರವಶನಾಗಿ ಆ ತನ್ನ ಸುಖಸ್ಥಾನವಾದ ಪರಶಿವನ ಸ್ಥಾನವನ್ನೇ ಬಿಟ್ಟು ಸ್ವೇಚ್ಛೆಯಾಗಿ ಅಲೆಯುತ್ತ ಬಹು ಹೀನಾವಸ್ಥೆಯನ್ನು ಅನುಭವಿಸುತ್ತ ಒಂದಿರುತ್ತಾನೆ ಇಂತಹ ಜೀವಾತ್ಮನೆಂಬ ಪುತ್ರನು ಅಕಸ್ಮಾತ್ತಾಗಿ ಪರಮಾತ್ಮನ ಆಪ್ತದೂತನಂತಿರುವ ಗುರುವಿನ ಬಳಿಗೆ ಬರುವನು ದಯಾಳುವಾದ ಶ್ರೀಗುರುವು ಈತನ ದುರ್ದಶೆಯನ್ನು ನೋಡಿ ಮನಮರುಗಿ, ಈತನು ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನೂ ಅಣಿಮಾದ್ಯಖಿಲೈಶ್ವರ್ಯಸಂಪನ್ನನೂ ಆದ ಪರಶಿವನ ಅಂಶಸಂಜಾತನಾಗಿದ್ದುದರಿಂದ ಆ ಪರಶಿವನ ನಿತ್ಯಾನಂದತ್ವಾದ್ಯಖಿಲ ಸಾಮ್ರಾಜ್ಯಕ್ಕೂ ಈತನೇ ಬಾಧ್ಯನಾಗಿದ್ದರೂ ಮಹಾಮೋಹವೆಂಬ ಪಿಶಾಚಿಯಿಂದ ಹಿಡಿಯಲ್ಪಟ್ಟು ಪರವಶನಾಗಿ ಜನನಮರಣಗಳೆಂಬ ಸಮುದ್ರದ ಸುಳಿಯಲ್ಲಿ ಸುತ್ತುತ್ತಿರುವನಲ್ಲ! ಎಂದು ದಯಾಪೂರಿತ ಹೃದಯನಾಗಿ ಅತನಿಗೆ ಹಿಡಿದಿರುವ ಮೋಹಪಿಶಾಚಿಯನ್ನು ಓಡಿಸುವುದಕ್ಕೆ ಶಿವದೀಕ್ಷೆಯೆಂಬ ಮಹಾಯಂತ್ರವನ್ನು ಧರಿಸಿ ಆ ಪಿಶಾಚಿಯನ್ನೋಡಿಸಿ ಶಿವಲಿಂಗಸಂಬಂಧ ದ್ವಾರಾ ಮಹಾಮಂತ್ರೋಪದೇಶವನ್ನು ಮಾಡಿ ಶಿವನಿಗೂ ಜೀವನಿಗೂ ಇರುವ ಸಂಬಂಧವನ್ನು ವೇದಾಂತವಾಕ್ಯಗಳಿಂದ ಬೋಧಿಸಿ ವಿವೇಕವನ್ನುಂಟುಮಾಡಿ ಪರಮಾತ್ಮನ ಬಳಿಗೆ ಸೇರಿಸುತ್ತಾನೆ ಪರಮಾತ್ಮನ ವಿಷಯದಲ್ಲಿ ಅವಿವೇಕದಿಂದ ಜೀವಾತ್ಮನಿಗುಂಟಾಗಿರುವ ದೋಷವನ್ನು ಪರಿಹರಿಸಿ, ಪರಮಾತ್ಮನ ಪ್ರೇಮವುಂಟಾಗುವಂತೆ ಮಾಡುವ ಶಕ್ತಿಯನ್ನು ಪಡೆದಿರುವ ಗುರುಗಳ ಮಹೋಪಕಾರವನ್ನು ಯಾರೂ ಮರೆಯುವಂತೆ ಇಲ್ಲವು

ಸೂರ್ಯನು ಉದಯಿಸಿದ ಹೊರತು ಜಗತ್ತನ್ನಾವರಿಸಿದ ಅಂಧಕಾರವು ಹೇಗೆ ತೊಲಗುವುದಿಲ್ಲವೋ ರೋಗನಿದಾನವನ್ನರಿತ ವೈದ್ಯನಿಲ್ಲದ ರೋಗವು ಹೇಗೆ ನಿವೃತ್ತಿಯಾಗುವುದಿಲ್ಲವೋ ಹಾಗೆ ಗುರುವಿಲ್ಲದೆ ಜನನಮರಣರೂಪವಾದ ಭವ ಪಿವು ಶಾಂತವಾಗುವುದಿಲ್ಲ ಗುರುವೇ ನಿಜತತ್ವವನ್ನು ಪ್ರಕಾಶಗೊಳಿಸುತ್ತಾನಲ್ಲದ, ಇತರರು ಪ್ರಕಾಶಗೊಳಿಸಲಾರರು ಗುರುವಿನ ಅನುಗ್ರಹವನ್ನು ಪಡೆದವನಿಗೆ ಯಾವುದು ತಾನೇ ದುರ್ಲಭವು ಸಮುದ್ರಗಳೊಳಗೆ ಕ್ಷೀರಸಮುದ್ರವೂ ಗಿರಿಗಳೊಳಗೆ ಮೇರುಗಿರಿಯೂ ಗ್ರಹಗಳೊಳಗೆ ಸೂರ್ಯಗ್ರಹವೂ ರತ್ನಗಳೊಳಗೆ ಕೌಸ್ತುಭರತ್ನವೂ ಶ್ರೇಷ್ಠಗಳಾಗಿರುವಂತೆ ಎಲ್ಲಕ್ಕೂ ಗುರುವೇ ಶ್ರೇಷ್ಠನಾಗಿರುತ್ತಾನೆಂದು ಗುರುಮಹತ್ವವನ್ನು ಮಹಾತ್ಮರು ಬಹಳವಾಗಿ ಕೊಂಡಾಡಿರುತ್ತಾರೆ ಆದುದರಿಂದ ಜೀವಾತ್ಮನಿಗೂ ಪರಮಾತ್ಮನಿಗೂ ನಿಕಟಸಂಬಂಧವಿದ್ದರೂ ಆ ಸಂಬಂಧವನ್ನು ಜೀವಾತ್ಮನು ಮರೆತಿರುವುದರಿಂದ ಶ್ರೀಗುರುವು ಜೀವಾತ್ಮಪರಮಾತ್ಮರಿಗಿರುವ ಸಂಬಂಧವನ್ನರುಹಿ ಜೀವಾತ್ಮನನ್ನು ಬಂಧನದಿಂದ ನಿವೃತ್ತಿಗೊಳಿಸುವ ಉಪಾಯವನ್ನು ತಿಳಿದಿರುವುದರಿಂದಲೇ ವೇದಾಗಮಾದಿಗಳು ಸಹ ಆ ಗುರುವನ್ನು ಮುಕ್ತಕಂಠದಿಂದ ಹೊಗಳಿರುತ್ತವೆ ಘಟಾದಿ ಪದಾರ್ಥಗಳನ್ನು ನೋಡುವುದಕ್ಕೆ ದೀಪವು ಹೇಗೆ ಸಹಾಯಕವಾಗಿದೆಯೋ ಹಾಗೆಯೇ ಪರಮಾತ್ಮತತ್ವವನ್ನು ಪ್ರತ್ಯಕ್ಷೀಕರಿಸಲು ಗುರುವೇ ಸಂಪೂರ್ಣ ಸಹಾಯಕನಾಗಿರುವನು ಹೀಗಿದ್ದರೂ ಐಹಿಕಸೌಖ್ಯವೇ ಪರಮಧ್ಯೇಯವಾಗುಳ್ಳ ಈಗಿನಕಾಲದಲ್ಲಿ ಕೆಲವರು ಭವರೋಗಮಹಾವೈದ್ಯನಾದ ಗುರುವಿನ ವಿಷಯದಲ್ಲಿ ಅಲಕ್ಷ್ಯವುಳ್ಳವರಾಗಿರುವರಲ್ಲದೆ ತಮ್ಮ ತಮ್ಮ ಸ್ವೇಚ್ಛಾವಿಹಾರಿತ್ವಕ್ಕೆ ಗುರುಗಳೆಂಬವರು ಪ್ರತಿಬಂಧಕವನ್ನುಂಟುಮಾಡುತ್ತಾರೆಂಬ ದ್ವೇಷಬುದ್ಧಿಯಿಂದ ಗುರುಗಳ ಮೇಲೆಯೇ ಟೀಕೆಟಿಪ್ಪಣಿಗಳಿಗೆ ಪ್ರಾರಂಭ ಮಾಡಿದ್ದಾರೆ ಇಂಥ ಗುರುದೂಷಕರಾದ ಪರಮನಾಸ್ತಿಕರು ವರರುಚಿ ಮುನಿಯ ಕಥೆಯಲ್ಲಿ ಹೇಳಿದ ಒಟ್ಟೆಯನ್ನು ಕಡಿಯಲು ಹೋದ ಮಹಾಪಂಡಿತನಿಗೆ ಸಮಾನರಾಗುವರು ಇಂಥವರು ಎಂದಿಗೂ ಪರಮಾತ್ಮನ ಅನುಗ್ರಹಕ್ಕೆ ಭಾಗಿಗಳಾಗಲಾರರು

ಪರಮಾತ್ಮನಲ್ಲಿ ಸಹಜಪ್ರೇಮವುಳ್ಳವರು ಎಂದೂ ಯಾವಾಗಲೂ ಗುರುದೂಷಣೆ ಮಾಡುವುದಿಲ್ಲ ಯಾರು ಗುರುದೂಷಕರೋ ಅವರೇ ಪರಮಾತ್ಮದೂಷಕರೆಂದೂ ಯಾರು ಗುರುಪ್ರೇಮಿಗಳೋ ಅವರೇ ಪರಮಾತ್ಮಪ್ರೇಮಿಗಳೆಂದೂ ಶಾಸ್ತ್ರವು ಸಾರುತ್ತಿರುವುದು ಗುರುವಿನ ವಿಷಯದಲ್ಲಿ ತೋರಿಸುತ್ತಿರುವ ಪ್ರೀತಿದ್ವೇಷಗಳೇ ಪರಮಾತ್ಮನ ಪ್ರೀತಿದ್ವೇಷಗಳ ಬಾಹ್ಯಚಿಹ್ನೆಗಳಾಗಿರುತ್ತವೆ

ಯಾವನು ಗುರುಪೂಜಾವಂದನಾದಿಗಳನ್ನು ತಿರಸ್ಕರಿಸಿ ಶಿವಲಿಂಗವನ್ನು ಮಾತ್ರ ಪುರಸ್ಕರಿಸಲಿಕ್ಕೆ ಹೊರಡುತ್ತಾನೆಯೋ, ಅಂಥವನು ತನ್ನ ಅಂಗೈಯಲ್ಲಿ ಸಿದ್ಧವಾಗಿರುವ ಪಾಯಸವನ್ನು ಸೇವಿಸದೆ ಮೊಣಕೈಯನ್ನು ನೆಕ್ಕಲಿಕ್ಕೆ ಹೊರಟ ಮೂರ್ಖನಂತೆ ಹಾಸ್ಯಾಸ್ಪದನಾಗುವನಲ್ಲದೆ ಅಂಥವನ ವಿಷಯದಲ್ಲಿ ಶಿವನೂ ಸಹ ವಿಮುಖನಾಗಿ ದುಃಖವನ್ನು ಕೊಡುತ್ತಾನೆ ಇದೆಲ್ಲವನ್ನೂ ತಿಳಿದು ಗುರುಪೂಜಾವಂದನಾದಿಗಳಲ್ಲಿ ಆಸಕ್ತನಾದರೆ ಶಿವನು ಆತನ ವಿಷಯದಲ್ಲಿ ಸಂತುಷ್ಟನಾಗಿ ತನ್ನಲ್ಲಿ ಸೇರಲು ಅವಕಾಶಕೊಡುತ್ತಾನೆ

ಈ ರೀತಿಯಾಗಿರುವ ವೇದಾಗಮಾದಿಗಳ ಅಭಿಪ್ರಾಯವನ್ನು ಪರಿಶೀಲಿಸಿ ತಮ್ಮ ಹಾನಿಗೆ ಕಾರಣೀಭೂತವಾದ ಗುರುದ್ರೋಹಬುದ್ಧಿಯನ್ನು ದೂರಮಾಡಿ ಗುರುಗಳಲ್ಲಿ ಶರಣಾಗತರಾಗಿ ಪೂಜಾವಂದನಾದಿಗಳಿಂದ ಗುರುಗಳನ್ನು ಸಂತೋಷಗೊಳಿಸಿ, ಆ ಗುರುಗಳ ಮೂಲಕವಾಗಿ ಪರಮಾತ್ಮನಿಗೂ ತಮಗೂ ಇರುವ ನಿತ್ಯಸಂಬಂಧವನ್ನು ತಿಳಿದುಕೊಂಡು ಬಂಧನದಿಂದ ನಿವೃತ್ತರಾಗಿ ಮಾನವಜನ್ಮವನ್ನು ಸಾರ್ಥಕಗೊಳಿಸುವುದೇ ಪ್ರತಿಯೊಬ್ಬ ಆಸ್ತಿಕನ ಕರ್ತವ್ಯವಾಗಿದೆ.

ವರ್ತಮಾನಸಂಗ್ರಹ

ಈಜಿಪ್ಟಿನಲ್ಲಿ ವ್ಯವಸಾಯಕ್ಕೆ ವಿಮಾನಗಳ ಸಹಾಯ

ಈಜಿಪ್ಟಿನಲ್ಲಿ ಹತ್ತಿಯ ಬೆಳೆಯನ್ನು ಕ್ರಿಮಿಕೀಟಗಳಿಂದ ರಕ್ಷಿಸಲು ಔಷಧವನ್ನು ಹಾಕಲು ವಿಮಾನಗಳನ್ನು ಉಪಯೋಗಿಸಲು ಏರ್ಪಾಡುಗಳನ್ನು ಮಾಡುತ್ತಿದ್ದಾರೆ

ಸಂಸ್ಥಾನದಲ್ಲಿರುವ ರೆಸಿಡೆಂಟರುಗಳು

೧೯೪೭ನೇ ಜುಲೈ ವೇಳೆಗೆ ಈಗ ಸಂಸ್ಥಾನದಲ್ಲಿರುವ ರೆಸಿಡೆಂಟರುಗಳ ಅಧಿಕಾರವು ರದ್ದಾಗುವುದೆಂದೂ, ದೊಡ್ಡ ದೊಡ್ಡ ಸಂಸ್ಥಾನಗಳ ರೆಸಿಡೆಂಟರ ಹುದ್ದೆ ೧೯೪೭ರ ಜೂನ್ ವರೆಗಿರುವುದೆಂದೂ ಹೇಳಲಾಗಿದೆ. ಚಿಕ್ಕಸಂಸ್ಥಾನಗಳ ರೆಸಿಡೆಂಟರುಗಳು ತಮ್ಮ ಹುದ್ದೆ ವಜಾ ಆದನಂತರ ದೆಹಲಿಗೆ ತೆರಳಿ ೧೯೪೮ ಜೂನ್ ವರೆಗೆ ಅಲ್ಲೇ ಇರುವರಂತೆ!

ದೊಡ್ಡ ಗ್ರಹವು ಭೂಮಿಗೆ ಬಿತ್ತು

೧೦೦೦ ಟನ್ ತೂಕದ, ಸೂರ್ಯನಿಗಿಂತಲೂ ಹೆಚ್ಚು ಪ್ರಕಾಶಮಾನವಾದ ಗ್ರಹವೊಂದು ಜಪಾನಿಗೆ ಉತ್ತರದಲ್ಲಿರುವ ಷಕಾರ್ಲಿ ದ್ವೀಪದ ಬಳಿ ಏಷ್ಯಾದ ಭೂಭಾಗದಲ್ಲಿ ಬಿದ್ದು, ಅದು ಬಿದ್ದ ಪ್ರದೇಶಗಳ ಸುತ್ತುಮುತ್ತಲಿನ ಮರಗಳು ಸುಟ್ಟುಹೋಗಿರುವವಂತೆ! ಅದು ಬಿದ್ದಕಾಲದಲ್ಲಿ ಸುತ್ತುಮುತ್ತ ೧೦೦ ಮೈಲಿಗಳ ದೂರದಲ್ಲಿ ವಾಸಿಸುವ ಜನರು ಚೂರುಗಳು ಸಿಡಿಯುವುದನ್ನೂ, ಅನಂತರ ಕಪ್ಪುಹೊಗೆಯು ಆಕಾಶವನ್ನು ತುಂಬಿದುದನ್ನೂ ಕಂಡರು ಗ್ರಹವು ಬಿದ್ದ ಸ್ಥಳದಲ್ಲಿ ೩೦ ಭಾರಿಹಳ್ಳಗಳಾಗಿವೆಯಂತೆ

ಸರ್ ಮಿರ್ಜಾರವರ ರಾಜೀನಾಮೆ

ಹೈದರಾಬಾದಿನ ಪ್ರಧಾನಿ ಸರ್ ಮಿರ್ಜಾ ಇಸ್ಮೈಲ್‌ರವರು ತಮ್ಮ ಅಧಿಕಾರಕ್ಕೆ ರಾಜಿನಾಮೆ ಕೊಟ್ಟಿರುವರಂತೆ! ರಾಜ್ಯಾಂಗ ರಚನಾ ಸಭೆ ಮತ್ತು ಭಾರತದ ಯೂನಿಯನ್‌ಗಳಿಗೆ ಹೈದರಾಬಾದ್ ಸೇರುವ ಬಗ್ಗೆ ನಿಜಾಮರಿಗೂ ಸರ್ ಮಿರ್ಜಾರವರಿಗೂ ಭಿನ್ನಾಭಿಪ್ರಾಯವುಂಟಾಗಿರುವುದೇ ಸರ್ ಮಿರ್ಜಾರವರ ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ ಬಂಗಾಳದ ಮಾಜಿ ಪ್ರಧಾನಿ ಖ್ವಾಜಾ ನಾಜಿಮುದ್ದೀನರಾಗಲಿ, ಭಾರತ ಸರ್ಕಾರದ ಮಾಜಿ ಸದಸ್ಯರಾದ ಮಲ್ಲಿಕ್ ಫಿರೋಜ್‌ಖಾನ್‌ನೂನರವರಾಗಲಿ ಹೈದರಾಬಾದ್ ಪ್ರಧಾನಿಗಳಾಗಿ ನೇಮಕವಾಗುವರೆಂದು ವದಂತಿಯಿದೆ

ಮದ್ರಾಸು ಸ್ವಾವಲಂಬನಶಕ್ತಿ ಪಡೆಯಬೇಕು

ಅಕ್ಟೋಬರ್ ತಿಂಗಳಿನ ಒಳಗಾಗಿ ೧೭ ಲಕ್ಷ ಟನ್‌ಗಳಷ್ಟು ಅಕ್ಕಿಯನ್ನು ಮದ್ರಾಸ್ ಸರ್ಕಾರವು ದೊರಕಿಸಿಕೊಳ್ಳದಿದ್ದರೆ ಪ್ರತಿಯೊಬ್ಬರಿಗೂ ೧೦ ಔನ್ಸುಗಳಷ್ಟು ಪಡಿತರ ಕೊಡಲೂ ಸಹ ಸಾಧ್ಯವಾಗದ ಸಂಭವ ಉಂಟಾಗುವುದು'

'ಕೇಂದ್ರ ಸರ್ಕಾರದ ಸಹಾಯವನ್ನು ಅಪೇಕ್ಷಿಸದೆ ತನ್ನಕಾಲ ಮೇಲೆ ತಾನು ನಿಲ್ಲುವುದನ್ನು ಕಲಿಯುವುದು ಅತ್ಯಾವಶ್ಯಕವಾಗಿದೆ

ಎಂದು ಅ॥ ಭಾ। ರೇಡಿಯೋ ಮದ್ರಾಸ್ ಕೇಂದ್ರದಿಂದ ಭಾಷಣಮಾಡುತ್ತ ಡಾ॥ ರಾಜೇಂದ್ರ ಪ್ರಸಾದರು ತಿಳಿಸಿದರು

ಆಹಾರ ವಸ್ತುಗಳ ಬೆಲೆ ಮಿತಿಮೀರಿ ಏರಿಹೋಗುವ ಸಂಭವವಿರುವುದನ್ನು ಎಚ್ಚರಿಸಿ ಡಾ॥ ಪ್ರಸಾದರು ಹೆಚ್ಚು ಆಹಾರಬೆಳೆಯುವ ಯೋಜನೆಗೆ ಮೊದಲು ಗಮನ ಕೊಡಬೇಕೆಂದು ತಿಳಿಸಿದ್ದಾರೆ

ಬ್ರಿಟಿಷ್ ಸರಕಾರದ ಕೊನೆಯ ಸಂಧಾನದ ರಹಸ್ಯ

ಭಾರತದ ರಾಜಕೀಯ ಪ್ರಮುಖ ನಾಯಕರೊಡನೆ ವೈಸರಾಯರು ನಡೆಸಬೇಕೆಂದಿದ್ದ ಸಮ್ಮೇಳನವನ್ನು ಹಠಾತ್ತನೆ ಮುಂದಕ್ಕೆ ಹಾಕಲು ಕಾಮನ್ಸ್ ಸಭೆಯಲ್ಲಿ ಎದುರುಪಕ್ಷದವರು ಪಾರ್ಲಿಮೆಂಟರಿ ಸಂಪ್ರದಾಯವನ್ನು ಅನುಸರಿಸಲೇಬೇಕೆಂದು ಒತ್ತಾಯಮಾಡಿದುದೇ ಕಾರಣವೆಂದು ಈಗ ತಿಳಿದುಬಂದಿದೆ

ಸಮ್ಮೇಳನವು ಪ್ರಾರಂಭವಾಗಲು ಕೇವಲ ಹಲವು ಗಂಟೆಗಳ ಪೂರ್ವಭಾವಿಯಾಗಿ ಲಂಡನ್–ಸಿಮ್ಲಾಗಳಿಗೆ ಟೆಲಿಗ್ರಾಂ ವ್ಯವಹಾರ ನಡೆದು ಈ ಸಮ್ಮೇಳನವನ್ನು ಮುಂದೆ ಹಾಕಬೇಕೆಂಬ ನಿರ್ಧಾರಕ್ಕೆ ಬರಲಾಯಿತು

ವೈಸ್ರಾಯರು ಈ ನಾಯಕರೊಂದಿಗೆ ನಡೆಸುವ ಸಂಧಾನವು ಭಾರತದ ಸ್ವಾತಂತ್ರ್ಯ ಸಮರ ನಾಟಕದ ಕೊನೆಯ ಅಂಕವಾಗಿದೆ ಅಂದರೆ ಭಾರತಕ್ಕೆ ಅಧಿಕಾರ ವರ್ಗಾಯಿಸಲು ತೆಗೆದುಕೊಳ್ಳಬೇಕಾದ ವಿಚಾರದಲ್ಲಿ ಚರ್ಚೆಯ ಘಟ್ಟವು ಮುಗಿದು ಒಂದು ಖಚಿತವಾದ ಕಾರ್ಯನೀತಿಯನ್ನು ಬ್ರಿಟಿಷ್ ಸರಕಾರವು ತಯಾರಿಸಿದಂತಿದೆ ಅದರ ಸ್ವರೂಪದ ವಿವರಗಳು ಈ ರೀತಿ ಇವೆಯೆಂದು ಕೆಲವು ವೃತ್ತಗಳಲ್ಲಿ ಸೂಚಿಸಲಾಗಿದೆ

ಭಾರತದ ರಾಜಕೀಯ ಪರಿಸ್ಥಿತಿಯು ಕ್ಷಣಕ್ಷಣಕ್ಕೂ ವಿಷಮಿಸುತ್ತಿರುವುದರಿಂದ ಆದಷ್ಟು ಶೀಘ್ರ ಬ್ರಿಟಿಷ್ ಪ್ರಧಾನಾಮಾತ್ಯರ ಘೋಷಣೆಯನ್ನು ಕಾರ್ಯಗತ ಮಾಡುವುದು ಅತ್ಯಂತ ವಿವೇಕವುಳ್ಳ ಕಾರ್ಯವೆಂದು ಲಾರ್ಡ್ ಮೌಂಟ್ ಬ್ಯಾಟನ್‌ರವರು ಸಲಹೆ ಮಾಡಿರುವರೆಂದು ರಾಜಕೀಯ ವೃತ್ತಗಳಲ್ಲಿ ನಂಬಲಾಗಿದೆ

ಫೆಬ್ರವರಿ ೨೦ರಲ್ಲಿ ಹೊರಟ ಮಿ|| ಅಟ್ಲೀಯವರ ಘೋಷಣೆಯಲ್ಲಿ ೧೯೪೮ರ ಜೂನ್ ತಿಂಗಳಿಗೆ ಮುಂಚಿತವಾಗಿಯೇ ಬ್ರಿಟಿಷ್ ಪ್ರಭುತ್ವವು ಮುಕ್ತಾಯವಾಗಲು ಯಾವ ಪ್ರತಿಬಂಧಕವನ್ನೂ ಸೂಚಿಸಿಲ್ಲದಿರುವುದರಿಂದ ಮೌಂಟ್ ಬೇಟನ್ನರ ಸಲಹೆಯನ್ನು ಆಚರಣೆ ತರಲು ಅಡ್ಡಿ ಆತಂಕಗಳಿಲ್ಲ

ಇಸ್ಮೆಯವರ ವರದಿಯ ರಹಸ್ಯ

ಲಾರ್ಡ್ ಇಸ್ಮೆಯವರು ಲಂಡನ್ನಿಗೆ ಕೊಂಡೊಯ್ದಿರುವ ವೈಸ್ರಾಯರ ಸಲಹೆಗಳ ರಹಸ್ಯವೀರೀತಿ ಇದೆಯೆಂದು ರಾಜಕೀಯ ವಲಯಗಳಲ್ಲಿ ಅಭಿಪ್ರಾಯಪಡಲಾಗಿದೆ ಮೊದಲನೆಯದಾಗಿ ಸರ್ವಪ್ರಯತ್ನಗಳನ್ನು ಮಾಡಿ ಕ್ಯಾಬಿನೆಟ್ ನಿಯೋಗದವರ ಯೋಜನೆಗೆ ಅಂಗೀಕಾರ ದೊರಕಿಸಿ ಭಾರತದ ಐಕ್ಯವನ್ನು ಸಾಧಿಸಬೇಕೆಂದು ವೈಸ್ರಾಯರ ಹಂಬಲ ! ದುರ್ದೈವದಿಂದ ಇದು ಸಾಧ್ಯವಿಲ್ಲದೆ ಹೋದರೆ ಭಾರತವನ್ನು ವಿಭಜಿಸುವುದು ಅನಿವಾರ್ಯ ! ಭಾರತ ವಿಭಜನೆಯ ಜೊತೆಗೆ ಬಂಗಾಳ, ಪಂಜಾಬ್‌ಗಳೂ ವಿಭಜಿಸಲ್ಪಡಬೇಕು

ಪಂಜಾಬ್ ಬಂಗಾಳಾ ವಿಭಜನೆ ಹೇಗೆ ನಡೆಯಬೇಕು

ರಾಜ್ಯಾಂಗ ಸಭೆಗೆ ಬಂಗಾಳ, ಪಂಜಾಬ್‌ಗಳಿಂದ ಬಂದಿರುವ ಸದಸ್ಯರಲ್ಲಿ ಪಾಕಿಸ್ಥಾನಕ್ಕೊಳಪಡುವ ಪ್ರದೇಶಕ್ಕೆ ಸೇರಿದ ಗುಂಪು ಪಾಕಿಸ್ಥಾನ ಪ್ರದೇಶದಿಂದ ಬೇರೆಯಾದ ಗುಂಪು ಎಂಬುದಾಗಿ ಎರಡು ವರ್ಗಗಳಾಗಬೇಕು ಪ್ರತಿ ವರ್ಗದಲ್ಲೂ ವಿಭಜನೆಯ ವಿಚಾರದಲ್ಲಿ ಮತ ತೆಗೆದುಕೊಳ್ಳಲಾಗುವುದು ಕೇಂದ್ರ ಸರಕಾರದೊಡನೆ ಸಂಪರ್ಕವಿಟ್ಟುಕೊಳ್ಳುವ ವಿಚಾರದಲ್ಲಿಯೂ "ಓಟಿಂಗ್" ನಡೆಯುವುದು

ಒಂದುವೇಳೆ ಕಾಂಗ್ರೆಸ್ ಮತ್ತು ಹಿಂದೂ ಪಕ್ಷಗಳು ವಿಭಜನೆ ಅನಗತ್ಯವೆಂದು ಭಾವಿಸಿ ಒಂದು ಸರ್ವಸಮರ್ಪಕವಾದ ಒಪ್ಪಂದಕ್ಕೆ ಬಂದರೆ ಅದನ್ನೂ ಬ್ರಿಟಿಷ್ ಸರಕಾರವು ಸ್ವಾಗತಿಸುವುದು

ಒಟ್ಟಿನಲ್ಲಿ ಭಾರತೀಯರ ಭವಿಷ್ಯವನ್ನು ರೂಪಿಸುವ ಮಹತ್ತರ ಜವಾಬ್ದಾರಿ ಭಾರತೀಯರದೇ ಹೊರತು ಬ್ರಿಟಿಷರ ಹೊಣೆಯಲ್ಲವೆಂದು ಬ್ರಿಟಿಷ್ ಸರ್ಕಾರವು ಅಭಿಪ್ರಾಯಪಡುವಂತಿದೆ

ಈ ಕ್ರಮಗಳೆಲ್ಲಾ ಮುಗಿದ ನಂತರ ಬಂಗಾಳ, ಪಂಜಾಬ್‌ಗಳಲ್ಲಿ ಎರಡೆರಡು ಮಂತ್ರಿಮಂಡಲಗಳು ರಚಿತವಾಗಿ ಒಬ್ಬರೇ ಗವರ್ನರ್ ನೇತೃತ್ವದಲ್ಲಿ ಆಡಳಿತ ನಿರ್ವಹಿಸುವುವು ಬೌಂಡರಿ ಕಮಿಷನ್ನಿನವರು ಎಲ್ಲೆಗಳನ್ನು ನಿರ್ಧರಿಸುವವರೆಗೂ ಈ ಏರ್ಪಾಡು ಮುಂದುವರಿಯುವುದು

ಅನಂತರ ಪಾಕಿಸ್ಥಾನವನ್ನು ರಚಿಸಲು ಸ್ವಂತ ಕಾರ್ಯಕ್ರಮ ಕೈಗೊಳ್ಳಲಾಗುವುದು ಭಾರತ ವಿಭಜನೆಯನ್ನು ತಪ್ಪಿಸಲು ಸಾಧ್ಯವಿಲ್ಲದಿದ್ದರೆ ಬ್ರಿಟಿಷರು ತಾವೇ ಭಾರತ ವಿಭಜನೆಯನ್ನು ಪೂರ್ತಿಗೊಳಿಸಿ ಭಾರತವನ್ನು ಬಿಡುವರಂತೆ !

ಆಜ್ಞಾ ಪತ್ರ ಮಸೂದೆ

ಬ್ರಿಟಿಷ್ ಇಂಡಿಯಾ ಪ್ರಾಂತದಲ್ಲಿರುವಂತೆ ಮೈಸೂರು ಸಂಸ್ಥಾನದಲ್ಲೂ ಹೈಕೋರ್ಟಿಗೆ ಹೇಬಿಯಸ್ ಕಾರ್ಪಸ್ ಅರ್ಜಿ ಮೇಲೆ ಆಜ್ಞಾಪತ್ರ (writ) ಕೊಡುವ ಮಸೂದೆಯೊಂದನ್ನು ಮೈಸೂರು ಸರ್ಕಾರದವರು ಶಾಸನ ಸಭೆಯಲ್ಲಿ ಮಂಡಿಸಲಿರುವರು

ಅಪಾಯಸಂಭಗಳಲ್ಲಿ ಮಾಡಬೇಕಾದ ಪ್ರಥಮಚಿಕಿತ್ಸೆಗಳು

ಕಣ್ಣಿನೊಳಗೆ ಮಳಲು ಮುಂತಾದ ಕಶ್ಮಲಗಳು ಸೇರುವುದು

ಈ ಸ್ಥಿತಿಯಲ್ಲಿ ಕಣ್ಣನ್ನು ಜ್ಜಬಾರದು ಕೆಳರೆಪ್ಪೆಯೊಳಗೆ, ನೊಣ, ಕಲ್ಲಿದ್ದಲಿನ ಚೂರು ಮುಂತಾದುವೇನಾದರೂ ಸೇರಿದ್ದರೆ, ಮೆಲ್ಲನೆ ರೆಪ್ಪೆಯನ್ನು ಕೆಳಕ್ಕೆ ಮಡಿಸಿ ಕೈಬಟ್ಟೆಯಿಂದಾಗಲಿ, ಒಂದು ಗರಿಯಿಂದಾಗಲಿ, ಅದನ್ನು ಹೊರಗಡೆಗೆ ತಳ್ಳಬಹುದು ಮೇಲಿನ ರೆಪ್ಪೆಯೊಳಗಿದ್ದಾಗ, ಅದನ್ನು ಮೇಲುಗಡೆಗೆ ಮಡಿಸಿ, ಕೆಳರೆಪ್ಪೆಯನ್ನು ಮೇಲಕ್ಕೆ ಎಳೆಯುವುದರಿಂದ ಆ ರೆಪ್ಪೆಯ ಕೂದಲೇ ಬ್ರಷ್ಷಿನಂತಾಗಿ, ಆ ಕಶ್ಮಲವನ್ನು ಹೊರಕ್ಕೆ ತಳ್ಳುವುದು ಕಣ್ಣಿನೊಳಗೆ ಬಿದ್ದ ಪದಾರ್ಥವು ಕೈವಸ್ತ್ರದಿಂದಾಗಲಿ, ಗರಿಯಿಂದಾಗಲಿ ಹೊರಕ್ಕೆ ಬಾರದಿದ್ದರೆ, ಕಣ್ಣಿಗೆ ಒಂದು ತೊಟ್ಟು ಎಣ್ಣೆಯನ್ನು ಬಿಟ್ಟು, ಮೇಲೆ ಒಟ್ಟೆಯನ್ನು ಹೊದಿಸಿ ಕಟ್ಟುಕಟ್ಟಿ, ಡಾಕ್ಟರನ್ನು ಕರೆಸಿ ತೋರಿಸಬೇಕು

ಮೈಯಲ್ಲಿ ಸಿವರು ನಾಟಿಕೊಂಡರೆ

ಚಿಮುಟದಿಂದ ಹಿಡಿದು ಅದನ್ನು ತೆಗೆಯಬಹುದು ಅದರಿಂದ ಸಾಧ್ಯವಿಲ್ಲದಿದ್ದರೆ, ಹಿಟ್ಟಿನಿಂದ ಪೌಲ್ಟೀಸು ಮಾಡಿ ಕಟ್ಟಿಡಬೇಕು ಇದರಿಂದ ಆ ಸ್ಥಳಕ್ಕೆ ಮೃದುತ್ವವು ಬಂದು, ಸಿವುರು ತಾನಾಗಿ ಸಡಿಲಿ ಆಡುವಂತಾಗುವುದು ಒಂದು ಸಣ್ಣ ಗಾಯವಾಗಿದ್ದರೂ, ಕೊಳೆಸೇರುವುದರಿಂದ ಅದು ಪ್ರಬಲವಾಗಿ, ಉರಿ, ಮತ್ತು ಬೇನೆಗಳು ಕಾಣಿಸುವುವು ಅದಕ್ಕೆ ತಣ್ಣೀರಿನ ಮತ್ತು ಬಿಸಿನೀರಿನ ಒತ್ತನೆಗಳನ್ನು ಕೊಡುತ್ತಿರಬೇಕು

(ಕಾಲಿಕ್) ಹೊಟ್ಟೆನೋವು

ಇದು ದೊಡ್ಡ ಕರುಳಿಗೆ ಸಂಬಂಧಪಟ್ಟ ಬಾಧೆ, ಬಿಸಿನೀರಿನಲ್ಲಿ ಅದ್ದಿದ ತುಪಟದಿಂದ, ಹೊಟ್ಟೆಗೆ ಒತ್ತನೆ ಕೊಟ್ಟರೆ ಬಾಧೆಯು ತಗ್ಗಬಹುದು ಮಲವು ಕಟ್ಟುವುದರಿಂದ ಹೀಗಾಗಿದ್ದ ಸಂದರ್ಭದಲ್ಲಿ, ಭೇದಿಯ ಔಷಧಿಯನ್ನು ಕುಡಿಸಬೇಕು

ವಿಷಕ್ರಿಮಿಗಳ ಕಡಿತ

ಕ್ರಿಮಿಗಳು ಕಚ್ಚಿದಾಗ ಅದರ ಮುಳ್ಳು ಚರ್ಮದಲ್ಲಿ ನಾಟಿಕೊಂಡರೆ, ಅದನ್ನು ಒಡನೆಯೇ ಕೀಳಬೇಕು ಕಣಜದ ಕಡಿತಕ್ಕೆ ವಿನೀಗರ್, ಅಥವಾ ಈರುಳ್ಳಿಯ ರಸವನ್ನು ಹಚ್ಚಬೇಕು . ದುಂಬಿಗಳ ಕಡಿತಕ್ಕೆ ಅಮೋನಿಯಾ ಅಥವಾ ಸೋಡಾವನ್ನು ಹಾಕಬೇಕು ಬೊಕ್ಕೆಗಳಿದ್ದರೆ ಶುದ್ಧವಾದ ಸೂಜಿಯಿಂದ ಆ ಗುಳ್ಳೆಯನ್ನು ಒಂದು ಪಾರ್ಶ್ವವಾಗಿ ಚರ್ಮವನ್ನು ಚುಚ್ಚಿ, ನೀರು ಹೊರಗೆ ಬರುವಂತೆ ಮಾಡಬೇಕು ಕಣ್ಣುಕುಟಿಕೆಗಳಾದರೆ, ಬಿಸಿಯಾದ ಬೋರಾಸಿಕ್ ದ್ರಾವಕದಿಂದ ಅದನ್ನು ತೊಳೆಯುತ್ತಿರಬೇಕು

ಉಗುರುಸುತ್ತು

ಉಗುರುಸುತ್ತಾಗಿದ್ದಾಗ, ಯಾವಾಗಲೂ ಪೌಲ್ಟೀಸನ್ನು ಕಟ್ಟಿದ್ದು, ತೋಳಿಗೆ ಪೂರ್ಣವಿಶ್ರಾಂತಿಯಿರುವಂತೆ ಕೈತೂಗನ್ನು ಕಟ್ಟಿಕೊಂಡಿರಬೇಕು ಉಗುರುಸುತ್ತು ಇನ್ನೂ ಒಳಕ್ಕೆ ವ್ಯಾಪಿಸದೆ ಹಾಗೆ, ಅದಕ್ಕೆ ಮೊದಲೇ ಶಸ್ತ್ರಚಿಕಿತ್ಸೆ ಮಾಡಿಸಿ, ಆಮೇಲೆ ಗಾಯಕ್ಕೆ ಶಾಖವನ್ನು ಕೊಟ್ಟು, ಬೋರಾಸಿಕ್ ಮುಲಾಮನ್ನು ಸವರುವುದೊಳ್ಳೆಯದು ತುರಿಸುವಾಗ ಕೆಟ್ಟ ಕೊಳೆಯಾಗಲಿ ಸಿವುರಾಗಲಿ ಉಗುರು ಸಂದುಗಳಲ್ಲಿ ಸೇರುವುದೇ ಈ ವ್ಯಾಧಿಗೆ ಕಾರಣವು ಡಾಕ್ಟರಿಂದ ಇದಕ್ಕೆ ಚಿಕಿತ್ಸೆಮಾಡಿಸದಿದ್ದರೆ, ಬೇರೆ ಬೆರಳುಗಳಿಗೂ ಇದರ ಸೋಂಕು ವ್ಯಾಪಿಸಿ ಹುಣ್ಣಾಗುವ ಸಂಭವವುಂಟು

ಕಿವಿಬೇನೆ

ಇದು ಶೀತದಿಂದಲೂ, ಬೇರೆ ಕೆಲವು ಕಾರಣಗಳಿಂದಲೂ ಬರುವುದು ಕಿವಿಯಹಿಂದೆ ಬಿಸಿಯಾದ ಶಾಖವನ್ನು ಕೊಡಬೇಕು ಅಥವಾ ಬಹಳ ಬಿಸಿನೀರಿನಲ್ಲಿ ಅದ್ದಿದ ಹತ್ತಿಯನ್ನು ಕಿವಿಯರಂಧ್ರಕ್ಕೆ ಇಡಬೇಕು. ಆಲಿವ್ ಎಣ್ಣೆ ಮತ್ತು ಲಾಂದಮ್ ಇವೆರಡನ್ನೂ ಸಮಭಾಗವಾಗಿ ಸೇರಿಸಿ, ಟೀಸ್ಪೂನಿನಲ್ಲಿ ಕಾಯಿಸಿ ಕಿವಿಯೊಳಕೆ ಬಿಟ್ಟು, ಬಾಯಿಗೆ ಹತ್ತಿಯನ್ನು ಮುಚ್ಚಿಟ್ಟರೂ ನೋವು ಗುಣಮಾಗುವುದು

ಕಿವಿಯಲ್ಲಿ ಕೀವು ಸುರಿಯುತ್ತಿದ್ದಾಗ, ಕಿವಿಯ ಬಾಯಿಗೆ ಹತ್ತಿಯನ್ನಿಟ್ಟು ಮುಚ್ಚುವುದು ಅಪಾಯಕರವು ಇದಕ್ಕೆ ಗೃಹವೈದ್ಯದಿಂದ ಪ್ರಯೋಜನವು ಕಡಿಮೆ ಡಾಕ್ಟರಿಗೇ ತೋರಿಸಬೇಕು ಕಿವಿಯ ಕಶ್ಮಲವನ್ನು ನೀಗಿಸುವುದಕ್ಕಾಗಿ ಕಿವಿಯೊಳಕ್ಕೆ ಸುಖೋಷ್ಣವಾದ ನೀರನ್ನು ಸಿರೆಂಜ್ ಮಾಡಬಹುದು ಈ ಕಾರ್ಯವನ್ನು ಡಾಕ್ಟರ್ ಮೂಲಕವಾಗಿಯೇ ನಡೆಸಬೇಕೇ ಹೊರತು, ಅವರವರ ಮನೆಯಲ್ಲಿ ತಮಗೆ ತೋರಿದಂತೆ ಮಾಡಿದರೆ, ಅದರಿಂದ ಕಿವಿಯ ಪರೆಗೆ ಏನಾದರೂ ಘಾತವುಂಟಾಗಿ, ಜೀವಾವಧಿ ಕಿವುಡಾಗಿರಬೇಕಾದ ಸಂಭವವುಂಟು

ಗಂಟಲುಬೇನೆ

ಇದು ಸಾಧಾರಣ ಸ್ಥಿತಿಯಲ್ಲಿದ್ದಾಗ, ತುಪಟದ ಬಟ್ಟೆಯಿಂದ ಬಿಸಿಬಿಸಿಯಾಗಿ ಶಾಖವನ್ನು ಕೊಟ್ಟರೆ ಬಹಳ ಮಟ್ಟಿಗೆ ಗುಣವನ್ನು ಕಾಣಬಹುದು ಆದರೆ ಈ ಗಂಟಲು ಬೇನೆಯೆಂಬುದು ಹಲವು ಬಗೆಯ ಕಠಿಣ ವ್ಯಾಧಿಗಳಿಗೆ ಆರಂಭಚಿಹ್ನವಾಗಿ ಕಾಣಿಸುವುದೂ ಉಂಟು ಆದುದರಿಂದ ಇದಕ್ಕೆ ಮಾಡುವ ಮೇಲ್ಕಂಡ ಚಿಕಿತ್ಸೆಯನ್ನಾದರೂ ತಾತ್ಕಾಲಿಕವಾದ ಉಪಶಮನಕ್ಕಾಗಿ ಪ್ರಥಮ ಸಹಾಯವಾಗಿ ಮಾಡಬೇಕೇಹೊರತು, ಡಾಕ್ಟರಿಗೆ ತಿಳಿಸಿಯೇ ಸರಿಯಾದ ಚಿಕಿತ್ಸೆಮಾಡಿಸಬೇಕು

ವಿವಾಹಮಹೋತ್ಸವ ಬಿಡದಿ

ಬೆಂಗಳೂರ ಡಿ| ಬಿಡದಿ ಗ್ರಾಮದಲ್ಲಿರುವ ಆಚಾರ್ಯ ತತ್ವಪ್ರಕಾಶಕ ಶ್ರೀಮಾನ್ ರೇವಣ್ಣಶಾಸ್ತ್ರಿಗಳು ತಮ್ಮ ಪುತ್ರಿ ಚಿ|| ಸೌ|| ಕಮಲಾಂಬಾ ಎಂಬ ಕನ್ಯಾರತ್ನವನ್ನು ಬೆಂಗಳೂರು ಸೂ ಶೆಟ್ಟರು ನೀಲಕಂಠಪ್ಪನವರ ಭಾವಂದಿರಾದ ಮುಳುಬಾಗಿಲು ಲೇಟ್ ಚಂದ್ರಶೇಖರಯ್ಯನವರ ತೃತೀಯಪುತ್ರ ಚಿ| ಸೋಮಶೇಖರಯ್ಯನವರಿಗೆ ಕೊಟ್ಟು ಬಿಡದಿಯಲ್ಲಿರುವ ತಮ್ಮ ರೇಣುಕ ಭವನವೆಂಬ ಗೃಹದಲ್ಲಿ ತಾ|| ೨೭-೪-೪೭ನೆಯ ಭಾನುವಾರ ದಿವಸ ವಿವಾಹಮಹೋತ್ಸವವನ್ನು ವಿಶೇಷ ವೈಭವದೊಡನೆ ನೆರವೇರಿಸಿದರು ಈ ಮಹೋತ್ಸವಕ್ಕೆ ಮೈಸೂರು ಬೆಂಗಳೂರು ತುಮಕೂರು ಮೊದಲಾದ ಡಿ|| ಗಳಿಂದ ಅನೇಕ ಜನ ಮಹನೀಯರು ಆಗಮಿಸಿದ್ದರು ವಧೂವರರಿಗೆ ಶ್ರೇಯಸ್ಸನ್ನು ಕೋರಿ ಎಲ್ಲ ಪೀಠಾಧಿಪತಿಗಳಿಂದ ಆಶೀರ್ವಾದ ಪತ್ರಗಳು ಫಲಮಂತ್ರಾಕ್ಷತೆಗಳೊಡನೆ ದಯಪಾಲಿಸಲ್ಪಟ್ಟಿದ್ದವು ಜಗದಾಚಾರ್ಯರು ನೂತನ ವಧೂವರರಿಗೆ ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀ. ಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳ ಜೋಡಿಸಲ್ಪಟ್ಟು ಪುಸ್ತಕದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಪ್ರತಿಯೊಬ್ಬರ ಮನೆಯಲ್ಲಿರತಕ್ಕ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೩—೦
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ ...	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ..	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ...	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ ...	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ..	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ..	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩. ಆಣೆ
ಪಂಚಾಚಾರ್ಯಪ್ರಕಾಶ ..	೩. ಆಣೆ
ಪಂಚಾಚಾರ ಪ್ರಕಾಶಿಕಾ ...	೩. ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ..	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ..	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ ..	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ತೆಲುಗುಲಿಪಿ)	೧|| ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ..	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) . .	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवधर्म (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल) .	८ आ.
नंदिकेश्वरकारिका (संस्कृत) ..	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಮೇ ೧೯೪೭ [ಸಂಚಿಕೆ ೫

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನ

ಜ್ಞಾನಗುರು ವಿದ್ಯಾಪೀಠ

ಈ ಸಂಸ್ಥೆಯು (೨೩-೪-೧೯೪೭) ಸರ್ವಜಿತ್ ಸಂವತ್ಸರ ವೈಶಾಖ ಶು॥ ೩ ಬುಧವಾರ ಶುಭ ಮುಹೂರ್ತದಲ್ಲಿ ರಿಜಿಸ್ಟರಾಗಿರುವುದು ಸರ್ವರಿಗೂ ಆನಂದಕರ ವಿಷಯವಾಗಿದೆ. ಇದಕ್ಕೆ ಸಂಬಂಧಪಟ್ಟ ಉದ್ದೇಶಗಳನ್ನೂ ನಿಯಮಗಳನ್ನೂ ಪುಸ್ತಕರೂಪದಿಂದ ಪ್ರತ್ಯೇಕವಾಗಿ ಪ್ರಕಟಪಡಿಸಲಾಗುವದು. ಕಾರ್ಯಪ್ರಾರಂಭಕ್ಕೆ ಇನ್ನು ಸ್ವಲ್ಪ ದಿನಗಳು ಉಳಿದಿರುವುದರಿಂದ ಆ ವಿಷಯವನ್ನು ಈ ಕೆಳಗೆ ಕಂಡಂತೆ ಸೂಕ್ಷ್ಮರೂಪದಿಂದ ವಿವರಿಸಲಾಗಿದೆ.

ಈ ಸಂಸ್ಥೆಯಲ್ಲಿ ಧಾರ್ಮಿಕ ವಿದ್ಯಾಭಾಗ, ಲೌಕಿಕ ವಿದ್ಯಾಭಾಗಗಳೆಂದು ಎರಡು ಭಾಗಗಳು ಮಾಡಲ್ಪಟ್ಟಿರುವವು. ಅದಕ್ಕನುಗುಣವಾಗಿ ಧಾರ್ಮಿಕ ವಿದ್ಯಾಫಂಡು ಲೌಕಿಕ ವಿದ್ಯಾಫಂಡು ಎಂದು ಎರಡು ಫಂಡುಗಳು ಬೇರೆ ಬೇರೆಯಾಗಿರುವವು ದಾತೃಗಳ ಇಷ್ಟಾನುಸಾರ ಹಣವನ್ನು ಸ್ವೀಕರಿಸಿ ಆಯಾ ವಿದ್ಯಾಭಾಗಗಳಿಗೆ ವಿನಿಯೋಗಿಸಲಾಗುವುದು.

ಧಾರ್ಮಿಕ ವಿದ್ಯಾಹಣದಿಂದ ಉಜ್ಜಯಿನೀ ಸಂಸ್ಥಾನ ಮಠದಲ್ಲಿಯೇ ಆ ಸಂಬಂಧ ಕರ್ತವ್ಯಗಳನ್ನು ನಡೆಯಿಸಲಾಗುವವು. ಈವರ್ಷ ಒಬ್ಬ ವೇದಪಾಠಾಧ್ಯಾಪಕರನ್ನು ನಿಯಮಿಸಿ ೨೦ ಜನ ವಿದ್ಯಾರ್ಥಿಗಳಿಗೆ ವೈದಿಕ ಶಿಕ್ಷಣವನ್ನು ಕೊಡಿಸಲಾಗುವದು.

ಲೌಕಿಕ ವಿದ್ಯಾಹಣದಿಂದ ಬಳ್ಳಾರಿ ಟೌನಿನಲ್ಲಿಯೂ ಮತ್ತು ಇದೇ ಜಿಲ್ಲಾ ಆಲೂರು ತಾಲೂಕು ಹೊಳಲಗುಂದಿ ಗ್ರಾಮದಲ್ಲಿಯೂ ೫೫ ಜನ ಸಂಸ್ಕೃತ ವಿದ್ಯಾರ್ಥಿಗಳಿಗೆ ಗೌರ್ನಮೆಂಟು ಶಿಕ್ಷಣ ಕ್ರಮದಂತೆ ಎಲಿಮೆಂಟರಿ ಶಿಕ್ಷಣವನ್ನು ಕೊಡಿಸಲಾಗುವದು.

ಸಂಸ್ಕೃತ ಪ್ರಧಾನವಾಗಿ ಕನ್ನಡ, ಇಂಗ್ಲೀಷು ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸತಕ್ಕವರು ಜೂನ್ ೩ ರೊಳಗಾಗಿ ಸಮಕ್ಷ ಆಗಲಿ, ಟಪಾಲುದ್ವಾರಾ ಆಗಲಿ ಅಪ್ಲಿಕೇಷನ್ ಹಾಕಿಕೊಳ್ಳಬೇಕು.

ವೇದಪಾಠಕ್ಕೆ ಬಳ್ಳಾರಿ ಜಿಲ್ಲೆಯೊಳಗಿನ ಮಠಾಧಿಪತಿಗಳು ಸಂಸ್ಕೃತ ಅಥವಾ ಕನ್ನಡ ಭಾಷಾ ಪಾಂಡಿತ್ಯ ಸಂಪಾದಿಸಿದವರಾಗಲಿ ಎಲಿಮೆಂಟರಿ ಶಿಕ್ಷಣದಲ್ಲಿ ತೇರ್ಗಡೆ ಹೊಂದಿದವರಾಗಲಿ ಅರ್ಜಿ ಮಾಡಿಕೊಳ್ಳಬೇಕು.

ಈ ಸಂಸ್ಥೆಗೆ ಇಂಗ್ಲೀಷು, ಕನ್ನಡ, ಆಂಧ್ರ, ಸಂಸ್ಕೃತ ಪತ್ರವ್ಯವಹಾರ ಮಾಡಬಲ್ಲ ಒಬ್ಬ ಸಮರ್ಥ ವೀರಶೈವ ಗುಮಾಸ್ತರು ಬೇಕಾಗಿದೆ. ಬರಲಪೇಕ್ಷೆ ಯುಳ್ಳವರು ಅರ್ಜಿ ಹಾಕಿಕೊಳ್ಳಬೇಕು.

ಸೆಕ್ರೆಟರಿ,
ಗಡಿಗಿ ಮರಿಸ್ವಾಮಪ್ಪ
ಗಣೇಶವೀಧಿ ಬಳ್ಳಾರಿ.

ಸ್ವೀಕಾರ

ಚಿಕ್ಕಮಗಳೂರು ತಾ॥ ಸತ್ತಿಹಳ್ಳಿಗ್ರಾಮದ ಮ॥ ರಾ॥ ಎಸ್ ಪಿ ಮಲ್ಲೇಗೌಡರ ಸಹೋದರಿ ಚಿ॥ ಸೌ॥ ಗೌರಮ್ಮನನ್ನು ಹಿರೇಕೊಳಲೆ ಗ್ರಾಮದ ಮ॥ ರಾ॥ ಉದ್ದೇಗೌಡರ ಪುತ್ರ ಚಿ॥ ಎಚ್ ಯು ನಂಜೇಗೌಡನಿಗೆ ಕೊಟ್ಟು ಇದೇ ತಿಂಗಳು ೧೩ ನೆಯ ತಾ॥ ದಿವಸ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ತೆಗೆಯಿಸಿದ **3-4-0** ಮತ್ತು ಮೂಡಗೆರೆ ತಾ। ಜಿ॥ ಹೊಸಹಳ್ಳಿ ವೀರಪ್ಪಗೌಡರ ಪುತ್ರಿ ಚಿ। ಸೌ॥ ಲೋಲಾಕ್ಷಮ್ಮನನ್ನು ಸತ್ತಿಹಳ್ಳಿ ಗ್ರಾಮದ ಚಿ। ಎಸ್ ಪಿ ಮಲ್ಲೇಗೌಡರಿಗೆ ಕೊಟ್ಟು ಇದೇ ತಿಂಗಳ ೧೫ ನೆಯ ತಾರೀಖಿನ ದಿವಸ ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ **3-4-0** ಒಟ್ಟು **6-8-0** ರೂಗಳು ಮ॥ ರಾ॥ ಕೆಳಗೂರು ಕಾಫಿಪ್ಲಾಂಟರ್ ಕೆ. ವಿ. ದೇವಪ್ಪಗೌಡರ ದ್ವಾರಾತಲ್ಪಿರುತ್ತವೆ

ಹಾಸನ ಡಿ॥ ಎಸಳೂರು ಪೇಟೆ ಹೋಬಳಿ ಚಂಗಡಿಹಳ್ಳಿ ಗ್ರಾಮದಲ್ಲಿರುವ ಶ್ರೀಮಾನ್ ಕೆ ನಂಜುಂಡಶೆಟ್ಟರು ತಮ್ಮ ಷಷ್ಟ್ಯಬ್ದ ಪೂರ್ತಿಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ಎಸಳೂರು ಪೇಟೆ ಶ್ರೀ ತೆಂಕಲುಗೋಡು ಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ॥ ಹರಪನಹಳ್ಳಿಯಲ್ಲಿರುವ ತೆಗ್ಗಿನ ಮಠದ ಶ್ರೀಪಟ್ಟದ ಚಂದ್ರಶೇಖರ ಸ್ವಾಮಿಗಳವರ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರು ಸಮರ್ಪಿಸಿದ **2** ರೂಪಾಯಿಗಳು ಯಜಮಾನ ಗೊಂಗಡಿ ಕೊಟ್ರಪ್ಪನವರ ದ್ವಾರಾತಲ್ಪಿರುತ್ತವೆ

ಗುಲ್ಬರ್ಗಾ ಜಿ॥ ಸಾವಳಗಿ ಹಿರೇಮಠದ ವೇ॥ ಘನಲಿಂಗಪ್ಪಯ್ಯನವರ ಪುತ್ರರಿಗೆ ಮಾಹೇಶ್ವರದೀಕ್ಷೆಯು ಶ್ರೀನಂದೂರ ಕೋಪಕಟ್ಟೆ ಹಿರೇಮಠದ ಶ್ರೀಚರಪಟ್ಟಾಧ್ಯಕ್ಷರ ಗುರುತ್ವದಲ್ಲಿ ನೆರವೇರಿದ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ಸಮರ್ಪಿಸಿ ಕಳಿಸಿರುತ್ತಾರೆ.

ಬೆಂಗಳೂರು ಸಿಟಿಯಲ್ಲಿರುವ ರಿ॥ ಅ॥ ಕಮಿಷನರ್ ಕೋಟೆಒಡೆಯರ್ ಮಠದ ವೇ॥ ಜಿ. ಕೆ ರುದ್ರಾರ್‍ಯರ ದ್ವಿತೀಯ ಪುತ್ರ ಚಿ॥ ರೇಣುಕಾರ್‍ಯಸ್ವಾಮಿಯು ಯಸ್. ಯಸ್ ಯಲ್ ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸಂತೋಷಕ್ಕಾಗಿ ಅವರ ಜ್ಯೇಷ್ಠ ಪುತ್ರ ಮೈಸೂರು ಅಕಾಶವಾಣಿಯಲ್ಲಿರುವ ಶ್ರೀ ಜಿ. ಕೆ. ಟಿ. ಸ್ವಾಮಿ ಇವರು ಪ್ರಭಾಪೋಷಣಕ್ಕೋಸ್ಕರ **1** ರೂ. ಯನ್ನು ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶ್ರೇಯಸ್ಸುಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಜಗದ್ಗುರು ರಂಭಾಪುರೀ ಮಹಾಪೀಠದ

ಪಟ್ಟಾಭಿಷೇಕ ಮಹೋತ್ಸವ

ಉಜ್ಜಯಿನೀ ಜಗದ್ಗುರುಗಳವರ ಆಚಾರ್ಯತ್ವದಲ್ಲಿ ಪಟ್ಟಾಂಗಭೂತವಾದ ಸಕಲಸಂಸ್ಕಾರಗಳು ವಿಧ್ಯುಕ್ತವಾಗಿ ನೆರವೇರಿದವು

ಶ್ರೀಮನ್ಮಹಾರಾಜರವರ ಧರ್ಮಸರಕಾರದ ಸಹಾಯವಿಶೇಷದಿಂದ ಆಹಾರ-ವಾಹನಾದಿ ವ್ಯವಸ್ಥೆಯು ವಿಶೇಷ ತೃಪ್ತಿಕರವಾಗಿದ್ದಿತು

ಬೆಂಗಳೂರು ನಗರದ ವೀರಗುರುಭಕ್ತರ ಅದ್ಭುತಕರ್ತೃತ್ವಶಕ್ತಿಯಿಂದ ಸಕಲವಿಧ ಏರ್ಪಾಡುಗಳೂ ಸಂತೋಷದಾಯಕಗಳಾಗಿದ್ದವು.

ವೀರಶೈವಮತವು ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾಗಿ ಅವರಿಂದಲೇ ಈವರೆಗೂ ರಕ್ಷಿಸಲ್ಪಡುತ್ತ ಬಂದಿರುವ ವಿಷಯವು ಸರ್ವಶ್ರುತವಾಗಿರುವುದಷ್ಟೆ! ಈ ಜಗದ್ಗುರು ಪಂಚಾಚಾರ್ಯರ ಪೀಠಗಳಲ್ಲಿ ಒಂದಾದ ಶ್ರೀರಂಭಾಪುರೀ ಮಹಾಪೀಠಕ್ಕೆ ಅಧಿಪತಿಗಳಾಗಿದ್ದ ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಅಸ್ವಸ್ಥತೆಯಲ್ಲಿ ತಮ್ಮ ಪಶ್ಚಾತ್ ತಮ್ಮಿಂದಲೇ ಅನುಗೃಹೀತರಾಗಿ ಪೀಠಾರೋಹಣಸಾಮರ್ಥ್ಯವನ್ನು ಪಡೆದಿರುವ ಶ್ರೀಗಂಗಾಧರಶಿವಾಚಾರ್ಯರು ತಮ್ಮ ಅಧಿಕಾರಕ್ಕೆ ಅರ್ಹರೆಂದು ನಿಶ್ಚಯಿಸಿ ಪದ್ಧತಿಯಂತೆ ಶ್ರೀಮನ್ಮಹಾರಾಜರವರ ಒಪ್ಪಿಗೆಯನ್ನು ಪಡೆದು ಶಿವೈಕ್ಯರಾದರು. ಜಗದ್ಗುರುಗಳವರ ಅಪ್ಪಣೆಯ ಪ್ರಕಾರ ನಾನಾಭಾಗದ ವೀರಶೈವಪ್ರಮುಖರ ಸಹಾಯಸಂಪತ್ತಿಯೊಡನೆ ಪೀಠಾಭಿಮಾನಿಗಳಾದ ಬೆಂಗಳೂರು ನಗರದ ವೇ|| ಯನ್. ರುದ್ರಯ್ಯನವರು ದಿವಾನ್ ಬಹದ್ದೂರ್ ರಾಜಧರ್ಮಪ್ರವೀಣ ರಿ| ಚೀಫ್ ಜಸ್ಟೀಸ್ ಪಿ ಮಹಾದೇವಯ್ಯನವರು, ಶ್ರೀಮಾನ್ ದೇಶದಶೆಟ್ಟರ ಬೆಂಗಳೂರು ಅರಳೇಪೇಟೆ ರುದ್ರಪ್ಪಶೆಟ್ಟರು, ಶ್ರೀಮಾನ್ ಗುರುಸಿದ್ದಪ್ಪಶೆಟ್ಟರು, ಶ್ರೀಮಾನ್ ಕೆಂಚಪ್ಪನವರು, ಶ್ರೀಮಾನ್ ಅತ್ತಿಬೆಲೆ ಶರಬಣ್ಣನವರು ಮುಂತಾದ ಮಹಾಶಯರು ಕಟಿಬದ್ಧರಾಗಿ ಜಗದ್ಗುರು ಪಟ್ಟಾಭಿಷೇಕ ಮಹಾಕಾರ್ಯವನ್ನು ನೆರವೇರಿಸಲು ಸ್ವಾಗತಸಮಿತಿಯನ್ನೇರ್ಪಡಿಸಿ ತನ್ಮೂಲಕ ಕಾರ್ಯವನ್ನಾರಂಭಿಸಿದರು.

ಶ್ರೀಶಿವೈಕ್ಯಜಗದ್ಗುರುಗಳವರು ತಾವು ಇರುವಾಗಲೇ ಅಪಾರವಾದ ಧನವ್ಯಯದಿಂದ ಕಟ್ಟಿಸಿದ್ದ ಮಹಾಮಠ ಪ್ರವೇಶ ಮತ್ತು ಆ ಮಹಾಗುರುಗಳವರ ಸಂಕಲ್ಪಪ್ರಕಾರ ನೂತನ ಮಠದಲ್ಲಿ ಜಗದ್ಗುರು ಲಿಂಗೋದ್ಭವ ರೇಣುಕ ಮೂರ್ತಿಸ್ಥಾಪನ, ಜಗದ್ಗುರು ಪಟ್ಟಾಭಿಷೇಕ ಈ ಮೂರು ಕಾರ್ಯಗಳಲ್ಲಿ ಶ್ರೀಮಠದ ಕೆಲಸವು ಸ್ವಲ್ಪಮಟ್ಟಿಗೆ ಉಳಿದಿದ್ದರಿಂದ ಪ್ರವೇಶ ಮತ್ತು ಪ್ರತಿಷ್ಠಾಕಾರ್ಯಗಳನ್ನು ಮುಂದೆ ಉದ್ದಿಷ್ಟದಿವಸಗಳಲ್ಲಿ ನೆರವೇರಿಸಬೇಕೆಂದು ನಿರ್ಧರಿಸಿಕೊಂಡು ಪಟ್ಟಾಭಿಷೇಕ ಕಾರ್ಯವೊಂದನ್ನೇ ಸದ್ಯಃ ನೆರವೇರಿಸಲು ಸ್ಥಿರಗೊಳಿಸಿದರು. ಮಹಾಪೀಠಗಳ ಉಜ್ವಲತೆಗೆ ತಮ್ಮ ಶರೀರವನ್ನೇ ಅಹೋರಾತ್ರ ಸವೆಸುತ್ತ ಶ್ರೀಜಗದ್ಗುರು ಪಂಚಾಚಾರ್ಯರ ಚಿತ್ಕಲೆಯಂತಿರುವ ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಶಿವೈಕ್ಯ ಜಗದ್ಗುರುಗಳ ಸಂಕಲ್ಪದಂತೆ ಶ್ರೀರೇಣುಕಭಗವತ್ಪಾದರ ಲಿಂಗೋದ್ಭವ ಮೂರ್ತಿಯನ್ನು ಶಿಲ್ಪಶಾಸ್ತ್ರವಿಶಾರದ ಶ್ರೀಸಿದ್ಧಲಿಂಗಸ್ವಾಮಿಗಳವರ ದ್ವಾರಾ ಶಿಲ್ಪಶಾಸ್ತ್ರ-ಧರ್ಮಶಾಸ್ತ್ರಾನುಸಾರವಾಗಿ ನಿರ್ಮಿಸಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡರು. ಶ್ರೀಶಿಲ್ಪಸಿದ್ಧಾಂತಿಗಳು ತಮ್ಮ ಶಿಲ್ಪಕಲೆಯು ಶ್ರೀಜಗದ್ಗುರು ರೇಣುಕಾಶ್ರಮದಲ್ಲಿ ಆಚಂದ್ರಾರ್ಕವಾಗಿ ವಿರಾಜಿಸಲೆಂಬ ಮಹೋದ್ದೇಶದಿಂದ ಆ ಲೋಕಗುರುವಿನ ಬಿಂಬವನ್ನು ಬಹು ಸುಂದರವಾಗಿ ರಚಿಸಿರುವರು. ಅಸ್ತು!

ಪಟ್ಟಾಭಿಷೇಕಕಾರ್ಯವು ಈ ಕಷ್ಟಕಾಲದಲ್ಲಿ ಶ್ರೀಜಗದಾಚಾರ್ಯರ ಕೃಪಾಬಲದಿಂದಲೇ ನೆರವೇರಬೇಕಲ್ಲದೆ ಮಾನವ ಪ್ರಯತ್ನದಿಂದಲ್ಲವೆಂಬುದನ್ನು ನಿರ್ಧರಿಸಿ ಬೆಂಗಳೂರಿನ ಮಹಾಶಯರು ಅನೇಕಭಾಗದಿಂದ ಬರುವ ಗುರುಭಕ್ತರ ಆಗಮನವನ್ನು ತಿಳಿದುಕೊಂಡು ತಕ್ಕ ಆಹಾರಪದಾರ್ಥಗಳನ್ನು ಸರ್ಕಾರದಿಂದ ಪಡೆದು ಸಿದ್ಧಗೊಳಿಸಿದರು. ಶ್ರೀಜಗದಾಚಾರ್ಯರ ಅನುಗ್ರಹದಿಂದ ಆತಿಥ್ಯಕ್ಕೆ ಸಾಕಾಗುವಷ್ಟು ಆಹಾರಪದಾರ್ಥಗಳು ಸಿದ್ಧವಾದವು. ಮಠದ ಆವರಣದಲ್ಲಿ ವಸತಿಗಾಗಿ ವಿಶಾಲವಾದ ಪರ್ಣಕುಟೀರಗಳು ರಚಿಸಲ್ಪಟ್ಟಿದ್ದವು. ಧರ್ಮಸರ್ಕಾರವೂ ಸಹ ವಾಹನಗಳ ಸೌಕರ್ಯವನ್ನು ಸಮರ್ಪಕವಾಗಿ ಒದಗಿಸಿಕೊಟ್ಟಿದ್ದಿತು. ೧೦ ಸಾವಿರದವರೆಗೆ ಜನರು ಆಗಮಿಸಿದ್ದರು. ಬಾರ್ಸಿ, ರೌಡಕುಂದಿ, ಸಾಲೂರು, ಮುಷಗಿ ಹಾವೇರಿ, ವೆಂದರಗಿ ವೈರಾಗ, ಹಿರೇಹಾಳ, ಜೋರನೂರು, ಕಂಪ್ಲಿ, ಹಾವಗುಂಪಿ, ಗುಡೇಕೋಟೆ, ಹಾ.., ಹ ಡೇ, ಕೌಲೇದುರ್ಗ, ಡಿಗ್ಗಾವಿ, ಭೂಸನೂರು, ಜೈನಾಪುರ, ಜೇವರಿಗಿ, ರಾಯಚೂರು, ಸುತಗಟ್ಟಿ, ಸಂಡೂರು, ಗುಮ್ಮಳಾಪುರ, ಕುಪ್ಪೂರು, ಕೋಟೆ, ಮಂಗಳೂರು, ಹೆಗ್ಗಡಹಳ್ಳಿ, ಆಣೂರು, ಮುಳ್ಳೂರ, ಸಿರ್ಸಿ, ನೀಲಗುಂದ, ಅಣದುರ್ಗ, ಜೆವಳಿಗಿ, ಆಳಗುಂದ, ಕಡಪಟ್ಟಿ ಮೊದಲಾದ ಪಟ್ಟಚರಾಧಿಕಾರಿಗಳೂ ಪಂ ಮುಣೂರು ಮಲ್ಲಿಕಾರ್ಜುನಶಾಸ್ತ್ರಿಗಳು, ಆಸ್ಥಾನವಿದ್ವಾನ್ ಸುಣ್ಣಕಲ್ಲ ಬಿದರಿ ಬಸವಲಿಂಗಶಾಸ್ತ್ರಿಗಳು, ಆಸ್ಥಾನವಿದ್ವಾನ್ ವಿಶ್ವನಾಥಶಾಸ್ತ್ರಿಗಳು, ಆಸ್ಥಾನವಿದ್ವಾನ್ ಎಂ ಜಿ ನಂಜುಂಡಾರಾಧ್ಯರು, ಪಂ|| ಧರ್ಮಭೂಷಣ ಹರೀಶ್ವರಶಾಸ್ತ್ರಿಗಳು, ಹೈಸ್ಕೂಲ್ ಸಂಸ್ಕೃತ ಪಂಡಿತ ಚಂದ್ರಶೇಖರಶರ್ಮರು, ಪಂ|| ಮುಕ್ತಿಮಂದಿರ ಗುರುಕುಲ ಸಂಸ್ಕೃತಶಾಲಾಧ್ಯಾಪಕ ವಿರೂಪಾಕ್ಷಶರ್ಮ, ಪೂರ್ಣವೈದಿಕ ಪಂ|| ಗುರುಲಿಂಗಶಾಸ್ತ್ರಿಗಳು, ಬೆಂಗಳೂರು ಸಿ|| ಸಿದ್ಧನಂಜಾರಾಧ್ಯರು, ಮುಕ್ತಿಮಂದಿರ ಗುರುಕುಲದ ವೈದಿಕಶಾಲಾಧ್ಯಾಪಕ ಗಂಗಾಧರಶರ್ಮ ಇತ್ಯಾದಿ ಪಂಡಿತಜನರೂ, ಕೀರ್ತನಕಂಠೀರವ ದೊಡ್ಡಬಳ್ಳಾಪುರದ ಶಿವದೇವಶಾಸ್ತ್ರಿಗಳು, ಕೀರ್ತನಕೇಸರಿ ಗುಬ್ಬಿ ಶಿವರುದ್ರಶಾಸ್ತ್ರಿಗಳು, ಬೆಳಗಾವಿ ಶ್ರೀಶೈಲನಾಥಶಾಸ್ತ್ರಿಗಳು, ಕೀರ್ತನಭೂಷಣ ಬೇಲೂರು ನಂಜುಂಡಾರಾಧ್ಯರು, ಕೀರ್ತನಕೇಸರಿ ರಾಂಬಸವಪ್ಪಶಾಸ್ತ್ರಿಗಳು ವಡಿಗೇನಹಳ್ಳಿ, ಸಂಗೀತರತ್ನಂ ಬಿಲ್ವಕೊಂಡಿಮಠದ ಪಂಚಾಕ್ಷರಗವಯಿಗಳು, ಸಂಗೀತ ವಿದ್ವಾನ್ ಕೊಟ್ಟೂರು ಕೆಂಭಾವಿಮಠದ ಚನ್ನಬಸವಶಾಸ್ತ್ರಿಗಳು, ಬಿಡದಿ ರೇವಣ್ಣಶಾಸ್ತ್ರಿಗಳು, ಧೋತ್ರಿ ಶ್ರೀ ಪಂಡಿತಾರಾಧ್ಯಪ್ರಸಾದಿಕ ನಾಟಕಮಂಡಳಿಯವರು ಆಗಮಿಸಿದ್ದರು.

ಕಡೂರು ಡಿ|| ಡೆಪ್ಯುಟಿಕಮಿಷನರ್ ಸಾಹೇಬರು, ಸಬ್ ಡಿವಿಜನ್ ಸಾಹೇಬರು, ಅಮಲ್ದಾರ್ ಸಾಹೇಬರು, ಪೋಲೀಸ್ ಇನ್ಸ್‌ಪೆಕ್ಟರರು ಮುಂತಾದ ಸರ್ಕಾರಿ ಅಧಿಕಾರಿಗಳು ಆಗಮಿಸಿದ್ದರಲ್ಲದೆ ಪೋಲೀಸ್‌ಸಿಬ್ಬಂದಿಯೂ ಬಂದಿದ್ದಿತು. ಶ್ರೀಮಂತ ಹಂದಿಗನೂರು ದೇಸಾಯಿ ಮುರಿಗಪ್ಪದೇಸಾಯರು, ರಾಜಾಪುರಮಠದ ಏಜೆಂಟ್ ಬಸವರಾಜಪ್ಪನವರು, ಮೈಸೂರುಸ್ಟೇಟ್, ಮುಂಬಯಿ, ಮದ್ರಾಸ್, ಕಾನಡಾ, ಕೊಡಗುಪ್ರಾಂತಗಳ ಅನೇಕನಗರ ಗ್ರಾಮಗಳ ಅಸಂಖ್ಯಜನರು ಆಗಮಿಸಿದ್ದರಲ್ಲದೆ ಸೌ|| ಪಾರ್ವತೀಬಾಯಿ ದೇಸಾಯಿಣಿ ಲಕ್ಷ್ಮೇಶ್ವರ ಇವರೇ ಮೊದಲಾದ ಸಾವಿರಾರು ಜನ ಸ್ತ್ರೀಯರು ಸಹ ಆಗಮಿಸಿದ್ದರು. ವೈಶಾಖ ಶು|| ೧೦ ಬುಧವಾರ ಪಟ್ಟಾಭಿಷೇಕಾಂಗಭೂತಗಳಾದ ಪೂರ್ವಕರ್ಮಗಳು ಆರಂಭಿಸಲ್ಪಟ್ಟವು. ಶು|| ೧೧ ಗುರುವಾರ ಸಕಲ ದೇವತಾಕಲಶಸ್ಥಾಪನ ಹೋಮಾದಿಗಳು ಜರಗಿದವು. ಶು|| ೧೨ ಶುಕ್ರವಾರ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಪ್ರಾತಃಕಾಲ ೮-೩೦ಕ್ಕೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ಜಗದ್ಗುರುಪಟ್ಟಬಂಧನ, ಮುದ್ರಾಧಾರಣ, ಕಿರೀಟಧಾರಣಾದಿಗಳು ನೆರವೇರಿದವು. ಸಕಲವಾದ್ಯಗಳು ಭೋರ್ಗರೆಯುತ್ತಿರಲು ನೂತನ ಜಗದ್ಗುರುಗಳವರು ಸಿಂಹಾಸನಾರೋಹಣಮಾಡಿದರು. “ಪ್ರಸನ್ನರೇಣುಕ ಗಂಗಾಧರಶಿವಾಚಾರ್ಯ”ರೆಂಬಭಿಧಾನವಿಡಲು ಸರ್ವತ್ರ ಜಯಜಯಕಾರವಾಯಿತು. ವೈದಿಕರು ವೇದಘೋಷವನ್ನು ಮಾಡಿದರು. ಸಂಗೀತರತ್ನ ಬಿಲ್ವಕೊಂಡಿಮಠದ ಪಂಚಾಕ್ಷರ ಗವಯಿಗಳು ಮನೋಹರವಾಗಿ ಸಂಗೀತಸ್ವರಸಮೇತವಾಗಿ ಸಿದ್ಧಾಂತಶಿಖಾಮಣಿಯ ಪದ್ಯಗಳನ್ನು ಪಾಡಿದರು. ಬಳಿಕ ಸ್ವಾಗತಸಮಿತಿ ಸೆಕ್ರೆಟರಿಗಳಾದ ಬೆಂಗಳೂರು ಶ್ರೀಮಾನ್ ಯನ್. ರುದ್ರಯ್ಯನವರು ಸ್ವಾಗತಭಾಷಣಮಾಡಿದರು. ಬಳಿಕ ಸ್ವಾಗತಸಂಘಾಧ್ಯಕ್ಷರಾದ ದಿವಾನ್ ಬಹದ್ದೂರ್ ರಾಜಧರ್ಮಪ್ರವೀಣ ಪಿ ಮಹಾದೇವಯ್ಯನವರು ಸಭೆಯನ್ನು ಸ್ವಾಗತಿಸುತ್ತ ಮತದ ಪ್ರಾಚೀನತ್ವ, ಮಠದ ಪ್ರಾಚೀನತ್ವ, ಶಿವೈಕ್ಯ ಜಗದ್ಗುರುಗಳವರ ತಪಃಪ್ರಭಾವ, ಪೀಠೋಜ್ವಲತೆಗೆ ಅವರ ಅಸಮಸಾಹಸ, ನೂತನ ಜಗದ್ಗುರುಗಳು ಬೆಂಗಳೂರಲ್ಲಿ ನಡೆಸಿದ ವಿಶ್ವಶಾಂತ್ಯನುಷ್ಠಾನಪ್ರಭಾವ, ತಪೋವೈಭವ ಮೊದಲಾದ ಗುಣಗಳನ್ನು ವರ್ಣಿಸಿದರು. ಬಳಿಕ ಬೆಂಗಳೂರು ಮುನಸೀಫ್ ಶ್ರೀಮಾನ್ ಚನ್ನಯ್ಯನವರು ಶ್ರೀ ಕಾಶೀ ಜಗದ್ಗುರುಗಳವರು ಮತ್ತು ಹೈದರಾಬಾದ ಸಂಸ್ಥಾನ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು ಸರ್ ಯಸ್ ಟಿ ಕಂಬಳಿಯವರು, ಮಿನಿಷ್ಟರ್ ಯಲ್ ಸಿದ್ದಪ್ಪನವರು ಮೈಸೂರು, ಮಿನಿಷ್ಟರ್ ಡಾ|| ರಾಯನ್ ಅವರು, ಮೈ|| ಮುಜರಾಯಿ ಕಮಿಷನರ್ ಸಾಹೇಬರು ಬೆಂಗಳೂರು, ಜೆ ಇಮಾಂ ರಿ| ಮಿನಿಷ್ಟರ್, ಶ್ರೀ|| ಎ ಸಿ ನಿರ್ವಾಣೇಗೌಡರು ಡೆಪ್ಯುಟಿ ಕಮಿಷನರ್ ಬೆಂಗಳೂರು, ಶ್ರೀಮಾನ್ ಬಾಬಾಸಾಹೇಬ ವಾರದ ಸೊಲ್ಲಾಪುರ, ಶ್ರೀಮಾನ್ ರಾವ್ ಬಹದ್ದೂರ್ ನಾಗಪ್ಪ ಅಬ್ದುಲ್‌ಪುರಕರ್ ಸೊಲ್ಲಾಪುರ ಮುಂತಾದವರು ಕಳುಹಿಸಿದ್ದ ಸಂದೇಶಗಳನ್ನು ಓದಿದರು. ಬಳಿಕ ಕಾಶಿ, ಕೇದಾರ, ಉಜ್ಜಯಿನಿ, ಪರ್ವತಪೀಠಗಳ ವತಿಯಿಂದ ಬಹುಬೆಲೆಯುಳ್ಳ ನೂತನಾಂಬರಗಳು ಅರ್ಪಿಸಲ್ಪಟ್ಟವು. ಕಡೂರು ಡಿ| ಶ್ರೀಮಾನ್ ಸಬ್‌ಡಿವಿಜನ್ ಸಾಹೇಬರು ನೂತನ ಜಗದ್ಗುರುಗಳವರ ಘನತೆಯನ್ನೂ ನಡೆಯುತ್ತಿರುವ ಪವಿತ್ರಕಾರ್ಯಕ್ರಮಗಳನ್ನೂ ನೋಡಿ ಪ್ರಸನ್ನಹೃದಯರಾಗಿ ಈ ಪುಣ್ಯಾಶ್ರಮದಲ್ಲಿ ನಡೆದ ಪವಿತ್ರ ಮಹೋತ್ಸವಕ್ಕೆ ನಾನು ಭಾಗಿಯಾದುದು ಸುಕೃತವಿಶೇಷವೆಂದು ತಮ್ಮ ಆನಂದವನ್ನು ವ್ಯಕ್ತಮಾಡಿದರು. ಲೋಕಸೇವಾನಿರತ ಬಳಿಸಿದ್ಧಲಿಂಗಶೆಟ್ಟರು ನೂತನ ಜಗದ್ಗುರುಗಳವರ ತಪಃಪ್ರಭಾವವನ್ನೂ ಸದುಪದೇಶಶಕ್ತಿ ಮುಂತಾದವುಗಳನ್ನೂ ಆನಂದದಿಂದ ಸ್ತುತಿಸಿದರು. ವೇ|| ಪಂ|| ಹರೀಶ್ವರಶಾಸ್ತ್ರಿಗಳವರು ಹಿಂದಿನ ಜಗದ್ಗುರುಗಳವರಲ್ಲಿ ಬಹುಕಾಲ ಏಜಂಟರಾಗಿ ಸೇವೆಯನ್ನು ಮಾಡಿದ್ದುದರಿಂದಲೂ ನೂತನ ಜಗದ್ಗುರುಗಳವರಲ್ಲಿಯೂ ವಿಶೇಷ ಅನುರಾಗಯುಕ್ತರಾಗಿದ್ದುದರಿಂದಲೂ ಅವರ ತಪಃಪ್ರಭಾವವನ್ನು ವರ್ಣಿಸಿದರು. ಬಳಿಕ ಶ್ರೀಪಟ್ಟಚರಾಧಿಕಾರಿಗಳ ಶಾಸ್ತ್ರಿಗಳ ಮತ್ತು ಅನೇಕ ಮಠಾಧೀಶರ ಭಕ್ತಸಮುದಾಯದ ಕಾಣಿಕಾಸಮರ್ಪಣವಾಗಿ ಸಭೆಯು ಮುಕ್ತಾಯವಾಯಿತು.

ಅದೇ ದಿನ ಸಾಯಂಕಾಲ ನೂತನ ಜಗದ್ಗುರುಗಳವರ ಸುವರ್ಣರಜತಾಂದೋಲಿಕೋತ್ಸವವು ಸಕಲ

ಬಿರುದಾವಳಿಗಳೊಡನೆ ವಿಜೃಂಭಣೆಯಿಂದ ನಡೆಯಿತು. ಶ್ರೀ ಜಗದ್ಗುರುಗಳವರು ಉತ್ಸವವನ್ನು ಪೂರಯಿಸಿಕೊಂಡು ಸಿಂಹಾಸನವನ್ನಾರೋಹಿಸಿದರು. ಬಳಿಕ ಭಕ್ತಮಾಹೇಶ್ವರರ ಕಾಣಿಕಾಸಮರ್ಪಣವು ನಡೆಯಿತು ಬಾಬಾಬುಡಣಗಿರಿ ದತ್ತಾತ್ರೆಯ ಪೀಠದ ಅಧಿಪತಿಗಳು ಹಿಂದಿನ ಜಗದ್ಗುರುಗಳವರ ಮತ್ತು ನೂತನ ಜಗದ್ಗುರುಗಳವರ ಮೇಲಿನ ಪ್ರೇಮವನ್ನು ವ್ಯಕ್ತಮಾಡಿದರು. ಬಾರ್ಸಿ ಪರಾಂಡಕರ್ ಸ್ವಾಮಿಗಳು ಗುರುಪೀಠಗಳಿಂದಾಗತಕ್ಕ ಪ್ರಯೋಜನದ ಬಗ್ಗೆಯೂ, ಕಲ್ಲಯ್ಯಸ್ವಾಮಿ ಕಾಸೆಗಾಂವಕರ್, ಶಂಕರಬಾಬುರಾವ್ ಕಟಪ್ ಪಂಢರಪುರ, ಭಾಗೀರಥೀಬಾಯಿ ಕಟಾಪ ಸೊಲ್ಲಾಪುರ, ಬಸವ್ವಬಾಯಿ ನಂದಿಮಠ ಸೊಲ್ಲಾಪುರ ಇವರು ಗುರುಮಹಿಮ ವಿಷಯವಾಗಿಯೂ ಭಾಷಣವನ್ನು ಮಾಡಿದರು ಬಳಿಕ ನೂತನ ಜಗದ್ಗುರುಗಳವರು ಆಚಾರ್ಯರ ಕರ್ತವ್ಯ ಕರ್ಮ ಶಿವೈಕ್ಯ ಜಗದ್ಗುರುಗಳವರ ಅವಿಚ್ಛಿನ್ನ ಪ್ರಭುತ್ವ ಮುಂತಾದವುಗಳನ್ನು ಸರಸವಾಗಿ ಉಪದೇಶಿಸಿದರು. ಇಲ್ಲಿಗೆ ಆದಿವಸದ ಸಭೆಯು ಮುಕ್ತಾಯವಾಯಿತು. ಶನಿವಾರ ಬೆಳಿಗ್ಗೆ ೮ ಘಂಟೆಗೆ ಸಭೆಯು ಪ್ರಾರಂಭವಾಯಿತು. ಅನೇಕರು ರಚಿಸಿದ್ದ ಕವನಗಳು ಓದಲ್ಪಟ್ಟವು. ಬಳಿಕ ಜಗದ್ಗುರುಗಳು ಗುರುಭಕ್ತಿಯ ಉಲ್ಲಾಸ ದಶೆಯನ್ನು ನೋಡಿ ಅದರಿಂದ ಜಗತ್ತಿಗೆ ಹೇಗೆ ಕಲ್ಯಾಣವಾಗುತ್ತದೆ ಎಂಬುದನ್ನು ಪ್ರೌಢವಾಣಿಯಿಂದ ಬೋಧಿಸಿದರು.

ಸಾಯಂಕಾಲ ಪುನಃ ದರ್ಬಾರ್ ನಡೆಯಿತು ಪಂ|| ಹರೀಶ್ವರಶಾಸ್ತ್ರಿಗಳು ಕಾರ್ಯಕ್ರಮವನ್ನು ಓದಿ ಸೂಚಿಸಿದ ಪ್ರಕಾರ ಪಂ|| ಆಸ್ಥಾನವಿದ್ವಾನ್ ಪುರಾಣರತ್ನ ಬಿದರಿ ಬಸವಲಿಂಗಶಾಸ್ತ್ರಿಗಳು ಗುರುಪ್ರಭಾವ ವಿಷಯವಾಗಿಯೂ ಪಂ|| ಮಣ್ಣೂರು ಮಲ್ಲಿಕಾರ್ಜುನಶಾಸ್ತ್ರಿಗಳು ಸೊಲ್ಲಾಪುರ ಇವರು ಗುರುಲಕ್ಷಣ ವಿಷಯವಾಗಿಯೂ ಮೈಂದರಗಿ ಸ್ವಾಮಿಗಳು ಸಮಾಜದ ಐಕ್ಯ ವಿಷಯದಲ್ಲಿಯೂ ಮುಸಗಿ ಸ್ವಾಮಿಗಳು ಸಮಾಜದ ಸುಧಾರಣಾ ವಿಷಯವಾಗಿಯೂ ಶ್ರೀ ಕೇದಾರಪೀಠದ ಕೈಲಾಸಲಿಂಗಶಿವಾಚಾರ್ಯರು ಜಗದ್ಗುರುತ್ವ ಪ್ರಭಾವ ವಿಷಯವಾಗಿಯೂ ಉಪನ್ಯಾಸ ಮಾಡಿದರು ರಾಯಚೂರು ಶಿಖರ ಮಠದ ಗುರುಲಿಂಗಶಿವಾಚಾರ್ಯರು ಜಗದ್ಗುರು ರೇಣುಕರ ಪ್ರಭಾವವನ್ನು ವರ್ಣಿಸಿದರು. ಭಾನುವಾರ ಸಾಯಂಕಾಲ ಪುನಃ ದರ್ಬಾರು ಆರಂಭವಾಯಿತು. ಶ್ರೀಪೀಠಾಧಿಪತಿಗಳು ವೇದಘೋಷದೊಡನೆ ಸಿಂಹಾಸನಾರೋಹಣ ಮಾಡಿದರು. ಸಂಗೀತದೊಡನೆ ಆಚಾರ್ಯರ ಸ್ತುತಿಯಾದ ಮೇಲೆ ಶ್ರೀ|| ಪರಾಂಡಕರ ರಾಚಲಿಂಗಸ್ವಾಮಿ ಬಾರ್ಸಿ ಇವರಿಗೆ "ಗುರುಕುಲಾಲಂಕಾರ" ವೇ|| ಪಂ|| ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳಿಗೆ "ಶಿವತತ್ವಸುಧಾಕರ" ವೇ|| ಪಂಚಾಕ್ಷರಗವಯಿಗಳಿಗೆ "ಸಂಗೀತಸಾಗರ" ವೇ|| ಕೊಟ್ಟೂರು ಕೆಂಭಾವಿಮಠದ ಸಂಗೀತವಿದ್ವಾನ್ ಚನ್ನಬಸವಶಾಸ್ತ್ರಿಗಳಿಗೆ "ಜಗದ್ಗುರು ಸಿದ್ಧಲಿಂಗಮಹಿಮಪ್ರಚಾರಕ" ಸೌ|| ಬಸವ್ವಬಾಯಿ ನಂದಿಮಠ ಇವರಿಗೆ "ಗುರುತತ್ವಚಂದ್ರಿಕಾ" ಎಂಬುದಾಗಿ ಪದವಿಗಳು ದಯಪಾಲಿಸಲ್ಪಟ್ಟವು.

ಧರ್ಮಕ್ಕೆ ಪೂರ್ಣ ಅವಕಾಶವನ್ನಿತ್ತು ಧರ್ಮದಿಂದ ರಾಜ್ಯಪರಿಪಾಲನೆಮಾಡುತ್ತಿರುವ ಶ್ರೀಮದ್ರಾಜಾಧಿರಾಜ ಶ್ರೀಜಯಚಾಮರಾಜೇಂದ್ರಒಡೆಯರ್ ಬಹದ್ದೂರ್ ಮಹಾಪ್ರಭುಗಳವರಿಗೆ ಜಯಜಯಕಾರವನ್ನು ಮಾಡಿ ಜಗದ್ಗುರು ಪಂಚಾಚಾರ್ಯನಾಮಸ್ಮರಣೆಯಿಂದ ಸಭಾಕಾರ್ಯವು ಸಮಾಪ್ತಿಗೊಂಡಿತು ಒಟ್ಟಿಗೆ ಪಟ್ಟಾಭಿಷೇಕ ಮಹೋತ್ಸವ ಮಂಗಲಕಾರ್ಯವು ಆಚಾರ್ಯಭಗವತ್ಪಾದರ ಕೃಪಾವಿಶೇಷದಿಂದ ಅಟ್ಟಹಾಸದಿಂದ ಜರಗಿತು ಎತ್ತ ನೋಡಿದರೂ ಜಗದಾಚಾರ್ಯರ ಜಯಜಯಕಾರ ಧ್ವನಿಯೇ ಕೇಳಬರುತ್ತಿದ್ದಿತು

ಶ್ರೀಮಾನ್ ಯನ್. ರುದ್ರಯ್ಯನವರು ಬೆಂಗಳೂರು, ಶ್ರೀಮಾನ್ ಮರುಳಸಿದ್ಧಯ್ಯನವರು ಬೀರೂರು, ಶ್ರೀಮಾನ್ ಶಿವಶಂಕರಯ್ಯನವರು ಅರಸೀಕೆರೆ, ಶ್ರೀಮಾನ್ ದೇಶದ ಶೆಟ್ಟರು ಅರಳೆಪೇಟೆ ರುದ್ರಪ್ಪಶೆಟ್ಟರು ಬೆಂಗಳೂರು, ಶ್ರೀಮಾನ್ ಗುರುಸಿದ್ಧಪ್ಪಶೆಟ್ಟರು ಬೆಂಗಳೂರು, ಶ್ರೀಮಾನ್ ಯಜಮಾನ್ ಕೆಂಚಪ್ಪನವರು ಬೆಂಗಳೂರು, ಶ್ರೀಮಾನ್ ಹೆಚ್. ಬಿ ರುದ್ರಪ್ಪನವರು ಬೆಂಗಳೂರು, ಇವರು ತಮ್ಮ ಶರೀರದ ವಿಶ್ರಾಂತಿಯನ್ನು ಕೋರದೆ ಅಹೋರಾತ್ರಿಗಳಲ್ಲಿಯೂ ವಿರಾಮವಿಲ್ಲದೆ ಮಹೋತ್ಸವದ ಕಾರ್ಯವನ್ನು ನೆರವೇರಿಸಿ ಕೃತಾರ್ಥರಾದರು. ಹರಲಾಪುರ ಮತ್ತೀಗಟ್ಟೆ ಭಕ್ತರು ಮುಂಚಿತವಾಗಿ ಬಂದಿದ್ದು ಅಪಾರವಾದ ಸೇವೆಯನ್ನು ಮಾಡಿದರು. ಬೀರೂರು ಶ್ರೀಮಂತ ಕಾಫಿಪ್ಲಾಂಟರ್ ಚನ್ನವೀರಪ್ಪಯ್ಯನವರು ತೊಗರಿಹಂಕಲ ಶ್ರೀಮಂತ ಮಲ್ಲೇಗೌಡರು, ಮಾಂಬಳ್ಳಿ ಸಾಹುಕಾರ್ ಬಸವಣ್ಣದೇವರು, ಲೋಕಸೇವಾನಿರತ ಬಿ. ಸಿದ್ಧಲಿಂಗಶೆಟ್ಟರು ಮುಂತಾದ ಶ್ರೀಮಂತರು ಸಭೆಗೆ ಅಲಂಕಾರವಿತ್ತು ಕಾರ್ಯಕ್ಕೆ ಉಜ್ವಲತೆಯನ್ನಿತ್ತರು. ಶ್ರೀ ಶೃಂಗೇರಿ ಮಠಾಧಿಪತಿಗಳು ಈ ಮಂಗಲ ಕಾರ್ಯಕ್ಕೆ ಸಂತೋಷದಿಂದ ಸಹಾಯವನ್ನಿತ್ತ ವಿಷಯವು ಅತ್ಯಂತ ಸ್ತೋತ್ರಾರ್ಹವಾದುದು. ಆರೋಗ್ಯರಕ್ಷಣೆಗೆ ಸ್ಯಾನಟರಿ ಇನಸ್ಪೆಕ್ಟರವರ ಆಫೀಸು, ಆಸ್ಪತ್ರೆ, ಪೋಸ್ಟ ಆಫೀಸು, ರೆವಿನ್ಯೂ ಆಫೀಸು ಇವೆಲ್ಲವೂ ಉತ್ಸವವು ಸಮಾಪ್ತಿಯಾಗುವವರೆಗೂ ಶ್ರೀಮಠದ ಆವರಣದಲ್ಲಿ ಪ್ರತಿಷ್ಠಿತಗಳಾಗಿದ್ದವು ತನುಮನೋಧನಗಳಿಂದ ಮಹಾಗುರುಸೇವೆಯನ್ನು ಮಾಡಿದ ಸಮಸ್ತ ಗುರುಭಕ್ತರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕರುಣಿಸಲೆಂದೂ ನೂತನ ಜಗದ್ಗುರುಗಳವರು ದಿಗ್ವಿಜಯವನ್ನು ಹೊಂದಲೆಂದೂ ಮಹಾಚಾರ್ಯರನ್ನು ಪ್ರಾರ್ಥಿಸುವೆನು.

ಓರ್ವ ಗುರುಭಕ್ತ

ವರ್ತಮಾನಸಂಗ್ರಹ

ಭಾರತ ವಿಭಜನೆಗೆ ಹೊಸ ಯೋಜನೆ

ಈಗಿನ ತಾತ್ಕಾಲಿಕ ಸರ್ಕಾರವನ್ನು ವಿಸರ್ಜಿಸಿ, ಗೌರ್ನರ್ ಜನರಲ್ಲರ ಕೈಕೆಳಗೆ ಎರಡು ಡೊಮಿನಿಯನ್ ಮಂತ್ರಿ ಮಂಡಲವನ್ನು ರಚಿಸಲಾಗುವುದೆಂದೂ, ಈ ಎರಡು ಮಂತ್ರಿ ಮಂಡಲಗಳೂ ಬೇರೆಯಾಗಿ, ಕಾರ್ಯ ನಡೆಸುವುವೆಂದೂ ಹೇಳಲಾಗಿದೆ

ಮುಂದಿನ ಆಕ್ಟೋಬರ್ ೩೦ ನೇ ತಾ|| ನವರೆಗೆ ಎರಡು ಮಂತ್ರಿ ಮಂಡಲಗಳಿಗೆ ಸಂಬಂಧಿಸಿದಂತಹ ವಿಷಯಗಳನ್ನು ಸಂಯುಕ್ತವಾಗಿ ನಿರ್ಧರಿಸಲಾಗುವುದೆಂದೂ ಈ ರೀತಿ ಮಾಡುವುದರಿಂದ ಮುಂದೆ ಭಾರತದ ವಿಭಜನೆಗೆ ಅನುಕೂಲವಾಗುವುದೆಂದೂ ಹೇಳಲಾಗಿದೆ

ನವಂಬರ್ ೧ ನೇ ತಾ|| ನಿಂದ ಈ ಮಂತ್ರಿ ಮಂಡಲಗಳು ಸ್ವತಂತ್ರವಾಗಿ ಆಡಳಿತ ನಡೆಸುವುವೆಂದು ನಿರೀಕ್ಷಿಸಲಾಗಿದೆ

ಧರ್ಮ ಸತ್ಯಾಗ್ರಹಿಗಳ ಬಂಧನ

ದೆಹಲಿಯಲ್ಲಿ ಸ್ವಾಮಿ ಕರಪಾತಜೀಯವರು ಬಂಧಿತರಾಗಿರುವುದನ್ನು ಪ್ರತಿಭಟಿಸಿ ವೈಸರಾಯ್ ಭವನದ ಮುಂದೆ ಸತ್ಯಾಗ್ರಹ ನಡೆಸಲು ಧರ್ಮಯುದ್ಧ ಸಮಿತಿಯ ಅಧ್ಯಕ್ಷರಾದ ಮಹಾಂತ್ ಶಂಕರಪುರಿಯವರ ಮುಖಂಡತ್ವದಲ್ಲಿ ದೆಹಲಿಗೆ ಆಗಮಿಸಿದ ಧರ್ಮವೀರ ಸತ್ಯಾಗ್ರಹಿಗಳನ್ನು ದೆಹಲಿಯಲ್ಲಿ ಬಂಧಿಸಿ, ಡಿಸ್ಟ್ರಿಕ್ಟ್ ಜೈಲಿನಲ್ಲಿಡಲಾಗಿದೆ. ಮಹಾಂತ್ ಶಂಕರಿಪುರಿಯವರು ಉಪವಾಸ ವ್ರತವನ್ನಾರಂಭಿಸಿರುವರಂತೆ! ಅವರನ್ನು ನೋಡಲು ಹೋದ ಧರ್ಮಯುದ್ಧ ಸಮಿತಿಯ ಉಪಕಾರ್ಯದರ್ಶಿ ಶ್ರೀ ಪಾಂಡೆಯವರಿಗೆ ಜೈಲಿನ ಅಧಿಕಾರಿಗಳು ಅನುಮತಿ ಕೊಡಲಿಲ್ಲವಂತೆ!

ತಿರುಪತಿ ದೇವಾಲಯಕ್ಕೆ ಸದ್ಯಃ ಅಸ್ಪೃಶ್ಯರ ಪ್ರವೇಶವಿಲ್ಲ

ಚಿತ್ತೂರಿನ ಸಬಾರ್ಡಿನೇಟ್ ಕೋರ್ಟಿನಲ್ಲಿ ತಿರುಪತಿ ದೇವಸ್ಥಾನಕ್ಕೆ ಅಸ್ಪೃಶ್ಯರ ಪ್ರವೇಶ ಪ್ರಶ್ನೆಯು ಇತ್ಯರ್ಥವಾಗುವವರೆಗೆ ಅವರನ್ನು ದೇವಾಲಯಕ್ಕೆ ಬಿಡದಂತೆ ಹಂಗಾಮಿಯಾಗಿ ಇಂಜಕ್ಷನ್ ಕೊಡಬೇಕೆಂದು ಮಹಾಮಹೋಪಾಧ್ಯಾಯ ಅನಂತ ಕೃಷ್ಣಶಾಸ್ತ್ರಿಗಳು ಹೈಕೋರ್ಟಿಗೆ ಅರ್ಜಿ ಹಾಕಿದ್ದರಷ್ಟೆ! ಅದರಂತೆ ಹೈಕೋರ್ಟ್ ನ್ಯಾಯಾಧೀಶರು ಹಂಗಾಮಿ ಇಂಜಕ್ಷನ್ ಕೊಡಲು ಆಜ್ಞೆ ಮಾಡಿರುತ್ತಾರೆ. ಅಲ್ಲದೆ ಬೇಸಿಗೆ ರಜಾ ಮುಗಿದು ಕೋರ್ಟು ಆರಂಭವಾದನಂತರ ಈ ಕೇಸನ್ನು ತೆಗೆದುಕೊಂಡು ಶೀಘ್ರದಲ್ಲಿ ಅದನ್ನು ಇತ್ಯರ್ಥ ಮಾಡುವಂತೆ ಚಿತ್ತೂರು ಸಬಾರ್ಡಿನೇಟ್ ಜಡ್ಜರಿಗೆ ಸೂಚನೆಯಿತ್ತಿದ್ದಾರೆ. ಫೆಡರಲ್ ಕೋರ್ಟಿಗೆ ಅಪೀಲು ಮಾಡಲು ತಮಗೆ ಒಂದು ಸರ್ಟಿಫಿಕೇಟನ್ನು ಕೊಡಬೇಕೆಂದು ತಿರುಪತಿ ದೇವಾಸ್ಥಾನ ಸಮಿತಿಯವರು ಹೈಕೋರ್ಟಿಗೆ ಅರ್ಜಿ ಸಲ್ಲಿಸುವದನ್ನು ನ್ಯಾಯಾಧೀಶರು ತಿರಸ್ಕರಿಸಿದ್ದಾರೆ

೩೫೦೦ ತೊಲ ಬಂಗಾರದ ಹಗಲು ದರೋಡೆ

ಕಲ್ಕತ್ತೆಯ ಸದ್ಗೃಹಸ್ಥನೊಬ್ಬನು ೩೫೦೦ ತೊಲ ಬಂಗಾರವನ್ನು ಬೊಂಬಾಯಿಂದ ಕಲ್ಕತ್ತೆಗೆ ವಿಮಾನದಲ್ಲಿ ತಂದು, ಅದನ್ನು ಕಾರಿನಲ್ಲಿ ಮನೆಗೆ ಸಾಗಿಸುತ್ತಿದ್ದಾಗ, ನಗರದ ಸಮೀಪದಲ್ಲಿ ಇನ್ನೊಂದು ಕಾರ್ ಎದುರಿಗೆ ಬಂದಿತೆಂದೂ, ಎರಡು ವಾಹನಗಳೂ ನಿಂತಾಗ ಎದುರಿಗೆ ಬಂದ ಕಾರಿನಿಂದ ಇಬ್ಬರು ಪಿಸ್ತೂಲು ಧಾರಿಗಳು ಕೆಳಗಿಳಿದು ಬಂದು ಆ ಗೃಹಸ್ಥನಿಂದ ಬಂಗಾರವಿದ್ದ ಸೂಟ್ ಕೇಸನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆಂದೂ ಹೇಳಲಾಗಿದೆ ಈ ಸಂಬಂಧದಲ್ಲಿ ಇನ್ನೂ ಯಾರನ್ನೂ ಬಂಧಿಸಿಲ್ಲ

ಲಾಹೋರಿನಲ್ಲಿ ಭಯಂಕರ ಗಲಭೆ

ಕಳೆದವಾರ ಲಾಹೋರಿನ ಪರಿಸ್ಥಿತಿ ಬಹಳ ಭೀಕರವಾಗಿತ್ತು. ಕೋಮುವಾರು ಗಲಭೆ ಏತಿಪಾರಿ ದೊಡ್ಡ ದೊಡ್ಡ ಬೀದಿಗಳೇ ಬೆಂಕಿಗೆ ಬಲಿಯಾದವು ಚಿನಿವಾರ ಕಟ್ಟೆಗಳು, ರೇಷ್ಮೆ ಅಂಗಡಿಗಳು ಎಲ್ಲಾ ಉರಿದು ಹೋದುವು ಐದು ಜನ ಇರಿತದಿಂದ ಸತ್ತರು ಬಹಳ ಮಂದಿಗೆ ಗಾಯಗಳಾದುವು. ಪೋಲೀಸಿನವರು ಗಲಭೆ ತಹಬಂದಿಗೆ ತಂದಿದ್ದಾರೆ.

ಮೈಸೂರು ದಿವಾನರು ದೆಹಲಿಗೆ ತೆರಳಲಿದ್ದಾರೆ

ಸಾರ್ವಭೌಮ ಸರ್ಕಾರದವರು ಭಾರತದ ರಾಜಕೀಯ ಪ್ರಶ್ನೆಯ ಬಗ್ಗೆ ಒಂದು ಘೋಷಣೆ ಹೊರಡಿಸುವರಷ್ಟೆ! ಆಗ್ಗೆ ನಡೆಸಬಹುದಾದ ಮಾತುಕತೆಯ ಸಮಯದಲ್ಲಿ ದೆಹಲಿಯಲ್ಲಿ ಹಾಜರಿರಬೇಕೆಂದು ಸಂಸ್ಥಾನದ ದಿವಾನರಾದ ದಿವಾನ್ ಬಹದ್ದೂರ್ ಡಾ| ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರಿಗೆ ವೈಸರಾಯರಿಂದ ಆಹ್ವಾನ ಬಂದಿದೆ

ಭಟ್ಕಳ್ ಬಂದರಿನ ಬಗ್ಗೆ ಸಮ್ಮೇಳನ

ಭಟ್ಕಲ್ ಬಂದರು ಯೋಜನೆಯ ಬಗ್ಗೆ ಚರ್ಚೆ ನಡೆಸಲು ಭಾರತದ ಸರ್ಕಾರದವರು ಭಟಕಲ್ ಬಂದರಿಗೆ ಸಂಬಂಧಪಟ್ಟ ಸರ್ಕಾರಗಳ ಪ್ರತಿನಿಧಿಗಳ ಸಮ್ಮೇಳನವೊಂದನ್ನು ಜೂನ್ ೧೦ ತಾ|| ಬೊಂಬಾಯಿಯಲ್ಲಿ ಭಾರತ ಸರ್ಕಾರದ ರೈಲ್ವೆ ಮೆಂಬರಾದ ಡಾ|| ಜಾನ್‌ಮ್ಯಾಥ್ಯೈರವರ ಅಧ್ಯಕ್ಷತೆಯಲ್ಲಿ ನಡೆಸುವರು ಈ ಸಮ್ಮೇಳನದಲ್ಲಿ ಬೊಂಬಾಯಿ ಮತ್ತು ಮೈಸೂರು ಸರ್ಕಾರಗಳ ಪ್ರತಿನಿಧಿಗಳು ಭಾಗವಹಿಸುವರು.

ಎಸ್. ಎಸ್. ಎಲ್. ಸಿ. ವರೆಗೆ ಫೀಜು ಇರಬಾರದು

ಬೆಂಗಳೂರಿನ ಸರ್ ಕೆ ಪಿ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಈ ತಿಂಗಳು ೨೪ನೆಯ ತಾರೀಖಿನಿಂದ ಪ್ರಜಾಪ್ರತಿನಿಧಿ ಸಭೆ ಸೇರುತ್ತದೆ. ಆ ಸಭೆಯಲ್ಲಿ ಅನೇಕ ಮಹತ್ವನಿರ್ಣಯಗಳು ಚರ್ಚೆಗೆ ಬರುವುವು. ಅವುಗಳಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಒಂದು ಮುಖ್ಯ ನಿರ್ಣಯವೂ ಇದೆ ಹೈಸ್ಕೂಲುಗಳಲ್ಲಿ ಈಗ ವಿದ್ಯಾರ್ಥಿಗಳಿಂದ ಫೀಜು ವಸೂಲುಮಾಡಲಾಗುತ್ತದೆ ಅದನ್ನು ತಪ್ಪಿಸಿ ಎಸ್. ಎಸ್ ಎಲ್. ಸಿ. ಯ ವರೆಗೆ ಉಚಿತ ವಿದ್ಯಾಭ್ಯಾಸವನ್ನು ಮಾಡಿಸಬೇಕು. ಎಂಬುದೇ ಈ ನಿರ್ಣಯ.

ಈಸಾರಿ ಪ್ರಜಾಪ್ರತಿನಿಧಿ ಸಭೆಗೆ ೮೮ ಅರಿಕೆಗಳೂ, ೧೬೦ ಪ್ರಶ್ನೆಗಳೂ, ೧೩೮ ನಿರ್ಣಯಗಳೂ, ೨೮ ಸರ್ಕಾರಿ ಮಸೂದೆಗಳೂ, ೩ ಖಾಸಗಿ ಮಸೂದೆಗಳೂ ಬಂದಿವೆ.

ದುಃಖವಾರ್ತೆ

ಹರಪನಹಳ್ಳಿ ಗ್ರಾಮದಲ್ಲಿ ಇದೇ ವೈಶಾಖ ಬಹುಳ ೭ ನೇ ಸೋಮವಾರ ಇಲ್ಲಿಯ ತೆಗ್ಗಿನ ಮಠದ ಪಟ್ಟಾಧಿಕಾರಿಗಳಾದ ಶ್ರೀಚಂದ್ರಶೇಖರ ಸ್ವಾಮಿಗಳವರು ಶಿವಸಾಯುಜ್ಯವನ್ನು ಪಡೆದರು ಇವರು ಮಹಾತಪಸ್ವಿಗಳಾಗಿದ್ದರು ಅಂತ್ಯಕಾಲಕ್ಕೆ ೫೫ ವರ್ಷಗಳಾಗಿದ್ದವು ಪಟ್ಟಾಧಿಕಾರವಾದ ೩೫ ವರ್ಷಗಳ ದೀರ್ಘ ಅವಧಿಯಲ್ಲಿ ಅವರು ಜರುಗಿಸಿದ ಪುಣ್ಯಕಾರ್ಯಗಳು ಅನೇಕವಾಗಿವೆ ಅವುಗಳಲ್ಲಿ ಬಡವಿದ್ಯಾರ್ಥಿಗಳಿಗೆ ಅನ್ನದಾನ ಮಾಡುತ್ತಿದ್ದುದು ಅತ್ಯಂತ ಸ್ತೋತ್ರಾರ್ಹವಾದುದು ಶ್ರೀಸ್ವಾಮಿಗಳವರು ಎಷ್ಟು ನಿತ್ರಾಣರಾಗಿದ್ದರೂ ಕೊನೆಯ ವರೆಗೆ ಒಂದು ದಿನವೂ ತಮ್ಮ ಇಷ್ಟಲಿಂಗ ಪೂಜೆಗೆ ತಿಲಮಾತ್ರವೂ ಅಡಚಣೆಯನ್ನು ತರಲಿಲ್ಲ ಇವರ ಪುಣ್ಯಪರಿಪಾಕದ ಫಲವೋ ಎಂಬಂತೆ ಉಜ್ಜಯಿನೀ ಜಗದ್ಗುರುಗಳವರು ಇವರು ಲಿಂಗೈಕ್ಯರಾಗುವ ದಿವಸ ಬೆಳಗ್ಗೆ ಅನಿರೀಕ್ಷಿತರಾಗಿ ಆಗಮಿಸಿ ದರ್ಶನವಿತ್ತುದು ಬಹು ಆಶ್ಚರ್ಯಕರವಾಗಿದೆ ಏಕೆಂದರೆ ಲಿಂಗೈಕ್ಯ ಶ್ರೀಗಳವರು 'ನನಗೆ ಗುರುದರ್ಶನವಾಗುವ ಸುಯೋಗವಿದೆ' ಎಂದು ಹಿಂದಿನ ದಿನವೇ ವ್ಯಕ್ತಪಡಿಸಿದ್ದರು ಇದು ಇವರ ತಪೋಬಲವನ್ನು ತೋರಿಸುತ್ತದೆ

ಶ್ರೀಗಳವರ ಕಳೇಬರವನ್ನು ಬಹು ಶೃಂಗಾರವಾಗಿ ರಚಿಸಲಾಗಿದ್ದ ವಿಮಾನದಲ್ಲಿ ಮೂರ್ತ ಮಾಡಿಸಿ ಊರಿನ ಮುಖ್ಯಬೀದಿಗಳಲ್ಲಿ ಮೆರವಣಿಗೆ ಮಾಡಿ ಸದರಿ ಸ್ವಾಮಿಗಳು ಬಡವಿದ್ಯಾರ್ಥಿಗಳಿಗಾಗಿ ನಡೆಯಿಸಿಕೊಂಡು ಬಂದಿದ್ದ ದಾಸೋಹ ಮಠದಲ್ಲಿ ಸಮಾಧಿಮಾಡಲಾಯಿತು ಇಂತಹ ಮಹಾವ್ಯಕ್ತಿಯನ್ನು ಕಳೆದುಕೊಂಡುದು ನಮ್ಮ ಸಮಾಜಕ್ಕೆ ಮಹಾಹಾನಿಯೆಂದು ಬಹುದುಃಖದಿಂದ ಹೇಳಬೇಕಾಗಿದೆ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ

ಯಜಮಾನ ಗೊಂಗಡಿ ಕೊಟ್ರಪ್ಪ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಶೀಲಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ ...	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ...	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ ...	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ..	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಡೆದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಮ್ಬೋಧರತ್ನಾವಳಿ ..	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ...	೧|| ರೂ.
ವೀರಶೈವರತ್ನ (೨ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ...	8 As.
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल) ..	८ आ.
नंदिकेश्वरकारिका (संस्कृत)	२ आ.

ವ್ಯವಸ್ಥಾಪಕರು—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಜೂನ್ ೧೯೪೭ [ಸಂಚಿಕೆ ೬

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ।

ಶ್ರೀ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನ

ಜ್ಞಾನಗುರು ವಿದ್ಯಾಪೀಠ

ಈ ಸಂಸ್ಥೆಯು (೨೩-೪-೧೯೪೭) ಸರ್ವಜಿತ ಸಂವತ್ಸರ ವೈಶಾಖ ಶು|| ೩ ಬುಧವಾರ ಶುಭ ಮುಹೂರ್ತದಲ್ಲಿ ರಿಜಿಸ್ಟರಾಗಿರುವುದು ಸರ್ವರಿಗೂ ಆನಂದಕರ ವಿಷಯವಾಗಿದೆ ಇದಕ್ಕೆ ಸಂಬಂಧಪಟ್ಟ ಉದ್ದೇಶಗಳನ್ನೂ ನಿಯಮಗಳನ್ನೂ ಪುಸ್ತಕರೂಪದಿಂದ ಪ್ರತ್ಯೇಕವಾಗಿ ಪ್ರಕಟಪಡಿಸಲಾಗುವದು. ಕಾರ್ಯಪ್ರಾರಂಭಕ್ಕೆ ಇನ್ನು ಸ್ವಲ್ಪ ದಿನಗಳು ಉಳಿದಿರುವುದರಿಂದ ಆ ವಿಷಯವನ್ನು ಈ ಕೆಳಗೆ ಕಂಡಂತೆ ಸೂಕ್ಷ್ಮರೂಪದಿಂದ ವಿವರಿಸಲಾಗಿದೆ.

ಈ ಸಂಸ್ಥೆಯಲ್ಲಿ ಧಾರ್ಮಿಕ ವಿದ್ಯಾಬಾಗ, ಲೌಕಿಕ ವಿದ್ಯಾಭಾಗಗಳೆಂದು ಎರಡು ಭಾಗಗಳು ಮಾಡಲ್ಪಟ್ಟಿರುವವು. ಅದಕ್ಕನುಗುಣವಾಗಿ ಧಾರ್ಮಿಕ ವಿದ್ಯಾಫಂಡು ಲೌಕಿಕ ವಿದ್ಯಾಫಂಡು ಎಂದು ಎರಡು ಫಂಡುಗಳು ಬೇರೆ ಬೇರೆಯಾಗಿರುವವು ದಾತೃಗಳ ಇಷ್ಟಾನುಸಾರ ಹಣವನ್ನು ಸ್ವೀಕರಿಸಿ ಆಯಾ ವಿದ್ಯಾಭಾಗಗಳಿಗೆ ವಿನಿಯೋಗಿಸಲಾಗುವುದು.

ಧಾರ್ಮಿಕ ವಿದ್ಯಾಹಣದಿಂದ ಉಜ್ಜಯಿನೀ ಸಂಸ್ಥಾನ ಮಠದಲ್ಲಿಯೇ ಆ ಸಂಬಂಧ ಕರ್ತವ್ಯಗಳನ್ನು ನಡೆಯಿಸಲಾಗುವದು ಈವರ್ಷ ಒಬ್ಬ ವೇದಪಾಠಾಧ್ಯಾಪಕರನ್ನು ನಿಯಮಿಸಿ ೨೦ ಜನ ವಿದ್ಯಾರ್ಥಿಗಳಿಗೆ ವೈದಿಕ ಶಿಕ್ಷಣವನ್ನು ಕೊಡಿಸಲಾಗುವದು.

ಲೌಕಿಕ ವಿದ್ಯಾಹಣದಿಂದ ಬಳ್ಳಾರಿ ಟೌನಿನಲ್ಲಿಯೂ ಮತ್ತು ಇದೇ ಜಿಲ್ಲಾ ಆಲೂರು ತಾಲೂಕು ಹೊಳಲಗುಂದಿ ಗ್ರಾಮದಲ್ಲಿಯೂ ೫೫ ಜನ ಸಂಸ್ಕೃತ ವಿದ್ಯಾರ್ಥಿಗಳಿಗೆ ಗೌರ್ನಮೆಂಟು ಶಿಕ್ಷಣ ಕ್ರಮದಂತೆ ಎಲಿಮೆಂಟರಿ ಶಿಕ್ಷಣವನ್ನು ಕೊಡಿಸಲಾಗುವದು.

ಸಂಸ್ಕೃತ ಪ್ರಧಾನವಾಗಿ ಕನ್ನಡ, ಇಂಗ್ಲೀಷು ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸತಕ್ಕವರು ಜೂನ್ ೩ ರೊಳಗಾಗಿ ಸಮಕ್ಷ ಆಗಲಿ, ಟಪಾಲುದ್ವಾರಾ ಆಗಲಿ ಅಪ್ಲಿಕೇಷನ್ ಹಾಕಿಕೊಳ್ಳಬೇಕು

ವೇದಪಾಠಕ್ಕೆ ಬಳ್ಳಾರಿ ಜಿಲ್ಲೆಯೊಳಗಿನ ಮಠಾಧಿಪತಿಗಳು ಸಂಸ್ಕೃತ ಅಥವಾ ಕನ್ನಡ ಭಾಷಾ ಪಾಂಡಿತ್ಯ ಸಂಪಾದಿಸಿದವರಾಗಲಿ ಎಲಿಮೆಂಟರಿ ಶಿಕ್ಷಣದಲ್ಲಿ ತೇರ್ಗಡೆ ಹೊಂದಿದವರಾಗಲಿ ಅರ್ಜಿ ಮಾಡಿಕೊಳ್ಳಬೇಕು.

ಈ ಸಂಸ್ಥೆಗೆ ಇಂಗ್ಲೀಷು, ಕನ್ನಡ, ಆಂಧ್ರ, ಸಂಸ್ಕೃತ ಪತ್ರವ್ಯವಹಾರ ಮಾಡಬಲ್ಲ ಒಬ್ಬ ಸಮರ್ಥ ವೀರಶೈವ ಗುಮಾಸ್ತರು ಬೇಕಾಗಿದೆ. ಬರಲಪೇಕ್ಷೆಯುಳ್ಳವರು ಅರ್ಜಿ ಹಾಕಿಕೊಳ್ಳಬೇಕು.

ಸೆಕ್ರೆಟರಿ,
ಗಡಿಗಿ ಮರಿಸ್ವಾಮಪ್ಪ,
ಗಣೇಶವೀಧಿ ಬಳ್ಳಾರಿ.

ಲಕ್ಷ್ಮೇಶ್ವರ

ಇದೇ ಜ್ಯೇಷ್ಠ ಶುದ್ಧ ೧ ಬುಧವಾರ ಲಕ್ಷ್ಮೇಶ್ವರದಲ್ಲಿರುವ ಮೈಲಾರಲಿಂಗನ ದೇವಸ್ಥಾನದಲ್ಲಿ ಮೇಲ್ಕಂಡ ಜಯಂತೀಮಹೋತ್ಸವವು ಸದರೀ ಬಳಗದ ಅಧ್ಯಕ್ಷೆಯರಾದ ಸೌ|| ಪಾರ್ವತೀಬಾಯಿ ದೇಸಾಯಿಣಿ ಇವರ ನೇತೃತ್ವದಲ್ಲಿ ಸ್ತ್ರೀಸಮಾಜವು ಕೇರಿತು ಮಧ್ಯಾಹ್ನ ೩ ಘಂಟೆಗೆ ಧ್ವಜಾರೋಹಣವು ಮಾಡಲ್ಪಟ್ಟಿತು ಆಗ್ಯೆ ವೇ। ಮೃತ್ಯುಂಜಯ ಶಾಸ್ತ್ರಿಗಳು ಬೆಳವಣಿಕಿ ಇವರು ಪರಿಜಯಂತಿಯ ಬಗ್ಗೆ ಮನೋಹರವಾದ ಕೀರ್ತನೆವನ್ನು ಮಾಡಿದರು ಶುದ್ಧ ೨ ಗುರುವಾರ ದಿವಸ ಸದರಿ ಪಾರ್ವತೀಬಾಯಿಯವರ ಅಧ್ಯಕ್ಷತೆಯಲ್ಲಿ ಸೌ|| ಶಿವಗಂಗವ್ವ ಹಿರೇಮಠ ಸೌ। ಚನ್ನವ್ವಗಡ್ಡದದೇವರ ಮಠ ಸೌ|| ಗದಿಗವ್ವ ಪುರಾಣೀಕಮಠ ಸೌ|| ಶಾಂತಾಬಾಯಿ ಪಾಲೇವಾಡೀಮಠ ಶ್ರೀಮತಿ ಶಾಂತಮ್ಮ ಬಾಳೇಹಳ್ಳಿಮಠ ಸೌ|| ನೀಲವ್ವಮಹಾಜನಶೆಟ್ಟರ ಸೌ|| ಅಡಿವಕ್ಕ ಕೊಟಗಿ ಇವರೇ ಮೊದಲಾದ ಸಾವಿರಾರು ಜನ ಸ್ತ್ರೀಯರ ಸಭೆ ಸೇರಿತು ನೊದಲು ಕುಮಾರಿ ಸಿದ್ಧಲಿಂಗವ್ವ ಮಹಾಜನ ಶೆಟ್ಟರ ಕು|| ದಾನವ್ವ ಸಾಂಗಲಿ ಕು|| ಲಕ್ಷ್ಮೀಬಾಯಿ ದೇಸಾಯಿ ಕು|| ಲೀಲಾಬಾಯಿಗೋಸಾವಿ ಈ ಬಾಲಿಕೆಯರು ಪತಿಭಕ್ತಿ ಜಗಜ್ಜನನಿ ಪಾರ್ವತೀಭಕ್ತಿ ಲಿಂಗಪೂಜೆ ಭಸ್ಮಧಾರಣ ಇತ್ಯಾದಿ ವಿಷಯಗಳ ಮೇಲೆ ಸಂವಾದರೂಪವಾಗಿ ಮನೋಹರಗಳಾದ ಭಾಷಣಗಳನ್ನು ಮಾಡಿದರು ರಾತ್ರಿ ೮ ಘಂಟೆಗೆ ದೇಸಾಯಿಣೀ ಸೌ|| ಪಾರ್ವತಿಬಾಯಿಯವರ ಪುತ್ರಿ ಕುಮಾರೀ ತಾರಾಬಾಯಿಯವರು ರಚಿಸಿದ ರೇಣುಕಾಂಬೆಯೆಂಬ ನಾಟಕವನ್ನು ಮೇಲ್ಕಂಡ ಬಾಲಿಕೆಯರು ಬಹುಮನೋಹರವಾಗಿ ಅಭಿನಯಿಸಿದರು ಸದರಿ ಬಾಲಿಕೆಯರಿಗೆ ಅಧ್ಯಕ್ಷೆಯರ ಹಸ್ತದಿಂದ ಬಹುಮಾನವು ಕೊಡಲ್ಪಟ್ಟಿತು ಜ್ಯೇಷ್ಠ ಶು|| ೩ ಶುಕ್ರವಾರ ದಿವಸ ಸಮಸ್ತ ಸ್ತ್ರೀಯರು ಸ್ನಾನಮಾಡಿಕೊಂಡು ಬಂದು ಶ್ರೀರೇಣುಕರಮೂರ್ತಿಗೂ ತಾಯಿ ಪಾರ್ವತೀದೇವಿಯ ಮೂರ್ತಿಗೂ ವಿಧ್ಯುಕ್ತವಾಗಿ ಪೂಜಾದಿಗಳನ್ನು ನೆರವೇರಿಸಿದರು ಸಾಯಂಕಾಲ ೭ ಘಂಟೆಗೆ ನಗರದ ಮುಖ್ಯ ಬೀದಿಗಳಲ್ಲಿ ಜಯಂತೀ ಮಹೋತ್ಸವವು ವಾದ್ಯ ವೈಭವದೊಡನೆ ಬಹು ಅಟ್ಟಹಾಸದಿಂದ ನೆರವೇರಿತು ಉತ್ಸವವು ಮೈಲಾರಲಿಂಗನ ದೇವಸ್ಥಾನಕ್ಕೆ ಬಂದಮೇಲೆ ವೇ|| ಮೃತ್ಯುಂಜಯಶಾಸ್ತ್ರಿಗಳು ಪಾರ್ವತೀದೇವಿಯ ಅವತಾರದ ಬಗ್ಗೆ ದಿವ್ಯವಾದ ಭಾಷಣವನ್ನು ಮಾಡಿದರು ಆಮೇಲೆ ಮ|| ರಾ|| ಶೆಟ್ಟರ ವಿರೂಪಾಕ್ಷಪ್ಪನವರು ಪತಿಭಕ್ತಿವಿಷಯವಾಗಿ ಹೃದಯಂಗಮವಾದ ಭಾಷಣವನ್ನು ಮಾಡಿದರು ಜ್ಯೇಷ್ಠ ಶುದ್ಧ ೪ ಶನಿವಾರ ದಿವಸ ಸದರಿಶಾಸ್ತ್ರಿಗಳು ಪತಿವ್ರತಾ ಮಹಿಮೆ ಅನ್ನದಾನ ಮಹಿಮೆಯನ್ನು ಕುರಿತು ಭಕ್ತಿ ಹುಟ್ಟುವಂತೆ ಸರಸವಾಗಿ ಕೀರ್ತನವನ್ನು ಮಾಡಿದರು ಬಳಿಕ ಪಾರ್ವತೀಮಾತೆಯ ಜಯಜಯಕಾರದೊಡನೆ ಸಭೆಯು ಸಮಾಪ್ತಿಯನ್ನು ಹೊಂದಿತು

ಬಸಪ್ಪ ಕಲ್ಲೂರ

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರ ಭಾಷಣ

ದಿವಾನ್ ರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರ್, ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನದಲ್ಲಿ ಭಾಷಣಮಾಡುತ್ತಾ ಈರೀತಿ ತಿಳಿಸಿದರು

" ಜೂನ್ ೩ ನೇ ತಾ|| ಸಮ್ರಾಟ್ ಸರ್ಕಾರದವರ ಪ್ರಕಟನೆ ಹೊರಡಿಸುವವರೆಗೆ ಮೈಸೂರು ರಾಜ್ಯಾಂಗ ಸಭೆಗೆ ಹೋಗುವ ವಿಚಾರವಾಗಿ ಯಾವ ತೀರ್ಮಾನಕ್ಕೂ ಬರದೆ ಸುಮ್ಮನಿರುವುದು ಅಗತ್ಯವಾಗಿದೆ ' ಎಂದರು

ಈ ವರ್ಷಾರಂಭದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳಿಗೆ ದಯಪಾಲಿಸಿದ ಕೃಪಾಪೂರಿತ ಸಂದೇಶವನ್ನು ದಿವಾನರು ಸಭಿಕರ ಗಮನಕ್ಕೆ ತಂದು ಈರೀತಿ ನುಡಿದರು

" ಆ ಸಂದೇಶದಲ್ಲಿ ಶ್ರೀಮನ್ಮಹಾರಾಜರವರು ನನಗೆ ಮಾಡಿರುವ ಅಪ್ಪಣೆಯನ್ನು ನಾನು ಗಮನಕ್ಕೆ ಹೃತ್ಪೂರ್ವಕವಾಗಿ ತಂದುಕೊಂಡಿದ್ದೇನೆ ನನ್ನಮೇಲೆ ಬಿದ್ದಿರುವ ಅಗಾಧವಾದ ಕಾರ್ಯವನ್ನು ನೆರವೇರಿಸಲು ಪ್ರಜಾಸಮುದಾಯದ ಎಲ್ಲ ಗುಂಪುಗಳವರ ಸಹಕಾರವನ್ನು ಕೋರಿದ್ದೇನೆ ಎಲ್ಲ ಗುಂಪುಗಳಿಂದ ಹೃತ್ಪೂರ್ವಕವಾದ ಸ್ವಾಗತ ದೊರಕುವ ಸೂಚನೆಗಳು ನನಗೆ ಕಾಣಬಂದಿದೆ ನಾನು ಶ್ರೀಮನ್ಮಹಾರಾಜರ ಘನ ವಿಮರ್ಶೆಗೆ ಕಟ್ಟಕಡೆಯದಾಗಿ ಒಪ್ಪಿಸಲಿರುವ ರಾಜ್ಯಾಂಗ ಸಲಹೆಗಳಿಗೆ ಜನರಿಂದ ಆದಷ್ಟು ಹೆಚ್ಚಿನ ಒಪ್ಪಿಗೆ ಪಡೆಯಬೇಕೆಂಬುದು ನನ್ನ ಹಂಬಲ

" ಈ ವಿಚಾರದಲ್ಲಿ ಆಗಿರುವ ಪ್ರಗತಿ ಕಂಡು ಹಲವು ಕ್ಷೇತ್ರಗಳಲ್ಲಿ ಕೊಂಚ ಅಸಹನೆ ತೋರಿಬರುತ್ತಿದೆ ನಾನು ಯಾವುದೇ ವಿಧದಲ್ಲೂ ವಿಳಂಬಕಾರಕ ಮನೋವೃತ್ತಿಯನ್ನು ತೋರಿಸುವುದಿಲ್ಲವೆಂದು ಹಲವು ವೇಳೆ ಒತ್ತಿ ಹೇಳಿದ್ದೇನೆ ಅಂತಹ ಮನೋವೃತ್ತಿಯನ್ನು ತೋರಿಸಿ ತಾನೇ ಏನು ಪ್ರಯೋಜನ? ಈ ಸಲಹೆಗಳನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸುವ ಕಾರ್ಯವನ್ನು ಎಲ್ಲಿಯವರೆಗೆ ನಿಧಾನಿಸಲು ಸಾಧ್ಯ? ಆದರೆ ಕಳೆದ ನಾಲ್ಕು ತಿಂಗಳಿಂದ ನನ್ನ ಕಾಲವೂ ಶಕ್ತಿಯೂ ಅನೇಕ ಬೇರೆ ಬೇರೆ ಕಾರ್ಯಗಳಿಗಾಗಿ ವಿನಿಯೋಗವಾಗಬೇಕಾಯಿತೆಂಬುದನ್ನು ನೀವು ಗಮನಿಸಬೇಕು. ಆ ಕೆಲಸಗಳನ್ನು ನಾನು ನಿರ್ವಹಿಸದೆ ಬಿಡಲು ಸಾಧ್ಯವಿರಲಿಲ್ಲ

ಪ್ರತಿನಿಧಿಗಳೊಡನೆ ಚರ್ಚೆ

ಗಿಡವು ಬೆಳೆಯುತ್ತಿದೆಯೋ ಹೇಗೆಂಬುದನ್ನು ನೋಡಲು ಅದನ್ನು ದಿನ ಬಿಟ್ಟು ದಿನ ಬೇರು ಸಹಿತ ಕಿತ್ತು ನೋಡಲು ಸಾಧ್ಯವೇ? ಇಲ್ಲ ರಾಜ್ಯಾಂಗ ವಿಚಾರವೂ ಅಷ್ಟೆ! ಯೋಗ್ಯ ಆಡಳಿತ ವ್ಯವಸ್ಥೆಯೊಂದನ್ನು ಸಿದ್ಧಮಾಡಬೇಕಾಗಿದ್ದರೆ ಕೂಲಂಕಷವಾದ, ಗಾಢವಾದ ವಿಮರ್ಶೆ ಅಗತ್ಯ. ಪ್ರಜಾಪ್ರತಿನಿಧಿಸಭೆಗಳೊಡನೆ ಗುಂಪಾಗಿಯೂ, ವೈಯಕ್ತಿಕವಾಗಿಯೂ ನಾನು ಈ ವಿಚಾರವನ್ನು ಚರ್ಚಿಸಿದ್ದೇನೆ. ಬೇಗನೆ ಈ ಚರ್ಚೆಗಳನ್ನು ಮುಗಿಸುವ ಯೋಚನೆ ಇದೆ. ಬೇರೆ ಬೇರೆ ಅಭಿಪ್ರಾಯಗಳನ್ನು ಪರಿಶೀಲಿಸಿ, ಮೂಲಭೂತವೆನಿಸಿದ ವಿಚಾರಗಳಲ್ಲಾದರೂ ಆದಷ್ಟು ಹೆಚ್ಚು ಪ್ರಮಾಣದ ಒಮ್ಮತವನ್ನು ಸ್ಥಾಪಿಸಲು ಸಣ್ಣ ಸಮಿತಿಯೊಂದನ್ನು ನೇಮಿಸುವುದು ಪ್ರಯೋಜನಕಾರಿಯೆಂದು ನಾನು ನಂಬಿದ್ದೇನೆ ಸಮಾಲೋಚನೆಗಾಗಿ ಸಮಿತಿಯು ಸಭೆ ಸೇರುವಾಗ ಅದರಲ್ಲಿ ನಾನು ಹಾಜರಿದ್ದು ರಾಜ್ಯಾಂಗ ವ್ಯವಸ್ಥೆಯ ಮೂಲಭೂತ ವಿಚಾರಗಳಲ್ಲಿ ಆದಷ್ಟು ಹೆಚ್ಚಿನ ಒಮ್ಮತ ಬರುವಂತೆ ಮಾಡಲು ಯತ್ನಿಸಬೇಕೆಂಬುದು ನನ್ನ ಇಚ್ಛೆ. ಈ ಕಾರ್ಯದಲ್ಲಿ ಇದುವರೆಗೆ ದೊರೆತಿರುವ ಸಹಕಾರವೇ ಇನ್ನು ಮುಂದೆಯೂ ದೊರೆತೀತೆಂದು ನಂಬಿದ್ದೇನೆ.

ರಾಜ್ಯಾಂಗ ಸಭೆ

ಹಲವು ಕ್ಷೇತ್ರಗಳಲ್ಲಿ ತೀವ್ರ ಚಳುವಳಿಗೆ ಒಳಗಾಗಿರುವ ಮತ್ತೊಂದು ವಿಚಾರವೆಂದರೆ ರಾಜ್ಯಾಂಗಸಭೆಗೆ ಮೈಸೂರು ಪ್ರವೇಶಿಸಬೇಕೆಂಬುದು ಮೈಸೂರು ಬ್ರಿಟಿಷ್ ಮಂತ್ರಿನಿಯೋಗಿಗಳ ಯೋಜನೆಯನ್ನು ಅಂಗೀಕರಿಸಿದೆಯೆಂದೂ, ರಾಜ್ಯಾಂಗಸಭೆಗೆ ಸೇರಲು ಅದು ಇಷ್ಟಪಡುವುದೆಂದೂ, ಮೈಸೂರಿನ ಪ್ರತಿನಿಧಿಗಳ ನಾಯಕತ್ವ ವಹಿಸುವಂತೆ ಶ್ರೀಮನ್ಮಹಾರಾಜರವರು ನನಗೆ ಅಪ್ಪಣೆ ಮಾಡಿದ್ದಾರೆಂದೂ ನಾನು ದಸರಾ ಅಧಿವೇಶನದಲ್ಲಿಯೇ ತಿಳಿಸಿದೆನು. ಅನಂತರ ಸಂಸ್ಥಾನಗಳ ಸಂಧಾನ ಸಮಿತಿ ಸಭೆಯಲ್ಲಿ ನಾನು ಭಾಗವಹಿಸಿದೆ. ಫೆಬ್ರವರಿ ೨೦ ನೇ ತಾ|| ಸಮ್ರಾಟ್ ಸರ್ಕಾರ ಹೊರಡಿಸಿದ ಪ್ರಕಟನೆಯಿಂದ ಮತ್ತು ಇತ್ತೀಚೆಗೆ ತಲೆ ಹಾಕಿದ ಅನಿಶ್ಚಿತ ಪರಿಸ್ಥಿತಿಯಿಂದ ಘಟನಾವಳಿಗಳ ರೀತಿಯೇ ಬದಲಾಯಿಸಿಹೋಯಿತು ಈಗ ಇನ್ನೊಂದು ವಾರದೊಳಗಾಗಿ ಅತಿ ಮುಖ್ಯವಾದ ಮತ್ತೊಂದು ಪ್ರಕಟನೆ ಹೊರಬೀಳಲಿದೆ ಬ್ರಿಟಿಷ್ ಮಂತ್ರಿನಿಯೋಗಿಗಳ ಯೋಜನೆಯ ಮೂಲವನ್ನೇ ಅದು ಬದಲಾಯಿಸಬಹುದು. ಬ್ರಿಟಿಷ್ ಮಂತ್ರಿನಿಯೋಗಿಗಳ ಯೋಜನೆಯ ಪ್ರಕಾರ ಮೈಸೂರು ಸಂಸ್ಥಾನದ ನೀತಿಯನ್ನು ನಾನು ಸ್ಪಷ್ಟಪಡಿಸಿದ್ದೇನೆ ಈ ವಿಚಾರದಲ್ಲಿ ಮತ್ತೇನು ಹೇಳಬೇಕಾಗಿದ್ದರೂ ಜೂನ್ ೩ ರ ಪ್ರಕಟನೆಯನ್ನು ಕಾದುನೋಡುವುದೇ ವಿವೇಕ

ಸಂಸ್ಥಾನದ ಹಕ್ಕು ಬಾಧ್ಯತೆಗಳು

' ಇನ್ನೊಂದು ಮುಖ್ಯ ವಿಚಾರದ ಕಡೆಗೆ ನಾನು ಈ ಸಭಾ ಸದಸ್ಯರ ಮತ್ತು ಮಾನ್ಯ ಸಾರ್ವಜನಿಕರ ಗಮನವನ್ನು ಸೆಳೆಯಲು ಬಯಸುತ್ತೇನೆ

ಮೈಸೂರು ರಾಜ್ಯಾಂಗ ಸಭೆಗೆ ಸೇರಬೇಕೆಂಬ ಬಗ್ಗೆ ಅಪಾರ ಸಾಹಿತ್ಯ ಹೊರಬಿದ್ದಿದೆಯಾದರೂ, ಮುಂದಿನ ಫೆಡರೇಷನ್ ವ್ಯವಸ್ಥೆಯಲ್ಲಿ ಮೈಸೂರಿನ ಸ್ಥಾನಮಾನವೇನೆಂಬುದನ್ನು ಕುರಿತು ಸಾರ್ವಜನಿಕರಲ್ಲಿ ಹೆಚ್ಚು ಚರ್ಚೆ ನಡೆಯದಿರುವುದನ್ನು ಕಂಡು ನನಗೆ ಆಶ್ಚರ್ಯವಾಗಿದೆ ರಾಜ್ಯಾಂಗ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಯಾವ ನೀತಿಯನ್ನು ಅನುಸರಿಸಬೇಕೆಂಬುದು ಮೊದಲು ನಿರ್ಧಾರವಾಗಬೇಕು ಸಂಸ್ಥಾನಗಳು ಯಾವ ಜವಾಬ್ದಾರಿಗಳನ್ನು ಹೊರಬೇಕು, ಅದರ ಸ್ಥಾನಮಾನಗಳೇನು, ರಕ್ಷಿಸಲ್ಪಡಬೇಕಾದ ಹಕ್ಕು ಬಾಧ್ಯತೆಗಳಾವುವು, ಸಂಸ್ಥಾನಕ್ಕೆ ಯಾವ ಬಗೆಯ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು ಇವೇ ಮುಂತಾದವುಗಳನ್ನು ಕುರಿತು ನಿರ್ಧಾರವಾದ ಅಭಿಪ್ರಾಯ ರೂಪುಗೊಳ್ಳಬೇಕಾದದ್ದು ಅಗತ್ಯ ಈ ಅಂಶಗಳು ತೃಪ್ತಿಕರವಾಗಿದ್ದರೇನೇ ಸಂಸ್ಥಾನವು ಯೂನಿಯನ್ನಿಗೆ ಸೇರಬೇಕಾಗಿದ್ದರುವುದು ಆದ್ದರಿಂದ ಸಾರ್ವಜನಿಕರು ಈ ವಿಚಾರವನ್ನು ತೀವ್ರವಾಗಿ ಪರಿಗಣಿಸುವರೆಂದೂ ಮೈಸೂರಿನ ಪ್ರತಿನಿಧಿಗಳು ರಾಜ್ಯಾಂಗ ಸಭೆಯನ್ನು ಪ್ರವೇಶಿಸಿದಾಗ ಸಾರ್ವಜನಿಕಾಭಿಪ್ರಾಯದ ಬೆಂಬಲದಿಂದ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಂತಾದೀತೆಂದೂ ನಾನು ಭಾವಿಸಿದ್ದೇನೆ " ಎಂದರು

ಆದಾಯವ್ಯಯದ ಅಂದಾಜು

' ಈ ವರುಷದ ವರಮಾನವು ಹನ್ನೊಂದು ಕೋಟಿ ರೂಪಾಯಿಗಳಿಗೇರಿದೆ ಮೈಸೂರಿನ ಇತಿಹಾಸದಲ್ಲೇ ಇದು ಅಸದೃಶವಾದ ಉತ್ಪತ್ತಿ. ಖರ್ಚಿನ ಬಾಬುಗಳೂ ಉತ್ಪತ್ತಿಗನುಸಾರವಾಗಿ ಹೆಚ್ಚಿವೆ ಈ ಸಾಲಿನಲ್ಲಿ ಎರಡು ಲಕ್ಷ ರೂ ಗಳ ಉಳಿತಾಯವಾಯಿತು. '

ಎಂಬುದಾಗಿ ಆಯವ್ಯಯದ ಚಿತ್ರವನ್ನು ಸಭಿಕರ ಮುಂದಿಟ್ಟರು

ಆಹಾರ ಶೇಖರಣೆಯೇ ಅಧಿಕ ವ್ಯಯಕ್ಕೆ ಕಾರಣ

' ಖರ್ಚಿನ ಬಾಬು ಜಾಸ್ತಿಯಾಗಲು ಆಹಾರ ಸಮಸ್ಯೆಯೇ ಮುಖ್ಯಕಾರಣ ಬಜೆಟ್‌ನಲ್ಲಿ ಅಂದಾಜಿಗಿಂತ ೧೪೫ ಲಕ್ಷ ರೂ. ಗಳಷ್ಟು ಜಾಸ್ತಿ ಹಣವನ್ನು ಆಹಾರ ಧಾನ್ಯಗಳ ಶೇಖರಣೆಗಾಗಿ ಖರ್ಚುಮಾಡಬೇಕಾದ ಪ್ರಸಂಗಬಂತು. ಕೇಂದ್ರ ಸರ್ಕಾರ ಮತ್ತು ಇತರ ಪ್ರಾಂತ್ಯಗಳ ಸಹಾಯದಿಂದ ಕ್ಷಾಮ ಭೀತಿಯಿಂದ ಮೈಸೂರು ಪಾರಾಯಿತು ' ಎಂಬುದಾಗಿ ಆಹಾರ ಪರಿಸ್ಥಿತಿಯನ್ನು ವಿವರಿಸಿದರು

" ಯುದ್ಧಾನಂತರ ಯೋಜನೆಗಳ ಬಗ್ಗೆ ನೇಮಕವಾದ ಸಮಿತಿಗಳು ತಮ್ಮ ಯೋಜನೆಗಳನ್ನು ಪೂರ್ಣಗೊಳಿಸಿ ವರದಿಯೊಪ್ಪಿಸಿವೆ. ಈ ಸಮಿತಿಗಳು ಬಿರುಸಿನಿಂದ ಕಾರ್ಯ ಮುಗಿಸಿರುವುದು ಪ್ರಶಂಸನೀಯವಾಗಿದೆ ಸಂಬಳ ಸಾರಿಗೆಗಳ ಪುನರ್ವಿಮರ್ಶನಾ ಸಮಿತಿಯ ವರದಿಯು ಸದ್ಯದಲ್ಲಿಯೇ ಸರಕಾರದ ಪರಿಶೀಲನೆಗೆ ಒರಲಿದೆ ' ಎಂಬುದಾಗಿ ತಿಳಿಸಿ ನಾನಾ ಇಲಾಖೆಗಳ ವಿವಿಧ ಕಾರ್ಯಕಲಾಪಗಳ ಸಿಂಹಾವಲೋಕನ ಮಾಡಿದರು

ಮುಂದಿನ ವರುಷದ ಆಯವ್ಯಯದ ಅಂದಾಜು

ಮುಂದಿನ ವರುಷದ ಆಯವ್ಯಯದ ಅಂದಾಜಿನ ಪ್ರಕಾರ ವರಮಾನವು ೧೦ ಕೋಟಿ ೧೭ ಲಕ್ಷ ರೂ. ಗಳು, ಖರ್ಚು ೧೦ ಕೋಟಿ ೧೩ ಲಕ್ಷ ರೂ ಗಳು ಉಳಿತಾಯ ೩ ಲಕ್ಷ ರೂ ಗಳು ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಕಳೆದ ಸಾಲಿಗಿಂತಲೂ ೪೦ ಲಕ್ಷ ರೂ ಗಳು ಹೆಚ್ಚಾಗಿ ಮೀಸಲಾಗಿಡಲಾಗಿದೆ ಈ ಆಯವ್ಯಯ ಅಂದಾಜಿನಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಹೆಚ್ಚು ಗಮನಕೊಡಲಾಗಿದೆ ಸಂಸ್ಥಾನದಲ್ಲಿರುವ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಒಂದು ಯೋಜನೆಯನ್ನು ಸಿದ್ಧಗೊಳಿಸಲಾಗಿದೆ ಜೋಗ್‌ನಲ್ಲಿ ೪ ಜನರೇಟರುಗಳನ್ನು ಸ್ಥಾಪಿಸಲು ೧೦೭ ಲಕ್ಷ ರೂ. ಗಳನ್ನು ಒದಗಿಸಲಾಗಿದೆ.

ರೈಲ್ವೆ ಸೌಕರ್ಯಗಳು

ರೈಲ್ವೆಗಳನ್ನು ಅಭಿವೃದ್ಧಿಪಡಿಸಲು ಯುದ್ಧಾನಂತರ ಯೋಜನೆಗಳ ಸಮಿತಿಯವರ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಆಸಕ್ತಿಹೊಂದಿದೆ ಎಂದು ದಿವಾನರು ತಿಳಿಸಿದರು

ಮೈಸೂರು—ಬೆಂಗಳೂರು ಲೈನಿನಲ್ಲಿ ಎಲೆಕ್ಟ್ರಿಕ್ ಟ್ರೈನುಗಳು ಓಡುವ ವ್ಯವಸ್ಥೆ ಮಾಡುವ ವಿಚಾರದಲ್ಲಿ ಸರ್ವೆ ನಡೆಸಲು ಬ್ರಿ|| ಕಂಪನಿಯೊಂದರೊಡನೆ ಒಪ್ಪಂದವಾಗಿದೆಯೆಂದು ದಿವಾನರು ತಿಳಿಸಿದರು

ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸರಕಾರದವರು ತೆಗೆದುಕೊಂಡಿರುವ ಕಾರ್ಯಕ್ರಮವನ್ನು ವಿವರಿಸಿದರು ಸಂಸ್ಥಾನದಲ್ಲಿ ಈಗಿರುವ ಕೈಗಾರಿಕೆಗಳನ್ನು ಬಲಪಡಿಸುವುದಲ್ಲದೆ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದೆಂದು ತಿಳಿಸಿ ಸರ್ಕಾರದ ಕಾರ್ಯಕ್ರಮದ ಸ್ಥೂಲ ಚಿತ್ರವನ್ನು ಕೊಟ್ಟರು

" ವೀರಶೈವ ವಿಜ್ಞಾನ " ಸಮಾಚಾರ

ಈ ಹಿಂದೆ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದ ಪ್ರಕಾರ " ವೀರಶೈವ ವಿಜ್ಞಾನ " ಪುಸ್ತಕ ಪ್ರಕಾಶನದ ಕೆಲಸಗಳು ಒಳ್ಳೇ ಚಟುವಟಿಕೆಯಿಂದ ಮುಂದುವರೆಯುತ್ತಿವೆಯೆಂದು ತಿಳಿಸಲು ತುಂಬ ಸಂತೋಷಿಸುತ್ತೇವೆ. ಈಮಧ್ಯೆ ಅನೇಕ ಅನನುಕೂಲತೆಯಿಂದ ಸ್ವಲ್ಪ ಕಾಲದವರೆಗೆ ಕಾರ್ಯಕ್ರಮಗಳು ಮಂದವಾಗಿ ಸಾಗುತ್ತಿದ್ದುವು ಈ ಕಾರ್ಯದಲ್ಲಿ ನಾವು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನ ಕಾಲಾವಧಿಯನ್ನೂ ಆರ್ಥಿಕಸಮಸ್ಯೆಯನ್ನೂ ಎದುರಿಸಬೇಕಾಗಿದೆ ಆದ್ದರಿಂದ ಶೀಘ್ರವಾಗಿಯಲ್ಲದಿದ್ದರೂ ಸಾವಕಾಶವಾಗಿ ಕ್ರಮೇಣ ಮುನ್ನಡೆಯುವುದು.

ಈವರೆಗೆ ಅನೇಕ ಮಹೋದಯರು ಚಂದಾಹಣ ಸಹಾಯದ್ರವ್ಯ ಮತ್ತು ಲೇಖಗಳನ್ನು ಕಳುಹಿಸುವುದರ ಮೂಲಕ ನಮ್ಮ ಕಾರ್ಯದಲ್ಲಿ ಸಹಕರಿಸುತ್ತಿದ್ದಾರೆ. ಇವರ ಹೆಸರುಗಳನ್ನು ಈ ಮುಂದೆ ಕೊಡಲಾಗಿದೆ. ಆದರೆ ತುಂಬ ಮಹತ್ತ್ವವುಳ್ಳ ಈ ಗ್ರಂಥಕ್ಕೆ ಇನ್ನೂ ಅಧಿಕಾಧಿಕವಾಗಿ ಸಹಾಯದ್ರವ್ಯ ಶೇಖರವಾಗಬೇಕಾಗಿದೆ. ಅದು ಸಮಾಜಾಭಿಮಾನಿಗಳಾದವರ ಬೆಂಬಲದಿಂದ ಕೂಡಬೇಕಾಗಿದೆ. ಆದುದರಿಂದ ತಾವೆಲ್ಲರೂ ಶೀಘ್ರವಾಗಿ ಚಂದಾಹಣ ಮತ್ತು ಸಹಾಯದ್ರವ್ಯವನ್ನು ಕಳುಹಿಸಬೇಕಾಗಿ ಕೋರಿದೆ.

ಸಹಾಯಕರು

೧೦೧ ರೂ. ಸಿದ್ಧಮಲ್ಲನಗೌಡರು ಹೊಳಲಗುಂದಿ, ೧೦೧ ರೂ. ಭತ್ತದ ಬಸಪ್ಪನವರ ಮರಿಯಪ್ಪನವರು ಕನಕಗಿರಿ, ೧೦೧ ರೂ ಜೆ ವಿ ದೊಡ್ಡವೀರಪ್ಪನವರು ಬೆಂಗಳೂರು.

ಚಂದಾದಾರರು

೨೫ ರೂ ಶ್ರೀ. ಲ. ಷ. ಕ. ಹುಬ್ಬಳ್ಳಿ, ೨೧ ರೂ. ಶ್ರೀ ಷ|| ಬ್ರ|| ಪಟ್ಟದಸ್ವಾಮಿಗಳು ಕೊಣ್ಣೂರು, ೨೧ ರೂ. ಶ್ರೀ ಷ|| ಬ್ರ|| ಚೌದಾಪುರ ಹಿರೇಮಠದ ಶ್ರೀಗಳು ಕಲ್ಬುರ್ಗಿ, ೨೧ ರೂ ಶ್ರೀ ಷ|| ಬ್ರ|| ಸದಾಶಿವಸ್ವಾಮಿಗಳು ನಂದೂರು, ೨೧ ರೂ. ವೇ|| ರೇವಣಸಿದ್ಧಯ್ಯ

ವರು ಹೊಳಲೂರು, ೨೧ ರೂ ವೇ|| ಪುಟ್ಟಯ್ಯನವರು ಪುರಾಣಮಠ ಚಿಕ್ಕಮಗಳೂರು, ೨೧ ರೂ ಕೀರ್ತನಕೇಸರಿ ಗುಬ್ಬಿ ಶಿವರುದ್ರಶಾಸ್ತ್ರಿಗಳು ಹಾರನಹಳ್ಳಿ, ೨೧ ರೂ. ಬೆಳ್ಳೋಡಿ ಮಠದ ವೀರಯ್ಯನವರು ಹಾಳೂರು.

ಈ ಕೆಳಗಿನ ಮಹನೀಯರು ಸಾಗ್ದಾನವನ್ನು ಸಲ್ಲಿಸಿರುತ್ತಾರೆ

ಸಹಾಯಕರು

೧೦೧ ಶ್ರೀ ಎಲ್ ಎಸ್ ಪಾಟೀಲರು "ತರುಣ ಕರ್ನಾಟಕ" ಸಂಪಾದಕರು ಹುಬ್ಬಳ್ಳಿ.

ಸಭ್ಯರು

೫೧ ಶ್ರೀ ಮಡಿವಾಳಸ್ವಾಮಿಗಳು ಆಲಮೇಲ ತಾರಾಪುರ ಹಿರೇಮಠ, ೫೧ ಶ್ರೀ ಹಾಲಸ್ವಾಮಿಗಳು ಗುರುಪಾದದೇವರಮಠ ಹಿರೇಹಡಗಲಿ, ೫೧ ಶ್ರೀ ಗುರುಬಸಪ್ಪಶೆಟ್ಟರು ಸೋಗಿ, ೫೧ ಪುಟ್ಟಪ್ಪಶೆಟ್ಟರು ಸೋಗಿ

ಈ ಕೆಳಗಿನವರಿಂದ ಲೇಖಗಳು ಬಂದಿರುತ್ತವೆ.

ಶ್ರೀ ಚವದಾಪುರೀ ಹಿರೇಮಠದ ಪಟ್ಟದಸ್ವಾಮಿಗಳು ಗುಲ್ಬರ್ಗಾ, ಶ್ರೀ ಪಟ್ಟದಸ್ವಾಮಿಗಳು ಕೊಣ್ಣೂರು, ಶ್ರೀ ರೇವಣಸಿದ್ಧಸ್ವಾಮಿಗಳು ಚಿಕ್ಕಮಣ್ಣೂರು, ಶ್ರೀ ಗುರುಶಾಂತಶಿವಾಚಾರ್ಯರು ಜೇವರಗಿ, ಶ್ರೀ ಮೃತ್ಯುಂಜಯಶಿವಾಚಾರ್ಯರು ಬೃಹನ್ಮಠ ಹಿರೇಕುರ್ವತ್ತಿ, ಶ್ರೀ ಷಡಕ್ಷರಶಿವಾಚಾರ್ಯರು ಬೃಹನ್ಮಠ ಮಸಿಗಿ, ಶ್ರೀ ಕೋಪಕಟ್ಟಿ ಹಿರೇಮಠದಸ್ವಾಮಿಗಳು ನಂದೂರು, ಶ್ರೀ ವಿರೂಪಾಕ್ಷಶರ್ಮ ದಾವಣಗೆರೆ, ಶ್ರೀ ಗುಬ್ಬಿ ಶಿವರುದ್ರಶಾಸ್ತ್ರಿಗಳು ಹಾರನಹಳ್ಳಿ, ಶ್ರೀ ಅ. ಸೋ ಸಜ್ಜನರ ಬೆಳವಣಿಕೆ

ಇನ್ನೂ ಅಧಿಕಾಧಿಕವಾಗಿ ಲೇಖಗಳೂ ಸಹಾಯದ್ರವ್ಯವೂ ಪರಮಾವಶ್ಯಕವಾಗಿದ ಇಷ್ಟರಲ್ಲಿಯೇ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠದಲ್ಲಿ ಮುದ್ರಣಕಾರ್ಯವು ಸಾಗಲಿದೆ ಕನ್ನಡ ಟೈಪು ತರಿಸಲಾಗಿವೆ ವೀರಶೈವ ಪ್ರಪಂಚದಲ್ಲಿ ಶಾಶ್ವತವಾಗಿ ಮೆರೆಯುವ 'ವೀರಶೈವ ವಿಜ್ಞಾನ "ವೆಂಬ ಗ್ರಂಥರತ್ನಕ್ಕಾಗಿ ಮಹಾಜನರೆಲ್ಲರೂ ಅಧಿಕವಾಗಿ ಸಹಾಯಮಾಡಬೇಕು ಈಗ ಸಹಾಯಮಾಡಿದವರೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ

ಮ ಸಿ ಸೋಮಶೇಖರಶರ್ಮಾ ನಿರೀಕ್ಷಕ,
"ವೀರಶೈವ ವಿಜ್ಞಾನ"ಜಂಗಮವಾಡಿಮಠ, ಕಾಶಿ

ಶ್ರೀ ಜಗದ್ಗುರು ದಾರುಕಜಯಂತೀ ಮಹೋತ್ಸವ

ಹರಿಹರ ಕೂಡಲಸಂಗಮ ಶಿವಕ್ಷೇತ್ರಮಠದ ದೊಡ್ಡಿಮಠದ ದಾರುಕಾಚಾರ್ಯ ಮಂದಿರದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಇದೇ ವೈಶಾಖ ಶು|| ೫ ಶುಕ್ರವಾರ ಬೆಳಗ್ಗೆ ಶ್ರೀ ದಾರುಕಾಚಾರ್ಯ ಲಿಂಗೋದ್ಭವಮೂರ್ತಿಗೆ ಏಕಾದಶವಾರ ರುದ್ರಾಭಿಷೇಕವೂ ಷೋಡಶೋಪಚಾರ ಪೂಜೆಯೂ ನಡೆದು ಗಣಾರಾಧನೆಯಾಯಿತು. ೩ ಗಂಟೆಯಮೇಲೆ ವೀರಶೈವ ಮತಸಂಬಂಧವಾದ ಉಪನ್ಯಾಸಗಳು ಮತ್ತು ಸಿದ್ಧಾಂತಶಿಖಾಮಣಿ ಪ್ರವಚನವೂ ನಡೆದು ಅದೇ ದಿವಸ ಸಾಯಂಕಾಲ ೬ ಗಂಟೆಯಮೇಲೆ ಈ ಮಠದ ಮೂಲಕರ್ತೃಗಳ ಗದ್ದುಗೆಗೆ ಜಗದಾಚಾರ್ಯರ ಉತ್ಸವವು ಹೋಗಿ ಮಹಾಮಂಗಳಾರತಿ ನಡೆದನಂತರ ಪ್ರಸಾದವಿನಿಯೋಗವಾಯಿತು. ಮತ್ತು ವೈ|| ಬ|| ೨ (ತಾ|| 7-5-47)ನೇ ಬುಧವಾರದವರೆಗೆ ಪ್ರತಿದಿವಸ ಮಠದಲ್ಲಿ ಸಿದ್ಧಾಂತಶಿಖಾಮಣಿ ಪ್ರವಚನವೂ ಮಡೇನಳ್ಳಿ ಶ್ರೀ ಪಂಚಾಚಾರ್ಯ ಭಜನಾಸಂಘದವರಿಂದ ಶ್ರೀ ಜಗದಾಚಾರ್ಯರ ಭಜನೆಯೂ, ಭಕ್ತಮಾರ್ಕಂಡೇಯ ನಾಟಕವೂ ನಡೆಯುತ್ತಿದ್ದವು ಕೊನೆಯ ದಿವಸ ಲಿಂಗೋದ್ಭವಮೂರ್ತಿಗೆ ಏಕಾದಶವಾರ ರುದ್ರಾಭಿಷೇಕಾದಿಗಳು ನೆರವೇರಿದವು. ಬಳಿಕ ಜಗದಾಚಾರ್ಯರ ಉತ್ಸವವು ಪರಮ ವೈಭವದೊಡನೆ ಹೊರಟು ಸ್ವಸ್ಥಾನಕ್ಕೆ ಬಂದನಂತರ ಮಹಾಮಂಗಳಾರತಿ ಪ್ರಸಾದವಿನಿಯೋಗವಾಯಿತು. ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತೀಮಹೋತ್ಸವಗಳನ್ನು ಸರ್ವರೂ ಆಚರಿಸಬೇಕೆಂಬ ಬಗ್ಗೆ ಶ್ರೀ ಸದಾಶಿವಸ್ವಾಮಿಗಳು ಅಲ್ಲಿ ನೆರೆದಿದ್ದ ಭಕ್ತಮಂಡಳಿಯವರ ಮನಸ್ಸಿಗೆ ಆನಂದವಾಗುವಂತೆ ವಿಶದವಾಗಿ ತಿಳಿಸಿದರು ಬಳಿಕ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

ಗುರುಭಕ್ತ ಯಂ. ಮಾದಪ್ಪ

ಎಲೆ ಮಲ್ಲೇಶಪ್ಪನವರ ಕನ್ನಡ ಹೈಸ್ಕೂಲ್ ಪ್ರಾರಂಭೋತ್ಸವ

ಶ್ರೀಸರ್ವಜಿತ್ ನಾಮ ಸಂ|| ಜ್ಯೇಷ್ಠ ಬ|೨(೫-೬-೪೭) ಗುರುವಾರ ಉದಯ ೭-೪೫ ಗಂಟೆಗೆ ಶುಭಮುಹೂರ್ತದಲ್ಲಿ ಕನ್ನಡ ಹೈಸ್ಕೂಲ್ ಪ್ರಾರಂಭೋತ್ಸವವು ಆದವಾನಿಯಲ್ಲಿರುವ ನಮ್ಮ ಪ್ರೆಸ್ ಬಿಲ್ಡಿಂಗಿನಲ್ಲಿ ಜರುಗುವಂತೆ ಗುರುಹಿರಿಯರು ನಿಶ್ಚಯಿಸಿರುತ್ತಾರೆ ತಾವು ಆಗಮಿಸಿ, ಈ ಸಮಾರಂಭವನ್ನು ಸಾಂಗಗೊಳಿಸಬೇಕೆಂದು ಕೋರುತ್ತೇನೆ.

ಸಭಾಧ್ಯಕ್ಷರು –ಶ್ರೀ ಕೆ ಎನ್ ಅನಂತರಾಮನ್ ಅವರುಗಳ್ ಐ ಸಿ ಎಸ್, ಡಿಸ್ಟ್ರಿಕ್ಟ್ ಕಲೆಕ್ಟರ್, ಬಳ್ಳಾರಿ

ಉದ್ಘಾಟಕರು –ಶ್ರೀ ಸಿ ರಘುನಾಥನ್ ಅವರುಗಳ್ ಡಿವಿಜನಲ್ ಇನ್ಸ್‌ಪೆಕ್ಟರ್, ಅನಂತಪುರ.

ಭಾಷಣಕಾರರು –ಶ್ರೀ ಡಿ ನರಸಿಂಹಶಾಸ್ತ್ರಿ ಎಂ ಎ,ಎಲ್.ಟಿ, ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್, ಬಳ್ಳಾರಿ,

ತಮ್ಮ ಆಗಮನಾಭಿಲಾಷಿ,
ಎಲೆ ಮಲ್ಲೇಶಪ್ಪ, ಆದವಾನಿ

ಪ್ರಕಟನೆ

ಬೆಂಗಳೂರು, ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆಯ ಉಚಿತ ವಿದ್ಯಾರ್ಥಿನಿಲಯಕ್ಕೆ ಸೇರಲು ಇಚ್ಛೆಯುಳ್ಳ ಪ್ರೌಢ ವಿದ್ಯಾಭ್ಯಾಸ ಮಾಡಲಿರುವ, ಮತ್ತು ಕೈಗಾರಿಕೆ ಮತ್ತು ಸಂಸ್ಕೃತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವೀರಶೈವ ವಿದ್ಯಾರ್ಥಿಗಳು ತಾ|| 15–6–47 ರೊಳಗೆ ನಿಯಮಿತ ಅಪ್ಲಿಕೇಷನ್ ಫಾರಂನಲ್ಲಿ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳತಕ್ಕದ್ದು. ಕಾಲಾವಧಿ ಮೀರಿ ಬರುವ ಅರ್ಜಿಗಳನ್ನು ಅಂಗೀಕರಿಸಲಾಗುವುದಿಲ್ಲ

ಕೆ ರೇವಣ್ಣ, ಗೌರವ ಕಾರ್ಯದರ್ಶಿ,
ಗುಬ್ಬಿತೋಟದಪ್ಪನವರ ಧರ್ಮಸಂಸ್ಥೆ.

ಅಮೇರಿಕದಿಂದ ಗೋಧಿ

ಅಮೇರಿಕದ ವ್ಯವಸಾಯ ಮಂತ್ರಿಗಳಾಗಿರುವ ಮಿ|| ಕಿಂಟನ್ ಅಂಡರ್‌ಸನ್ ಅವರು "ಭಾರತದ ರೇಷನಿಂಗ್ ವ್ಯವಸ್ಥೆ ಇಡೀ ಜಗತ್ತಿನಲ್ಲೆಲ್ಲ ಅತ್ಯುತ್ತಮವಾಗಿದೆ. ಆದರೂ ಅಲ್ಲಿ ಗೋಧಿಯ ಅಭಾವವಿರುವುದರಿಂದ ಅದನ್ನು ತಪ್ಪಿಸಲು ಇನ್ನು ಮೇಲೆ ಅಮೇರಿಕ ಪ್ರತಿವರ್ಷವೂ ೫ ಲಕ್ಷದಿಂದ ೧೦ ಲಕ್ಷ ಬುಷೆಲ್‌ಗಳಷ್ಟು ಗೋಧಿಯನ್ನು ಇಂಡಿಯಾಕ್ಕೆ ಕಳಿಸಲಾಗುವುದು' ಎಂದು ತಿಳಿಸಿದ್ದಾರೆ.

ನಡುಮಾರ್ಗ ಬೇಕಂತೆ!

ಮುಸ್ಲಿಂ ಲೀಗಿಗೆ ಆರು ಪ್ರಾಂತಗಳನ್ನೂ ಪೂರ್ವ ಮತ್ತು ಪಶ್ಚಿಮ ಭಾರತಗಳಲ್ಲಿ ಏರ್ಪಡುವ ಪಾಕೀಸ್ಥಾನಗಳನ್ನು ಸೇರಿಸಲು ಸುಮಾರು ೧೦೦೦ ಮೈಲಿಗಳಷ್ಟು ದೂರದ ಒಂದು ನಡುಮಾರ್ಗಪ್ರದೇಶವನ್ನೂ ಕೊಡಬೇಕೆಂದು ಮಿ|| ಜಿನ್ನಾರವರು ಕೇಳುವುದು ಸರಿಯಲ್ಲ, ಅಂಥ ಅನುಕೂಲ ಕಲ್ಪಿಸಿಕೊಡುವುದೂ ಹಿತಕರವಲ್ಲ, ಎಂದು ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರೂ, ಭಾರತದ ಅನೇಕ ಮುಖಂಡರೂ ಅಭಿಪ್ರಾಯಪಟ್ಟಿದ್ದಾರೆ ಕಾಂಗ್ರೆಸ್ಸು, ಸಿಕ್ಕರೂ, ಹಿಂದುಗಳೂ ಎಲ್ಲರೂ ಒಟ್ಟಾಗಿ ಸೇರಿ ಇಂಥ ಪ್ರಾರ್ಥನೆಯನ್ನು ವಿರೋಧಿಸಬೇಕೆಂದು ಶ್ರೀ ನಿರ್ಮಲಘೋಷ್ ಎಂಬುವರು ತಿಳಿಸಿದ್ದಾರೆ. 'ಮಿ|| ಜಿನ್ನಾರವರ ಈ ಕೇಳಿಕೆಗೆ ಬುಡವಿಲ್ಲ' ಎಂದು ಡಾಕ್ಟರ್ ಬಾಬುರಾಜೇಂದ್ರಪ್ರಸಾದರವರು ಹೇಳಿದ್ದಾರೆ.

ಸ್ವೀಕಾರ

ಸೆಟ್ಟಿಹಳ್ಳಿ ಮಠದ ಸಾಹುಕಾರ್ ವೀರಭದ್ರಯ್ಯನವರ ಪುತ್ರ ಚಿ|| ಯಸ್ ವಿ ಮರುಳಪ್ಪನಿಗೂ ಕಡಲಮಗೆ ಮಠದ ವೇ|| ಗುರುಶಾಂತಯ್ಯನವರ ಪುತ್ರಿ ಚಿ|| ಸೌ|| ಮಹದೇವಮ್ಮನಿಗೂ ಇದೇ ಜ್ಯೇಷ್ಠಮಾಸದಲ್ಲಿ ವಿವಾಹಮಹೋತ್ಸವವು ನಡೆಯಬೇಕಾಗಿತ್ತು ವರನಿಗೆ ಕಾಹಿಲೆಯಾದ ಪ್ರಯುಕ್ತ ಸದ್ಯಃ ನಿಲ್ಲಿಸಿ ಜಗದಾಚಾರ್ಯರ ಆಶೀರ್ವಾದಬಲದಿಂದ ಶೀಘ್ರ ಗುಣವಾಗಿ ಮುಂದಿನ ಮಾರ್ಗಶೀರ್ಷ ಮಾಸದಲ್ಲಿ ನಡೆಯುವಂತೆ ಶ್ರೀ ಜಗದಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ದೊಡ್ಡಮೇಟೀ ಕುರ್ಕಿಯಲ್ಲಿರುವ ವೇ|| ಎಸ್. ಬಸವಯ್ಯನವರ ದ್ವಾರಾ ತಲ್ಪಿರುತ್ತವೆ

ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಗ್ರಾಮದಲ್ಲಿರುವ ಮ|| ರಾ|| ಹಂಪಯ್ಯಶೆಟ್ಟರ ಪತ್ನೀ ಶ್ರೀಮತಿ ಪುಟ್ಟಮ್ಮನವರು ತಾ|| ೨೪-೫-೧೯೪೭ ನೆಯ ದಿವಸ ಶಿವಾಧೀನರಾದ ಸಮಯದಲ್ಲಿ ವೇ|| ಕಲ್ಲಹಳ್ಳಿಮಠದ ಮಲ್ಲಿಕಾರ್ಜುನಯ್ಯನವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 4 ರೂಪಾಯಿಗಳು ಮ|| ರಾ|| ವಸ್ತಾರೆ ಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತವೆ.

ಗದಗ ಸಿಟಿಯಲ್ಲಿರುವ ಮ|| ರಾ|| ಶಿವಪ್ಪ ಅಂಗಡಿ ಇವರ ಪುತ್ರ ಚಿ|| ರೇವಣಸಿದ್ಧಪ್ಪನಿಗೆ ಹೊಳೆ ಆಲೂರು ಗ್ರಾಮದ ಮ|| ರಾ|| ಹಂಪಣ್ಣ ಮೆಣಸಿಗಿ ಇವರ ಪುತ್ರಿ ಚಿ|| ಸೌ|| ಪಾರ್ವತೆವ್ವನನ್ನು ಕೊಟ್ಟು ನೆರವೇರಿಸಿದ ನಿಶ್ಚಯಕಾರ್ಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 2 ರೂಪಾಯಿಗಳು ಕನ್ಯೆಯ ಕಡೆಯಿಂದ ತೆಗೆಯಿಸಿದ 1 ರೂ ಯು ಒಟ್ಟು 3 ರೂಪಾಯಿಗಳು ವೇ|| ಶಾಂತಗೇರಿ ಹಿರೇಮಠದ ಶಿವಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಲಕ್ಷ್ಮೇಶ್ವರ ಗ್ರಾಮದಲ್ಲಿ ಶ್ರೀ ತಾಯಿ ಪಾರ್ವತೀದೇವಿಯ ಜಯಂತೀಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ ಮೃತ್ಯುಂಜಯಶಾಸ್ತ್ರಿಗಳು ಬೆಳವಣಿಕಿ ಇವರ ದ್ವಾರಾ ತಲ್ಪಿರುತ್ತವೆ.

ಮದ್ದೂರ್ ತಾಲ್ಲೂಕು ಮಠದ ದೊಡ್ಡೀಮಠದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಸದರಿ ಮಠದ ಶ್ರೀ ಸದಾಶಿವಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಸಾಗರತಾಲ್ಲೂಕು ಬರದವಳ್ಳಿಯಲ್ಲಿರುವ ಮ|| ರಾ|| ಹೊಸಮನೆ ಮಹಾದೇವಪ್ಪಗೌಡರ ಪ್ರಥಮಪುತ್ರಿ ಚಿ|| ಸೌ|| ಹಾಲಮ್ಮನಿಗೂ ಸಿದ್ದಾಪುರ ತಾ|| ಹೊಸಹಳ್ಳಿಯಲ್ಲಿರುವ ಮ|| ರಾ|| ಹಾಲಯ್ಯಗೌಡರ ಪುತ್ರ ಚಿ|| ಚನ್ನಪ್ಪಗೌಡನಿಗೂ ಮತ್ತು ದ್ವಿತೀಯಪುತ್ರಿ ಚಿ|| ಸೌ|| ಗೌರಮ್ಮನಿಗೂ ಸಾಗರ ತಾಲೂಕು ಮಿಟ್ಲೆಕೊಪ್ಪದ ಮ|| ರಾ|| ಜಯದೇವಪ್ಪಗೌಡರ ಪುತ್ರ ಚಿ|| ಮಲಕಪ್ಪನಿಗೂ ನೆರವೇರಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಹಾಲಗಳಲೆ ಸ್ಕೂಲ್ ಮಾಸ್ತರ್ ಬಸವಂತಪ್ಪನವರ ದ್ವಾರಾ ತಲ್ಪಿರುತ್ತವೆ

ತಿಪಟೂರಲ್ಲಿರುವ ಶ್ರೀಮಾನ್ ರೇಣುಕಪ್ಪನವರ ಸಹೋದರ ಚಿ|| ಚನ್ನಬಸವಯ್ಯನಿಗೆ ಕೀಲಾರದಲ್ಲಿರುವ ಶ್ರೀಮಾನ್ ತಮ್ಮಯ್ಯಪ್ಪನವರ ಅಣ್ಣಂದಿರಾದ ಶ್ರೀಪರ್ವತಯ್ಯನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ತಿಪಟೂರಲ್ಲಿರುವ ವೇ|| ಎ ಎಂ ಶಿವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಗುಲ್ಬರ್ಗಾ ಡಿ|| ನಂದೂರು ಗ್ರಾಮದ ಕೋಪಕಟ್ಟಿ ಹಿರೇಮಠದ ಶ್ರೀ ಚರಪಟ್ಟಾಧ್ಯಕ್ಷರ ೧೨ ನೇ ವರ್ಷದ ವರ್ಧಂತ್ಯುತ್ಸವವು ಗುಲ್ಬರ್ಗಾ ಚೌದಾಪುರೀ ಹಿರೇಮಠಾಧ್ಯಕ್ಷ ಶ್ರೀ ಶಾಂತವೀರಸ್ವಾಮಿಗಳ ಅಧ್ಯಕ್ಷತೆಯಲ್ಲಿ ನೆರವೇರಿದಾಗ್ಯೆ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ನಿಕ್ಕಲ್ ರೂಪಾಯಿ ನಾಣ್ಯ ಬರುತ್ತದೆ

ಇದೇ ಜೂನ್ ೨ನೆಯ ತಾರೀಖಿನಿಂದ ನಿಕ್ಕಲ್ ರೂಪಾಯಿ ನಾಣ್ಯ ಜಾರಿಗೆ ಬರುತ್ತದೆ ಈ ಹೊಸ ರೂಪಾಯಿ ಈಗಿರುವ ರೂಪಾಯಿಯಂತೆಯೇ ಒಂದು ತೊಲ ತೂಕವಿರುತ್ತದೆ ಆದರೆ ಆಕಾರದಲ್ಲಿ ಸ್ವಲ್ಪ ಚಿಕ್ಕದು ಇದರ ಒಂದುಕಡೆ ಚಕ್ರವರ್ತಿಗಳ ಚಿತ್ರ, ಇನ್ನೊಂದು ಕಡೆ ಹುಲಿ ಮತ್ತು ಹಿಂದೂಸ್ಥಾನ ಎಂಬ ಶಬ್ದ ಅಚ್ಚಾಗಿರುವುವು ಇವುಗಳ ಜೊತೆಗೆ ಇಂಗ್ಲಿಷ್ ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ‘ ಒಂದು ರೂಪಾಯಿ ಎಂಬುದನ್ನೂ ರೂಪಾಯಿ ತಯಾರಾದ ಇಸವಿಯನ್ನೂ ಮುದ್ರಿಸಿರುತ್ತಾರೆ

ವೈಸ್‌ರಾಯರ ಯೋಜನೆಯನ್ನು ಬ್ರಿಟಿಷ್ ಮಂತ್ರಿಮಂಡಳಿ ಒಪ್ಪಿತು

ಭಾರತದ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ವೈಸ್‌ರಾಯ್‌ರವರಾದ ಲಾರ್ಡ್ ಮೌಂಟ್ ಬ್ಯಾಟನ್ ಅವರು ಒಂದು ಯೋಜನೆಯನ್ನು ತಯಾರಿಸಿಕೊಂಡು ಲಂಡನ್ನಿಗೆ ಹೋಗಿ ಬ್ರಿಟಿಷ್ ಮಂತ್ರಿಮಂಡಳದ ಮುಂದ ತಮ್ಮ ಯೋಜನೆಯನ್ನಿಟ್ಟು ವಿವರಿಸಿದರು ಮಂಡಳದ ಸದಸ್ಯರು ಅವನ್ನು ಒಪ್ಪಿದ್ದಾರೆ ಭಾರತದ ರಾಜಕೀಯ ಮುಖಂಡರೊಡನೆ ಮಾತಾಡಿ ಎರಡು ಪಂಗಡಗಳಿಗೂ ಹಿತಕರವಾಗಿರುವಂತೆ ತಯಾರಿಸಿರುವ ಅವರ ಯೋಜನೆ ಲಂಡನ್ ಸರ್ಕಾರ ಒಪ್ಪಿದಯಂತೆ! ಇನ್ನು ಮುಂದೆ ದೆಹಲಿ ಪರಿಷತ್ತಿನಲ್ಲಿ ಆ ಯೋಜನೆಯನ್ನಿಡಲಾಗುವುದು ಭಾರತದ ಮುಖಂಡರು ಅದನ್ನೊಪ್ಪಿದರೆ, ಇನ್ನು ಮೂರು ತಿಂಗಳೊಳಗಾಗಿ ಪಾಕಿಸ್ಥಾನ ಮತ್ತು ಹಿಂದೂಸ್ಥಾನಗಳ ರಚನೆ ಆಗುತ್ತದ ಅವುಗಳ ಸಂಪೂರ್ಣ ಸ್ವರೂಪ ತಿಳಿಯುತ್ತದೆ ಅಂತೂ ಭಾರತ ಇಬ್ಭಾಗವಾಗಲೇಬೇಕು ಎಂಬುದು ನಿಶ್ಚಯವಾದಂತಾಯಿತು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.)ಸೈಜು ೧೪×೧೦ ಬೆಲೆ	೦—೬—೦
ಸದ್ಯಃ ಶೀತಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
” ” ” ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀ ಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ರೇಣುಕಾಚಾರ್ಯರ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಮೈಸೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೪ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾದಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
क्रियासारकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಜೂನ್ ೧೯೪೭ [ಸಂಚಿಕೆ ೭

ಸ್ವೀಕಾರ

ಸೊಲ್ಲಾಪುರ ನಗರದಲ್ಲಿರುವ ಶ್ರೀಮಂತ ಸಿದ್ಧರಾಮಪ್ಪ ಖಾನಾಪುರೆ ಇವರ ಪುತ್ರ ಚಿ॥ ಗುರುಬಸವಪ್ಪನಿಗೆ ಮ॥ ರಾ॥ ನಾಗನಾಥಪ್ಪ ಘೋಂಗಡೆ ಇವರ ಪುತ್ರಿ ಚಿ॥ ಸೌ॥ ಕಸ್ತೂರೀಬಾಯಿಯನ್ನು ತಂದು ನೆರವೇರಿಸಿದ ವಿವಾಹಸಮಯದಲ್ಲಿ ಸದರಿಯವರು ಪ್ರಭಾಪೋಷಣ ಕ್ಕೋಸ್ಕರ **5** ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಅರಿಸಿನಗುಂಡಿ ಜಂಗಮಮಠ ಉರ್ಫ ಹೊಸಮಠದ ಪ್ರಭವಾರಾಧ್ಯರ ಪುತ್ರಿ ಚಿ॥ ಸೌ। ಅನ್ನಪೂರ್ಣಾದೇವಿಗೂ ತುಂಕೂರು ಕೋಗನೂರು ಮಠದ ದೇಶದ ಯಜಮಾನ್ ಸೊಲ್ಲಪ್ಪನವರ ತೃತೀಯ ಪುತ್ರ ಚಿ। ಸಿದ್ಧಲಿಂಗಯ್ಯನಿಗೂ ತುಂಕೂರು ಟವನ್ನಿನಲ್ಲಿ ನೆರವೇರಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ **5** ರೂ ಗಳು ವೇ॥ ಬೆಂಗಳೂರು ನಂಬೆಣ್ಣದೇವರ ಮಠದ ಗುರುಲಿಂಗ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಅರಸೀಕೆರೆಯಲ್ಲಿರುವ ಮ॥ ರಾ॥ ದಂಡಿನ ಶಿವರದ ಸಿದ್ಧಲಿಂಗಪ್ಪನವರ ಪುತ್ರಿ ಚಿ॥ ಸೌ॥ ಶಿವರುದ್ರಮ್ಮನಿಗೂ ಅಡ್ಡಿಗೆರೆ ಮ॥ ರಾ॥ ಶಿವರುದ್ರಪ್ಪನವರ ಪುತ್ರ ಚಿ॥ ಶಿವಣ್ಣನಿಗೂ ನೆರವೇರಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ ಕಳಲೂರು ಗ್ರಾಮದಲ್ಲಿರುವ ಅರಸೀಕೆರೆ ಮಂಡಿ ವೇ॥ ಟಿ ಎಸ್ ಹುಚ್ಚೀರಯ್ಯನವರ ಪುತ್ರಿ ಚಿ॥ ಸೌ॥ ಸರಸ್ವತಮ್ಮನಿಗೂ ತುಂಬಾಪುರ ಮಠದ ವೇ॥ ಚನ್ನಬಸವಯ್ಯನವರು ಪುತ್ರ ಚಿ॥ ರುದ್ರಯ್ಯನಿಗೂ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿ ಒಟ್ಟು **4** ರೂಪಾಯಿಗಳು ವೇ॥ ತುಂಬಾಪುರ ಮಠದ ಪುರೋಹಿತ ನಂಜುಂಡಯ್ಯನವರ ದ್ವಾರಾ ತಲ್ಪಿರುತ್ತವೆ

ವಿಜಾಪುರ ಡಿ॥ ಜೈನಾಪುರಗ್ರಾಮದಲ್ಲಿರುವ ವೇ॥ ಕವಟಗಿ ಮಲ್ಲಯ್ಯನವರ ಪುತ್ರ ಚಿ॥ ಕಲ್ಲಿನಾಥಯ್ಯನಿಗೆ ಜಮಖಂಡೀ ನಗರದ ವೇ॥ ಸಾಲೀಮಠದ ಚನ್ನಪ್ರಭಯ್ಯನವರ ಪುತ್ರಿ ಚಿ॥ ಸೌ॥ ಪಾರ್ವತೀಬಾಯಿಯನ್ನು ತಂದು ನೆರವೇರಿಸಿದ ವಿವಾಹ ಸಮಯದಲ್ಲಿ ಗುರುಗಳ ಅನುಜ್ಞೆಯಂತೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ಮಲಕಯ್ಯ ಮಠಪತಿ ಜೈನಾಪುರ ಇವರ ದ್ವಾರಾತಲ್ಪಿರುತ್ತವೆ

ಶಿವಮೊಗ್ಗಾ ಡಿ॥ ಕುಂಸಿ ತಾಲ್ಲೂಕು ಚಾಮೇನಹಳ್ಳಿ ದಿ॥ ವೀರಯ್ಯನವರ ಪುತ್ರ ಚಿ॥ ರಾಜಶೇಖರಯ್ಯನಿಗೂ ಹೊನ್ನಾಳಿ ತಾಲ್ಲೂಕು ಕೆಂಚೀಕೊಪ್ಪದ ದಿ॥ ಚನ್ನಯ್ಯನವರ ಪುತ್ರಿ ಚಿ॥ ಸೌ॥ ಸುಮಂಗಲಮ್ಮನಿಗೂ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ॥ ಗುಬ್ಬಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾತಲ್ಪಿರುತ್ತವೆ

ಧಾರವಾಡ ಡಿ ಗರಗ ಗ್ರಾಮದಲ್ಲಿರು ಮ॥ ರಾ॥ ವೀರಪ್ಪ ಒಳಗಾರ ಇವರ ಪುತ್ರಿ ಚಿ॥ ಸೌ॥ ಅನ್ನಪೂರ್ಣಮ್ಮನನ್ನು ಶಿರೂರು ಶಿವಬಸಪ್ಪನವರ ಪುತ್ರ ಚಿ॥ ಬಸಪ್ಪನಿಗೆ ಕೊಟ್ಟು ಜ್ಯೇಷ್ಠ ಶುದ್ಧ ೧೨ ದಿವಸ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ಮ॥ ರಾ॥ ವೀರಪ್ಪನವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಡಿ। ನ್ಯಾಮತಿ ಗ್ರಾಮದಲ್ಲಿರುವ ಮ॥ ರಾ॥ ಮುನಿಯಪ್ಪನವರ ಪುತ್ರಿ ಚಿ॥ ಸೌ॥ ಚಂದಮ್ಮನನ್ನು ಶಿವಮೊಗ್ಗಾ ತಾಲ್ಲೂಕು ಬಿಕ್ಕೋನಹಳ್ಳಿ ಹನುಮಪ್ಪಗೌಡರ ಪುತ್ರ ಚಿ॥ ಮಲ್ಲಪ್ಪನಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ ವರನ ಕಡೆಯವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ನ್ಯಾಮತಿ ಗ್ರಾಮದ ವೇ॥ ಎನ್ ಕೆ ಈಶ್ವರಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ

ಗುಬ್ಬಿಟವನ್ನಿನಲ್ಲಿರುವ ಗುಬ್ಬಿ ಕಂಪನಿ ಪ್ರೊಪ್ರೈಟರ್ ನಾಟಕರತ್ನ ಶ್ರೀಮಾನ್ ಜಿ ಎಚ್ ವೀರಣ್ಣನವರ ಪುತ್ರಿ ಚಿ॥ ಸೌ॥ ಗಿರಿಜಾಂಬೆಯನ್ನು ಸದರಿ ಕಂಪನಿ ಸೆಕ್ರೆಟರಿಗಳಾದ ಚಿ॥ ಎಂ ಆರ್ ಚನ್ನಪ್ಪನವರಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ತಿಪಟೂರು ಜವಳಿ ಅಂಗಡಿ ಮ॥ ರಾ॥ ಸಿ ಕೆ ಕಪ್ಪಣ್ಣನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಲಕ್ಷ್ಮೇಶ್ವರ ಹಿರೇಮಠದ ವೇ॥ ಕಾಶಪ್ಪಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ॥ ಹೊಸಮಠದ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ

ತುಮಕೂರು ತಾಲೂಕು ಹೆಬ್ಬೂರು ಗ್ರಾಮದ ಯಜಮಾನ ರುದ್ರಪ್ಪನವರು ತಮ್ಮ ಪುತ್ರರ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಅನಂತಪುರ ಡಿ॥ ಕೊಂಡಕುಂದಿ ಗ್ರಾಮದಲ್ಲಿರುವ ವಿರಕ್ತಮಠದ ರೇವಣಸಿದ್ಧಯ್ಯನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನನ್ನು ಚಿತ್ರವಾಡಿಗಿ ಮಠದ ತೋಟಯ್ಯನವರ ಪುತ್ರ ಚಿ॥ ಪರ್ವತಯ್ಯನಿಗೆ ಕೊಟ್ಟು ಕೊಂಡಕುಂದಿ ಶಿಲಾಮಠದ ಪಟ್ಟಾಧ್ಯಕ್ಷ ಶ್ರೀ॥ ಷ॥ ಬ್ರ॥ ಶಿವಶಂಕರಶಿವಾಚಾರ್ಯರ ಆಚಾರ್ಯತ್ವದಲ್ಲಿ ವಿವಾಹ ಮಹೋತ್ಸವವು ವಿಧ್ಯುಕ್ತವಾಗಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂಪಾಯಿಯು ಮೇಲ್ಕಂಡ ಶಿಲಾಮಠದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ವಿವಾಹ ಮಹೋತ್ಸವ

ಸೊಲ್ಲಾಪುರದಲ್ಲಿ ೧೬ ೫ ೪೭ ನೇ ಶುಕ್ರವಾರ ದಿವಸ ಶ್ರೀಮಂತ ಸಿದ್ಧರಾಮಪ್ಪ ಕಾಶೀನಾಥಪ್ಪ ಖಾನಾಪುರೆ ಇವರ ಪುತ್ರ ಚಿ। ಗುರುಬಸಪ್ಪನಿಗೂ ಶ್ರೀನಾಗನಾಥಪ್ಪ ಬಾಪೂರಾವ ಘೋಂಗಡೆ ಇವರ ಪುತ್ರಿ ಚಿ॥ ಸೌ॥ ಕಸ್ತೂರಿಬಾಯಿಗೂ ವಿವಾಹ ಮಹೋತ್ಸವವು ಅತ್ಯಂತ ವೈಭವದಿಂದ ಜರಗಿತು ಆ ಸಮಯದಲ್ಲಿ ಶ್ರೀಜಗದ್ಗುರು ರಂಭಾಪುರಿ ಉಜ್ಜಯಿನಿ, ಕಾಶಿ, ಶ್ರೀಶೈಲ ಪೀಠಗಳಿಂದ ಬಂದಿದ್ದ ಶುಭಾಶೀರ್ವಾದ ಪತ್ರಗಳು ಶ್ರೀ ಷ॥ ಬ್ರ॥ ಮುಳ್ಳೂರು ಪಟ್ಟಾಧ್ಯಕ್ಷರಿಂದ ಓದಲ್ಪಟ್ಟವು ಈ ಮಂಗಲ ಸಮಯದಲ್ಲಿ ಶ್ರೀ॥ ಷ॥ ಬ್ರ॥ ಶ್ರೀಗುರುವಿರೂಪಾಕ್ಷ ಶಿವಾಚಾರ್ಯರು ಜಾಹಗೀರದಾರಮಠ ಸಂಸ್ಥಾನ ಮಾಣೂರ, ಶ್ರೀ॥ ಷ। ಬ್ರ॥ ರಾಚಲಿಂಗಶಿವಾಚಾರ್ಯ ಪರಾಂಡಕರ ಬಾರ್ಶಿ, ವೇ॥ ಪಂ॥ ಮಲ್ಲಿಕಾರ್ಜುನಶಾಸ್ತ್ರಿಗಳು ಮಣೂರ, ಶ್ರೀಮಂತನಾಗಪ್ಪ ಅಣ್ಣಾ ಅಬ್ದುಲ್ ಪೂರಕರ, ಶ್ರೀಮಂತನಾಗಪ್ಪಣ್ಣಾ ಕಾಡಾದಿ, ಶ್ರೀ ಗಂಭೀರೆ, ಶ್ರೀಶಂಕರಪ್ಪಣ್ಣಾ ಚೌಕೋತೆ ಇವರೇ ಮೊದಲಾದ ಅನೇಕ ಪ್ರಮುಖರು ಬಂದಿದ್ದರು ನೂತನ ವಧೂವರರಿಗೆ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಓರ್ವ ಪ್ರತ್ಯಕ್ಷದರ್ಶಿ

ನಿಧನ

ಲಕ್ಷ್ಮೇಶ್ವರ ಗ್ರಾಮದ ಹಿರಿಯಮಠದ ವೇ॥ ಕಾಶಪ್ಪಯ್ಯನವರು ಇದೇ ತಿಂಗಳು ೨ ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವ್ಯಸನವೆನಿಸುತ್ತದೆ. ಇವರು ಯಾವಾಗಲೂ ಜನಗಳಿಗೆ ತತ್ವೋಪದೇಶವನ್ನು ಮಾಡುತ್ತಿದ್ದರು. ಅಲ್ಲದೆ ಒಳ್ಳೇ ಗುರುಪೀಠಾಭಿಮಾನಿಗಳಾಗಿದ್ದರು. ಇಂತಹ ಮಹಾ ವ್ಯಕ್ತಿಯು ನಮ್ಮನ್ನೆಲ್ಲ ಅಗಲಿ ಹೋದುದು ವಿಷಾದಕರವಾಗಿದೆ. ಶ್ರೀ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ವೀರಭದ್ರಯ್ಯ, ಹೊಸಮಠ

ಭಾರತ ಸಮಸ್ಯೆಯನ್ನು ಬಿಡಿಸಲು ಬ್ರಿ॥ ಸರ್ಕಾರದ ಯೋಜನೆ

ಸಮ್ರಾಟ್ ಸರಕಾರದವರು ಭಾರತ ಸಮಸ್ಯಾನಿವಾರಣೆಗಾಗಿ ತಯಾರಿಸಿರುವ ಯೋಜನೆ ಹೀಗಿದೆ

(೧) ಪೀಠಿಕೆ ೧೯೪೮ ನೇ ಜೂನ್ ವೇಳೆಗೆ ಬ್ರಿಟಿಷ್ ಭಾರತದಲ್ಲಿ ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಿ ಕೊಡುವುದಾಗಿ ೨೦-೨-೪೭ ನೇ ದಿನ ಸಮ್ರಾಟ್ ಸರಕಾರದವರು ಪ್ರಕಟಿಸಿದರು ಮಂತ್ರಿನಿಯೋಗಿಗಳ ಯೋಜನೆಯಂತೆ ಪ್ರಮುಖ ರಾಜಕೀಯ ಪಕ್ಷಗಳು ಸಹಕರಿಸಿ, ಎಲ್ಲರಿಗೂ ಅಂಗೀಕಾರ ಯೋಗ್ಯವಾದ ಆಡಳಿತ ವ್ಯವಸ್ಥೆಯನ್ನು ರೂಪುಗೊಳಿಸುವುದು ಸಾಧ್ಯವೆಂದು ಸಮ್ರಾಟ್ ಸರ್ಕಾರ ನಂಬಿತ್ತು ಈ ನಂಬಿಕೆ ಈಡೇರಲಿಲ್ಲ

(೨) ಮದರಾಸು, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಮಧ್ಯಪ್ರಾಂತ್ಯ ಅಸ್ಸಾಂ ಒರಿಸ್ಸಾ ಮತ್ತು ವಾಯವ್ಯ ಪ್ರಾಂತ್ಯಗಳ ಬಹುಮಂದಿ ಪ್ರತಿನಿಧಿಗಳೂ ಮತ್ತು ಅಜ್ಮೀರ್ ಮಾರ್‍ವಾರ್ ದೆಹಲಿ ಮತ್ತು ಕೊಡಗು ಪ್ರತಿನಿಧಿಗಳೂ ಹೊಸ ರಾಜ್ಯಾಂಗವನ್ನು ರೂಪುಗೊಳಿಸುವ ಕಾರ್ಯದಲ್ಲಿ ಮುಂದುವರೆದಿದ್ದಾರೆ ಆದರೆ ಮುಸ್ಲಿಂಲೀಗ್ ಪಕ್ಷದವರು ಅಂದರೆ ಬಂಗಾಳಾ, ಪಂಜಾಬು ಮತ್ತು ಸಿಂಧಿನ ಬಹುಮಂದಿ ಪ್ರತಿನಿಧಿಗಳೂ ಮತ್ತು ಬ್ರಿಟಿಷ್ ಬೆಲೂಚಿಸ್ತಾನದ ಪ್ರತಿನಿಧಿಗಳೂ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಿಲ್ಲ

ಜನಾಭಿಪ್ರಾಯಕ್ಕೆ ಮನ್ನಣೆ

(೩) ಭಾರತೀಯರು ಹೇಗೆ ಇಚ್ಛಿಸಿದರೆ ಹಾಗೆ ಅಧಿಕಾರವನ್ನು ವರ್ಗಾಯಿಸಿ ಕೊಡಬೇಕೆಂಬುದೇ ಮೊದಲಿನಿಂದ ಸಮ್ರಾಟ್ ಸರ್ಕಾರದವರ ಇಚ್ಛೆಯಾಗಿದೆ ರಾಜಕೀಯ ಪಕ್ಷಗಳಿಗೆ ಒಪ್ಪಂದವಾಗಿದ್ದರೆ ಈ ಕಾರ್ಯ ಸುಲಭವಾಗುತ್ತಿತ್ತು ಆದು ಆಗದ ಇದ್ದುದರಿಂದ ಜನಾಭಿಪ್ರಾಯ ತಿಳಿಯುವ ಜವಾಬ್ದಾರಿ ಸಮ್ರಾಟ್ ಸರ್ಕಾರದ ಮೇಲೆ ಬಿತ್ತು ಭಾರತದ ರಾಜಕೀಯ ಮುಖಂಡರೊಡನೆ ಪೂರ್ಣ ಸಮಾಲೋಚನೆ ನಡೆಸಿ ಸಮ್ರಾಟ್ ಸರ್ಕಾರದವರು ಕೆಳಗೆ ಕಂಡ ಯೋಜನೆಯನ್ನು ಈಗ ಸಿದ್ಧಗೊಳಿಸಿದ್ದಾರೆ ಕಟ್ಟಕಡೆಯದಾಗಿ ಭಾರತಕ್ಕೆ ತಾವೇ ರಾಜ್ಯಾಂಗವೊಂದನ್ನು ಸಿದ್ಧಗೊಳಿಸುವ ಆಶೆ ಬ್ರಿಟಿಷ್ ಸರಕಾರಕ್ಕೆ ಇಲ್ಲವೇ ಇಲ್ಲ ಇದು ಭಾರತೀಯರು ಮಾಡಬೇಕಾದ ಕೆಲಸ ಅಷ್ಟು ಮಾತ್ರವಲ್ಲ, ರಾಜಕೀಯ ಪಕ್ಷಗಳು ಸಂಧಾನ ನಡೆಸಿ, ಅಖಂಡ ಭಾರತ ರಾಜ್ಯಾಂಗವನ್ನು ಸ್ಥಾಪಿಸುವುದಕ್ಕೆ ಈ ಯೋಜನೆ ಅಡ್ಡಿಯಾಗಿಲ್ಲ

ಇನ್ನೊಂದು ರಾಜ್ಯಾಂಗ ಸಭೆ

(೪) ನಿರ್ಧರಿಸಬೇಕಾದ ಸಮಸ್ಯೆಗಳು ಈಗಿರುವ ರಾಜ್ಯಾಂಗ ಸಭೆಯ ಕೆಲಸಕ್ಕೆ ಅಡಚಣೆಯುಂಟು ಮಾಡುವುದು ಸಮ್ರಾಟ್ ಸರ್ಕಾರದ ಉದ್ದೇಶವಲ್ಲ ಈ ಪ್ರಕಟನೆಯ ಫಲವಾಗಿ, ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಿರುವ ಪ್ರಾಂತ್ಯಗಳ ಲೀಗ್ ಪ್ರತಿನಿಧಿಗಳು ಸಭೆಯ ಕಾರ್ಯಕಲಾಪಗಳಲ್ಲಿ ತಮ್ಮ ಪಾತ್ರವನ್ನು ವಹಿಸುವರೆಂದು ನಂಬಲಾಗಿದೆ ಆದರೆ, ಈ ಸಭೆಯು ರಚಿಸುವ ರಾಜ್ಯಾಂಗವನ್ನು ಇಷ್ಟಪಡದ ಭಾಗಗಳಮೇಲೆ ಹೊರಿಸಲು ಸಾಧ್ಯವಿಲ್ಲ ಆದ್ದರಿಂದ ಅಂತಹ ಕ್ಷೇತ್ರಗಳಿಗೆ ಅನ್ವಯಿಸುವ ರಾಜ್ಯಾಂಗವನ್ನು ಈಗಿರುವ ರಾಜ್ಯಾಂಗ ಸಭೆಯೇ ರೂಪುಗೊಳಿಸಬೇಕೇ ಅಥವಾ ಹೊಸ ಪ್ರತ್ಯೇಕ ರಾಜ್ಯಾಂಗ ಸಭೆ ಸ್ಥಾಪಿಸಲ್ಪಡಬೇಕೇ—ಎಂಬ ಬಗ್ಗೆ ಅಲ್ಲಿನ ಜನಾಭಿಪ್ರಾಯ ತಿಳಿಯಲು ಮುಂದೆ ಹೇಳುವ ಏರ್ಪಾಟು ಮಾಡಲಾಗಿದೆ ಈ ಕಾರ್ಯವಾಯಿತೆಂದರೆ ಯಾವ ಆಡಳಿತ ವರ್ಗಕ್ಕೆ ಅಥವಾ ವರ್ಗಗಳಿಗೆ ಅಧಿಕಾರವನ್ನು ವರ್ಗಾಯಿಸಬೇಕೆಂಬುದನ್ನು ನಿರ್ಧರಿಸಲು ಸಾಧ್ಯವಾಗುವುದು

ಬಂಗಾಳಾ ಮತ್ತು ಪಂಜಾಬು

(೫) ಬಂಗಾಳಾ ಮತ್ತು ಪಂಜಾಬು ಪ್ರಾಂತ್ಯಗಳ "ಅಸೆಂಬ್ಲಿ" ಸಭೆಗಳ ಸದಸ್ಯರನ್ನು (ಐರೋಪ್ಯರನ್ನು ಬಿಟ್ಟು) ಎರಡು ಭಾಗವಾಗಿ ವಿಂಗಡಿಸಲಾಗುವುದು. ಮುಸ್ಲಿಮರು ಬಹುಸಂಖ್ಯಾತರಾಗಿರುವ ಜಿಲ್ಲೆಗಳ ಪ್ರತಿನಿಧಿಗಳೇ ಒಂದು ಗುಂಪು, ಉಳಿದ ಜಿಲ್ಲೆಗಳ ಪ್ರತಿನಿಧಿಗಳೇ ಒಂದು ಗುಂಪು ಜಿಲ್ಲೆಗಳ ಜನಸಂಖ್ಯೆಯನ್ನು ತಿಳಿಯಲು ೧೯೪೧ ನೇ ಜನಗಣತಿಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗುವುದು

(೬) ಈ ಎರಡ ಪ್ರಾಂತ್ಯಗಳ 'ಅಸೆಂಬ್ಲಿ' ಸದಸ್ಯರ ಎರಡು ಗುಂಪುಗಳು ಪ್ರತ್ಯೇಕವಾಗಿ ಕುಳಿತು, ಆ ಪ್ರಾಂತ್ಯಗಳನ್ನು ವಿಭಾಗಿಸಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವುವು ಯಾವುದೇ ಗುಂಪು ಸಾಮಾನ್ಯ ಬಹುಮತದಿಂದ ವಿಭಾಗಿಸಬೇಕೆಂದು ನಿಶ್ಚಯಿಸಿದರೂ ವಿಭಾಗ ನಡೆಯುವುದು

(೭) ಒಂದು ವೇಳೆ ಪ್ರಾಂತ್ಯವು ಒಂದಾಗಿಯೇ ಉಳಿಯಬೇಕೆಂದು ತೀರ್ಮಾನವಾದರೆ, ಅದು ಯಾವ ರಾಜ್ಯಾಂಗ ಸಭೆಗೆ ಸೇರಬೇಕೆಂಬುದು ಮುಂದಾಗಿ ಎರಡು ಗುಂಪಿನ ಸದಸ್ಯರಿಗೂ ತಿಳಿದಿರಬೇಕಾದದ್ದು ಅಪೇಕ್ಷಣೀಯ ಎರಡು ಗುಂಪಿನ ಸದಸ್ಯರೂ ಸೇರಿ, ಪ್ರಾಂತ್ಯವು ಒಂದುವೇಳೆ ಒಂದೇ ಆಗಿ ಉಳಿಯಬೇಕೆಂದು ನಿರ್ಧರಿಸಿದಲ್ಲಿ ಐರೋಪ್ಯರ ಹೊರತು ಮಿಕ್ಕ ಎಲ್ಲ ಅಸೆಂಬ್ಲಿ ಸದಸ್ಯರೂ ಸಭೆ ಸೇರಿ, ಪ್ರಾಂತ್ಯವು ಯಾವ ರಾಜ್ಯಾಂಗಸಭೆಗೆ ಸೇರಬೇಕೆಂಬುದನ್ನು ಗೊತ್ತು ಮಾಡತಕ್ಕದ್ದು

(೮) ವಿಭಾಗವಾಗಬೇಕೆಂದು ನಿರ್ಧರಿಸುವುದಾದರೆ ಅಸೆಂಬ್ಲಿ ಸಭೆಯ ಎರಡು ಗುಂಪುಗಳು ತಾವು ಪ್ರಾತಿನಿಧ್ಯ ವಹಿಸಿರುವ ಕ್ಷೇತ್ರಗಳು ಈಗಿನ ರಾಜ್ಯಾಂಗ ಸಭೆಗೆ ಸೇರಬೇಕೇ ಅಥವಾ ಹೊಸ ರಾಜ್ಯಾಂಗ ಸಭೆಗೆ ಸೇರಬೇಕೇ ಎಂಬುದನ್ನು ನಿರ್ಧರಿಸಬೇಕು

(೯) ವಿಭಾಗದ ಪ್ರಶ್ನೆಯನ್ನು ತತ್‍ಕ್ಷಣ ನಿರ್ಧರಿಸಲು ಬಂಗಾಳಾ ಮತ್ತು ಪಂಜಾಬುಗಳ ಅಸೆಂಬ್ಲಿ ಸದಸ್ಯರು ಎರಡು ಗುಂಪುಗಳಾಗಿ ಕೂಡುವರು ಇದು ಕೇವಲ ಪೂರ್ವಭಾವಿ ಕಾರ್ಯ ಕಟ್ಟಕಡೆಯದಾಗಿ ವಿಭಜನೆ ಕಾರ್ಯವಾಗಬೇಕಾಗಿದ್ದರೆ ಗಡಿ ಪ್ರಶ್ನೆ ಮುಂತಾದವುಗಳನ್ನು ತೀರ್ಮಾನಿಸಬೇಕಾಗಿದೆ. ಅದಕ್ಕಾಗಿ ಗಡಿ ನಿರ್ದೇಶನ ಮಂಡಲಿಯನ್ನು ಸ್ಥಾಪಿಸಬೇಕು ಅದು ಮುಸ್ಲಿಂ ಬಹು ಸಂಖ್ಯಾತ ಕ್ಷೇತ್ರಗಳನ್ನೂ ಮುಸ್ಲಿಮೇತರ ಬಹುಸಂಖ್ಯಾತ ಕ್ಷೇತ್ರಗಳನ್ನೂ ನಿರ್ಧರಿಸುವುದು. ಬಂಗಾಳಾ ಗಡಿ ನಿರ್ದೇಶನ ಮಂಡಲಿಗೂ ಇದೇ ಸೂಚನೆ ಕೊಡಲಾಗುವುದು ಅಂತಹ ಮಂಡಲಿಗಳ ವರದಿ ಸಿದ್ಧವಾಗುವವರೆಗೆ ಪರಿಶಿಷ್ಟದಲ್ಲಿ ಸೂಚಿಸಿರುವ ತಾತ್ಕಾಲಿಕ ಗಡಿಯನ್ನೇ ಆಧಾರವಾಗಿ ಇಟ್ಟುಕೊಳ್ಳಲಾಗುವುದು

(೧೦) ಸಿಂಧ್ ಅಸೆಂಬ್ಲಿಯ ಸದಸ್ಯರು [ಐರೋಪ್ಯರನ್ನು ಬಿಟ್ಟು] ವಿಶೇಷ ಸಭೆಸೇರಿ, ಈಗಿನ ರಾಜ್ಯಾಂಗ ಸಭೆಗೆ ಸೇರಬೇಕೇ ಅಥವಾ ಹೊಸ ರಾಜ್ಯಾಂಗ ಸಭೆಗೆ ಸೇರಬೇಕೇ ಎಂಬುದನ್ನು ನಿರ್ಧರಿಸುವರು

ಗಡಿನಾಡು ಪ್ರಾಂತ್ಯ

(೧೧) ಗಡಿನಾಡು ಪ್ರಾಂತ್ಯದ ಪರಿಸ್ಥಿತಿಯು ಅಸಾಧಾರಣವಾಗಿದೆ ಈಗಾಗಲೇ ಇಬ್ಬರು ಗಡಿನಾಡಿನ ಪ್ರತಿನಿಧಿಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ

ಒಂದುವೇಳೆ ಪಂಜಾಬು ಅಥವಾ ಪಂಜಾಬಿನ ಯಾವ ಭಾಗವೇ ಆಗಲಿ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ನಿರಾಕರಿಸಿದರೆ ಅಂತಹ ಪರಿಸ್ಥಿತಿಯಲ್ಲಿ ಭೌಗೋಳಿಕ ಮತ್ತು ಇತರ ಪರಿಸ್ಥಿತಿಗಳ ದೃಷ್ಟಿಯಿಂದ ಗಡಿ ಪ್ರಾಂತ್ಯಕ್ಕೆ ತನ್ನ ಪರಿಸ್ಥಿತಿಯನ್ನು ಪುನರ್ವಿಮರ್ಶಿಸಲು ಅವಕಾಶಕೊಡಬೇಕಾಗುವುದು ಆಗ ೪ ನೆಯ ಪ್ಯಾರದಲ್ಲಿ ಸೂಚಿಸಲಾಗಿರುವ ವಿಧಿಗಳಲ್ಲಿ ಯಾವುದಾದರೂ ಒಂದನ್ನು ಅಂಗೀಕರಿಸಬಹುದೆಂದು ಗಡಿನಾಡಿನ ಶಾಸನ ಸಭೆಗೆ ಸೂಚಿಸಲಾಗುವುದು

ಈ 'ರೆಫರೆಂಡಂ' ಅನ್ನು ಗವರ್ನರ್ ಜನರಲ್‍ರವರ ನೇತೃತ್ವದಲ್ಲಿ ನಡೆಸಲಾಗುವುದು

ಬ್ರಿ॥ ಬೆಲೂಚಿಸ್ತಾನ

(೧೨) ಬ್ರಿ॥ ಬೆಲೂಚಿಸ್ತಾನದಲ್ಲಿ ರಾಜ್ಯಾಂಗ ಸಭೆಗೆ ಒಬ್ಬರು ಚುನಾಯಿತರಾಗಿದ್ದರೂ, ಅವರು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುತ್ತಿಲ್ಲ ಈ ಪ್ರಾಂತದ ಭೌಗೋಳಿಕ ಸ್ಥಾನದ ದೃಷ್ಟಿಯಿಂದ ಪರಿಸ್ಥಿತಿಯನ್ನು ಪುನರ್ವಿಮರ್ಶಿಸಿ ೪ ನೆಯ ಪ್ಯಾರಾದಲ್ಲಿ ನಮೂದಿಸಲ್ಪಟ್ಟಿರುವ ಸಲಹೆಗಳಲ್ಲಿ ಯಾವುದನ್ನು ಬೇಕಾದರೂ ಅಂಗೀಕರಿಸಲು ಅವಕಾಶ ಕೊಡಲಾಗುವುದು ಇದು ಸೂಕ್ತವಾಗಿ ನೆರವೇರುವಂತೆ ಕಾರ್ಯಕ್ರಮ ಕೈಗೊಳ್ಳಲು ಗವರ್ನರ್ ಜನರಲ್‍ರವರು ಪರ್ಯಾಲೋಚಿಸುತ್ತಿದ್ದಾರೆ

ಅಸ್ಸಾಂ ಭವಿಷ್ಯ

(೧೩) ಅಸ್ಸಾಮಿನಲ್ಲಿ ಮುಸ್ಲಿಮೇತರ ಸಂಖ್ಯೆಯೇ ಅತ್ಯಧಿಕವಾಗಿದೆ ಆದರೆ "ಸಿಲ್ಹೆಟ್" ಜಿಲ್ಲೆಯಲ್ಲಿ ಮಾತ್ರ ಮುಸ್ಲಿಮರ ಸಂಖ್ಯೆಯೇ ಅಧಿಕವಾಗಿದೆ

ಬಂಗಾಳವನ್ನು ವಿಭಾಗಿಸುವುದು ಅನಿವಾರ್ಯವಾದರೆ ಅಸ್ಸಾಂ ಸರ್ಕಾರದ ಸಹಾಯದಿಂದ ಗವರ್ನರ್ ಜನರಲ್‍ರವರು ಸಿಲ್ಹೆಟ್ ಜಿಲ್ಲೆಯಲ್ಲಿ "ರೆಫರಂಡಂ" ಏರ್ಪಡಿಸುವರು ಈ ರೆಫರಂಡಂನಲ್ಲಿ ಸಿಲ್ಹೆಟ್ ಜಿಲ್ಲೆಯು ಪೂರ್ವ ಬಂಗಾಳದೊಡನೆ ಸೇರಬೇಕೆಂದು ನಿರ್ಧರಿಸಲ್ಪಟ್ಟರೆ ಗಡಿ ನಿರ್ಧಾರ ಸಮಿತಿಯು ನೇಮಿಸಲ್ಪಟ್ಟು, ಸಿಲ್ಹೆಟ್ ಜಿಲ್ಲೆಯಲ್ಲಿ ಮುಸ್ಲಿಂ ಬಹು ಸಂಖ್ಯಾತರ ಪ್ರದೇಶಗಳ ಗಡಿಗಳನ್ನು ನಿರ್ಧರಿಸುವುದು ಈ ಪ್ರದೇಶಗಳು ಪೂರ್ವ ಬಂಗಾಳದೊಡನೆ ಸೇರಿಹೋಗುವುವು

ಅಸ್ಸಾಂ ಪ್ರಾಂತದ ಉಳಿದ ಭಾಗಗಳು ಈಗಿನಂತೆಯೇ ಈಗಿನ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುತ್ತಿರುವುವು.

ರಾಜ್ಯಾಂಗ ಸಭೆಗಳ ಪ್ರಾತಿನಿಧ್ಯ

(೧೪) ಬಂಗಾಳಾ, ಪಂಜಾಬುಗಳು ವಿಭಾಗಿಸಲ್ಪಡುವ ಸಂದರ್ಭದಲ್ಲಿ ರಾಜ್ಯಾಂಗ ಸಭೆಗಳಿಗೆ ಪ್ರತಿನಿಧಿಗಳನ್ನು ೧೦ ಲಕ್ಷ ಪ್ರಜಾಸಂಖ್ಯೆಗೆ ಒಬ್ಬ ಪ್ರತಿನಿಧಿಯಂತೆ ಚುನಾಯಿಸಲು ಹೊಸದಾಗಿ ಚುನಾವಣೆಗಳನ್ನು ಏರ್ಪಡಿಸುವುದು ಅವಶ್ಯಕವಾಗಿದೆ. ಸಿಲ್ಹೆಟ್ ಜಿಲ್ಲೆಯು ಪೂರ್ವ ಬಂಗಾಳದೊಡನೆ ಸೇರಿಹೋಗಬೇಕೆಂಬ ನಿರ್ಧಾರವಾದರೆ ಅಲ್ಲಿಯೂ ಹೊಸ ಚುನಾವಣೆಗಳನ್ನು ನಡೆಸಬೇಕಾಗುವುದು

ಪ್ರತಿಪ್ರದೇಶದ ಪ್ರತಿನಿಧಿಗಳ ಸಂಖ್ಯೆ

ಸಿಲ್ಹೆಟ್ ಜಿಲ್ಲೆ

ಜನರಲ್ — ೧
ಮುಸ್ಲಿಮರು — ೨

ಪಶ್ಚಿಮ ಬಂಗಾಳ :

ಜನರಲ್ — ೧೫
ಮುಸ್ಲಿಮರು — ೪

ಪೂರ್ವ ಬಂಗಾಳ :

ಜನರಲ್ — ೧೨
ಮುಸ್ಲಿಮರು — ೨೯

ಪಶ್ಚಿಮ ಪಂಜಾಬ್ :

ಜನರಲ್ — ೩
ಮುಸ್ಲಿಮರು — ೧೨
ಸಿಖ್ಖರು — ೨

ಪೂರ್ವ ಪಂಜಾಬ್ :

ಜನರಲ್ — ೬
ಮುಸ್ಲಿಮರು — ೪
ಸಿಖ್ಖರು — ೨

(೧೫) ವಿವಿಧ ಪ್ರದೇಶಗಳ ಪ್ರತಿನಿಧಿಗಳು ಈಗಿರುವ ರಾಜ್ಯಾಂಗ ಸಭೆಗೆ ಬೇಕಾದರೂ ಸೇರಬಹುದು, ಇಲ್ಲವೇ ಪ್ರತ್ಯೇಕವಾದ ರಾಜ್ಯಾಂಗ ಸಭೆಯನ್ನು ರಚಿಸಬಹುದು.

ಆಡಳಿತ ವಿಚಾರಗಳು

(೧೬) ವಿಭಜನೆಯು ನಿರ್ಧಾರವಾದ ಕೂಡಲೇ ಆಡಳಿತ ವಿಚಾರಗಳಲ್ಲಿ ಸಂಧಾನಗಳು ಪ್ರಾರಂಭಿಸಲ್ಪಡಬೇಕು

ಮೊದಲನೆಯದಾಗಿ ಅಧಿಕಾರ ವಹಿಸಲಿರುವ ಎರಡು ಸರ್ಕಾರಗಳಿಗೂ ಈಗಿನ ಕೇಂದ್ರ ಸರಕಾರಕ್ಕೆ ಸೇರಿದ ರಕ್ಷಣೆ, ಹಣಕಾಸು, ಸಂಚಾರಮಾರ್ಗಗಳು ಮುಂತಾದ ಸಮಸ್ತ ವಿಷಯಗಳ ಬಗ್ಗೆ ಸಂಧಾನವೇರ್ಪಡಬೇಕು.

ಎರಡನೆಯದಾಗಿ ಮುಂದೆ ಅಧಿಕಾರ ಸ್ವೀಕರಿಸುವ ಎರಡು ಪಕ್ಷಗಳಿಗೂ, ಬ್ರಿಟಿಷ್ ಸರಕಾರಕ್ಕೂ ಅಧಿಕಾರ

ವರ್ಗಾವಣೆಯ ಸಂದರ್ಭದಲ್ಲಿ ಆಗಬೇಕಾಗಿರುವ ಕರಾರು, ಕೌಲುಗಳ ಬಗ್ಗೆ ಸಂಧಾನವೇರ್ಪಡಬೇಕು

ವಿಭಾಗಿಸಲ್ಪಡುವ ಪ್ರಾಂತಗಳಲ್ಲಿಯೂ ಎಲ್ಲಾ ಪ್ರಾಂತ ಸರ್ಕಾರದ ವಿಷಯಗಳ ಬಗ್ಗೆ ಸಂಧಾನ ನಡೆಯುವುದು. (ವರಮಾನ ಮತ್ತು ಖರ್ಚು, ಸಾಲಸೋಲಗಳು, ಪೋಲೀಸು, ಶ್ರೇಷ್ಠನ್ಯಾಯಾಸ್ಥಾನ ಇವೆಲ್ಲಾ ಸೇರಿವೆ)

ಗಡಿನಾಡಿನ "ಟ್ರೈಬ್ಸ್"

(೧೭) ಮುಂದೆ ಅಧಿಕಾರ ವಹಿಸುವ ಪಕ್ಷವು ಗಡಿನಾಡಿನ "ಟ್ರೈಬ್ಸ್" ಗಳೊಡನೆ ಒಪ್ಪಂದಕ್ಕೆ ಬರಬೇಕು

ಸಂಸ್ಥಾನಗಳು

(೧೮) ಮೇಲೆ ನಮೂದಿಸಲಾಗಿರುವ ನಿರ್ಧಾರಗಳು ಬ್ರಿಟಿಷ್ ಭಾರತಕ್ಕೆ ಮಾತ್ರ ಅನ್ವಯಿಸುವುದೆಂದೂ, ಸಂಸ್ಥಾನಗಳ ವಿಚಾರದಲ್ಲಿ ಕ್ಯಾಬಿನೆಟ್ ನಿಯೋಗದವರ ಯೋಜನೆಯಲ್ಲಿ ವಿಶದೀಕರಿಸಲ್ಪಟ್ಟಿರುವ ನೀತಿಯಲ್ಲಿ ಯಾವ ಬದಲಾವಣೆಗಳನ್ನೂ ಮಾಡಲಾಗುವುದಿಲ್ಲವೆಂದೂ ಬ್ರಿಟಿಷ್ ಸರ್ಕಾರದವರು ಖಚಿತವಾಗಿ ಸ್ಪಷ್ಟಪಡಿಸಿದ್ದಾರೆ

ಇವೆಲ್ಲಾ ಶೀಘ್ರ ಜರುಗಬೇಕು

(೧೯) ಅಧಿಕಾರ ವರ್ಗಾವಣೆಯು ತ್ವರಿತವಾಗಿ ಮುಗಿಯಬೇಕಾದರೆ ಮೇಲ್ಕಂಡ ಕಾರ್ಯಕ್ರಮಗಳೆಲ್ಲಾ ಬಿರುಸಿನಿಂದ ಸಾಗಬೇಕು ವಿಳಂಬವನ್ನು ತಡೆಯಲು, ಮೇಲ್ಕಂಡ ಯೋಜನೆಯ ನಿಯಮಗಳಿಗನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ಆಯಾ ಪ್ರಾಂತ್ಯಗಳ ಕಾರ್ಯಕ್ರಮಗಳು ಸ್ವತಂತ್ರರೀತಿಯಲ್ಲಿ ನಡೆಯಬೇಕು

ಈಗ ಕೆಲಸಮಾಡುತ್ತಿರುವ ರಾಜ್ಯಾಂಗ ಸಭೆಯೂ, ಮುಂದೆ ರಚಿಸಲ್ಪಡಬಹುದಾದ ರಾಜ್ಯಾಂಗ ಸಭೆಯೂ ಆಯಾ ಪ್ರದೇಶಗಳಿಗೆ ರಾಜ್ಯಾಂಗ ವ್ಯವಸ್ಥೆಯನ್ನು ರಚಿಸುವುವು. ಅವುಗಳು ಯಾವ ನಿಯಮಗಳನ್ನೂ ಬೇಕಾದರೂ ರಚಿಸಲು ಅಡ್ಡಿಯಿಲ್ಲ

ತ್ವರಿತವಾಗಿ ಅಧಿಕಾರ ವರ್ಗ

(೨೦) ಭಾರತದ ಪ್ರಮುಖ ಪಕ್ಷದವರು ಆದಷ್ಟು ಜಾಗ್ರತೆಯಾಗಿ ಅಧಿಕಾರ ವರ್ಗಾವಣೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಭಾರತದ ಆಶೋತ್ತರಗಳ ಬಗ್ಗೆ ಸಾರ್ವಭೌಮ ಸರಕಾರದವರಿಗೆ ಪೂರ್ಣ ಸಹಾನುಭೂತಿ ಇದೆ. ಈಗ ನಿಶ್ಚಯವಾಗಿರುವ ಕಾಲಕ್ಕಿಂತಲೂ ಮುಂಚೆಯೆ ಸ್ವತಂತ್ರವಾದ ಭಾರತ ಸರ್ಕಾರ ಅಥವಾ ಸರ್ಕಾರಗಳನ್ನು ಸ್ಥಾಪಿಸಿ ಅಧಿಕಾರವನ್ನು ಅವುಗಳಿಗೆ ವರ್ಗಾಯಿಸಲು ಸಾಧ್ಯವಾಗಬಹುದೆಂದು ಬ್ರಿಟಿಷ್ ಸರ್ಕಾರದ ಆಶಯವಾಗಿದೆ

ಅಧಿಕಾರವನ್ನು ಸಾಧ್ಯವಾದಷ್ಟು ಜಾಗ್ರತೆ ವರ್ಗಾಯಿಸಲು ಪಾರ್ಲಿಮೆಂಟಿನ ಈಗಿನ ಅಧಿವೇಶನದಲ್ಲಿಯೇ ಡೊಮಿನಿಯನ್ ಸ್ಟೇಟಸ್ ಆಧಾರದ ಮೇಲೆ ಒಂದು ಅಥವಾ ಎರಡು ಅಧಿಕಾರ ವರ್ಗಕ್ಕೆ ಅಧಿಕಾರ ವರ್ಗಾಯಿಸಲು ಸೂಕ್ತವೂ, ಅವಶ್ಯಕವೂ, ಆದ ಶಾಸನಗಳನ್ನು ಮಂಡಿಸಲಾಗುವುದು ಈ ನಿರ್ಧಾರದಿಂದ ರಾಜ್ಯಾಂಗ ಸಭೆಗಳ ಕಾರ್ಯಕಲಾಪಗಳಿಗಾಗಲೀ, ಕಾರ್ಯ ಸ್ವಾತಂತ್ರ್ಯಕ್ಕಾಗಲೀ ಧಕ್ಕೆ ಬರುವುದಿಲ್ಲ.

ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರುವ ಅಥವಾ ಪ್ರತ್ಯೇಕವಾಗುವ ಅಧಿಕಾರ ಈ ರಾಜ್ಯಾಂಗ ಸಭೆಗಳಿಗಿದ್ದೇ ಇದೆ.

(೨೧) ಗವರ್ನರ್ ಜನರಲ್‌ರವರು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಆಗಾಗ್ಯೆ ಘೋಷಣೆಗಳನ್ನು ಹೊರಡಿಸುವರು

ಪರಿಶಿಷ್ಟ

೧೯೪೧ ರ ಜನಗಣತಿಯ ಅಂಕಿ ಅಂಶಗಳಿಗನುಸಾರವಾಗಿ ಈ ಕೆಳಗೆ ನಮೂದಿಸಲಾಗಿರುವ ಪಂಜಾಬ್ ಮತ್ತು ಬಂಗಾಳದ ಭಾಗಗಳು ಮುಸ್ಲಿಂ ಬಹುಸಂಖ್ಯಾತರ ಪ್ರದೇಶಗಳಾಗಿವೆ.

ಪಂಜಾಬ್

೧ ಲಾಹೋರ್ ಡಿವಿಜನ್ ಗುಜರನ್‌ವಾಲ, ಗುರುದಾಸಪುರ, ಲಾಹೋರ್, ಷೇಕ್‌ಪುರ, ಸಯಾಲ್‌ಕೋಟೆ.

೨ ರಾವಲ್ಪಿಂಡಿ ಜಿಲ್ಲೆ ಅಟಕ್, ಗುಜ್ರಾತ್, ಝೀಲಂ, ಮಿಯಾನ್‌ವಾಲಿ, ರಾವಲ್ಪಿಂಡಿ, ಷಹಪುರ.

೩. ಮುಲ್ತಾನ್ ಪ್ರದೇಶ, ಡೇರಘಾಜಿಖಾನ್, ಝುಂಗ್, ಲ್ಯಾಲ್‌ಪುರ, ಮಾಂಟ್ಗೋಮರಿ, ಮುಲ್ತಾನ್, ಮುಝಫರ್ ಘರ್.

ಬಂಗಾಳ

(೧ ಚಿತ್ತಗಾಂಗ್ ಡಿವಿಜನ್) ಚಿತ್ತಗಾಂಗ್, ನವಖಲಿ, ತಿಪ್ಪೇರ, (೨ ಡಾಕಾ ಡಿವಿಜನ್) ಬಕರ್‌ಗಂಜ್, ಡಾಕಾ, ಫರೀದ್‌ಪುರ, ಮಿಮನ್‌ಸಿಂಗ್, (೩ ಪ್ರೆಸಿಡೆನ್ಸಿ ಡಿವಿಜನ್) ಜೆಸ್ಸೂರ್, ಮುರ್ಷಿದಾಬಾದ್, ನಾದಿಯ, (೪ ರಾಜಷಾಹಿ ಡಿವಿಜನ್) ಬೋಗ್ರ, ಡೀನಜ್‌ಪುರ, ಮಾಲಾಡಿ, ಪಾಬ್ನ, ರಾಜಷಾಹಿ, ರಂಗಪುರ

ಭಾರತದ ಬಗ್ಗೆ ವೈಸ್ರಾಯರ ಹೇಳಿಕೆ

ಕಳೆದ ೩ ನೇ ತಾರೀಖಿನ ದಿವಸ ಸಂಜೆ ೭-೩೦ಕ್ಕೆ ವೈಸ್ರಾಯರು ಮಾಡಿದ ರೇಡಿಯೋ ಭಾಷಣದ ವಿವರ ಈ ರೀತಿ ಇದೆ.

ಬ್ರಿಟಿಷರಿಂದ ಭಾರತೀಯರಿಗೆ ಆಡಳಿತಾಧಿಕಾರ ವರ್ಗಾವಣೆಯಾಗುವ ಕ್ರಮದ ವಿಚಾರದಲ್ಲಿ ಬ್ರಿಟಿಷ್ ಸರ್ಕಾರದ ಕೊನೆಯ ನಿರ್ಧಾರವನ್ನು ಹೇಳಿಕೆಯ ರೂಪದಲ್ಲಿ ಕೊಡುವ ಮುನ್ನ ಭಾರತ ನಿವಾಸಿಗಳಿಗೆ ವೈಸ್ರಾಯರು ಸಂದೇಶವೊಂದನ್ನು ಇತ್ತರು ಅಲ್ಲದೆ ತಾವು ಭಾರತದ ನಾನಾ ರಾಜಕೀಯ ಪಕ್ಷ ನಾಯಕರೊಂದಿಗೆ ನಡೆಸಿದ ಚರ್ಚೆ, ತತ್ಫಲವಾಗಿ ತಾವು ಬ್ರಿಟಿಷ್ ಸರ್ಕಾರಕ್ಕಿತ್ತ ಸಲಹೆ ಇವುಗಳ ವಿವರಣೆಯನ್ನು ಮಾಡಿದರು

ಸಂಯುಕ್ತ ಭಾರತವೇ ಅತ್ಯಂತ ಸೂಕ್ತವಾದ ಪರಿಹಾರ ಮಾರ್ಗ

ಭಾರತಕ್ಕೆ ಮಾರ್ಚ್ ಕೊನೆಯಲ್ಲಿ ನಾನು ಬಂದಂದಿನಿಂದ । ಸಾಮಾನ್ಯವಾಗಿ ಪ್ರತಿನಿತ್ಯವೂ ಸಾಧ್ಯವಾದಷ್ಟು ಪಂಗಡಗಳ ನಾಯಕರು ಮತ್ತು ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ, ಅವರಿಂದ ಅನೇಕ ಉಪಯುಕ್ತವಾದ ವಿಚಾರಗಳನ್ನೂ, ಅಭಿಪ್ರಾಯಗಳನ್ನೂ ಪಡೆದಿರುತ್ತೇನೆ ಆದರೆ ಈ ಸಮಸ್ಯಾಪರಿಹಾರಕ್ಕೆ ಅತ್ಯಂತ ಸೂಕ್ತವಾದ ಮಾರ್ಗವೆಂದರೆ ಸಂಯುಕ್ತ ಭಾರತವೆಂದೇ ನನ್ನ ದೃಢವಾದ ನಂಬಿಕೆ ನಾನಾ ಪಂಗಡಗಳಲ್ಲಿ ಸ್ವಲ್ಪಮಟ್ಟಿನ ಸಹನೆ, ಸಹಾನುಭೂತಿಯಿಂದ ಇದು ಸಾಧ್ಯ

ನೂರಾರು ವರ್ಷಗಳಿಂದ ನೀವು ೪೦ ಕೋಟಿ ಜನ ಭಾರತೀಯರು ಒಟ್ಟಿಗೆ ಜೀವಿಸುತ್ತಿದ್ದೀರಿ ದೇಶವೆಲ್ಲಾ ಒಂದೇ ಎಂಬುದಾಗಿ ಪರಿಗಣಿಸಲ್ಪಟ್ಟು ಒಂದೇ ಸರಕಾರದ ಆಡಳಿತಕ್ಕೆ ಒಳಪಟ್ಟಿದೆ ಇದರ ಪರಿಣಾಮವಾಗಿ ದೇಶದಲ್ಲೆಲ್ಲಾ ಒಂದೇ ವಿಧವಾದ ವಾಹನ ಸೌಕರ್ಯಗಳು, ರಕ್ಷಣೆ, ಪೋಸ್ಟ್ ವ್ಯವಸ್ಥೆ, ನಾಣ್ಯ ಚಲಾವಣೆ, ಸುಂಕ ತೆರಿಗೆಗಳ ಪ್ರತಿಬಂಧಕಗಳಿಲ್ಲದಿರುವುದು ಮತ್ತು ರಾಜಕೀಯ ಸಂಘಟನೆ ಇವುಗಳು ಲಭಿಸಿವೆ ಕೋಮುವಾರು ವ್ಯತ್ಯಾಸಗಳು ಇವುಗಳನ್ನು ನಾಶಗೊಳಿಸಲಾರವೆಂದು ನನ್ನ ನಂಬಿಕೆಯಿತ್ತು ಇದಕ್ಕಾಗಿ ಸಮಾಲೋಚನೆಗಳಲ್ಲೆಲ್ಲಾ ನಾನು ೧೯೪೬ರ ಮೇ ೧೬ ರಲ್ಲಿ ಕ್ಯಾಬಿನೆಟ್ ನಿಯೋಗದವರು ಮಾಡಿದ ಯೋಜನೆಯನ್ನು ಪೂರ್ಣವಾಗಿ ಅಂಗೀಕರಿಸುವಂತೆ ರಾಜಕೀಯ ನಾಯಕರನ್ನು ಒತ್ತಾಯಪಡಿಸಿದೆ.

ನನ್ನ ಅಭಿಪ್ರಾಯದಲ್ಲಿ ಭಾರತದ ನಾನಾ ಪಂಗಡಗಳ ಹಿತರಕ್ಷಣೆಗೆ ಸರ್ವ ಶ್ರೇಷ್ಠವಾದ ವ್ಯವಸ್ಥೆ ಕ್ಯಾಬಿನೆಟ್ ಯೋಜನೆಯಲ್ಲಿದೆ ಆದರೆ ಭಾರತದ ಐಕ್ಯದ ರಕ್ಷಣೆಗಾಗಿ ಈ ಕ್ಯಾಬಿನೆಟ್ ಯೋಜನೆಗಾಗಲೀ, ಮತ್ತಾವ ಸೂಕ್ತವಾದ ಇತರ ಯೋಜನೆಗಾಗಲೀ ಒಪ್ಪಿಗೆಯನ್ನು ಪಡೆಯುವುದು ಅಸಾಧ್ಯವಾದುದು ವಿಷಾದಕರ

ವಿಭಜನೆಯು ಅಗತ್ಯ

ಆದರೆ ವಿಶಾಲವಾದ ಪ್ರದೇಶಗಳಲ್ಲಿ ಬಹು ಸಂಖ್ಯಾತವಾಗಿರುವ ಒಂದು ಪಂಗಡದವರು, ಮತ್ತೊಂದು ಪಂಗಡ ಪ್ರಬಲವಾಗಿರುವ ಸರಕಾರದ ಆಡಳಿತಕ್ಕೆ, ಅವರ ಒಪ್ಪಿಗೆಯುಲ್ಲದೆ ಒಳಪಡುವಂತೆ ಒತ್ತಾಯಪಡಿಸಲಾಗುವುದಿಲ್ಲ. ಇದಕ್ಕೆ ಬದಲಾಗಿ ದೇಶ ವಿಭಜಯೇ ಸೂಕ್ತವಾದ ಮಾರ್ಗವಾಗಿ ತೋರಿತು. ಯಾವಾಗ ಮುಸ್ಲಿಂ ಲೀಗಿನವರು ದೇಶ ವಿಭಜನೆಯನ್ನು ಕೋರಿದರೋ, ಆಗ ಅದೇ ಅಂಶಗಳ ಮೇಲೆ ಕಾಂಗ್ರೆಸ್ಸಿನವರು ಹಲವು ಪ್ರಾಂತಗಳ ವಿಭಜನೆಯನ್ನೂ ಕೋರಿದರು. ಈ ವಾದವನ್ನು ಎತ್ತಿ ಹಾಕಲಾಗುವುದಿಲ್ಲ

ವಿಭಜನೆಯ ಕ್ರಮ

ದೇಶ ಮತ್ತು ಪ್ರಾಂತ ವಿಭಜನೆಯಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಗೊಳಿಸಿ ವೈಸರಾಯರು ಈ ವಿಭಜನೆಯ ಪ್ರಶ್ನೆಯನ್ನು ಭಾರತೀಯರೇ ನಿರ್ಧರಿಸಬೇಕು ಬ್ರಿಟಿಷರು ಆಡಳಿತದ ಅಧಿಕಾರವನ್ನು ಭಾರತದ ಒಂದು ಅಥವಾ ಎರಡು ಸರಕಾರಗಳಿಗೆ ವರ್ಗಾಯಿಸುವ ವಿಚಾರವನ್ನು ಭಾರತೀಯರು ನಿರ್ಧರಿಸಲು ಸೂಕ್ತವಾದ ಕ್ರಮ ಹೇಳಿಕೆಯಲ್ಲಿ ನಿರೂಪಿಸಲಾಗಿದೆ ಮುಖ್ಯವಾಗಿ ಪಂಜಾಬ್, ಬಂಗಾಳ ಮತ್ತು ಅಸ್ಸಾಮಿನ ಒಂದು ಭಾಗದ ಜನರ ಅಭಿಪ್ರಾಯವನ್ನರಿಯಲು ಅಲ್ಲಿನ ಮುಸ್ಲಿಂ ಬಹುಸಂಖ್ಯಾತ ಭಾಗಗಳಿಗೂ ಉಳಿದ ಭಾಗಗಳಿಗೂ ಸರಹದ್ದನ್ನು ಪೂರ್ಣವಾಗಿ ಗೊತ್ತುಮಾಡಲು ಒಂದು ಸರಹದ್ದಿನ ಕಮಿಷನನ್ನು ನೇಮಿಸಲಾಗುವುದು ಎಂಬುದಾಗಿ ತಿಳಿಸಿದರು

ಸಿಖ್ಖರ ಸ್ಥಾನ

ಈ ವಿಚಾರವನ್ನು ಗಾಢವಾಗಿ ಬ್ರಿಟಿಷ್ ಸರಕಾರದವರು ಪರಿಶೀಲಿಸಿರುತ್ತಾರೆ ಪಂಜಾಬಿನ ಜನಸಂಖ್ಯೆಯ ಎಂಟರಲ್ಲಿ ಒಂದು ಭಾಗ ಸಿಖ್ ಜನರು ಇದ್ದಾರೆ ಆದರೆ ಇವರು ಪ್ರಾಂತದ ನಾನಾ ಭಾಗಗಳಲ್ಲಿ ಹಂಚಿ ಹೋಗಿರುತ್ತಾರೆ ಇದರಿಂದ ಯಾವ ರೀತಿಯಾಗಿ ಪ್ರಾಂತ ವಿಭಜನೆಯಾದರೂ ಈ ಜನರು ಬೇರೆ ಬೇರೆಯಾಗಿಯೇ ಇರುತ್ತಾರೆಂದು ತಿಳಿಸಿ, ವೈಸ್ರಾಯರು ಸಿಖ್ ಜನರೇ ಆಶಿಸುವ ಪಂಜಾಬ್ ಪ್ರಾಂತ ವಿಭಜನೆಯಿಂದ ಈ ಪಂಗಡದ ಜನರ ಹೆಚ್ಚು ಹಂಚಿಕೆಯಾಗಲಾರದು ಈ ಹಂಚಿಕೆಯ ಇತ್ಯರ್ಥಕ್ಕಾಗಿ ನೇಮಿತವಾಗುವ ಸರಹದ್ದಿನ ಕಮಿಷನ್ನಿನಲ್ಲಿ ಸಿಖ್ಖರಿಗೂ ಪ್ರಾತಿನಿಧ್ಯವಿರುತ್ತದೆ ಎಂಬುದಾಗಿ ಹೇಳಿದರು.

ಅಧಿಕಾರವರ್ಗ ಶೀಘ್ರ ನಡೆಯಬೇಕು

ಇದಕ್ಕಾಗಿ ಅವಶ್ಯವಾದ ಏರ್ಪಾಡುಗಳು ಮುಗಿದ ಕೂಡಲೇ ಡೋಮಿನಿಯನ್ ಸ್ಥಾನವನ್ನು ಹೊಂದಿರುವ ಬ್ರಿಟಿಷ್ ಭಾರತದ ಒಂದು ಅಥವಾ ಎರಡು ಸರಕಾರಗಳಿಗೆ ಈಗಲೇ ಅಧಿಕಾರವನ್ನು ವರ್ಗಾಯಿಸಬೇಕೆಂಬ ವೈಸ್ರಾಯರ ಸಲಹೆಗೆ ಬ್ರಿಟಿಷ್ ಸರಕಾರದ ಅಂಗೀಕಾರ ದೊರೆತಿದೆ ಇದು ಇನ್ನು ಹಲವು ತಿಂಗಳೊಳಗೇ ಕೈಗೂಡಬಹುದು

ಇಂಡಿಯಾ ಆಫೀಸು ರದ್ದು

ಈ ನಿರ್ಧಾರಗಳ ಪರಿಣಾಮವಾಗಿ ಇಂಡಿಯಾ ಆಫೀಸು ರದ್ದಾಗಿ, ಬ್ರಿಟಿಷ್ ಸರಕಾರ ಮತ್ತು ಭಾರತದ ಭವಿಷ್ಯ ಸಂಬಂಧ ವ್ಯವಹಾರಗಳಿಗಾಗಿ ಬೇರೊಂದು ವ್ಯವಸ್ಥೆಯನ್ನು ಮಾಡಲಾಗುವುದು, ಎಂಬುದಾಗಿ ತಿಳಿಸಿ, ಈ ಶಾಸನ ವ್ಯವಸ್ಥೆಯಿಂದ ಇಡೀ ಭಾರತಕ್ಕಾಗಲೀ, ಅಥವಾ ವಿಭಜನೆಯಿಂದ ಎರಡು ರಾಷ್ಟ್ರಗಳೇರ್ಪಟ್ಟರೆ, ಆ ರಾಷ್ಟ್ರಗಳ ಪರಸ್ಪರ ಸಂಬಂಧ ವ್ಯವಹಾರಗಳು, ಬ್ರಿಟಿಷ್ ಕಾಮನ್ ವೆಲ್ತಿನ ಇತರ ರಾಷ್ಟ್ರಗಳೊಡನೆ ಅವು ನಡೆಸಬಹುದಾದ ಸಂಬಂಧ ವ್ಯವಹಾರಗಳಿಗೆ ಯಾವ ವಿಧವಾದ ಪ್ರತಿಬಂಧಕಗಳೂ ಇರುವುದಿಲ್ಲ ಎಂಬುದಾಗಿ ವಿಶದಗೊಳಿಸಿದರು

ಹಿಂಸಾಕೃತ್ಯಗಳನ್ನು ಸಹಿಸಲಾಗುವುದಿಲ್ಲ

ಎಲ್ಲರೂ ಹಿಂಸಾಕೃತ್ಯಗಳನ್ನು ಸಹಿಸಲಾಗದೆಂದು ಒಪ್ಪಿರುತ್ತಾರೆ ಇಲ್ಲಿಯೇ ಸ್ವಲ್ಪ ಕಾಲ ಉಳಿಯಬಹುದಾದ ಬ್ರಿಟಿಷ್ ಅಧಿಕಾರಿಗಳು ಈ ನಿರ್ಧಾರವನ್ನು ಕಾರ್ಯಗತ ಮಾಡಲು ಸರ್ವ ಪ್ರಯತ್ನ ಮಾಡುವರು ಎಂಬುದಾಗಿ ತಿಳಿಸಿ, ಭಾರತೀಯರ ಭವಿಷ್ಯದಲ್ಲಿ ಬ್ರಿ॥ ಮತ್ತು ತಮ್ಮ ಸರಕಾರಗಳ ಶುಭಾಶಯಗಳನ್ನು ಕೋರಿ, ತಮ್ಮ ನಿರಂತರವಾದ ಸಹಾನುಭೂತಿಯನ್ನು ವ್ಯಕ್ತಗೊಳಿಸುತ್ತಾ 'ಗಾಂಧಿ–ಜಿನ್ನಾ ಮನವಿಯ ಶಾಂತಿ ಮತ್ತು ಸ್ನೇಹಮಯವಾದ ರೀತಿಯಲ್ಲಿ ನಮ್ಮ ನಿರ್ಧಾರ ಕಾರ್ಯಗತವಾಗಲಿ' ಎಂದು ಹಾರೈಸಿದರು.

ಪಂ|| ನೆಹರೂರವರ ಭಾಷಣ

ಬ್ರಿಟಿಷ್ ಸರಕಾರದ ಹೇಳಿಕೆಯ ವಿಚಾರವಾಗಿ ಪಂ|| ನೆಹರೂರವರು ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾ ' ಈ ಹೇಳಿಕೆಯ ಪ್ರಕಾರ ಒಂದು ಕಡೆ ಹಲವು ಪ್ರದೇಶಗಳು ಭಾರತದಿಂದ ಪ್ರತ್ಯೇಕವಾಗಲು ಅವಕಾಶವಿದೆ ಮತ್ತೊಂದು ಕಡೆ ಪೂರ್ಣ ಸ್ವರಾಜ್ಯದ ಸಾಧನೆಯಲ್ಲಿ ಬಹುಮಟ್ಟಿಗೆ ಮುಂದುವರಿದ ಮಾರ್ಗ ಸೂಚಕವಾಗಿದೆ ಇಂತಹ ಮಹತ್ವಪೂರಿತ ಬದಲಾವಣೆಯಲ್ಲಿ ಜನರ ಪೂರ್ಣ ಒಪ್ಪಿಗೆ ಅತ್ಯವಶ್ಯಕ ಭಾರತದ ಭವಿಷ್ಯವನ್ನು ನಿರ್ಧರಿಸತಕ್ಕವರು ಭಾರತ ನಿವಾಸಿಗಳೇ ಅಲ್ಲದೆ ಹೊರಗಿನವರು ಎಷ್ಟೇ ಸ್ನೇಹಮಯವಾಗಿದ್ದರೂ, ಅವರಲ್ಲ ಈ ಹೇಳಿಕೆಯನ್ನು ಪ್ರಜಾಪ್ರತಿನಿಧಿಗಳ ಪರಿಶೀಲನೆಗಾಗಿ ಪ್ರಜಾಪ್ರತಿನಿಧಿ ಸಂಸ್ಥೆಗಳಿಗೆ ತಿಳಿಸಲಾಗುವುದು ಆದರೆ ಕಾಲಾತೀತವಾಗದೆ ಶೀಘ್ರ ನಿರ್ಧಾರವಾಗಬೇಕಾಗಿದೆ ಎಂಬುದಾಗಿ ತಿಳಿಸಿದರು

ಜನರ ಕೊನೆಯ ತೀರ್ಮಾನದಂತೆಯೇ ನಾವುಗಳು ನಡೆಯುವುದು ಅಗತ್ಯವಾದರೂ " ನಾವು ಈ ವಿಚಾರಗಳನ್ನು ನಿರ್ಧರಿಸಿ ಜನರ ಒಪ್ಪಿಗೆಗಾಗಿ ಸಲಹೆಗಳನ್ನು ಮಾಡಬೇಕಾಗಿದೆ ಇದರಿಂದ ನಾವು ಈ ಯೋಜನೆಯನ್ನು ಒಪ್ಪಿ ನಮ್ಮ ದೊಡ್ಡ ದೊಡ್ಡ ಸಮಿತಿಗಳೂ ಅದನ್ನು ಒಪ್ಪುವಂತೆ ಸಲಹೆಮಾಡಲು ನಿರ್ಧರಿಸುತ್ತೇವ ಎಂಬುದಾಗಿ ಹೇಳಿದರು

ಮುಂದುವರೆಯುತ್ತಾ " ಈಗಿನ ಪರಿಸ್ಥಿತಿಯಲ್ಲಿ ಇದೇ ಸೂಕ್ತವಾದ ಮಾರ್ಗ ಭಾರತದಿಂದ ಹಲವು ಭಾಗಗಳು ಪ್ರತ್ಯೇಕವಾಗುವುದು ವಿಷಾದಕರವಾದ ವಿಚಾರ ಯಾವ ವಿಧವಾದ ಒತ್ತಾಯವೂ ಇಲ್ಲದ, ಸ್ವತಂತ್ರರಾದ ಜನರ ಸ್ವತಂತ್ರವೂ ಇಷ್ಟಾನುಸಾರವಾಗಿಯೂ ಇರುವ ಸಹಕಾರ ಸಹವರ್ತನೆಗಳಿಂದ ಕೂಡಿದ ಸಂಯುಕ್ತ ಭಾರತಕ್ಕಾಗಿ ನಾವು ಶ್ರಮಿಸಿದೆವು ಎಂಬುದಾಗಿ ತಿಳಿಸಿ, ಜನರು ಹಿಂದಿನ ದುರ್ವಿಷಯಗಳೆಲ್ಲವನ್ನೂ ಮರೆತು, ದ್ವೇಷಾಸೂಯೆಗಳನ್ನು ಬದಿಗೊತ್ತಿ ಭಾರತದಲ್ಲಿ ಪೂರ್ಣ ನಂಬಿಕೆಯನ್ನಿಟ್ಟು ಆಶಾಭಾವನೆಯಿಂದ ವರ್ತಿಸಬೇಕೆಂದು ಹೃತ್ಪೂರ್ವಕವಾದ ಮನವಿಯನ್ನು ಮಾಡಿದರು

ಮಿ|| ಜಿನ್ನಾರವರ ಭಾಷಣ

ಮಿ|| ಜಿನ್ನಾರವರು ' ಈ ಹೇಳಿಕೆಯಿಂದ ಮುಸ್ಲಿಂ ಲೀಗ್ ಆವರಣದಲ್ಲಿ ಆಶಾಭಾವನೆಯುಂಟಾಗಿದ್ದರೂ, ಈ ಯೋಜನೆಯನ್ನು ಸಾವಧಾನವಾಗಿ ಪರಿಶೀಲಿಸಿ ನಮ್ಮ ಅಭಿಪ್ರಾಯ ಕೊಡಬೇಕಾಗಿದೆ

ಈ ಯೋಜನೆಯನ್ನು ರಚಿಸಲು ವೈಸ್ರಾಯರು ಹೆಚ್ಚು ಶ್ರಮಪಟ್ಟರು ಅಧಿಕಾರ ವರ್ಗಾವಣೆಯು ಶಾಂತಿಯುತವಾಗಿಯೂ, ಶಿಸ್ತಿನಿಂದಲೂ ನಡೆಯುವಂತೆ ವೈಸ್ರಾಯರಿಗೆ ಭಾರತನಾಯಕರು ನೆರವು ನೀಡಬೇಕು ' ಎಂದು ತಿಳಿಸಿದರು

ಮುಂದುವರಿದು ಮಾತನಾಡುತ್ತಾ " ಈ ಯೋಜನೆಯು, ಕೆಲವು ಮುಖ್ಯ ಅಂಶಗಳ ದೃಷ್ಟಿಯಿಂದ, ನಮ್ಮ ಆಶೋತ್ತರಗಳಿಗನುಗುಣವಾಗಿಲ್ಲ ಈ ಯೋಜನೆಯಲ್ಲಿರುವ ಎಲ್ಲಾ ಅಂಶಗಳೂ ಅಂಗೀಕಾರ ಯೋಗ್ಯವಾಗಿವೆಯೆಂದು ನಾವು ಹೇಳಲಾರೆವು ಕೊನೆಯ ನಿರ್ಧಾರವನ್ನು ಅ|| ಭಾ|| ಮುಸ್ಲಿಂ ಲೀಗ್ ಕೌನ್ಸಿಲ್ಲು ತೆಗೆದುಕೊಳ್ಳಬೇಕಾಗಿದೆ

" ' ರೆಫರೆಂಡಂ ' ಸಲಹೆಯು ಸೂಚಿಸಲ್ಪಟ್ಟಿರುವುದರಿಂದ ಗಡಿನಾಡಿನಲ್ಲಿ ಲೀಗು ನಡೆಸುತ್ತಿರುವ ಚಳುವಳಿಯು ನಿಲ್ಲಬೇಕು " ರೆಫರೆಂಡಂ " ಕಾರ್ಯಕ್ರಮವು ಶಾಂತಿ ಶಿಸ್ತುಗಳಿಂದ ಜರುಗಬೇಕು " ಎಂಬುದಾಗಿ ತಿಳಿಸಿದರು

ಶ್ರೀ ಬಲದೇವಸಿಂಗರ ಭಾಷಣ

ಕೊನೆಯದಾಗಿ ಸಿಖ್ ನಾಯಕರೂ ತಾತ್ಕಾಲಿಕ ಸರ್ಕಾರದ ರಕ್ಷಣಾ ಸಚಿವರೂ ಆದ ಸರ್ದಾರ್ ಬಲದೇವ ಸಿಂಗ್‌ರವರು ತಮ್ಮ ಬ್ರಾಡ್‌ಕಾಸ್ಟ್ ಸಂದೇಶದಲ್ಲಿ ಬ್ರಿಟಿಷ್ ಸರ್ಕಾರದ ಹೊಸ ಯೋಜನೆಯು ಸಿಖ್ಖರಿಗೆ ಸಂತೋಷವನ್ನುಂಟುಮಾಡಿಲ್ಲವೆಂದರು

ಆದರೂ ಇದು ಒಂದು ಒಳ್ಳೆಯ ಕಾರ್ಯಕ್ರಮವೇ ಆಗಿದೆ ಭಾರತದ ನಾನಾ ಭಾಗಗಳಿಗೆ ಬಲವಾದ ನಂಬಿಕೆಗೆ ಪಾತ್ರರಾದ ಯೋಧರ ಪಡೆಗಳನ್ನು ಕಳುಹಿಸಲಾಗಿದೆ ಇನ್ನು ಪುಂಡರ ಹಾವಳಿ ನಡೆಯುವಂತಿಲ್ಲ ಎಂಬುದಾಗಿ ಎಚ್ಚರಿಸಿದರು

" ಈಗಿನ ಭೇದಭಾವನೆಗಳು ಶಾಶ್ವತವಾಗಿ ಉಳಿಯಲಾರವೆಂಬುದು ನನ್ನ ಗಾಢ ನಂಬಿಕೆ ಆರ್ಥಿಕ, ಭೌಗೋಳಿಕ ಸಾಂಸ್ಕೃತಿಕ ದೃಷ್ಟಿಯಿಂದ ಭವಿಷ್ಯವನ್ನು ಪರಿಶೀಲಿಸಿದರೆ ಒಂದಲ್ಲ ಒಂದು ದಿನ ಸಂಘಟಿತರಾಗಲೇಬೇಕು ಎಂದಾಗಿ ನುಡಿದು ಭಾರತ ಸೈನ್ಯದ ದಕ್ಷತೆ, ರಾಷ್ಟ್ರಪ್ರೇಮವನ್ನು ಪ್ರಶಂಸಿಸಿ ಸರ್ಕಾರದವರು ಯಾವಾಗಲೂ ಸೈನ್ಯಗಳಲ್ಲಿ ಸೇವೆ ಸಲ್ಲಿಸುತ್ತಿರುವವರ ಹಿತವನ್ನು ಕಾಪಾಡಲು ಸಿದ್ಧರಾಗಿರುವರೆಂದರು

ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಮಹಾಪ್ರಧಾನ ಅಟ್ಲಿಯವರ ಹೇಳಿಕೆ

ಭಾರತದ ಬಗ್ಗೆ ಬ್ರಿಟಿಷ ಸರ್ಕಾರದವರು ಹೊರಡಿಸಿರುವ ಪ್ರಕಟನೆಯನ್ನು ಮಹಾಪ್ರಧಾನರಾದ ಮಿ|| ಅಟ್ಲಿಯವರು ೩ನೇ ತಂ ರಾತ್ರಿ ಕಾಮನ್ಸ್ ಸಭೆಗೆ ವಿವರಿಸಿದರು

ಈ ವರ್ಷವೇ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ದೊರಕುವುದೆಂದೂ ಆಮೇಲೆ ಅದು ಇಷ್ಟಪಟ್ಟರೆ ಬ್ರಿಟಿಷ್ ಕಾಮನ್‌ವೆಲ್ತಿನಿಂದ ಹೊರಗಾಗಬಹುದೆಂದೂ ಅವರು ಹೇಳಿದರು ಆಸ್ತಿ, ಸಾಲ ಮುಂತಾದವುಗಳ ವಿಭಜನೆಯನ್ನು ಡೊಮಿನಿಯನ್ ವ್ಯವಸ್ಥೆ ಸ್ಥಾಪಿಸಲ್ಪಟ್ಟ ಮೇಲೆ ವಿಚಾರ ಮಾಡಬೇಕಾಗಿದೆ ಭಾರತದ ಎರಡು ಕೋಮುಗಳವರೂ ಬ್ರಿಟನ್ನೂ ಜಂಟಿಯಾಗಿ ಕುಳಿತು ಈ ಬಗ್ಗೆ ಸಂಧಾನ ಮಾಡಬೇಕಾಗಿದೆ

ಬಂಗಾಳಾ ಮತ್ತು ಪಂಜಾಬುಗಳ ವಿಭಜನೆಗಾಗಿ ಯೋಜನೆಯಲ್ಲಿ ಸೂಚಿತವಾಗಿರುವ ಗಡಿಗಳು ಮುಂದೆ ನಿರ್ಧರಿಸಲ್ಪಡಲಿರುವ ಗಡಿಗಳಿಂದ ಭಿನ್ನವಾಗಿವೆಯೆಂದೂ, ಪಂಜಾಬಿನ ಬಹುಮಂದಿ ಸಿಕ್ಕರನ್ನು ಹಿಂದೂ ಕ್ಷೇತ್ರಗಳಿಗೆ ತರುವಂತೆ ಗಡಿ ನಿರ್ದೇಶನ ಮಂಡಲಿಯವರು ಕಟ್ಟಕಡೆಯ ನಿರ್ಧಾರಗಳನ್ನು ಮಾಡಬಹುದೆಂದೂ ತಿಳಿಸಿದರು

ಬಂಗಾಳವು ವಿಭಾಗಿಸಲ್ಪಟ್ಟರೆ ಅಸ್ಸಾಮಿನ ಸಿಲ್ಹಟ್ ಜಿಲ್ಲೆ ಮತ್ತು ಸುತ್ತಮುತ್ತಲ ಜಿಲ್ಲೆಗಳ ಹಲವು ಭಾಗಗಳು ಪೂರ್ವ ಬಂಗಾಳವನ್ನು ಸೇರಬಹುದೆಂದೂ, ಅಸ್ಸಾಮಿನ ಉಳಿದ ಭಾಗ ಈಗಿರುವ ರಾಜ್ಯಾಂಗ ಸಭೆಯಲ್ಲೇ ಭಾಗ ವಹಿಸುವುದೆಂದೂ ಮಿ|| ಅಟ್ಲಿಯವರು ಸ್ಪಷ್ಟಪಡಿಸಿದರು

" ಭಾರತದಲ್ಲಿ ಸ್ವತಂತ್ರ ಸರ್ಕಾರ ಅಥವಾ ಸರ್ಕಾರಗಳನ್ನು ಸ್ಥಾಪಿಸುವ ಕಾರ್ಯ ಬೇಗ ನಡೆದು, ಮುಂದಿನ ವರ್ಷ ಜೂನ್ ವೇಳೆಗೆ ಅಧಿಕಾರವನ್ನು ವರ್ಗಾಯಿಸುವುದು ಸಾಧ್ಯವೆಂದು ಸಮ್ರಾಟ್ ಸರ್ಕಾರ ಊಹಿಸಿದೆ ಇದಕ್ಕಾಗಿ ಪಾರ್ಲಿಮೆಂಟಿನ ಈ ಅಧಿವೇಶನದಲ್ಲೇ ತಕ್ಕ ಶಾಸನ ಮಾಡುವ ಯೋಚನೆ ಇದೆ ಗಡಿನಾಡಿನಲ್ಲಿ ನ್ಯಾಯವಾದ ರೀತಿಯಲ್ಲಿ ಜನಾಭಿಪ್ರಾಯ ಪಡೆಯಲು ಎಲ್ಲಾ ಪ್ರಯತ್ನವನ್ನು ಮಾಡಲಾಗುವುದು ಭಾರತದ ಈಶಾನ್ಯಮೂಲೆಯಲ್ಲಿರುವ ರೂಕ್ಷಜನರು ಅಸ್ಸಾಮಿನ ಪರಿಸ್ತರಣದಲ್ಲಿ ಬರುತ್ತಾರೆ ಈಗಿನ ರಾಜ್ಯಾಂಗ ಸಭೆಯೇ ಅವರಿಗೂ ಅನ್ವಯಿಸುವುದು ಭಾರತ ಸೇನೆ ಕುರಿತು ಎಚ್ಚರಿಕೆಯಿಂದ ಪರಿಶೀಲನೆ ನಡೆಯುತ್ತದೆ ಆದರೆ ಭಾರತವನ್ನು ಕೇಳದೆ ಈ ಬಗ್ಗೆ ಹೇಳಿಕೆಕೊಡುವುದು ವಿವೇಕಯುತವಾದುದಲ್ಲ " ಎಂದು ಹೇಳಿದರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರ ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೫ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗ ಪತ್ತ್ಯರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೫ × ೧೦ ಬೆಲೆ	೦—೩—೦
ಷಡ್ಡಕ್ಷರೀ ಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೫ × ೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರ ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೫ × ೧೦ ಬೆಲೆ ೧ಕ್ಕೆ	೦—೩—೦
,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ವೆ ಬಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಜೂನ್ ೧೯೪೭ | ಸಂಚಿಕೆ ೮

ಜಗಳೂರು ಸಮಾಚಾರ

ತಾ|| ೨೮ ೫ ೪೭ ನೆಯ ದಿವಸ ಜಗಲೂರು ಟೌನ್ ಮಿಡ್ಲ್‌ಸ್ಕೂಲ್ ಸಾಹಿತ್ಯ ಸಂಘದ ಪ್ರಾರ್ಥನೆ ಮೇರೆಗೆ ಮಿಡ್ಲ ಸ್ಕೂಲಿನಲ್ಲಿ ಡಾ|| ಎಂ ಸಿ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ವಿದ್ಯಾರ್ಥಿಗಳಿಂದಲೂ ನಗರದ ಎಲ್ಲಾ ಶಾಲೆಗಳ ಅಧ್ಯಾಪಕರಿಂದಲೂ ನಾಗರಿಕರಿಂದಲೂ ಸಭೆ ಕಿಕ್ಕಿರಿದಿತ್ತು ಮಂಗಲಾನಂತರ ಸಂಘದ ಸೆಕ್ರೆಟರಿ ಶ್ರೀಮಾನ್ ನಾರಾಯಣಪ್ಪನವರ ಕೋರಿಕೆಯ ಮೇರೆಗೆ ರಾಯಚೂರು ಶಿಖರಮಠದ ಶ್ರೀಗುರುಲಿಂಗಶಿವಾಚಾರ್ಯರು ವಿದ್ಯಾ, ವಿದ್ಯಾರ್ಥಿಗಳ ಕರ್ತವ್ಯ, ಧರ್ಮಾಚರಣೆ, ದೈವಭಕ್ತಿ, ಕನ್ನಡ ಸಾಹಿತ್ಯದ ಉಜ್ವಲಪರಂಪರೆ ಮುಂತಾದವುಗಳನ್ನು ಬಹು ಹೃದಯಂಗಮವಾಗಿ ಉಪದೇಶಿಸಿದರು ಬಳಿಕ ಅಧ್ಯಕ್ಷರು ವಿಚಾರ ಪರಿಪ್ಲುತವಾದ ಸಮಾಪ್ತಿಭಾಷಣವನ್ನು ಮಾಡಿದರು ಆ ಮೇಲೆ ಅಧ್ಯಕ್ಷರು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಭೂಪಾಲರು ಭಕ್ತಿಯಿಂದ ನಿಂತುಕೊಂಡಿರುವ ಸುಂದರವಾದ ತ್ರಿವರ್ಣಚಿತ್ರವನ್ನು ಸ್ಕೂಲಿನಲ್ಲಿ ಯಾವಾಗಲೂ ಪರಿಶೋಭಿಸುವದಕ್ಕೋಸ್ಕರವಾಗಿ ಮಿಡ್ಲಸ್ಕೂಲಿಗೆ ಅರ್ಪಿಸಿದರು ಸ್ಕೂಲಿನ ಮತ್ತುಅಧ್ಯಾಪಕರ ವಿದ್ಯಾರ್ಥಿಗಳ ಪರವಾಗಿ ಶ್ರೀನಾರಾಯಣಪ್ಪನವರು ಭಾವಚಿತ್ರವನ್ನು ಸ್ವೀಕರಿಸಿದರು ಭಾವಚಿತ್ರವು ಸ್ಕೂಲಿನಲ್ಲಿ ಶೋಭಿಸುತ್ತಿದೆ

ತಾ|| ೫-೬ ೪೭ ನೆಯ ದಿವಸ ಇಲ್ಲಿಯ ಪ್ರಸಿದ್ಧ ಶ್ರೀಮಂತರೂ ಆಚಾರ್ಯಸೇವಾನಿರತರೂ ಆದ ಸಾಹುಕಾರ್ ರೇವಣ್ಣನವರು ತಮ್ಮ ಗೃಹದಲ್ಲಿ ಸಭೆ ಸೇರಿಸಿದರು ಸಭೆಯು ಸ್ತ್ರೀಪುರುಷರಿಂದ ತುಂಬಿತ್ತು ಆಗ್ಗೆ ಶ್ರೀಗುರುಲಿಂಗಶಿವಾಚಾರ್ಯರು ಆಚಾರ್ಯರ ಸಿದ್ಧಾಂತ, ವೀರಶೈವ ಪ್ರಾಚೀನತೆ ಮುಂತಾದ ವಿಷಯಗಳನ್ನು ಸಪ್ರಮಾಣವಾಗಿ ಪ್ರತಿಪಾದಿಸುತ್ತ ಕೆಲಕಾಲದ ಹಿಂದೆ ಸನಾತನ ಧರ್ಮಕ್ಕೆ ಪ್ರಾಪ್ತವಾಗಿದ್ದ ಅಂಥ ತಮಸ್ಸು ಪಂಡಿತ ಶ್ರೀಕಾಶೀನಾಥದಿವಾಕರನ ಉದಯದಿಂದ ದೂರಾಗಿ ಸನಾತನವೀರಶೈವಧರ್ಮಜ್ಯೋತಿಯು ಸರ್ವತ್ರ ಬೆಳಗುತ್ತಿರುವದೆಂದೂ, ಸನಾತನ ವೀರಶೈವಧರ್ಮಧ್ವಜವನ್ನು ಮೇಲಕ್ಕೆತ್ತಿ ಗುರುವರ್ಗದಲ್ಲಿ ಜಾಗೃತಿಯನ್ನುಂಟುಮಾಡಿದ ಪಂಡಿತರ ಉಪಕಾರವನ್ನು ವೀರಶೈವಸಮಾಜವು ಬಾಳಿರುವವರೆಗೂ ಅನುದಿನ ಸ್ಮರಿಸಿ ಸಮರ್ಪಣಮಾಡಿದರೂ ಸಾಲದೆಂದೂ ಹೇಳಿದರು ಆ ಮೇಲೆ ಡಾಕ್ಟರ್ ನಂಜಪ್ಪನವರು ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೀರಶೈವಮತಕ್ಕಾದ ಉಪಕಾರವನ್ನು ವರ್ಣಿಸಿ ಶ್ರೀಗುರುಲಿಂಗ ಶಿವಾಚಾರ್ಯರನ್ನೂ, ಶ್ರೀರೇವಣ್ಣನವರನ್ನೂ ಅಭಿನಂದಿಸಿದರು ಬಳಿಕ ಮಂಗಲದೊಂದಿಗೆ ಸಭೆಯು ಸಮಾಪ್ತಿಗೊಂಡಿತು

ವೀರೇಶಶರ್ಮಾ, ಜಗಲೂರು.

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಶಿವಸೂತ್ರಗಳನ್ನು ಮಾಡುವವರಿಗೆ ಸೂಚನೆ

ಲೇ—ಶ್ರೀಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು

"ಶಿವದಾರ' ಗಳನ್ನು ಮಾಡುವ ಕೆಲವರು ಎಳೆಗಳ ಸಂಖ್ಯೆಯಿಲ್ಲದೆ ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಕೂಡಿಸಿ ಮಾಡುತ್ತಾರೆ ಮತ್ತೆ ಕೆಲವರು ೬೩ ಎಳೆಗಳನ್ನು ಕೂಡಿಸಿ ಮಾಡುವದು ಶಾಸ್ತ್ರೋಕ್ತವೆಂದು ಅದರಂತೆ ಕೂಡಿಸಿ ಮಾಡುತ್ತಾರೆ ಹೀಗೆ ಅಶಾಸ್ತ್ರೀಯ ಪದ್ಧತಿಯಿಂದ ತಯಾರಮಾಡಿದ ಶಿವದಾರಗಳನ್ನು ಸಜ್ಜಿಕೆಯಲ್ಲಿ ಎರಡು ಎಳೆ ಬರುವಂತೆ ಪೋಣಿಸಿಕೊಳ್ಳುತ್ತಾರೆ ಮೇಲಿನಂತೆ ಶಿವದಾರಗಳನ್ನು ತಯಾರಿಸುವದೂ, ಅಂಥ ಶಿವದಾರಗಳನ್ನು ಎರಡು ಎಳೆಗಳಿಂದ ಪೋಣಿಸಿಕೊಳ್ಳುವದೂ, ಬಹಳ ತಪ್ಪಾಗುವುದಲ್ಲದೆ ಶಾಸ್ತ್ರವಿರೋಧವೂ ಆಗುವದು ಶಿವದಾರಗಳನ್ನು ಮಾಡುವ ರೀತಿ ಹೀಗಿದೆ — ಶಾಸ್ತ್ರದ ಪ್ರಕಾರ ಶಿವದಾರದಲ್ಲಿ ಒಟ್ಟಿಗೆ ೩೬ ಎಳೆಗಳು ಮಾತ್ರ ಇರಬೇಕು ಮೊದಲು ಎರಡು ಎಳೆಗಳನ್ನು ಕೂಡಿಸಿ ಒಂದುಮಾಡಿ, ಅನಮೇಲೆ ಇಂತಹ ಸಂಯುಕ್ತಸೂತ್ರಗಳನ್ನು, ೧೨ ಮೊಳ ಉದ್ದವಿಟ್ಟು ಮುಪ್ಪುರಿಮಾಡಬೇಕು ಅಂದರೆ ಇದೊಂದು ಶಿವದಾರವಾಗುವದು ಇಂಥ ಶಿವದಾರವನ್ನು ಸಜ್ಜಿಕೆಯಲ್ಲಿ ಆರಾರು ಎಳೆ ಬರುವಂತೆ ಪೋಣಿಸಿಕೊಳ್ಳಬೇಕು. ಕೊರಳಲ್ಲಿ ಸಹ ಆರು ಎಳೆಗಳು ಕಾಣುತ್ತಿರಬೇಕು ವೀರಶೈವಧರ್ಮಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಡುವ ೩೬ ತತ್ತ್ವಗಳ ಸ್ವರೂಪವನ್ನು ತೋರಿಸುವದೇ ೩೬ ಎಳೆಗಳ ರಹಸ್ಯವಾಗಿರುವದು ಕೆಲವರು ಶಿವದಾರವನ್ನು ವಿಶೇಷವಾಗಿ ಉದ್ದಮಾಡಿ ಸಜ್ಜಿಕೆಯನ್ನು ಹೊಕ್ಕಳ ಕೆಳಗೂ, ನಡಕ್ಕೂ ಬರುವಂತೆ ಹಾಕುತ್ತಾರೆ ಹೀಗೆ ಹಾಕುವದು ಮಹಾಪಾಪದಾಯಕವಾಗಿರುವದು ಯಾವಾಗಲೂ ಸಜ್ಜಿಕೆಯು ಎದೆಯ ಮೇಲೆ ಇರಬೇಕು

ನಾಭೇರಧಸ್ತಾಲ್ಲಿಂಗಸ್ಯ ಧಾರಣಂ ಪಾಪಕಾರಣಂ ॥

ನಾಭಿಯ ಕೆಳಗೆ ಲಿಂಗವನ್ನು ಧರಿಸುವದು ಪಾಪಕ್ಕೆ ಕಾರಣವೆಂದು ಶ್ರೀರೇಣುಕರು ಸಿದ್ಧಾಂತಶಿಖಾಮಣಿಯ ೬ನೆಯ ಪರಿಚ್ಛೇದದಲ್ಲಿ ಅಪ್ಪಣೆಕೊಡಿಸಿದ್ದಾರೆ ಆದುದರಿಂದ ಪ್ರತಿಯೊಬ್ಬ ವೀರಶೈವರು ಮೇಲೆ ಹೇಳಿದ ಪ್ರಕಾರ ಶಾಸ್ತ್ರದಂತೆ ಶಿವಸೂತ್ರಗಳನ್ನು ತಯಾರಿಸಿ, ಅಂಥ ಶಿವಸೂತ್ರಗಳನ್ನೇ ಶಿವಲಿಂಗದ ಸಜ್ಜಿಕೆಗೆ ಪೋಣಿಸಿ ಧರಿಸಿಕೊಂಡು ಧನ್ಯರಾಗಬೇಕೆಂದು ಹಾರೈಸುತ್ತೇವೆ

ಕರ್ನಾಟಕಸಂಘ, ಹರಿವಾಣ

ಬಳ್ಳಾರಿ ಡಿ|| ಆದವಾನಿ ತಾ|| ಹರಿವಾಣ ಗ್ರಾಮದಲ್ಲಿರುವ ಕರ್ನಾಟಕ ಸಂಘದ ಸದಸ್ಯರು ಈ ತಿಂಗಳ ೧೦ನೇ ತಾರೀಖಿನ ದಿವಸ ಸಭೆ ಸೇರಿ ಈ ತಿಂಗಳು ೩ ನೆಯ ತಾರೀಖಿನ ದಿವಸ ಬ್ರಿಟಿಷ್ ಸರ್ಕಾರದವರು ಹೊರಡಿಸಿರುವ ಯೋಜನೆಯನ್ನು ಸ್ವಾಗತಿಸಿದರಲ್ಲದೆ ಭಾಷಾನುಗುಣವಾಗಿ ಪ್ರಾಂತ ರಚನೆಯನ್ನು ಮಾಡಬೇಕೆಂದು ನಿರ್ಣಯಿಸಿದರು ಅಲ್ಲದೆ ಆದವಾನಿ, ಆಲೂರು, ರಾಯದುರ್ಗ ಈ ಮೂರು ತಾಲೂಕಿನಲ್ಲಿರುವ ಪ್ರಜೆಗಳು ಶುದ್ಧ ಕನ್ನಡಿಗರೆಂದೂ, ಕವಿ ಚಿದಾನಂದನು ಮತ್ತು ಹರಿವಾಣಗ್ರಾಮದಲ್ಲಿ ಜನ್ಮವೆತ್ತಿದ ಪವಾಡಪುರುಷ ಮಾನಪ್ಪಯ್ಯನು ಅಖಂಡ ಕರ್ನಾಟಕದಲ್ಲಿ ಪ್ರಸಿದ್ಧರಾಗಿರುವರೆಂದೂ, ಈ ಮೂರು ತಾಲೂಕುಗಳು ಕರ್ನಾಟಕದ ಏಕೀಕರಣಕ್ಕಾಗಿ ನಡೆಸಿದ ಚಳುವಳಿಯ ಬಗ್ಗೆ ಕರ್ನಾಟಕಪರಿಷತ್ತಿನವರು ಸಹಾನುಭೂತಿಯನ್ನು ತೋರಿಸಬೇಕೆಂದೂ, ಮುಂದೆ ಬರುವ ಡಿಸ್ಟ್ರಿಕ್ಟ್‌ಬೋರ್ಡಿನ ಆಯ್ಕೆಯಲ್ಲಿ ಈ ಮೂರು ತಾಲೂಕುಗಳಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯವನ್ನು ಕೊಟ್ಟೇತೀರಬೇಕೆಂದೂ, ಮಲ್ಲಾಪುರದ ಹತ್ತಿರ ನಿರ್ಮಿಸುವ ತುಂಗಭದ್ರಾ ಅಣೆಕಟ್ಟೆಗೆ ಈ ಸಂಘವು ವಿರೋಧಿಸುವುದೆಂದೂ ನಿರ್ಣಯಮಾಡಿದರು

ಪ್ರತ್ಯಕ್ಷದರ್ಶಿ

ಸ್ವೀಕಾರ

ಧಾರವಾಡ ಡಿ| ಲಕ್ಷ್ಮೇಶ್ವರಗ್ರಾಮದಲ್ಲಿ ಅತ್ಯಂತ ಪ್ರಸಿದ್ಧರಾಗಿ ತಮ್ಮ ಜೀವಮಾನವನ್ನೆಲ್ಲ ತತ್ವಾರ್ಥ ವಿಚಾರದಲ್ಲಿಯೂ, ಆಚಾರ್ಯರ ಸೇವೆಯಲ್ಲಿಯೂ, ಗುರುವರ್ಗದ ಸುಧಾರಣೆಯಲ್ಲಿಯೂ ಕಳೆದ ಮಹಾಕೀರ್ತಿಶಾಲಿಗಳಾಗಿದ್ದ ವೇ|| ಹಿರಿಯಮಠದ ಕಾಶಪ್ಪಯ್ಯನವರು ಇದೇ ತಿಂಗಳು ೨ನೆಯ ತಾರೀಖಿನ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಾಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ|| ಫಕೀರಯ್ಯನವರು ಪುರಾಣಿಕಮಠ ಲಕ್ಷ್ಮೇಶ್ವರ ಇವರ ದ್ವಾರಾ ತಲ್ಪಿರುತ್ತವೆ

ನಿಜಾಮ ಇಲಾಖಾ ನಾರಾಯಣಪೇಟೆಯಲ್ಲಿರುವ ವೇ|| ಸಂಗಮೇಶ್ವರಸ್ವಾಮಿ ಹಿರೇಮಠ ಇವರ ಪುತ್ರ ಚಿ|| ಕೇದಾರನಾಥ ಉರ್ಫ ಉಪಮನ್ಯು ಎಂಬ ಮೂರು ವರ್ಷದ ಮಗುವಿಗೆ ಟೈಫಾಯಿಡ್ ಆಗಿ ಶ್ರೀಗುರುಕೃಪೆಯಿಂದ ಗುಣವಾದ ಸಂತೋಷಕ್ಕೋಸ್ಕರ ಸದರಿಯವರು ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಭಾರತವು ಶೀಘ್ರ ವಿಭಾಗ ವಾಗುವುದು

ಇನ್ನು ೧೦—೧೫ ದಿವಸಗಳಲ್ಲಿ ಭಾರತವನ್ನು ಎರಡು ಭಾಗಮಾಡಿ ಆ ಎರಡು ಭಾಗಗಳಿಗೂ ತಾತ್ಕಾಲಿಕ ಸರ್ಕಾರಗಳನ್ನು ರಚಿಸುವ ನಿರೀಕ್ಷಣೆ ಇದೆ ಎಂದು ತಿಳಿದುಬರುತ್ತದೆ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಜೂನ್ ತಾ। ೧೬ನೇ ಸೋಮವಾರ

ಮೂರ್ತಿಪೂಜೆಯ ಆವಶ್ಯಕತೆ

ಈ ಪ್ರಪಂಚದಲ್ಲಿರುವ ಪತಿಯೊಬ್ಬರೂ ಯಾವ ಕೆಲಸವನ್ನು ಮಾಡಬೇಕಾದರೂ ದೇವರೊಬ್ಬನು ಇದ್ದಾನೆ, ಆತನು ನಾವು ಮಾಡುವ ಕಾರ್ಯಗಳ ಫಲಾಫಲವನ್ನು ನೋಡಿ ಫಲಗಳನ್ನು ಕೊಡುತ್ತಾನೆಂಬ ದೃಢವಾದ ನಂಬಿಕೆಯನ್ನಿಟ್ಟುಕೊಂಡೇ ಕೆಲಸ ಮಾಡಬೇಕು ಸರ್ವಸಾಕ್ಷಿಯಾದ ದೇವರನ್ನೇ ಮರೆತು ಕೆಲಸಮಾಡುವವನಿಗೆ ಯಾವ ಫಲಗಳೂ ಕೈಗೂಡುವುದಿಲ್ಲ ದೇವರು ನಮ್ಮನ್ನು ಸೃಷ್ಟಿಮಾಡಿ, ಸಕಲವಾದ ಐಹಿಕಸೌಖ್ಯವನ್ನು ಹೊಂದಿ ಪುನಃ ತನ್ನಲ್ಲಿಯೇ ಸೇರಿ ನಿತ್ಯಸುಖ ಪಡೆಯಲೆಂಬ ಸಂಕಲ್ಪದಿಂದ ನಮಗೆ ಬುದ್ಧಿಜ್ಞಾನೇಂದ್ರಿಯಾದಿ ಸಕಲ ಸಾಮಗ್ರಿಯನ್ನು ದಯಪಾಲಿಸಿದ ಮೇಲೆ ಆ ದೇವರನ್ನೇ ಮರೆತು ದೇವರ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವುದು ಮಾನವನ ಕರ್ತವ್ಯವಲ್ಲವೆಂಬುದನ್ನು ಎಲ್ಲರೂ ತಿಳಿದೇ ಇರುತ್ತಾರೆ ದೇವರು ನಮ್ಮ ಕಣ್ಣಿಗೆ ಗೋಚರ ನಾಗದಿದ್ದರೂ ಆ ದೇವರನ್ನು ನಿಶ್ಚಯಿಸುವುದಕ್ಕಾಗಿ ಸರ್ವಜ್ಞರಾದ ನಮ್ಮ ಪೂರ್ವದ ಋಷಿಗಳು ನಾಲ್ಕು ಪ್ರಮಾಣಗಳನ್ನು ಹೇಳಿರುತ್ತಾರೆ ಅವುಗಳೇ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದಪ್ರಮಾಣಗಳೆಂದು ಹೇಳಿಸಿಕೊಳ್ಳಲ್ಪಡುತ್ತವೆ ಅವುಗಳಲ್ಲಿ ಚಕ್ಷುರಾದೀಂದ್ರಿಯಗಳ ಸಹಾಯದಿಂದ ಉಂಟಾಗುವ ಜ್ಞಾನವೇ ಪ್ರತ್ಯಕ್ಷ ಪ್ರಮಾಣವು ಕಣ್ಣಿಗೆ ಕಾಣಿಸದ ವಸ್ತುವನ್ನು ಮತ್ತೊಂದರಿಂದ ಊಹಿಸಿ ತಿಳಿಯುವುದೇ ಅನುಮಾನಪ್ರಮಾಣವು ಯಾವುದಾದರೊಂದು ಹೋಲಿಕೆಯಿಂದ ವಸ್ತುಜ್ಞಾನವನ್ನು ಪಡೆಯುವುದೇ ಉಪಮಾನಪ್ರಮಾಣವು ಆಪ್ತವಾಕ್ಯವೇ ಶಬ್ದಪ್ರಮಾಣವು ಈ ನಾಲ್ಕು ಪ್ರಮಾಣಗಳ ಸಹಾಯದಿಂದಲೇ ದೇವರಿದ್ದಾನೆಂಬುದನ್ನು ನಾವು ನಿಶ್ಚಯಿಸಿಕೊಳ್ಳಬೇಕಾಗಿದೆ ಯಥಾರ್ಥವಾದ ಜ್ಞಾನವನ್ನುಂಟುಮಾಡಿಕೊಡುವುದಕ್ಕೆ ಸಾಧನವಾದುದರಿಂದಲೇ ಇದಕ್ಕೆ ಪ್ರಮಾಣವೆಂಬ ಹೆಸರು ಬಂದಿರುತ್ತದೆ ಲೋಕದಲ್ಲಿ ಅನಂತ ಜನ ರಾಜರೂ ಅನಂತ ಧನಿಕರೂ ಇದ್ದಾರೆ ಇಂಥವರಿಗೆ ಧನಕನಕಾದಿ ಸಾಮಗ್ರಿಗಳು ಬೇಕಾದಷ್ಟು ಇದ್ದರೂ ಅವರ ಇಷ್ಟದಂತೆ ಎಲ್ಲ ಕಾರ್ಯಗಳೂ ನಡೆಯದಿರುವುದನ್ನು ನಾವು ಕಣ್ಣಿನಿಂದ ನೋಡುತ್ತಲಿದ್ದೇವೆ ಯಾವುದೊಂದು ಸಹಾಯಸಂಪತ್ತನ್ನು ಪಡೆಯದ ದರಿದ್ರನು ಆಕಸ್ಮಿಕವಾಗಿ ತನ್ನ ಬಯಕೆಗಳನ್ನೆಲ್ಲಾ ಪಡೆದುದನ್ನು ನಾವು ನೋಡುತ್ತಲಿದ್ದೇವೆ ಇದರಿಂದ ದೇವರಿದ್ದಾನೆಂಬುದು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗುತ್ತದೆ ಕೋಟೆ ಕಂದಕ ಗೋಪುರ ಪ್ರಾಸಾದ ಮೊದಲಾದವುಗಳನ್ನು ನೋಡಿ ಇವು ಯಾವನೋ ಒಬ್ಬ ಉತ್ತಮ ಶಿಲ್ಪಿಯಿಂದ ರಚಿಸಲ್ಪಟ್ಟಿರಬಹುದೆಂದು ಊಹಿಸಿ ನಿಶ್ಚಯಿಸುವಂತೆ, ಈ ಚರಾಚರಾತ್ಮಕವಾದ ಪ್ರಪಂಚವನ್ನು ನೋಡಿ ಈ ಪ್ರಪಂಚವನ್ನು ಸೃಷ್ಟಿಸಿದವನೊಬ್ಬನಿದ್ದಾನೆಂದು ತಿಳಿಯುವುದೇ ಅನುಮಾನಪ್ರಮಾಣವೆನಿಸುತ್ತದೆ ಇನ್ನು ಸೃಷ್ಟಿಕರ್ತನಾದ ದೇವರು ಆಕಾಶಾದಿಗಳಂತೆ ವ್ಯಾಪ್ತನೂ ಪದ್ಮಪತ್ರದಂತೆ ನಿರ್ಲಿಪ್ತನೂ ಎಂದು ಅನೇಕ ಪದಾರ್ಥಗಳೊಡನೆ ಹೋಲಿಸಿ ದೇವರ ಸ್ವರೂಪವನ್ನು ತಿಳಿಯುವುದೇ ಉಪಮಾನಪ್ರಮಾಣವೆನಿಸುವದು ದೇವರು ತಾನು ಸೃಷ್ಟಿಸಿದ ಪ್ರಪಂಚಕ್ಕೆ ಹಿತಾಹಿತ ಬೋಧೆಗಳನ್ನು ಮಾಡಿ ತನ್ನ ಸ್ವರೂಪವನ್ನು ವಿವರಿಸಿರುವ ವೇದವೇ ಶಬ್ದಪ್ರಮಾಣವು ಈ ನಾಲ್ಕು ಪ್ರಮಾಣಗಳ ಸಹಾಯದಿಂದ ದೇವರುಂಟು, ಪರಲೋಕವುಂಟು, ಪುಣ್ಯಪಾಪಗಳುಂಟು ಎಂಬುದಾಗಿ ನಿಶ್ಚಯಿಸಿ, ಪ್ರತಿಯೊಬ್ಬ ಮಾನವನು ದೇವರ ಆಜ್ಞೆಗೆ ವಿರೋಧವಿಲ್ಲದಂತೆ ಈ ಪ್ರಪಂಚವೆಂಬ ರಂಗಸ್ಥಲದಲ್ಲಿ ನಿಯಮದಿಂದಲೂ ಭಯದಿಂದಲೂ ವ್ಯವಹರಿಸಬೇಕಲ್ಲದೆ ಪ್ರಪಂಚ ನಾಟಕಕರ್ತನೂ ಸೂತ್ರಧಾರಿಯೂ ಆದ ದೇವರನ್ನೇ ಮರೆತು ಸ್ವೇಚ್ಛೆಯಾಗಿ ವ್ಯವಹರಿಸಬಾರದು ಅಂಥ ಸ್ವೇಚ್ಛಾವಿಹಾರಿಗಳನ್ನು ನೋಡಿ ದೇವರು ಕೋಪಿಸಿಕೊಳ್ಳುವನಲ್ಲದೆ ಪ್ರೀತಿಪಡುವುದಿಲ್ಲ ಬೇರು ಹೇಗೆ ಹೇಗೆ ಕೆಳಗೆ ಇಳಿಯುತ್ತ ಹೋಗುವುದೋ ಹಾಗೆ ಹಾಗೆ ಮರವು ಗಟ್ಟಿಗೊಳ್ಳುವಂತೆ ದೇವರುಂಟೆಂಬ ನಂಬಿಕೆಯು ಹೇಗೆ ಹೇಗೆ ದೃಢಪಡುತ್ತ ಹೋಗುವುದೋ ಹಾಗೆ ಹಾಗೆ ಮನುಷ್ಯನು ಶಮದಮಾದಿಗುಣಗಳಿಂದ ಕರನಾಗುತ್ತ ಹೋಗುವನು. ಹಿಂದಿನ ಮಹರ್ಷಿಗಳು ದೇವರ ಸ್ವರೂಪವನ್ನು ಪಂಡಿತಪಾಮರರೆಲ್ಲರಿಗೂ ತಿಳಿಯಪಡಿಸುವುದಕ್ಕಾಗಿಯೇ ಕಾಶೀ ರಾಮೇಶ್ವರಂ ವಿ ಪವಿತ್ರ ಕ್ಷೇತ್ರಗಳಲ್ಲಿ ದೇವತಾ ವಿಗ್ರಹಗಳನ್ನು ಸ್ಥಾಪಿಸಿರುತ್ತಾರೆ ಈ ವಿಗ್ರಹಗಳನ್ನು ನೋಡಿದವರಿಗೆ ದೇವರ ಸ್ವರೂಪವು ಪ್ರತಿಯೊಬ್ಬರ ಸ್ಮರಣಕ್ಕೆ ಬರಲೆಂಬುದೇ ಅವರ ಮುಖ್ಯ ಉದ್ದೇಶವು ಸಾಮಾನ್ಯವಾಗಿ ದೇವರಿದ್ದಾನೆಂದು ತಿಳಿದುಕೊಂಡಿದ್ದರೂ ಆ ದೇವರ ಸ್ವರೂಪ ಸಾಕ್ಷಾತ್ಕಾರವು ಸ್ಥೂಲೋಪಾಸನೆಯಿಲ್ಲದೆ ಬೇರೆ ಮಾರ್ಗದಿಂದ ಯಾರಿಗೂ ಆಗುವುದಿಲ್ಲ ಹಿಂದೆ ಯಾವ ಋಷಿಗಳೂ ವಿಗ್ರಹಾರಾಧನೆಯಿಲ್ಲದ ದೇವ ಸಾಕ್ಷಾತ್ಕಾರವನ್ನು ಪಡೆದಿರುವುದಿಲ್ಲ ಆ ಋಷಿಗಳು ವಿಧ್ಯುಕ್ತವಾಗಿ ವಿಗ್ರಹಗಳನ್ನು ತಮ್ಮ ನಾಮದಿಂದಲೇ ಸ್ಥಾಪಿಸಿ ಪೂಜಿಸಿ ಜನಗಳಿಗೆ ದೇವರನ್ನು ಸ್ಮರಿಸುವ ಮಾರ್ಗವನ್ನು ತೋರಿಸಿರುತ್ತಾರೆ ವೇದಶಾಸ್ತ್ರಪುರಾಣಗಳಂತೂ ದೇವರ ಸ್ವರೂಪದಲ್ಲಿ ದೇವತಾ ವಿಗ್ರಹವನ್ನು ಆರಾಧಿಸದವರಿಗೆ ಭಗವಂತನ ಸಾಕ್ಷಾತ್ಕಾರವೆಂದಿಗೂ ಆಗಲಾರದೆಂದು ಹೇಳುತ್ತಲೇ ಇವೆ ದೇವರ ಸ್ವರೂಪವು ಗೋವಿನ ಶರೀರದಲ್ಲಿ ಹಾಲು ವ್ಯಾಪಿಸಿಕೊಂಡಿರುವಂತೆ ಎಲ್ಲೆಲ್ಲಿಯೂ ವ್ಯಾಪಿಸಿದ್ದರೂ ಅದರಿಂದ ತನಗೇನೂ ಪ್ರಯೋಜನವಾಗಲಾರದು ಕೆಚ್ಚಲಿನ ದ್ವಾರಾ ಹಾಲು ಪ್ರತ್ಯಕ್ಷವಾಗುವಂತೆ ವಿಗ್ರಹಾರಾಧನ ದ್ವಾರಾ ದೇವರು ಪ್ರತ್ಯಕ್ಷವಾಗಬೇಕಾಗಿದೆ ದೇವರು ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿದ್ದರೂ ಮಂತ್ರಪೂತವಾದ ವಿಗ್ರಹದಲ್ಲಿ ವಿಶೇಷಾಕಾರದಿಂದಿರುವನೆಂಬುದೇ ವೇದಾವಲಂಬಿಗಳ ನಂಬಿಕೆಯಾಗಿದೆ

ಈ ವಿಷಯದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯ ೧೧ನೆಯ ಪರಿಚ್ಛೇದದಲ್ಲಿ—

> ಶಿವಃ ಸರ್ವಗತಶ್ಚಾಪಿ ಸ್ವಾಧಾರೇ ವ್ಯಜ್ಯತೇ ಧ್ರುವಂ ।
> ಶಮೀಗರ್ಭೇ ಯಥಾ ವಹ್ನಿರ್ವಿಶೇಷೇಣ ವಿಭಾವ್ಯತೇ ॥೫೬॥

ಬೆಂಕಿಯು ಎಲ್ಲಾ ಕಟ್ಟಿಗೆಗಳಲ್ಲಿದ್ದರೂ ಬನ್ನಿಕಟ್ಟಿಗೆಯ ಗರ್ಭದಲ್ಲಿಯೇ ಹೇಗೆ ವಿಶೇಷವಾಗಿರುವುದೋ ಹಾಗೆಯೇ ಶಿವನು ಸರ್ವತ್ರ ವ್ಯಾಪಕನಾಗಿದ್ದರೂ ತನಗೆ ಆಧಾರಭೂತವಾದ ಇಷ್ಟಲಿಂಗದಲ್ಲಿಯೇ ವಿಶೇಷವಾಗಿ ಪ್ರಕಾಶಿಸುತ್ತಾನೆಂದು ಅಪ್ಪಣೆಕೊಡಿಸಿರುವರು

ಇದರಿಂದ ಅಮೂರ್ತವಾದ ದೇವರನ್ನು ನಾವು ತಿಳಿಯಬೇಕಾದರೆ ಮೂರ್ತವಾದ ವಿಗ್ರಹಾರಾಧನೆಯನ್ನು ಮಾಡಲೇಬೇಕೆಂಬುದು ಸಿದ್ಧವಾಗುತ್ತದೆ ಆದರೆ ವಿಗ್ರಹಾರಾಧನೆಯನ್ನು ತಿರಸ್ಕರಿಸುವಂಥವರು ಈಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲಿದ್ದಾರೆ ದೇವರು ರೂಪಶೂನ್ಯನಾದ ಮೇಲೆ ಜಡವಾದ ಕಲ್ಲುಮಣ್ಣಿನಲ್ಲಿ ಮಾಡಿದ ವಿಗ್ರಹವನ್ನೇಕೆ ಪೂಜೆಮಾಡಬೇಕೆಂಬುದೇ ಇವರ ಉದ್ಗಾರವಾಗಿದೆ

ಹೀಗೆ ಹೇಳುವವರು ತಾವು ಮಾತ್ರ ತಮ್ಮ ಮತದ ಮೂಲಪುರುಷರ ಪ್ರತಿಕೃತಿಗಳನ್ನೂ ಪುಸ್ತಕಗಳನ್ನೂ ಇಟ್ಟು ಪೂಜಿಸುತ್ತಿರುವುದನ್ನು ನೋಡಿದರೆ ಇದು ವಿಗ್ರಹಾರಾಧನೆಗೆ ಸೇರುವುದಿಲ್ಲವೇ? ಬಾಯಿಯಲ್ಲಿ ವಿಗ್ರಹಾರಾಧನೆ ಮಾಡಬಾರದೆಂದು ಹೇಳುತ್ತ ತಾವು ಯಾವಾಗಲೂ ವಿಗ್ರಹಾರಾಧನೆಯನ್ನೇ ಮಾಡುತ್ತಿರುವುದು ಯೋಗ್ಯವೇ? ದೇವವಿಗ್ರಹಗಳು ದೇವರ ಸ್ವರೂಪವನ್ನು ತೋರಿಸುವುದರಿಂದ ವಿಗ್ರಹದಲ್ಲಿ ದೇವತಾಶಕ್ತಿಯಿದೆ ಎಂಬುದು ಎಲ್ಲರ ಅನುಭವಕ್ಕೂ ಬಂದೇ ಬರುತ್ತದೆ ಅದುದರಿಂದ ದೇವವಿಗ್ರಹದಲ್ಲಿ ಇದು ಕಲ್ಲು ಇದು ಮಣ್ಣು ಎಂಬ ದುಷ್ಟಭಾವನೆಮಾಡದೆ ಈಶ್ವರಬುದ್ಧಿಯಿಂದ ಅರ್ಚಿಸುತ್ತಲೂ, ಧ್ಯಾನಿಸುತ್ತಲೂ, ಸ್ಮರಿಸುತ್ತಲೂ ಬಂದರೆ ಆ ವಿಗ್ರಹಾರಾಧನದ್ವಾರಾ ಪರಮೇಶ್ವರನು ಪ್ರತ್ಯಕ್ಷನಾಗಿ ಮುಕ್ತಿಯನ್ನೀಯುವನು.

ಮೈಸೂರು ಸಿಟಿಯಲ್ಲಿ ಈಗಿನ ಪ್ರಜಾ ಸಂಖ್ಯೆ ಸುಮಾರು ೨ ಲಕ್ಷ ೪೧ನೆಯ ಇಸವಿಯ ಪ್ರಜಾ ಸಂಖ್ಯೆ ಒಂದು ಲಕ್ಷದ ಐವತ್ತುಸಾವಿರದ ನಲವತ್ತು (೧೫೦೦೪೦) ಇದರಲ್ಲಿ ಗಂಡಸರ ಸಂಖ್ಯೆ ೭೯೬೬೭ ಹೆಂಗಸರ ಸಂಖ್ಯೆ೭೦೩೭೩

ಶ್ರೀಜಗದ್ಗುರು ರಂಭಾಪುರೀ ಪೀಠಕ್ಕೆ ಅರಮನೆಯಿಂದ ಖಿಲ್ಲತ್ತು

ಶ್ರೀಜಗದ್ಗುರು ರಂಭಾಪುರೀಪೀಠದ ಪಟ್ಟಾಭಿಷೇಕ ಮಹೋತ್ಸವವು ಕಳೆದ ತಿಂಗಳು ೨ನೆಯ ತಾರೀಖಿನ ದಿವಸ ನೆರವೇರಿದುದು ಸರ್ವರಿಗೂ ತಿಳಿದ ಸಂಗತಿಯಾಗಿದೆ ತತ್ಸಂಬಂಧವಾದ ಖಿಲ್ಲತ್ತು ಪ್ರಾಚೀನ ಪದ್ಧತಿಯಂತೆ ಈ ತಿಂಗಳ ೯ನೆಯ ತಾರೀಖು ಸೋಮವಾರ ಶ್ರೀಮಠದ ಏಜಂಟರಿಂದ ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟಿತು ಅದಕ್ಕನುಗುಣವಾಗಿ ಮಹಾಪ್ರಭುಗಳವರ ಅಪ್ಪಣೆಯ ಮೇರೆಗೆ ಅರಮನೆಯ ವತಿಯಿಂದ ನೂತನ ಪಟ್ಟಾಧಿಕಾರ ಸಂಬಂಧವಾದ ಬಹು ಬೆಲೆಯುಳ್ಳ ಖಿಲ್ಲತ್ತು ಶ್ರೀಮಠಕ್ಕೆ ಒಪ್ಪಿಸಲ್ಪಟ್ಟಿತೆಂಬ ವಿಷಯವನ್ನು ತಿಳಿಸಲು ಅತ್ಯಾನಂದವೆನಿಸುತ್ತದೆ ಸದಾ ಪ್ರಜಾಪಾಲನಲೋಲರೂ ಸನಾತನಧರ್ಮೋದ್ಧರಣದೀಕ್ಷಿತರೂ ಮಹಾಗುರುದೇವತಾ ಭಕ್ತರೂ ಆಗಿ ಜನಕರಾಜರ್ಷಿಯಂತೆ ರಾರಾಜಿಸುತ್ತಿರುವ ನಮ್ಮ ಮಹಾಪ್ರಭುಗಳವರಿಗೆ ಶ್ರೀಪರಮೇಶ್ವರನು ದೀರ್ಘಾಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ

ಶ್ರೀಕೇದಾರ ಪೀಠದ ಸಮಾಚಾರ

ಶ್ರೀ ಕೇದಾರಪೀಠದ ವ್ಯಾಜ್ಯವು ಚಮೋಲಿ ಕೋರ್ಟಿನಲ್ಲಿ ನಡೆಯುತ್ತಿರುವುದು ಸರ್ವರಿಗೂ ತಿಳಿದಿದ್ದೇ ಆಗಿದೆ ಈ ತಿಂಗಳು ೨೬ನೆಯ ತಾರೀಖಿಗೆ ವಿಚಾರಣೆಯು ಬಿದ್ದಿದೆ ಅಂದು ದಕ್ಷಿಣ ದೇಶದಲ್ಲಿ ಆಗಬೇಕಾಗಿರುವ ಸಾಕ್ಷಿಗಳ ವಿಚಾರಣೆಗಾಗಿ ಕಮಿಷನ್ ಮಂಜೂರಾಗಬಹುದೆಂದು ತೋರುತ್ತದೆ ವ್ಯಾಜ್ಯದ ಖರ್ಚಿಗಾಗಿ ಈ ಕೆಳಗೆ ಕಂಡ ಮಹನೀಯರು ಕೆಳಗೆ ಉಲ್ಲೇಖಿಸಿರುವಂತೆ ಉದಾರ ಸಹಾಯವನ್ನಿತ್ತಿದ್ದಾರೆ

ವೇ॥ ಸಿಗ್ಲಿಗ್ರಾಮದ ಕೂಡ್ಲಮಠದ ಸಿದ್ಧಯ್ಯನವರು ೫೦೦ ರೂಪಾಯಿಗಳು, ವೇ॥ ರಾಣೆಬೆನ್ನೂರು ಗ್ರಾಮದ ಹಿರೇಮಠದ ವೀರಯ್ಯನವರು ೧೦೧ ರೂಪಾಯಿಗಳು, ವೇ॥ ಅಜ್ಜಿವಡೆಯರ ಮಠದ ರೇವಣಯ್ಯನವರು ೫೬ ರೂಪಾಯಿಗಳು, ವೇ॥ ಸಂಗಯ್ಯನವರು ೫೧ ರೂಪಾಯಿಗಳು, ಸದರಿ ಗ್ರಾಮದ ದೈವದವರು ೨೫೦ ರೂಪಾಗಳನ್ನು ಸಮರ್ಪಿಸಿದ್ದಾರೆ ಇವರೆಲ್ಲರಿಗೂ ಶ್ರೀಕೇದಾರನಾಥನು ಸಮಸ್ತ ಸನ್ಮಂಗಲಗಳನ್ನೀಯಲಿ

ವರ್ತಮಾನಸಂಗ್ರಹ

ಕೋಮುವಾರು ಗಲಭೆ

ಸಂಯುಕ್ತಪ್ರಾಂತದಲ್ಲಿ ಕೆಲವು ಹಳ್ಳಿಗಳಲ್ಲಿ ಕೋಮುವಾರು ಗಲಭೆಯು ಪ್ರಾರಂಭವಾಗಿ ೧೮ ಜನ ಸತ್ತು ಅನೇಕರಿಗೆ ಗಾಯಗಳಾಗಿವೆ

ಪತ್ರಿಕೋದ್ಯೋಗಿಗಳಿಗೆ ಪಿಸ್ತೂಲ್

ಕಾಶಿಯಲ್ಲಿ ಗಲಭೆ ಹೆಚ್ಚಾಗಿರುವುದರಿಂದ ಪತ್ರಿಕೋದ್ಯೋಗಿಗಳಿಗೆ ಪಿಸ್ತೂಲನ್ನು ಕೊಡಬೇಕೆಂದು ಪ್ರಾಂತ ಸರ್ಕಾರವು ಪ್ರತಿನಿಧಿಗಳ ಸಂಘದಲ್ಲಿ ತೀರ್ಮಾನಿಸಿದೆ.

ಚರ್ಮದ ಸಾಮಾನುಗಳ ಕಂಟ್ರೋಲ್ ರದ್ದು

ಇಂಡಿಯಾ ಸರ್ಕಾರದವರು ತೊಗಲಿನಸಾಮಾನುಗಳ ಮೇಲಿನ ಕಂಟ್ರೋಲನ್ನು ರದ್ದುಪಡಿಸಿರುತ್ತಾರೆ ಇಂದಿನ ಪರಿಸ್ಥಿತಿಯಲ್ಲಿ ಈ ಕಂಟ್ರೋಲುಗಳ ಆವಶ್ಯಕತೆಯಿಲ್ಲವೆಂದು ಅಭಿಪ್ರಾಯಪಡಲಾಗಿದೆ.

ಜಪಾನ್ ಬಟ್ಟೆ ಬಂದಿದೆ

ಸುಮಾರು ೮ ಕೋಟಿ ಗಜದಷ್ಟು ಜಪಾನಿನ ಬಟ್ಟೆ ಈಗಾಗಲೇ ಜಪಾನಿನಿಂದ ಇಂಡಿಯಾಕ್ಕೆ ಬಂದಿದೆ ಮುಂದಿನ ತಿಂಗಳಲ್ಲಿ ಇಷ್ಟೇ ಬಟ್ಟೆಯನ್ನು ತುಂಬಿಕೊಂಡು ಇನ್ನೊಂದು ಹಡಗು ಬರಲಿದೆ ಇದನ್ನು ಯಾವ ರೀತಿ ಹಂಚಬೇಕೆಂದು ಇಂಡಿಯಾ ಸರ್ಕಾರದವರು ಆಲೋಚಿಸುತ್ತಿದ್ದಾರೆ

ತಿರುವಾಂಕೂರು ಸಂಸ್ಥಾನವು ಸ್ವತಂತ್ರವಾಗುವುದು

"ಆಗಸ್ಟ್ ೧೫ ರಿಂದ ತಿರುವಾಂಕೂರು ಸ್ವತಂತ್ರವಾಗುವುದು" ಎಂಬುದಾಗಿ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರು ಪತ್ರಿಕಾಪ್ರತಿನಿಧಿಗಳ ಸಮ್ಮೇಳನದಲ್ಲಿ ತಿಳಿಸಿದರು.

ತಿರುವಾಂಕೂರಿನ ಸ್ವಾತಂತ್ರ್ಯವನ್ನು ಸಂರಕ್ಷಿಸುವ ಕಾರ್ಯವನ್ನೀಗ ಶ್ರೀಮನ್ಮಹಾರಾಜರವರು ಹೊತ್ತಿದ್ದಾರೆ ಪ್ರಜೆಗಳೆಲ್ಲ ಅವರಿಗೆ ಬೆಂಬಲ ನೀಡಬೇಕು ಸ್ವಾತಂತ್ರ್ಯವು ನಮ್ಮ ಸಾವು ಬದುಕಿನ ಪ್ರಶ್ನೆಯಾಗಿದೆ ಎಂತಹ ಕಷ್ಟದ ಪರಿಸ್ಥಿತಿಯೇ ಬರಲಿ ಅದನ್ನೆದುರಿಸಿ, ರಕ್ಷಣಾ ಕಾರ್ಯಕ್ರಮವನ್ನು ಕೈಗೊಳ್ಳಲು ತಿರುವಾಂಕೂರು ಮಹಾರಾಜರು ಸಿದ್ಧರಾಗಿದ್ದಾರೆ ನಾನು ತಿರುವಾಂಕೂರಿನವನಲ್ಲವಲ್ಲಾ ಎಂದು ದುಃಖಿಸುತ್ತಿದ್ದೇನೆ ಆದರೂ, ಈಗಿನ ಸಂತೋಷದ ಸುಖವನ್ನು ತಿರುವಾಂಕೂರಿನ ಪ್ರಜೆಗಳೆಲ್ಲ ಅನುಭವಿಸುವರೆಂದು ನಂಬಿದ್ದೇನೆ

ಹಿಂದೂ ಸಂಸ್ಥಾನಗಳನ್ನು ವಿವೇಚನೆ ಇಲ್ಲದೆ ಖಂಡಿಸುವ ಕಾಂಗ್ರೆಸ್ ನಾಯಕರಿಗೂ ಬ್ರಿಟಿಷ್ ಭಾರತದ ರಾಜಕಾರಣಿಗಳಿಗೂ ಜಿನ್ನಾ ಮತ್ತು ಮುಸ್ಲಿಂ ಸಂಸ್ಥಾನಗಳನ್ನು ಖಂಡಿಸಬೇಕೆಂದರೆ ಬಾಯಿ ಹಿಡಿದು ಬಿಡುತ್ತದೆ ಇದು ಬಹಳ ಆಶ್ಚರ್ಯಕರವಾಗಿದೆ, ಎಂದು ಹೇಳಿದರು

ತಿರುವಾಂಕೂರಿನ ಸ್ವಾತಂತ್ರ್ಯವನ್ನು ವಿರೋಧಿಸುವವರು ದೇಶದ್ರೋಹಿಗಳು

ಅಖಿಲ ಕೇರಳ ಕೆಥೊಲಿಕ್ ಸಮ್ಮೇಳನದ ಉಪಾಧ್ಯಕ್ಷರು ಒಂದು ಹೇಳಿಕೆ ಹೊರಡಿಸಿ ತಿರುವಾಂಕೂರು ಸರ್ಕಾರದ ಈ ತೀರ್ಮಾನವನ್ನು ಸ್ವಾಗತಿಸಿದ್ದಾರೆ

'ಅನಾದಿಕಾಲದಿಂದ ತಿರುವಾಂಕೂರು ಸ್ವತಂತ್ರ ರಾಜ್ಯವಾಗಿದೆ. ಮುಂದೆಯೂ ಕೂಡ ಅದು ಹಾಗೇ ಇರಬೇಕು ವಿಜಯನಗರದ ಮತ್ತು ಮಧುರೆಯ ಅರಸರೂ ಮೊಗಲರೂ, ಟಿಪ್ಪುಸುಲ್ತಾನರೂ, ಡಚ್ಚರೂ ಈ ಸಂಸ್ಥಾನವನ್ನು ಗೆಲ್ಲಲು ಯತ್ನಿಸಿ ವಿಫಲರಾದರು ಭಾರತವನ್ನೆಲ್ಲ ಜಯಿಸಿದ ಬ್ರಿಟಿಷರು ತಿರುವಾಂಕೂರಿನ ಮಿತ್ರರಾದರು ಅದರಂತೆ ಕರಾರಾಯಿತು ಭಾರತವನ್ನು ವಿಭಾಗಿಸುವುದು ಈಗ ನಿರ್ಧರವಾದುದರಿಂದ ಮತ್ತು ಹೈದರಾಬಾದು ಮುಂತಾದ ಸಂಸ್ಥಾನಗಳು ಸ್ವತಂತ್ರನಾಗಿರಬೇಕೆಂಬ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುವಾಗ, ಹೆಚ್ಚಿನ ಸಾಧನಸಂಪತ್ತುಗಳುಳ್ಳ ತಿರುವಾಂಕೂರು ಸಂಸ್ಥಾನವು ಏಕೆ ಸ್ವತಂತ್ರವಾಗಬಾರದೋ ಕಾಣೆ

ತಿರುವಾಂಕೂರಿನ ಸ್ವಾತಂತ್ರ್ಯವನ್ನು ವಿರೋಧಿಸುವವರು ಅದರ ಶತ್ರುಗಳು, ದೇಶದ್ರೋಹಿಗಳು ಅವರು ಹೇಳುವುದು ಅವರಿಗೇ ಗೊತ್ತಿಲ್ಲ ಎಂದು ತಿಳಿಸಿದ್ದಾರೆ

ತಿರುವಾಂಕೂರು, ಹಿಂದೂಸ್ಥಾನಕ್ಕೆ ಸೇರಿದರೆ ಕ್ರಿಸ್ತಾಯಿ ಮತಕ್ಕೂ ಅದರ ಸ್ಥಾನಮಾನಕ್ಕೂ ವಿನಾಶ ಒದಗುವುದೆಂದು ಹೇಳಿ, ಒಂದು ವೇಳೆ ತಿರುವಾಂಕೂರು ಹಿಂದೂಸ್ಥಾನವನ್ನು ಸೇರಲು ನಿಶ್ಚಯಿಸಿದರೆ ಒಟ್ಟು ಜನಸಂಖ್ಯೆಯಲ್ಲಿ ೩೦ ಲಕ್ಷವಿರುವ (ಶೇಕಡ ೩೪) ಕ್ರಿಸ್ತಾಯಿಗಳು ಶಕ್ತಿಮೀರಿ ಪ್ರತಿಭಟಿಸಬೇಕೆಂದು ಕೋರಿದ್ದಾರೆ

"ನಮ್ಮ ಮಹಾರಾಜರು ಸ್ವತಂತ್ರ ರಾಜ್ಯವೊಂದರ ಅರಸರಾಗಿ ಮೆರೆಯುವುದು ನಮಗೆಲ್ಲ ಹೆಮ್ಮೆಯ ವಿಚಾರವಲ್ಲವೆ? ಹಿಂದೂಸ್ಥಾನವೋ ಪಾಕಿಸ್ಥಾನವೋ ಯಾವುದೇ ಸ್ಥಾಪಿಸಲ್ಪಟ್ಟರೂ ನಾವು ಸ್ವತಂತ್ರರಾಗಿದ್ದು ಅವುಗಳ ಗತಿಯನ್ನು ನೋಡೋಣ! ಎಂದು ಹೇಳಿದ್ದಾರೆ.

ಹೈದ್ರಾಬಾದು ಸಂಸ್ಥಾನವು ಸ್ವತಂತ್ರವಾಗಲಿದೆ

ನೈಜಾಮರ ಫರ್ಮಾನ್

"ಅಧಿಕಾರ ವರ್ಗಾವಣೆಯ ನಂತರ ಬ್ರಿಟಿಷರ ಪರಮಾಧಿಕಾರ ಕೊನೆಗಂಡ ಕೂಡಲೇ ನಿಜಾಮರು ಪರಮಾಧಿಕಾರವುಳ ಸ್ವತಂತ್ರ ಅರಸರ ಪದವಿಯನ್ನು ಹೊಂದುವರು" ಎಂದು ಹೈದ್ರಾಬಾದ್ ನಿಜಾಮರು ಹೊರಡಿಸಿದ ಫರ್ಮಾನಿನಲ್ಲಿ ತಿಳಿಸುತ್ತಾರೆ

ಹೈದ್ರಾಬಾದು ಪಾಕಿಸ್ಥಾನ್ ಅಥವಾ ಹಿಂದೂಸ್ಥಾನ್ ಇವೆರಡರಲ್ಲಿ ಯಾವ ರಾಜ್ಯಾಂಗ ಸಭೆಗೂ ಸೇರುವುದಿಲ್ಲ ಈ ಎರಡು ಯೂನಿಯನ್‌ಗಳಲ್ಲೂ ಹೈದ್ರಾಬಾದಿನ ಪ್ರಜೆಗಳಿಗೆ ಸಂಪರ್ಕವುಂಟು ಯಾವ ಒಂದು ಯೂನಿಯನ್ನಿಗೆ ಸೇರಿದರೂ, ಹೈದ್ರಾಬಾದು ಏಕಪಕ್ಷ ವಹಿಸಿದಂತಾಗುತ್ತದೆ ನನ್ನ ಪ್ರಜೆಗಳ ಆಸಕ್ತಿ ಅಭಿಲಾಷೆಗಳನ್ನೇ ಸದಾ ನಾನು ಕಾಪಾಡುವವನಾದ್ದರಿಂದ ಯಾವ ರಾಜ್ಯಾಂಗ ಸಭೆಯಲ್ಲೂ ಭಾಗವಹಿಸಬಾರದೆಂಬ ನಿರ್ಧಾರಕ್ಕೆ ಬಂದಿದ್ದೇನೆ ಪರಸ್ಪರ ಪ್ರಯೋಜನಕ್ಕಾಗಿ ಎರಡು ಯೂನಿಯನ್ನುಗಳೊಂದಿಗೂ ನಿಜಾಮರ ಸರ್ಕಾರವು ಸಾಮಾನ್ಯ ವಿಷಯಗಳ ಮೇಲೆ ಒಪ್ಪಂದ ಮಾಡಿಕೊಳ್ಳಲು ಸಿದ್ಧವಾಗಿದೆ ಹೊಸ ಯೂನಿಯನ್ನು ಹೈದ್ರಾಬಾದು ಸಂಬಂಧ ಬೆಳೆಸುವಾಗ ಹೈದ್ರಾಬಾದು ಮತ್ತು ಇಂಡಿಯಾ ಎರಡೂ ಸೇರಿ ಅಖಂಡವೆಂದು ಭಾವಿಸಲಾಗುತ್ತದೆ ಎಂದು ನೈಜಾಮರು ಫರ್ಮಾನ್‌ನಲ್ಲಿ ತಿಳಿಸಿರುತ್ತಾರೆ

ಸಂಸ್ಥಾನದ ಬೇರೆ ಬೇರೆ ಪಕ್ಷಗಳಲ್ಲಿ ಸೌಹಾರ್ದವಿರಬೇಕೆಂದು ಅವರು ಒತ್ತಿಹೇಳಿ, ಹಿಂದೂಗಳೂ ಮತ್ತು ಮುಸ್ಲಿಮರೂ ಸಂಸ್ಥಾನದ ಎರಡು ಕಣ್ಣುಗಳೆಂದು ನನ್ನ ಪೂರ್ವಿಕರೂ ನಾನೂ ಭಾವಿಸಿದ್ದೇವೆ ಎಂದು ತಿಳಿಸಿದ್ದಾರೆ

ಆಂಗ್ಲೋಇಂಡಿಯನ್ನರ ರಾಜಿನಾಮೆ

ಆಂಗ್ಲೋ ಇಂಡಿಯನ್ನರು ಪಾಕಿಸ್ಥಾನದ ರಾಜ್ಯಾಂಗದಲ್ಲಿ ಸೇರಬಹುದಾಗಿರುವುದರಿಂದ ಈಗಿನ ರಾಜ್ಯಾಂಗ ಸಭೆಯ ಸದಸ್ಯರಾದ ಸಿ ಇ ಗಿಬ್ಬನ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ

ಬೀರಬಲ್ಲನ ಜಾಣ್ಮೆ

ಈಗ್ಗೆ ಸುಮಾರು ಮುನ್ನೂರು ವರ್ಷಗಳ ಹಿಂದೆ ದೆಹಲಿಯಲ್ಲಿ ಅಕ್ಬರ್ ಎಂಬ ಚಕ್ರವರ್ತಿಯು ಆಳುತ್ತಿದ್ದನು ಅವನ ಆಸ್ಥಾನದಲ್ಲಿ ಬೀರಬಲ್ಲ ಎಂಬ ಬುದ್ಧಿವಂತನೂ ಹಾಸ್ಯಗಾರನೂ ಆದ ಮಂತ್ರಿ ಇದ್ದನು ಅಕ್ಬರ್ ಚಕ್ರವರ್ತಿಗೆ ಆತನಮೇಲೆ ತುಂಬಾ ಪ್ರೀತಿಇತ್ತು

ಒಂದು ದಿನ ಅಕ್ಬರ್ ಚಕ್ರವರ್ತಿಯು ಬೀರಬಲ್ಲನೊಡನೆ ಬೇಟೆಗೆ ಹೋಗಿ ಹಿಂತಿರುಗಿ ಬರುತ್ತಿದ್ದನು. ಎದುರಿಗೆ ಒಂದು ಕೆರೆ ಕಾಣಿಸಿತು ಅದರಲ್ಲಿಯ ನೀರು ಬಹಳ ತಣ್ಣಗಿತ್ತು ಅದನ್ನು ಕಂಡು ಅಕ್ಬರ್‌ನು "ಈ ಕೆರೆಯ ನೀರಿನಲ್ಲಿ ಯಾರು ಒಂದು ದಿನವೆಲ್ಲ ಕುಳಿತುಕೊಳ್ಳುವರೋ ಅವರಿಗೆ ನೂರು ವರಹ ಬಹುಮಾನ ಕೊಡುತ್ತೇನೆ" ಎಂಬುದಾಗಿ ಹೇಳಿದನು

ಆಗ್ಗೆ ಒಬ್ಬ ಬೆಸ್ತರ ಮುದುಕನು ನಾನು ಕುಳಿತುಕೊಳ್ಳಲು ಸಿದ್ಧನಿದ್ದೇನೆ, ಎಂಬುದಾಗಿ ಚಕ್ರವರ್ತಿಗೆ ತಿಳಿಸಿದನು ಚಕ್ರವರ್ತಿಯು ಆ ಕೊಳದ ಸುತ್ತಲು ಕಾವಲುಗಾರರನ್ನು ನಿಲ್ಲಿಸಿದನು. ಇಪ್ಪತ್ತುನಾಲ್ಕು ಗಂಟೆ ಬೆಸ್ತರವನು ನೀರಿನಲ್ಲಿ ಕುಳಿತು ಬದುಕಿ ಬಂದರೆ, ಅವನಿಗೆ ನೂರು ವರಹಗಳನ್ನು ಕೊಡಬೇಕೆಂದು ಕೋಶಾಧಿಕಾರಿಗೆ ಆಜ್ಞೆ ಮಾಡಿದನು

ಬೆಸ್ತರ ಮುದುಕನು ಇಪ್ಪತ್ತುನಾಲ್ಕು ಗಂಟೆಗಳವರೆಗೆ ಕೆರೆಯಲ್ಲಿ ಕುಳಿತಿದ್ದು ಬದುಕಿ ಬಂದನು ಆದ್ದರಿಂದ ಕೋಶಾಧಿಕಾರಿಯು ಚಕ್ರವರ್ತಿಯ ಆಜ್ಞೆಯ ಪ್ರಕಾರ, ಮರುದಿನ ದರ್ಬಾರಿನಲ್ಲಿ ನೂರು ವರಹಗಳನ್ನು ಪಡೆಯಲು ಬರಬೇಕೆಂದು ಬೆಸ್ತರವನಿಗೆ ಆಜ್ಞಾಪಿಸಿದನು

ಕೇವಲ ಇಪ್ಪತ್ತುನಾಲ್ಕು ಗಂಟೆಯಲ್ಲಿ ನೂರು ವರಹ ಬಹುಮಾನವನ್ನು ಪಡೆದ ಬೆಸ್ತರವನನ್ನು ನೋಡಿ ದರ್ಬಾರಿನಲ್ಲಿದ್ದವರಿಗೆಲ್ಲ ಹೊಟ್ಟೆಕಿಚ್ಚು ಪ್ರಾರಂಭವಾಯಿತು ಚಕ್ರವರ್ತಿಯು ಅನ್ಯಾಯವಾಗಿ ಭಂಡಾರವನ್ನು ಬಡವರ ಪಾಲುಮಾಡುವುದು ಅವರಿಗೆ ಸರಿಬೀಳಲಿಲ್ಲ. ಆದ್ದರಿಂದ ಚಕ್ರವರ್ತಿಗೆ ಬೆಸ್ತರವನ ಮೇಲೆ ದೂರು ಹೇಳಿದರು ಆ ಬೆಸ್ತರವನು ನೀರಿನಲ್ಲಿ ಕುಳಿತುಕೊಂಡು ಬದುಕಿ ಬರುತ್ತಿರಲಿಲ್ಲ ಅವನು ಕುಳಿತುಕೊಂಡಾಗ ಬಹುದೂರದಲ್ಲಿ ಬೆಂಕಿ ಉರಿಯುತ್ತಿರುವುದನ್ನು ನೋಡಿದನು ಅದರಿಂದ ಅವನ ಶರೀರದಲ್ಲಿ ಉಷ್ಣತೆ ಉಂಟಾಯಿತು" ಎಂದರು ಕೆಲವರು ಮತ್ತೆ ಕೆಲವರು "ಆಕಾಶದಲ್ಲಿ ಸೂರ್ಯನಿದ್ದುದರಿಂದ ಅವನ ತಲೆಯು ಕಾದು ಶೀತವು ಅವನಿಗೆ ಏನನ್ನೂ ಮಾಡಲಿಲ್ಲ ಆದ್ದರಿಂದ ಬದುಕಿಬಂದ' ಎಂದು ವಾದಿಸಿದರು ಅಕ್ಬರ್ ಚಕ್ರವರ್ತಿಯು ಇವರ ವಾದವನ್ನು ನಿಜವೆಂದು ನಂಬಿ ಬಹುಮಾನವನ್ನು ಬೆಸ್ತರವನಿಗೆ ಕೊಡಲು ಒಪ್ಪದೆ ಬೆಸ್ತರವನನ್ನು ತಿರುಗಿ ಕಳುಹಿಸಿದನು. ಪಾಪ! ಬೆಸ್ತರವನಿಗೆ ತುಂಬಾ ನಿರಾಶೆಯಾಯಿತು

ಬೆಸ್ತರವನು ಹಿಂತಿರುಗುವಾಗ ಅರಮನೆಯ ಕಡೆ ರಭಸದಿಂದ ಹೋಗುತ್ತಿದ್ದ ಬೀರಬಲ್ಲ ಮಂತ್ರಿ ಸಿಕ್ಕನು. ಬೆಸ್ತರವನು ಬೀರಬಲ್ಲನಿಗೆ ಎಲ್ಲಾ ತಿಳಿಸಿದನು. ನಡೆದ ವಿಚಾರವನ್ನು ಕೇಳಿ ಬೀರಬಲ್ಲನಿಗೆ ತುಂಬ ವ್ಯಸನವಾಯಿತು ಬೆಸ್ತರವನನ್ನು ಕುರಿತು 'ನಾಳೆಯದಿನ ಒಂದು ನನ್ನನ್ನು ನೋಡು' ಎಂದು ಹೇಳಿದನು ಅರಮನೆಯ ಕಡೆ ಹೋಗುವುದನ್ನು ಬಿಟ್ಟು, ಅಕ್ಬರನಿಗೆ ಬುದ್ಧಿ ಕಲಿಸಬೇಕೆಂಬುದಾಗಿ ಉಪಾಯವನ್ನು ಯೋಚಿಸುತ್ತಾ ತನ್ನ ಮನೆಗೆ ಬಂದುಸೇರಿದನು

ಆ ದಿನ ಅಕ್ಬರನಿಗೆ ಅನೇಕ ರಾಜಕಾರ್ಯಗಳಿದ್ದುವು ಅದಕ್ಕಾಗಿ ಚಕ್ರವರ್ತಿಯು ಬೀರಬಲ್ಲನನ್ನು ಕರೆಕಳುಹಿಸಿದನು ಬೀರಬಲ್ಲನು ತನ್ನ ಮನೆಯಲ್ಲಿ ಅಡಿಗೆ ಮಾಡುವವರು ಯಾರೂ ಇಲ್ಲನೆಂದೂ ತಾನೇ ಅಡಿಗೆಮಾಡಿ ಊಟಮಾಡಿಕೊಂಡು ಬರುವುದಾಗಿಯೂ ಹೇಳಿಕಳುಹಿಸಿದನು ಮಧ್ಯಾಹ್ನವಾದರೂ ಬೀರಬಲ್ಲನು ಬರಲಿಲ್ಲ ಪುನಃ ಚಕ್ರವರ್ತಿಯು ಬೀರಬಲ್ಲನಿಗೆ ಕೂಡಲೆ ಬರಲು ಹೇಳಿಕಳುಹಿಸಿದನು ಬೀರಬಲ್ಲನು ಅದಕ್ಕೆ ಉತ್ತರವಾಗಿ ಇನ್ನೂ ಅನ್ನವೇ ಆಗಿಲ್ಲವೆಂದೂ ಊಟಮಾಡದೆ ಬರುವುದು ತನ್ನ ಸಂಪ್ರದಾಯಕ್ಕೆ ವಿರೋಧವೆಂದೂ ತಿಳಿಸಿದನು ಅಕ್ಬರನು ಮೂರನೆಯಸಾರೆ, ಸಂಧ್ಯಾಕಾಲ ಹೇಳಿಕಳುಹಿಸಿದನು ಆಗಲೂ 'ಅನ್ನವೇ ಬೆಂದಿಲ್ಲ' ಎಂದು ಬೀರಬಲ್ಲನು ಹೇಳಿಕಳುಹಿಸಿದನು ಅಕ್ಬರನಿಗೆ ತುಂಬಾ ಆಶ್ಚರ್ಯವಾಯಿತು ಅನ್ನ ಮಾಡುವುದಕ್ಕೆ ಮಧ್ಯಾಹ್ನವೆಲ್ಲ ಬೇಕೆ? ಎಂದು ಕೋಪಗೊಂಡು ತಾನೇ ಬೀರಬಲ್ಲನ ಮನೆಗೆ ಬಂದನು

ಬೀರಬಲ್ಲನು ತನ್ನ ಮನೆಯ ಅಂಗಳದಲ್ಲಿ ದೊಡ್ಡದಾದ ಒಂದು ಬೊಂಬನ್ನು ನೆಟ್ಟು, ಅದರ ಮೇಲುಗಡೆ ಒಂದು ಮಡಕೆಯನ್ನು ಕಟ್ಟಿ ಅದರಲ್ಲಿ ಅಕ್ಕಿಯ ಕಾಳನ್ನೂ ನೀರನ್ನೂ ಬೆರೆಸಿ ಇಟ್ಟಿದ್ದನು ಕೆಳಗಡೆ ನೆಲದ ಮೇಲೆ ಚಿಕ್ಕದಾಗಿ ಬೆಂಕಿಯನ್ನು ಹಾಕಿ ಬೆಂಕಿಯ ಮುಂದೆ ಕುಳಿತಿದ್ದನು. ಅಕ್ಬರನು ಅಂಗಳಕ್ಕೆ ಬಂದ ಕೂಡಲೇ ಬೀರಬಲ್ಲನು ಶಿರಬಾಗಿ ನಮಸ್ಕಾರ ಮಾಡಿದನು ಅಕ್ಬರನು ಕೋಪದಿಂದ, 'ಅನ್ನಮಾಡಲು ಎಷ್ಟು ಕಾಲ ಬೇಕಯ್ಯಾ?' ಎಂದು ಗರ್ಜಿಸಿದನು

"ಹುಜೂರ್, ಬೆಂಕಿಯ ಶಾಖ ಮಡಕೆಗೆ ಇನ್ನೂ ಮುಟ್ಟಿಯೇ ಇಲ್ಲ, ನೋಡಿ ಸರ್ಕಾರ್" ಎಂದು ಮುಂದೆ ಇದ್ದ ಬೊಂಬನ್ನೂ ಮಡಕೆಯನ್ನೂ ತೋರಿಸಿದನು ಅಕ್ಬರನಿಗೆ ಕೋಪ ಮಾಯವಾಗಿ ತಡೆಯಲಾರದಷ್ಟು ನಗುಬಂತು "ಅಯ್ಯೋ ದಡ್ಡಾ! ಮಡಕೆಯನ್ನು ಅಷ್ಟು ಎತ್ತರವಾಗಿ ಇಟ್ಟು, ಬೆಂಕಿಯನ್ನು ಇಲ್ಲಿ ಹಾಕಿದರೆ, ಅದಕ್ಕೆ ಶಾಖವಾದರೂ ಮುಟ್ಟುವುದೇ?" ಎಂದು ಕೇಳಿದನು ಅದಕ್ಕೆ ಬೀರಬಲ್ಲನು "ದೂರದಲ್ಲಿದ್ದ ಬೆಂಕಿಯನ್ನು ಬೆಸ್ತರವನು ನೋಡಿದ ಮಾತ್ರಕ್ಕೆ ಅವನಿಗೆ ಶಾಖ ಉಂಟಾಯಿತೆಂದು ತಾವೇ ಅಪ್ಪಣೆ ಕೊಡಿಸಿದ ಮೇಲೆ ಈ ಒಲೆಯ ಬೆಂಕಿಯ ಶಾಖವು ಮಡಕೆಗೆ ತಟ್ಟಲೇಬೇಕಲ್ಲ ಪ್ರಭು?" ಎಂದು ಉತ್ತರವಿತ್ತನು. ಅಕ್ಬರನು ನಾಚಿಗೊಂಡು, ಬೀರಬಲ್ಲನ ಈ ಉಪಾಯಕ್ಕೆ ಮೆಚ್ಚಿ ಅವನಿಗೆ ಪಾರಿತೋಷಕವನ್ನೂ ಬೆಸ್ತರವನಿಗೆ ನೂರು ವರಹಗಳನ್ನೂ ಕೊಟ್ಟು ತಾನು ಆಡಿದಂತೆ ನಡೆದುಕೊಂಡನು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವ ಸಲುವಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೨೨೨ ಪುಟಗಳಿಂದ ಕೂಡಿದ್ದು ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಹಾಫ್‌ಟೋನ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ** ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ **ಫೋಟೋ** (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ** ಸೈಜು ೧೪ × ೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ **ಫೋಟೋ**	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
” ” ” ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ **ಫೋಟೋ**	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ**	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ **ಫೋಟೋ**	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ **ಫೋಟೋ**	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ **ಫೋಟೋ**	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ**	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ **ಫೋಟೋ** (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ **ಫೋಟೋ** (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ** ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ **ಫೋಟೋ** ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ **ಗೋಪುರದ ಫೋಟೋ**	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೭ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ ...	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ. (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೯೪ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धान्तशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೮ ಆಣೆ — ಪರಸ್ಥಳದವರಿಗೆ ೩ ರೂ ವಿ. ಪಿ. ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಜೂನ್ ೧೯೪೭ [ಸಂಚಿಕೆ ೯

ಶಾಂತಿ ಎಲ್ಲಿಹುದು ?

ಶಾಂತಿ ಕ್ರಾಂತಿಗಳೆರಡರ ಚಲನವಲನವು ವಿಶ್ವದ ಸಂವಿಧಾನಕ್ಕೆ ಸಹಕಾರಿಯಾಗಿರುವದು ಕೇವಲ ಶಾಂತಿಯಿಂದಾಗಲಿ, ಕೇವಲ ಕ್ರಾಂತಿಯಿಂದಾಗಲಿ ಜಗದ ಸಂಸ್ಥಿತಿಯು ಸುಗಮವಾಗಲಾರದು ನಿಜವಾದ ಆನಂದದ ರಸಾನುಭವವನ್ನು ಅನುಭವಿಸಬೇಕಾದರೆ ಕೇವಲ ಶಾಂತಿಯಿಂದಲೇ ಸಾಧ್ಯವು ಆತ್ಮನ ಚರಮಗುರಿಯು ಇದು ಇದೇ ವಿಷಯವನ್ನು ಭಗವದ್ಗೀತೆಯಲ್ಲಿ "ಏಷಾ ಬ್ರಾಹ್ಮೀಸ್ಥಿತಿಃ ಪ್ರೋಕ್ತಾ ಎಂಬುದಾಗಿ ಶ್ರೀಕೃಷ್ಣನು ಹೇಳಿರುವನು ಪ್ರಪಂಚದ ಅಣುರೇಣುಗಳನ್ನು ಶೋಧಿಸಿದರೂ ಅದು ಸಿಕ್ಕಲಾರದು ಈಗೀಗ ರಷ್ಯಾ, ಅಮೇರಿಕನ್ ಜೋರಿನ ಮಾತ್ರ ಶಾಂತಿಯನ್ನು ಹುಡುಕುವವೇ ಹೊರತು ಒಳಗೆ ಚಪಲತನವು ತುಂಬಿಕೊಂಡೇ ಇರುವದು ಎಷ್ಟೋ ದೇಶಗಳನ್ನು ಪಾದಾಕ್ರಾಂತಮಾಡಿದರೂ ಸುಖವು ತೋರಲಾರದು ಒಂದು ಜನಾಂಗವು ಮತ್ತೊಂದು ಜನಾಂಗವನ್ನು ಮುರಿಬಡಿದ ಸ್ವಲ್ಪಕಾಲದಲ್ಲಿಯೇ ಇತಿಹಾಸದ ಕಡಿತದಲ್ಲಿ ಸೇರುತ್ತಲಿರುವದು ಈ ವಿಷಯವು ಪೂರ್ವಾಪರ ಇತಿಹಾಸವನ್ನು ತಿಳಿದ ದೂರದರ್ಶಿಗಳಿಗೆ ತಿಳಿದದ್ದಾಗಿದೆ ಮಾನವರ ಸ್ವಾಭಾವಿಕ ಗುಣವೇ ಹೀಗಿರುವದು

"ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ।
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ।"

ಈಶ್ವರನು ಸಕಲಜೀವಿಗಳ ಹೃದಯದಲ್ಲಿ ವಾಸನಾಗಿರುವನು ಅಲ್ಲದೆ ಮಾಯೆಯಿಂದ ಅವುಗಳನ್ನು ಕರ್ಮಾನುಗುಣವಾಗಿ ತಿರುಗಿಸುತ್ತಿರುವನು ಅವನ ದಯೆಯಿಂದ ನೀನು ಶ್ರೇಷ್ಠವಾದ ಶಾಂತಿಯನ್ನು ಹೊಂದುವೆ ಆದ್ದರಿಂದ ಅವನನ್ನೇ ನೀನು ಸರ್ವರೀತಿಯಿಂದಲೂ ಸರ್ವಕಾಲದಲ್ಲಿಯೂ ಶರಣುಹೊಂದು ಎಂಬುದಾಗಿ ಅರ್ಜುನನಿಗೆ ಶ್ರೀಕೃಷ್ಣನು ಶಾಂತಿ ಸಿಕ್ಕುವ ಸ್ಥಾನವನ್ನೂ ಸಾಧನವನ್ನೂ ಕೂಡಿಯೇ ಹೇಳಿರುವನು ಸಾಧುವರ್ಯರಾದ ರಾಮಕೃಷ್ಣಪರಮಹಂಸ ಮೊದಲಾದವರು ಈ ಅಭಿಪ್ರಾಯವನ್ನೇ ತಿಳಿದು ಅದರಂತೆ ಆಚರಿಸಿದ್ದಾರೆ ಹೀಗೆ ಮಾಡಿದಲ್ಲದೆ ನಾವು ಎಂದೂ ಪರಮಶಾಂತಿಯನ್ನು ಹೊಂದಲಾರೆವು ಇಲ್ಲವಾದರೆ ನಮ್ಮ ಶಾಂತಿಯ ಹಂಬಲವು ಗಗನ ಕುಸುಮವೆಂದು ಬೇರೆ ಹೇಳಬೇಕಾಗಿಲ್ಲ ಪಂಚಭೂತಗಳ ಮಿಶ್ರಣದಿಂದ ಹೊರಹೊಮ್ಮಿರುವ ಥಳಕುಬೆಳಕುಗಳಲ್ಲಿ ಶಾಂತಿಯ ಲವಲೇಶವೂ ಕೂಡ ಸಿಕ್ಕಲಾರದು. ಅಕ್ಷರದ ನಿಲುವಿಕೆಯನ್ನು ಕ್ಷರದಲ್ಲಿ ಹುಡುಕಿದರೆ ಹೇಗೆತಾನೆ ದೊರಕಬೇಕು ? ಅಕ್ಷರದ ಬೆಂಬಲದಿಂದ ಕ್ಷರದ ಬೆದರಿಕೆಯು ಮುದುರುವದಲ್ಲದೆ ಕ್ಷರದ ಒಳಹೊರಗೂ ಅಕ್ಷರಪ್ರತಿಭೆಯು ತೋರಹತ್ತುವದು ಹೀಗೆ ಆದಾಗಮಾತ್ರ ಶಾಂತಿಯು ಕರತಲಾಮಲಕವಾಗುವದು ಎಂಬವನ್ನು ಗಟ್ಟಿಯಾಗಿ ಹಿಡಿದುಕೊಂಡು ಗರಗರನೆ ತಿರುಗುವ ಹುಡುಗನಿಗೆ ಬೀಳುವ ಭಯವುಂಟಾಗಲಾರದು ಚಿರಂತನವಾದ ಶಾಂತಿ ಕವಚವು ಭಯಂಕರ ಕೋಲಾಹಲದ ಮಧ್ಯದಲ್ಲಿದ್ದರೂ ಅದಕ್ಕೆ ಚ್ಯುತಿಯಿಲ್ಲ ಇಂಥ ಅಮೂಲ್ಯವಾದ ಶಾಂತಿಯನ್ನು ಶಾಂತಿಧಾಮವಾದ ಹೃದಯಸ್ಥ ಆತ್ಮನಲ್ಲಿಯೇ ಹುಡುಕಬೇಕು ಈ ವಿಷಯವು ಸರ್ವರಿಗೂ ಸರಿಹೋಗುವಂಥದಲ್ಲ ಆದ್ದರಿಂದಲೇ ಮಹಾಕವಿ ಅಭಿನವಪಂಪನು,

ರಸಮಂ ನಾಲಗೆ ಕವಿತಾ
ರಸಮಂ ಕವಿ ಕುಸುಮರಸಮನಳಿನಾಲೆ ಸುಧಾ ।
ರಸಮಂ ಸುರರಷ್ಟಯಸುಖ ।
ರಸಮಂ ಪರಮಾತ್ಮನರಿಗುಮಲ್ಪಜ್ಞರಿಯರ್ ।

ಬಗೆಬಗೆಯ ಪಕ್ವಾನ್ನಗಳ ಸವಿಯನ್ನು ನಾಲಿಗೆಯು ತಿಳಿಯುವದು ಕವಿತೆಯ ರಸವನ್ನು ಕವಿಯು ತಿಳಿಯುವನು ಕುಸುಮರಸವನ್ನು ಭ್ರಮರಗಳು ತಿಳಿಯುವವು ದೇವತೆಗಳು ಅಮೃತದ ಸವಿಯನ್ನು ತಿಳಿಯುತ್ತಾರೆ ಮಿಕ್ಕವರು ಎಂದೂ ತಿಳಿಯರು ಎಂದು ಹೇಳಿದ್ದಾನೆ ಆದುದರಿಂದ ಶಾಂತಿಯ ಸವಿಯನ್ನು ಅನುಭವಿಸುವ ಮಹನೀಯರು ಮಾತ್ರ ಪರಮಾತ್ಮರೆಂದೇ ಹೇಳಬಹುದು ಅಲ್ಪಾತ್ಮರಿಗೆ ಅದು ಎಂದೂ ನಿಲುಕಲಾರದು ಆದ್ದರಿಂದ ಈ ವಿಷಯವನ್ನು ಪ್ರತಿಯೊಬ್ಬರೂ ವಿಶಾಲದೃಷ್ಟಿಯಿಂದ ಅವಲೋಕಿಸಿ ಶಾಂತಿಸ್ವರೂಪವನ್ನು ಕಾಣಬೇಕೆಂದು ಆಶಿಸುತ್ತೇವೆ

ಉಜ್ಜಯನಿ ಒಡೆಯರ ಮಠದ
ಶ್ರೀಸಿದ್ಧಲಿಂಗ ಶಿವಾಚಾರ್ಯರು, ಹೊಳಗುಂದಿ

ಸರಸ್ವತಿಯ ಮಹತ್ವ

ಲಕ್ಷ್ಮಿಯು ಹಣದ ಅಧಿದೇವತೆ ಎಂದೂ, ಸೃಷ್ಟಿಪಾಲಕನಾದ ಶ್ರೀಮನ್ನಾರಾಯಣನ ಪತ್ನಿಯೆಂದೂ, ಸರಸ್ವತಿಯು ವಿದ್ಯೆಯ ಅಧಿದೇವತೆ ಎಂದೂ, ಸೃಷ್ಟಿಕರ್ತನಾದ ಬ್ರಹ್ಮನ ರಾಣಿಯೆಂದೂ ಹಿಂದೂ ಧರ್ಮದವರ ಹೇಳಿಕೆ ಪುರಾತನಕಾಲದಿಂದಲೂ ಉಂಟು

ವಿಷ್ಣುವಿನ ಮಗನು ಬ್ರಹ್ಮನೆಂದೂ ಲಕ್ಷ್ಮಿ ಮತ್ತು ಸರಸ್ವತಿಯರು, ಅತ್ತೆಸೊಸೆಯರೆಂದೂ, ಇವರೊಳಗೆ ಕಲಹವು ಯಾವಾಗಲೂ ನಡೆದೇ ಇರುವುದೆಂದೂ ನಾಟಕಾದಿಗಳಲ್ಲಿ ಅಭಿನಯಿಸಿ ತೋರಿಸುವರು

ಇವರಲ್ಲಿ ಯಾರು ಅಧಿಕರೆಂಬುದನ್ನು ವಿಮರ್ಶಿಸಬೇಕಾಗಿದೆ ಸಿರಿವಂತನಿಗೆ ಎಂಥ ಅಸಾಧ್ಯಕೆಲಸಗಳಾದರೂ ಸುಲಭರೀತಿಯಿಂದ ಕೈಗೂಡುತ್ತವೆಂದು ಅನೇಕ ಜನರು ಅಭಿಪ್ರಾಯಪಡುತ್ತಾರೆ ವಿಚಾರಮಾಡಿನೋಡಿದರೆ ಅದು ಯೋಗ್ಯವೇ ಅದೆ ಧನವು ಕುಲಹೀನನನ್ನು ಕುಲವಂತನನ್ನಾಗಿ ಮಾಡುತ್ತದೆ ಕುರೂಪಿಯನ್ನು ಸುರೂಪಿಯನ್ನಾಗಿ ಮಾಡುತ್ತದೆ ಮುದುಕನನ್ನು ತರುಣನನ್ನಾಗಿ ಮಾಡುತ್ತದೆ. ಅಂಗಹೀನನನ್ನು ಸರ್ವಲಕ್ಷಣಸಂಪನ್ನನನ್ನಾಗಿ ಮಾಡುತ್ತದೆ ಹೀಗಿದ್ದರೂ ಸರಸ್ವತಿಗಿಂತ ಲಕ್ಷ್ಮಿಯು ಅಧಿಕಳೆಂದು ಹೇಳಲಾಗುವುದಿಲ್ಲ ಏಕೆಂದರೆ ಸರಸ್ವತಿಯ ಸಹಾಯವಿಲ್ಲದೆ ಲಕ್ಷ್ಮಿಯು ವೃದ್ಧಿಯಾಗಲಾರಳು ಅಲ್ಲದೆ ಲಕ್ಷ್ಮಿಗೆ ಕಳ್ಳರ ಭಯ ಉಂಟು ರಾಜರ ಭಯವುಂಟು ಸರಸ್ವತಿಗೆ ಹಾಗೇನೂ ಇರುವದಿಲ್ಲ ವಿದ್ಯೆಯು ವ್ಯಷ್ಟಿರೂಪದಿಂದ ಅರವತ್ತು ನಾಲ್ಕೆನಿಸಿದ್ದರೂ, ಸಮಷ್ಟಿರೂಪದಿಂದ ಒಂದೇ ಆಗಿದೆ ಅದನ್ನೇ ಜ್ಞಾನವೆಂದು ಹೇಳುವರು

ಕ್ಯಾಮರಾ ಎಂಬ ಯಂತ್ರವು ಲೋಕದ ವಸ್ತುಗಳ ಆಕಾರವನ್ನು ತೆಗೆದು ಯಾವ ಪ್ರಕಾರ ಇರಿಸುವುದೋ ಅದೇ ಪ್ರಕಾರ ವಿದ್ಯೆಯು ಪರಮಾತ್ಮನ ಆಕಾರವನ್ನು ನಮ್ಮ ಮನಸ್ಸೆಂಬ ಪರದೆಯಮೇಲೆ ಸರಿಯಾಗಿ ರೂಪಿಸಿ ಸ್ಥಿರವಾಗಿರಿಸಿ ನಮ್ಮನ್ನು ಇಹಪರಲೋಕಗಳ ಸುಖಕ್ಕೆ ಭಾಗಿಗಳನ್ನಾಗಿ ಮಾಡುತ್ತದೆ ಆದ್ದರಿಂದಲೇ ವೇದಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ, ಸರಸ್ವತೀದೇವಿಯ ಪ್ರಾರ್ಥನಾಮಂತ್ರಗಳು ಉಲ್ಲೇಖಿಸಲ್ಪಟ್ಟಿವೆ ಮಾಯೆ ಎನಿಸಿಕೊಂಡ ಪ್ರಕೃತಿಯೇ ಜ್ಞಾನವನ್ನು ಕೊಡುವ ಸರಸ್ವತೀ ದೇವಿಯ ರೂಪದಿಂದ ಹುಟ್ಟಿದುದೆಂದು ಜ್ಞಾನಿಗಳು ಹೇಳುತ್ತಾರೆ ಇದು ಬರೀ ನಮ್ಮ ಹಿಂದೂದೇಶದಲ್ಲಿಯೇ ಅಲ್ಲ ಪಾಶ್ಚಾತ್ಯರಾಷ್ಟ್ರಗಳಲ್ಲಿ ಸಹ ಜ್ಞಾನಕ್ಕೆ ಅಧಿದೇವತೆಯನ್ನು ಕಲ್ಪಿಸಿಕೊಂಡು ಪೂಜಿಸುತ್ತಾರೆ ಗ್ರೀಕರ ಪುರಾಣ ಸಂಪ್ರದಾಯದಂತೆ ಆಕೆಗೆ ಮಿನೆರ್ವಾ ಅಥವಾ ಎಥಿನ್ ಎಂಬ ಹೆಸರುಂಟು ಆಕೆಯು ಜ್ಯೂಪಿಟರ್ ಬುಧನ ಮಗಳೆಂದೂ ಅವನ ತಲೆಯಿಂದ ಹುಟ್ಟಿದಳೆಂದೂ, ಮತ್ತು ಯಾವಜ್ಜೀವವೂ ಕನ್ಯೆಯಾಗಿದ್ದುಕೊಂಡು ಅಥೆನ್ಸ್ ನಗರದಲ್ಲಿ ಜ್ಞಾನದ ಅಧಿದೇವತೆಯಾಗಿ ಸಮಸ್ತ ಜನರಿಂದ ಪೂಜಿಸಲ್ಪಡುತ್ತಿದ್ದಳೆಂದೂ ಕಂಡುಬರುತ್ತದೆ ಮೊದಲು ದಡ್ಡ ಕುರುಬನಾಗಿದ್ದ ಮಹಾಕವಿ ಕಾಳಿದಾಸನು ಲೋಕವಿಖ್ಯಾತನಾದುದು ಸರಸ್ವತಿಯ ಕೃಪಾಕಟಾಕ್ಷದಿಂದಲ್ಲವೇ ? ಶಂಕರಾಚಾರ್ಯರು ತಮ್ಮ ಜ್ಞಾನಪ್ರಭಾವವನ್ನು ತೋರ್ಪಡಿಸಿದುದು ಸರಸ್ವತಿಯ ಮಹಿಮೆಯಿಂದಲ್ಲವೇ ? ಹಣವುಳ್ಳ ರಾಜನು ತನ್ನ ದೇಶಕ್ಕೆ ಮಾತ್ರ ಪೂಜ್ಯನು. ಆದರೆ ವಿದ್ಯಾವಂತನಾದ ಪಂಡಿತನು ಜಗತ್ಪೂಜ್ಯನು ಆದ್ದರಿಂದ ಲಕ್ಷ್ಮಿಗಿಂತಲೂ ಸರಸ್ವತಿಯು ಶ್ರೇಷ್ಠಳೆಂಬುದು ಸ್ಪಷ್ಟವಾಗುವದು ಆಕೆಯ ಕೃಪಾಕಟಾಕ್ಷವು ನಮಗೆ ಆಗಬೇಕಾದರೆ ಪ್ರತಿನಿತ್ಯ ಆಕೆಯ ಭಜನೆಯನ್ನು ಮಾಡಬೇಕು ಇದು ಅಲ್ಲದೆ ವಿದ್ಯಾಪೇಕ್ಷಿಗಳೆಲ್ಲರೂ ಮೂರು ದಿವಸಗಳವರೆಗೆ ತಮ್ಮ ಕೆಲಸ ಬೊಗಸೆಗಳನ್ನು ಬಿಟ್ಟು ಅನನ್ಯಭಕ್ತಿಯಿಂದ ಸರಸ್ವತಿಯನ್ನು ಭಜಿಸಲೆಂದು ಆಶ್ವಯುಜ ಶುದ್ಧ ೭ ಮೂಲಾ ನಕ್ಷತ್ರದ ದಿವಸ ಪುಸ್ತಕಗಳನ್ನು ಪೂಜೆಗೆ ಇಟ್ಟು ವಿಜಯ ದಶಮಿಯ ದಿನಸ ವಿಸರ್ಜನೆಮಾಡುವರು ಆದುದರಿಂದ ಸರಸ್ವತಿಯ ಪೂಜೆಯನ್ನು ಸರ್ವರೂ ಮಾಡಿ ಧನ್ಯರಾಗಬೇಕು

ಬಿ. ಯಂ ಸಿದ್ಧಲಿಂಗಯ್ಯ,
ಹೆಡ್ ಮಾಸ್ಟರ್, ಸೂಲದಹಳ್ಳಿ.

ಆಚಾರದ ಆವಶ್ಯಕತೆ

ಲೇ—ಅ। ವಿ ಬಿವರ ಬಸವಲಿಂಗಶಾಸ್ತ್ರಿಗಳು

ಮನುಷ್ಯನ ಉನ್ನತಸ್ಥಿತಿಗೆ ಸದಾಚಾರವೇ ಮುಖ್ಯ ಕಾರಣವು ಆಚಾರವು ಸದ್ಗುಣಗಳೆಂಬ ರತ್ನಗಳ ಪೆಟ್ಟಿಗೆಯಂತಿರುವುದು ಆ ಗುಣಗಳು ಆಚಾರವ ತನಲ್ಲ ಕಂಡುಬರುವಂತೆ ಆಚಾರಹೀನನಲ್ಲಿ ಕಂಡುಬರುವದಿಲ್ಲ ಈ ವಿಷಯವು ನಮಗೆ ದಿನ ಭವದಲ್ಲಿ ಇದ್ದೇ ಇರುವದು ಮನುಷ್ಯನು ಧನಧಾನ್ಯಾದಿವಸ್ತುಗಳಿಂದಲೇ ಸ್ತುತ್ಯನೆನಿಸುವನೆಂದು ಹೇಳಲಿಕ್ಕಾಗುವದಿಲ್ಲ ದೇಶ ಕೋಶಗಳಿಂದ ಕೆಲವರು ಬಲಾಢ್ಯರೆನಿಸಿದ್ದರೂ ಅಪ ಕೀರ್ತಿಗೆ ಗುರಿಯಾಗಿರುವರು ಕೆಲವರು ಬಡವರಾಗಿ ದ್ದರೂ ಸ್ತುತ್ಯರೆನಿಸಿರುವರು ಇದರ ಮೇಲಿಂದ ಮನು ಷ್ಯನ ಉನ್ನತಸ್ಥಿತಿ ಮತ್ತು ಅವನತಸ್ಥಿತಿಗಳಿಗೆ ಸಂಪತ್ತು ಮತ್ತು ದಾರಿದ್ರ್ಯಗಳು ಕಾರಣಗಳಾಗದೆ ಸದಾಚಾರ ದುರಾಚಾರಗಳೇ ಕಾರಣಗಳೆಂದು ಸ್ಪಷ್ಟವಾಗಿ ಹೇಳ ಬಹುದು ನಡೆನುಡಿಗಳು ಸರಿಯಾಗಿರಬೇಕೆಂದು ನೀತಿ ಯಿರುವುದಷ್ಟೆ! ಪ್ರಾಣಿಕೋಟಿಯಲ್ಲಿ ಸೌಮ್ಯವರ್ಗ ಕ್ರೂರವರ್ಗವೆಂದು ಎರಡು ವರ್ಗಗಳು ಕಂಡುಬರುತ್ತಿರು ವವು ಈ ವರ್ಗದ್ವಯದಲ್ಲಿ ಸೌಮ್ಯವರ್ಗವನ್ನು ನೋಡಿದರೆ ಮನಸ್ಸು ಶಾಂತವಾದದ್ದರಿಂದ ಪ್ರೀತಿಸಲು ಹವಣಿಸುತ್ತಿರುವದು ಕ್ರೂರವರ್ಗವನ್ನು ನೋಡಿದರೆ ಭಯದಿಂದ ಮರೆಯಾಗಲು ಹವಣಿಸುತ್ತಿರುವದು ಇದು ಸರ್ವರ ಅನುಭವದಲ್ಲಿರುವದು ಋಷಿಗಳ ನಿವಾಸ ಸ್ಥಾನದಲ್ಲಿ ಮೃಗಗಳು ತಮ್ಮ ಜನ್ಮಸಿದ್ಧವಾದ ವೈರಭಾವವನ್ನು ಬಿಟ್ಟು ಒಂದಾಗಿ ಸಂಚ ರಿಸುತ್ತಿದ್ದವೆಂದು ಪುರಾಣಗಳಲ್ಲಿ ಓದುತ್ತಿರು ವದು ದಿಲೀಪ ... ನಂದಿನಿ ಧೇನುವಿನ ಸೇವೆ ಕಾಲದಲ್ಲಿ ಅವನ ದಯಾರ್ದ್ರಭಾವದಿಂದ ಸಹಜ ಕ್ರೂರ ಸ್ವಭಾವವುಳ್ಳ ಮೃಗಗಳು ... ದಿಂದ ಅವರನ್ನು ಹೊಂದಿ ನಲಿದವೆಂದು ... ಶಿಷ್ಯರ ರಕ್ಷಿಸಲ್ಪಡುತ್ತಿರು ವರು ಶಿಷ್ಟರ ರಕ್ಷಿಸಲ್ಪಡುವರು ನಾವಾದರೂ ವಸ್ತುಗಳು ... ಕನ್ಯ ಯನ್ನು ಕೊಡಬೇಕಾದರೂ ತರಬೇಕಾದರೂ ಮಿತ್ರತ್ವ ವನ್ನು ಬೆಳೆಸಬೇಕಾದರೂ, ನಡೆನುಡಿಗಳನ್ನೇ ನೋಡು ತ್ತಿರುವೆವು ವರ್ತನವು ಚನ್ನಾಗಿಲ್ಲವೆಂದು ಕಂಡುಬಂದರೆ ಯಾವ ವಿಧವಾದ ಸಂಬಂಧವನ್ನೂ ಮಾಡುವದಿಲ್ಲ ಜಾರನೂ ಚೋರನೂ ಪಿಶುನನೂ ಹಿಂಸಕನೂ ಕೃತ ಘ್ನನೂ, ಅನುಸಾರಿಯೂ ... ದುರಾ ಚಾರಿಯೂ ಆದವನು ಸಜಾತೀಯನಾದರೂ, ಕೊನೆಗೆ ಸಹೋದರನಾಗಿದ್ದರೂ ವನ್ನು ... ಸಂಬಿಗೆ ಹುಟ್ಟುವದಿಲ್ಲ ಇತ್ಯಾದ್ಯನಂತಕಾರಣಗಳಿಂದ ಮನು ಷ್ಯನು ಒಳ್ಳೇ ನಡತೆಯಿಂದ ಉನ್ನತಪದವಿಯನ್ನು ಹೊಂದುವನೆಂದೂ ದುರ್ನಡತೆಯಿಂದ ಅಧೋಗತಿ ಯನ್ನು ಪಡೆಯುವನೆಂದೂ ಹೇಳುವ ವಿಷಯದಲ್ಲಿ ಯಾವ ಸಂಶಯವೂ ಇರುವದಿಲ್ಲ ಒಳ್ಳೆ ನಡತೆಯೆಂದರೆ ಸದಾಚಾರವೆಂದರ್ಥ ಸದಾಚಾರವೆಂದರೆ ಸತ್ಪುರುಷರು ಆಚರಿಸತಕ್ಕ ರೀತಿ ಸದಾಚಾರವು ವೇದಶಾಸ್ತ್ರಪುರಾ ಣಾದಿಗಳಲ್ಲಿ ಹೇಳಲ್ಪಟ್ಟಿರುವುದು ವೇದಾಗಮೇತಿಹಾಸ ಗಳು ಮನುಷ್ಯರಿಗಲ್ಲದೆ, ಪಶುಗಳಿಗಲ್ಲ ನಾವು ಧರ್ಮ ವನ್ನು ತಿಳಿಯಬೇಕಾದರೂ, ದುರ್ಬುದ್ಧಿಯನ್ನು ಕಳೆಯ ಬೇಕಾದರೂ, ಜ್ಞಾನವನ್ನು ಸಂಪಾದಿಸಿ ಮುಕ್ತಿಯನ್ನು ಪಡೆಯಬೇಕಾದರೂ ವೇದಾಗಮಾದಿಗಳ ಮತ್ತು ಅವು ಗಳಿಗೆ ಒಪ್ಪಿಗೆಯಾಗಿ ನಡೆದ ಸತ್ಪುರುಷರ ಚರಿತ್ರಗಳ ಅವಲಂಬನವು ಅತ್ಯಾವಶ್ಯಕವಿರುತ್ತದೆ ರಾಜನ ಅಪ್ಪ ಣೆಯು ನ್ಯಾಯಮಾರ್ಗಗಾಮಿಯಿಂದ ಹೇಗೆ ಆದರಣೀ ಯವಾಗಿರುವುದೋ ಅದರಂತೆಯೇ ವೇದಾಗಮಗಳ ವಚನಗಳೂ ಸಚ್ಚರಿತ್ರಗಳೂ ನಮಗೆ ಆದರಣೀಯವಾಗಿ ರುವವು ವೇದಾಗಮಗಳು ಪರಮಾತ್ಮನಿಂದ ರಚಿಸಲ್ಪ ಟ್ಟಿರುವ ಕಾರಣ ಅವು ಮುಖ್ಯಪ್ರಮಾಣಗಳಾಗಿರುತ್ತವೆ ಸತ್ಪುರುಷರ ಆಚಾರವು ವೇದಾಗಮಗಳಿಗೆ ಸಮ್ಮತವಾಗಿ ರುವದರಿಂದ " ಮಹಾಜನೋ ಯೇನ ಗತಸ್ಸ ಪಂಥಾಃ " ಎಂಬ ವಚನವಾದರೂ ನಮಗೆ ಮಾರ್ಗದರ್ಶಕವಾಗಿರು ವದು ಸತ್ಪುರುಷರು ಆಚರಿಸಿ ತೋರಿಸದಿದ್ದರೆ ಮಾರ್ಗ ವನ್ನು ಗೊತ್ತುಹಚ್ಚಲು ನಮಗೆ ಎಷ್ಟು ಜನ್ಮಗಳು ಬೇಕಾಗುತ್ತಿದ್ದವೋ ಹೇಳಲಸಾಧ್ಯವು

ಜಗತ್ತಿನ ಹಿತಕ್ಕಾಗಿಯೇ ಸತ್ಪುರುಷರು ಅವತರಿಸುತ್ತಿ ರುವದರಿಂದ ಅವರು ಆಚರಿಸಿ ತೋರಿಸಿದ ಮಾರ್ಗವನ್ನು ನಾವು ಅವಲಂಬಿಸಿಯೇ ಮುಕ್ತರಾಗಬೇಕಾಗಿದೆ ವೀರ ಶೈವಮತ ಸ್ಥಾಪಕರಾದ ಶ್ರೀಜಗದ್ಗುರು ರೇಣುಕ, ದಾರುಕ ಏಕೋರಾಮ, ಪಂಡಿತಾರಾಧ್ಯ, ವಿಶ್ವಾರಾಧ್ಯರೆಂಬ ಪಂಚಾಚಾರ್ಯರು ವೇದಾಗಮಗಳ ಅಭಿಪ್ರಾಯಾನು ಸಾರವಾಗಿ ಚತುರಾಶ್ರಮಿಗಳ ಬಂಧಮೋಚನಕ್ಕೂ ಶಿವೈ ಕ್ಯಕ್ಕೂ ಸದಾಚಾರವೇ ಸಿದ್ಧ ಮಾರ್ಗವೆಂದು ನಿಶ್ಚಯಿಸಿ ತೋರಿಸಿರುವರು

ಆ ಮಹಾಚಾರ್ಯರಿಂದುಪದಿಷ್ಟರಾಗಿ ಅದರಂತೆ ನಡೆದ ಅಗಸ್ತ್ಯಾದಿಮಹರ್ಷಿಗಳು ಅಘಟನಾಘಟನಸಾಮರ್ಥ್ಯ ವನ್ನು ಪಡೆದರೆಂದು ಅವರ ಚರಿತ್ರಗಳ ಮೇಲಿಂದ ತಿಳಿದುಬರುವದು ಶ್ರೀಜಗದ್ಗುರು ರೇಣುಕಾಚಾರ್ಯರ ಶಿಷ್ಯರಾದ ಅಗಸ್ತ್ಯಮಹರ್ಷಿಗಳು ಸಪ್ತಸಮುದ್ರಗಳನ್ನು ಒಂದು ಜಲಬಿಂದುವಿನಂತೆ ತಮ್ಮ ಹಸ್ತದಲ್ಲಿಟ್ಟುಕೊಂಡು ಪಾನಮಾಡಿದರು ಮತ್ತು ಶತಯಜ್ಞಗಳನ್ನು ಮಾಡಿ ಇಂದ್ರಪದಕ್ಕೆ ಹೋದ ನಹುಷಚಕ್ರವರ್ತಿಗೆ ಸರ್ಪತ್ವ ವನ್ನು ಕೊಟ್ಟರು ಸೂರ್ಯಚಂದ್ರರ ಮಾರ್ಗವನ್ನೇ ತಡೆ ದಿದ್ದ ವಿಂಧ್ಯಪರ್ವತವನ್ನು ಬಾಗಿಸಿದರು ಇತ್ಯಾದ್ಯದ್ಭುತ ಶಕ್ತಿಯು ಸದ್ಗುರೂಪದಿಷ್ಟವಾದ ಸತ್ಕ್ರಿಯಾಪ್ರಭಾವವೇ ಎಂದು ಸಾರಿಸಾರಿ ಹೇಳಬಹುದಾಗಿದೆ ವಿಶ್ವಾಮಿತ್ರಾದಿ ಮಹರ್ಷಿಗಳು ರಾಜತೇಜಸ್ಸಿಗಿಂತಲೂ ಬ್ರಹ್ಮಕ್ರಿಯಾ ತೇಜಸ್ಸು ಅಪಾರಶಕ್ತಿಯುಳ್ಳದ್ದೆಂದು ನಿಶ್ಚಯಿಸಿ ರಾಜ್ಯ ಭಾರವನ್ನು ಬಿಟ್ಟು ಸದಾಚಾರಸಂಪನ್ನರಾಗಿ ತಪಸ್ವಿ ಗಳಾದರು ಮಹಾಪಾಪಿಷ್ಠರಾದ ಪಿಂಗಳ ಶ್ವೇತ, ಸುಕುಮಾರ ಮೊದಲಾದವರು ಗುರೂಪದಿಷ್ಟಸತ್ಕ್ರಿಯಾ ಸ್ನಾನಪೂಜ ಪಶ ಸಾದಿಗಳಿಂದಲೇ ಪಾಪಮುಕ್ತರಾಗಿ ಶಿವಾನುಗ್ರಹಕ್ಕೆ ಪಾತ್ರರಾದರು ಇವಕ್ಕೆಲ್ಲ ಗುರೂಪದಿಷ್ಟ ವಾದ ಸದಾಚಾರವೇ ಮೂಲಕಾರಣ!

ಕ್ರಿಯಾಸಿದ್ಧಿಸ್ಸತ್ತ್ವೇ ಭವತಿ ಮಹತಾಂ ನೋಪ ಕರಣೇ ಇತರ ಉಪಕರಣಗಳ ಬಲವಿಲ್ಲದಿದ್ದರೂ ಕ್ರಿಯಾಸಿದ್ಧಿಯೊಂದಿದ್ದರೆ ಸಾಕು ಎಂದು ಮಹಾತ್ಮರು ನುಡಿದಿರುವರು ಶಿವಾಗಮಗಳಲ್ಲಿ ಆಚಾರವು ಪರಮ ದಮವೆಂದೂ, ಪರಮವಿದ್ಯೆಯೆಂದೂ ಪರಮಧನ ವೆಂದೂ, ಪರಮಗತಿಯೆಂದೂ ಉಕ್ತವಾಗಿರುವದು ಮನುಷ್ಯನು ಸತ್ಕ್ರಿಯೆಯಿಂದಲೇ ಋಷಿತ್ವವನ್ನೂ ದೇವತ್ವವನ್ನೂ ಪಡೆಯುತ್ತಾನೆ ಸಮಸ್ತ ಋಷಿಗಳೂ ದೀರ್ಘಾಲೋಚನೆಯನ್ನು ಮಾಡಿಯೇ ಮೋಕ್ಷವನ್ನು ಕೊಡುವ ಆಚಾರವನ್ನು ಪರಿಗ್ರಹಿಸಿದರು ಜ್ಞಾನವು ಸಿದ್ಧಿಸಬೇಕಾದರೂ ಸಿದ್ಧಿಯಾದ ಮೇಲೂ ಆಚಾರವು ಇರಲಿಕ್ಕೇ ಬೇಕು

ಶ್ರೀಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾ ಮಣಿಯ ೧೬ನೆಯ ಪರಿಚ್ಛೇದದಲ್ಲಿ ಆಚಾರದ ಪ್ರಭಾವ ವನ್ನು ಈ ಕೆಳಗೆ ಉದಾಹರಿಸಿದಂತೆ ಅಪ್ಪಣೆಕೊಡಿಸಿರು ತ್ತಾರೆ—

ಜ್ಞಾನಾಮೃತೇನ ತೃಪ್ತೋsಪಿ ಯೋಗೀ ಧರ್ಮಂ ನ ಸಂತ್ಯ ಜೇತ್ ॥ ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥೬೫॥ ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ। ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ।೬೬।

ಯೋಗಿಯು ತಾನು ಜ್ಞಾನಾಮೃತದಿಂದ ತೃಪ್ತನಾಗಿ ದ್ದರೂ ಆಚಾರವನ್ನು ಬಿಡಬಾರದು ಏಕೆಂದರೆ ಲೌಕಿಕರು ದೊಡ್ಡವರ ಆಚಾರವನ್ನು ನೋಡಿ ಅವರಂತೆ ವರ್ತಿಸು ವರು ಶಿವನು ಸದಾಚಾರಪ್ರಿಯನಾಗಿರುವನು ಸದಾ ಚಾರದಿಂದಲೇ ಪೂಜಿಸಲ್ಪಡುವನು ಸದಾಚಾರವಿಲ್ಲದೆ ಶಿವನ ಪ್ರಸಾದವು ಸಿದ್ಧಿಸುವುದಿಲ್ಲ ಎಂದು ಅಪ್ಪಣೆ ಕೊಡಿಸಿರುವುದರಿಂದ ಶಿವನ ಕೃಪೆಗೆ ಆಚಾರವೇ ಮೂಲವೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಮಾನವ ರೆಲ್ಲರೂ ಸದಾಚಾರದಿಂದ ನಡೆದು ಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾಗಿ ಮೋಕ್ಷ ಸುಖವನ್ನನುಭವಿಸ ಬೇಕು

ವರ್ತಮಾನಸಂಗ್ರಹ

ತಿರುವಾಂಕೂರಿನ ಸ್ವಾತಂತ್ರ್ಯ

ತಿರುವಾಂಕೂರಿನಲ್ಲಿ ತಮಿಳು ಭಾಷೆ ಬಳಕೆಯಲ್ಲಿರುವ ಭಾಗಗಳಲ್ಲಿರುವ ಜಮೀನುದಾರರೂ ಸಾರ್ವಜನಿಕ ಪ್ರಮುಖರೂ ದಿವಾನರನ್ನು ಕಂಡು, ತಿರುವಾಂಕೂರಿನ ಭವಿಷ್ಯ ಕುರಿತು ಮಾತನಾಡಿದರು ಓಟಿನ ಸಮಿತಿಯೊಂ ದಿಗೆ ತಾವು ಸಹಕರಿಸುವುದಾಗಿಯೂ, ಒಟ್ಟು ಪ್ರಜಾ ಸಂಖ್ಯೆಯಲ್ಲಿ ಮೂರನೇ ಒಂದು ಭಾಗವುಳ್ಳ ತಮಿಳರಿಗೆ ಸರಿಯಾದ ಪ್ರಾತಿನಿಧ್ಯವಿರಬೇಕೆಂದೂ ಅವರು ಒತ್ತಾಯ ಪಡಿಸಿದರು ತಿರುವಾಂಕೂರು ಸ್ವತಂತ್ರವಾಗುವ ಬಗ್ಗೆ ಶ್ರೀಮನ್ಮಹಾರಾಜರಿಗೆ ತಮ್ಮೆಲ್ಲರ ಬೆಂಬಲವಿದೆಯೆಂದು ಅವರು ತಿಳಿಸಿದರು

ಬ್ರಿಟಿಷರನ್ನು ನಂಬಿ ಕುಳಿತಿರುವವರಾರು ? ನರೇಂದ್ರರಲ್ಲ-ಕಾಂಗ್ರೆಸ್ಸಿನವರು

ತಿರುವಾಂಕೂರು ದಿವಾನರಾದ ಸರ್ ಸಿ ಪಿ ರಾಮ ಸ್ವಾಮಿ ಅಯ್ಯರವರು ಗಾಂಧಿಯವರಿಗೆ ತಂತಿಯೊಂದನ್ನು ಕಳುಹಿಸುತ್ತ, ಅವರ ತಪ್ಪಭಿಪ್ರಾಯದ ಹೇಳಿಕೆಯನ್ನು ಪ್ರತಿಭಟಿಸಿದ್ದಾರೆ

ಶಾಂತಿಭಂಗವಾಗುವ ಸಂಭವ ಇದ್ದಾಗ ಹೊರತು ಮತ್ತಿನ್ನಾವಾಗಲೂ ತಿರುವಾಂಕೂರಿನಲ್ಲಿ ಸಭೆಗಳ ಮೇಲೆ ನಿರ್ಬಂಧ ಹಾಕಿಲ್ಲವೆಂದೂ ಇದುವರೆಗೆ ಎಲ್ಲೂ ಲಾಠಿ ಪ್ರಹಾರ ನಡೆಸಿಲ್ಲವೆಂದೂ ದಿವಾನರು ತಿಳಿಸಿದ್ದಾರೆ

ಬ್ರಿಟಿಷರನ್ನು ನಂಬಿ ಕೂಡಬಾರದೆಂದು ಗಾಂಧಿಯವ ರಿತ್ತ ಬುದ್ಧಿವಾದದ ವಿಚಾರವನ್ನೆತ್ತಿ ಅವರು—ಬ್ರಿಟಿಷರ ಮೇಲೆ ಈಗ ನಂಬಿಕೆ ಇಟ್ಟಿರುವವರು ಕಾಂಗ್ರೆಸ್ಸಿನವರು ಸಂಸ್ಥಾನಗಳಲ್ಲ ಬ್ರಿಟಿಷರು ಸಂಸ್ಥಾನಗಳ ಸ್ನೇಹಗಳಿಸು ವುದಕ್ಕಿಂತ ಡೋಮಿನಿಯನ್ ಸ್ಟೇಟ್ಸ್‌ಗೆ ಕಾಂಗ್ರೆಸ್ಸನ್ನು ಒಪ್ಪಿಸಲು ಕಾತುರರಾಗಿದ್ದರು ಸ್ವಯಂಬಲವನ್ನೇ ನಂಬ ಬೇಕೆಂಬ ಪರಿಜ್ಞಾನ ತಿರುವಾಂಕೂರಿಗಿದೆ ಸಂಸ್ಥಾನದ ಪ್ರಜೆಗಳ ಬಹುಮತಾಭಿಪ್ರಾಯ ಸ್ವತಂತ್ರವಾಗುವುದರ ಕಡೆಗೇ ಇದೆಯೆಂಬುದು ನಿಮಗೆ ಗೋಚರವಾಗದೆ ಇರದು ಎಂದು ತಿಳಿಸಿದ್ದಾರೆ

ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಗೆ ಹೋಗುವುದು. ಆದರೆ ಫೆಡರಲ್ ವ್ಯವಸ್ಥೆಗೆ ಸೇರುವುದು, ಬಿಡುವುದು ಮುಂದಿನ ಪ್ರಶ್ನೆ

ಪತ್ರಿಕಾ ಸಮ್ಮೇಳನದಲ್ಲಿ ದಿವಾನರ ಹೇಳಿಕೆ

ಮೈಸೂರು ಸಂಸ್ಥಾನವು, ೧೯೪೬ರ ಮೇ ೧೬ನೇ ತಾರೀಖಿನ ಬ್ರಿಟಿಷ್ ಮಂತ್ರಿಮಂಡಲದ ಯೋಜನೆಯ ನ್ನು ಒಪ್ಪಿರು ಮತ್ತು ಶ್ರೀಮನ್ಮಹಾರಾಜರವರು ಬ್ರಿಟಿಷ್ ಭಾರತಕ್ಕೆ ಅನ್ವಯಿಸುವಂಥ, ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಗೆ ನಮ್ಮ ಸಂಸ್ಥಾನದಿಂದ ನಿಯೋಗವೊಂದನ್ನು ಕಳುಹಿಸಬೇಕೆಂದು ತೀರ್ಮಾನಿಸಿದ್ದರು ಆ ತೀರ್ಮಾ ನದ ಪ್ರಕಾರ ನಾನು, ಬ್ರಿಟಿಷ್ ಯೋಜನೆಯಲ್ಲಿ ನಮೂದು ಮಾಡಲ್ಪಟ್ಟಿದ್ದ ಕ್ರಮದ ಪ್ರಕಾರ, ನಾನು ಸಂಸ್ಥಾನದ ನೆಗೋಷಿಯೇಟಿಂಗ್ ಕಮಿಟಿಯ ಸದಸ್ಯ ನಾಗಿದ್ದು, ಈ ಸಂಬಂಧದಲ್ಲಿ ಬ್ರಿಟಿಷ್ ಭಾರತದ ನೆಗೋಷಿ ಯೇಟಿಂಗ್ ಕಮಿಟಿಗೂ ಸಂಸ್ಥಾನಗಳ ನೆಗೋಷಿಯೇ ಟಿಂಗಿಗೂ ನಡೆದ ವ್ಯವಹಾರದಲ್ಲಿ ಭಾಗ ವಹಿಸಿದ್ದ ಈ ವರ್ಷ ಫೆಬ್ರವರಿ ೨೦ ನೇ ತಾರೀಖಿನ ದಿವಸ ಸಾರ್ವ ಭೌಮ ಸರ್ಕಾರದವರು ಘೋಷಣೆ ಮಾಡಿದುದರಿಂದಲೂ ಆ ಮೇಲೆ, ದೇಶದಲ್ಲಿ ತಲೆದೋರಿದ ಅನಿಶ್ಚಿತ ಪ್ರಸಂಗ ಗಳಿಂದಲೂ ಮೈಸೂರು ಕಾನ್ಸ್ಟಿಟ್ಯೂಯೆಂಟ್ ಅಸೆಂಬ್ಲಿಗೆ ಸೇರುವ ಸಂಬಂಧದಲ್ಲಿ ವ್ಯವಹಾರವನ್ನು ಮುಂದುವರಿಸ ಲಿಕ್ಕಾಗಲಿಲ್ಲ

ಜೂನ್ ೩ನೇ ತಾರೀಖಿನ ವೈಸರಾಯರ ಹೇಳಿಕೆ ಯಿಂದ ಬ್ರಿಟಿಷ್ ಭಾರತದ ರಾಜ್ಯಾಂಗದ ಪರಿಸ್ಥಿತಿಯು ಈಗ ನಿಶ್ಚಿತವಾದಂತಾಯಿತು. ಈಗ ಆಗಬೇಕೆಂದಿರುವ

ರಡು ಕಾನ್ಸಿಟ್ಯೂಯೆಂಟ್ ಅಸೆಂಬ್ಲಿಗಳಲ್ಲಿ ಸಂಸ್ಥಾನಗಳು ಸೇರಬೇಕೆಂದು ಆಹ್ವಾನ ಬಂದಿದೆ

ಈ ವಿಚಾರದಲ್ಲಿ ಮೈಸೂರು ಈಗ ಒಂದು ತೀರ್ಮಾನಕ್ಕೆ ಬಂದಿದೆ ಸಂಸ್ಥಾನಗಳು ಕಾನ್ಸಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಸೇರಿ ಭಾಗವಹಿಸುವ ವಿಚಾರದಲ್ಲಿ ಬ್ರಿಟಿಷ್ ಭಾರತದ ನಾಯಕರು ಹೇಳಿರುವುದು, ಕೇಂದ್ರದ ಯೂನಿಯನ್ನಿನ ವಿಷಯಗಳಲ್ಲಿ ಸಂಸ್ಥಾನಗಳು ಭಾಗವಹಿಸುವ ಬಗ್ಗೆ ಕ್ಯಾಬಿನೆಟ್ ನಿಯೋಗವು ಹೇಳಿರುವುದು, ಇವೆಲ್ಲ ವಿಚಾರಗಳನ್ನೂ ಪರಿಶೀಲಿಸಿ, ಮೈಸೂರು ಸಂಸ್ಥಾನವು ಸಂಬಂಧಪಟ್ಟ ಪ್ರದೇಶಕ್ಕೆ ಅನ್ವಯಿಸುವಂಥ ಬ್ರಿಟಿಷ್ ಪ್ರಾಂತ್ಯಗಳಿಗಾಗಿ ಇರುವಂಥ ಕಾನ್ಸಿಟ್ಯುಯೆಂಟ್ ಅಸೆಂಬ್ಲಿಗೆ ಒಂದು ನಿಯೋಗವನ್ನು ಕಳುಹಿಸಬೇಕೆಂದು ಶ್ರೀಮನ್ಮಹಾರಾಜರವರು ತೀರ್ಮಾನಿಸಿರುತ್ತಾರೆ ನಿಯೋಗದಲ್ಲಿ ದಿವಾನರು ಮತ್ತು ಆರು ಮಂದಿ ಸದಸ್ಯರು ಇರುವರು ನಿಯೋಗದ ರಚನಾವಿಚಾರವನ್ನು ಬೇಗಲೇ ಆಲೋಚನೆ ಮಾಡಲಾಗುವುದು ಕಾನ್ಸಿಟ್ಯುಯೆಂಟ್ ಅಸೆಂಬ್ಲಿಯಲ್ಲಾಗುವ ಚರ್ಚೆಗಳ ಪರಿಣಾಮವಾಗಿ ಉದ್ಭವವಾಗಬಹುದಾದ ಒಂದು ಫೆಡರೇಷನ್ ಬಗ್ಗೆ ಮಾಡಲಾಗುವ ಸಲಹೆಗಳು, ಮೈಸೂರು ಸಂಸ್ಥಾನದ ಸ್ಥಿತಿಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಒಗ್ಗೆ ಫೆಡರೇಷನ್ನಿನೊಡನೆ ಯಾವ ಯಾವ ಏರ್ಪಾಟುಗಳನ್ನು ಮಾಡಿಕೊಳ್ಳತಕ್ಕದ್ದು, ಯಾವ ಯಾವ ಒಪ್ಪಂದಗಳು, ಸಂಪ್ರದಾಯಗಳು ಆಗಬೇಕು, ಈ ವಿಚಾರಗಳಲ್ಲಿ ಮೈಸೂರು ಅಂಥ ಫೆಡರೇಷನ್ನನ್ನು ಸೇರಬೇಕೇ ಅಥವಾ ನೆರೆಹೊರೆಯ ಪ್ರದೇಶಗಳೊಡನೆ, ಬೇರೆ ಯಾವುದಾದರೊಂದು ಏರ್ಪಾಟಿಗೆ ಬರಬೇಕೇ ಎಂಬ ತೀರ್ಮಾನವನ್ನು ಆಲೋಚಿಸುವುದಾಗುವದು '

ಎಂಬುದಾಗಿ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರವರು ಪತ್ರಿಕಾ ಸಮ್ಮೇಳನದಲ್ಲಿ ಹೇಳಿಕೆ ಕೊಟ್ಟರು

ದಿವಾನರ ಹೇಳಿಕೆಯಾದ ಮೇಲೆ, ಪತ್ರಿಕಾ ಪ್ರತಿನಿಧಿಗಳು ಹಾಕಿದ ನಾಲ್ಕಾರು ಪ್ರಶ್ನೆಗಳಿಗೆ ಜವಾಬು ಕೊಡುತ್ತಾ, ದಿವಾನರು, ಮೈಸೂರು ನಿಯೋಗವು ಜುಲೈನಲ್ಲಿ ನಡೆಯುವ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ಅಧಿವೇಶನದ ಹೊತ್ತಿಗೆ ಹೋಗುವಂತೆ ಏರ್ಪಾಟು ಮಾಡುವುದಾಗಿಯೂ ಮೂರು ಮಂದಿ ಚುನಾಯಿತ ಪ್ರತಿನಿಧಿಗಳು, ಮೂರು ಮಂದಿ ನಾಮಕರಣ ಪ್ರತಿನಿಧಿಗಳು ಇರುವುದಾಗಿ ತಮ್ಮ ನಂಬಿಕೆಯೆಂದೂ ಚುನಾಯಿತ ಪ್ರತಿನಿಧಿಗಳನ್ನು ಯಾವ ರೀತಿಯಲ್ಲಿ ಆರಿಸಬೇಕು, ಇತ್ಯಾದಿ ತಪಸೀಲುಗಳನ್ನು ಆಪ್ತ ನಾನಾ ರಾಜಕೀಯ ಪಕ್ಷಗಳ ಮುಖಂಡರುಗಳೊಡನೆ ಚರ್ಚಿಸುವುದಾಗಿಯೂ ಹೇಳಿದರು

ಧರ್ಮವೀರರ ಸತ್ಯಾಗ್ರಹ

ಸನಾತನಧರ್ಮಾವಲಂಬಿಗಳಾದ ಧರ್ಮವೀರರು ಭರತಖಂಡದ ರಾಜಧಾನಿಯಾಗಿರುವ ದಿಲ್ಲಿಯಲ್ಲಿ ಏಪ್ರಿಲ್ ತಿಂಗಳು ೨೮ ನೇ ತಾರೀಖಿನಿಂದ ಅತ್ಯುಗ್ರವಾದ ಸತ್ಯಾಗ್ರಹವನ್ನು ನಡೆಯಿಸಿದ್ದಾರೆ ಈಗಿನ ಕಾಂಗ್ರೆಸ್ ಸರ್ಕಾರದವರು ಧರ್ಮವಿರುದ್ಧವಾಗಿ ಕಾನೂನುಗಳನ್ನು ಮಾಡಿ ಸನಾತನಧರ್ಮಕ್ಕೆ ಅಡ್ಡಿಯನ್ನುಂಟುಮಾಡಿರುವುದರಿಂದಲೇ ಈ ಸತ್ಯಾಗ್ರಹವು ಪ್ರಾರಂಭವಾಗಿರುವುದು ಈ ಸತ್ಯಾಗ್ರಹದಲ್ಲಿ ಮಹಾಮಹಾ ಸಾಧುಗಳೂ, ಪಂಡಿತರೂ, ವಕೀಲರೂ, ಶ್ರೀಮಂತರೂ, ಭಾಗವಹಿಸಿರುವರು ಸತ್ಯಾಗ್ರಹ ಚಳುವಳಿಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಲೇ ಇದೆ ಏಪ್ರಿಲ್ ೨೮ ನೇ ತಾರೀಖಿನಿಂದ ಜೂನ್ ೯ನೇ ತಾರೀಖಿನವರೆಗೆ ೧೧೪೩ ಜನ ಧರ್ಮವೀರರು ದಿಲ್ಲಿಯಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದಾರೆ ಕಾಂಗ್ರೆಸ್ ಸರ್ಕಾರವನ್ನು ಪ್ರತಿಭಟಿಸುವುದಕ್ಕಾಗಿ ಜೂನ್ ೯ ನೇ ತಾರೀಖಿನವರೆಗೆ ಪ್ರತಿದಿವಸ ಈ ಕೆಳಗೆ ತೋರಿಸಿರುವಂತೆ ಧರ್ಮವೀರರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ ದೈನಿಕಸಂಖ್ಯೆಯು ಈ ರೀತಿ ಇದೆ

೬೦, ೧೫, ೧೦, ೧೨, ೨೫, ೨೦, ೨೦, ೧೭, ೫, ೧೫, ೧೫, ೧೦, ೧೦, ೧೦, ೧೦, ೧೦, ೧೦, ೯, ೬೬, ೩೦, ೧೫, ೨೨, ೨೨, ೨೦, ೨೦, ೨೩, ೦, ೪೦, ೨೦, ೧೫, ೨೫, ೨೦, ೪೨, ೫೦, ೦೦, ೨೦೦, ೨೧, ೪೦, ೨೩, ೨೦, ೨೧, ೨೦, ೧೪.

ಧರ್ಮಶಾಲೆಯ ಉದ್ಘಾಟನ ಸಮಾರಂಭ ಬನ್ನೂರು

ಬೆಂಗಳೂರು ಸಿಟಿಯಲ್ಲಿರುವ ವೇ|| ಯನ್ ರುದ್ರಯ್ಯನವರು ಮೈಸೂರು ಡಿ|| ಬನ್ನೂರು ಗ್ರಾಮದಲ್ಲಿ ಒಂದು ಸುಂದರವಾದ ಧರ್ಮಶಾಲಾ ಮಂದಿರವನ್ನು ಕಟ್ಟಿಸಿರುವರು ಈ ಧರ್ಮಶಾಲೆಯ ಉದ್ಘಾಟನ ಸಮಾರಂಭವು ಈ ದಿವಸ ಬನ್ನೂರು ಗ್ರಾಮದಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರ್ ರವರ ಹಸ್ತದಿಂದ ನೆರವೇರುವುದಾಗಿದೆ ಇದೇ ರೀತಿ ಅನೇಕ ಧರ್ಮಕಾರ್ಯಗಳನ್ನು ಮಾಡಿ ಮಹಾಜನರ ವಿಶ್ವಾಸಕ್ಕೆ ಪಾತ್ರರಾಗಿರುವ ವೇ|| ಯನ್ ರುದ್ರಯ್ಯನವರಿಗೆ ಶ್ರೀಜಗದಾಚಾರ್ಯರು ಇತೋಪ್ಯತಿಶಯವಾದ ಆಯುರಾರೋಗ್ಯಭಾಗ್ಯಾದಿಸಂಪತ್ಸಮೃದ್ಧಿಯನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ

ಸ್ವೀಕಾರ

ತಿಪಟೂರು ತಾ|| ಗುರುಗನಹಳ್ಳಿ ಮಠದ ವೇ|| ಮೇಗಳಮನೆ ಕರಿಸಿದ್ಧಯ್ಯನವರ ಮಕ್ಕಳು ಸಿದ್ದಪ್ಪನವರು ತಮ್ಮ ಮೂರನೆಯ ಸಹೋದರ ಚಿ|| ಬಸವಾರಾಧ್ಯನಿಗೆ ಇದೇ ಗುರುಗದಹಳ್ಳಿಯಲ್ಲಿರುವ ಜ್ಯೋತಿ ಮಲ್ಲಾಪುರಮಠದ ವೇ|| ಚನ್ನದೇವರಯ್ಯನವರ ಪುತ್ರಿ ಚಿ|| ಸೌ|| ಚಂದ್ರಮ್ಮನನ್ನು ತಂದು ತಮ್ಮ ಗೃಹದಲ್ಲಿ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯವರು ಸಮರ್ಪಿಸಿದ **5** ರೂಪಾಯಿಗಳು ವಧುವಿನ ಕಡೆಯವರು ಸಮರ್ಪಿಸಿದ **2** ರೂಪಾಯಿಗಳು ಒಟ್ಟು **7** ರೂಪಾಯಿಗಳು ತಿಪಟೂರಿನಲ್ಲಿರುವ ಕೊಬ್ಬರಿ ಅಂಗಡಿ ಅದಲಗೆ ಮಠದ ವೇ|| ಜಿ ಗಂಗಾಧರಯ್ಯನವರ ದ್ವಾರಾ ತಲ್ಪಿರುತ್ತವೆ

ಅನಂತಪುರ ಡಿ| ಉರವಕೊಂಡೆಗ್ರಾಮದಲ್ಲಿರುವ ವೇ|| ಕೊಂಡಕುಂದಿ ಕಲ್ಲುಮಠದ ವಿರೂಪಾಕ್ಷಯ್ಯನವರ ಪುತ್ರಿ ಚಿ|| ಸೌ|| ಚಾಮುಂಡಮ್ಮನಿಗೂ ಗುಡೇಕಲ್ಲುಮಠದ ವೇ|| ಹಂಪಯ್ಯನವರ ಪುತ್ರ ಚಿ| ಚನ್ನಬಸವಯ್ಯನಿಗೂ, ವೇ| ಪರಮೇಶ್ವರಯ್ಯನವರ ಪುತ್ರಿ ಚಿ| ಸೌ|| ವೀರಮ್ಮನಿಗೂ ಕೊಂಡಕುಂದಿ ವಿರಕ್ತಮಠದ ವೇ|| ಗುರುಶಾಂತಯ್ಯನವರ ಪುತ್ರ ಚಿ| ವಿರೂಪಾಕ್ಷಯ್ಯನಿಗೂ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂಪಾಯಿಗಳು ವೇ|| ಕೊಂಡಕುಂದಿ ಕಲ್ಲುಮಠದ ಎಸ್ ಎಂ ಶಿವಯೋಗಿ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಗದಗ ಶಹಪುರಪೇಟೆಯಲ್ಲಿರುವ ಮ|| ರಾ|| ವೀರಭದ್ರಪ್ಪ ಪಿಳ್ಳಿ ಇವರ ಸಹೋದರ ಚಿ|| ವಿರೂಪಾಕ್ಷಪ್ಪನಿಗೆ ಹೊಸಪೇಟೆ ಉಕ್ಕಟದ ಮ|| ರಾ|| ಶಾಂತವೀರಪ್ಪನವರ ಪುತ್ರಿ ಚಿ|| ಸೌ|| ಪಾರ್ವತೀದೇವಿಯನ್ನು ತಂದು ವೇ|| ಕಂಚಿಮಠದ ಪ್ರಭಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ|| ಬಸವಯ್ಯ ಸಾವಳಿಗಿ ಮಠ ಇವರ ದ್ವಾರಾ ತಲ್ಪಿರುತ್ತವೆ

ತಿಪಟೂರಲ್ಲಿರುವ ಮ|| ರಾ|| ಶೀಲವಂತರ ಮಲ್ಲಣ್ಣನವರ ಪುತ್ರಿ ಚಿ|| ಸೌ| ಸಿದ್ದಗಂಗಮ್ಮನನ್ನು ಕೆಲ್ಲಂಗೆರೆ ಮ|| ರಾ|| ಮರುಳಪ್ಪನವರ ಪುತ್ರ ಚಿ|| ಶಿವಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ|| ತುಂಬಾಪುರಮಠದ ಪುರೋಹಿತ ನಂಜುಂಡಯ್ಯನವರ ದ್ವಾರಾ ತಲುಪಿರುತ್ತವೆ

ಧಾರವಾಡ ಡಿ|| ಕಲಘಟಗಿ ತಾ|| ಬೆಲವಂತರ ಗ್ರಾಮದ ಹಿರಿಯಮಠದ ಶ್ರೀ|| ಚನ್ನಬಸವಶಿವಯೋಗಿಗಳ ಪುಣ್ಯತಿಥಿಸಮಾರಂಭದಲ್ಲಿ ಸದರಿ ಮಠದ ವೇ|| ಸಿದ್ಧರಾಮೇಶ್ವರಸ್ವಾಮಿಯವರು ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

|| ಶ್ರೀಜಗದ್ಗುರು ಪಂಡಿತಾರಾಧ್ಯೋ ವಿಜಯತೇ ||

ಪ್ರಕಟನೆ

ಅನಂತಪುರ ಜಿಲ್ಲಾ ಗುತ್ತಿ ತಾಲೂಕು ಕೊಂಡಕುಂದಿ ಶಿಲಾಮಠದ ಶ್ರೀಗುರುಕುಲನಿವಾಸ ಸಾಂಗವೇದ ಪಾಠಶಾಲೆಯಲ್ಲಿ ಸಂಸ್ಕೃತ ಜ್ಯೋತಿಷ ವೈದಿಕ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಮಾಹೇಶ್ವರ ವಿದ್ಯಾರ್ಥಿಗಳು ೧೯೪೭ ಜುಲೈ ತಿಂಗಳೊಳಗಾಗಿ ಬಂದು ಸೇರತಕ್ಕದ್ದು ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳ ವಯಸ್ಸು ೧೨ ವರ್ಷಗಳಿಗೆ ಮೇಲ್ಪಟ್ಟಿರಬೇಕು ಮತ್ತು ವಿದ್ಯಾರ್ಥಿಗಳಿಗೆ ಅಕ್ಷರ ವಾಚನ ಚನ್ನಾಗಿರಬೇಕು ವಿದ್ಯಾರ್ಥಿಗಳು ತಮ್ಮ ಗ್ರಾಮದ ಮುಖ್ಯಸ್ಥರ ಸರ್ಟಿಫಿಕೇಟುಗಳನ್ನು ತರತಕ್ಕದ್ದು

ಪಾಠಶಾಲೆಯಲ್ಲಿ ಸೇರತಕ್ಕ ವಿದ್ಯಾರ್ಥಿಗಳು ಜುಲೈ ತಿಂಗಳು ೫ ನೇ ತಾರೀಖಿನೊಳಗಾಗಿ ಅರ್ಜಿ ಬರೆದು ಕಳಿಸಬೇಕು

ಅಧ್ಯಕ್ಷರು,
ಶ್ರೀಸಾಂಗವೇದ ಪಾಠಶಾಲಾ ಶಿಲಾಮಠ,
ಕೊಂಡಕುಂದಿ,
ಕೊನಕೊಂಡ್ಲ ಪೋಸ್ಟು, ಗುಂತಕಲ್ಲ ಜಂಕ್ಷನ್.

ಪುಣ್ಯತಿಥಿಮಹೋತ್ಸವ

ಧಾರವಾಡ ಜಿಲ್ಲಾ ಕಲಘಟಗಿ ತಾಲೂಕು ಬೆಲವಂತರ ಹಿರೇಮಠದ ಲಿಂ| ಶ್ರೀಚನ್ನಬಸವೇಶ್ವರ ಶಿವಯೋಗಿಗಳವರ ೧೨ ನೇ ಪುಣ್ಯತಿಥಿಮಹೋತ್ಸವವು ವಾರ್ಷಿಕಪದ್ಧತಿಯಂತೆ ತಾರೀಖು ೧೬ ೬ ೪೭ ಸೋಮವಾರ ದಿವಸ ಮಠಾಧ್ಯಕ್ಷರಾದ ವೇ|| ಸಿದ್ಧರಾಮೇಶ್ವರ ಸ್ವಾಮಿಯವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು ಆ ದಿವಸ ಶಿವಯೋಗಿಗಳವರ ಭಾವಪಟದ ಪಲ್ಲಕ್ಕಿ ಉತ್ಸವವು ಪುರಜನರಿಂದಲೂ ಬೆಲವಂತರ, ಮುತ್ತಿಗಿ ಗ್ರಾಮಗಳ ಭಜನಾಮೇಳಗಳಿಂದಲೂ ಸೊಲಬಪ್ಪ ಹುಬ್ಬಳ್ಳಿ ಇವರ ಭೃಂಗಿನಾಟ್ಯದಿಂದಲೂ ಅತಿ ವೈಭವದಿಂದ ಜರಗಿತು ರಾತ್ರಿ ಇಂಗಳಗಿ ಹಿರೇಮಠದ ವೇ|| ವಿರುಪಾಕ್ಷಶಾಸ್ತ್ರಿಗಳವರು "ಸತ್ಯವಾನ್ ಸಾವಿತ್ರಿ" ಕಥೆಯನ್ನು ಒಳ್ಳೆ ಬೋಧಕರವಾಗಿ ಅನುವಾದಮಾಡಿದರು ಇಂಥ ಆಹಾರ ಬಿಕ್ಕಟ್ಟಿನ ಸಮಯದಲ್ಲಿಯೂ ಅಸಂಖ್ಯ ಜನರಿಗೆ ಅನ್ನಸಂತರ್ಪಣೆ ನಡೆಯಿತು ಈ ವರುಷ ಹುಬ್ಬಳ್ಳಿ ಶ್ರೀಮಾನ್ ಮೂರುಸಾವಿರಪ್ಪನವರು ಹತ್ತಿಕಾಳ ಇವರು ಹೊಸಪಲ್ಲಕ್ಕಿ ಮಾಡಿಸಿ ಅರ್ಪಿಸಿದರು. ಇವರು ಪ್ರತಿವರುಷ ತ್ರಿಕರಣಪೂರ್ವಕವಾಗಿ ಸೇವೆ ಸಲ್ಲಿಸಿ ಪುನೀತರಾಗುತ್ತಿದ್ದಾರೆ ಮರುದಿವಸ ಶೀಲವಂತ ಆಲದಕಟ್ಟಿಯ ಸಂಗನಗೌಡರು "ಅನಸೂಯಾ' ಕಥೆಯನ್ನು ಕೀರ್ತನಮಾಡಿದರು ಸಕಲ ಭಕ್ತಮಹಾಶಯರಿಗೆ ಶ್ರೀಚನ್ನಬಸವೇಶ್ವರ ಶಿವಯೋಗಿಗಳವರು ಸದಾ ಮಂಗಲವನ್ನೀಯಲಿ ಶಿವನಗೌಡ ಕತ್ತಿ

ವಿವಾಹಮಹೋತ್ಸವ, ಉರವಕೊಂಡ

ಅನಂತಪುರ ಡಿ|| ಉರವಕೊಂಡೆ ಗ್ರಾಮದಲ್ಲಿರುವ ಕೊಂಡಕುಂದಿ ಕಲ್ಲುಮಠದ ವೇ|| ವಿರೂಪಾಕ್ಷಯ್ಯನವರು ಇದೇ ಜ್ಯೇಷ್ಠ ಬಹುಳ ದಶಮಿ ಶುಕ್ರವಾರ ದಿವಸ ತಮ್ಮ ಪುತ್ರಿ ಚಿ| ಸೌ| ಚಾಮುಂಡಮ್ಮನನ್ನು ಗುಡೇಕಲ್ಲು ಮಠದ ವೇ|| ಹಂಪಯ್ಯನವರ ಪುತ್ರ ಚಿ|| ಚನ್ನಬಸವಯ್ಯನೆಂಬ ವರನಿಗೆ ಕೊಟ್ಟು ಮತ್ತು ತಮ್ಮ ಸಹೋದರ ವೇ|| ಪರಮೇಶ್ವರಯ್ಯನವರ ಪುತ್ರಿ ಚಿ|| ಸೌ|| ವೀರಮ್ಮನನ್ನು ಕೊಂಡಕುಂದಿ ವಿರಕ್ತಮಠದ ವೇ| ಗುರುಶಾಂತಯ್ಯನವರ ಪುತ್ರ ಚಿ|| ವಿರೂಪಾಕ್ಷಯ್ಯನೆಂಬ ವರನಿಗೆ ಕೊಟ್ಟು ಕನ್ಯಾದಾನ ಪೂರ್ವಕ ವಿವಾಹ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು **ಈ ವಿವಾಹ ಸಮಾರಂಭವು ತಮ್ಮ ಮನೆತನದ ಗುರುಗಳಾದ ಶ್ರೀ ಷ|| ಬ್ರ|| ಶಿವಶಂಕರ ಶಿವಾಚಾರ್ಯಸ್ವಾಮಿಗಳವರ ಗುರುತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿತು. ಈ ಮಂಗಳ ಸಮಯದಲ್ಲಿ ಗುರುಗಳ ಅಪ್ಪಣೆಯ ಮೇರೆಗೆ ಕಾರ್ಯಕರ್ತರಿಂದ ಪ್ರಭಾಪೋಷಣಕ್ಕೋಸ್ಕರ ಐದು ರೂಪಾಯಿ**

ಗಳು ಸಮರ್ಪಿಸಲ್ಪಟ್ಟವು ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಧುರೀಣರಾದ ವೇ॥ ವಿರೂಪಾಕ್ಷಯ್ಯನವರು ಮತ್ತು ಇವರ ಧರ್ಮಪತ್ನಿ ಸೌ॥ ಸಿದ್ಧಮ್ಮನವರು ಇವರು ಯಾವಾಗಲೂ ಗುರುಲಿಂಗ ಜಂಗಮ ಪ್ರೇಮಿಗಳೂ, ಪರೋಪಕಾರನಿರತರೂ, ಆಗಿರುವುದು ಸ್ತೋತ್ರಾರ್ಹವಾಗಿದೆ ಇವರು ಉಂಡಬಂಡೆ ಗ್ರಾಮದ ಶ್ರೀ ವೀರಭದ್ರ ದೇವಾಲಯದ ಹತ್ತಿರ ಪಬ್ಲಿಕ್ ರಸ್ತೆಯಲ್ಲಿ ಒಂದು ಬಾವಿಯನ್ನು ತೆಗೆಯಿಸಿರುವರು ನೀರು ಅತ್ಯಂತ ಮಧುರವಾಗಿರುವುದು ಮತ್ತು ಧಾಯನಹಳ್ಳಿ ಶ್ರೀ ಪರ್ವತಸ್ವಾಮಿ ಮಂದಿರದ ಹತ್ತಿರ ಒಂದು ಭವ್ಯವಾದ ಪಶ್ವಾಣಿಯನ್ನು ಬಹಳ ದುಡ್ಡು ಖರ್ಚುಮಾಡಿ ಕಟ್ಟಿಸಿರುವರು ಇದರಿಂದ ಬಹು ಜನಗಳಿಗೆ ಮಹೋಪಕಾರವಾಗಿರುವುದು ಇವರು ಅನೇಕ ಧರ್ಮ ಲಗ್ನಗಳನ್ನು ಮಾಡಿಕೊಟ್ಟಿರುವರು ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲವಿಧ ಸಂಪತ್ತನ್ನೀಯಲೆಂದು ಪ್ರಾರ್ಥಿಸುವ,

ಎಸ್ ಎಂ ಶಿವ ೀಗಿಶಾಸ್ತ್ರಿ
ಾಂಗವೇದಪಾಠಶಾಲಾ, ಕೊಂಡಕುಂದಿ

ನಿಕ್ಕಲ್ ರೂಪಾಯಿಗಳನ್ನು ತಯಾರಿಸಲು ಬರ್ಮಿಂಗ್ ಹ್ಯಾಂ ಕಂಪೆನಿಗಳ ಒಪ್ಪಂದ

ಇದುವರೆಗೂ ಮುದ್ರೆ ಒತ್ತದ ಬೆಳ್ಳಿಯ ರೂಪಾಯಿಗಳನ್ನು ತಯಾರಿಸಿ ಭಾರತಕ್ಕೆ ಒದಗಿಸುತ್ತಿದ್ದ ಬರ್ಮಿಂಗ್ ಹ್ಯಾಮಿನ ಎರಡು ಕಂಪೆನಿಗಳು, ಈಗ ಅದೇರೀತಿ ಹೊಸ ನಿಕ್ಕಲ್ ರೂಪಾಯಿಗಳನ್ನು ತಯಾರಿಸಿ ಒದಗಿಸಲು ಒಪ್ಪಂದವನ್ನು ಭಾರತ ಸರ್ಕಾರದೊಂದಿಗೆ ಮಾಡಿಕೊಂಡಿವೆ ಸದ್ಯ ೧೬೦೦೦ ಟನ್ ನಿಕ್ಕಲ್ ಲೋಹವು ಈ ಕೆಲಸಕ್ಕೆ ಬೇಕಾಗಿದೆಯಂತೆ!

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ	೦—೬—೦
ಸನ್ಯಾಸಿ ಪಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೨—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು. (ತೆಲುಗು)	೮ ಆಣೆ
ಸದ್ಬೋಧರತ್ನಾವಲಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಃಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗ ದ್ಯುತರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೨ ರೂ ೮ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೧ನೇ ಜುಲೈ ೧೯೪೭ [ಸಂಚಿಕೆ ೧೩

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದ್ವೇದವೇದಾಂತಸಿದ್ಧಾಂತಪುರಾಣಾಗಮೇತಿಹಾಸಸಕಲಶಾಸ್ತ್ರಸುಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯ ಶ್ರೀಜಗದ್ಗುರು ರೇಣುಕ ಭಗವತ್ಪಾದ ಮಹಾಚಾರ್ಯ ಪರಂಪರಾಗತ ಸಾಕ್ಷಾದ್ಭೂಕೈಲಾಸ ಶ್ರೀರಂಭಾಪುರೀವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಗಂಗಾಧರರಾಜೇಂದ್ರಶಿವಾಚಾರ್ಯ ಮಹಾಸ್ವಾಮಿನಾಂ ದಿವ್ಯಶ್ರೀಪಾದಸನ್ನಿಧಾನೇನ

ಪರಮಸದ್ಗುರುಪದನಖಚಂದ್ರರುಚಿರುಂದ್ರಚಕ್ರಿಕಾಚಂಚಚ್ಚಕೋರಾಯಮಾಣ ಕೇವಲಾಸ್ಮದೀಯಕರುಣ್ಯಾಮೃತಸರಸೀಮರಾಳೋಪಮಾನಂದ ಕರ್ನಾಟಕ ಆಂಧ್ರ, ಮಹಾರಾಷ್ಟ್ರ ಮೊದಲಾದ ಭರತಖಂಡದ ನಾನಾಭಾಗಗಳಲ್ಲಿರುವ ಶ್ರೀಪಟ್ಟಾಧಿಕಾರಿಗಳು ಮಠಾಧಿಪತಿಗಳು ಮುಂತಾದ ಧರ್ಮಾಧಿಕಾರಿಗಳಿಗೆ ಸಮಸ್ತ ಸನ್ಮಂಗಳಾನಿ ಭವಂತು ಇತಿ ಸಪ್ರೇಮ ಶಿವಸ್ಮರಣಪೂರ್ವಕ ಕೃತತ್ರೈಕಾಲಿಕಾನಂತಾಶೀರ್ವಾದಗಳು ಶ್ರೀಮಹಾಸನ್ನಿಧಿಯು ಲೋಕಕಲ್ಯಾಣಾರ್ಥವಾಗಿ ಶ್ರೀ ಶಿವಪೂಜಾತಪೋನುಷ್ಠಾನ, ಸ್ವಾಧ್ಯಾಯ, ಪ್ರವಚನ ಪ್ರಭೃತಿ ಶಿವಮಹಾವ್ರತಗಳನ್ನಾಚರಿಸುತ್ತ ಯಡೆಯೂರ ಸಿಂಹಾಸನದಲ್ಲಿ ಶಿವಾನಂದಾರೋಗ್ಯಭಾಗ್ಯಯೋಗದಿಂದ ಇರುವುದಾಗಿದೆ ಶ್ರೀಪರಮಾತ್ಮನನುಗ್ರಹದಿಂದ ನಿಮ್ಮೆಲ್ಲರಿಗೆ ಸದಾಯುರಾರೋಗ್ಯೈಶ್ವರ್ಯವಿದ್ಯಾತಪ ಸಮೃದ್ಧಿಯುಂಟಾಗಲೆಂದು ಹೃತ್ಪೂರ್ವಕವಾಗಿ ಹರಸಲಾಗಿದೆ

ಮನುಷ್ಯನು ಸರ್ವಶ್ರೇಷ್ಠನಾಗಿದ್ದು ಜ್ಞಾನಕರ್ಮೋಭಯ ಸಹಾಯದಿಂದ ಲೌಕಿಕ ಪಾರಮಾರ್ಥಿಕ ಸುಖ ಸಂಪತ್ತಿಯನ್ನು ಪಡೆಯಲರ್ಹನಾಗಿರುವನೆಂಬುವವು ಸರ್ವಸಮ್ಮತವಾದುದೇ ಆಗಿದೆ ದೇವತೋಪಾಸನೆಯು ಸರ್ವಸುಖಸಾಧನವಾಗಿದ್ದು ಶಾಸ್ತ್ರೋಪದೇಶವು ಅದಕ್ಕೆ ಸಹಕಾರಿಯಾಗಿದೆ ಶಾಸ್ತ್ರೋಪದೇಶಕ್ಕೆ ಗುರುವು ಮೂಲಕಾರಣನಾಗಿರುವನು ಯುಗಯುಗಾಂತರಗಳಿಂದಲೂ ಧರ್ಮೋಪದೇಶದ ಭಾರವು ಗುರುವಿನದೇ ಆಗಿರುವದು ಇದು ಶಾಸ್ತ್ರ ಲೋಕಾನುಭವಗಳಲ್ಲಿಯೂ ಸುಪ್ರಸಿದ್ಧವೇ ಆಗಿದೆ ಗುರುಸಂಬಂಧವಿಲ್ಲದ ಮಾನವವರ್ಗವಾಗಲಿ, ದೇವದಾನವವರ್ಗವಾಗಲಿ ಬ್ರಹ್ಮಾಂಡಗಳಲ್ಲಿ ಇಲ್ಲವೇಇಲ್ಲ ದೇವದಾನವಮಾನವಾದಿಗಳಿಗೆ ಐಹಿಕ ಪಾರಮಾರ್ಥಿಕ ಸುಖ ಶಾಂತಿ ಸದ್ಗತಿಗಳು ಬೇಕೇಬೇಕಾಗಿರುವುದರಿಂದಲೂ ಸರ್ವರ ಜೀವನಯಾತ್ರೆಯೂ ಅವುಗಳಿಗಾಗಿಯೇ ಇರುವುದರಿಂದಲೂ ಅವುಗಳ ಲಾಭಕ್ಕೆ ಧರ್ಮೋಪದೇಶವು ಶ್ರೀಗುರುವಿನ ಪ್ರಧಾನಕರ್ತವ್ಯವಾಗಿದೆ ಎಂಬುದು ಸ್ಪಷ್ಟವಾಗಿದೆ

“ ಯಥಾವಹ್ನಿಸಮಾವೇಶಾನ್ಮಲಂ ತ್ಯಜತಿ ಕಾಂಚನಂ
ತಥೈವ ಗುರುಸಂಪರ್ಕಾತ್ಪಾಪಂ ತ್ಯಜತಿ ಮಾನವಃ ॥ ”

ಎಂಬ ಶಿವಾಗಮ ಪ್ರಮಾಣಾನುಸಾರವಾಗಿ ಶ್ರೀಗುರುಸಾನ್ನಿಧ್ಯದಿಂದಲೇ ಮನುಷ್ಯನು ನಿರ್ಮಲನಾಗುವನು ಶ್ರುತಿಗಳೂ ಸಹ ಈ ವಿಷಯವನ್ನು ನಿಸ್ಸಂಶಯವಾಗಿ ವಿವರಿಸಿವೆ ಆದುದರಿಂದ ಶಿಷ್ಯವರ್ಗದ ಸುಖಶಾಂತಿಸೂತ್ರಗಳೂ ಗುರುಕುಲದಲ್ಲಿಯೇ ಸಂಬದ್ಧವಾಗಿವೆ ಶ್ರೀಗುರುವಿನ ಕಾರ್ಯಕ್ಷೇತ್ರವು ಸಾಧಾರಣ ಮಾನವರ ತೆ ಸಂಕುಚಿತ ಸೀಮಾವಿಶಿಷ್ಟವಾದುದಲ್ಲ ವಿಶಾಲವಾದುದಾಗಿದೆ ಶಿಷ್ಯಶ್ರೇಣಿಯು ಸದ ಶ್ರೇಯಸ್ಸಿಗೆ ಒನೆಯೇ ಶ್ರೀಗುರುವಾಗಿರುವನ ಪ್ರಾಣಿಸಂಮಾನದಂತೆ ಮನುಷ್ಯಾಕಾರದಲ್ಲಿದ್ದು ವಿನಯ ಒಪ್ಪನ್ನ ಒಪಿಸುವುದು ಗುರುವಿನ ಗುರಿಯಾಗಿರುವುದಿಲ್ಲ ಕೇವಲ ತನ್ನ ಸದ್ಗತಿಗಾಗಿ ಗುರುವಿನ ಜೀವನವಲ್ಲ ತಾರತಮ್ಯಾನುಗುಣವಾಗಿ ಎಷ್ಯವ ದ ಸಮಷ್ಟಿವ ಸಂಪತ್ಸಮೃದ್ಧಿಗಾಗಿ ಶ್ರಮಿಸ ವುದೇ ಗುರುಜೀವನದ ರಹಸ್ಯವಾಗಿದೆ ಶಿಷ್ಯರ ಸಂಪತ್ಸಮೃದ್ಧಿಯೇ ಗುರುಜೀವನದ ಫಲವಾಗಿದೆ ಗುರುಗಳ ತಪಸ್ಸಿಗೆ ಶಿಷ್ಯಕಲ್ಯಾಣವೇ ಹೆಗ್ಗುರಿಯಾಗಿದೆ ಗುರುಜೀವನವು ಸದಾ ತಪೋಮಯವಾದುದಾಗಿದೆ ಗುರು ಸೂರ್ಯನಿಗೆ ಉದಯಾಸ್ತಗಳೇ ಇಲ್ಲ ಸರ್ವ ಸ್ಥಾನಗಳಲ್ಲಿಯೂ ರತ್ನದೀಪದಂತೆ ಪ್ರಕಾಶಿಸುವುದೇ ಗುರುವಿನ ಗುರುತ್ವ! ‘ ಸದಾ ಗಾಮಿ ತಮೋ ಹಂತಿ ಗೋವ ದೀಪೋ ನಿರಂಕುಶ ’ ಎಂಬ ಶ್ರೀಜಗದ್ಗುರು ರೇಣುಕ ಭಗವತ್ಪಾದರ ಆಜ್ಞಾನುಸಾರವಾಗಿ ಬೋಧದೀಪದಿಂದ ಸರ್ವರ ಅಜ್ಞಾನವನ್ನು ಕಳೆದು ಬೋಗಮೋಕ್ಷಗಳ ಸತ್ಯ ಸನ್ಮಾರ್ಗವನ್ನು ತೋರಿಸುವದೇ ಗುರುವಿನ ಕಾರ್ಯಕ್ಷೇತ್ರದ ಆಕ್ಷಯಸಲಾಗಿದೆ ಕಾಲಾನುಸಾರವಾಗಿ ದೇಶವಿದೇಶೀಯ ವಾತಾವರಣಗಳಿಂದ ಈಗ ಧರ್ಮಶ್ರದ್ಧೆ ಕಳೆಗುಂದುತ್ತಿದೆ ನಿಜವಾಗಿಯೂ ಧರ್ಮದ ಮರ್ಮವನ್ನರಿಯದವರು ಧರ್ಮವನ್ನು ಧಿಕ್ಕರಿಸಿ ದೂರೀಕರಿಸುವುದು ಕಂಡು ಕೇಳುತ್ತಿದ್ದೇವೆ ದಯಾನಿಧಿಯಾದ ಶ್ರೀಪರಮಾತ್ಮನು ಮಾನವನಿಗಿತ್ತ ಅಕ್ಷಯನಿಧಿಯಾದ ಧರ್ಮಸಂಪತ್ತಿನ್ನಳಿದು ಸುಖಶಾಂತಿಗಳನ್ನು ನೆಲೆಗೊಳಿಸುವುದು ಯಾವ ಯುಗದ ಚರಿತ್ರೆಗಳಲ್ಲಿಯೂ ದೊರೆಯದ ಸಂಗತಿಯಾಗಿದೆ ಸ್ವಾರ್ಥಸಂಪಾದನೇಚ್ಛೆಯು ಉದ್ರೇಕಗೊಂಡಾಗ ರಾಗದ್ವೇಷಗಳ ಪ್ರಾಬಲ್ಯದಲ್ಲಿ ಶಾಸ್ತ್ರೋಕ್ತವಿಧಿ, ನಿಷೇಧ ಸದ್ಗತಿ ದುರ್ಗತಿ, ದಯಾ ಪರೋಪಕಾರ, ವಿಶ್ವಪ್ರೇಮಗಳಿಗೆ ಅಖಂಡಜಗತ್ತಿನಲ್ಲಿ ಎಲ್ಲಿಯೂ ಸ್ಥಾನವೇ ಉಳಿಯುವದಿಲ್ಲ ಧರ್ಮೋಪದೇಶದಿಂದಾದ ಧರ್ಮಾಸಕ್ತಿ ಧರ್ಮಾಚರಣಗಳಿಂದ ಸ್ವಾರ್ಥ ರಾಗದ್ವೇಷಾದಿಗಳ ಸಂಹಾರವಾದಾಗ ‘ ಸರ್ವರೂ ಸುಖಿಗಳಾಗಿ ಜೀವಿಸೋಣ ’ ಎಂಬ ಆತ್ಮೀಯ ಭಾವನೆಯು ತಲೆದೋರಿದರೆ ಸುಖಶಾಂತಿ ಸ್ಥಾಪನ ಪ್ರಚಾರಗಳಿಗೆ ಬೀಜಾರೋಪಣವಾದಂತಾಗುವುದು ಆಧುನಿಕ ವಾತಾವರಣವು ವಿಷಮಿಸಿ ಜಗತ್ತನ್ನೇ ಭ್ರಾಂತಿಭೀತಿಗಳ ಗೆಡೆಮಾಡಿದೆ ನಿಜನಿವಾಸ ಐಶ್ವರ್ಯ ಜೀವನಯಾತ್ರಾ ಮನೋವೃತ್ತಿಗಳಲ್ಲಿ ಸ್ಥೈರ್ಯವೇ ಇಲ್ಲದಂತಾಗಿದೆ ಭಯಸಂಶಯಗಳು ಸರ್ವಾವಸ್ಥೆಗಳಲ್ಲಿಯೂ ಸಂದರ್ಶನವನ್ನೀಯುತ್ತಲಿವೆ ಪರಸ್ಪರರಲ್ಲಿ ನಡೆಯುತ್ತಿರುವ ಏಟಾಟಗಳು ನಿಲ್ಲುವವರೆಗೂ ಭಯಸಂಶಯಾದಿಗಳು ಅದೃಶ್ಯಗಳಾಗುವದಿಲ್ಲ ಅಸಾಧ್ಯವೆಂದು ಕಂಡುಬಂದರೂ ಯೋಗ್ಯಪ್ರಯತ್ನಗಳನ್ನು ಮಾಡುವುದು ಧೀರರ ಕರ್ತವ್ಯವಾಗಿದೆ ಸದ್ಯಃ ಸಮಯದಲ್ಲಿ ಧರ್ಮಧ್ವಂಸಕ ಬಿರುಗಾಳಿಯು ಬಲವಾಗಿ ಬೀಸತೊಡಗಿದೆ ಆಪತ್ತಿನಲ್ಲಿಯೇ ರಕ್ಷಕರ ಬಲಪರೀಕ್ಷೆಯಾಗುವದು ಶ್ರೀಪರಮಾತ್ಮನ ಆಜ್ಞಾನುಸಾರವಾಗಿ ಧರ್ಮ ರಕ್ಷಣೆಯ ಭಾರವನ್ನು ಹೊತ್ತ ಗುರುವರ್ಗವು ಕಷ್ಟಕಾಲದಲ್ಲಿ ಸ್ವಕೀಯಸುಖಕ್ಕೆ ತಿಲಾಂಜಲಿಯನ್ನಿತ್ತು ಸ್ವಸಾಮರ್ಥ್ಯಾನುಗುಣವಾಗಿ ಸರ್ವಸಹಿಷ್ಣುತೆಯಿಂದೊಡಗೂಡಿ ಜನತೆಯಲ್ಲಿ ಶಾಂತಿ ಸೌಹಾರ್ದಗಳುಂಟಾಗುವ ಹಾಗೆ ಯತ್ನಿಸಬೇಕು ಅಧರ್ಮಾಸಕ್ತಿಯಿಂದ ನಡೆಯುತ್ತಿರುವ ಕರಾಳಕೃತ್ಯಗಳನ್ನು ಕೇಳಿ ಸ್ಮರಿಸಿದರೆ ಹೃದಯವು ತಲ್ಲಣಿಸುತ್ತಲಿದೆ ಜನತೆಯಲ್ಲಿ ಧರ್ಮಾಸಕ್ತಿ ಪ್ರೇಮ ಸಹಾನುಭೂತಿಗಳು ಉಂಟಾಗಲು ಧರ್ಮೋಪದೇಶವೇ ಮೂಲಕಾರಣವೆಂದು ಚೆನ್ನಾಗಿ ಅರಿತ ಪ್ರಾಚೀನ ರಾಜಾಧಿರಾಜರು ತಮ್ಮ ರಾಜ್ಯದಲ್ಲಿ ಪ್ರಜೆಗಳೆಲ್ಲರೂ ಸದಾಚಾರಸಂಪನ್ನರಾಗಿ ರಾಜ್ಯವು ಶಾಂತಿಸದನವಾಗಲೆಂದು ಪರಿಭಾವಿಸಿ, ಧರ್ಮಸ್ಥಾಪನ, ಪ್ರಚಾರ ರಕ್ಷಣಾದಿಗಳ ಭಾರವನ್ನು ಹೊತ್ತ ಸಕಲಮತೀಯ ಗುರುವರರಿಗೂ ಶಕ್ತ್ಯನುಸಾರವಾಗಿ ಭೂದಾನಾದಿ ದಾನಗಳನ್ನು ಸಲ್ಲಿಸಿ ಈವರೆಗೂ ಅವರ ಬಲವನ್ನು ಹೆಚ್ಚಿಸಿರುವದು ಇವೆಲ್ಲವನ್ನು ಪರ್ಯಾಲೋಚಿಸಿದರೆ ಜನಹಿತ ಸಾಧನೆಗೆ ಧರ್ಮೋಪದೇಶಕ ಗುರುಗಳ ಆವಶ್ಯಕತೆಯೆಷ್ಟಿರುವುದೆಂಬುದು ನಿಮ್ಮಗಳ ಗಮನಕ್ಕೆ ಬರದಿರದು

ಶ್ರೀಪಟ್ಟಾಧಿಕಾರಿಗಳೂ ಮಠಾಧಿಕಾರಿಗಳೂ ಆದ ನೀವುಗಳೆಲ್ಲರೂ ಶ್ರೀಮಹಾಚಾರ್ಯರ ಆಜ್ಞಾನುಸಾರವಾಗಿ ಧರ್ಮರಕ್ಷಣೆಯ ಭಾರವನ್ನು ಹೊತ್ತವರೇ ಆಗಿರುವಿರಿ ಶ್ರೀಮಹಾಪೀಠಗಳಂತೂ ಸರ್ವೋಚ್ಚಸ್ಥಾನಗಳಲ್ಲಿದ್ದು ಧರ್ಮಸ್ಥಾಪನಾಚಾರ್ಯಸ್ಥಾನಗಳೆ ಆಗಿವೆ ಮಹಾಚಾರ್ಯರ ಕಾರ್ಯಕಲಾಪಗಳು ಉಪಾಚಾರ್ಯರಾದ ಪಟ್ಟಾಧಿಕಾರಿಗಳಿಂದಲೂ ಮಠಾಧಿಕಾರಿಗಳಿಂದಲೂ ಅವ್ಯಾಹತವಾಗಿ ನಡೆಯುತ್ತ ಬಂದಿವೆ ನಡೆಯುತ್ತಲಿವೆ ನಡೆಯುವವುಗಳಾಗಿವೆ ನೀವು ಸ್ವಕರ್ತವ್ಯವನ್ನು ಚೆನ್ನಾಗಿ ತಿಳಿದು ಪ್ರತಿಗ್ರಾಮಾನುಗಳಲ್ಲಿಯೂ ಸಂಚರಿಸತಕ್ಕದ್ದು ದುರ್ಬಲವಾಗುತ್ತಿರುವ ಹಾಗೂ ಜನತೆಯನ್ನು ದಾರಿದ್ರ್ಯ ದುರ್ಗತಿಗಳಿಗೀಡುಮಾಡುತ್ತಿರುವ ಅಧರ್ಮಪ್ರವೃತ್ತಿಯನ್ನು ಧರ್ಮೋಪದೇಶಪ್ರಭಾವದಿಂದ ದೂರಮಾಡತಕ್ಕದ್ದು ಶರೀರಾರೋಗ್ಯಕ್ಕೆ ಭಂಗ ಬರದಂತೆ ಸಮಯಾನುಸಾರವಾಗಿ ಜಗತ್ಕಲ್ಯಾಣಕ್ಕೋಸ್ಕರ ಸಾತ್ವಿಕತಪಸ್ಸನ್ನಾಚರಿಸತಕ್ಕದ್ದು ಶಿಷ್ಯಶ್ರೇಣಿಯು ಸ್ವಕಲ್ಯಾಣಕಾರಣವಾದ ನಿಮ್ಮ ಧರ್ಮಕಾರ್ಯಗಳಿಗೆ ಶಕ್ತ್ಯನುಸಾರ ಸಹಾಯವನ್ನೀಯಲು ಸಿದ್ಧವೇ ಆಗಿರುವುದು ಶ್ರೀಮಹಾಸನ್ನಿಧಾನವು ಸಹ ಯಥಾಪೂರ್ವವಾಗಿ ಧರ್ಮೋದ್ಧಾರದ ಕಾರ್ಯವನ್ನು ಕೈಕೊಂಡೇ ಇರುತ್ತದೆ ಶ್ರೀಜಗದ್ಗುರು ರೇಣುಕಭಗವತ್ಪಾದಮಹಾಚಾರ್ಯರ ಪ್ರೇರಣೆಯಿಂದ ಸ್ವಕರ್ತವ್ಯನಿರ್ವಾಹಕಕ್ಕೋಸ್ಕರವಾಗಿ ನಿಮ್ಮಗಳಿಗಿತ್ತ ಈ ಅನುಜ್ಞೆಯನ್ನು ಶಿರಸಾವಹಿಸಿ ಶೀಘ್ರದಲ್ಲಿಯೇ ಕರ್ತವ್ಯೋನ್ಮುಖರಾಗತಕ್ಕದ್ದು ಶ್ರೀಜಗದಾಚಾರ್ಯ ಜಗದೀಶ್ವರರು ನಿಮಗೆ ಸರ್ವಸಾಮರ್ಥ್ಯವನ್ನೀಯಲಿ ॥ ಸನ್ಮಂಗಳಾನಿ ಭವಂತು ॥

ಮೊಕ್ಕಾಂ—ಯಡೆಯೂರು

ಪಂಚಾಚಾರ್ಯಪ್ರಭಾ

೧೯೪೭ನೆಯ ಜುಲೈ ತಾ|| ೨೧ನೇ ಸೋಮವಾರ

ಶ್ರೀಮಾನ್ ಎನ್ ರುದ್ರಯ್ಯನವರಿಗೆ "ಧರ್ಮಪ್ರಕಾಶ" ಪ್ರಶಸ್ತಿ

ಶ್ರೀಮನ್ಮಹಾರಾಜರವರು ಕಳೆದ ವರ್ಷ ನೆರವೇರಿದ ವರ್ಧಂತೀಮಹೋತ್ಸವದ ಸಮಯದಲ್ಲಿ ಬೆಂಗಳೂರು ನಗರದಲ್ಲಿರುವ ಶ್ರೀ ನಂದಿಗುಡಿ ಮಹಾಂತಿನ ಮಠದ ಎನ್ ರುದ್ರಯ್ಯನವರಿಗೆ ಫಸ್ಟ್‌ಕ್ಲಾಸ್ ಪಬ್ಲಿಕ್ ಸರ್ವಿಸ್ ಮೆಡಲನ್ನು ದಯಪಾಲಿಸಿದ್ದ ವಿಷಯವು ನಮ್ಮ ಪತ್ರಿಕಾ ವಾಚಕರಿಗೆಲ್ಲ ತಿಳಿದೇ ಇದೆ. ಪುನಃ ಈ ವರ್ಷ ನೆರವೇರಿದ ವರ್ಧಂತೀಮಹೋತ್ಸವ ಸಮಯದಲ್ಲಿ ಮಹಾಪ್ರಭುಗಳವರು ಶ್ರೀಮಾನ್ ರುದ್ರಯ್ಯನವರಿಗೆ ಧರ್ಮಪ್ರಕಾಶ ಎಂಬ ಮಹಾಪ್ರಶಸ್ತಿಯನ್ನು ರತ್ನಖಚಿತವಾದ ಗಂಡಭೇರುಂಡ ಮುದ್ರೆಯಿಂದೊಡಗೂಡಿದ ಸುವರ್ಣಪದಕ ಮತ್ತು ನೂತನಾಂಬರಗಳೊಡನೆ ದಯಪಾಲಿಸಿದುದನ್ನು ತಿಳಿದು ಅತ್ಯಂತ ಸಂತೋಷವೆನಿಸುತ್ತದೆ. ಈ ಮಹಾಪದವಿಯು ಶ್ರೀ ರುದ್ರಯ್ಯನವರಿಗೆ ಸರ್ವರೀತಿಯಿಂದಲೂ ಅನ್ವರ್ಥಕವಾಗಿರುವದು. ಶ್ರೀಯುತರು ಈವರೆಗೆ ಅನೇಕಾನೇಕ ದಾನ ಕಾರ್ಯಗಳನ್ನು ಮಾಡಿದ್ದಾರೆ. ಮೈಸೂರಿಗೆ ೧೭ ಮೈಲು ದೂರದಲ್ಲಿರುವ ಬನ್ನೂರು ಗ್ರಾಮದಲ್ಲಿ ದಿ॥ ಮಹಾರಾಣಿ ಯವರ [illegible] ಹೆರಿಗೆಯ ಆಸ್ಪತ್ರೆಯನ್ನು ಕಟ್ಟಿಸಿ [illegible] ಗ್ರಾಮದಲ್ಲಿ ಒಂದು ಸಂಸ್ಕೃತ [illegible] ಕಟ್ಟಿಸಿ ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಆ ಪಾಠಶಾಲೆಯ ಉದ್ಘಾಟನ ಸಮಾರಂಭವನ್ನು ದಿವಾನ್ ಸಾಹೇಬರವರ ಹಸ್ತದಿಂದ ಮಹಾ ವೈಭವದಿಂದ ನೆರವೇರಿಸಿದರು. ಬೆಂಗಳೂರಿನಲ್ಲಿ [illegible] ಸ್ಥಾಪಿಸಿರುವ 'ಸರಾಪ್ ಒಸಪ್ಪ ಇಂಟರ್ ಕಾಲೇಜಿಗೆ ೧೦,೦೦೦ ರೂಪಾಯಿಗಳನ್ನು ದಾನಮಾಡಿರುವರು. ದಾವಣಗೆರೆಯಲ್ಲಿ ಕಟ್ಟುತ್ತಿರುವ ಅಭಿನವರೇಣುಕ ಮಂದಿರಕ್ಕೆ ಸಾವಿರಾರು ರೂಪಾಯಿಗಳನ್ನು ದಾನಮಾಡಿರುವರು. ಶ್ರೀಜಗದ್ಗುರು ರಂಭಾಪುರೀಪೀಠದ ನೂತನ ಕಟ್ಟಡಕ್ಕೆ ೫ ಸಾವಿರ ರೂಪಾಯಿಗಳನ್ನು ದಾನಮಾಡಿರುವರಲ್ಲದೆ, ಅನೇಕರಿಗೆ ಪ್ರೋತ್ಸಾಹಿಸಿ ಅವರಿಂದಲೂ ಸಾವಿರಾರು ರೂಪಾಯಿಗಳ ದಾನವನ್ನು ಮಾಡಿಸಿರುವರು. ಇದಲ್ಲದೆ ಶ್ರೀಜಗದ್ಗುರು ಕಾಶೀಪೀಠ ಕೇದಾರಪೀಠಕ್ಕೂ ದಾನವನ್ನು ಸಮರ್ಪಿಸಿರುವರು. ಬೆಂಗಳೂರಿನಲ್ಲಿರುವ ಮಹಾಂತಿನಮಠದಲ್ಲಿ ಸುಮಾರು ೧೭೦ ಬಡವಿದ್ಯಾರ್ಥಿಗಳಿಗೆ ಅಲ್ಲಿಯ ಧರ್ಮಾಧಿಕಾರಿಗಳೊಂದೊಡಗೂಡಿ ಅನ್ನದಾನದ ವ್ಯವಸ್ಥೆಯನ್ನು ಸಮರ್ಪಕವಾಗಿ ಇಟ್ಟಿರುವರು. ತಮ್ಮ ಜನ್ಮಸ್ಥಾನವಾದ ನಂದಿಗುಡಿ ಗ್ರಾಮದಲ್ಲಿ ೮೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮಠವನ್ನೂ ದೇವಸ್ಥಾನವನ್ನೂ ಜೀರ್ಣೋದ್ಧಾರಮಾಡಿರುವರಲ್ಲದೆ, ಸದ್ಯಃ ಅಲ್ಲಿ ತಮ್ಮ ತಂದೆ ತಾಯಿಗಳ ಪುಣ್ಯಾಭಿಧಾನದಿಂದ ೩೦ ಸಾವಿರ ರೂಪಾಯಿಗಳ ಖರ್ಚಿನಿಂದ ಒಂದು ಆಸ್ಪತ್ರೆಯನ್ನು ಕಟ್ಟಿಸುತ್ತಲಿರುವರು. ಈ ಆಸ್ಪತ್ರೆಯ ಶಂಕುಸ್ಥಾಪನಮಹೋತ್ಸವವನ್ನು ಈಗ್ಗೆ ಕೆಲವು ದಿವಸಗಳ ಪೂರ್ವದಲ್ಲಿ ವಿದ್ಯಾಮಂತ್ರಿಗಳಾಗಿರುವ ಡಾ|| ಟಿ ಸಿ ಎಂ ರಾಯನ್ ಅವರ ಹಸ್ತದಿಂದ ನೆರವೇರಿಸಿದರು.

೧೯೪೩ರಲ್ಲಿ ದೇಶಮಧ್ಯದಲ್ಲ ಭಯಂಕರ ಆಹಾರಾಭಾವಸ್ಥಿತಿಯುಂಟಾದಾಗ್ಗೆ ತಮ್ಮಲ್ಲಿ ಸ್ಟಾಕ್ ಇದ್ದ ಹತ್ತು ಸಾವಿರ ಚೀಲ ಅಕ್ಕಿಯನ್ನು ಮಿಕ್ಕವರಂತೆ ಲಾಭದ ಕಡೆಗೆ ದೃಷ್ಟಿಯನ್ನಿಡದೆ ಅಸಲಿಗೆ ಕೊಟ್ಟುದಲ್ಲದೆ, ಬೇರೆ ಕಡೆಯಿಂದ ೧೦ ಸಾವಿರ ಚೀಲ ರಾಗಿಯನ್ನು ತರಿಸಿ ಬೆಂಗಳೂರು, ತುಮಕೂರು, ಬನ್ನೂರು ಮೊದಲಾದ ಗ್ರಾಮಗಳಲ್ಲಿ ಡಿಪೋಗಳನ್ನಿಟ್ಟು ಬಡವರನ್ನು ರಕ್ಷಿಸಿ, ಬಡವರ ತಂದೆಯೆಂದು ಪ್ರಸಿದ್ಧರಾದರು.

ತುಮಕೂರಿನಲ್ಲಿರುವ ಸಾರ್ವಜನಿಕ ಕ್ಲಬ್ಬಿಗೆ ೧ ಸಾವಿರ ರೂಪಾಯಿಗಳನ್ನೂ ಬೆಂಗಳೂರಿನಲ್ಲಿರುವ ಆಯುರ್ವೇದ ಆಸ್ಪತ್ರೆಗೆ ೧ ಸಾವಿರ ರೂಪಾಯಿಗಳನ್ನೂ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಕ್ಯಾಂಟೀನ್ ಸಂಡಿಗೆ ೧ ಸಾವಿರ ರೂಪಾಯಿಗಳನ್ನೂ ದಾನಮಾಡಿರುವರು. ಇದೇ ರೀತಿ ಸಾರ್ವಜನಿಕ ಸಂಸ್ಥೆಗಳಿಗೆ ಉದಾರವಾದ ದಾನವನ್ನು ಮಾಡಿ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಿರುವರು.

ಇವರು ಲೌಕಿಕವಾದ ವ್ಯಾಪಾರಗಳಿಗೆ ತಮ್ಮ ಹಣವನ್ನು ವಿನಿಯೋಗಿಸುತ್ತಿರುವಂತೆ, ಧಾರ್ಮಿಕ ಕಾರ್ಯಗಳಿಗೂ ತಮ್ಮ ಆದಾಯವನ್ನು ವಿನಿಯೋಗ ಮಾಡುತ್ತಿರುವರು. ಶ್ರೀಮಾನ್ ರುದ್ರಯ್ಯನವರಿಗೆ ಧರ್ಮವೆಂದರೆ ಪ್ರಾಣ. ಸನಾತನಧರ್ಮಾಭಿಮಾನವು ಅವರ ಪ್ರತಿಯೊಂದು ರಕ್ತದ ಕಣದಲ್ಲಿಯೂ ಪ್ರವಹಿಸುತ್ತಿರುವುದು. ಸನಾತನಧರ್ಮಶಾಸ್ತ್ರಕ್ಕನುಸಾರವಾಗಿ ತಮ್ಮ ಮತಧರ್ಮದಲ್ಲಿ ಬಹಳ ಶ್ರದ್ಧೆಯನ್ನಿಟ್ಟು ನಡೆಯುತ್ತಿರುವರು. ಧರ್ಮಪೀಠಗಳ ವಿಷಯದಲ್ಲಂತೂ ಇವರಿಗೆ ಅಪಾರವಾದ ಭಕ್ತಿ ಇರುವದು. ಧರ್ಮಾಚಾರ್ಯರಲ್ಲಿಟ್ಟಿರುವ ನಿಜವಾದ ಭಕ್ತಿಯೇ ಇವರನ್ನು ಇಷ್ಟು ಉನ್ನತಸ್ಥಿತಿಗೆ ತಂದಿರುವದೆಂದು ಹೇಳುವದು ತಪ್ಪಾಗದು. ಈ ರೀತಿ ಇವರು ಸದಾ ಲೌಕಿಕ ಧರ್ಮದಲ್ಲಿಯೂ ಮತಧರ್ಮದಲ್ಲಿಯೂ ನಿರತರಾಗಿರುವದನ್ನು ಕಂಡು ಧರ್ಮಾವತಾರಿಗಳಾಗಿರುವ ನಮ್ಮ ಮಹಾಪ್ರಭುಗಳು ಇವರಿಗೆ 'ಧರ್ಮಪ್ರಕಾಶ' ಎಂಬ ಪದವಿಯನ್ನು ಅನುಗ್ರಹಿಸಿರುವದು ಸರ್ವತೋಮುಖ [illegible] ಜಗದ್ಗುರು [illegible] ಇನ್ನು ಮುಂದೆಯೂ [illegible] ದಾನ ಕಾರ್ಯಗಳನ್ನು ಮಾಡಿ [illegible] ಪಾತ್ರರಾಗಲೆಂದೂ, [illegible] ಇವರಿಗೂ ಇವರ ಕುಟುಂಬ [illegible] ಸಂಪತ್ [illegible] ಪ್ರಾರ್ಥಿಸುತ್ತೇವೆ.

ಸಂಸ್ಥಾನಗಳ ಬಗ್ಗೆ ವೈಸ್ರಾಯರ ಸಂಧಾನ

[illegible] ಪ್ರಜಾಸಂಖ್ಯೆಯುಳ್ಳ [illegible] ಸಂಸ್ಥಾನಗಳು ಆಗಸ್ಟ್ ೧೫ರ ವೇಳೆಗೆ ಭಾರತ ಯೂನಿಯನ್ನಿಗೆ ಸೇರುವುವೆಂದು ನಿರೀಕ್ಷಿಸಲಾಗಿದೆ. ಈಗ ಒಂದು ಕಡೆ ವೈಸ್ರಾಯರು ಸಂಸ್ಥಾನಗಳ ಶಾಖೆಯೊಂದಿಗೂ ಇನ್ನೊಂದು ಕಡೆ ಸಂಸ್ಥಾನಗಳ ಪ್ರತಿನಿಧಿಗಳು ಮತ್ತು ನರೇಂದ್ರರೊಡನೆಯೂ ಒಳಗೆ ಮುಖ್ಯವಾದ ಚರ್ಚೆಗಳನ್ನು ನಡೆಸುತ್ತಿದ್ದಾರೆ. ಭೌಗೋಳಿಕ ಸಂಬಂಧದ ಆಧಾರದ ಮೇಲೆ ಸಂಸ್ಥಾನಗಳು ಎರಡರಲ್ಲಿ ಒಂದು ಡೊಮಿನಿಯನ್ನಿಗೆ ಸೇರುವಂತೆ ಮಾಡುವುದೇ ಇದರ ಉದ್ದೇಶ.

ವೈಸ್ರಾಯರು ಮೊದಲನೇ ಹಂತದ ಮಾತುಕತೆಗಳನ್ನು ಮುಗಿಸಿದರು. ಬಹುಮಟ್ಟಿಗೆ ಎಲ್ಲ ಪ್ರಮುಖ ಸಂಸ್ಥಾನಗಳವರೊಂದಿಗೂ ಚರ್ಚಿಸಿದ್ದಾರೆ. ಇನ್ನು ಸ್ವಲ್ಪ ದಿನಗಳಲ್ಲೇ ತಿರುವಾಂಕೂರಿನ ದಿವಾನರನ್ನೂ ಭೂಪಾಲ್ ನವಾಬರನ್ನೂ ಕಾಣುವರು.

ಈಗಾಗಲೇ ವೈಸ್ರಾಯ್, ಪಂಡಿತ ಜವಹರಲಾಲ್ ಮತ್ತು ಸರ್ದಾರ್ ಪಟೇಲ್ ಇವರೊಂದಿಗೆ ಚರ್ಚೆ ನಡೆಸಿಹೋಗಿರುವ ಹೈದರಾಬಾದಿನ ಪ್ರತಿನಿಧಿಗಳು ಈ ವಾರದಲ್ಲಿ ಮತ್ತೆ ದೆಹಲಿಗೆ ಬರುವ ನಿರೀಕ್ಷೆ ಇದೆ.

ಎಲ್ಲ ಸಂಸ್ಥಾನಗಳ ಅರಸರನ್ನೂ, ಪ್ರತಿನಿಧಿಗಳನ್ನೂ ಜುಲೈ ೨೫ ನೇ ತಾ|| ನಡೆಯಲಿರುವ ಸಮ್ಮೇಳನಕ್ಕೆ ವೈಸ್ರಾಯರು ಆಹ್ವಾನಿಸಿದ್ದಾರೆ. ಈಗ ನಡೆಸುತ್ತಿರುವ ಪೂರ್ವಭಾವಿ ಚರ್ಚೆಗಳಿಂದ ಸಮ್ಮೇಳನದ ಮುಂದೆ ಬರುವ ಸಮಸ್ಯೆಗಳು ಸುಲಭಗೊಳ್ಳಬಹುದೆಂದು ಊಹಿಸಲಾಗಿದೆ.

ಸಮ್ರಾಟರ ಪ್ರತಿನಿಧಿಗಳಾದ ವೈಸ್ರಾಯರು ಈ ವಿಚಾರದಲ್ಲಿ ಸ್ವತಃ ಆಸಕ್ತಿ ವಹಿಸಿ, ತಮ್ಮ ಕಾಲವನ್ನೆಲ್ಲ ಇದಕ್ಕೇ ವಿನಿಯೋಗಿಸುತ್ತಿದ್ದಾರೆಂದು ತಿಳಿದು ಬಂದಿದೆ. ಎರಡರಲ್ಲಿ ಒಂದು ಡೊಮಿನಿಯನ್ನಿಗೆ ಸೇರುವ ಬಗ್ಗೆ ಸಂಸ್ಥಾನಗಳು ಮಾಡಿಕೊಳ್ಳಬೇಕಾದ ಒಪ್ಪಂದದ ಷರತ್ತುಗಳಿಗೆ ಆಯಾ ಸಂಸ್ಥಾನದ ಮುದ್ರೆಯೊತ್ತಿಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆಯೆಂದು ಊಹಿಸಲಾಗಿದೆ.

ಸಂಸ್ಥಾನಗಳು ಡೊಮಿನಿಯನ್ ರಾಜ್ಯಾಂಗಕ್ಕೆ ಸೇರುವ ವಿಚಾರ, ಸಂಸ್ಥಾನಗಳ ಶಾಖೆಗೊಂದು ಸಲಹಾ ಸಮಿತಿಯನ್ನು ನೇಮಿಸುವುದು, ಜಗಳವನ್ನು ಬಗೆಹರಿಸಲು ಪಂಚಾಯಿತಿ, ಎಕ್ಸ್‌ಟ್ರಾಡಿಷನ್, ಒಂದು ಕಡೆ ಸಂಸ್ಥಾನಗಳಿಗೂ ಮತ್ತು ಡೊಮಿನಿಯನ್ ಸರ್ಕಾರಗಳಿಗೂ, ಇನ್ನೊಂದು ಕಡೆ ಸಂಸ್ಥಾನಗಳಿಗೂ ಮತ್ತು ಪ್ರಾಂತ್ಯಗಳಿಗೂ ಸಂಬಂಧ ಕಲ್ಪಿಸುವ ಏರ್ಪಾಟು ಇವೆಲ್ಲ ಸಮ್ಮೇಳನದ ಕಾರ್ಯಕ್ರಮ ಪಟ್ಟಿಯಲ್ಲಿವೆ.

ಸಂಸ್ಥಾನದ ಜಂಟಿ ಘೋಷಣೆ

ಭಾರತದ ಯೂನಿಯನ್ನಿಗೆ ಸೇರುವ ಬಗ್ಗೆ ಅನೇಕ ಸಂಸ್ಥಾನಗಳು ಇಷ್ಟರಲ್ಲಿಯೇ ಜಂಟಿ ಘೋಷಣೆ ಹೊರಡಿಸುವ ಸಂಭವವಿದೆ. ಫೆಡರೇಷನ್ ಸ್ಥಾಪನೆಗೂ ಮತ್ತು ಸಂಸ್ಥಾನಗಳು ಅದರೊಂದಿಗೆ ಸೇರುವುದಕ್ಕೂ ಸಂಬಂಧಿಸಿದ ೧೯೩೫ ನೇ ಇಂಡಿಯಾ ಸರ್ಕಾರ ಶಾಸನದ ದ್ವಿತೀಯ ಭಾಗವನ್ನು ನ್ಯಾಯಾಂಗ ಶಾಖೆಯ ನಾಲ್ವರು ಅಧಿಕಾರಿಗಳು ಸಿದ್ಧಗೊಳಿಸುವುದರಲ್ಲಿ ನಿರತರಾಗಿದ್ದಾರೆ. ಕರಡು ಪ್ರತಿಯನ್ನು ಸರ್ ಎನ್ ಗೋಪಾಲಸ್ವಾಮಿ ಅಯ್ಯಂಗಾರ್, ಶ್ರೀ ಕೆ ಎಂ ಮುನಷಿ, ಸರ್ ಬಿ ಎನ್ ರಾವ್, ಸರ್ ಅಲ್ಲಾಡಿ ಕೃಷ್ಣಸ್ವಾಮಿಅಯ್ಯರ್—ಈ ನಾಲ್ವರ ಸಮಿತಿಯು ಪರಿಶೀಲಿಸುವುದು. ಪಾಕೀಸ್ಥಾನ್ ಡೊಮಿನಿಯನ್ನಿನ ಸಂಬಂಧದಲ್ಲೂ ಈ ನಡವಳಿಕೆಯನ್ನೇ ಅನುಸರಿಸಲಾಗುತ್ತದೆ. ಈ ತಿಂಗಳ ಅಂತ್ಯದೊಳಗಾಗಿ ಈ ಏರ್ಪಾಟೆಲ್ಲ ಪರಿಪೂರ್ಣವಾಗುವುದು.

ಒಹು ಸಂಖ್ಯೆಯ ಸಂಸ್ಥಾನಗಳ ಮುಂದೆ ಈಗಿರುವ ಸಮಸ್ಯೆ ರಾಜ್ಯಾಂಗ ಸಭೆಗೆ ಸೇರಬೇಕೇ ಸೇರಬಾರದೇ ಎಂಬುದಲ್ಲವೆಂದೂ, ಬ್ರಿಟಿಷ್ ಮಂತ್ರಿಮಂಡಲ ನಿಯೋಗಿಗಳ ಸಲಹೆಯಂತೆ ತತ್ಕ್ಷಣ ಡೊಮಿನಿಯನ್ ವ್ಯವಸ್ಥೆಗೆ ಸೇರಬೇಕೇ ಬೇಡವೇ ಎಂಬುದನ್ನು ಸಂಸ್ಥಾನಗಳು ನಿರ್ಧರಿಸಬೇಕಾಗಿದೆಯೆಂದೂ ಹೇಳಲಾಗಿದೆ. ರಕ್ಷಣೆ, ವಿದೇಶ ವ್ಯವಹಾರ ಮತ್ತು ಸಂಚಾರ ಸೌಕರ್ಯ—ಈ ಬಾಬುಗಳ ಬಗ್ಗೆ ಸಂಸ್ಥಾನಗಳು ಡೊಮಿನಿಯನ್‌ಗಳೊಡನೆ ಸಹಕರಿಸಬೇಕಾಗಿದೆ.

ಭಾರತ ಡೊಮಿನಿಯನ್ನಿಗೆ ಸೇರುವ ಸಂಸ್ಥಾನಗಳು ಫೆಡರಲ್ ಕೇಂದ್ರಕ್ಕೆ ಹೆಚ್ಚು ಹಣ ತೆರಬೇಕಾಗುವುದೆಂದು ಹಲವು ಕ್ಷೇತ್ರಗಳಲ್ಲಿ ತಿಳಿಸಿರುವದು ನಿರಾಧಾರವಾದುದೆಂದು ತಿಳಿದುಬಂದಿದೆ.

ಭಾರತದ ಸ್ವಾತಂತ್ರ್ಯ ಮಸೂದೆಗೆ ಲಾರ್ಡ್ಸ್ ಸಭೆಯ ಅಂಗೀಕಾರ

ಭಾರತದ ಸ್ವಾತಂತ್ರ್ಯ ಮಸೂದೆಗೆ ಲಾರ್ಡ್ಸ್ ಸಭೆಯಲ್ಲಿ ಅಂಗೀಕಾರ ಮುದ್ರೆಬಿತ್ತು.

ಭಾರತದ ಮಾಜಿ ವೈಸ್ರಾಯರೊಬ್ಬರು ಮತ್ತು ಭಾರತದ ಇಬ್ಬರು ಮಾಜಿ ಕಾರ್ಯದರ್ಶಿಗಳು ಮಸೂದೆಗೆ ಬೆಂಬಲವಿತ್ತರು.

ಭಾರತದ ಕಾರ್ಯದರ್ಶಿಗಳು ಮಾತನಾಡುತ್ತ ಬ್ರಿಟಿಷ್ ಪ್ರಭುತ್ವದ ಆಶ್ರಯದಲ್ಲಿ ಸ್ವಾತಂತ್ರ್ಯದ ಹೊಸ ಯುಗವು ಈಗ ಆರಂಭವಾಗುತ್ತಿದೆ.

ಭಾರತದ ಬಗ್ಗೆ ಬ್ರಿಟನ್ನಿನ ಪ್ರೀತಿ ಮತ್ತು ಅದಕ್ಕೆ ಸೇವೆ ಸಲ್ಲಿಸಬೇಕೆಂಬ ಹಂಬಲ ಈಗ ಮೊದಲಿಗಿಂತ ಅಧಿಕವಾಗಿದೆ ಎಂಬುದಾಗಿ ತಿಳಿಸಿದರು.

'ಭಾರತವು ಏಕ ಜನಾಂಗವಾಗಿ ಸ್ವಾತಂತ್ರ್ಯ ಪಡೆಯುವುದರ ಬದಲು ಎರಡು ಜನಾಂಗಗಳಾಗಿ ಸ್ವಾತಂತ್ರ್ಯ ಪಡೆಯಲಿವೆ. ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಆದರೆ, ಇಷ್ಟಕ್ಕೆ ವಿರುದ್ಧವಾಗಿ ಭಾರತವನ್ನು ಅಖಂಡವಾಗಿ ಉಳಿಸಿ ಕಿತ್ತಾಟಕ್ಕೆ ಅವಕಾಶ ಮಾಡುವುದಕ್ಕಿಂತ ಪರಸ್ಪರ ಒಪ್ಪಿಗೆಯಿಂದ ಅದನ್ನು ವಿಭಾಗಮಾಡುವುದೇ ಮೇಲು. ವಿಭಜನೆಯ ಅನನುಕೂಲಗಳು ಮನದಟ್ಟಾದಾಗ, ಭಾರತವು ಮತ್ತೆ ಒಂದಾಗುವುದೆಂದು ನಂಬಲಾಗಿದೆ' ಎಂದರು.

ದೇಶೀಯ ಸಂಸ್ಥಾನಗಳ ಭವಿಷ್ಯ

ದೇಶೀಯ ಸಂಸ್ಥಾನಗಳ ವಿಚಾರ ಕುರಿತು ಮಾತನಾಡುತ್ತಾ ಲಾರ್ಡ್ ಲಿಸ್ಟೋವೆಲ್‌ರವರು ಬ್ರಿಟನ್ನಿನ ನೀತಿಯನ್ನು ಸ್ಪಷ್ಟಗೊಳಿಸಿದರು. ಎರಡು ಡೊಮಿನಿಯನ್‌ಗಳಲ್ಲಿ ಯಾವುದಾದರೊಂದಕ್ಕೆ ಸಂಸ್ಥಾನಗಳು

...ರುವುದು ಕ್ಷೇಮಕರವೆಂದು ಅವರು ತಿಳಿಸಿ, ಈ ...ಕಾರದಲ್ಲಿ ಬ್ರಿಟಿಷ್ ಸರ್ಕಾರವು ತಲೆಹಾಕುವುದು ...ನುಚಿತವೆಂದರು

...ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತಾ ...ರತಕ್ಕೆ ಬ್ರಿಟನ್ ತೆರಬೇಕಾದ ಸ್ಟರ್ಲಿಂಗ್ ನಿಧಿಯಲ್ಲಿ ...ಲ್ಪ ಭಾಗವನ್ನು ಭಾರತದ ಕಾರ್ಯದರ್ಶಿಗಳ ಅಧಿಕಾರಿ ...ಗದವರ ನಿವೃತ್ತಿ ವೇತನಕ್ಕಾಗಿ ಮೀಸಲಾಗಿಡಲಾಗು ...ದೆಂದು ತಿಳಿಸಿದರು

...ಲೇಬರ್ ಸರ್ಕಾರದ ವಿವೇಚನೆ, ಸಾಹಸವನ್ನು ...ಶಂಸಿಸಿ ಲಾರ್ಡ್ ಹ್ಯಾಲಿಫಾಕ್ಸ್, ಲಾರ್ಡ್‌ಸಿಂಹ ...ಕೌಂಟ್ ಸ್ಯಾಮ್ಯುಯಲ್ ಮುಂತಾದವರು ಭಾಷಣ ...ಮಾಡಿದರು

...ವಿರುದ್ಧ ಪಕ್ಷದ ಪರವಾಗಿ ಲಾರ್ಡ್‌ಟೆಂಪಲ್ ವುಡ್ ...ವರು ಮಾತನಾಡುತ್ತ "ಎಷ್ಟು ಬೇಗ ಭಾರತವನ್ನು ...ಭಾಗಿಸಿ ಪೂರ್ಣ ಜವಾಬ್ದಾರಿಯನ್ನು ಭಾರತದ ನಾಯ ...ರ ಮೇಲೆ ಹಾಕಿದರೆ ಬ್ರಿಟನ್ನಿಗೂ ಬ್ರಿಟಿಷ್ ಕಾಮನ್ ...ಲ್ತ್‌ಗೂ ಅಷ್ಟು ಮೇಲು ಬ್ರಿಟನ್ನು ಭಾರತಕ್ಕೆ ಎರಡು ...ನರ್ಘವಸ್ತುಗಳನ್ನು (ಶಾಂತಿ ಮತ್ತು ನ್ಯಾಯ) ಕೊಟ್ಟಿ ...ಕುಬುದನ್ನು ಇತಿಹಾಸವು ಸಾರುತ್ತದೆ ಈ ಮಸೂದೆಯು ...ಂದು ಮಹಾಪ್ರಯೋಗ' ಎಂದರು

ಭಾರತದ ಸ್ವಾತಂತ್ರ್ಯಮಸೂದೆಗೆ ಸಾರ್ವಭೌಮರ ಮುದ್ರೆ ಬಿತ್ತು

...ಇದೇ ತಿಂಗಳು ೧೮ನೆಯ ತಾರೀಖಿನ ದಿವಸ ಬ್ರಿಟಿಷ್ ಸಾರ್ವಭೌಮರು ಭಾರತಸ್ವಾತಂತ್ರ್ಯಕ್ಕೆ ಒಪ್ಪಿ ...ಕು ಮಾಡಿದರು ಅಂದಿನಿಂದ ಭಾರತವು ಸ್ವತಂತ್ರ ...ವಾಯಿತು ಆದರೆ ಭಾರತವು ಹಿಂದುಸ್ಥಾನ ಮತ್ತು ...ಕಿಸ್ಥಾನಗಳೆಂದು ಎರಡು ಭಾಗವಾಯಿತು ಹಿಂದು ...ಸ್ಥಾನಕ್ಕೆ ಈಗಿನ ವೈಸ್ರಾಯರು ಗೌರ್ನರ್ ಜನರಲ್ ...ಗಿಯೂ, ಪಾಕಿಸ್ಥಾನಕ್ಕೆ ಜಿನ್ನಾರವರು ಗೌರ್ನರ್ ...ನರಲ್ ಆಗಿಯೂ ನಿಯಮಿಸಲ್ಪಟ್ಟಿದ್ದಾರೆ

ಕಾಶೀಯಾತ್ರಿಕರಿಗೆ ಸೂಚನೆ

ಒಹಳ ವರ್ಷಗಳ ಮೇಲೆ ಬಂದಿರುವ ಈ ಅಧಿಕ ...ಶ್ರಾವಣಮಾಸದಲ್ಲಿ ಧರ್ಮವಿಧಿ ನೆರವೇರಿಸಲು ವಿಶೇಷ ...ಜನರು ಕಾಶಿಗೆ ಬರತಕ್ಕವರಾಗಿದ್ದಾರೆ ಇಲ್ಲಿ ಎಲ್ಲ ವಿಧ ...ವಾಗಿಯೂ ಶಾಂತಿ ಆರೋಗ್ಯಗಳು ಇವೆ ಬೆಲೆ ಹೆಚ್ಚೇ ...ದೊರತು ಸರ್ವ ಪದಾರ್ಥಗಳೂ ದೊರೆಯುವುವು. ಅನೇ ...ಕರು ಬರೆದುದರಿಂದ ನಿವೇದಿಸಿದೆ

ರಾಮಚಂದ್ರ ಪ್ರಸಾದ
ವ್ಯವಸ್ಥಾಪಕ
ಜಂಗಮವಾಡಿಮಠ ಕಾಶಿ

ಕಾಶೀ ವಿದ್ಯಾರ್ಥಿಗಳಿಗೆ ಸೂಚನೆ

ಕಾವ್ಯ ಮಧ್ಯಮೆಯಲ್ಲಿ ಉತ್ತೀರ್ಣರಾಗಿದ್ದು ನಮಕ ಚಮಕ ಶಿವಪೂಜಾದಿ ಮಂತ್ರಗಳನ್ನು ಬಲ್ಲ ಶಿವಧರ್ಮ ಸನಾತನಾಚಾರಗಳಲ್ಲಿ ಶ್ರದ್ಧೆಯುಳ್ಳ ವೀರಮಾಹೇಶ್ವರ ವಿದ್ಯಾರ್ಥಿಗಳು ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ಪ್ರವೇಶಿಸಬಹುದು ಕನಿಷ್ಠಪಕ್ಷ ಆರು ವರ್ಷಗಳವರೆ ಗಾದರೂ ಶಾಸ್ತ್ರಾಧ್ಯಯನ ಮಾಡಬೇಕಲ್ಲದೆ, ಇಲ್ಲಿಯ ನಿಯಮಗಳನ್ನು ಪಾಲಿಸಬೇಕು ಎಲ್ಲ ವಿದ್ಯಾರ್ಥಿಗಳಿಗೂ ಉಚಿತವಾಗಿ ವಸತಿ ಭೋಜನಗಳ ವ್ಯವಸ್ಥೆಯಿದೆ ವಿಶಿಷ್ಟ ವಿದ್ಯಾರ್ಥಿಗಳಿಗೆ ತಿಂಗಳು ಒಂದಕ್ಕೆ ೩ ರಿಂದ ೭ ರೂ ಗಳ ವರೆಗೆ ಪ್ರತ್ಯೇಕವಾಗಿ ಯೋಗ್ಯತಾಪೇಕ್ಷನ ವನ್ನೂ ಕೊಡಲಾಗುವುದು ಇಲ್ಲಿ ಶ್ರೀ|| ||ಮಹಾ ಸನ್ನಿಧಿಗೆ ಬರೆದು ಸ್ವೀಕೃತಿ ಪಡೆದು ಬರಬೇಕು ಅಧಿಕ ಶ್ರಾವಣ ಶು|| ೧೫ ರೊಳಗಾಗಿ ಬಾರದಿರುವ ಪುರಾತನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವುದಿಲ್ಲ

ರಾಮಚಂದ್ರ ಪ್ರಸಾದ
ವ್ಯವಸ್ಥಾಪಕ,
ಜಂಗಮವಾಡಿಮಠ ಕಾಶಿ

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ತಪೋನುಷ್ಠಾನ ಮತ್ತು ಶ್ರೀಶಿವಮಹಾಪುರಾಣ ಪ್ರವಚನ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ್ರಸನ್ನ ರೇಣುಕ ಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ತುಂಕೂರು ಡಿ|| ಕುಣಿಗಲ್ ತಾಲ್ಲೂ ಎಡೆಯೂರು ಗ್ರಾಮದಲ್ಲಿರುವ ಸಂಸ್ಥಾನ ಮಠದಲ್ಲಿ ಶ್ರೀ ಸರ್ವಜಿತುನಾಮ ಸಂವತ್ಸರದ ಅಧಿಕ, ನಿಜ ಉಭಯ ಶ್ರಾವಣ ಮಾಸಗಳ ಶಿವಪೂಜಾ ತಪೋನುಷ್ಠಾನವನ್ನು ಪ್ರಾರಂಭಿಸಿರುವರು, ಅಲ್ಲದೆ ಪ್ರತಿ ದಿನವೂ ಸಾಯಂಕಾಲ ೭ ಘಂಟೆಯಿಂದ ೯ ಘಂಟೆಯ ವರೆಗೆ ಶ್ರೀ ಮಹಾಸನ್ನಿಧಾನದಲ್ಲಿ, ಆಸ್ಥಾನ ವಿದ್ವಾನ್ ಪುರಾಣರತ್ನ ಬಿದರೆ ಆರಾಧ್ಯಮಠದ ವೇ|| ಪಂ|| ಬಸವ ಲಿಂಗಶಾಸ್ತ್ರಿಗಳವರಿಂದ ಶ್ರೀ ಶಿವಮಹಾಪುರಾಣ ಪ್ರವಚನವು ನಡೆಯುವುದು ಪುಣ್ಯವಿಶೇಷದಿಂದ ಪ್ರಾಪ್ತವಾಗಿರುವ ಈ ಸುಸಂದಿಯನ್ನು ಕಳೆದುಕೊಳ್ಳದೆ ಶ್ರೀಜಗದ್ಗುರುಗಳವರ ದರ್ಶನಾಶೀರ್ವಾದ ಪುರಾಣ ಶ್ರವಣಗಳಲ್ಲಿ ಭಾಗಿಗಳಾಗಿ ಪುಣ್ಯ ಯಶೋಭಾಗಿಗಳಾಗಬೇಕಾಗಿ ಕೋರಿದೆ

ಬಿ ನಂಜುಂಡಪ್ಪ ಏಜೆಂಟ್

ಸೂಚನೆ-ಎಡೆಯೂರಿಗೆ ತಿಪಟೂರು ಮತ್ತು ಹಾಸನ, ಚಿಕ್ಕಮಗಳೂರು ಮಾರ್ಗವಾಗಿ ಬರಲು ಬಸ್ಸಿನ ಸೌಕರ್ಯವುಂಟು ಹುಬ್ಬಳ್ಳಿ ಧಾರವಾಡದ ಕಡೆಯಿಂದ ಬರತಕ್ಕವರು ತಿಪಟೂರು ಮಾರ್ಗವಾಗಿ ಬರಲು ಅನುಕೂಲವಿರುತ್ತದೆ ಹಾಸನದ ಮಾರ್ಗವಾಗಿ ಬರತಕ್ಕವರಿಗೆ ಬಸ್ ಸರ್ವಿಸ್ ಇದೆ

ಅಕ್ಕಲಕೋಟೆಯಲ್ಲಿ ಧಾರ್ಮಿಕ ಸಭೆ

ಸೊಲ್ಲಾಪುರ ಡಿ|| ಸಂಸ್ಥಾನ ಅಕ್ಕಲಕೋಟೆ ನಗರದಲ್ಲಿರುವ ಗುರುಭಕ್ತ ಶಿರೋಮಣಿಗಳಾದ ಶ್ರೀಮಂತ ಸಿದ್ಧಲಿಂಗಪ್ಪ ಕೊಳ್ಳೂರೆ ಇವರು ತಮ್ಮ ಗುರುಗಳಾದ ಶ್ರೀ ಷ|| ಬ್ರ|| ಭೂಸನೂರು ಬೃಹನ್ಮಠದ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳವರನ್ನು ಬರಮಾಡಿಕೊಂಡು ತಾ|| ೨೯-೬-೧೯೪೭ನೇ ದಿವಸ ತಮ್ಮ ಮನೆಯಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನೆರವೇರಿಸಿದರು ಬಾಲಿಕೆಯರು ಜಗದಾಚಾರ್ಯರ ಸ್ತೋತ್ರವನ್ನು ಪಾಡಿದ ವೇಲೆ ಗುರುಶಾಂತಪ್ಪ ಮಲಶೆಟ್ಟಿ ಭೂಸನೂರು ಇವರು ಸದಾಚಾರದ ಬಗ್ಗೆ ಭಾಷಣಮಾಡಿದರು ಆ ಮೇಲೆ ಶ್ರೀಸ್ವಾಮಿಗಳವರು ಗುರು ಮಹತ್ವದ ಬಗ್ಗೆ ಸಪ್ರಮಾಣವಾಗಿ ಒಂದು ಘಂಟೆಯ ವರೆಗೆ ಮನೋಹರವಾದ ಭಾಷಣವನ್ನು ಮಾಡಿ ಸರ್ವರನ್ನೂ ಸಂತೋಷಪಡಿಸಿದರು ಒಳಿಕ ಜಗದಾಚಾರ್ಯರ ಜಯಘೋಷ ದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಮರುದಿವಸ ಶ್ರೀಸಿದ್ಧಲಿಂಗಪ್ಪನವರು ತಮ್ಮ ಗುರುಗಳ ಪವಿತ್ರ ಹಸ್ತದಿಂದ ೩೦ ಬೆಳ್ಳಿಯ ಲಿಂಗೋದ್ಭವ ಮೂರ್ತಿಗಳಿಗೆ ರುದ್ರಾಭಿಷೇಕವನ್ನು ಮಾಡಿಸಿದರು ಆ ಮೇಲೆ ಸರ್ವರೂ ಆ ಮೂರ್ತಿಗಳನ್ನು ಭಕ್ತಿಯಿಂದ ಧರಿಸಿಕೊಂಡರು ಬಳಿಕ ಗಣಾರಾಧನೆಯು ನಡೆಯಿತು ಜಗದಾಚಾರ್ಯರು ಶ್ರೀಸಿದ್ಧಲಿಂಗಪ್ಪನವರಿಗೆ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಓರ್ವ ಗುರುಭಕ್ತ

ದುಃಖವಾರ್ತೆ

ಬೆಳಗಾಂವ ಡಿ|| ಅಥಣಿಗ್ರಾಮದ ಬೃಹನ್ಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರು ಇದೇ ತಿಂಗಳು ೯ನೆಯ ತಾರೀಖು ಬುಧವಾರ ದಿವಸ ಶಿವೈಕ್ಯರಾದ ವಿಷಯವನ್ನು ಬರೆಯಲು ಬಹು ವಿಷಾದವೆನಿಸುತ್ತದೆ ಇವರು ಕಾವ್ಯತೀರ್ಥಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆ ಮೇಲೆ ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ೮-೫ ವರ್ಷಗಳ ವರೆಗೆ ಇದ್ದು ವ್ಯಾಕರಣಾದಿ ಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿರಲು ಅಲ್ಲಿಯ ಹವೆಯು ಅವರ ಶರೀರಕ್ಕೆ ಆಗದೆ ಇದ್ದುದರಿಂದ ಸ್ವಗ್ರಾಮಕ್ಕೆ ವಯಮಾಡಿದರು ಇಲ್ಲಿಗೆ ಬಂದಮೇಲೆ ದೊಡ್ಡದೊಡ್ಡ ಡಾಕ್ಟರರಿಂದ ಔಷಧೋಪಚಾರ ನಡೆಯಿತು ಆದರೂ ಸಾರ್ಥಕವಾಗಲಿಲ್ಲ. ಅವಸಾನ ಕಾಲದವರೆಗೂ ಇವರು ತಮ್ಮ ನಿತ್ಯ ಕರ್ಮವಾದ ಶಿವಪೂಜೆಯನ್ನು ಬಿಡಲಿಲ್ಲ ಪ್ರಾಣವನ್ನು ಬಿಡುವ ಕಾಲಕ್ಕೆ "ಪಂಚಸೂತ್ರಕೃತೋವಂದೇ ಪಂಚಾಚಾರ್ಯಾನ್ ಜಗದ್ಗುರೂನ್" ಎಂಬ ಸ್ತೋತ್ರವನ್ನು ತೊದಲು ನುಡಿಯಿಂದ ಪಠಿಸಿ ಓಂಕಾರವನ್ನು ಪಠಿಸುತ್ತಿರಲು ಇವರ ಆತ್ಮಜ್ಯೋತಿಯು ಲಿಂಗಜ್ಯೋತಿಯಲ್ಲಿ ಬೆರೆಯಿತು ಇಂತಹ ಯೋಗವು ಯಾರಿಗೂ ದೊರೆಯತಕ್ಕದಲ್ಲ ಬಳಿಕ ಇವರ ಲಿಂಗಶರೀರವನ್ನು ದಿವ್ಯವಾದ ಪುಷ್ಪ ವಿಮಾನದಲ್ಲಿ ಮೂರ್ತ ಮಾಡಿಸಿದಮೇಲೆ ನಗರದಲ್ಲೆಲ್ಲಾ ನಾನಾವಿಧವಾದ ವಾದ್ಯಗಳಿಂದಲೂ ಭಜನೆ

(೯ನೇ ಪುಟವನ್ನು ನೋಡಿ)

ಸ್ವೀಕಾರ

ಬೆಳಗಾಂವ ಡಿ|| ಸತ್ತಿಗೇರಿ ಗ್ರಾಮದಲ್ಲಿರುವ ಮ|| ರಾ|| ಬಾಳಯ್ಯ ಮಠಪತ್ತಿ ಇವರ ಮಗನ ಲಗ್ನದಲ್ಲಿ ಪ್ರಭಾಪೋಷಣಕ್ಯೋಸ್ಕರ ಸಮರ್ಪಿಸಿದ 1 ರೂಪಾಯಿ ಮ|| ರಾ|| ನಾಡಗೌಡರ ಬಸವಂತಪ್ಪನವರ ಮಗನ ಲಗ್ನದಲ್ಲಿ ಸಮರ್ಪಿಸಿದ 1 ರೂಪಾಯಿ ಮ|| ರಾ|| ಬಗನಾಳ ಬಸವಂತಪ್ಪನವರ ಮಗನ ಲಗ್ನದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಸತ್ತಿಗೇರಿ ಬೃಹನ್ಮಠದ ಶ್ರೀಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಹೊಸಪೇಟೆ ತಾ|| ಕಾಕಬಾಳಗ್ರಾಮದಲ್ಲಿರುವ ಮ|| ರಾ|| ವಂದವಾಗಲಿ ವೀರಪ್ಪನವರ ಎರಡನೆಯ ಮಗ ಚಿ|| ಗುರುಪಾದಪ್ಪನಿಗೂ ದಾವಣಗೆರೆ ತಾ|| ಭೀಮನರಿ ಗ್ರಾಮದ ಮ|| ರಾ|| ಅಳಾಳಿ ಕೆಂಚನಗೌಡರ ಪುತ್ರಿ ಚಿ|| ಸೌ|| ಯಲ್ಲಮ್ಮನಿಗೂ ಮತ್ತು ಮೋಲ್ಯಂಡವರ ೩ನೆಯ ಮಗ ಚಿ|| ಸಂಪಣ್ಣನಿಗೂ ಕೊಪ್ಪಳ ತಾ|| ಮಂಡಲಗಿರಿ ಗ್ರಾಮದ ಮ|| ರಾ|| ಬಿನ್ನಾಳು ಗೂಳಪ್ಪನವರ ಪುತ್ರಿ ಚಿ|| ಸೌ|| ದೇವಮ್ಮನಿಗೂ ನೆರವೇರಿದ ವಿವಾಹಸಮಯದಲ್ಲಿ ಗರ್ಲ್‌ಸ್ಕೂಲು ಮಾಸ್ಟರ್ ವೇ|| ಗುರುಪಾದಶಾಸ್ತ್ರಿಗಳ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಮ|| ರಾ|| ಸಿಂಗಮ್ಮನವರ ಒಸಪ್ಪನವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಡಿ|| ಅಥಣಿ ಹಿರೇಮಠದ ಶ್ರೀಪಟ್ಟದ ಸ್ವಾಮಿಗಳವರು ಶಿವಾಧೀನರಾದ ಸಮಯದಲ್ಲಿ ವೇ|| ಲೇಶಪ್ಪನಮಠದ ಚನ್ನಬಸವಯ್ಯನವರ ಸೂಚನೆಯಂತೆ ಮ|| ರಾ|| ಶಿವಣಗಿ ದುಂಡಪ್ಪನವರು ಮತ್ತು ಕುಂಬಾರ ಭೀಮಪ್ಪನವರು ಭಕ್ತಿಯಿಂದ ಪ್ರಭಾಪೋಷಣಕ್ಯೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮಂಗಳೂರು ಆರಳೆಲೆಮಠದ ವೇ|| ತೋಟಪ್ಪಯ್ಯಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಸೊಲ್ಲಾಪೂರ ಡಿ|| ಅಕ್ಕಲಕೋಟೆ ಸಂಸ್ಥಾನದಲ್ಲಿರುವ ಶ್ರೀಮಂತ ಕೊಳ್ಳೂರೆ ಸಿದ್ಧಲಿಂಗಪ್ಪನವರು ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಅವರ ವಂಶಗುರುಗಳಾದ ಭೂಸನೂರು ಬೃಹನ್ಮಠದ ಶ್ರೀಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಚಿಕ್ಕಮಗಳೂರು ತಾ|| ವಸ್ತಾರೆ ಹೋಬಳಿ ಕಸಬಾ ಪಟೇಲ್ ತಿಪ್ಪಣ್ಣಗೌಡರು ತಾ|| ೩೦-೬-೪೭ನೆಯ ಸೋಮವಾರದ ದಿವಸ ತಮ್ಮ ೨೮ನೆಯ ವಯಸ್ಸಿನಲ್ಲಿ ಹೃದಯರೋಗದಿಂದ ಶಿವಾಧೀನರಾದ ಸಮಯದಲ್ಲಿ ವೇ|| ಕಲ್ಲಹಳ್ಳಿಮಠದ ಸ್ವಾಮಿಗಳು ತೆಗೆಯಿಸಿದ 1 ರೂಪಾಯಿ ವಸ್ತಾರೆ ಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತದೆ

ಬೆಳಗಾಂವ ಡಿ|| ಸತ್ತಿಗೇರಿ ಗ್ರಾಮದಲ್ಲಿರುವ ಮ|| ರಾ|| ಕುಂಬಾರ ಪರ್ವತಪ್ಪನವರ ತಾಯಿಯವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಯೋಸ್ಕರ ಸಮರ್ಪಿಸಿದ 1 ರೂಪಾಯಿ ಸತ್ತಿಗೇರಿ ಬೃಹನ್ಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಗಳಿಂದಲೂ ಮಹೋತ್ಸವವು ನೆರವೇರಿತು ಈ ಉತ್ಸವಕ್ಕೆ ೪-೫ ಸಾವಿರ ಜನರು ಸೇರಿದ್ದರು ಅಲ್ಲದೆ ತೇರದಾಳ, ಮಹಿಶಾಳ, ಬೆಳ್ಳಂಕಿ, ಕವಟೆ ಗ್ರಾಮಗಳ ಶ್ರೀ ಪಟ್ಟದ ಸಾಮಿಗಳವರೂ, ಮೋಟಗಿ, ಗೋಟಖಿಂಡಿ ಬೀಳೂರು ಮೊದಲಾದ ಗ್ರಾಮಗಳ ವಿರಕ್ತ ಮಠದ ಶ್ರೀ ಸ್ವಾಮಿಗಳವರೂ ಆಗಮಿಸಿದ್ದರು ಈ ಉತ್ಸವದ ವ್ಯವಸ್ಥೆಯನ್ನು ಮ|| ರಾ|| ಭೀಮಪ್ಪಣ್ಣ ಕುಂಬಾರ ಇವರು ಸಮರ್ಪಕವಾಗಿ ಇಟ್ಟಿದ್ದರು ಶ್ರೀಮಂತ ಶಿವಣಗಿ ದುಂಡಪ್ಪಣ್ಣನವರು ಭಕ್ತಿಪರವಶರಾಗಿ ಮಾಹೇಶ್ವರರಿಗೂ ಭಿಕ್ಷುಕರಿಗೂ ಯಥೇಷ್ಟವಾಗಿ ದಾನಮಾಡಿದರು ಇಲ್ಲಿಯ ಗಚ್ಚಿನಮಠದ ಶ್ರೀಮನ್ನಿರಂಜನ ಚನ್ನಬಸವಸ್ವಾಮಿಗಳವರು ವಿಮಾನವು ತಮ್ಮ ಮಠದ ಮುಂದೆ ಬಂದ ಕೂಡಲೆ ಅದನ್ನು ಇಳಿಸಿ ಮಂಗಳಾರತಿಯನ್ನು ಮಾಡಿಸಿ ಅವರ ಸದ್ಗುಣ ಸದಾಚಾರಗಳನ್ನು ಕೊಂಡಾಡಿ ಮಹಾ ದುಃಖದಿಂದ ಕಣ್ಣೀರು ಸುರಿಸಿದರು ಇದೇ ರೀತಿ ಗೌರವದೊಡನೆ ಉತ್ಸವವು ಸಾಗಿ ಶಿವೈಕ್ಯ ಶ್ರೀಗಳವರ ತೋಟದಲ್ಲಿರುವ ಬಿಲ್ವವೃಕ್ಷದ ಕೆಳಗೆ ರಚಿಸಲ್ಪಟ್ಟ ಸಮಾಧಿಯಲ್ಲಿ ಲಿಂಗಶರೀರವು ಸ್ಥಾಪಿಸಲ್ಪಟ್ಟಿತು ಅಂತ್ಯೇಷ್ಟಿ ಕ್ರಿಯೆಗಳು ತೇರದಾಳ ಬೃಹನ್ಮಠದ ಶ್ರೀಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿದವು ಶ್ರೀಗಳವರಿಗೆ ಅಂತ್ಯ ಸಮಯದಲ್ಲಿ ೩೮ ವರ್ಷಗಳಾಗಿದ್ದವು ಇವರ ಸದ್ಗುಣಗಳಿಗೆ ಸರ್ವರೂ ಮೆಚ್ಚಿ ಇವರಲ್ಲಿ ಅಪಾರವಾದ ಭಕ್ತಿಯನ್ನಿಟ್ಟಿದ್ದರು ಇಂತಹ ಮಹಾ ವ್ಯಕ್ತಿಯನ್ನು ಕಳೆದುಕೊಂಡುದು ವೀರಶೈವಸಮಾಜದ ದುರ್ದೈವವಲ್ಲದೆ ಬೇರೆ ಅಲ್ಲ ಶ್ರೀಜಗದಾಚಾರ್ಯರು ಶ್ರೀಗಳವರ ಆತ್ಮಕ್ಕೆ ಶಾಂತಿಯನ್ನೂ ಅವರ ಸಹೋದರರಾದ ವೇ|| ಬಸವಲಿಂಗಯ್ಯನವರಿಗೂ ಶಿಷ್ಯಮಂಡಳಿಗೂ ಭಕ್ತಮಂಡಲಿಗೂ ದುಃಖಶಮನವನ್ನೂ ಉಂಟು ಮಾಡಲೆಂದು ಪ್ರಾರ್ಥಿಸುತ್ತೇನೆ

ಬಸವಯ್ಯ ಹಿರೇಮಠ ತೇರದಾಳ ಸಾ|| ಅವಣಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಕದ್ಯ! ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
,, ,, , ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ...	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ ..	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) .	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) ..	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ .	೪ ಆಣೆ
ವೈದಿಕನಾಮ್ನಾಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚಿಕ್ಕಪ್ರತಿ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ..	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल) ..	८ आ
नंदिकेश्वरकारिका (संस्कृत) . ..	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

[ಸ್ಥ]ಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

[ಸಂ]ಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೮ನೇ ಜುಲೈ ೧೯೪೭ | ಸಂಚಿಕೆ ೧೪

ಶ್ರೀಕಾಶೀಪೀಠದ "ಜ್ಞಾನಮಂದಿರ"ಕ್ಕೆ ಮಹಾದಾನಗಳು

೧ ಸೊಲ್ಲಾಪುರ ಜಿಲ್ಲಾ ಅಕಲೂಜ್ ನಿವಾಸಿನಿ ಶ್ರೀಮತಿ ಪಾರೂಬಾಯಿ ನಾರಾಯಣಪಾಟಣೇ ಇವರು ಕಾಶೀ ಶ್ರೀ ಜಗದ್ಗುರುಗಳ ಉಪದೇಶಾಮೃತದಿಂದ ತೃಪ್ತಿಹೊಂದಿ ಪೀಠದಲ್ಲಿಯ ಅನ್ನದಾನ ವಿದ್ಯಾದಾನ ಜ್ಞಾನಮಂದಿರದ ವೈಭವಗಳನ್ನು ನೋಡಿ ಸಂತೋಷದಿಂದ ನಾಲ್ಕು ಸಾವಿರ ರೂಪಾಯಿಗಳನ್ನು ಜ್ಞಾನಮಂದಿರ ಮುದ್ರಣಾಲಯ ಮುಂತಾದ ವುಗಳಿಗಾಗಿ ಸಮರ್ಪಿಸಿದ್ದಾರೆ ಶ್ರೀ ಪಾರೂಬಾಯಿಯವರ ಔದಾರ್ಯವು ಬಹು ಮಹತ್ವವುಳ್ಳುದಾಗಿದ್ದು ಅವರ ಮನಸ್ಸು ಧರ್ಮ ಸದಾಚಾರಗಳಿಂದ ಪರಿಪೂರ್ಣವಾಗಿದೆ

೨ ಸೊಲ್ಲಾಪುರದ ಪ್ರಸಿದ್ಧ ಶ್ರೀಮಂತರೂ ಗುರುಧರ್ಮನಿರತರೂ, ಆದ ಶ್ರೀಮಂತ ಮಲ್ಲಿಕಾರ್ಜುನಪ್ಪ ಅಪ್ಪಾರಾವ್ ಗಂಭೀರೆ ಅವರು ಜ್ಞಾನಮಂದಿರಕ್ಕಾಗಿ ೧೦೦೧ ರೂಗಳನ್ನು ಸಮರ್ಪಿಸಿದ್ದಾರೆ ಶ್ರೀ ಗಂಭೀರೆಯವರು ೨೦ ೨೫ ವರ್ಷಗಳಿಂದಲೂ ಮಹಾಪೀಠದ ಸೇವೆಯನ್ನು ಮಾಡುತ್ತಿರುವುದು ಪ್ರಸಿದ್ಧವೇ ಅವರಿಂದ ಇನ್ನೂ ಅನೇಕ ಧರ್ಮಕಾರ್ಯಗಳು ನೆರವೇರಲಿವೆ

೩ ನಾರಾಯಣ ಪೇಟೆಯ ಸುಪ್ರಸಿದ್ಧ ವ್ಯಾಪಾರಿಗಳಾದ ಕೈ॥ ವಾ॥ ಶ್ರೀಮಂತ ಗಂದಚೆನ್ನಬಸವಪ್ಪನವರ ಧರ್ಮಪತ್ನಿಯವರಾದ ಶ್ರೀಮತಿ ರೇವಮ್ಮನವರು ಹಿಂದೆ [ಎಣೆ]ಯಿಲ್ಲದ ಸಾಲದಿಂದ ಸೇವೆ ಮಾಡಿರುವುದಲ್ಲದೆ [ಈಗ] ೧೦೦೧ ರೂಗಳನ್ನು ಜ್ಞಾನಮಂದಿರಕ್ಕಾಗಿ [ಸಮ]ರ್ಪಿಸಿದ್ದಾರೆ ಶ್ರೀಮಹಾಸನ್ನಿಧಿಯಲ್ಲಿ ಶ್ರೀ ರೇವಮ್ಮನವರ ಭಕ್ತಿ ವಿಶ್ವಾಸಗಳು ಪೂರ್ವಾಶ್ರಮದಿಂದ ಈವರೆಗೂ [ಅಚ]ಲವಾಗಿರುವುವಲ್ಲದೆ ಪೀಠಸೇವೆಯಲ್ಲಿ ಅವರು ಸದಾ [ಸಿ]ದ್ಧರಾಗಿದ್ದಾರೆ

ಈ ಮೇಲಿನ ತ್ರಿಮೂರ್ತಿಗಳ ಮಹಾದಾನವು ಬಹಳ ಮಹತ್ವವುಳ್ಳುದಾಗಿದೆಯಲ್ಲದ ಇತರರಿಗೆ ಮಾರ್ಗ[ದರ್ಶ]ಕವಾಗಿರುವದು

೧೦೦೧ ರೂ. ದಾತೃಗಳು

ಶ್ರೀ ಪಾರೂಬಾಯಿ ಪಾಟಣೆ ಅಕಲೂಜು, ಶ್ರೀ [ರೇ]ವಮ್ಮನವರು ಗಂದೇ ನಾರಾಯಣಪೇಟೆ, ಶ್ರೀ ಮಲ್ಲಿ[ಕಾ]ರ್ಜುನಪ್ಪನವರು ಗಂಭೀರೆ ಸೊಲ್ಲಾಪುರ

೨೦೧ ರೂ. ದಾತೃಗಳು

ಆಸ್ಪಲ್ಲಿ ವೀರಭದ್ರಪ್ಪನವರು ಸೈದಾಪುರ

೧೦೧ ರೂ. ದಾತೃಗಳು

[ಕ]ಪೆರುವಗಾಲ್ಲ ಖಂಡೇರಾವ್ ಜಡಚರ್ಲಾ, ಸಾಧು [ಗ]ಮನಗೌಡರು ರಾಜಾಪೂರ್, ತ್ರ್ಯಂಬಕ ಸುಪಟುಶೇಟ್ [ಕ]ರು ಪೊಷೋರ್, ಬ್ಯಾಡಗಿ ಚನ್ನವೀರಪ್ಪನವರು [..]ಕೆರೆ, ಹೆಚ್. ಜಿ ಶಿವಶಂಕರಯ್ಯನವರು ಅರಸಿಕೆರೆ, ಮಿಡಿಜಿಲ್ಲೆ ಬಸಪ್ಪನವರು ಮೂಸಾಯಿಪೇಟೆ, ದಿಗಂಬರ ಮಠದ ಲಿಂಗಯ್ಯನವರು ಗದ್ವಾಲ್ ನಿರ್ವಾಣ ರುದ್ರ ಪಶುಪತಿಸ್ವಾಮಿಗಳು ಕೋಳಿಕೆರ, ಲಿಂಗಪ್ಪಾರಾವು ಚಂಪ್ರಶೆಟ್ ಉಚಲೇ ಕಣಕವಲಿ ಛತ್ರದ ಬಸೆಟ್ಟೆಪ್ಪನವರ ಸ್ಮೃತಿ ಕನಕಗಿರಿ ಕಡೂರು ಎಂ ಬಸಪ್ಪನವರು ಬೀರೂರು ಹಿರಿಮಠದ ವೀರಯ್ಯನವರು ಜೆಬರ್ಸ್ಲೂರು, ಸಿದ್ಧರಾಮ ಶಾಸ್ತ್ರಿಗಳು ಶಿಖರದ ರಾಯಚೂರು

ಇನ್ನೂ ಅನೇಕ ಜನ ಮಹನೀಯರು ಅನೇಕ ವಿಧವಾಗಿ ದಾನದ ಸಂಕಲ್ಪವನ್ನು ಮಾಡಿದ್ದಾರೆ ಅವರೆಲ್ಲರೂ ಆದಷ್ಟು ಬೇಗನೆ ಜ್ಞಾನಮಂದಿರಕ್ಕಾಗಿ ದಾನದ್ರವ್ಯಗಳನ್ನು ಸಮರ್ಪಿಸಬೇಕು

ಶ್ರೀ ಮೈಸೂರು ಮಹಾಪ್ರಭುಗಳ ದಾನ

ಶ್ರೀ ಮೈಸೂರ ಮಹಾಪ್ರಭುಗಳು ಪ್ರಾಚೀನ ಕಾಲದಿಂದಲೂ ಕಾಶೀವಿಶ್ವಾರಾಧ್ಯ ಪೀಠದಲ್ಲಿ ಭಕ್ತಿ ಶ್ರದ್ಧೆಗಳನ್ನಿಟ್ಟಿರುವ ವಿಷಯವು ಶ್ರೀ ಮುಮ್ಮಡಿ ಕೃಷ್ಣರಾಜ ಮಹಾಪ್ರಭುಗಳು ಬರೆಯಿಸಿಕೊಟ್ಟಿರುವ ತಾಮ್ರಶಾಸನದಂತೆ ಕಾಶೀಪೀಠಕ್ಕೆ ಪ್ರತಿ ವರ್ಷವು ಮಹಾದಕ್ಷಿಣೆಯು ಸಲ್ಲುತ್ತಿರುವ ವಿಷಯವೂ ಜಗತ್ಪ್ರಸಿದ್ಧವಾಗಿದೆ ಸದ್ಯ ಆಳುತ್ತಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮಹಾಪ್ರಭುಗಳವರು ಸನಾತನ ಹಿಂದೂ ಧರ್ಮೋದ್ಧಾರಕ್ಕಾಗಿ ಪ್ರಕಟಿಸುತ್ತಿರುವ ಕೆಲವು ಅಮೂಲ್ಯ ಗ್ರಂಥಗಳನ್ನು ಜ್ಞಾನಮಂದಿರಕ್ಕೆ ಕಳುಹಿಸಿ ಮಹೋಪಕಾರ ಮಾಡಿದ್ದಾರೆ,

ಶಿಕಾರಿಪುರದ ಎಸ್ ವಿ ರಸ್ಪಶಾಸ್ತ್ರಿಗಳು ಅನೇಕ ಪ್ರಾಚೀನ ತಾಳೆಯೋಲೆಯ ಪುಸ್ತಕಗಳನ್ನು ಕಾಶೀಗುರು ಶ್ರೀಗಳ ದ್ವಾರಾ ಕಳುಹಿಸಿರುತ್ತಾರೆ

ಜ್ಞಾನಮಂದಿರದ ಪ್ರೋತ್ಸಾಹಕರು

ಈ ಜ್ಞಾನಮಂದಿರದ ಅಭಿವೃದ್ಧಿಗಾಗಿ ಶ್ರೀ ಷ ಬ್ರ ಸಂ॥ ಚೆನ್ನವೀರಶಿವಾಚಾರ್ಯಸ್ವಾಮಿಗಳು ಸಾವಿರದೇವರು ಬಿಚ್ಚಾಲಿ, ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು, ವೇ॥ ಮಲ್ಲಿಕಾರ್ಜುನಾರಾಧ್ಯರು ತಿಪಟೂರು ಶ್ರೀ ಷ॥ ಬ್ರ॥ ಪಂಚಾಕ್ಷರ ಶಿವಾಚಾರ್ಯರು ಕನಕಗಿರಿ ಶ್ರೀ ಷ॥ ಬ್ರ॥ ಮುರುಗೇಂದ್ರ ಶಿವಾಚಾರ್ಯರು ಕೊಣ್ಣೂರು, ಶ್ರೀಮಂತ ಗುಗ್ರಿಯುಚ್ಚಪ್ಪನವರು ಹೂವಿನಹಡಗಲಿ, ವೇ ಸ್ಥಾವರದ ನೀಲಯ್ಯನವರು ಪುಲಿಮಾಮಿಡಿ, ಶ್ರೀಮಂತ ಪಾಸ್ಗಂಟಿ ನಾಗಪ್ಪನವರು ಜಡಚರ್ಲಾ ಮುಂತಾದವರು ಶ್ರೀಮಂತರಿಗೆ ಪ್ರೋತ್ಸಾಹಿಸಿ ಉಪಕಾರ ಮಾಡಿದ್ದಾರೆ

ಇವರೆಲ್ಲರಿಗೂ ಶ್ರೀ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರು ಸರ್ವ ಸಂಪತ್ಸಮೃದ್ಧಿಯನ್ನನುಗ್ರಹಿಸಲಿ

ಜ್ಞಾನಮಂದಿರದ ಪ್ರೋತ್ಸಾಹಕರು

ಶ್ರೀ ವಿಶ್ವಾರಾಧ್ಯರ ಕೃಪೆಯಿಂದ ಜ್ಞಾನಮಂದಿರದ ಎರಡಂತಸ್ತುಗಳು ಸುಂದರವಾಗಿ ಸಿದ್ಧವಾಗಿವೆ. ಮಂದಿರದಲ್ಲಿ ನಾಲ್ವತ್ತು ಕವಾಟ (ಬೀರೂ)ಗಳಲ್ಲಿ ಗ್ರಂಥರತ್ನಗಳು ಮೆರೆಯುತ್ತಿದ್ದು ೫೦-೬೦ ವೃತ್ತ ಪತ್ರಿಕೆಗಳು ಬರುತ್ತಿವೆ ಇದರ ವ್ಯವಸ್ಥೆಗಾಗಿ ಓರ್ವ ಪಂಡಿತರೂ ನಿಯುಕ್ತರಾಗಿದ್ದಾರೆ ಪ್ರಾಚೀನ ಗ್ರಂಥಗಳ ಸಂಶೋಧನಾದಿಗಳೂ ನಡೆದಿವೆ ಕನ್ನಡ ಹಿಂದೀ ಮರಾಠಿ ತೆಲುಗು ಭಾಷೆಗಳಲ್ಲಿ ಪತ್ರಿಕೆಯನ್ನು ಪ್ರಕಟಿಸುವ ಯತ್ನವಾಗಿದೆ ಕನ್ನಡ ಟೈಪೂ ಕೂಡ ಬಂದಿವೆ ಪ್ರೆಸ್ಸಿನ ಆಲಯವೂ ಸಿದ್ಧವಾಗಿದೆ, ಇಂತಹ ಮಹಾಯೋಜನೆಗಳಿಗೆಲ್ಲ ಮೂಲಾಧಾರದಂತಿರುವ ಜ್ಞಾನಮಂದಿರಕ್ಕಾಗಿ ಒಟ್ಟು ೨೮ ಸಾವಿರ ರೂಗಳು ವಿನಿಯೋಗವಾಗಿವೆಯೆಂದರೆ ಆಶ್ಚರ್ಯವೇನೂ ಅಲ್ಲ!

ಮಹಾಜನರಿಂದ ಸುಮಾರು ೧೮ ಸಾವಿರದವರೆಗೆ ದ್ರವ್ಯ ದೊರೆತಿದೆ ಉಳಿದ ಹಣವೂ ದೊರೆಯಬಹುದು ಸಮಾಜಕ್ಕೂ ಧರ್ಮಕ್ಕೂ ಮಹೋಪಕಾರ ಮಾಡಲಿರುವ ಜ್ಞಾನಮಂದಿರದಲ್ಲಿ ತಮ್ಮ ಶುಭನಾಮಗಳು ಶಾಶ್ವತಕಾಲ ಪ್ರಕಾಶಿಸುವವೆಂಬ ವಿಷಯವನ್ನು ದಾತೃಗಳು ಸ್ಮರಣದಲ್ಲಿರಿಸಿ ಬೇಗನೆ ಅವಶಿಷ್ಟ ದಾನ ಕಾರ್ಯವನ್ನು ಪೂರ್ಣಗೊಳಿಸಬೇಕು ಜ್ಞಾನಮಂದಿರದ ಸವಿಸ್ತಾರ ಪರಿಚಯವುಳ್ಳ ಸಚಿತ್ರ ದೊಡ್ಡ ಪತ್ರಿಕೆಯನ್ನು ಬೇಕಾದವರಿಗೆ ಕಳುಹಿಸುವೆವು

ರಾಮಚಂದ್ರ ಪ್ರಸಾದ
ವ್ಯವಸ್ಥಾಪಕ ಜಂಗಮ ವಾಡಿಮಠ ಕಾಶಿ

ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಹೈದ್ರಾಬಾದು ಟಪ್ಪಾಲ್ ವ್ಯವಸ್ಥೆ

ಹೈದ್ರಾಬಾದು ಟಪ್ಪಾಲ್ ವ್ಯವಸ್ಥೆಯ ಒಳ್ಳಾವಣೆಗಾಗಿ ೬೫೧೦೦೦ ರೂಗಳನ್ನು ನಿಜಾಮರ ಸರ್ಕಾರವು ಮಂಜೂರುಮಾಡಿದೆ ಈ ಯೋಜನೆಯಂತೆ ಐದು ವರ್ಷಗಳಲ್ಲಿ, ೬೫ ಹೊಸ ಪೋಸ್ಟಾಫೀಸುಗಳನ್ನೂ, ರೈಲ್ವೆ ಮಾರ್ಗಗಳಲ್ಲಿ ೧೮ ಹೊಸ 'ಸಾರ್ಟಿಂಗ್' ಆಫೀಸುಗಳನ್ನೂ ಸ್ಥಾಪಿಸಲಾಗುವುದು

ಸ್ವೀಕಾರ

ಶಿವಮೊಗ್ಗಾ ಡಿ॥ ನ್ಯಾಮತಿ ಗ್ರಾಮದಲ್ಲಿರುವ ಮ॥ ರಾ॥ ಸಾಗರದ ಹಾಲಪ್ಪನವರ ಮಕ್ಕಳು ಬಸವಲಿಂಗಪ್ಪನವರ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ॥ ರಾ॥ ಜೀರಿಗಿ ವೀರಭದ್ರಪ್ಪನವರ ದ್ವಾರಾ ತಲ್ಪಿರುತ್ತದೆ

ಶಿವಮೊಗ್ಗಾ ಡಿ॥ ನ್ಯಾಮತಿ ಗ್ರಾಮದಲ್ಲಿ ಮ॥ ರಾ॥ ಬಿದರಕಟ್ಟೆ ವೀರಭದ್ರಪ್ಪನವರ ಅತ್ತೆಯವರಾದ ಶ್ರೀಮತಿ ಬಸಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ಮ॥ ರಾ॥ ಜೀರಿಗಿ ವೀರಭದ್ರಪ್ಪನವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಪಂಚಾಚಾರ್ಯಪ್ರಭಾ.

೧೯೪೭ನೆಯ ಜುಲೈ ತಾ॥ ೨೮ನೇ ಸೋಮವಾರ

ಜಾಗಟಗೇರಿ ಚನ್ನವೀರಪ್ಪಯ್ಯನವರ ನಿಧನ

ಬಳ್ಳಾರಿ ಡಿ॥ ಕೊಟ್ಟೂರು ಗ್ರಾಮದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ವೇ॥ ಜಾಗಟಗೇರಿ ಚನ್ನವೀರಪ್ಪಯ್ಯನವರು ಇದೇ ತಿಂಗಳು ೨೫ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಒಳ್ಳೆ ಸಾತ್ವಿಕಸ್ವಭಾವದವರಾಗಿದ್ದು ಸದಾಚಾರಸಂಪನ್ನರಾಗಿದ್ದರಲ್ಲದೆ ಮಹಾ ಗುರುಪೀಠಾಭಿಮಾನಿಗಳಾಗಿದ್ದರು. ಇವರು ತಮ್ಮ ಗ್ರಾಮದಲ್ಲಿ ಸುಮಾರು ೨೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ದೊಡ್ಡ ದೇವಾಲಯವನ್ನು ಶಿಲೆಯಿಂದ ಬಹು ಸುಂದರವಾಗಿ ಕಟ್ಟಿಸಿ ಅಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಪ್ರತಿಷ್ಠೆಮಾಡಿಸಿರುವರಲ್ಲದೆ ಆಚಾರ್ಯ ಭಗವತ್ಪಾದರ ಪೂಜೆಯು ಚಿರಕಾಲವಾಗಿ ನಡೆಯುವಂತೆ ಪೂಜಾದಿಗಳ ವಿನಿಯೋಗಕ್ಕಾಗಿ ಭೂಮಿಯನ್ನೂ ಸಹ ಸಮರ್ಪಿಸಿರುವರು. ಇದೇ ರೀತಿ ಇವರು ಅನೇಕ ಧರ್ಮಕಾರ್ಯಗಳನ್ನು ಮಾಡಿರುವರು. ಅವಸಾನಕಾಲದಲ್ಲಿ ಇವರಿಗೆ ೭ ವರ್ಷಗಳಾಗಿದ್ದವು. ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಹೊಸ ಕಾಗದದ ಕಾರ್ಖಾನೆ

ಬೆಂಗಳೂರು ನಗರದಲ್ಲಿರುವ ಮಿ॥ ವೆಲ್ ಅಂಡ್ ಕಂಪನಿಯವರು ಕೊಡಗು ಪ್ರಾಂತದಲ್ಲಿ ಹೊಸದಾಗಿ ಒಂದು ದೊಡ್ಡ ಕಾಗದದ ಕಾರ್ಖಾನೆಯನ್ನು ಸ್ಥಾಪಿಸುವ ಮಹಾಕಾರ್ಯದಲ್ಲಿ ತೊಡಗಿದ್ದಾರೆಂಬ ವಿಷಯವನ್ನು ತಿಳಿದು ಅತ್ಯಂತ ಸಂತೋಷವೆನಿಸುತ್ತದೆ. ಈ ಕಂಪನಿಯು ಇಷ್ಟರಲ್ಲಿಯೇ ರಜಿಸ್ಟರ್ ಆಗುವುದೆಂದು ತಿಳಿಯುತ್ತದೆ. ಕೊಡಗಿನಲ್ಲಿ ಪೇಪರ್ ಮಿಲ್ಲು ಸ್ಥಾಪಿಸಲ್ಪಟ್ಟರೆ ಅದರಿಂದ ದಕ್ಷಿಣ ಭಾರತಕ್ಕೆ ದೊಡ್ಡ ಉಪಕಾರವಾಗುವದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಜಗದೀಶ್ವರನ ಅನುಗ್ರಹದಿಂದ ಈ ಮಹೋದ್ಯಮವು ಯಶಸ್ವಿಯಾಗಿ ನೆರವೇರಲೆಂದು ಪ್ರಾರ್ಥಿಸುತ್ತೇವೆ.

ಬೆಂಗಳೂರು ದಂಡಿನ ಪ್ರದೇಶವು ಮೈಸೂರು ದರ್ಬಾರಿಗೆ ಸೇರಿತು

ಈಗ್ಗೆ ನೂರಾರು ವರ್ಷಗಳಿಂದ ಬ್ರಿಟಿಷರ ವಶದಲ್ಲಿದ್ದ ಬೆಂಗಳೂರು ದಂಡಿನ ಪ್ರದೇಶವು ಇದೇ ತಿಂಗಳು ೨೬ ನೆಯ ತಾರೀಖಿನಿಂದ ಮೈಸೂರು ಗವರ್ನಮೆಂಟಿನ ಆಡಳಿತಕ್ಕೆ ಸೇರಿತು. ಮುಂದಿನ ತಿಂಗಳು ೨ನೆಯ ತಾರೀಖಿನಿಂದ ದಂಡಿನ ರೈಲ್ವೆ ಸ್ಟೇಷನ್ನಿನಿಂದ ಬಿಸನತ್ತಂ ಸ್ಟೇಷನ್ನಿನವರೆಗೆ ಇರುವ ೫೬ ಮೈಲು ರೈಲ್ವೆಮಾರ್ಗವೂ ಸಹ ಮೈಸೂರು ಸರ್ಕಾರಕ್ಕೆ ಒಪ್ಪಿಸಲ್ಪಡುವದೆಂದೂ, ಇಷ್ಟರಲ್ಲಿಯೇ ಮಿಲಿಟರಿ ಪ್ರದೇಶಗಳೂ ಸಹ ಮೈಸೂರಿಗೆ ಸೇರುವವೆಂದೂ ತಿಳಿಯುತ್ತದೆ.

೧೮೩ ದಿನಗಳು ನಿದ್ರೆಮಾಡಿ ಎಚ್ಚೆತ್ತ ಮಹಾತಾಯಿ!

೨೫ ವರ್ಷದ, ರೀಟಾ ಏಂಜಲ್ ಎಂಬ ಯುವತಿಯೊಬ್ಬಳು ತನ್ನ ೧೮ನೇ ವರ್ಷದಿಂದೀಚೆಗೆ ಒಟ್ಟಿಗೆ ಅನೇಕ ದಿನಗಳಕಾಲ ನಿದ್ರಿಸಿ ಏಳುತ್ತಾಳೆ. ಒಂದುಸಾರೆ ೬ ತಿಂಗಳು ಮೂರು ದಿನಗಳ ಕಾಲ ನಿದ್ರೆಮಾಡಿ ಎಚ್ಚೆತ್ತಳಂತೆ!

ವರ್ತಮಾನ ಸಂಗ್ರಹ

ಭಾರತ ಡೊಮಿನಿಯನ್ ಜನ್ಮೋತ್ಸವ ಸಮಾರಂಭ!

ಆಗಸ್ಟ್ ೧೪ನೆಯ ತಾರೀಖು ಭಾರತದ ಇತಿಹಾಸದಲ್ಲೇ ಅತ್ಯಂತದ ಪವಿತ್ರವಾದ ದಿವಸ! ಆದಿನ ಮಧ್ಯರಾತ್ರಿಯಲ್ಲಿ ಭಾರತದ ೧೯ನೆಯ ಮತ್ತು ಕೊನೆಯ ವೈಸ್ರಾಯರಾದ ಲಾರ್ಡ್ ಲೂಯಿ ಮೌಂಟ್‌ಬೇಟನ್ನರು ತಮ್ಮ ಅಧಿಕಾರವನ್ನು ತ್ಯಜಿಸುವರು. ಮಾರನೆಯ ದಿನ ಅಂದರೆ ಆಗಸ್ಟ್ ೧೫ನೆಯ ತಾ ಬೆಳಿಗ್ಗೆ ಭಾರತ ಡೊಮಿನಿಯನ್ನಿನ ಪ್ರಥಮ ಗವರ್ನರ್ ಜನರಲ್ ಪದವಿಯ ಅಧಿಕಾರ ಸೂತ್ರಗಳನ್ನು ವಹಿಸಿ ಪ್ರಮಾಣ ವಚನವನ್ನು ಸ್ವೀಕರಿಸುವರು.

ಅನಂತರ ಡೊಮಿನಿಯನ್ ಮುಖ್ಯಮಂತ್ರಿಯಾದ ಪಂ॥ ಜವಹರ್‌ಲಾಲ್ ನೆಹ್ರು ಮತ್ತು ಇತರ ಸಚಿವರು ಗವರ್ನರ್ ಜನರಲ್‌ರವರ ಮುಂದೆ ಅಧಿಕಾರ ವಹಿಸಿಕೊಳ್ಳುವರು.

ಪ್ರಮಾಣವಚನ ಸ್ವೀಕಾರವಾದನಂತರ ಲಾರ್ಡ್ ಲೂಯಿ ಮೌಂಟ್ ಬೇಟನ್ನರೂ ಸಚಿವರೂ ಕೌನ್ಸಿಲ್ ಭವನಕ್ಕೆ ರಾಜಮರ್ಯಾದೆಗಳೊಡನೆ ವಿಜಯಮಾಡುವರು. ಸಭಾ ಭವನದ ದ್ವಾರದ ಬಳಿ ಸಚಿವರು ಲಾರ್ಡ್ ಲೂಯಿ ಮೌಂಟ್‌ಬೇಟನ್ನರಿಗೆ ಸ್ವಾಗತ ನೀಡುವರು. ಭಾರತ ಡೊಮಿನಿಯನ್ನಿಗೆ ಸೇರಿದ ಪಡೆಗಳು ಗಾರ್ಡ್ ಆಫ್ ಆನರ್ ಕೊಟ್ಟು ಗೌರವಿಸುವುವು. ಬಳಿಕ ಲಾರ್ಡ್ ಲೂಯಿ ಮೌಂಟ್ ಬೇಟನ್ ಮತ್ತು ಸಚಿವರುಗಳೂ ರಾಜ್ಯಾಂಗ ನಿರ್ಮಾಣ ಸಭೆಗೆ ಚಿತ್ತೈಸುವರು. ಅಲ್ಲಿ ನೆರೆದಿರುವ ಪ್ರಾಂತ ಪ್ರತಿನಿಧಿಗಳಿಗೂ ದೇಶೀಯ ಸಂಸ್ಥಾನ ಪ್ರತಿನಿಧಿಗಳಿಗೂ ಲಾರ್ಡ್ ಲೂಯಿ ಮೌಂಟ್ ಬೇಟನ್ನರನ್ನು ಪರಿಚಯಮಾಡಿ ಕೊಡಲಾಗುವದು. ಅನಂತರ ಲಾರ್ಡ್ ಮೌಂಟ್ ಬೇಟನ್ನರು ಭಾಷಣಮಾಡುವರು. ಭಾರತ ಡೊಮಿನಿಯನ್ನಿಗೆ ಇದುವರೆಗೂ [illegible] ಸರ್ಕಾರದ ವಶದಲ್ಲಿದ್ದ ಅಧಿಕಾರವನ್ನು ವಹಿಸಿಕೊಡುವ ಸಮಾರಂಭವು ಅನಂತರ ನೆರವೇರುವುದು.

ಡಾ॥ ರಾಜೇಂದ್ರಪ್ರಸಾದರವರು (ರಾಜ್ಯಾಂಗ ಸಭೆಯ ಅಧ್ಯಕ್ಷರ) ಭಾಷಣ ಮಾಡಿದಮೇಲೆ ಭಾರತದ ನೂತನ ಸ್ವಾತಂತ್ರ್ಯ ಧ್ವಜಾರೋಹಣವು ನಡೆಯುವುದು. ಆ ಅಮೃತ ಗಳಿಗೆಯಲ್ಲಿ ಸ್ವತಂತ್ರ ಭಾರತ ಡೊಮಿನಿಯನ್ ಸ್ಥಾಪನೆಯಾಗುವುದು.

ಆಗಸ್ಟ್ ೧೫ರ ಸಂಜೆ ಯುದ್ಧ ಸ್ಮಾರಕ ಭವನಕ್ಕೆ ಗವರ್ನರ್ ಜನರಲ್ ಮತ್ತು ಸಚಿವರು ರಾಜಮರ್ಯಾದೆಗಳೊಡನೆ ಭೇಟಿಕೊಡುವರು. ಆ ಭವನದ ಮೇಲೆ ಭಾರತ ರಾಷ್ಟ್ರೀಯ ಧ್ವಜಾರೋಹಣ ಸಮಾರಂಭ ಜರುಗುವುದು. ಭಾರತ ಪಡೆಗಳು ಗೌರವ ಸಲ್ಲಿಸುವುವು. ಮೌಂಟ್ ಬೇಟನ್ ಅವರು ಧ್ವಜಕ್ಕೆ ವಂದನೆಯನ್ನರ್ಪಿಸುವರು.

ಸಂಜೆ ಎಲ್ಲಾ ಸರ್ಕಾರೀ ಭವನಗಳೂ ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಡುವುವು. ಇದಕ್ಕಾಗಿ ಅಸಾಧ್ಯ ಸಿದ್ಧತೆಗಳಾಗುತ್ತಿವೆ ಎಂಬುದಾಗಿ ತಿಳಿದ ಕಡೆಗಳಿಂದ ಗೊತ್ತಾಗಿದೆ.

ಪಾಕಿಸ್ಥಾನ್ ಜನ್ಮೋತ್ಸವ ಸಮಾರಂಭ

ಪಾಕಿಸ್ಥಾನ್ ಡೊಮಿನಿಯನ್ ಸ್ಥಾಪನದಿನೋತ್ಸವದ ಬಗ್ಗೆ ಸಿಂಧ್ ಪ್ರಾಂತ ಮುಸ್ಲಿಂಲೀಗ್ ಸಂಸ್ಥೆಯೂ ಸಿಂಧ್ ಸರ್ಕಾರವೂ ಸೇರಿ ಅಗಾಧವಾದ ಕಾರ್ಯಕ್ರಮದ ಪಟ್ಟಿಯನ್ನು ತಯಾರಿಸಿದೆ.

ಆಗಸ್ಟ್ ೧೩ನೆಯ ತಾ॥ ವೈಸ್ರಾಯ್ ಮೌಂಟ್ ಬೇಟನ್ನರು ಕರಾಚಿಗೆ ಭೇಟಿಕೊಡುವರು. ಸಾರ್ವಜನಿಕ ಭವನಗಳ ಅಲಂಕಾರ ಮುಂತಾದುವೆಲ್ಲಾ ಅತ್ಯಂತ ಸಂಭ್ರಮದಿಂದ ಜರುಗುವುವು. ಪಾಕಿಸ್ಥಾನದ ಗವರ್ನರ್ ಜನರಲ್ ಆದ ಮಿ॥ ಎಂ. ಎ. ಜಿನ್ನಾರವರು ಹನ್ನೆರಡು ಅಶ್ವಗಳನ್ನು ಕಟ್ಟಿದ "ಕೋಚ್" ವಾಹನದಲ್ಲಿ ವೈಭವದಿಂದ ಮೆರವಣಿಗೆ ಹೊರಡುವರು.

ಪಾಕಿಸ್ಥಾನದ ಸೈನ್ಯಪಡೆಗಳು ಗವರ್ನರ್ ಜನರಲ್‌ರವರಿಗೆ ಗೌರವ ಸಲ್ಲಿಸಿ ತಮ್ಮ ರಾಷ್ಟ್ರಭಕ್ತಿಯನ್ನು ಪ್ರದರ್ಶಿಸುವುವು.

ಪಾಕಿಸ್ಥಾನ ರಾಜ್ಯಾಂಗ ಸಭೆ

ಪಾಕಿಸ್ಥಾನ್ ರಾಜ್ಯಾಂಗ ರಚನಾ ಸಭೆಯು ಸಿಂಧ್ ಶಾಸನ ಸಭಾ ಮಂದಿರದಲ್ಲಿ ಆಗಸ್ಟ್ ೧೦ ರಲ್ಲಿ ಪ್ರಾರಂಭವಾಗುವುದು. ಅಧಿವೇಶನ ಬಹುಶಃ ಒಂದುವಾರ ನಡೆಯಬಹುದು.

ಪಾಕಿಸ್ಥಾನಕ್ಕೆ ರವಾನೆ

ಪಾಕಿಸ್ಥಾನ ಸರ್ಕಾರಕ್ಕೆ ಸಂಬಂಧಪಟ್ಟ ಅಧಿಕಾರಿವರ್ಗದವರನ್ನೂ ಸರ್ಕಾರಿ ಕಾಗದ ಪತ್ರಗಳನ್ನೂ ಪಾಕೀಸ್ಥಾನ ರಾಜಧಾನಿಗೆ ಸಾಗಿಸಲು ವಿಶೇಷ ಏರ್ಪಾಡುಗಳು ನಡೆದಿವೆ. ಜುಲೈ ೨೮ನೇ ತಾರೀಖಿನಿಂದ ದಿನಕ್ಕೆ ೬, ಸ್ಪೆಷಲ್ ಟ್ರೈನುಗಳಂತೆ ೬೨ ಸ್ಪೆಷಲ್ ಟ್ರೈನುಗಳು ಪಾಕಿಸ್ಥಾನ್ ರಾಜಧಾನಿಕರಾಚಿಗೆ ಬರುವುವು. ಪ್ರತಿಯೊಂದು ಪಾಕಿಸ್ಥಾನ ಸ್ಪೆಷಲ್‌ನಲ್ಲಿಯೂ ೫೦೦ ೬೦೦ ಜನರಿರುವರು. ಇವರನ್ನು ಸಾಗಿಸಲು ೧೦ ದಿನಗಳು ಹಿಡಿಯಬಹುದು.

ಸೈನ್ಯಬಲದ ವಿಭಜನೆ, ನೌಕೆಗಳ ಹಂಚಿಕೆ

ಭಾರತ ಯೂನಿಯನ್ ಮತ್ತು ಪಾಕಿಸ್ಥಾನಕ್ಕೆ ಸೈನ್ಯಬಲವನ್ನು ಹಂಚುವ ಸಂಬಂಧದಲ್ಲಿ ಕಡೇ ನಿರ್ಧಾರವನ್ನು ಪ್ರಕಟಿಸಲಾಗಿದೆ. ಈಗ ಕೋಮುವಾರ ಆಧಾರದ ಮೇಲೆ ವಿಭಜನೆ ನಡೆದಿದೆ. ಎರಡನೆಯ ಪಟ್ಟದಲ್ಲಿ ಅವರವರ ಇಷ್ಟದ ವರ್ಗಾವರ್ಗಿ ನಡೆಯುತ್ತದೆ. ಈಗಿನ ಹಂಚಿಕೆಯಂತೆ ಭಾರತಕ್ಕೆ ೩೨ ನೌಕೆಗಳು ಬಂದಿವೆ. ಪಾಕಿಸ್ಥಾನಕ್ಕೆ ೧೬ ನೌಕೆಗಳು ದೊರೆತಿವೆ. ಪ್ರತಿ ಡೊಮಿನಿಯನ್ನಿನ ಆವಶ್ಯಕತೆಯನ್ನು ಪರಿಗಣಿಸಿ ವಿಭಜನೆ ನಡೆಸಲಾಗಿದೆಯೆಂದು ವಿವರಿಸಲಾಗಿದೆ. ಭಾರತಕ್ಕೆ ೧೫ ೨೦ ರೆಜಿಮೆಂಟ್‌ಗಳಷ್ಟು ಕಾಲಾಳು ಪಡೆ, ೧೨ ಶಸ್ತ್ರ ಬಾಡಿಗಳ ಪಡೆ, ೧೮॥ ಯಷ್ಟು ಫಿರಂಗಿ ಪಡೆ, ೬೧ ಯುನಿಟ್‌ಗಳಷ್ಟು ಎಂಜಿನಿಯರುಗಳು ದೊರೆಯುವರು. ಪಾಕಿಸ್ಥಾನಕ್ಕೆ ೧೮ ಇನ್‌ಫೆಂಟ್ರಿ ದಳ, ೬ ಶಸ್ತ್ರಬಾಡಿಗಳ ಪಡೆ, ೮॥ ಯಷ್ಟು ಫಿರಂಗಿ ದಳ, ೩೦ ಯೂನಿಟ್‌ನಷ್ಟು ಎಂಜಿನಿಯರುಗಳು ದೊರಕುವರು. ವಿಮಾನಬಲ ಮುಂತಾದವುಗಳ ಹಂಚಿಕೆ ಇನ್ನೂ ನಡೆದಿಲ್ಲ.

ಬರ್ಮಾದಲ್ಲಿ ೭ಜನ ಮಂತ್ರಿಗಳ ಕೊಲೆ

ಬರ್ಮಾ ಮಂತ್ರಿಮಂಡಲದ ೭ ಜನ ಸಚಿವರು ೧೯ನೆಯ ತಾ॥ ಬೆಳಿಗ್ಗೆ ಗುಂಡಿನೇಟಿಗೆ ತುತ್ತಾಗಿ ಮರಣ ಹೊಂದಿದರು. ಈ ಘೋರ ಕೊಲೆಗೆ ಈಡಾದವರಲ್ಲಿ ಉ ಆಂಗ್ ಸಾನ್‌ರವರೂ ಒಬ್ಬರಾಗಿದ್ದಾರೆ. ಈ ಭೀಕರ ಕೊಲೆಯ ಸಂದರ್ಭದಲ್ಲಿ ಬರ್ಮಾ ಮಾಜಿ ಪ್ರಧಾನರಾದ ಯುಸಾ ಮತ್ತು ಅವರ ೧೯ ಅನುಯಾಯಿಗಳು ದಸ್ತಗಿರಿಮಾಡಲ್ಪಟ್ಟು, ಕಾರಾಗೃಹಕ್ಕೆ ಒಯ್ಯಲ್ಪಟ್ಟಿದ್ದಾರೆ.

ಯುಸಾರವರ ಮನೆಗೆ ಪೋಲೀಸ್ ಪಡೆಗಳು ನುಗ್ಗಿದಾಗ ಎರಡು ಪಕ್ಷಗಳಿಗೂ ಕದನವೇ ನಡೆದು ಹೋಯಿತು. ಇದರ ಸಲುವಾಗಿ ಯುಸಾ ಅನುಯಾಯಿಗಳಲ್ಲಿ ಮೂವರು ಸತ್ತರು. ಶಸ್ತ್ರಾಸ್ತ್ರಗಳನ್ನೂ ಬಂದೂಕಗಳನ್ನೂ ವಶಪಡಿಸಿಕೊಳ್ಳಲಾಯಿತು.

೧೯ನೆಯ ತಾರೀಖು ಪ್ರಾತಃಕಾಲ ಬರ್ಮಾ ಮಂತ್ರಿಮಂಡಲದ ಸಭೆಯು ನಡೆಯುತ್ತಿದ್ದಾಗ 'ಜೀಪ್' ವಾಹನ ಒಂದು ವಾಯುವೇಗದಲ್ಲಿ ಸಭಾಭವನದ ಬಳಿ ಬಂದಿತು. ಅದರಲ್ಲಿದ್ದ ೬ ಮಂದಿ ಕೊಲೆಪಾತಕರಲ್ಲಿ ಒಬ್ಬನು ವಾಹನದಲ್ಲಿಯೇ ಉಳಿದನು. ಉಳಿದ ಐವರು ಸಭಾಭವನದ ಮಹಡಿ ಹತ್ತಿ ಸಭಾಮಂದಿರದಲ್ಲಿದ್ದ ಸಚಿವರುಗಳ ಮೇಲೆ ಗುಂಡಿನ ಮಳೆಕರೆದರು. ಅನಂತರ ಆ ದುರಾತ್ಮರು ಪಲಾಯನಮಾಡಿ ತಪ್ಪಿಸಿಕೊಂಡರು. ಕ್ಷಣಮಾತ್ರದಲ್ಲಿ 'ಜೀಪ್' ವಾಹನ ಕಣ್ಮರೆಯಾಯಿತು.

ಹಡಗು ಮುಳುಗಿ ೬೦೦ ಜನ ನೀರಿನ ಪಾಲಾದರು

ಈ ತಿಂಗಳು ೧೭ನೆಯ ತಾರೀಖಿನ ಬೆಳಗ್ಗೆ ೮ ಘಂಟೆಗೆ ಬೊಂಬಾಯಿ ಬಂದರಿಂದ ರೇವಾಸ್ ಎಂಬ ಸ್ಥಳಕ್ಕೆ 'ರಾಮದಾಸ್' ಎಂಬ ಒಂದು ದೊಡ್ಡ ಹಡಗು ಹೊರಟಿತು. ಅದರಲ್ಲಿ ೭೪೨ ಜನ ಪ್ರಮಾಣ ಮಾಡುತ್ತಿದ್ದರು. ಹೊರಟು ಇನ್ನೂ ಅರ್ಧ ಘಂಟೆಯಾಗಿರಲಿಲ್ಲ, ಪ್ರಬಲವಾದ ಬಿರುಗಾಳಿ ಎದ್ದು, ದೊಡ್ಡ ಅಲೆ ಬಡೆದು ಹಡಗು ಮುಳುಗಿಹೋಯಿತು. ಸುಮಾರು ೧೫೦ ಜನರು ಹೇಗೋ ಒದ್ದುಕೊಂಡು ದಡ ಸೇರಿದರು. ಉಳಿದವರೆಲ್ಲ ನೀರಿನ ಪಾಲಾಗಿದ್ದಾರೆ. ಈ ವಿಷಯವು ಮಧ್ಯಾಹ್ನ ೨ ಗಂಟೆಗೆ ತಿಳಿಯಿತು. ರೇವಾಸ್ ಬಂದರಿನಲ್ಲಿ ನಿಂತು, ತಮ್ಮ ಇಷ್ಟರ ಬರವನ್ನೇ ಕಾಯುತ್ತಿದ್ದ ಜನರಿಗೆ ಈ ವರ್ತಮಾನ ಕೇಳಿ ಸಿಡಿಲು ಬಡೆದಂತಾಯಿತು. ಸಾವಿಗೆ ತಪ್ಪಿ ದಡ ಉಳಿದು ಬಂದ ಹಲವರು ಸತ್ತುಹೋದ ತಮ್ಮ ಬಂಧುಗಳನ್ನೂ ಜೊತೆಯವರನ್ನೂ, ಹಾಳಾದ ತಮ್ಮ ಆಸ್ತಿಯನ್ನೂ ನೆನೆದುಕೊಂಡು ಗೋಳೋ ಎಂದು ಅಳುತ್ತಿದ್ದರು. ಹಲವರಿಗೆ ಹುಚ್ಚು ಹಿಡಿದಂತಾಗಿದೆ.

"ನನ್ನ ತಂಗಿಯೊಡನೆ ನಾನು ರೇವಾಸ್‌ಗೆ ಹೊರಟಿದ್ದೆನು. ಆಕೆಯು ನನ್ನ ಕಣ್ಣುಮುಂದೆಯೇ ಮುಳುಗಿ ಹೋದಳು' ಎಂದು ಒಬ್ಬನು ಗಳಗಳನೆ ಅತ್ತನು. ಇನ್ನೊಬ್ಬನು "ನನ್ನ ಸಂಸಾರದಲ್ಲಿ ಎಂಟು ಮಂದಿ ಇದ್ದೆವು. ಎಲ್ಲರೂ ಒಟ್ಟುಗೂಡಿ ಜಂಜಿರಾಕ್ಕೆ ಹೊರಟಿದ್ದೆವು. ನನ್ನ ಮುದಿತಾಯಿ, ನನ್ನ ನಾಲ್ಕುವರುಷದ ಹೆಣ್ಣು ಮಗು, ಒಬ್ಬ ಸಹೋದರ ಜೊತೆಯಲ್ಲಿದ್ದರು. ಹಲವು ತಿಂಗಳಿಂದ ಉಳಿಸಿದ್ದ ೨೦೦ ರೂ ಗಳಷ್ಟು ತಾಮ್ರದ ನಾಣ್ಯ ಇತ್ತು. ಆದರೆ ನನ್ನ ಹೊರತು ಉಳಿದವರೆಲ್ಲ ಮುಳುಗಿ ಹೋದರು" ಎಂದು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದನು.

|| ಶ್ರೀಜಗದ್ಗುರು ರೇಣುಕಾಚಾರ್ಯಾಯ ನಮಃ ||

ಕರ್ಮ

ಲೇ|| ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಳೆಮಠ ಮುಧೋನೂರ

ಕರ್ಮವೆಂದರೆ, ಮನುಷ್ಯನು ಮನಸ್ಸಿನಿಂದಲೂ, ವಾಕ್ ಮೊದಲಾದ ಇಂದ್ರಿಯಗಳಿಂದಲೂ ಮಾಡಲ್ಪಡುವ ಕ್ರಿಯೆಯು. ಕರ್ಮವು ಭವಚಕ್ರಕ್ಕೆ ನಾಭಿಯಂತಿರುವದಲ್ಲದೆ 'ಬೀಜಾಂಕುರನ್ಯಾಯದಂತೆ' ಅನಾದಿಯಾಗಿರುವುದು. ಹೀಗೆ ಕರ್ಮವು ಯಾವಾಗಲೂ ಇರುವುದರಿಂದ ಆ ಕರ್ಮದ ಪರಿಣಾಮವಾಗಿ ಸ್ಥಿರಚರಾತ್ಮಕವಾದ ಈ ಜಗತ್ತು ಜೀವನದಿಯ ಪ್ರವಾಹದಂತೆ ಯಾವಾಗಲೂ ಹರಿಯುತ್ತಾ ಮುಂದಕ್ಕೆ ಸಾಗುತ್ತಲೇ ಇರುವದು.

ಭೂಮಿಯಲ್ಲಿ ಬೀಜಗಳನ್ನು ಬಿತ್ತಿದರೆ ಅದರಿಂದ ವೃಕ್ಷವು ಹುಟ್ಟಿ ಸಕಾಲದಲ್ಲಿ ಪುಷ್ಪಗಳೂ ಫಲಗಳೂ ಉಂಟಾಗಿ ಆ ಫಲಗಳಿಂದ ಪುನಃ ಬೀಜಗಳು ಉತ್ಪತ್ತಿಯಾಗಿ ಅವುಗಳಲ್ಲಿ ಒಂದೊಂದು ಬೀಜವೂ ಪುನಃ ವೃಕ್ಷಗಳಿಗೂ ಫಲಗಳಿಗೂ ಕಾರಣವಾಗುತ್ತದೆ. ಯಾವವಿಧವಾದ ಬೀಜಗಳನ್ನು ಬಿತ್ತಿದರೆ ಆ ವಿಧವಾದ ವೃಕ್ಷಗಳೂ ಫಲಗಳೂ ಉತ್ಪತ್ತಿಯಾಗುವವು. ಹೀಗೆ ಮಾಡುವ ಕರ್ಮಗಳು ಫಲಗಳನ್ನು ಕೊಡಲಾಗಿ ಆ ಫಲಗಳು ಹೊಸ ಕರ್ಮಗಳಿಗೆ ಕಾರಣಗಳಾಗುತ್ತಿರುವವು. ಈ ಪರಿಯಲ್ಲಿ ಕರ್ಮಗಳೂ ಫಲಗಳೂ ಪುನಃ ಕರ್ಮಗಳೂ ಫಲಗಳೂ ಪರಸ್ಪರ ಸಂಬಂಧವನ್ನು ಹೊಂದಿರುವವು. ಈ ಸಂಬಂಧವು ಕಾರ್ಯಕಾರಣರೂಪವಾಗಿರುವದು. ಕಾರ್ಯವು ಕಾರಣದ ವ್ಯಕ್ತಾವಸ್ಥೆಯು. ಕಾರಣವು ಕಾರ್ಯದ ಅವ್ಯಕ್ತಾವಸ್ಥೆಯು. ಕುಂಬಾರನ ತಿಗುರಿಯು ತಿರುಗಿದಂತೆ ಕುಡಿಕೆ, ಮಡಿಕೆ ಹರಿವಾಣಾದಿಗಳು ಹೊಸದಾಗಿ ಏರ್ಪಡುವಂತೆ ಕರ್ಮಗಳನ್ನು ಮಾಡಿದಂತೆಲ್ಲ ಶರೀರಗಳ ರಚನೆಯಾಗುವದು. ಶರೀರಗಳು ಇದ್ದಮೇಲೆ "ಅದು ಬೇಕು, ಇದು ಬೇಡ" ಎಂಬ ಪ್ರಿಯಾಪ್ರಿಯಗಳ ಸಂಘಟನೆಯು ತಪ್ಪಿದ್ದಲ್ಲ. ಬೇಕಾದುದರಲ್ಲಿ ಪ್ರೀತಿಯೂ ಬೇಡವಾದುದರಲ್ಲಿ ಅಪ್ರೀತಿಯೂ ಅವಶ್ಯಕವಾಗಿ ಉಂಟಾಗುತ್ತವೆಯಾದ್ದರಿಂದ ಪ್ರಿಯಾಪ್ರಿಯಗಳಿರುವ ಪ್ರತಿಯೊಂದು ಜನ್ಮದಲ್ಲಿಯೂ ರಾಗದ್ವೇಷಾದಿಗಳು ನಮ್ಮನ್ನು ಹಿಂಬಾಲಿಸಿಯೇ ಇರುವವು. ಯಾವುದರಲ್ಲಿ ನಮಗೆ ಅನುರಾಗವೋ ಅದನ್ನು ದೊರಕಿಸಿಕೊಳ್ಳುವುದಕ್ಕೂ ದೊರೆತದ್ದು ಹೋಗದಂತೆ ರಕ್ಷಿಸುವುದಕ್ಕೂ ನಾವು ಕರ್ಮವನ್ನು ಮಾಡಲೇಬೇಕಾಗುವುದು. ಇದರಂತೆ ನಮಗೆ ಯಾವುದರಲ್ಲಿ ನಿರಿಚ್ಛೆಯೋ ಅದು ನಮ್ಮ ಹತ್ತಿರ ಸುಳಿಯದಂತೆ ಮಾಡುವುದಕ್ಕೂ ಕದಾಚಿತ್ ಒಂದರೂ ಅದನ್ನು ನಿವಾರಿಸಿಕೊಳ್ಳುವುದಕ್ಕೂ ಕರ್ಮವನ್ನು ಮಾಡಬೇಕಾಗುವುದು. ಈ ರೀತಿಯಲ್ಲಿ ರಾಗದ್ವೇಷಗಳಿಂದ ಅನಿವಾರ್ಯವಾಗಿ ನಾವು ಯಾವುದಾದರೊಂದು ಕರ್ಮವನ್ನು ಮಾಡಿಯೇ ತೀರುವುದರಿಂದ ತನ್ಮೂಲಕ ಪಾಪವೋ ಪುಣ್ಯವೋ ಬಂದೇ ತೀರುತ್ತದೆ, ಆ ಪಾಪಪುಣ್ಯಗಳ ಫಲಾನುಭವಕ್ಕಾಗಿ ಮತ್ತೊಂದು ಶರೀರವು ಬಂದೇ ತೀರುತ್ತದೆ. ಹೀಗೆ ಕರ್ಮದಿಂದ ಶರೀರ, ಶರೀರದಿಂದ ಪ್ರಿಯಾಪ್ರಿಯಗಳು, ಅವುಗಳಿಂದ ರಾಗದ್ವೇಷಗಳು, ಅವುಗಳ ಸಂಬಂಧದಿಂದ ಧರ್ಮಾಧರ್ಮಗಳು ಅವುಗಳಿಂದ ಪುನಃ ಶರೀರ—ಹೀಗೆ ಪುನಃ ಪುನಃ ಆಗುತ್ತಿರುವುದಕ್ಕೇ ಸಂಸಾರವೆಂದು ಹೆಸರು. ಆದಪ್ರಯುಕ್ತ ಸಂಸಾರಕ್ಕೆ ಕರ್ಮವೇ ಬೀಜರೂಪವಾಗುವದು. ಈ ಕರ್ಮದಿಂದಲೇ ಪ್ರಪಂಚವೆಲ್ಲವೂ ಬಂಧಿಸಲ್ಪಟ್ಟಿರುವದು. ಈ ಅಭಿಪ್ರಾಯವನ್ನು ಬೃಹದಾರಣ್ಯಕ ಶ್ರುತಿಯು—"ಕಾಮಮಯ ಏವಾಯಂ ಇತಿ ಸ ಯಥಾ ಕಾಮೋ ಭವತಿ ತತ್ಕ್ರತುರ್ಭವತಿ ಯತ್ಕ್ರತುರ್ಭವತಿ ತತ್ಕರ್ಮ ಕುರುತೇ ತದಭಿಸಂಪದ್ಯತೇ" ಎಂದರೆ, ಪುರುಷನು ಕಾಮಸ್ವರೂಪನು. ಕಾಮಾನುಗುಣವಾಗಿ ಸಂಕಲ್ಪಿಸುವನು. ಸಂಕಲ್ಪಾನುಸಾರವಾಗಿ ಕರ್ಮವನ್ನು ಮಾಡುವನು. ಕರ್ಮಕ್ಕನುಸಾರವಾಗಿ ಫಲವನ್ನು ಪಡೆಯುತ್ತಾನೆ ಎಂದು ಬೋಧಿಸುವದು. ಹೀಗೆ ಮನುಷ್ಯನು ಯಾವ ಯಾವ ಕಾಮಗಳಿಗೆ ಒಳಪಡುವನೋ ಆಯಾ ವಿಷಯಗಳನ್ನು ಕರ್ಮಫಲರೂಪವಾಗಿ ಅನುಭವಿಸುವದಷ್ಟೇ ವಿಧಿಯಾಗಿ ಅವು ಇರುವ ಸ್ಥಳಕ್ಕೆ ಅನಿರೀಕ್ಷಿತವಾಗಿ ವಿಧಿವಶಾತ್ ಎಳೆಯಲ್ಪಡುತ್ತಾನೆ. ಹೀಗೆ ಕಾಮವು ಬಂಧವಾಗುತ್ತದೆ.

ಈ ಕರ್ಮಶಕ್ತಿಯು ಪ್ರಪಂಚವು ಲಯವಾದರೂ ಸಹ ಬೀಜರೂಪದಿಂದ ಶೇಷವಾಗಿ ನಿಂತು, ಪುನಃ ಸೃಷ್ಟಿರಚನೆಗೆ ಆರಂಭವಾಗುತ್ತದೆ. ಅದೇ ಕರ್ಮಬೀಜದಿಂದ ಪುನಃ ಮೊದಲಿನಂತೆ ಅಂಕುರಗಳೊಡೆದು ಸಂಸಾರಕ್ಕೆ ಹೇತುವಾಗುತ್ತದೆ. ಈ ಕರ್ಮದ ಗತಿಯು ಬಹು ತೀವ್ರವಾಗಿಯೂ, ಸಾಮರ್ಥ್ಯವು ಬಲವತ್ತರವಾಗಿಯೂ ಇರುವುದು. ಈ ಕರ್ಮದ ತಿರುಗಣೆಯಲ್ಲಿ ಒಂದಾವರ್ತಿ ಸಿಕ್ಕಿಕೊಂಡರೆ ಸಾಕು. ಅದರಿಂದುಂಟಾಗುವ ಫಲವನ್ನು ಅನುಭವಿಸದೆ ತಪ್ಪಿಸಿಕೊಳ್ಳುವದು ಸುಲಭಸಾಧ್ಯವಲ್ಲ. ಅದು ಯಾರಿಗೂ ಬಿಟ್ಟಿದ್ದಲ್ಲ. ಕರ್ಮದಿಂದ ಗಾಳಿಯು ಚಲಿಸುವದು, ಸೂರ್ಯಚಂದ್ರಾದಿಗಳು ಕರ್ಮದಿಂದಲೇ ಸಂಚರಿಸುವರು. ಈ ಸಂದರ್ಭದಲ್ಲಿ ನೀತಿಕಾರರು—

ಹಣೆಯ ಬರಹವ ಮೀರಿ ನಡೆವರೇ | ತ್ರಿಣಯ ನಿಂಗಳವಲ್ಲ ಮಿಕ್ಕಿನ | ಒಣಗುಗಳ ಪಾಡೇನು ಪೂರ್ವದ ಕರ್ಮಫಲಗಳನು || ಜುಣುಗಿ ತಾನುಣಲೊಲ್ಲೆನೆಂದರೆ | ಅಣಕವೇ ತಮ್ಮಪ್ಪನುಂಬನೆ | ಎಣಿಸಿನೋಡಲು ಈಶ್ವರಾಜ್ಞೆಯ ಮೀರಲಳವಲ್ಲ ||

ಎಂದು ಹೇಳಿರುವರು. ಪ್ರತಿಯೊಂದು ಪ್ರಾಣಿಯೂ ಇಂದು ಮಾಡಿದ್ದನ್ನು ನಾಳೆ, ನಾಳೆ ಮಾಡಿದ್ದನ್ನು ನಾಡದ್ದು ಅನುಭವಿಸಬೇಕು. ಇಷ್ಟೇ ಅಲ್ಲ ಈ ಜನ್ಮದಲ್ಲಿ ಮಾಡಿದ್ದನ್ನು ಮುಂದಿನ ಜನ್ಮದಲ್ಲಿ ಅನುಭವಿಸಬೇಕಾಗುವದು. ಹೀಗೆ ಈ ಭವಚಕ್ರವು ಸದಾ ಸುತ್ತುತ್ತಿರುತ್ತದೆ. ನಾವು ಮಾಡಿದ ಕರ್ಮಫಲವನ್ನು ನಾವು ಮಾತ್ರ ಅನುಭವಿಸಬೇಕಾಗುತ್ತದೆಂತಲ್ಲ. ಒಮ್ಮೊಮ್ಮೆ ಈ ನಮ್ಮ ಕರ್ಮಫಲವನ್ನು ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೂ ಸಹ ಅನುಭವಿಸಬೇಕಾಗುತ್ತದೆಂದು ಮನುಸ್ಮೃತಿಯು ಸಾರುತ್ತಿರುವದು. ಪಾಂಡು ಮೊದಲಾದ ಕೆಲವು ದುರ್ಧರ ರೋಗಗಳು ವಂಶಪಾರಂಪರ್ಯವಾಗಿ ಜಗತ್ತಿನಲ್ಲಿ ಜನರಿಗೆ ಪ್ರಾಪ್ತವಾಗುತ್ತಿರುವುದೇ ಪ್ರಬಲವಾದ ನಿದರ್ಶನವಾಗಿರುವುದು. ಜೀವನು ಅವಿನಾಶಿಯಾದ್ದರಿಂದ ಅವನು ಮಾಡುವ ಕರ್ಮವಾದರೂ ಅನಂತಕಾಲದವರೆಗುಳಿದು ಆಯಾಯ ಜೀವಿಯಿಂದಲೇ ಅನುಭವಿಸಲ್ಪಟ್ಟಲ್ಲದೆ ವ್ಯಯವಾಗದು. ಹೀಗೆ ಜನ್ಮಗಳಲ್ಲಿ ಶೇಖರಿಸಲ್ಪಟ್ಟಿರುವ ಕರ್ಮರಾಶಿಗೆ ಸಂಚಿತಕರ್ಮವೆಂದು ಹೆಸರು. ಈ ಸಂಚಿತಕರ್ಮವೇ ಜೀವನ ಜನನ ಮರಣಪ್ರವಾಹದ ಉಗಮಸ್ಥಾನದಂತಿರುವದು. ಜೀವಿಯು ಪ್ರಕೃತ ಜನ್ಮದಲ್ಲಿ ಮಾಡುವ ಪುಣ್ಯಪಾಪರೂಪವಾದ ಕರ್ಮಸಮೂಹಕ್ಕೆ ಆಗಾಮಿಕರ್ಮವೆಂದು ಹೆಸರು. ಅಂತೂ ನಾವು ಈಗ ಮಾಡುವ ಒಂದು ಕರ್ಮದಿಂದಲೇ ಸಂಚಿತ, ಆಗಾಮಿ, ಪ್ರಾರಬ್ಧಗಳೆಂಬ ಮೂರು ಕರ್ಮಗಳೇರ್ಪಡುವವೆಂದು ಸಿದ್ಧವಾಗುವದು. ಈ ಸಂಚಿತಕರ್ಮದಲ್ಲಿ ಸುಕೃತ ದುಷ್ಕೃತಗಳ ತಾರತಮ್ಯವನ್ನು ತುಲನೆಮಾಡಿ ನೋಡಿ ನೋಡಿ, ಗೊತ್ತಾದ ಒಂದು ಜನ್ಮದಲ್ಲಿ ಅನುಭವಿಸಬೇಕಾದಷ್ಟು ಕರ್ಮಫಲವನ್ನು ಪ್ರತ್ಯೇಕವಾಗಿಟ್ಟು, ಅದಕ್ಕನುಗುಣವಾಗಿ ಆ ಜೀವನು ಜನ್ಮವೆತ್ತಬೇಕೆಂದು ಕರ್ಮಾಧಿದೇವತೆಗಳು ನಿರ್ಧರಿಸಿರುವರು. ಹೀಗೆ ಈ ಶರೀರೋತ್ಪತ್ತಿಗೆ ಕಾರಣೀಭೂತವಾಗಿಯೂ, ಈ ಲೋಕದಲ್ಲಿ ಸುಖದುಃಖಗಳನ್ನು ಕೊಡತಕ್ಕುದಾಗಿಯೂ ಇರುವ ಯಾವ ಕರ್ಮವಿದೆಯೋ ಅದೇ ಪ್ರಾರಬ್ಧಕರ್ಮವು. ಈ ಪ್ರಾರಬ್ಧಕರ್ಮವಾದರೂ ಅನುಭವಿಸುವುದರಿಂದಲೇ ನಷ್ಟವಾಗುವದು. "ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ | ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ||" ಎಂದರೆ ಪೂರ್ವದಲ್ಲಿ ಮಾಡಿದ ಶುಭಾಶುಭಫಲಗಳನ್ನು ಅನುಭವಿಸಿಯೇ ತೀರಬೇಕು. ಇಲ್ಲವಾದರೆ ಕೋಟಿಜನ್ಮಗಳನ್ನು ಧರಿಸಿದರೂ ಅದು ನಾಶವಾಗುವದಿಲ್ಲ.

ವಾಚಕರೇ, ಈ ವಿಷಯವನ್ನು ವಿಚಾರಮಾಡಿ ನೋಡಿದರೆ, ಮನುಷ್ಯನ ಬಂಧಮೋಕ್ಷಗಳಿಗೆ ಮನಸ್ಸು ಕಾರಣವಾಗಿರುವಂತೆ ಕರ್ಮವೂ ಸಹ ಬಂಧಮೋಕ್ಷಗಳಿಗೆ ಕಾರಣವಾಗುವದೆಂದು ಸ್ಪಷ್ಟವಾಗುತ್ತದೆ. ಕರ್ಮದಲ್ಲಿ ಕಾಮ್ಯಕರ್ಮವೆಂತಲೂ, ನಿಷ್ಕಾಮಕರ್ಮವೆಂತಲೂ ಎರಡು ವಿಧವುಂಟು. ಇದರಲ್ಲಿ ಸಾತ್ತ್ವಿಕವಾದ ಕಾಮ್ಯಕರ್ಮವು ಸ್ವರ್ಗಾದಿಭೋಗಗಳನ್ನು ಕೊಟ್ಟು ಬಳಿಕ ಕೂಡಲೇ ದುಃಖವನ್ನು ಕೊಡುತ್ತವೆ. "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬಂತೆ ಪುಣ್ಯಕ್ಷಯವಾದ ಬಳಿಕ ಮರಳಿ ಹುಟ್ಟಬೇಕು. ಕತ್ತಲೆ ಬೆಳಕುಗಳಂತೆ ಸುಖ ತೀರಿದ ಬಳಿಕ ದುಃಖವು ಸಿದ್ಧವಾಗಿಯೇ ಇರುತ್ತದೆ. ಆದ್ದರಿಂದ ಕಾಮ್ಯಕರ್ಮಗಳನ್ನು ಮಾಡಿದರೆ ಸಂಸಾರ ಹೆಚ್ಚುತ್ತದೆ. "ಗಹನಾ ಕರ್ಮಣೋ ಗತಿಃ" ಎಂಬಂತೆ ಕಾಮ್ಯಕರ್ಮಗಳಿಂದ ಸದ್ಗತಿಯಾಗುವದಿಲ್ಲವಾದುದರಿಂದ ಕಾಮ್ಯಕರ್ಮವು ಜ್ಞಾನದೃಷ್ಟಿಯಿಂದ ನಿಷಿದ್ಧವೆನಿಸುವದು. ಇನ್ನು ಇದೇ ಕಾಮ್ಯಕರ್ಮವನ್ನು ನಿಸ್ಸಂಕಲ್ಪನಾಗಿ ಮಾಡಿದರೆ, ಬೀಜಗಳನ್ನು ಬಿತ್ತದವನಿಗೆ ಫಲವಿಲ್ಲದಂತೆ ಅದರಿಂದ ಬಂಧಕವಿಲ್ಲ. ಮತ್ತು ಇದ್ದ ಬಂಧಕಗಳನ್ನು ಕಳೆದುಕೊಳ್ಳಬಹುದು. ಈ ವಿಷಯದಲ್ಲಿ ಗೀತೆಯು—"ನೈಷ್ಕರ್ಮ್ಯಸಿದ್ಧಿಂ ಪರಮಾಂ ಸನ್ನ್ಯಾಸೇನಾಧಿಗಚ್ಛತಿ" ನಿಷ್ಕಾಮಕರ್ಮದಿಂದ ಮುಕ್ತಿಯು ಲಭಿಸುವದು ಎಂದು ಬೋಧಿಸುವದು. ಇಲ್ಲಿ ಸನ್ಯಾಸವೆಂದರೆ ಫಲತ್ಯಾಗವೆಂದರ್ಥವು. ಕರ್ಮನಾಶಕ್ಕೆ ಕರ್ಮವೇ ಅವಶ್ಯಕವಾಗಿರುವುದು. ಉದಾಹರಣೆಗಾಗಿ ನೋಡಿರಿ. ಒಬ್ಬನಿಗೆ ಅತಿಸಾರವೆಂಬ ರೋಗವು ಒಂದು ಅವನಿಗೆ ಭೇದಿಯು ಮಿತಿಮೀರಿ ಆಗುತ್ತಿದ್ದರೂ, ಮರ್ಮಜ್ಞನಾದ ವೈದ್ಯನು ಆ ಅತಿಸಾರವನ್ನು ಕಳೆಯುವುದಕ್ಕೆ ಮತ್ತೊಂದು ಭೇದಿಯ ಔಷಧವನ್ನೇ ಕೊಡುತ್ತಾನೆ. ಪಾತ್ರೆಯ ಮೇಲಿನ ಕೊಳೆಯನ್ನು ಕಳೆಯುವುದಕ್ಕಾಗಿ ಅದರ ಮೇಲೆ ಬೂದಿಯನ್ನು ಹಾಕಿ ತಿಕ್ಕಿದರೆ ಆ ಬೂದಿಯು ಮೊದಲಿನ ಕೊಳೆಯನ್ನು ಕಳೆದು ಪ್ರಕಾಶಮಾಡುವಂತೆ, ನಿಷ್ಕಾಮಕರ್ಮವೆಂಬುದು ಮನಸ್ಸಿಗಂಟಿಕೊಂಡಿದ್ದ ದೋಷಗಳನ್ನೆಲ್ಲಾ ಧ್ವಂಸಮಾಡಿ ಅದರಲ್ಲಿ ಸತ್ಯವಾದ ತತ್ವಗಳು ಆವಿರ್ಭವಿಸುವಂತೆ ಮಾಡುವದು. ನಿಷ್ಕಾಮಕರ್ಮವೆಂಬುದೊಂದು ತಪಶ್ಚರ್ಯೆಯು. ಅದಪ್ರಯುಕ್ತ ಆತ್ಮೋನ್ನತಿಯನ್ನು ಬಯಸುವವರಿಗೆ, ನದಿಯನ್ನು ದಾಟುವವರಿಗೆ ನಾವೆಯಂತೆ ನಿಷ್ಕಾಮಕರ್ಮವು ಮುಖ್ಯಸಾಧನವಾಗಿರುವದು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಧ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ೫ ನೂರು ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೬೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುತ್ತವೆ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ನಿತ್ಯಪಠನೀಯವಾಗಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ	೦—೬—೦
ಸ್ಥಾವರಾರೋಪಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರ ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೨—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರು ಸಿಂಹಾಸನಾರೂಢರಾಗಿ ವಿರಾಜಿಸುತ್ತಿರುವ ಫೋಟೋ	೦—೧—೬
ರೂಮು ... ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧ ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವವರ್ಣನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಶಾಂತ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣಾವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮ ಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಪ್ತಾಚಾರತತ್ತ್ವಜ್ಞಾನ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ... ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯ ...	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥। ರೂ
ವೀರಶೈವಪರತ್ವ (೨ನೆಯ ಆವೃತ್ತಿ ೩೦ ಮಹಾತ್ಮರ ಫೋಟೋಗಳಿರುವದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಛಂದಸ್ಸಿನಲ್ಲಿ ಬರೆಯಲ್ಪಟ್ಟದ್ದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಒಂದು ಪ್ರಜ್ಞಾನಾಗಮ-ಕಾಂರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु
सिद्धान्तशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರ ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೨ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ಆಗಸ್ಟ್ ೧೯೪೭ [ಸಂಚಿಕೆ ೧೫

ಶ್ರೀರಂಭಾಪುರೀಪೀಠದಲ್ಲಿ ಪ್ರತಿಷ್ಠಿಸಲ್ಪಟ್ಟಿರುವ ಶಿಲಾಶಾಸನಗಳು

ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಎರಡು ಶಿಲಾಶಾಸನಗಳು ಪ್ರತಿಷ್ಠಿಸಲ್ಪಟ್ಟಿರುವವು ಆ ಶಾಸನಗಳಲ್ಲಿ ಶ್ರೀರಂಭಾಪುರೀ ಮಹಾಪೀಠದ ದರ್ಶನಕ್ಕಾಗಿ ಮೈಸೂರು ದೇಶದ ಯಾವ ಯಾವ ಮಹಾರಾಜರು ಯಾವ ಯಾವ ಶುಭದಿವಸ ಆಗಮಿಸಿದ್ದರೆಂಬ ವಿಷಯವು ಉಲ್ಲೇಖಿಸಲ್ಪಟ್ಟಿರುವುದಲ್ಲದೆ, ಶಿವೈಕ್ಯ ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಕಾಲದಲ್ಲಿ ನಡೆದ ಮಹಾಕಾರ್ಯಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವವು. ಮತ್ತು ಅವರು ಮೈಸೂರು ಮಹಾಪ್ರಭುಗಳವರ ಆಮಂತ್ರಣದಮೇರೆಗೆ ಅರಮನೆಗೆ ದಯಮಾಡಿಸಿದ ವಿಷಯವೂ ಸಹ ಉಲ್ಲೇಖಿಸಲ್ಪಟ್ಟಿರುವುದು ಮಠಕ್ಕೂ ಮತ್ತು ಪೀಠಕ್ಕೂ ಮಹಾಗೌರವವನ್ನುಂಟುಮಾಡತಕ್ಕ ಅನೇಕ ಮಹತ್ವವಿಷಯಗಳಿಂದ ಕೂಡಿರುವ ಈ ಎರಡೂ ಶಾಸನಗಳು ಪ್ರತಿಯೊಬ್ಬ ವೀರಶೈವರ ಮನೆಯಲ್ಲಿಯೂ ರಾರಾಜಿಸಲೆಂಬ ಉದ್ದೇಶದಿಂದ ಅವುಗಳನ್ನು ಎರಡು ಬಣ್ಣಗಳಲ್ಲಿ ಬಹು ಸುಂದರವಾಗಿ ಮುದ್ರಿಸಿದ್ದೇವೆ ಆದುದರಿಂದ ಪ್ರತಿಯೊಬ್ಬ ಗುರುಭಕ್ತರೂ ಇವುಗಳನ್ನು ತರಿಸಿಕೊಂಡು ಫೋಟೋಗಳಂತೆ ಚೌಕಟ್ಟುಹಾಕಿಸಿಟ್ಟುಕೊಳ್ಳಬೇಕು ಇವುಗಳನ್ನು ಓದಿ ನೋಡುವುದರಿಂದ ಸರ್ವರಿಗೂ ಆ ಮಹಾಪೀಠದ ಪ್ರಭಾವವು ಸ್ಫುಟವಾಗಿ ತೋರುವುದು ಒಂದು ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ ಪಿ ಕಳಿಸುವದಿಲ್ಲ ಸ್ವಲ್ಪಕಾಪಿಗಳನ್ನು ತರಿಸಿಕೊಳ್ಳುವವರು ಅದರ ಬೆಲೆಯ ಪೋಸ್ಟ ಸ್ಟಾಂಪು ಮತ್ತು ಅವುಗಳನ್ನ ಕಳಿಸುವದಕ್ಕೆ ೧ ಆಣೆ ಪೋಸ್ಟ್ ಸ್ಟಾಂಪು ಕಳಿಸಬೇಕು **ಬೆಲೆ ೨ ಆಣೆ**

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ

ಮಾನವಧರ್ಮ

ಲೇ|| ಶ್ರೀಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

ಈ ಜಗತ್ತಿನಲ್ಲಿರತಕ್ಕ ೮೪ ಲಕ್ಷ ಜೀವರಾಶಿಗಳಲ್ಲಿ ಮಾನವಜನ್ಮವೇ ಶ್ರೇಷ್ಠವಾಗಿರುವದು ಏಕೆಂದರೆ— ಮನುಷ್ಯನಿಗೆ ಇದು ಪುಣ್ಯ, ಇದು ಪಾಪ, ಇದು ಧರ್ಮ, ಇದು ಅಧರ್ಮ ಇದು ನೀತಿ, ಇದು ಅನೀತಿ, ಇದು ನ್ಯಾಯ, ಇದು ಅನ್ಯಾಯ, ಇತ್ಯಾದಿ ವಿಷಯಗಳಲ್ಲಿ ತಿಳಿವಳಿಕೆ ಇರುವಂತೆ ಉಳಿದ ಯಾವ ಪ್ರಾಣಿವರ್ಗಕ್ಕೂ ಇರುವದಿಲ್ಲ ಆದ್ದರಿಂದ ಮಾನವಜನ್ಮವು ಎಲ್ಲಾ ಪ್ರಾಣಿಗಳಿಗಿಂತಲೂ ಶ್ರೇಷ್ಠವಾಗಿರುವದು ಪರಮಾತ್ಮನು ಮಾನವನಿಗೆ 'ಜ್ಞಾನ'ವೆಂಬ ಅಮೂಲ್ಯ ರತ್ನವನ್ನು ಅನುಗ್ರಹಿಸಿರುವನು ಈ ಅಮೂಲ್ಯವಾದ ಜ್ಞಾನವನ್ನು ನಾವೆಲ್ಲರೂ ಸರಿಯಾದ ಮಾರ್ಗದಲ್ಲಿ ಸದುಪಯೋಗಮಾಡಿಕೊಳ್ಳಬೇಕಲ್ಲದೆ, ವಕ್ರಮಾರ್ಗದಿಂದ ದುರುಪಯೋಗಮಾಡಿಕೊಳ್ಳಬಾರದು ದುರುಪಯೋಗಮಾಡಿಕೊಂಡದ್ದಾದರೆ ಆ ಮೂಕಪ್ರಾಣಿಗಳಿಗೂ ನಮಗೂ ಏನೂ ವ್ಯತ್ಯಾಸವಾದಂತಾಗುವದಿಲ್ಲ

ಆಹಾರನಿದ್ರಾಭಯಮೈಥುನಾನಿ
ಸಾಮಾನ್ಯಮೇತತ್ಪಶುಭಿರ್ನರಾಣಾಂ ।
ಜ್ಞಾನಂ ಹಿ ತೇಷಾಮಧಿಕಂ ವಿಭಾತಿ
ಜ್ಞಾನೇನ ಹೀನಾಃ ಪಶುಭಿಸ್ಸಮಾನಾಃ ॥

ಅಂದರೆ–ಆಹಾರ, ನಿದ್ರೆ, ಭಯ, ಮೈಥುನ ಇವೆಲ್ಲವೂ ಮನುಷ್ಯರಿಗಿದ್ದಂತೆ ಪಶುಗಳಿಗೂ ಇರುವವು. ಆದರೆ ಮನುಷ್ಯನಿಗೆ ಜ್ಞಾನವೆಂಬುದೊಂದು ಮಾತ್ರ ಅಧಿಕವಾಗಿದೆ ಆ ಜ್ಞಾನವನ್ನು ಕಳೆದುಕೊಂಡದ್ದಾದರೆ ಮಾನವನು ಪಶುವಿಗೆ ಸಮಾನನೆಂದು ಮಹಾತ್ಮರು ಹೇಳಿದ್ದಾರೆ

ಕಃ ಕಸ್ಯ ಹೇತುರ್ದುಃಖಸ್ಯ ಕಶ್ಚ ಹೇತುಸ್ಸುಖಸ್ಯ ವಾ
ಸ್ವಪೂರ್ವಾರ್ಜಿತಕರ್ಮೈವ ಕಾರಣಂ ಸುಖದುಃಖಯೋಃ ॥

ಸುಖಕ್ಕಾಗಲಿ ದುಃಖಕ್ಕಾಗಲಿ ತಾನು ಹಿಂದಿನ ಜನ್ಮಗಳಲ್ಲಿ ಆಚರಿಸಿದ ಪುಣ್ಯ ಪಾಪಕೃತ್ಯಗಳೇ ಕಾರಣವೆಂದು ಶಾಸ್ತ್ರವು ಸಾರುತ್ತದೆ ಈ ಪುಣ್ಯ ಪಾಪಕರ್ಮಾನುಸಾರವಾಗಿ ಸುಖ ದುಃಖಗಳನ್ನು ಅನುಭವಿಸುವಂತೆ, ಜೀವಾತ್ಮರು ತಮ್ಮ ಪೂರ್ವದ ಕರ್ಮಕ್ಕನುಸಾರವಾಗಿ ಜಾತಿಗಳನ್ನೂ, ದೇಹಗಳನ್ನೂ ಧರಿಸುತ್ತಾರಲ್ಲದೆ ಒಬ್ಬರಿಗೊಬ್ಬರು ದ್ವೇಷದ ಮೂಲಕ ಕಲ್ಪನೆಯಿಂದ ಯಾರೂ ಮಾಡಿದವುಗಳಲ್ಲ ಜೀವಾತ್ಮರು ವಿಶೇಷ ಪುಣ್ಯದಿಂದ ದೇವತಾಶರೀರವನ್ನೂ, ಪುಣ್ಯಪಾಪ ಇವೆರಡರ ಮಿಶ್ರಣದಿಂದ ಮಾನವಶರೀರವನ್ನೂ, ವಿಶೇಷ ಪಾಪದಿಂದ ನಾಯಿ ನರಿ ಹಂದಿ ಇತ್ಯಾದಿ ಹೀನಶರೀರಗಳನ್ನೂ ಧರಿಸುತ್ತಾರೆ

ಸಿದ್ಧಾಂತಶಿಖಾಮಣಿಯ ೫ ನೆಯ ಪರಿಚ್ಛೇದದಲ್ಲಿ—

ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ ।
ದೇವತಿರ್ಯಙ್ಮನುಷ್ಯಾದಿನಾನಾಯೋನಿವಿಭೇದತಃ ॥೪॥
ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ ।
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಂ ॥೫॥

ಅಂದರೆ—ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ದೇವ-ಮನುಷ್ಯ-ಪಶು-ಪಕ್ಷಿ ಮೊದಲಾದ ೮೪ ಲಕ್ಷ ಜೀವರಾಶಿ ಯೋನಿಗಳಲ್ಲಿ ಜನಿಸಿ, ಚಕ್ರನೇಮಿಕ್ರಮದಿಂದ ಸಂಸಾರದಲ್ಲಿ ಯಾವಾಗಲೂ ಸುತ್ತುತ್ತಿರುವರು ಜಾತಿ ಆಯುಷ್ಯ ಸುಖ ದುಃಖ ಇತ್ಯಾದಿಗಳಿಗೆಲ್ಲಾ ಜೀವರ ಕರ್ಮವೇ ಮೂಲಕಾರಣವಾಗಿದೆ ಬ್ರಾಹ್ಮಣಾದಿ ಉತ್ತಮ ಜಾತಿಗಳಲ್ಲಿ ಜನಿಸುವದಕ್ಕೂ ಶೂದ್ರಾದಿ ಕನಿಷ್ಠ ಜಾತಿಗಳಲ್ಲಿ ಜನಿಸುವದಕ್ಕೂ, ಜೀವರ ಕರ್ಮವೇ ಮುಖ್ಯ ಕಾರಣವಾಗಿರುವದು ಬ್ರಾಹ್ಮಣಾದಿ ಜಾತಿಗಳು ಜನ್ಮಸಿದ್ಧವಾದವುಗಳೆನ್ನುವದು ರೇಣುಕ ಭಗವತ್ಪಾದರ ಮುಖ್ಯಾಭಿಪ್ರಾಯವಾಗಿದೆ

ಸದಾಚಾರೇಣ ದೇವತ್ವಂ ಋಷಿತ್ವಂ ಚ ವರಾನನೇ ।
ಪ್ರಾಪ್ನುವಂತಿ ಕುಯೋನಿತ್ವಂ ಮನುಷ್ಯಾಸ್ತದ್ವಿಪರ್ಯಯೇ ॥

ಅಂದರೆ–ಮನುಷ್ಯರು ಸದಾಚಾರದಿಂದ ದೇವತ್ವವನ್ನೂ, ಋಷಿತ್ವವನ್ನೂ ಪಡೆಯುತ್ತಾರೆ ಆಚಾರವನ್ನು ಬಿಟ್ಟರೆ ನೀಚಯೋನಿಗಳಲ್ಲಿ ಜನಿಸುವರೆಂದು ಧರ್ಮಶಾಸ್ತ್ರವು ಬೋಧಿಸುತ್ತದೆ ಅಷ್ಟೆ!

ಇಂಥ ಶ್ರೇಷ್ಠವಾದ ಮನುಷ್ಯರಲ್ಲಿ ಉತ್ತಮ, ಮಧ್ಯಮ, ಅಧಮ, ಅಧಮಾಧಮರೆಂದು ನಾಲ್ಕು ಪ್ರಕಾರದವರಿರುವರು ನಾನು ಯಾರು? ಏತಕ್ಕಾಗಿ ಹುಟ್ಟಿದೆನು? ನನ್ನ ಕರ್ತವ್ಯವೇನು? ದೇಹಾನಂತರ ಏನಾಗುವನು? ಇತ್ಯಾದಿ ವಿಚಾರಗಳನ್ನು ಮಾಡಿ ನಡೆಯುವವನೇ ಉತ್ತಮನು ಮೋಕ್ಷವಿಚಾರವಿಲ್ಲದಿದ್ದರೂ ತನ್ನ ಶಕ್ತ್ಯನುಸಾರವಾಗಿ ಪರೋಪಕಾರಮಾಡುತ್ತ, ನ್ಯಾಯಮಾರ್ಗದಿಂದ ನಡೆಯುವವನೇ ಮಧ್ಯಮನು ಪರೋಪಕಾರವಿಲ್ಲದೆ ಸ್ವಕಾರ್ಯಧುರಂಧರನಾಗಿರುವವನೇ ಅಧಮನು ಮೋಸಗಾರಿಕೆಯಿಂದ ಪರಹಿಂಸೆಯನ್ನು ಮಾಡುತ್ತ, ಹೊಟ್ಟೆಯನ್ನು ತುಂಬಿಕೊಳ್ಳುವವನೇ ಅಧಮಾಧಮನೆನಿಸುವನು ಉತ್ತಮಪುರುಷನೆಂದೆನಿಸಿಕೊಂಡು ಬಾಳುತ್ತ ದೇಹವನ್ನು ಬಿಡುವದೇ ಮಾನವನಿಗೆ ಶ್ರೇಯಸ್ಕರವು ಇದಕ್ಕಾಗಿಯೇ ಹಿಂದೆ ಅನೇಕ ಜನ ಮಹಾತ್ಮರು ಸಕಲರೂ ದುಃಖದಿಂದ ನಿವೃತ್ತರಾಗಿ, ಮೋಕ್ಷಸಾಮ್ರಾಜ್ಯವನ್ನು ಹೊಂದಬೇಕೆಂಬಾಶೆಯಿಂದ ನಮ್ಮೆಲ್ಲರ ಹಿತಕ್ಕಾಗಿ, ಅನೇಕ ಸಿದ್ಧಾಂತಗ್ರಂಥಗಳನ್ನು ಬರೆದಿಟ್ಟಿರುವರು ನಾವು ಅವುಗಳನ್ನು ಓದಿ ತಿಳಿಯದಿದ್ದರೆ ಬಲ್ಲವರಿಂದ ತಿಳಿದುಕೊಂಡು ಅದರಂತೆ ನಡೆಯಬೇಕು ಎಲ್ಲಿಯವರೆಗೆ ಮೋಹವು ಇರುವದೋ ಅಲ್ಲಿಯವರೆಗೆ ಮನುಷ್ಯನು, ಕ್ರೂರನಾದ ಯಮನ ಕೈಯೊಳಗಿನ ಪಕ್ಷಿಯೇ ಸರಿ! ವಿಷಯಸುಖಗಳಿಗೆ ಒಲಿದವನು ಪಾಪವೆಂಬ ಬೆಂಕಿಯಲ್ಲಿ ಬೆಂದುಹೋಗುವನು ಶರೀರ, ಸ್ತ್ರೀ, ಹಣ ಇವು ನನ್ನವೆಂದು ಉಬ್ಬಿ, ಅವುಗಳಲ್ಲಿ ಮನಸ್ಸನ್ನಿಟ್ಟು ಜ್ಞಾನಿಗಳು ಹೇಳಿದ ಧರ್ಮಮಾರ್ಗವನ್ನು ಅನುಸರಿಸದೆ, ದುರ್ಮಾರ್ಗದಲ್ಲಿರುವ ವಿಷಯಾಸಕ್ತರು, ಯಮನು ಒಯ್ಯುವ ಕಾಲದಲ್ಲಿ ಮಂಗನ ಹಾಗೆ ಹಲ್ಲು ತೆರೆಯುವರು. ಇಂಥ ಜನರ ಬಾಳುವಿಕೆಯು ವ್ಯರ್ಥವು! ಆದುದರಿಂದ ಮಾನವರು ಮನಸ್ಸಿಗೆ ಬಂದಹಾಗೆ ಇಂದ್ರಿಯಗಳ ಇಚ್ಛೆಯಂತೆ ನಡೆದು ನರಕದಲ್ಲಿ ಬಿದ್ದು ಹೀನಜನ್ಮಗಳನ್ನು ಧರಿಸದೆ, ಸದಾಚಾರಸಂಪನ್ನರಾಗಿ ಗುರು-ಲಿಂಗ-ಜಂಗಮರ ಪೂಜಾ-ಧ್ಯಾನಾದಿಗಳನ್ನು ಮಾಡಿ, ಮುಕ್ತಿಸಾಮ್ರಾಜ್ಯವನ್ನು ಹೊಂದಿ ಮಾನವಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಕೋರುತ್ತೇನೆ

ಪಂಚಾಚಾರ್ಯಪ್ರಭಾ.

೧೯೪೭ನೆಯ ಆಗಸ್ಟ್ ತಾ|| ೪ನೇ ಸೋಮವಾರ

ವಿವಾಹಕರ್ಮ

ವೈದಿಕಮತೀಯರು ಅನುಷ್ಠಿಸಬೇಕಾಗಿರುವ ಷೋಡಶ ಕರ್ಮಗಳಲ್ಲಿ ವಿವಾಹಕರ್ಮವು ಮುಖ್ಯವಾಗಿರುವುದು ಈ ಕರ್ಮವೇ ಪ್ರಪಂಚೋದ್ಧಾರಕ್ಕೆ ಮೂಲಕಾರಣವಾಗಿರುವುದೆಂಬ ವಿಷಯವು ಸರ್ವರಿಗೂ ತಿಳಿದುದೇ ಆಗಿದೆ ಇಂತಹ ಶ್ರೇಷ್ಠವಾದ ಕರ್ಮವನ್ನು ಧರ್ಮಶಾಸ್ತ್ರರೀತಿಯಂತೆ ನಡೆಯಿಸುವುದು ಪ್ರತಿಯೊಬ್ಬರ ಪ್ರಥಮಕರ್ತವ್ಯವಾಗಿದೆ ಈ ಕರ್ಮದಲ್ಲಿ ವರ್ಣ, ಜಾತಿ, ಗೋತ್ರ, ಸೂತ್ರ, ಪ್ರವರಾದಿಗಳ ವಿಚಾರವು ಮೊದಲನೆಯದಾಗಿದೆ ವಧೂವರರು ಸವರ್ಣ-ಸಜಾತೀಯರಾಗಿರಬೇಕು

ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾ ವ್ರತೀ ।
ಪಿತ್ರಾದಿಭ್ಯಃ ಸಮಾದದ್ಯಾತ್ ಕನ್ಯಾಂ ಕುಲಸಮುದ್ಭವಾಂ ॥

ಶಿವಭಕ್ತರು ತಮ್ಮ ತಮ್ಮ ಜಾತಿಯವರಲ್ಲಿಯೇ ಕನ್ಯೆಯನ್ನು ತರಬೇಕೆಂದೂ ಕೊಡಬೇಕೆಂದೂ ಶ್ರೀಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯ ೯ ನೆಯ ಪರಿಚ್ಛೇದದಲ್ಲಿ ಅಪ್ಪಣೆಕೊಡಿಸಿರುವರು ಲಿಂಗಧಾರಿಗಳಾಗಿದ್ದರೂ ತಮ್ಮ ಜಾತಿಗೆ ಭಿನ್ನವಾದ ಜಾತಿಯಲ್ಲಿ ತರಲೂ ಬಾರದು ಮತ್ತು ಕೊಡಲೂಬಾರದು ಎಂಬುದೇ ಮತಾಚಾರ್ಯರ ಆಜ್ಞೆಯು ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ ಅದು ಮಿಶ್ರವಿವಾಹವೆನಿಸುವದಲ್ಲದೆ, ಜಾತಿಸಾಂಕರ್ಯವುಂಟಾಗಿ ಅದರಿಂದ ಭಯಂಕರವಾದ ಪಾಪವು ಸಂಭವಿಸುವದು ವರ್ಣವ್ಯವಸ್ಥೆಯು ಸಾಕ್ಷಾತ್ ಶಿವನಿಂದಲೇ ಹೇಳಲ್ಪಟ್ಟಿರುವದರಿಂದ ಅದನ್ನು ಯಾರೂ ಮೀರಬಾರದು

ಶಿವೋಕ್ತಾಂ ಜಾತಿಮರ್ಯಾದಾಂ ಯೋಽತೀತ್ಯ ಭುವಿ ವರ್ತತೇ
ಸ ಚಂಡಾಲ ಇತಿ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ।
ರಾಜಾಜ್ಞಾಭಂಗಕೃತ್ಸ್ಯಾನಾಂ ಯಥಾ ದಂಡೋ ವಿಧೀಯತೇ
ಶಿವಾಜ್ಞಾಭಂಗಕೃತ್ಸ್ಯಾನಾಂ ದಂಡೋ ಹಿ ನರಕಸ್ತಥಾ ॥

ಶಿವನಿಂದ ಹೇಳಲ್ಪಟ್ಟಿರುವ ಜಾತಿಮರ್ಯಾದೆಯನ್ನು ಈ ಲೋಕದಲ್ಲಿ ಯಾವನು ಮೀರಿ ನಡೆಯುವನೋ ಅವನು ಚಂಡಾಲನಾಗುವನಲ್ಲದೆ, ಸರ್ವಕರ್ಮಬಹಿಷ್ಕೃತನೂ ಆಗುವನು ರಾಜಾಜ್ಞೆಯನ್ನು ಮೀರುವವರಿಗೆ ಹೇಗೆ ದಂಡವು ವಿಧಿಸಲ್ಪಡುತ್ತದೆಯೋ, ಹಾಗೆಯೇ ಶಿವಾಜ್ಞೆಯನ್ನು ಮೀರುವವರಿಗೆ ನರಕರೂಪವಾದ ದಂಡವು ವಿಧಿಸಲ್ಪಡುವುದೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವದರಿಂದ, ಯಾರೂ ಧರ್ಮಶಾಸ್ತ್ರವಿರುದ್ಧವಾಗಿ ತಮ್ಮ ಜಾತಿಗೆ ಭಿನ್ನವಾದ ಜಾತಿಯವರಲ್ಲಿ ಶರೀರಸಂಬಂಧವನ್ನು ಮಾಡಬಾರದು ಪೂಜ್ಯರಾದ ಗುರುವಂಶೀಯರು (ಜಂಗಮರು) ಪೂಜ್ಯ ಗುರುವಂಶೀಯರಲ್ಲಿಯೂ, ಪಂಚಾಚಾರದವರು (ಪಂಚಮಸಾಲಿಯವರು) ಪಂಚಾಚಾರದವರಲ್ಲಿಯೂ, ಬಣಜಿಗರು ಬಣಜಿಗರಲ್ಲಿಯೂ, ಶೀಲವಂತರು ಶೀಲವಂತರಲ್ಲಿಯೂ, ಇದರಂತೆಯೇ ವೀರಶೈವಮತದಲ್ಲಿರುವ ನಾನಾ ಜಾತಿಯವರು ತಮ್ಮ ತಮ್ಮ ಜಾತಿಯಲ್ಲಿಯೇ ಶರೀರ ಸಂಬಂಧವನ್ನು ಮಾಡಬೇಕೆಂಬುದೇ ಧರ್ಮಶಾಸ್ತ್ರದ ಶಾಸನವು

ಇದೇ ರೀತಿ ಗೋತ್ರಸೂತ್ರಗಳ ವಿಷಯವನ್ನು ಸಹ ಚೆನ್ನಾಗಿ ವಿಮರ್ಶಿಸಬೇಕು. ವಧೂವರರ ಗೋತ್ರಸೂತ್ರಗಳು ಭಿನ್ನಭಿನ್ನವಾಗಿರಬೇಕು. ಕೆಲವರು ಗೋತ್ರಸೂತ್ರಗಳ ವಿಷಯವನ್ನು ಸರಿಯಾಗಿ ವಿಚಾರಮಾಡದೆ, ಮನೆಯ ಗುರುಗಳು ಬೇರೆಬೇರೆಯಾದರೆ ತೀರಿತೆಂದು ಭಾವಿಸಿ, ಒಂದೇ ಗೋತ್ರದಲ್ಲಿ ವಿವಾಹವನ್ನು ಮಾಡುತ್ತಾರೆ. ಇದು ಅತ್ಯಂತ ಪಾಪಮಯಕಾರ್ಯವಾಗಿದೆ

ಸ್ವಗೋತ್ರಾದನ್ಯಗೋತ್ರೇಷು ಚತುರ್ಷ್ವೇವ ವಿವಾಹವಾನ್ ।
ಸ್ವಗೋತ್ರೇ ಯದಿ ಕುರ್ವೀತ ರೌರವಂ ನರಕಂ ವ್ರಜೇತ್ ॥

ಅಂದರೆ ತನ್ನ ಗೋತ್ರವನ್ನು ಬಿಟ್ಟು ಉಳಿದ ನಾಲ್ಕು ಗೋತ್ರಗಳಲ್ಲಿ ವಿವಾಹಸಂಬಂಧವನ್ನು ಮಾಡಬೇಕೆಂದೂ, ಒಂದೇ ಗೋತ್ರದಲ್ಲಿ ಮಾಡಿದ್ದಾದರೆ ರೌರವನರಕವನ್ನು ಹೊಂದುವನೆಂದೂ ಶಿವಾಗಮಗಳು ಘಂಟಾಘೋಷವಾಗಿ ಸಾರುತ್ತವೆ ಆದುದರಿಂದ ಪ್ರತಿಯೊಬ್ಬರೂ ಮೊದಲು ಗೋತ್ರದ ವಿಷಯದಲ್ಲಿ ಬಹು ಜಾಗರೂಕರಾಗಿದ್ದು ಶರೀರಸಂಬಂಧವನ್ನು ಮಾಡಬೇಕು ಸರ್ವಕರ್ಮಶ್ರೇಷ್ಠವಾದ ಈ ವಿವಾಹಕರ್ಮವನ್ನು ಈ ಕಾಲದಲ್ಲಿ ವೈದಿಕರಾದ ಗುರುವರ್ಗದ ಮಠಾಧಿಕಾರಿಗಳು ವಿಧ್ಯುಕ್ತವಾಗಿ ಮಾಡಿಸುವುದರಲ್ಲಿ ಪರಾಙ್ಮುಖರಾಗಿದ್ದಾರೆ ಇದಕ್ಕೆಲ್ಲ ಧಾರ್ಮಿಕವಿದ್ಯೆಯ ಅಭಾವವೇ ಮೂಲಕಾರಣವಾಗಿರುವುದೆಂದು ಧಾರಾಳವಾಗಿ ಹೇಳಬಹುದಾಗಿದೆ ಮಠಾಧಿಕಾರಿಗಳು ಧರ್ಮಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಮಾಡಿ ಶಾಸ್ತ್ರೋಕ್ತರೀತಿಯಂತೆ ಕರ್ಮಗಳನ್ನು ಮಾಡಿಸುತ್ತ ಬಂದರೆ ಶಿಷ್ಯರ ಉದ್ಧಾರವಾಗುವದು ಹಾಗೆ ಮಾಡದೆ ಮನಸ್ಸಿಗೆ ಬಂದಂತೆ ಕರ್ಮವನ್ನು ಮಾಡಿಸಿದರೆ ಅತ್ಯಂತ ದೋಷಭಾಗಿಗಳಾಗುವುದರಲ್ಲಿ ಯಾವ ಸಂಶಯವೂ ಇಲ್ಲ ಇರಲಿ, ಗುರುವರ್ಗದ ಮಠಾಧಿಕಾರಿಗಳು ಇಂತಹ ಮಂಗಲಕಾರ್ಯದಲ್ಲಿ ಸ್ನಾನವನ್ನು ಮಾಡಿ, ಮಡಿಯನ್ನುಟ್ಟುಕೊಂಡು, ವೈದಿಕವೇಷದಿಂದ ವಿವಾಹಮಂಟಪಕ್ಕೆ ಆಗಮಿಸಿ, ವಿವಾಹಕಾರ್ಯವನ್ನು ನಡೆಸಿಕೊಡಬೇಕು ಆದರೆ ಕೆಲವರು ಈ ರೀತಿ ಮಾಡದೆ ಅಮಂಗಲವೇಷಧಾರಿಗಳಾಗಿ ಗದ್ದುಗೆಯ ಮೇಲೆ ಕಾಮಣ್ಣನ ಹಾಗೆ ಕುಳಿತುಕೊಂಡು, ಮಂತ್ರತಂತ್ರಗಳಿಲ್ಲದ ಸಮ್ಮನೆ ಪಂಚಾಮೃತವನ್ನು ಮಾಡಿಸುತ್ತ, ಕಂಕಣವನ್ನು ಕಟ್ಟಿ, ಮಂಗಲಸೂತ್ರವನ್ನು ಧರಿಸಿಬಿಡುವರು ಈ ರೀತಿ ಅಶಾಸ್ತ್ರವಾಗಿ ಮಾಡಿಸುವವರು ಮಹಾದೋಷಯುಗಿಗಳಾಗುವರೆಂಬುದನ್ನು ಬೇರೆ ಹೇಳಬೇಕಾದುದೇ ಇಲ್ಲ ಆದುದರಿಂದ ಈ ವಿಷಯದ ಜನರು ಇನ್ನು ಮುಂದಾದರೂ ತಮ್ಮ ಅಮಂಗಲಪ್ರವೃತ್ತಿಯಿಂದ ದೂರರಾಗಿ ಧರ್ಮಶಾಸ್ತ್ರಾನುಸಾರವಾಗಿ ವಿವಾಹಕರ್ಮವನ್ನು ನೆರವೇರಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ

ದೇಶೀಯ ಸಂಸ್ಥಾನಗಳ ಅರಸರಿಗೆ ವೈಸ್ರಾಯರ ಹಿತೋಕ್ತಿ

ರಕ್ಷಣೆ, ವಿದೇಶವ್ಯವಹಾರ ಮತ್ತು ಸಂಚಾರದ ಬಾಬುಗಳನ್ನು ಕೇಂದ್ರಕ್ಕೆ ಒಪ್ಪಿಸಬೇಕು

‘ನಿಮ್ಮ ಪ್ರಜೆಗಳ ಕ್ಷೇಮಾಭ್ಯುದಯದ ಜವಾಬ್ದಾರಿ ಹೊತ್ತಿರುವ ನೀವು ನಿಮ್ಮ ಪ್ರಜೆಗಳನ್ನು ಬಿಟ್ಟು ಹೇಗೆ ದೂರ ಹೋಗಲಾರಿರೋ, ಅದರಂತೆಯೇ ನಿಮ್ಮ ನೆರೆಯ ಡೊಮಿನಿಯನ್ ಸರ್ಕಾರವನ್ನು ಬಿಟ್ಟು ದೂರವಿರಲು ಸಾಧ್ಯವಿಲ್ಲ ’

“ಸಂಸ್ಥಾನಗಳು ಭರತಖಂಡದ ಮಹಾಡೊಮಿನಿಯನ್ನಿನೊಂದಿಗೆ ಮಿಲನವಾಗುವುದೇ ಅವುಗಳ ಪರಮ ಹಿತ ಸಾಧನೆಗೆ ಮಾರ್ಗ ”—ಹೀಗೆಂಬುದಾಗಿ ವೈಸ್ರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ದೆಹಲಿಯಲ್ಲಿ ಸೇರಿದ್ದ ನರೇಂದ್ರರ ಮತ್ತು ನರೇಂದ್ರರ ಪ್ರತಿನಿಧಿಗಳಸಭೆಯಲ್ಲಿ ಭಾಷಣಮಾಡುತ್ತ ತಿಳಿಸಿದರು.

ಇದೇ ಕಡೆಯ ಅವಕಾಶ

ಸಮ್ರಾಟರ ಪ್ರತಿನಿಧಿಯಾಗಿ ನಾನು ಈ ಸಭೆಯಲ್ಲಿ ಭಾಷಣ ಮಾಡುತ್ತಿರುವುದು ಇದೇ ಕಡೆಯ ಸಂದರ್ಭ. ಇದುವರೆಗೆ ಸಮ್ರಾಟರ ಪ್ರತಿನಿಧಿಯೂ ವೈಸ್ರಾಯರೂ ಒಬ್ಬರೇ ಆಗಿದ್ದರು ಭಾರತಕ್ಕೆಲ್ಲ ಅನ್ವಯಿಸುವ ವಿಚಾರಗಳಲ್ಲಿ ಏಕಮುಖವಾದ ಪ್ರಭುತ್ವವನ್ನು ಸ್ಥಾಪಿಸಲು ಸಾಧ್ಯವಾಗಿತ್ತು ಭರತಖಂಡವೆಲ್ಲ ಒಂದೇ ಒಂದು ಆರ್ಥಿಕ ರಚನೆಯಂತೆ ಕೆಲಸ ಮಾಡುತ್ತಿತ್ತು ಈ ಸಂಬಂಧವು ಈಗ ಕಡಿದುಹಾಕಲ್ಪಡಬೇಕಾಗಿದೆ. ಅದರ ಸ್ಥಾನದಲ್ಲಿ ಬೇರೆ ಏರ್ಪಾಟನ್ನು ಮಾಡದೇ ಇದ್ದರೆ, ಅವ್ಯವಸ್ಥೆ ತಲೆ ಹಾಕುವುದು ಖಂಡಿತ. ಈ ಅವ್ಯವಸ್ಥೆಯ ಪೆಟ್ಟು ಮೊದಲು ಸಂಸ್ಥಾನಗಳಿಗೆ ಬೀಳುತ್ತದೆ. ಸಂಸ್ಥಾನ ದೊಡ್ಡದಾಗಿದ್ದರೆ ಈ ಪೆಟ್ಟಿನ ನೋವು ತಾಳಿಸಿಕೊಳ್ಳಲು ಸ್ವಲ್ಪ ಸಾವಕಾಶವಾಗಬಹುದು ಅಷ್ಟೆ ! ಅಂತೂ ಚಿಕ್ಕ, ದೊಡ್ಡ ಸಂಸ್ಥಾನಗಳಿಗೆ ಇದರಿಂದ ಸಮಾನವಾದ ಪೆಟ್ಟು ಬೀಳುವುದಂತೂ ಖಂಡಿತ ಎಂದರು.

ಪ್ರತ್ಯೇಕ ಸಂಧಾನ ಅಸಾಧ್ಯ

“ಪಾಕಿಸ್ಥಾನ್ ಡೊಮಿನಿಯನ್ನಿಗೆ ಸಂಸ್ಥಾನಗಳು ಪ್ರವೇಶಿಸುವ ಸಂಬಂಧದಲ್ಲಿ ಅದರ ಗವರ್ನರ್ ಜನರಲ್ ಆದ ಶ್ರೀ ಎಂ ಎ ಜಿನ್ನಾರವರೇನೋ ಪ್ರತಿಯೊಂದು ಸಂಸ್ಥಾನದೊಂದಿಗೂ ಪ್ರತ್ಯೇಕವಾಗಿ ಸಂಧಾನ ಆಡಳಿತ ನಡೆಸಲು ಸಿದ್ಧರಾಗಿದ್ದಾರೆ ಆದರೆ ಇಂಡಿಯನ್ ಡೊಮಿನಿಯನ್ನಿಗೆ ಸೇರಬೇಕಾಗಿರುವ ಸಂಸ್ಥಾನಗಳ ಸಂಖ್ಯೆ ಅಪಾರವಾಗಿರುವುದರಿಂದ, ಪ್ರತಿಯೊಂದು ಸಂಸ್ಥಾನದೊಂದಿಗೂ ಸಂಧಾನ ನಡೆಸುವುದು ಅಸಾಧ್ಯ ” ಎಂದರು

ಸಂಸ್ಥಾನಗಳ ಶಾಖೆಯ ಅಧಿಕಾರಸೂತ್ರ ವಹಿಸಿಕೊಂಡಾಗ ಸರದಾರ್ ಪಟೇಲರು ಕೊಟ್ಟ ಹೇಳಿಕೆ ವಿಶೇಷ ರಾಜಕೀಯ ನೈಪುಣ್ಯದಿಂದ ಕೂಡಿದೆಯೆಂದು ವೈಸರಾಯರು ಹೇಳಿದರು.

ರಕ್ಷಣೆಗಾಗಿ ಸಹಕಾರ ಅಗತ್ಯ

ಬ್ರಿಟಿಷ್ ಮಂತ್ರಿಮಂಡಲ ನಿಯೋಗದವರು ಮುಂದಿಟ್ಟ ಯೋಜನೆಯಂತೆ ಸಂಸ್ಥಾನಗಳು ರಕ್ಷಣೆ ವಿದೇಶ ವ್ಯವಹಾರ ಮತ್ತು ಸಂಚಾರ ಮತ್ತು ಮಾರ್ಗ ಸೌಕರ್ಯ ಈ ಬಾಬುಗಳ ಆಡಳಿತವನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಡಬೇಕಾಗಿತ್ತು ಇದು ಬಹಳ ನ್ಯಾಯವಾಗಿದೆಯೆಂದು ಪ್ರತಿಯೊಬ್ಬ ಅರಸರೂ ಆಗ ಒಪ್ಪಿಕೊಂಡಿದ್ದರೆಂಬುದನ್ನು ನಾನು ಒಪ್ಪೆ ಹೊರಗಿನವರ ದಾಳಿಯನ್ನು ಎದುರಿಸುವುದರಲ್ಲಿ ಸಂಸ್ಥಾನಗಳು ಒಂದಲ್ಲ ಇನ್ನೊಂದು ಡೊಮಿನಿಯನ್‌ನೊಡನೆ ಸಹಕರಿಸದೇ ಇದ್ದರೆ ಅವುಗಳಿಗೆ ಆಧುನಿಕ ಶಸ್ತ್ರಾಸ್ತ್ರಗಳು ಬರುವ ಮಾರ್ಗಗಳೆಲ್ಲ ಬಹಳಮಟ್ಟಿಗೆ ಕಡಿದುಹಾಕಲ್ಪಡುವುವು

ವಿದೇಶ ವ್ಯವಹಾರ ಸಂಸ್ಥಾನಗಳಿಗೆ ಸಾಧ್ಯವಿಲ್ಲ

ವಿದೇಶಗಳೊಡನೆ ವ್ಯವಹಾರ ನಡೆಸುವುದಕ್ಕೂ ರಕ್ಷಣೆಗೂ ನಿಕಟ ಸಂಬಂಧವಿದೆ ಭಾರತದ ಗಡಿಯ ಹೊರಗಡೆ ಈ ಕಾರ್ಯ ನಡೆಯಬೇಕಾಗಿದೆ ಅತಿ ದೊಡ್ಡದಾದ ಸಂಸ್ಥಾನವು ಸಹ ಈ ಕಾರ್ಯವನ್ನು ಫಲಪ್ರದವಾಗಿ ಮಾಡಲಾರದು ಈಸ್ಟ್ ಇಂಡಿಯಾ ಕಂಪೆನಿಯ ಕಾಲದಿಂದ ಸಂಸ್ಥಾನಗಳು ವಿದೇಶ ವ್ಯವಹಾರ ವಿಚಾರದಲ್ಲಿ ಕೈದಾರರೆಲ್ಲ ಸಂಸ್ಥಾನಗಳು ಈಗ ಈ ಕಾರ್ಯವನ್ನು ವಹಿಸುವುದರಿಂದ ಅವುಗಳಿಗೆ ಒಂದು ಅನವಶ್ಯಕವಾದ ಹೊರೆಯೇ ಹೊರತು ಲಾಭವೇನೂ ಇಲ್ಲ ಈ ಬಾಬುಗಳ ಮತ್ತು ಸಂಚಾರದ ಬಾಬಿನ ಆಡಳಿತವನ್ನು ಸಂಸ್ಥಾನಗಳ ಸೌಕರ್ಯಕ್ಕಾಗಿ ಹೆಚ್ಚು ವಿಸ್ತಾರವಾದ ವ್ಯವಸ್ಥೆಗೆ ಒಪ್ಪಿಸುವುದು ಅವಶ್ಯಕ. ಇದು ಎಲ್ಲರಿಗೂ ಸ್ವಯಂ ವಿದಿತವಾಗಿರುವಾಗ, ಹಲವು ನರೇಂದ್ರರು ಏಕೆ ಇನ್ನೂ ಸಮ್ಮತಿಯನ್ನು ಸೂಚಿಸಲು ಹಿಂಜರಿಯುತ್ತಿದ್ದಾರೋ ನನಗೆ ತಿಳಿಯದಾಗಿದೆ

ಸಂಸ್ಥಾನಗಳಿಗೆಲ್ಲ ಕಳಿಸಿರುವ ಪ್ರವೇಶ ಪ್ರಣಾಳಿಕೆಯ ಬಗ್ಗೆ ಇಂಡಿಯಾ ಸರ್ಕಾರದವರನ್ನು ಒಪ್ಪಿಸುವ ಕಾರ್ಯ ತಮ್ಮ ಪಾಲಿಗೆ ಇನ್ನು ಉಳಿದಿದೆಯೆಂದು ವೈಸ್ರಾಯರು ಸ್ಪಷ್ಟಪಡಿಸಿದರು

‘ನೀವೆಲ್ಲ ನನ್ನೊಡನೆ ಸಹಕರಿಸಿ, ಡೊಮಿನಿಯನ್ ವ್ಯವಸ್ಥೆಗೆ ಸೇರಲು ಸಮ್ಮತಿಸಿದರೆ, ಇಂಡಿಯಾ ಸರ್ಕಾರದವರನ್ನು ನಾನು ಒಪ್ಪಿಸಬಲ್ಲೆನೆಂಬ ದೃಢನಂಬಿಕೆ ಇದೆ ಅಧಿಕಾರ ವರ್ಗಾವಣೆಯ ಕಾಲ ಬಹಳ ಸಮೀಪವಾಗುತ್ತಿದೆಯೆಂಬುದನ್ನು ಮರೆಯಬೇಡಿರಿ. ನೀವು ಸೇರುವುದಾದರೆ ಆಗಸ್ಟ್ ೧೫ ರೊಳಗೇ ಸೇರಬೇಕು” ಎಂಬುದಾಗಿ ಮೌಂಟ್ ಬೇಟನ್ನರು ನುಡಿದರು

“ಸಂಸ್ಥಾನಗಳಿಗೆ ಒಳ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದ್ದು ವಿದೇಶ ವ್ಯವಹಾರ, ರಕ್ಷಣೆ, ಸಂಚಾರ ಸೌಕರ್ಯ—ಈ ಬಾಬಿನ ಆಡಳಿತದ ಸ್ವಾತಂತ್ರ್ಯವಿಲ್ಲದಿರುವಾಗ ಭಾರತಡೊಮಿನಿಯನ್ನಿನೊಂದಿಗೆ ಸೇರುವುದೇ ಸಂಸ್ಥಾನಗಳ ಹಿತಸಾಧನೆಗೆ ಪರಮೋತ್ತಮ ಮಾರ್ಗ ದೇಶವೀಗ ಮಹಾ ಕಠಿಣ ಪರಿಸ್ಥಿತಿಯನ್ನು ದಾಟಬೇಕಾಗಿದೆ ಯಾವುದೇ ಸಂಸ್ಥಾನವೂ ಸಹಿಸಲಾರದಷ್ಟು ಮಟ್ಟಿನ ಆಡಳಿತ ಸ್ವಾತಂತ್ರ್ಯವನ್ನು ತ್ಯಜಿಸಬೇಕೆಂದು ನಾನು ಕೇಳುತ್ತಿಲ್ಲ. ಈ ಯೋಜನೆಯು ನಿಮಗೆ ಎಲ್ಲ ಬಗೆಯ ಸ್ವಾತಂತ್ರ್ಯವನ್ನೂ ನೀಡಿ, ನೀವು ನಿರ್ವಹಿಸಲಾರದ ಬಾಬುಗಳ ಹೊರೆಯನ್ನು ತಪ್ಪಿಸುತ್ತದೆ” ಎಂದರು.

ಸಮ್ಮೇಳನಕ್ಕೆ ೧೦೦ ಕ್ಕಿಂತ ಹೆಚ್ಚು ಜನ ಅರಸರೂ ಸರ ಪ್ರತಿನಿಧಿಗಳೂ ಬಂದಿದ್ದರು. ವೈಸ್ರಾಯರ ಷಣವಾದ ಮೇಲೆ ನರೇಂದ್ರರ ಪ್ರವೇಶ ಪ್ರಣಾಳಿಕೆ ನ್ನು ಕುರಿತು ಚರ್ಚಿಸಲಾಯಿತು

ನರೇಂದ್ರರ ಪ್ರವೇಶ ಪ್ರಣಾಳಿಕೆಯ ಮುಖ್ಯ ನಿಯಮ ವೆಂದು ತಿಳಿದುಬಂದಿದೆ

(೧) ಈಗ ಎರಡರಲ್ಲಿ ಒಂದು ಡೊಮಿನಿಯನ್ನಿಗೆ ರುವ ಸಂಸ್ಥಾನವು ಮುಂದೆ ಸಿದ್ಧವಾಗುವ ರಾಜ್ಯಾಂ ಸೇರಬೇಕೆಂಬ ನಿಯಮವಿಲ್ಲ.

(೨) ನರೇಂದ್ರರು ಒಪ್ಪಿದ ಹೊರತು ಪ್ರವೇಶ ಾಳಿಕೆಯನ್ನು ತಿದ್ದುಪಡಿ ಮಾಡುವುದಿಲ್ಲ.

(೩) ಸಂಸ್ಥಾನಗಳಲ್ಲಿ ನಿರ್ಬಂಧವಾಗಿ ಜಮೀನನ್ನು ಶಪಡಿಸಿಕೊಳ್ಳುವ ಬಗ್ಗೆ ಶಾಸನ ಮಾಡುವ ಅಧಿಕಾರ ಮಿನಿಯನ್ ಶಾಸನ ಸಭೆಗೆ ಇಲ್ಲ. ನರೇಂದ್ರರೇ ಮಿನಿಯನ್ ಸರ್ಕಾರದ ಪರವಾಗಿ ಭೂಮಿಯನ್ನು ಧೀನಪಡಿಸಿಕೊಳ್ಳಬೇಕು

ರಾಜ್ಯಾಂಗ ಸಭೆಯಲ್ಲಿ ಮೈಸೂರು ದಿವಾನರ ಭಾಷಣ

ಶಾಸನವನ್ನು ರಚಿಸುವ ಅಧಿಕಾರವು ಮಾತ್ರ ಫೆಡ ಷನ್ನಿಗೆ ಸೇರಲಿ, ಬಾಧಕವಿಲ್ಲ, ಆದರೆ ಅಧಿಕಾರವು ಸ್ಥಾನಗಳಿಗೇ ಸೇರಬೇಕು ಅನೇಕ ಸಂಸ್ಥಾನ ಲ್ಲಿ ಸರ್ಕಾರದ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳು ವಹಿಸಲು ಅವರಿಗೆ ಅವಕಾಶ ಕಲ್ಪಿಸಿಕೊಡಲಾ ಈ ಸಂದರ್ಭದಲ್ಲಿ ಸಂಸ್ಥಾನಗಳಿಗೆ ಮೇಲ್ಕಂಡ ಕಾರವಿರುವುದು ಸಮಂಜಸವಾಗಿಯೇ ಇದೆ ' ಹೀಗೆಂ ವಾಗಿ ಸಂಸ್ಥಾನಗಳ ವಿಚಾರದಲ್ಲಿ ಭಾವಿ ಫೆಡರೇಷನ್ನಿ ಬೇಕಾದ ಅಧಿಕಾರ ಪರಿಮಿತಿಯ ವಿಚಾರ ಕುರಿತು ಸೂರು ಸಂಸ್ಥಾನದ ದಿವಾನರವರಾದ ಸರ್ ಆರ್ಕಾ ರಾಮಸ್ವಾಮಿ ಮೊದಲಿಯಾರವರು ಭಾರತದ ಜ್ಯಾಂಗರಚನಾಸಭೆಯಲ್ಲಿ ತಿಳಿಸಿದರು

ಸಂಸ್ಥಾನಗಳ ವಿಚಾರದಲ್ಲಿ ಫೆಡರೇಷನ್ನಿನ ಅಧಿಕಾರ ವ್ಯಾಪ್ತಿಯನ್ನು ನಿರ್ಧಾರಗೊಳಿಸುವ ವಿಧಿಗೆ ರಾಜ್ಯಾಂಗ ಭೆಯ ಅನುಮೋದನೆ ದೊರೆಯಿತು ಅವಶ್ಯಕತೆ ೀರಿಬಂದ ಸಂದರ್ಭದಲ್ಲಿ ಖಚಿತವಾಗಿ ಅಧಿಕಾರ ವ್ಯಾಪ್ತಿಯನ್ನು ನಿರ್ದಿಷ್ಟಗೊಳಿಸುವವರೆಗೂ ನರೇಂದ್ರರು ಲ್ಲಾ ಅಧಿಕಾರಗಳನ್ನೂ ಚಲಾಯಿಸಬಹುದು ಎಂಬ ಯನ್ನು ರಾಜ್ಯಾಂಗ ಸಭೆಯು ಒಪ್ಪಿತು.

"ಸಂಸ್ಥಾನಗಳ ಮಂತ್ರಿಗಳಲ್ಲಿ ಕೆಲವರು ಭಾರತ ರ್ಕಾರ ಶಾಸನದ ೧೨೫ನೆಯ ವಿಧಿಯನ್ನು ರಾಜ್ಯಾಂಗ ಲ್ಲಿ ಸೇರಿಸಬೇಕೆಂಬ ನಿರ್ಣಯವನ್ನು ಮಂಡಿಸುವವರ ದ್ದರು. ಆದರೆ ಸರ್ ಎನ್ ಗೋಪಾಲಸ್ವಾಮಿ ಯ್ಯಂಗಾರ್‍ಯರು ತಿದ್ದುಪಡಿಯನ್ನು ತಂದುದರಿಂದ ಆ ರ್ಣಯವನ್ನು ಅವರು ಮಂಡಿಸಲಿಲ್ಲ. ಫೆಡರೇಷನ್ನಿನ ಕಾರಗಳನ್ನು ನರೇಂದ್ರರು ತಮ್ಮ ಸಂಸ್ಥಾನಗಳಲ್ಲಿ ನ್ನ ಅಧಿಕಾರಿಗಳ ಮೂಲಕ ಚಲಾಯಿಸಬಹುದು, ದು ಆ ಶಾಸನದಲ್ಲಿ ನಮೂದಿಸಲಾಗಿದೆ. ಭಾರತ ರ್ಕಾರದ ಶಾಸನವು ರಚನೆಯಾಗುತ್ತಿದ್ದ ವೇಳೆಯಲ್ಲಿ ಂಡ್‌ಟೇಬಲ್ ಸಮ್ಮೇಳನದ ಅನೇಕ ಅಧಿವೇಶನ ಲ್ಲಿ ಶಾಸನಾಧಿಕಾರವು ಫೆಡರಲ್ ಶಾಸನ ಸಭೆಗಳಿರ ಬೇಕೆಂದೂ, ಆದರೆ ಶಾಸನಗಳನ್ನು ಆಡಳಿತದಲ್ಲಿ ಲಾಯಿಸುವ ಅಧಿಕಾರವು ಸಂಸ್ಥಾನಗಳಿಗೇ ಸೇರಿರಬೇ ಂದೂ ಒಪ್ಪಲಾಗಿದೆ" ಎಂಬುದಾಗಿ ಸರ್ ಆರ್ಕಾಟ ವರು ತಿಳಿಸಿದರು

ಸಂಸ್ಥಾನಗಳಲ್ಲಿ ಜಾಗೃತಿ

ಸರ್ ಆರ್ಕಾಟರವರು ಮುಂದುವರಿದು ಸಂಸ್ಥಾನ ಗಳಲ್ಲಿ ಉಂಟಾಗಿರುವ ಜಾಗೃತಿ ಮತ್ತು ರಾಜಕೀಯ ಗತಿಯನ್ನು ವಿವರಿಸಿದರು.

"ಪ್ರಾಂತಗಳಿಗೆ ಹೆಚ್ಚು ಅಧಿಕಾರ ಕೊಡುವಹಾಗೆ ೆ ಸಂಸ್ಥಾನ ಸರ್ಕಾರಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಕು. ಕೇಂದ್ರದಲ್ಲಿ ಬಲವಾದ ಸರ್ಕಾರವಿರಬೇಕೆಂಬು ನ್ನು ನಾನು ಒಪ್ಪುತ್ತೇನೆ. ಆದರೆ ಕೇಂದ್ರ ಸರ್ಕಾರದ ೀನದಲ್ಲಿ ಹೆಚ್ಚು ಅಧಿಕಾರಗಳಿದ್ದ ಮಾತ್ರಕ್ಕೇ ಬಲಿಷ್ಠವಾದ ಕೇಂದ್ರವೆಂದು ನಾನು ಭಾವಿಸುವು ದಿಲ್ಲ; ಅದರ ಬದಲು ಅದರ ಶಕ್ತಿ ಕುಂದಿ ಬಲಹೀನ ವಾದ ಸರ್ಕಾರವಾಗುವುದು" ಎಂದು ಹೇಳಿದರು.

ಸರ್ ಅಲ್ಲಾಡಿಯವರ ವಾದಸರಣಿ

"ನಾವು ಗಮನಿಸಬೇಕಾದ ಮುಖ್ಯತತ್ವವಾವುದೆಂ ದರೆ ಶಾಸನಗಳನ್ನು ಮಾಡುವ ಅಧಿಕಾರವು ಫೆಡರೇಷ ನ್ನಿಗೆ ಇದ್ದರೆ ಫೆಡರಲ್ ವ್ಯವಸ್ಥೆಗೆ ಸೇರಿದ ಎಲ್ಲಾ ಭಾಗಗಳಲ್ಲಿಯೂ ಅದನ್ನು ಚಲಾಯಿಸುವ ಅಧಿಕಾರವೂ ಫೆಡರೇಷನ್ನಿಗಿರಬೇಕು ತನ್ನ ಅಧಿಕಾರವನ್ನು ಪ್ರಾಂತ ಅಥವಾ ಸಂಸ್ಥಾನಗಳಿಗೆ ಒಪ್ಪಿಸುವ ಅಧಿಕಾರ ಫೆಡರೇಷ ನ್ನಿಗೇ ಸೇರಿರಬೇಕು" ಎಂಬುದಾಗಿ ಸರ್ ಅಲ್ಲಾಡಿ ಯವರು ವಾದಿಸಿದರು.

ದೇಶೀಯ ಸಂಸ್ಥಾನಗಳು ಮತ್ತು ಫೆಡರಲ್ ಕೇಂ ದ್ರಕ್ಕೆ ಆಗಬೇಕಾದ ಒಪ್ಪಂದದ ಬಗ್ಗೆ ಸರ್ ಅಲ್ಲಾಡಿ ಯವರು ತಂದ ನಿರ್ಣಯದ ಪರಿಶೀಲನೆಯನ್ನು ಮುಂ ದಕ್ಕೆ ಹಾಕಲಾಯಿತು ಹಾಗೆಯೇ ಯೂನಿಯನ್ ಅಧ್ಯಕ್ಷರ ಕರ್ತವ್ಯಗಳ ವಿಷಯವನ್ನೂ ಮುಂದಕ್ಕೆ ಹಾಕ ಲಾಯಿತು

ಎಲ್ಲ ಸಂಸ್ಥಾನಗಳೂ ಇಂಡಿಯನ್ ಯೂನಿಯನ್ನಿಗೆ ಸೇರುವ ಸಂಭವವಿದೆ

ಪ್ರವೇಶ ಕರಾರೊಂದನ್ನೂ ಮತ್ತು ಭಾರತ ಡೊಮಿನಿ ಯನ್ನಿನೊಂದಿಗೆ ಮಾಡಿಕೊಳ್ಳಬೇಕಾದ ಒಪ್ಪಂದವನ್ನೂ ಸಿದ್ಧಗೊಳಿಸಲೋಸುಗ ನರೇಂದ್ರರ ಸಮ್ಮೇಳನದಲ್ಲಿ ನೇಮಿಸಲ್ಪಟ್ಟಿದ್ದ ಎರಡು ಸಮಿತಿಗಳೂ ತಮ್ಮ ವರದಿ ಯನ್ನು ಒಪ್ಪಿಸಿವೆ ಈ ವರದಿಗಳನ್ನು ಸಂಸ್ಥಾನಗಳ ಶಾಖೆಗೆ ಕಳುಹಿಸಲಾಗಿದೆ

ರಾಜರ ಪರಮಾಧಿಕಾರ ಕುರಿತು ವಿಧಿ

ಮೊದಲೇ ಸಿದ್ಧವಾಗಿದ್ದ ಕರಡು ಪ್ರತಿಗಳಲ್ಲಿ ಸಮಿತಿ ಯವರು ಹೆಚ್ಚಿನ ಬದಲಾವಣೆ ಏನನ್ನೂ ಮಾಡಿಲ್ಲ ಹಲವು ಸಣ್ಣ ತಿದ್ದುಪಡಿಗಳನ್ನು ಸೂಚಿಸಲಾಗಿದ ಒಪ್ಪ ಕೇಂದ್ರಕ್ಕೆ ಬಿಟ್ಟುಕೊಡದಿರುವ ಬಾಬುಗಳಲ್ಲಿ ಸಂಸ್ಥಾನಗಳೊಳಗೆ ಅರಸರಿಗೆ ಪರಮಾಧಿಕಾರವಿರತಕ್ಕ ದ್ದೆಂದು ಒತ್ತಿಹೇಳಲು ಒಂದು ವಿಧಿಯನ್ನು ಪ್ರವೇಶ ಕರಾರಿಗೆ ಹೊಸದಾಗಿ ಸೇರಿಸಿವೆ

ಸಂಸ್ಥಾನಗಳಿಗೂ ಕೇಂದ್ರಕ್ಕೂ ಅಥವಾ ಸಂಸ್ಥಾನ ಗಳಿಗೂ ಪ್ರಾಂತ್ಯಗಳಿಗೂ ಜಗಳ ಉಂಟಾದರೆ ಪಂಚಾ ಯಿತಿ ನಡೆಸಲು ಅವಕಾಶವಾಗುವಂತೆ ತಿದ್ದುಪಡಿ ಸೂಚಿಸಲಾಗಿದೆ

ಪ್ರವೇಶಕರಾರಿಗೆ ರುಜು ಹಾಕಲು ಮತ್ತು ಫೆಡ ರೇಷನ್ನಿಗೆ ಸೇರಲು ಇಷ್ಟಪಡದೆ, ಡೊಮಿನಿಯನ್ ಸರ್ಕಾರದೊಡನೆ ನೇರವಾಗಿ ಒಪ್ಪಂದ ಮಾಡಿಕೊಳ್ಳಲು ಬಯಸುವ ಸಂಸ್ಥಾನಗಳ ಬಗ್ಗೆ ಭಾರತ ಸರ್ಕಾರದ ಅಭಿಪ್ರಾಯವನ್ನು ಸರ್ದಾರ್ ಪಟೇಲರು ಅಂತಹ ಸಂಸ್ಥಾನಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದಾಗ ಸೂಚಿಸಿದರೆಂದು ಗೊತ್ತಾಗಿದೆ. "ಮೊದಲು ನೀವು ಡೊಮಿನಿಯನ್ನಿಗೆ ಸೇರಬೇಕು. ಆಮೇಲೆ ಮಾತ್ರ ವಿಶೇಷ ಒಪ್ಪಂದದ ವಿಚಾರವನ್ನು ವಿಮರ್ಶಿಸಲಾಗು ವುದು" ಎಂಬುದಾಗಿ ಸರ್ದಾರರು ಸೂಚಿಸಿದರೆಂದು ಗೊತ್ತಾಗಿದೆ. ಆದ್ದರಿಂದ ಪ್ರತ್ಯೇಕವಾಗಿ ಉಳಿಯಲು ಬಯಸುವ ಸಂಸ್ಥಾನಗಳ ಸ್ಥಾನ ಏನೆಂಬುದು ಇನ್ನೂ ಅಸ್ಪಷ್ಟವಾಗಿಯೇ ಇದೆ.

ಡೊಮಿನಿಯನ್ ಸೈನ್ಯಾಧಿಕಾರಿಗಳು

ಆಗಸ್ಟ್ ೧೫ ರಿಂದ ಭೂಸೇನೆ, ನೌಕಾದಳ ಮತ್ತು ವಿಮಾನದಳಗಳ ಮೇಲ್ವಿಚಾರಣೆಗೆ ಎರಡು ಡೊಮಿನಿ ಯನ್‌ಗಳೂ ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಿವೆ. ಭಾರತದ ಭೂಸೇನೆಗೆ ಸರ್ ರಾಬರ್ಟ್ ಲೋಕ್ ಹಾರ್ಟರೂ, ಪಾಕೀಸ್ಥಾನದ ಭೂಸೇನೆಗೆ ಲೆ|| ಜ|| ಮೆಸ್ಸರ್ವೆಯವರೂ ನಾಯಕರು. ಭಾರತದ ನೌಕಾದಳಕ್ಕೆ ಕ್ಯಾ|| ಹೇಲರವರೂ, ಪಾಕಿಸ್ಥಾನದ ನೌಕಾದಳಕ್ಕೆ ಕಮೋಡೋರ್ ಜಫರ್ಡ್‌ರವರೂ ನಾಯಕರು. ಸರ್ ಥಾಮಸ್‌ಎಲ್ಮ್‌ಹರ್ಸ್ಟ್‌ರವರು ಭಾರತದ ವಿಮಾನದಳದ ನಾಯಕರು. ಪಾಕಿಸ್ಥಾನದ ವಿಮಾನದಳಕ್ಕೆ ವೈಸ್- ಮಾರ್ಷಲ್ ಪೆರಿಯವರು ನಾಯಕರು.

ಬೊಂಬಾಯಿ ಸರ್ಕಾರಕ್ಕೆ ಸೂಚನೆ

ಆಗಸ್ಟ್ ೧೫ನೆಯ ತಾ|| ನಿವೃತ್ತರಾಗುವುದಾಗಿ ಬೊಂಬಾಯಿ ನಗರ ಮತ್ತು ಪ್ರಾಂತ್ಯ ಪೋಲೀಸ್ ಶಾಖೆ ಯಲ್ಲಿರುವ ೨೨ ಮಂದಿ ಯುರೋಪ್ಯ ಅಧಿಕಾರಿಗಳು ಸೂಚನೆ ಕೊಟ್ಟಿದ್ದಾರೆ.

ಇಂಡಿಯಾ ಸರ್ಕಾರಕ್ಕೆ ತಿರುವಾಂಕೂರಿನ ಎರಡು ಷರತ್ತುಗಳು

ಭಾರತ ಯೂನಿಯನ್ನಿಗೆ ಸೇರಲು ಸಿದ್ಧವಾಗಿರುವು ದಾಗಿ ತಿರುವಾಂಕೂರು ಸರಕಾರದವರು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದಾರೆಂದು ಅಧಿಕಾರಯುತವಾಗಿ ತಿಳಿ ದುಬಂದಿದೆ ಹಾಗೆ ಸೇರಲು ತಿರುವಾಂಕೂರು ಸರ್ಕಾರವು ಎರಡು ಷರತ್ತುಗಳನ್ನು ಹಾಕಿದೆ

೧ ಲಂಡನ್ನಿನಲ್ಲಿ ಟ್ರೇಡ್ ಕಮಿಷನರ್ ಒಬ್ಬರನ್ನು ಇಟ್ಟುಕೊಳ್ಳಲು ತಿರುವಾಂಕೂರಿಗೆ ಹಕ್ಕಿರಬೇಕು.

೨ 'ಇಂಡಿಯಾ' ಸರ್ಕಾರದ ಮೂಲಕ' ಪಾಕಿ ಸ್ಥಾನದಲ್ಲಿ ತಿರುವಾಂಕೂರಿನ ಪ್ರತಿನಿಧಿಗಳನ್ನು ನೇಮಿ ಸಲು ತಿರುವಾಂಕೂರಿಗೆ ಅಧಿಕಾರವಿರಬೇಕು

ಪಾಕಿಸ್ಥಾನದ ನೋಟುಗಳು

ಪಾಕಿಸ್ಥಾನದಲ್ಲಿ ಚಲಾವಣೆಗೆ ಬರುವ ನೋಟುಗಳು ಈಗ ನಾಸಿಕದಲ್ಲಿ ಅಚ್ಚಾಗುತ್ತಿವೆ ಅವು ಈಗಿರುವ ನೋಟಿನಂತೆಯೇ ಇವೆ ಆದರೆ 'ಭಾರತ ಸರ್ಕಾರ' ಎಂಬುದರ ಬದಲು 'ಪಾಕಿಸ್ಥಾನ್ ಡೊಮಿನಿಯನ್' ಎಂದಿದೆ

ಮೈಸೂರು ಸಂಸ್ಥಾನದ ಪೊಗದಿ ವಜಾ

ಮೈಸೂರು ಸಂಸ್ಥಾನವು ಪ್ರತಿ ವರ್ಷವೂ ಬ್ರಿಟಿಷ್ ಸರ್ಕಾರಕ್ಕೆ ೧೯ ಲಕ್ಷ ರೂಪಾಯಿಗಳ ಪೊಗದಿಯನ್ನು ಸಲ್ಲಿಸುತ್ತಿತ್ತು ಆಗಸ್ಟ್ ೧೫ನೆಯ ತಾರೀಖಿನಿಂದ ಅದು ವಜಾ ಆಗುತ್ತದೆ

ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯ ಸಂಸ್ಕೃತಕಾಲೇಜ್ ಫ್ರೀಬೋರ್ಡಿಂಗ್ ಸಂಸ್ಥೆ, ಶ್ರೀಮಹಂತಿನಮಠ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಫ್ರೀ ಬೋರ್ಡಿಂಗ್ ಸಂಸ್ಕೃತ ಮತ್ತು ವೇದ, ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಕಳೆದ ವರ್ಷ ತಮ್ಮಗಳ ಉದಾರಾಶ್ರಯ ದಿಂದ ೧೧೫ ಜನ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಟ್ಟು ಸಹಾಯಮಾಡಿದಂತೆಯೇ ಈ ಸಾರೆಯೂ ಕೂಡ ತಮ್ಮಗಳ ಹೆಚ್ಚಿನ ಉದಾರಾಶ್ರಯವನ್ನು ನಂಬಿ ೧೪೬ ಜನ ಬಡ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಕೊಟ್ಟಿರಲಾಗಿದೆ. ಆದ್ದರಿಂದ ತಾವುಗಳು ಇನ್ನೂ ಹೆಚ್ಚಾಗಿ ಸಹಾಯಮಾಡಿ ಧನ್ಯರಾಗುತ್ತೀರೆಂದು ನಂಬಿದ್ದೇವೆ.

ಯಜಮಾನ ಕೆಂಚಪ್ಪ ಅಂಡ್ ಬ್ರದರ್ಸ್.

ಸ್ವೀಕಾರ

ಬೆಳಗಾಂವ ಜಿ|| ತೇರದಾಳ ಗ್ರಾಮದಲ್ಲಿರುವ ಮ|| ರಾ|| ಗಿರಿಮಲ್ಲಪ್ಪಾ ಗುಡ್ಡಿ ಇವರ ಮಕ್ಕಳ ವಿವಾಹ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 2 ರೂಪಾಯಿಗಳು ತೇರದಾಳ ಹಿರೇಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಜೀವನಕ್ಕೆ ಮಾರ್ಗವಿಲ್ಲದೆ ಗಂಡ ಹೆಂಡರು ಸತ್ತರು

ಬೊಂಬಾಯಿಯಲ್ಲಿ ವಾಸಿಸುತ್ತಿದ್ದ ಗಂಡಹೆಂಡರಿಬ್ಬರಿಗೆ ಜೀವನ ಸಾಗಿಸುವುದು ಬಹಳ ಕಷ್ಟವಾಯಿತಂತೆ! ಹಣ ಗಳಿಸಲು ಮಾರ್ಗವೇ ಇಲ್ಲದಿರಲು ಅವರು ಮೈಗೆ ಸೀಮೆಯೆಣ್ಣೆ ಸುರಿದುಕೊಂಡು, ಬೆಂಕಿ ಹೊತ್ತಿಸಿಕೊಂಡರು ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಲಾಯಿತು ದಾರಿಯಲ್ಲಿಯೇ ಗಂಡನು ಸತ್ತನು ಆಸ್ಪತ್ರೆಯಲ್ಲಿ ಹೆಂಡತಿ ಸತ್ತಳು ಈ ದಂಪತಿಗಳು ದಕ್ಷಿಣಭಾರತದ ಆಯ್ಯರ್ ಜಾತಿಗೆ ಸೇರಿದವರು

ಡೆಹರಾಡೂನ್‌ನಲ್ಲಿ ಭೂಕಂಪ

ಕಳೆದ ೨೯ ನೇ ತಾ॥ ಸಂಜೆ ೭ ಘಂಟೆಯಲ್ಲಿ ಡೆಹರಾಡೂನ್‌ನಲ್ಲಿ ಭೂಕಂಪ ಸಂಭವಿಸಿತು ಸುಮಾರು ೯೦೦ ಮೈಲಿ ಸುತ್ತಳತೆಯಲ್ಲಿ ಭೂಮಿ ನಡುಗಿತೆಂದು ಸ್ಥಿರಪಡಿಸಲಾಗಿದ

ಬಟ್ಟೆ ಕಂಟ್ರೋಲ್ ರದ್ದಾಗುವುದಿಲ್ಲ

ಬಟ್ಟೆ ಕಂಟ್ರೋಲನ್ನು ಇನ್ನು ಅನಿರ್ದಿಷ್ಟಕಾಲದವರೆಗೂ ರದ್ದುಗೊಳಿಸಲಾಗುವುದಿಲ್ಲವೆಂದು ಇಂಡಿಯಾ ಸರ್ಕಾರವು ನಿರ್ಧರಿಸಿದೆಯೆಂದು ತಿಳಿದುಬಂದಿದೆ ಕಂಟ್ರೋಲ್ ತೆಗೆಯಬೇಕೆಂಬ ಸಲಹೆಯನ್ನು ಪ್ರಕೃತ ಪರಿಸ್ಥಿತಿಗನುಗುಣವಾಗಿ ಕೇಂದ್ರ ಸರ್ಕಾರವು ತಳ್ಳಿಹಾಕಿದ ಈಗಿರುವ ಬಟ್ಟೆ ಕಂಟ್ರೋಲ್ ವ್ಯವಸ್ಥೆಯನ್ನು ಸುಧಾರಿಸಿ ವ್ಯವಸ್ಥೆಗೊಳಿಸಲಾಗುವುದು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—
ವಿದ್ಯಾಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೪—
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—
,, ,, ,, ಚಿಕ್ಕ ಸೈಜು ಬೆಲೆ	೦—೧—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ...	೨ ಆಣೆ
ಶಿವಶಕ್ತಿವಿಲಾಸ ..	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ	೮ ಆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
ಸದ್ಬೋಧರತ್ನಾವಳಿ	೮ ಆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ..	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4
The Philosophical Aspect of Virasaivism (*English*) ..	8
Speeches by Pandit Shri Kashinatha Shastriji (*English*)	12
लिंगधारणचंद्रिका (संस्कृत) ..	३
वीरशैवदर्शन (मराठी)	१
महानारायणोपनिषत् (वीरशैवभाष्य-संस्कृत)	१
सिद्धांतशिखामणि (मूल)	८
नंदिकेश्वरकारिका (संस्कृत)	२

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪ ಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪-ಆಣೆ

ಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಆಗಸ್ಟ್ ೧೯೪೭ [ಸಂಚಿಕೆ ೧೬

ಶ್ರೀರಂಭಾಪುರೀಪೀಠದಲ್ಲಿ ಪ್ರತಿಷ್ಠಿಸಲ್ಪಟ್ಟಿರುವ ಶಿಲಾಶಾಸನಗಳು

ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಎರಡು ಶಿಲಾಶಾಸನಗಳು ಪ್ರತಿಷ್ಠಿಸಲ್ಪಟ್ಟಿರುವವು. ಶಾಸನಗಳಲ್ಲಿ ಶ್ರೀರಂಭಾಪುರೀ ಮಹಾಪೀಠದ ದರ್ಶನಕ್ಕಾಗಿ ಮೈಸೂರು ದೇಶದ ಯಾವ ಯಾವ ರಾಜರು ಯಾವ ಯಾವ ಶುಭದಿವಸ ಆಗಮಿಸಿದ್ದರೆಂಬ ವಿಷಯವು ಉಲ್ಲೇಖಿಸಲ್ಪಟ್ಟಿರುವುದಲ್ಲದೆ, ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಕಾಲದಲ್ಲಿ ನಡೆದ ಕಾರ್ಯಗಳು ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವವು. ಮತ್ತು ಅವರು ಮೈಸೂರು ಮಹಾಪ್ರಭುವರ ಆಮಂತ್ರಣದಮೇರೆಗೆ ಅರಮನೆಗೆ ದಯಮಾಡಿಸಿದ ವಿಷಯವೂ ಸಹ ಉಲ್ಲೇಖಿಸಲ್ಪಟ್ಟಿರುವುದು. ತಕ್ಕೂ ಮತ್ತು ಪೀಠಕ್ಕೂ ಮಹಾಗೌರವವನ್ನುಂಟುಮಾಡತಕ್ಕ ಅನೇಕ ಮಹತ್ತ್ವವಿಷಯಗಳಿಂದ ಡಿರುವ ಈ ಎರಡೂ ಶಾಸನಗಳು ಪ್ರತಿಯೊಬ್ಬ ವೀರಶೈವರ ಮನೆಯಲ್ಲಿಯೂ ರಾರಾಜಿಸಲೆಂಬ ದ್ದೇಶದಿಂದ ಅವುಗಳನ್ನು ಎರಡು ಬಣ್ಣಗಳಲ್ಲಿ ಬಹು ಸುಂದರವಾಗಿ ಮುದ್ರಿಸಿದ್ದೇವೆ. ಆದುದರಿಂದ ತಿಯೊಬ್ಬ ಗುರುಭಕ್ತರೂ ಇವುಗಳನ್ನು ತರಿಸಿಕೊಂಡು ಫೋಟೋಗಳಂತೆ ಚೌಕಟ್ಟುಹಾಕಿಸಿಟ್ಟುಕೊಳ್ಳ ಕು. ಇವುಗಳನ್ನು ಓದಿ ನೋಡುವುದರಿಂದ ಸರ್ವರಿಗೂ ಆ ಮಹಾಪೀಠದ ಪ್ರಭಾವವು ಸ್ಫುಟವಾಗಿ ತೀರುವುದು. ಒಂದು ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ ಪಿ ಕಳಿಸುವದಿಲ್ಲ ಸ್ವಲ್ಪಕಾಪಿಗಳನ್ನು ಸಿಕೊಳ್ಳುವವರು ಅದರ ಬೆಲೆಯು ಪೋಸ್ಟ್ ಸ್ಟಾಂಪು ಮತ್ತು ಅವುಗಳನ್ನು ಕಳಿಸುವದಕ್ಕೆ ೧ ಆಣೆ ಪೋಸ್ಟ್ ಸ್ಟಾಂಪು ಕಳಿಸಬೇಕು. **ಬೆಲೆ ೨ ಆಣೆ.**

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಇಂಡಿಯಾದೇಶದಲ್ಲಿ ಭೋಜನ ಪದ್ಧತಿಗಳು

ಇಂಡಿಯಾದೇಶದ ಜನರು ತಮ್ಮ ದಾರಿದ್ರ್ಯದ ದೆಸೆಯಿಂದ ಅನೇಕ ಕಷ್ಟಗಳನ್ನು ಅನುಭವಿಸಿ, ಆ ಮೂಲಕ ತಮ್ಮ ಜೀವನಮಾನವಿಷಯದಲ್ಲಿ ಅನುಕೂಲವಾದ ವು ಸಂಗತಿಗಳನ್ನು ತಿಳಿದುಕೊಳ್ಳಬಹುದಾಯಿತು ದಿನವೂ ದುಡಿದು ಕೆಲಸಮಾಡಿ ಅದರಿಂದ ಎಂಟು ತ್ತು ಆಣೆಗಳನ್ನು ತಾವು ದೊಡ್ಡ ದೊಡ್ಡ ಕುಟುಂಬ ಣಕ್ಕಾಗಿ ಉಪಯೋಗಿಸುವುದರಲ್ಲಿ ಮಿತವಿರಬೇಕಾದು ಅವರಿಗೆ ಅತ್ಯವಶ್ಯಕವಾಗಿರುವುದರಿಂದ ಪ್ರಾಣ ರಣೆಗೂ, ಕಾರ್ಯಸಾಮರ್ಥ್ಯವನ್ನು ಕೊಡುವುದಕ್ಕೂ ಷ್ಟು ಆಹಾರವನ್ನು ಸೇವಿಸಬೇಕೆಂಬುದು ಅವರಿಗೆ ನ್ನಾಗಿ ತಿಳಿದಿದೆ ಹೀಗೆ ಸ್ವಂತ ಅನುಭವಗಳಿಂದ ಡುಬಂದಿರುವ ಜ್ಞಾನವು ಇಂಡಿಯಾದೇಶದಲ್ಲೆಲ್ಲ ನ್ನಾಗಿ ಹರಡಿರುವುದು ಇವರಿಂದ ನಮ್ಮ ದೇಶದ ಯಾವ ಸ್ತ್ರೀಯನ್ನಾಗಲಿ, ಪುರುಷನನ್ನಾಗಲಿ ಕೇಳಿದರೂ ತಿಯೊಬ್ಬರ ಆಹಾರಕ್ಕೆ ಬೇಕಾದ ಅಕ್ಕಿ, ಬೇಳೆ, ಲು, ತರಕಾರಿಗಳು, ಎಣ್ಣೆ ಮತ್ತು ತುಪ್ಪ ಇವುಗಳ ಮಾಣಗಳನ್ನು ಇಷ್ಟಿಷ್ಟೆಂದು ಹೇಳುವುದರಿಂದಲೇ ಹಪೋಷಣೆಗೆ ಬೇಕಾದ ಕಾರ್ಬೋಹೈಡ್ರೇಟುಗಳು, ಪ್ರೋಟೀನ್ ಮತ್ತು ಕೊಬ್ಬಿನ ಪ್ರಮಾಣಗಳನ್ನು ವೆಂದು ತಿಳಿಸುವರು.

ಮೇಲೆ ಹೇಳಿದ ಆಹಾರಪದಾರ್ಥಗಳ ಪ್ರಮಾಣವು ತಮಂಥದ ಬೇರೆ ಬೇರೆ ಭಾಗಗಳಲ್ಲಿ ಸ್ವಲ್ಪ ಹೆಚ್ಚು ಮೆಯಾಗಬಹುದು. ಆದರೆ ಅವುಗಳನ್ನು ಈ ಕೆಳಗಿನ ಪಟ್ಟಿಯಲ್ಲಿರುವಂತೆ ಸ್ವಲ್ಪ ಹೆಚ್ಚುಕಡಮೆಯಾಗಿ ಸರ್ವಸಾಧಾರಣವೆಂದು ಗ್ರಹಿಸಬಹುದು

ಬೇಳೆಯ ಜಾತಿಗಳು ೮ ಔನ್ಸು, ಅಕ್ಕಿ ೧ ಪೌಂಡು, ಗೋಧಿಹಿಟ್ಟು ೧॥ ಪೌಂಡು, ತುಪ್ಪ ಅಥವಾ ಎಣ್ಣೆ ೩ ಔನ್ಸುಗಳು, ಹಾಲು ೮ ಔನ್ಸುಗಳು, ತರಕಾರಿಗಳು ೪ ರಿಂದ ೮ ಔನ್ಸುಗಳು

ಕೆಲವರು (ಮಹಮ್ಮದೀಯರು) ಬೇಳೆಗಳಿಗೆ ಪ್ರತಿಯಾಗಿ ೬ ಔನ್ಸಿನಷ್ಟು ಮಾಂಸವನ್ನು ಸೇವಿಸುವುದುಂಟು

ಈ ಪ್ರಮಾಣದ ಆಹಾರವನ್ನೇ ಎರಡು ಭಾಗವಾಗಿ ವಿಂಗಡಿಸಿ ಹಗಲೂ, ರಾತ್ರಿಯೂ ಸೇವಿಸುವರು. ಈ ಆಹಾರವನ್ನು ಸೇವಿಸಿ ರೈತರು ದಿನವೆಲ್ಲಾ ಹೊಲಗಳಲ್ಲಿ ದುಡಿದು ಕೆಲಸಮಾಡುವರು. ಕೂಲಿಗಳು ಅನೇಕ ಸಂದರ್ಭಗಳಲ್ಲಿ ೨-೩ ಮಣ ತೂಗುವ ಪದಾರ್ಥಗಳನ್ನು ಕೂಡ ಹೊರುತ್ತ ದಿನವೆಲ್ಲಾ ಕೆಲಸಮಾಡುವರು

ಇಂಡಿಯಾದೇಶದಲ್ಲಿ ಸಸ್ಯಾಹಾರಿಗಳೇ ಹೆಚ್ಚು ಮಂದಿ ಕೆಲವರು ವಿಶೇಷ ಸಂದರ್ಭಗಳಲ್ಲಿ ಮಾತ್ರ ಮಾಂಸವನ್ನು ಸೇವಿಸುವರು. ಮೇಲಿನ ಸಸ್ಯಾಹಾರದ ಪ್ರಮಾಣಗಳು ನಾನಾಭಾಗಗಳಲ್ಲಿ ವ್ಯತ್ಯಾಸವಾಗಿರುವುದಕ್ಕೆ ಅನುಸಾರವಾಗಿ ಅಲ್ಲಲ್ಲಿ ವಾಸಮಾಡುವ ಜನರ ದೇಹದಾರ್ಢ್ಯವೂ, ಜೀವನಕಾಲವೂ ವ್ಯತ್ಯಸ್ತವಾಗಿರುವುದು.

ಇಂಡಿಯನ್ ಮೆಡಿಕಲ್ ಸರ್ವಿಸ್ಸಿನಲ್ಲಿ ಪ್ರಸಿದ್ಧರಾದ ಲೆಫ್ಟಿನೆಂಟ್ ಕರ್ನಲ್ ರಾಬರ್ಟ್ ಮೆಕ್‌ಕಾರಿಸನ್ ಎಂಬುವರು ಹೀಗೆ ಬರೆಯುವರು. " ಇಂಡಿಯಾದೇಶದಲ್ಲಿ ಪ್ರಯಾಣಮಾಡಿರುವವರಿಗೆ ಇಲ್ಲಿಯ ನಾನಾಕಡೆಗಳಲ್ಲಿರುವ ಬೇರೆ ಬೇರೆ ಜಾತಿಯ ಜನರ ದೇಹದಾರ್ಢ್ಯವೂ, ಸಾಮರ್ಥ್ಯವೂ ಬೇರೆ ಬೇರೆಯಾಗಿದೆಯೆಂದು ಚೆನ್ನಾಗಿ ತಿಳಿದುಬಂದೇ ಇದೆ ಶೂರರೂ, ಸಾಹಸಿಗಳೂ, ಬಲಿಷ್ಠರೂ ಆದ ಉತ್ತರದೇಶದ ಜನರನ್ನು ಬಹಳ ಬಲಹೀನರೂ, ಹೇಡಿಗಳೂ ಆದ ದಕ್ಷಿಣದೇಶದ ಅಥವಾ ಪೂರ್ವದೇಶದ ಕೆಲವು ಜಾತಿಯ ಜನರೊಡನೆ ಹೋಲಿಸಿ ನೋಡಿದರೆ, ಒಂದು ಜನಾಂಗಕ್ಕೂ, ಮತ್ತೊಂದು ಜನಾಂಗಕ್ಕೂ ಇಷ್ಟು ವ್ಯತ್ಯಾಸಗಳಿರಲು ಕಾರಣವೇನೆಂಬ ಸಂದೇಹವು ತೋರಬಹುದು '

ಆದರೆ ಇಂಡಿಯಾದೇಶವು ಆಹಾರವಿಚಾರದಲ್ಲಿ ವಿಶೇಷ ಶೋಧನೆಗಳನ್ನು ಮಾಡಿ ಬಹಳ ಪ್ರಯೋಜನಕಾರಿಗಳಾದ ವಿಷಯಗಳನ್ನು ನಿರ್ಧರಿಸಿದ ಒಂದು ದೊಡ್ಡ ಶೋಧನಾಗೃಹವಾಗಿ ಏರ್ಪಟ್ಟಿದೆ ಇಂಡಿಯಾದೇಶದಲ್ಲಿ ವಾಸಮಾಡುತ್ತಿರುವ ಕೋಟ್ಯಂತರ ಜನರು ಅಕ್ಕಿ, ಗೋಧಿ, ಬಾರ್ಲಿ, ಜೋಳ, ನವಣೆ, ಬೇಳೆಗಳು, ತರಕಾರಿಗಳು, ಹಣ್ಣುಗಳು ಮುಂತಾದುವುಗಳನ್ನು ಮುಖ್ಯಾಹಾರವಾಗಿ ಸೇವಿಸುತ್ತಿರುವರು ಜನರು ಬಹಳ ಮಿತವಾಗಿ ಉಪಯೋಗಿಸುತ್ತಿರುವ ಆಹಾರಪದಾರ್ಥಗಳಲ್ಲಿ ಹಾಲು, ಮೊಸರು, ಬೆಣ್ಣೆ, ಮೊಟ್ಟೆ, ಮಾಂಸ, ಇವೆಲ್ಲ ಸೇರುವುವು ಅನೇಕರಿಗೆ ಇವೂ ದುರ್ಲಭವೇ !

ಧಾನ್ಯಗಳು, ದ್ವಿದಳಧಾನ್ಯಗಳು ಮತ್ತು ಕೊಬ್ಬು ಈ ಪದಾರ್ಥಗಳೇ ಇಂಡಿಯಾದೇಶದವರ ಆಹಾರದಲ್ಲಿ ಹೆಚ್ಚಾಗಿ ಸೇರಿರುವುದು ಆಹಾರವಿಚಾರಗಳಲ್ಲಿ ಈಚೆಗೆ ಮಾಡಿದ ಶೋಧನೆಗಳಿಂದ ಈ ಪದಾರ್ಥದಲ್ಲಿ ಪ್ರೋಟೀನ್ ಭಾಗವು ಕಡಿಮೆಯಾಗಿರುವುದೆಂದು ತಿಳಿದುಬಂದಿರುವುದು ಇದಕ್ಕಾಗಿ ಅಡಿಗೆಮಾಡಿದ ಕೆಲವು ತರಕಾರಿಗಳನ್ನೂ, ಹಣ್ಣುಗಳನ್ನೂ ಸೇರಿಸಿ ಸೇವಿಸುವುದುಂಟು ಆದರೆ ಆ ಲೋಪವನ್ನು ಭರ್ತಿಮಾಡುವುದಕ್ಕೆ ಅದೂ ಸಾಲದು

ಬಂಗಾಳದ ಕೆಲವು ಭಾಗಗಳಲ್ಲಿಯೂ, ದಕ್ಷಿಣ ಇಂಡಿಯಾ ದೇಶದಲ್ಲಿಯೂ ವಿಶೇಷವಾಗಿ ಉಪಯೋಗಿಸುತ್ತಿರುವ ಧಾನ್ಯವು, ಯಂತ್ರಗಳಲ್ಲಿ ಕುಟ್ಟಿದ ಬಿಳಿಯ ಅಕ್ಕಿಯಾದುದರಿಂದ ಮೆಕ್‌ಕಾರಿಸನ್‌ರವರು ತೋರಿಸಿರುವಂತೆ ಅದರಲ್ಲಿ ಕಾಲ್‌ಸಿಯಂ, ಸೋಡಿಯಂ, ಕ್ಲೋರಿನ್ ಮುಂತಾದ ಲೋಹಸಂಬಂಧವಾದ ಪದಾರ್ಥಗಳು ಕಡಿಮೆಯಾಗಿರುವುವು ಆ ಆಹಾರಪದಾರ್ಥಗಳಲ್ಲಿ ವಿಟಮಿನ್ ಭಾಗವೂ ಕಡಿಮೆಯೇ !

ಬಿಹಾರ, ಒರಿಸ್ಸಾ, ಬಂಗಾಳ, ದಕ್ಷಿಣ ಇಂಡಿಯಾ ಮುಂತಾದ ಭಾಗಗಳ ಜನರು ಬಲಹೀನರಾಗಿ ರೋಗಾದಿಗಳಿಗೆ ಬಹು ಸುಲಭವಾಗಿ ಗುರಿಯಾಗುವುದಕ್ಕೆ ಅವರ ಆಹಾರದಲ್ಲಿರುವ ನ್ಯೂನತೆಯೇ ಕಾರಣವು.

ಉತ್ತರ ಇಂಡಿಯಾದಲ್ಲಿ ಆಹಾರಪದಾರ್ಥಗಳು ಇಲ್ಲಿಗಿಂತ ಬೇರೆಯೆಂಬುದು ಅಲ್ಲಿಗೆ ಹೋದವರಿಗೆ ಚೆನ್ನಾಗಿ ತಿಳಿಯುವುದು ಅಲ್ಲಿ ಅಕ್ಕಿಗೆ ಪ್ರತಿಯಾಗಿ ಗೋಧಿಯನ್ನು ಉಪಯೋಗಿಸುವರು. ಹಣ್ಣುಗಳನ್ನೂ, ತರಕಾರಿ

(ಮುಂದೆ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೭ನೆಯ ಆಗಸ್ಟ್ ತಾ|| ೧೧ನೇ ಸೋಮವಾರ

ಮಾಹೇಶ್ವರರೂ ವೈದಿಕ ಶಿಕ್ಷಣವೂ

ವೀರಶೈವಮತೀಯರಿಗೆ ದೀಕ್ಷಾ, ಶಿಕ್ಷಾ, ಮೋಕ್ಷಗಳನ್ನೀಯುವ ವೀರಮಾಹೇಶ್ವರರು ತಮ್ಮ ಕರ್ತವ್ಯಕರ್ಮಗಳನ್ನು ಮರೆತು ಕೇವಲ ಲೌಕಿಕರಂತೆ ವ್ಯವಹಾರನಿರತರಾಗುತ್ತ ಬಂದು ತಮ್ಮ ಪವಿತ್ರವಾದ ಅಧಿಕಾರವನ್ನು ತಾವಾಗಿಯೇ ಕಳೆದುಕೊಳ್ಳುತ್ತಿರುವುದನ್ನು ನೋಡಿದರೆ ಬಹಳ ವ್ಯಸನ ಉಂಟಾಗುತ್ತದೆ. ವೀರಶೈವಮತದಮೇಲೆ ಗುರುತ್ವವನ್ನು ವಹಿಸಿರುವ ಮಾಹೇಶ್ವರರೆಂಬವರು ವೈದಿಕವಿದ್ಯಾನಿಷ್ಣಾತರಾಗಿರಬೇಕು. ವೈದಿಕವಿದ್ಯೆಯೇ ಇವರ ಆಯುಧವು. ಈ ಆಯುಧವು ಎಷ್ಟು ತೀಕ್ಷ್ಣವಾಗುತ್ತದೆಯೋ ಅಷ್ಟಷ್ಟು ತಮ್ಮ ಹೃದಯಾಂಗಣದಲ್ಲಿ ಅಂಕುರಿಸುತ್ತಿರುವ ಕಾಮಕ್ರೋಧಾದಿ ಶತ್ರುಗಳು ದಿಕ್ಕೆಟ್ಟು ಓಡಿಹೋಗುತ್ತವೆ. ಇದರಿಂದ ಶಿಷ್ಯರನ್ನು ಅಧೋಗತಿಗೆಳೆಯುತ್ತಿರುವ ಈ ಶತ್ರುಗಳು ನಾಶವಾಗಿ ಗುರುಶಿಷ್ಯರೀರ್ವರೂ ಸದ್ಯೋನ್ಮುಕ್ತರಾಗುವರು. ಗುರುಕುಲದಲ್ಲಿ ತಾವು ಹುಟ್ಟಿ ಆ ಗುರುವಿನ ಗುಣಗಳೊಂದನ್ನೂ ಅಭ್ಯಾಸಮಾಡದೆ ಮಾಹೇಶ್ವರರೆಂದು ಹೇಳಿಸಿಕೊಳ್ಳುತ್ತ ಬಂದರೆ ಅಂಥ ಮಾಹೇಶ್ವರರಿಂದ ಲೋಕಕ್ಕೆ ಯಾವ ಪ್ರಯೋಜನವೂ ಆಗಲಾರದು. ಮಾಹೇಶ್ವರರ ಕುಲದಲ್ಲಿ ಹುಟ್ಟಿದಮೇಲೆ ಅದಕ್ಕೆ ತಕ್ಕ ಗುಣಗಳು ಅವರಲ್ಲಿ ಇಲ್ಲದಿದ್ದರೆ ಆ ಕುಲವೂ ಸಹ ಅವರಿಂದ ಭೂಷಿತವಾಗುವುದಿಲ್ಲ. ಪ್ರಪಂಚದಲ್ಲಿ ಶಿಷ್ಯೋದ್ಧಾರಕ್ಕಾಗಿಯೇ ಈಶ್ವರನಿಂದ ಗುರುಕುಲವು ಸೃಷ್ಟಿಸಲ್ಪಟ್ಟಿರುವುದರಿಂದ ತಮ್ಮ ಬೋಧಾಶಕ್ತಿಯಿಂದ ಶಿಷ್ಯರನ್ನು ಸದಾಚಾರಿಗಳನ್ನಾಗಿಯೂ ಜ್ಞಾನಿಗಳನ್ನಾಗಿಯೂ, ನೀತಿಯುತರನ್ನಾಗಿಯೂ, ದೈವಭಕ್ತಿಯುಳ್ಳವರನ್ನಾಗಿಯೂ, ಪಾಪಭೀರುಗಳನ್ನಾಗಿಯೂ ಮಾಡಿದ್ದಾದರೆ ತಮಗೆ ದೈವಾಯುತ್ತವಾದ ಮಾಹೇಶ್ವರ ಎಂಬ ಹೆಸರು ಸಾರ್ಥಕವಾಗುವದು. ಹಾಗಲ್ಲದೆ ತಾವೇ ಹಸಿಮಣ್ಣಿನ ಮುದ್ದೆಯಂತೆ ಕೇವಲ ಜಡಾತ್ಮಕರಾಗುತ್ತ ಕುಲಪಾವಿತ್ರ್ಯಭ್ರಮೆಯಲ್ಲಿ ಮಾತ್ರ ಬದುಕುತ್ತ ಬಂದರೆ, ಆ ಗುರುಕುಲವು ಕ್ರಮೇಣ ನಷ್ಟೋನ್ಮುಖವಾಗುತ್ತ ಹೋಗುವುದರಲ್ಲಿ ಸಂದೇಹವಿಲ್ಲ. ಲೋಕದಲ್ಲಿ ಒಬ್ಬನು ಸತ್ಕುಲಪ್ರಸೂತನಾಗದಿದ್ದರೂ ಲೋಕಕಲ್ಯಾಣಕಾರಿಯಾದ ಗುಣಗಳಿದ್ದರೆ "ಗುಣಾಃ ಪೂಜಾಸ್ಥಾನಂ" ಎಂಬ ಸಾಮಾನ್ಯವಾಕ್ಯದಂತೆ ಅವನು ಪ್ರಶಂಸನೀಯನಾಗುತ್ತಾನೆಂದು ಹೇಳುವಾಗ ಸತ್ಕುಲಪ್ರಸೂತನೂ ಆಗಿ ಲೋಕಕಲ್ಯಾಣಕಾರಿಯಾದ ಗುಣಗಳೂ ಸಹ ಅವನಲ್ಲಿದ್ದರೆ ಕೇಳುವುದೇನು? ಮಾಹೇಶ್ವರರು ಆತ್ಮಶುದ್ಧಿಗೆ ಸಾಧಕವಾದ ವಿದ್ಯಾಜ್ಞಾನ ಸದಾಚಾರಾದಿಗುಣಗಳನ್ನು ಅವಶ್ಯವಾಗಿ ಸಂಗ್ರಹಿಸಲೇಬೇಕು. ಶಿಷ್ಯರಿಗೆ ಜ್ಞಾನಕ್ರಿಯೆಗಳನ್ನು ಬೋಧಿಸಬೇಕಾದರೆ ತಮ್ಮಲ್ಲಿ ಅಪಾರವಾದ ವಿದ್ಯಾನಿಧಿಯು ಇರಲೇಬೇಕು.

ನ ಪುನರ್ನಾಮಮಾತ್ರೇಣ ಸಂವಿತ್ತಿರಹಿತಸ್ತು ಯಃ |
ಅನ್ಯಂ ನತಾರಯೇದಜ್ಞಃ ಕಿಂಶಿಲಾ ತಾರಯೇಚ್ಛಿಲಾಂ ||

ಮುಳುಗುವ ಸ್ವಭಾವವುಳ್ಳ ಒಂದು ಕಲ್ಲಿಗೆ ಮತ್ತೊಂದು ಕಲ್ಲನ್ನು ಗಂಟುಹಾಕಿದರೆ ಅದು ಆ ಕಲ್ಲನ್ನು ಹೇಗೆ ತೇಲಿಸಲಾರದೋ, ಹಾಗೆ ಜ್ಞಾನಶೂನ್ಯನಾದ ಗುರುವು ಶಿಷ್ಯರನ್ನು ಈ ಭವಸಾಗರದಿಂದ ದಾಂಟಿಸಲಾರನು ಎಂಬ ಪ್ರಮಾಣದಿಂದ ಗುರುತ್ವಕ್ಕೆ ಜ್ಞಾನವೇ ಮುಖ್ಯಗುಣವಾಗಿದೆ ಎಂದು ಸ್ಪಷ್ಟವಾಗುತ್ತದೆ. ಗುರುಕುಲದಲ್ಲಿ ಹುಟ್ಟಿದ ಪ್ರತಿಯೊಬ್ಬ ಬಾಲಕನೂ ಇಂಥ ಜ್ಞಾನಸಾಧಕವಾದ ವೈದಿಕವಿದ್ಯೆಯನ್ನು ಅಭ್ಯಾಸಮಾಡುತ್ತ ತನ್ನ ನಡೆನುಡಿಗಳನ್ನು ತಿದ್ದಿಕೊಳ್ಳುತ್ತ ಕಾಲವರಿತು ದೀಕ್ಷಾಪೂರ್ವಕ ಗುರೂಪದೇಶವನ್ನು ಪಡೆದು ಭಗವಂತನ ಗುಣಾವಳಿಯನ್ನು ವಿಸ್ತರಿಸುತ್ತ ಅಷ್ಟಾವರಣ ಪಂಚಾಚಾರ ಸ್ವರೂಪವನ್ನು ಅನುಷ್ಠಿಸುತ್ತ ಭಕ್ತಿಜ್ಞಾನ ವೈರಾಗ್ಯಗಳೆಂಬ ಸೋಪಾನಗಳ ಮೇಲೆ ಮೆಲ್ಲಮೆಲ್ಲನೆ ಕಾಲಿಡುತ್ತ ಬಂದರೆ ಆತನಿಗೆ ತನ್ನ ಪ್ರೌಢವಯಸ್ಸಿಗೆ ವೀರಶೈವಮತದ ನಿಜತತ್ತ್ವವು ಕರತಲಾಮಲಕದಂತೆ ಸ್ಪಷ್ಟವಾಗುತ್ತದೆ. ಮುಂದೆ ತನ್ನ ಕರ್ತವ್ಯಕರ್ಮಗಳನ್ನು ಜ್ಞಾಪಿಸಿಕೊಂಡು ಸ್ವಾರ್ಥತ್ಯಾಗಿಯಾಗಿ ಅಹಿಂಸಾಮಾರ್ಗದಲ್ಲಿ ಕಾಲಿಡುತ್ತ ಹೂವಿನ ಸರವನ್ನು ನೇಯಲಿಕ್ಕೆ ತೊಡಗಿದಂತೆ ಬಹು ಸುಲಭವಾಗಿ ಶಿಷ್ಯೋದ್ಧಾರಕರ್ಮದಲ್ಲಿ ತೊಡಗುತ್ತಾನೆ. ಮಾಹೇಶ್ವರರು ತಮ್ಮ ಮಕ್ಕಳಿಗೆ ಹೀಗೆ ವೈದಿಕ ವಿದ್ಯಾಶಿಕ್ಷಣವನ್ನು ಕೊಡದ ಸಮರ್ಥನೆಯೇನು ಕಡಮೆ? ಸಹಸ್ರಾರು ಜನ ಶಿಷ್ಯಮಂಡಲಿಯು ಅನಾದಿಕಾಲದಿಂದಲೂ ನಮಗುಂಟು. ಇದರಿಂದಲೇ ನಮ್ಮ ಮಕ್ಕಳು ಜೀವಿಸುತ್ತಾರೆಂದು ಭಾವಿಸಿ ಸುಖನಿದ್ರೆಯಲ್ಲಿದ್ದರೆ ಶಿಷ್ಯರು ಉದ್ಧಾರವಾಗುವ ಬಗೆಯೆಂತು? ಶಿಷ್ಯರು ಯಾವಾಗಲೂ ಪ್ರಾಪಂಚಿಕ ವ್ಯವಹಾರದಲ್ಲಿ ಮಗ್ನರಾಗಿರುವುದರಿಂದ ವಿಶೇಷವಾಗಿ ಆತ್ಮೋದ್ಧಾರಸಾಧಕವಾದ ವಿದ್ಯೆಯನ್ನು ಅಭ್ಯಾಸಮಾಡಲಾರರು. ಕೇವಲ ಆಧ್ಯಾತ್ಮಿಕವಿದ್ಯೆಯಿಂದಲೇ ತಮ್ಮ ದೇಹಯಾತ್ರೆಯನ್ನು ನಡೆಯಿಸುತ್ತ ಮಹಾಕರ್ಮರರಾಗಿರುವ ಈ ಮಾಹೇಶ್ವರರು ಆಯಾಯ ಕಾಲಕ್ಕೆ ತಮ್ಮ ಶಿಷ್ಯರ ಮನೆಗೆ ಹೋಗಿ ಶಿವಧ್ಯಾನ ಶಿವಭಕ್ತಿ ಶಿವಯೋಗಸ್ವರೂಪವನ್ನು ಬೋಧಿಸುತ್ತ ಶಿಷ್ಯರನ್ನು ಎಚ್ಚರಿಸುತ್ತ ಸನ್ಮಾರ್ಗಿಗಳನ್ನಾಗಿ ಮಾಡುತ್ತಿರಬೇಕು. ಅದಕ್ಕೋಸ್ಕರವಾಗಿಯೇ ಪ್ರತಿಯೊಂದು ಗ್ರಾಮದಲ್ಲಿಯೂ, ವೀರಶೈವಮತಸ್ಥಾಪಕರಾದ ಶ್ರೀರೇಣುಕಾದ್ಯಾಚಾರ್ಯರು ಒಂದೊಂದು ಮಠವನ್ನು ಅನುಗ್ರಹಿಸಿರುತ್ತಾರೆ. ಪೂರ್ವ ಕಾಲದಲ್ಲಿ ಮಠಗಳೆಂದರೆ ವಿದ್ಯಾಭ್ಯಾಸದ ಪವಿತ್ರ ಆಶ್ರಮಗಳೆನಿಸಿಕೊಂಡಿದ್ದವು. ಮಠಾಧಿಪತಿಗಳೆಲ್ಲರೂ ವೈದಿಕವಿದ್ಯಾಪಾರಂಗತರಾಗಿದ್ದುದರಿಂದಲೂ, ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಸಹ ತಮ್ಮಂತೆ ವಿದ್ವಾಂಸರನ್ನಾಗಿ ಮಾಡುತ್ತ ಬಂದದ್ದರಿಂದಲೂ ಭವಸಾಗರಕ್ಕೆ ನಾವೆಯಂತಿರುವ ವೈದಿಕವಿದ್ಯೆಯ ಪ್ರವಾಹವು ವಂಶಪಾರಂಪರ್ಯವಾಗಿ ಹರಿದುಬರುತ್ತಲಿತ್ತು. ಈ ವಿದ್ಯಾಪ್ರವಾಹದಲ್ಲಿ ವೀರಶೈವಸಮಾಜವೆಲ್ಲಾ ಬ್ರಹ್ಮಾನಂದವೆಂಬ ಅಮೃತವನ್ನು ಪಾನಮಾಡಿ ಶಿವಧರ್ಮದ ಫಲವನ್ನು ಅನುಭವಿಸುತ್ತಿದ್ದಿತು. ಇತ್ತೀಚೆಗೆ ಕಾಲವೈಚಿತ್ರ್ಯದಿಂದ ಕೆಲವೆಡೆಯಲ್ಲಿ ಮಠಾಧಿಪತಿಗಳೆಂಬುವರು ಕೇವಲ ಬಹಿರ್ಮುಖರಾಗುತ್ತ ಬಂದರು. ಮೂಲಪೀಠಾಚಾರ್ಯರೂ ಸಹ ಇದಕ್ಕೆ ಗಮನಕೊಡಲಿಲ್ಲ. ಇದರಿಂದ ರಂಧ್ರಾನ್ವೇಷಿಗಳಾದ ನಾಸ್ತಿಕರಿಗೆ ಮನಸ್ವಿಯಾಗಿ ಮಾತನಾಡಿಕೊಳ್ಳಲು ಅವಕಾಶವಾಯಿತು. ಒಬ್ಬನು ಅದೇನು? ನಾವು ಮಾಹೇಶ್ವರರಾಗಲಾರೆವೋ ಎಂದು ಅನ್ನಹತ್ತಿದನು. ಇನ್ನೊಬ್ಬನು ನಾನೇಕೆ ಗುರುತ್ವಾಧಿಕಾರಮಾಡಬಾರದೆಂದು ಹೇಳಹತ್ತಿದನು. ಕೆಲವರು ತಮಗ ಬೇಕಾದ ಶ್ಲೋಕಗಳನ್ನು ಕಲ್ಪಿಸಿ ಸ್ವಪಕ್ಷವನ್ನು ಸಾಧಿಸಹತ್ತಿದರು. ಅಶಾಸ್ತ್ರೀಯವಾದ ವಿಧವಾವಿವಾಹ ಪ್ರೌಢಾವಿವಾಹಾದಿಗಳೆಂಬ ಪಿಶಾಚಿಗಳು ಸಮಾಜದಲ್ಲಿ ನಾಟ್ಯಮಾಡಲೆತ್ನಿಸಿದವು. ಧರ್ಮಶಾಸ್ತ್ರವನ್ನು ಬದಲಾಯಿಸುವ ಮಹಾವೀರರು ಅವತರಿಸಿದರು. ಹೀಗೆ ಬೇಲಿಯಿಲ್ಲದ ಹೊಲಕ್ಕೆ ಪಶುಗಳು ನಿರರ್ಗಳವಾಗಿ ನುಗ್ಗಿ ಲೂಟಿಮಾಡುವಂತೆ ಧರ್ಮಶಾಸನಮಾಡುವ ಮಾಹೇಶ್ವರರು ತಮ್ಮ ಕರ್ತವ್ಯಪರಾಙ್ಮುಖರಾದುದರಿಂದ ಸಮಾಜದಲ್ಲಿ ಇಂಥ ಅನೇಕ ಉಪದ್ರವಗಳು ಪ್ರಾರಂಭವಾದವು. ಸಮಾಜದಲ್ಲಿ ಪೂರ್ವದಂತೆ ಗುರುಶಿಷ್ಯಭಾವವು ದೃಢಗೊಳ್ಳಬೇಕಾದರೆ ಸಮಾಜದಮೇಲೆ ಗುರುತ್ವವನ್ನು ಮಾಡುವ ಮಾಹೇಶ್ವರರು ಬಿದ್ದುಹೋದ ವೈದಿಕವಿದ್ಯೆಯೆಂಬ ಚಂದ್ರಾಯುಧವನ್ನು ಧರಿಸಬೇಕು. ಜ್ಞಾನಕ್ರಿಯಾನಿಷ್ಠರಾಗಬೇಕು. ಶಿಷ್ಯವೃಂದದ ಅಜ್ಞಾನವನ್ನು ಹೋಗಲಾಡಿಸಬೇಕು.

ಈಗೀಗ ಮಾಹೇಶ್ವರರು ತಮ್ಮ ಕುಲವೃತ್ತಿಯೆನಿಸಿದ ವೈದಿಕವಿದ್ಯೆಯಲ್ಲಿ ಆಸಕ್ತರಾಗಿ ಕಾಶೀ ಮುಂತಾದ ಸ್ಥಾನಗಳಿಗೆ ಹೋಗಿ ಪ್ರತಿವರ್ಷವೂ ಬಿರುದಾಂಕಿತರಾಗಿ ಬರುತ್ತಿರುವುದೊಂದು ವೀರಶೈವಮತದ ಸುದೈವವೆಂದೇ ಹೇಳಬೇಕಾಗಿದೆ. ಆದರೆ ಈಗ ತಯಾರಾಗಿರುವ ಅಲ್ಪಸಂಖ್ಯೆಯಿಂದ ಬಹು ವಿಸ್ತಾರವಾದ ಸಮಾಜಕ್ಕೆ ಅಷ್ಟು ಪ್ರಯೋಜನವಾಗಲಾರದು. ಇನ್ನೂ ಸಹಸ್ರಾವಧಿ ಮಾಹೇಶ್ವರ ವಟುಗಳು ತಯಾರಾಗಿ ಧರ್ಮಶಾಸ್ತ್ರವನ್ನು ಚನ್ನಾಗಿ ತಿಳಿದು ತಮ್ಮ ತಮ್ಮ ಶಿಷ್ಯರಿಗೆ ಬೋಧಿಸುತ್ತ ಬಂದರೆ ಶಿಷ್ಯೋದ್ಧಾರವನ್ನು ಮಾಡಿದಂತಾಗುವದು. ಇದರಿಂದ ಶಿಷ್ಯರು ಕೊಟ್ಟ ಕಾಣಿಕಾದ್ರವ್ಯವೂ ಸಹ ಸಫಲವಾದಂತಾಗುವುದು. ಅದಿಲ್ಲದಿದ್ದರೆ ಸುಮ್ಮನೆ ನಮ್ಮ ಶಿಷ್ಯರ ಮೇಲೆ ನಮಗಧಿಕಾರವುಂಟೆಂದು ಹೆಮ್ಮೆಪಡುತ್ತ ಬಂದರೆ ಅದರಿಂದ ಶಿಷ್ಯರೂ ಉದ್ಧಾರವಾಗುವುದಿಲ್ಲ. ತಾವೂ ಉದ್ಧಾರವಾಗುವುದಿಲ್ಲ. ನಾಸ್ತಿಕರ ಹಾವಳಿಯಂತೂ ಮೇರೆದಪ್ಪುವದು. ಆದಕಾರಣ ಮಾಹೇಶ್ವರರೆಲ್ಲರೂ ವಿದ್ವಾಂಸರೂ, ತಪೋನಿಷ್ಠರೂ, ಜ್ಞಾನಿಗಳೂ ಆಗುವಂತೆ ಶ್ರೀ ಜಗದಾಚಾರ್ಯರು ಅನುಗ್ರಹಿಸಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ

ಇಂಡಿಯ ಸರಕಾರದ ನೂತನ ಮಂತ್ರಿಮಂಡಲ

ನೆಹರು ಮಂತ್ರಿಮಂಡಲದ ಸದಸ್ಯರ ಪಟ್ಟಿಯನ್ನು ಲಾರ್ಡ್‌ಮೌಂಟ್ ಬೇಟನ್ನರಿಗೆ ಒಪ್ಪಿಸಲಾಯಿತು. ಶ್ರೀ ಸಿ ರಾಜಗೋಪಾಲಾಚಾರ್ಯರ ಹೊರತು ಈಗಿನ ಎಲ್ಲಾ ಸದಸ್ಯರೂ ಮಂತ್ರಿಮಂಡಲದಲ್ಲಿರುವರು. ಡಾ|| ಅಂಬೇಡ್ಕರ್, ರಾಜಕುಮಾರಿ ಅಮೃತಕೌರ್, ಶ್ರೀ ರಫಿ ಅಹ್ಮದ್ ಕಿದ್ವಾಯ್, ಶ್ರೀ ಎನ್ ವಿ ಗಾಡ್ಗಿಲ್ ಮತ್ತು ಡಾ ಶ್ಯಾಮಪ್ರಸಾದ ಮುಖರ್ಜಿ ಇವರುಗಳನ್ನು ಹೊಸದಾಗಿ ಸೇರಿಸಲಾಗಿದೆ

ನೆಹರೂ ಮಂತ್ರಿಮಂಡಲದಲ್ಲಿ ಈ ರೀತಿ ಅಧಿಕಾರ ಹಂಚಿಕೆ ನಡೆಯುವ ಸಂಭವವಿದೆ —

ಪಂಡಿತ ನೆಹರೂ—ಮಹಾಪ್ರಧಾನರು, ವಿದೇಶಾಂಗ ಶಾಖೆ ಮತ್ತು ಕಾಮನ್‌ವೆಲ್ತ್ ಶಾಖಾಸಚಿವರು

ಸರದಾರ್ ಪಟೇಲ್—ಗೃಹಶಾಖೆ, ವರ್ತಮಾನ ಮತ್ತು ಬ್ರಾಡ್‌ಕ್ಯಾಸ್ಟಿಂಗ್

ಡಾ|| ರಾಜೇಂದ್ರಪ್ರಸಾದ್—ಆಹಾರ ಮತ್ತು ವ್ಯವಸಾಯ ಶಾಖೆ

ಮೌ|| ಅಬುಲ್ ಕಲಾಂ ಆಜಾದ್—ಶಿಕ್ಷಣ ಶಾಖೆ

ರಾಜಕುಮಾರಿ ಅಮೃತಕೌರ್—ಆರೋಗ್ಯಶಾಖೆ

ಸರದಾರ್ ಬಲದೇವ ಸಿಂಗ್—ರಕ್ಷಣೆ

ಡಾ| ಜಾನ್ ಮಾಥಾಯ್—ಟ್ರಾನ್ಸ್‌ಪೋರ್ಟ್

ಶ್ರೀ ರಫಿ ಅಹ್ಮದ್ ಕಿದ್ವಾಯ್-ಕಮ್ಯೂನಿಕೇಷನ್ಸ್

ಸರ್ ಆರ್ ಕೆ ಷಣ್ಮುಗಂ ಚೆಟ್ಟಿ—ಹಣಕಾಸು

ಡಾ|| ಶ್ಯಾಮಪ್ರಸಾದಮುಖರ್ಜಿ—ಗಣಿಗಳು, ವರ್ಕ್ಸ್ ಅಂಡ್ ಪವರ್

ಶ್ರೀ ಜಗಜೀವನರಾಂ—ಕೂಲಿ ಶಾಖೆ

ಡಾ|| ಅಂಬೇಡಕರ್—ನ್ಯಾಯ ಶಾಖೆ.

ಶ್ರೀ ಸಿ ಹೆಚ್ ಭಾಭಾ—ಕೈಗಾರಿಕೆ ಮತ್ತು ಸರಬರಾಯಿ

ಶ್ರೀ ಎನ್ ವಿ ಗಾಡ್ಗಿಲ್—ವಾಣಿಜ್ಯ

'ಜೈ ಹಿಂದ್' ಪೋಸ್ಟ್ ಸ್ಟಾಂಪುಗಳನ್ನು ಹೊರಡಿಸಲಾಗುವುದು

ಅಧಿಕಾರ ವರ್ಗಾವಣೆ ಉತ್ಸವದ ಸಂಬಂಧದಲ್ಲಿ ಇಂಡಿಯಾ ಸರ್ಕಾರದವರು ಆ ೧೫ನೆಯ ತಾ|| ದಿನ 'ಜೈ ಹಿಂದ್" ಎಂದು ಇಂಗ್ಲೀಷಿನಲ್ಲೂ ಹಿಂದಿಯಲ್ಲೂ ಅಚ್ಚುಮಾಡಿರುವ ಅಂಚೆ ಸ್ಟಾಂಪುಗಳನ್ನು ಹೊರಡಿಸಲಿದ್ದಾರೆಂದು ಪ್ರಕಟನೆ ಹೊಟಿದೆ

ಬ್ರಿಟನ್ನಿನ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸಲು ಆಟ್ಲೆ ಯೋಜನೆಗಳು

ಬ್ರಿಟನ್ನಿನ ಆರ್ಥಿಕ ಬಿಕ್ಕಟ್ಟನ್ನು ಕೊನೆಗಾಣಿಸಲು ಬ್ರಿಟನ್ ತಯಾರಿಸಿರುವ ಆರ್ಥಿಕ ಯೋಜನೆಗಳನ್ನು ಕಾಮನ್ಸ್ ಸಭೆಯಲ್ಲಿ ಕಿಕ್ಕಿರಿದ ಪ್ರೇಕ್ಷಕ ವೃಂದಕ್ಕೆ ಪ್ರಧಾನಿ ಆಟ್ಲೆಯವರು ತಿಳಿಸಿದರು. ಬೂಟ್ಸುಗಳು ಮತ್ತು ಇನ್ನಿತರ ಸೌಂದರ್ಯೋಪಾಸಕ ವಸ್ತುಗಳ ಆಮದನ್ನು ಕಡಮೆ ಮಾಡಲಾಗುವುದು. ಪ್ರಯಾಣಿಕರ ರೈಲುಗಳನ್ನು ಮತ್ತು ಪೆಟ್ರೋಲ್ ಸ್ಟೇಷನ್‌ಗಳಲ್ಲಿ

ನ್ನು ಖೋತಾ ಮಾಡಲಾಗುವುದು. ವಿದೇಶಾಂಗ ಾಣಕ್ಕೆ ಮತ್ತು ಬ್ರಿಟನ್ನಿನ ಶಸ್ತ್ರಸಜ್ಜಿತ ಸೈನ್ಯಕ್ಕೆ ಸಲಾಗಿಟ್ಟಿರುವ ಹಣದಲ್ಲಿ ಇನ್ನೂ ಉಳಿತಾಯ ಡಲಾಗುವುದು ಅದಕ್ಕು ಎಲ್ಲಾ ಆಮದುಗಳನ್ನು ಮೆ ಮಾಡುವುದಕ್ಕೆ ಪರಿಣಾಮಕಾರಿಯಾದ ೀಜನೆಗಳನ್ನು ತಯಾರಿಸಲಾಗಿದೆಯಲ್ಲದೆ ವ್ಯವಯದ ಉತ್ಪನ್ನಗಳನ್ನು ಅಧಿಕಗೊಳಿಸಲಾಗುವುದು ದ್ದಲಿನ ಉತ್ಪನ್ನವನ್ನು ಹೆಚ್ಚಿಸಿ ಬ್ರಿಟನ್ನಿನ ರಫ್ತು ನ್ನು ಇನ್ನೂ ಹೆಚ್ಚಿಸುವ ಬಗ್ಗೆ ಆರ್ಥಿಕ ಯೋಜನೆ ನ್ನು ತಯಾರಿಸಲಾಗಿದೆ

ಬ್ರಿಟನ್ನಿನ ಪುನರುದ್ಧಾರ

" ಯೂರೋಪಿನ ಪುನರುದ್ಧಾರ ನಿಧಾನಗೊಳ್ಳುತ್ತಿದೆ ಕ್ಷಿಸಿದಂತೆ ಪುನರ್ರಚನೆಯ ಕಾರ್ಯಸಾಗುತ್ತಿಲ್ಲ ಬ್ರಿಟ ಹಣ ಕಾಸಿನ ಪರಿಸ್ಥಿತಿ ಡಾಲರುಗಳ ಅಭಾವದಲ್ಲಿ ಮೆಯಾಗಿರುವುದರಿಂದ ಹದಗೆಟ್ಟಿದೆ. ಯೂರೋಪಿ ಲ್ಲಾ ಡಾಲರುಗಳ ಅಭಾವ ಕಾಣುತ್ತಿಲ್ಲವಲ್ಲ' ದು ಅಟ್ಲಿಯವರು ಹಣಕಾಸಿನ ಪರಿಸ್ಥಿತಿಯನ್ನು ಪಡಿಸಿದರು.

ಅನಂತರ ಆಮದುಗಳನ್ನು ಖೋತಾ ಮಾಡುವುದು ಗಳನ್ನು ಹೆಚ್ಚಿಸುವುದು ಮತ್ತು ವ್ಯವಸಾಯದ ತ್ಪನ್ನಗಳನ್ನು ಅಧಿಕಗೊಳಿಸುವುದರ ಬಗ್ಗೆ ಅನು ನಕ್ಕೆ ತರಬೇಕೆಂದಿರುವ ಯೋಜನೆಗಳನ್ನು ತಿಳಿಸಿ

" ವಾರಕ್ಕೆ ಐದು ದಿನಗಳಾದರೂ ದಿನಕ್ಕೆ ಅರ್ಧ ಹೆಚ್ಚು ಕೆಲಸವನ್ನು ಗಣಿ ಕೆಲಸಗಾರರು ಮಾಡ ೆಂದು ತಿಳಿಸಲಾಗಿದೆ ಇದರಿಂದ ಕಲ್ಲಿದ್ದಲಿನ ತ್ಪನ್ನವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ ಅದರ ದೆಯೇ ಕೈಕಾರಿಕಾ ಉತ್ಪನ್ನಗಳ ರಫ್ತೂ ಹೆಚ್ಚುತ್ತದೆ ವಸಾಯದ ಉತ್ಪನ್ನಗಳನ್ನು ಹೆಚ್ಚಿಸುವುದರ ಮೂಲಕ ಲರುಗಳನ್ನು ಉಳಿತಾಯ ಮಾಡಬಹುದು ಇದನ್ನು ಸಲು ದೇಶಾದ್ಯಂತವು ಇನ್ನೂ ಉತ್ತಮ ಕಾಲುವೆ ನ್ನು ತೋಡಲಾಗುವುದು

ಗಣಿ ಕೆಲಸಗಾರರ ಅಭಾವದಿಂದ ಕಲ್ಲಿದ್ದಲಿನ ಗಣಿ ಲ್ಲಿ ಹೆಚ್ಚು ಕಲ್ಲಿದ್ದಲನ್ನು ಉತ್ಪನ್ನ ಮಾಡಲು ಅಸಾಧ್ಯ ಗಿದೆ ಆದುದರಿಂದ ಸೈನ್ಯದಿಂದ ೧೭೩ ಸಾವಿರ ಕರನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುವುದು

ಈಗ ಬ್ರಿಟನ್ ಪ್ರಜೆಗಳಿಗೆ ಸ್ವಂತ ಕೆಲಸಗಳಿ ೇಸ್ಕರ ಕೊಡಲಾಗುತ್ತಿರುವ ಪೆಟ್ರೋಲ್ ರೇಷನ್ನಿನಲ್ಲಿ ಾರರಲ್ಲಿ ಒಂದು ಭಾಗ ಖೋತಾ ಮಾಡಲಾಗುವುದು ಾರ ಪಡೆತರದ ಪ್ರಮಾಣದಲ್ಲಿ ಹೆಚ್ಚು ಬದಲಾವಣೆ ಡಲು ಸರ್ಕಾರಕ್ಕೆ ಇಷ್ಟವಿಲ್ಲದಿದ್ದರೂ ಈಗಿನ ಪರಿ ಯನ್ನು ಬ್ರಿಟನ್ನು ಹೊರಗಿನಿಂದ ಆಹಾರವನ್ನು ಳ್ಳುವ ಸ್ಥಿತಿಯಲ್ಲಿಲ್ಲ ಹಾಗೂ ಆಹಾರದ ಉಲ್ಪಣತೆ ಟ್ಟಿದೆ ಪ್ರಮಾಣವನ್ನು ಕಡಿಮೆಗೊಳಿಸಲಾಗು ಶ್ರಮಜೀವಿಗಳಿಗೆ ಹೆಚ್ಚು ಪ್ರಮಾಣವನ್ನು ಡುವುದಕ್ಕೆ ಪ್ರಯತ್ನಿಸುವುದೇ ಸರ್ಕಾರದ ಆಶಯ— ದು ಪ್ರಧಾನಿ ಅಟ್ಲಿ ಸುಮಾರು ೮೦ ನಿಮಿಷಗಳ ಲ ತಾವು ತಯಾರಿಸಿರುವ ಆರ್ಥಿಕ ಯೋಜನೆಗಳ ಗ್ಗೆ ಕಾಮನ್ಸ್ ಸಭೆಯಲ್ಲಿ ಹೇಳಿದರು

ಹಿಂದೂ ಮಹಾಸಭಾ ನಾಯಕರ ಆಸ್ತಿ ಮುಟ್ಟುಗೋಲು

ಡೈರೆಕ್ಟ್ ಆಕ್ಷನ್ ಚಳುವಳಿ ಫಲವಾಗಿ ಶ್ರೀಗಳಾದ ಟ್ ನಾರಾಯಣ್, ಮನ್ನಾಲಾಲ್ ಮತ್ತು ಲಕ್ಷ್ಮಿ ರಾಯಣ್ ಈ ಮೂವರು ಹಿಂದೂ ಮಹಾಸಭಾ ಯಕರ ಆಸ್ತಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಕಿಕೊಳ್ಳಬೇಕೆಂದು ಆಜ್ಞೆ ಹೊರಟಿದೆ

೨೦೦೦ ಬಂಡಿಗಳ ಬಿಡುಗಡೆ

ಬೊಂಬಾಯಿ ಸರ್ಕಾರದ ತೀರ್ಮಾನ

ಸ್ವಾತಂತ್ರ್ಯ ದಿನೋತ್ಸವದ ದಿನ ೨೦೦೦ ಬಂದಿ ಗೆ ಕ್ಷಮೆ ತೋರಿ ಬಿಡುಗಡೆಮಾಡಬೇಕೆಂಬುದಾಗಿ ಂಬಾಯಿ ಸರ್ಕಾರದವರು ನಿರ್ಧರಿಸಿದ್ದಾರೆ.

(೧ನೆಯ ಪುಟದಿಂದ ಮುಂದುವರಿದುದು)

ಗಳನ್ನೂ ಬೇಯಿಸಿಯೂ, ಬೇಯಿಸದೆಯೂ ಧಾರಾಳವಾಗಿ ಉಪಯೋಗಿಸುವರು ಹಾಲು ಮತ್ತು ಅದರಿಂದ ತಯಾರಾದ ಪದಾರ್ಥಗಳು ಅಲ್ಲಿ ಅಧಿಕವಾಗಿ ಉಪಯೋಗಿಸಲ್ಪಡುತ್ತಿವೆ ಮಹಮ್ಮದೀಯರೂ, ಸಿಕ್ಖರೂ ಮಿತವಾಗಿ ಮಾಂಸವನ್ನು ಸೇವಿಸುವರು

ಕರ್ನಲ್ ಮೆಕ್‌ಕಾರಿಸನ್ " ಪ್ರಾಕ್ಟೀಷನರ್ " ಎಂಬ ಪತ್ರಿಕೆಯಲ್ಲಿ, ಈ ಆಹಾರಬೇಧಗಳಿಂದ ಉತ್ತರ ಇಂಡಿಯಾದೇಶವಲ್ಲಿರುವ ಜನರಲ್ಲಿ ತೋರುವ ಉತ್ತಮ ಗುಣಗಳನ್ನು ಸೂಚಿಸಿರುವರು ಸಿಕ್ಖರು ಪಠಾಣರು ಮತ್ತು ಬೇರೆ ಕೆಲವು ಹಿಮಾಲಯಪರ್ವತ ವಾಸಿಗಳಾದ ಜನರಿಂದ ದೇಹದಾರ್ಢ್ಯವೂ, ಕಷ್ಟಸಹಿಷ್ಣುತ್ವವೂ ಇರುವ ಜನಾಂಗಗಳು, ಪೂರ್ವ ಪಾಶ್ಚಾತ್ಯದೇಶಗಳಲ್ಲಿ ಎಲ್ಲಿಯೂ ದೊರಕಲಾರವು ಮೆಕ್‌ಕಾರಿಸನ್‌ರವರ ತೀರ್ಮಾನಕ್ಕೆ ಇವರೇ ನಿದರ್ಶನಭೂತರು

" ಸಿಪ್ಪೆಸಹಿತವಾದ ಗೋಧಿಯಿಂದ ತಯಾರಿಸಿದ ರೊಟ್ಟಿ, ದ್ವಿದಳಧಾನ್ಯಗಳು, ದಂಟು, ಗಡ್ಡೆ ಗೆಣಸುಗಳು, ಹಸು, ಎಮ್ಮೆ ಅಥವಾ ಆಡುಗಳ ಹಾಲು, ಬೆಣ್ಣೆ, ತುಪ್ಪ, ಮೊಸರು ಮುಂತಾದುವುಗಳನ್ನು ಸೇವಿಸುವುದರಿಂದಲೇ ಸಿಕ್ಖರು ಬಹಳ ಬಲಿಷ್ಠರಾಗಿರುವರು ಗೋಮಾಂಸವನ್ನು ಅವರು ಸೇವಿಸುವುದಿಲ್ಲ, ಆದರೆ ಆಡಿನ ಮಾಂಸವನ್ನೂ, ಬೇಟೆಯಲ್ಲಿ ಕೊಂದ ಇತರ ಪ್ರಾಣಿಗಳ ಮಾಂಸಗಳನ್ನೂ ಆಡಿಗಡಿಗೆ ಮಿತವಾಗಿ ಸೇವಿಸುವುದು ' ಎಂದು ಮೆಕ್‌ಕಾರಿಸನ್‌ರವರು ಬರೆದಿರುವರು ಬಹಳಮಟ್ಟಿಗೆ ಸಸ್ಯಾಹಾರಿಗಳೇ ಆಗಿರುವ ಇಂಡಿಯಾದೇಶಸ್ಥರಿಗೆ, ಶಸ್ತ್ರ ಚಿಕಿತ್ಸೆಮಾಡಿಸಿಕೊಳ್ಳುವುದರಲ್ಲಿರುವ ಅಪಾರವಾದ ಶಕ್ತಿಯನ್ನು ಕುರಿತು ಅಮೃತಸರದಲ್ಲಿ ಸಿವಿಲ್ ಸರ್ಜನರಾದ ಲೆಫ್ಟಿನೆಂಟ್ ಕರ್ನಲ್ ಹೆಚ್ ಹಾಲಿಲೆ, ಐ ಎಂ ಎಸ್ ಎಂಬವರು ಕೂಡ ಈ ರೀತಿ ಬರೆದಿರುವರು

' ನಾನು ಕಳೆದ ಇಪ್ಪತ್ತುನಾಲ್ಕು ವರ್ಷಗಳಿಂದ ಶಸ್ತ್ರ ಚಿಕಿತ್ಸೆ ಮಾಡುತ್ತಿರುವೆನು ಮತ್ತು ಕಳೆದ ಘೋರ ಯುದ್ಧದಲ್ಲಿ ಮಾಂಸಾಹಾರಿಗಳಿಗೂ, ಸಸ್ಯಾಹಾರಿಗಳಿಗೂ ಶಸ್ತ್ರಚಿಕಿತ್ಸೆಯನ್ನು ಪಡೆದುಕೊಳ್ಳುವುದರಲ್ಲಿರುವ ಶಕ್ತಿಯನ್ನು ಹೋಲಿಸಿ ನೋಡುವುದಕ್ಕೂ ನನಗೆ ಹೆಚ್ಚು ಅವಕಾಶವು ದೊರೆಯಿತು ಇದರಿಂದ ಈ ವಿಷಯದಲ್ಲಿ ನನ್ನ ಅನುಭವಸಿದ್ಧವಾದ ಸಿದ್ಧಾಂತವನ್ನು ಪ್ರಮಾಣವಾಗಿ ತೆಗೆದುಕೊಳ್ಳಬಹುದು ಕಳೆದ ಜರ್ಮನಿ ಯುದ್ಧದಲ್ಲಿ ಬಹಳಕಾಲ ಭಾರತದೇಶದ ಸೈನ್ಯಗಳಿಗೆ ಪ್ರಧಾನ ಶಸ್ತ್ರಚಿಕಿತ್ಸಕರ ವಿಚಾರಕನಾಗಿಯೂ ಇದ್ದೆನು

ಬಿಳಿಜನರ ಸೈನ್ಯಕ್ಕೂ, ಭಾರತದೇಶೀಯರ ಸೈನ್ಯಕ್ಕೂ ಚಿಕಿತ್ಸೆಮಾಡಿದ ವೈದ್ಯರು ನನ್ನಲ್ಲಿ ಒಂದು " ಗಾಯಪಟ್ಟ ಹಿಂದೂ ಸೈನಿಕರಲ್ಲಿ ಶೀಘ್ರವಾಗಿ ಗುಣವನ್ನು ಹೊಂದುತ್ತಿದ್ದರೆಂದೂ ಅವರಲ್ಲಿ ಸಾಂಕ್ರಾಮಿಕರೋಗಗಳ ಬಾಧೆಯು ವಿಶೇಷವಾಗಿರಲಿಲ್ಲವೆಂದೂ, ಫ್ರಾನ್ಸ್ ಬ್ರಿಟನ್ ಮತ್ತು ಆಸ್ಟ್ರೇಲಿಯಾದೇಶದ ಸೈನಿಕರಿಗಿಂತ ಇವರ ಗಾಯಗಳು ಶೀಘ್ರವಾಗಿ ಗುಣವಾದುವೆಂದೂ ಹೇಳುತ್ತಿದ್ದರು ಹೊಟ್ಟೆ, ಕರುಳು, ಜಠರ ಇವುಗಳಲ್ಲಿ ಹುಟ್ಟುವ ವ್ರಣಗಳು ಪಿತ್ತಕೋಶ ಸಂಬಂಧವಾದ ವ್ಯಾಧಿ, ಮತ್ತು ಅಪೆಂಡಿಸಿಟೀಸ್ ಎಂಬ ಮೂತ್ರಕೋಶ ವ್ರಣ ಮುಂತಾದ ವ್ಯಾಧಿಗಳು ಹಿಂದೂ ದೇಶೀಯರಲ್ಲಿ ಪ್ರಾಯಶಃ ಕಂಡುಬರುತ್ತಲೇ ಇರಲಿಲ್ಲ

ಇಂಡಿಯಾದೇಶದಲ್ಲಿರುವ ಭಾರತೀಯ ಸೈನಿಕರಲ್ಲಿಯೂ ಆಂಗ್ಲೇಯ ಸೈನಿಕರಲ್ಲಿಯೂ ಅಪೆಂಡಿಸಿಟೀಸ್ ಎಂಬ ವ್ಯಾಧಿಯಿಂದ ಬಾಧೆಪಡುವವರ ಸಂಖ್ಯೆಯನ್ನು ಹೋಲಿಸಿ ನೋಡಿದುದರಲ್ಲಿ ದೇಶೀಯ ಸೈನ್ಯಕ್ಕಿಂತ ಆ ವ್ಯಾಧಿಯು ಆಂಗ್ಲೇಯಸೈನಿಕರಲ್ಲಿ ೧೦ ಪ ಲು ಹೆಚ್ಚಾಗಿರುವುದು. ಏಡಿಹುಣ್ಣಿನ ಬಾಧೆಯು ಇಂಡಿಯಾದೇಶೀಯರಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು ಅನೇಕ ವರ್ಷಗಳಕಾಲ ವೈದ್ಯರಾಗಿದ್ದರೂ ಇಂಡಿಯಾದೇಶದಲ್ಲಿ ಏಡಿಹುಣ್ಣಿನ ಬಾಧೆಯಿಂದ ನರಳತಕ್ಕ ರೋಗಿಯೊಬ್ಬನನ್ನು ಕಾಣಲಾರೆನು ಪಂಜಾಬ್ ಪ್ರಾಂತ್ಯದ ವಿಚಾರವಾಗಿ ಮಾತ್ರ ಇದನ್ನು ನಾನು ಬರೆಯುತ್ತಿರುವವನೇ ಹೊರತು ಒಟ್ಟು ಇಂಡಿಯಾದೇಶಕ್ಕಲ್ಲ ಪಂಜಾಬಿಯರ ಮುಖ್ಯಾಹಾರವೇನೆಂದರೆ, ಸಿಪ್ಪೆಸಹಿತವಾದ ಗೋಧಿಯ ಹಿಟ್ಟಿನಿಂದ ಮಾಡಿದ ರೊಟ್ಟಿ, ದ್ವಿದಳ ಧಾನ್ಯಗಳು, ತರಕಾರಿಗಳು ಹಾಲು ಮತ್ತು ಹಣ್ಣು ಇವುಗಳೇ !

ಅವರ ದೇಹಶಕ್ತಿಯು ಪ್ರಪಂಚದಲ್ಲಿರುವ ಯಾವ ಜನಾಂಗದವರ ಶಕ್ತಿಗೂ ಕಡಿಮೆಯಾದುದಲ್ಲವೆಂದು ಧಾರಾಳವಾಗಿ ಹೇಳಬಲ್ಲೆನು ಬಕ್ಸಾರ್‌ನಲ್ಲಿ ದಂಗೆಯೆದ್ದಾಗ ಹಾಂಗ್‌ಕಾಂಗ್ ಪ್ರಾಂತ್ಯದಲ್ಲಿ ಯುದ್ಧಕ್ಕಾಗಿ ಪಂಜಾಬಿಯರ ಸೈನ್ಯವೊಂದನ್ನು ಜಮಾಯಿಸುವುದಕ್ಕೆ ಪ್ರಯತ್ನಪಡಲು, ನಲವತ್ತು ಅಂಗುಲಗಳ ಸುತ್ತಳತೆಯುಳ್ಳ ಎದೆಯೂ ೫ ಅಡಿ ೧೧ ಅಂಗುಲಗಳ ಎತ್ತರವೂ ಉಳ್ಳ ಸಾವಿರ ಜನರನ್ನು ಬಹು ಸುಲಭವಾಗಿ ಚುನಾಯಿಸುವುದಕ್ಕೆ ನನಗೆ ಸಾಧ್ಯವಾಯಿತು

ಹಿಂದೂದೇಶದ ಸ್ತ್ರೀಯರು ಕೂಡ ಬಲವಾದ ಶಸ್ತ್ರ ಚಿಕಿತ್ಸೆಗಳನ್ನು ಪಡೆದುಕೊಳ್ಳಬಲ್ಲರು ಅಷ್ಟಾಗಿ ಬಾಧೆಪಡುವುದಿಲ್ಲ ಮತ್ತು ಮಾಂಸವನ್ನೇ ಸೇವಿಸದಿರುವ ಹಿಂದೀಯರೂ ಮಹಮ್ಮದೀಯರಂತೆಯೇ ಚಿಕಿತ್ಸೆಮಾಡಿಕೊಳ್ಳಬಲ್ಲರು ನಾವು ವರ್ಷಂಪ್ರತಿ ಸುಮಾರು ೨೫೦ ಮಂದಿಗೆಮೇಲೆಯೇ ಕಿಬ್ಬೊಟ್ಟೆಯಲ್ಲಿ ಶಸ್ತ್ರಚಿಕಿತ್ಸೆಮಾಡುತ್ತಿರುವುವು ಆದರೆ ಆ ಶಸ್ತ್ರಘಾತದಿಂದ ಸಾಯುವವರೇ ಅಪೂರ್ವವು. ಕೆಲವು ಸಮಯಗಳಲ್ಲಿ ಆ ವ್ಯಾಧಿಗಳಿಂದ ಸತ್ತುಹೋಗುವರೆಂದು ನಿರ್ಧರವಾಗಿದ್ದವರು ಕೂಡ ಗುಣಹೊಂದುವುದನ್ನು ನೋಡಿ ಪರಮಾಶ್ಚರ್ಯವಾಗುವುದು "ಎಂದು ಲೂಧಿಯಾನಾ ನಗರದ ಮೆಡಿಕಲ್ ಕಾಲೇಜಿನ ಮುಖ್ಯೋಪಾಧ್ಯಾಯಿನಿಯೂ, ಭಾರತದೇಶದಲ್ಲಿ ಪ್ರಖ್ಯಾತರಾದ ಶಸ್ತ್ರಚಿಕಿತ್ಸೆಯರಲ್ಲೊಬ್ಬಳೂ ಆದ ಡಾಕ್ಟರ್ ಎಡಿತ್‌ಬ್ರೌನ್ ಎಂಬಾಕೆಯು ಬರೆದಿರುವಳು.

ಇವುಗಳಿಂದ ತಿಳಿದುಬರುವುದೇನೆಂದರೆ, ಜನರ ಬಲಹೀನತೆಗೆ ಆಹಾರದಲ್ಲಿ ಮಾಂಸವು ಸೇರದಿರುವುದು ಕಾರಣವಲ್ಲ ಇಂಡಿಯಾದೇಶದಲ್ಲಿ ಸೇವಿಸುವ ಸಸ್ಯಾಹಾರಗಳಲ್ಲಿ ವಿಶೇಷವಾಗಿ ದೊರಕುವ ಬಲವರ್ಧಕ ಪದಾರ್ಥಗಳು ಸರಿಯಾದ ಪ್ರಮಾಣಗಳಲ್ಲಿ ಸೇರದಿರುವುದೂ, ಬಹು ಜನರು ತಮ್ಮ ದೇಹಕ್ಕೆ ಬೇಕಾದ ವಸ್ತುಗಳು ತಕ್ಕ ಪ್ರಮಾಣದಲ್ಲಿ ದೊರಕುವಂತೆ ಏರ್ಪಡಿಸಿಕೊಳ್ಳದಿರುವುದೂ ಕಾರಣಗಳು.

ಉತ್ತರ ಇಂಡಿಯಾದ ಆಹಾರದಲ್ಲಿ ದೇಹಪುಷ್ಟಿಗೆ ಬೇಕಾದ ಆಹಾರಪದಾರ್ಥಗಳು ತಕ್ಕ ಪ್ರಮಾಣದಲ್ಲಿ ಶರೀರಕ್ಕೆ ಸೇರಿ ಆಯುಸ್ಸನ್ನು ಹೆಚ್ಚಿಸಲು ಸಹಕಾರಿಗಳಾಗಿವೆ ಅದನ್ನೇ ಎಲ್ಲರೂ ಸೇವಿಸುವುದಕ್ಕೆ ಯೋಗ್ಯವಾದ ಆಹಾರವನ್ನಾಗಿ ಭಾವಿಸಿ, ಹೊಟ್ಟುಸಹಿತವಾದ ಗೋಧಿಯ ಹಿಟ್ಟಿನಿಂದ ತಯಾರಿಸಿದ ರೊಟ್ಟಿ ಒಳ್ಳೆಯ ಹಾಲು, ಹಣ್ಣುಗಳು, ಸೊಪ್ಪಿನ ಜಾತಿಯ ತರಕಾರಿಗಳು, ಮುಂತಾದ ಪದಾರ್ಥಗಳನ್ನು ವಿಶೇಷವಾಗಿ ಸೇವಿಸದೆ ಇರುವವರು ಇವುಗಳನ್ನು ಉಪಯೋಗಕ್ಕೆ ತರುವಂತೆ ಬೋಧಿಸುತ್ತ ಬರಬೇಕು

ಆಹಾರಪದಾರ್ಥಗಳು ತಕ್ಕ ಪ್ರಮಾಣದಲ್ಲಿ ದೇಹಕ್ಕೆ ಸೇರದಿರುವುದರಿಂದುಂಟಾಗುವ ಬಾಧೆಗಳನ್ನು ನಿವಾರಣೆ ಮಾಡಲು ಯಾವಯಾವ ಪದಾರ್ಥಗಳನ್ನು ಒದಗಿಸಬೇಕೋ, ಅವುಗಳನ್ನು ಉಪಯೋಗಿಸುವಂತೆ ಪ್ರೋತ್ಸಾಹಿಸುವುದರ ಮೂಲಕ ಇಂಡಿಯಾದೇಶದ ಕ್ಷೇಮಕ್ಕೆ ಅವಶ್ಯವಾದ ಅನುಕೂಲವನ್ನು ಏರ್ಪಡಿಸಿದಂತಾಗುವುದು ಈ ವಿಷಯವನ್ನು ಭಾರತದೇಶೀಯ ಸಂಸ್ಥೆಗಳು ಗಮನಕ್ಕೆ ತಂದುಕೊಂಡು ಅದಕ್ಕಾಗಿ ಪ್ರಯತ್ನಪಡಬೇಕು

(ಆ ಚಂ.)

ಸ್ವೀಕಾರ

ಧಾರವಾಡ ಡಿ| ಕಲಘಟಗಿಯಲ್ಲಿರುವ ಮ|| ಸಂಗಪ್ಪಾ ಬಳಿಗಾರ ಇವರ ಸೋದರತ್ತೆ ಶ್ರೀಮತಿ ಸಾವಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ ೩ ರೂಪಾಯಿ ವೇ|| ಶಿದ್ರಾಮೇಶ್ವರಸ್ವಾಮಿ ಹಿರೇಮಠ ಬೆಲವಂತರ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.)ಸೈಜು ೧೪×೧೦ ಬೆಲೆ	೦—೩—೦
ಪ್ರಸ್ತುತ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ ..	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ..	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) ...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
नंदिकेश्वरकारिका (संस्कृत) ..	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ರೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

...ದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಆಗಸ್ಟ್ ೧೯೪೭ [ಸಂಚಿಕೆ ೧೭

ಸ್ವತಂತ್ರ ಭಾರತದಲ್ಲಿ ನೂತನ ಗವರ್ನರುಗಳು

ಶ್ರೀಮತಿ ಸರೋಜಿನೀ ನಾಯಿಡು
ಸಂಯುಕ್ತ ಪ್ರಾಂತ ಗವರ್ನರ್

ಸರ್ ಚಂದೂಲಾಲ ತ್ರಿವೇದಿ
ಪೂರ್ವ ಪಂಜಾಬಿನ ಗವರ್ನರ್

ಸರ್ ಅಕ್ಬರ್ ಹೈದರಿ
ಅಸ್ಸಾಂ ಗವರ್ನರ್

ಜಯರಾಂದಾಸ ದೌಲತರಾಂ
ಬಿಹಾರ್ ಗವರ್ನರ್

ಮಂಗಳದಾಸ ಪಕ್ವಾಸ
ಮಧ್ಯಪ್ರಾಂತ ಗವರ್ನರ್

ಸಿ. ರಾಜಗೋಪಾಲಾಚಾರಿ
ಪಶ್ಚಿಮ ಬಂಗಾಳದ ಗವರ್ನರ್.

ಕೈಲಾಸನಾಥ ಕಾಟಜು
ಒರಿಸ್ಸಾ ಗವರ್ನರ್

ಮುಂಬಯಿ ಮತ್ತು ಮದ್ರಾಸ್ ಪ್ರಾಂತಗಳಿಗೆ ...ಹಿಂದಲಿದ್ದ ಗವರ್ನರುಗಳೇ ಇರುವರು

...ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್
ಅವರು ಗವರ್ನರ್ ಜನರಲ್ ಆಗಿ
ನಿಯಮಿಸಲ್ಪಟ್ಟಿರುವರು

ಭಾರತ ರಾಜ್ಯಾಂಗ ಸಭೆ

ರಾಜ್ಯಾಂಗ ಸಭೆಯು ಗುರುವಾರ ರಾತ್ರಿ ೧೨ ಗಂಟೆಗೆ ...ಸಮಾವೇಶಗೊಂಡಿತು ಅಧ್ಯಕ್ಷರಾದ ಡಾ॥ ರಾಜೇಂದ್ರ ...ಪ್ರಸಾದರು ಮೊದಲು ಭಾಷಣ ಮಾಡುತ್ತಾ—

"ಭಾರತ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡಿದ ...ವೀರರನ್ನು ಈ ದಿವಸ ನಾವು ಸ್ಮರಿಸಬೇಕಾಗಿದೆ ...ಳೆದ ಮೂವತ್ತು ವರ್ಷಗಳಿಂದ ಭಾರತಕ್ಕೆ ನಂದಾದೀ...ಗೆಯಂತಿರುವ ನಾಡಿನ ಸ್ವಾತಂತ್ರ್ಯಸಾಧಕರಾದ ...ಗಾಂಧಿಜಿಯವರಿಗೆ ನಾವು ಭಕ್ತಿಯುತವಾದ ಪ್ರಣಾಮ...ಗಳನ್ನು ಅರ್ಪಿಸುತ್ತೇವೆ.

ಭಾರತದ ಅಲ್ಪಸಂಖ್ಯಾತರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಮಾನತೆ ಇರುವುದಾಗಿ ಈ ಮೂಲಕ ಭರವಸೆ ಕೊಡುತ್ತೇನೆ ಅಲ್ಪಸಂಖ್ಯಾತರು ಭಾರತದ ಬಗ್ಗೆ ದೇಶಭಕ್ತಿಯುತರಾಗಿರಬೇಕು ಈಗ ನಾವು ಗುರುತರವಾದ ಹೊಣೆಗಾರಿಕೆಯನ್ನು ಹೊತ್ತಿದ್ದೇವೆ ಇದನ್ನು ಸಲಪ್ರದವಾಗಿ ನಿರ್ವಹಿಸಬೇಕು ಎಂದು ಹೇಳಿದರು

ಬಳಿಕ ನೆಹರೂ ಅವರು ರಾಷ್ಟ್ರನಿಷ್ಠಾಪ್ರಮಾಣವಚನ ನಿರ್ಣಯವನ್ನು ಮಂಡಿಸುತ್ತಾ— ನಮ್ಮ ತಲೆಮಾರಿನ ಯುಗಪುರುಷನ ಆಶೆ ಏನೆಂದರೆ ನಾಡಿನ ನಿರ್ಭಾಗ್ಯ ಎಲ್ಲಿದ್ದರೂ ಅವನ ಕಣ್ಣೀರನ್ನು ಒರಸಿ, ಅವನ ಮನಸ್ಸನ್ನು ಹಗುರಗೊಳಿಸುವುದೇ ಆಗಿದೆ ಇದು ಸಾಧನಾತೀತವಾಗಿರಬಹುದು ನಿರ್ಭಾಗ್ಯನ ಕಣ್ಣೀರಿನ ಕಾಲುವೆ ಹರಿಯುತ್ತಿರುವವರೆಗೆ ನಮ್ಮ ಕೆಲಸ ಅಪೂರ್ಣವೆಂದು ಹೇಳಿದರು

ಬಳಿಕ ಶ್ರೀ ಎಸ್ ರಾಧಾಕೃಷ್ಣನ್ನರು ಪ್ರತಿಭಾಪೂರಿತವಾದ ಮತ್ತು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿ ನಿರ್ಣಯವನ್ನು ಸಮರ್ಥಿಸಿದರು

ಎಲ್ಲಾ ಸದಸ್ಯರು ಎದ್ದು ನಿಂತು ಭಕ್ತಿಪೂರ್ವಕವಾಗಿ ರಾಜ್ಯಭಕ್ತಿಪ್ರಮಾಣವಚನವನ್ನು ಕೊಟ್ಟರು

ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್ನರನ್ನು ಭಾರತದ ಗವರ್ನರ್ ಜನರಲ್‌ರನ್ನಾಗಿ ನೇಮಿಸುವ ನಿರ್ಣಯವು ಅನುಮೋದಿತವಾಯಿತು

ಪಂ॥ ನೆಹರೂ ಅವರ ಭಾಷಣ

೩೦ ವರ್ಷಗಳ ಹಿಂದೆ ನಮ್ಮ ಅದೃಷ್ಟದೊಂದಿಗೆ ಒಂದು ಒಪ್ಪಂದಕ್ಕೆ ಬಂದೆವು ಅದು ಇಂದು ಪೂರ್ಣವಾಗಿಲ್ಲದಿದ್ದರೂ, ಒಂದು ಬಗೆಯ ತೃಪ್ತಿಕರವಾದ ರೀತಿಯಲ್ಲಿ ಸಾರ್ಥಕಪಡಿಸುತ್ತಿದ್ದೇವೆ ಎಂದು ನೆಹರೂ ಅವರು ದೇಶಭಕ್ತಿಪ್ರಮಾಣವಚನ ನಿರ್ಣಯವನ್ನು ಕುರಿತು ಹೇಳಿದರು

"ಮಧ್ಯರಾತ್ರಿಯಲ್ಲಿ ಇಡೀ ಜಗತ್ತೇ ನಿದ್ರಾವಸ್ಥೆಯಲ್ಲಿರುವಾಗ ಭಾರತವು ಚೇತರಿಸುವುದು ಇತಿಹಾಸದಲ್ಲಿ ಇಂತಹ ಪರ್ವಸಮಯ ಬರುವುದು ಬಹಳ ಅಪೂರ್ವ! ಒಂದು ಶಕೆ ಮುಕ್ತಾಯವಾಗಿ ಪದಾಕ್ರಾಂತವಾಗಿದ್ದ ನಾಡಿನ ಆತ್ಮ ಚೇತನಗೊಳ್ಳುತ್ತಿರುವ ಮಹಾಸಂಧಿಕಾಲ ಇದು. ಇಂತಹ ಪುಣ್ಯಕಾಲದಲ್ಲಿ ನಾಡಿನ ಸೇವೆಗಾಗಿ ಇಡೀ ಮಾನವಕಲ್ಯಾಣಸಾಧನೆಗಾಗಿ ನಾವು ಪ್ರತಿಜ್ಞೆ ಕೈಗೊಳ್ಳುವುದು ಪವಿತ್ರಕರ್ತವ್ಯವಾಗಿದೆ ಎಂಬುದರಲ್ಲಿ ತಿಲ ಮಾತ್ರ ಸಂದೇಹವಿಲ್ಲ

ಇತಿಹಾಸದ ಅರುಣೋದಯ ಕಾಲದಿಂದಲೂ ಭಾರತ ವೈಭವಯುತವಾಗಿ ಇತ್ತು ಅನೇಕಸಲ ಮುಗ್ಗರಿಸಿಯೂ ಇದೆ ಭಾರತ ಸ್ವತಂತ್ರವಾಗಿರುವಾಗಲೂ ಸರಿಯೇ, ಪಾದಾಕ್ರಾಂತವಾಗಿದ್ದಾಗಲೂ ಸರಿಯೆ, ತನ್ನ ಮಹಾದರ್ಶಗಳನ್ನು ಮರೆಯಲಿಲ್ಲ ಈಗ ಭಾರತದ ನಿರ್ಭಾಗ್ಯದಶೆ ಕೊನೆಯಾಗಿದೆ ನಮ್ಮ ಈ ಮೊದಲ ಹೆಜ್ಜೆ ಮುಂದಿನ ಮಹಾಸಾಧನೆಗಳಿಗೆ ಬುನಾದಿಯಾಗಿದೆ ಈ ಸದವಕಾಶವನ್ನು ಕರಗತಮಾಡಿಕೊಳ್ಳುವ ದಿಟ್ಟತನ, ವಿವೇಕ ನಮಗಿದೆಯೇ? ಭವಿಷತ್ತಿನ ಸವಾಲಿಗೆ ನಾವು ಉತ್ತರ ಕೊಡಬಲ್ಲೆವೆ?

ಸ್ವಾತಂತ್ರ್ಯೋದಯಕ್ಕೆ ಮೊದಲು ನಮ್ಮ ವೇದನೆ ಸ್ಮರಣಾರ್ಹ ಈ ಸ್ಮರಣೆ ನಮ್ಮ ಹೃದಯಗಳನ್ನು ಮುಗುಡಗೊಳಿಸಿದೆ ಈಗಲೂ ಆ ವೇದನೆಯಿಂದ ನಾವು ಹೊರಗಾಗಿಲ್ಲ ಭವಿಷ್ಯವು ನಮ್ಮನ್ನು ಕೈ ಬೀಸಿ ಕರೆಯುತ್ತಿದೆ

ನಮ್ಮ ಭವಿಷ್ಯ ನಾವು ಹಾಯಾಗಿರುವುದಕ್ಕೆ ಅವಕಾಶ ಕೊಡುವುದಿಲ್ಲ ಹಿಂದಿನ ಪ್ರತಿಜ್ಞೆಗಳೂ ಇಂದಿನ ಪ್ರಮಾಣವಚನವೂ ವಿಫಲಗೊಳ್ಳದಿರಬೇಕಾದರೆ ನಾವು ಹುಟ್ಟುಹಾಕುತ್ತಲೇ ಇರಬೇಕು

ಭಾರತ ಸೇವೆಯೆಂದರೆ ದರಿದ್ರನಾರಾಯಣನ ಸೇವೆ ಬಡತನ, ಅಜ್ಞಾನ, ಇವೆಲ್ಲಾ ನಾಮಾವಶೇಷವಾಗಬೇಕು ಎಂದು ಹೇಳಿದರು

ರಾಜ್ಯಾಂಗಸಭೆಗೆ ಗವರ್ನರ್ ಜನರಲ್ಲರ ಆಗಮನ

ಲಾರ್ಡ್ ಮೌಂಟ್‌ಬ್ಯಾಟನ್ ದಂಪತಿಗಳನ್ನು ೧೫ ರ ಪ್ರಾತಃಕಾಲ ೯ ೫೦ರ ವೇಳೆಗೆ ಸಭೆಗೆ ಕರೆತರಲಾಯಿತು

ಲಾರ್ಡ್ ಮೌಂಟ್‌ಬ್ಯಾಟನ್ನರು ಮಾತನಾಡುತ್ತಾ "ಜವಹರಲಾಲರು ಧೀರರೂ ದೂರದೃಷ್ಟಿಯುಳ್ಳವರೂ ಆಗಿದ್ದು ವಿಶ್ವವಿಖ್ಯಾತರಾದ ನಾಯಕರೆನಿಸಿಕೊಂಡಿದ್ದಾರೆ ಅವರ ನಾಯಕತ್ವದಲ್ಲಿ ಭಾರತದೇಶ ವಿಶ್ವರಾಷ್ಟ್ರಗಳ ಶ್ರೇಣಿಯಲ್ಲಿ ಒಂದು ಮಹತ್ತರಸ್ಥಾನ ಗಳಿಸಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ' ಎಂದರು

ಭಾಷಣವನ್ನು ಮುಂದುವರಿಸುತ್ತಾ ಮೌಂಟ್‌ಬ್ಯಾಟನ್ನರು 'ನಾನು ನಿಮ್ಮ ಶಾಸನಬದ್ಧ ಗವರ್ನರ್ ಜನರಲ್ಲಾಗಿ ನೇಮಿಸಲ್ಪಟ್ಟಿದ್ದೇನೆ ತಾವು ನನ್ನನ್ನು ನಿಮ್ಮವನೆಂದೇ ತಿಳಿಯಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ಗದ್ಗದಕಂಠದಿಂದ ನುಡಿದರು ಆ ಮಾತುಗಳಿಂದ ಹಿಂದೂಸ್ಥಾನದ ಚರಿತ್ರೆಯಲ್ಲಿ ದಾಸ್ಯದ ಯುಗ ಕಳೆದು ಹೊಸಕಾಲ ಬಂದುದರ ಸೂಚನೆಯಂತೆ ಭಾಸವಾಯಿತು 'ಈ ಅಹಿಂಸಾತ್ಮಕ ಮಾರ್ಗದಲ್ಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಗಳಿಸಿ ಕೊಟ್ಟ ಮಹಾತ್ಮ ಗಾಂಧಿಯವರಿಗೆ ಭಾರತದೇಶ ಋಣಿಯಾಗಿರಬೇಕೆಂಬುದನ್ನು ಯಾರೂ ಮರೆಯದಿರಿ ಅವರು ಇಂದು ಇಲ್ಲಿಲ್ಲದಿದ್ದರೂ ಅವರ ಬಗ್ಗೆ ನಮ್ಮ ಆಲೋಚನೆಗಳೋಡುತ್ತಿವೆ ಎಂಬುದು ಮಾತ್ರ ಸತ್ಯ" ಎಂದರು

ಅನಂತರ ಗೌರ್ನರ್ ಜನರಲ್ಲರು ಧ್ವಜಾರೋಹಣವಾಗಬಹುದೆಂದು ಸೂಚಿಸಿ ತಮ್ಮ ಠಾಣ್ಯಕ್ಕೆ ಹಿಂತಿರುಗಿದರು ರಾಜ್ಯಾಂಗಸಭೆ ಆಗಸ್ಟ ೨೦ನೆಯ ತಾರೀಖಿಗೆ ಮುಂದುವರಿಸಲ್ಪಟ್ಟಿತು

ಭಾರತದ ಹೊಸ ಡೊಮಿನಿಯನ್ ಸರ್ಕಾರದ ಮಂತ್ರಿಗಳ ಗೌರವಾರ್ಥವಾಗಿ ಮೌಂಟ್ ಬ್ಯಾಟನ್ ದಂಪತಿಗಳು ೧೫ರಲ್ಲಿ ಔತಣಕೂಟವನ್ನೇರ್ಪಡಿಸಿದ್ದರು.

ಪಂಚಾಚಾರ್ಯಪ್ರಭಾ.

೧೯೪೭ನೆಯ ಆಗಸ್ಟ್ ತಾ|| ೧೮ನೇ ಸೋಮವಾರ

ಭಾರತವು ಸ್ವತಂತ್ರವಾಯಿತು

ಈಗ್ಗೆ ಸುಮಾರು ೧೫೦ ವರ್ಷಗಳಿಂದ ಭರತಖಂಡವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದ ಬ್ರಿಟಿಷರು ಇದೇ ತಿಂಗಳು ೧೫ ನೆಯ ತಾರೀಖು ಶುಕ್ರವಾರದಿವಸ ಭರತಖಂಡದ ಮೇಲಿದ್ದ ತಮ್ಮ ಸಂಪೂರ್ಣಾಧಿಕಾರವನ್ನು ಭಾರತೀಯರಿಗೆ ವಹಿಸಿದ್ದುದರಿಂದ ಭರತಖಂಡವು ಅಂದಿನಿಂದ ಪೂರ್ಣ ಸ್ವತಂತ್ರವಾಯಿತೆಂಬ ವಿಷಯವನ್ನು ತಿಳಿಸಲು ಅತ್ಯಂತ ಸಂತೋಷವೆನಿಸುತ್ತದೆ

ಬ್ರಿಟಿಷರು ೧೬೦೦ ರಲ್ಲಿ ಭರತಖಂಡಕ್ಕೆ ವ್ಯಾಪಾರದ ಉದ್ದೇಶದಿಂದ ಆಗಮಿಸಿದರು ಅಲ್ಲಿಂದ ನೂರಾರು ವರ್ಷಗಳವರೆಗೆ ಇವರು ತಮ್ಮ ವ್ಯಾಪಾರದಲ್ಲಿ ತೊಡಗಿದ್ದು, ಬರಬರುತ್ತ ರಾಜ್ಯದಾಶೆಯಿಂದ ರಾಜಕೀಯ ವಿಷಯದಲ್ಲಿ ಕೈಹಾಕಿದರು ಕ್ರಿ ಶ ೧೮ನೆಯ ಶತಮಾನದಲ್ಲಿ ಭರತಖಂಡದ ನಾನಾ ಭಾಗಗಳಲ್ಲಿದ್ದ ಹಿಂದೂಮುಸಲ್ಮಾನರಾರಲ್ಲಿ ಅನೈಕಮತ್ಯವು ತಾಂಡವನಾಡುತ್ತಿತ್ತು ಆಗ್ಗೆ ಕುಶಲರಾದ ಬ್ರಿಟಿಷರು ಈ ಸಂದಿಯನ್ನು ನೋಡಿ ಒಬ್ಬರಮೇಲೊಬ್ಬರನ್ನ ಎತ್ತಿಕಟ್ಟಿ ಯುಕ್ತಿಯಿಂದ ತಾವು ಒಂದೊಂದು ರಾಜ್ಯಗಳನ್ನು ಸಂಪಾದಿಸುತ್ತ ಕೊನೆಗೆ ಸಮಸ್ತ ಭರತಖಂಡದ ರಾಜರನ್ನೆಲ್ಲ ತಮ್ಮ ಅಧೀನದಲ್ಲಿಟ್ಟುಕೊಂಡು ಅವರ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸ್ಥಿರಗೊಳಿಸಿದರು ಬ್ರಿಟಿಷರ ರಾಜ್ಯದಾಹದಿಂದ ಅನೇಕ ಹಿಂದೂರಾಜರ ಸಂಸ್ಥಾನಗಳು ನಿರ್ನಾಮವಾದವು ಮುಂದೆ ಬರಬರುತ್ತ ಬ್ರಿಟಿಷರು ಬಹಳ ಪ್ರಬಲರಾದರು ೧೮೫೭ ನೆಯ ಇಸ್ವಿಯಲ್ಲಿ ಹಿಂದೂಸ್ಥಾನದಲ್ಲಿ ಧಾರ್ಮಿಕಭಾವನೆಯಿಂದ ಒಂದು ದೊಡ್ಡ ದಂಗೆಯೇ ಎದ್ದಿತು ಈ ದಂಗೆಯು ಸೈನಿಕರಲ್ಲಿಯೇ ಎದ್ದುದರಿಂದ "ಸಿಪಾಯಿ ದಂಗೆ" ಎಂಬ ಹೆಸರಿನಿಂದ ಪ್ರಸಿದ್ಧವಾಯಿತು ಈ ಸಿಪಾಯಿದಂಗೆಯಲ್ಲಿ ಬ್ರಿಟಿಷರಿಗೆ ಅಪಜಯವಾಗುವದೆಂದು ಬಹು ಜನರು ಭಾವಿಸಿದ್ದರು ಆದರೆ ಚಾಣಾಕ್ಷರಾದ ಬ್ರಿಟಿಷರು ನಾನಾವಿಧವಾದ ಯುಕ್ತಿಪ್ರಯುಕ್ತಿಗಳಿಂದ ಈ ದಂಗೆಯನ್ನು ಶಮನಮಾಡಿ ತಮ್ಮ ಪ್ರಭುತ್ವವನ್ನು ಇನ್ನೂ ಹೆಚ್ಚಿನ ರೀತಿಯಿಂದ ಸ್ಥಿರಪಡಿಸಿ ಈ ದೇಶವನ್ನಾಳಲು ಪ್ರಾರಂಭಿಸಿದರು

ಬ್ರಿಟಿಷರ ಆಳ್ವಿಕೆಯಿಂದ ಭಾರತೀಯರು ಕೆಲವು ವಿಷಯಗಳಲ್ಲಿ ಸುಧಾರಿಸಿದರು ಆದರೆ ಇವರ ಆಳ್ವಿಕೆಯು ಭಾರತೀಯರಿಗೆ ಪ್ರಾಣದಂತಿದ್ದ ಧರ್ಮವನ್ನು ಮಾತ್ರ ಸಂಪೂರ್ಣ ನಾಶಮಾಡಿತು ಭಾರತೀಯರು ಯಾವ ಭಾಷೆಯ ಒಗ್ಗೆ ಅಸಾಧಾರಣವಾದ ಪೂಜ್ಯಭಾವವನ್ನಿಟ್ಟಿದ್ದರೋ, ಅಂತಹ ದೇವಭಾಷೆ (ಸಂಸ್ಕೃತ) ಯನ್ನು ಮೂಲೆಗೊತ್ತಿ, ಸರ್ವತ್ರ ತಮ್ಮ ಇಂಗ್ಲಿಷ್ ಭಾಷೆಯನ್ನೇ ಪ್ರಚಾರಕ್ಕೆ ತಂದರು. ಇಂಗ್ಲಿಷ್‌ಭಾಷಾಪ್ರಚಾರ ಮೂಲಕ ನಮ್ಮ ಸನಾತನಧರ್ಮದ ವಿಷಯದಲ್ಲಿ ಭಾರತೀಯರಿಗಿದ್ದ ನಿರ್ಮಲಭಕ್ತಿಯನ್ನು ನಾಶಮಾಡಿದರು. ಯಾವ ಭಾರತೀಯರು ಸನಾತನಧರ್ಮ ಮತ್ತು ಸಂಸ್ಕೃತಭಾಷೆಗಳನ್ನು ತಮ್ಮ ಪ್ರಾಣವೆಂದು ಭಾವಿಸಿದ್ದರೋ ಅಂತಹ ಭಾರತೀಯರ ಮುಖದಿಂದಲೇ ಇವೆರಡರ ಬಗ್ಗೆ ತುಚ್ಛಭಾವನೆಯು ಬೆಳೆಯುವಂತೆ ಮಾಡಿದರು ಈ ರೀತಿ ಇವರು ಬಹು ಯುಕ್ತಿಯಿಂದಲೂ ಕುಶಲತೆಯಿಂದಲೂ ಭಾರತೀಯರ ಧಾರ್ಮಿಕಭಾವನೆಗಳನ್ನೆಲ್ಲ ಹಾಳುಮಾಡಿ ನಮ್ಮ ದೇಶದಲ್ಲಿ ತಮ್ಮ ದೇಶದ ನಡವಳಿಕೆಗಳನ್ನು ಸ್ಥಿರಗೊಳಿಸಿದರು ಈಗ್ಗೆ ನೂರಾರು ವರ್ಷಗಳ ಪೂರ್ವದಲ್ಲಿದ್ದ ಭರತಖಂಡದ ಸ್ಥಿತಿಗೂ ಈಗಿನ ಭರತಖಂಡದ ಸ್ಥಿತಿಗೂ ಧರ್ಮಕರ್ಮಗಳ ಬಗ್ಗೆ ವಿಚಾರಮಾಡಿನೋಡಿದರೆ ಭೂಮ್ಯಾಕಾಶದಷ್ಟು ಅಂತರವಾಗಿಹೋಗಿರುವುದು ಭಾರತೀಯರು ಬ್ರಿಟಿಷರ ಕಪಟ ಜಾಲದಲ್ಲಿ ಬಿದ್ದು ತಮ್ಮ ಧರ್ಮಕರ್ಮಗಳನ್ನೂ, ತಮ್ಮ ಮೂಲಪುರುಷರನ್ನೂ ತಾವೇ ನಿಂದಿಸಲು ಪ್ರಾರಂಭಿಸಿದರು ಇಂತಹ ವಿಷಮಸನ್ನಿವೇಶದಲ್ಲಿ ಕಾಂಗ್ರೆಸ್ ಎಂಬ ಸಂಸ್ಥೆಯು ತಲೆಯೆತ್ತಿ ಅದೇ ಮಾರ್ಗವನ್ನು ತುಳಿಯಹತ್ತಿತು. ಈ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಬ್ರಿಟಿಷರ ಆಳ್ವಿಕೆಗಿಂತಲೂ ಧರ್ಮಕರ್ಮಗಳು ಹೆಚ್ಚಾಗಿ ನಾಶವಾಗಹತ್ತಿರುವವೆಂಬ ವಿಷಯವು ಸರ್ವರಿಗೂ ತಿಳಿದೇ ಇದೆ

"ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ"

ಧರ್ಮವನ್ನು ಯಾರು ನಾಶಮಾಡುವರೋ ಅವರನ್ನು ಧರ್ಮವು ನಾಶಮಾಡುವುದೆಂದೂ, ಧರ್ಮವನ್ನು ಯಾರು ಕಾಪಾಡುವರೋ ಅವರನ್ನು ಧರ್ಮವು ಕಾಪಾಡುವುದೆಂದೂ ನುಡಿದಿರುವ ಮಹಾತ್ಮರ ವಾಕ್ಯಾಭಿಪ್ರಾಯವನ್ನು ವಿಮರ್ಶಿಸಿ ನೋಡಿದರೆ, ಬ್ರಿಟಿಷರಿಗೆ ಹೀನಸ್ಥಿತಿಯು ಪ್ರಾಪ್ತವಾದುದಕ್ಕೆ ಅವರು ಸನಾತನಧರ್ಮದಮೇಲೆ ಮಾಡಿದ ವಜ್ರಾಘಾತವೇ ಮೂಲಕಾರಣವೆಂದು ಸಾರಿಸಾರಿ ಹೇಳಬಹುದಾಗಿದೆ ಯಾರೇ ಆಗಲಿ ಧರ್ಮವನ್ನು ನಾಶಮಾಡಬಾರದು ಧರ್ಮವನ್ನು ನಾಶಮಾಡಿದರೆ ಅವರಿಗೆ ಎಂದಾದರೊಮ್ಮೆ ನಾಶವು ಸಿದ್ಧವೆಂದೇ ಭಾವಿಸಬೇಕು ಈ ವಿಷಯವನ್ನು ರಾಷ್ಟ್ರಸೂತ್ರಧಾರಿಗಳು ನಿರ್ಮಲಬುದ್ಧಿಯಿಂದ ವಿಮರ್ಶಿಸಿ ಸನಾತನಧರ್ಮದಂತೆ ರಾಜ್ಯಪರಿಪಾಲನೆಯನ್ನು ಮಾಡಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ ಅಸ್ತು!

ಇತಿಹಾಸದೃಷ್ಟಿಯಿಂದ ವಿಚಾರಮಾಡಿನೋಡಿದರೆ ಬ್ರಿಟಿಷರು ಆಳಿದಷ್ಟು ಭಾರತದೇಶದ ಹೆಚ್ಚು ಭಾಗವನ್ನು ನಮ್ಮ ದೇಶದ ಯಾವ ರಾಜರೂ ಯಾವ ಕಾಲದಲ್ಲಿಯೂ ಆಳಿಲ್ಲವೆಂದು ಹೇಳಬಹುದು ಈ ರೀತಿ ಪ್ರಬಲವಾದ ರಾಷ್ಟ್ರವನ್ನು ಒಟ್ಟಾಗಿ ಕಟ್ಟಿ ಇದರಮೇಲೆ ಅಖಂಡವಾದ ಸಾರ್ವಭೌಮತ್ವವನ್ನು ನಡೆಸಿದ ಕೀರ್ತಿಯು ಇವರಿಗೇ ಸಲ್ಲತಕ್ಕದ್ದೆಂದು ಹೇಳಿದರೆ ತಪ್ಪಾಗದು ಈ ರೀತಿ ಪ್ರಬಲರಾಗಿದ್ದ ಬ್ರಿಟಿಷರು ೪೦ ಕೋಟಿ ಪ್ರಜಾಸಂಖ್ಯೆಯುಳ್ಳ ಭರತಖಂಡವನ್ನು ಯಾವ ರಕ್ತಪಾತವೂ ಇಲ್ಲದ ಶಾಂತವಾಗಿ ಬಿಟ್ಟುಕೊಟ್ಟುದನ್ನು ನೋಡಿದರೆ ಇದು ಕಾಲದ ಪ್ರಭಾವವೆಂದೇ ಹೇಳಬೇಕಾಗಿದೆ "ಕಾಲಾಧೀನಂ ಜಗತ್ಸರ್ವಂ" ಎಂಬ ಮಹಾತ್ಮರ ವಾಕ್ಯವು ಸತ್ಯವಾದುದು

ಬ್ರಿಟಿಷರು ಈ ರೀತಿ ಭರತಖಂಡವನ್ನು ಭಾರತೀಯರಿಗೆ ಶಾಂತರೀತಿಯಿಂದ ಒಪ್ಪಿಸಿದುದಕ್ಕೆ ಕೆಲವು ಕಾರಣಗಳಿರುವುವು ಮೊನ್ನೆ ಮೊನ್ನೆ ನಡೆದ ಮಹಾಸಂಗ್ರಾಮವು ಮೊದಲನೆಯ ಕಾರಣವು ಈ ಘೋರಸಂಗ್ರಾಮದಲ್ಲಿ ಬ್ರಿಟಿಷರು ಬಹಳ ಕಷ್ಟನಷ್ಟಗಳಿಗೀಡಾದರು ಇದರ ಮೇಲೆ ಅಮೇರಿಕದವರ ಒತ್ತಾಶೆಯೂ ಸಹ ಜೋರಾಯಿತು ಇದು ಎರಡನೆಯ ಕಾರಣವು ಕಳೆದ ಯುದ್ಧದಲ್ಲಿ ಸುಭಾಷ ಚಂದ್ರಬೋಸರು ಬ್ರಿಟಿಷರ ಅಧೀನದಲ್ಲಿದ್ದ ಭಾರತೀಯರ ಸೈನ್ಯವನ್ನೇ ತಮ್ಮ ಕಡೆಗೆ ತೆಗೆದುಕೊಂಡು ಬ್ರಿಟಿಷರ ಮೇಲೆ ತಿರುಗಿಬಿದ್ದುದು ಮೂರನೆಯ ಕಾರಣವು ೧೯೪೨ ರಲ್ಲಿ ನಡೆದ 'ಕ್ವಿಟ್ ಇಂಡಿಯಾ" ಚಳವಳಿಯು ನಾಲ್ಕನೆಯ ಕಾರಣವು ಭರತಖಂಡದ ನಾನಾ ಇಲಾಖೆಗಳಲ್ಲಿ ಮೇಲಿಂದಮೇಲೆ ಮುಷ್ಕರಗಳು ನಡೆಯುತ್ತ ರಾಜ್ಯಾಡಳಿತಕ್ಕೆ ತೊಂದರೆಯನ್ನುಂಟುಮಾಡುತ್ತಿದ್ದುದು ಐದನೆಯ ಕಾರಣವು ಇತ್ಯಾದಿಕಾರಣಗಳಿಂದ ಇನ್ನು ಮುಂದೆ ಭಾರತದೇಶವನ್ನು ಸುಗಮವಾಗಿ ಆಳುವುದು ಸಾಧ್ಯವಿಲ್ಲವೆಂದು ಭಾವಿಸಿ ಬ್ರಿಟಿಷರು ತಮ್ಮ ಅಧಿಕಾರವನ್ನು ಭಾರತೀಯರಿಗೆ ವಹಿಸಿಕೊಟ್ಟರು ಭಾರತದೇಶವನ್ನು ಭಾರತೀಯರಿಗೆ ವಹಿಸಿಕೊಟ್ಟುದೇನೋ ಸಂತೋಷ! ಆದರೆ ಭಾರತ ಮತ್ತು ಪಾಕಿಸ್ಥಾನ ಎಂದು ದೇಶವನ್ನು ಎರಡುಭಾಗ ಮಾಡಿಬಿಟ್ಟರು. ಇದು ಬಹುಜನರಿಗೆ ಅತೃಪ್ತಿಯನ್ನುಂಟುಮಾಡಿದೆ ಈ ಇಬ್ಭಾಗದಿಂದ ದೇಶದಲ್ಲಿ ಯಾವಾಗಲೂ ಕಲಹವು ತಪ್ಪಿದ್ದಲ್ಲವೆಂದು ರಾಜನೀತಿಜ್ಞರ ಮತವಾಗಿರುವುದು ಆದರೆ ಮುಂದೆ ಯಾವರೀತಿ ಪರಿಣಮಿಸುವದೋ ಎಂಬುದನ್ನು ದೇವರೇ ಬಲ್ಲ! ದೇಶವು ಇಬ್ಭಾಗವಾಗಿ ಮಾಡಲ್ಪಟ್ಟರೂ ದೇಶದಲ್ಲಿ ಶಾಂತಿಯುಂಟಾಗಿಲ್ಲ ಲಾಹೋರ, ಅಮೃತಸರ ಮೊದಲಾದ ಕಡೆಗಳಲ್ಲಿ ಹತ್ಯಾಕಾಂಡವು ಇನ್ನೂ ತಾಂಡವಾಡುತ್ತಲೇ ಇದೆ ಈ ಹತ್ಯಾಕಾಂಡವು ಶಾಂತವಾಗುವವರೆಗೆ ದೇಶಕ್ಕೆ ಸುಖವಿಲ್ಲ ಜಗದೀಶ್ವರನ ಅನುಗ್ರಹದಿಂದ ಈ ಹತ್ಯಾಕಾಂಡವು ಸಂಪೂರ್ಣ ಲಯವಾಗಿ ಸರ್ವತ್ರ ಸುಖಶಾಂತಿಗಳು ನೆಲಸುವಂತಾಗಲೆಂದೂ, ಸ್ವತಂತ್ರಭಾರತವು ಪೂರ್ವಕಾಲದಂತೆ ಧರ್ಮದ ಬೀಡಾಗಿ ಮೆರೆಯಲೆಂದೂ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ

ಸ್ವತಂತ್ರಭಾರತದ ಮಂತ್ರಿಮಂಡಲ

ಆಗಸ್ಟ್ ೧೫ ರಿಂದ ಆಡಳಿತ ನಿರ್ವಹಿಸುವ ಸ್ವತಂತ್ರಭಾರತದ ನೂತನ ಮಂತ್ರಿಮಂಡಲದ ಸದಸ್ಯರುಗಳ ಹೆಸರುಗಳನ್ನು ರಾಜ್ಯಾಂಗ ಸಭೆಯ ಅಧಿವೇಶನದಲ್ಲಿ ಸಾರಲಾಯಿತು. ಮಂತ್ರಿಮಂಡಲದ ಸದಸ್ಯರಲ್ಲಿ ಈ ಕೆಳಗ ಕಂಡಂತೆ ಪೋರ್ಟ್‌ಫೋಲಿಯೋಗಳ ಹಂಚಿಕೆಯಾಗಿದೆ.

ಪಂಡಿತ ಜವಹರಲಾಲ್ ನೆಹರು–ಇಂಡಿಯಾ ಡೊಮಿನಿಯನ್ನಿನ ಮುಖ್ಯಮಂತ್ರಿ. ವಿದೇಶಾಂಗ ವ್ಯವಹಾರ ಮತ್ತು ವೈಜ್ಞಾನಿಕ ಸಂಶೋಧನೆ

ಸರ್ದಾರ್ ವಲ್ಲಭಾಯಿ ಪಟೇಲ್–ಗೃಹಮಂತ್ರಿ

ಡಾ|| ರಾಜೇಂದ್ರಪ್ರಸಾದ್–ಆಹಾರ ಮತ್ತು ವ್ಯವಸಾಯ

ಮೌಲಾನಾ ಅಬುಲ್ ಕಲಾಂ ಅಜಾದ್–ವಿದ್ಯಾಭ್ಯಾಸ

ಡಾ|| ಜಾನ್ ಮೆಥಾಯ್–ರೈಲ್ವೆ ಮತ್ತು ಸಂಚಾರ

ಸರ್ದಾರ್ ಬಲದೇವಸಿಂಗ್–ರಕ್ಷಣೆ

ಸಿ ಹೆಚ್ ಬಾಬಾ–ವಾಣಿಜ್ಯ

ರಫಿ ಅಹಮದ್ ಕಿದ್ವಾಯಿ–ವರ್ತಮಾನ

ರಾಜಕುಮಾರಿ ಅಮೃತ್‌ಕೌರ್–ಆರೋಗ್ಯ

ಡಾ|| ಬಿ ಆರ್. ಅಂಬೇಡ್ಕರ್–ನ್ಯಾಯಶಾಖೆ

ಆರ್ ಕೆ. ಷಣ್ಮುಖಂಚೆಟ್ಟಿ–ಹಣಕಾಸು

ಡಾ|| ಶ್ಯಾಮಪ್ರಸಾದ ಮುಖರ್ಜಿ–ಕೈಗಾರಿಗೆ ಮತ್ತು ಸರಬರಾಜು

ಮಿ|| ಎಸ್ ವಿ ಗಾಡಗೀಳ್–ಗಣಿಗಳ ಶಾಖೆ

ನೂತನ ಮಂತ್ರಿಮಂಡಲದ ಹೇಳಿಕೆ

೧೫ ನೆಯ ತಾರೀಖಿನ ದಿವಸ ಭಾರತದ ಹೊಸ ಮಂತ್ರಿಮಂಡಲ ಸಭೆಯು ತನ್ನ ಪ್ರಥಮ ಸಭೆಯನ್ನು ನಡೆಸಿ ಶಾಂತಿಪಾಲನೆಯ ಬಗ್ಗೆ ಭಾರತದ ಪ್ರಜೆಗಳಿಗೆ ಒಂದು ಸಂದೇಶ ಕೊಟ್ಟಿರುತ್ತದೆ.

"ಯಾವುದೇ ರೀತಿಯಲ್ಲಾಗಲಿ ಹಿಂಸಾಪ್ರವೃತ್ತಿಯನ್ನು ಬಿಡಬೇಕೆಂದು ನಾವು ಜನಗಳಲ್ಲಿ ಪ್ರಾರ್ಥಿಸುತ್ತೇವೆ ದೇಶದ ಪ್ರಗತಿಗಾಗಿ ಶಾಂತಿ ಪಾಲಿಸುವುದು ಸರಕಾರದ ಕರ್ತವ್ಯ.

ಈಗಿನ ಸರಕಾರವು ರಾಜ್ಯಾಂಗ ಸಭೆಗೂ ತನ್ಮೂಲಕ ಪ್ರಜೆಗಳಿಗೂ ಜವಾಬ್ದಾರಿಯುಳ್ಳದಾಗಿರುತ್ತದೆ ಪ್ರಜೆಗಳ ಒಪ್ಪಿಗೆಯಿಲ್ಲದೆ ಅದು ಬದುಕುವುದು ಸಾಧ್ಯವಿಲ್ಲ ಭಾರತದಲ್ಲಿ ಶಾಂತಿಯಿದ್ದರೆ ಜಗತ್ತಿನಲ್ಲಿ ಶಾಂತಿ ಸಾಧ್ಯ

"ನಾವು ಪ್ರಜಾಸತ್ತೆಗಾಗಿ ಟೊಂಕ ಕಟ್ಟಿ ನಿಂತಿರುವೆವು. ಪಾಕೀಸ್ಥಾನದಲ್ಲಿರುವವರಿಗೂ ನಾವು ಇದೇ ಮನವಿ ಮಾಡಿಕೊಳ್ಳುತ್ತೇವೆ ರಾಜಕೀಯ ಗಡಿಗಳಿಂದ ಪಾಕೀಸ್ಥಾನ ಭಾರತದಿಂದ ಬೇರ್ಪಟ್ಟಿದ್ದರೂ ಇಡೀ ದೇಶದ ಏಕಮತ್ಯವನ್ನು ಒಡೆಯತಕ್ಕದ್ದಲ್ಲ. ಏಕೆಂದರೆ ಒಂದು ಭಾಗಕ್ಕೆ ಆಗುವ ಅಪಾಯ ಇನ್ನೊಂದಕ್ಕೆ ತಟ್ಟೇ ತಟ್ಟುತ್ತದೆ ನಾವೆಂದು ಸ್ವತಂತ್ರ ಜನಾಂಗ. ಆ ರೀತಿ ವರ್ತಿಸೋಣ!"

ಅಧಿಕಾರ ವಹಿಸುವ ಸಮಯದಲ್ಲಿ ನೆಹರೂ ಅವರ ಸಂದೇಶ

ನಮ್ಮನ್ನಾವರಿಸಿದ್ದ ಗಾಢಾಂಧಕಾರದಲ್ಲಿ ಬೆಳಕು ತೋರಿ ಮೊಟ್ಟಮೊದಲು ಸ್ವಾತಂತ್ರ್ಯ ಜ್ಯೋತಿಯನ್ನು ಎತ್ತಿಹಿಡಿದ ರಾಷ್ಟ್ರದ ವೃದ್ಧಪಿತಾಮಹ ಗಾಂಧೀಜಿಗೆ ಈ ಮಹತ್ವ ಸಮಯದಲ್ಲಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ

ತಾಯ್ನಾಡಿನ ಬಂಧವಿಮೋಚನೆಗಾಗಿ ಹೋರಾಡಿ ಆತ್ಮಾರ್ಪಣೆಮಾಡಿ ವೀರಸ್ವರ್ಗ ಪಡೆದ ಅಸಂಖ್ಯಾತರಾದ ಭಾರತಾಂಬೆಯ ಮಕ್ಕಳನ್ನು ಈ ಸಮಯದಲ್ಲಿ ಕೃತಜ್ಞತೆಯಿಂದ, ದುಃಖಾಶ್ರುಗಳಿಂದ ಸ್ಮರಿಸುತ್ತೇನೆ. ಭಾರತ

ತಂತ್ರ್ಯವು ಅವರ ಆತ್ಮಕ್ಕೆ ಚಿರಶಾಂತಿಯನ್ನುಂಟು ಡಲಿ!" ಎಂಬುದಾಗಿ ಪಂ|| ನೆಹ್ರೂರವರು ಮಧ್ಯ ರಾತ್ರಿಯಲ್ಲಿ ಸೇರಿದ ರಾಜ್ಯಾಂಗ ಸಭೆಯಲ್ಲಿ ಕೃತಜ್ಞತಾ ಪೂರ್ವಕವಾದ ಸಂದೇಶವಿತ್ತರು.

...ಬುಲ್ ಕಲಾಂ ಅಜಾದರ ಸಂದೇಶ

ಹೊಸದಾಗಿ ಲಭಿಸಿರುವ ಸ್ವಾತಂತ್ರ್ಯವನ್ನು "ನಮ್ಮ ...ಯಗಳು ಫಲಿಸುವಂತೆ ಉಪಯೋಗಿಸಬೇಕು ಈ ...ತ್ವ ಸನ್ನಿವೇಶದಲ್ಲಿ ಪ್ರತಿಯೊಬ್ಬ ಭಾರತೀಯರೂ ...ಕ್ಕೆ ನೆರವು ನೀಡಬೇಕು"—ಎಂಬುದಾಗಿ ಆಬುಲ್ ...ಂ ಅಜಾದರು ಸಂದೇಶವಿತ್ತಿದ್ದಾರೆ.

ರಾಜೇಂದ್ರಪ್ರಸಾದರ ಸಂದೇಶ

"ಗಾಂಧೀಜಿ ಮತ್ತು ಇತರ ಅನೇಕ ನಾಯಕರ ...ಶ್ರಾಂತ ಹೋರಾಟದ ಫಲವಾಗಿ ಭಾರತವು ಸ್ವತಂತ್ರ್ಯ ...ಸಿತು! ಚರಿತ್ರಾರ್ಹವಾದ ಮಾನವ ಸ್ವಾತಂತ್ರ್ಯದ ...ಯಾತ್ರೆಯಲ್ಲಿ ಭಾರತವೂ ಭಾಗವಹಿಸಿದಂತಾ...ತು"—ಎಂಬುದಾಗಿ ಡಾ|| ರಾಜೇಂದ್ರಪ್ರಸಾದರು ...ದೇಶವಿತ್ತಿದ್ದಾರೆ

ಸರ್ದಾರರ ಸಂದೇಶ

ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರರ ಹೆಸರು ...ವಾಗುಳಿಯಲಿ ಬಡವ ಬಲ್ಲಿದನೆಂಬ ಭೇದವಿಲ್ಲದೆ ...ಭಾರತೀಯರಿಗೂ ಸುಖ ಸಂತೋಷಗಳು ಲಭಿಸಲಿ ...ವು ಅತ್ಯಂತ ಜಾಗರೂಕತೆಯಿಂದ ನಮ್ಮ ಪ್ರಾಣ ...ಶವಾದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು" ...ಬುದಾಗಿ ಸರ್ದಾರ್ ವಲ್ಲಭಭಾಯಿ ಪಟೇಲರು ಸಂದೇಶ ...ದ್ದಾರೆ.

...ಲ್ ಕಿಲ್ಲೆಯಮೇಲೆ ರಾಷ್ಟ್ರಧ್ವಜ

೧೬ನೆಯ ತಾರೀಖಿನ ಪ್ರಾತಃಕಾಲ ದಿಲ್ಲಿಯ ಐತಿ...ಸಿಕ ಸ್ಥಾನವಾದ ಲಾಲ್ ಕಿಲ್ಲೆಯ ಮೇಲೆ ಭಾರತದ ...ಹಾ ಪ್ರಧಾನರಾದ ಪಂಡಿತ ಜವಹರಲಾಲ್ ನೆಹರೂ ...ವರು ಧ್ವಜಾರೋಹಣ ಮಾಡಿದರು.

ಇದಕ್ಕಾಗಿ ನೆರೆದಿದ್ದ ಮೂರು ಲಕ್ಷ ಜನಸ್ತೋಮವು ...ಯಜಯಕಾರ ಮಾಡಿತು ಧ್ವಜಾರೋಹಣ ಮಾಡಿದ ...ಡಲೇ ಗಗನದಲ್ಲಿ ಹಾರಾಡುತ್ತಿದ್ದ ಭಾರತ ಸೇನಾ ...ಳದ ವಿಮಾನದಳಗಳು ಸಣ್ಣ ರಾಷ್ಟ್ರಧ್ವಜಗಳನ್ನು ...ನಸ್ತೋಮದ ಮೇಲೆ ಪುಷ್ಪದಂತೆ ಚೆಲ್ಲಿದುವು.

ಈ ಸಮಾರಂಭಕ್ಕೆ ಲೇಡಿ ಮೌಂಟ್ ಬ್ಯಾಟನ್ ...ರ್ದಾರ್ ಪಟೇಲ್, ರಾಜಕುಮಾರಿ ಅಮೃತಕೌರ್, ...ರದಾರ್ ಬಲದೇವಸಿಂಗ್, ರಾಜೇಂದ್ರಪ್ರಸಾದ್ ...ವರುಗಳು ಬಂದಿದ್ದರು.

ಹೊಸ ದೆಹಲಿ ಪ್ರದೇಶದ ಸೇನಾನಾಯಕರಾದ ...ೇಜರ್ ಜನರಲ್ ರಾಜೇಂದ್ರಸಿಂಗ್, ದೆಹಲಿ ಚೀಫ್ ...ಮಿಷನರಾದ ಖುಶ್ದಿದ್ ಅಹಮದ್ ಅವರು ಪಂಡಿತ ...ನ್ನು ಸ್ವಾಗತಿಸಿದರು ಭಾರತದ ಸೇನಾಪಡೆಗಳು ...ಂದನೆ ಸಲ್ಲಿಸುತ್ತಿದ್ದಂತೆ ನೆಹ್ರೂ ಅವರು ಧ್ವಜಸ್ತಂಭದ ...ತ್ತಿರ ಹೋಗಿ ಧ್ವಜಾರೋಹಣ ನಡೆಸಿದರು. ಅನಂತರ ...ವರು ನೆರೆದಿದ್ದ ಪ್ರಜಾಸ್ತೋಮವನ್ನು ಕುರಿತು ಭಾಷಣ ...ಮಾಡುತ್ತ ಭಾರತದ ಗೌರವಸ್ಥಾನ ಮತ್ತು ಸ್ವಾತಂತ್ರ್ಯ...ಳಿಗೆ ರಾಷ್ಟ್ರಧ್ವಜವೇ ಸಂಕೇತ ಎಂದು ಹೇಳಿದರು

ಸುಭಾಸ್‌ಚಂದ್ರಬೋಸರ ಬಗ್ಗೆ ಪಂ|| ನೆಹರೂ ...ವರು ಪ್ರಶಂಸಾ ವಾಕ್ಯಗಳನ್ನಾಡಿದಾಗ "ನೇತಾಜೀಕಿ ...ೈ" ಎಂಬ ಜಯಜಯಕಾರವು ಗಗನವನ್ನು ಭೇದಿಸಿತು.

ನಮ್ಮ ಧ್ಯೇಯ ಸಾಧನೆಯಲ್ಲಿ ಈಗ ನಾವು ಮೊದಲ ...ಜಲನ್ನು ಮುಟ್ಟಿದ್ದೇವೆ; ಮುಂದೆ ನಾವು ಮಾಡ...ೇಕಾದ ಕೆಲಸ ಅಪರಿಮಿತವಾಗಿದೆ. ಅದರಲ್ಲಿ ಮೊದಲ ...ಯದು ದೇಶದಲ್ಲಿ ಶಾಂತಿ ರಕ್ಷಣೆ, ತರುವಾಯ ಭಾರತ ...ನಾಂಗ ಬಲಯುತವೂ ಪ್ರಭಾವಶಾಲಿಯೂ ಆಗುವಂತೆ ...ಯತ್ನಿಸಬೇಕು. ಅದಕ್ಕೆ ಜನರ ಸಹಕಾರ ಅಗತ್ಯ. ...ೋಲೀಸರು, ಅಧಿಕಾರಿಗಳು, ಮಂತ್ರಿಗಳು, ನೌಕರರು ...ಜಾಸೇವಕರು. ಸಾರ್ವಜನಿಕ ಸೇವೆ ಮಾಡಲು ನನಗೆ ದೊರೆತ ಈ ಅವಕಾಶಕ್ಕಾಗಿ ಕೃತಜ್ಞನಾಗಿದ್ದೇನೆ. ಎಂದು ಹೇಳಿದರು.

ಭಾಷಣವನ್ನು ಮುಕ್ತಾಯಗೊಳಿಸುತ್ತಾ ನೆಹರೂ ಅವರು ಈ ಶಾಂತಿ ಸಂದೇಶವನ್ನು ನೀವು ಪ್ರತಿ ಗ್ರಾಮ ದಲ್ಲಿಯೂ ಹರಡಿ ಎಲ್ಲ ಕಡೆಯೂ ಶಾಂತಿ ಸಮಾಧಾನ ಗಳು ನೆಲಸುವಂತೆ ಪ್ರಯತ್ನಿಸಿರಿ, ಎಂದು ಹೇಳಿದರು

ಹೈದರಾಬಾದು ಸಂಸ್ಥಾನವು ಭಾರತ ಡೊಮಿನಿಯನ್ನಿಗೆ ಸೇರಲಿಲ್ಲ

ಹೈದರಾಬಾದು ಸಂಸ್ಥಾನವು ಕೊನೆಗೂ ಭಾರತ ಡೊಮಿನಿಯನ್ನಿಗೆ ಸೇರಲಿಲ್ಲ. ಏಕೆ ಸೇರಲಿಲ್ಲವೆಂಬು ದಕ್ಕೆ ಹೈದರಾಬಾದಿನ ನಿಜಾಮರವರು ಒಂದು ಹೇಳಿಕೆ ಯನ್ನು ಕೊಡುತ್ತ "ಹೈದರಾಬಾದ ಸಂಸ್ಥಾನವು ಭಾರತ ಡೊಮಿನಿಯನ್ನಿನೊಂದಿಗೆ ಒಪ್ಪಂದಕ್ಕೆ ಬರಲು ಕೆಲವು ಷರತ್ತುಗಳನ್ನು ಹಾಕಿತು (೧) ಬ್ರಿಟನ್ನಿನಲ್ಲಿ ತನ್ನ ಪ್ರತ್ಯೇಕ ಪ್ರತಿನಿಧಿಯನ್ನು ನೇಮಿಸಲು ಹೈದರಾಬಾದಿಗೆ ಅಧಿಕಾರವಿರಬೇಕು. (೨) ಇಂಡಿಯಾಕ್ಕೂ ಪಾಕಿಸ್ತಾನಕ್ಕೂ ಮುಂದೆ ಮನಸ್ತಾಪವುಂಟಾದರೆ ಆಗ್ಗೆ ಹೈದರಾಬಾದು ತಟಸ್ಥವಾಗಿರುವುದು (೩) ಭಾರತವು ಪೂರ್ಣ ಸ್ವತಂತ್ರವಾದಾಗಲೂ ಸಹ ಬ್ರಿಟಿಷ್ ಕಾಮನ್ವೆಲ್ತಿನೊ ಳಗೆ ಇರಲು ಹೈದರಾಬಾದಿಗೆ ಹಕ್ಕು ಇರಬೇಕು ಇತ್ಯಾದಿ ವಿಷಯಗಳಿಗೆ ಒಪ್ಪಬೇಕೆಂದು ಇಂಡಿಯಾ ಸರ್ಕಾರವನ್ನು ಕೇಳಿತು ಆದರೆ ಇಂಡಿಯಾ ಸರಕಾರವು ಮೊದಲು ಭಾರತ ಡೊಮಿನಿಯನ್ನಿಗೆ ಸೇರಿದ ಹೊರತು ಸಂಧಾನದ ಪ್ರಶ್ನೆಯೇ ಇಲ್ಲವೆಂದು ತಿಳಿಸಿತು." ಎಂದು ತಿಳಿಸಿದ್ದಾರೆ

ಮದರಾಸಿನ ಪೋಲೀಸರು ಗುಂಡು ಹಾರಿಸಿದರು!

ಮೂವರ ಮರಣ ಮತ್ತು ಹಲವರಿಗೆ ಗಾಯಗಳು

ದೇಶದಲ್ಲಿ ಎಲ್ಲೆಲ್ಲಿಯೂ ಶಾಂತವಾಗಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಕೀರ್ತಿಗೆ ಕಳಂಕತರುವ ಪ್ರಸಂಗವೊಂದು ೧೫ನೆಯ ತಾ|| ನಡೆದುಹೋಯಿತು ತಿರುನಲ್ವೇಲಿ ಸಮೀಪದಲ್ಲಿರುವ ಮೇಲಪಾಳ್ಯ ಎಂಬಲ್ಲಿ ರಾಷ್ಟ್ರೀಯ ಮುಸಲ್ಮಾನನೊಬ್ಬನು ಸ್ಥಳದ ರಾಷ್ಟ್ರಧ್ವಜಾ ರೋಹಣ ಸಮಾರಂಭದಲ್ಲಿ ಭಾಗವಹಿಸಿದ್ದನು. ಮುಸ್ಲಿಂ ಲೀಗಿನವರ ಗುಂಪೊಂದು ಅವನನ್ನು ಅಟ್ಟಿಸಿಕೊಂಡು ಬಂದಿತು. ಆತನನ್ನು ರಕ್ಷಿಸಲು ಬಂದ ಪೋಲೀಸರ ಮೇಲೆ ಶಿಲಾವರ್ಷವಾಯಿತು ಸಬ್ ಇನ್ಸ್‌ಪೆಕ್ಟರಿಗೆ ಜೋರಾದ ಏಟು ಬಿದ್ದು ಕೆಳಗುರುಳಿದನು ಅನಂತರ ಪೋಲೀಸರು ಗುಂಡುಹಾರಿಸಿದರು. ಈಗ ಪರಿಸ್ಥಿತಿ ಶಾಂತವಾಗಿದೆ.

ಬೆಂಗಳೂರು ನಗರದಲ್ಲಿ ಸ್ವಾತಂತ್ರ್ಯ ಮಹೋತ್ಸವ

೧೫ನೇ ತಾ|| ಸರ್ ಆರ್ಕಾಟರ ಅಧ್ಯಕ್ಷತೆಯಲ್ಲಿ ಪೌರ ಸಭೆಯವರು ನಡೆಸಿದ 'ಸ್ವಾತಂತ್ರ್ಯ ದಿನೋತ್ಸವ'ವು ನಡೆಯಿತು ಅಧ್ಯಕ್ಷರಾದ ಶ್ರೀ ಖಲೀಲರು ಮೊದಲು ಮೈಸೂರು ಧ್ವಜವನ್ನು ಹಾರಿಸಿದರು

ಬೆಂಗಳೂರು ನಗರ ಮತ್ತು ದಂಡುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಅತ್ಯಂತ ವೈಭವಪೂರ್ವಕವಾಗಿ ನಡೆಯಿತು ಜನರ ಉತ್ಸಾಹಕ್ಕೆ ತುದಿ ಮೊದಲಿರಲಿಲ್ಲ ಸುಭಾಷ್ ನಗರದಲ್ಲಿ ಶ್ರೀ ಕೆ ಟಿ. ಭಾಷ್ಯಂರವರು ಧ್ವಜಾರೋಹಣ ನಡೆಸಿದ ಕೂಡಲೇ ವಿಮಾನದಿಂದ ಪುಷ್ಪವೃಷ್ಟಿ ಯಾಯಿತು ಮಲ್ಲಿಗೆಯ ಮೊಗ್ಗುಗಳಲ್ಲಿ ಮಹಾ ದಿವ್ಯ ವಾಗಿ ಅಲಂಕೃತವಾಗಿದ್ದ ತೇರಿನಲ್ಲಿ ಭಾರತಮಾತೆಯನ್ನು ಬಿಜಯಮಾಡಿಸಲಾಯಿತು. ೬ ಬೆಳಗ್ಗೆ ೧೧ ಘಂಟೆಗೆ ಹೊರಟ ಉತ್ಸವವು ಕಾಂಗ್ರೆಸ್ ಕಚೇರಿಯನ್ನು ತಲಪಲು ಸಂಜೆ ೭ ಘಂಟೆಯಾಯಿತು. ಚಿಕ್ಕಲಾಲ್‌ಬಾಗಿನಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯಲ್ಲಿ ರಾವ್‌ಬಹದ್ದೂರ್ ಬಿ ಕೆ ಗರುಡಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ ಟಿ. ಭಾಷ್ಯಂ ಅವರು ಭಾಷಣ ಮಾಡಿದರು. ಪೋಲೀಸರ ಬಂದೋಬಸ್ತು ಬಹಳ ಚೆನ್ನಾಗಿತ್ತು.

ಮೈಸೂರಿಗೆ ಮೊದಲನೆಯ ದರ್ಜೆಯ ವಿಮಾನ ನಿಲ್ದಾಣ

ಇನ್ನು ಒಂದೆರಡು ವರ್ಷಗಳೊಳಗೆ ಮೈಸೂರು ನಗರದ ಬಳಿ ಮೊದಲನೆಯ ದರ್ಜೆಯ ವಿಮಾನ ನಿಲ್ದಾಣವೊಂದು ನಿರ್ಮಿತವಾಗಲಿದೆ. ಚಾಮುಂಡಿ ಬೆಟ್ಟದ ಬಳಿ ಹ್ಯಾಂಗರು ಮುಂತಾದವುಗಳ ರಚನೆ ಈಗಾಗಲೇ ಆರಂಭವಾಗಿದೆ.

ದಿವಾನರ ಪ್ರಯಾಣ

ದಿವಾನರು ೧೬ ನೆಯ ತಾ|| ದಿವಸ ದೆಹಲಿಗೆ ಪ್ರಯಾಣ ಬೆಳಸಿದರು ಸೆಪ್ಟೆಂಬರು ೩ ಅಥವಾ ೪ ನೇ ತಾ|| ಹಿಂದಿರುಗಬಹುದೆಂದು ಹೇಳಲಾಗುತ್ತಿದೆ

ಶ್ರೀರಂಭಾಪುರೀಜಗದ್ಗುರುಗಳವರ ಪುಣ್ಯದಿನ

ಯಾವ ಮಹಾತ್ಮನು ವೀರಸಿಂಹಾಸನವನೇರಿ ವೀರವಾಣಿಯಿಂದ ವೀರಶೈವಸಮಾಜದಲ್ಲಿ ನವಸ್ಫೂರ್ತಿಯನ್ನಿತ್ತು ದೇಶಮಧ್ಯದಲ್ಲಿ ರಾಜವೈಭವದೊಡನೆ ಮೆರೆದು ರಾಜಾಧಿರಾಜಪೂಜ್ಯನಾದನೋ ಅಂತಹ ಶಿವಯೋಗಿ ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶಿವನಲ್ಲಿ ಬೆರೆದು ನಿಜಶ್ರಾವಣ ಶು|| ೪ ಬುಧವಾರಕ್ಕೆ ಒಂದು ವರ್ಷವಾಯಿತು. ನಮ್ಮ ದುರ್ದೈವದಿಂದ ಅಕಾಲದಲ್ಲಿಯೇ ಅಗಲಿದ ಮಹಾಗುರುವರ್ಯರ ಕಾರ್ಯಪ್ರಭಾವವು ಸ್ಮೃತಿಪಥಕ್ಕೆ ಬಂದರೆ ದುಃಖವು ಹೊರಹೊಮ್ಮುತ್ತದೆ ದಿವ್ಯತೇಜೋಮೂರ್ತಿಯ ಧರ್ಮೋದ್ಧಾರಪ್ರಭಾವವು ದಶದಿಕ್ಕುಗಳಲ್ಲಿಯೇ ಪ್ರಕಾಶಿಸಿತು ರಾಜಪೂಜಿತ ಪುಣ್ಯಮೂರ್ತಿಯ ಇಷ್ಟಲಿಂಗಪೂಜಾವೈಭವ, ದಯಾಪೂರ್ಣಭಾವ, ಉಗ್ರ ತಪ್ಪನಗಳನ್ನು ಕಟ್ಟಿವೆ ಬ್ರಹ್ಮತೇಜಸ್ಸಿಯ ವೈಭವಪೂರ್ಣವಾದ ದಿಗ್ವಿಜಯದಿಂದ ಸನಾತನಧರ್ಮಕ್ಕೂ ಪಂಚಪೀಠಗಳಿಗೂ ಜೀವಕಳೆ ತುಂಬಿತ್ತು. ಈ ಮಹಾಚಾರ್ಯರು ಅನೇಕ ವಿಘ್ನಪರಂಪರೆಗಳನ್ನು ಶಾಂತಿ, ಅಹಿಂಸಾಮಾರ್ಗದಿಂದಲೇ ದೂರೀಕರಿಸಿ ವಿಜಯವನ್ನು ಪಡೆದರು. ಅವರ ಬ್ರಹ್ಮತೇಜೋವದನದಿಂದ ಪ್ರವಹಿಸುತ್ತಿದ್ದ ಮೃದುಮಧುರ ವಾಗ್ಸರಿಯು ವಿರೋಧಿಗಳನ್ನೂ ತಲೆಬಾಗಿಸಿತು ಧರ್ಮದ ಸತ್ಯತೆಯ ನಿನಾದವು ದಿಕ್ ದಿಕ್ಕೆಗಳಲ್ಲಿಯೂ ಪಸರಿಸಿತು ವಿದ್ವಾಂಸರ ಹೃದಯದಲ್ಲಿ ಪ್ರೇಮರಸವ ಸುರಿಸಿ, ಸದ್ಭಕ್ತಮಂಡಲಿಗೆ ಕಲ್ಯಾಣವಾಗಲೆಂದು ಹರಸಿ ಪಂಚಪೀಠಗಳನ್ನು ಪ್ರಕಾಶಿಸಿ, ರಾಜಮನ್ನಣೆ ಪಡೆದ ಅಭಿನವರೇಣುಕಜಗದ್ಗುರು ಶಿವಾನಂದರಾಜೇಂದ್ರರ ಪುಣ್ಯದಿನವನ್ನು ಶ್ರಾವಣ ಶು|| ೪ ಬುಧವಾರ ತಾ|| ೨೦-೮-೧೯೪೭ ನೆಯ ದಿನ ಸಮಸ್ತ ಗುರುಭಕ್ತರು ವಿಶೇಷ ಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದು ಆಶಿಸುತ್ತೇನೆ

ವಿರೂಪಾಕ್ಷಶರ್ಮಾ, ಆರಾಧ್ಯಮಠ,
ಕಾವ್ಯತೀರ್ಥ

ಸ್ವೀಕಾರ

ರಾಯರಪಾಳ್ಯ ಮಠದ ಶ್ರೀ ಚಿಕ್ಕನಂಜಾರಾಧ್ಯರ ಪುತ್ರ ಚಿ|| ನಂಜುಂಡಾರಾಧ್ಯ ಮತ್ತು ಬೆಂಗಳೂರು ಟಿ. ಎಸ್. ಅಡವಿಯಪ್ಪನವರ ಪುತ್ರಿ ಚಿ|| ಸೌ|| ಸರ್ವಮಂಗಳಾಂಬೆ ಇವರ ವಿವಾಹಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಬೆಂಗಳೂರು ಸಿಟಿಯಲ್ಲಿರುವ ವೈಣಿಕವಿದ್ವಾನ್ ಸಿ. ಸಿದ್ಧನಂಜಾರಾಧ್ಯರದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದವರೆಲ್ಲ ಪಂಡಿತರ ವ್ಯಾಖ್ಯಾನದ [illegible] ಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ [illegible] ವಿಷಯಾನುಕ್ರಮಣಿಕೆಯನ್ನೂ ಶ್ಲೋಕಾನುಕ್ರಮಣಿಕೆಯನ್ನೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥವು ಒಟ್ಟು [illegible] ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. [illegible] ಶ್ರೀಜಗದ್ಗುರುರೇಣುಕಾಚಾರ್ಯರ [illegible] ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು [illegible]. [illegible] ಈ ಅಪೂರ್ವ ಗ್ರಂಥವನ್ನು [illegible] ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಪಂಚಾಚಾರ್ಯರ ಫೋಟೋ [illegible] ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ ...	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುತ್ತಿರುವ ಫೋಟೋ ...	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ...	೦—೧—೦
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ...	೦—೧—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಶಿರೋವೇಷ್ಟನಧಾರಣಮಾಡುವ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ...	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ..	೦—೧—೦
ಶ್ರೀ [illegible] ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು [illegible] ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ಒಕ್ಕೆ ...	೦—೧—೦
ಶ್ರೀ ಜಗದ್ಗುರು ಕೇದಾರಪೀಠದ ಅತ್ಯಂತ ಸುಂದರವಾದ ಗೋಪುರದ ಫೋಟೋ ..	೦—೧—೦
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ[illegible]ವರು ವಿರಾಜಿಸುತ್ತಿರುವ ಫೋಟೋ ...	೦—೧—೦
[illegible] ಆನೆಯ ಮೇಲೆ ಮಹೋತ್ಸವದ ಫೋಟೋ	೦—೧—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೬ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೬ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೬ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೬ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸರ್ವೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवधर्म (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಒಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಆಗಸ್ಟ್ ೧೯೪೭ [ಸಂಚಿಕೆ ೧೮

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಧರ್ಮಪ್ರಸಾರ

ಸಂಸಾರಸಾಗರದಲ್ಲಿ ಅನಂತ ಕಷ್ಟಗಳನ್ನು ಅನುಭವಿಸಿ ಸ್ವೋದ್ಧಾರ ಮಾಡಿಕೊಳ್ಳಬೇಕಾದರೆ ಮಾನವರು ಧರ್ಮಬೋಧಕರಾದ ಗುರುಸ್ಥಲಮಠಾಧಿಕಾರಿಗಳನ್ನು ಆಶ್ರಯಿಸಬೇಕು ಪಟ್ಟಚರಾಧಿಕಾರಿಗಳು ಮತ್ತು ಮಾಹೇಶ್ವರರು ವೀರಶೈವಮತಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು ಈ ಕಾಲದಲ್ಲಿ ಸುಮ್ಮನೆ ಮಠದಲ್ಲಿ ಕುಳಿತುಕೊಂಡರೆ ಮತಸುಧಾರಣೆಯಾಗುವದಿಲ್ಲ. ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಭಾರತಪುತ್ರರು ಹಗಲಿರುಳು ಹೊಡೆದಾಡಿ ಸ್ವಾತಂತ್ರ್ಯವನ್ನು ಹೇಗೆ ಸಂಪಾದಿಸಿದರೋ ಹಾಗೆಯೇ ಗುರುವಂಶೀಯರು ಕಷ್ಟಪಟ್ಟು ಧರ್ಮವನ್ನು ಸುಧಾರಿಸಬೇಕಾಗಿದೆ. ಯದಾಯದಾಹಿ ಧರ್ಮಸ್ಯ ಹಾನಿಃ ಶೈವಸ್ಯ ಜಾಯತೇ ॥ ಎಂಬ ಪ್ರಮಾಣದಂತೆ ಶ್ರೀಜಗದ್ಗುರು ಉಜ್ಜಯಿನೀ ಸಿದ್ಧಲಿಂಗಶಿವಾಚಾರ್ಯರು ಅವತಾರಮಾಡಿ ತಾವು ಸಿಂಹಾಸನಾರೂಢರಾಗಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರನ್ನು ಸಾರಥಿಯನ್ನಾಗಿ ಮಾಡಿಕೊಂಡು ಕರ್ನಾಟಕ ಮಹಾರಾಷ್ಟ್ರ ಆಂಧ್ರ ದೇಶಗಳಲ್ಲಿ ಸಂಚರಿಸಿ ಧರ್ಮಜಾಗೃತಿಯನ್ನು ಮಾಡಿದರು. ಆ ಮಹಾತ್ಮರ ಅನುಗ್ರಹದಿಂದ ಅಜ್ಞಾನಾಂಧಕಾರವು ದೂರವಾಗಿ ಮಠಾಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ನಿರತರಾಗಿದ್ದಾರೆ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯರು ಹಿರೇಮಠ ಹುಗ್ಗಾವಿ ಇವರು ಅನಂತ ಪುಣ್ಯಕ್ಷೇತ್ರಗಳನ್ನು ದರ್ಶನ ಮಾಡಿ ಹೋದಹೋದಲ್ಲಿ ಅವುಗಳ ಮಹತ್ವವನ್ನೂ ಮತ್ತು ಅಷ್ಟಾವರಣ ಪಂಚಾಚಾರಷಟ್‌ಸ್ಥಲತತ್ವೋಪದೇಶವನ್ನೂ ಮಾಡುತ್ತ ಭಕ್ತರ ಹೃದಯದಲ್ಲಿ ಭಕ್ತಿಬೀಜಾಂಕುರವು ಸಾಟುವಂತೆ ಮಾಡುತ್ತಲಿದ್ದಾರೆ. ಸದರಿ ಶ್ರೀಗಳು ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲೂಕು ಕೋರಿಗೇರಿ, ಹನುಮಗೊಂಡನಹಳ್ಳಿ, ಗದ್ದಿಕೇರಿ, ಹಂಪಸಾಗರ, ಬಸರಕೋಡು ಮೊದಲಾದ ಗ್ರಾಮಗಳಿಗೆ ಹೋಗಿ ಧರ್ಮಬೋಧೆಮಾಡಿದರು । ಈಗ ಹಂಪಾಪಟ್ಟಣದ ಪಟೇಲ್ ಗುದ್ದಿನಗೌಡರ ಪ್ರಾರ್ಥನೆಯಮೇರೆಗೆ ದಯಮಾಡಿಸಿ ಅವರ ಮನೆಯಲ್ಲಿ ತಾ|| ೨೮-೭-೪೭ ನೆಯ ಸೋಮವಾರ ಪೂಜಾನುಷ್ಠಾನವನ್ನು ನೆರವೇರಿಸಿದರು. ಅದೇ ದಿನ ಸಾಯಂಕಾಲ ಧರ್ಮದ ಬಗ್ಗೆ ಭಾಷಣ ಮಾಡಿದರು. ಬಳಿಕ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಭಕ್ತ.

ಸ್ವಾತಂತ್ರ್ಯದಿನೋತ್ಸವ

ಚಿಕ್ಕಮಗಳೂರು ತಾಲೂಕು ವಸ್ತಾರೆ ಗ್ರಾಮದಲ್ಲಿ ಸ್ವಾತಂತ್ರ್ಯದಿನೋತ್ಸವವು ವೈಭವದೊಡನೆ ನೆರವೇರಿತು. ನಮ್ಮನ್ನಾಳುವ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಫೋಟೋ ಮತ್ತು ಮಹಾತ್ಮ ಗಾಂಧಿಯವರ ಫೋಟೋಗಳೊಡನೆ ಸುಮಾರು ಐದುನೂರು ಜನಗಳೊಂದಿಗೆ ಮಧ್ಯಾಹ್ನ ಮೂರು ಘಂಟೆಗೆ ವಾದ್ಯವೈಭವದೊಂದಿಗೆ ಈ ಗ್ರಾಮದ ಮುಖ್ಯ ರಸ್ತೆಗಳಲ್ಲಿ ನಡೆದು ಆದಿಶಕ್ತಿ ಪದ್ಮಾವತಿ ಅಮ್ಮನವರ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನಮಾಡಿ, ಅಲ್ಲಿಂದ ಶ್ರೀಮಹಾಲಿಂಗೇಶ್ವರ ಸ್ವಾಮಿ ದರ್ಶನಮಾಡಿ ಸ್ಕೂಲಿಗೆ ಹಿಂದಿರುಗಿತು ಸ್ಕೂಲಿನ ಉಪಾಧ್ಯಾಯರು ಬಾಲಕಬಾಲಿಕೆಯರು ರಾಷ್ಟ್ರಗೀತೆಗಳನ್ನು ಹಾಡಿದರು ಸ್ವಾತಂತ್ರ್ಯಕ್ಕಾಗಿ ತನುಮನಧನಗಳನ್ನೊಪ್ಪಿಸಿ ಹೋರಾಡಿರುವ ವೀರಪುರುಷರಿಗೂ ವೀರಮಾತೆಯರಿಗೂ ವಂದನೆಗಳನ್ನರ್ಪಿಸಲಾಯಿತು ಈ ಕಾರ್ಯಕ್ಕೆ ಮುಂದಾಳುಗಳಾಗಿ ವಸ್ತಾರೆ ಪಟೇಲ್ ಚೌಡೇಗೌಡರು ಜಿ ಬಾಳಾಜಿರಾಯರು ನಿಂತಿದ್ದರು. ಈ ಸಂತೋಷ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಡಿ|| ದೇವಪ್ಪಗೌಡರು ಒಂದು ರೂಪಾಯಿ ಸಮರ್ಪಿಸಿದರು. ನೆರೆದಿದ್ದ ಪ್ರಜಾಜನರಿಗೆಲ್ಲ ಸಿಹಿ ತಿಂಡಿಯನ್ನು ಹಂಚಲಾಯಿತು

ಪ್ರತ್ಯಕ್ಷದರ್ಶಿ.

ದುಃಖವಾರ್ತೆ

ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿರುವ ತಮ್ಮ ಶ್ರೀರೇಣುಕಭವನದಲ್ಲಿ ಗ್ರಂ|| ಗುರುಸಿದ್ಧಪ್ಪನವರು ತಾ|| ೭-೮-೧೯೪೭ ನೆಯ ಗುರುವಾರ ದಿವಸ ೮೫ ನೇ ವಯಸ್ಸಿನಲ್ಲಿ ಶಿವೈಕ್ಯರಾದರು ಇವರ ಕೈಲಾಸಗಣಾರಾಧನೆಯು ತಾ|| ೧೭-೮-೧೯೪೭ನೇ ಭಾನುವಾರ ಆಸ್ಥಾನವಿದ್ವಾನ್ ಶ್ರೀಶಿವಕುಮಾರಸ್ವಾಮಿಗಳವರ ನೇತೃತ್ವದಲ್ಲಿ ನೆರವೇರಿಸಲ್ಪಟ್ಟಿತು ಶ್ರೀ ಗುರುಸಿದ್ಧಪ್ಪನವರು ಶ್ರೀಜಗದಾಚಾರ್ಯರ ಪೀಠಾಭಿಮಾನಿಗಳಾಗಿ ವೀರಶೈವ ಸಮಾಜಕ್ಕೆ ನಾನಾರೀತಿಯಿಂದ ಸೇವೆ ಸಲ್ಲಿಸಿ ಪ್ರಮುಖ ವ್ಯಕ್ತಿಯಾಗಿದ್ದರು. ಇವರು ಶ್ರೀರೇಣುಕಗಿರಿಯ ಬಳಿಯಲ್ಲಿ ಒಂದು ಭಾವಿಯನ್ನೂ ಒಂದು ಮಠವನ್ನೂ ಸಾರ್ವಜನಿಕರ ಉಪಯೋಗಕ್ಕಾಗಿ ಕಟ್ಟಿಸಬೇಕೆಂಬ ಸತ್ಸಂಕಲ್ಪವುಳ್ಳವರಾಗಿ ಕೆಲಸವನ್ನು ಪ್ರಾರಂಭಿಸಿದ್ದರು. ಇವರ ನಿಧನದಿಂದ ಸಮಾಜಕ್ಕೆ ದೊಡ್ಡ ಹಾನಿಯುಂಟಾಗಿದೆ ಇವರಿಗೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೂ ಇದ್ದಾರೆ. ಇವರ ಸತ್ಸಂಕಲ್ಪವನ್ನು ಇವರ ಕುಟುಂಬವರ್ಗದವರು ನೆರವೇರಿಸುವರೆಂದು ಸರ್ವರೂ ನಂಬಿರುವರು ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲಿ.

ದುಃಖಭಾಗಿ

ಮದ್ರಾಸಿನಲ್ಲಿ ವಿಶೇಷವಾದ ಆಹಾರಾಭಾವ

ಇನ್ನು ಒಂದೆರಡು ವಾರಗಳೊಳಗಾಗಿ ಧಾನ್ಯವು ಬರದಿದ್ದರೆ ಮದರಾಸಿನಲ್ಲಿ ಕ್ಷಾಮಭೀತಿಯುಂಟಾಗುವುದೆಂದು ಡಾ|| ಟಿ. ಎಸ್. ಎಸ್. ರಾಜನ್‌ರವರು ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಡಾ|| ರಾಜೇಂದ್ರ ಪ್ರಸಾದರಿಗೆ ಮನವಿಮಾಡಿಕೊಂಡಿದ್ದಾರೆ.

ಬೆಂಗಳೂರು ದಂಡಿಗೆ ಮಹಾ ಪ್ರಭುಗಳ ಆಗಮನ

ಸೆಪ್ಟೆಂಬರ್ ೧೦ ನೆಯ ತಾರೀಖಿನ ದಿವಸ ರಾಜವೈಭವದೊಡನೆ ಮೆರವಣಿಗೆ

ಶ್ರೀಮನ್ಮಹಾರಾಜಾಧಿರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಸೆಪ್ಟೆಂಬರ್ ೧೦ನೇ ತಾರೀಖು ಬೆಂಗಳೂರು ದಂಡಿಗೆ ದಯಮಾಡಿಸುವರೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಮಹಾಪ್ರಭುಗಳು ದಂಡಿಗೆ ಸಕಲ ರಾಜವೈಭವದೊಡನೆ ಬಿಜಯ ಮಾಡಿಸುವುದು ಇದೇ ಪ್ರಥಮವಾಗಿದೆ. ಸುಮಾರು ೧೪ ಚದರ ಮೈಲಿ ವಿಸ್ತೀರ್ಣ ಮತ್ತು ಎರಡುವರೆ ಲಕ್ಷ ಪ್ರಜಾ ಸಂಖ್ಯೆಯಿರುವ ದಂಡಿನ ಪ್ರದೇಶವು ಇದುವರೆಗೆ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿದ್ದಿತು ಈಗ ಬ್ರಿಟಿಷ್ ಪರಮಾಧಿಕಾರ ಕೊನೆಗೊಂಡು, ಜೂನ್ ೩೦ನೇ ತಾ|| ನಿಂದ ಅದು ಸಂಪೂರ್ಣವಾಗಿ ಮಹಾ ಪ್ರಭುಗಳ ಆಳ್ವಿಕೆಗೆ ವಹಿಸಲ್ಪಟ್ಟಿತು ದಂಡಿನ ಪ್ರಜೆಗಳ ಪ್ರಾರ್ಥನೆಯನ್ನು ಮನ್ನಿಸಿ ಪ್ರಭುಗಳು ಅಲ್ಲಿಗೆ ಚಿತ್ತೈಸುವವರಾಗಿದ್ದಾರೆ

ಅಂದು ದಂಡಿನಲ್ಲಿ ಮಹಾಪ್ರಭುಗಳಿಗೆ ರಾಜಭಕ್ತಿಯುತವಾದ ಸಾರ್ವಜನಿಕ ಸ್ವಾಗತ ನೀಡಲು ಸಕಲ ಸಿದ್ಧತೆಗಳಾಗುತ್ತಿವೆ. ದಂಡಿನ ಕಲೆಕ್ಟರ್ ಶ್ರೀ ಪುಟ್ಟರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ದಂಡಿನ ಪ್ರಮುಖರ ಸಭೆ ಸೇರಿ ಶ್ರೀಮನ್ಮಹಾರಾಜರವರಿಗೆ ವಿಶೇಷ ವೈಭವಯುತವಾದ ಸ್ವಾಗತನೀಡಲು ಸಾರ್ವತ್ರಿಕವಾದ ಏರ್ಪಾಡುಗಳನ್ನು ಕೈಗೊಳ್ಳಲು ಹಲವು ಉಪಸಮಿತಿಗಳನ್ನು ನೇಮಿಸಲಾಯಿತು.

ದಂಡಿನ ಪ್ರಮುಖ ರಾಜ ಮಾರ್ಗಗಳಲ್ಲಿ ನಯನ ಮನೋಹರವಾದ ಸ್ವಾಗತ ಮಂಟಪಗಳನ್ನು ಏರ್ಪಡಿಸಲು ಭರದಿಂದ ಸಿದ್ಧತೆಗಳಾಗುತ್ತಿವೆ.

ಮದರಾಸು ಪ್ರಾಂತ್ಯವನ್ನು ಕೂಡಲೆ ವಿಭಾಗಿಸಬೇಕು

ಶ್ರೀ ಟಿ. ಪ್ರಕಾಶಂರವರ ಸೂಚನೆ

ಮದರಾಸು ಪ್ರಾಂತ್ಯವನ್ನು ವಿಭಾಗಿಸಿ ಒಂದು ಪ್ರತ್ಯೇಕ ಪ್ರಾಂತ್ಯವು ರೂಪುಗೊಳ್ಳಲು ಅವಕಾಶಮಾಡಿಕೊಡಬೇಕೆಂಬುದಾಗಿ ಮದರಾಸಿನ ಮಾಜಿ ಮಹಾಪ್ರಧಾನರೂ ಮತ್ತು ಭಾರತದ ರಾಜ್ಯಾಂಗ ಸಭೆಯ ಸದಸ್ಯರೂ ಆದ ಶ್ರೀ ಟಿ. ಪ್ರಕಾಶಂರವರು ತಿಳಿಸಿದ್ದಾರೆ. ಭಾಷಾನುಗುಣವಾಗಿ ಪ್ರಾಂತ್ಯಗಳ ಪುನರ್ವಿಭಾಗದ ತತ್ವವನ್ನು ಕಾಂಗ್ರೆಸ್ಸು ಹಿಂದೆಯೇ ಅಂಗೀಕರಿಸಿತ್ತೆಂದು ತಾವು ನಂಬಿರುವುದಾಗಿ ತಿಳಿಸಿದ್ದಾರೆ.

ತತ್‌ಕ್ಷಣ ಮದರಾಸು ಪ್ರಾಂತ್ಯವನ್ನು ವಿಂಗಡಿಸಬೇಕೆಂಬ ನಿರ್ಣಯವನ್ನು ತಾವು ರಾಜ್ಯಾಂಗ ಸಭೆಯ ಮುಂದೆ ತರುವುದಾಗಿ ಶ್ರೀ ಪ್ರಕಾಶಂರವರು ತಿಳಿಸಿರುವರು.

ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ

ಗುರುವಿಲ್ಲದ ವಿದ್ಯೆ ವ್ಯರ್ಥ; ಗುರುವೇ ಅರಿವು

ಶ್ರೀ ಮಲ್ಲಿಕಾರ್ಜುನಾರಾಧ್ಯ ಶಾಸ್ತ್ರೀ ಹಿರೇಮಠ ಮುಳವಾಡ ಮುದೇನೂರು

ಯಾವನು ಚರಾಚರಾತ್ಮಕನಾದೀ ಜಗತ್ತಿಗೆ ಮೂಲ ಕಾರಣೀಭೂತನಾಗಿಯೂ ಸರ್ವಪ್ರಾಣಿಗಳ ಅಜ್ಞಾನಾಂಧಕಾರನಾಶಕನಾಗಿಯೂ ಇರುವನೋ ಯಾವನು ಸರ್ವ ಭೂತಗಳಲ್ಲಿಯೂ ಅಂತರ್ಯಾಮಿಯೂ ಏಕನಾಗಿದ್ದರೂ ಪ್ರತಿರೂಪದಲ್ಲಿಯೂ ಭಿನ್ನಾತ್ಮನಾಗಿ ತೋರುವನೋ ಯಾವನ ದಿವ್ಯಪ್ರಕಾಶದ ಸಹಸ್ರಾಂಶದಲ್ಲೊಂದಂಶವನ್ನಾದರೂ ರವಿಚಂದ್ರರು ಪ್ರದರ್ಶಿಸಲಾರದ ಧೃತಿಗೆಡುತ್ತಿರುವರೋ, ಯಾವನ ದಿವ್ಯನಾಮವನ್ನು ವಿಹಂಗಮೃಗಣವೂ ನದನದೀನಿರ್ಝರಿಣಿಗಳೂ ತಮ್ಮ ತಮ್ಮ ಕಲಕಲರವದ್ವಾರಾ ಕೀರ್ತಿಸುತ್ತಿವೆಯೋ ಯಾವನ ದಿವ್ಯದರ್ಶನವನ್ನು ಹೊಂದುವುದಕ್ಕಾಗಿ ಮೇಘಗಳು ಅನಂತವಾದ ಆಕಾಶದಲ್ಲಿ ಅಲೆದಲೆದು ಕೊನೆಗದು ಲಭ್ಯವಾಗಗಿರಲು ಗದ್ಗದ ಕಂಠದಿಂದ ಧ್ವನಿಗೈಯುತೆ ಅಶ್ರುಜಲವನ್ನು ವರ್ಷಿಸುವವೋ ಯಾವನ ದಿವ್ಯ ಚರಣಾರ್ಚನೆಗೆ ಪರಿಪೂರ್ಣ ವನಗಳ ಸಮಾವೃತ ತರುಲತಾನಿಕರವು ಫಲಪುಷ್ಪಗಳನ್ನರ್ಪಿಸುತಿದೆಯೋ ಆ ಮಹಾಪುರುಷನಾದ ಪರಶಿವನೇ ಘೋರವೂ ಅಪಾರವೂ ನಿಸ್ಸಾರವೂ ಆದ ಸಂಸಾರತಾಪತ್ರಯಾಗ್ನಿಯಿಂದ ಬೆಂದು ಕಂದಿ ಕಂದಿ ಬಳಲಿ ಬಳಲುತ್ತಿರುವ ಪ್ರಾಣಿಗಳ ಉದ್ಧಾರಕ್ಕೋಸ್ಕರ ಸಾಕ್ಷಾತ್ ಗುರುರೂಪದಿಂದ ಅವತರಿಸುವನು

ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಸ್ಸ ಗುರುಃ ಸ್ಮೃತಃ ।
ಉಭಯೋರಂತರಂ ನಾಸ್ತಿ ಗುರೋರಪಿ ಶಿವಸ್ಯ ಚ ॥

ಯಾವನು ಗುರುವೋ ಅವನೇ ಶಿವನು ಯಾವನು ಶಿವನೋ ಅವನೇ ಗುರುವು ಶಿವನಿಗೂ ಗುರುವಿಗೂ ಭೇದವಿಲ್ಲೆಂದು ಶಾಸ್ತ್ರವು ಬೋಧಿಸುವದು. ಮುಕ್ತಿ ಮೂಲಂ ಗುರೋಃ ಕೃಪಾ ಎಂಬ ಗುರು ಗೀತಾವಾಕ್ಯದಂತೆ ಮುಕ್ತಿಗೆ ಗುರುವೇ ಮೂಲಕಾರಣನಾಗಿರುವನು 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ಎಂದು ಮುಂಡಕೋಪನಿಷತ್ತು ಪರಶಿವ ಬ್ರಹ್ಮವನ್ನು ತಿಳಿಯಲಿಚ್ಛಿಸುವವನು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನಾಶ್ರಯಿಸಬೇಕೆಂದು ಬೋಧಿಸುತ್ತದೆ

ಅಜ್ಞಾನಮಾತ್ಮನಾ ಸಾಕ್ಷಾದ್ಬ್ರಹ್ಮ ಬುದ್ಧ್ವಾ ಸುನಿರ್ಮಲಂ ।
ಗುರುಭಕ್ತಿಂ ಸದಾ ಕುರ್ಯಾಚ್ಛ್ರೇಯಸೇ ಭೂಯಸೇ ನರಃ ॥

ಮಾನವನು ಪರಬ್ರಹ್ಮವನ್ನು ತಿಳಿಯುವುದಕ್ಕೆ ಗುರುಭಕ್ತಿಯುಳ್ಳವನಾಗಿರಬೇಕೆಂದು ಬ್ರಹ್ಮೋಪನಿಷತ್ತು ಬೋಧಿಸುವದು

'ಆಚಾರ್ಯಕುಲಾದ್ವೇದಮಧೀತ್ಯ ಯಥಾವಿಧಾನಂ ನಚ ಪುನರಾವರ್ತತೇ ನಚ ಪುನರಾವರ್ತತೇ' ಎಂದು ಛಾಂದೋಗ್ಯಶ್ರುತಿಯು ಗುರುಕುಲದಲ್ಲಿ ಯಥಾವಿಧಿಯಾಗಿ ವೇದಾಭ್ಯಾಸಮಾಡಿ ಗುರುಮುಖದಿಂದ ವೈದಿಕ ವಿಧಾನವನ್ನು ತಿಳಿದುಕೊಂಡು ಗುರುವಿನಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಪರಬ್ರಹ್ಮಸ್ವರೂಪವನ್ನು ತಿಳಿದುಕೊಂಡವನು ಪುನಃ ಈ ಸಂಸಾರಕ್ಕೆ ಬರುವುದಿಲ್ಲೆಂದು ಬೋಧಿಸುವುದು

ಶಾಂಕರೀಯಂ ಮಹಾಶಾಸ್ತ್ರಂ ನದೇಯಂ ಯಸ್ಯ ಕಸ್ಯ ಚಿತ್
ನಾಸ್ತಿಕಾಯ ಕೃತಘ್ನಾಯ ದುರ್ವೃತ್ತಾಯ ದುರಾತ್ಮನೇ ॥
ಗುರುಭಕ್ತಿವಿಶುದ್ಧಾಂತಃಕರಣಾಯ ಮಹಾತ್ಮನೇ ।
ಸಮ್ಯಕ್ಪರೀಕ್ಷ್ಯ ದಾತವ್ಯಂ ಮಾಸಂ ಷಣ್ಮಾಸವತ್ಸರಂ ॥

ಶಿವಶಾಸ್ತ್ರವನ್ನು ನಾಸ್ತಿಕನೂ ಕೃತಘ್ನನೂ ದುರ್ವೃತ್ತಿಯುಳ್ಳವನೂ ದುರಾತ್ಮನೂ ಆದವನಿಗೆ ಬೋಧಿಸಬಾರದೆಂದೂ, ಗುರುಭಕ್ತಿಯುಳ್ಳ ಮಹಾತ್ಮನಿಗೆ ಆರುತಿಂಗಳವರೆಗೆ ಪರೀಕ್ಷೆಮಾಡಿ ಬೋಧಿಸಬೇಕೆಂದೂ ಶೈವೋಪನಿಷತ್ತು ಬೋಧಿಸುವುದು

ಶ್ರೀರೇಣುಕಭಗವತ್ಪಾದರು—

ಕಟಾಕ್ಷಚಂದ್ರಮಾ ಯಸ್ಯ ಜ್ಞಾನಸಾಗರವರ್ಧನಃ ।
ಸಂಸಾರತಿಮಿರಚ್ಛೇದೀ ಸ ಗುರುರ್ಜ್ಞಾನಸಾಗರಃ ॥
ಬಹಿಸ್ತಮಿರವಿಚ್ಛೇತ್ತಾ ಭಾಸುರೇಷಃ ಪ್ರಕೀರ್ತಿತಃ ।
ಬಹಿರಂತಸ್ತಮಶ್ಛೇದೀ ವಿಭುರ್ವರ್ಣೀಶಭಾಸ್ಕರಃ ॥
ಬುದ್ಧಿದರ್ಪಣಾಭೋಗೇ ನಿರ್ಮಲೇ ದೃಶ್ಯತೇ ಸದಾ ।
ಮೋಕ್ಷಶ್ರೀರ್ಬಿಂಬರೂಪೇಣ ಸ ಗುರುರ್ಭವತಾರಕಃ ॥
ಪರಮಾದ್ವೈತವಿಜ್ಞಾನಪರಮೌಷಧದಾನತಃ ।
ಸಂಸಾರರೋಗನಿರ್ಮೋಕ್ತಾ ದೇಶಿಕಃ ಕೇನ ಲಭ್ಯತೇ ॥

ಯಾವ ಮಹಾತ್ಮನ ಕಟಾಕ್ಷವೆಂಬ ಚಂದ್ರದರ್ಶನದಿಂದ ಜ್ಞಾನವೆಂಬ ಸಮುದ್ರವು ಉಕ್ಕೇರುವುದೋ, ಜನನ ಮರಣರೂಪವಾದ ಸಂಸಾರವೆಂಬ ಕಾರ್ಗತ್ತಲೆಯು ಹೇಳಹೆಸರಿಲ್ಲದೆ ಓಡಿಹೋಗುವುದೋ, ಅವನೇ ಗುರುವೆನಿಸುವನು. ಆಕಾಶದಲ್ಲಿ ವ್ಯಾಪಿಸಿದ ಕತ್ತಲೆಯೊಂದನ್ನು ನಾಶಗೊಳಿಸುವ ಸೂರ್ಯನಿಗಿಂತಲೂ ಗುರುವು ಹೃದಯಾಕಾಶದಲ್ಲಿ ವ್ಯಾಪಿಸಿದ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುವುದರಿಂದ ಸೂರ್ಯನಿಗಿಂತಲೂ ಕೋಟಿಪಾಲು ಸರ್ವೋತ್ತಮನಾಗಿದ್ದಾನೆ. ಗುರುವಿನ ಉಪದೇಶವಾಣಿಯೆಂಬ ಕನ್ನಡಿಯಲ್ಲಿ ಮೋಕ್ಷಲಕ್ಷ್ಮಿಯ ಬಿಂಬವು ಕಂಡುಬರುವುದರಿಂದ ಗುರುವೇ ಭವರೋಗನಿವಾರಕನೆನಿಸಿಕೊಳ್ಳುತ್ತಾನೆ. ಭವರೋಗದಿಂದ ನರಳುತ್ತಿರುವ ಜೀವಾತ್ಮರಿಗೆ ಪರಮಾತ್ಮಾದ್ವೈತಜ್ಞಾನವೆಂಬ ದಿವ್ಯೌಷಧವನ್ನು ಕೊಟ್ಟು ಸತ್ಯ, ಶೌಚ, ಯಮ, ನಿಯಮ ಅಹಿಂಸಾದಿಗಳೆಂಬ ಅನುಪಾನಗಳನ್ನು ಮಾಡಿಸುತ್ತ ಕೃಪಾಳುವಾದ ವೈದ್ಯನೋಪಾದಿಯಲ್ಲಿ ಶರಣಾಗತನಾದ ಶಿಷ್ಯನನ್ನು ಜನನಮರಣರೂಪವಾದ ಘೋರವ್ಯಾಧಿಯಿಂದ ತಪ್ಪಿಸಿ ಜೀವಾತ್ಮನನ್ನು ಪರಶಿವನಂತೆ ನಿತ್ಯತೇಜಸ್ವಿಯನ್ನಾಗಿಯೂ, ನಿತ್ಯಾನಂದಪದವೇಧರನನ್ನಾಗಿಯೂ ಮಾಡುವುದರಿಂದ ಗುರುವೇ ಸರ್ವೋತ್ತಮನೆಂದು ಉಪದೇಶವನ್ನಿತ್ತಿರುತ್ತಾರೆ

ಶ್ರೀಮಾನ್ಜ್ಞಾನಿ ತಪಸ್ವೀ ಚ ಶಾಸ್ತ್ರಜ್ಞಃ ಕುಲಶೀಲವಾನ್ ।
ಕುರ್ಯಾದ್ದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ ॥

ಕೋಟೀಶ್ವರನೇ ಆಗಲಿ, ಮಹಾತಪಸ್ವಿಯೇ ಆಗಲಿ, ಷಟ್‌ಶಾಸ್ತ್ರಸಂಪನ್ನನೇ ಆಗಲಿ, ಸರ್ವೋತ್ಕೃಷ್ಟವಂಶಸಂಜಾತನೇ ಆಗಲಿ, ಶ್ರೀಗುರುವಿನ ಸನ್ನಿಧಿಯಲ್ಲಿ ನಿರಭಿಮಾನಿಯಾಗಿ ದೀರ್ಘದಂಡ ನಮಸ್ಕಾರವನ್ನು ಮಾಡಬೇಕೆಂದು ಧರ್ಮಗ್ರಂಥಗಳು ಗುರುವಿನ ಶ್ರೇಷ್ಠತೆಯನ್ನು ಒಣ್ಣಿಸುತ್ತವೆ ಮತ್ತು 'ಆಚಾರ್ಯವಾನ್ ಪುರುಷೋವೇದ' 'ಆಚಾರ್ಯದೇವೋ ಭವ' "ನಾಸ್ತಿ ತತ್ವಂ ಗುರೋಃ ಪರಂ' "ನ ಗುರೋರಧಿಕಂ" ಇತ್ಯಾದಿ ಶ್ರುತಿವಾಕ್ಯಗಳು ಗುರುವಿನ ಸರ್ವೋತ್ಕೃಷ್ಟತೆಯನ್ನು ಮುಕ್ತಕಂಠದಿಂದ ಸಾರುತ್ತಿರುವವು "ಗುರುರುಪಾಯಃ" ಎಂಬ ಶಿವಸೂತ್ರವೂ ಸಹ ಗುರುವೇ ಮೋಕ್ಷಕ್ಕೆ ಮೂಲಕಾರಣನೆಂದು ಬೋಧಿಸುತ್ತಿರುವುದು "ಶ್ರೀಗುರುವಚನದಿಂದಧಿಕಸುಧೆಯುಂಟೆ" ಎಂದು ಶ್ರೀಮನ್ನಿಜಗುಣಶಿವಯೋಗಿಗಳು ಗುರುವಿನ ಆಧಿಕ್ಯವನ್ನು ಹೊಗಳಿರುವರು ಅದಪ್ರಯುಕ್ತ ಗುರುವಿಲ್ಲದ ಮೋಕ್ಷವನ್ನು ಸಾಧಿಸಲು ಸಾಧ್ಯವಾಗುವುದಿಲ್ಲ

ಪಾಠಕರೇ, ಶಿಷ್ಯನ ಹೃದಯಾಕಾಶವನ್ನು ವ್ಯಾಪಿಸಿದ್ದ ಅಜ್ಞಾನರೂಪವಾದ ಕತ್ತಲೆಯನ್ನು ನಾಶಮಾಡಿ ಸುಜ್ಞಾನ ಸೂರ್ಯಪ್ರಭೆಯನ್ನು ಬೆಳಗಿಸತಕ್ಕ ಯಾವ ಜ್ಞಾನವಿದೆಯೋ ಅಂತಹ ಜ್ಞಾನವುಳ್ಳವನೇ ಗುರುವು ಆದರೆ, ಸ್ವಯಂ ಕ್ರಿಯಾಚಾರನಿಷ್ಠೆಯಿಲ್ಲದೆ ಶುಷ್ಕ ವೇದಾಂತವಾಕ್ಯಗಳನ್ನು ಹೇಳುತ್ತ ವೇಷ ಭಾಷೆ ಅಧಿಕಾರಗಳ ಆಡಂಬರದಿಂದ ಶಿಷ್ಯರ ವಿತ್ತಾಪಹಾರಮಾಡಿ ದುರ್ವಿನಿಯೋಗ ಮಾಡತಕ್ಕವನು ಗುರುವೆನಿಸುವದಿಲ್ಲ. ಜಗತ್ತಿನಲ್ಲಿ ತತ್ವಜ್ಞಾನವನ್ನು ಬೋಧಿಸತಕ್ಕ ಗ್ರಂಥಗಳು ಅನೇಕವಿದ್ದರೂ ಮತ್ತು ಮನುಷ್ಯನಿಗೆ ಈಶದತ್ತವಾದ ಜ್ಞಾನವಿದ್ದರೂ, ಇವುಗಳ ಸಹಾಯದಿಂದ ತತ್ವಜ್ಞಾನವಾಗಲಾರದು. ಜ್ಞಾನಬೋಧಕಗ್ರಂಥಗಳು ಅನೇಕವಿರುವುದೂ ಸಹಜ! ಆದರೆ ಆ ಗ್ರಂಥಗಳ ಯಥಾರ್ಥವಾದ ಸಾರವನ್ನು ಗ್ರಹಣಮಾಡುವ ಒಂದಾನೊಂದು ವಿಲಕ್ಷಣಶಕ್ತಿಯು ಬರಬೇಕಾದರೆ ಅದು ಗುರುವಿನಿಂದಲೇ ಸಾಧ್ಯವು. ಏಕೆಂದರೆ, ಪಾರಮಾರ್ಥಿಕಮಾರ್ಗವನ್ನು ಸದ್ಗುರುವಿನ ಹೊರತಾಗಿ ಆರೂ ಅರಿಯರು. ಜನ್ಮಾಂಧನಿಗೆ ವಸ್ತುಸ್ವರೂಪಜ್ಞಾನವು ಹೇಗೆ ಆಗುವದಿಲ್ಲವೋ, ಕಣ್ಣಿದ್ದರೂ ಅಂಜನಸಹಾಯವಿಲ್ಲದೆ ನಿಧಿಯು ಹೇಗೆ ಕಾಣುವದಿಲ್ಲವೋ ತದ್ವತ್ ಗುರೂಪದೇಶವಿಲ್ಲದವನಿಗೆ ಕಲ್ಪಕಲ್ಪಾಂತರದಲ್ಲಿಯೂ ಸಹ ತತ್ವಜ್ಞಾನವಾಗುವದಿಲ್ಲ. ಕಟ್ಟಿಗೆಯಲ್ಲಿ ಅಗ್ನಿಯಿದ್ದರೂ ಅದನ್ನು ಘರ್ಷಿಸಿ ತೆಗೆಯುವವರಿಲ್ಲದಿದ್ದರೆ ತನ್ನಿಂದ ತಾನೇ ಹೇಗೆ ವ್ಯಕ್ತವಾಗುವದಿಲ್ಲವೋ ಹಾಗೆಯೇ ತನ್ನಲ್ಲಿದ್ದ ಶಿವಕಲೆಯು ಗುರುವಿಲ್ಲದೆ ವ್ಯಕ್ತವಾಗದು. ಆದಕಾರಣ ಸದ್ಗುರುವಿನ ಅನುಗ್ರಹದಿಂದ ತತ್ವಜ್ಞಾನವನ್ನು ಪಡೆದುಕೊಳ್ಳಬೇಕು ಶುಕಮುನಿಗಳು ಸರ್ವಸಾಮಾನ್ಯರೆ? ಅವರು, ವೇದಾರ್ಥವನ್ನು ಜಗತ್ತಿನಲ್ಲಿ ಪ್ರಚಾರಪಡಿಸಿದ ವ್ಯಾಸಮಹರ್ಷಿಗಳ ಮಕ್ಕಳಾಗಿದ್ದು ಅನೇಕ ಶಾಸ್ತ್ರಾಧ್ಯಯನವನ್ನು ಮಾಡಿದ ವೈರಾಗ್ಯಶಿಖಾಮಣಿಗಳು ಆದರೂ ಮುಂದೆ ತತ್ವಜ್ಞಾನಪ್ರಾಪ್ತಿಗಾಗಿ ಜನಕಮಹಾರಾಜನ ಬಳಿಗೆ ಹೋಗಬೇಕಾಯಿತು ಮತ್ತು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವುದೇನೆಂದರೆ, ಒಂದುಸಾರೆ ನಾರದರು ಆತ್ಮಜ್ಞಾನಾರ್ಥಿಗಳಾಗಿ ಸನತ್ಕುಮಾರಸ್ವಾಮಿಯ ಬಳಿಗೆ ಹೋಗಿದ್ದಾರೆ ಆಗ್ಗೆ ಸ್ವಾಮಿಯು ಇದುವರೆಗೆ ಆಗಿರುವ ಅಭ್ಯಾಸವೇನೆಂದು ನಾರದರನ್ನು ಕೇಳಿದ್ದಾನೆ. ಆಗ ನಾರದರು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಇತಿಹಾಸ, ಪುರಾಣ, ವ್ಯಾಕರಣ, ತರ್ಕಶಾಸ್ತ್ರ, ನೀತಿಶಾಸ್ತ್ರ, ನಿರುಕ್ತ, ಮಂತ್ರ, ತಂತ್ರ, ಧನುರ್ವೇದ, ಜ್ಯೋತಿಷ, ಗಾರುಡ, ನೃತ್ಯ ಗೀತಾವಾದ್ಯ, ಶಿಲ್ಪಾದಿಗಳು ಇವುಗಳನ್ನೆಲ್ಲಾ ತಿಳಿದಿದ್ದೇನೆಂದು ಹೇಳಿ ಇವುಗಳ ಶಬ್ದಾರ್ಥವು ಮಾತ್ರ ತಮಗೆ ತಿಳಿದಿರುವುದೆಂದೂ ಆತ್ಮಜ್ಞಾನವಾಗಿಲ್ಲವೆಂದೂ ಆದ್ದರಿಂದ ದುಃಖಿಯಾಗಿ ಬಂದಿರುವೆನೆಂದೂ ಹೇಳಿದ್ದಾರೆ ಆಮೇಲೆ ಸನತ್ಕುಮಾರಸ್ವಾಮಿಯು ಬ್ರಹ್ಮೋಪದೇಶವನ್ನು ಮಾಡಿದ್ದಾನೆ. ಇಷ್ಟೆಲ್ಲಾ ಶಾಸ್ತ್ರಗಳನ್ನು ಓದಿದ ನಾರದರಿಗೇ ಆತ್ಮಜ್ಞಾನವಾಗಿರಲಿಲ್ಲವೆಂದಮೇಲೆ ಎಲ್ಲಿಯೋ ಒಂದೆರಡು ಗ್ರಂಥಗಳನ್ನು ಓದಿದ ಮಾತ್ರದಿಂದ ಆತ್ಮಜ್ಞಾನವಾಗುವುದ? ಪರಬ್ರಹ್ಮವಸ್ತು ಬರೀ ಓದಿಗೆ ಸಿಕ್ಕುವಂಥದಲ್ಲ "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ" ಅಂದರೆ ಬಹಳವಾದ ಹೇಳಿಕೆಯೂ, ಬುದ್ಧಿಯೂ ಆತ್ಮಜ್ಞಾನವನ್ನು ದೊರಕಿಸಿಕೊಡಲಾರವೆಂದು ಶ್ರುತಿಯೇ ಹೇಳುತ್ತದೆ. ಅದುಕಾರಣವೇ "ಗುರುವಿಲ್ಲದ ವಿದ್ಯೆ ವ್ಯರ್ಥ, ಗುರುವೇ ಅರಿವು" ಎಂದು ಜ್ಞಾನಿಗಳು ಬೋಧಿಸಿರುವರು ಅಲ್ಲದೆ ಶ್ರೀಗುರುವಿನ ವಿಷಯವಾಗಿ ಶಿವರಹಸ್ಯದಲ್ಲಿ, "ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ । ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ" ಎಂದು ಹೇಳಿರುವದು ಅದಪ್ರಯುಕ್ತ ತನ್ನ ಪುರೋಭಿವೃದ್ಧಿಯನ್ನು ಬಯಸತಕ್ಕವನು ಇಂತಹ ಗುರುಮೂರ್ತಿಯನ್ನು ಆಶ್ರಯಿಸಬೇಕು ಇಂತಹ ಸದ್ಗುರುಮೂರ್ತಿಯ ಸಂಗವು ಪ್ರಾಪ್ತವಾಗುವುದು ಕಷ್ಟವು, ಅವರ ಬೆಲೆಯನ್ನು ತಿಳಿಯುವುದು ಮತ್ತೂ ಕಷ್ಟವು, ಪರಮಾತ್ಮನ ಕೃಪೆಯಿಂದಲೇ ಇಂತಹವರ ದರ್ಶನವು ಪ್ರಾಪ್ತವಾಗುವುದು

ವಾಚಕರೇ, ಈ ಜಗತ್ತಿನಲ್ಲಿ ಸತ್ತವನಿಗೆ ಜೀವಬರುವುದೂ, ಮೊಲಕ್ಕೆ ಕೊಂಬುಗಳಿರುವುದೂ, ಗಗನದಲ್ಲಿ ಕುಸುಮವಿರುವದೂ, ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯಿರುವುದೂ, ಮೃಗಜಲದಲ್ಲಿ ನೀರಿರುವದೂ ಸತ್ಯವಾದಲ್ಲಿ ಗುರುವಿಲ್ಲದೆ ಗ್ರಂಥಗಳ ಸಹಾಯದಿಂದ ಮುಕ್ತಿಯನ್ನು ಪಡೆಯುತ್ತೇನೆಂಬ ಮಾತೂ ಸತ್ಯವಾಗಬಹುದು

ವರ್ತಮಾನಸಂಗ್ರಹ

ಪಂಜಾಬಿನ ಆಡಳಿತದ ಬಗ್ಗೆ ಸಿಕ್ಕರಿಗೂ ಹಿಂದೂಗಳಿಗೂ ಒಪ್ಪಿಗೆ ಆಯಿತು

ಪೂರ್ವ ಪಂಜಾಬಿನ ಆಡಳಿತದ ಬಗ್ಗೆ ಗೌರ್ನರ್ ಮತ್ತು ಮುಖ್ಯ ಮಂತ್ರಿಗಳ ಬಗ್ಗೆ ಸಿಕ್ ಮುಖಂಡರಿಗೂ ಮತ್ತು ಕಾಂಗ್ರೆಸ್ ಹೈ ಕಮ್ಯಾಂಡಿನವರಿಗೂ ಮಾತುಕತೆ ನಡೆದು ಒಂದು ಒಪ್ಪಂದ ಆಗಿದೆಯೆಂದು ಗೊತ್ತಾಗಿದೆ. ಇದರ ಪ್ರಕಾರ ಪಂಜಾಬಿನ ಗವರ್ನರ್ ಪದವಿ ಮತ್ತು ಮುಖ್ಯ ಮಂತ್ರಿ ಪದವಿ ಒಂದು ಸಾರೆ ಹಿಂದೂಗಳಿಗೂ ಇನ್ನೊಂದು ಸಾರೆ ಸಿಕ್ಕರಿಗೂ ದೊರೆಯುವುದು.

ಶಾಂತಿಸ್ಥಾಪನೆಯಲ್ಲಿ ಪತ್ರಿಕೋದ್ಯೋಗಿಗಳ ಪಾತ್ರ

ಸಲ್ಪತ್ತದಲ್ಲಿ ಶಾಂತಿ ಸ್ಥಾಪನ ಕಾರ್ಯವು ಭರದಿಂದ ನಡೆಯುತ್ತದೆ ಪ್ರತಿಕೋದ್ಯೋಗಿಗಳು ಸಹ ಶಾಂತಿ ಸ್ಥಾಪನ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಲು ತಯಾರಾಗಿದ್ದಾರೆ ಜನರನ್ನು ಉದ್ರೇಕಗೊಳಿಸುವ ಬರವಣಿಗೆಗಳನ್ನು ಪ್ರಕಟಿಸಕೂಡದೆಂದು ಹಿಂದೂ ಮುಸ್ಲಿಂ ಪತ್ರಿಕೋದ್ಯೋಗಿಗಳು ನಿರ್ಧರಿಸಿದ್ದಾರೆ

ಬಂಗಾಳದ ಜನಸಂಖ್ಯೆ ಒಟ್ಟು ೬ ಕೋಟಿ

ಗಡಿ ನಿರ್ಧಾರ ಸಮಿತಿಯ ಅಧ್ಯಕ್ಷರ ತೀರ್ಪಿನ ಪ್ರಕಾರ, ಭಾರತಕ್ಕೆ ಸೇರಿರುವ ಪಶ್ಚಿಮ ಬಂಗಾಳದೊಳಗೆ ೧ ಕೋಟಿ ೫೦ ಲಕ್ಷ ಹಿಂದುಗಳೂ ೫೦ ಲಕ್ಷ ಮುಸಲ್ಮಾನರೂ ಇರುವರು ಪಾಕಿಸ್ಥಾನಕ್ಕೆ ಸೇರಿರುವ ಪೂರ್ವಬಂಗಾಳದಲ್ಲಿ ೧ ಕೋಟಿ ೧೧ ಲಕ್ಷ ಹಿಂದುಗಳೂ ೩ ಕೋಟಿ ೯೦ ಲಕ್ಷ ಮುಸಲ್ಮಾನರೂ ಇರುವರು

ಪಾಕಿಸ್ಥಾನದ ಸ್ಟ್ಯಾಂಪುಗಳು

ಪಾಕಿಸ್ಥಾನದ ಪೋಸ್ಟ್‌ಸ್ಟಾಂಪುಗಳು ಭಾರತದ ಸ್ಟ್ಯಾಂಪುಗಳಷ್ಟೇ ಇರುವವೆಂದೂ ಆದರೆ ಅದರಲ್ಲಿ ಚಂದ್ರ ಮತ್ತು ಒಂದು ನಕ್ಷತ್ರ ಇದ್ದು ಅದರ ಕೆಳಗೆ ಪಾಕಿಸ್ಥಾನ ಎಂದು ಒರೆದಿರುವುದೆಂದೂ ತಿಳಿಯಬಂದಿದೆ ಬೇರೆ ಬೇರೆ ಬೆಲೆಯ ಸ್ಟಾಂಪುಗಳಿಗೆ ಬೇರೆ ಬೇರೆ ಬಣ್ಣ ಇರುವುದೆಂದು ತಿಳಿದು ಬಂದಿದೆ

ಜಪಾನಿನಿಂದ ಭಾರತಕ್ಕೆ ೧೦ ಕೋಟಿ ಗಜ ಬಟ್ಟೆ !

ಭಾರತವು ಜಪಾನಿನಿಂದ ೧೦ ಕೋಟಿ ಗಜಗಳಷ್ಟು ಹತ್ತಿಬಟ್ಟೆಯನ್ನು ಆಮದು ಮಾಡಲಿದೆ ಇನ್ನು ಮೂರು ತಿಂಗಳ ಹೊತ್ತಿಗೆ ಇಷ್ಟು ಬಟ್ಟೆಯೂ ಭಾರತವನ್ನು ಮುಟ್ಟುವ ಸಂಭವವಿದೆ ಜಪಾನಿನಿಂದ ಭಾರತಕ್ಕೆ ಬರಬೇಕಾದ ಪರಿಹಾರಕ್ಕಾಗಿ ಇದನ್ನು ಪಡೆಯುತ್ತಿಲ್ಲ ಇದಕ್ಕೆಲ್ಲ ಹಣವನ್ನು ಕೊಡಲಾಗುವುದು

ಭಾರತ ಕೇಂದ್ರ ಸರ್ಕಾರದಲ್ಲಿ ಅಧಿಕಾರಿಗಳ ಅಭಾವ

ರಾಜ್ಯಾಧಿಕಾರದ ವರ್ಗಾವಣೆಯ ನಂತರ ಇಂಡಿಯನ್ ಡೊಮಿನಿಯನ್ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳ ಅಭಾವವೇರ್ಪಟ್ಟಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ ಈ ಹಿಂದೆ ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಒಟ್ಟು ೧೨೦೦ಕ್ಕೆ ಮೇಲ್ಪಟ್ಟು ಇಂಡಿಯನ್ ಸಿವಿಲ್ ಅಧಿಕಾರಿಗಳಿದ್ದರು ಆದರೆ ಈಗ ಕೇವಲ ೪೭೦ ಮಂದಿ ಮಾತ್ರ ಇದ್ದಾರೆ ಉಳಿದವರು ರಾಜೀನಾಮೆಯಿತ್ತಿದ್ದಾರೆ ಅಥವಾ ಪಾಕಿಸ್ಥಾನ್ ಸರ್ಕಾರಕ್ಕೆ ಸೇರಿಕೊಂಡಿದ್ದಾರೆ ಈಗ ಕೇಂದ್ರ ಸರ್ಕಾರಕ್ಕೆ ಮುಖ್ಯ ಅಧಿಕಾರ ಸ್ಥಾನಗಳಿಗೆ ಸುಮಾರು ೨೦೦ ಜನರಾದರೂ ಐ ಸಿ ಎಸ್ ಅಧಿಕಾರಿಗಳು ಬೇಕಾಗಿದ್ದಾರೆ. ಆದರೆ ಈಗ ಕೇವಲ ೨೦೪ ಮಂದಿ ಮಾತ್ರ ಐ ಸಿ ಎಸ್ ಅಧಿಕಾರಿಗಳಿದ್ದಾರೆ

ಕೇಂದ್ರ ಪೋಲೀಸ್ ಇಲಾಖೆಯಲ್ಲೂ ಇದೇ ರೀತಿ ಅಧಿಕಾರಿಗಳ ಅಭಾವವೇರ್ಪಟ್ಟಿದೆ ಸಾಮಾನ್ಯ ದಿನಗಳಲ್ಲಿ ಇಂಡಿಯನ್ ಡೊಮಿನಿಯನ್ನಿನಲ್ಲಿ ಕೇಂದ್ರ ಪೋಲೀಸು ಇಲಾಖೆಯಲ್ಲಿ ೫೦೦ಕ್ಕೆ ಮೇಲ್ಪಟ್ಟು ಅಧಿಕಾರಿಗಳು ಇರುತ್ತಿದ್ದರು. ಆದರೆ ಈಗ ಬ್ರಿಟಿಷ್ ಮತ್ತು ಭಾರತೀಯ ಅಧಿಕಾರಿಗಳೂ ಸೇರಿ ಒಟ್ಟು ೧೧೦ ಮಂದಿ ಮಾತ್ರ ಇದ್ದಾರೆ.

ಇಂಡಿಯನ್ ಡೊಮಿನಿಯನ್ ಸರ್ಕಾರದ ಇತರ ಶಾಖೆಗಳಲ್ಲಿ ಇದೇ ರೀತಿ ಅಧಿಕಾರಿಗಳ ಅಭಾವವೇರ್ಪಟ್ಟಿದೆ.

ಭಾರತ ಮತ್ತು ಪಾಕಿಸ್ಥಾನದ ಮುಖ್ಯಮಂತ್ರಿಗಳ ಸಂಯುಕ್ತ ಹೇಳಿಕೆ.

ಪಂಜಾಬಿನಲ್ಲಿ ನಡೆಯುತ್ತಿರುವ ಹೇಯವಾದ ಹತ್ಯಾಕಾಂಡವನ್ನು ಕೂಡಲೇ ನಿಲ್ಲಿಸಲು ಎಲ್ಲಾ ಸಿದ್ಧತೆಗಳನ್ನೂ ಮಾಡಲಾಗಿದೆಯೆಂದೂ, ಕೊಲೆಪಾತಕರನ್ನ ಸದೆಬಡೆಯಲಾಗುವುದೆಂದೂ ಪಾಕಿಸ್ಥಾನ ಮತ್ತು ಭಾರತದ ಮುಖ್ಯಮಂತ್ರಿಗಳು ಒಂದು ಸಂಯುಕ್ತ ಹೇಳಿಕೆ ಇತ್ತಿದ್ದಾರೆ

ರಾಷ್ಟ್ರದ ಘನತೆಗೆ ಕಳಂಕ ತರುವಂತಹ ಅರ್ಥವಿಲ್ಲದ ಇಂತಹ ದುಷ್ಕೃತ್ಯಗಳನ್ನು ಯಾವ ಸರ್ಕಾರವೂ ಸಹಿಸಲಾರದೆಂದೂ, ಎರಡು ಸರ್ಕಾರಗಳ ದೃಢ ಸಂಕಲ್ಪಕ್ಕೆ ಪ್ರಜೆಗಳೆಲ್ಲರೂ ಬೆಂಬಲ ನೀಡಿ, ನರವಧೆಯಿಂದ ನರಕಕೂಪವಾಗಿರುವ ಪಂಜಾಬು ಪುನಃ ಸುಖಶಾಂತಿಗಳ ನೆಲೆವೀಡಾಗುವಂತೆ ಮಾಡಲು ಎಲ್ಲರೂ ಪ್ರಯತ್ನಿಸಬೇಕೆಂದೂ ಪ್ರಾರ್ಥಿಸಿದ್ದಾರೆ

ಸಂಯುಕ್ತ ಹೇಳಿಕೆಯ ವಿವರ

ಕೇವಲ ಎರಡು ದಿವಸಗಳ ಹಿಂದೆ ಪಾಕಿಸ್ಥಾನ ಮತ್ತು ಭಾರತ ಸರ್ಕಾರಗಳು ಉದಯಿಸಿದುವು ಇಡೀ ಭಾರತದಲ್ಲೆಲ್ಲಾ ಸ್ವಾತಂತ್ರ್ಯದ ವಿಜಯೋತ್ಸವದಲ್ಲಿ ಜನರು ಆನಂದದಿಂದ ಮೈಮರೆತರು ಆದರೆ ಅಂತಹ ಚಿರಸ್ಮರಣೀಯವಾದ ಸಂತೋಷೋತ್ಸವವನ್ನು ಆಚರಿಸುವ ಭಾಗ್ಯ ಪಂಜಾಬಿಗೆ ದೊರೆಯಲಿಲ್ಲ ಸಂತೋಷದ ಬದಲು ಕೊಲೆಪಾತಕರ ಕಠೋರವರ್ತನೆಯಿಂದ ಜನರು ಕಣ್ಣೀರಿಡುತ್ತಿದ್ದಾರೆ

ಹೊಸ ಸರ್ಕಾರಗಳು ಆಡಳಿತ ಸೂತ್ರಗಳನ್ನು ವಹಿಸಿದ ಕೂಡಲೇ ಪಂಜಾಬು ಪರಿಸ್ಥಿತಿಯ ಕಡೆಗೆ ನಮ್ಮ ಗಮನವಿತ್ತೆವು ಆಗಸ್ಟ್ ೧೭ರಲ್ಲಿ ಅಂಬಾಲ ನಗರದಲ್ಲಿ ಪ್ರಮುಖ ನಾಯಕರೆಲ್ಲಾ ಸೇರಿ ಈ ವಿಷಾದಕರವಾದ ಪರಿಸ್ಥಿತಿಯನ್ನು ಹತೋಟಿಗೆ ತರುವ ಮಾರ್ಗವನ್ನು ಚರ್ಚಿಸಿದೆವು

ಪಂಜಾಬಿನಲ್ಲಿ ನಡೆಯುತ್ತಿರುವ ದುಷ್ಕೃತ್ಯಗಳನ್ನು ಮಟ್ಟಹಾಕಲು ನಾವು ದೃಢಸಂಕಲ್ಪ ಮಾಡಿದ್ದೇವೆ ಈ ವಿನಾಶಕೃತ್ಯಗಳನ್ನು ತಡೆಗಟ್ಟಿ ಶಾಶ್ವತವಾದ ಶಾಂತಿಯನ್ನು ಸ್ಥಾಪಿಸಲು ಮಿಲಿಟರಿ ವ್ಯವಸ್ಥೆಗಳನ್ನೆಲ್ಲಾ ಮಾಡಲಾಗಿದೆ ಇವುಗಳ ಜೊತೆಗೆ ಎರಡು ಸರ್ಕಾರಗಳ ನಾಯಕರು ಆಗಾಗ್ಯೆ ಜನರಿಗೆ ವಿವೇಕ ಹೇಳುವಂತೆಯೂ ನಿರ್ಧಾರವಾಗಿದೆ ರಾಷ್ಟ್ರದ ಘನತೆಗೆ ಕಳಂಕ ತರುವಂತಹ ಈ ನರವಧೆಯನ್ನು ಯಾವ ಸರ್ಕಾರವೂ ಸಹಿಸಲಾರದು

ಪೂರ್ವ ಮತ್ತು ಪಶ್ಚಿಮ ಪಂಜಾಬು ಸರ್ಕಾರಗಳು ಒಟ್ಟಿಗೆ ತಕ್ಕ ಕಾರ್ಯಕ್ರಮಗಳನ್ನೆಲ್ಲಾ ಕೈಗೊಳ್ಳುವುವೆಂದೂ, ಈ ವಿಷಯದಲ್ಲಿ ಪಾಕಿಸ್ಥಾನ್ ಮತ್ತು ಭಾರತ ಸರ್ಕಾರಗಳು ಪ್ರಾಂತ ಸರ್ಕಾರಗಳಿಗೆ ಪೂರ್ಣ ಬೆಂಬಲ ಕೊಡುವುವೆಂದೂ ಈ ಹೇಳಿಕೆಯಲ್ಲಿ ಉಭಯ ಪ್ರಧಾನರೂ ತಿಳಿಸಿದ್ದಾರೆ ಸರ್ಕಾರವು ಕೈಗೊಳ್ಳುವ ಯಾವ ಕರ್ತವ್ಯವೇ ಆಗಲಿ ಯಶಸ್ವಿಯಾಗಲು ಪ್ರಜೆಗಳ ಮನಃಪೂರ್ವಕವಾದ ಬೆಂಬಲವಿಲ್ಲದೆ ಸಾಧ್ಯವಿಲ್ಲವೆಂದೂ, ಆದಕಾರಣ ಪ್ರಜೆಗಳು ಪೂರ್ಣವಾಗಿ ಸಹಕರಿಸಬೇಕೆಂದೂ ಅವರು ಪ್ರಾರ್ಥಿಸಿದ್ದಾರೆ

ಸರ್ ಸಿ. ಪಿ. ರಾಮಸ್ವಾಮಿಅಯ್ಯರವರ ಸೇವಾ ಪ್ರಶಂಸೆ

ತಿರುವಾಂಕೂರು ಸರ್ಕಾರದ ವಿಶೇಷ ಗೆಜೆಟ್

ತಿರುವಾಂಕೂರು ಸಂಸ್ಥಾನದ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರ ರಾಜೀನಾಮೆಯ ಸಂದರ್ಭದಲ್ಲಿ ತಿರುವಾಂಕೂರು ಸರ್ಕಾರವು ಒಂದು ವಿಶೇಷ ಗೆಜೆಟ್ ಹೊರಡಿಸಿದೆ. ಈ ಗೆಜೆಟ್ಟಿನಲ್ಲಿ ಸಂಸ್ಥಾನದ ಸರ್ವತೋಮುಖವಾದ ಅಭಿವೃದ್ಧಿಗೆ ಸರ್ ಸಿ ಪಿ. ಯವರು ಸಲ್ಲಿಸಿರುವ ಸೇವೆಯನ್ನು ತಿರುವಾಂಕೂರು ಪ್ರಭುಗಳು ಸ್ಮರಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆಂದು ತಿಳಿಸಲಾಗಿದೆ.

ತಿರುವಾಂಕೂರು ಸಂಸ್ಥಾನಕ್ಕಾಗಿ ಸರ್ ಸಿ. ಪಿ ಯವರು ಹನ್ನೊಂದು ವರ್ಷ ಅವಿಚ್ಛಿನ್ನವಾಗಿ ದುಡಿದಿದ್ದಾರೆ ಅವರ ಶ್ರಮದ ಫಲವಾಗಿ ಇಂದು ತಿರುವಾಂಕೂರು ಸಂಸ್ಥಾನವು ಅಂತರ ರಾಷ್ಟ್ರೀಯ ಖ್ಯಾತಿಗಳಿಸಿದೆ ಮರಣ ದಂಡನೆಯನ್ನು ತೆಗೆದುಹಾಕಿದುದು, ತಿರುವಾಂಕೂರು ವಿಶ್ವವಿದ್ಯಾನಿಲಯ ಸ್ಥಾಪನೆ, ಉತ್ಕಟವಾದ ಆಹಾರಾಭಾವದಲ್ಲಿ ಕಷ್ಟಪರಿಸ್ಥಿತಿಯಿಂದ ಜನರನ್ನು ಪಾರು ಮಾಡಿದುದು—ಇವುಗಳನ್ನೆಲ್ಲಾ ಸಾಧಿಸಿದ ಕೀರ್ತಿ ಸರ್ ಸಿ ಪಿ ಯವರಿಗೆ ಸೇರತಕ್ಕದ್ದಾಗಿದೆ" ಎಂಬುದಾಗಿ ಆ ಪ್ರಕಟನೆಯಲ್ಲಿ ತಿಳಿಸಲಾಗಿದೆ

ಮೈಸೂರು ಕಾಂಗ್ರೆಸ್ಸಿನವರ ಬಗ್ಗೆ ಧರ್ಮಪ್ರಕಾಶ ಶ್ರೀಮಾನ್ ಎನ್. ರುದ್ರಯ್ಯನವರ ಹೇಳಿಕೆ

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಸತ್ಯಾಗ್ರಹ ಹೂಡುವುದಾಗಿ ನಿರ್ಧರಿಸಿ ಪತ್ರಿಕೆಗಳ ಮೂಲಕ ಪ್ರಚುರಪಡಿಸಿರುವುದು ವಿವೇಕಯುತವಾದುದಲ್ಲ ಏಕೆಂದರೆ ಮೈಸೂರಿನಲ್ಲಿ ಸುಧಾರಣೆಗಳನ್ನು ಆಚರಣೆಗೆ ತರುವ ವಿಚಾರದಲ್ಲಿ ಮಹಾಪ್ರಭುಗಳು ಒಂದು ಘೋಷಣೆ ಹೊರಡಿಸಿ ಸಲಹೆಗಳನ್ನು ಮುಂದಿಡಲು ದಿವಾನರಿಗೆ ಆಜ್ಞೆಮಾಡಿರುವರು ದಿವಾನರು ಈ ವಿಚಾರದಲ್ಲಿ ತಕ್ಕ ಪ್ರಯತ್ನಗಳನ್ನು ನಡೆಸಲು ಒಂದು ಕಮಿಟಿಯನ್ನು ರಚಿಸಿದ್ದಾರೆ

ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ಒಂದೇ ಅಲ್ಲ, ಇತರ ದೊಡ್ಡ ಪಕ್ಷಗಳೂ ಇವೆ ಅದ್ದರಿಂದ ಪ್ರಭುಗಳ ಅಪ್ಪಣೆ ನೇರಿಗೆ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪಡೆದು ಸಾಧ್ಯಸಾಧ್ಯತೆ ವಿಮರ್ಶೆಮಾಡಿ ಮೈಸೂರಿನ ಎಲ್ಲಾ ಜನಾಂಗಕ್ಕೂ ಸರಿಹೋಗುವಂತೆ ರಾಜ್ಯಾಂಗ ವ್ಯವಸ್ಥೆಯನ್ನು ರೂಪುಗೊಳಿಸಿ ಪ್ರಭುಗಳಿಗೆ ಒಪ್ಪಿಸುವುದು ದಿವಾನರ ಕರ್ತವ್ಯ ಈ ವಿಚಾರದಲ್ಲಿ ದಿವಾನರು ಆಸಕ್ತಿವಹಿಸಿ ಕೆಲಸ ಮಾಡುತ್ತಿರುವುದು ಆಬಾಲವೃದ್ಧರಿಗೆಲ್ಲಾ ತಿಳಿದಿದೆ ಹೀಗಿರುವಲ್ಲಿ ನಮ್ಮ ಕಾಂಗ್ರೆಸ್ಸಿನವರು ಆತುರಬಿದ್ದು ನಾವು ಹೇಳಿದಂತೆ ನೀವು ಒಪ್ಪಿಕೊಂಡು ಜವಾಬುಕೊಡಿ, ಇಲ್ಲವಾದಲ್ಲಿ ಸತ್ಯಾಗ್ರಹ ಮಾಡುತ್ತೇವೆಂದು ಹೆದರಿಸುವುದು ಸರಿಯೇ? ಇದಕ್ಕೆ ಕಾಂಗ್ರೆಸ್ಸೇತರರ ಬೆಂಬಲ ದೊರೆಯುತ್ತದೆಯೇ? ದೇಶದಲ್ಲಿ ಜನರು ಆಹಾರಗಳಿಗೆ ತೊಂದರೆ ಪಡುತ್ತಿದ್ದಾರೆ ಪರದೇಶಗಳಿಂದ ಧಾನ್ಯ ಬರುತ್ತಿಲ್ಲ ಪಟ್ಟಣವಾಸಿಗಳಲ್ಲಿ ಜನರು ಭೀತರಾಗಿದ್ದಾರೆ ಇಂಥಾದ್ದರಲ್ಲಿ ನಮ್ಮ ದೇಶದಲ್ಲಿ ಜನರು ಸುಖ ಶಾಂತಿಯಿಂದ ಇರುವಾಗ ಶಾಂತಿಯನ್ನು ಕದಡಿ ತಮ್ಮ ಇಚ್ಛೆಯನ್ನು ಕಾಂಗ್ರೆಸ್ಸಿನವರು ಈಡೇರಿಸಿಕೊಳ್ಳಲು ಹವಣಿಸುತ್ತಿರುವುದು ಖಂಡನೀಯವಾದುದು. ಇದರಿಂದಾಗುವ ಪ್ರಮಾದಕ್ಕೆ ಕಾಂಗ್ರೆಸ್ಸಿನವರೇ ಜವಾಬ್ದಾರರಾಗುತ್ತಾರೆ

ಸ್ವೀಕಾರ

ಧಾರವಾಡ ಡಿ|| ಲಕ್ಷ್ಮೇಶ್ವರ ಗ್ರಾಮದ ಶ್ರೀಮತಿ ಗಂಗವ್ವ ಅಳವುಂಡಿ ಇವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ವೇ|| ಫಕೀರಯ್ಯನವರು ಹಿರೇಮಠ ಲಕ್ಷ್ಮೇಶ್ವರ ಇವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿ ವಿಶ್ವೇಶ್ವರಪುರವಾಸಿಗಳಾದ ಗ್ರಂ|| ಗುರುಸಿದ್ದಪ್ಪನವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ಮ|| ರಾ|| ಜಿ ಆರ್. ಸಿದ್ಧಪ್ಪನವರು ಪ್ರಭಾಪೋಷಣಕ್ಕೋಸ್ಕರ 2 ರೂ.ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಚಿಕ್ಕಮಗಳೂರು ತಾ|| ವಸ್ತಾರೆ ಗ್ರಾಮದಲ್ಲಿ ನೆರವೇರಿದ ಸ್ವಾತಂತ್ರ್ಯ ದಿನೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ವಸ್ತಾರೆ ಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವದ ತಳದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲಕ್ಕಿಂತಲೂ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಬಾಗಕರಿಗೆ ವೇದ್ಯವಾಗುವುದು. ಪ್ರಕರಣ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವ ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ವೈಪುಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಗಕ್ಕೆ	೦—೬—
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಗಕ್ಕೆ	೦—೪—
,, ,, ,, ಚಿಕ್ಕ ಸೈಜು ಬೆಲೆ	೦—೧—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಗಕ್ಕೆ	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಗಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಕ್ಕೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಕ್ಕೆ	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—
ಬೆಂಗಳೂರು ಕಂಟೋನ್ಮೆಂಟಿನ ಸಂಘದಿಂದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಸಂಸ್ಕೃತ)	೧॥ ರೂ
ವೀರಶೈವರತ್ನ (೪ನೆಯ ಆವೃತ್ತಿ ೩೦ ಮಹತ್ವದ ಫೋಟೋಗಳಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

…ಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

…ಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಸೆಪ್ಟೆಂಬರ್ ೧೯೪೭ [ಸಂಚಿಕೆ ೧೯

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

…ರುದ್ರಾಭಿಷೇಕಮಹಾಪೂಜಾಫಲವಿಚಾರ

ಶ್ರೀ॥ ಶ್ರೀಷಟ್ಸ್ಥಲಸ್ವಾಮಿಗಳು …

ಪರಮಾತ್ಮನಿಂದ ಸಮಸ್ತ ಮಾನವಪ್ರಾಣಿಗಳ ಉದ್ಧಾ…ಕ್ಕೋಸ್ಕರ, ವೇದಾಗಮೋಪನಿಷತ್ಪುರಾಣಾದಿಗಳು …ರ್ಮಿಸಲ್ಪಟ್ಟಿರುವವು ಆ ಗ್ರಂಥಗಳಲ್ಲಿ ಅನೇಕ ವಿಧ…ದ ನಿತ್ಯನೈಮಿತ್ತಿಕಪೂಜಾದಿಗಳು ಉಲ್ಲೇಖಿಸಲ್ಪಟ್ಟಿ…ವವು ಅವುಗಳನ್ನು ಅನುಷ್ಠಾನಮಾಡಿ ಮಾನವರು …ಹಸರಗಳಲ್ಲಿ ಆಯುರಾರೋಗ್ಯಭಾಗ್ಯಾದಿಗಳನ್ನು …ಡೆದು, ಶಾಶ್ವತಸುಖವನ್ನು ಹೊಂದಲೆಂಬುದೇ ಮುಖ್ಯ …ದ್ದೇಶವಾಗಿರುವದು ಭಗವಂತನು ನಮಗೆ ಕೊಟ್ಟಿ…ವ ಶಕ್ತಿ ಯುಕ್ತಿ, ಸಾಹಸಗಳನ್ನೂ, ಧನಕನಕಾದಿ…ಗಳನ್ನೂ, ಸತ್ಕರ್ಮಗಳಲ್ಲಿ ವಿನಿಯೋಗಿಸಬೇಕೇ ಹೊರತು …ದುಷ್ಕರ್ಮಗಳಲ್ಲಿ ವಿನಿಯೋಗಿಸಬಾರದು ಸತ್ಕರ್ಮ …ಮಾಡುವದರಿಂದ ಸದ್ಗತಿಯೂ, ಸುಖವೂ, ಕೀರ್ತಿಯೂ …ಉಂಟಾಗುವದು ದುಷ್ಕರ್ಮಮಾಡುವದರಿಂದ ಅಪ…ಕೀರ್ತಿಯನ್ನೂ, ದುಃಖವನ್ನೂ ಹೊಂದಿ ಅಧೋಗತಿ…ಗೀಡಾಗಬೇಕಾಗುವದು

“ ಅಭಿಷೇಕ ಪ್ರಿಯ ಶಿವಃ ಎಂಬಂತೆ ಪರಶಿವನು …ಸಂತುಷ್ಟನಾಗಬೇಕಾದರೆ ಅಭಿಷೇಕವೇ ಮುಖ್ಯ ಸಾಧನ …ವೆಂದು ಹೇಳಬಹುದು ಆದ್ದರಿಂದಲೇ ಪೂರ್ವದಲ್ಲಿ …ಅನೇಕ ದೇವತೆಗಳೂ, ಮಹರ್ಷಿಗಳೂ, ಮಹಾರಾಜಾಧಿ…ರಾಜರೂ ಪರಶಿವನನ್ನು ಮಹಾಭಿಷೇಕದಿಂದ ಸಂತುಷ್ಟ…ಪಡಿಸಿಯೇ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದು …ಧನ್ಯರಾದರೆಂಬುದು ಶಾಸ್ತ್ರಪ್ರಸಿದ್ಧವದ ಅಂದಮೇಲೆ …ದುಃಖಮಯವಾದ ಈ ಸಂಸಾರಸಾಗರದಲ್ಲಿ ಪ್ರತಿಯೊ…ಬ್ಬನೂ, ತನಗೆ ಪ್ರಾಪ್ತವಾಗುವ ಕಷ್ಟನಷ್ಟಗಳನ್ನು …ದೂರಮಾಡಿಕೊಂಡು, ಸೌಖ್ಯವನ್ನು ಹೊಂದಬೇಕಾದರೆ …ಶ್ರೀಪರಶಿವಮೂರ್ತಿಯನ್ನು ಅಭಿಷೇಕದಿಂದ ತೃಪ್ತಿಪಡಿಸು…ವದು ಅತ್ಯಂತ ಯೋಗ್ಯವಾಗಿದೆ

ಅಭಿಷೇಕದಲ್ಲಿ ಜಲಾಭಿಷೇಕ, ಕ್ಷೀರಾಭಿಷೇಕ, ಘೃತಾ…ಭಿಷೇಕ, ರಸಾಭಿಷೇಕ ಮೊದಲಾದ ಅನೇಕ ಪ್ರಕಾರ…ಗಳುಂಟು ಯಾವ ಅಭಿಷೇಕವನ್ನು ಮಾಡಿದರೂ, …ಶ್ರೀರುದ್ರಾಧ್ಯಾಯ ’ವನ್ನು ಪಠಿಸುತ್ತ ಅಭಿಷೇಕ …ಮಾಡಬೇಕು ರುದ್ರಾಭಿಷೇಕವನ್ನು ಮಾಡಿದವರಿಗೂ …ಮಾಡಿಸಿದವರಿಗೂ, ಅಧಿಕವಾದ ಫಲಪ್ರಾಪ್ತಿಯಾಗು…ವದು ಸಪ್ತಕೋಟಿಮಂತ್ರಗಳಲ್ಲಿ ಪಂಚಾಕ್ಷರೀಮಂತ್ರವು …ಹೇಗೆ ಶ್ರೇಷ್ಠವೋ, ಹಾಗೆಯೇ ವೇದದಲ್ಲಿ ಶ್ರೀರುದ್ರಾ…ಧ್ಯಾಯವವು ಶ್ರೇಷ್ಠವಾಗಿರುವದು ಈ ವಿಷಯವನ್ನು …ಸಿದ್ಧಾಂತಶಿಖಾಮಣಿಯ ೯ ನೆಯ ಪರಿಚ್ಛೇದದಲ್ಲಿ—

…ಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ ।
…ರುದ್ರಾಧ್ಯಾಯಾದಿಕಾಭ್ಯಾಸೋ ನವೇದಾಧ್ಯಯನಾದಿಕಂ ॥೨೩॥

ಅಂದರೆ ಪಂಚಾಕ್ಷರಮಂತ್ರಾಭ್ಯಾಸನಾಗಲಿ, ಓಂಕಾರಾ…ಭ್ಯಾಸನಾಗಲಿ, ಅಥವಾ ಶ್ರೀರುದ್ರ, ಅಥರ್ವಶಿಖಾ, ಶಾಶ್ವತಧ, ಕೈವಲ್ಯಾದಿ ಶ್ರುತಿಗಳ ಅಭ್ಯಾಸನಾಗಲಿ ಜಪವೆನಿಸುವುದಲ್ಲದೆ, ಪಶುಕರ್ಮಪ್ರತಿಪಾದಕವೇದಾಭ್ಯಾಸವು ಜಪವೆನಿಸುವದಿಲ್ಲನೆಂದು ಶ್ರೀರೇಣುಕರು ಅಪ್ಪಣೆಕೊಡಿಸಿದ್ದಾರೆ

ಈ ರುದ್ರಾಧ್ಯಾಯ ಜಪವನ್ನು ಕುರಿತು ವೇದಾಗಮೋಪನಿಷತ್ಪುರಾಣ ಸ್ಮೃತಿ ಮೊದಲಾದವುಗಳು ಬಹಳವಾಗಿ ಪ್ರಶಂಸೆಮಾಡಿರುತ್ತವೆ ಇಲ್ಲಿ ಅವುಗಳನ್ನು ವಿವರಿಸಲಾಗುವದು ಜಾಬಾಲೋಪನಿಷತ್ತಿನಲ್ಲಿ—“ ಅಥ ಹೈನಂ ಬ್ರಹ್ಮಚಾರಿಣ ಊಚುಃ ಕಿಂ ಜಪ್ಯೇನಾಮೃತತ್ವಮಶ್ನುತೇ ಬ್ರೂಹೀತಿ ಸಹೋವಾಚ ಯಾಜ್ಞವಲ್ಕ್ಯಃ ಶತರುದ್ರೀಯೇಣೇತಿ ಅಂದರೆ ಯಾವುದನ್ನು ಜಪಿಸುವುದರಿಂದ ಅಮೃತತತ್ವರೂಪವಾದ ಮೋಕ್ಷವು ಲಭಿಸುವದೆಂದು ಬ್ರಹ್ಮಚಾರಿಗಳು ಯಾಜ್ಞವಲ್ಕ್ಯರನ್ನು ಕೇಳಲು ಅದಕ್ಕೆ ಯಾಜ್ಞವಲ್ಕ್ಯರು ಶತರುದ್ರೀಯವನ್ನು ಜಪಮಾಡೋಣದರಿಂದ ಎಂದು ಉತ್ತರವನ್ನು ಕೊಟ್ಟಿರುವರು

ಕೈವಲ್ಯೋಪನಿಷತ್ತಿನಲ್ಲಿ— ‘ ಯಃ ಶತರುದ್ರೀಯ ಮಧೀತೇ ಸೋಗ್ನಿಪೂತೋ ಭವತಿ ಸ್ವರ್ಣಸ್ತೇಯಾತ್ಪೂತೋ ಭವತಿ ಸುರಾಪಾನಬ್ರಹ್ಮಹತ್ಯಾ ಕೃತ್ಯಾಕೃತ್ಯಾತ್ಪೂತೋ ಭವತಿ ತಸ್ಮಾದವಿಮುಕ್ತಮಾಶ್ರಯೇತ್ । ಅತ್ಯಾಶ್ರಮೀ ಸರ್ವದಾ ಸಕೃದ್ವಾ ಜಪೇದನೇನ ಜ್ಞಾನಮಾಪ್ನೋತಿ ಸಂಸಾರಾರ್ಣವನಾಶನಂ ತಸ್ಮಾದೇವಂ ವಿದಿತ್ವೈನಂ ಕೈವಲ್ಯಂ ಫಲಮಶ್ನುತೇ ಕೈವಲ್ಯಂ ಫಲಮಶ್ನುತೇ ॥ ಅಂದರೆ, ಯಾವನು ಶ್ರೀರುದ್ರಾಧ್ಯಾಯವನ್ನು ಪಠಿಸುತ್ತಾನೋ ಅವನು ಅಗ್ನಿಪೂತನಾಗುವನಲ್ಲದೆ ಸ್ವರ್ಣಸ್ತೇಯ, ಸುರಾಪಾನ ಬ್ರಹ್ಮಹತ್ಯಾ ಕೃತ್ಯಾಕೃತ್ಯಗಳಿಂದಲೂ, ಮಹಾಪಾಪಗಳಿಂದಲೂ ಬಿಡಲ್ಪಟ್ಟವನಾಗಿ ಪುನರ್ಜನ್ಮರಹಿತನಾಗುವನೆಂದು ಬಾವವು

“ ಸ್ತೇಯಂ ಕೃತ್ವಾ ಗುರುದಾರಾಂಶ್ಚ ಗತ್ವಾ ಮದ್ಯಂ ಪೀತ್ವಾ ಬ್ರಹ್ಮಹತ್ಯಾಂ ಚ ಕೃತ್ವಾ ಭಸ್ಮಚ್ಛನ್ನೋ ಭಸ್ಮಶಯ್ಯಾಶಯಾನೋ ರುದ್ರಾಧ್ಯಾಯೀ ಮುಚ್ಯತೇ ಸರ್ವಪಾಪೈಃ ॥ ಅಂದರೆ ಚೋರತನ, ಗುರುಪತ್ನೀಗಮನ, ಮದ್ಯಪಾನ, ಬ್ರಹ್ಮಹತ್ಯಾದಿಮಹಾಪಾತಕಗಳನ್ನು ಮಾಡಿದವನಾದರೂ, ಭಸ್ಮಲೇಪಿತ ಶರೀರವುಳ್ಳವನಾಗಿ ಭಸ್ಮಶಯ್ಯೆಯಲ್ಲಿ ಮಲಗುವಂಥವನಾಗಿ, ಶ್ರೀರುದ್ರಾಧ್ಯಾಯವನ್ನು ಜಪಿಸುತ್ತಾನೆಯೋ ಅವನು ಸಮಸ್ತ ಪಾಪಗಳಿಂದ ಬಿಡಲ್ಪಟ್ಟು ಮುಕ್ತಿಯನ್ನು ಹೊಂದುವನು ಇತ್ಯಾದಿಯಾಗಿ ಉಪನಿಷತ್ತುಗಳು ಬೋಧಿಸುತ್ತಿರುವುವು

ಶಿವಗೀತೆಯಲ್ಲಿ— “ ಯಸ್ತು ರುದ್ರಂ ಜಪೇನ್ನಿತ್ಯಂ ಚಿಂತಯೇನ್ಮಾಮನನ್ಯಧೀಃ । ಸ ತೇನೈವ ಚ ದೇಹೇನ ಶಿವಃ ಸಂಜಾಯತೇ ಸ್ವಯಂ ॥ ”

ಸೂತಸಂಹಿತಾ ಯಜ್ಞವೈಭವಖಂಡದ ದಶಮಾಧ್ಯಾಯದಲ್ಲಿ—“ ಗೃಹಸ್ಥೈಶ್ಚ ವನಸ್ಥೈಶ್ಚ ಯತಿಭಿರ್ಬ್ರಹ್ಮಚಾರಿಭಿಃ । ಶತರುದ್ರೀಯಸಂಜ್ಞಸ್ತು ಮಂತ್ರೋ ಜಪ್ಯೋ ಮಹತ್ತರಃ ॥ ಶ್ರೀರುದ್ರಜಾಪೀ ಮುಚ್ಯೇತ ಮಹಾಪಾತಕಪಂಜರಾತ್ । ಸಮ್ಯಗ್ಜ್ಞಾನಂ ಚ ಲಭತೇ ತೇನ ಮುಚ್ಯೇತ ಬಂಧನಾತ್ ।ಅನೇನ ಸದೃಶಂ ಜಪ್ಯಃ ನಾಸ್ತಿ ಸಾ… ಶ್ರುತೌ ಸ್ಮೃತೌ ॥ ” ಇತ್ಯಾದಿಯಾಗಿ ಶ್ರೀರುದ್ರದ ಮಹಿಮೆಯು ಹೇಳಲ್ಪಟ್ಟಿರುವದು

ಬ್ರಹ್ಮೋತ್ತರಖಂಡದಲ್ಲಿ—“ ಶಿವಾತ್ಮಕಂ ಪರಂ ತತ್ವಂ ರುದ್ರಾಧ್ಯಾಯೇ ಪ್ರತಿಷ್ಠಿತಂ । ರುದ್ರಾಧ್ಯಾಯಂ ತತಃ ಪುಂಸಾಂ ಸ್ಮೃತಂ ಕೈವಲ್ಯಸಾಧನಂ ॥ ಯೇ ಮಹಾಪಾತಕೈರ್ಯುಕ್ತಾ ಉಪಪಾತಕಿನಶ್ಚ ಯೇ । ರುದ್ರಾಧ್ಯಾಯಜಪಾತ್ಸದ್ಯಸ್ತೇಽಪಿ ಯಾಂತಿ ಪರಾಂ ಗತಿಂ । ಪೂರ್ವಜನ್ಮಕೃತೈಃ ಪಾಪೈಃ ಜಾಯಂತೇಽಲ್ಪಾಯುಷೋ ನರಾಃ । ತಾನಿ ಪಾಪಾನಿ ನಶ್ಯಂತಿ ರುದ್ರಜಾಪ್ಯವತಾಂ ನೃಣಾಂ ॥ ಕ್ಷೀಣೇಷು ಸರ್ವಪಾಪೇಷು ದೀರ್ಘಮಾಯುರ್ಬಲಂ ಯಶಃ ಆರೋಗ್ಯಂ ಜ್ಞಾನಮೈಶ್ವರ್ಯಂ ವರ್ಧತೇ ಸರ್ವದೇಹಿನಾಂ ॥ ” ಇತ್ಯಾದಿ

ಈ ಪ್ರಕಾರ ಸಕಲಶಾಸ್ತ್ರಸಮ್ಮತವಾದ ಶ್ರೀರುದ್ರಾಧ್ಯಾಯಪೂರ್ವಕ ಮಹಾಭಿಷೇಕವ್ರತವು ಅತ್ಯಂತ ಶ್ರೇಷ್ಠವಾಗಿರುವುದರಿಂದ ಇದನ್ನು ಪ್ರತಿಯೊಬ್ಬನೂ ಸೋಮವಾರ, ಶ್ರಾವಣಮಾಸ, ನವರಾತ್ರಿ, ಶಿವರಾತ್ರಿ, ಪ್ರದೋಷಕಾಲ ಸರ್ವಕಾಲಗಳಲ್ಲಿಯೂ, ಶಾಂತಿಕಾರ್ಯಗಳಲ್ಲಿಯೂ, ತ್ರಿಕರಣಶುದ್ಧವಾದ ಭಕ್ತಿಯಿಂದ ಸದಾಚಾರಸಂಪನ್ನರೂ, ಜಿತೇಂದ್ರಿಯರೂ, ಶಿವತತ್ವಜ್ಞರೂ ಆದ ಸದ್ಗುರುಗಳ ಸನ್ನಿಧಿಯಲ್ಲಿ ನೆರವೇರಿಸಿ, ಇಹಪರಸುಖಭಾಗಿಗಳಾಗಬೇಕೆಂದು ಇಚ್ಛಿಸುತ್ತೇವೆ

ಶ್ರೀಸಿದ್ಧಲಿಂಗೇಶ್ವರ ಪುರಾಣ ಪ್ರಾರಂಭ

ಕೊಟ್ಟೂರು

ಬಳ್ಳಾರಿ ಡಿ॥ ಕೊಟ್ಟೂರು ನಗರದಲ್ಲಿ ಶ್ರೀ॥ ಜಾಗಟಗೇರಿ ಚನ್ನವೀರಪ್ಪಯ್ಯನವರು ಕಟ್ಟಿಸಿರುವ ಭವ್ಯವಾದ ಶ್ರೀರೇಣುಕದೇವಾಲಯದಲ್ಲಿ ಈ ಶ್ರಾವಣಮಾಸದಲ್ಲಿ ಮೊರಬದ ಶ್ರೀಗಂಗಾಧರಶಿವಾಚಾರ್ಯರು ನೂತನವಾಗಿ ರಚಿಸಿರುವ ಲಿಂಗೈಕ್ಯ ಉಜ್ಜಯಿನೀ ಸಿದ್ಧಲಿಂಗಜಗದ್ಗುರುಗಳವರ ಪುರಾಣವು ಬಹು ವೈಭವದಿಂದ ನಡೆಯುತ್ತಿರುವದು ವೇ॥ ಚಿಗಟೇರಿ ಮರುಳಸಿದ್ಧಶಾಸ್ತ್ರಿಗಳವರು ಪುರಾಣವನ್ನು ಬಹು ಮನೋಹರವಾಗಿ ಹೇಳುತ್ತಿರುವರು ಸಂಗೀತ ವಿದ್ವಾನ್ ವೇ॥ ಚನ್ನಬಸವಶಾಸ್ತ್ರಿಗಳವರು ಪುರಾಣ ಮುಗಿದ ಮೇಲೆ ಪ್ರತಿದಿವಸವೂ ಶ್ರೀಸಿದ್ಧಲಿಂಗಜಗದ್ಗುರುಗಳವರು ಮತ್ತು ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಕೂಡಿ ವೀರಶೈವಮತಕ್ಕೂ ಗುರುವರ್ಗಕ್ಕೂ ಮಾಡಿರುವ ಮಹೋಪಕಾರದ ಬಗ್ಗೆ ಭಾಷಣ ಮಾಡುತ್ತಿರುವರು ಈ ಮಹಾಕಾರ್ಯಕ್ಕೆ ಶಾಂತಿಸಮುದ್ರದಂತಿರುವ ಶ್ರೀಮಂತ ಜಾಗಟಗೇರಿ ಚನ್ನಬಸಪ್ಪಯ್ಯನವರ ನಿರ್ಮಲ ಭಕ್ತಿಯೇ ಮೂಲಕಾರಣವಾಗಿದೆ ಜಗದಾಚಾರ್ಯರು ಇವರಿಗೂ ಇವರ ಮನೆಯ ಮಂಡಳಿಗೂ ಸಕಲ ಮಂಗಲಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ

ಪಿ ಯಂ ಮರುಳಾರಾಧ್ಯ
ಕೊಟ್ಟೂರು

ಪಂಚಾಚಾರ್ಯಪ್ರಭಾ.

೧೯೪೭ನೆಯ ಸೆಪ್ಟಂಬರ್ ತಾ॥ ೧ನೇ ಸೋಮವಾರ

ಪಂಚಾಚಾರ್ಯರೂ ಷಟ್‌ಸ್ಥಲಗಳೂ

ವೀರಶೈವಪ್ರಪಂಚದಲ್ಲಿ ಕೆಲವು ಅಜ್ಞ ಜನರು ವೀರಶೈವಸಿದ್ಧಾಂತಗ್ರಂಥವನ್ನರಿಯದ ದೋಷದಿಂದ ವೀರಶೈವಮತಸ್ಥಾಪನಾಚಾರ್ಯರೇ ಬೇರೆಯೆಂತಲೂ, ಷಟ್‌ಸ್ಥಲಸ್ಥಾಪನಾಚಾರ್ಯರೇ ಬೇರೆಯೆಂತಲೂ ಅಲ್ಲಲ್ಲಿ ಪ್ರವಾದವನ್ನು ಹುಟ್ಟಿಸುತ್ತಲಿದ್ದಾರೆ. ಇದರ ಯಥಾರ್ಥ ತತ್ವವನ್ನು ಸರ್ವರೂ ತಿಳಿಯಲೆಂಬುದ್ದೇಶದಿಂದ ಸದ್ಯ ಈ ವಿಷಯವು ಪ್ರತಿಪಾದಿಸಲ್ಪಡುತ್ತದೆ. ಮೊದಲ ಭೂಲೋಕದಲ್ಲಿ "ವೀರಶೈವ" ಎಂಬೀ ನಾಮವನ್ನು ಶ್ರೀಜಗದ್ಗುರು ಪಂಚಾಚಾರ್ಯರೇ ನೆಲೆಗೊಳಿಸಿದರು. ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳೂ, ಅಷ್ಟಾವರಣಗಳೂ, ಪಂಚಾಚಾರಗಳೂ ಈ ಮತದ ಧರ್ಮಗಳಾಗಿರುತ್ತವೆ. ಈ ಧರ್ಮಗಳಲ್ಲಿ ಕೆಲವು ಕ್ರಿಯಾರೂಪಗಳಾಗಿಯೂ ಕೆಲವು ಜ್ಞಾನರೂಪಗಳಾಗಿಯೂ ವಿಭಾಗಿಸಲ್ಪಟ್ಟಿರುತ್ತವೆ. ವೀರಶೈವಮತವಾದರೋ ಕೇವಲ ಕ್ರಿಯಾಪ್ರಧಾನವಾದುದೂ ಅಲ್ಲ, ಕೇವಲ ಜ್ಞಾನಪ್ರಧಾನವಾದುದೂ ಅಲ್ಲ. ಜೀವಾತ್ಮನೆಂಬ ಪಕ್ಷಿಗೆ ಕ್ರಿಯೆಯು ಒಂದು ರೆಕ್ಕೆಯಂತೆಯೂ, ಜ್ಞಾನವು ಮತ್ತೊಂದು ರೆಕ್ಕೆಯಂತೆಯೂ ಇರುತ್ತವೆ. ಪಕ್ಷಿಗೆ ಏಕಕಾಲದಲ್ಲಿ ಎರಡು ರೆಕ್ಕೆಗಳ ಸಹಾಯವಿಲ್ಲದ ಹೋದರೆ ಪ್ರಯಾಣಸಾಮರ್ಥ್ಯವು ಹುಟ್ಟದಂತೆ ಕ್ರಿಯಾಜ್ಞಾನಗಳೆರಡೂ ಇಲ್ಲದಿದ್ದಲ್ಲಿ ಮುಕ್ತಿಯನ್ನು ಪಡೆಯುವ ಸಾಮರ್ಥ್ಯವು ಆತ್ಮನಿಗೆ ಪ್ರಾಪ್ತವಾಗುವುದಿಲ್ಲ. ಆದುದರಿಂದ ಈ ಷಟ್‌ಸ್ಥಲಗಳಲ್ಲಿ ಭಕ್ತ, ಮಾಹೇಶ, ಪ್ರಸಾದಿ ಎಂಬ ಮೂರು ಸ್ಥಲಗಳು ಕ್ರಿಯಾರೂಪಗಳಾಗಿಯೂ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಮೂರು ಸ್ಥಲಗಳು ಜ್ಞಾನರೂಪಗಳಾಗಿಯೂ ಇರುತ್ತವೆ. ಇಂಥ ಷಟ್‌ಸ್ಥಲಗಳೆಂಬ ಜ್ಞಾನಕ್ರಿಯಾದರ್ಮಗಳನ್ನು ಮುಮುಕ್ಷುವಾದ ಪ್ರತಿಯೊಬ್ಬ ವೀರಶೈವನೂ ಅನುಷ್ಠಿಸಲೇಬೇಕಾಗಿರುತ್ತದೆ. ಯಾವನು ಶ್ರೀಗುರುವಿನಿಂದ ಶಿವದೀಕ್ಷಾಪೂರ್ವಕ ಶಿವಲಿಂಗವನ್ನು ಪಡೆದು ಶ್ರೀಗುರುವಿನ ಉಪದೇಶದಂತೆ ಅಷ್ಟಾವರಣನಿಷ್ಠನಾಗಿ ಷಟ್‌ಸ್ಥಲಾಚರಣೆಯಲ್ಲಿ ನಿರತನಾಗಿರುತ್ತಾನೆಯೋ ಅಂಥವನಲ್ಲಿ ವೀರಶೈವ ಎಂಬ ಅಭಿಧಾನವು ಅನ್ವರ್ಥವಾಗುತ್ತದೆ.

ಷಟ್‌ಸ್ಥಲಗಳು ವೀರಶೈವನು ಅನುಷ್ಠಿಸುವ ಧರ್ಮಾಚರಣೆಗಳಾಗಿರುವುದರಿಂದ ಈ ಧರ್ಮಾಚರಣೆಯುಳ್ಳವರೆಲ್ಲರೂ ಷಟ್‌ಸ್ಥಲಸ್ಥಾಪನಾಚಾರ್ಯರೆಂದು ಹೇಳಿಸಿಕೊಳ್ಳಬಹುದು. ಹೀಗೆ ಧರ್ಮಾಚರಣೆಯುಳ್ಳವರೆಲ್ಲರನ್ನೂ ಸ್ಥಾಪನಾಚಾರ್ಯರೆಂದು ಹೇಳುವುದಾದರೆ, ಅನವಸ್ಥಾದೋಷವು ಪ್ರಾಪ್ತವಾಗುವುದಲ್ಲದೆ ಈ ಷಟ್‌ಸ್ಥಲಗಳನ್ನು ಉಪದೇಶಿಸಿದ ಗುರುವಿಗೇನೇ ಗುಟುಕುನೀರು ಕುಡಿಸಿದ ಹಾಗುತ್ತದೆ. ಇಂದು ಕೆಲವರು ಷಟ್‌ಸ್ಥಲಸ್ಥಾಪಕರೆನಿಸಿಕೊಂಡರೆ ಇನ್ನು ಮುಂದೆ ಇದರೊಳಗಿನ ಭಕ್ತಸ್ಥಲಾಚರ್ಯೆಯುಳ್ಳವನು ಭಕ್ತಸ್ಥಲಸ್ಥಾಪನಾಚಾರ್ಯನೆಂತಲೂ, ಮಾಹೇಶಸ್ಥಲಾಚರಣೆಯುಳ್ಳವನು ಮಹೇಶಸ್ಥಲ ಸ್ಥಾಪನಾಚಾರ್ಯನೆಂತಲೂ ಹೇಳಿಸಿಕೊಳ್ಳಲೂ ಬಹುದಾಗಿದೆ. ಇದರಂತೆ ಅಷ್ಟಾವರಣಕ್ಕೂ ಹೇಳಬಹುದು. ಹೀಗಾದರೆ ವೀರಶೈವಮತವು ಬೇಲಿಯಿಲ್ಲದ ಹೊಲದಂತೆ ನಾಶೋನ್ಮುಖವಾಗಲು ಸಂದೇಹವಿಲ್ಲ. ಒಂದು ಮರದಲ್ಲಿ ಶಾಖೋಪಶಾಖೆಗಳೂ ಪಲಪುಷ್ಪಪರ್ಣಾದಿಗಳೂ ಹೇಗೆ ಅಂಗಗಳಾಗಿರುತ್ತವೆಯೋ, ಹಾಗೆಯೇ ಶ್ರೀರೇಣುಕಾದಿ ಭಗವತ್ಪಾದರಿಂದ ಭೂಲೋಕದಲ್ಲಿ ಸ್ಥಾಪಿಸಲ್ಪಟ್ಟ ಈ ವೀರಶೈವವೆಂಬ ಮಹಾವೃಕ್ಷಕ್ಕೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳೆಂಬ ಎಂಟು ಆವರಣಗಳೂ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಗಳೆಂಬ ಷಟ್‌ಸ್ಥಲಗಳೂ, ಪಂಚಾಚಾರಗಳೂ ಅಂಗಗಳಾಗಿರುತ್ತವೆ.

ಪರ್ಣಪುಷ್ಪಶಾಖೋಪಶಾಖೆಗಳೆಂಬ ಅಂಗಗಳಿಂದ ಕೂಡಿದುದಕ್ಕೆ ಮರವೆಂದು ಕರೆಯುವಂತೆಯೂ, ಚರಣಾದ್ಯಂಗಗಳುಳ್ಳವನಿಗೆ ಪುರುಷನೆಂದು ಕರೆಯುವಂತೆಯೂ ಪಂಚಾಚಾರ, ಅಷ್ಟಾವರಣ, ಷಟ್‌ಸ್ಥಲಾದಂಗಗಳುಳ್ಳವನು ನಿಜವಾದ ವೀರಶೈವನೆಂದು ಕರೆಯಲ್ಪಡುವನು. ಹಾಗಿಲ್ಲದೆ ಧರ್ಮಾಚರಣೆಯುಳ್ಳವರೆಲ್ಲರೂ ಸ್ಥಾಪನಾಚಾರ್ಯರೆನಿಸಿಕೊಳ್ಳುತ್ತ ಬಂದರೆ ಶ್ರೀರೇಣುಕಾದಿ ಪೂರ್ವಾಚಾರ್ಯರು ಸಪ್ತಾವಿಪ್ರರಲ್ಲಿ ಶಿವಾಜ್ಞೆಯಿಂದ ಭೂಮಿಯಲ್ಲಿ ಲಿಂಗವನ್ನೊಡೆದು ಅವತರಿಸಿ ಷಟ್‌ಸ್ಥಲಾದ್ಯಂಗಗಳುಳ್ಳ ಈ ವೀರಶೈವಮತವನ್ನು ಸ್ಥಾಪನೆಗೊಳಿಸಿದುದಕ್ಕೆ ಪ್ರಯೋಜನವೇ ಇಲ್ಲದಂತಾಗುವುದು. ಈ ಜಗತ್ತಿನಲ್ಲಿ ಬೌದ್ಧ, ಕ್ರೈಸ್ತ, ಸಾತ್ವಿಕ ವೈಷ್ಣವ, ಶ್ರೀವೈಷ್ಣವಾದ್ಯನಂತ ಮತಗಳುಂಟು. ಆಯಾ ಮತದವರು ತಮ್ಮ ತಮ್ಮ ಮೂಲಗುರುಗಳಿಂದ ಹೇಳಲ್ಪಟ್ಟ ಮತಧರ್ಮಗಳನ್ನು ಎಷ್ಟು ಎಷ್ಟು ವಿಶೇಷ ರೀತಿಯಿಂದ ಆಚರಿಸುತ್ತ ಬರುತ್ತಾರೆಯೋ ಅಷ್ಟು ಅಷ್ಟು ಹೆಚ್ಚಾಗಿ ಆ ಮತದ ಮೂಲಗುರುಗಳಲ್ಲಿ ಅವರಿಗೆ ಭಕ್ತಿಯು ಹೆಚ್ಚುತ್ತಹೋಗುವ ವಿಷಯವು ಸರ್ವಮತಗಳಲ್ಲಿಯೂ ಸಂಪ್ರದಾಯಸಿದ್ಧವಾಗಿ ಬಂದಿರುತ್ತದೆ. ಅದ್ವೈತಸಿದ್ಧಿಯುಳ್ಳವನು ಅದ್ವೈತಮತಸ್ಥಾಪನಾಚಾರ್ಯನೆಂದು ಹೇಳಿಕೊಳ್ಳುವುದಿಲ್ಲ. ಬೌದ್ಧಮತಸಿದ್ಧಿಯುಳ್ಳವನು ಬೌದ್ಧಮತಸ್ಥಾಪಕನೆಂದು ಹೇಳಿಕೊಳ್ಳುವುದಿಲ್ಲ. ಹೀಗಿದ್ದರೂ ಇತ್ತೀಚೆಗೆ ಈ ಮತದಲ್ಲಿ ಮಾತ್ರ ಷಟ್‌ಸ್ಥಲಗಳ ಸಿದ್ಧಿಯಿದ್ದರೂ ಇಲ್ಲದಿದ್ದರೂ ದೊಡ್ಡ ದೊಡ್ಡ ಮಠಾಧಿಕಾರಿಗಳ ಪಾತ್ರದಿಂದ ಷಟ್‌ಸ್ಥಲಸಿದ್ಧಿಯುಂಟಾಯಿತೆಂಬ ಭಾವದಿಂದೊಡಗೂಡಿ ಷಟ್‌ಸ್ಥಲಸ್ಥಾಪನಾಚಾರ್ಯರೆಂದು ಹೇಳಿಕೊಳ್ಳುತ್ತಿರುವರು. ಇದು ಅವರಿಗೆ ಎಷ್ಟು ಭೂಷಣವೆಂಬುದನ್ನು ವಾಚಕರೇ ಊಹಿಸಬೇಕಾಗಿದೆ. ಸ್ವತಂತ್ರ ಪ್ರವೃತ್ತಿಯುಳ್ಳ ಆಸ್ತಿಕ ಜನಗಳಿಗೆ ಇದು ಉಚಿತವಾದ ಮಾರ್ಗವಲ್ಲ. ತಂದೆಯು ಗಳಿಸಿದ ಹಣದಿಂದ ತಾನು ಸುಖಪಟ್ಟು ತಂದೆಯಲ್ಲಿ ಭಕ್ತಿಯುಳ್ಳವನಾಗಿರುವುದೇ ಮಗನ ಕರ್ತವ್ಯವಾಗಿರುವಂತೆ ಮತಸ್ಥಾಪನಾಚಾರ್ಯರಾದ ಶ್ರೀರೇಣುಕಾದ್ಯಾಚಾರ್ಯರು ದೀಕ್ಷಾಪೂರ್ವಕವಾಗಿ ಅನುಗ್ರಹಿಸಿರುವ ಷಟ್‌ಸ್ಥಲ, ಅಷ್ಟಾವರಣಗಳೆಂಬ ಧನದಿಂದ ವೀರಶೈವಮತದಲ್ಲಿ ಮಕ್ಕಳಂತಿರುವ ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ, ಸನ್ಯಾಸಿ (ನಿರಾಭಾರಿ) ಯಾಗಲಿ ಎಲ್ಲರೂ ಭಕ್ತಿಯನ್ನಿಟ್ಟು ಜನನ ಮರಣರೂಪವಾದ ಮಹಾದುಃಖವನ್ನು ಪರಿಹರಿಸಿಕೊಂಡು ಅನಿರತ ಶಿವಾನಂದವನ್ನು ಪಡೆದು 'ನಗುರೋರಧಿಕಂ' ಎಂಬ ಶಿವಾಜ್ಞೆಯನ್ನು ಪಾಲಿಸಿ ಆಚಾರ್ಯಭಗವತ್ಪಾದರ ಕೃಪೆಗೆ ಪಾತ್ರರಾಗಲೆಂದು ಹಾರೈಸುತ್ತೇವೆ.

ಪಂಜಾಬಿನ ಉಗ್ರಪರಿಸ್ಥಿತಿಯು ಬಗ್ಗೆ ನೆಹರೂ ಅವರ ಹೇಳಿಕೆ

ಪಂಜಾಬಿನ ಪರಿಸ್ಥಿತಿ ಅತ್ಯುಗ್ರವಾಗಿದೆ. ಆದರೆ ಅದನ್ನು ಬಗೆಹರಿಸುವ ಕಾರ್ಯ ಸರ್ಕಾರಕ್ಕೆ ಸೇರಿದ್ದೇ ಹೊರತು ಖಾಸಗೀ ಜನರಿಗೆ ಸೇರಿಲ್ಲ.

ನಮ್ಮ ನಾಡಿನಲ್ಲಿ ಶಾಂತಿ ಶಿಸ್ತು ಮೊದಲು ಏರ್ಪಡಬೇಕು. ಆಗ ಮಾತ್ರವೇ ನಮ್ಮ ನಾಡಿನ ಹೊರಗೆ ಇರುವ ನಮ್ಮ ದೇಶಬಾಂಧವರನ್ನು ರಕ್ಷಿಸಲು ಸಹಾಯ ನೀಡಲು ಸಾಧ್ಯ.

ಖಾಸಗೀ ಜನರೇ ಪರಸ್ಪರ ಮುಯ್ಯಿಗೆ ಮುಯ್ಯಿ ತೀರಿಸಲು ಸ್ಪರ್ಧೆಗೆ ನಿಂತರೆ ನಾವಾರನ್ನು ರಕ್ಷಿಸಬೇಕೆಂದಿರುವೆವೋ ಅವರ ರಕ್ಷಣೆ ದುಸ್ಸಾಧ್ಯವಾಗುವುದು ಎಂದು ಮಹಾ ಪ್ರಧಾನಿ ಪಂಡಿತ ನೆಹರೂ ಅವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಪಂಡಿತ ನೆಹರೂರವರು ಪತ್ರಿಕಾ ಕೂಟದಲ್ಲಿ ಪಂಜಾಬಿನಾದ್ಯಂತವೂ ನಡೆಯುತ್ತಿರುವ ಅಮಾನುಷವಾದ ಹತ್ಯಾಕಾಂಡವನ್ನು ವಿವರಿಸುತ್ತಾ ಇದಕ್ಕೆ ಕಾರಣರಾದವರನ್ನು ಖಂಡಿಸಿದರು.

ಪತ್ರಿಕೆಗಳು ಮತ್ತು ಸಾರ್ವಜನಿಕರಲ್ಲಿ ಮನವಿ

ಪ್ರತಿಕೆಗಳು ಮತ್ತು ಸಾರ್ವಜನಿಕರು ಈಗಾಗಲೇ ಹದಗೆಟ್ಟಿರುವ ಪರಿಸ್ಥಿತಿ ಮತ್ತಷ್ಟು ಉಲ್ಬಣವಾಗುವ ಯಾವ ಮಾತನ್ನೂ ಪರೋಕ್ಷವಾಗಿ ಕೂಡ ಬಳಸದೆ ದೇಶದ ನೆಮ್ಮದಿಯನ್ನು ಕಾಪಾಡುವುದಾವಶ್ಯಕ ಎಂದು ಪ್ರಾರ್ಥಿಸಿದರು.

ಪಾಕಿಸ್ತಾನದ ಪ್ರಮುಖರು ತಮ್ಮ ತಲೆಯನ್ನು ಕೆಡಿಸಿಕೊಳ್ಳದೆ ಜವಾಬ್ದಾರಿಯಿಂದ ಭಾಷಣಗಳನ್ನು ಮಾಡಬೇಕೆಂದೂ ಹಾಗೆ ಮಾಡದಿದ್ದರೆ ಮುಯ್ಯಿಗೆ ಮುಯ್ಯಿ ತೀರಿಸುವುದು ಅಖಂಡವಾಗಿ ಬೆಳೆಯಲವಕಾಶವಾಗುವುದೆಂದೂ ಸ್ಪಷ್ಟ ಎಚ್ಚರಿಕೆಯನ್ನಿತ್ತರು.

ಪಶ್ಚಿಮ ಪಂಜಾಬಿನಲ್ಲಿ ಸುದ್ದಿಗಳ ಬ್ಲಾಕ್ ಔಟ್

ಈ ಕೂಡಲೇ ಆಗಬೇಕಾಗಿರುವ ಕಾರ್ಯವೆಂದರೆ ಪಶ್ಚಿಮ ಪಂಜಾಬಿನ ಅಲ್ಪ ಸಂಖ್ಯಾತರನ್ನು ಸುರಕ್ಷಿತವಾಗಿ ಅಲ್ಲಿಂದ ಸಾಗಿಸುವುದಾಗಿದೆ. ಇದು ಸಾಧ್ಯವಾಗಬೇಕಾದರೆ ನಮ್ಮ ನಾಡಿನಲ್ಲೂ (ಇಂಡಿಯಾ) ಶಾಂತಿ ಶಿಸ್ತು ನೆಲೆಗೊಂಡಿರುವುದಾವಶ್ಯಕ. ಪೂರ್ವ ಪಂಜಾಬು ಸರ್ಕಾರ ಸ್ಥಾಪನೆಯಾಗಿ ಇನ್ನೂ ಎರಡು ವಾರ ಆಗಿಲ್ಲ. ಅದು ಪ್ರತಿಯೊಂದನ್ನೂ ಮೊದಲಿಂದ ಆರಂಭಿಸಬೇಕಾಗಿದೆ. ಅಲ್ಲದೆ ಹಿಂದೆ ಲಾಹೋರು ಆ ಪ್ರಾಂತ್ಯದ ಪ್ರತಿಯೊಂದು ವಾರ್ತಾವ್ಯವಸ್ಥೆಯ ಕೇಂದ್ರವಾಗಿತ್ತು. ಆದರೆ ಆಗಸ್ಟು ೧೫ರಿಂದ ಅದರ ಸಂಬಂಧವೇ ಕಡಿದುಹೋಗಿದೆ ಎಂದು ತಿಳಿಸಿದರು.

ಲಾಹೋರು ಸರ್ಕಾರ ಸಹಕಾರ ನೀಡದಿರುವುದೇ ಇದಕ್ಕೆ ಕಾರಣ. ಮುಖ್ಯವಾಗಿ ಪಶ್ಚಿಮ ಪಂಜಾಬಿನ ಸುದ್ದಿಗಳೊಂದೂ ತಲಪದೆ ಅದೆಲ್ಲವೂ ಬ್ಲಾಕ್‌ಔಟ್ ಆಗಿವೆ.

ಈ ಕಾರಣಗಳಿಂದ ಗಲಭೆ ಪ್ರದೇಶಗಳಲ್ಲಿರುವ ಅಧಿಕಾರಿಗಳಿಗೆ ಸರ್ಕಾರದ ಆಜ್ಞೆಗಳು ತಲಪುವುದು ದುಸ್ತರವಾಗಿದೆ. ಹೀಗಿರಲು ಜನ ಮತ್ತು ಆಸ್ತಿ ಪಾಸ್ತಿಗಳ ನಷ್ಟವೆಷ್ಟಾಗಿದೆ ಎಂಬುದನ್ನು ತಿಳಿಯುವುದೂ ಸಹ ಕಷ್ಟವಾಗಿದೆ. ಆದರೆ ಈಗ ಬಂದಿರುವ ವರದಿಗಳ ರೀತ್ಯಾ ಅಲ್ಲಿಯ ಪರಿಸ್ಥಿತಿ ಕಳವಳಕರವಾಗಿದೆ. ಷೇಕ್‌ಪುರ, ಸಿಯಾಲ್‌ಕೋಟೆ ಜಂಗ್‌ಗಳಲ್ಲಿ ನಡೆದ ದುರಂತ ಘಟನೆಗಳ ವರದಿ ಉತ್ಪ್ರೇಕ್ಷೆ ಎನ್ನುವುದಾದರೂ, ಬಹುಸಂಖ್ಯೆಯ ಜನರ ಕೊಲೆಯಾಗಿರುವುದು ನಿರ್ವಿವಾದವಾದುದು ಎಂದು ತಿಳಿಸಿದರು.

ಎರಡು ಪ್ರಾಂತಗಳಲ್ಲೂ ಅಮಾನುಷ ಕೃತ್ಯಗಳು ನಡೆದಿವೆ. ಆದರೆ ಪೂರ್ವ ಪಂಜಾಬಿನಲ್ಲಿ ಮುಖ್ಯವಾಗಿ ಅಮೃತಸರ, ಜಲಂದರ್, ಗುರುದಾಸಪುರ ಮತ್ತು ಲಯಲಾಪುರ ಜಿಲ್ಲೆಗಳಲ್ಲಿ ಶಾಂತಿ ನೆಲೆಗೊಂಡಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಸಶಸ್ತ್ರ, ಗಲಭೆಗಾರರ ಕಾಟ ಇನ್ನೂ ತಪ್ಪಿಲ್ಲ.

ನಿರಾಶ್ರಿತರ ಸಾಗಾಣಿಕೆಗೆ ಮೊದಲು ಗಮನ

ನಿರಾಶ್ರಿತರ ಪರಿಹಾರ ಯೋಜನೆಯನ್ನು ಪ್ರಸ್ತಾಪಿಸುತ್ತಾ, ರೈಲು ರಸ್ತೆ ಮತ್ತು ವಿಮಾನಗಳಲ್ಲಿ ನಿರಾಶ್ರಿತರ ಸಾಗಾಣಿಕೆಗೆ ಮೊದಲು ಗಮನಕೊಡಲಾಗುತ್ತಿದೆ ಎಂದು ತಿಳಿಸಿದರು. ಪಶ್ಚಿಮ ಪಂಜಾಬು ಸರ್ಕಾರದ ಸಹಕಾರವಿಲ್ಲದೆ ಇದು ಕೈಗೂಡುವುದು ಕಷ್ಟವಾದ ಪ್ರಯುಕ್ತ ನಿರಾಶ್ರಿತರನ್ನು ಸಂಪೂರ್ಣವಾಗಿ ಸಾಗಿಸಲು ಕೊಂಚ ತಡವಾಗಬಹುದು ಎಂದು ಸೂಚಿಸಿದರು.

ಪಶ್ಚಿಮ ಪಂಜಾಬಿನಿಂದ ನಿರಾಶ್ರಿತರನ್ನು ಸಾಗಿಸುವ ಇಂಡಿಯಾ ಸರ್ಕಾರದ ಯೋಜನೆಗೆ ಪಾಕಿಸ್ಥಾನ ಸರ್ಕಾರದ ಸಮ್ಮತಿ ದೊರೆತಿಲ್ಲ. ಆದರೆ ಇದು ಇಷ್ಟರಲ್ಲೇ ದೊರೆಯುವ ನಿರೀಕ್ಷೆ ಇದೆ. ಏತನ್ಮಧ್ಯೆ ನಿರಾಶ್ರಿತರನ್ನು ಸೈನಿಕರ ಕಾವಲಿನಲ್ಲಿ ಸಾಗಿಸಲು ಏರ್ಪಾಡು ಮಾಡಲಾಗುತ್ತಿದೆ.

ಪಂಜಾಬಿನಲ್ಲಿ ಶಾಂತಿ ನೆಲೆಗೊಳಿಸಲು ಗಡಿರಕ್ಷಣ ಸೈನ್ಯಪಡೆಯನ್ನು ವ್ಯವಸ್ಥೆಗೊಳಿಸುವ ವಿಚಾರ ತೀವ್ರಾಲೋಚನೆಯಲ್ಲಿದೆ. ಪ್ರತಿ ಡೊಮಿನಿಯನ್ನೂ ಸಾಧ್ಯವಾದ ಮಟ್ಟಿಗೆ ಶೀಘ್ರ ತನ್ನ ಗಡಿಯ ಜವಾಬ್ದಾರಿವಹಿಸುವಂತಾಗುವುದೇ ತಮ್ಮ ಉದ್ದೇಶವೆಂದರು.

ಪಂಜಾಬಿನ ಇಂದಿನ ದುಸ್ಥಿತಿಗೆ ಅಲ್ಲಿ ಒಂದು ವರ್ಷದಿಂದೀಚೆಗೆ ಏರ್ಪಟ್ಟಿದ್ದ ೯೩ನೇ ಸೆಕ್ಷನ್ ಪ್ರಕಾರದ ಆಡಳಿತ ಪರಿಣಾಮವೇ ಎಂಬುದನ್ನಾರೂ ಮರೆಯಲಾಗದು. ನಾವಿಂದು ಕಡುಕಷ್ಟವನ್ನೆದುರಿಸಬೇಕಾಗಿದೆ. ಅವುಗಳನ್ನು ಧೈರ್ಯವಾಗಿ ಎದುರಿಸದೆ ಬಿಡುವಂತಿಲ್ಲ. ಇಂದಿನ ಉಗ್ರಪರಿಸ್ಥಿತಿ ಮಿಲಿಟರಿ ದೃಷ್ಟಿಯಿಂದ ಉಗ್ರವಾಗಿ ಕಾಣುತ್ತಿಲ್ಲ. ಅದು ಭಾರತದ ಜನಜೀವನದಲ್ಲಿ ಉಂಟುಮಾಡಿರುವ ಕಹಿ ಮನೋಭಾವದ ದೃಷ್ಟಿಯಿಂದ

ವಾಗಿದೆ ಎನ್ನಬೇಕಾಗುವುದು ಈ ಪರಿಸ್ಥಿತಿ ಎಷ್ಟು ೋ ಹೀಗಿರುವುದೇ ತಿಳಿಯದು ಆದರೆ ನಾವು ್ಸೇಗಗೊಂಡು ನಮ್ಮ ತಲೆಯನ್ನು ಕೆಡಿಸಿಕೊಳ್ಳದೆ ೇಕದಿಂದ ವರ್ತಿಸಿದರೆ ಈ ದುರಂತದ ನಿರೀಕ್ಷಣೆ ಶ ಮೊದಲೇ ಪಾರಾಗಬಹುದು ಎಂದು ನಂಬಿದ್ದೇವೆ ದು ತಿಳಿಸಿದರು

ಕಲ್ಕತ್ತ ರೈಲ್ವೆ ಅಪಘಾತ

೨೩ ನೇ ತಾ|| ರಾತ್ರಿ ೧೧ ಗಂಟೆ ಸಮಯದಲ್ಲಿ ತ್ತಾಕ್ಕೆ ೩೫ ಮೈಲಿ ದೂರವಿರುವ ಕೊಲಾಘಾಟ್ ಬಂಗಾಳ ನಾಗಪುರ ರೈಲ್ವೆ ಅನಾಹುತವು ಸಂಭವಿ ು ಈ ಸಂದರ್ಭದಲ್ಲಿ ೩೩ ಮಂದಿ ಸತ್ತರು ೧೧೮ ಂದಿಗೆ ಗಾಯಗಳಾಗಿವೆ

ಅಶಾಂತಿಯನ್ನೆದುರಿಸಲು ಮೈಸೂರು ಸರ್ಕಾರದ ಸಿದ್ಧತೆ

ಕರ್ಫ್ಯೂ ಉಲ್ಲಂಘಿಸಿದರೆ ಗುಂಡಿನೇಟು

ಮೈಸೂರು ದೇಶದಲ್ಲಿ ಉಗ್ರಗಲಭೆಗಳು ಮತ್ತು ತಿಬಂಧಕಾಜ್ಞೆಗಳನ್ನು ಮುರಿಯುವ ಆಕ್ರಮ ಕಾರ್ಯ ಮಗಳು ನಡೆದರೆ ಅವುಗಳನ್ನು ತಹಬಂದಿಗೆ ತಂದು ಂತಿಪರಿಪಾಲನೆ ಮಾಡುವುದಕ್ಕಾಗಿ ಮೈಸೂರು ಸರ್ಕಾ ರವರು ೨೮ ನೇ ತಾ||ನಿಂದ ಕ್ರಿಮಿನಲ್ ಲಾ ಅಮೆಂಡ್ ಂಟ್ ಆಕ್ಟನ್ನು ಆಚರಣೆಗೆ ತಂದಿದ್ದಾರೆ

ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಗಳು ಮತ್ತು ್ಟು ಕಾಯಿದೆಗಳಿಂದ ಸಾಮಾನ್ಯ ಪರಿಸ್ಥಿತಿಯಲ್ಲಿ ಂತಿ ಪರಿಪಾಲನೆಮಾಡಲು ಸಾಧ್ಯವಿದ್ದಾಗ್ಯೂ, ವಿಶೇಷ ರಿಸ್ಥಿತಿಯಲ್ಲಿ ಅದು ಪೂರ್ಣವಾಗಿ ಸಾಲದೆ ಹೋಗುವು ಂದೂ ಈ ಎಮರ್ಜೆನ್ಸಿ ಶಾಸನವನ್ನು ಭಾರತದ ಇತರ ್ರಾಂತ್ಯಗಳಲ್ಲಿ ವಿಶೇಷ ಶಾಸನವನ್ನು ಜಾರಿಗೆ ತರ ವಂ ಯೇ ಇಲ್ಲಿಯೂ ಜಾರಿಮಾಡಲಾಗಿದೆಯೆಂದೂ ಸರ್ಕಾ ದ ಶ್ರೀಫ್ಸ ಕಾರ್ಯದರ್ಶಿಗಳು ಒಂದು ಪ್ರಕಟನೆ ೊರಡಿಸಿದ್ದಾರೆ

ಅನಧಿಕಾರಯುತವಾಗಿ ಯೂನಿಫಾರಂಗಳನ್ನು ಧರಿ ಸುವುದು, ಆಸ್ಫೋಟಕ ವಸ್ತುಗಳನ್ನು ಪಡೆದಿರುವುದು ಕ್ರಮವಾಗಿ ಪಡೆಗಳನ್ನು ತರಪೇತು ಮಾಡುವುದು ಮುಂತಾದುವುಗಳನ್ನು ನಿಷೇಧಿಸಬಹುದು ಕರ್ಫ್ಯೂ ಅಧಿಕಾರಬಲವನ್ನು ಮತ್ತಷ್ಟು ವಿಸ್ತಾರಗೊಳಿಸಬಹುದು

ಜನತೆಯ ಮನಸ್ಸನ್ನು ಉದ್ರೇಕಗೊಳಿಸುವಂತಹ ಅನಧಿಕೃತ ವಿಷಯಗಳನ್ನು ಪ್ರಕಟಿಸಿದ ಸಂದರ್ಭದಲ್ಲಿ ೆ ಸುದ್ದಿಗಳನ್ನು ಮೊದಲು ಪರಿಶೀಲಿಸುವುದಕ್ಕೆ ಈ ಶಾಸನದಲ್ಲಿ ಅಧಿಕಾರಕೊಡಲಾಗಿದೆ

ಭವನಗಳಿಗೂ, ಮನೆಗಳಿಗೂ, ಆಸ್ತಿಪಾಸ್ತಿಗಳಿಗೂ, ಯಂತ್ರಗಳಿಗೂ, ರೈಲ್ವೆ ಲೈನುಗಳಿಗೂ ನಷ್ಟವನ್ನುಂಟು ಮಾಡುವುದಾದರೆ ಅಂತಹ ಕೃತ್ಯವು ಅಪರಾಧವೆಂದು ಪರಿಗಣಿಸಲ್ಪಡುವುದು

ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸುವವರನ್ನು ಇದು ವರೆಗೂ ಬಂಧಿಸಿ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸ ಲಾಗುತ್ತಿತ್ತು ಆದರೆ ಹೊಸ ಎಮರ್ಜೆನ್ಸಿ ಶಾಸನ ಬಲ ದಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೆಚ್ಚು ಅಧಿಕಾರವನ್ನು ಚಲಾಯಿಸಬಹುದು ಒಬ್ಬ ಪೋಲೀಸ್ ಅಧಿಕಾರಿಗೆ ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸುವವರ ಮೇಲೆ ಬಲ ಪ್ರಯೋಗ ಮಾಡುವ ಅಧಿಕಾರವನ್ನೂ ಕಡೆಗೆ ಗುಂಡು ಹಾರಿಸಿ ಕೊಲ್ಲುವ ಅಧಿಕಾರವನ್ನೂ ಕೊಡಬಹುದು

ಈ ವಿಶೇಷ ಶಾಸನವನ್ನು ವಿಶೇಷ ಪರಿಸ್ಥಿತಿಯಲ್ಲೇ ಉಪಯೋಗಿಸಲಾಗುವುದು ಅಂತಹ ವಿಶೇಷ ಪರಿಸ್ಥಿತಿ ಸನ್ನಿಹಿತವಾದರೆ ಸರ್ಕಾರವು ಪರಿಸ್ಥಿತಿಯ ಬಗ್ಗೆ ಒಂದು ಘೋಷಣೆ ಹೊರಡಿಸುತ್ತದೆ ಆಗ ಮಾತ್ರ ಈ ವಿಶೇಷ ಶಾಸನ ಜಾರಿಯಲ್ಲಿರುತ್ತೆಂದು ತಿಳಿಯಬೇಕು

ಶಾಂತಿ ಪಾಲನೆಮಾಡುವುದಕ್ಕೆ ಮಾತ್ರ ಈ ಶಾಸನವು ಅತ್ಯಗತ್ಯವಾಗಿ ಬೇಕೆಂಬುದು ಸರಕಾರಕ್ಕೆ ಕಂಡುಬಂದರೆ ಆಗ ಮಾತ್ರ ಈ ಘೋಷಣೆಯನ್ನು ಹೊರಡಿಸಲಾಗು ವುದು. ಈ ವಿಶೇಷ ಶಾಸನವನ್ನು ಆಚರಣೆಗೆ ತರುವ ಪ್ರಸಂಗ ಬಾರದಿರಲೆಂದು ಸರ್ಕಾರದವರು ಹಾರೈಸಿದ್ದಾರೆ

ನೂತನ ಸುಧಾರಣೆಗಳ ಬಗ್ಗೆ ದಿವಾನರ ಹೇಳಿಕೆ

ಮಹಾಜನಗಳು ತಾಳ್ಮೆಯಿಂದಿರಬೇಕು

ಮೈಸೂರು ಸಂಸ್ಥಾನದ ದಿವಾನರವರು ದೆಹಲಿ ಯಿಂದ ಬಂದಕೂಡಲೆ ಒಂದು ಹೇಳಿಕೆಯಿತ್ತಿದ್ದಾರೆ

"ಭಾರತ ರಾಜ್ಯಾಂಗ ಮತ್ತು ಮೈಸೂರಿನ ಮುನ್ನಡೆಯ ಬಗ್ಗೆ ಭಾರತದ ನಾಯಕರೊಡನೆ ಪರ್ಯಾಲೋಚನೆ ನಡೆಸಿ ನಾನು ಈಗತಾನೇ ಒಂದಿದ್ದೇನೆ ಮೈಸೂರಲ್ಲಿ ಸುಧಾರಣೆಗಳಾಗಬೇಕೆಂಬ ಬಗ್ಗೆ ಯಾರೂ ಪ್ರತಿ ಹೇಳುವಂತಿಲ್ಲ ಆದರೆ ಮೇಲ್ಕಂಡ ಮುಖ್ಯ ಕಾರಣದಿಂದ ಈ ಕಾರ್ಯವು ತಡವಾಗಿದೆಯಲ್ಲದೆ ಉದ್ದೇಶಪೂರ್ವಕವಾಗಿ ಕಾಲಹರಣ ಮಾಡುತ್ತಿಲ್ಲ ಸುಧಾರಣಾ ಸಲಹಾ ಸಮಿತಿಯು ಮತ್ತೆ ಶೀಘ್ರದಲ್ಲೇ ಸೇರಲಿದೆ ಕಾಂಗ್ರೆಸ್ಸಿನವರೂ ಅದರಲ್ಲಿ ಭಾಗವಹಿಸಿದರೆ ಪ್ರಭುಗಳ ಅಪೇಕ್ಷೆಯಂತೆ ನಾಡಿನ ಸಮಸ್ತ ಪಕ್ಷ ಪಂಗಡದವರಿಗೂ ಸಮ್ಮತವಾದ ಸುಧಾರಣೆಗಳನ್ನು ರೂಪಿಸಬಹುದು ಸೆಪ್ಟೆಂಬರ್ ತಿಂಗಳೊಳಗಾಗಿ ಸಮಿತಿಯ ಮತ್ತು ನನ್ನ ಸಲಹೆಗಳನ್ನು ಪ್ರಭುಗಳಿಗೆ ಒಪ್ಪಿಸುತ್ತೇನೆ ಅಕ್ಟೋಬರ್ ತಿಂಗಳಾದಿಯಲ್ಲಿ ಪ್ರಭುಗಳ ಆಜ್ಞೆ ಹೊರಡುವುದಾಗಿದೆ

ಆದುದರಿಂದ ಮಹಾಜನರು ತಾಳ್ಮೆಯಿಂದಿರಬೇಕು ಸಂಸ್ಥಾನದಲ್ಲಿ ಪರಿಸ್ಥಿತಿಯನ್ನು ಹದಗೆಡಿಸುವಂಥ ಎಷ್ಟೋ ಸನ್ನಿವೇಶಗಳಿವೆ ಅವುಗಳಲ್ಲಿ ಯಾವುದೊಂದು ಹತೋಟಿ ವಿಾರಿದರೂ ಅದರ ದುಷ್ಪರಿಣಾಮವನ್ನು ತಡೆಗಟ್ಟುವುದು ಕಷ್ಟವಾಗುತ್ತದೆ ಮೈಸೂರು ಜನತೆಯು ಈ ಬಗ್ಗೆ ವಿಚಾರಮಾಡಿ ದೇಶದ ಶಾಂತ ವಾತಾವರಣವು ಕಲಕದಂತೆಯೂ ಪರಿಸ್ಥಿತಿಯು ಹದಗೆಡದಂತೆಯೂ ಸಹಕರಿಸಬೇಕೆಂದು ಪ್ರಾರ್ಥಿಸುತ್ತೇನೆ

[ಅಪಾರಾಭಾವದಂಥ ಇಂತಹ ಕಷ್ಟಕಾಲದಲ್ಲಿ ಕಾಂಗ್ರೆಸ್ಸಿನವರು ನಿಜವಾಗಿಯೂ ದೇಶಕ್ಕೆ ಕ್ಷೇಮವನ್ನು ಬಯಸುವವರಾಗಿದ್ದರೆ ದಿವಾನರವರ ಸಲಹೆಯಂತೆ ನಡೆಯಬೇಕು ಅಂದರೆ ದೇಶಕ್ಕೆ ಕ್ಷೇಮ! ಹಾಗೆ ಮಾಡದ ತಮ್ಮ ಹಟವನ್ನೇ ಸಾಧಿಸಿದರೆ ಯಾರಿಗೂ ಸುಖವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಯೆ • ಇಲ್ಲ ಸಂ]

ಹಾರನಹಳ್ಳಿ

ಶಿವಮೊಗ್ಗಾ ಡಿ। ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸಗೃಹದಲ್ಲಿ ಇದೇ ನಿಜಶ್ರಾವಣ ಶುದ್ಧ ೪, (ತಾ' 20 8 47) ಬುಧವಾರ ಪ್ರಾತಃಕಾಲ ಶ್ರೀಭಗವತ್ಪಾದರವರ ಭಾವಚಿತ್ರವನ್ನು ತಳಿರು ತೋರಣ, ಪುಷ್ಪ ಗುಚ್ಛಗಳಿಂದಲಂಕೃತವಾದ ಭವ್ಯಮಂಟಪದಲ್ಲಿ ಮೂರ್ತಗೊಳಿಸಿ, ವಿಧ್ಯುಕ್ತವಾಗಿ ಪೂಜಿಸಿ, ವಂದಿಸಿ, ನುತಿಸಿ, ಸ್ವವಿರಚಿತ ಮಹಾಗುರು ಮಂಗಲಪದ್ಯಮಂ ಪಾಡಿ, ಕೊಂಡಾಡಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ ಮಧ್ಯಾಹ್ನ ಸಂತರ್ಪಣೆಯು ನಡೆಯಿತು ಸಾಯಂಕಾಲ ಜಗತ್ಪೂಜ್ಯರು ತಮ್ಮ ಜೀವಿತಕಾಲದಲ್ಲಿ ನಡೆಸಿದ ಮಹತ್ಕಾರ್ಯಗಳನ್ನು ವಿವರಿಸಿ, ಅವರ ವರ್ಣನಾತೀತವಾದ ಸಮ್ಗುಣಕೀರ್ತಿಗಾನವನ್ನು ಮಾಡುತ್ತಿರುವಾಗ ಸರ್ವರೂ ದುಃಖಭರಿತರಾಗಿ ಮಹಾಚಾರ್ಯರಲ್ಲಿಟ್ಟಿದ್ದ ತಮ್ಮ ನೈಜಭಕ್ತಿಯನ್ನು ವ್ಯಕ್ತಗೊಳಿಸಿದ ತರುವಾಯ ಶ್ರೀಗುರು ಸಾರ್ವಭೌಮರ ಭಾವಚಿತ್ರಕ್ಕೆ ಮಹಾಮಂಗಳಾರತಿಯಾಗಿ ಜಯಘೋಷದೊಡನೆ ಸಭೆಯು ವಿರಮಿಸಲ್ಪಟ್ಟಿತು

ಓರ್ವ ಗುರುಪಾದಕಿಂಕರ.

ಹನಮಸಾಗರ

ತಾ|| ೨೧-೮-೪೭ ಕ್ಕೆ ಇಲ್ಲಿಯ ಶ್ರೀಕರಿಸಿದ್ಧೇಶ್ವರ ಜನರಲ್ ಲೈಬ್ರರಿಯಲ್ಲಿ ವೇ|| ಜಿ ಎಸ್ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ವಾಚನಾಲಯದ ಕಾರ್ಯಕರ್ತರ ಸಭೆ ಸೇರಿತ್ತು. ಸರ್ವಾನುಮತದಿಂದ ಕೆಳಗೆ ಬರೆದ ಪ್ರಕಾರ ವಾಚನಾಲಯದ ೧೧ ನೇಯ ವರ್ಷದ ಕಾರ್ಯ ನಿರ್ವಾಹಕಸಮಿಯನ್ನು ರಚಿಸಲಾಯಿತು

ಅಧ್ಯಕ್ಷರು ಶ್ರೀನೀಲಕಂಠಪ್ಪ ಡಿಪೂ

ಕಾರ್ಯದರ್ಶಿ ಶ್ರೀಸಿದ್ಧರಾಮಪ್ಪ ಮುಧೋಳ

ಸದಸ್ಯರು ಶಿವರುದ್ರಪ್ಪ ರಂಜಣಗಿ, ಈಶ್ವರಪ್ಪ ಚಿನಿವಾಲರ ಮೊದಲಾದ ೨೩ ಜನ ಸದಸ್ಯರು.

ಇದಾದ ಮೇಲೆ ವೇ|| ಶಿವಲಿಂಗಯ್ಯನವರು ಹಿರೇಮಠ ಕುಷ್ಟಗಿ ಮತ್ತು ಶಿವರುದ್ರಪ್ಪ ರಂಜಣಗಿ ಇವರು ಜನರಲ್ಲಿ ವಾಚನಾಭಿರುಚಿ ಹೆಚ್ಚಿಸುವಿಕೆ ಮತ್ತು ವಾಚನಾಲಯದ ಪ್ರಗತಿ ಇವುಗಳ ವಿಷಯಕ್ಕೆ ಭಾಷಣಮಾಡಿದರು.

ಕಾರ್ಯದರ್ಶಿ.

ಸಿದ್ಧರಾಮಪ್ಪ, ಮುಧೋಳ.

ನಿಖಿಲ ಭಾರತೀಯ ಆಯುರ್ವೇದ ವಿದ್ಯಾಪೀಠ ದೆಹಲಿ ಭಿಷಕ್ ಪರೀಕ್ಷೆಯ ಪರಿಣಾಮ, ಬೆಳಗಾಂವ ಕೇಂದ್ರ

ಪ್ರಥಮಖಂಡ

ಸಂಗನಗೌಡಾ ಪಾಟೀಲ,
ಗುರುಪಾದಸ್ವಾಮಿಜಿ,
ಈಶ್ವರಪ್ಪ ಕಮ್ಮಾರ,
ಮಲಕಪ್ಪ ಕಲಿವಾಳ,
ಬಲವಂತ ಪೇಟಕರ,
ಗೋವಿಂದ ವೈದ್ಯ,
ಒಸಯ್ಯಾ ಪದಕೀಮಠ,
ಸೋಮಪ್ಪ ಹಿಪ್ಪರಗಿ

ದ್ವಿತೀಯಖಂಡ ದ್ವಿತೀಯಶ್ರೇಣಿ

ಚಂದ್ರಶೇಖರ ಹಿರೇಮಠ,
ಯಲ್ಲಪ್ಪ ಶಿರೂರ,
ಸೋಮಲಿಂಗಪ್ಪ ಇಂಗಳಗಿ,
ಶಾಂತಪ್ಪ ಹೂವಿನ.

ದ್ವಿತೀಯಖಂಡ ತೃತೀಯಶ್ರೇಣಿ

ಪಟದಯ್ಯ ಹಿರೇಮಠ,
ಶ್ರೀಷಡಕ್ಷರಶಿವಾಚಾರ್ಯ ಅರಳಿಲೆಮಠ ಮಂಗಳೂರು,
ಗುರುಲಿಂಗಯ್ಯ ಹಿರೇಮಠ,
ತಮ್ಮಣ್ಣಾ ಹುಗ್ಗಿ,
ಲಕ್ಷ್ಮಣ ಗೋರಲೆ,
ಕಲಕನಗೌಡಾ ಪಾಟೀಲ,
ವಿರುಪಾಕ್ಷಪ್ಪ ನಂದಿ

ಸ್ವೀಕಾರ

ಹುಬ್ಬಳ್ಳಿ ಹಿರೇಪೇಟೆ ಹಿರೇಮಠದಲ್ಲಿ ಮುಳಗುಂದದ ಶ್ರೀಜಗದ್ಗುರು ಅಭಿನವ ರೇಣುಕಾಚಾರ್ಯ ವಾಚನಾಲಯದ ಅಧ್ಯಕ್ಷರಾದ ವೇ|| ಹೊಸಮಠದ ವೀರಭದ್ರಯ್ಯನವರು ಕೈ|| ರಂಭಾಪುರೀ ಜಗದ್ಗುರುಗಳ ಪುಣ್ಯತಿಥಿಯನ್ನು ಶ್ರಾವಣ ಶು|| ೭ ದಿವಸ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಹೊಸಪೇಟೆ ತಾ|| ಕಾಕಬಾಳ ಗ್ರಾಮದಲ್ಲಿರುವ ಮ|| ರಾ|| ಹೊಳ್ಯಾಚಿ ಷಣ್ಮುಖಪ್ಪನವರ ಮಗಳಿಗೆ ಅಧಿಕಶ್ರಾವಣ ಬ|| ೪ ದಿವಸ ಶಕುಂತಲಾದೇವಿಯೆಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂಪಾಯಿಯು ಮ|| ರಾ|| ಶಿಂಗಮ್ಮನವರ ಬಸಪ್ಪನವರ ದ್ವಾರಾತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀರಂಭಾಪುರೀ ಜಗದ್ಗುರುಗಳ ಪುಣ್ಯತಿಥಿ ಮಹೋತ್ಸವ, ಹಿರೇನಂದೂರು

ನಿಜಾಮು ೩ಲಾಖಾ ಹಿರೇನಂದೂರು ಶ್ರೀಮಲಯ ಶಾಂತೇಶ್ವರ ಶ್ರೀಪೀಠಕಟ್ಟೆ ಹಿರೆಮಠದಲ್ಲಿ ತಾ|| ೨೦ನೆಯ ದಿವಸ ಜಗದ್ಗುರುಗಳವರ ಅನುಗ್ರಹಕ್ಕೆ ಪಾತ್ರರಾದ ವೈದ್ಯಮಾರ್ತಂಡ ಪಟ್ಟಾಧ್ಯಕ್ಷ ಶ್ರೀಸದಾಶಿವಸ್ವಾಮಿಗಳು ಜಗದ್ಗುರುಗಳವರ ಪುಣ್ಯತಿಥಿಯನ್ನು ಒಳ್ಳೆ ವೈಭವದಿಂದ ನೆರವೇರಿಸಿದರು ಆ ಕಾಲಕ್ಕೆ ನೆರೆದಿದ್ದ ಭಕ್ತಸಮುದಾಯಕ್ಕೆ ಜಗದ್ಗುರುಗಳು ವೀರಶೈವಸಮಾಜಕ್ಕೆ ಮಾಡಿದ ಮಹೋಪಕಾರವನ್ನು ಮನೋಹರವಾಗಿ ಬೋಧಿಸಿದರು ಮಹಾಮಂಗಳಾರತಿ ಆದನಂತರ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು

ಎಚ್ ಆರ್ ನಂದೂರ

ಕರಾಚಿಯಲ್ಲಿ ಬ್ರಿಟನ್ನಿನ ಮಾಜಿ ಮಹಾಪ್ರಧಾನಿ ಚರ್ಚಿಲ್ಲರ ಹೇಳಿಕೆ

ಇನ್ನು ಮೂರು ವರ್ಷಗಳ ಒಳಗೆ ಮಹಾಚುನಾವಣೆಗಳು ಏರ್ಪಟ್ಟು ಬ್ರಿಟನ್ನಿನಲ್ಲಿ ಕನ್ಸರ್ವೇಟೀವ್ ಪಕ್ಷ ಅಧಿಕಾರಕ್ಕೆ ಒದಗುವುದೆಂದು ಕರಾಚಿಗೆ ಆಗಮಿಸಿರುವ ಮಿ|| ಚರ್ಚಿಲ್ಲರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ಪಾಕಿಸ್ತಾನದ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಕೇಳಿದಾಗ ಚರ್ಚಿಲ್ಲರು ತಾವು ಮೊದಲಿನಿಂದಲೂ ಪಾಕಿಸ್ತಾನಕ್ಕೆ ಬೆಂಬಲ ಕೊಟ್ಟಿರುವರೆಂದು ತಿಳಿಸಿದರು ಇಂಡಿಯ ಮತ್ತು ಪಾಕಿಸ್ತಾನ ಡೊಮಿನಿಯನ್ನುಗಳ ಬಗ್ಗೆ ಬ್ರಿಟನ್ನಿನ ಕನ್ಸರ್ವೇಟಿವ್ ಪಕ್ಷದ ಮನೋಭಿಪ್ರಾಯ ಹಾಗೂ ಪ್ರತಿಕ್ರಿಯೆ ಏನೆಂಬುದನ್ನು ಕೇಳಿದಾಗ ಚರ್ಚಿಲ್ಲರು ತಾವು ಅದರ ಬಗ್ಗೆ ಯಾವ ಅಭಿಪ್ರಾಯವನ್ನೂ ತಿಳಿಸಲು ಸಾಧ್ಯವಿಲ್ಲವೆಂದು ಹೇಳಿದರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೩—
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—
,, ,, ,, ಚಿಕ್ಕ ಸೈಜು ಬೆಲೆ	೦—೧—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೨—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಡೆದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य–संस्कृत)	१ रु
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರಿವರ್ ಪಾಲಿಪ್ಪುದೀಲೋಕಮಂ ॥

...ಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಸೆಪ್ಟೆಂಬರ್ ೧೯೪೭ [ಸಂಚಿಕೆ ೨೨

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಪುರಾಣಸಮಾಪ್ತಿ ಸಮಾರಂಭ, ಸೊಲ್ಲಾಪುರ

ಸೊಲ್ಲಾಪುರದಲ್ಲಿರುವ ಮ ರಾ ನಾಗಪ್ಪ ಪಾಟೀಲ ...ಡಗಾಂವಕರ ಇವರ ಮನೆಯಲ್ಲಿ ಮಹಾಶಿವಭಕ್ತೆ ಪರಂ...ಗಿಣಿಯೂ, ಪತಿವ್ರತಾಶಿರೋಮಣಿಯೂ ಆದ ದೇವ...ಮಲ್ಲಮ್ಮನವರ ಪುರಾಣವು ಒಂದು ತಿಂಗಳ...ಗೆ ಒಳ್ಳೆ ವೈಭವದಿಂದ ಜರುಗಿತು ಪರಮ ಗುರು...ಕ್ತಿಯುತೆಯರಾದ ಸೌ॥ ದಾನಮ್ಮಬಾಯಿ ಹಿರೇಮಠ ...ಸೊಲ್ಲಾಪುರ ಇವರು ಪುರಾಣವನ್ನು ಶ್ರೋತೃಗಳ ಮನ...ಮೇಲೆ ಪರಿಣಾಮವಾಗುವಂತೆ ಬಹು ಮನೋಹರ...ಗಿ ಹೇಳುತ್ತಿದ್ದರು ಪುರಾಣಶ್ರವಣಕ್ಕಾಗಿ ಅನೇಕ ...ನ ಬಂಧುಗಳೂ ಭಗಿನಿಯರೂ ಪಂಡಿತರೂ ಆಗಮಿ...ತ್ತಿದ್ದರು ನಿತ್ಯಪುರಾಣಾಂತ್ಯದಲ್ಲಿ ಅನೇಕ ವಿದ್ವಜ್ಜನರ ...ಉಪದೇಶಪರವಾದ ಪ್ರವಚನಗಳು ಜರಗುತ್ತಿದ್ದವು ... ಪುರಾಣಪ್ರಾರಂಭಕ್ಕೆ ಮಹಾಭಕ್ತಿಮತಿಯರಾದ ಸೌ॥ ...ಸವಲಿಂಗಮ್ಮಾ ಪಾಟೀಲ ಮತ್ತು ಶ್ರೀಮತಿ ಶಿವಲಿಂಗಮ್ಮ ...ಳ್ಳಿ ಇವರೇ ಮುಖ್ಯ ಕಾರಣರಾಗಿದ್ದರು

ಪುರಾಣಸಮಾಪ್ತಿಯ ದಿವಸ ಬೆಳಗ್ಗೆ ಶ್ರೀಮಜ್ಜಗ...ದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ...ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆಗಳು ನಡೆದವು ...ಮಧ್ಯಾಹ್ನ ೧೧ ಘಂಟೆಗೆ ಗಣಾರಾಧನೆಯಾಯಿತು ...ಸಾಯಂಕಾಲ ೫ ಘಂಟೆಗೆ ಸಭೆಯು ಸೇರಿ ನಿಪ್ಪತ್ತ...ರ ಭಾಷಣಗಳಾದವು ಆವೇಳೆ ವೇ ಪಂ ಮಣೂರು ...ಮಲ್ಲಿಕಾರ್ಜುನಶಾಸ್ತ್ರಿಗಳವರು ಸೂಚಿಸಿದ ಪ್ರಕಾರ ಒಂದು ...ರೂಪಾಯಿಯು ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ...ರ್ಪಿಸಲ್ಪಟ್ಟಿತು ಬಳಿಕ ಪಂಚಾಚಾರ್ಯರ ಜಯ...ಘೋಷದೊಡನೆ ಸಭೆಯು ಮುಕ್ತಾಯವಾಯಿತು

ಸೌ॥ ಅನ್ನಪೂರ್ಣಾಬಾಯಿ ಪಾಟೀಲ
ಚಂಡಿಕ ಗಾರ್ಡನ್, ಸೊಲ್ಲಾಪುರ

ಸತ್ಕಾರಸಮಾರಂಭ, ಭೂಸನೂರು

ಮೊದಲು ಜಾಹೀರಾತ ಹೊರಡಿಸಿದಂತೆ ತಾರೀಖು ...-೮ ೪೭ ನೆಯ ಗುರುವಾರ ಸತ್ಕಾರಸಮಾರಂಭವು ...ಳ್ಳೇ ವಿಜೃಂಭಣೆಯಿಂದ ನೆರವೇರಿತು ಮೊದಲು ...ಮಾನ್ಯ ಅತಿಥಿಗಳಾದ ಆಯುರ್ವೇದಾಚಾರ್ಯ, ಡಾ॥ ...ಸ್ ಎಸ್. ಹಿರೇಮಠ ಜೈನಾಪುರ ಇವರನ್ನು ಸ್ವಾಗ...ತಿಸಲಾಯಿತು ಬಳಿಕ ಮ॥ ರಾ॥ ಹೇಮಾದ್ರಿ ಬಳಗಾರ ...ವರು ಸುಸ್ವರದಿಂದ ಸ್ವಾಗತಪದ್ಯಗಳನ್ನು ಹಾಡಿದರು ...ಸಭಿಕರ ಅಭಿಪ್ರಾಯದಮೇರೆಗೆ ಶ್ರೀ॥ ಷ॥ ಬ್ರ॥ ಚನ್ನ...ವೀರಶಿವಾಚಾರ್ಯರು ಹಿರೇಮಠ, ಭೂಸನೂರು ಇವರ ...ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯಕ್ರಮಗಳು ಪ್ರಾರಂಭ...ವಾದವು ಮೊದಲು ಶ್ರೀಮಂತ ಗುರುಶಾಂತಪ್ಪ ಎಲೆ...ಶೆಟ್ಟಿ ಇವರು ವಿದ್ಯಾವಿಷಯಕವಾಗಿ ಭಾಷಣಮಾಡಿ ...ಸಭಿಕರನ್ನು ಸಂತೋಷಗೊಳಿಸಿದರು. ಆಮೇಲೆ ಮ॥ರಾ॥ ...ವೀರಣ್ಣಾ ಚೌಲದ ಇವರು ಪಂಚಾಚಾರ್ಯ ತತ್ವ ವಿಷಯವಾಗಿ ಭಾಷಣಮಾಡಿ ಸಭಿಕರನ್ನು ಸಂತೋಷಪಡಿಸಿದರು. ಮುಖ್ಯ ಅತಿಥಿಗಳಾದ ಎಸ್ ಎಸ್ ಹಿರೇಮಠ ಇವರು ಆರೋಗ್ಯ ಮತ್ತು ಆಚಾರ ಈ ವಿಷಯಕವಾಗಿ ಭಾಷಣಮಾಡ ವಾಗ್ಮಿ ಸಭಿಕರ ತಮ್ಮ ಸಂತೋಷವನ್ನು ಕರತಾಡನಗಳಿಂದ ವ್ಯಕ್ತಪಡಿಸುತ್ತಿದ್ದರು ಡಾಕ್ಟರರು ಪಂಡಿತ ಪಾಮರರಿಗೂ ತಿಳಿಯುವಂತೆ ಮಹತ್ವದ ಭಾಷಣಮಾಡಿದರು ಬಳಿಕ ಅಧ್ಯಕ್ಷರು ಹೇಮಾದ್ರಿ ಇವರಿಗ 'ಗಾಯನ ಕೋಕಿಲ' ಮತ್ತು ವೀರಣ್ಣಾ ಚೌಲದ ಇವರಿಗ 'ಪಂಚಾಚಾರ್ಯ ತತ್ವಪ್ರಚಾರಕ' ಎಂಬ ಪದವಿಗಳನ್ನು ದಯಪಾಲಿಸಿದರು ಅನಂತರ ಶ್ರೀ॥ ಷ॥ ಬ್ರ॥ ಗುರುಸಿದ್ಧಶಿವಾಚಾರ್ಯಸ್ವಾಮಿಗಳು ಹಿರೇಮಠ ಭೂಸನೂರು ಇವರು ಧರ್ಮಶಿಕ್ಷಣದ ಒಗ್ಗೆ ಅಮೂಲ್ಯವಾದ ಭಾಷಣಮಾಡಿದರು ಬಳಿಕ ಜಗದ್ಗುರು ಪಂಚಾಚಾರ್ಯರ ಜಯ ಜಯಕಾರದೊಡನೆಯೂ ಸನಾತನಧರ್ಮೋದ್ಧಾರಕ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರ ಜಯಜಯಕಾರದೊಡನೆಯೂ ಸಭೆಯು ಮುಕ್ತಾಯವಾಯಿತು

ಗುರುಕಿಂಕರ
ಗುರಪ್ಪಾ, ನಿಂಬಾಳಕರ, ಭೂಸನೂರು

ಶಿವದೀಕ್ಷಾಸಮಾರಂಭ, ಗದಗ

ಸನಾತನಧರ್ಮಬೋಧಕರಾದ ಶ್ರೀ ಷ ಬ್ರ ರೇವಣಸಿದ್ಧಶಿವಾಚಾರ್ಯ ಪಟ್ಟದಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರನ್ನು ಗದಗ ಶಹರ ನಿವಾಸಿಗಳಾದ ಗುರುಭಕ್ತಶಿರೋಮಣಿ ಹೊನ್ನಪ್ಪನವರು ಮಹಾಂತಪ್ಪನವರು ಮುಲಸಮುದ್ರ ಇವರು ತಮ್ಮ ಗೃಹಕ್ಕೆ ಬರಮಾಡಿಕೊಂಡು ಇದೇ ನಿಜಶ್ರಾವಣ ಶುದ್ಧ ಪ್ರತಿಪದದಿಂದ ಪೂರ್ಣಿಮೆಯವರೆಗೆ ಶ್ರೀರುದ್ರಾಭಿಷೇಕವನ್ನು ಮಾಡಿಸಿ ಸದರಿ ಸ್ವಾಮಿಗಳವರಿಂದ ತಮ್ಮ ಮನೆಯ ಮಂಡಳಿಯೆಲ್ಲಾ ಶಿವದೀಕ್ಷೆಯನ್ನು ಮಾಡಿಸಿಕೊಂಡರು ಪ್ರವಚನಪಟು ವೇ ಪಂ॥ ಸಿದ್ಧಲಿಂಗದೇವರು ಪಂಚಗ್ರಹ ಹಿರೇಮಠ ಕುಂದಗೋಳ ಇವರು ಈ ಕಾರ್ಯದಲ್ಲಿ ಭಾಗವಹಿಸಿದ್ದರಿಂದ ಹೆಚ್ಚಿನ ಕಳೆಯು ಪ್ರಾಪ್ತವಾಗಿತ್ತು ಮಾಹೇಶ್ವರರಿಗೆ ಅನ್ನಸಂತರ್ಪಣೆ ನಡೆದು ಕಾರ್ಯ ಸಮಾಪ್ತಿಗೊಂಡಿತು

ಅಗ್ರಣಿ ಫಕೀರಪ್ಪ ಮುರಗೋಡ
ಸಾ॥ ಕಿತ್ತೂರು

ಡಾ॥ ಮುರಿಗಪ್ಪ ಚನ್ನವೀರಪ್ಪ ಸೋದಿ ಇವರಿಗೆ ಸಮ್ಮಾನಪತ್ರಿಕಾಸಮರ್ಪಣ

ಮಾನನೀಯ ನೇತ್ರ ಚಿಕಿತ್ಸಾ ಧುರೀಣರೇ!

ವೀರ ಕನ್ನಡ ಮಾತೆಯ ಸತ್ಪುತ್ರರೂ, ವೀರಶೈವ ಮತೋತ್ಪನ್ನರೂ ಆದ ತಾವು ಮುಂಬಯಿ "ಕೆ. ಬಿ. ಎಚ್. ಬಿ. ಆಯ್. ಹಾಸ್ಪಿಟಲ್" ಮತ್ತು ರಾಮವಾಡಿಯ "ಆಯ್ ಹಾಸ್ಪಿಟಲ್" ಇವುಗಳಲ್ಲಿ ಅಭ್ಯಾಸಮಾಡಿ ನೇತ್ರಚಿಕಿತ್ಸಾ ಕಲೆಯಲ್ಲಿ ಅಸಾಧಾರಣ ಪಾಂಡಿತ್ಯವನ್ನು ಸಂಪಾದಿಸಿ ಮಾನ್ಯ ಪದವಿಯಿಂದ ಪ್ರಸಿದ್ಧ ಕಣ್ಣಿನ ಡಾಕ್ಟರರೆಂದು ಕೀರ್ತಿ ಪಡೆದದ್ದನ್ನು ನೋಡಿ ನಮಗೆ ಬಹಳ ಆನಂದವುಂಟಾಗಿದೆ

ತಾವು ಗುಜರಾತ ಪಂಜಾಬ್, ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿ ಕಲಕತ್ತಾ, ಲಾಹೋರ, ದಿಲ್ಲಿ, ಅಹಮದಾಬಾದ, ಮುಂಬಾಯಿ, ಮದ್ರಾಸ್, ಬೆಂಗಳೂರು ಮೊದಲಾದ ಪ್ರಸಿದ್ಧ ನಗರಗಳ ಕಣ್ಣಿನ ದವಾಖಾನೆಗಳಲ್ಲಿ ನೇತ್ರ ಚಿಕಿತ್ಸೆಯ ಅನುಭವವನ್ನು ಪಡೆದು ಪ್ರಸಿದ್ಧರಾಗಿರುವಿರಿ ತಾವು ಗುಜರಾಥ, ಪಂಜಾಬ, ರಾಜಪುತಾನಾ ಪ್ರಾಂತಗಳಲ್ಲಿ ೨೦ ಸಾವಿರಕ್ಕಿಂತ ಹೆಚ್ಚು ಜನರ ನೇತ್ರ ರೋಗವನ್ನು ಉಪಚರಿಸಿ, ನೂರು ಸಾವಿರ ಕುರುಡರಿಗೆ ದೃಷ್ಟಿಯನ್ನು ತಿರುಗಿಸಿರುವಿರಿ ಹಾಗೂ ಹೂಲಿ, ಅರಭಾಂವಿ ಹಿರೇಕೆರೂರ, ರಬಕವಿ, ಗದಗ, ಹುಬ್ಬಳ್ಳಿ, ಬೈಲಹೊಂಗಲ, ಧಾರವಾಡ ನರೇಗಲ್ಲ, ಮುನವಳ್ಳಿ, ಮೊದಲಾದ ನಗರಗಳಲ್ಲಿ ಮತ್ತು ನಮ್ಮ ಸವದತ್ತಿಯಲ್ಲಿ ೨ ಸಾವಿರಕ್ಕಿಂತ ಹೆಚ್ಚು ನೇತ್ರ ರೋಗಿಗಳನ್ನು ಉಪಚರಿಸಿ ೬-೭ ನೂರು ಜನ ಕುರುಡರಿಗೆ ನೇತ್ರದಾನಮಾಡಿ ಉದ್ಧರಿಸಿದಿರಿ

ತಾವು ಇದ್ದ ಸ್ಥಾನಕ್ಕೆ ಕಣ್ಣಿಲ್ಲದವರು ಬಂದು ಅಧಿಕವಾದ ಪರಸ್ಥಳದ ಖರ್ಚಿಗೆ ತ್ರಾಸಗೊಳ್ಳುವರೆಂದು ತಿಳಿದು, ತಾವೇ ಕಣ್ಣಿಲ್ಲದವರ ಗ್ರಾಮಗಳಿಗೆ ಆಗಮಿಸಿ ಎಲ್ಲ ಸವಲತ್ತಿನಿಂದ ನೇತ್ರ ಚಿಕಿತ್ಸೆಯನ್ನು ಮಾಡಿ ಉಪಕಾರ ಮಾಡುವುದನ್ನು ನೋಡಿ ತಮ್ಮ ದಯಾದಾಕ್ಷಿಣ್ಯ ಸಮುದಾರ ಬುದ್ಧಿಗೆ ಕರ್ನಾಟಕ ಸಮಾಜವೇ ಉಪಕೃತವಾಗಿದ. ತಮ್ಮ ಸರ್ವಮಾನ್ಯವಾದ ಸಮುದಾರ ಬುದ್ಧಿಯು ನೇತ್ರಚಿಕಿತ್ಸೆಯಿಂದ ಸರ್ವರಿಗೂ ಸುಪ್ರಯೋಜನವಾಗಿ ತಮ್ಮ ಅಮೇರಿಕಾ ಡಾಕ್ಟರ ಪದವಿಯಿಂದ ಇತೋಪ್ಯತಿಶಯವಾದ ಶ್ರೇಯೋಭಿವೃದ್ಧಿಯನ್ನು ಹೊಂದಲೆಂದೂ ಶ್ರೀಪರಮೇಶ್ವರನು ತಮಗೆ ಆಯುರಾರೋಗ್ಯಭಾಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದೂ, ಆ ದಯಾಘನನನ್ನು ಪ್ರಾರ್ಥಿಸಿ ತಮಗೆ ಈ ಸಮ್ಮಾನಪತ್ರವನ್ನು ಸಮರ್ಪಿಸುತ್ತೇವೆ

ಶ್ರೀಯಲ್ಲಮ್ಮನ ಕ್ಷೇತ್ರ ಮಾನ್ಯನಾಗರಿಕರು,
ತಾ॥ ೬-೯ ೪೭ ಸವದತ್ತಿ

ಚಂದಾದಾರರಲ್ಲಿ ನಿವೇದನ

ಇದೇ ತಿಂಗಳು ೬ ನೆಯ ತಾರೀಖಿನಿಂದ ಮೈಸೂರು ರೇಲ್ವೆ ಕೆಲಸಗಾರರು ಮುಷ್ಕರ ಹಿಡಿದಿರುವದರಿಂದ ಮೈಸೂರು ದೇಶದಲ್ಲಿ ರೇಲ್ವೆ ಸಂಚಾರವೇ ನಿಂತು ಹೋಗಿದೆ ಈ ಕಾರಣದಿಂದ ಪೋಸ್ಟಿನಲ್ಲಿ ವರ್ತಮಾನ ಪತ್ರಿಕೆಗಳನ್ನು ತೆಗೆದುಕೊಳ್ಳುವದಿಲ್ಲವೆಂದು ಹೇಳಿರುವುದರಿಂದ ಈ ತಿಂಗಳು ೮ ಮತ್ತು ೧೫ ನೆಯ ತಾರೀಖಿನ ನಮ್ಮ ಪತ್ರಿಕೆಯನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲವೆಂಬ ವಿಷಯವನ್ನು ಚಂದಾದಾರರು ಗಮನಿಸಬೇಕು. ಮ್ಯಾ.

ಪಂಚಾಚಾರ್ಯಪ್ರಭಾ.

೧೯೪೭ ನೆಯ ಸೆಪ್ಟೆಂಬರ್ ತಾ ೨೨ ನೇ ಸೋಮವಾರ

ಮೈಸೂರುದೇಶದಲ್ಲಿ ಸತ್ಯಾಗ್ರಹ

ಮೈಸೂರು ಕಾಂಗ್ರೆಸ್ಸಿನವರು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಅರಮನೆಯ ಮುಂದೆ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿ, ಅದರ [illegible] ಕ್ರಮವನ್ನಿಟ್ಟುಕೊಂಡರು. ಇದನ್ನು [illegible] ಸರಕಾರದವರು ಕಾಂಗ್ರೆಸ್ ಮುಖಂಡರನ್ನೆಲ್ಲ [illegible] ಬಂಧನದಲ್ಲಿಟ್ಟರು. [illegible] ವಾರದ ವರೆಗೆ ಸಂಸ್ಥಾನದ [illegible] ಜೋರಾಗಿ ನಡೆಯಿತು. [illegible] ಅಹಿಂಸಾರೂಪವಾದ ಸತ್ಯಾಗ್ರಹವನ್ನು ಬಿಟ್ಟು ಹಿಂಸಾರೂಪವಾದ ಹತ್ಯಾಗ್ರಹವನ್ನು ಕೈಕೊಂಡು ಪೋಲೀಸರ ಮೇಲೆ ಕಲ್ಲು ಎಸೆಯುವದನ್ನು ಬಲವಾಗಿ ನಡೆಯಿಸಿದದರಿಂದ ಆತ್ಮರಕ್ಷಣೆಗಾಗಿ ಪೋಲೀಸರು ಅನೇಕ ಕಡೆಗೆ ಗುಂಡುಹಾರಿಸುವ ಪ್ರಸಂಗವು ಒದಗಿತು. ಇದರಿಂದ ಕೆಲವರಿಗೆ ಸಾವುನೋವುಗಳುಂಟಾದವು. ಸತ್ಯಾಗ್ರಹವು ಹೋಗಿ ಕೊನೆಗೆ ಹತ್ಯಾಗ್ರಹವಾಯಿತು. ಈಗ ಎಲ್ಲ ಕಡೆಗೂ ಪರಿಸ್ಥಿತಿಯು ಶಾಂತವಾಗಿದೆ. ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹವನ್ನು ಮಾಡಬೇಕೆಂದು ಕಾಂಗ್ರೆಸ್ಸಿನವರು ಬಹು ಪ್ರಯತ್ನಪಟ್ಟರು. ಆದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕಾರ್ಯಕುಶಲತೆಯಿಂದ ಅದು ನೆರವೇರಲಿಲ್ಲ. ಅನೇಕಜನ ಮೈಸೂರು ದೇಶದ ಪ್ರಮುಖರು ಶಾಂತವಾಗಿರುವ ಮೈಸೂರು ರಾಜ್ಯದಲ್ಲಿ ವ್ಯರ್ಥವಾಗಿ ಅಶಾಂತಿಯನ್ನುಂಟು ಮಾಡಬೇಡಿರೆಂದು ಕಾಂಗ್ರೆಸ್ಸಿನವರಿಗೆ ಎಷ್ಟೋ ವಿಧವಾಗಿ ಹೇಳಿಕೊಂಡರು. ಆದರೂ ಕಾಂಗ್ರೆಸ್ಸಿನವರು ಅವರ ಮಾತಿಗೆ ಬೆಲೆಕೊಡದೆ ತಮ್ಮ ಹಟವನ್ನೇ ಸಾಧಿಸಲು ವ್ಯಕ್ತರಾದರು. ಕಾಂಗ್ರೆಸ್ಸಿನವರು ತಮ್ಮ ಚಳವಳಿಗೆ ಏನನ್ನೂ ಅರಿಯದ ಕೋಮಲ ಸ್ವಭಾವದ ವಿದ್ಯಾರ್ಥಿಗಳನ್ನು ಸೇರಿಸಿದ್ದು ಬಹಳ ಅನ್ಯಾಯ! ವಿದ್ಯಾರ್ಥಿಗಳನ್ನು ರಾಜಕೀಯ ಚಳವಳಿಗೆ ಖಂಡಿತವಾಗಿಯೂ ಸೇರಿಸಿಕೊಳ್ಳಬಾರದೆಂದು ಗಾಂಧೀಜಿಯವರು ತಮ್ಮ ಹರಿಜನಪತ್ರಿಕೆಯಲ್ಲಿ ಕಳೆದ ತಿಂಗಳು ೧೭ ನೆಯ ತಾರೀಖಿನ ದಿವಸ ಒಂದು ಮಹತ್ವದ ಲೇಖವನ್ನು ಬರೆದು ಪ್ರಕಟಿಸಿದ್ದಾರೆ. ಆ ಲೇಖವನ್ನು ಕಾಂಗ್ರೆಸ್ಸಿನವರು ಓದಿನೋಡಿರಬಹುದು. ಸ್ವಪ್ನದಲ್ಲಿಯೂ ಸಹ ಗಾಂಧಿಯವರ ಹೆಸರಿನಿಂದ ಜಯಘೋಷವನ್ನು ಮಾಡುತ್ತಿರುವ ಕಾಂಗ್ರೆಸ್ಸಿನವರು ಅವರ ಲೇಖಕ್ಕೆ ಏಕೆ ಮಹತ್ವವನ್ನು ಕೊಡಲಿಲ್ಲವೋ ಏನೋ? ಯಾರ [illegible] ಯಾಗಿದ್ದ ಮನುಷ್ಯನು ಸ್ವಾರ್ಥದಿಂದ ಯಾವುದಾದರೂ ಒಂದು ಕಾರ್ಯವನ್ನು ಸಾಧಿಸಲು ಮತ್ತನಾದರೆ ಆ ಪ್ರಸಂಗದಲ್ಲಿ ಪ್ರತ್ಯಕ್ಷವಾಗಿ ದೇವರು ಬಂದು ಹೇಳಿದರೂ ಸಹ ಕೇಳುವದಿಲ್ಲವೆಂಬುದಕ್ಕೆ ಇದೇ ನಿದರ್ಶನ! [illegible]!

ಆ ಲೇಖನವನ್ನು ಈ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೇವೆ. ಅದನ್ನು ಎಲ್ಲರೂ ಓದಿನೋಡಿಕೊಂಡು ವಿದ್ಯಾರ್ಥಿಗಳಿಗೆ ಈ ಚಳವಳಿಯಲ್ಲಿ ಭಾಗವಹಿಸಬಾರದೆಂದು ಬೋಧಿಸಬೇಕು. ಮೈಸೂರು ದೇಶದಲ್ಲಿ ಕಾಂಗ್ರೆಸ್ಸಿಗೆ ಮಹಾಜನರ ಬೆಂಬಲವು ಕಡಿಮೆಯಾಗಿರುವ ಕಾರಣದಿಂದಲೇ ವಿದ್ಯಾರ್ಥಿಗಳನ್ನು ಹುರಿದುಂಬಿಸಿದುದೇ ಬಲವಾದ ಸಾಕ್ಷಿಯಾಗಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕೆಲ ಜನ ಕಾಂಗ್ರೆಸ್ ಅನುಯಾಯಿಗಳು ಹಳ್ಳಿಗಳಿಗೆ ಹೋಗಿ ಏನೂ ತಿಳಿಯದ ರೈತರ ಮುಂದೆ ನೀವು ನಮ್ಮ ಸತ್ಯಾಗ್ರಹಕ್ಕೆ ಬೆಂಬಲನೀಡಬೇಕು, ಜವಾಬ್ದಾರಿ ಸರ್ಕಾರ ಬಂದರೆ ನಿಮಗೆ ಹಾಗೆ ಸುಖವಾಗುತ್ತದೆ, ಹೀಗೆ ಸುಖವಾಗುತ್ತದೆ, ಆಹಾರದ ಕಷ್ಟವು ತಪ್ಪುತ್ತದೆ, ಯಥೇಷ್ಟವಾಗಿ ಬಟ್ಟೆಬರೆಗಳು ಸಿಗುತ್ತವೆ, ಈಗ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವಿರುವದರಿಂದ ನಮ್ಮ ಸತ್ಯಾಗ್ರಹಕ್ಕೆ ಅವರ ಸಹಾಯವು ದೊರೆಯುತ್ತದೆ, ಭಾರತದ ಕಾಂಗ್ರೆಸ್ ಪ್ರಮುಖರೆಲ್ಲರೂ ನಮ್ಮಲ್ಲಿ ಬಹಳ ಪ್ರೀತಿಯುಳ್ಳವರಾಗಿದ್ದಾರೆ, ಇತ್ಯಾದಿಯಾಗಿ ಹೇಳಿ ಅವರನ್ನು ಹುರಿದುಂಬಿಸಿದ್ದಾರೆಂದು ತಿಳಿದುಬರುತ್ತದೆ. ಈ ವಿಧವಾದ ಹೇಳಿಕೆಗೆ ಏನೂ ಅರ್ಥವಿಲ್ಲವೆಂದು ಮಹಾಜನಗಳು ಅರಿಯಬೇಕು. ಈಗ ಭಾರತದಲ್ಲಿ ಕಾಂಗ್ರೆಸ್ ಸರಕಾರವು ಏರ್ಪಟ್ಟಿದರೂ, ಅಲ್ಲಿ ರೇಷನಿಂಗ್ ವ್ಯವಸ್ಥೆ ತಪ್ಪಿದೆಯೇ? ಆಹಾರದ ಕಷ್ಟವು ತಪ್ಪಿದೆಯೋ? ಈಗ [illegible] ದಿವಸಗಳ ಹಿಂದೆ ಭಾರತದ ಪ್ರಧಾನ ಮಂತ್ರಿಗಳಾಗಿರುವ ಪಂಡಿತ ನೆಹರೂರವರ ಅಳಿಗೆ ರೇಷನಿಂಗ ಅಂಗಡಿಯವರು ಧಾನ್ಯದ ಅಭಾವದಿಂದ [illegible] ಕೊಡಲು ಇದರಿಂದ ಪಂಡಿತ ನೆಹರೂರವರೇ [illegible] ಅಂಗಡಿಗೆ ಹೋಗಿ ರೇಷನಿಂಗ್ ತಂದಿರುವದನ್ನು ಪತ್ರಿಕೆಗಳಲ್ಲಿ ಓದಿಲ್ಲವೇ? ಇಂತಹ ಪರಿಸ್ಥಿತಿಯು ಈಗ ಮೈಸೂರು ದೇಶಕ್ಕೆ ಒಂದಿಲ್ಲ ಬಾರದಿರಲಿ. ಒಂದೇ ಸರ್ವರ [illegible] ಆಹಾರದ ಕಷ್ಟವು ಇಡೀ ಜಗತ್ತಿಗೇ ಬಂದಿದ್ದು ಇನ್ನೂ ಕೆಲವು ದಿನಗಳವರೆಗೆ ಎಲ್ಲಾ ಕಡೆ ಹೀಗೆಯೇ ಇರುವದೆಂಬುದನ್ನು ಯಾರೂ ಮರೆಯಬಾರದು.

ಇನ್ನು ಮೈಸೂರಿನ ಸತ್ಯಾಗ್ರಹದ ವಿಷಯದಲ್ಲಿ ಭಾರತ ಸರಕಾರದವರು ಖಂಡಿತವಾಗಿಯೂ ಕೈಹಾಕುವದಿಲ್ಲವೆಂಬುದನ್ನು ಸರ್ವರೂ ಪೂರ್ಣ ಲಕ್ಷ್ಯದಲ್ಲಿಡಬೇಕು. ಏಕೆಂದರೆ ಭಾರತ ಸರಕಾರಕ್ಕೂ ದೇಶೀಯ ಸಂಸ್ಥಾನಗಳಿಗೂ ಮೊನ್ನ ಮೊನ್ನೆ ಒಪ್ಪಂದವಾಗಿರುವ ಪ್ರಕಾರ ದೇಶೀಯ ಸಂಸ್ಥಾನಗಳ ಒಳ ಆಡಳಿತದ ವಿಷಯದಲ್ಲಿ ಕೇಂದ್ರ ಸರಕಾರದವರು ಕೈಹಾಕುವಂತೆಯೇ ಇಲ್ಲ. ವಿದೇಶ ವ್ಯವಹಾರ, ರಕ್ಷಣೆ, ಸಂಚಾರ ಇತ್ಯಾದಿ ವಿಷಯಗಳಲ್ಲಿ ಮಾತ್ರ ಕೇಂದ್ರ ಸರಕಾರದ ಸಂಬಂಧವಿರುವದಲ್ಲದೆ ಉಳಿದ ಎಲ್ಲ ವಿಷಯಗಳಲ್ಲಿಯೂ ಸಂಸ್ಥಾನದೀಶರು ಸ್ವತಂತ್ರರಾಗಿರುವರೆಂಬುವನ್ನು ಎಲ್ಲರೂ ಗಮನಿಸಬೇಕು. ಆದದರಿಂದ ಅಲ್ಲದ ಸಲ್ಲದ ಅಸತ್ಯ ನುಡಿಗಳಿಗೆ ಯಾರೂ ಗಮನಕೊಡಬಾರದೆಂದು ಈ ಮೂಲಕ ತಿಳಿಯಪಡಿಸಲಿಚ್ಛಿಸುತ್ತೇವೆ.

ಭಾರತವು ಸ್ವತಂತ್ರವಾಗಿ ಈಗ ೫ ವಾರಗಳಾದವು. ಸ್ವತಂತ್ರವಾದಮೇಲೆ ೧ ವಾರ ಮಾತ್ರ ಶಾಂತವಾಗಿತ್ತು. ಅಮೇಲೆ ಪಂಜಾಬಿನಲ್ಲಿ ಘೋರವಾದ ಕೊಲೆ, ಲೂಟಿ ಮೊದಲಾದವುಗಳು ನಡೆದು ಈವರೆಗೆ ಲಕ್ಷಾಂತರ ಜನರು ಮಡಿದಿದ್ದಾರೆ. ಪಶ್ಚಿಮ ಪಂಜಾಬಿನಿಂದ ಈವರೆಗೆ ಭಾರತಕ್ಕೆ ೨೫ ಲಕ್ಷ ಜನರು ತಮ್ಮ ಮನೆ, ಮಠ ಆಸ್ತಿಪಾಸ್ತಿಗಳನ್ನೆಲ್ಲಾ ಬಿಟ್ಟು ಓಡಿಬಂದಿದ್ದಾರೆ. ಇದನ್ನು ನೋಡಿ ಭಾರತ ಕಾಂಗ್ರೆಸ್ ಮುಖಂಡರಿಗೆಲ್ಲಾ ಸಿಡಿಲು ಬಡಿದಂತಾಗಿದೆ. ಯಾವ ಕಾಲಕ್ಕೆ ಏನು ಸಂಭವಿಸುವದೋ ಎಂದು ಅವರು ಚಿಂತಾತುರರಾಗಿದ್ದಾರೆ. ಪಶ್ಚಿಮ ಪಂಜಾಬಿನಲ್ಲಿ ಇದೇ ರೀತಿ ನಿರಾಶ್ರಿತರಮೇಲೆ ಘೋರ [illegible] ಮುಂದುವರೆಯುತ್ತಿರೆ ಪಾಕಿಸ್ತಾನಕ್ಕೂ ಹಿಂದೂಸ್ಥಾನಕ್ಕೂ ಯುದ್ಧವು ನಡೆಯುವ ಸಂಭವ [illegible] ಗಾಂಧಿಯವರು ರಾಷ್ಟ್ರನೇತಾರರ ಸಭೆಯಲ್ಲಿ ನುಡಿದಿದ್ದಾರೆ. ಈ ವಿಷಯಗಳನ್ನೆಲ್ಲಾ ಮೈಸೂರು ಕಾಂಗ್ರೆಸ್ಸಿನವರು ಯೋಚಿಸಬೇಕು. ಈಗ್ಗೆ ೧ ತಿಂಗಳ ಹಿಂದೆ ಸ್ವರ್ಗಲೋಕದಂತಿದ್ದ ದಿಲ್ಲಿ ನಗರವು ೧೫ ದಿನಗಳ ವರೆಗೆ ರಣರಂಗವಾಗಿ ಪರಿಣಮಿಸಿದುದು ಎಲ್ಲರಿಗೂ ತಿಳಿದೇ ಇದೆ. ದಿಲ್ಲಿಯಲ್ಲಿ ಸಾವಿರಾರು ಜನರ ಕೊಲೆಯಾಯಿತು. ಈಗ ಶಾಂತವಾಗಿದೆ.

ಭಾರತದ ಪರಿಸ್ಥಿತಿಯು ಈರೀತಿ ಇರುವಾಗ ಶಾಂತವಾಗಿದ್ದ ಮೈಸೂರು ದೇಶದಲ್ಲಿ ಅಶಾಂತಿಯನ್ನು ಹುಟ್ಟಿಸಿದುದು ಎಷ್ಟೂ ವಿವೇಕಯುತವಾದ ಮಾರ್ಗವಲ್ಲವೆಂದು ಬಹು ಜನರು ನುಡಿಯುತ್ತಿರುವರು. ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂದು ಭಾರತದ ಕಾಂಗ್ರೆಸ್ ನಾಯಕರಿಂದಲೇ ಹೊಗಳಿಸಿಕೊಳ್ಳಲ್ಪಡುತ್ತಿರುವ ವಿಷಯವು ಸರ್ವರಿಗೂ ತಿಳಿದೇ ಇದೆ.

ಮೈಸೂರು ರಾಜ್ಯದಂಥ ಅಚ್ಚುಕಟ್ಟಾದ ರಾಜ್ಯವು ಇಂಡಿಯಾ ದೇಶದಲ್ಲಿಯೇ ಇಲ್ಲವೆಂದು ಭಾರತ ಪ್ರಮುಖರೇ ಹೊಗಳುತ್ತಲಿದ್ದಾರೆ. ಈ ರೀತಿ ಶಿಸ್ತಿನ ರಾಜ್ಯ ಪದ್ಧತಿಯು ಕಾಂಗ್ರೆಸ್ಸಿನವರಿಗೆ ಬೇಡವಾಗಿರುವುದು ಆಶ್ಚರ್ಯಕರವಾಗಿದೆ. ಯಾವಾಗಲೂ ಸಿಹಿಯನ್ನು ತಿನ್ನುತ್ತಿರುವವರಿಗೆ ಹುಳಿಯಲ್ಲಿ ಅಪೇಕ್ಷೆಯು ಹೆಚ್ಚಾಗುವಂತೆ ಕಾಂಗ್ರೆಸ್ಸಿನವರಿಗೆ ಬೇರೆ ರೀತಿಯ ರಾಜ್ಯವ್ಯವಸ್ಥೆಯಲ್ಲಿ ಅಪೇಕ್ಷೆಯಾಗಿರಬಹುದು. ಆದುದರಿಂದಲೇ ಅವರು ಈ ರೀತಿ ಆಂದೋಲನವನ್ನೆಬ್ಬಿಸಿದ್ದಾರೆ. ಆದರೆ ಇವರ ಆಂದೋಲನವು ಬಹು ಜನರಿಗೆ ಜುಗುಪ್ಸೆಯನ್ನುಂಟು ಮಾಡಿರುವದರಿಂದ ಅವರು ತಮ್ಮ ಈ ಮಾರ್ಗವನ್ನು ಬಿಟ್ಟದ್ದಾದರೆ ದೇಶಕ್ಕೆ ಹಿತವಾಗುವದು. ಈ ವಿಷಯವನ್ನು ಕಾಂಗ್ರೆಸ ಮುಖಂಡರು ನಿರ್ಮಲ ಮನಸ್ಸಿನಿಂದ ಆಲೋಚಿಸಬೇಕು. ಹಿಂದಿನ ಮತ್ತು ಈಗಿನ ಮಹಾಪ್ರಭುಗಳವರ ಕಾಲದಲ್ಲಿ ಈ ದೇಶವು ಬಹಳ ಅಭಿವೃದ್ಧಿಯನ್ನು ಹೊಂದಿದೆ ಮತ್ತು ಹೊಂದುತ್ತಲಿದೆ. ಮಹಾಪ್ರಭುಗಳು ಪ್ರಜೆಗಳನ್ನು ಪುತ್ರ ವಾತ್ಸಲ್ಯದಿಂದ ನೋಡುತ್ತಲಿದ್ದಾರೆ. ಈಗಿನ ಮಹಾಪ್ರಭುಗಳವರು ಮಹಾದೈವಭಕ್ತರೂ ಶಾಂತಿ ಸಮುದ್ರರೂ ಪ್ರಜಾಪ್ರೇಮಿಗಳೂ, ದಯಾನಿಧಿಗಳೂ ಆಗಿದ್ದಾರೆ. ಇಂತಹ ಮಹಾಪ್ರಭುಗಳವರ ಮನಸ್ಸಿಗೆ ನೋವನ್ನುಂಟುಮಾಡುವಂತಹ ಕಾರ್ಯದಲ್ಲಿ ಯಾರೂ ತೊಡಗಬಾರದು. ಸದಾ ಪ್ರಜಾಭ್ಯುದಯಕಾಂಕ್ಷಿಗಳಾಗಿರುವ ಶ್ರೀಮನ್ಮಹಾರಾಜರವರು ಜವಾಬ್ದಾರಿ ಸರಕಾರದ ಬಗ್ಗೆ ಇದೇ ತಿಂಗಳು ೮ ನೆಯ ತಾರೀಖಿನ ದಿವಸ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆ ಆಜ್ಞೆಯು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಅದನ್ನು ಸರ್ವರೂ ಓದಿ ನೋಡಿ ಅದಕ್ಕೆ ಸ್ವಾಗತವಿತ್ತು ರಾಜಭಕ್ತಿಶೀಲರಾಗಬೇಕೆಂದಾಶಿಸುತ್ತೇವೆ.

ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಬಗ್ಗೆ ರಾಜಾಜ್ಞೆ

ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಬಗ್ಗೆ ಮಹಾಪ್ರಭುಗಳವರು ಈ ಕೆಳಗೆ ಕಂಡಂತೆ ಒಂದು ಆಜ್ಞೆಯನ್ನು ಇದೇ ತಿಂಗಳು ೮ ನೆಯ ತಾರೀಖಿನ ದಿವಸ ಹೊರಡಿಸಿರುತ್ತಾರೆ —

ಈಗ್ಗೆ ೮ ತಿಂಗಳ ಹಿಂದೆ ಈ ವರ್ಷದ ಜನವರಿ ೮ ನೆಯ ತಾರೀಖಿನ ದಿನ, ನಮ್ಮ ಸಂಸ್ಥಾನದ ರಾಜ್ಯಾಂಗದಲ್ಲಿ ಹೆಚ್ಚಿನ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ಆಡಳಿತದಲ್ಲಿ ನಮ್ಮ ಪ್ರಜೆಗಳು ಹೆಚ್ಚಿನ ಪಾತ್ರವನ್ನು ವಹಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಹೊರಡಿಸಿದ ಆಜ್ಞೆಯಲ್ಲಿ ನಮ್ಮ ಪ್ರಜೆಗಳಿಗೆ ತಿಳಿಸಿದ್ದೆವು. ಪ್ರಜೆಗಳ ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಮೈಸೂರಿನ ರಾಜಮನೆತನವು ಯಾವಾಗಲೂ ಸಿದ್ಧವಾಗಿರುವುದೆಂದೂ ಸಹ ಅದರಲ್ಲಿ ತಿಳಿಸಿದ್ದೆವು. ನಮ್ಮ ಪೂಜ್ಯ ಹಿರಿಯರಿಂದ ನಮಗೆ ಕೊಡಲ್ಪಟ್ಟಿರುವ ರಾಜ್ಯಾಂಗ ಪ್ರಗತಿಯ ನಂದಾದೀವಿಗೆಯು ಕುಂದದೆ, ಕಾಲ, ದೇಶಗಳಿಗನುಗುಣವಾಗಿ ಪ್ರಜ್ವಲಿಸುವಂತೆ ಮಾಡುವುದೇ ನಮ್ಮ ಧ್ಯೇಯವೆಂದೂ ಸಹ ಹೇಳಿದ್ದೆವು.

ಸಂಸ್ಥಾನದ ಎಲ್ಲ ಪಂಗಡಗಳ ಮತ್ತು ಸಂಸ್ಥೆಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡಸಿ ಮತ್ತು ಭಾರತದ ಇತರ ಭಾಗಗಳಲ್ಲಿನ ಪರಿಸ್ಥಿತಿಗಳನ್ನು ಪರಿಶೀಲಿಸಿ ನಮ್ಮ ಸಂಸ್ಥಾನದ ರಾಜ್ಯಾಂಗದಲ್ಲಿ ಸುಧಾರಣೆಗಳನ್ನು ಸೂಚಿಸಬೇಕೆಂದು ನಮ್ಮ ದಿವಾನರಿಗೆ ಸೂಚಿಸಿದ್ದೆವು. ಈ ವಿರಾಮ ಕಾಲದಲ್ಲಿ ಗಮನಾರ್ಹವಾದ ಬದಲಾವಣೆಗಳು ನಡೆದಿವೆ. ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದ್ದಿತು. ನಿಪುಣರಾದ ನಮ್ಮ ದಿವಾನರ ಸಲಹೆಗಳನ್ನು ಪಡೆಯುವ ಸುಯೋಗವು ಇದರಲ್ಲಿ ನಮಗೆ ಒದಗಿದ್ದಿತು. ಅವರು ಸಾರ್ವಜನಿಕರ ಭಾವನೆ ಮತ್ತು ಅಭಿಪ್ರಾಯಗಳನ್ನು ತೆಗೆದುಕೊಳ್ಳುವಾಗ ಮೈಸೂರು ಸಂಸ್ಥಾನದ ಮತ್ತು ಅದರ ಪ್ರಜೆಗಳ ಕಲ್ಯಾಣಕ್ಕೆ ಪೂರ್ಣ ಗಮನವನ್ನೂ ಇತ್ತಿದ್ದಾರೆ. ಮೈಸೂರು ಸಂಸ್ಥಾನವು ಭಾರತ ಡೊಮಿನಿಯನ್ನಿಗೆ ಸೇರಿದೆಯೆಂಬುದು ನಮ್ಮ ಪ್ರಜೆಗಳೆಲ್ಲರಿಗೂ ಗೊತ್ತಿದೆ. ನಮ್ಮ ಪ್ರಜಾಪ್ರತಿನಿಧಿಗಳಿಗೆ ವಿಶಾಲ ಭಾರತ ಡೊಮಿನಿಯನ್ನಿನ ಶಾಸನ ನಿರ್ಮಾಣದ ಕಾರ್ಯದಲ್ಲಿ ಹೆಚ್ಚಿನ ಪಾತ್ರವಿದೆಯೆಂಬುದನ್ನು ಕೇಳಲು ನಮಗೆ ಅತ್ಯಂತ ಸಂತೋಷವಾಗುತ್ತದೆ.

ಭವಿಷ್ಯದ ರಾಜ್ಯಾಂಗದ ಬಗ್ಗೆ ಸಲಹೆ ಕೊಡಲು ಕಾಲವಿಳಂಬವಾಗುವುದು ನಮ್ಮ ದಿವಾನರಿಗೆ ಅನಿವಾರ್ಯವಾಗಿತ್ತು. ಅವರು ಇತ್ತೀಚೆಗೆ ಇತ್ತ ಹೇಳಿಕೆಯನ್ನು ನಾವು ಸಮರ್ಥಿಸುತ್ತೇವೆ.

ಹೊಸ ಸುಧಾರಣೆಯಲ್ಲಿ ನಮ್ಮ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರದ ಸ್ಥಾಪನೆಗೆ ಅವಕಾಶವು ಕಲ್ಪಿತವಾಗಲೆಂಬುದೇ ನಮ್ಮ ಅಪೇಕ್ಷೆಯಾಗಿದೆ

ರಾಜ್ಯಾಂಗ ಸುಧಾರಣೆಯ ನಿರ್ಮಾಣದಲ್ಲಿ ದಿವಾನರಿಗೆ ಸಹಾಯ ಮಾಡಲು ಏರ್ಪಟ್ಟಿರುವ ಸಲಹಾ ಸಮಿತಿಯವರು ನಮಗೆ ಒಪ್ಪಿಸಿರುವ ರಾಜಭಕ್ತಿಯ ನಿರ್ಣಯಕ್ಕಾಗಿ ನಾವು ಹರ್ಷಿಸುತ್ತೇವೆ ಈ ಸಮಿತಿಯೂ ಮತ್ತು ಅವಶ್ಯಕವೆಂದು ತೋರುವ ಇತರ ಸಂಗಡಗಳೂ ನಾವು ಘೋಷಿಸಿರುವ ನಮ್ಮ ಅಭಿಪ್ರಾಯದಂತೆ ವಿವರವಾದ ಸಲಹೆಗಳನ್ನು ನಮಗೆ ಒಪ್ಪಿಸಲು ದಿವಾನರೊಡನೆ ಸಹಕರಿಸಬೇಕೆಂಬುದೇ ನಮ್ಮ ಅಪೇಕ್ಷೆ ಸಂಸ್ಥಾನದಲ್ಲಿ ಸುಧಾರಣೆಗಳ ಬಗ್ಗೆ ಸೂಚಿಸಬಹುದಾದ ಯಾವ ರಚನೆಯೇ ಆದರೂ ಅದರಲ್ಲಿ ನಮ್ಮ ಪ್ರೀತಿಪಾತ್ರರಾದ ಪ್ರಜೆಗಳಿಗೆ ಸಮಾನವಾದ ಅವಕಾಶಗಳನ್ನೂ ಒದಗಿಸಿಕೊಟ್ಟು ಕ್ಷೇಮ, ಸಂತೋಷ ಮತ್ತು ತೃಪ್ತಿಗಳನ್ನು ಹೆಚ್ಚಿಸಬೇಕೆಂಬ ನಮ್ಮ ಧ್ಯೇಯಕ್ಕೆ ತಕ್ಕಂತಿರಬೇಕೆಂದು ನಮ್ಮ ಘೋಷಣೆಯಲ್ಲಿ ಹೇಳಿರುತ್ತೇವೆ ಈ ಪ್ರಧಾನ ಧ್ಯೇಯವನ್ನು ಮುಂದಿಟ್ಟುಕೊಂಡು ಅದರ ಸಾಧನೆಗೆ ಅಗತ್ಯವಾದ ಏರ್ಪಾಡುಗಳನ್ನು ಮಾಡಿ ಜವಾಬ್ದಾರಿ ಸರ್ಕಾರದ ಯೋಜನೆಯನ್ನು ತಯಾರಿಸಲಾಗುವುದೆಂದು ನಾವು ನಂಬುತ್ತೇವೆ. ನಮ್ಮ ಪ್ರಜೆಗಳು ಆಡಳಿತದಲ್ಲಿ ರಾಜಭಕ್ತಿಯಿಂದ ಸಹಕರಿಸಿ ಸಂಸ್ಥಾನದಲ್ಲಿ ಶಾಂತಿಯು ನೆಲೆಸುವಂತೆ ವರ್ತಿಸಲೆಂದು ನಾವು ಆಶಿಸುತ್ತೇವೆ

ವಿದ್ಯಾರ್ಥಿಗಳಿಗೆ ಗಾಂಧಿಯವರ ಉಪದೇಶ

ವಿದ್ಯಾರ್ಥಿಗಳು ರಾಜಕೀಯರಂಗದಲ್ಲಿ ಪ್ರವೇಶಿಸಬಾರದು

ವಿದ್ಯಾರ್ಥಿಗಳಿಗಾಗಿ ಒಂದು ರಾಷ್ಟ್ರೀಯ ವ್ಯವಸ್ಥೆಯು ಏರ್ಪಡಬೇಕಾದುದು ತೀರ ಅವಶ್ಯವೆಂಬುದರಲ್ಲಿ ಸಂದೇಹವಿಲ್ಲ ಹಾಗೆ ಏರ್ಪಡುವ ಸಂಸ್ಥೆಯಲ್ಲಿ ಹಿಂದುಗಳೂ ಮುಸಲ್ಮಾನರೂ ಮತ್ತು ಇತರರೂ ಸೇರಬೇಕಾದುದು ಅಗತ್ಯ ಮುಂದೆ ಸತ್ಪ್ರಜೆಗಳಾಗಿ ಬಾಳಲನುಕೂಲಿಸುವಂತೆ ವಿದ್ಯಾರ್ಥಿಗಳು ತಮ್ಮ ವ್ಯಾಸಂಗಕ್ಕೆ ಸಂಪೂರ್ಣವಾಗಿ ಗಮನಕೊಡುವುದು ಅವಶ್ಯಕ ಅದನ್ನು ಕುರಿತು ವಿದ್ಯಾರ್ಥಿಗಳು ಯೋಚಿಸಿಲ್ಲವೆಂದೂ, ಅವರು ತಮ್ಮ ಕಡೆಗೆ ತಾವು ವ್ಯಾಸಂಗಮಾಡಿಕೊಂಡಿರುವ ಹಾಗೆ ರಾಜಕೀಯ ನಾಯಕರೂ ಸಹ ಅವರನ್ನು ಬಿಡುತ್ತಿಲ್ಲವೆಂದೂ, ಸೂಚಿಸಲು ನಾನು ವಿಷಾದಿಸುತ್ತೇನೆ ವಿದೇಶೀಯ ಸರ್ಕಾರದ ದೆಸೆಯಿಂದ ದುರವಸ್ಥೆಯು ಪ್ರಾರಂಭವಾಯಿತು ಹಿಂದೆ ನಡೆದ ತಪ್ಪನ್ನು ಸರಿಮಾಡುವ ಭಾಗದಲ್ಲಿ ಇಂದಿನವರಾದ ನಾನಾ ತರಹ ಶ್ರಮವಹಿಸಿ ಪ್ರಯತ್ನಿಸಿಲ್ಲ ಇವರ ಮೇಲೆಯೇ ನಾನಾ ರಾಜಕೀಯ ಗುಂಪುಗಳವರೂ ತಮ್ಮ ತಮ್ಮ ಉದ್ದೇಶ ಸಾಧನೆಗೆ ಸಹಾಯವಾಗುವುದಕ್ಕಾಗಿ, ವಿದ್ಯಾರ್ಥಿಗಳೆಂದರೆ ಮೀನುಗಳ ತಂಡಗಳೆಂತೆ ಬಾವಿಸಿಯೋ ಏನೋ, ಅವರನ್ನು ಹಿಡಿದು ತಮ್ಮ ವಶಪಡಿಸಿಕೊಂಡು ಉಪಯೋಗಿಸಿಕೊಳ್ಳುತ್ತಿದ್ದಾರೆ ವಿದ್ಯಾರ್ಥಿಗಳು ಸಹ, ಮುಂದಾಲೋಚನೆಯಿಲ್ಲದೆ ಪೆಚ್ಚುತನದಿಂದ ತಮ್ಮನ್ನು ಹಿಡಿಯಲು ಹರಡಿರುವ ಬಲೆಗಳಿಗೆ ಸುಲಭವಾಗಿ ಬಿದ್ದೂ, ಬೀಳುತ್ತಲೂ ಇದ್ದಾರೆ.

ಆದಕಾರಣ ವಿದ್ಯಾರ್ಥಿಗಳ ವ್ಯವಸ್ಥೆಯನ್ನೇರ್ಪಡಿಸಿ ಕೆಲಸ ನಡೆಯಿಸುವುದು ಅತ್ಯಂತ ಶ್ರಮಸಾಧ್ಯವಾದ ಮಹತ್ತರ ಕಾರ್ಯ! ವಿದ್ಯಾರ್ಥಿಗಳನ್ನೆಲ್ಲ ಐಕಮತ್ಯದಿಂದ ಒಟ್ಟುಗೂಡಿಸುವ ಈ ಮಹತ್ತರಕಾರ್ಯವನ್ನು ಸಾಧಿಸಲು ಉತ್ಸಾಹದಿಂದ ಮುಂದೆ ಬರುವ ಧೀರ ಪ್ರಕೃತಿಯವರೂ ಅವರಲ್ಲಿ ಇದ್ದೇ ಇದ್ದಾರೆ ವಿದ್ಯಾರ್ಥಿ ವೃಂದದಲ್ಲಿ ಐಕಮತ್ಯವನ್ನುಂಟು ಮಾಡುವುದು ಆ ವ್ಯವಸ್ಥೆಯ ಆಶಯ. ಪ್ರತ್ಯಕ್ಷವಾಗಿ ರಾಜಕೀಯದಲ್ಲಿ ಭಾಗವಹಿಸುವುದನ್ನು ಬಿಡುವುದನ್ನು ಕಲಿತಲ್ಲದೆ ಅವರು ಅದನ್ನು ನೆರವೇರಿಸಲಾರರು. ಇತ್ಯರ್ಥವಾಗಬೇಕಾದ ಅನೇಕ ಸಮಸ್ಯೆಗಳಿರುತ್ತವೆ ಅವುಗಳನ್ನೆಲ್ಲ ವಿಚಾರ ಮಾಡಬೇಕಾದುದೂ ಅವುಗಳ ವಿಷಯದಲ್ಲಿ ಅವಶ್ಯವಾಗುವ ನಾನಾ ಅಂಶಗಳನ್ನು ವ್ಯಾಸಂಗಮಾಡಬೇಕಾದುದೂ ವಿದ್ಯಾರ್ಥಿಗಳ ಕರ್ತವ್ಯವಾಗಿದೆ. ಅವರು ಕಾರ್ಯರಂಗಕ್ಕೆ ಪ್ರವೇಶಿಸಬಹುದಾದ ಕಾಲವೆಂದರೆ, ವ್ಯಾಸಂಗವನ್ನು ಪೂರೈಸಿದ ಮೇಲೆ ಮಾತ್ರವೇ

'ಈಗ ವಿದ್ಯಾರ್ಥಿಗಳ ವ್ಯವಸ್ಥೆಗಳವರು ರಾಜಕೀಯ ವಿಚಾರಗಳಲ್ಲಿ ನಿರ್ಣಯಗಳನ್ನು ಸೂಚಿಸುವ ಕೆಲಸಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆಯೇ ಹೊರತು, ರಾಷ್ಟ್ರ ಪುನರುಜ್ಜೀವನ ಕಾರ್ಯಕ್ಕಲ್ಲ ನಾನಾ ರಾಜಕೀಯ ಸಂಗಡಗಳವರೂ ವಿದ್ಯಾರ್ಥಿಗಳ ವ್ಯವಸ್ಥೆಗಳನ್ನು ತಮ್ಮ ತಮ್ಮ ಸಂಗಡದ ಪ್ರಯೋಜನಕ್ಕಾಗಿ ನಿಯೋಜಿಸಿ ಉಪಯೋಗಿಸಿಕೊಳ್ಳುತ್ತಿರುವುದೇ ಇದಕ್ಕೆ ಸ್ವಲ್ಪ ಮಟ್ಟಿಗೆ ಕಾರಣ ನಮ್ಮಲ್ಲಿ ಈಗ ಐಕಮತ್ಯವಿಲ್ಲದಿರುವುದಕ್ಕೂ ಈ ರಾಜಕೀಯ ಸಂಗಡಗಳ ಸ್ವಪ್ರಯೋಜನ ಸಾಧನೆಯ ಪ್ರಯತ್ನಗಳೇ ಕಾರಣ ಮುಂದೆ ವಿದ್ಯಾರ್ಥಿಗಳನ್ನು ಐಕಮತ್ಯದಿಂದ ಒಟ್ಟಿಗೆ ಸೇರಿಸಿ ಏರ್ಪಡಿಸುವ 'ನ್ಯಾಷನಲ್ ಯೂನಿಯನ್' ಎಂಬ ರಾಷ್ಟ್ರೀಯ ವ್ಯವಸ್ಥೆಯಲ್ಲಿ ರಾಜಕೀಯ ಸಂಗಡಗಳ ಆ ಬಗೆಯ ಪ್ರಯತ್ನಗಳೊಂದಕ್ಕೂ ಅವಕಾಶವಿಲ್ಲದಂತೆಯೂ, ವಿದ್ಯಾರ್ಥಿಗಳೆಲ್ಲರೂ ಒಕ್ಕಟ್ಟಿನಿಂದ ವ್ಯವಹರಿಸುವಂತೆಯೂ ಏರ್ಪಡಿಸಲು ಯಾವುದಾದರೂ ವಿಧಾನವನ್ನು ಕಲ್ಪಿಸಬೇಕೆಂದು ನಾವು ಉದ್ದೇಶಿಸಿದ್ದೇವೆ 'ವಿದ್ಯಾರ್ಥಿ ವ್ಯವಸ್ಥೆಗಳು ಸಂಪೂರ್ಣವಾಗಿ ರಾಜಕೀಯವನ್ನು ಪರಿತ್ಯಜಿಸುವುದು ಸಾಧ್ಯವೆಂದು ತಮ್ಮ ಅಭಿಪ್ರಾಯವೆ? ಅದು ಸಾಧ್ಯವಿಲ್ಲವೆಂದು ತಾವು ಭಾವಿಸುವ ಪಕ್ಷಕ್ಕೆ ವಿದ್ಯಾರ್ಥಿ ವ್ಯವಸ್ಥೆಗಳು ಎಷ್ಟರಮಟ್ಟಿಗೆ ರಾಜಕೀಯ ರಂಗದಲ್ಲಿ ಭಾಗವಹಿಸಬಹುದೆಂಬುದು ತಮ್ಮ ಅಭಿಪ್ರಾಯ.''

ಈ ಪ್ರಶ್ನೆಗಳಿಗೆ ಮೇಲೆ ಸ್ವಲ್ಪಮಟ್ಟಿಗೆ ಉತ್ತರಕೊಟ್ಟಿದ್ದೇನೆ ವಿದ್ಯಾರ್ಥಿಗಳು ರಾಜಕೀಯ ರಂಗಕ್ಕೆ ಪ್ರವೇಶಿಸಿ ಕೆಲಸಮಾಡುವುದನ್ನು ಪೂರ್ತಿಯಾಗಿ ಬಿಟ್ಟುಬಿಡಬೇಕು. ಎಲ್ಲ ಸಂಗಡಗಳವರೂ ತಮ್ಮ ತಮ್ಮ ಉದ್ದೇಶಸಾಧನೆಗಾಗಿ ವಿದ್ಯಾರ್ಥಿಗಳನ್ನುಪಯೋಗಿಸಿಕೊಂಡಿದ್ದಾರೆ; ಇದು ವಿಶೇಷಮುಖವಾದ ಬೆಳವಣಿಗೆಯಂತೆ ನಡೆದಿದೆ

ಶಾಂತವಾದ ವಾತಾವರಣವು ಏರ್ಪಟ್ಟು ವಿದ್ಯಾರ್ಥಿಗಳು ಉಪ್ರೇಕ್ಷೆ ಹೊಂದಿದ ಚಳುವಳಿಗಾರರಾಗಿರುವುದು ತಪ್ಪಿ ಅವರು ಶಾಂತಚಿತ್ತರಾಗಿ ವ್ಯಾಸಂಗ ನಿರತರಾಗುವಂತೆ ಮಾಡಿದರೆ ಈಗಿನ ನ್ಯೂನತೆಯು ತಾನಾಗಿಯೇ ಪರಿಹಾರವಾಗುತ್ತದೆ ವಿದ್ಯಾರ್ಥಿ ಜೀವನವು ಸನ್ಯಾಸಿಯ ಜೀವನಕ್ಕೆ ಹೋಲಿಸಲ್ಪಟ್ಟಿದೆ ಅದು ಉಚಿತವಾಗಿಯೇ ಇದೆ ಸರಳ ಜೀವನವೂ ಉದಾತ್ತವಾದ ವಿಚಾರಶೀಲತೆಯೂ ಅವರನ್ನು ಉದ್ದೇಶಿಸಬೇಕು, ಅವರು ಅನೇಕ ಅಮೋಘ ಗುಣಗಳ ಮೂರ್ತಿಸ್ವರೂಪರಾಗಿ ಪರಿಣಮಿಸಬೇಕು ಶಿಸ್ತಿನ ವರ್ತನೆಯ ಪ್ರತೀಕಗಳಾಗಿ ಅವರು ಶೋಭಿಸಬೇಕು ವ್ಯಾಸಂಗವೇ ವಿದ್ಯಾರ್ಥಿಗಳ ಸಾಧನ, ವ್ಯಾಸಂಗದಿಂದಲೇ ಅವರಿಗೆ ಆನಂದವಾಗಬೇಕು ಆದರೆ ವ್ಯಾಸಂಗವು ವಿದ್ಯಾರ್ಥಿಯು ತೆರಬೇಕಾದ ತೆರಿಗೆಯ ರೂಪಕ್ಕಿಳಿಯದಿದ್ದರೆ ಮಾತ್ರವೇ ವ್ಯಾಸಂಗದಿಂದ ಅವರಿಗೆ ಆನಂದವಾದೀತು ದಿನ ದಿನವೂ ಜ್ಞಾನಾಮೃತವನ್ನು ಮೊಗೆ ಮೊಗೆದು ತುಂಬಿಕೊಂಡು ಜ್ಞಾನಾಭಿವೃದ್ಧಿ ಮಾಡಿಕೊಳ್ಳುವುದಕ್ಕಿಂತಲೂ ಹೆಚ್ಚಿನ ಆನಂದವು ಮತ್ತಾವುದು ತಾನೇ ವಿದ್ಯಾರ್ಥಿಗಳಿಗಿದ್ದೀತು?

("ಹರಿಜನ" ಪತ್ರಿಕೆಯಿಂದ ೧೭-೮-೪೭)

ಮಿಶ್ರರವರು ಗುಂಡಿನ ಬಾಯಿಗೆ ಬಲಿಯಾದರು

ದೆಹಲಿಯ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರಾದ ಶ್ರೀ ಕೆ ಎಸ್ ಮಿಶ್ರರವರಿಗೆ ಗಲಭೆಗಾರರು ಗುಂಡು ಹಾರಿಸಿದರು ಕೂಡಲೆ ಅವರನ್ನು ಆಸ್ಪತ್ರೆಗೆ ಕಳುಹಲಾಯಿತು ವೈದ್ಯರು ಬಹು ಸಾಹಸಪಟ್ಟರೂ ಅದು ವಿಫಲವಾಗಿ ಶ್ರೀ ಮಿಶ್ರರವರು ವಿಧಿವಶರಾದರು! ದೆಹಲಿ ಮೆಹರಾಲಿ ಪ್ರದೇಶದಲ್ಲಿ ಗಲಭೆ ಅಸಾಧ್ಯವಾಗಿದ್ದಾಗ ಪರಿಸ್ಥಿತಿಯನ್ನು ಹತಬಂದಿಗೆ ತರಲು ಶ್ರೀ ಮಿಶ್ರರವರು ಸಾಹಸಪಡುತ್ತಿದ್ದಾಗ ಯಾರೋ ದುರಾತ್ಮರು ಅವರ ಮೇಲೆ ಗುಂಡು ಹಾರಿಸಿದರು ಕೊಲೆಪಾತಕರನ್ನು ಪತ್ತೆ ಹಚ್ಚಲು ಪೋಲೀಸರು ಸರ್ವಪ್ರಯತ್ನ ಮಾಡುತ್ತಿದ್ದಾರೆ 'ಕಣ್ಮರೆಯಾದ ಶ್ರೀ ಮಿಶ್ರರವರು ದೆಹಲಿಯ ಪರಿಸ್ಥಿತಿ ವಿಷಮಿಸಿದಾಗ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟರು. ಇದಕ್ಕೂ ಮೊದಲು ಅವರು ಭಾರತ ಸರ್ಕಾರದ ಡೆಪ್ಯುಟಿ ಕಾರ್ಯದರ್ಶಿಗಳಾಗಿದ್ದರು.

ಮೈಸೂರು ರೈಲ್ವೆ ಕೆಲಸಗಾರರ ಮುಷ್ಕರ

ಮೈಸೂರು ರೈಲ್ವೆಯ ಕೆಲಸಗಾರರು ಇದೇ ತಿಂಗಳು ೬ನೆಯ ತಾರೀಖು ಮಧ್ಯರಾತ್ರಿಯಿಂದ ಮುಷ್ಕರ ಹೂಡಿದ್ದಾರೆ ೨೦೦ ರೂ ಗಿಂತ ಕಡಮೆ ಸಂಬಳ ಬರುವ ಸುಮಾರು ಹನ್ನೊಂದುಸಾವಿರ ನೌಕರರು, ಕೆಲಸಗಾರರು ಮುಷ್ಕರಕ್ಕೆ ಸೇರಿದ್ದಾರೆ ಇತರ ಮೊದಲನೇ ದರ್ಜೆಯ ರೈಲ್ವೆ ಕಂಪನಿಗಳ ಕೆಲಸಗಾರರಿಗೆ ಕೊಡುವಂತೆ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದೂ, ಅದರಂತೆ ಹಿಂದಿನಿಂದ ಪ್ರತಿ ಕೆಲಸಗಾರನಿಗೂ ಒಂದುಸಾವಿರ ರೂಪಾಯಿ ಆದರೂ ಕೊಡಬೇಕೆಂದೂ ಕೇಳುತ್ತಿದ್ದಾರೆ ಪ್ರತಿಯೊಬ್ಬನಿಗೂ ೧ ಸಾವಿರ ರೂಪಾಯಿ ಕೊಟ್ಟರೆ ೧ ಕೋಟಿ ೧೦ ಲಕ್ಷ ರೂ ಗಳು ಬೇಕಾಗುವದರಿಂದ ಇದು ಸಾಧ್ಯವಿಲ್ಲವೆಂದೂ, ೧೯೪೭ನೆಯ ಸಾಲಿನ ಜನವರಿ ೧ನೆಯ ತಾರೀಖಿನಿಂದ ಕೆಳದರ್ಜೆಯ ನೌಕರರ ಮತ್ತು ಎಲ್ಲ ಕೆಲಸಗಾರರ ಸಂಬಳಗಳನ್ನೂ ಹೆಚ್ಚಿಸಲಾಗುವುದೆಂದೂ, ಅದಕ್ಕೆ ಬೇಕಾದ ವರ್ಷಕ್ಕೆ ಹದಿನೆಂಟೂವರೆಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದೆಯೆಂದೂ ಜೊತೆಗೆ ಈಗ ಕೊಡುತ್ತಿರುವ ತುಟ್ಟಿಭತ್ಯವಲ್ಲದೆ ಪ್ರತಿಯೊಬ್ಬನಿಗೂ ತಿಂಗಳಿಗೆ ಐದು ರೂಪಾಯಿ ವಿಶೇಷಭತ್ಯವನ್ನು ಸಹ ಕೊಡಲಾಗುವುದೆಂದೂ ಸರಕಾರದವರು ಹೇಳಿದ್ದಾರೆ. ಆದರೂ ಮುಷ್ಕರವು ಇನ್ನೂ ನಿಂತಿಲ್ಲ

ಸ್ವೀಕಾರ

ಗದಗ ಶಹರ ನಿವಾಸಿಗಳಾದ ಮ|| ರಾ|| ಮಲಸಮುದ್ರದ ಹೊನ್ನಪ್ಪನವರು ಶ್ರೀ| ಷ|| ಬ್ರ|| ಚಿಕ್ಕಮಣ್ಣೂರು ಬೃಹನ್ಮಠದ ಪಟ್ಟದಸ್ವಾಮಿಗಳವರಿಂದ ಶಿವದೀಕ್ಷೆಯನ್ನು ತೆಗೆದುಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಗದಗಶಹರ ನಿವಾಸಿಗಳಾದ ಶ್ರೀಮತಿ ರುದ್ರವ್ವ ಕೋಂ ವಲಕಾಜಪ್ಪ ಬಸ್ರೂರ ಇವರು ನಿಜಶ್ರಾವಣ ಶು|| ೧೪ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1-4-0 ರೂಪಾಯಿಯು ಮ|| ರಾ|| ಬಸವನಗೌಡ ರಾಮನಗೌಡರ ದಲಾಲ ಗದಗ ಇವರ ದ್ವಾರಾ ತಲ್ಪಿರುತ್ತದೆ

ಸೊಲ್ಲಾಪುರದಲ್ಲಿ ಹೇಮರಡ್ಡಿ ಮಲ್ಲಮ್ಮನ ಪುರಾಣ ಸಮಾಪ್ತಿಸಮಯದಲ್ಲಿ ಸಮರ್ಪಿಸಿದ 1 ರೂ ಯು ಸೌ|| ಪಾನವ್ವಬಾಯಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ

ವಿಸಟೂರು ಟವನ್ನಿನಲ್ಲಿರುವ ಶ್ರೀ|| ವೀರಾಯಿ ಮಲ್ಲಪ್ಪನವರು ಪುತ್ರಿ ಚಿ| ಸೌ|| ಸರ್ವಮಂಗಳಮ್ಮನು ಮಂಗಳಗೌರೀ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ವೇ|| ತುಂಬಾಪುರಮಠದ ಪುರೋಹಿತ ನಂಜುಂಡಯ್ಯನವರ ದ್ವಾರಾತಲ್ಪಿರುತ್ತದೆ.

ಹೊನ್ನಾಳಿ ತಾ|| ರಾಂಪುರದಲ್ಲಿರುವ ವೇ|| ಶಿಂಗೆರೆ ಮಠದ ಹಾಲಪ್ಪಯ್ಯನವರ ಜ್ಯೇಷ್ಠಪುತ್ರರಾದ ಹಾಲಸಿದ್ಧಯ್ಯನವರು ಶ್ರಾವಣ ಶು|| ೫ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ.ಯು ಬಸವಾಪಟ್ಟಣದ ವೇ|| ಎ. ಎಂ ಹಾಲಸಿದ್ಧಯ್ಯನವರ ದ್ವಾರಾತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀತಾಯಿ ಪಾರ್ವತೀ ಮಂದಿರ

ಚರಾಚರಾತ್ಮಕವಾದೀ ಪ್ರಪಂಚದಲ್ಲಿ ಅನೇಕ ಪ್ರಾಣಿಗಳಿರುವವು ಅವುಗಳಲ್ಲಿ ಮನುಷ್ಯ ಪ್ರಾಣಿಯು ಹೆಚ್ಚಿನದಾಗಿರುವುದು ಎಲ್ಲ ಪ್ರಾಣಿಗಳಲ್ಲಿಯೂ ಗಂಡು ಹೆಣ್ಣುಗಳಿರುವಂತೆ ಮನುಷ್ಯ ಪ್ರಾಣಿಗಳಲ್ಲಿಯೂ ಉಂಟು ಈ ಭೇದವು ಜಗನ್ನಿಯಾಮಕನಾದ ಶ್ರೀಪರಮಾತ್ಮನಿಂದಲೇ ಮಾಡಲ್ಪಟ್ಟಿದೆ ಆಕಾರದಲ್ಲಿ ಭೇದವಿದ್ದರೂ ಅವರೀರ್ವರ ಜೀವನ ಮಾರ್ಗವು ಒಂದೇ ಆಗಿರುವುದು ಎರಡೂ ಕಣ್ಣುಗಳ ನೋಟವು ಒಂದೇ ಆಗಿರುವಂತೆ ಸ್ತ್ರೀಪುರುಷರ ಜೀವನ ಮಾರ್ಗವು ಪರಿಣಾಮದಲ್ಲಿ ಏಕಮುಖವಾದುದಾಗಿದೆ ಸ್ತ್ರೀ—ಪುರುಷರು ಒಬ್ಬರನ್ನೊಬ್ಬರು ಅಗಲಿ ಜೀವನರಥವನ್ನು ಸಾಗಿಸುವುದು ಸಾಧ್ಯವೇ ಇಲ್ಲ ಜೀವನದಲ್ಲಿ ಪ್ರೇಮವು ಬಹಳ ಬೆಲೆಯುಳ್ಳ ವಸ್ತುವಾಗಿದೆ ಪ್ರೇಮವಿಲ್ಲದ ಜೀವನವು ಜೀವವಿಲ್ಲದ ಶರೀರದಂತೆ ನಿಸ್ಸಾರವಾದುದಾಗಿದೆ ಸ್ತ್ರೀಪುರುಷರೀರ್ವರಲ್ಲಿ ಅನುಕೂಲಗುಣಶಕ್ತಿಗಳಿಲ್ಲದಿದ್ದರೆ ಪ್ರೇಮವು ಹುಟ್ಟುವುದಿಲ್ಲ ಇಬ್ಬರೂ ಸೌಜನ್ಯಭೂಷಿತರಾಗಬೇಕು ಇಬ್ಬರಲ್ಲಿಯೂ ಗೃಹಕೃತ್ಯಗಳ ಜ್ಞಾನವಿರಬೇಕು ಇಬ್ಬರೂ ವಿದ್ಯಾವಂತರೂ ನೀತಿಯುಳ್ಳವರೂ, ಮಿತವ್ಯಯ ಪರಾಯಣರೂ, ಹರ ಗುರು ಭಕ್ತಿಸಂಪನ್ನರೂ ಆಗಿರಬೇಕು ಇಬ್ಬರೂ ಪರಸ್ಪರ ಹಿತವನ್ನು ಬಯಸಿ ಅದರಂತೆ ನಡೆಯುತ್ತಿರಬೇಕು ಯಾವ ಮನೆಯಲ್ಲಿಯ ಸ್ತ್ರೀಪುರುಷರು ಅನ್ಯೋನ್ಯ ಪ್ರೀತಿವಿಶ್ವಾಸಗಳಿಂದ ನಡೆದುಕೊಳ್ಳುತ್ತಾರೆಯೋ ಮನೆಯಲ್ಲಿ ಆನಂದವು ಉಕ್ಕೇರಿ ಹರಿಯುತ್ತಿರುತ್ತದೆ ಈಗಿನ ಕಾಲದಲ್ಲಿ ಸುಧಾರಣೆಯ ಗಾಳಿಯು ಬೀಸಹತ್ತಿದೆ—ನಾಡಿನಲ್ಲಿರ ವವರೆಲ್ಲರೂ ಕಣ್ಣು ತೆರೆದು ಚೈತನ್ಯಗೊಂಡು ಮುಂದುವರೆಯುತ್ತಿರುವರು ಸುಧಾರಣೆಯೆಂದರೆ ಸುಜೀವನಕ್ಕೆ ಬೇಕಾಗುವ ವಿದ್ಯಾ ಸಂಪತ್ತಿ ಸಾಧನಗಳನ್ನೊದಗಿಸಿಕೊಂಡು ಸದ್ಧರ್ಮ ಮಾರ್ಗದಲ್ಲಿ ನಡೆದು ಪುರ್ಣತೆಯಿಂದ ಪಾರಾಗುವುದು ಬಾಹ್ಯಾಡಂಬರವು ಸುಧಾರಣೆಯಲ್ಲ ಧರ್ಮಾಚರಣ, ನೀತಿ, ತ್ಯಾಗ, ಪರೋಪಕಾರ, ಸೌಜನ್ಯ, ಇವುಗಳಿಲ್ಲದ ಸುಧಾರಣೆಯು ಬಂಜಗೋವಿನಂತೆ ಆಕಾರದಲ್ಲಿ ಮಾತ್ರ ರಮ್ಯವಾಗಿದೆ ಕೇವಲ ಮಾತಿನಲ್ಲಿಯ ಶೂನ್ಯಸುಧಾರಣೆಯಂತೂ ಚಿತ್ರದಲ್ಲಿಯ ಧನರಾಶಿಯಂತೆ ನಿರರ್ಥಕವಾದುದಾಗಿದೆ ಈಗಿನ ಸಮಯದಲ್ಲಿ ಪುರುಷರಂತೆ ಸ್ತ್ರೀಯರ ಕರ್ತವ್ಯಕ್ಷೇತ್ರವೂ ಬಹು ವಿಶಾಲವಾದುದಾಗಿದೆ ಸ್ತ್ರೀಸುಧಾರಣೆಯಲ್ಲಿ ಜಗತ್ತಿಗೆ ಅಪಾರ ಕಲ್ಯಾಣವಿದೆ ತಾಯಿಯು ಜಾಣೆಯಾದರೆ ಮಕ್ಕಳೂ ಬುದ್ಧಿವಂತರಾಗುವರು. ತಾಯಿಯ ಶಿಕ್ಷಣವು ಮೊದಲನೆಯದು ತಾಯಿಯ ನಡೆನುಡಿಗಳೇ ಮಕ್ಕಳ ಜೀವನಕ್ಕೆ ಪೂರ್ಣ ಸಹಾಯಕಗಳಾಗಿವೆ ತಾಯಿಯ ನಡೆನುಡಿಗಳು ಶುದ್ಧವಾಗಿದ್ದರೆ ಎಳೆಯ ಮಕ್ಕಳ ಮನಸ್ಸಿನಲ್ಲಿ ಒಳ್ಳೆಯ ಪರಿಣಾಮವಾಗುವದು ಚಿಕ್ಕಂದಿನಲ್ಲಿ ಎಳೆಮಕ್ಕಳ ಮನಸ್ಸಿನಲ್ಲಿ ಮೂಡಿದ ಗುಣಕ್ರಿಯೆಗಳು ಬಹುಮಟ್ಟಿಗೆ ಗಟ್ಟಿಯಾಗಿಯೇ ಉಳಿಯುತ್ತಿವೆ “ಮೂರುವರ್ಷದ ಬುದ್ಧಿ ನೂರು ವರ್ಷಗಳವರೆಗೆ” ಎಂಬ ಗಾದೆಯೇ ಇದಕ್ಕೆ ಸಾಕ್ಷಿಯಾಗಿದೆ ಹೀಗಿರುವುದರಿಂದ ಪುರುಷನಂತೆ ಸ್ತ್ರೀಯೂ ತನ್ನ ಶುದ್ಧ ಕಾರ್ಯಕ್ಷೇತ್ರದಲ್ಲಿ ದುಡಿದು ಜಗತ್ತಿಗೆ ಮಹೋಪಕಾರವನ್ನು ಸಲ್ಲಿಸಿ, ತನ್ನ ಜನ್ಮವನ್ನು ಸಫಲಗೊಳಿಸಬೇಕಾಗಿದೆ ಈ ಬಗ್ಗೆ ಜಗತ್ತಿನಲ್ಲಿ ದೇಶಕಾಲಪರತ್ವೇನ ಅನೇಕರು ಯತ್ನಿಸುತ್ತಿರುವರು ಸತ್ಪುರುಷರ ಜೀವನವು ಸ್ವಾರ್ಥರಹಿತವಾಗಿದ್ದು ಅವರು ಜಗತ್ಕಲ್ಯಾಣಕ್ಕಾಗಿಯೇ ತಮ್ಮ ಜೀವನವನ್ನು ಧಾರೆಯೆರೆಯುವರು ಅದರಂತೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ತಮ್ಮ ಜೀವನವನ್ನೇ ಧರ್ಮೋದ್ಧಾರಕ್ಕೂ ಜಗತ್ಕಲ್ಯಾಣಕ್ಕೂ ಅರ್ಪಿಸಿರುವರು

ಶ್ರೀಗಳವರು ಸುಧಾರಣೆಗಾಗಿ ಎಷ್ಟು ಕಷ್ಟಪಡುತ್ತಿರುವರೆಂಬುದನ್ನು ಪ್ರತ್ಯೇಕವಾಗಿ ಹೇಳುವ ಕಾರಣವೇ ಇಲ್ಲ ಅವರ ಧವಲಕೀರ್ತಿಯು ದಶಕ್ಕುಗಳಲ್ಲಿ ಹರಡಿಕೊಂಡಿದೆ. ಸರಳ ಜೀವನವು ಎಲ್ಲರನ್ನೂ ಆನಂದಗೊಳಿಸುತ್ತದೆ. ಅವರ ಹಸನ್ಮುಖವು ಸರ್ವರನ್ನೂ ಸಂತೋಷಗೊಳಿಸುತ್ತದೆ. ಒಂದೇ ಒಂದು ಮಾತಿನಲ್ಲಿ ಹೇಳುವುದಾದರೆ ಶ್ರೀಗಳವರ ಜಗತ್ಕಲ್ಯಾಣಕ್ಕೋಸ್ಕರವಾಗಿ ಅವತರಿಸಿದ ಮಹಾಪುರುಷರಾಗಿರುವರು. ಶ್ರೀಗಳವರು ಸ್ಥಾಪಿಸಿದ ಶ್ರೀ ಮುಕ್ತಿಮಂದಿರವು ಅವರ ಲೀಲಾಭೂಮಿಯಾಗಿದೆ. ಶ್ರೀಗಳವರ ಹೃದಯಕೋಶದಂತಿರುವ ಶ್ರೀಮುಕ್ತಿಮಂದಿರದಲ್ಲಿ ಈಗಾಗಲೇ ಲಕ್ಷಾಂತರ ರೂಪಾಯಿಗಳ ಕಾರ್ಯಕಲಾಪಗಳು ನಡೆಯುತ್ತಲಿವೆ ಮುಂದೆ ಅದರಲ್ಲಿ ಅನೇಕ ಮಹಾಕಾರ್ಯಗಳಾಗಬೇಕಾಗಿವೆ ಶ್ರೀಮುಕ್ತಿಮಂದಿರದಲ್ಲಿ ಅನೇಕ ಕಾರ್ಯಕಲಾಪಗಳೊಂದಿಗೆ ಸ್ತ್ರೀಯರ ಸುಧಾರಣೆಯ ಉದ್ದೇಶವೂ ಒಂದಾಗಿದೆ. ರಮ್ಯವಾದ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಶ್ರೀಗಳು ಹಗಲಿರುಳು ಹಂಬಲಿಸುತ್ತಿರುವರು ಇದಕ್ಕೆ ಪ್ರಧಾನಾಂಗವಾಗಿ ತಾಯಿ ಪಾರ್ವತಿಮಂದಿರ’ವನ್ನು ಮೊದಲು ಸ್ಥಾಪಿಸಬೇಕಾಗಿದೆ ಈ ಮಂದಿರದ ಆಶ್ರಯದಲ್ಲಿ ಆ ಜಗಜ್ಜನನಿಯ ಪವಿತ್ರಸನ್ನಿಧಿಯಲ್ಲಿ ಸ್ತ್ರೀಸುಧಾರಣೆಯ ಅನೇಕ ಕಾರ್ಯಗಳು ನಡೆಯಬೇಕಾಗಿವೆ “ಶ್ರೀತಾಯಿ ಪಾರ್ವತಿ ಮಕ್ಕಳ ಬಳಗ’ವಾದರೂ ಇದಕ್ಕಾಗಿಯೇ ಜನ್ಮವೆತ್ತಿದೆ ಶ್ರೀಮುಕ್ತಿ ಮಂದಿರದಲ್ಲಿ ಸ್ಥಾಪಿತವಾಗಲಿರುವ ಶ್ರೀತಾಯಿ ಪಾರ್ವತಿಮಂದಿರದ ಶಂಕುಸ್ಥಾಪನೆಯು ಶ್ರೀಗಳವರಿಂದಲೇ ಆಗಿದೆ ಲಕ್ಷ್ಮೇಶ್ವರದ ತಾಯಿ ಪಾರ್ವತಿ ಮಕ್ಕಳ ಬಳಗವೂ ಮಂದಿರ ನಿರ್ಮಾಣಕ್ಕಾಗಿ ಸಹಾಯವನ್ನು ನೀಡಲು ಸಿದ್ಧವಾಗಿದೆ ಎಲ್ಲ ಗ್ರಾಮಗಳಲ್ಲಿರುವ ಹೆಣ್ಣುಮಕ್ಕಳು ಈ ಕಾರ್ಯದಲ್ಲಿ ಮನಗೊಟ್ಟು ದುಡಿಯಬೇಕು ಕಾರ್ಯವು ದೊಡ್ಡದಾಗಿರುವುದರಿಂದ ಧನ ಸಹಾಯವೂ ಹೆಚ್ಚಾಗಿ ಬೇಕಾಗಿದೆ ಎಲ್ಲ ಸ್ತ್ರೀಯರೂ ಮನಃಪೂರ್ವಕವಾಗಿ ಸಹಾಯ ಮಾಡಿದರೆ ಈ ಕಾರ್ಯವು ಬೇಗನೆ ಮುಗಿದು ಮುಂದಿನ ಕಾರ್ಯಗಳಿಗೆ ಬಹಳ ಅನುಕೂಲತೆಯಾಗುವುದು ಹಳ್ಳಿ-ಪಟ್ಟಣಗಳಲ್ಲಿರುವ ಹೆಣ್ಣು ಮಕ್ಕಳೆಲ್ಲರೂ ಈ ಕಡೆಗೆ ಮನಸ್ಸನ್ನು ತಿರುಗಿಸಿ ಧನವನ್ನು ಸಂಗ್ರಹಿಸಿ ಕಳುಹಿಸಬೇಕು ಸ್ತ್ರೀಯರ ಸೌಭಾಗ್ಯದೇವತೆಯಾದ ಶ್ರೀ ತಾಯಿ ಪಾರ್ವತೀ ದೇವಿಯ ದೇವಸ್ಥಾನ ನಿರ್ಮಾಣಕ್ಕೋಸ್ಕರವಾಗಿ ಎಲ್ಲರೂ ತ್ರಿಕರಣಪೂರ್ವಕವಾಗಿ ದುಡಿಯಬೇಕು ಶ್ರೀಮಂದಿರದಲ್ಲಿ ಜರುಗಲಿರುವ ಮಹಾಕಾರ್ಯಗಳನ್ನು ಎಲ್ಲರೂ ಎದುರುನೋಡುತ್ತಿರಬೇಕು ಶ್ರೀಗಳವರ ಮತ್ತು ಶ್ರೀ ಜಗಜ್ಜನನಿಯ ಕೃಪಾಶೀರ್ವಾದದಿಂದ ಸ್ತ್ರೀಸುಧಾರಣೆಯು ಮುಂದುವರೆಯಲಿ ಶ್ರೀತಾಯಿ ಪಾರ್ವತೀ ಮಕ್ಕಳ ಬಳಗವು ಜಗತ್ತಿನಲ್ಲಿ ಹರಡಲಿ ಶ್ರೀತಾಯಿ ಪಾರ್ವತೀ ಮಂದಿರಕ್ಕೆ ಧನಸಹಾಯವನ್ನು ನೀಡಿ ಸಮಸ್ತರೂ ಪುಣ್ಯಕೀರ್ತಿಗಳನ್ನು ಪಡೆಯಬೇಕು

ತಾಯಿ ಪಾರ್ವತೀ ಮಂದಿರಕ್ಕೆ ಧನಸಹಾಯ ಮಾಡಿದ ಮಾನ್ಯಮಹಿಳೆಯರ ಹೆಸರುಗಳು—

೫೧ ರೂ ಸೌ॥ ಶಿವಗಂಗವ್ವ ಚರಮೂರ್ತಿಸ್ವಾಮಿಗಳು
ಸುರಗೀಮಠ ಲಕ್ಷ್ಮೇಶ್ವರ

೫೦೧ ರೂ ಸೌ॥ ಪಾರ್ವತೀಬಾಯಿ ಶಂಕರಗೌಡರು
ಬಹದ್ದೂರ ದೇಸಾಯಿ ಲಕ್ಷ್ಮೇಶ್ವರ

೧೦೦೧ ರೂ ಶ್ರೀಮತಿ ಹಾಲವ್ವ ಸಂಗಪ್ಪನವರು
ಪಟ್ಟಣಶೆಟ್ಟಿ ಹುಲುಗೂರು

೨೦೮ ರೂ ಸೌ॥ ಚನ್ನವ್ವ, ಸಣ್ಣಮುರಿಗಯ್ಯನವರು
ಕೂಡ್ಲಮಠ ಸಿಗ್ಗಲಿ,
(ದಾನಶೂರ ಶ್ರೀ ಸಿದ್ದಯ್ಯನವರ ಸೊಸೆ)

೨೦೧ ರೂ ಸೌ॥ ಸೀತಾಬಾಯಿ ಪರಪ್ಪನವರು
ಹಳೆಮನಿ ಡಾಕ್ಟರ ಹುಬ್ಬಳ್ಳಿ

೧೦೮ ರೂ ಸೌ॥ ಪಾರ್ವತವ್ವ, ಒಸಯ್ಯನವರು
ಕೂಡ್ಲಮಠ ಯಲವಿಗಿ

೧೦೧ ರೂ ಸೌ॥ ನೀಲವ್ವ ಸಣ್ಣಬಸಪ್ಪನವರು
ಮಾಜನಶೆಟ್ಟಿ ಲಕ್ಷ್ಮೇಶ್ವರ

೧೦೧ ರೂ ಅಡಿವವ್ವ ಬಸವಣ್ಣೆಪ್ಪನವರು
ಕೊಟಗಿ ಲಕ್ಷ್ಮೇಶ್ವರ

೧೦೧ ರೂ ಸೌ॥ ಕೊಟ್ರವ್ವ ದುಂಡಪ್ಪನವರು
ಮಲೆನಾಡದ ಲಕ್ಷ್ಮೇಶ್ವರ

೧೦೧ ರೂ ಸಂಗಮೇಶ್ವರ ಮೋಟಾರ್ ಕಂಪೆನಿ ಗದಗ

೧೦೧ ರೂ. ಟ್ರಾನ್ಸಪೋರ್ಟ ಮೋಟಾರ್ ಕಂಪೆನಿ

೧೦೧ ರೂ. ಯಲ್ಲಪ್ಪಗೌಡರು ಮರಿಗೌಡರು ಗದಗ

೧೦೫ ರೂ. ಸೌ॥ ಸಕ್ಕರೆಬಾಯಿ ದಲಿಚಂದ ಮಾರವಾಡಿ
ಲಕ್ಷ್ಮೇಶ್ವರ

೫೧ ರೂ. ಸೌ॥ ಚನ್ನವ್ವ ಶಿವಮೂರ್ತಿಸ್ವಾಮಿ
ಗದ್ದಿದೇವರ ಮಠ ಲಕ್ಷ್ಮೇಶ್ವರ

ಪಂಜಾಬಿನಿಂದ ಭಾರತಕ್ಕೆ ೨೫ ಲಕ್ಷ ಜನ ನಿರಾಶ್ರಿತರು

ಪಂಜಾಬಿನ ದುರ್ಘಟನೆಗಳ ಬಗ್ಗೆ ನೆಹರೂರವರ ಹೇಳಿಕೆ

ಭಾರತೀಯರು ಸ್ವಾಭಾವಿಕವಾಗಿ ಶಾಂತಿ ಪ್ರಿಯರು ಅವರಿಗೆ ಹಿಂಸೆಯೆಂದರಾಗದು ಅಂತಹ ಶಾಂತಮೂರ್ತಿಗಳನ್ನು ಹೊಡೆದೆಬ್ಬಿಸಿ, ಉದ್ರಿಕ್ತರನ್ನಾಗಿ ಮಾಡಲು ಯಾವುದೋ ದೊಡ್ಡ ಕಾರಣವಿರಬೇಕು

ಪ್ರಶಾಂತವಾಗಿದ್ದ ಪಂಜಾಬಿನ ವಾತಾವರಣವು ಏಕಾಏಕಿ ವಿಷಮಿಸಲು ಭಾರತದ ವಿಭಜನೆಯೇ ಕಾರಣ' ಭಾರತವನ್ನು ಇಬ್ಭಾಗಮಾಡುವ ನಿರ್ಧಾರವು ಪ್ರಕಟಿಸಲ್ಪಟ್ಟ ಕೂಡಲೆ ತಮ್ಮ ಪ್ರಾಣಗಳಿಗೆ ಎಲ್ಲಿ ಅಪಾಯ ಸಂಭವಿಸುವುದೋ ಎಂದು ಪಂಜಾಬಿನ ಅಲ್ಪಸಂಖ್ಯಾತರು ಕಳವಳಗೊಂಡರು ಜನಜೀವನದಲ್ಲಿ ಸಾಮರಸ್ಯವು ಮಾಯವಾಯಿತು ಭಯ, ಶಂಕೆಗಳು ಪ್ರತಿಯೊಬ್ಬನ ಹೃದಯದಲ್ಲಿಯೂ ಮೂಡಿದುವು ನರಹತ್ಯೆಯ ರುದ್ರ ನಾಟಕವು ಪ್ರಾರಂಭವಾಯಿತು

—ಎಂಬುದಾಗಿ ಪಂ॥ ಜವಹರಲಾಲ್ ನೆಹ್ರೂರವರು ತಿಳಿಸಿರುವರು

ದೆಹಲಿಯ ಗಲಭೆಗಳ ಫಲವಾಗಿ ಇದುವರೆಗೆ ೧೦೦೦ ಮಂದಿ ಪ್ರಾಣ ಬಿಟ್ಟಿರುವರೆಂದೂ, ಪಂಜಾಬಿನ ಗಲಭೆಗಳಲ್ಲಿ ಸತ್ತವರ ಸಂಖ್ಯೆ ೧೫,೦೦೦ ವೆಂದು ವರದಿಯಾಗಿದ್ದರೂ ಇದರ ಮೂರರಷ್ಟು ಮಂದಿಯಾದರೂ ಹತರಾಗಿರಬಹುದೆಂದೂ ತಿಳಿಸಿರುವರು

ನಿರಾಶ್ರಿತರ ಸಮಸ್ಯೆಯು ಬಹು ಕಠಿಣವಾದ ಸಮಸ್ಯೆಯೆಂದೂ, ಇದುವರೆಗೆ ೧೫ ಲಕ್ಷ ಜನರು ಪಾಕಿಸ್ಥಾನದಿಂದ ಭಾರತಕ್ಕೆ ಬಂದಿದ್ದಾರೆಂದೂ ಇನ್ನೂ ಹತ್ತು ಲಕ್ಷ ನಿರಾಶ್ರಿತರು ಭಾರತಕ್ಕೆ ಬರುವವರಾಗಿದ್ದಾರೆಂದೂ ಅವರು ತಿಳಿಸಿದರು

“ನಿರಾಶ್ರಿತರ ಸಮೂಹ ನೋಡಿ ನಮಗೆ ಸಿಡಿಲು ಬಡಿದಂತಾಗಿದೆ. ಪ್ರಜಾವರ್ಗಾವಣೆಯಾಗಬೇಕೆಂದು ನಾವು ಯೋಚಿಸಿರಲಿಲ್ಲ ಅದು ಭಾರತ ವಿಭಜನೆಯ ಶೋಚನೀಯವಾದ ಪರಿಣಾಮ” ಎಂದು ನೆಹರೂರವರು ತಿಳಿಸಿರುವರು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಧ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಓದುಗರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, **ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಬೆಲೆಯಲ್ಲಿ ಕಡಿಮೆಯಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. ಬೆಲೆ ೨ ರೂಪಾಯಿ.**

ಮ್ಯಾನೇಜರ್—

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಗೌರಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಚಾರ್ಯಕನಕಪಂಕಜಜನಿತರ್ ಪಂಚಸ್ಥಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರತತ್ತ್ವಪಂಚಲಿ ಗುದ್ದಪರ್
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಚಾರ್ಯ ಜಗದ್ಗುರೂತ್ತಮ ವರರ ಪ ಲಿಪ್ಸ ...

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ... ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಸಪ್ಟೆಂಬರ್ ೧೯೪೭ | ಸಂಚಿಕೆ ೨೩

ಶ್ರೀಸಿದ್ಧಲಿಂಗೇಶ್ವರಪುರಾಣ

ಮಹಾಮಹಿಮಶಾಲಿಗಳೆಂದು ಲೋಕಪ್ರಸಿದ್ಧರಾಗಿ ಹೋಗಿರುವ ಉಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ... ಅವರ ಪವಿತ್ರಚರಿತ್ರವನ್ನು ... ಶ್ರೀಗಂಗಾಧರ ಶಿವಾಚಾರ್ಯಸ್ವಾಮಿಗಳವರು ... ಷಟ್ಪದೀರೂಪದಿಂದ ಎರಡು ಒಪ್ಪತ್ತೈದು ... "... ಶ್ವರ ಪುರಾಣ" ಎಂಬ ... ಈ ಪುರಾಣದಲ್ಲಿ ಶ್ರೀಜಗದ್ಗುರುಗಳವರ ಮಹಿಮಾತ್ಮಕ ಚರಿತ್ರವೆಲ್ಲವೂ ...ವಾಗಿ ವಿವರಿಸಲ್ಪಟ್ಟಿದೆ ... ರವರು ಬಹು ಶ್ರಮವಹಿಸಿ ಪುರಾಣವನ್ನು ಬರೆದಿದ್ದಾರೆ ... ಅವರ ಕವಿತಾಸರಣಿಯು ಅತ್ಯಂತ ಸರಳವಾಗಿದ್ದು ಸರಸವಾಗಿದೆ ಈ ಪುರಾಣವು ಅತಿಶಯೋಕ್ತಿಯಿಂದ ಕೂಡಿರದೆ ಸ್ವಭಾವೋಕ್ತಿಯಿಂದ ಕೂಡಿರುವುದರಿಂದ ... ಗ್ರಂಥಕ್ಕೆ ಮಹಾಶೋಭೆಯುಂಟಾಗಿದೆ ಪುರಾಣದಲ್ಲಿ ... ಸಂಧಿಗಳಿದ್ದು, ಒಟ್ಟು ... ಪದ್ಯಗಳಿವೆ ... ದ್ವಂದ್ವರಾಗಿಹೋಗಿರುವ ಶ್ರೀಜಗದ್ಗುರುಗಳವರ ಚರಿತ್ರಾತ್ಮಕವಾದೀ ಪುರಾಣವನ್ನು ಗುರುಭಕ್ತರು ತರಿಸಿಕೊಂಡು ಪ್ರತಿವರ್ಷ ಶ್ರಾವಣಮಾಸದಲ್ಲಿ ತಮ್ಮ ತಮ್ಮ ಗ್ರಾಮಗಳಲ್ಲಿ ಪುರಾಣವನ್ನು ಕೇಳಿ ಧನ್ಯರಾಗಬೇಕೆಂದು ಆಶಿಸುತ್ತೇವೆ ಬೆಲೆ ೧ ರೂ ... ಆಣೆ

ಗ್ರಂಥವು ದೊರೆಯುವ ವಿಳಾಸ—

ನಾಗಾನಹಳ್ಳಿ, ಚಂದ್ರಶೇಖರಪ್ಪ
ಆನಂದ ಬುಕ್ ಡಿಪ್ಪೋ, ದಾವಣಗೆರೆ

ಶ್ರಾವಣಮಾಸದ ಕಾರ್ಯಕ್ರಮಸಮಾಪ್ತಿ ಸಮಾರಂಭ, ಹೂಲಿ

ಬೆಳಗಾಂವ ಜಿಲ್ಲಾ ಪರಸಗಡ ತಾಲ್ಲೂಕ ಶ್ರೀಕ್ಷೇತ್ರ ಹೂಲಿ ಎಂಬ ಪುಣ್ಯಕ್ಷೇತ್ರದಲ್ಲಿ ಹಿಮವತ್ಕೇದಾರ ವೈರಾಗ್ಯ ಸಿಂಹಾಸನ ಶಾಖಾನುವರ್ತಿಗಳಾದ ಶ್ರೀ ಷ॥ ಬ್ರ॥ ಸಾಂಬಯ್ಯನವರ ಮಠದಲ್ಲಿ ಇದೇ ನಿಜಶ್ರಾವಣ ಶು॥ ೧ ರಿಂದ ಬಹುಳ ಅಮಾವಾಸ್ಯೆಯವರೆಗೆ ಲಿಂಗೈಕ್ಯ ಶ್ರೀಬಾಲಲೀಲಾ ಸಂಗಮೇಶ್ವರ ಚರಮೂರ್ತಿಸ್ವಾಮಿಗಳವರ ಗದ್ದುಗೆಗೆ ಪ್ರತಿನಿತ್ಯ ಪ್ರಾತಃಕಾಲ ರುದ್ರಾಭಿಷೇಕ, ಮಧ್ಯಾಹ್ನ ಶ್ರೀ॥ ಷ॥ ಬ್ರ॥ ವೀರತಪಸ್ವಿ ಚರಮೂರ್ತಿಸ್ವಾಮಿಗಳವರು ಹನ್ನೆರಡುಮಠ ಹುಬ್ಬಳ್ಳಿ ಇವರ ಪಾದಪೂಜೆ ಹಾಗೂ ಗಣಾರಾಧನೆ, ಸಾಯಂಕಾಲ ಸದರಿ ಶ್ರೀಗಳವರಿಂದ ಅಧ್ಯಾತ್ಮವಿಚಾರದಲ್ಲಿ ಪ್ರವಚನ ಈ ಪ್ರಕಾರ ನಡೆಯಿತು ಶ್ರಾವಣಪೂರ್ಣಿಮೆಯ ದಿವಸ ... ಕೊಡ ಕ್ಷೀರಾಭಿಷೇಕವು ನಡೆಯಿತು ಕಡೆಯ ಸೋಮವಾರ ೧೧೧೦೮ ಫಲಾರ್ಚನೆ ಹಾಗೂ ಅಮಾವಾಸ್ಯೆಯ ದಿವಸ ಲಕ್ಷ ಪುಷ್ಪಾರ್ಚನೆಯು ನಡೆಯಿತು ಪಾದಪೂಜೆಗೆ ಲಕ್ಷ ಬಿಲ್ವಾರ್ಚನೆಯು ಬಳ್ಳೇ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಅಮಾವಾಸ್ಯೆಯ ಸಾಯಂಕಾಲ ಶ್ರೀಗಳವರ ಭಾವಚಿತ್ರದ ಪಲ್ಲಕ್ಕಿ ಉತ್ಸವವು ಬಹು ವೈಭವದಿಂದ ಜರುಗಿದ ಮೇಲೆ ಹೂಲಿ ಗ್ರಾಮದ ... (... ...) ಶಕ್ತಿ ... ... ಪ್ರವಚನವು ನಡೆಯಿತು ... ...

ಈ ಉತ್ಸವದ ಉಪಾಧ್ಯಕ್ಷರಾದ ಶ್ರೀ ... ಸ್ವಾಮಿ ... ... ಕಡಕೋಳ ... ... ಶ್ರೀಗಳವರು ... ... ಬಳ್ಳೆ ರೋಚಕ ... ... ವಿಷಯವಾಗಿ ಪರಿಣಾಮಕಾರಕ ಭಾಷಣ ... ... ಮಠದ ಶ್ರೀಗಳವರು ... ... ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಸರ್ವರ ಮನಸ್ಸಿಗೆ ಬಳ್ಳೆ ಪರಿಣಾಮವಾಗುವಂತೆ ಭಾಷಣಮಾಡಿ ... ... ಸನ್ನು ಆನಂದಗೊಳಿಸಿದರು ಅಂದಿನ ವೈಶ್ಯವು ... ... ಶಿವಪಟ್ಟಿಯನ್ನು ... ದವರಲ್ಲಿ ... ವಾಗಿತ್ತು ಉತ್ಸವದ ಪಲಿಯ ... ... ಕಾರ್ಯಕ್ಕೆ ಸವ ... ವಾಗಿ ತನುಮನಧನದಿಂದ ... ... ಸಹಾಯ ಸಲ್ಲಿಸಿದ ... ಯಾದ ಕಡಕೋಳ ವ್ಯಾಪಾರಸ್ಥರು ... ದಿಗಸ್ಟೂರು ... ... (... ...) ... ... ಯವರಲ್ಲಿ ಹೂಲಿ ಗರ್ಲಹೊಸೂರು ಸಂಗಪ್ಪನವರು ... ... ಬಸ್ಸವ ಲಿಂಗಪ್ಪ ... ... ಮಾಸ್ತರರ ಹೂಲಿಯ ಕನ್ನಡ ಶಾಲಾ ಮಾಸ್ತರ ಮಾಸ್ತರಣಿಯರು ವಿದ್ಯಾರ್ಥಿಗಳೂ ಸಹಾಯಮಾಡಿದರು ಈ ಕಾಲದಲ್ಲಿ ... ... ಅನಂತಪಿನ್ನಾಗೂ ... ... ಸಲ್ಲಿಸಿದ್ದಕ್ಕೆ ದಯಾಘನನಾದ ಪರಮಾತ್ಮನು ಸರ್ವರಿಗೂ ಮಂಗಲವನ್ನುಂಟು ಮಾಡಲೆಂದು ಶ್ರೀಗಳವರ ಪ್ರಾರ್ಥನೆ ... ... ಭಜನಾಮಂಡಳಿಯವರಿಗೂ ಬಹುಮಾನ ದಯಪಾಲಿಸಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಉತ್ಸವಮಂಡಲಿ, ಹೂಲಿ

ಸ್ವೀಕಾರ

ಬೆಳಗಾಂವ ಡಿ॥ ಹೂಲಿ ಸಾಂಬಯ್ಯನವರ ಮಠದ ಶ್ರೀ॥ ಬಾಲಲೀಲಾ ಸಾಂಬಸ್ವಾಮಿಗಳವರ ಗದ್ದುಗೆಗೆ ಶ್ರಾವಣಮಾಸ ಪೂರ್ತಿ ರುದ್ರಾಭಿಷೇಕಾದಿಗಳು ನೆರವೇರಿ ಸಮಾಪ್ತಿಗೊಂಡ ಸಮಯದಲ್ಲಿ ಸದರಿ ಮಠದ ಶ್ರೀಗಳವರು ಪ್ರಭಾಪ್ರೋತ್ಸಾಹಕೋಸ್ಕರ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಭಾರತ ಮತ್ತು ಪಾಕಿಸ್ಥಾನ ಪ್ರತಿನಿಧಿಗಳ ಸಭೆ

ಭಾರತ ಮತ್ತು ಪಾಕಿಸ್ಥಾನ ಸರ್ಕಾರ ಪ್ರತಿನಿಧಿಗಳ ಸಮ್ಮೇಳನದಲ್ಲಾದ ಚರ್ಚೆ ಮತ್ತು ನಿರ್ಣಯಗಳನ್ನು ಕುರಿತ ಕೆಳಗೆ ಕಂಡ ಪ್ರಕಟನೆ ಹೊರಟಿದೆ

... ... ನಡೆದವು ಎರಡು ... ... ಅವುಗಳ ... ವಿಚಾರಣೆ ನಡೆಸಿದ ... ... ಯಿತು

ಪೂರ್ವ ಮತ್ತು ಪಶ್ಚಿಮ ಪಂಜಾಬುಗಳೆರಡರಲ್ಲೂ ವಿಷಾದಕರವಾದ ಘಟನೆಗಳು ನಡೆದಿವೆ ಇವುಗಳ ಬಗ್ಗೆ ತನಿಖೆ ನಡೆಸಿ ಅಪರಾಧ ನಡೆಸಿದವರಿಗೆ ಉಗ್ರಶಿಕ್ಷೆವಿಧಿಸಬೇಕೆಂದು ತೀರ್ಮಾನವಾಯಿತು

ಶಾಂತಿ ... ... ಪರಿಸ್ಥಿತಿಯುಂಟು ಮಾಡುವ ವಿಚಾರದಲ್ಲಿ ಎರಡು ಸರಕಾರಗಳೂ ಸಹಕರಿಸಬೇಕೆಂದು ಒಪ್ಪಲಾಯಿತು ... ... ಆದಷ್ಟು ಬೇಗ ನಿರ್ಮೂಲ ಮಾಡಲು ಸರ್ವಪ್ರಯತ್ನ ಮಾಡಬೇಕೆಂದು ಎರಡು ಸರ್ಕಾರಗಳು ತೀರ್ಮಾನಿಸಿದವು ... ... ಮತ್ತು ದ್ವೇಷ ಹರಡುವ ... ... ತರಾಪವರು ಹೊರಡಿಸಬಾರದೆಂದು ಒಪ್ಪಲಾಯಿತು

ಹಲವು ಪತ್ರಿಕೆಗಳು ... ... ವಾಗಿ ಸುಳ್ಳು ಸಂಗತಿಗಳನ್ನು ಪ್ರಕಟಿಸುತ್ತಿರುವುದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಡಲು ಕಾರಣವಾಗಿದೆಯೆಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು ... ... ಸರ್ಕಾರಗಳು ... ... ಪ್ರಕಟನೆಯನ್ನು ತಡೆಯಬೇಕೆಂದು ತೀರ್ಮಾನವಾಯಿತು

ಅಲ್ಪಸಂಖ್ಯಾತರು ಭೀತಿಯಿಂದ ನಿಶ್ಚಿಂತೆಯಾಗಿ ಜೀವಿಸುವಂತಹ ಪರಿಸ್ಥಿತಿಯನ್ನು ಉಂಟುಮಾಡುವುದೇ ಎರಡು ಸರ್ಕಾರಗಳ ಧ್ಯೇಯವಾಗಿದೆ

ಎರಡೂ ಸರ್ಕಾರದ ಸಚಿವರ ಸಭೆಗಳು ಒಂದು ಸಲ ದೆಹಲಿಯಲ್ಲೂ ಒಂದು ಸಲ ಲಾಹೋರಿನಲ್ಲೂ ನಡೆಯಬೇಕೆಂದು ತೀರ್ಮಾನಿಸಲಾಗಿದೆ

ಈಗ ಪೂರ್ವ ಪಂಜಾಬಿನಿಂದ ಮುಸ್ಲಿಮರ, ಪಶ್ಚಿಮ ಪಂಜಾಬಿನಿಂದ ಮುಸ್ಲಿಮೇತರರ ಸಾಮೂಹಿಕ ಚಲನೆ ನಡೆಯುತ್ತಿದೆ ಹಾಗೆ ಹೊರಟುಬರುತ್ತಿರುವವರಿಗೆ ಮೊದಲು ಸೌಕರ್ಯ ಕಲ್ಪಿಸಬೇಕಾಗಿದೆ ಈ ಬಗ್ಗೆ ಎರಡು ಸರ್ಕಾರಗಳೂ ಸಹಕರಿಸಲು ಒಪ್ಪಿವೆ ಈ ಸಂಬಂಧದಲ್ಲಿ ಎಲ್ಲ ಜನರೂ ಸಹಕರಿಸಬೇಕೆಂದು ಎರಡು ಸರ್ಕಾರಗಳೂ ಪ್ರಾರ್ಥಿಸಿವೆ ಹಿಂಸೆಯು ಪ್ರತಿ ಹಿಂಸೆಗೆ ಕಾರಣವಾಗುತ್ತಿದೆ ಒಂದು ಕಡೆ ಸರಿಯಾದ ಕಾರ್ಯಕ್ರಮ ಕೈಗೊಂಡರೆ, ಇನ್ನೊಂದು ಕಡೆ ಅದರ ಸತ್ಪರಿಣಾಮವುಂಟಾಗುವುದರಲ್ಲಿ ಸಂದೇಹವಿಲ್ಲ

ಜವಾಬ್ದಾರಿ ಸರ್ಕಾರಸ್ಥಾಪನೆಯ ಬಗ್ಗೆ ಶ್ರೀಮನ್ಮಹಾರಾಜರವರ ಆಜ್ಞೆ

[illegible] ಪ್ರಜೆಗಳ [illegible] ವಂಶ ಪಾರಂಪರ್ಯ [illegible] ಸಂಪ್ರದಾಯ [illegible] ಅಧಿಕಾರ ಕೊಡ [illegible]

ಈ ಸಂಬಂಧವಾಗಿ [illegible] ರಾಜಕೀಯ ಸಂಸ್ಥೆಗಳು, [illegible] ವ್ಯಕ್ತಿಗಳು—ಇವರ [illegible] ಗಳನ್ನು ಪಡೆದು ಮತ್ತು ಉಳಿದ [illegible] ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಲಹೆಗಳನ್ನು [illegible] ನಮ್ಮ ದಿವಾನರಿಗೆ ಆಜ್ಞಾಪಿಸಿದ್ದೆವು

[illegible] ನಮ್ಮ ದಿವಾನರು ಸೂಕ್ಷ್ಮವಾದ ಪರಿಶೀಲನೆ ನಡಸಿ ತಮ್ಮ ಶಿಫಾರಸುಗಳನ್ನು ನಮಗೆ ನಿವೇದಿಸಿದ್ದಾರೆ ಈ ಶಿಫಾರಸುಗಳು ಕೆಲವು ಮೂಲತತ್ವಗಳನ್ನು ಅವಲಂಬಿಸಿವೆಯಾಗಿ ಅವು ಸ್ಥಾಪಿಸಲ್ಪಡುವ ಜವಾಬ್ದಾರಿ ಸರ್ಕಾರದ ರಾಜ್ಯಾಂಗದಲ್ಲಿ ನಿರೂಪಿಸಲ್ಪಡಬೇಕು

ನಮ್ಮ ದಿವಾನರು ಮಾಡಿದ ಶಿಫಾರಸುಗಳನ್ನೂ ಪತ್ರದಲ್ಲಿನ ನಿವೇದನೆಗಳನ್ನೂ ನಾವು ಕೂಲಂಕಷವಾಗಿ ಪರಿಶೀಲಿಸಿದ್ದೇವೆ

ತತ್ಫಲವಾಗಿ ಕೆಳಗೆ ಕಂಡ ನಿರೂಪವನ್ನು ಆಜ್ಞಾಪಿಸುತ್ತೇವೆ

ಆಜ್ಞೆಯ ಮೊದಲನೆಯ ಷಡ್ಯೂಲಿನಲ್ಲಡಗಿರುವ ತತ್ವಾನುಸಾರ ಜವಾಬ್ದಾರೀ ಸರ್ಕಾರದ ಸ್ಥಾಪನೆಗೆ ಅನುಗುಣವಾದ ರಾಜ್ಯಾಂಗ ಶಾಸನ ಮಸೂದೆಯನ್ನು ತಯಾರಿಸಿ ನಮ್ಮ ಅನುಮೋದನೆಗೆ ಒಪ್ಪಿಸಬೇಕು ಇದರ ಪ್ರಕಾರ ನಮ್ಮ ಮಂತ್ರಿವರ್ಗದವರಿಗೆ ಎರಡನೆಯ ಷಡ್ಯೂಲನಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹೊರತು ಉಳಿದೆಲ್ಲ ವಿಚಾರಗಳ ಆಡಳಿತ ನಿರ್ವಹಣಾಧಿಕಾರ ದೊರೆಯುವುದು ಇದು ತಮ್ಮ ಪ್ರತಿನಿಧಿಗಳ ಮೂಲಕ ಪ್ರಜೆಗಳು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಅನುಸಾರವಾಗಿರಬೇಕು ಈ ಮಸೂದೆಯ ರಚನೆಯಲ್ಲೂ ತದಂಗವಾದ ಎಲ್ಲ ಕಾರ್ಯಕ್ರಮಗಳಲ್ಲೂ ನಮ್ಮ ದಿವಾನರು ಶಾಸನ ಸಭೆಗಳಿಂದ ಚುನಾಯಿತರಾದ ಸದಸ್ಯ ಸಮಿತಿಯ ಸಲಹೆ ಸಹಾಯಗಳನ್ನು ಪಡೆಯಬೇಕು ಅಲ್ಲದೆ ಅವಶ್ಯ ತೋರಿದ ಎಲ್ಲ ಪ್ರವೀಣರ ಮತ್ತು ಪ್ರವೀಣ ಸಂಸ್ಥೆಗಳ ಸಲಹೆ ಸಹಾಯಗಳನ್ನೂ ಪಡೆಯಬೇಕು

೧೯೪೮ನೆಯ ಇಸ್ವಿ ಜುಲೈ ಮೊದಲನೆಯ ತಾರೀಖಿನಿಂದ ಹೊಸ ರಾಜ್ಯಾಂಗವು ಆಚರಣೆಗೆ ಬರುವಂತೆ ಸಕಾಲದಲ್ಲಿಯೇ ಜವಾಬ್ದಾರಿ ಸರ್ಕಾರ ಸ್ಥಾಪಿಸುವ ಶಾಸನ ಘೋಷಣೆ ಹೊರಡಿಸುವಂತಾಗಬೇಕೆಂಬುದೇ ನಮ್ಮ ಅಭಿಲಾಷೆ.

ರಾಜಭಕ್ತಿಯಿಂದಲೂ ಮೈಸೂರು ಸಂಸ್ಥಾನದ ಕೀರ್ತಿಗೆ ಕಳಂಕ ಬರದಂತೆಯೂ ನಮ್ಮ ಪ್ರಜೆಗಳ ಎಲ್ಲಾ ವರ್ಗಗಳ ಸುಖ, ಸಂತೋಷ, ಅಭಿವೃದ್ಧಿಗಳಿಗೆ ಸಾಧಕವಾಗಿಯೂ ಪರಸ್ಪರ ಸಹನೆಯಿಂದಲೂ ನಮ್ಮ ಪ್ರಜೆಗಳು ಈಗ ಉದ್ದೇಶಿಸಿರುವ ವಿಶಾಲವಾದ ಸದವಕಾಶವನ್ನು ಸದುಪಯೋಗಪಡಿಸಿಕೊಂಡು ಅವರು ಅನೂಚಾನವಾಗಿ ತೋರಿರುವ ಜವಾಬ್ದಾರಿ ಭಾವನೆಯಿಂದ ಈಗಲೂ ಸಹಕರಿಸುವರೆಂಬ ಭರವಸೆ ನಮಗಿದೆ

ಎಲ್ಲರಿಗೂ ಭಗವಂತನ ಅನುಗ್ರಹವೂ ಮಾರ್ಗದರ್ಶನವೂ ದೊರೆಯಲಿ ಈಗ ಯೋಚಿಸಿರುವ ಯೋಜನೆಗಳು ನಮ್ಮ ಎಲ್ಲ ಪ್ರಜಾವರ್ಗದ ಶಾಶ್ವತಸೌಖ್ಯಕ್ಕೆ ಎಡೆಗೊಡಲಿ

ಷೆಡ್ಯೂಲ್ ೧

ಶಾಸನ ಸಭೆ

ಎರಡು ಶಾಸನ ಸಭೆಗಳಿರುವುವು ನಮ್ಮ ಪ್ರೀತಿಯ ಅಜ್ಜಂದಿರೂ ಕೀರ್ತಿಶೇಷರೂ ಆದ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರರವರು ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆಯೇ ಮೊದಲನೆಯದು ನ್ಯಾಯವಿಧಾಯಕ ಸಭೆಯು ಎರಡನೆಯದು ಪ್ರಜಾಪ್ರತಿನಿಧಿ ಸಭೆಯ ಟೆರಿಟೋರಿಯಲ್ ಕಾನ್‌ಸ್ಟಿಟ್ಯೂಯೆನ್ಸಿಗಳಿಂದ ಎಲ್ಲ ಸದಸ್ಯರನ್ನು ಚುನಾಯಿಸಲಾಗುವುದು ನ್ಯಾಯವಿಧಾಯಕ ಸಭೆಗೆ, ಇನ್ನು ಮುಂದೆ ನಿರ್ಧರಿಸಲ್ಪಡುವ ರೀತಿಯಲ್ಲಿ ಅಂತಹ ಕಾನ್‌ಸ್ಟಿಟ್ಯೂಯೆನ್ಸಿಗಳಿಂದ ಒಂದುಭಾಗದ ಸದಸ್ಯರನ್ನು ಚುನಾಯಿಸಲಾಗುವುದು ಇನ್ನೊಂದು ಭಾಗದ ಸದಸ್ಯರನ್ನು ನಾಮಕರಣ ಮಾಡಲಾಗುವುದು

ಪ್ರಾಪ್ತ ವಯಸ್ಕರಿಗೆ ಓಟಿನ ಅಧಿಕಾರ

ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಗಳನ್ನು ಆರಿಸಲು ನಡೆಯುವ ಚುನಾವಣೆಯಲ್ಲಿ ಪ್ರಾಪ್ತವಯಸ್ಕರಿಗೆಲ್ಲ ಓಟಿನ ಅಧಿಕಾರವಿರತಕ್ಕದ್ದು ಪ್ರಜಾಪ್ರತಿನಿಧಿ ಸಭೆಯ ಟೆರಿಟೋರಿಯಲ್ ಕಾನ್‌ಸ್ಟಿಟ್ಯೂಯೆನ್ಸಿಗಳು ಒಂದಕ್ಕಿಂತ ಹೆಚ್ಚು ಸದಸ್ಯಸ್ಥಾನಗಳಿಂದ ಕೂಡಿರುವುವು ಟೆರಿಟೋರಿಯಲ್ ಕಾನ್‌ಸ್ಟಿಟ್ಯೂಯೆನ್ಸಿಗಳಿಗೆ ನಡೆಯುವ ಚುನಾವಣೆಗಳಲ್ಲಿ ಕ್ಯುಮುಲೇಟಿವ್ ಓಟಿಂಗ್ ಪದ್ಧತಿ ಅಥವಾ ಮಿತಿಯಿಂದ ಕೂಡಿದ ಓಟಿನ ಕ್ರಮವನ್ನು ಅನುಸರಿಸಲಾಗುವುದು

ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲು

ಒಂದಕ್ಕಿಂತ ಹೆಚ್ಚು ಸ್ಥಾನಗಳುಳ್ಳ ಕಾನ್‌ಸ್ಟಿಟ್ಯೂಯೆನ್ಸಿಗಳಲ್ಲಿ ಹಿಂದುಳಿದವರಿಗೂ ಮತ್ತು ಅಲ್ಪಸಂಖ್ಯಾತರಿಗೂ ಸ್ಥಾನಗಳನ್ನು ಮೀಸಲಾಗಿರಿಸಬೇಕು

ಚುನಾಯಿತರಿಂದ ಕೂಡಿದ ಮಂತ್ರಿಮಂಡಲ

ಎರಡನೆಯ ಷೆಡ್ಯೂಲಿನಲ್ಲಿ ತಿಳಿಸಿರುವ ಅಂಶಗಳ ಹೊರತು ಮಿಕ್ಕೆಲ್ಲ ವಿಚಾರಗಳಲ್ಲೂ ನಮಗೆ ಸಲಹೆ ಸಹಾಯ ನೀಡಲು ಶಾಸನಸಭೆಯ ಚುನಾಯಿತ ಸದಸ್ಯರಿಂದ ಕೂಡಿದ ಮಂತ್ರಿಮಂಡಲವಿರತಕ್ಕದ್ದು

ಶಾಸನ ಸಭೆಯ ರಾಜಕೀಯ ಪಕ್ಷಗಳ ಮತ್ತು ಗುಂಪುಗಳ ನಾಯಕರಿಂದ ಸರಿಯಾದ ಸಲಹೆ ಪಡೆದಮೇಲೆ ಮಂತ್ರಿಮಂಡಲವನ್ನು ಆರಿಸಲಾಗುವುದು

ಮುಖ್ಯವಾಗಿ ಅಲ್ಪಸಂಖ್ಯಾತರ ಪ್ರತಿನಿಧಿಗಳಿಗೆ ಆದಷ್ಟುಮಟ್ಟಿಗೆ ನಮ್ಮ ಮಂತ್ರಿಮಂಡಲದಲ್ಲಿ ಸ್ಥಾನ ಕೊಡಲಾಗುವುದು ಮಂತ್ರಿಮಂಡಲವು ಜಂಟಿಯಾಗಿ ಕೆಲಸಮಾಡುವುದು ಶಾಸನ ಸಭೆಗೆ ಜಂಟಿಯಾಗಿಯೇ ಜವಾಬ್ದಾರಿಯಾಗಿರುವುದು ಮಂತ್ರಿಮಂಡಲವು ಸಾಮೂಹಿಕವಾಗಿ ಶಾಸನ ಸಭೆಯ ನಂಬಿಕೆಯನ್ನು ಗಳಿಸಿರಬೇಕು ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪನಂಬಿಕೆಯ ನಿರ್ಣಯವು ಅಂಗೀಕೃತವಾದರೆ ಮಂತ್ರಿಮಂಡಲವು ತನ್ನ ಸ್ಥಾನವನ್ನು ಬಿಟ್ಟುಕೊಡಬೇಕು

ಷೆಡ್ಯೂಲ್ ೨

೧ ರಾಜರು ಮತ್ತು ಅವರ ವಿಶೇಷ ಹಕ್ಕುಬಾಧ್ಯತೆಗಳು, ಮೈಸೂರಿನ ರಾಜಮನೆತನದ ಯಾರು ಪಟ್ಟಕ್ಕೆ ಬರಬೇಕೆಂಬ ವಿಚಾರ, ಅರಮನೆ ಮತ್ತು ಅರಮನೆಯ ಖಜಾನೆ

೨ ಪ್ರವೇಶ ಕರಾರಿನಲ್ಲಿ ವರ್ಣಿಸಲ್ಪಟ್ಟಿರುವಂತಹ ಭಾರತ ಡೊಮಿನಿಯನ್ ಮತ್ತು ಸಂಸ್ಥಾನದ ರಾಜಕೀಯ ಸಂಬಂಧದ ವಿಚಾರಗಳು ಮತ್ತು ಪ್ರವೇಶ ಕರಾರಿನಲ್ಲಿ ಸೂಚಿಸಲ್ಪಡದೆ ಇರತಕ್ಕಂತಹ ಎಲ್ಲ ಬಗೆಯ ರಾಜಕೀಯ ಸಂಬಂಧದ ವಿಚಾರಗಳು

೩ ಹೈಕೋರ್ಟು ನ್ಯಾಯಾಧೀಶರ ನೇಮಕ, ಪಬ್ಲಿಕ್ ಸರ್ವಿಸ್ ಕಮಿಷನ್ ಅಧ್ಯಕ್ಷರ ಮತ್ತು ಸದಸ್ಯರ ನೇಮಕ, ಆಡಿಟರ್ ಜನರಲ್ಲರ ನೇಮಕ

೪ ಮಿಲಿಟರಿ

೫ ಅಲ್ಪಸಂಖ್ಯಾತರ ನ್ಯಾಯವಾದ ಹಕ್ಕುಬಾಧ್ಯತೆಗಳ ಸಂರಕ್ಷಣೆ

೬ ಶಾಸನ ಸಭೆಯನ್ನು ಕರೆಯುವುದು ಮತ್ತು ರದ್ದುಗೊಳಿಸುವುದು.

೭ ಚುನಾವಣೆಗಳ ಮೇಲ್ವಿಚಾರಣೆ ಮತ್ತು ಹಕೋಟೆ

೮ ರಾಜ್ಯಾಂಗ ವ್ಯವಸ್ಥೆಯು ಮುರಿದು ಬಿದ್ದಾಗ "ರೆಸಿಡ್ಯೂಯರಿ" ಅಧಿಕಾರಗಳು ಮತ್ತು ವಿಶೇಷಾಧಿಕಾರಗಳು.

ವರ್ತಮಾನಸಂಗ್ರಹ

ನಿರಾಶ್ರಿತರಿಗೆ ಉದಾರಾಶ್ರಯ

ಪಾಕಿಸ್ಥಾನದಿಂದ ಭಾರತಕ್ಕೆ ವಲಸೆ ಬಂದಿರುವ ನಿರಾಶ್ರಿತರಲ್ಲಿ ಹತ್ತು ಸಾವಿರ ಜನರಿಗೆ ಆಶ್ರಯ ಕೊಡಲು ಬರೋಡಾ ಸಂಸ್ಥಾನ ಸರ್ಕಾರವು ನಿರ್ಧರಿಸಿದೆ

೧೪೨ ನೆಯ ವರ್ಷದ ವರ್ಧಂತಿ

ರಷ್ಯದೇಶದಲ್ಲಿ ಜೆಸ್ಕಿನ್ ಎಂಬ ಒಬ್ಬ ರೈತನು ತನ್ನ ೧೪೨ ನೆಯ ಹುಟ್ಟಿದ ಹಬ್ಬವನ್ನು ಆಚರಿಸಿದನು ಅವನ ತಂದೆ ೧೩೭ ವರುಷ ಬದುಕಿದ್ದನಂತೆ! ಅವನ ತಾಯಿ ೧೧೬ ನೆಯ ವಯಸ್ಸಿನಲ್ಲಿ ತೀರಿಕೊಂಡಳಂತೆ!

ಸರ್ ಸುಲ್ತಾನ್ ಅಹಮದ್‌ರವರು ಹೈದರಾಬಾದ್ ಪ್ರತಿನಿಧಿ

ನರೇಂದ್ರ ಮಂಡಲದ ರಾಜ್ಯಾಂಗ ಸಲಹೆಗಾರರಾದ ಸರ್ ಸುಲ್ತಾನ್ ಅಹಮದ್‌ರವರು ಹೈದರಾಬಾದಿನ ಪರವಾಗಿ ಹೈದರಾಬಾದ್ ಮತ್ತು ಭಾರತ ಸರ್ಕಾರಗಳ ಸಂಧಾನದಲ್ಲಿ ಭಾಗವಹಿಸುವರು

ಮೂರು ಮಕ್ಕಳನ್ನು ಹೆತ್ತ ತಾಯಿ! ಎಲ್ಲರೂ ಸುಖವಾಗಿದ್ದಾರೆ

ಹೈದರಾಬಾದಿನ ಆಸ್ಪತ್ರೆಯೊಂದರಲ್ಲಿ ೩೦ ವರುಷದ ಒಬ್ಬ ಹೆಂಗಸು ಏಕಕಾಲದಲ್ಲಿ ಮೂರು ಜನ ಮಕ್ಕಳನ್ನು ಹೆತ್ತಿದ್ದಾಳೆ ತಾಯಿ ಮತ್ತು ೩ ಮಕ್ಕಳೂ ಆರೋಗ್ಯವಾಗಿದ್ದಾರೆ

ಮಜ್ಲಿಸ್ ಮುಸ್ಲಿಮರ ಖಂಡನೆ

ಹೈದರಾಬಾದಿನ ಮಜ್ಲಿಸ್ ಇತೆಹದಲ್ ಮುಸ್ಲಿಮರ ಧೋರಣೆಯನ್ನು ಕಾಂಗ್ರೆಸ್ ಮುಖಂಡರಾದ ಶ್ರೀ ವೈದ್ಯರು ಖಂಡಿಸಿದ್ದಾರೆ

ಹೈದರಾಬಾದಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು ಮತ್ತು ಅದು ಭಾರತಡೊಮಿನಿಯನ್ನಿಗೆ ಸೇರಬೇಕು ಎಂಬ ಕಾಂಗ್ರೆಸ್ಸಿನ ಬೇಡಿಕೆಗಳನ್ನು ಮಜ್ಲಿಸ್ ಪಕ್ಷವು ಪ್ರತಿಭಟಿಸಿದ ಸರ್ ಮಿರ್ಜಾರವರ ರಾಜೀನಾಮೆಗೆ ಈ ಸಂಸ್ಥೆಯೇ ಕಾರಣ! ಈಗ ಪುನ ಛತ್ತಾರಿಯವರು ಮತ್ತು ಅವರ ಇಬ್ಬರು ಸಹೋದ್ಯೋಗಿಗಳ ಮೇಲೆ ಅವಿಶ್ವಾಸ ನಿರ್ಣಯವನ್ನು ಮಜ್ಲಿಸರು ಮಾಡಿದರೆ ನಿಜಾಮರು ಎಷ್ಟೋಸಾರೆ ಈ ಸಂಸ್ಥೆಗೆ ಬುದ್ಧಿ ಹೇಳಿದ್ದರೂ ಅದರ ಧೋರಣೆ ಮಾತ್ರ ಸ್ವಲ್ಪವೂ ಬದಲಾಯಿಸಿಲ್ಲ ಮಜ್ಲಿಸರ ಬಣ ಬೆದರಿಕೆಗೆ ಸರ್ಕಾರದವರು ಭಯಪಡುವುದು ಸರಿಯಲ್ಲ ಎಂಬುದಾಗಿ ವೈದ್ಯರು ತಿಳಿಸಿದ್ದಾರೆ

ಅಮೃತಸರದ ಬಳಿ ೧೫೦೦ ನಿರಾಶ್ರಿತರ ಕೊಲೆ

ನಿರಾಶ್ರಿತರ ರೈಲು ಬಂಡಿಯ ಮೇಲೆ ಭೀಕರ ದಾಳಿ

ತಾರನಾಪುರ ಎಂಬ ಪ್ರದೇಶದಿಂದ ಅಮೃತಸರಕ್ಕೆ ೩೫೦೦ ಮಂದಿ ಹಿಂದೂ ಮತ್ತು ಮತ್ತು ಸಿಖ್ ನಿರಾಶ್ರಿತರನ್ನು ಒಯ್ಯುತ್ತಿದ್ದ ರೈಲು ಬಂಡಿಗೆ ಪುಂಡರು ಮುತ್ತಿಗೆ ಹಾಕಿ ೧೫೦೦ ಮಂದಿ ನಿರಾಶ್ರಿತರನ್ನು ಕೊಂದರು ಒಂದು ನೂರು ಐವತ್ತು ಮಂದಿ ತರುಣಿಯರಿಗೆ ಮಾನಭಂಗವನ್ನುಂಟುಮಾಡಿದರು! ಅಮೃತಸರಕ್ಕೆ ಕೇವಲ ೨೦೦೦ ಮಂದಿ ನಿರಾಶ್ರಿತರು ಮಾತ್ರ ತಲುಪಿದರು

ಹೊಸಿಯಾರಪುರ, ಕಾಂಗ್ರಾ, ಲೂದಿಯಾನ, ರೋಹಟಕ್ ಮತ್ತು ಗುರಗಾಂವ ಜಿಲ್ಲೆಗಳಲ್ಲಿ ಯಾವ ಘಟನೆಗಳೂ ವರದಿಯಾಗಿಲ್ಲವೆಂದು ಪೂರ್ವಪಂಜಾಬು ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ.

ಅಮೃತಸರ ಜಿಲ್ಲೆಯ ಗ್ರಾಮವೊಂದನ್ನು ೨೦೦ ಮಂದಿ ಮುಸ್ಲಿಮರೂ, ಪಾಕಿಸ್ಥಾನ್ ಸೈನ್ಯದ ಹಲವು ಯೋಧರೂ, ಮುತ್ತಿ ದಾಳಿ ನಡೆಸಿದ್ದಾರೆಂದು ಆ ಪ್ರಕಟನೆಯಲ್ಲಿ ತಿಳಿಸಲಾಗಿದೆ

ಪೂರ್ವಪಂಜಾಬ್ ಪರಿಸ್ಥಿತಿಯ ಪರಿಶೀಲನೆ

ಪಂಡಿತ ನೆಹರು ಮತ್ತು ಸರ್ದಾರ್ ಪಟೇಲರು ಗವರ್ನರ್ ಲಾರ್ಡ್ ಮೌಂಟ್‌ಬ್ಯಾಟನ್‌ರವರೊಡನೆ ವಿಮಾನದಲ್ಲಿ ಪೂರ್ವ ಪಂಜಾಬ್ ಪ್ರದೇಶದ ಮೇಲೆ ಸಂಚರಿಸಿ, ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಬಂದರು ಇವರುಗಳ ಜೊತೆಯಲ್ಲಿ ಪರಿಹಾರ ಮತ್ತು ಪುನರ್ವಸತಿ ಮಂತ್ರಿಗಳಾದ ಶ್ರೀ ಕೆ ಸಿ ನಿಯೋಗಿ, ಆರೋಗ್ಯ ಮಂತ್ರಿಣಿ ರಾಜಕುಮಾರಿ ಅಮೃತಕೌರ್, ಪ್ರಧಾನ ಸೈನ್ಯಾಧಿಕಾರಿಗಳಾದ ಸರ್ ರಾಬ್ ಲಾಕ್ ಹಾರ್ಟ್, ಲಾರ್ಡ್ ಇಸ್ಮೇ ಇವರುಗಳು ಹೋಗಿದ್ದರು

ಲಾರ್ಡ್ ಮೌಂಟ್‌ಬ್ಯಾಟನ್‌ರವರ ಡಕೋಟ ವಿಮಾನದಲ್ಲಿ ಹೊರಟು ಒಟ್ಟು ಒಂದು ಸಾವಿರ ಮೈಲಿ ದೂರ ಸಂಚರಿಸಿದರು

ಎರಡು ಕಡೆಗಳಿಂದ ನಿರಾಶ್ರಿತರ ಸಂಚಾರ ನಡೆಯುತ್ತಿದೆಯೆಂದು ಮಿಲಿಟರಿ ಅಧಿಕಾರಿಗಳೊಬ್ಬರು ತಿಳಿಸಿದರು ಹಿಂದೂ ಮತ್ತು ಸಿಖ್ ನಿರಾಶ್ರಿತರು ಪ್ರಯಾಣಮಾಡುತ್ತಿದ್ದ ರೈಲು ಗಾಡಿಯ ಮೇಲೆ ಲಾಹೋರು ಸ್ಟೇಷನ್ನಿನಲ್ಲಿ ಗುಂಡು ಹಾರಿಸಿದರೆಂದೂ ಇದರ ಪರಿಣಾಮವಾಗಿ ೨೧ ಮಂದಿ ಸತ್ತು ೩೦ ಮಂದಿಗೆ ಗಾಯವಾಯಿತೆಂದೂ ಅವರು ಹೇಳಿದರು ಈ ಘಟನೆಯ ಸಂಬಂಧದಲ್ಲಿ ೭ ಮಂದಿ ದರೋಡೆಗಾರರು ದಸ್ತಗಿರಿಯಾಗಿದ್ದಾರೆ

ಜುನಾಘಡ ಸಂಸ್ಥಾನದ ನೀತಿಯಿಂದ ಪಾಕಿಸ್ಥಾನಕ್ಕೂ ಹಿಂದೂಸ್ಥಾನಕ್ಕೂ ಯುದ್ಧ ಸಂಭವಿಸಬಹುದು

ಕಾಂಡಿಯಾವಾಡ ಸಂಸ್ಥಾನಗಳ ಗುಂಪಿನಲ್ಲಿರುವ ಜುನಾಘಡ ಸಂಸ್ಥಾನವು ಪಾಕಿಸ್ಥಾನಕ್ಕೆ ಸೇರಿರುವುದರಿಂದ ಭಾರತದ ಶಾಂತಿಗೆ ಧಕ್ಕೆ ಬಂದಿದೆ ಜುನಾಘಡ ರಾಜರು ತಮ್ಮ ಪ್ರಜೆಗಳ ಇಷ್ಟದಂತೆ ನಡೆಯಬೇಕು ಪ್ರಜೆಗಳ ಅಭಿಮತವನ್ನು ತಿಳಿಯಲು ಸಂಸ್ಥಾನದಲ್ಲಿ ಕೂಡಲೇ ಪ್ಲೆಬಿಸೈಟ್ ನಡೆಯಬೇಕು ಇಲ್ಲದೆ ಹೋದರೆ ತೊಂದರೆ ಉಂಟಾಗುವುದು ಖಂಡಿತ ಎಂದು ನವಾನಗರದ ಜಾಂಸಾಹೇಬ್‌ರವರು ಜುನಾಘಡ ಸಂಸ್ಥಾನದ ರಾಜರ ವರ್ತನೆ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ

ಜುನಾಘಡ ಸಂಸ್ಥಾನದಿಂದ ಬೇರೆಯಾಗಿ ಭಾರತ ಯೂನಿಯನ್ನಿಗೆ ಸೇರಿದ ಬಾಬರಿಯಾವಾಡ್ ಸಂಸ್ಥಾನದ ಮೇಲೆ ಆಗಲೇ ಜುನಾಘಡ ರಾಜರ ಸೈನ್ಯಗಳು ದಾಳಿ ಮಾಡುತ್ತಿವೆ

ಇದು ಭಾರತ ಯೂನಿಯನ್ನಿನ ಶಾಂತಿಗೆ ಧಕ್ಕೆ ತರುವಂತಾಗಿದೆ ಎಂದು ಅವರು ತಿಳಿಸಿದ್ದಾರೆ ಬಾಬರಿಯಾವಾಡವು ಭಾರತಯೂನಿಯನ್ನಿಗೆ ಸೇರಿರುವುದರಿಂದ ಆ ಸಂಸ್ಥಾನಕ್ಕೆ ತೊಂದರೆಯಾದರೆ ಭಾರತಯೂನಿಯನ್ನು ಸಹಾಯ ನೀಡುವುದು, ಯೂನಿಯನ್ನಿನ ಕರ್ತವ್ಯ ಅದಕ್ಕೆ ಕಾಲ ಸನ್ನಿಹಿತವಾಗಿದೆ ಭಾರತಯೂನಿಯನ್ ಮಧ್ಯೆ ಪ್ರವೇಶಿಸಬೇಕು ಹಾಗೆ ಮಾಡದೇ ಹೋದರೆ ಯೂನಿಯನ್ನಿಗೆ ಸೇರಿರುವ ಇತರ ಸಂಸ್ಥಾನಗಳು ತಮ್ಮ ನಿರ್ಧಾರವನ್ನು ಬದಲಾಯಿಸಬೇಕಾಗುವುದು ಇದಕ್ಕೆ ಭಾರತ ಯೂನಿಯನ್ ಅವಕಾಶ ಕೊಡುವುದಿಲ್ಲವೆಂದು ಅವರು ತಿಳಿಸಿದ್ದಾರೆ

ಈ ಬಗ್ಗೆ ಪಾಕೀಸ್ಥಾನದ ಗೌರ್ನರ್ ಜನರಲ್ ಮಿ॥ ಜಿನ್ನಾರವರು ಮತ್ತು ಅವರ ಇತರ ಅನುಯಾಯಿಗಳೂ ಕೂಡಲೇ ಯೋಚಿಸಿ ಬುದ್ಧಿವಾದ ಹೇಳಬೇಕು ಇಲ್ಲವಾದರೆ ಭಾರತಕ್ಕೂ ಪಾಕಿಸ್ಥಾನಕ್ಕೂ ಯುದ್ಧ ಅನಿವಾರ್ಯ ಎಂಬುದಾಗಿ ಜಾಂಸಾಹೇಬ್‌ರವರು ಎರಡು ದೇಶಗಳವರನ್ನು ಎಚ್ಚರಿಸಿದ್ದಾರೆ.

ಇದೇ ಅಭಿಪ್ರಾಯವನ್ನು ಭಾರತ ಸರ್ಕಾರದವರೂ ಕೂಡ ಪ್ರಕಟಿಸಿದ್ದಾರೆ ಜುನಾಘಡ ಸಂಸ್ಥಾನವು ಇಂಡಿಯನ್ ಡೊಮಿನಿಯನ್ನಿಗೆ ಸೇರಬೇಕೆಂದೂ, ಪಾಕಿಸ್ಥಾನಕ್ಕೆ ಸೇರಿ ತೊಂದರೆಯನ್ನುಂಟುಮಾಡಿದರೆ ಅದನ್ನು ಸಹಿಸಲಿಕ್ಕಾಗುವುದಿಲ್ಲವೆಂದೂ ಹೇಳಿದ್ದಾರೆ.

ಭಾರತೀಯ ಪಡೆಗಳ ಮೇಲೆ ದಾಳಿ

ಒಬ್ಬ ಮೇಜರ್ ಮೂವರು ಸಿಪಾಯಿಗಳು ಸತ್ತರು

ಪಂಜಾಬ್ ನಿರಾಶ್ರಿತರ ರೈಲು ಬಂಡಿಯ ಜೊತೆಯಲ್ಲಿ ರಕ್ಷಣೆಗಾಗಿ ಬರುತ್ತಿದ್ದ ಭಾರತ ಸೈನ್ಯ ಪಡೆಗಳ ಮೇಲೆ ಪುಂಡರು ಗುಂಡು ಹಾರಿಸಿದುದರ ಫಲವಾಗಿ ಒಬ್ಬ ಮೇಜರ್ ಮತ್ತು ಮೂವರು ಸಿಪಾಯಿಗಳು ಪ್ರಾಣಬಿಟ್ಟರು ಹನ್ನೆರಡು ಮಂದಿ ನಿರಾಶ್ರಿತರೂ ಸಹ ಹತರಾದುದಲ್ಲದೆ ೩೩ ಮಂದಿ ನಿರಾಶ್ರಿತರಿಗೆ ತೀವ್ರವಾದ ಗಾಯಗಳುಂಟಾಗಿವೆ

ಪಾಕಿಸ್ಥಾನ್ ಮತ್ತು ಭಾರತದ ಗಡಿ ಪ್ರದೇಶಗಳಲ್ಲಿ ಲೂಟಿ, ನರವಧೆ ಮುಂತಾದ ಹಾವಳಿಗಳು ಕ್ರಮೇಣ ಕಡಿಮೆಯಾಗುತ್ತಿವೆ ನಿರಾಶ್ರಿತರ ಪ್ರಾಣಮಾನಗಳಿಗೆ ಸ್ವಲ್ಪವೂ ಹಾನಿಯೊದಗದಂತೆ ಭಾರತ ಸೈನ್ಯವು ಪಹರೆ ಮಾಡುತ್ತಿದೆ

ಲೂದಿಯಾನ ಮತ್ತು ಫಿರೋಜ್‌ಪುರ ಜಿಲ್ಲೆಗಳಲ್ಲಿ ಪತ್ತೆಮಾಡಲ್ಪಟ್ಟ ಅಪಹೃತರಾಗಿದ್ದ ಹಲವು ಮುಸ್ಲಿಂ ಬಾಲಿಕೆಯರನ್ನು ಪಾಕಿಸ್ಥಾನಕ್ಕೆ ಕಳಿಸಿಕೊಡಲಾಯಿತು

ಪೂರ್ವ ಪಂಜಾಬ್ ರೈಲ್ವೆಯು ೪೮ ಗಂಟೆಗಳ ಕಾಲದಲ್ಲಿ ಒಂದು ಲಕ್ಷ ನಲವತ್ತು ಸಾವಿರ ನಿರಾಶ್ರಿತರನ್ನು ರವಾನೆ ಮಾಡಿದೆ

ಪಾಕಿಸ್ಥಾನದಲ್ಲಿ ಗಾಂಧಿಯವರ ಶಾಂತಿ ಸ್ಥಾಪನಕಾರ್ಯ

ನಾನು ದೆಹಲಿಯನ್ನು ಬಿಡಲು ಸಾಧ್ಯವಾದ ಕೂಡಲೇ ಲಾಹೋರ್ ಮುಂತಾದ ಪಾಕಿಸ್ಥಾನ್ ಕ್ಷೇತ್ರಗಳಲ್ಲಿ ದೇವರ ರಕ್ಷಣೆಯೊಂದಲ್ಲದೆ ಬೇರೆ ಯಾವ ರಕ್ಷಣೆಯೂ ಇಲ್ಲದೆ ಸಂಚರಿಸಿ ಶಾಂತಿ ಸ್ಥಾಪನಕಾರ್ಯವನ್ನು ಮುಂದುವರಿಸುವೆನು ಏಕಾಂಗಿಯಾಗಿ ಪ್ರವಾಸ ಮಾಡಲು ಅಧಿಕಾರಿಗಳು ನನಗೆ ಅವಕಾಶ ಕೊಡದಿರಬಹುದು ಆದರೆ ನಾನು ಸಾವಿಗೆ ಅಂಜುವನೇ ಅಲ್ಲ! ಸಂತೋಷದಿಂದ ಸಾವನ್ನೆದುರಿಸಲು ನಾನು ಯಾವಾಗಲೂ ಸಿದ್ಧ! ಎಂದು ಗಾಂಧಿಯವರು ಹೇಳಿದರು

ತಾವು ಗಡಿನಾಡಿಗೂ ಭೇಟಿಕೊಡುವಿರಾ? ಎಂದು ಗಾಂಧಿಯವರನ್ನು ಪ್ರಶ್ನಿಸಲಾಗಿ ಅವರಿಗೆ ಬಹಳ ಕೋಪ ಬಂದು ತಪ್ಪಣ ಅವರು ಪ್ರಶ್ನೆಗೆ ಉತ್ತರವಿತ್ತರು

ಗಡಿನಾಡಿನ ಪರಿಸ್ಥಿತಿಯು ನನಗೆ ತುಂಬಾ ಕಳವಳವನ್ನುಂಟುಮಾಡಿದೆಯೆಂದು ಅನೇಕ ವೇಳೆ ಒತ್ತಿ ಹೇಳುತ್ತಿದ್ದರೂ ಈ ಪ್ರಶ್ನೆ ಹಾಕುವುದು ಅಪ್ರಕೃತ ಗಡಿನಾಡಿಗೆ ಭೇಟಿಕೊಡಬೇಕೆಂದು ನನ್ನ ಮನ ತವಕಪಡುತ್ತಿದೆ

ಗಡಿನಾಡು ಸಿಂಧ್ ಮುಂತಾದ ಸಮಸ್ತ ಪಾಕಿಸ್ಥಾನ್ ಕ್ಷೇತ್ರಗಳಿಗೂ ಭೇಟಿ ಕೊಡಬೇಕೆಂಬುದೇ ನನ್ನ ಆಶೆ! ಆದರೆ ನಾನು ದೆಹಲಿಯನ್ನು ಬಿಡಲು ಸಾಧ್ಯವಾಗುವಂತೆ ಮಾಡುವುದು ಇಲ್ಲಿಯ ಪ್ರಜೆಗಳ ಮೇಲೆ ನಿಂತಿದೆ ಎಂದು ಹೇಳಿದರು

ಸಭೆಯಲ್ಲಿ ಸರ್ಪದಿಂದ ಕೋಲಾಹಲ

ಗಾಂಧಿಯವರು ತಮ್ಮ ಭಾಷಣವನ್ನು ಮುಂದುವರಿಸುತ್ತಿರುವಾಗ ಸಭೆಯಲ್ಲಿ ಯಾರೋ ತಂದುಬಿಟ್ಟ ಒಂದು ಹಾವು ಕಂಡುಬಂದಿತು ತತ್ಪರಿಣಾಮವಾಗಿ ಸಭೆಯಲ್ಲಿ ಕೋಲಾಹಲವೆದ್ದಿತು ಪೋಲೀಸ್ ನೌಕರನೊಬ್ಬನು ಆ ಹಾವನ್ನು ಕೊಂದು ಗಾಂಧಿಯವರು ಭಾಷಣವನ್ನು ಮುಂದುವರಿಸಲು ಸಹಾಯಮಾಡಿದನು

ನೀಚಕೃತ್ಯ

ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿರುವ ಆಳಿದ ಶ್ರೀಮನ್ಮಹಾರಾಜರವರಾದ ಶ್ರೀ ಚಾಮರಾಜ ಒಡೆಯರ್ ಬಹದ್ದೂರರವರ ಸುಂದರವಾದ ಅಮೃತ ಶಿಲಾಮೂರ್ತಿಯನ್ನು ಯಾರೋ ದುರಾತ್ಮರು ಭಂಗಪಡಿಸಿದ್ದಾರಂತೆ! ಈ ನೀಚಕೃತ್ಯವನ್ನು ನೆನಸಿಕೊಂಡರೆ ತುಂಬ ದುಃಖವಾಗುತ್ತದೆ ಇದು ಸತ್ಯಾಗ್ರಹದ ಲಕ್ಷಣವೇ? ಈ ವಿಧವಾದ ನೀಚಕೃತಿಗಳಿಂದಲೂ, ಹಿಂಸಾಕೃತಿಗಳಿಂದಲೂ ಕೂಡಿರುವ ಸತ್ಯಾಗ್ರಹಕ್ಕೆ ದೇವರು ಎಂದಾದರೂ ಜಯವನ್ನುಂಟುಮಾಡುವನೇ?

ಸಿದ್ಧಾಂತಶಿಖಾಮಣಿ

ವೀರಶೈವನ ತದ್ ... ಪ್ರತಿಯೊಬ್ಬ ... ಸಿದ್ಧಾಂತಶಿಖಾಮಣಿ ... ಈ ... ಶ್ರೀಜ ... ರೇಣುಕಾಚಾರ್ಯರು ... ಅಗಸ್ತ್ಯ ಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸಿದ ... ಈ ಗ್ರಂಥವು ... ಶ್ರೀಶಿವಯೋಗಿಶಿವಾಚಾರ್ಯರಿಂದ ... ರಚಿಸಲ್ಪಟ್ಟಿರುವದ ... ಮೂಲಸ್ತಂಭದಂತಿರುವ ... ಅನೇಕ ... ಒಂದು ... ಶ್ಲೋಕಗಳಿ ... ಯನ್ನು ದೂರಮಾಡ ... ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು ... ಕನ್ನಡ ಭಾಷೆಯಲಿ ... ವೀರಶೈವ ... ಓದಿನೋಡಿದರೆ ... ಶ್ರಮವಹಿ ... ಶ್ಲೋಕ ಸುಕ್ರ ... ಗ್ರಂಥದಲಿ ... ಈ ಗ್ರಂಥವು ... ಸುಂದರ ... ಶ್ರೀಜ ... ಮನೋಹರ ... ಸೌಂದರ್ಯ ... ಒದಗಬೇಕ ... ಬೆಲೆ ೩ ರೂಪಾಯಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗ ... ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರ ... ಶಿವಸಿದ್ಧಾಂತವನ್ನು ... ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಕ್ಕೆ	೦—೩—೦
ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರೇಣುಕಾಚಾರ್ಯರು ... ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ... ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ... ಪ್ರಾರ್ಥನೆಯಂತೆ ... ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ... ಜಗ ... ಫೋಟೋ	೦—೧—೬
ಶ್ರೀ ... ಜಗದ್ಗುರುಗಳ ... ಫೋಟೋ	೦—೧—
... ಶ್ರೀ ... ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀ ... ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀ ... ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಿಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
... ಕಂಟೋನ್ಮೆಂಟ್ ... ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—
... ಶಿಲಾಶಾಸನಗಳು	೦—೨

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (...)	ಆಣೆ
ಸನ್ಯಾಸ ... (...)	೧ ಆಣೆ
ಪಂಚಸಂಹಿತಿ ಪ್ರಶ್ನಪ್ರಕಾಶ (...)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (...)	೧ ಆಣೆ
ಶ್ರೀಪಂಚಾಚಾರ್ಯ ... ಸುಪ್ರಭಾತ (...)	ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ... (... ಆವೃತ್ತಿ)	೨ ಆಣೆ
ಬಸವಾದಿ ... ದರ್ಪಣ (...)	೨ ಆಣೆ
ಶ್ರೀರೇಣುಕ ... (...)	೨ ಆಣೆ
ಶ್ರೀಗುರು ... (...)	೨ ಆಣೆ
ಶ್ರೀರುದ್ರಪ ... ಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	ಆಣೆ
ಬಿಲ್ವಮಾಹಾತ್ಮ್ಯ (... ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾರ	೩ ಆಣೆ
ಪಂಚಾಚಾರ ಪ್ರಕಾಶಿಕೆ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೬ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಾಹಾತ್ಮ್ಯ	೮ ಆಣೆ
ಶಿವಮಹಿಮ ... (... ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)	೮ ಆಣೆ
ಸದ್ಬೋಧರತ್ನ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀ ... ಶಿವಾಚಾರ್ಯ ಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಗೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (... ನೆಯ ಆವೃತ್ತಿ)	೧ ರೂ
ಶ್ರೀಕರಭಾಷ್ಯಂ (...)	೧ ರೂ
ವೀರಶೈವರತ್ನ (... ನೆಯ ಆವೃತ್ತಿ ... ಫೋಟೋಗಳ ಸಹಿತ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ...)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾ ಸಹಿತ)	೩ ರೂ
ಶಿವಾಗಮಸಂಗ್ರಹ (... ಆಗಮ ... ಭಾಗವು ... ಕೂಡಿರುವುದ)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ... ಪುಟ)	೮ ರೂ
A brief life sketch of Pandit Sri Kashinatha Shastriji (English)	4 As
The Philosophical Aspect of Virasaivism (English)	8 As
Speeches by Pandit Shri Kashinatha Shastriji (English)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य संस्कृत)	१ रु
क्रियाकैवल्यकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ... ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭವಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ. ಪಿ. ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧ | ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ಅಕ್ಟೋಬರ್ ೧೯೪೭ [ಸಂಚಿಕೆ ೨೪

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ।

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಶಿವಪೂಜಾವ್ರತಪೋನುಷ್ಠಾನ ಮತ್ತು ಶಿವಮಹಾಪುರಾಣಪ್ರವಚನ ಸಮಾಪ್ತಿ

ಯಡೆಯೂರು

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಉಭಯ ಶ್ರಾವಣಮಾಸಗಳ ಪುಣ್ಯಕಾಲವಲ್ಲಿಯ ಮಹಾವ್ರತವೂ ತದಂಗಭೂತವಾದ ಶಿವಮಹಾಪುರಾಣಪ್ರವಚನವೂ ಯಡೆಯೂರು ಶ್ರೀಮಠದಲ್ಲಿ ಜರಗುತ್ತಿದ್ದ ಸಂಗತಿ ಸರ್ವತ್ರ ವಿದಿತವಷ್ಟೆ! ಈ ಮಂಗಲಕಾರ್ಯಗಳು ಗುರುಭಕ್ತರ ಸೇವಾವಿಶೇಷದಿಂದ ವೈಭವದೊಡನೆ ನಡೆದು ಭಾದ್ರಪದ ಶುದ್ಧ ೧೦ ಬುಧವಾರ ಸಮಾಪ್ತಿಗೊಂಡವು ಆ ದಿನ ಪ್ರಾತಃಕಾಲ ಪೂರ್ವದ ಶ್ರೀಜಗದ್ಗುರು ಕರ್ತೃ ಗದ್ದುಗೆಗೆ ರುದ್ರಾಭಿಷೇಕವೂ, ಮಧ್ಯಾಹ್ನ ೧೨ ಘಂಟೆಗೆ ಜಗದ್ಗುರುಗಳವರ ಮಹಾಪಾದಪೂಜೆಯೂ ಮಹಾಗಣಾರಾಧನೆಯೂ ಅತಿ ವೈಭವದಿಂದ ಜರಗಿದವು ಸಾಯಂಕಾಲ ತಳಿರುತೋರಣಗಳಿಂದಲಂಕೃತವಾದ ವೀಥಿಗಳಲ್ಲಿ ಶಿವಮಹಾಪುರಾಣದ ಮಹೋತ್ಸವವು ಸಕಲ ವಾದ್ಯವೈಭವದೊಡನೆ ನೆರವೇರಿದ ವೇಳೆ ಶ್ರೀಜಗದ್ಗುರುಗಳವರು ವೈದಿಕರ ವೇದಘೋಷದೊಡನೆ ಮಂಟಪಕ್ಕೆ ದಯಮಾಡಿಸಿ ಸಿಂಹಾಸನವನ್ನಲಂಕರಿಸಿದರು ಸಕಲ ವಾದ್ಯಗಳು ಘೋರ್ಗರೆದವು ಬಳಿಕ ವೇ|| ಸುಣ್ಣಕಲ್ಲ ಬದರಿ ಆರಾಧ್ಯಮಠದ ಆಸ್ಥಾನ ವಿದ್ವಾನ್ ಪುರಾಣರತ್ನ ಬಸವಲಿಂಗಶಾಸ್ತ್ರಿಗಳಿಂದ ಶಿವಮಹಾಪುರಾಣದ ಸಮಾಪ್ತಿಮಂಗಲವು ಆಚರಿಸಲ್ಪಟ್ಟಿತು ಬಳಿಕ ಜಗದ್ಗುರುಗಳವರು ಮೇಲ್ಕಂಡ ಮಹಾವ್ರತದ ವಿಷಯವನ್ನು ಸಪ್ರಮಾಣವಾಗಿಯೂ ಯುಕ್ತಿಯುಕ್ತವಾಗಿಯೂ ಬೋಧಿಸಿ, ಧರ್ಮಕಾರ್ಯಗಳಿಗೆ ಅವಕಾಶವನ್ನಿತ್ತು ಪ್ರಜೆಗಳನ್ನು ಧರ್ಮದಿಂದಲೂ ಪ್ರೇಮದಿಂದಲೂ ರಕ್ಷಿಸುತ್ತಿರುವ ಧರ್ಮಾವತಾರಿಗಳಾದ ಶ್ರೀಮದ್ರಾಜಾಧಿರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರವರು ಆಯುರಾರೋಗ್ಯೈಶ್ವರ್ಯ ಸತ್ಸಂತಾನಾದಿ ಸಕಲ ಭಾಗ್ಯಗಳಿಂದ ಕೂಡಿ ದೇಶವನ್ನು ಚಿರಕಾಲ ರಕ್ಷಿಸಲೆಂದೂ ಪ್ರಜೆಗಳು ರಾಜಭಕ್ತಿಯುತರಾಗಿ ಧರ್ಮನಿಷ್ಠೆಯಿಂದ ಬಾಳಲೆಂದೂ ಜಗತ್ತಿನಲ್ಲಿ ಯಾವಾಗಲೂ ಶಾಂತಿಯು ನೆಲಸಿ ಸತ್ಕರ್ಮಗಳು ನಿರಂತರ ನಡೆಯುತ್ತಿರಲೆಂದೂ ಆಶೀರ್ವಾದವನ್ನಿತ್ತರು. ಬಳಿಕ ಸಭೆಯು ಆಚಾರ್ಯರ ಜಯಘೋಷದೊಡನೆ ವಿಸರ್ಜಿಸಲ್ಪಟ್ಟಿತು. ವಾಹನಗಳ ತೊಂದರೆಯಿದ್ದರೂ ಸಹ ಮಹಾಕಾರ್ಯಕ್ಕೆ ೨ ಸಾವಿರ ಮೇಲ್ಪಟ್ಟು ಜನರು ಸೇರಿದ್ದರು ಉಪಚಾರಾದಿಗಳು [illegible]ವಾಗಿದ್ದುವು. ಎಡೆಯೂರು ಗ್ರಾಮವು ಚಿಕ್ಕದು, ವೀರಶೈವರ ಸಂಖ್ಯೆಯೂ ಕಡಿಮೆ. ಆದರೂ [illegible]ಚಟೂರು, [illegible], [illegible], [illegible], ಹಳೇಗೂಡು, ಕುಗ್ಗೀಹಳ್ಳಿ, [illegible], ಹುಲಿಯೂರು ಮುಂತಾದ ಗ್ರಾಮದವರ ಸಹಾಯಸಂಪತ್ತಿಯಿಂದ ಕಾರ್ಯವು ಮನೋರಂಜಕವಾಗಿ ಜರಗಿತು ಆದಿಯಿಂದಲೂ ಮಹಾಗುರುಸೇವಾಕಾರ್ಯದಲ್ಲಿ ಕಟಿಬದ್ಧರಾಗಿರುವ ಯಡೆಯೂರು ಗ್ರಾಮವಾಸಿ ನೇರಲಕೆರೆ ಪಟೇಲ್ ನಂಜಪ್ಪನವರು, ಕೆ ಯಂ ಸಿದ್ಧಲಿಂಗಶಾಸ್ತ್ರಿಗಳು ಗುರುಸಿದ್ಧಯ್ಯನವರ ಅಳಿಯಂದಿರಾದ ನಂಜುಂಡಯ್ಯನವರು ಮುಂತಾದವರಿಗೆ ಜಗದಾಚಾರ್ಯರು ಸನ್ಮಂಗಲವನ್ನೀಯಲೆಂದು ಅನನ್ಯಭಾವದಿಂದ ಪ್ರಾರ್ಥಿಸುವೆನು

ಓರ್ವ ಗುರುಭಕ್ತ

ಭಾರತದಲ್ಲಿ ಭೀಕರ ಆಹಾರ ಪರಿಸ್ಥಿತಿ

ಡಾ|| ರಾಜೇಂದ್ರ ಪ್ರಸಾದರ ವಿವರಣೆ

ನಮ್ಮ ದೇಶಕ್ಕೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ನಮ್ಮ ದೇಶದಲ್ಲೇ ಬೆಳೆಯುವವರೆಗೂ ಆಹಾರದ ಅಭಾವವನ್ನು ತಪ್ಪಿಸಲು ಅಸಾಧ್ಯ ಅಕ್ಕಿ ಬೆಳೆಯುವ ಪ್ರದೇಶಗಳಲ್ಲಿ ಬೆಳೆಯನ್ನು ಹೆಚ್ಚಿಸುವಂಥ ವ್ಯವಸಾಯಾಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು ಹೊರಗಿನಿಂದ ಆಹಾರ ವಸ್ತುಗಳನ್ನು ಪ್ರಾಂತ್ಯಗಳು ಮತ್ತು ಸಂಸ್ಥಾನಗಳು ನಿರೀಕ್ಷಿಸಬಾರದು ಎಂದು ಭಾರತ ಸರ್ಕಾರದ ಆಹಾರ ಮಂತ್ರಿಗಳಾದ ಡಾ|| ರಾಜೇಂದ್ರ ಪ್ರಸಾದರು ನವದೆಹಲಿಯಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಭಾಷಣ ಮಾಡುತ್ತ ಭಾರತದ ಆಹಾರ ಪರಿಸ್ಥಿತಿಯನ್ನು ವಿವರಿಸಿ ಇನ್ನು ಮುಂದೆ ಈಗ ಕೊಡುತ್ತಿರುವ ರೇಷನ್ ಪ್ರಮಾಣವನ್ನು ಇನ್ನೂ ಕಡಮೆ ಮಾಡುವ ಸಂಭವ ಒದಗಿ ಬಂದರೂ ಒದಗಬಹುದೆಂದು ತಿಳಿಸಿದರು

ವರ್ಷದ ಕೊನೆಯ ಹೊತ್ತಿಗೆ ಆಹಾರ ಧಾನ್ಯಗಳು ಮುಗಿದು ಹೋಗಿ ಪ್ರತಿವರ್ಷವೂ ತೊಂದರೆ ತಪ್ಪಿಲ್ಲ ಈ ಸಲ ಅನೇಕ ಕಾರಣಗಳಿಂದ ಪರಿಸ್ಥಿತಿ ಇನ್ನೂ ಭೀಕರವಾಗಿದೆ ಕೇರಿಫ್ ಮತ್ತು ಗೋಧಿ ಬೆಳೆ ಹೋದ ವರ್ಷ ಕೆಟ್ಟುಹೋಗಿದ್ದರ ಫಲವಾಗಿ ಹೋದವರ್ಷದ ಅಕ್ಟೋಬರ ಹೊತ್ತಿಗೇ ಉಳಿದ ಎಲ್ಲಾ ಧಾನ್ಯಗಳು ಮುಗಿದು ಹೋಗಿ ಈ ವರ್ಷದ ಲೆಕ್ಕಕ್ಕೆ ಸ್ವಲ್ಪವೂ ಸೇರಲಿಲ್ಲ ಹಿಂದೆ ಪ್ರತಿ ವರ್ಷವೂ ವರ್ಷದ ಅಕ್ಟೋಬರನಲ್ಲಿ ಸ್ವಲ್ಪ ಧಾನ್ಯವು ಉಳಿಯುತ್ತಿತ್ತು

ಗಲಭೆಗಳಿಂದ ಬೆಳೆಗೆ ನಷ್ಟ

ದೇಶವು ವಿಭಜನೆಯಾದುದರಿಂದಲೂ, ಅದರ ಹಿಂದೆಯೇ ಪ್ರಾರಂಭವಾದ ಗಲಭೆಗಳ ಕಾರಣದಿಂದಲೂ ಸುಮಾರು ೬೫೦೦೦ ಟನ್ ಆಹಾರದ ಧಾನ್ಯಗಳಷ್ಟು ನಷ್ಟ ಹಂಚಬೇಕಾಯಿತು ಲಕ್ಷಾಂತರ ನಿರಾಶ್ರಿತರಿಗೆ ಅನ್ನ ಒದಗಿಸುವ ಸಂದರ್ಭ ಒದಗಿ ಬಂದುದರಿಂದ ಪೂರ್ವ ಪಂಜಾಬಿನಲ್ಲಿ ಸರ್ಕಾರವು ಹೆಚ್ಚು ಧಾನ್ಯಗಳನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ ಈಗಿನ ಪರಿಸ್ಥಿತಿಯಲ್ಲಿ ಪೂರ್ವ ಪಂಜಾಬಿಗೆ ೩೦,೦೦೦ ಟನ್ ಗೋಧಿ ಅವಶ್ಯಕವಾಗಿ ಬೇಕಾಗಿದೆ ಗಲಭೆಗಳ ದೆಸೆಯಿಂದ ಪೂರ್ವ ಪಂಜಾಬಿನಲ್ಲಿ ಕೇರಿಫ್ ಬೆಳೆಯನ್ನು ಸಕಾಲದಲ್ಲಿ ಕಟಾವು ಮಾಡಲಾಗಲಿಲ್ಲ ರಾಬಿ ಬೆಳೆಗೆ ಬೀಜವನ್ನು ಕಾಲಕ್ಕೆ ಸರಿಯಾಗಿ ಬಿತ್ತಲೂ ಸಾಧ್ಯವಾಗಲಿಲ್ಲ

ಈ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರ ಕೈಗೊಳ್ಳಬಹುದಾದ ಎಲ್ಲ ಕಾರ್ಯಗಳನ್ನೂ ಮಾಡುತ್ತಿದೆ. ಹೊರದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸಲು ತೀವ್ರವಾಗಿ ಪ್ರಯತ್ನಿಸುತ್ತಿದೆ ಗೋಧಿಯನ್ನು ಕೊಳ್ಳಲು ಆಸ್ಟ್ರೇಲಿಯಾಕ್ಕೆ ಮುಂದಿನ ತಿಂಗಳು ಭಾರತದಿಂದ ಒಂದು ನಿಯೋಗ ಹೋಗಲಿದೆ. ಈಗಿರುವ ದಾಸ್ತಾನು ಮತ್ತು ಹೊರಗಿನಿಂದ ನಿರೀಕ್ಷಿಸಿರುವ ಧಾನ್ಯಗಳೂ ಕೂಡ ಪರಿಸ್ಥಿತಿಯನ್ನು ಎದುರಿಸಲು ಸಾಲದಾಗಿದೆ.

ಪ್ರಾಂತ್ಯಗಳಲ್ಲಿ ಆಹಾರ ಪರಿಸ್ಥಿತಿ

ಪ್ರಾಂತ್ಯಗಳಲ್ಲೂ ಆಹಾರದ ಪರಿಸ್ಥಿತಿ ಏನೂ ಉತ್ತಮವಾಗಿಲ್ಲ ಆಹಾರದ ಧಾನ್ಯಗಳು ಈಗ ಹಂಚಿಕೆಯಾಗಿರುವಂತೆ ನವಂಬರ್ ಮೊದಲನೇ ತಾ|| ವೇಳೆಗೆ ಮದ್ರಾಸ್, ಬೊಂಬಾಯಿ ಮತ್ತು ಮೈಸೂರುಗಳಲ್ಲಿ ಎರಡು ವಾರಗಳಿಗೆ ಸಾಕಾಗುವಷ್ಟು ಮಾತ್ರ ಆಹಾರ ಧಾನ್ಯವಿರತ್ತದೆ. ತಿರುವಾಂಕೂರು, ಕೊಚ್ಚಿನ್ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕೂಡ ಎರಡು ವಾರದ ಪ್ರಮಾಣ ಮಾತ್ರ ಇರುತ್ತದೆ ಸಂಯುಕ್ತ ಪ್ರಾಂತ್ಯಗಳಲ್ಲಿ ಈಗ ಪರಿಸ್ಥಿತಿ ತಕ್ಕಮಟ್ಟಿಗೆ ಉತ್ತಮವಾಗಿದೆ ಆದರೆ ವರ್ಷದ ಕೊನೆಯಲ್ಲಿ ಕೇಂದ್ರ ಸರ್ಕಾರವು ಸಂಯುಕ್ತ ಪ್ರಾಂತ್ಯಗಳಿಗೂ ಆಹಾರವನ್ನು ಹಂಚಬೇಕಾಗಿದೆ ಹೈದ್ರಾಬಾದ್ ಮತ್ತು ರಾಜಪುಟಾಣ ಸಂಸ್ಥಾನಗಳ ಪರಿಸ್ಥಿತಿ ಆಗಲೇ ಹದಗೆಟ್ಟಿದೆ

ಹೊರದೇಶಗಳಿಂದ ಆಮದು

ಹೊರದೇಶಗಳಿಂದ ಬರಲಿರುವ ಆಹಾರ ಧಾನ್ಯಗಳ ಪ್ರಮಾಣವನ್ನು ವಿವರಿಸುತ್ತ ಈ ವರ್ಷ ಪ್ರಪಂಚದ ಇತರ ರಾಷ್ಟ್ರಗಳಿಂದ ಆಮದಾಗುವ ಅಕ್ಕಿ ಪರಿಮಾಣ ೨,೦೦೦,೦೦೦ ಟನ್‌ಗಳು ಮಾತ್ರವೆಂದೂ ಅಮೇರಿಕದಲ್ಲಿ ಗೋಧಿ ಬೆಳೆ ಸಮರ್ಪಕವಾಗಿಲ್ಲದಿರುವುದರಿಂದ ಗೋಧಿ ಆಮದು ಕಡಮೆಯಾಗುವುದೆಂದೂ, ಡಾ|| ರಾಜೇಂದ್ರ ಪ್ರಸಾದರು ತಿಳಿಸಿದರು.

ಯೂರೋಪಿಗೆ ಅನ್ನನೀಡಿ

ಯೂರೋಪಿನಲ್ಲಿ ತಲೆದೋರಿರುವ ಉತ್ಕಟ ಆಹಾರಾಭಾವವನ್ನು ನಿವಾರಿಸಲು ಸಂಯುಕ್ತ ಸಂಸ್ಥಾನದ ಜನರು ಕನಿಷ್ಠಪಕ್ಷ ೧೦೦ ಮಿಲಿಯನ್ ಬುಷೆಲ್‌ಗಳಷ್ಟು ಧಾನ್ಯವನ್ನಾದರೂ ಉಳಿಸಬೇಕೆಂದು ಅಧ್ಯಕ್ಷ ಟ್ರೂಮನ್‌ರವರು ಮನವಿಮಾಡಿಕೊಂಡಿದ್ದಾರೆ. [illegible] ಅಷ್ಟು ತ್ಯಾಗಮಾಡಲು ಸಿದ್ಧರಿಲ್ಲದಿದ್ದರೆ ಯೂರೋಪಿನ ಜನರು [illegible] ಕಷ್ಟಸ್ಥಿತಿಗೆ [illegible] ಎಂದು ತಿಳಿಸಿದ್ದಾರೆ.

ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ

ನ್ಯಾಯವೋ, ಅನ್ಯಾಯವೋ?

ಲೇ॥ ಮಲ್ಲಿಕಾರ್ಜುನಾರಾಧ್ಯ ಎಡೇಬೆನ್ನೂರು ಮಳೆನೂರ
ಮುಪೇಟೂರು

ಬಹುಕಾಲದ ಹಿಂದೆ ಹಿಮಾಲಯದ ತಪ್ಪಲಿನಲ್ಲಿ ಬ್ರಹ್ಮಾನಂದನೆಂಬ ಸಾಧುವು ಸದಾ ಭಗವಂತನ ಧ್ಯಾನ ಮಾಡುತ್ತ ತಪಸ್ಸು ಮಾಡುತ್ತಿದ್ದನು ಈ ರೀತಿ ಅನೇಕ ದಿನಗಳು ಕಳೆದುಹೋದವು ಹೀಗಿರುತ್ತಿರಲೊಂದುದಿನ ಏಕಾಏಕಿಯಾಗಿ ಅವನಿಗೆ "ಜಗತ್ತಿನಲ್ಲಿ ಅನ್ಯಾಯವು ಎತ್ತನೋಡಿದಡತ್ತ ಹೇರಳವಾಗಿ ನಡೆಯುತ್ತಿರುವುದು (ಸಾತ್ವಿಕರಿಗೆ ಅವನತಿ, ಧೂರ್ತರಿಗೆ ಉನ್ನತಿ) ಕಾಣುತ್ತಿರುವದು ನ್ಯಾಯವೆಂಬುದು ಎಲ್ಲಿಯೋ ಮಾಯವಾಗಿದೆ ಜಗತ್ತನ್ನು ಸೃಷ್ಟಿಮಾಡಿ ಸಮಸ್ತ ಜೀವಿಗಳನ್ನು ಏಕದೃಷ್ಟಿಯಿಂದ ಪರಿಪಾಲನೆ ಮಾಡುತ್ತಿರುವ ಪರಶಿವನ ಪರಾಮರ್ಶಿಸುತ್ತಿರುವಾಗಲೂ ಹೀಗಿರಲು ಕಾರಣವೇನು?" ಎಂಬುದಾಗಿ ಪ್ರಬಲವಾದ ಸಂಶಯವು ತಲೆದೋರಿತು ಇದರಿಂದ ಆತನ ಮನಸ್ಸಿನ ನೆಮ್ಮದಿಗೆ ಭಂಗವುಂಟಾಗಿ ತಪಸ್ಸಿಗೂ, ಧ್ಯಾನಕ್ಕೂ ಸಮಾಧಿಯಿಲ್ಲದಾಯಿತು ಮನದಲ್ಲಂಕುರಿಸಿದ ಸಂಶಯವನ್ನು ಪರಿಹಾರಮಾಡಿಕೊಳ್ಳದಿರುವದು ವಿಹಿತವಲ್ಲ ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ ಪ್ರಪಂಚವನ್ನೆಲ್ಲಾ ಸುತ್ತಿ ಇದರ ನಿಜಾಂಶವನ್ನು ತಿಳಿಯಲೇ ಬೇಕೆಂದು ದೃಢಸಂಕಲ್ಪವನ್ನು ಮಾಡಿದನು ಮರುದಿವಸ ಆ ತಾಪಸೋತ್ತಮನು ಪರ್ಣಕುಟೀರವನ್ನು ಬಿಟ್ಟು ಹೊರಟು ದಟ್ಟವಾದ ಕಾಡಿನಲ್ಲಿ ಚಳಿ ಮಳೆ ಗಾಳಿ ಬಿಸಿಲುಗಳನ್ನು ಲೆಕ್ಕಿಸದೆ ಅಲೆದಾಡಿದು ದಾರಿಯನ್ನು ಕಾಣದೆ ಬಹಳ ಬೇಸತ್ತು ತರುವಾಯ ಸಮೀಪದಲ್ಲೊಂದು ಸಣ್ಣ ದಾರಿಯನ್ನು ಕಂಡು ಆ ಮಾರ್ಗವಾಗಿ ಒಂದು ದೊಡ್ಡ ಮಾರ್ಗಕ್ಕೆ ಬಂದು ಸೇರಿದನು ತಾಪಸಿಯು ಆ ಮಾರ್ಗಕ್ಕೆ ಸಂದಿಸುವುದಕ್ಕೆ ಸರಿಯಾಗಿ ಕರ್ಮಧರ್ಮಸಂಯೋಗದಿಂದ ಸಲ್ಲಕ್ಷಣಗಳಿಂದ ಕೂಡಿದ ಒಬ್ಬ ತರುಣನು ಸಂದಿಸಿ ವಂದನೆಯನ್ನು ಮಾಡಿ ಹರ್ಷದಿಂದ ಎದುರಿನಲ್ಲಿ ನಿಂತುಕೊಂಡನು ದಯಾಮಯನಾದ ಆ ಸನ್ಯಾಸಿಯು ಆ ಸುಕುಮಾರನ ತಲೆಯನ್ನು ಹಿಡಿದೆತ್ತಿ ಮೈದಡವಿ ಬಾಳಪ್ಪಾ, ದೀರ್ಘಾಯುವಾಗು ಎಂದು ಹರಸಿ ಕುಶಲಪ್ರಶ್ನೆಗಳನ್ನು ಮಾಡಿದನು ತದನಂತರ ಈವರಿಗೂ ಮಾತುಕತೆಗಳು ನಡೆದವು ಸನ್ಯಾಸಿಯು ಕೇಳಿದುದಕ್ಕೆಲ್ಲಾ ಆ ತರುಣನು ಸಮಂಜಸವಾದ ಉತ್ತರಗಳನ್ನು ಕೊಡುತ್ತ ಸರಸವಾಗಿ ಮಾತಾಡುತ್ತ ವಿನೋದದಿಂದ ಮುಂದಕ್ಕೆ ಪ್ರಯಾಣಮಾಡಿದರು

ಅಷ್ಟರಲ್ಲಿ ಸೂರ್ಯದೇವನು ಇಹಲೋಕಯಾತ್ರೆಯನ್ನು ಮುಗಿಸಿಕೊಂಡು ಪಶ್ಚಿಮಾಂಬುದಿಯನ್ನು ಸೇರುತ್ತಿರಲು ಈ ರಾತ್ರಿ ಎಲ್ಲಿಯಾದರೂ ಇದ್ದು ನಾಳೆ ಮುಂದೆ ಪ್ರಯಾಣಮಾಡಬೇಕೆಂದು ನಿಲ್ಲುವುದಕ್ಕೆ ಸ್ಥಳವನ್ನು ನೋಡುತ್ತಿರುವಲ್ಲಿ, ಮುಂದೆ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಮನೆಯನ್ನು ಕಂಡು ತುಂಬಾ ಹರ್ಷಿತರಾಗಿ ಅಲ್ಲಿಗೆ ಹೋದರು ಆ ಗೃಹದ ಯಜಮಾನನು ಇವರನ್ನು ಆದರದಿಂದ ಬರಮಾಡಿಕೊಂಡು ಕುಶಲಪ್ರಶ್ನೆಗಳನ್ನು ಮಾಡಿ, ಸ್ವಾಮಿಗಳೇ, ತಾವು ಬಹುದೂರ ಪಯಣಮಾಡಿ ಬಂದಂತೆ ಕಾಣುತ್ತದೆ ನನ್ನ ಆತಿಥ್ಯವನ್ನು ಸ್ವೀಕರಿಸಿ ದಣಿವಾರಿಸಿಕೊಂಡು ನಾಳೆ ಪ್ರಯಾಣ ಮಾಡಿರೆಂದು ವಿನಯದಿಂದ ಹೇಳಿ ಹಣ್ಣು ಹಾಲು ಸಕ್ಕರೆಯನ್ನು ತಂದು ಮುಂದಿರಿಸಿದನು ಇಬ್ಬರೂ ಆತನ ವಿನಯೌದಾರ್ಯಕ್ಕೆ ಸಂತಸಗೊಂಡು ಆತನ ಅಪೇಕ್ಷೆಯನ್ನು ನೆರವೇರಿಸಿ ರಾತ್ರಿ ಸುಖವಾಗಿ ಮಲಗಿದ್ದು ಪ್ರಾತಃಕಾಲಕ್ಕೆದ್ದು ಆತನಿಂದ ಬೀಳ್ಕೊಂಡು ಮುಂದೆ ಸ್ವಲ್ಪದೂರ ಹೋದ ಬಳಿಕ ಮನೆಯ ಯಜಮಾನನು ಹಾಲು ಕುಡಿಯಲಿಕ್ಕೆ ಕೊಟ್ಟಿದ್ದ ಬಂಗಾರದ ಬಟ್ಟಲನ್ನು ಆ ತರುಣನು ಸನ್ಯಾಸಿಗೆ ತೋರಿಸಿದನು ಅದನ್ನು ನೋಡಿ ಸನ್ಯಾಸಿಗೆ ಭಯವೂ ವಿಸ್ಮಯವೂ ಏಕಕಾಲದಲ್ಲುಂಟಾದವು ಆ ತರುಣನ ಈ ಅಸಭ್ಯ ವರ್ತನವನ್ನು ನೋಡಿ ಚೆನ್ನಾಗಿ ಗದರಿಸಬೇಕೆಂದಿದ್ದನು ಆದರೆ ಏನು ಮಾಯೆಯೋ ಅವನಿಗೆ ಬಾಯೇ ಬರಲಿಲ್ಲ ಆದರೆ ತರುಣನು ಮಾತ್ರ ಸನ್ಯಾಸಿಯನ್ನು ಹಿಂಬಾಲಿಸಿ ನಡೆದನು ಹೀಗೆ ಮಧ್ಯಾಹ್ನ ಮೂರು ಘಂಟೆಯವರೆಗೆ ದಾರಿ ನಡೆದ ಬಳಿಕ ಆಕಾಶದಲ್ಲಿ ಕಾರ್ಮೋಡವು ಕವಿದುಕೊಂಡಿತು ಓಹೋ! ಮಳೆಯು ಬರುತ್ತಲಿದೆ ಎಲ್ಲಿಯಾದರೊಂದೆಡೆಯಲ್ಲಿ ನಿಲ್ಲಬೇಕೆಂದು ಅತ್ತಿತ್ತ ನೋಡುತ್ತಿರುವಲ್ಲಿ ಸ್ವಲ್ಪದೂರದಲ್ಲಿ ದಿಣ್ಣೆಯ ಮೇಲಿರುವ ಒಂದು ಮನೆಯನ್ನು ಕಂಡು ಲಗುಬಗೆಯಿಂದ ಅಲ್ಲಿಗೆ ಹೋದರು ಆವೇಳೆಗೆ ಮಳೆಯು ಧಾರಾಕಾರವಾಗಿ ಸುರಿಯುತ್ತಿತ್ತು ಈರ್ವರೂ ಕದವನ್ನು ಬಲವಾಗಿ ತಟ್ಟಿದರು ಮನೆಯ ಯಜಮಾನನು ಓಡಿಬಂದು ಕದವನ್ನು ತೆರೆದು ಆದರದಿಂದ ಒಳಗೆ ಬರಮಾಡಿಕೊಂಡನು ಅದುವರೆಗೂ ಆ ಗೃಹಸ್ಥನು ಯಾರಿಗೂ ಎಂತಹ ವಿಪತ್ಸಮಯದಲ್ಲಿಯೂ ಕದವನ್ನು ತೆರೆದವನಲ್ಲ ಹಸಿವು ತೃಷೆಗಳಿಂದ ಕಂಠಗತಪ್ರಾಣರಾದವರಿಗೆ ಅನ್ನೋದಕಗಳನ್ನು ಕೊಟ್ಟವನಲ್ಲ ಈ ರೀತಿ ಪಾಷಾಣಹೃದಯನಾಗಿದ್ದ ಅವನು ಇವರಿಗೆ ಒಣಗಿದ ಬಟ್ಟೆಬರೆಗಳನ್ನು ಕೊಟ್ಟು ಅನ್ನೋದಕಗಳಿಂದ ತೃಪ್ತಿಪಡಿಸಿದನು

ಸ್ವಲ್ಪಹೊತ್ತಿನಲ್ಲಿ ಮಳೆ ನಿಲ್ಲಲು ಇವರು ಪ್ರಯಾಣ ಸನ್ನದ್ಧರಾಗಿ ಹೊರಡುವ ಸಮಯದಲ್ಲಿ ಆ ತರುಣನು ಹಿಂದೆ ತಾನು ತಂದಿದ್ದ ಬಂಗಾರದ ಬಟ್ಟಲನ್ನು ಆ ಗೃಹಸ್ಥನಿಗೆ ಕೊಟ್ಟನು ತತ್ಸಮಯದಲ್ಲಿ ಸನ್ಯಾಸಿಯು ತರುಣನ ಈ ವಿಚಿತ್ರವರ್ತನೆಯನ್ನು ಕಂಡು ವಿಸ್ಮಯಗೊಂಡನಲ್ಲದೆ ಅವನಿಗೆ ಏನನ್ನು ಹೇಳುವುದಕ್ಕೂ ತೋಚಲಿಲ್ಲ ಹೀಗೆ ಪ್ರಯಾಣಹೊರಟು ಸ್ವಲ್ಪದೂರ ಹೋಗಲು ರಾತ್ರಿಯಾದುದರಿಂದ ಹಿಂದಿನ ದಿನದಂತೆಯೇ ಮತ್ತೊಬ್ಬ ಗೃಹಸ್ಥನ ಮನೆಯಲ್ಲಿ ವಸತಿಯನ್ನು ಮಾಡಿದರು ಆ ಗೃಹಸ್ಥರು ಪ್ರೇಮ ಕಲಹಗಳಿಲ್ಲದವರೂ ಜಂಜಾಟವಿಲ್ಲದವರೂ ಆಗಿದ್ದು ಒಂದನೆ ಬಗೆ ಆದರದಿಂದ ಉಪಚರಿಸುತ್ತಿದ್ದನಲ್ಲದೆ ಸತ್ಕಾರ್ಯಗಳಿಗೆ ಧನವನ್ನು ಹೇರಳವಾಗಿ ವೆಚ್ಚಮಾಡುತ್ತಿದ್ದನು ಇವರ ಒಂದುದನ್ನು ನೋಡಿ ತುಂಬ ಹರ್ಷಿತನಾಗಿ ಭೋಜನವನ್ನು ಮಾಡಿಸಿ, ಅವರೊಡನೆ ವಾರ್ತಾಲಾಪಗಳನ್ನಾಡಿ ಮಲಗುವುದಕ್ಕೆ ಹೋದನು ಮರುದಿವಸ ಆತನ ಒತ್ತಾಯದಿಂದ ಭೋಜನವನ್ನು ತೀರಿಸಿಕೊಂಡು ಇವರು ಪ್ರಯಾಣಕ್ಕೆ ಸನ್ನದ್ಧರಾದರು ಅಷ್ಟರಲ್ಲಿ ಆ ಗೃಹಸ್ಥನು ಇವರನ್ನು ಕುರಿತು ತಪೋಧನರೇ ನೀವು ಹೋಗುವ ಮಾರ್ಗದಲ್ಲಿ ನದಿ ಇದೆ, ನದಿಯಲ್ಲಿ ನೀರು ಜಾಸ್ತಿಯಾಗಿ ಹರಿದಿದೆ ನಿಮಗೆ ದಾರಿಯು ತಿಳಿಯದಾದುದರಿಂದ ಜೊತೆಗೆ ನನ್ನ ಆಳನ್ನು ಕರೆದುಕೊಂಡು ಹೋಗಿರೆಂದು ಹೇಳಿ ಆಳನ್ನು ಕಳುಹಿಸಿದನು ಇವರು ಆಳನ ಸಂಗಡ ಹೊರಡುವುದಕ್ಕೆ ಮುನ್ನವೇ ಈ ತರುಣನು ಯಾರಿಗೂ ಗೊತ್ತಾಗದಂತೆ ತೊಟ್ಟಿಲಲ್ಲಿ ನಿದ್ರೆ ಮಾಡುತ್ತಿದ್ದ ಗೃಹಸ್ಥನ ಏಕಮಾತ್ರವಾಗಿದ್ದ ಹಸುಗೂಸಿನ ಗೋಣನ್ನು ಮುರಿದು ಕೊಂದುಬಿಟ್ಟನು ಮನೆಯವರೆಲ್ಲರೂ ಈ ದುರವಸ್ಥೆಯನ್ನು ನೋಡಿ ಅಯ್ಯೋ! ಇದೇನು ಕೇಡು ಸಂಭವಿಸಿತು? ಮಗುವು ಇದ್ದಕ್ಕಿದ್ದ ಹಾಗೆಯೇ ಸತ್ತುಹೋಯಿತಲ್ಲ? ಶಿವಶಿವಾ! ನಿರಪರಾಧಿಗಳಿಗೆ ಈ ದುರವಸ್ಥೆಯು ಪ್ರಾಪ್ತವಾಗಬಹುದೆ? ಎಂದು ಪರಿಪರಿಯಾಗಿ ಗೋಳಾಡುತ್ತಿದ್ದರು ಗೃಹಸ್ಥನ ದುಃಖಕ್ಕಂತೂ ಪಾರವೇ ಇಲ್ಲ ತರುಣನ ಈ ಬಗೆಯ ಕೊಲೆಗಡುಕತನವನ್ನು ಪ್ರತ್ಯಕ್ಷ ಕಂಡ ಮುನಿವರನು ಆತ್ಮಾಗ್ರಹದಿಂದಲೂ ಭಯದಿಂದಲೂ ಕೂಡಿದವನಾಗಿ ಅಯ್ಯೋ ಪಾಪಿ, ಇದೇನನ್ಯಾಯಮಾಡಿಬಿಟ್ಟೆ? ನೋಡುವುದಕ್ಕೆ ಮಾತ್ರ ನೀನು ಸಲ್ಲಕ್ಷಣವುಳ್ಳವನಾಗಿದ್ದರೂ ಮಾಡಬಾರದ ಪೈಶಾಚಿಕಕೃತ್ಯವನ್ನು ಮಾಡಿದೆಯಲ್ಲ? ಎಲ್ಲಿ ಆಕಾರವಿರುವದೋ ಅಲ್ಲಿ ಗುಣವೂ ಇರುವದೆಂಬ ಶಾಸ್ತ್ರವಾಕ್ಯವು ನಿನ್ನಲ್ಲಿ ಅಸತ್ಯವಾಗಿ ಪರಿಣಮಿಸಿತಲ್ಲ! ಹೋದೆಡೆಯಲ್ಲೆಲ್ಲಾ ಯಾವುದೋ ಒಂದು ಬಗೆಯಲ್ಲಿ ಅನ್ಯಾಯವನ್ನೇ ಮಾಡಿದ್ದೀಯೆ ನಿನ್ನನ್ನು ಏನು ಮಾಡಿದರೆ ತಾನೇ ತೀರೀತು? ಎಂದು ಗದರಿಸುವುದಕ್ಕೆ ಯತ್ನಿಸಿದನು ಆದರೆ ತಾನೇ ಏನು? ಬಾಯಿಂದ ಶಬ್ದಗಳೇ ಹೊರಡಲಿಲ್ಲ ನೋಡುವುದಕ್ಕೆ ಮಾತ್ರ ದೇವತಾಪುರುಷನಂತಿದ್ದರೂ ಕಿರಾತಕೃತ್ಯವನ್ನು ಮಾಡಿದ ಈ ನರಾಧಮನ ಸಂಸರ್ಗವು ತನಗೆ ಯೋಗ್ಯವಲ್ಲೆಂದು ಭಾವಿಸಿ ದೂರದೂರಕ್ಕೆ ಸರಿದನು ತರುಣನು ಮಾತ್ರ ಬ್ರಹ್ಮಾನಂದನ ಬೆನ್ನು ಬಿಡದೆ ಹಿಂದೆಯೇ ಸಾಗಿಸಿದನು ನದಿಯು ಉಕ್ಕಿ ಹರಿಯುತ್ತಿತ್ತು ಅದನ್ನು ದಾಟಲಿಕ್ಕೆ ಅಡ್ಡಲಾಗಿ ಹಾಕಿದ್ದ ದೊಡ್ಡ ಮರದ ತುಂಡಿನ ಮೇಲೆ ಮುಂದೆ ಆಳು ಅವನ ಹಿಂದೆ ತರುಣ ಬಳಿಕ ಸನ್ಯಾಸಿ ಹೀಗೆ ಮೂವರೂ ಸಾಗಿದರು ನಡುಹೊಳೆಗೆ ಹೋದೊಡನೆಯೇ ಸಮಯವನ್ನು ನಿರೀಕ್ಷಿಸಿಕೊಂಡಿದ್ದು ಸಹಾಯಕ್ಕೆ ಬಂದಿದ್ದ ಆಳನ್ನು ಆ ತರುಣನು ನದಿಗೆ ನೂಕಿಬಿಟ್ಟನು ಆಳು ಜಲಸಮಾಧಿಯನ್ನು ಹೊಂದಿದನು ತರುಣನ ಈ ಕೊನೆಯ ಕ್ರೂರಕೃತ್ಯವನ್ನು ನೋಡಿ ಬ್ರಹ್ಮಾನಂದನು ಸಹಿಸದೆ, ಎಲಾ ನೀಚಾತ್ಮಾ! ಒಂದಾದಮೇಲೆ ಒಂದರಂತೆ ನೀನು ರಾಕ್ಷಸಕೃತ್ಯವನ್ನೇ ಮಾಡುತ್ತ ಬಂದಿದ್ದೀಯೆ ಈ ನಿನ್ನ ಘೋರಕೃತ್ಯಗಳಿಗೆ ಪರಮಾತ್ಮನು ಬೇರೆ ನರಕವನ್ನೇ ಸೃಷ್ಟಿಸಬೇಕು ಛೀ! ಛೀ! ದುರುಳಾ! ಪಾಪಾತ್ಮಾ! ತೊಲಗು ತೊಲಗು ನಿನ್ನ ಮುಖಾವಲೋಕನವನ್ನು ಮಾಡಿದವರಿಗೆ ರೌರವನರಕವು ಖಂಡಿತವಾಗಿಯೂ ತಪ್ಪಲಾರದು, ಎಂದು ಹೂಂಕರಿಸಿದನು ನೋಡಲಾಗಿ ಅಲ್ಲಿ ಆ ತರುಣನಿರಲಿಲ್ಲ ಸನ್ಯಾಸಿಯು ತುಂಬ ಭಯಾಶ್ಚರ್ಯಾನ್ವಿತನಾಗಿ ಮೇಲಕ್ಕೆ ನೋಡಲು ಸಹಸ್ರ ಸೂರ್ಯಪ್ರಭೆಯನ್ನು ಧಿಕ್ಕರಿಸುವ ದಿವ್ಯತೇಜಸ್ಸೊಂದನ್ನು ಕಂಡನು ಆ ತೇಜೋಮಂಡಲದ ಮಧ್ಯದಲ್ಲಿ ತನ್ನ ಸಂಗಡವಿದ್ದ ತರುಣನ ದಿವ್ಯಾಕಾರವು ಕಾಣಿಸಿತು ಆ ದಿವ್ಯಮೂರ್ತಿಯು ಈ ತಾಪಸಿಯ ಕಡೆಗೆ ತನ್ನ ಕಡೆಗಣ್ಣಿನ ನೋಟವನ್ನು ಬೀರಿ, ಗಂಭೀರಭಾವದಿಂದ ಇಂತೆಂದಿತು ಎಲೈ ಮುನಿಕುಲತಿಲಕನೇ, ನಿನ್ನ ತಪಸ್ಸಿಗೆ ನಾನು ಪ್ರೀತನಾದೆನು ಜಗತ್ತಿನಲ್ಲಿ ಜನರು ನನ್ನ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಮಾತಾಡಿಕೊಳ್ಳುತ್ತಾರೆ ಸೂರ್ಯನು ತನ್ನ ಕಿರಣಗಳನ್ನು ಯೋಗ್ಯಾಯೋಗ್ಯಸ್ಥಾನಗಳನ್ನು ನೋಡದೆ ಸರ್ವತ್ರ ಸಮಭಾವದಿಂದ ಪ್ರಸರಿಸುವಂತೆ ನಾನು ಎಲ್ಲರಿಗೂ ಒಂದೇ ವಿಧವಾಗಿರುತ್ತಿದ್ದೇನೆ ಪ್ರಾಣಿಗಳ ಹಿತಚಿಂತನೆಯಿಂದ ಸನ್ಯಾಯಾನುಸಾರ ಪ್ರತಿಕೂಲಗಳನ್ನುಂಟುಮಾಡುತ್ತೇನೆ. ನನ್ನ ಸಂತ್ಸಂಕಲ್ಪವನ್ನರಿಯದ ಜ್ಞಾನಹೀನರು ನಾನು ಅನ್ಯಾಯವನ್ನು ಮಾಡುವವನೆಂದು ಸುಮ್ಮನೆ ಆಕ್ಷೇಪಿಸುತಾರೆ

ಈ ಮರ್ಮವನ್ನು ನಿನಗೆ ತಿಳಿಸಬೇಕೆಂಬ ಸದುದ್ದೇಶದಿಂದಲೇ ಸರ್ವಸಂಗ ಪರಿತ್ಯಾಗಿಯಾದ ನಿನ್ನ ಮನದಲ್ಲಿ ಪ್ರಬಲತರವಾದ ಸಂಶಯವನ್ನು ತಂದೊಡ್ಡಿ ಸರ್ವದಾ ಅನ್ಯಾಯವೆಂದು ಕಾಣಬರುವ ಕಾರ್ಯಗಳನ್ನು ನಿನಗೆ ಛಾಯಾಮಾತ್ರದಿಂದ ತೋರಿಸಿದೆನು ಈ ಸಂಘಟನೆಗಳಿಂದ ಯಾವ ರೀತಿಯಲ್ಲಿ ಆಯಾಯ ಜನರಿಗೆ ಹಿತವಾಯಿತೆಂಬುದನ್ನು ಸದ್ಭಕ್ತನಾದ ನಿನಗೆ ಸಮಗ್ರವಾಗಿ ತಿಳುಹಿಸುವೆನು ಕೇಳು ಮೊದಲು ನಾವು ಇಳಿದುಕೊಂಡಿದ್ದ ಮನೆಯ ಗೃಹಸ್ಥನು ಧರ್ಮಶೀಲನಾದರೂ ತನ್ನ ಇಹಸಂಪತ್ತನ್ನು ಬಂದವರಿಗೆ ತೋರಿಸಬೇಕೆಂಬ ರಾಜಸಗುಣದಿಂದ ಬಂಗಾರದ ಬಟ್ಟಲುಗಳಲ್ಲಿ ಅನ್ನಪಾನಾದಿಗಳನ್ನು ಕೊಡುತ್ತಿದ್ದನು ಅವನ ಹೆಮ್ಮೆಯನ್ನು ತಗ್ಗಿಸಬೇಕೆಂದು ಬಯಸಿ ನಾನು ಆ ಬಟ್ಟಲನ್ನು ಅಪಹರಿಸಿದೆನು ಇದರಿಂದ ಅಹಂಕಾರವು ನಾಶವಾಯಿತು. ಎರಡನೆಯ ಗೃಹಸ್ಥನು ಮುಚ್ಚಿದ ಕದವನ್ನು ತೆರೆಯದೆ ಒಂದುಹೊತ್ತಾದರೂ ಅನ್ನೋದಕಗಳನ್ನು ಕೊಡದ ಕಡುಲೋಭಿಯು ನಮಗೆ ಆಶ್ರಯವನ್ನು ಕೊಟ್ಟು ಅನ್ನಪಾನಾದಿಗಳಿಂದ ಸತ್ಕರಿಸಿದನು ಆದ್ದರಿಂದ ಅವನಿಗೆ ಚಿನ್ನದ ಬಟ್ಟಲನ್ನು ಕೊಟ್ಟೆನು ಇದರಿಂದ ನಾವು ಒಬ್ಬರಿಗೆ ಕೊಟ್ಟರೆ ಭಕ್ತವತ್ಸಲನಾದ ಪರಮಾತ್ಮನು ನನಗೆ ಕೊಡುತ್ತಾನೆಂಬ ಸದ್ಬುದ್ಧಿಯು ಅವನಲ್ಲಿ ಹುಟ್ಟಿ ಅವನ ಲೋಭಗುಣವು ಕಡಿಮೆಯಾಯಿತು ಇನ್ನು ಮೂರನೆಯ ಗೃಹಸ್ಥನು ಸ್ವಭಾವತಃ ಅನ್ನದಾತನೂ, ಪರೋಪಕಾರಿಯೂ, ಧರ್ಮಪರಾಯಣನು ಅವನಿಗೆ ಒಂದು ಗಂಡುಕೂಸು ಹುಟ್ಟಿದ್ದರಿಂದ ತನ್ನ ಸಂಪತ್ತನ್ನು ಪರಾರ್ಥಕ್ಕಾಗಿ ವಿನಿಯೋಗಿಸುತ್ತ ಬಂದರೆ ಮುಂದೆ ತನ್ನ ಮಗನಿಗೆ ಧನವು ಉಳಿಯುವುದಿಲ್ಲೆಂದು ತನ್ನ ಸತ್ಕರ್ಮದಲ್ಲಿ ಅಶ್ರದ್ಧೆಯನ್ನು ಮಾಡಹತ್ತಿದನು ಅದು ಪ್ರಯುಕ್ತ ಅವನ ಸತ್ಕರ್ಮಾಚರಣೆಗೂ ಅವನ ಪುರೋಭಿವೃದ್ಧಿಗೂ ಅಡ್ಡಿಯಾಗಿದ್ದ ಆ ಶಿಶುವನ್ನು ಕೊಂದುಬಿಟ್ಟೆನು ಅದರಿಂದ ಅವನ ಅಶ್ರದ್ಧೆಯು ನಾಶವಾಯಿತು. ಕೊನೆಗೆ ನಮಗೆ ದಾರಿಯನ್ನು ತೋರಿಸಲಿಕ್ಕೆ ಬಂದ ಆಳು ಬದುಕಿ ಮನೆಗೆ ಹೋಗಿದ್ದರೆ ಆ ದಿನ ಆ ಗೃಹಸ್ಥನ ಪ್ರಾಣಹರಣವನ್ನು ಮಾಡಿ ಅವನ ಹಣವನ್ನೆಲ್ಲಾ ಅಪಹರಿಸಬೇಕೆಂಬ ದುರಾಲೋಚನೆಯನ್ನು ಮಾಡಿದ್ದನು. ಈ ನೀಚಕೃತ್ಯವು ನಡೆಯಬಾರದೆಂದು ಅವನಿಗೆ ಜ...

[೪ ನೇ ಪುಟವನ್ನು ನೋಡಿ]

ವರ್ತಮಾನಸಂಗ್ರಹ

ಕಾಂಗ್ರೆಸ್ಸಿನ ಮಂತ್ರವು ಕಾಂಗ್ರೆಸ್ಸಿಗೇ ತಿರುಗಿದೆ.

ಯು ಪಿ ಗೆ ಸೇರಿರುವ ಲಕ್ನೋ ವಿಶ್ವವಿದ್ಯಾನಿಲಯದ ಶಿಕ್ಷಣ ಶುಲ್ಕವು ಅಧಿಕವಾಗಿರುವುದೆಂದು ವಿದ್ಯಾರ್ಥಿಗಳು ವಿರೋಧಿಸಿ ಚಳುವಳಿ ಮಾಡುತ್ತಿರುವುದರಿಂದ, ಆ ವಿಶ್ವವಿದ್ಯಾನಿಲಯವನ್ನು ಒಂದು ತಿಂಗಳ ಕಾಲ ಮುಚ್ಚಬೇಕೆಂದೂ, ಚಳುವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದೂ ಅಧಿಕಾರಿಗಳು ನಿರ್ಧರಿಸಿದ್ದಾರೆ ಫೀ ಕಡಮೆ ಮಾಡಲು ಸಾಧ್ಯವಿಲ್ಲವೆಂದು ಕಾಂಗ್ರೆಸ್ ಸರ್ಕಾರದವರು ಪ್ರಕಟಿಸಿದ್ದರಿಂದ ೫೦ ಜನ ವಿದ್ಯಾರ್ಥಿಗಳು ವಿದ್ಯಾಮಂತ್ರಿಗಳ ಮನೆಯ ಮುಂದೆ ಪಿಕೆಟಿಂಗ್ ನಡೆಯಿಸಿದರು. ಇದಕ್ಕಾಗಿ ಆ ವಿದ್ಯಾರ್ಥಿಗಳನ್ನು ಬಂಧನದಲ್ಲಿಡಲಾಗಿದೆ ಕಾಂಗ್ರೆಸ್ಸಿನ ಮಂತ್ರವು ಕಾಂಗ್ರೆಸ್ಸಿಗೇ ತಿರುಗಿದಂತಾಯಿತು

ಈ ವಿಷಯವನ್ನು ಮೈಸೂರು ವಿದ್ಯಾರ್ಥಿಗಳು ಬಹು ದೂರದೃಷ್ಟಿಯಿಂದ ಯೋಚಿಸಬೇಕು ಯಾರೇ ಆಗಲಿ, ತಮ್ಮ ಕೆಲಸವಾಗುವವರೆಗೆ ಏನನ್ನೂ ಅರಿಯದ ಕೋಮಲ ಹೃದಯದ ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಾರೆ ಕೆಲಸವಾದಮೇಲೆ "ಹೊಳೆ ದಾಟಿದ ಮೇಲೆ ತೆಪ್ಪದ ಬಿಗರ ಮಿಂಡೆ' ಎಂಬ ಗಾದೆಯಂತೆ ನಡೆಯುತ್ತಾರೆ ಈ ವಿಷಯದಲ್ಲಿ ಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಬಂಧನವೇ ಸಾಕ್ಷಿ! ಆದುದರಿಂದ ವಿದ್ಯಾರ್ಥಿಗಳು ಗಾಂಧೀಜಿಯವರ ಉಪದೇಶದಂತೆ ಚಳವಳಿಯಲ್ಲಿ ಭಾಗವಹಿಸದಿರುವುದು ಉತ್ತಮವಲ್ಲವೇ?

ಮೈಸೂರು ದೇಶದ ಮಿಥ್ಯಾಗ್ರಹದ ಪರಿಸ್ಥಿತಿ

ಕಳೆದ ತಿಂಗಳ ೬ನೇ ತಾರೀಖಿನಿಂದ ಮುಷ್ಕರ ಹೂಡಿದ್ದ ರೈಲ್ವೆ ಕೆಲಸಗಾರರು, ದಿವಾನರವರು ಕೊಟ್ಟ ಭರವಸೆಯ ಮೇಲೆ ಈ ತಿಂಗಳು ೩ನೇ ತಾ|| ನಿಂದ ತಮ್ಮ ಕೆಲಸಕ್ಕೆ ಹಿಂದಿರುಗಿದ್ದಾರೆ ಕೆಲವು ಸೆಕ್ಷನ್‌ಗಳಲ್ಲಿ ರೈಲ್ವೆ ಸಂಚಾರವು ಪ್ರಾರಂಭವಾಗಿದೆ ಮಿಥ್ಯಾಗ್ರಹದ ಉಲ್ಬಣಸ್ಥಿತಿ ಮಾಯವಾಗಿದೆ ಮುಖ್ಯವಾಗಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಪರಿಸ್ಥಿತಿಯು ಪೂರ್ಣ ಶಾಂತವಾಗಿದೆ ಎಲ್ಲಿಯಾದರೂ ಒಂದೊಂದು ಕಡೆ ಮಿಥ್ಯಾಗ್ರಹವು ನಡೆಯುತ್ತಿರಬಹುದು ಆದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ ಮೈಸೂರು ದೇಶದ ಕೆಲಜನ ಕಮ್ಯೂನಿಸ್ಟ್ ಪಕ್ಷದವರು ಹುಬ್ಬಳ್ಳಿ ಧಾರವಾಡಗಳ ಕಡೆ ಹೋಗಿ ಮೈಸೂರು ದೇಶದ ಪರಿಸ್ಥಿತಿಯು ಬಹಳ ಉಗ್ರವಾಗಿರುವುದೆಂದೂ, ಸರ್ಕಾರವು ತತ್ತರಿಸಿ ಹೋಗಿದೆಯೆಂದೂ, ಆ ಕೋಟೆಯನ್ನೊಡೆದಿರುವರೆಂದೂ, ಈ ಕೋಟೆಯನ್ನೊಡೆದಿರುವರೆಂದೂ, ಇತ್ಯಾದಿ ಅಸತ್ಯ ವಿಷಯಗಳಿಂದಲೂ ಅಶ್ಲೀಲಶಬ್ದಗಳಿಂದಲೂ ಕೂಡಿರುವ ಅನಾಮಧೇಯಪತ್ರಿಕೆಗಳನ್ನು ಪ್ರಿಂಟುಮಾಡಿಸಿ ಎಲ್ಲ ಕಡೆಗೂ ಪ್ರಚಾರಮಾಡುತ್ತಿರುವರೆಂದೂ ತಿಳಿದುಬಂದಿದೆ ಈ ರೀತಿ ಅವರು ಅಪಪ್ರಚಾರ ಮಾಡುತ್ತಿರುವದು ತುಂಬ ಅನ್ಯಾಯ! ಈ ತರಹದ ಅಪಪ್ರಚಾರದಿಂದ ಏನನ್ನೂ ಅರಿಯದ ಜನರಲ್ಲಿ ಗಾಬರಿಯನ್ನುಂಟುಮಾಡಿದಂತಾಗುವುದಲ್ಲದೆ ಇದರಿಂದ ಯಾವ ಫಲವೂ ದೊರೆಯುವಂತಿಲ್ಲ ಆದುದರಿಂದ ಬಳ್ಳಾರಿ, ಹುಬ್ಬಳ್ಳಿ, ಧಾರವಾಡ ಮೊದಲಾದ ಪ್ರಾಂತಗಳಲ್ಲಿರುವ ಮಹಾಜನಗಳು ಆ ವಿಧವಾದ ಅಪಪ್ರಚಾರದ ಕಡೆಗೆ ಗಮನಕೊಡಬಾರದು

ಸತ್ಯಾಗ್ರಹದ ಬಗ್ಗೆ ಗಾಂಧಿಯವರ ಹೇಳಿಕೆ

ಗಾಂಧಿಯವರು ಈ ತಿಂಗಳು ೩ನೇ ತಾರೀಖಿನ ದಿವಸ ನೆರವೇರಿಸಿದ ತಮ್ಮ ಪ್ರಾರ್ಥನಾ ಸಭೆಯಲ್ಲಿ 'ನನಗೆ ೧೨೫ ವರ್ಷಗಳವರೆಗೆ ಜೀವಿಸಿ ದೇಶಸೇವೆ ಮಾಡಬೇಕೆಂಬ ಇಚ್ಛೆಯಿದೆ ಆದರೆ ಇತ್ತೀಚೆಗೆ ಜನರು ನನ್ನ ಮಾತಿನಲ್ಲಿ ವಿಶ್ವಾಸವನ್ನು ತೋರಿಸದಿರುವುದರಿಂದ ದೇವರು ನನ್ನನ್ನು ದೀರ್ಘಕಾಲ ಬದುಕಿಸುವುದಕ್ಕಿಂತಲು ಬೇಗಕಣ್ಮರೆಮಾಡಿದರೆ ಉತ್ತಮವೆಂದು ಇಚ್ಛಿಸುತ್ತೇನೆ" ಎಂದು ಹೇಳಿರುವರು ಅಲ್ಲದೆ ಸತ್ಯಾಗ್ರಹದ ವಿಚಾರವನ್ನೇ ಜನರಿಗೆ ಸತ್ಯಾಗ್ರಹದ ಸ್ವರೂಪವೇ ಗೊತ್ತಿಲ್ಲವೆಂದೂ, ಅಹಿಂಸಾತ್ಮಕವಾಗಿರುವ ಸತ್ಯಾಗ್ರಹವು ಈಗ ಹಿಂಸಾತ್ಮಕವಾಗಿ ಪರಿಣಮಿಸಿರುವುದೆಂದೂ. ಸತ್ಯಾಗ್ರಹದ ಹೆಸರಿನಿಂದ ದೇಶಮಧ್ಯದಲ್ಲಿ ಈಗ ಬಹಳ ಹೇಯವಾದ ಕಾರ್ಯಗಳು ನಡೆಯುತ್ತಿರುವುವೆಂದೂ, ಒಂದು ದೇಶೀಯ ಸಂಸ್ಥಾನದ ರೈಲ್ವೇ ಕೆಲಸಗಾರರು ದುಡ್ಡಿನ ಆಶೆಗಾಗಿ ಮುಷ್ಕರವನ್ನು ಹೂಡಿ ಅದಕ್ಕೆ ಸತ್ಯಾಗ್ರಹವೆಂಬ ಹೆಸರನ್ನು ಕೊಟ್ಟಿರುವುದು ಬಹಳ ತಪ್ಪೆಂದೂ, ವಿದ್ಯಾರ್ಥಿಗಳು ಯಾವ ಚಳವಳಿಯಲ್ಲಿಯೂ, ಭಾಗವಹಿಸದೆ ತಮ್ಮ ವಿದ್ಯಾಭ್ಯಾಸದಲ್ಲಿ ನಿರತರಾಗಿರಬೇಕೆಂದೂ, ಸರ್ವರಿಗೂ ಸರ್ವೋತ್ಕೃಷ್ಟವಾದ ಉಪದೇಶವನ್ನು ಮಾಡಿದ್ದಾರೆ ಗಾಂಧಿಯವರನ್ನೇ ಪ್ರತ್ಯಕ್ಷ ದೇವರೆಂದು ತಿಳಿದಿರುವ ಮೈಸೂರು ಕಾಂಗ್ರೆಸ್ಸಿನವರು ಅವರ ಮಹೋಪದೇಶದಂತೆ ನಡೆದರೆ ದೇಶಕ್ಕೆ ಕ್ಷೇಮವಲ್ಲವೇ?

ಮೈಸೂರಿನ ಬಗ್ಗೆ ಡಾ|| ಸಿ. ಆರ್. ರೆಡ್ಡಿಯವರ ಸಲಹೆಗಳು

' ಮೈಸೂರು ಶ್ರೀಮನ್ಮಹಾರಾಜರವರು ಕೃಪೆಮಾಡಿರುವ ರಾಜಕೀಯ ಸುಧಾರಣೆಗಳು ಸಂಸ್ಥಾನದ ನಾನಾ ರಾಜಕೀಯ ಪಕ್ಷಗಳು ಪ್ರತಿನಿಧಿಗಳು ಒಟ್ಟಿಗೆ ಕಲೆಯಲು ಸದವಕಾಶವನ್ನು ಕಲ್ಪಿಸಿಕೊಟ್ಟಿವೆ ಈ ಸ್ವರ್ಣಸದೃಶವಾದ ಅವಕಾಶವನ್ನು ಕಳೆದುಕೊಳ್ಳುವುದು ವಿವೇಕವಲ್ಲ"— ಎಂಬುದಾಗಿ ರಾಜಕಾರಣ ಪಟುಗಳೂ, ಆಂಧ್ರ ವಿಶ್ವವಿದ್ಯಾನಿಲಯದ ಸ್ಥಾನಪತಿಗಳೂ ಆದ ಡಾ|| ಸಿ ಆರ್ ರೆಡ್ಡಿಯವರು ಮೈಸೂರು ಮಹಾಪ್ರಭುಗಳು ಅನುಗ್ರಹಿಸಿರುವ ಸುಧಾರಣೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ

ಮೈಸೂರಿನ ಕೀರ್ತಿಗೆ ಚ್ಯುತಿ ಬರಕೂಡದು

ಈಗಿನ ವಾತಾವರಣದ ಫಲವಾಗಿ "ಮಾದರಿ ಮೈಸೂರು ಎಂಬ ಕೀರ್ತಿಯು ಅಳಿಸಿಹೋಗುತ್ತಿದೆ ಈಗಿರುವ ಉತ್ಕಟ ಆರ್ಥಿಕ ದುಸ್ಥಿತಿಯ ಜೊತೆಗೆ ರಾಜಕೀಯ ಚಳುವಳಿಯನ್ನು ಹೂಡಿರುವುದರಿಂದ ದೇಶಕ್ಕೆ ಯಾವ ಉಪಕಾರವನ್ನೂ ಮಾಡಿದಂತಾಗುವದಿಲ್ಲ ಮೈಸೂರು ಮಹಾರಾಜರವರ ಘೋಷಣೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಧ್ಯೇಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲಾಗಿದೆ ಇದಲ್ಲದೆ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒಂದು ನಿರ್ದಿಷ್ಟ ಕಾಲಾವಧಿಯನ್ನು ಸಹ ನಿಗದಿ ಮಾಡಲಾಗಿದೆ ಜಗತ್ತಿನಲ್ಲಿ ಯಾವ ರಾಜ್ಯಾಂಗವೂ ಚಿರವಾಗಿ ಉಳಿಯಲಾರದು ಮಾರ್ಪಟ್ಟ ಪರಿಸ್ಥಿತಿಗನುಗುಣವಾಗಿ, ಜನರ ರಾಜಕೀಯ ಜ್ಞಾನಾಭಿವೃದ್ಧಿಯಾದಂತೆಲ್ಲಾ ಅದರ ಸ್ವರೂಪವೂ ಬದಲಾಯಿಸುವುದು ಅಂತೆಯೇ ಮೈಸೂರು ಸುಧಾರಣೆಗಳೂ ಹೊರಗಿನ ವಾತಾವರಣಕ್ಕನುಗುಣವಾಗಿ ಬದಲಾಯಿಸಲ್ಪಡಬಹುದು, ಕಾಲಾವಧಿಯನ್ನು ಸಹ ಬದಲಾಯಿಸಲು ಸಾಧ್ಯ ವ್ಯರ್ಥವಾದ ವಾದವಿವಾದಗಳಲ್ಲಿ ಕಾಲಹರಣಮಾಡದೆ ಮೈಸೂರಿನ ಧವಳ ಕೀರ್ತಿಗೆ ಯೋಗ್ಯವಾದ ರಾಜ್ಯಾಂಗ ವ್ಯವಸ್ಥೆಯನ್ನು ತ್ವರಿತವಾಗಿ ರಚಿಸುವುದು ಅಗತ್ಯ ಉದ್ರಿಕ್ತಮನೋಭಾವ ಹೋಗಿ ಸಂಶಯಗಳು ನಿವಾರಣೆಯಾದರೆ ಈ ಕಾರ್ಯವು ನೆರವೇರುವುದು ತಡವಿಲ್ಲ ಎಂದು ಅವರು ತಿಳಿಸಿದ್ದಾರೆ

ಎಮ್. ಎಸ್. ಎಮ್. ರೈಲ್ವೆ ಕೆಲಸಗಾರರ ನಿರ್ಣಯ

ಎಮ್ ಎಸ್. ಎಮ್ ರೈಲ್ವೆ ಕೆಲಸಗಾರರ ಸೆಂಟ್ರಲ್ ಕೌನ್ಸಿಲ್ ಸಭೆಯು ಎಸ್ ಗುರುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಬಿತ್ರಗುಂಟ ಎಂಬ ಗ್ರಾಮದಲ್ಲಿ ನೆರವೇರಿತು ಅಖಿಲ ಭಾರತ ರೈಲ್ವೆ ನೌಕರರ ಫೆಡರೇಷನ್ ಸಂಸ್ಥೆಯು ಈಗಿನ ಪರಿಸ್ಥಿತಿಯನ್ನು ವಿಮರ್ಶಿಸಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವವರೆಗೂ ರೈಲ್ವೆ ಮುಷ್ಕರದ ಕಾರ್ಯಕ್ರಮವನ್ನು ಕೈಗೊಳ್ಳಬಾರದೆಂದು ನಿರ್ಧರಿಸಿತು

ಬೊಂಬಾಯಿಯಲ್ಲಿ ಗಿರಣಿ ಕೂಲಿಕಾರರ ಮುಷ್ಕರ

ಕೂಲಿಗಾರರ ಮುಖಂಡರಾದ ಶ್ರೀ ಎಸ್ ಎಮ್ ಜೋಷಿಯವರು ಬಟ್ಟೆ ಗಿರಣಿ ಕೂಲಿಕಾರರ ಕಷ್ಟಸುಖಗಳನ್ನು ಗಿರಣಿ ಮಾಲೀಕರು ಮತ್ತು ಸರ್ಕಾರದವರು ಪರಿಶೀಲಿಸಿ ಒಂದು ಒಪ್ಪಂದಕ್ಕೆ ಬರಬೇಕೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಬೊಂಬಾಯಿಯಲ್ಲಿ ಒಟ್ಟು ೬೪ ಗಿರಣಿಗಳಿದ್ದು ಅವುಗಳಲ್ಲಿ ೧೧ ಗಿರಣಿಗಳು ಮಾತ್ರ ಕೆಲಸಮಾಡುತ್ತವೆ ಉಳಿದ ಎಲ್ಲ ಗಿರಣಿಗಳೂ ನಿಂತುಹೋಗಿವೆ ಇದಕ್ಕೆ ಕೆಲಸಗಾರರ ಮುಷ್ಕರವೇ ಕಾರಣ!

ಪಾಕಿಸ್ಥಾನ ಭಾರತಗಳು ಮತ್ತೆ ಐಕ್ಯವಾಗಲಿ

ಕೋಮುವಾರು ಗಲಭೆಗಳನ್ನು ತಡೆಗಟ್ಟಲು ಪಾಕಿಸ್ಥಾನವು ಬ್ರಿಟಿಷ್ ಸರ್ಕಾರಕ್ಕೆ ಮೊರೆಯಿಟ್ಟಿರುವುದರಿಂದ ಭಾರತವನ್ನು ಛಿದ್ರಮಾಡಿದುದು ದೊಡ್ಡ ತಪ್ಪು ಎಂಬುದು ಅರ್ಥವಾಗುವುದು—ಎಂದು ಬಿಹಾರ್ ಸರ್ಕಾರದ ಪುನರ್ವಸತಿ ಸಚಿವರೂ ಅ|| ಭಾ|| ಮೋಮಿನ್ ಸಮ್ಮೇಳನದ ಅಧ್ಯಕ್ಷರೂ ಆದ ಮಿ|| ಅನ್ಸಾರಿಯವರು ತಿಳಿಸಿದ್ದಾರೆ ಹೊರಗಿನವರ ಸಹಾಯವನ್ನು ಅಪೇಕ್ಷಿಸುವುದರಲ್ಲಿ ಅರ್ಥವೇ ಇಲ್ಲವೆಂದೂ, ಈ ಸಮಸ್ಯೆಯು ಬಗೆಹರಿಯ ಬೇಕಾದರೆ ಪಾಕಿಸ್ಥಾನ ಮತ್ತು ಭಾರತಗಳು ಮತ್ತೆ ಒಂದಾಗಬೇಕೆಂದೂ ಅವರು ಅಭಿಪ್ರಾಯಪಟ್ಟಿರುವರು

ಪರ್ಷಿಯಾದಲ್ಲಿ ಭೂಕಂಪ

ಒಂದು ಹಳ್ಳಿ ನಾಶವಾಗಿದೆ

ಹಲವು ದಿನಗಳಿಂದ ಉಗ್ರಭೂಕಂಪವಾಗುತ್ತಿರುವುದರಿಂದ, ಪರ್ಷಿಯದ ಖೋರಸನ್ ಪ್ರಾಂತ್ಯದಲ್ಲಿ ಒಂದು ಹಳ್ಳಿ ಸಂಪೂರ್ಣವಾಗಿ ನಾಶವಾಗಿದೆ ೪೦೦ ಜನರು ಸತ್ತರು ಸುತ್ತ ಮುತ್ತಲ ಅನೇಕ ಹಳ್ಳಿಗಳಿಗೆ ಸಹ ನಷ್ಟ ಸಂಭವಿಸಿದೆ ಅನೇಕ ಜನರು ಮೈದಾನದಲ್ಲಿ ವಾಸಿಸಿರುವರು ಇನ್ನೂ ಭೂಮಿ ಅದುರುತ್ತಲೇ ಇದೆ

ಆಸ್ಟ್ರೇಲಿಯದಲ್ಲಿ ಅತ್ಯುತ್ತಮ ಗೋಧಿ ಬೆಳೆ

೫೦ ವರ್ಷಗಳಿಂದ ಕಾಣದೇ ಇದ್ದಂತಹ ಗೋಧಿ ಬೆಳೆ ಈ ಸಾರಿ ಆಸ್ಟ್ರೇಲಿಯದಲ್ಲಿ ಬರುವುದೆಂದು ವ್ಯವಸಾಯ ಸಚಿವರು ತಿಳಿಸುತ್ತಾರೆ ಜಗತ್ತಿನ ಅಭಾವ ಕ್ಷೇತ್ರಗಳಿಗೆ ಆಹಾರ ಕಳಿಸಲು ಸರ್ವಪ್ರಯತ್ನ ಮಾಡಲಾಗುವುದೆಂದು ಸೂಚಿಸಿದ್ದಾರೆ

ಭಾರತಕ್ಕೆ ಸೇರಿದ ಗ್ರಾಮಗಳ ಆಕ್ರಮಣ ಸುಳ್ಳು

ಭಾರತದ ಡೊಮಿನಿಯನ್ನಿಗೆ ಸೇರಿದ ಗುರುದಾಸಪುರ ಜಿಲ್ಲೆಯ ಸುಮಾರು ನೂರು ಗ್ರಾಮಗಳನ್ನು ಪಾಕಿಸ್ತಾನ್ ಮಿಲಿಟರಿ ಪಡೆಗಳೂ ಮತ್ತು ಪೋಲೀಸ್ ದಳಗಳೂ ವಶಪಡಿಸಿಕೊಂಡಿವೆಯೆಂದು ಹಬ್ಬಿರುವ ಸುದ್ದಿಯು ನಿರಾಧಾರವಾದುದೆಂದು ಭಾರತ ಸರ್ಕಾರದ ರಕ್ಷಣಖಾತೆಯ ಪ್ರಕಟನೆಯೊಂದು ತಿಳಿಸುತ್ತದೆ.

ಪಂಜಾಬಿನಲ್ಲಿ ಗಲಭೆಗಳು ಆರಂಭವಾದಾಗ ಹಿಂದೂಗಳೂ, ಸಿಕ್ಕರೂ ಈ ಗ್ರಾಮಗಳನ್ನು ಬಿಟ್ಟು ಹೊರಟು ಹೋದರೆಂದೂ, ಪರಿಸ್ಥಿತಿಯು ಸುಧಾರಿಸಿದ ಮೇಲೆ ಪುನಃ ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿದರೆಂದೂ ಆ ಪ್ರಕಟನೆಯು ತಿಳಿಸುತ್ತದೆ.

(೨ನೆಯ ಪುಟದಿಂದ ಮುಂದುವರಿದುದು)

ಸಮಾಧಿ ಮಾಡಿಬಿಟ್ಟೆನು ಈಗಲಾದರೂ ನಾನೆಸಗಿದ ಕೃತ್ಯಗಳು ನ್ಯಾಯವೋ? ಅನ್ಯಾಯವೋ? ನಿಷ್ಪಕ್ಷಪಾತದಿಂದ ತಿಳಿಯುವವನಾಗು"

ಈ ರೀತಿ ಆಡಿದ ಪರಮಾತ್ಮನ ಅಮೃತ ವಾಕ್ಯಗಳನ್ನಾಲಿಸಿ ಸನ್ಯಾಸಿಯು ನಾಚಿಕೆಯಿಂದಲೂ ಭಯಭಕ್ತಿಯಿಂದಲೂ ತಲೆಬಾಗಿ, ಹೇ! ಪರಶಿವಮೂರ್ತಿಯೇ ನಿನ್ನ ಪಾದಕಮಲದಲ್ಲಿ ಅಜ್ಞಾನದಿಂದ ನಾನೆಸಗಿದ ತಪ್ಪನ್ನು ಪುತ್ರವಾತ್ಸಲ್ಯದಿಂದ ಮನ್ನಿಸಿ ರಕ್ಷಿಸುವ ಕೃಪೆ ಮಾಡು ಸರ್ವವ್ಯಾಪಿಯೂ ಸರ್ವಜ್ಞನೂ ಜಗದ್ರಕ್ಷಕನೂ ಆದ ನಿನ್ನಲ್ಲಿ ಏನನ್ನೂ ಅರಿಯದ ನಮ್ಮಂತಹ ಪಾಮರರ ತಪ್ಪುನೆಪ್ಪುಗಳನ್ನು ಎಣಿಸಬಹುದೇ? ಭವತಾರಕನಾದ ದೇವಾಧಿದೇವನೇ ನಿನ್ನ ದಿವ್ಯಸಂದರ್ಶನದಿಂದ ನನ್ನ ಸಂಶಯಗಳೆಲ್ಲ ನಿವೃತ್ತಿಯಾದವು ಅರಣ್ಯವೆಲ್ಲ ವಂದಹಿಸುವ ಕಾಳ್ಗಿಚ್ಚಿನ ಓಷ್ಣ್ಯದಿಂದ ಬಾಡುತ್ತಿರುವ ಚಂಪಕವನವನ್ನು ಲೋಕ ಸಂತಾಪಶಾಮಕವಾದ ಜಲಧಾರೆ ಅಗ್ನಿಯಂ ಕೆಡಿಸಿ ಆನಂದಗೊಳಿಸುವ ಮೇಘದಂತೆ ಸಂಸಾರ ತಾಪತ್ರಯದಿಂದ ಸಂತಪ್ತನಾದ ನನ್ನನ್ನು ನಿನ್ನ ಕೃಪಾಕಟಾಕ್ಷಾಮೃತ ಧಾರಾಸೇಚನೆಯಿಂದ ನಿತ್ಯಸುಖಿಯನ್ನಾಗಿ ಮಾಡಿದೆ ಹೇ! ದೇವಾ, ಸಕಲ ಲೋಕನಾಯಕನಾದ ನೀನು ಪ್ರಾಣಿಗಳ ಮೇಲ್ಮೆಗಾಗಿಯೇ ಅಡಿಗಡಿಗೆ ಕಷ್ಟನಷ್ಟಗಳನ್ನುಂಟುಮಾಡಿ ಅವರ ಬುದ್ಧಿಯನ್ನು ತಿದ್ದಿ ಅವರಿಗೆ ಅರಿವನ್ನುಂಟುಮಾಡುತ್ತಿದ್ದೀಯೆ ಹೇ! ದಯಾನಿಧೇ, ದೀನೋದ್ಧರಣೈಕಶೀಲನಾದ ಸಾಂಬಮೂರ್ತಿಯೇ! ಸಮಸ್ತ ಜೀವಿಗಳು ಒಟ್ಟಾಗಿ ಆಕಾಶವನ್ನೇ ಕಾಗದವನ್ನಾಗಿಯೂ, ಸಪ್ತ ಸಮುದ್ರಗಳನ್ನೇ ಮಸಿಯನ್ನಾಗಿಯೂ, ಎಲ್ಲಾ ವೃಕ್ಷಗಳನ್ನೇ ಲೇಖನಿಗಳನ್ನಾಗಿಯೂ ಮಾಡಿಕೊಂಡು ಸೃಷ್ಟ್ಯಾದಿಯಿಂದ ನಿನ್ನ ಮಹಿಮಾತಿಶಯಗಳನ್ನು ಬರೆಯಲು ಕುಳಿತರೂ ನಿನ್ನ ಮಹಿಮೆಯ ಸಹಸ್ರಾಂಶದಲ್ಲಿ ಒಂದಂಶವಾದರೂ ತೀರದು ಹೀಗಿರುವಲ್ಲಿ ಅಣುವಿಗಿಂತಲೂ ಅಣುವಾಗಿಯೂ ಮಹತ್ತಿಗಿಂತಲೂ ಮಹತ್ತಾಗಿಯೂ, ಸರ್ವಶಕ್ತನಾಗಿಯೂ, ಸರ್ವವ್ಯಾಪಿಯಾಗಿಯೂ ಇರುವ ನಿನ್ನ ಅಪಾರ ಮಹಿಮೆಯನ್ನು ಬಣ್ಣಿಸಲು ನಾನೆಷ್ಟರವನು? ಎಂದು ಬಗೆ ಬಗೆಯಾಗಿ ಕೊಂಡಾಡಿ ಕ್ಷಮೆಯನ್ನು ಬೇಡಿದನು ಆಗ ಕರುಣಾಕರನಾದ ಪರಮಾತ್ಮನು ಕೋಲ್ಮಿಂಚಿನಂತೆ ಕಣ್ಮರೆಯಾದನು ಇತ್ತ ಬ್ರಹ್ಮಾನಂದನು ಪರಮಾತ್ಮನ ಮಹಿಮೆಗೆ ಆಶ್ಚರ್ಯಪಡುತ್ತಾ ಮನದಲ್ಲಂಕುರಿಸಿದ ಸಂಶಯವನ್ನು ಪರಿಹಾರ ಮಾಡಿಕೊಂಡು ತಪಸ್ಸಿನಿಂದ ಕಾಲಯಾಪನ ಮಾಡಿಕೊಂಡಿದ್ದು ಕೆಲವು ಕಾಲದಮೇಲೆ ನದಿಯ ನೀರು ಸಮುದ್ರದ ನೀರಿನಲ್ಲಿ ಸಮರಸವಾದಂತೆ ಪರಬ್ರಹ್ಮದಲ್ಲಿ ಐಕ್ಯನಾದನು

ವಾಚಕರೇ! ಈ ಸಂಸಾರದಲ್ಲ ಪ್ರತಿದಿನವೂ ಪ್ರತಿಕ್ಷಣವೂ ಜನರು ಸ್ವಾ ಕ್ಷೋಭೆಯನ್ನೂ ಕಷ್ಟವನ್ನೂ ದುಃಖವನ್ನೂ ವ್ಯಥೆಯನ್ನೂ ಅನುಭವಿಸುತ್ತಿರುವುದನ್ನು ನೋಡುತ್ತಿದ್ದೇವೆ ಎಷ್ಟೋ ವಿಷಯಗಳಲ್ಲಿ ಶುಭಕ್ಕಿಂತಲೂ ಅಶುಭವೇ ಅಧಿಕವಾಗಿರುವಂತೆಯೇ ತೋರುತ್ತಿರುವದು ಹೀಗಿರುವಲ್ಲಿ ದುಃಖಮಯವಾದ ಸಂಸಾರವನ್ನು ಪ್ರಾಣಿಗಳ ಹಿತಕ್ಕಾಗಿಯೇ ಪರಮಾತ್ಮನು ಕಲ್ಪಿಸಿದ್ದು ಎಂಬುದು ಅನುಚಿತವಾಗಿ ಕಂಡರೂ ವಾಸ್ತವ ಸ್ಥಿತಿಯಲ್ಲೇನೋ ಅದು ಹಿತಕರವೇ ಎಂದು ಹೇಳಬಹುದು ಈ ಬಾಹ್ಯ ಪ್ರಪಂಚದಲ್ಲಿ ಕ್ಷೋಭೆಯಂತೆ ಎದ್ದಿರುವ ಧೂಳಿಪಟಲವನ್ನು ತಪ್ಪಿಸಿಕೊಂಡು ಮೇಲಕ್ಕೆ ಹೋಗಿ ಶಾಂತಿ ಪದವಿಯನ್ನು ಹೊಂದಿ ಆ ಉನ್ನತ ಸ್ಥಾನದಿಂದ ಬಾಹ್ಯ ಪ್ರಪಂಚವನ್ನು ನೋಡಿದರೆ ಆಗ ಅದು ವಾಸ್ತವಾಂಶವೆಂಬುದು ನಮಗೆ ಮನದಟ್ಟಾಗುವದಲ್ಲದೆ 'ಮಂಗಲವ ಯನಾದ ಪರಶಿವನು ಮಾಡುವದೆಲ್ಲವೂ ಜೀವರ ಹಿತಕ್ಕಾಗಿಯೇ ಎಂಬುದು ನಿದರ್ಶನಕ್ಕೆ ಬರುವುದು

ಸಿದ್ಧಾಂತಶಿಖಾಮಣಿ

——

ವೀರಶೈವಮತದಲ್ಲಿ ಜನ್ಮಧಾರಣೆಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿಶಿವಾಚಾರ್ಯ**ರೆಂಬ **ಆಚಾರ್ಯರಿಂದ** ರಚಿಸಲ್ಪಟ್ಟಿರವದು ಈ ಮಹಾಗ್ರಂಥವು **ವೀರಶೈವಮತಕ್ಕೆ** ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ **ಅನೇಕರು** ಅನೇಕ ವಿಧವಾದ ವ್ಯಾಖ್ಯಾನಗಳನ್ನು **ಬರೆದಿರುತ್ತಾರೆ ಆದರೆ** ಒಂದು ವ್ಯಾಖ್ಯಾನದಲ್ಲಿಯಾದರೂ **ಗೂಢಾರ್ಥಗರ್ಭಿತವಾದ** ಶ್ಲೋಕಗಳಿಗೆ ಸರಿಯಾದ ಅರ್ಥವು ಬಾಯಲ್ಪಟ್ಟಿಲ್ಲ **ಈ ಕೊರತೆ**ಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ **ಈ ಗ್ರಂಥಕ್ಕೆ ಕನ್ನಡ** ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ **ಈ ಗ್ರಂಥವನ್ನು** ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ **ಮಹತ್ವವು ವಾಚ**ಕರಿಗೆ ವೇದ್ಯವಾಗುವುದು. ವಾಚಕರ **ಅನುಕೂಲಕ್ಕಾಗಿ** ಬಹುಶ್ರಮವಹಿಸಿ ಸಿದ್ಧಪಡಿಸಿದ **ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟವೆ ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನು**ಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ **ಲೀಲಾತ್ಮಕವಾದ** ಮನೋಹರಭಾವಚಿತ್ರಗಳು **ಜೋಡಿಸಲ್ಪಟ್ಟಿರುವುದರಿಂದ** ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ **ಕೈವಲ್ಯಕಲ್ಪತರುವಿನಂತಿ**ರುವ **ಈ** ಅಮೂಲ್ಯಗ್ರಂಥವನ್ನು **ವೀರಶೈವರೆಲ್ಲರೂ ಅವಶ್ಯವಾಗಿ** ಓದಬೇಕು

ಬೆಲೆ ೨ ರೂಪಾಯಿ.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಸೂತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ) ..	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ) ..	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ...	೨ ಆಣೆ
ಶಿವಶಕ್ತಿವಿಲಾಸ ..	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣಾವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಸೂತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) ...	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೬೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ..	**8 As**
Speeches by Pandit Shri Kashinatha Shastriji (*English*)	**12 As**
लिङ्गधारणचन्द्रिका (संस्कृत) ..	३ रु.
[illegible] (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
[illegible]कारिका (संस्कृत)	२ आ.

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸಾದಂ ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೮ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೯ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಅಕ್ಟೋಬರ್ ೧೯೪೭ | ಸಂಚಿಕೆ ೨೫

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ।

ಅಧಿಕಾರಬಲದಿಂದ ಧರ್ಮವಿರುದ್ಧವಾಗಿ ವರ್ತಿಸಬಾರದು

ಲೇ। ಶ್ರೀಪಟ್ಟದಸ್ವಾಮಿಗಳು ಹಿರೇವಡ್ಡಟ್ಟಿ

"ಧರ್ಮೇಣಗಮನಂತೂರ್ಧ್ವಂ' ಎಂಬ ಶಾಸ್ತ್ರೋಕ್ತಿಯಂತೆ ಧರ್ಮವು ಮಿತ್ರನಂತೆ ಉನ್ನತಸ್ಥಾನಕ್ಕೆ ಕರೆದುಕೊಂಡು ಹೋಗುವದು ಅಧರ್ಮವು ಶತ್ರುವಿನಂತೆ ಅಧೋಗತಿಗೆಳೆದುಕೊಂಡು ಹೋಗುವದು ಲೋಕದಲ್ಲಿ ಮಾನವಜನ್ಮವನ್ನು ತಾಳಿದ ಪ್ರತಿಯೊಬ್ಬನಿಗೂ ಧರ್ಮವು ಬೇಕು ನವಖಂಡಪೃಥ್ವಿಯಲ್ಲಿರತಕ್ಕ ಪ್ರತಿಯೊಬ್ಬ ಮಾನವನನ್ನು ವಿಚಾರಮಾಡಿದರೂ, ನಾನು ಇಂಥ ಧರ್ಮದವನೆಂದು ಹೇಳುವನೇ ಹೊರತು ನಾನು ಯಾವ ಧರ್ಮಕ್ಕೂ ಸಂಬಂಧಿಸಿದವನಲ್ಲವೆಂದು ಹೇಳತಕ್ಕವನು ಒಬ್ಬನಮೇಲೆ ಪ್ರಪಂಚದಲ್ಲಿ ಧರ್ಮವಿಲ್ಲದ ಮನುಷ್ಯನೇ ಕಂಡುಬರುವದಿಲ್ಲ. ಆತ್ಮನು ಈ ದೇಹವನ್ನು ಬಿಟ್ಟುಹೋಗುವ ಸಮಯದಲ್ಲಿ ಯಾರೂ ನಿಲ್ಲಿಸಲಾರರು ಅಲ್ಲದೆ ಅದರ ಜೊತೆಗೆ ಯಾರೂ ಹೋಗಲಾರರು ಧರ್ಮ ಹಾಗೂ ಅಧರ್ಮ ಇವೆರಡು ಮಾತ್ರ ಹಿಂಬಾಲಿಸುವವು

ಸುಕೃತಂ ದುಷ್ಕೃತಂ ಚೈವ ಗಚ್ಛಂತಮನುಗಚ್ಛತಿ

ಎಂಬ ಶಾಸ್ತ್ರೋಕ್ತಿಯು ಮೇಲಿನ ಅಭಿಪ್ರಾಯವನ್ನೇ ಸೂಚಿಸುತ್ತದೆ ಧರ್ಮದಲ್ಲಿ ಇಷ್ಟೊಂದು ಶಕ್ತಿ ಮತ್ತು ಮಹತ್ವ ಅದೆಯೆಂದೇ ಇಂದಿನವರೆಗೂ, ಪ್ರತಿಯೊಂದು ಧರ್ಮದಲ್ಲಿರತಕ್ಕ ಲಕ್ಷಾಂತರ ಜನರು ತಮ್ಮ ತಮ್ಮ ಧರ್ಮದಂತೆ ನಡೆದುಕೊಳ್ಳುತ್ತಾರೆ ಧರ್ಮದಲ್ಲಿ ಇಷ್ಟೊಂದು ಶಕ್ತಿ ಮತ್ತು ಮಹತ್ತ್ವಯಿಲ್ಲದಿದ್ದರೆ ಯಾರೂ ನಡೆದುಕೊಳ್ಳುತ್ತಿದ್ದಿಲ್ಲ ಇಂಥ ಶ್ರೇಷ್ಠವಾದ ಸನಾತನಧರ್ಮದಲ್ಲಿ ಕೈಹಾಕಿ ಜಾತಿಸಾಂಕರ್ಯ, ವಿಧವಾವಿವಾಹ, ಪ್ರೌಢಾವಿವಾಹ ಮುಂತಾದ ಅಧರ್ಮಕೃತಿಗಳನ್ನು ಯಾರು ಮಾಡುವರೋ ಅಂಥವರನ್ನು ಧರ್ಮವು ನಾಶಮಾಡುತ್ತದೆ. ಯಾರು ಈ ಸನಾತನಧರ್ಮವನ್ನು ರಕ್ಷಿಸುವರೋ ಅಂಥವರನ್ನು ಧರ್ಮವೇ ರಕ್ಷಿಸುತ್ತದೆ

"ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ"

ಎಂಬೀವಾಕ್ಯವು ಮೇಲಿನ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನಸುಖಂ ನಪರಾಂ ಗತಿಂ ॥

ಅಂದರೆ–ಯಾವನು ಶಾಸ್ತ್ರನಿಯಮವನ್ನು ಅತಿಕ್ರಮಿಸಿ ತನ್ನ ಇಚ್ಛಾನುಸಾರವಾಗಿ ವರ್ತಿಸುವನೋ, ಅಂಥವನು ಯಾವ ಸಿದ್ಧಿಯನ್ನೂ ಯಾವ ಸುಖವನ್ನೂ ಯಾವ ಸದ್ಗತಿಯನ್ನೂ ಹೊಂದಲಾರನೆಂದು ಗೀತಾಕಾರರು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಾಚೀನಕಾಲದಿಂದ ಬಂದ ಶ್ರೇಷ್ಠವಾದ ಸನಾತನಧರ್ಮದಲ್ಲಿ ಕೈಹಾಕಿ ಧರ್ಮವಿರುದ್ಧವಾದ ಕಾಯಿದೆಗಳನ್ನು ಪಾಸುಮಾಡಿ, ಸನಾತನಧರ್ಮಾವಲಂಬಿಗಳಿಗೆ ಅತ್ಯಂತ ವ್ಯಥೆಯನ್ನುಂಟುಮಾಡಿದ್ದಾದರೆ ಅಂಥವರಿಗೆ ಜಯವಾಗಲಿ, ಸಿದ್ಧಿಯಾಗಲಿ, ಸುಖವಾಗಲಿ ದೊರೆಯಬಾರದೆಂದು ನಿಸ್ಸಂಶಯವಾಗಿ ಹೇಳಬಹುದು ಮನುಷ್ಯನ ನಾಶಕ್ಕಾಗಿಯೇ ಅಧರ್ಮ ಅನೀತಿ ಮುಂತಾದವುಗಳು ಉದಯವಾಗುತ್ತವೆ ವಿನಾಶಕಾಲೇ ವಿಪರೀತಬುದ್ಧಿ ಎಂಬ ವಾಕ್ಯವು ಅಷ್ಟರ ನಿಜವಿರುತ್ತದೆ ಅಯ್ಯಾ ಅಧಿಕಾರಿಗಳೇ, ನಿಮ್ಮ ಅಧಿಕಾರವು ಸ್ಥಿರವಾದುದಲ್ಲ ಕಾನೂನಿಗನುಸಾರವಾಗಿ ಕೆಲವು ವರ್ಷಗಳವರೆಗೆ ಮಾತ್ರ ಆ ಅಧಿಕಾರದಲ್ಲಿರ ಇರಿ ಆಮೇಲೆ ನಿವೃತ್ತರಾಗುವಿರಿ

ಹುಟ್ಟೇವು ಇ ೭ಪಸಕ ಪುಪ್ರಸಂತಿರುವನು ।
ಹುಟ್ಟೇವು ತೀರ್ವ ಮರುದಿನವೆ ಹಾಳೂರ ।
ಹಟ್ಟಿನಂತಕ್ಕು ಸರ್ವಜ್ಞ

ಈ ಪ್ರಕಾರ ಸರ್ವಜ್ಞಕವಿಯು ಹೇಳಿದ ಮಾತು ಯೋಗ್ಯವೇ ಅದ ಗುರು ಹಾಗೂ ದೇವರುಗಳಿಗೆ ಅತ್ಯಂತ ಭಕ್ತಿಯಿಂದ, ರಾಜಾಧಿರಾಜರು ಕೊಟ್ಟ ಆಸ್ತಿಪಾಸ್ತಿಗಳನ್ನು ಎತ್ತಿಹಾಕುವದು ಮಹಾಪಾಪದಾಯಕವು

ದೇವದ್ರವ್ಯಂ ಗುರುದ್ರವ್ಯಂ ಜಂಗಮದ್ರವ್ಯಮೇವ ಚ ।
ಯೇ ಹರಂತಿ ಮಹಾಪಾಪಾತ್ತೇಷಾಂ ವಂಶಕ್ಷಯೋ ಭವೇತ್

ಯಾರು ದೇವರ ದ್ರವ್ಯವನ್ನೂ ಗುರುಗಳ ದ್ರವ್ಯವನ್ನೂ ಜಂಗಮರ ದ್ರವ್ಯವನ್ನೂ ಅಪಹರಿಸುವರೋ ಅವರ ವಂಶವು ನಾಶವಾಗುವದೆಂದು ಶಾಸ್ತ್ರವು ಘಂಟಾಘೋಷವಾಗಿ ಸಾರುತ್ತಿರುವದು

ದೇವರಿಲ್ಲನೆಂದು ತಿಳಿದವರೂ, ಉಂಟೆಂದು ತಿಳಿದರೂ ಅಲಕ್ಷ್ಯಮಾಡುವವರೂ ಎಷ್ಟೋ ದುಷ್ಕಾರ್ಯಗಳನ್ನು ಮಾಡಿ ಸುಖವನ್ನನುಭವಿಸುವರಲ್ಲಾ ಎಂದರೆ–ದುಷ್ಕಾರ್ಯದಿಂದ ಪರಿಣಾಮದಲ್ಲಿ ಅವರಿಗೆ ದುಃಖವೇ ಎಂದು ತಿಳಿಯಬೇಕು ಈ ವಿಷಯದಲ್ಲಿ ಒಂದು ಇತಿಹಾಸವುಂಟು ಅದನ್ನು ವಾಚಕರ ಅವಗಾಹನೆಗಾಗಿ ಕೆಳಗೆ ಕೊಡುತ್ತೇವೆ

ಇಬ್ಬರು ಸ್ನೇಹಿತರು ಅರಣ್ಯದಲ್ಲಿ ಸಂಚಾರಮಾಡುತ್ತಿದ್ದು ಸೂರ್ಯಾಸ್ತಮಯವಾದನಂತರ ಅದೇ ಅರಣ್ಯದಲ್ಲಿದ್ದ ಒಂದಾನೊಂದು ಜೀರ್ಣದೇವಾಲಯದಲ್ಲಿ ಉಳಿದುಕೊಂಡರು ಮಧ್ಯರಾತ್ರಿಯಲ್ಲಿ ಒಬ್ಬ ಸ್ನೇಹಿತನು ಮೂತ್ರವಿಸರ್ಜನೆಗಾಗಿ ತನ್ನ ಸ್ನೇಹಿತನನ್ನೆಚ್ಚರಗೊಳಿಸಿದನು ಅವಳ್ಳವನು ಇಲ್ಲಿಯೇ ಮೂತ್ರವಿಸರ್ಜನವನ್ನು ಮಾಡೆಂದು ಬಹು ವಿಧವಾಗಿ ಹೇಳಿದಾಗ್ಯೂ ಇದು ದೇವಾಲಯ, ಇಲ್ಲಿ ಮೂತ್ರವಿಸರ್ಜನೆ ಮಾಡಕೂಡದೆಂದು ಹೇಳಿ, ತಾನೊಬ್ಬನೇ ದೇವಸ್ಥಾನದ ಹೊರಗೆ ಹೋಗಿ ಮೂತ್ರವಿಸರ್ಜನೆ ಮಾಡಿ ತಿರುಗಿ ಬರುವ ಸಮಯದಲ್ಲಿ ಒಂದು ಮಹತ್ತರವಾದ ಮುಳ್ಳು ಕಾಲಿಗೆ ಚುಚ್ಚಲು ಅತ್ಯಂತ ವ್ಯಥೆಗೆ ಗುರಿಯಾಗಿ, ದೇವಸ್ಥಾನದಲ್ಲಿದ್ದ ಸ್ನೇಹಿತನಿಗೆ ಅದನ್ನು ಹೇಳಿದನು ಅವಳ್ಳವನು ನಾನು ಎಷ್ಟೋ ವಿಧವಾಗಿ ಹೇಳಿದರೂ ನನ್ನ ಮಾತನ್ನು ನಿರಾಕರಿಸಿ ಹೊರಗೆ ಹೋಗಿ ಕಷ್ಟಕ್ಕೆ ಗುರಿಯಾದೆ, ನಾನು ದೇವಸ್ಥಾನದಲ್ಲಿಯೇ ಮೂತ್ರವಿಸರ್ಜನೆಯನ್ನು ಮಾಡುತ್ತ ಸ್ವಲ್ಪ ನೆಲವನ್ನು ಅಗೆಯಲು ದ್ರವ್ಯಸಿಕ್ಕಿತು. ಎಂದು ತೋರಿಸಿ, ಆತನನ್ನು ಬಹಳವಾಗಿ ಹಾಸ್ಯಮಾಡುವುದಕ್ಕೆ ಪ್ರಾರಂಭಿಸಿದನು ಇದನ್ನು ಪಾರ್ವತೀ ಪರಮೇಶ್ವರರು ಅಂತರಿಕ್ಷದಲ್ಲಿ ನೋಡಿ, ಪಾರ್ವತೀದೇವಿಯು ಪರಮೇಶ್ವರನನ್ನು ಕುರಿತು, ಪ್ರಶ್ನೆಮಾಡಿದಳು ಏನೆಂದರೆ— ಇದೇನನ್ಯಾಯ ? ಆತನ ದೇವಸ್ಥಾನವೆಂದು ಭಕ್ತಿಯಿಂದ ಹೊರಗೆ ಮೂತ್ರವಿಸರ್ಜನೆಮಾಡುವುದಕ್ಕೆ ಹೋದವನು ಅತ್ಯಂತ ಕಷ್ಟಕ್ಕೆ ಗುರಿಯಾದನು ದೇವಸ್ಥಾನದಲ್ಲಿಯೇ ಮೂತ್ರವಿಸರ್ಜನೆಮಾಡಿದವನು ಅಲ್ಲಿ ದ್ರವ್ಯಲಾಭವಾದುದರಿಂದ ಬಹು ಸಂತುಷ್ಟನಾಗಿ ಆತನನ್ನು ಹಾಸ್ಯಮಾಡುತ್ತಿರುವನಲ್ಲಾ ' ಎಂದು ಪ್ರಶ್ನೆಮಾಡಿದುದಕ್ಕೆ ಈಶ್ವರನು— ಹಾಗಲ್ಲ ಆ ಕಷ್ಟಕ್ಕೆ ಗುರಿಯಾದವನಿಗೆ ಈ ದಿವಸ ಮೃತ್ಯುವು ಪ್ರಾಪ್ತವಾಗಬೇಕಾಗಿತ್ತು ಅದು ತಪ್ಪಿ ಸ್ವಲ್ಪ ಕಷ್ಟದಲ್ಲಿಯೇ ಪರಿಹಾರವಾಯಿತು ಅಧರ್ಮದಿಂದ ನಡೆದವನಿಗೆ ರಾಜ್ಯಾಧಿಕಾರವಾಗಬೇಕಾಗಿತ್ತು ಆದು ತಪ್ಪಿ ಸ್ವಲ್ಪ ದ್ರವ್ಯಪ್ರಾಪ್ತಿಯಲ್ಲಿಯೇ ಪೂರ್ತಿಯಾಯಿತು " ಎಂದು ಪರಮೇಶ್ವರನು ಹೇಳಿದನು

ದೇವರಿಲ್ಲದ ಗುಡಿಯೂ, ಗುರುವಿಲ್ಲದ ಮಠವೂ, ಹೇಗೆ ನಿರರ್ಥಕವೋ, ಹಾಗೆಯೇ ಧರ್ಮರಹಿತವಾದ ರಾಜ್ಯವು ನಿರರ್ಥಕವು ' ನ್ಯಾಯಮಾರ್ಗದಿಂದ ಜನರಿಗೂ ರಾಜರಿಗೂ ಸಂತೋಷವಾಗುವಂತೆ ರಾಜ್ಯಕಾರಭಾರವನ್ನು ಸಾಗಿಸುವದು ಅತಿ ಕಠಿಣಕೆಲಸವಾಗಿದೆ " ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ " ಎಂಬ ಉಕ್ತಿಯಾದರೂ ಇದೇ ಮಾತನ್ನು ಹೇಳುತ್ತದೆ. ಈ ತತ್ತ್ವವನ್ನು ಪ್ರತಿಯೊಬ್ಬರೂ ತಿಳಿದು ಸನಾತನಧರ್ಮವಿರೋಧಿಗಳೂ ರಾಜಧರ್ಮವಿರೋಧಿಗಳೂ ಆದವರ ನೆರಳಿಗೆ ಸಹ ಹೋಗದೆ, ತಮ್ಮ ಧರ್ಮದಂತೆಯೂ ರಾಜಧರ್ಮದಂತೆಯೂ ನಡೆದು ಸರ್ವಜನಪ್ರಿಯರಾಗಿ ಇಹಪರಸುಖಭಾಗಿಗಳಾಗಬೇಕೆಂದಾಶಿಸುತ್ತೇವೆ

ಮೈಸೂರು ರೈಲ್ವೆ ಕೆಲಸಗಾರರ ಮುಷ್ಕರವು ನಿಂತಿತು

ಈಗ್ಗೆ ಒಂದು ತಿಂಗಳಿಂದ ಮೈಸೂರು ರೈಲ್ವೇ ಕೆಲಸಗಾರರು ನಡೆಸುತ್ತಿದ್ದ ಮುಷ್ಕರವು ಇದೇತಿಂಗಳು ಆನೆಯ ತಾರೀಖಿನ ದಿವಸ ಮುಕ್ತಾಯವಾಯಿತು ಸರ್ಕಾರದವರಿಗೂ ಕೆಲಸಗಾರರಿಗೂ ತೃಪ್ತಿಕರವಾದ ಒಪ್ಪಂದವಾಗಿರುವುದು. ಮೈಸೂರು ದೇಶದ ಎಲ್ಲಾ ಸೆಕ್ಷನ್‌ಗಳಲ್ಲಿಯೂ ಈಗ ರೈಲ್ವೇ ಗಾಡಿಗಳು ಸಂಚರಿಸಲು ಪ್ರಾರಂಭಿಸಿವೆ

ಕಳ್ಳರ ಫೋಟೋ ತೆಗೆಯುವ ಯಂತ್ರ

ಅಮೆರಿಕಾ ರಾಜಧಾನಿ ನ್ಯೂಯಾರ್ಕ್ ನಗರದಲ್ಲಿ ಒಬ್ಬ ವೈಜ್ಞಾನಿಕನು ಒಂದು ಯಂತ್ರವನ್ನು ನಿರ್ಮಿಸಿರುವನು. ಆ ಯಂತ್ರವನ್ನು ಮನೆಯಲ್ಲಿ ಇಟ್ಟರೆ ಕಳ್ಳರ ಫೋಟೋ ತೆಗೆಯುವುದಂತೆ!

ಪಂಚಾಚಾರ್ಯಪ್ರಭಾ.

೧೯೪೭ನೆಯ ಅಕ್ಟೋಬರ್ ತಾ|| ೧೩ನೇ ಸೋಮವಾರ

ಕಾಂಗ್ರೆಸ್ಸು ತನ್ನ ದೃಷ್ಟಿಯನ್ನು ಪಂಜಾಬಿನ ಕಡೆ ತಿರುಗಿಸಲಿ

ಮೈಸೂರು ಕಾಂಗ್ರೆಸ್ಸಿನವರು ಕಳೆದ ಸೆಪ್ಟೆಂಬರ್ ೧ನೆಯ ತಾರೀಖಿನಿಂದ ಮೈಸೂರು ದೇಶದಲ್ಲಿ ಚಳವಳಿಯನ್ನು ಹೂಡಿದ ವಿಷಯವು ಎಲ್ಲರಿಗೂ ತಿಳಿದೇ ಇದೆ ಕಾಂಗ್ರೆಸ್ಸಿನವರು ಚಳವಳಿಯನ್ನು ಪ್ರಾರಂಭಿಸಿದ ಕಾಲಕ್ಕೆ ಭಾರತದ ಸ್ಥಿತಿಯು ಭಯಂಕರವಾಗಿದ್ದಿಲ್ಲ ಎಲ್ಲರೂ ಸ್ವಾತಂತ್ರ್ಯವು ಲಭಿಸಿತೆಂಬ ಸಂತೋಷದಲ್ಲಿಯೇ ಲೀನರಾಗಿ ಹೋಗಿದ್ದರು ಇದೇ ಸಮಯದಲ್ಲಿಯೇ ಕಾಂಗ್ರೆಸ್ಸಿನವರು ಜವಾಬ್ದಾರಿ ಸರಕಾರದ ಚಳವಳಿಯನ್ನಾರಂಭಿಸಿದರು ಇವರು ಚಳವಳಿಯನ್ನಾರಂಭಿಸಿದ ಸ್ವಲ್ಪ ದಿನಗಳಲ್ಲಿಯೇ ಪಂಜಾಬಿನಲ್ಲಿಯೂ ದಹಲಿಯಲ್ಲಿಯೂ ಘೋರವಾದ ಹತ್ಯಾಕಾಂಡವು ನೆರವೇರಿ ಲಕ್ಷಾಂತರ ಜನರು ಮಡಿದರ ದಹಲಿಯಲ್ಲಿ ಮಾತ್ರ ಈಗ ಶಾಂತವಾಗಿದ್ದರೂ ಪಶ್ಚಿಮ ಪಂಜಾಬಿನಲ್ಲಿ ಹತ್ಯಾಕಾಂಡವು ಇನ್ನೂ ನಡೆಯುತ್ತಲೇ ಇದೆ

ಪಶ್ಚಿಮಪಂಜಾಬಿನಲ್ಲಿ ಮುಸಲ್ಮಾನರ ಜನಸಂಖ್ಯೆಯು ಬಹಳ ಹೆಚ್ಚಾಗಿರುವುದು ಹಿಂದೂ ಮತ್ತು ಸಿಕ್ಕರ ಜನಸಂಖ್ಯೆಯು ಕಡಮೆಯಾಗಿರುವುದು ಪಶ್ಚಿಮಪಂಜಾಬ್ ಪ್ರಾಂತವು ಪಾಕಿಸ್ಥಾನಕ್ಕೆ ಸೇರಿದಮೇಲೆ ಅಲ್ಲಿಯ ಮುಸಲ್ಮಾನರು ಹಿಂದು ಮತ್ತು ಸಿಕ್ಕರ ಮೇಲೆ ಬಿದ್ದು ಅಸಂಖ್ಯಜನರನ್ನು ಕೊಂದುದಲ್ಲದೆ ಅವರ ಆಸ್ತಿಪಾಸ್ತಿಗಳನ್ನೆಲ್ಲಾ ದೋಚಿಕೊಂಡಿರುವರು ಮುಸಲ್ಮಾನರು ನಡೆಸುತ್ತಿರುವ ಈ ಕ್ರೂರಕೃತ್ಯಗಳನ್ನು ಸಹಿಸಲಾರದೆ ಈವರೆಗೆ ಭಾರತಕ್ಕೆ ಸುಮಾರು ೨೫ ೩೦ ಲಕ್ಷದವರೆಗೆ ನಿರಾಶ್ರಿತರು ಬಂದಿದ್ದಾರೆ ಅವರ ಸ್ಥಿತಿಯು ಬಹಳ ಚಿಂತಾಜನಕವಾಗಿದೆ ಅದನ್ನು ನನೆಸಿಕೊಂಡರೆ ಕಟುಕನ ಹೃದಯವೂ ಸಹ ತಲ್ಲಣಿಸುವಂತಿದೆ ವುದು

ಈಗ ಪಶ್ಚಿಮ ಪಂಜಾಬಿನಿಂದ ಭಾರತಕ್ಕೆ ಸುಮಾರು ೪ ಲಕ್ಷ ಜನರು ಪ್ರಯಾಣ ಬೆಳೆಸಿದ್ದಾರೆ ನಿರಾಶ್ರಿತರ ಈ ಪ್ರಯಾಣವು ಒಂದೇ ಸಮನೆ ೫೦ ಮೈಲಿಗಳವರೆಗೆ ದೂರ ಹಬ್ಬಿರುವುದಂತೆ! ಇಂತಹ ದೃಶ್ಯವು ಪ್ರಪಂಚದ ಇತಿಹಾಸದಲ್ಲಿಯೇ ನಡೆದಿಲ್ಲವೆಂದು ಹೇಳಲಾಗಿದೆ ಈ ನಿರಾಶ್ರಿತರ ಚಲನವಲನವು ಅತ್ಯಂತ ಕರುಣಾಜನಕವಾಗಿದೆ ಈ ಸಮೂಹದಲ್ಲಿ ಸ್ವಲ್ಪಜನರು ಮಾತ್ರ ಈಗ ಭಾರತದ ಗಡಿಗೆ ಬಂದು ತಲಪಿದ್ದಾರೆ ಮಿಕ್ಕವರು ವರ್ಣಿಸಲಸಾಧ್ಯವಾದ ಕಷ್ಟಪರಂಪರೆಯನ್ನು ಸಹಿಸಿಕೊಂಡು ತಮ್ಮ ಜೀವವನ್ನುಳಿಸಿಕೊಳ್ಳುವುದಕ್ಕೋಸ್ಕರ ಭಾರತಕ್ಕೆ ಬರುತ್ತಿದ್ದಾರೆ

ಅಶಕ್ತರಾದ ಮಹಿಳೆಯರನ್ನೂ ಮಕ್ಕಳನ್ನೂ ಎತ್ತಿನ ಬಂಡಿಗಳಲ್ಲಿ ಒಯ್ಯಲಾಗುತ್ತಿದೆ ಸಾಲಾಗಿ ಹೋಗುತ್ತಿರುವ ಎತ್ತಿನ ಬಂಡಿಗಳ ಎರಡು ಪಕ್ಕಗಳಲ್ಲಿಯೂ ಸಹ ವೃಥಕಾಯರಾದ ಪುರುಷರು ಕಾಲುನಡಿಗೆಯಲ್ಲೇ ಪ್ರಯಾಣ ಬೆಳೆಸುತ್ತಿದ್ದಾರೆ ನೂರಾರು ಮೈಲಿಗಳ ಪ್ರಯಾಣದ ಬಳಲಿಕೆ ಅವರುಗಳ ಮುಖದಲ್ಲಿ ಕಂಡು ಬರುತ್ತಿದೆ ತಲೆಯ ಮೇಲೆ ಕೂಶವುಳ್ಳ ವಸ್ತುಗಳನ್ನು ಹೊತ್ತುಕೊಂಡು ಈ ಸಮೂಹವು ಮುಂದೆ ಸಾಗುತ್ತಿದೆ

ನಿರಾಶ್ರಿತರು ಯಾವಾಗ ಹೇಗೆ ಹಸಿವನ್ನು ನಿವಾರಿಸಿಕೊಳ್ಳುವರೋ ಹೇಳಲು ಸಾಧ್ಯವಿಲ್ಲ ಕೆಲವೆಡೆಗಳಲ್ಲಿ ಕುಡಿಯಲು ನೀರು ಸಹ ದೊರೆಯದಾಗಿದೆ ಈ ಕಷ್ಟಗಳ ಜೊತೆಗೆ ಪ್ರತಿಕ್ಷಣವೂ ಮುಸ್ಲಿಂ ಧೂರ್ತರಿಗೆ ಎಲ್ಲಿ ಆಹುತಿಯಾಗುವೆವೋ ಎಂಬ ಭಯದಿಂದ ನಡುಗುವ ದುಃಸ್ಥಿತಿ ಬೇರೆ!

ಇವರುಗಳ ರಕ್ಷಣೆಗಾಗಿ ಈವರೆಗೆ ಯಾವ ಸಹಾಯವೂ ಕಂಡುಬರಲಿಲ್ಲ ಈಗ ಸ್ವಲ್ಪ ಜನ ಮಿಲಿಟರಿಯವರನ್ನು ಭಾರತಸರಕಾರದವರು ಕಳಿಸಿರುವರೆಂದು ತಿಳಿದುಬರುತ್ತದೆ ಬಲೋಕಿ ನದಿಯ ಸೇತುವೆಯೇ ಪಶ್ಚಿಮಪಂಜಾಬಿನ ಗಡಿಯಾಗಿದೆ ಈ ಸೇತುವೆಯು ಅಷ್ಟೇನೂ ದೊಡ್ಡದಲ್ಲ ಇಷ್ಟು ಅಪಾರ ಜನಸಂಖ್ಯೆಯು ಈ ಸೇತುವೆಯನ್ನು ದಾಟಲು ಬಹುಕಾಲಹಿಡಿಯುವುದೆಂದು ಆ ಕರುಣಾಜನಕ ದೃಶ್ಯವನ್ನು ಕಂಡವರು ತಿಳಿಸಿದ್ದಾರೆ ಈ ಸೇತುವೆಯನ್ನು ದಾಟಿದರೆ ಮೃತ್ಯುವಿನ ಬಾಯಿಂದ ಪಾರಾದಂತೆ ಎಂಬುದಾಗಿ ಪತ್ರಿಕಾ ಪ್ರತಿನಿಧಿಗಳಿಗೆ ಪೂರ್ವಪಂಜಾಬು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರಲ್ಲದೆ, " ನಗವಘೆಯನ್ನು ಕಾರಣದವರು ಸಹಿತ ಈ ನಿರಾಶ್ರಿತರ ತಂಡವನ್ನು ನೋಡಿ ಪಂಜಾಬಿನ ಹೃದಯಭೇದಕ ಪರಿಸ್ಥಿತಿಯ ವಿಚಾರದಲ್ಲಿ ಭಯ ಗೊಂಡಿದ್ದಾರೆ —ಎಂಬುದಾಗಿ ಕಣ್ಣೀರಿಡುತ್ತ ಹೇಳಿದ್ದಾರೆ

ಈ ಮೇಲ್ಕಂಡ ವಿಷಯವನ್ನು ಓದಿನೋಡಿದರೆ ಪ್ರತಿಯೊಬ್ಬ ಸತ್ಪುರುಷನಿಗೂ, ಕಣ್ಣೀರು ಬಾರದೆ ಇರದು ಈ ರೀತಿ ತಮ್ಮ ಪ್ರಾಣರಕ್ಷಣೆಗಾಗಿ ಕೋಟ್ಯಂತರ ರೂಪಾಯಿ ಬಲೆಬಾಳುವ ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ಬಿಟ್ಟು ದಿಕ್ಕು ತೋಚದ ಭಾರತಕ್ಕೆ ಬರುತ್ತಿರುವ ನಿರಾಶ್ರಿತರ ಬಗ್ಗೆ ಸರ್ವರೂ ದಯೆತೋರಿಸಬೇಕಾಗಿದೆ

ಈಗ ಕಾಂಗ್ರೆಸ್ ನಾಯಕರೆಲ್ಲರೂ ಜೈಲಿನಿಂದ ಬಿಡುಗಡೆಯಾಗಿದ್ದಾರೆ ಪಂಜಾಬಿನ ಘೋರದೃಶ್ಯವೆಲ್ಲವೂ ಅವರಿಗ ಈಗ ಮನದಟ್ಟಾಗಿರಬಹುದಲ್ಲದೆ ಅವರ ಹೃದಯವೂ ಸಹ ತಲ್ಲಣಿಸಿಹೋಗಿರಬಹುದು ಆದುದರಿಂದ ಕಾಂಗ್ರೆಸ್ಸಿನವರು ಈ ವಿಷಯವನ್ನು ಪೂರ್ಣಮನಸ್ಸಿನಮೇಲೆ ತೆಗೆದುಕೊಂಡು ತಮ್ಮ ಚಳವಳಿಯನ್ನು ನಿಲ್ಲಿಸಿ ಪಂಜಾಬಿನ ನಿರಾಶ್ರಿತರ ರಕ್ಷಣೆಯ ಬಗ್ಗೆ ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಬೇಕು

ಉದಯಪುರ ಜೋಧಪುರ ಭರತಪುರ, ಆಳ್ವಾರ್, ಪಾಟಿಯಾಲ ಮೊದಲಾದ ಸಂಸ್ಥಾನಗಳು ಪಂಜಾಬಿನ ನಿರಾಶ್ರಿತರಿಗೆ ವಿಶೇಷವಾದ ಆಶ್ರಯವನ್ನು ಕೊಟ್ಟಿರುವಾಗ ಹಿಂದೂಸಂಸ್ಥಾನಗಳಲ್ಲೆಲ್ಲಾ ಅತ್ಯಂತ ದೊಡ್ಡದಾಗಿರುವ ಮೈಸೂರು ಸಂಸ್ಥಾನವು ಈವರೆಗೂ ಆ ವಿಷಯವನ್ನು ಪ್ರಸ್ತಾಪಿಸದಿರುವುದು ವ್ಯಸನಕರವಾಗಿದೆ ಇದಕ್ಕೆ ಈಗ ಮೈಸೂರು ದೇಶದಲ್ಲಿ ಪ್ರಾರಂಭವಾಗಿರುವ ಸತ್ಯಾಗ್ರಹ ಚಳುವಳಿಯೇ ಮೂಲಕಾರಣವೆಂಬ ವಿಷಯವು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ತಿಳಿಯುವಂತಿದೆ ಆದುದರಿಂದ ಕಾಂಗ್ರೆಸ್ಸಿನವರು ತಮ್ಮ ಚಳವಳಿಯನ್ನು ನಿಲ್ಲಿಸಿ ಸರ್ಕಾರದೊಡನೆ ಸಹಕರಿಸಿ ಮದ್ರಾಸ್ ಬೊಂಬಾಯಿ ಪ್ರಾಂತದವರಂತೆ ಮೈಸೂರು ದೇಶದಲ್ಲಿಯೂ, ನಿರಾಶ್ರಿತರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗಿ ದೇವರ ಕೃಪೆಗೂ, ಮಹಾಜನಗಳ ಪ್ರೇಮಕ್ಕೂ ಪಾತ್ರರಾಗಬೇಕೆಂದಾಶಿಸುತ್ತೇವೆ

ವರ್ತಮಾನಸಂಗ್ರಹ

ನಿರಾಶ್ರಿತರ ವರ್ಗಾವಣೆ ಬೇಗ ಆಗಬೇಕು

ಸರ್ದಾರ್ ಪಟೇಲರ ಮನವಿ

ಹಿಂದು, ಮುಸ್ಲಿಂ, ಮತ್ತು ಸಿಖ್ ನಿರಾಶ್ರಿತರನ್ನು ಹಿಂದೂಸ್ಥಾನದಿಂದ ಪಾಕಿಸ್ಥಾನಕ್ಕೂ ಪಾಕಿಸ್ಥಾನದಿಂದ ಹಿಂದೂಸ್ಥಾನಕ್ಕೂ ವರ್ಗಾಯಿಸುವ ವಿಚಾರವನ್ನು ಪರಿಶೀಲಿಸಲು ಸರ್ದಾರ್ ಪಟೇಲ್ ರವರು ಒಂದು ಸಮ್ಮೇಳನವನ್ನು ನಡೆಯಿಸಿದರು ನಿರಾಶ್ರಿತರು ಪ್ರಯಾಣ ಮಾಡುವ ರೈಲು ಗಾಡಿಗಳ ರಕ್ಷಣೆ ಮತ್ತು ಅವರ ಪುನರ್ವಸತಿ ಬಗ್ಗೆ ಸಮಾಲೋಚನೆ ನಡೆಯಿತು ಪಾಕಿಸ್ಥಾನಕ್ಕೆ ಹೋಗಲಿರುವ ಮುಸ್ಲಿಂ ನಿರಾಶ್ರಿತರಿಗೆ ಸೌಕರ್ಯಗಳನ್ನು ಕಲ್ಪಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ತೀರ್ಮಾನವಾಯಿತು

ಚಳಿಗಾಲ ಸಮೀಪಿಸುತ್ತಿರುವುದರಿಂದ ಈ ವರ್ಗಾವಣೆ ಬೇಗ ಬೇಗ ನಡೆಯಬೇಕೆಂಬ ಅಂಶವನ್ನು ಸರ್ದಾರ್ ಪಟೇಲರು ತಿಳಿಸಿದರು. ಈ ತಿಂಗಳ ಕೊನೆಯೊಳಗಾಗಿ ಮುಕ್ಕಾಲು ಪಾಲು ಜನರ ವರ್ಗಾವಣೆ ಅಗತ್ಯವೆಂದು ಅವರು ತಿಳಿಸಿದರು

ತಮ್ಮ ತಮ್ಮ ಸಂಸ್ಥಾನಗಳ ಪ್ರದೇಶದಲ್ಲಿ ರೈಲು ರಸ್ತೆಯ ರಕ್ಷಣೆ ಬಗ್ಗೆ ತಾವು ಜವಾಬ್ದಾರಿಯನ್ನು ತೆಗೆದುಕೊಳ್ಳಲು ನಾನಾಸಂಸ್ಥಾನಾಧೀಶರು ಒಪ್ಪಿಕೊಂಡರು ಅಲ್ಲದೆ ನಿರಾಶ್ರಿತರ ಪುನರ್ವಸತಿಗೂ ಸಹ ವ್ಯವಸ್ಥೆ ನಡೆಸಲು ಅವರು ಒಪ್ಪಿಕೊಂಡರು ಈ ಸಮ್ಮೇಳನಕ್ಕೆ ಪಾಟಿಯಾಲಾ, ಭರತಪುರ, ಆಳ್ವಾರ್ ಸಂಸ್ಥಾನಗಳ ರಾಜರೂ, ಕಪೂರದ ಪ್ರಧಾನ ಮಂತ್ರಿಗಳೂ ಬಿಕಾನೀರ್ ಫರೀದ್ ಕೋಟೆ, ಕಪೂರ್ಥಲಾ ಸಂಸ್ಥಾನಗಳ ಪ್ರತಿನಿಧಿಗಳೂ ಸಂಯುಕ್ತ ಪ್ರಾಂತ ಮತ್ತು ಪೂರ್ವ ಪಂಜಾಬಿನ ಪ್ರಧಾನ ಮಂತ್ರಿಗಳೂ ಬಂದಿದ್ದರು

ನಿರಾಶ್ರಿತರ ವರ್ಗಾವಣೆ ಬಗ್ಗೆ ಅಧಿಕೃತ ಹೇಳಿಕೆ

ಪೂರ್ವ ಮತ್ತು ಪಶ್ಚಿಮ ಪಂಜಾಬು ಪ್ರಾಂತಗಳ ಪರಿಸ್ಥಿತಿಯ ಬಗ್ಗೆ ಮಿಲಿಟರಿ ಅಧಿಕಾರಿಗಳು ಈ ರೀತಿ ತಿಳಿಸಿದ್ದಾರೆ ಹಿಸ್ಸಾರ್ ಜಿಲ್ಲೆಯಲ್ಲಿ ಮುಸಲ್ಮಾನರನ್ನು ಸರಿಯಾದ ರಕ್ಷಣೆಯೊಡನೆ ಸುರಕ್ಷಿತ ಶಿಬಿರಗಳಿಗೆ ಲಾರಿಗಳಲ್ಲಿ ಸಾಗಿಸಲಾಯಿತು ಹೋಷಿಯಾರ್‌ಪುರ್ ಜಿಲ್ಲೆಯಿಂದ ೪೬೦ ಗಾಡಿಗಳು ಹೊರಟಿವೆ ಈ ಜಿಲ್ಲೆಯಿಂದ ಹಲವು ನಿರಾಶ್ರಿತರನ್ನು ಕೂಡ ಸಾಗಿಸಲಾಗಿದೆ ಬಟಾಲದಿಂದ ಲಾಹೋರಿಗೆ ೧೨೦೦ ಮುಸಲ್ಮಾನರನ್ನು ಸಾಗಿಸಿದೆ

ಲಾಹೋರಿಗೆ ಪ್ರತಿನಿತ್ಯವೂ ಸುಮಾರು ೧೦,೦೦೦ ಮುಸಲ್ಮಾನರನ್ನು ಸಾಗಿಸಲು ಸಾಧ್ಯವಾಗುವುದೆಂದು ಮೇಜರ್ ಜನರಲ್ ಚಿಮಿನಿಯವರು ನಂಬಿರುತ್ತಾರೆ ಅಮೃತಸರಕ್ಕೆ ಭಾರತ ಸರಕಾರದ ಉಪ ಪ್ರಧಾನಿ ಶ್ರೀ ವಲ್ಲಭಭಾಯಿ ಪಟೇಲರು ಭೇಟಿಯಿತ್ತಾರಭ್ಯ ೫೦ ಸಾವಿರ ಮುಸಲ್ಮಾನರನ್ನು ಸಾಗಿಸುತ್ತಿದ್ದ ೬ ನಿರಾಶ್ರಿತ ರೈಲು ಗಾಡಿಗಳು ಈ ನಗರದ ಮೂಲಕ ಸುರಕ್ಷಿತವಾಗಿ ಸಾಗಿದವು ಇದಲ್ಲದೆ ೨,೫೦,೦೦೦ ಮುಸ್ಲಿಂ ನಿರಾಶ್ರಿತರು ಈ ನಗರದ ಮೂಲಕವಾಗಿ ಸುರಕ್ಷಿತವಾಗಿ ಪ್ರಯಾಣ ಮಾಡಿದರು ಜಲಂಧರ್ ಮತ್ತು ಲಾಹೋರ್ ನಗರಗಳ ನಡುವೆ ಎರಡು ಕಡೆಗಳಲ್ಲೂ ನಿರಾಶ್ರಿತರನ್ನು ಸಾಗಿಸುವ ರೈಲುಗಾಡಿಗಳು ಈಗ ಓಡಾಡುತ್ತಿವೆ

ಪೂರ್ವ ಪಂಜಾಬಿನಲ್ಲಿ ಜನರಿಗೆ ನಂಬಿಕೆ ತಲೆದೋರುತ್ತಿದೆ

ಪೂರ್ವಪಂಜಾಬಿನಲ್ಲಿ ಮುಖ್ಯವಾಗಿ, ಫಿರೋಜಪುರ, ಗುರುಗಾಂವ ಮತ್ತು ಲೂಧಿಯಾನಾ ಜಿಲ್ಲೆಗಳಲ್ಲಿ ಜನಗಳಲ್ಲಿ ನಂಬಿಕೆ ತಲೆದೋರುತ್ತಿದೆ ಎಂದು ವರದಿಯಾಗಿದೆ ಲೂಧಿಯಾನಾ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಎರಡು ಕೋಮುಗಳಿಗೆ ಸೇರಿದ ಜನರು ಶಾಂತರೀತಿಯಲ್ಲಿ ಜೀವನ ನಡೆಸುತ್ತಿದ್ದಾರೆಂದು ವರದಿಯಾಗಿದೆ ಹಿಸ್ಸಾರ್ ಮತ್ತು ರಿವಾರಿ ಈ ಎರಡು ಪ್ರದೇಶಗಳಲ್ಲಿ ಮಾತ್ರ ದುರ್ಘಟನೆಗಳು ವರದಿಯಾಗಿವೆ ರಿವಾರಿಯಲ್ಲಿ ಎರಡು ಗುಂಪುಗಳನ್ನು ಚದುರಿಸುವಾಗ ಹಲವರಿಗೆ ಗಾಯಗಳಾದುವು ಶುಕ್ರವಾರ ಒಂದು ಬಾಂಬು ಸಿಡಿತದಿಂದ ಹಲವರು ಗಾಯಗೊಂಡರು ಅಪಹರಿಸಲ್ಪಟ್ಟಿದ್ದ ಒಬ್ಬ ಸ್ತ್ರೀ ವಿಷಯವಾಗಿ ಜಗಳವಾಡುತ್ತಿದ್ದ ಒಂದು ಜನರ ಗುಂಪನ್ನು ಚದುರಿಸಲು ಪೋಲಿಸರು ಗುಂಡು ಹಾರಿಸಿದರು ಈ ಸಂದರ್ಭದಲ್ಲಿ ೧೮ ಜನರನ್ನು ದಸ್ತಗಿರಿ ಮಾಡಲಾಯಿತು

ಹಿಸ್ಸಾರಿನಲ್ಲಿ ಶಸ್ತ್ರಸಜ್ಜಿತರಾದ ಜನರ ಎರಡು ಗುಂಪುಗಳ ಘರ್ಷಣೆಯ ಫಲವಾಗಿ ಸೈನಿಕರು ಗುಂಡು ಹಾರಿಸಬೇಕಾಯಿತು ಇದರಿಂದ ೪೦ ಜನರು ಮೃತರಾದರು ಅನೇಕರಿಗೆ ಗಾಯಗಳಾಗಿವೆ ೪ ಜನ ಪೋಲೀಸರು ಗಾಯಗೊಂಡಿರುತ್ತಾರೆ ಪಾಕಿಸ್ಥಾನದಿಂದ ಬಂದ ಸುದ್ದಿಯ ಪ್ರಕಾರ ಸೌರಾಂಗ್ ಸೆರಾಯಿಯಿಂದ ಪ್ರಯಾಣ ಮಾಡುತ್ತಿದ್ದ ಮೂವರು ಹಿಂದೂ ಮತ್ತು ಸಿಖ್ಖ ಪ್ರಯಾಣಿಕರ ಮೇಲೆ ಜನರ ಗುಂಪೊಂದು ದಾಳಿ ನಡೆಸಿತು

ಆಹಾರದ ಅಭಾವದ ಬಗ್ಗೆ ಗಾಂಧಿಯವರ ಹೇಳಿಕೆ

" ನಮ್ಮ ಆಹಾರ ಸಮಸ್ಯೆಯ ವಿಷಯಗಳನ್ನೆಲ್ಲ ಸಂಪೂರ್ಣವಾಗಿ ತಿಳಿದಿರಬೇಕಾದವರೆಲ್ಲ ಡಾ|| ರಾಜೇಂದ್ರ ಪ್ರಸಾದರ ಆಹ್ವಾನದಂತೆ ದೆಹಲಿಯಲ್ಲಿ ನೆರೆದಿದ್ದಾರೆ. ಈ

ಬಹು ಮುಖ್ಯವಾದ ಸಮಸ್ಯೆಯ ವಿಚಾರದಲ್ಲಿ ತಪ್ಪನ್ನೇನಾದರೂ ಮಾಡಿದರೆ, ನಿವಾರಣೆ ಮಾಡಲು ಶಕ್ಯವಿದ್ದರೂ ಲಕ್ಷಾಂತರ ಮಂದಿಯ ಸಾವಿಗೆ ಎಡೆಗೊಟ್ಟಂತಾಗುವುದು. ನಾವು ಶಕ್ಯಮಟ್ಟಿಗೆ ಫಲಕಾರಿಯಾದ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಬಹುದೆಂಬ ನಂಬಿಕೆ ನನಗಿದೆ. ನಾವು ಕಲಿಯಬೇಕಾದ ಮೊದಲು ಪಾಠವೆಂದರೆ, ಸ್ವಸಹಾಯ ಮತ್ತು ಆತ್ಮ ವಿಶ್ವಾಸ. ಡಾ|| ರಾಜೇಂದ್ರ ಪ್ರಸಾದರು ಕರೆದಿರುವ ಸಮಿತಿಯು ಆಹಾರ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಕಾರ್ಯ ಕಾರಿಯಾದ ಮಾರ್ಗವೊಂದನ್ನು ಕಂಡುಹಿಡಿಯದೆ ಚದುರುವುದಿಲ್ಲವೆಂದು ನಂಬಿದ್ದೇನೆ. ಎಂಬುದಾಗಿ ಗಾಂಧೀಜಿಯವರು ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು

ಮೋಟಾರಿನ ಮೇಲೆ ಬಿದ್ದು, ಮೋಟಾರಿನ ಗಾಜನ್ನು ಚೂರು ಚೂರು ಮಾಡಿದರೆಂದೂ, ಈ ಸಂದರ್ಭದಲ್ಲಿ ೩೦ ಜನ ವಿದ್ಯಾರ್ಥಿಗಳು ಗಾಯಗೊಂಡರೆಂದೂ, ೩ ಜನ ವಿದ್ಯಾರ್ಥಿಗಳ ಸ್ಥಿತಿ ಚಿಂತಾಜನಕವಾಗಿದೆಯೆಂದೂ, ೧೪ ಜನ ಪೋಲೀಸರಿಗೂ, ಒಬ್ಬ ಇನ್ಸ್‌ಪೆಕ್ಟರಿಗೂ ಇಬ್ಬರು ಠಾಣೇದಾರರಿಗೂ, ಗಾಯಗಳಾಗಿರುವುವೆಂದೂ, ತಿಳಿದುಬರುತ್ತದೆ ಅನೇಕ ಜನ ವಿದ್ಯಾರ್ಥಿಗಳನ್ನು ಜೈಲಿನಲ್ಲಿಡಲಾಗಿದೆ ಮೈಸೂರು ದೇಶದಲ್ಲಿ ಆಂದೋಲನವನ್ನೆಬ್ಬಿಸಿರುವ ಮೈಸೂರಿನ ವಿದ್ಯಾರ್ಥಿಗಳು ಈ ವಿಷಯವನ್ನು ಪೂರ್ಣವಾಗಿ ಆಲೋಚಿಸಿ ಚಳುವಳಿಯಿಂದ ದೂರಾದರೆ ದೇಶಕ್ಕೆ ಕ್ಷೇಮವಲ್ಲವೇ?

...ಚಾಚಾರ್ಯಪ್ರಭಾ' ಮೈಸೂರು, ತಾ|| ೧೩. ೧೦ ೧೯೪೭

...ಮೈಸೂರು ಸತ್ಯಾಗ್ರಹವು ನಿಂತಿತು

...ಸೆಪ್ಟಂಬರ್ ೧ ನೇ ತಾರೀಖಿನಿಂದ ಜವಾಬ್ದಾರಿ ...ರ ಸ್ಥಾಪನೆಗಾಗಿ ಪ್ರಾರಂಭವಾಗಿದ್ದ ಕಾಂಗ್ರೆಸ್ಸಿನ ...ಗ್ರಹವು ನಿನ್ನೆಗೆ ಮುಕ್ತಾಯವಾಯಿತು ನಿನ್ನೆ ...ಯಂಕಾಲ ೬ ಘಂಟೆಗೆ ಕಾಂಗ್ರೆಸ್ ನಾಯಕರು ...ೂರು ಅರಮನೆಯಲ್ಲಿ ಶ್ರೀಮನ್ಮಹಾರಾಜರವರನ್ನು ...ರ್ಶಿಸಿ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದರೆಂದೂ, ... ಮಹಾಪ್ರಭುಗಳವರ ಅಂಗೀಕಾರ ದೊರೆತುದ... ಸತ್ಯಾಗ್ರಹವು ಕೊನೆಗಂಡಿತೆಂದೂ ತಿಳಿದುಬರು... ತತ್ಸಂಬಂಧವಾದ ವಿವರಗಳು ಈ ದಿವಸ ಹೊರ...ವವೆಂದು ಗೊತ್ತಾಗುತ್ತದೆ ಆ ವಿಷಯವನ್ನು ...ದಿನವಾರದ ಪತ್ರಿಕೆಯಲ್ಲಿ ಪ್ರಕಟಿಸುವದಾಗುವದು

ಸಂ —

ದರಾಸ್ ಮಂತ್ರಿಗಳಿಗೆ ಕೊಳೆತ ಮೊಟ್ಟೆ ಏಟು

ದರಾಸ್ ಸರ್ಕಾರದ ಆಹಾರ ಮಂತ್ರಿಗಳಾದ ಡಾ|| ' ಎಸ್ ರಾಜನ್‌ರವರು ದೆಹಲಿಯಿಂದ ಮೊನ್ನೆ ...ಸಿಗೆ ಹಿಂದಿರುಗುತ್ತಿದ್ದಾಗ ಟ್ರೈನು ಬೆಜವಾಡ ...ಗೆ ಬಂದಕೂಡಲೆ ಒಂದು ಭಾರಿ ಗುಂಪು ಅವರು ... ಗಾಡಿಯ ಒಳಗೆ ನುಗ್ಗಿ ಗಲಾಟೆಮಾಡಿ ಅವ...ರೆಕ್ಕೆಳೆಸಿತು ಆ ಜಿಲ್ಲೆಯ ಒಂದು ಗ್ರಾಮದಲ್ಲಿ ...ಲ್ಲದೆ ಅನೇಕ ಜನರು ಸತ್ತಿರುವರೆಂದೂ ಇದಕ್ಕೆ ... ಆ ಊರಿನ ಜನರ ಯೋಗಕ್ಷೇಮವನ್ನು ...ದೆ ದವಸವನ್ನೆಲ್ಲಾ ಆಹಾರ ಶಾಖೆಯವರು ...ಯ್ದಿರೆಂದೂ ಅದ್ದರಿಂದ ನೀವು ಸ್ವತಃ ನೋಡಲು ...ಹೊತಿಯಲ್ಲೇ ಬರಬೇಕೆಂದೂ ಆ ಗುಂಪಿನ ಜನ ...ಒತ್ತಾಯಿಸಿದರು ಮದರಾಸಿಗೆ ಹೋಗಿ ಅನಂತರ ...ವಾಗಿ ಎಷ್ಟು ಹೇಳಿದರೂ ಜನಗಳು ಕೇಳದೆ ಕೊಳೆತ ಮೊಟ್ಟೆಗಳಿಂದ ಅವರನ್ನೂ ಅವರ ದರ್ಶಿಯನ್ನೂ ಹೊಡೆಯಲಾರಂಭಿಸಿದರು ...ಹೊತ್ತಿಗೆ ರಿಸರ್ವ್ ಪೋಲೀಸಿನವರು ಬರಲು ...ಲ್ಲ ಹೊರಟುಹೋದರು ಆಮೇಲೆ ಟ್ರೈನು ...ಸಿಗೆ ಹೊರಟಿತು

ಬ್ರಿಟನ್ನಿನಿಂದ ಪಾಕಿಸ್ಥಾನಕ್ಕೆ ಆಯುಧಗಳ ರವಾನೆ

...ಟನ್ನು ಕರಾಚಿಯಲ್ಲಿರುವ ವ್ಯಾಪಾರಿಗಳ ಹೆಸರಿನ ಸುಮಾರು ೩೦೦೦ ಆಯುಧಗಳನ್ನು ಈವರೆಗೆ ...ಸಿರುವುದೆಂದೂ, ಇದರಲ್ಲಿ ಕೆಲವು ಆಯುಧಗಳು ...ಲಾಂಬಾದಿನ ವ್ಯಾಪಾರಿಗಳಿಗೆ ದೊರಕಿರುವುವೆಂದೂ ಪೆಟ್ಟಿಗೆಗಳ ಮೇಲೆ ' ಹಳೆ ಕಬ್ಬಿಣದ ತುಂಡು ' ಎಂದು ಬರೆದಿರುವುದೆಂದೂ ಲಂಡನ್ನಿನಲ್ಲಿರುವ ಹಿಂದೂಸ್ಥಾನ್ ಸ್ಟ್ಯಾಂಡರ್ಡ್ ಪತ್ರಿಕೆಯ ಪ್ರತಿನಿಧಿಯು ಪ್ರಕಟಿಸಿದ್ದಾನೆ

... ತೋರದಾಗುವುದು ಭಾರತೀಯರೆಲ್ಲ ಆಹಾರ ಬಳಕೆಯಲ್ಲಿ ಕೊಂಚಮಟ್ಟಿಗೆ ತ್ಯಾಗ ತೋರಿಸಿದರೆ, ಹೊರಗಿನಿಂದ ಆಹಾರ ಬರದಿದ್ದರೂ ನಾವು ಕಾಲ ಕಳೆಯಬಹುದು ಎಂದು ಹೇಳಿರುವರು

ವಿದ್ಯಾರ್ಥಿಗಳಿಗೂ ಪೋಲಿಸರಿಗೂ ಭಯಂಕರ ಹೊಡೆದಾಟ

ಲಕ್ನೋ ವಿಶ್ವವಿದ್ಯಾನಿಲಯದ ಶಿಕ್ಷಣ ಶುಲ್ಕವು ಬಹಳ ಹೆಚ್ಚಾಗಿರುವುದರಿಂದ ಅದನ್ನು ಕಡಮೆ ಮಾಡಬೇಕೆಂದು ವಿದ್ಯಾರ್ಥಿಗಳು ವಿದ್ಯಾಮಂತ್ರಿಗಳ ಮನೆಯ ಮುಂದೆ ಪಿಕೆಟಿಂಗ್ ನಡೆಸಿದ ವಿಷಯವನ್ನು ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವುದು ಸರಿಯಷ್ಟೆ ಆ ಬಗ್ಗೆ ಇತ್ತೀಚೆಗೆ ಹೆಚ್ಚು ವಿಷಯಗಳು ತಿಳಿದುಬಂದಿವೆ ಗೋರಖ್‌ಪುರದಲ್ಲಿ ಪೋಲಿಸರು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದರೆಂದೂ, ಈ ವಿಷಯವು ಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ತಿಳಿದಕೂಡಲೆ ಸಾವಿರಾರು ಜನ ವಿದ್ಯಾರ್ಥಿಗಳು ಕೋಪಾವಿಷ್ಟರಾಗಿ, ಅಸೆಂಬ್ಲಿ ಭವನದ ಮುಂದೆ ಪ್ರದರ್ಶನ ನಡೆಸಿದರೆಂದೂ, ಆಗ್ಗೆ ಪೋಲೀಸರು ಲಾಠಿ ಪ್ರಹಾರಮಾಡಿದರೆಂದೂ, ಬಳಿಕ ಕೋಪಗೊಂಡ ವಿದ್ಯಾರ್ಥಿಗಳು ವಿದ್ಯಾಮಂತ್ರಿಗಳ ಮನೆಯ ಮುಂದೆ ಹೋಗಿ, ಆ ಮನೆಯ ಕಿಟಕಿಯ ಗಾಜು, ಟೇಬಲ್, ಕುರ್ಚಿ ಮೊದಲಾದವುಗಳನ್ನು ಮುರಿದುಹಾಕಿದರೆಂದೂ 'ಡಾಕ್ಟರ್ ಸುಕುಂಸಿಂಹ' ಎಂಬ ಇನ್ನೊಬ್ಬ ಮಂತ್ರಿಗಳ

ವೃತ್ತ ಪತ್ರಿಕೆಗಳನ್ನು ಮಾರುವ ವಿಚಿತ್ರ ಯಂತ್ರ

ರಷ್ಯಾದೇಶದಲ್ಲಿ 'ಗ್ರಿನೋಗಾಡೊ' ಎಂಬ ಪ್ರಸಿದ್ಧ ವೈಜ್ಞಾನಿಕನು ವೃತ್ತಪತ್ರಿಕೆಗಳನ್ನು ಮಾರುವುದಕ್ಕೋಸ್ಕರ ಹೊಸದಾಗಿ ಒಂದು ವಿಚಿತ್ರಯಂತ್ರವನ್ನು ನಿರ್ಮಿಸಿದ್ದಾನೆ ಆ ಯಂತ್ರವು ಯಾರ ಸಹಾಯವಿಲ್ಲದೆಯೇ ವೃತ್ತಪತ್ರಿಕೆಗಳನ್ನು ಓದುವುದಲ್ಲದೆ ಅದರಲ್ಲಿರುವ ವರ್ತಮಾನಗಳನ್ನು ಪ್ರಚಾರಮಾಡುತ್ತಿರುವುದು ಯಾರಾದರೂ ವೃತ್ತ ಪತ್ರಿಕೆಗೆ ಇಟ್ಟಿರುವ ಬೆಲೆಗಿಂತ ಹೆಚ್ಚು ದುಡ್ಡನ್ನು ಕೊಟ್ಟರೆ ಕೂಡಲೇ ಹೆಚ್ಚಾದ ದುಡ್ಡನ್ನು ತಿರುಗಿ ಕೊಡುವುದಂತೆ!

ವಿಚಿತ್ರವಾದ ರೈಲ್ವೆ ಇಂಜನ್ನು

ಲಂಡನ್ನಿನಲ್ಲಿ ಒಂದು ವಿಚಿತ್ರವಾದ ವಿದ್ಯುಚ್ಛಕ್ತಿಯ ಇಂಜನ್ನನ್ನು ತಯಾರಿಸಲಾಗಿದೆ ಈ ಯಂತ್ರವು ಮನುಷ್ಯನು ಹೇಗೆ ಆಜ್ಞೆಯನ್ನು ಪಾಲಿಸುವನೋ ಹಾಗೆಯೇ ಆಜ್ಞೆಯನ್ನು ಪಾಲಿಸುವುದು ವೇಗವಾಗಿ ಹೋಗುವ ಸಮಯದಲ್ಲಿ ನಿಲ್ಲು ಎಂದು ಹೇಳಿದರೆ ನಿಲ್ಲುವುದಂತೆ! 'ಹಿಂದಕ್ಕೆ ಸರಿ' ಎಂದು ಹೇಳಿದರೆ ಸರಿಯುವುದಂತೆ!

ಪ್ರಕಟಣೆ

ಈ ಮೂಲಕ ಸಮಸ್ತ ವೀರಶೈವ ಮಂಡಲಿಗೆ ತಿಳಿಯಪಡಿಸುವುದೇನೆಂದರೆ ಶ್ರೀರಂಭಾಪುರೀ ಪೀಠದ ಶಿವೈಕ್ಯ ಜಗದ್ಗುರುಗಳವರು ತಮ್ಮ ಶರೀರದ ಅಸ್ವಸ್ಥತೆಯಿಂದ ಸಂಚಾರವನ್ನು ನಿಲ್ಲಿಸಿದ್ದ ವಿಷಯವೂ, ಅವರ ಸಂಚಾರವಿಲ್ಲದ್ದ, ಅನೇಕ ಜನ ನೌಕರರು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿರುವ ವಿಷಯವೂ, ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ನೂತನ ಜಗದ್ಗುರುಗಳವರು ಎಡೆಯೂರಲ್ಲಿರುವ ತಮ್ಮ ಖಾಸಾಮಠದಲ್ಲಿ ಈಗ ೩ ತಿಂಗಳಿಂದಲೂ ಮೊಕ್ಕಾಂ ಮಾಡಿರುವರು ಶಿವೈಕ್ಯ ಜಗದ್ಗುರುಗಳವರ ಕಾಲದಲ್ಲಿ ಶ್ರೀರಂಭಾಪುರೀಪೀಠದ ಜೀರ್ಣೋದ್ಧಾರಕ್ಕಾಗಿ ಅನೇಕ ಜನರು ವಾಗ್ದಾನ ಮಾಡಿದ್ದು ಅವರಲ್ಲಿ ಕೆಲವರು ಅವರಿದ್ದಾಗಲೇ ತಮ್ಮ ವಾಗ್ದಾನದ ಹಣವನ್ನು ಸಮರ್ಪಿಸಿದ್ದಾರೆ. ಇನ್ನು ಕೆಲವರು ಸಮರ್ಪಿಸಿರುವುದಿಲ್ಲ. ಈ ವಿಷಯವನ್ನು ತಿಳಿದು ಕೆಲಜನ ಮೋಸಗಾರರು ಹಣವನ್ನು ಕೊಡದೆ ಇರುವ ಜನರಲ್ಲಿ ಹೋಗಿ ನೂತನ ಜಗದ್ಗುರುಗಳು ಪೀಠದ ಕಟ್ಟಡವನ್ನು ಮುಂದುವರೆಸಿದ್ದಾರೆ ನಮ್ಮನ್ನು ಹಣ ವಸೂಲಿಗಾಗಿ ಕಳುಹಿಸಿದ್ದಾರೆ ಇತ್ಯಾದಿ ಸುಳ್ಳು ಹೇಳಿ ಅಲ್ಲಲ್ಲಿ ಹಣವನ್ನು ವಸೂಲಿ ಮಾಡುತ್ತಿದ್ದಾರೆಂದು ತಿಳಿದುಬಂದಿದೆ ಮಹಾ ಸಂಸ್ಥಾನದವತಿಯಿಂದ ಯಾರನ್ನೂ ಹಣದ ವಸೂಲಿಗಾಗಿ ಕಳುಹಿಸಿಕೊಟ್ಟಿಲ್ಲ ಆದುದರಿಂದ ಪೀಠಾಭಿಮಾನಿಗಳು ಮೋಸಗಾರರ ಮಾತಿಗೆ ಮರುಳಾಗಿ ಅವರ ಕೈಯ್ಯಲ್ಲಿ ಹಣವನ್ನು ಕೊಡಬಾರದು. ಆ ರೀತಿ ಯಾರಾದರೂ ಬಂದಿದ್ದಾದರೆ ಅವರ ಹೆಸರು, ಗ್ರಾಮ, ಮೊದಲಾದವುಗಳನ್ನು ಅವರಿಂದ ತಿಳಿದು ಕೂಡಲೇ ಎಡೆಯೂರು ಮೊಕ್ಕಾಮಿಗೆ ತಿಳಿಸಬೇಕು. ಯಾರೂ ಮೋಸಗಾರರ ಮಾತುಗಳಿಗೆ ಬಲಿಬೀಳಬಾರದೆಂದು ಈ ಮೂಲಕ ತಿಳಿಯಪಡಿಸಿದೆ

ಏಜೆಂಟ್, ಶ್ರೀಜಗದ್ಗುರು ಬಾಳೇಹೊನ್ನೂರುಮಠ
ಮೊಕ್ಕಾಂ ಎಡೆಯೂರು
ತಾ|| ಕುಣಿಗಲ್ ಡಿ|| ತುಮಕೂರು.

ಶಿವೈಕ್ಯಸಮಾರಾಧನೆ

ನಿಜಾಂ ಇಲಾಖಾ ಕೊಪ್ಪಳ ತಾ| ಗೊಂಡಬಾಳ ಗ್ರಾಮದ ವೇ|| ಸಾಲೀಮಠದ ಗುರಯ್ಯನವರು ಕಳೆದ ಜ್ಯೇಷ್ಠ ಶು|| ಸಪ್ತಮಿ ಸೋಮವಾರ ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ ಇವರು ಒಳ್ಳೇ ಗುರುಪೀಠಾಭಿಮಾನಿಗಳಾಗಿದ್ದರಲ್ಲದೆ ಶಿವಪೂಜಾನಿಷ್ಠರೂ, ಶಾಂತಸ್ವಭಾವದವರೂ ಆಗಿದ್ದರು ಇವರು ಯಾವಾಗಲೂ ಪಂಚಾಚಾರ್ಯ ಪ್ರಭಾಪತ್ರಿಕೆಯಲ್ಲಿ ಬರುವ ಅಮೂಲ್ಯ ವಿಷಯಗಳನ್ನು ಭಕ್ತಮಂಡಲಿಗೆ ಬೋಧಿಸುತ್ತಿದ್ದರು ಗುರುವರ್ಗದ ಅಭಿಮಾನವು ಇದರಲ್ಲಿ ಮನೆಮಾಡಿಕೊಂಡಿತ್ತು ಇಂತಹ ಮಹಾವ್ಯಕ್ತಿಯು ಇಹಲೋಕದಿಂದ ತೆರಳಿದುದು ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ ಇವರ ಆಳಿಯಂದಿರಾದ ಬನ್ನಿಕೊಪ್ಪ ಹಿರೇಮಠದ ವೇ|| ಶಿವಯ್ಯನವರು ಹೆಡ್‌ಮಾಸ್ಟರ್ ಶಾತರಕಿ ಇವರು ತಮ್ಮ ಗೊಂಡಬಾಳ ಸಾಲೀಮಠದಲ್ಲಿ ಇದೇ ನಿಜಶ್ರಾವಣ ಬ| ೧೩ ದಿವಸ ಕೈವಲ್ಯಪ್ರಾಪ್ತಿಗಾಗಿ ಗಣಾರಾಧನೆಯನ್ನು ನೆರವೇರಿಸಿದರು ಶ್ರೀಪರಮೇಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಬಸವಯ್ಯ ಹಿರೇಮಠ, ವೀರಾಪುರ.

ಸ್ವೀಕಾರ

ನಿಜಾಂ ಇಲಾಖಾ ಕೊಪ್ಪಳ ತಾ|| ಗೊಂಡಬಾಳ ಗ್ರಾಮದ ವೇ| ಸಾಲೀಮಠದ ಗುರಯ್ಯನವರು ಶಿವಾಧೀನರಾದ ನಿಮಿತ್ತ ನೆರವೇರಿದ ಗಣಾರಾಧನಾ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ವೇ|| ಬನ್ನಿಕೊಪ್ಪ ಹಿರೇಮಠದ ಶಿವಯ್ಯನವರ ದ್ವಾರಾ ತಲಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಅಕ್ಟೋಬರ್ ತಾ|| ೧೩ನೇ ಸೋಮವಾರ

ಕಾಂಗ್ರೆಸ್ಸು ತನ್ನ ದೃಷ್ಟಿಯನ್ನು ಪಂಜಾಬಿನ ಕಡೆ ತಿರುಗಿಸಲಿ

ಮೈಸೂರು ಕಾಂಗ್ರೆಸ್ಸಿನವರು ಕಳೆದ ಸಪ್ಟೆಂಬರ್ ೧ನೆಯ ತಾರೀಖಿನಿಂದ ಮೈಸೂರು ದೇಶದಲ್ಲಿ ಚಳವಳಿಯನ್ನು ಹೂಡಿದ ವಿಷಯವು ಎಲ್ಲರಿಗೂ ತಿಳಿದೇ ಇದೆ ಕಾಂಗ್ರೆಸ್ಸಿನವರು ಚಳವಳಿಯನ್ನು ಪ್ರಾರಂಭಿಸಿದ ಕಾಲಕ್ಕೆ ಭಾರತದ ಸ್ಥಿತಿಯು ಭಯಂಕರವಾಗಿದ್ದಿಲ್ಲ ಎಲ್ಲರೂ ಸ್ವಾತಂತ್ರ್ಯವು ಲಭಿಸಿತೆಂಬ ಸಂತೋಷದಲ್ಲಿಯೇ ಲೀನರಾಗಿ ಹೋಗಿದ್ದರು ಇದೇ ಸಮಯದಲ್ಲಿಯೇ ಕಾಂಗ್ರೆಸ್ಸಿನವರು ಜವಾಬ್ದಾರಿ ಸರಕಾರದ ಬಗ್ಗೆ ಚಳವಳಿಯನ್ನಾರಂಭಿಸಿದರು ಇವರು ಚಳವಳಿಯನ್ನಾರಂಭಿಸಿದ ಸ್ವಲ್ಪ ದಿನಗಳಲ್ಲಿಯೇ ಪಂಜಾಬಿನಲ್ಲಿಯೂ, ದಹಲಿಯಲ್ಲಿಯೂ, ಘೋರವಾದ ಹತ್ಯಾಕಾಂಡವು ನೆರವೇರಿ ಲಕ್ಷಾಂತರ ಜನರು ಮಡಿದರು ದೆಹಲಿಯಲ್ಲಿ ಮಾತ್ರ ಈಗ ಶಾಂತವಾಗಿದ್ದರೂ ಪಶ್ಚಿಮ ಪಂಜಾಬಿನಲ್ಲಿ ಹತ್ಯಾಕಾಂಡವು ಇನ್ನೂ ನಡೆಯುತ್ತಲೇ ಇದೆ

ಪಶ್ಚಿಮಪಂಜಾಬಿನಲ್ಲಿ ಮುಸಲ್ಮಾನರ ಜನಸಂಖ್ಯೆಯು ಬಹಳ ಹೆಚ್ಚಾಗಿರುವುದು ಹಿಂದೂ ಮತ್ತು ಸಿಕ್ಕರ ಜನಸಂಖ್ಯೆಯು ಕಡಮೆಯಾಗಿರುವುದು ಪಶ್ಚಿಮಪಂಜಾಬ್ ಪ್ರಾಂತವು ಪಾಕಿಸ್ಥಾನಕ್ಕೆ ಸೇರಿದ ಮೇಲೆ ಅಲ್ಲಿಯ ಮುಸಲ್ಮಾನರು ಹಿಂದು ಮತ್ತು ಸಿಕ್ಕರ ಮೇಲೆ ಬಿದ್ದು ಅಸಂಖ್ಯ ಜನರನ್ನು ಕೊಂದುಹಾಕಿದರಲ್ಲದೆ ಅವರ ಆಸ್ತಿಪಾಸ್ತಿಗಳನ್ನೆಲ್ಲಾ ದೋಚಿಕೊಂಡಿರುವರು ಮುಸಲ್ಮಾನರು ನಡೆಸುತ್ತಿರುವ ಈ ಕ್ರೂರಕೃತ್ಯಗಳನ್ನು ಸಹಿಸಬಾರದೆ ಈವರೆಗೆ ಭಾರತಕ್ಕೆ ಸುಮಾರು ೨೫ ೩೦ ಲಕ್ಷದವರೆಗೆ ನಿರಾಶ್ರಿತರು ಬಂದಿದ್ದಾರೆ ಅವರ ಸ್ಥಿತಿಯು ಬಹಳ ಚಿಂತಾಜನಕವಾಗಿದೆ ಅದನ್ನು ನೆನಸಿಕೊಂಡರೆ ಕಟುಕನ ಹೃದಯವೂ ಸಹ ತಲ್ಲಣಿಸುವಂತಿರುವುದು

ಈಗ ಪಶ್ಚಿಮ ಪಂಜಾಬಿನಿಂದ ಭಾರತಕ್ಕೆ ಸುಮಾರು ೪ ಲಕ್ಷ ಜನರು ಪ್ರಯಾಣ ಬೆಳೆಸಿದ್ದಾರೆ ನಿರಾಶ್ರಿತರ ಈ ಪ್ರಯಾಣವು ಒಂದೇ ಸಮನೆ ೫೦ ಮೈಲಿಗಳವರೆಗೆ ದೂರ ಹಬ್ಬಿರುವುದಂತೆ ! ಇಂತಹ ದೃಶ್ಯವು ಪ್ರಪಂಚದ ಇತಿಹಾಸದಲ್ಲಿಯೇ ನಡೆದಿಲ್ಲವೆಂದು ಹೇಳಲಾಗಿದೆ ಈ ನಿರಾಶ್ರಿತರ ಚಲನವಲನವು ಅತ್ಯಂತ ಕರುಣಾಜನಕವಾಗಿದೆ ಈ ಸಮೂಹದಲ್ಲಿ ಸ್ವಲ್ಪ ಜನರು ಮಾತ್ರ ಈಗ ಭಾರತದ ಗಡಿಗೆ ಬಂದು ತಲಪಿದ್ದಾರೆ ಮಿಕ್ಕವರು ವರ್ಣಿಸಲಸಾಧ್ಯವಾದ ಕಷ್ಟಪರಂಪರೆಯನ್ನು ಸಹಿಸಿಕೊಂಡು ತಮ್ಮ ಜೀವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಭಾರತಕ್ಕೆ ಬರುತ್ತಿದ್ದಾರೆ

ಅಶಕ್ತರಾದ ಮಹಿಳೆಯರನ್ನೂ ಮಕ್ಕಳನ್ನೂ ಎತ್ತಿನ ಬಂಡಿಗಳಲ್ಲಿ ಒಯ್ಯಲಾಗುತ್ತಿದೆ ಸಾಲಾಗಿ ಹೋಗುತ್ತಿರುವ ಎತ್ತಿನ ಬಂಡಿಗಳ ಎರಡು ಪಕ್ಕಗಳಲ್ಲಿಯೂ ಸಹ ದೃಢಕಾಯರಾದ ಪುರುಷರು ಕಾಲುನಡಿಗೆಯಲ್ಲೇ ಪ್ರಯಾಣ ಬೆಳೆಸುತ್ತಿದ್ದಾರೆ ನೂರಾರು ಮೈಲಿಗಳ ಪ್ರಯಾಣದ ಬಳಲಿಕೆ ಅವರುಗಳ ಮುಖದಲ್ಲಿ ಕಂಡುಬರುತ್ತಿದೆ ತಲೆಯ ಮೇಲೆ ತೂಕವುಳ್ಳ ವಸ್ತುಗಳನ್ನು ಹೊತ್ತುಕೊಂಡು ಈ ಸಮೂಹವು ಮುಂದೆ ಸಾಗುತ್ತಿದೆ

ನಿರಾಶ್ರಿತರು ಯಾವಾಗ ಹೇಗೆ ಹಸಿವನ್ನು ನಿವಾರಿಸಿಕೊಳ್ಳುವರೋ ಹೇಳಲು ಸಾಧ್ಯವಿಲ್ಲ ಕೆಲವೆಡೆಗಳಲ್ಲಿ ಕುಡಿಯಲು ನೀರು ಸಹ ದೊರೆಯದಾಗಿದೆ ಈ ಕಷ್ಟಗಳ ಜೊತೆಗೆ ಪ್ರತಿಕ್ಷಣವೂ ಮುಸ್ಲಿಂ ಧೂರ್ತರಿಗೆ ಎಲ್ಲಿ ಆಹುತಿಯಾಗುವೆವೋ ಎಂಬ ಭಯದಿಂದ ನಡುಗುವ ದುಃಸ್ಥಿತಿ ಬೇರೆ !

ಇವರುಗಳ ರಕ್ಷಣೆಗಾಗಿ ಈವರೆಗೆ ಯಾವ ಸಹಾಯವೂ ಕಂಡುಬರಲಿಲ್ಲ ಈಗ ಸ್ವಲ್ಪ ಜನ ಮಿಲಿಟರಿಯವರನ್ನು ಭಾರತಸರಕಾರದವರು ಕಳಿಸಿರುವರೆಂದು ತಿಳಿದುಬರುತ್ತದೆ. ಬಲೋಕಿ ನದಿಯ ಸೇತುವೆಯೇ ಪಶ್ಚಿಮಪಂಜಾಬಿನ ಗಡಿಯಾಗಿದೆ ಈ ಸೇತುವೆಯು ಅಷ್ಟೇನೂ ದೊಡ್ಡದಲ್ಲ ಇಷ್ಟು ಅಪಾರ ಜನಸಂಖ್ಯೆಯು ಈ ಸೇತುವೆಯನ್ನು ದಾಟಲು ಬಹುಕಾಲಹಿಡಿಯುವುದೆಂದು ಆ ಕರುಣಾಜನಕ ದೃಶ್ಯವನ್ನು ಕಂಡವರು ತಿಳಿಸಿದ್ದಾರೆ ಈ ಸೇತುವೆಯನ್ನು ದಾಟದಿರೆ ಮೃತ್ಯುವಿನ ಬಾಯಿಂದ ಪಾರಾದಂತೆ ಎಂಬುದಾಗಿ ಪತ್ರಿಕಾ ಪ್ರತಿನಿಧಿಗಳಿಗೆ ಪೂರ್ವಪಂಜಾಬು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರಲ್ಲದೆ, ನರವಧೆಯನ್ನು ಕಾರಣದವರು ಸಹಿತ ಈ ನಿರಾಶ್ರಿತರ ತಂಡವನ್ನು ನೋಡಿ ಪಂಜಾಬಿನ ಹೃದಯಭೇದಕ ಪರಿಸ್ಥಿತಿಯ ವಿಚಾರದಲ್ಲಿ ಭಯಗೊಂಡಿದ್ದಾರೆ ಎಂಬುದಾಗಿ ಕಣ್ಣೀರಿಡುತ್ತ ಹೇಳಿದ್ದಾರೆ

ಈ ಮೇಲ್ಕಂಡ ವಿಷಯವನ್ನು ಓದಿನೋಡಿದರೆ ಪ್ರತಿಯೊಬ್ಬ ಸತ್ಪುರುಷನಿಗೂ, ಕಣ್ಣೀರು ಬಾರದೆ ಇರದು ಈ ರೀತಿ ತಮ್ಮ ಪ್ರಾಣರಕ್ಷಣೆಗಾಗಿ ಕೊರೂಪಾಯಿ ಬೆಲೆಬಾಳುವ ತಮ್ಮ ಆಸ್ತಿಪಾಸ್ತಿಗೆ ಬಿಟ್ಟು ದಿಕ್ಕು ತೋಚದ ಭಾರತಕ್ಕೆ ಬರುತ್ತಿರು ಶ್ರಿತರ ಬಗ್ಗೆ ಸರ್ವರೂ ದಯೆತೋರಿಸಬೇಕಾಗಿ

ಈಗ ಕಾಂಗ್ರೆಸ್ ನಾಯಕರೆಲ್ಲರೂ ಜೈಲಿನಿಂ ಗಡೆಯಾಗಿದ್ದಾರೆ ಪಂಜಾಬಿನ ಘೋರದೃಶ್ಯ ಅವರಿಗೆ ಈಗ ಮನದಟ್ಟಾಗಿರಬಹುದಲ್ಲದೆ ಹೃದಯವೂ ಸಹ ತಲ್ಲಣಿಸಿಹೋಗಿರಬಹುದು ರಿಂದ ಕಾಂಗ್ರೆಸ್ಸಿನವರು ಈ ವಿಷಯವನ್ನು ಪೂ ಸ್ಸಿನಮೇಲೆ ತೆಗೆದುಕೊಂಡು ತಮ್ಮ ಚಳವ ನಿಲ್ಲಿಸಿ ಪಂಜಾಬಿನ ನಿರಾಶ್ರಿತರ ರಕ್ಷಣೆಯ ಬಗ್ಗೆ ಸರ್ವಶಕ್ತಿಯನ್ನೂ ಉಪಯೋಗಿಸಬೇಕು

ಉದಯಪುರ ಜೋಧಪುರ ಭರತಪುರ, ಪಾಟಿಯಾಲ ಮೊದಲಾದ ಸಂಸ್ಥಾನಗಳು ಪ ನಿರಾಶ್ರಿತರಿಗೆ ವಿಶೇಷವಾದ ಆಶ್ರಯವನ್ನು ವಾಗ ಹಿಂದೂಸಂಸ್ಥಾನಗಳಲ್ಲೆಲ್ಲಾ ಅತ್ಯಂತ ದೆ ಗಿರುವ ಮೈಸೂರು ಸಂಸ್ಥಾನವು ಈವರೆಗೂ ಆ ವನ್ನೇ ಪ್ರಸ್ತಾಪಿಸದಿರುವುದು ವ್ಯಸನಕರವಾಗಿದೆ ಈಗ ಮೈಸೂರು ದೇಶದಲ್ಲಿ ಪ್ರಾರಂಭವಾಗಿರು ಗ್ರಹ ಚಳುವಳಿಯೇ ಮೂಲಕಾರಣವೆಂಬ ವಿ ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ತಿಳಿಯುವಂತಿದೆ ರಿಂದ ಕಾಂಗ್ರೆಸ್ಸಿನವರು ತಮ್ಮ ಚಳವಳಿಯನ್ನು ಸರ್ಕಾರದೊಡನೆ ಸಹಕರಿಸಿ ಮದ್ರಾಸ್, ಬೊ ಪ್ರಾಂತದವರಂತೆ ಮೈಸೂರು ದೇಶದಲ್ಲಿಯೂ, ರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗಿ ಕೃಪೆಗೂ ಮಹಾಜನಗಳ ಪ್ರೇಮಕ್ಕೂ ಪಾತ್ರರಾ ದಾಶಿಸುತ್ತೇವೆ

ವರ್ತಮಾನ ಸಂಗ್ರಹ

ನಿರಾಶ್ರಿತರ ವರ್ಗಾವಣೆ ಬೇಗ ಆಗಬೇಕು

ಸರ್ದಾರ್ ಪಟೇಲರ ಮನವಿ

ಹಿಂದು, ಮುಸ್ಲಿಂ, ಮತ್ತು ಸಿಖ್ ನಿರಾಶ್ರಿತರನ್ನು ಹಿಂದೂಸ್ಥಾನದಿಂದ ಪಾಕಿಸ್ಥಾನಕ್ಕೂ ಪಾಕಿಸ್ಥಾನದಿಂದ ಹಿಂದೂಸ್ಥಾನಕ್ಕೂ ವರ್ಗಾಯಿಸುವ ವಿಚಾರವನ್ನು ಪರಿಶೀಲಿಸಲು ಸರ್ದಾರ್ ಪಟೇಲ್ ರವರು ಒಂದು ಸಮ್ಮೇಳನವನ್ನು ನಡೆಯಿಸಿದರು ನಿರಾಶ್ರಿತರು ಪ್ರಯಾಣ ಮಾಡುವ ರೈಲು ಗಾಡಿಗಳ ರಕ್ಷಣೆ ಮತ್ತು ಅವರ ಪುನರ್ವಸತಿ ಬಗ್ಗೆ ಸಮಾಲೋಚನೆ ನಡೆಯಿತು ಪಾಕಿಸ್ಥಾನಕ್ಕೆ ಹೋಗಲಿರುವ ಮುಸ್ಲಿಂ ನಿರಾಶ್ರಿತರಿಗೆ ಸೌಕರ್ಯಗಳನ್ನು ಕಲ್ಪಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ತೀರ್ಮಾನವಾಯಿತು

ಚಳಿಗಾಲ ಸಮೀಪಿಸುತ್ತಿರುವುದರಿಂದ ಈ ವರ್ಗಾವಣೆ ಬೇಗ ಬೇಗ ನಡೆಯಬೇಕೆಂಬ ಅಂಶವನ್ನು ಸರ್ದಾರ್ ಪಟೇಲರು ತಿಳಿಸಿದರು ಈ ತಿಂಗಳ ಕೊನೆಯೊಳಗಾಗಿ ಮುಕ್ಕಾಲು ಪಾಲು ಜನರ ವರ್ಗಾವಣೆ ಅಗತ್ಯವೆಂದು ಅವರು ತಿಳಿಸಿದರು.

ತಮ್ಮ ತಮ್ಮ ಸಂಸ್ಥಾನಗಳ ಪ್ರದೇಶದಲ್ಲಿ ರೈಲು ರಸ್ತೆಯ ರಕ್ಷಣೆ ಬಗ್ಗೆ ತಾವು ಜವಾಬ್ದಾರಿಯನ್ನು ತೆಗೆದುಕೊಳ್ಳಲು ನಾನಾಸಂಸ್ಥಾನಾಧೀಶರು ಒಪ್ಪಿಕೊಂಡರು. ಅಲ್ಲದೆ ನಿರಾಶ್ರಿತರ ಪುನರ್ವಸತಿಗೂ ಸಹ ವ್ಯವಸ್ಥೆ ಸಲು ಅವರು ಒಪ್ಪಿಕೊಂಡರು ಈ ಸಮ್ಮೇಳನಕ್ಕೆ ಪಾಟಿಯಾಲಾ, ಭರತಪುರ, ಅಳ್ವಾರ್ ಸಂಸ್ಥಾನಗಳ ರಾಜರೂ, ಜೈಪುರದ ಪ್ರಧಾನ ಮಂತ್ರಿಗಳೂ, ಬಿಕಾನೀರ್ ಫರೀದ್ ಕೋಟೆ, ಕಪೂರ್ಥಲಾ ಸಂಸ್ಥಾನಗಳ ಪ್ರತಿನಿಧಿಗಳೂ ಸಂಯುಕ್ತ ಪ್ರಾಂತ ಮತ್ತು ಪೂರ್ವ ಪಂಜಾಬಿನ ಪ್ರಧಾನ ಮಂತ್ರಿಗಳೂ ಬಂದಿದ್ದರು

ನಿರಾಶ್ರಿತರ ವರ್ಗಾವಣೆ ಬಗ್ಗೆ ಅಧಿಕೃತ ಹೇಳಿಕೆ

ಪೂರ್ವ ಮತ್ತು ಪಶ್ಚಿಮ ಪಂಜಾಬು ಪ್ರಾಂತಗಳ

ಹಿಸ್ಸಾರ್ ಮತ್ತು ರಿವಾರಿ ಈ ಎರಡು ಪ್ರದೇಶಗಳಲ್ಲಿ ಮಾತ್ರ ದುರ್ಘಟನೆಗಳು ವರದಿಯಾಗಿವೆ ರಿವಾರಿಯಲ್ಲಿ ಎರಡು ಗುಂಪುಗಳನ್ನು ಚದುರಿಸುವಾಗ ಹಲವರಿಗೆ ಗಾಯಗಳಾದುವು ಶುಕ್ರವಾರ ಒಂದು ಬಾಂಬು ಸಿಡಿತದಿಂದ ಹಲವರು ಗಾಯಗೊಂಡರು ಅಪಹರಿಸಲ್ಪಟ್ಟಿದ್ದ ಒಬ್ಬ ಸ್ತ್ರೀ ವಿಷಯವಾಗಿ ಜಗಳವಾಡುತ್ತಿದ್ದ ಒಂದು ಜನರ ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು ಈ ಸಂದರ್ಭದಲ್ಲಿ ೧೮ ಜನರನ್ನು ದಸ್ತಗಿರಿ ಮಾಡಲಾಯಿತು

ಹಿಸ್ಸಾರಿನಲ್ಲಿ ಶಸ್ತ್ರಸಜ್ಜಿತರಾದ ಜನರ ಎರಡು ಗುಂಪುಗಳ ಘರ್ಷಣೆಯ ಫಲವಾಗಿ ಸೈನಿಕರು ಗುಂಡು ಹಾರಿಸಬೇಕಾಯಿತು ಇದರಿಂದ ೪೦ ಜನರು ಮೃತರಾದರು ಅನೇಕರಿಗೆ ಗಾಯಗಳಾಗಿವೆ ೪ ಜನ ಪೋಲೀಸರು ಗಾಯಗೊಂಡಿರುತ್ತಾರೆ ಪಾಕಿಸ್ಥಾನದಿಂದ ಬಂದ ಸುದ್ದಿಯ ಪ್ರಕಾರ ಸೌರಾಂಗ್ ಸೆರಾಯಿಯಿಂದ ಪ್ರಯಾಣ ಮಾಡುತ್ತಿದ್ದ ಮೂವರು ಹಿಂದೂ ಮತ್ತು ಸಿಖ್ಖ ಪ್ರಯಾಣಿಕರ ಮೇಲೆ ಜನರ ಗುಂಪೊಂದು ದಾಳಿ ನಡೆಸಿತು

ಆಹಾರದ ಅಭಾವದ ಬಗ್ಗೆ ಗಾಂಧಿಯವರ ಹೇಳಿಕೆ

“ ನಮ್ಮ ಆಹಾರ ಸಮಸ್ಯೆಯ ವಿಷಯಗಳನ್ನೆಲ್ಲ ಸಂಪೂರ್ಣವಾಗಿ ತಿಳಿದಿರಬೇಕಾದವರೆಲ್ಲ ಡಾ|| ರಾಜೇಂದ್ರ ಪ್ರಸಾದರ ಆಹ್ವಾನದಂತೆ ದೆಹಲಿಯಲ್ಲಿ ನೆರೆದಿದ್ದಾರೆ. ಈ

ಬಹು ಮುಖ್ಯವಾದ ಸಮಸ್ಯೆಯ ವಿಚಾರದಲ್ಲಿ ತಪ್ಪನ್ನೇನಾದರೂ ಮಾಡಿದರೆ, ನಿವಾರಣೆ ಮಾಡಲು ಶಕ್ಯವಿದ್ದರೂ ಲಕ್ಷಾಂತರ ಮಂದಿಯು ಸಾವಿಗೆ ಎಡೆಗೊಟ್ಟಂತಾಗುವುದು. ನಾವು ಶಕ್ಯಮಟ್ಟಿಗೆ ಫಲಕಾರಿಯಾದ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಬಹುದೆಂಬ ನಂಬಿಕೆ ನನಗಿದೆ ನಾವು ಕಲಿಯಬೇಕಾದ ಮೊದಲು ಪಾಠವೆಂದರೆ, ಸ್ವಸಹಾಯ ಮತ್ತು ಆತ್ಮ ವಿಶ್ವಾಸ ಡಾ|| ರಾಜೇಂದ್ರ ಪ್ರಸಾದರು ಕರೆದಿರುವ ಸಮಿತಿಯು ಆಹಾರ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಕಾರ್ಯ ಕಾರಿಯಾದ ಮಾರ್ಗವೊಂದನ್ನು ಕಂಡುಹಿಡಿಯದೆ ಚದುರುವುದಿಲ್ಲವೆಂದು ನಂಬಿದ್ದೇನೆ ಎಂಬುದಾಗಿ ಗಾಂಧೀಜಿಯವರು ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು

“ ಈ ಪಾಠವನ್ನು ನಾವು ರಕ್ತಗತ ಮಾಡಿಕೊಂಡರೆ, ಪರರಾಷ್ಟ್ರಗಳನ್ನು ನಂಬುವುದನ್ನು ತ್ಯಜಿಸುವೆವು ೪೦ ಕೋಟಿ ಪ್ರಜಾ ಸಂಖ್ಯೆಯ ಜನಾಂಗ ನಮ್ಮದು ನಮ್ಮ ದೇಶದಲ್ಲಿ ದೊಡ್ಡ ನದಿಗಳಿವೆ ಫಲವತ್ತಾದ ಭೂಮಿ ಅಪಾರವಾಗಿದೆ ಪಶು ಸಂಪತ್ತಿಗೆ ಕೊರತೆ ಇಲ್ಲ ನಮಗೆ ಬೇಕಾದಷ್ಟು ಹಾಲು ನಮ್ಮ ಪಶುಗಳಿಂದಲೇ ದೊರೆಯುತ್ತದೆ ವಿದೇಶೀ ರಾಷ್ಟ್ರವೊಂದು ಸ್ವಬುದ್ಧಿಯಿಂದ ಆಹಾರ ನೀಡಿದರೆ ನಾವು ತ್ಯಜಿಸುವುದು ಬೇಡ ಆದರೆ, ನಾವು ಭಿಕ್ಷಾಟನೆಗೆ ಹೊರಡದೆ ಇರೋಣ ನಾವು ಹೀಗೆ ಮಾಡಿದರೆ ನಮ್ಮ ನೈತಿಕ ಪತನವಾದಂತೆಯೆ !

ನಮ್ಮ ಈಗಿನ ಆವಶ್ಯಕತೆಯಲ್ಲಿ ಶೇಕಡಾ ಮೂರರಷ್ಟನ್ನು ಮಾತ್ರ ಹೊರದೇಶಗಳಿಂದ ನಿರೀಕ್ಷಿಸಬಹುದಂತೆ! ಈ ವರದಿ ನಿಜವಿದ್ದರೆ ಹೊರಗಿನವರನ್ನು ನಂಬುವುದು ನಿಷ್ಫಲ ! ನಾವು ಹೊರಗಿನ ಸಹಾಯವನ್ನು ನಂಬಿರುವವರೆಗೆ, ನಮ್ಮ ದೇಶದಲ್ಲೇ ಹೆಚ್ಚು ಆಹಾರ ಬೆಳೆಯುವ ಪ್ರಯತ್ನಕ್ಕೆ ನಮ್ಮ ಪೂರ್ಣ ಗಮನ ದೊರೆಯದಿರುವ ಸಂಭವವಿದೆ ಪ್ರತಿ ಅಂಗ ಲದಲ್ಲೂ ಆಹಾರದ ಬೆಳೆ ಬೆಳೆಯಬೇಕು. ಬೀಳು ಬಿದ್ದಿರುವ ಜಮೀನುಗಳನ್ನೆಲ್ಲಾ ವ್ಯವಸಾಯಕ್ಕೆ ರೂಢಿಸಿಕೊಳ್ಳಬೇಕು ಆಹಾರ ವಸ್ತುಗಳ ಕೇಂದ್ರೀಕರಣ ವಿನಾಶಕಾರಿಯಾದುದೆಂದು ನಾನು ಭಾವಿಸುತ್ತೇನೆ

ಆಹಾರ ವಿಕೇಂದ್ರೀಕರಣದಿಂದ ಕಳ್ಳ ವ್ಯಾಪಾರಕ್ಕೆ ಪೆಟ್ಟು ಹಾಕಿದಂತಾಗುವುದು ಅಲ್ಲದೆ, ಸಾಗಿಸುವ ವೆಚ್ಚವು ಸಹ ಉಳಿಯುವುದು ಇದಲ್ಲದೆ ಕಾಳು, ಧಾನ್ಯ ಮುಂತಾದುವುಗಳನ್ನು ಹೇಗೆ ರಕ್ಷಿಸಬೇಕೆಂಬುದು ರೈತರಿಗೆ ಚೆನ್ನಾಗಿ ಗೊತ್ತು ಅವುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದರಿಂದ ಕೆಟ್ಟುಹೋಗುತ್ತದೆ ಪ್ರತಿ ಭಾರತೀಯನೂ ಸಾಧ್ಯವಿರುವ ಕಡೆಗಳಲ್ಲೆಲ್ಲ ಆಹಾರ ಬೆಳೆಯುವುದಾದರೆ, ಆಹಾರದ ಅಭಾವವೇ ತೋರದಾಗುವುದು ಭಾರತೀಯರೆಲ್ಲ ಆಹಾರ ಒಳಕೆಯಲ್ಲಿ ಕೊಂಚಮಟ್ಟಿಗೆ ತ್ಯಾಗ ತೋರಿಸಿದರೆ, ಹೊರಗಿನಿಂದ ಆಹಾರ ಬರದಿದ್ದರೂ ನಾವು ಕಾಲ ಕಳೆಯಬಹುದು ’ ಎಂದು ಹೇಳಿರುವರು

ವಿದ್ಯಾರ್ಥಿಗಳಿಗೂ ಪೋಲಿಸರಿಗೂ ಭಯಂಕರ ಹೊಡೆದಾಟ

ಲಕ್ನೋ ವಿಶ್ವವಿದ್ಯಾನಿಲಯದ ಶಿಕ್ಷಣ ಶುಲ್ಕವು ಬಹಳ ಹೆಚ್ಚಾಗಿರುವುದರಿಂದ ಅದನ್ನು ಕಡಮೆ ಮಾಡಬೇಕೆಂದು ವಿದ್ಯಾರ್ಥಿಗಳು ವಿದ್ಯಾಮಂತ್ರಿಗಳ ಮನೆಯ ಮುಂದೆ ಪಿಕೆಟಿಂಗ್ ನಡೆಸಿದ ವಿಷಯವನ್ನು ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವುದು ಸರಿಯಷ್ಟೆ ಆ ಬಗ್ಗೆ ಇತ್ತೀಚೆಗೆ ಹೆಚ್ಚು ವಿಷಯಗಳು ತಿಳಿದುಬಂದಿವೆ ಗೋರಖ್‌ಪುರದಲ್ಲಿ ಪೋಲಿಸರು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದರೆಂದೂ, ಈ ವಿಷಯವು ಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ತಿಳಿದಕೂಡಲೆ ಸಾವಿರಾರು ಜನ ವಿದ್ಯಾರ್ಥಿಗಳು ಕೋಪಾವಿಷ್ಟರಾಗಿ, ಅಸೆಂಬ್ಲಿ ಭವನದ ಮುಂದೆ ಪ್ರದರ್ಶನ ನಡೆಸಿದರೆಂದೂ, ಅಗ್ಗೆ ಪೋಲೀಸರು ಲಾಠಿ ಪ್ರಹಾರಮಾಡಿದರೆಂದೂ, ಬಳಿಕ ಕೋಪಗೊಂಡ ವಿದ್ಯಾರ್ಥಿಗಳು ವಿದ್ಯಾಮಂತ್ರಿಗಳ ಮನೆಯ ಮುಂದೆ ಹೋಗಿ, ಆ ಮನೆಯ ಕಿಟಕಿಯ ಗಾಜು, ಟೇಬಲ್, ಕುರ್ಚಿ ಮೊದಲಾದವುಗಳನ್ನು ಮುರಿದುಹಾಕಿದರೆಂದೂ ‘ ಠಾಕೂರ್ ಹುಕುಂಸಿಂಹ ’ ಎಂಬ ಇನ್ನೊಬ್ಬ ಮಂತ್ರಿಗಳ ಮೋಟಾರಿನ ಮೇಲೆ ಬಿದ್ದು, ಮೋಟಾರಿನ ಗಾಜನ್ನು ಚೂರು ಚೂರು ಮಾಡಿದರೆಂದೂ, ಈ ಸಂದರ್ಭದಲ್ಲಿ ೩೦ ಜನ ವಿದ್ಯಾರ್ಥಿಗಳು ಗಾಯಗೊಂಡರೆಂದೂ, ೩ ಜನ ವಿದ್ಯಾರ್ಥಿಗಳ ಸ್ಥಿತಿ ಚಿಂತಾಜನಕವಾಗಿದೆಯೆಂದೂ, ೧೮ ಜನ ಪೋಲೀಸರಿಗೂ, ಒಬ್ಬ ಇನ್ಸಪೆಕ್ಟರಿಗೂ ಇಬ್ಬರು ಠಾಣೇದಾರರಿಗೂ, ಗಾಯಗಳಾಗಿರುವುವೆಂದೂ, ತಿಳಿದುಬರುತ್ತದೆ ಅನೇಕ ಜನ ವಿದ್ಯಾರ್ಥಿಗಳನ್ನು ಜೈಲಿನಲ್ಲಿಡಲಾಗಿದೆ ಮೈಸೂರು ದೇಶದಲ್ಲಿ ಆಂದೋಲನವನ್ನೆಬ್ಬಿಸಿರುವ ಮೈಸೂರಿನ ವಿದ್ಯಾರ್ಥಿಗಳು ಈ ವಿಷಯವನ್ನು ಪೂರ್ಣವಾಗಿ ಆಲೋಚಿಸಿ ಚಳುವಳಿಯಿಂದ ದೂರಾದರೆ ದೇಶಕ್ಕೆ ಕ್ಷೇಮವಲ್ಲವೇ ?

ಮದರಾಸ್ ಮಂತ್ರಿಗಳಿಗೆ ಕೊಳೆತ ಮೊಟ್ಟೆ ಏಟು

ಮದರಾಸ್ ಸರ್ಕಾರದ ಆಹಾರ ಮಂತ್ರಿಗಳಾದ ಡಾ|| ಟಿ ಎಸ್ ಎಸ್ ರಾಜನ್‌ರವರು ದೆಹಲಿಯಿಂದ ಮೊನ್ನೆ ಮದರಾಸಿಗೆ ಹಿಂದಿರುಗುತ್ತಿದ್ದಾಗ ಟ್ರೈನು ಬೆಜವಾಡ ಸ್ಟೇಷನ್ನಿಗೆ ಬಂದಕೂಡಲೆ ಒಂದು ಭಾರಿ ಗುಂಪು ಅವರು ಕೂತಿದ್ದ ಗಾಡಿಯ ಬಳಿಗೆ ನುಗ್ಗಿ ಗಲಾಟೆಮಾಡಿ ಅವರನ್ನು ಕೆಳಕ್ಕಿಳಿಸಿತು ಆ ಜಿಲ್ಲೆಯ ಒಂದು ಗ್ರಾಮದಲ್ಲಿ ಹೊಟ್ಟೆಗಿಲ್ಲದೆ ಅನೇಕ ಜನರು ಸತ್ತಿರುವರೆಂದೂ ಇದಕ್ಕೆ ಕಾರಣ ಆ ಊರಿನ ಜನರ ಯೋಗಕ್ಷೇಮವನ್ನು ನೋಡದೆ ದವಸವನ್ನೆಲ್ಲಾ ಆಹಾರ ಶಾಖೆಯವರು ಕೊಂಡೊಯ್ದುದರೆಂದೂ ಆದ್ದರಿಂದ ನೀವು ಸ್ವತಃ ನೋಡಲು ತಮ್ಮ ಜೊತೆಯಲ್ಲೇ ಬರಬೇಕೆಂದೂ ಆ ಗುಂಪಿನ ಜನ ಒತ್ತಾಯಪಡಿಸಿದರು ಮದರಾಸಿಗೆ ಹೋಗಿ ಅನಂತರ ಬರುವುದಾಗಿ ಎಷ್ಟು ಹೇಳಿದರೂ ಜನಗಳು ಕೇಳದೆ ಬೈದು, ಕೊಳೆತ ಮೊಟ್ಟೆಗಳಿಂದ ಅವರನ್ನೂ ಅವರ ಕಾರ್ಯದರ್ಶಿಯನ್ನೂ ಹೊಡೆಯ ಲಾರಂಭಿಸಿದರು ಅಷ್ಟು ಹೊತ್ತಿಗೆ ರಿಸರ್ವ್ ಪೋಲೀಸಿನವರು ಬರಲು ಜನರೆಲ್ಲಾ ಹೊರಟುಹೋದರು ಅನಂತರ ಟ್ರೈನು ಮದರಾಸಿಗೆ ಹೊರಟಿತು

ಬ್ರಿಟನ್ನಿನಿಂದ ಪಾಕಿಸ್ತಾನಕ್ಕೆ ಆಯುಧಗಳ ರವಾನೆ

ಬ್ರಿಟನ್ನು ಕರಾಚಿಯಲ್ಲಿರುವ ವ್ಯಾಪಾರಿಗಳ ಹೆಸರಿನ ಮೇಲೆ ಸುಮಾರು ೩೦೦೦ ಆಯುಧಗಳನ್ನು ಈವರೆಗೆ ಕಳುಹಿಸಿರುವುದೆಂದೂ ಇದರಲ್ಲಿ ಕೆಲವು ಆಯುಧಗಳು ಹೈದರಾಬಾದಿನ ವ್ಯಾಪಾರಿಗಳಿಗೆ ದೊರಕಿರುವುವೆಂದೂ ಪೆಟ್ಟಿಗೆಗಳ ಮೇಲೆ ‘ ಹಳೆ ಕಬ್ಬಿಣದ ತುಂಡು ” ಎಂದು ಬರೆದಿರುವುದೆಂದೂ, ಲಂಡನ್ನಿನಲ್ಲಿರುವ ಹಿಂದೂಸ್ಥಾನ್ ಸ್ಟ್ಯಾಂಡರ್ಡ್ ಪತ್ರಿಕೆಯ ಪ್ರತಿನಿಧಿಯು ಪ್ರಕಟಿಸಿದ್ದಾನೆ

ವೃತ್ತ ಪತ್ರಿಕೆಗಳನ್ನು ಮಾರುವ ವಿಚಿತ್ರ ಯಂತ್ರ

ರಷ್ಯಾದೇಶದಲ್ಲಿ ‘ ಗ್ರಿನೋಗಾಡೊ ’ ಎಂಬ ಪ್ರಸಿದ್ಧ ವೈಜ್ಞಾನಿಕನು ವೃತ್ತಪತ್ರಿಕೆಗಳನ್ನು ಮಾರುವುದಕ್ಕೋಸ್ಕರ ಹೊಸದಾಗಿ ಒಂದು ವಿಚಿತ್ರಯಂತ್ರವನ್ನು ನಿರ್ಮಿಸಿದ್ದಾನೆ. ಆ ಯಂತ್ರವು ಯಾರ ಸಹಾಯವಿಲ್ಲದೆಯೇ ವೃತ್ತಪತ್ರಿಕೆಗಳನ್ನು ಓದುವುದಲ್ಲದೆ ಅದರಲ್ಲಿರುವ ವರ್ತಮಾನಗಳನ್ನು ಪ್ರಚಾರಮಾಡುತ್ತಿರುವುದು. ಯಾರಾದರೂ ವೃತ್ತ ಪತ್ರಿಕೆಗೆ ಇಟ್ಟಿರುವ ಬೆಲೆಗಿಂತ ಹೆಚ್ಚು ದುಡ್ಡನ್ನು ಕೊಟ್ಟರೆ ಕೂಡಲೇ ಹೆಚ್ಚಾದ ದುಡ್ಡನ್ನು ತಿರುಗಿ ಕೊಡುವುದಂತೆ !

ವಿಚಿತ್ರವಾದ ರೈಲ್ವೆ ಇಂಜನ್ನು

ಲಂಡನ್ನಿನಲ್ಲಿ ಒಂದು ವಿಚಿತ್ರವಾದ ವಿದ್ಯುಚ್ಛಕ್ತಿಯ ಇಂಜನ್ನನ್ನು ತಯಾರಿಸಲಾಗಿದೆ ಈ ಯಂತ್ರವು ಮನುಷ್ಯನು ಹೇಗೆ ಆಜ್ಞೆಯನ್ನು ಪಾಲಿಸುವನೋ ಹಾಗೆಯೇ ಆಜ್ಞೆಯನ್ನು ಪಾಲಿಸುವುದು ವೇಗವಾಗಿ ಹೋಗುವ ಸಮಯದಲ್ಲಿ ನಿಲ್ಲು ಎಂದು ಹೇಳಿದರೆ ನಿಲ್ಲುವುದಂತೆ ! ‘ ಹಿಂದಕ್ಕೆ ಸರಿ ’ ಎಂದು ಹೇಳಿದರೆ ಸರಿಯುವುದಂತೆ !

ಪ್ರಕಟಣೆ

ಈ ಮೂಲಕ ಸಮಸ್ತ ವೀರಶೈವ ಮಂಡಲಿಗೆ ತಿಳಿಯಪಡಿಸುವುದೇನೆಂದರೆ ಶ್ರೀರಂಭಾಪುರೀ ಪೀಠದ ಶಿವೈಕ್ಯ ಜಗದ್ಗುರುಗಳವರು ತಮ್ಮ ಶರೀರದ ಅಸ್ವಸ್ಥತೆಯಿಂದ ಸರ್ಕೀಟನ್ನು ನಿಲ್ಲಿಸಿದ್ದ ವಿಷಯವೂ, ಅವರ ಸರ್ಕೀಟಿನಲ್ಲಿದ್ದ, ಅನೇಕ ಜನ ನೌಕರರು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿರುವ ವಿಷಯವೂ, ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ನೂತನ ಜಗದ್ಗುರುಗಳವರು ಎಡೆಯೂರಲ್ಲಿರುವ ತಮ್ಮ ಖಾಸಾಮಠದಲ್ಲಿ ಈಗ ೩ ತಿಂಗಳಿಂದಲೂ ಮೊಕ್ಕಾಂ ಮಾಡಿರುವರು. ಶಿವೈಕ್ಯ ಜಗದ್ಗುರುಗಳವರ ಕಾಲದಲ್ಲಿ ಶ್ರೀರಂಭಾಪುರೀಪೀಠದ ಜೀರ್ಣೋದ್ಧಾರಕ್ಕಾಗಿ ಅನೇಕ ಜನರು ವಾಗ್ದಾನ ಮಾಡಿದ್ದು ಅವರಲ್ಲಿ ಕೆಲವರು ಅವರಿದ್ದಾಗಲೇ ತಮ್ಮ ವಾಗ್ದಾನದ ಹಣವನ್ನು ಸಮರ್ಪಿಸಿದ್ದಾರೆ. ಇನ್ನು ಕೆಲವರು ಸಮರ್ಪಿಸಿರುವುದಿಲ್ಲ ಈ ವಿಷಯವನ್ನು ತಿಳಿದು ಕೆಲಜನ ಮೋಸಗಾರರು ಹಣವನ್ನು ಕೊಡದೆ ಇರುವ ಜನರಲ್ಲಿ ಹೋಗಿ ನೂತನ ಜಗದ್ಗುರುಗಳು ಪೀಠದ ಕಟ್ಟಡವನ್ನು ಮುಂದುವರಿಸಿದ್ದಾರೆ ನಮ್ಮನ್ನು ಹಣ ವಸೂಲಿಗಾಗಿ ಕಳುಹಿಸಿದ್ದಾರೆ ಇತ್ಯಾದಿ ಸುಳ್ಳು ಹೇಳಿ ಅಲ್ಲಲ್ಲಿ ಹಣವನ್ನು ವಸೂಲಿ ಮಾಡುತ್ತಿದ್ದಾರೆಂದು ತಿಳಿದುಬಂದಿದೆ ಮಹಾ ಸಂಸ್ಥಾನದವತಿಯಿಂದ ಯಾರನ್ನೂ ಹಣದ ವಸೂಲಿಗಾಗಿ ಕಳುಹಿಸಿಕೊಟ್ಟಿಲ್ಲ ಆದುದರಿಂದ ಪೀಠಾಭಿಮಾನಿಗಳು ಮೋಸಗಾರರ ಮಾತಿಗೆ ಮರುಳಾಗಿ ಅವರ ಕೈಯ್ಯಲ್ಲಿ ಹಣವನ್ನು ಕೊಡಬಾರದು ಆ ರೀತಿ ಯಾರಾದರೂ ಬಂದಿದ್ದಾದರೆ ಅವರ ಹೆಸರು, ಗ್ರಾಮ, ಮೊದಲಾದವುಗಳನ್ನು ಅವರಿಂದ ತಿಳಿದು ಕೂಡಲೇ ಎಡೆಯೂರು ಮೊಕ್ಕಾಮಿಗೆ ತಿಳಿಸಬೇಕು ಯಾರೂ ಮೋಸಗಾರರ ಮಾತುಗಳಿಗೆ ಬಲಿಬೀಳಬಾರದೆಂದು ಈ ಮೂಲಕ ತಿಳಿಯಪಡಿಸಿದೆ

ಏಜೆಂಟ್, ಶ್ರೀಜಗದ್ಗುರು ಬಾಳೇಹೊನ್ನೂರುಮಠ
ಮೊಕ್ಕಾಂ ಎಡೆಯೂರು
ತಾ|| ಕುಣಿಗಲ್ ಡಿ|| ತುಮಕೂರು.

ಶಿವೈಕ್ಯಸಮಾರಾಧನೆ

ನಿಜಾಂ ಇಲಾಖಾ ಕೊಪ್ಪಳ ತಾ|| ಗೊಂಡಬಾಳ ಗ್ರಾಮದ ವೇ|| ಸಾಲೀಮಠದ ಗುರಯ್ಯನವರು ಕಳೆದ ಜ್ಯೇಷ್ಠ ಶು|| ಸಪ್ತಮಿ ಸೋಮವಾರ ದಿವಸ ಶಿವಾಧೀನರಾದರೆಂಬ ವಿಷಯವನ್ನು ಒರೆಯಲು ಅತ್ಯಂತ ವಿಷಾದವೆನಿಸುತ್ತದೆ ಇವರು ಒಳ್ಳೇ ಗುರುಪೀಠಾಭಿಮಾನಿಗಳಾಗಿದ್ದರಲ್ಲದೆ ಶಿವಪೂಜಾನಿಷ್ಠರೂ, ಶಾಂತಸ್ವಭಾವದವರೂ ಆಗಿದ್ದರು ಇವರು ಯಾವಾಗಲೂ ಪಂಚಾಚಾರ್ಯ ಪ್ರಭಾಪತ್ರಿಕೆಯಲ್ಲಿ ಬರುವ ಅಮೂಲ್ಯ ವಿಷಯಗಳನ್ನು ಭಕ್ತಮಂಡಲಿಗೆ ಬೋಧಿಸುತ್ತಿದ್ದರು ಗುರುವರ್ಗದ ಅಭಿಮಾನವು ಇವರಲ್ಲಿ ಮನೆಮಾಡಿಕೊಂಡಿತ್ತು ಇಂತಹ ಮಹಾವ್ಯಕ್ತಿಯು ಇಹಲೋಕದಿಂದ ತೆರಳಿದುದು ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ ಇವರ ಅಳಿಯಂದಿರಾದ ಬನ್ನಿಕೊಪ್ಪ ಹಿರೇಮಠದ ವೇ|| ಶಿವಯ್ಯನವರು ಹೆಡ್‌ಮಾಸ್ಟರ್ ಕಾತರಕಿ ಇವರು ತಮ್ಮ ಗೊಂಡಬಾಳ ಸಾಲೀಮಠದಲ್ಲಿ ಇದೇ ನಿಜಶ್ರಾವಣ ಬ| ೧೨ ದಿವಸ ಕೈವಲ್ಯಪ್ರಾಪ್ತಿಗಾಗಿ ಗಣಾರಾಧನೆಯನ್ನು ನೆರವೇರಿಸಿದರು ಶ್ರೀಪರಮೇಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಬಸವಯ್ಯ ಹಿರೇಮಠ, ವೀರಾಪುರ.

ಸ್ವೀಕಾರ

ನಿಜಾಂ ಇಲಾಖಾ ಕೊಪ್ಪಳ ತಾ|| ಗೊಂಡಬಾಳ ಗ್ರಾಮದ ವೇ|| ಸಾಲೀಮಠದ ಗುರಯ್ಯನವರು ಶಿವಾಧೀನರಾದ ನಿಮಿತ್ತ ನೆರವೇರಿದ ಗಣಾರಾಧನಾ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ವೇ|| ಬನ್ನಿಕೊಪ್ಪ ಹಿರೇಮಠದ ಶಿವಯ್ಯನವರ ದ್ವಾರಾ ತಲುಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೮
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೨—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೮
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೮
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೨—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾತ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ..	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು ..	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ ..	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ..	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ..	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी) ..	१ रु.
महानारायणोपनिषत् (वीरशैवभाष्य-संस्कृत)	१ रु.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಕಟ್ಟೋಡಿಯನ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ರೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಅಕ್ಟೋಬರ್ ೧೯೪೭ [ಸಂಚಿಕೆ ೨೬

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ದಸರಾಮಹೋತ್ಸವ ಸಮಾರಂಭ
ಯಡೆಯೂರು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ್ರಸನ್ನ ರೇಣುಕ ಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಖಾಸಾ ಯಡೆಯೂರು ಮಠದಲ್ಲಿ ಆರಂಭಿಸಿದ್ದ ಉಭಯ ಶ್ರಾವಣಮಾಸ ಪುಣ್ಯಕಾಲದ ಲಿಂಗಪೂಜಾ ತಪೋನುಷ್ಠಾನ ಮಹಾವ್ರತವನ್ನು ಈ ಭಾದ್ರಪದ ಶುದ್ಧ ೧೦ ಬುಧವಾರ ಪೂರೈಸಿ ಆ ದಿನವೇ ಸಮಾಪ್ತಿಶಾಂತಿ ಮಂಗಲ ಮಹಾಗಣಾರಾಧನೆಯು ಜರುಗಿದ ವಿಷಯವು ಸರ್ವ ಶ್ರುತವಷ್ಟೆ. ಆಶ್ವಯುಜಮಾಸವು ಹತ್ತಿರ ಬಂದುದರಿಂದ ಮಹಾಸಂಸ್ಥಾನದ ದಸರಾ ಮಹೋತ್ಸವವನ್ನು ಅನೇಕ ಗ್ರಾಮಗಳ ಮಠಸ್ಥರು, ಶೆಟ್ಟರು, ಯಜಮಾನರು ಮುಂತಾದವರು ತಮ್ಮ ತಮ್ಮಲ್ಲಿಯೇ ನೆರವೇರಿಸಬೇಕೆಂದು ಸಂಕಲ್ಪಿಸಿ, ಶ್ರೀಜಗದ್ಗುರು ಸನ್ನಿಧಾನದಲ್ಲಿ ಪ್ರಾರ್ಥಿಸಿಕೊಂಡರು. ಸೋಣವಿನಕೆರೆ ಮುಂತಾದ ಗ್ರಾಮಗಳ ಭಕ್ತರು ಕೇವಲ ಪೀಠಾಭಿಮಾನಿಗಳಾಗಿದ್ದು ಹಿಂದೆ ಅನೇಕಸಾರೆ ಮಹಾಪೀಠದ ಸೇವೆಯನ್ನು ಮಾಡಿದವರಾಗಿರುವುದರಿಂದ ಅವರ ಪ್ರಾರ್ಥನೆಯನ್ನು ಮಹಾಸನ್ನಿಧಾನದವರು ಅಂಗೀಕರಿಸಬಹುದಾಗಿತ್ತು. ಆದರೆ ಈ ಯಡೆಯೂರು ಕ್ಷೇತ್ರದ ಸುತ್ತಮುತ್ತಣ ಗ್ರಾಮವಾಸಿಗಳಾದ ಸರ್ವ ಮತೀಯ ಭಗವದ್ಭಕ್ತರು ಈ ವರೆವಿಗೂ ಜಗದ್ಗುರುಗಳವರು ಯಡೆಯೂರಲ್ಲಿ ನಡೆಯಿಸಿದ ಉಭಯ ಶ್ರಾವಣಮಾಸಗಳ ಶಿವಲಿಂಗ ಪೂಜಾ ತಪೋನುಷ್ಠಾನ ಮಹಾವ್ರತಕ್ಕೆ ಭಾಗಿಗಳಾದಂತೆ ಮಹಾನವರಾತ್ರ ಪೂಜಾ ತಪೋನುಷ್ಠಾನ ಮಹಾ ವ್ರತಫಲಕ್ಕೂ ಭಾಗಿಗಳಾಗಬೇಕೆಂಬ ಉತ್ಕಟೇಚ್ಛೆಯಿಂದ ಸಮಸ್ತರೂ ಬಂದು ಪ್ರಾರ್ಥಿಸಿಕೊಂಡದ್ದರಿಂದ ನಮ್ಮ ಪ್ರಾರ್ಥನೆಯನ್ನು ಘನವಾದ ಚಿತ್ತಕ್ಕೆ ತಂದು ಅಪೇಕ್ಷೆ ನೆರವೇರಿಸುವೆವೆಂದು ಅಭಯವನ್ನು ಕೊಟ್ಟದ್ದಕ್ಕಾಗಿ ಜಗದ್ಗುರು ಸನ್ನಿಧಾನಕ್ಕೆ ಯಾವತ್ತೀವವೂ ಋಣಿಗಳಾಗಿರುವೆವು. ಶ್ರೀ ಜಗದ್ಗುರುಗಳವರ ಸರ್ವಜಿನ್ನಾಮ ಸಂವತ್ಸರದ ದಸರಾ ಮಹೋತ್ಸವವು ಯಡೆಯೂರಿನಲ್ಲಿ ಜರುಗುವುದಾಗಿದೆ. ಸಮಸ್ತ ಭಗವದ್ಭಕ್ತರೂ ಗುರುಸೇವೆಯನ್ನು ಮಾಡಿ ಕೃತಾರ್ಥರಾಗಬೇಕಾಗಿದೆ. ಆಶ್ವಯುಜ ಶುದ್ಧ ಪ್ರತಿಪದ (ತಾ॥ ೧೫-೧೦-೧೯೪೭) ಬುಧವಾರದಿಂದ ಕಾರ್ಯವು ಆರಂಭವಾಗುವುದು. ಪ್ರತಿ ದಿವಸ ಪ್ರಾತಃಕಾಲ ಶ್ರೀ ಜಗದ್ಗುರುಗಳವರ ಶಿವಲಿಂಗ ಪೂಜಾ ತಪೋನುಷ್ಠಾನವೂ ವೇದಾಗಮೋಪನಿಷತ್ಪಾರಾಯಣಗಳೂ ಜರುಗುವುವು. ಸಾಯಂಕಾಲ ೭ ಘಂಟೆಯಿಂದ ದರ್ಬಾರು ಮಂಟಪದಲ್ಲಿ ಜಗದ್ಗುರುಗಳವರ ಸಾಲಂಕೃತ ಸುವರ್ಣ ಸಿಂಹಾಸನಾರೋಹಣಾದಿ ಕಾರ್ಯಗಳೂ ಜರುಗುವವು. ೯ ಘಂಟೆಗೆ ಸಭಾವಿಸರ್ಜನವಾಗುವುದು. ಶ್ರೀ ಸಿಂಹಾಸನಾರೋಹಣಾನಂತರ ನಡೆಯುವ ಕಾರ್ಯಕ್ರಮವು ಆಯಾ ದಿವಸ ಪ್ರಕಟಿಸಲಾಗುವುದು. ದರ್ಬಾರಿನಲ್ಲಿ ಪ್ರತಿ ದಿವಸವೂ ಸುಶಿಕ್ಷಿತ ಬೋಧಕರ ಧರ್ಮೋಪದೇಶಗಳೂ, ಕೋವಿದರ ಪ್ರವಚನ ಕೀರ್ತನಗಳೂ, ಗಾನ ವಿಶಾರದರ ಸಂಗೀತವೂ, ಸ್ತ್ರೀಧರ್ಮ ಬೋಧೆಯೂ ಸಮಯಾನುಸಾರವಾಗಿ ಜರುಗುತ್ತಿರುವವು.

ದಶಮೀ ಶುಕ್ರವಾರ (ತಾ॥ ೨೪-೧೦-೪೭) ದಿವಸ ಸಾಯಂಕಾಲ ೩ ಘಂಟೆಗೆ ಸಕಲ ಬಿರುದಾವಳಿಗಳ ಸಮೇತ ಚತುರಂಗ ಬಲದೊಡನೆ ಜಗದ್ಗುರುಗಳವರು ಸಾಲಂಕೃತಾಂದೋಳಿಕೋತ್ಸವದಿಂದ ಶಮೀ ವೃಕ್ಷಕ್ಕೆ ದಯಮಾಡಿಸಿ, ಅಲ್ಲಿ ಶಮೀಪೂಜಾದಿ ಕಾರ್ಯವನ್ನು ಪೂರೈಸಿಕೊಂಡು ಉತ್ಸವದಿಂದಲೇ ಪ್ರಧಾನ ಮಂಟಪಕ್ಕೆ ದಯಮಾಡಿಸುವರು. ೭ ಘಂಟೆಗೆ ಸಿಂಹಾಸನಾರೋಹಣಾ ಕ್ರಿಯೆಗಳು ಜರುಗುವವು. ಬಳಿಕ ಸಮಸ್ತ ಭಕ್ತರೂ ಜಗದ್ಗುರುಗಳವರಿಗೆ ವಿಜಯ ಕಾಣಿಕೆಯನ್ನು ಸಮರ್ಪಿಸುವರು. ಅನಂತರ ಜಗದ್ಗುರುಗಳವರ ಶುಭ ಸಂದೇಶವೂ ಮತ್ತು ಸರ್ವರಿಗೂ ಫಲಾಶೀರ್ವಾದಗಳೂ ಜರುಗುವವು. ಬಳಿಕ ಶ್ರೀಮನ್ಮಹಾರಾಜರವರ ಶ್ರೇಯ ಪ್ರಾರ್ಥನೆಯಾಗಿ ಆಚಾರ್ಯರ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಡುವುದು. ಏಕಾದಶಿ ತಾ॥ ೨೫-೧೦-೪೭ ಶನಿವಾರ ಪ್ರಾತಃಕಾಲ ಉಳಿದವರು ಕಾಣಿಕೆಯನ್ನು ಸಮರ್ಪಿಸಬಹುದು.

ಈ ಸುಸಮಯವನ್ನು ಕಳೆದುಕೊಳ್ಳದೆ ಸಮಸ್ತ ಭಗವದ್ಭಕ್ತರು ಸಕಾಲಕ್ಕೆ ಬಂದು ಧರ್ಮ ನೀತಿಗಳನ್ನು ತಿಳಿದುಕೊಂಡು ಜಗದ್ಗುರುಗಳವರ ಪೂಜಾಸೇವಾ ದರ್ಶನಾಶೀರ್ವಾದಗಳನ್ನು ಹೊಂದಿ ಕೃತಾರ್ಥರಾಗಬೇಕೆಂದು ಕೋರುತ್ತೇವೆ.

ದಸರಾಮಹೋತ್ಸವ
ಸೇವಾನಿರ್ವಾಹಕ ಭಕ್ತಮಂಡಲಿ

[ಸೂಚನೆ — ಯಡೆಯೂರಿಗೆ ಬರತಕ್ಕವರು ಹುಬ್ಬಳ್ಳಿ ಬೆಂಗಳೂರು ಮಧ್ಯದಲ್ಲಿರುವ ತಿಪಟೂರು ಸ್ಟೇಷನ್ನಿಗೆ ಇಳಿಯಬೇಕು. ಅಲ್ಲಿ ಮೋಟಾರುಗಳು ಸಿಗುತ್ತವೆ]

ದುಃಖಪ್ರದರ್ಶನ ಸಭೆ, ಸೊಲ್ಲಾಪುರ

ಸೊಲ್ಲಾಪುರದಲ್ಲಿ ವೀರಶೈವ ಸದಾಚಾರ ಸ್ತ್ರೀಸಮಾಜದ ಅಧ್ಯಕ್ಷೆಯರಾಗಿದ್ದ ಸೌ॥ ಭಾಗೀರಥೀಬಾಯಿ ಕಟಾಪ್ ಇವರು ಇದೇ ತಿಂಗಳು ೮ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ. ಈ ಬಗ್ಗೆ ಇದೇ ೧೨ನೇ ತಾರೀಖಿನ ದಿವಸ ಶ್ರೀಮಲ್ಲಿಕಾರ್ಜುನ ದೇವಾಲಯದಲ್ಲಿ ಸೌ॥ ಪಂಚಪ್ಪನವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಕುಮಾರಿ ಕಸ್ತೂರಿಬಾಯಿಯವರು ದುಃಖಮಯವಾದ ಪದ್ಯವನ್ನು ಹಾಡಿದರು. ಆ ಮೇಲೆ ಸೌ॥ ಬಸಮ್ಮ ನಂದೀಮಠ ಇವರು ಭಾಗೀರಥಿ ಬಾಯಿಯವರ ಗುಣಕಥನವನ್ನು ಮಾಡುತ್ತಾ, ಇವರು ಸಾಕ್ಷಾತ್ ಶಿವಸ್ವರೂಪಿಗಳಾಗಿದ್ದ ಉಜ್ಜಯಿನೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರಿಂದ 'ಅಭಿನವ ಶಾರದಾದೇವಿ' ಎಂಬ ಪದವಿಯನ್ನು ಪಡೆದಿದ್ದರೆಂದೂ, ಸೊಲ್ಲಾಪುರ ಮುನಿಸಿಪಾಲಿಟಿ ಸ್ಕೂಲುಗಳ ಛೇರ್ಮನ್‌ರಾಗಿದ್ದರೆಂದೂ, ಯಾವಾಗಲೂ ಸ್ತ್ರೀಸುಧಾರಣೆಗಾಗಿ ಕಷ್ಟಪಡುತ್ತಿದ್ದರೆಂದೂ, ಪಂಚಪೀಠಗಳಲ್ಲಿ ಅಪಾರವಾದ ಭಕ್ತಿಯನ್ನಿಟ್ಟಿದ್ದರೆಂದೂ, ಭಾಷಣ ಮಾಡಿದರು. ಆಮೇಲೆ ಸೌ॥ ಸಂಗವ್ವ ಮಡಕಿ, ಸೌ॥ ಗಂಗವ್ವ, ಹುಬ್ಬಳ್ಳಿ, ವೇ॥ ಮಣೂರು ಮಲ್ಲಿಕಾರ್ಜುನ ಶಾಸ್ತ್ರಿಗಳು ಇವರೇ ಮೊದಲಾದವರು ಭಾಷಣಮಾಡಿದರು. ಬಳಿಕ ಅಧ್ಯಕ್ಷೆಯರ ಭಾಷಣವಾಯಿತು. ಸರ್ವರೂ ಸೌ॥ ಭಾಗೀರಥೀಬಾಯಿಯವರ ಆತ್ಮಕ್ಕೆ ಮಂಗಳವನ್ನು ಕೋರಿದರು.

ಇದೇ ಸಂದರ್ಭದಲ್ಲಿ ಈ ನಗರದಲ್ಲಿ ಸುಪ್ರಸಿದ್ಧ ವೈದ್ಯರಾಗಿದ್ದ ಶ್ರೀ॥ ಸಿದ್ಧಲಿಂಗಪ್ಪಸ್ವಾಮಿ ಮಂದ್ರೂಪಕರ್ ಇವರ ನಿಧನದ ಬಗ್ಗೆ ದುಃಖಪ್ರದರ್ಶನವೂ ಮಾಡಲ್ಪಟ್ಟಿತು. ಅನೇಕರು ಮೃತರ ಗುಣಗಾನವನ್ನು ಮಾಡಿದರು. ಈ ವೈದ್ಯಪಿತಾಮಹರಿಗೆ ೮೦ ವರ್ಷಗಳಾಗಿದ್ದವು. ಇವರು ಮಹಾಶಾಂತಮೂರ್ತಿಗಳೂ, ಪರೋಪಕಾರನಿರತರೂ ಆಗಿದ್ದರು. ಈ ಉಭಯರ ಆತ್ಮಕ್ಕೆ ಶ್ರೀಜಗದ್ಗುರು ಪಂಚಾಚಾರ್ಯರು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಸೌ॥ ಬಸಮ್ಮ ನಂದೀಮಠ, ಸೊಲ್ಲಾಪುರ

ಮದರಾಸ್ ಪ್ರಾಂತದಲ್ಲಿ ಎರಡು ಸಿಮೆಂಟ್ ಕಾರ್ಖಾನೆಗಳು

ಮದರಾಸ್ ಪ್ರಾಂತಕ್ಕೆ ಅಗತ್ಯವಾಗಿ ಬೇಕಾಗುವ ಸಿಮೆಂಟಿನ ಆವಶ್ಯಕತೆಯನ್ನು ಪೂರೈಸಲು ಆರು ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಲು ಪ್ರಾಂತೀಯ ಸರ್ಕಾರವು ಕೇಂದ್ರ ಸರ್ಕಾರದ ಅನುಮತಿ ಕೇಳಿತು. ಈಗ ಕರ್ನೂಲಿನಲ್ಲೊಂದು ತಿರುನೆಲ್‌ವೆಲ್ಲಿಯಲ್ಲೊಂದು ಹೀಗೆ ಎರಡು ಕಾರ್ಖಾನೆ ತೆರೆಯಲು ಮಾತ್ರ ಅನುಮತಿ ದೊರೆತಿದೆ. ಈ ವಿಚಾರವನ್ನು ಮದರಾಸ್ ಸರ್ಕಾರದ ಕೈಗಾರಿಕೆ ಮಂತ್ರಿಗಳಾದ ಮಿ॥ ಹೆಚ್ ಸೀತಾರಾಮರೆಡ್ಡಿಯವರು ಮದರಾಸ್ ಶಾಸನ ಸಭೆಯಲ್ಲಿ ತಿಳಿಸಿದರು.

ಅರಮನೆಯಲ್ಲಿ ನವರಾತ್ರಿ ಮಹೋತ್ಸವ

ಈ ತಿಂಗಳು ೧೫ನೆಯ ತಾರೀಖು ಬುಧವಾರದಿಂದ ಅರಮನೆಯಲ್ಲಿ ನವರಾತ್ರಿ ಮಹೋತ್ಸವವು ಮಹಾಸಂಭ್ರಮದೊಡನೆ ನೆರವೇರುತ್ತಿರುವುದು. ಮಹಾಪ್ರಭುಗಳು ಪ್ರತಿದಿನ ಸಾಯಂಕಾಲ ರತ್ನಸಿಂಹಾಸನವನ್ನಾರೋಹಣಮಾಡಿ ಪ್ರಜೆಗಳಿಗೆ ದರ್ಶನವನ್ನೀಯುತ್ತಿರುವರು. ಈ ಉತ್ಸವವನ್ನು ನೋಡುವುದಕ್ಕಾಗಿ ಅಸಂಖ್ಯ ಜನರು ಆಗಮಿಸಿ ವೈಭವವನ್ನು ನೋಡಿ ಸಂತೋಷಭರಿತರಾಗುತ್ತಿರುವರು. ಪ್ರತಿವರ್ಷದಂತೆ ಈ ವರ್ಷ ವಿಜಯದಶಮಿಯ ದಿವಸ ಬಹಿರಂಗವಾಗಿ ಮಹಾಪ್ರಭುಗಳವರ ಉತ್ಸವವು ನೆರವೇರುವುದಿಲ್ಲ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಅಕ್ಟೋಬರ್ ತಾ|| ೨೦ನೇ ಸೋಮವಾರ

ಆತ್ಮಸಂಸ್ಕಾರ

ಆತ್ಮನು ಪರಶಿವನಂತೆ ಪರಿಶುದ್ಧಸ್ವಭಾವವುಳ್ಳವನಾಗಿದ್ದರೂ ಆಣವ, ಮಾಯಾ, ಕರ್ಮ ಎಂಬ ಮೂರು ಮಲಗಳಿಂದ ಆವರಿಸಲ್ಪಟ್ಟಿರುವುದರಿಂದ ಆತ್ಮನಲ್ಲಿರುವ ಸರ್ವಜ್ಞತ್ವಾದಿ ಪರಿಶುದ್ಧಗುಣಗಳು ಮರೆಯಾಗಿ ಕಿಂಚಿದ್ಜ್ಞತ್ವಾದಿ ಗುಣಗಳು ತೋರಿಬರುತ್ತಲಿವೆ ಮೋಡವು ಆವರಿಸಿರುವ ವರೆಗೂ ಸೂರ್ಯನು ತನ್ನ ಸ್ವಚ್ಛವಾದ ಕಿರಣಾವಳಿಯನ್ನು ಹರಡುವುದಕ್ಕೆ ಅವಕಾಶವಿಲ್ಲದಂತೆ ಈ ಮಲಗಳು ಆವರಿಸಿರುವವರೆಗೂ ಆತ್ಮನಿಗುಂಟಾಗಿರುವ ಬದ್ಧಾವಸ್ಥೆಯು ತಪ್ಪುವಂತಿಲ್ಲವು ಈ ಬದ್ಧಾವಸ್ಥೆಯುಳ್ಳ ಆತ್ಮನೇ ಸಂಸಾರಿಯೆಂದು ಹೇಳಿಸಿಕೊಳ್ಳುತ್ತಾನೆ ಇದೇ ಅರ್ಥವನ್ನು 'ಮಲಾವೃತಃ ಸಂಸಾರೀ' ಎಂಬ ಶಿವಸೂತ್ರವು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ ಈ ಮೂರು ಮಲಗಳು ಆತ್ಮನಿಗೆ ಒಂದರಮೇಲೊಂದ ಹೊದಿಕೆಯಂತೆ ಸುತ್ತಿಕೊಂಡಿರುತ್ತವೆ ದೃಷ್ಟಾಂತದಲ್ಲಿ ಈ ಮಲಗಳಿಂದಾವೃತನಾದ ಆತ್ಮನು ಬತ್ತದೊಳಗೆ ಮುಚ್ಚಿಕೊಂಡಿರುವ ಅಕ್ಕಿಯ ಕಾಳಿಗೆ ಹೋಲಿಸಲ್ಪಟ್ಟಿರುತ್ತಾನೆ ಈ ಅಕ್ಕಿಯ ಕಾಳಿನ ಮೇಲೆ ಒಂದರಮೇಲೊಂದು ಮೂರು ವಿಧವಾದ ಹೊದಿಕೆಯುಂಟು ಮೊದಲನೆಯ ಹೊದಿಕೆಯು ಅತ್ಯಂತ ಸ್ಥೂಲವಾಗಿರುತ್ತದೆ ಇದನ್ನು ಕಿಂಶಾರುಕ (ಹೊಟ್ಟು) ಎಂದು ಕರೆಯುತ್ತಾರೆ ಅದರೊಳಗಿರುವ ಹೊದಿಕೆಯು ಸೂಕ್ಷ್ಮವಾಗಿರುತ್ತದೆ ಇದನ್ನು 'ತುಷ' ಎಂದು ಕರೆಯುತ್ತಾರೆ ಇದರೊಳಗಿನ ಹೊದಿಕೆಯಂತೂ ಬಹುಸೂಕ್ಷ್ಮವಾಗಿರುತ್ತದೆ ಇದನ್ನು ಕಂಬುಕವೆಂದು ಕರೆಯುತ್ತಾರೆ ಈ ಮೂರು ಪದರುಗಳು ಅಕ್ಕಿಯ ಮೇಲೆ ಇರುವ ವರೆಗೆ ಅದರಲ್ಲಿ ಅಂಕುರಿಸುವ ಶಕ್ತಿಯು ಕಂಡುಬರುತ್ತದೆ ಈ ಮೇಲಿನ ಪದರುಗಳು ಎಂದು ತೆಗೆಯಲ್ಪಡುತ್ತವೆಯೋ ಅಂದೇ ಅದರಲ್ಲಿ ಅಂಕುರಿಸುವ ಶಕ್ತಿಯು ನಾಶವಾಗುತ್ತದೆ ಅದರಂತೆ ಆತ್ಮರನ್ನು ಆವರಿಸಿರುವ ಈ ಮೂರು ಮಲಗಳಲ್ಲಿ ಕಾರ್ಮಮಲವು ಅತಿ ಸ್ಥೂಲವಾದುದಾಗಿದೆ ಅದರೊಳಗಿರುವ ಮಾಯಾಮಲವು ಸ್ವಲ್ಪ ಸೂಕ್ಷ್ಮವಾಗಿದೆ ಅದರೊಳಗಿರುವ ಆಣವಮಲವು ಬಹು ಸೂಕ್ಷ್ಮವಾಗಿದೆ ಈ ಮೂರು ಮಲಗಳಿಗೆ ವೀರಶೈವಸಿದ್ಧಾಂತದಲ್ಲಿ ಪಾಶಗಳೆಂಬ ವ್ಯವಹಾರವುಂಟು ಪಾಶಗಳು ಪಶುಗಳನ್ನು ಬಂಧನಕ್ಕೆ ಗುರಿಮಾಡಿರುವಂತೆ ಈ ಮಲಪಾಶಗಳು ಜೀವಾತ್ಮನ ಪಾರಿಶುದ್ಧ್ಯವನ್ನು ಹಾಳುಮಾಡಿ ಜನನಮರಣರೂಪವಾದ ಬಂಧನಕ್ಕೀಡುಮಾಡಿರುತ್ತವೆ ಅಕ್ಕಿಯ ಕಾಳಿನ ಮೇಲಿರುವ ಬತ್ತದ ಹೊಟ್ಟು ನಾಶವಾಗುವವರೆಗೂ ಅಂಕುರಿಸುವ ಶಕ್ತಿಯು ಅದರಲ್ಲಿ ಕಂಡುಬರುವಂತೆ, ಆತ್ಮನನ್ನಾವರಿಸಿದ ಈ ಮೂರು ಮಲಪಾಶಗಳು ನಾಶವಾಗುವವರೆಗೂ ಆವನು ಪುಣ್ಯಪಾಪಕರ್ಮಾನುಸಾರವಾಗಿ ನಾನಾವಿಧ ಯೋನಿಗಳಲ್ಲಿ ಜನ್ಮವನ್ನು ಧರಿಸಿ ಅನೇಕವಿಧ ದುಃಖಗಳನ್ನು ಅನುಭವಿಸಲೇ ಬೇಕಾಗುವದು ಈ ಮಲಪಾಶಗಳು ಎಂದು ನಷ್ಟವಾಗುವುವೋ ಅಂದಿನಿಂದಲೂ ಪುನಃ ಆ ಆತ್ಮನು ದೇಹಧಾರಣಮಾಡುವುದಿಲ್ಲ ಈ ಮೂರು ಮಲಗಳು ನಾಶವಾಗಿ ಆತ್ಮನಿಗೆ ಸರ್ವಜ್ಞತ್ವವು ಅಭಿವ್ಯಕ್ತವಾಗಬೇಕಾದರೆ ಮೂರುವಿಧ ಸಂಸ್ಕಾರಗಳು ಆಗಲೇಬೇಕು ಈ ಸಂಸ್ಕಾರಗಳೇ ಸಿದ್ಧಾಂತದಲ್ಲಿ ವೇಧಾ-ಕ್ರಿಯಾ ಮನು ಎಂದು ಕರೆಯಲ್ಪಟ್ಟಿರುತ್ತವೆ

> ತನುತ್ರಯಗತಾನಾದಿ ಮಲತ್ರಯಮುಷಾ ಗುರುಃ |
> ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್ ||

ಇದೇ ಅರ್ಥವನ್ನು ಶಿವಾಗಮಗಳು ಉಪದೇಶಿಸುತ್ತವೆ ಹೀಗೆ ತ್ರಿವಿಧದೀಕ್ಷಾಪೂರ್ವಕವಾಗಿ ಲಿಂಗವನ್ನು ಧರಿಸದಿದ್ದವರಿಗೆ ಮೋಕ್ಷವೆಂಬುದು ಎಂದೂ ದೊರೆಯಲಾರದು ಮಲಗಳನ್ನು ನಾಶಮಾಡುವ ಶಕ್ತಿಯುಳ್ಳ ಇಂಥ ತ್ರಿವಿಧ ದೀಕ್ಷೆ ಇಲ್ಲದವನಿಗೆ ಲಿಂಗಧಾರಣವಿಧಿಯಂತೂ ಫಲಿಸುವುದಿಲ್ಲ ಮಾನವನು ಗುರುವಿನಿಂದ ದೀಕ್ಷೆಯನ್ನು ಪಡೆದು ಪರಿಶುದ್ಧನಾಗುವವರೆಗೂ ಲಿಂಗಧಾರಣಕ್ಕಾಗಲಿ ಲಿಂಗಪೂಜೆಗಾಗಲಿ ಯೋಗ್ಯನಾಗುವುದಿಲ್ಲ ಇದೇ ಅರ್ಥವನ್ನು 'ಅತಪ್ತತನುರ್ನತದಾಮೋಽಶ್ನುತೇ' ಎಂಬ ಶ್ರುತಿಯು ಸ್ಪಷ್ಟವಾಗಿ ಬೋಧಿಸಿರುವುದಲ್ಲದೆ —

> ಅತಪ್ತತನುರಜ್ಞೋ ವೈ ಆಮಸ್ಸಂಸ್ಕಾರವರ್ಜಿತಃ |
> ದೀಕ್ಷಯಾ ರಹಿತಸ್ಸಾಕ್ಷಾನ್ನಾರ್ಹ್ಯೋ ಯಾಲ್ಲಿಂಗಮುತ್ತಮಂ ||

ಎಂದು ಈ ಶ್ರುತ್ಯರ್ಥವನ್ನೇ ರೇಣುಕ ಭಗವತ್ಪಾದರು ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿರುತ್ತಾರೆ ಕುಂಡಮಂಟಪಾದಿಗಳನ್ನು ರಚಿಸಿ ಪಂಚಕಲಶಗಳನ್ನು ಸ್ಥಾಪಿಸಿ ಶ್ರೀಗುರುವಿನಿಂದ ಸ್ಥೂಲದೇಹಕ್ಕೆ ಮಾಡುವ ಸಂಸ್ಕಾರವಿಶೇಷವೇ ಕ್ರಿಯಾದೀಕ್ಷೆಯೆನಿಸಿಕೊಳ್ಳುವುದು ಗುರುವು ಮಹಾಮಂತ್ರದ ರಹಸ್ಯವನ್ನು ಬೋಧಿಸುವುದೇ ಮನುದೀಕ್ಷೆಯೆನಿಸಿಕೊಳ್ಳುವುದು ಗುರುವು ಹಸ್ತಮಸ್ತಕಸಂಯೋಗವನ್ನು ಮಾಡಿ ದಿವ್ಯದೃಷ್ಟಿಯಿಂದ ಶಿಷ್ಯನ ಹೃದಯದಲ್ಲಿ ಶಿವತ್ವವನ್ನು ಅಭಿನಿವೇಶಗೊಳಿಸುವುದೇ ವೇಧಾದೀಕ್ಷೆಯೆನಿಸಿಕೊಳ್ಳುವುದು ಈ ಮೂರು ದೀಕ್ಷೆಗಳಲ್ಲಿಯೇ ಸಪ್ತವಿಧದೀಕ್ಷೆಗಳು ಅಂತರ್ಗತವಾಗುತ್ತದೆ ಹೀಗೆ ಗುರುವಿನಿಂದ ಈ ಮೂರು ಸಂಸ್ಕಾರಗಳನ್ನು ಪಡೆದ ಹೊರತು ನಮ್ಮ ದೇಹದೊಳಗೆ ಅಡಗಿರುವ ಆತ್ಮಶಕ್ತಿಯು ಪ್ರಕಾಶವಾಗಲಾರದು ಹಾಲಿನಲ್ಲಿ ತುಪ್ಪವುಂಟೆಂದು ಎಲ್ಲರೂ ತಿಳಿದೇ ಇರುತ್ತಾರಷ್ಟೆ! ಆದರೆ ಅಂತಹ ತುಪ್ಪದಿಂದ ಯಾರಿಗೂ ಏನೂ ಪ್ರಯೋಜನವಾಗಲಾರದು ಆ ತುಪ್ಪದಿಂದ ಪ್ರಯೋಜನವನ್ನು ಪಡೆಯಬೇಕಾದರೆ ಆ ಹಾಲಿಗೆ ಹೆಪ್ಪು ಹಾಕುವ ಸಂಸ್ಕಾರವೊಂದ, ಹೆಪ್ಪುಗಟ್ಟಿದ ಮೇಲೆ ಕಡದು ಬೆಣ್ಣೆಯನ್ನು ತೆಗೆಯುವ ಸಂಸ್ಕಾರವೊಂದು ಆ ಬೆಣ್ಣೆಯನ್ನು ಹದವಾಗಿ ಕಾಯಿಸುವ ಸಂಸ್ಕಾರವೊಂದು ಹೀಗೆ ಮೂರು ವಿಧಗಳಾದ ಸಂಸ್ಕಾರಗಳಾಗಲೇ ಬೇಕಾಗುವದು ಈ ಸಂಸ್ಕಾರಗಳು ಪೂರ್ಣವಾಗದಿದ್ದರೆ ತುಪ್ಪವು ತನ್ನ ಗುಣವನ್ನು ತಾನು ಹೊಂದಲಾರದಂತೆ ತ್ರಿವಿಧಸಂಸ್ಕಾರವಿಲ್ಲದೆ ಆತ್ಮನು ಸ್ವಪ್ರಕಾಶವನ್ನು ಹೊಂದಲಾರನು ಗುರುವಿನಿಂದ ಸ್ಥೂಲದೇಹ ಸಂಸ್ಕಾರವನ್ನೂ ಸೂಕ್ಷ್ಮದೇಹ ಸಂಸ್ಕಾರವನ್ನೂ ಕಾರಣದೇಹಸಂಸ್ಕಾರವನ್ನೂ ಹೊಂದಿ ಅವುಗಳೊಳಗಿರುವ ಕಾರ್ಮ, ಮಾಯಾ ಆಣವ ಎಂಬ ಮೂರು ದೋಷಗಳು ಹೋದಮೇಲೆ ಶಿವಲಿಂಗಾಗ್ನಿಯ ಸಂಬಂಧವಾಗುವುದು ಹಸಿಮರಕ್ಕೆ ಬೆಂಕಿಯು ಸಂಬಂಧಿಸದಂತೆ ಅಸಂಸ್ಕಾರಿಯಾದ ದೇಹದಲ್ಲಿ ಲಿಂಗಾಗ್ನಿಯು ತನ್ನ ಕಾರ್ಯವನ್ನು ಮಾಡಲಾರದ ದೀಕ್ಷಾಪೂರ್ವಕವಾಗಿ ಶಿವಲಿಂಗಧಾರಣ ಶಿವಲಿಂಗಪೂಜಾದಿ ಶಿವಯೋಗ ಸಾಮಗ್ರಿಗಳನ್ನು ಪಡೆಯದಿದ್ದುದರಿಂದಲೇ ಆತ್ಮರನ್ನು ಸುತ್ತಿಕೊಂಡಿರುವ ಮಲಪಾಶಗ್ರಂಥಿಯು ಸಡಿಲವಾಗದೆ ಮಾನವರು ಅಪಕ್ವಮತಿಗಳಾಗಿ ಭವಸಾಗರದಲ್ಲಿ ತೇಲಿಹೋಗುತ್ತಲಿದ್ದಾರೆ ಇದರಿಂದ ಆತ್ಮೀಯಶಕ್ತಿಯು ಒರಬರುತ್ತ ಕುಂಠಿತವಾಗಿ ಮಾನವರು ಪಶುಗಳಂತೆ ಆಹಾರನಿದ್ರಾಮೈಥುನಾದಿಗಳಲ್ಲಿ ಮಾತ್ರ ಆಸಕ್ತರಾಗಿರುತ್ತಾರೆ

ಆದುದರಿಂದ ಪ್ರತಿಯೊಬ್ಬ ಲಿಂಗಾಂಗಿಯೂ ಆಚಾರ್ಯ ಭಗವತ್ಪಾದರ ಆಜ್ಞೆಯಂತೆ ಕಾಲಕ್ಕೆ ಸರಿಯಾಗಿ ತನ್ನ ಕುಲಗುರುವಿನಿಂದ ದೀಕ್ಷಾ ಸಂಸ್ಕಾರವನ್ನು ಪಡೆದು ಲಿಂಗಸಂಬಂಧಿಯಾಗಿ ಆತ್ಮಕ್ಕೊದಗಿರುವ ಅನರ್ಥ ಪರಂಪರೆಯನ್ನು ಪರಿಹರಿಸಿಕೊಂಡು ಪುನರಾವೃತ್ತಿರಹಿತವಾದ ಕೈವಲ್ಯಸುಖವನ್ನನುಭವಿಸಬೇಕೆಂದು ಕೋರುತ್ತೇವೆ

ವರ್ತಮಾನಸಂಗ್ರಹ

ಪೂರ್ವಪಂಜಾಬ್ ಮತ್ತು ಗಡಿನಾಡು ನಿರಾಶ್ರಿತರಿಗೆ ಧನಸಹಾಯ

ಪೂರ್ವ ಪಂಜಾಬ್ ಮತ್ತು ಗಡಿನಾಡಿನಿಂದ ಹಿಂದೂಸ್ಥಾನಕ್ಕೆ ಬರಲಿರುವ ೧೮ ಲಕ್ಷ ಮಂದಿ ನಿರಾಶ್ರಿತರ ಪುನರ್ವಸತಿಗೆ ೨೫೦ ಕೋಟಿ ರೂಪಾಯಿ ಬೇಕಾಗುವುವೆಂದು ರಾಜ್ಯಾಂಗ ರಚನಾ ಸಭೆಯ ಸದಸ್ಯರಾದ ದಿವಾನ್ ಚಮನ್‌ಲಾಲ್‌ರವರು ಲೆಕ್ಕಹಾಕಿದ್ದಾರೆ ಅಲ್ಲಿಂದ ಬರತಕ್ಕವರಲ್ಲಿ ಹೆಚ್ಚುಮಂದಿ ಚಿಲ್ಲರೆ ವ್ಯಾಪಾರಸ್ಥರಿಂದೂ, ಆದ್ದರಿಂದ ಅವರಲ್ಲಿ ಪ್ರತಿಯೊಬ್ಬರಿಗೂ ಐದಾರು ಸಾವಿರ ರೂಪಾಯಿಗಳ ಧನಸಹಾಯ ಬೇಕಾಗುವುದೆಂದೂ ಅವರು ತಿಳಿಸಿದ್ದಾರೆ.

ಹಿಂದಿಯು ಸಂಯುಕ್ತಪ್ರಾಂತದ ರಾಜಕೀಯ ಭಾಷೆ

ದೇವನಾಗರಿ ಅಕ್ಷರದಲ್ಲಿ ಬರೆಯುವ ಹಿಂದಿಯು ಇನ್ನು ಮುಂದೆ ಸಂಯುಕ್ತಪ್ರಾಂತ ಸರ್ಕಾರದ ರಾಜಕೀಯ ಭಾಷೆಯಾಗುವುದೆಂದು ಪ್ರಾಂತೀಯ ಸರಕಾರದ ಆಜ್ಞೆಯಾಗಿದೆ ಸರ್ಕಾರದ ವ್ಯವಹಾರಕ್ಕೆ ಇನ್ನು ಮುಂದೆ ಹಿಂದೀ ಭಾಷೆಯನ್ನೇ ಉಪಯೋಗಿಸಲಾಗುವದು

ಬೊಂಬಾಯಿ ಇಲಾಖೆಯಲ್ಲಿ ಮುಂದಿನ ವರ್ಷದಿಂದ ಇಂಗ್ಲಿಷ್ ಶಿಕ್ಷಣವಿಲ್ಲ

ಬೊಂಬಾಯಿ ಇಲಾಖೆಯಲ್ಲಿ ೧೯೪೮ನೆಯ ಜೂನ್ ತಿಂಗಳಿನಿಂದ ಪ್ರಾಥಮಿಕ ಶಾಲೆಗಳಲ್ಲಿ ಬಾಲಕರಿಗೆ ಇಂಗ್ಲಿಷ್ ಶಿಕ್ಷಣಕೊಡುವದನ್ನು ನಿಲ್ಲಿಸಬೇಕೆಂದು ತೀರ್ಮಾನವಾಗಿದೆ

ಹಿಂದೀ ಕಲಿಸುವ ಬಗ್ಗೆ ಮದರಾಸ್ ಸರ್ಕಾರದ ತೀರ್ಮಾನ

ಮದರಾಸ್ ಪ್ರಾಂತದಲ್ಲಿ ೧ ನೇ ಫಾರಮ್ಮಿನಿಂದ ೩ ನೇ ಫಾರಂವರೆಗೆ ಹಿಂದಿಯನ್ನು ಕಲಿಸುವುದಾಗಿಯೂ ಅನಂತರ ಹಿಂದಿ ಅಥವಾ ಸಂಸ್ಕೃತ ಮುಂತಾದ ಪ್ರಾಚೀನ ಭಾಷೆಯನ್ನು ಐಚ್ಛಿಕ ಭಾಷೆಯನ್ನಾಗಿ ೬ನೇ ಫಾರಂ ವರೆಗೆ ಅಧ್ಯಯನ ಮಾಡಬೇಕೆಂದೂ ಪ್ರಾಂತೀಯ ಶಿಕ್ಷಣ ಸಲಹಾಸಮಿತಿಯಲ್ಲಿ ತೀರ್ಮಾನವಾಯಿತು

ಮದ್ರಾಸಿನಲ್ಲಿ ಸರ್ಕಾರಿ ಬಸ್ಸುಗಳ ಓಡಾಟ ಪ್ರಾರಂಭ

ಮದ್ರಾಸ್ ನಗರದಲ್ಲಿ ೧೫ ನೇ ತಾರೀಖಿನಿಂದ ಸರ್ಕಾರಿ ಬಸ್ಸುಗಳು ಓಡಾಟವನ್ನು ಪ್ರಾರಂಭಿಸಿವೆ ಸಂಚಾರ ಮಂತ್ರಿಗಳಾದ ಡೇನಿಯಲ್ ಥಾಮಸ್‌ರವರು ರಾಮಸೇಟಿಯಲ್ಲಿ ಪ್ರಾರಂಭೋತ್ಸವ ನಡೆಸಿದರು

ಮದ್ರಾಸ್ ಪ್ರಾಂತದಲ್ಲಿ ತೃಪ್ತಿಕರವಾದ ಅಕ್ಕಿ ದಾಸ್ತಾನು

"ಮದ್ರಾಸ್ ಪ್ರಾಂತದಲ್ಲಿ ಅಕ್ಕಿಯ ದಾಸ್ತಾನು ಈಗ ತೃಪ್ತಿಕರವಾಗಿವೆ ಇದರಿಂದ ಆಹಾರಾಭಾವವನ್ನು ದಾಟಬಹುದು ಎಂಬುದಾಗಿ ಮದರಾಸ್ ಸರ್ಕಾರದ ಆಹಾರ ಕಾರ್ಯದರ್ಶಿಗಳು ತಿಳಿಸಿದ್ದಾರೆ ಅಕ್ಟೋಬರ್ ೯ ಕ್ಕೆ ಮುಗಿಯುವ ವಾರದಲ್ಲಿ ಸುಮಾರು ೩೮,೦೦೦ ಟನ್ ಅಕ್ಕಿಯನ್ನು ಶೇಖರಿಸುವ ಭರವಸೆ ಇದೆ ಅಕ್ಕಿಯ ಪರಿಸ್ಥಿತಿ ಉತ್ತಮಗೊಂಡಿದ್ದರೂ, ಇತರ ಕಾಳುಗಳ ಪರಿಸ್ಥಿತಿ ಸಮಾಧಾನಕರವಾಗಿಲ್ಲ ಸರ್ಕಾರದ ಕಣಜಗಳಲ್ಲಿ ಕೇವಲ ಒಂದು ತಿಂಗಳಿಗಾಗುವಷ್ಟು ಕಾಳುಗಳು ಮಾತ್ರ ಅವೆ ಎಂದು ಈ ಅಧಿಕಾರಿಗಳು ತಿಳಿಸುತ್ತಾರೆ

ಕ್ಯಾಪ್ಟನ್ ಹಬೀಬುಲ್ಲಾ ಸಾಹೇಬರ ಕೊಲೆ

ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ, ರೆಸಿಡೆಂಟ್ ಮೆಡಿಕಲ್ ಆಫೀಸರಾದ ಡಾ|| ಮಹಮದ್ ಹಬಿಬುಲ್ಲಾ ಸಾಹೇಬರನ್ನು ಕೊಲೆ ಮಾಡಲಾಗಿದೆ ಜನರಲ್ ಆಸ್ಪತ್ರೆಯಲ್ಲಿ ಡಾ|| ಹಬಿಬುಲ್ಲಾ ಸಾಹೇಬರ ಮೃತ ಶರೀರವನ್ನು ಪರೀಕ್ಷಿಸಲಾಯಿತು ತಲೆಯ ಮೇಲೆ ಬಲವಾದ ಪೆಟ್ಟು ಬಿದ್ದು ಮೃತ ಹೊಂದಿದ್ದಾರೆಂದು ಹೇಳಲಾಗಿದೆ ಪೋಲೀಸರು ತನಿಖೆ ಕ್ರಮನಡೆಸುತ್ತಿದ್ದಾರೆ.

ಪಶ್ಚಿಮ ಭಾರತಕ್ಕೆ ಹೊಸ ಬಂದರು

ಕಾಠೇವಾಡದ ತೀರದಲ್ಲಿ ಕಾಂಡ್ಲ ಎಂಬ ಪ್ರದೇಶವಿದೆ ಅಲ್ಲಿ ಒಂದು ಹೊಸ ಬಂದರನ್ನು ಕಟ್ಟಬೇಕೆಂದು ಭಾ

ಸರಕಾರ ತೀರ್ಮಾನಿಸಿದೆ ಕರಾಚಿಯ ಮೂದರಿಯ ಯೇ ಈ ಬಂದರನ್ನು ಕಟ್ಟಲಾಗುವುದು ಈ ಸಂಬಂಧದಲ್ಲಿ ಕಂಡ್ಲ ಪ್ರದೇಶದಿಂದ ಕಾರ್‌ಘೋಲಾ ಎಂಬ ಪ್ರದೇಶಕ್ಕೆ ಸುಮಾರು ನೂರು ಮೈಲಿ ದೂರ ರೈಲು ಸೌಕರ್ಯವನ್ನೂ ಒದಗಿಸಲಾಗುವುದು

ಪಾಕಿಸ್ಥಾನವನ್ನು ಉಳಿಸಿ ಬಲಗೊಳಿಸಬೇಕು

'ಪಾಕಿಸ್ಥಾನವನ್ನು ಉಳಿಸಿ ಬಲಗೊಳಿಸುವುದೇ ನಮ್ಮ ನೀತಿಯಾಗಬೇಕು ಬ್ರಿಟನ್ನೋ ಅಮೇರಿಕವೋ ನಾಳೆ ಪಾಕಿಸ್ಥಾನವನ್ನು ಸ್ವಾಹಾ ಮಾಡಿದರೆ ಅದರಿಂದ ಇಂಡಿಯಾಕ್ಕೆ ದೊಡ್ಡ ತೊಂದರೆ ಉಂಟಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಲಕ್ನೋ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದಾಗ ಹೇಳಿದರು

ಪೂರ್ವ ಬಂಗಾಳವು ಕುರುಕ್ಷೇತ್ರವಾಗದಿರಲಿ

ಕಿರಣಶಂಕರರಾಯರವರ ಹೇಳಿಕೆ

ಪಾಕಿಸ್ಥಾನದಲ್ಲಿ ಹೆಣ್ಣುಮಕ್ಕಳ ಮಾನಪ್ರಾಣಗಳಿಗೆ ಲೇಶವೂ ಕ್ಷೇಮವಿಲ್ಲವೆಂಬ ಭಯವೇ ಪೂರ್ವಬಂಗಾಳದಿಂದ ಪಶ್ಚಿಮಬಂಗಾಳಕ್ಕೆ ನಿರಾಶ್ರಿತರು ಹೊರಡಲು ಮುಖ್ಯ ಕಾರಣವೆಂಬುದಾಗಿ ಪಾಕಿಸ್ಥಾನ್ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕಿರಣಶಂಕರರಾಯ್‌ರವರು ತಿಳಿಸಿದ್ದಾರೆ ಪೂರ್ವ ಬಂಗಾಳದಲ್ಲಿ ಮುಸ್ಲಿಂ ನ್ಯಾಷನಲ್ ಗಾರ್ಡ್ಸ್ ದಳದವರ ಹಾವಳಿಯಿಂದ ಪಂಜಾಬಿನ ರಾಕ್ಷಸೀ ಕೃತ್ಯಗಳೇ ಪೂರ್ವಬಂಗಾಳದಲ್ಲಿ ಎಲ್ಲಿ ಮತ್ತೆ ಗಲಭೆ ಸಂಭವಿಸುವುದೋ ಎಂದು ಜನರು ಭೀತಿಗೊಂಡಿದ್ದಾರೆಂದು ಅವರು ತಿಳಿಸಿದ್ದಾರೆ ಪೂರ್ವಬಂಗಾಳವು ಕುರುಕ್ಷೇತ್ರವಾಗದಿರಲೆಂದು ಹಾರೈಸಿದ್ದಾರೆ

ಭಾರತ ಸೈನ್ಯದಲ್ಲಿ ಬ್ರಿಟಿಷ್ ಅಧಿಕಾರಿಗಳು

ಈಗ ಭಾರತ ಸೈನ್ಯದಲ್ಲಿರತಕ್ಕ ಬ್ರಿಟಿಷ್ ಅಧಿಕಾರಿಗಳೂ ಮತ್ತು ಇತರ ದರ್ಜೆಯ ಸೈನಿಕರ ಅವಧಿಯು ಒಪ್ಪಂದದ ಪ್ರಕಾರ ಇದೇ ಡಿಸೆಂಬರ್ ಕೊನೆಗೆ ಮುಗಿಯುತ್ತದೆ ಆದಾದ ಮೇಲೆ ಭಾರತ ಸೈನ್ಯದಲ್ಲಿ ಕೆಲಸ ಮಾಡಲು ಇಷ್ಟವುಳ್ಳ ಬ್ರಿಟಿಷ್ ಯೋಧರ ಕೆಲಸದ ನಿಯಮ ನಿಬಂಧನೆಗಳನ್ನು ಭಾರತ ಮತ್ತು ಪಾಕಿಸ್ಥಾನ ಸರಕಾರಗಳು ಇಷ್ಟರಲ್ಲಿಯೇ ಪ್ರಕಟಿಸುವುವು ಎಂಬುದಾಗಿ ಸುಪ್ರೀಂಕಮ್ಯಾಂಡರ್ ಕಚೇರಿಯಿಂದ ಹೊರಬಿದ್ದ ಪ್ರಕಟನೆ ಒಂದು ತಿಳಿಸುತ್ತದೆ

ಇದಾದ ಮೇಲೆ ಈ ಬ್ರಿಟಿಷ್ ಯೋಧರು ಎರಡು ರಾಷ್ಟ್ರಗಳಲ್ಲಿ ಯಾವ ರಾಷ್ಟ್ರದ ಸೈನ್ಯಕ್ಕಾದರೂ ಸೇರಿ ಕೆಲಸ ಮಾಡಬಹುದು

ಏಷ್ಯಾ ಸಮ್ಮೇಳನ

ದೆಹಲಿಯಲ್ಲಿ ನಡೆಯಲಿರುವ ಏಷ್ಯಾ ಪ್ರಾದೇಶಿಕ ಸಮ್ಮೇಳನದಲ್ಲಿ ಇಂಡಿಯಾ ಸರಕಾರದ ಪರವಾಗಿ ಕೂಲಿ ಖಾತಾ ಸಚಿವರಾದ ಶ್ರೀ ಜಗಜೀವನರಾಂರವರೂ ಮತ್ತು ಕೈಗಾರಿಕೆ ಖಾತಾ ಸಚಿವರಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರೂ ಭಾಗವಹಿಸುವರು ಪಾಕಿಸ್ಥಾನದ ಪರವಾಗಿ, ಶ್ರೀ ಜೋಗೇಂದ್ರನಾಥ ಮಂಡಲರವರು ಭಾಗವಹಿಸುವರೆಂದು ತಿಳಿದುಬಂದಿದೆ.

ಕಾಶ್ಮೀರದ ನೂತನ ದಿವಾನರು

ಪೂರ್ವ ಪಂಜಾಬು ಹೈಕೋರ್ಟಿನ ನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ ಮೆಹರ್‌ಚಂದ್ ಮಹಾಜನರವರನ್ನು ಕಾಶ್ಮೀರದ ಮುಖ್ಯಮಂತ್ರಿಗಳನ್ನಾಗಿ ನೇಮಿಸಲಾಗಿದೆ. ೧೫ ನೆಯ ತಾ|| ದಿನ ಅವರು ರಾಜಭಕ್ತಿ ಪ್ರಮಾಣಮಾಡಿ, ಅಧಿಕಾರ ವಹಿಸಿದರು.

ಜುನಾಘಡಕ್ಕೆ ಪಾಕಿಸ್ಥಾನದ ನಿವೃತ್ತ ಸೈನಿಕರು

ಪಾಕಿಸ್ಥಾನದಿಂದ ಸುಮಾರು ೮೨೦ ಜನ ನಿವೃತ್ತ ಸೈನಿಕರು ಜುನಾಘಡ್ ಪ್ರಾಂತ್ಯಕ್ಕೆ ಆಗಮಿಸಿದ್ದಾರೆಂದು ವರದಿಯಾಗಿದೆ ಇವರೆಲ್ಲರಿಗೂ ಆ ಸಂಸ್ಥಾನವೇ ಶಸ್ತ್ರಾಸ್ತ್ರಗಳನ್ನು ಒದಗಿಸಿ ಕೊಟ್ಟಿದೆಯೆಂದೂ ತಿಳಿದುಬಂದಿದೆ ಇದಲ್ಲದೆ ಸಂಸ್ಥಾನದಲ್ಲಿ ಎಲ್ಲ ಜೈಲುಗಳಿಂದಲೂ ಕ್ರಿಮಿನಲ್ ಅಪಾದಿತರನ್ನು ಬಿಡುಗಡೆಮಾಡಲಾಗಿದೆ.

ಪಾಕಿಸ್ಥಾನ ಸರ್ಕಾರದಿಂದ ಉತ್ತರವಿಲ್ಲ'

ಜುನಘಡ್ ಸಂಸ್ಥಾನದಲ್ಲಿ ರೆಫರೆಂಡಂ ನಡೆಯಬೇಕೆಂದು ಇಂಡಿಯ ಸರ್ಕಾರ ಪಾಕಿಸ್ಥಾನಕ್ಕೆ ಒಂದು ಪತ್ರ ಒರೆದು ಉತ್ತರವನ್ನು ನಿರೀಕ್ಷಿಸುತ್ತಿತ್ತು ಆದರೆ ಈ ವರೆಗೂ ಪಾಕಿಸ್ಥಾನ ಸರ್ಕಾರದಿಂದ ಉತ್ತರ ಬಂದಿಲ್ಲವೆಂದು ತಿಳಿದುಬಂದಿದೆ

ಇಂಡಿಯ ಸರ್ಕಾರಕ್ಕೆ ಮೊದಲೇ ಅನುಮಾನವಿತ್ತು

ಇಂಡಿಯ ಯೂನಿಯನ್ನಿಗೆ ಜುನಘಡ್ ಸೇರುವ ಬಗ್ಗೆ ಇಂಡಿಯ ಸರ್ಕಾರಕ್ಕೆ ಆಗಸ್ಟ್ ೧೫ ರವರೆಗೂ ಅನುಮಾನವಿದ್ದೇ ಇತ್ತು ದೆಹಲಿಯಲ್ಲಿ ಮೌಂಟ್ ಬ್ಯಾಟನ್ನರ ಅಧ್ಯಕ್ಷತೆಯಲ್ಲಿ ನಡೆದ ಸಂಸ್ಥಾನಾಧೀಶರ ಸಮ್ಮೇಳನದಲ್ಲಿ ಭಾಗವಹಿಸಿ, ಭಾರತ ಸಂಯೋಜಿತ ಪತ್ರವನ್ನು ತೆಗೆದುಕೊಂಡು ಹೋದ ಜುನಘಡ್ ರಾಜ್ಯಾಂಗ ಸಲಹೆಗಾರರನ್ನು ಡಿಸ್‌ಮಿಸ್ ಮಾಡಲಾಯಿತೆಂದು ತಿಳಿದುಬಂದಿದೆ

ಜುನಘಡ್ ಸಂಸ್ಥಾನದಲ್ಲಿ ಅನಿರೀಕ್ಷಿತ ಘಟನಾವಳಿಗಳು ನಡೆಯುವ ನಿರೀಕ್ಷೆ ಇದೆ ಜುನಘಡ್ ಬಿಕ್ಕಟ್ಟನ್ನು ನಿವಾರಿಸಲು ಈಗಿರುವುದು ಎರಡೇ ಮಾರ್ಗ ಒಂದು ಪಾಕಿಸ್ಥಾನ್ ಡೊಮಿಯನ್ನಿಗೆ ಜುನಘಡ್ ಸೇರಿರುವುದನ್ನು ರದ್ದುಗೊಳಿಸುವುದು ಇನ್ನೊಂದು ಸಂಸ್ಥಾನದಲ್ಲಿ ರೆಫರೆಂಡಂ ಏರ್ಪಡಿಸುವುದು

ಹೈದರಾಬಾದು ಯಾವ ಡೊಮಿನಿಯನ್ನಿಗೂ ಸೇರುವುದಿಲ್ಲ.

ಹೈದರಾಬಾದು ಯಾವ ಡೊಮಿನಿಯನ್ನಿಗೂ ಸೇರುವುದಿಲ್ಲವೆಂದೂ, ಭಾರತ ಸರ್ಕಾರದೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಲು ಈಗ ಸಂಧಾನ ನಡೆಯುತ್ತಿದೆಯೆಂದೂ ನಿಜಾಮು ಸರ್ಕಾರ ಪ್ರಕಟಿಸಿದೆ ನಿಜಾಮರು ಅಂಗೀಕರಿಸಿರುವ ಹಲವು ಸಲಹೆಗಳ ಮೇಲೆ ಸಂಧಾನವನ್ನು ಮುಂದುವರಿಸಲು ಹೈದರಾಬಾದ ಪ್ರತಿನಿಧಿಗಳು ದೆಹಲಿಗೆ ಹೋಗಿದ್ದಾರೆ

ಹೈದ್ರಾಬಾದಿಗೆ ಹೋಗುತ್ತಿರುವ ಮುಸ್ಲಿಮರ ಬಗ್ಗೆ ಇಂಡಿಯಾ ಸರ್ಕಾರದ ಸೂಚನೆ

ಪಂಜಾಬ್ ಗಲಭೆಗಳಿಂದ ಭಯ ಭ್ರಾಂತರಾಗಿ ಮಧ್ಯಪ್ರಾಂತ್ಯ ಮದರಾಸು, ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತ್ಯಗಳಿಂದ ಮುಸ್ಲಿಮರನೇಕರು ಹೈದರಾಬಾದಿಗೆ ಹೋಗಿ ನೆಲಸುತ್ತಿದ್ದಾರೆಂದು ತಿಳಿದು ಬಂದಿದೆ

ತಮ್ಮ ಪ್ರಾಂತ್ಯಗಳನ್ನು ಬಿಟ್ಟು ಹೈದರಾಬಾದಿಗೆ ಹೋಗಿ ನೆಲಸಲು ಹವಣಿಸುತ್ತಿರುವ ಮುಸ್ಲಿಮರನ್ನು ತಡೆಗಟ್ಟುವುದು ಸೂಕ್ತವೆಂದು ಇಂಡಿಯ ಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೂ ಮತ್ತು ಕೆಲವು ಸಂಸ್ಥಾನಗಳ ಸರ್ಕಾರಗಳಿಗೂ ಸೂಚಿಸಿದೆಯೆಂದು ಗೊತ್ತಾಗಿದೆ

ಹೈದರಾಬಾದಿನ ಕೆಲವು ರಾಜಕೀಯ ಸಂಸ್ಥೆಗಳ ಕೈವಾಡವೇ ಈ ಮುಸ್ಲಿಮರ ವಲಸೆಗೆ ಕಾರಣವೆಂದೂ, ಸಂಸ್ಥಾನದಲ್ಲಿ ಪರಿಣಾಮಕಾರಿಯಾಗುವಂತಹ ಘಟನೆಗಳೇನಾದರೂ ನಡೆಯಬಹುದೆಂಬ ನಿರೀಕ್ಷಣೆಯಿಂದ ಹೆಚ್ಚು ಸಂಖ್ಯೆಯಲ್ಲಿ ಮುಸ್ಲಿಮರನ್ನು ಸಂಘಟಿಸಬೇಕೆಂದು ಕೆಲವು ರಾಜಕೀಯ ಸಂಸ್ಥೆಗಳು ಹೊಂಚು ಹಾಕುತ್ತಿವೆಯೆಂದೂ ಹೇಳಲಾಗಿದೆ. 'ಸರ್ವಸಿದ್ಧತೆ' ಪೂರ್ವಭಾವಿ ಏರ್ಪಾಟುಗಳಲ್ಲಿ ಇದೂ ಒಂದಂತೆ! ಈ ರೀತಿಯಾದ ಅನುಚಿತ ವಲಸೆಯನ್ನು ತಡೆಗಟ್ಟಲು ಈಗಾಗಲೇ ಅನೇಕ ಪ್ರಾಂತ್ಯ ಸರಕಾರಗಳು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿವೆ ಅಧಿಕ ಸಂಖ್ಯೆಯಲ್ಲಿ ಬರುವ ಮುಸ್ಲಿಂ ಗುಂಪಿಗೆ ಪ್ರಯಾಣ ಸೌಕರ್ಯಗಳನ್ನು ಒದಗಿಸಲಾಗುವುದಿಲ್ಲ ರೈಲಿನಲ್ಲಿ ಟಿಕೆಟ್ ಕೂಡ ಕೊಡಲಾಗುವುದಿಲ್ಲ!

ಭಾರತಕ್ಕೆ ಬರ್ಮಾದಿಂದ ಆಹಾರ

ಯಾವುದೇ ಬಗೆಯ ನಿಯಮವನ್ನು ಹಾಕದೆ ಬರ್ಮಾವು ಈಗಿನ ಕಷ್ಟಕಾಲದಲ್ಲಿ ಭಾರತಕ್ಕೆ ಆಹಾರವನ್ನು ಕಳಿಸುವುದೆಂಬುದಾಗಿ ಭಾರತಕ್ಕೆ ಆಗಮಿಸಿದ್ದ ಬರ್ಮಾ ಹೈಕಮಿಷನರಾದ ಉಮಿನ್‌ರವರು ಹೇಳಿದರು

ಮೈಸೂರು ಕಾಂಗ್ರೆಸ್ಸಿಗೂ ಸರಕಾರಕ್ಕೂ ಒಪ್ಪಂದ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೂ, ಸಂಸ್ಥಾನದ ದಿವಾನರವರಿಗೂ ೧೧ ನೆಯ ತಾರೀಖಿನ ದಿವಸ ಒಪ್ಪಂದವಾಯಿತು ನೂತನ ಮಂತ್ರಿಮಂಡಲಿಯನ್ನು ರಚಿಸುವ ವಿಷಯದಲ್ಲಿಯೂ ಮತ್ತು ಅದನ್ನು ಯಾವರೀತಿ ರಚಿಸಬೇಕೆಂಬ ವಿಷಯದಲ್ಲಿಯೂ ಆದ ಒಪ್ಪಂದದ ಮುಖ್ಯಾಂಶಗಳು—

೧. ಮಂತ್ರಿಮಂಡಲದ ರಚನೆ

ಈಗಿರುವ ಮಂತ್ರಿಮಂಡಲವನ್ನು ರದ್ದುಪಡಿಸಬೇಕು

ಹೊಸ ಮಂತ್ರಿಮಂಡಲವನ್ನು ರಚಿಸಬೇಕು

ರಚಿಸುವಾಗ ಕಾಂಗ್ರೆಸ್ ಮತ್ತು ಇತರ ಪಕ್ಷಗಳಿಂದ ಸದಸ್ಯರನ್ನು ಆರಿಸಬೇಕು

ಮಂತ್ರಿಮಂಡಲದಲ್ಲಿ ೯ ಜನ ಸದಸ್ಯರಿಗಿಂತ ಕಡಮೆ ಇರಬಾರದು (ದಿವಾನರವರೂ ಸೇರಿ ಮಂಡಲದಲ್ಲಿ ೧೦ ಮಂದಿ ಸದಸ್ಯರಿರಬೇಕು) ಆ ಪೈಕಿ ಆರು ಜನರನ್ನು ಕಾಂಗ್ರೆಸ್ಸಿನಿಂದ ಆರಿಸಬೇಕು ಉಳಿದ ಮೂರು ಜನರನ್ನು ಕಾಂಗ್ರೆಸ್ಸಿನವರಲ್ಲದವರಿಂದ ಆರಿಸಬೇಕು. ಹೀಗೆ ಆರಿಸುವಾಗ ಕಾಂಗ್ರೆಸ್ಸಿನ ಒಪ್ಪಿಗೆ ಅಥವಾ ಶಿಫಾರಸು ತೆಗೆದುಕೊಳ್ಳಲಾಗುವುದು ಈ ಮೂವರು ಸದಸ್ಯರನ್ನು ಆರಿಸುವಾಗ ಅಸ್ಪೃಶ್ಯ ಕೋಮಿಗೆ ಒಂದು ಸ್ಥಾನವನ್ನು ಮೀಸಲಾಗಿಡುವುದು ಶಾಸನಸಭೆಗಳ ವಿಶ್ವಾಸ ಪಡೆದಿರುವ ವರೆಗೆ ಮಂತ್ರಿಮಂಡಲವು ಅಧಿಕಾರದಲ್ಲಿರುವುದು

ದಿವಾನರವರು ೧೯೪೮ ನೆಯ ಜುಲೈವರೆಗೆ, ಹಂಗಾಮಿಯಾಗಿ ಮಂತ್ರಿಮಂಡಲದಲ್ಲಿದ್ದು ಸಂಯುಕ್ತ ಜವಾಬ್ದಾರಿಯಿಂದ ಕೂಡಿರುವರು.

ಹೊಸಮಂತ್ರಿಗಳನ್ನೂ, ರಾಜ್ಯಾಂಗ ಘಟನಾ ಸಮಿತಿಯನ್ನೂ ಈಗಿರುವ ಶಾಸನಸಭೆಯಿಂದ ಬೇಕಾದರೂ ರಚಿಸಬಹುದು ಅಥವಾ ಹೊಸದಾಗಿ ಚುನಾವಣೆ ಮಾಡಿಯಾದರೂ ಏರ್ಪಡಿಸಬಹುದು

ಕಾಂಗ್ರೆಸ್ ಸದಸ್ಯರ ಪೈಕಿ ಮುಂದಾಳು ಆದವರು ಮುಖ್ಯ ಮಂತ್ರಿಗಳಾಗಿರುವರು

೨. ರಾಜ್ಯಾಂಗರಚನಾ ಸಭೆ

ಮೈಸೂರಿನಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ತಕ್ಕ ರಾಜ್ಯಾಂಗವನ್ನು ರಚಿಸಲು ಒಂದು ರಾಜ್ಯಾಂಗ ರಚನಾ ಸಭೆಯನ್ನು ಕೂಡಲೆ ನಿರ್ಮಿಸಬೇಕು ಪ್ರಜೆಗಳಿಂದ ಚುನಾಯಿತರಾದ ಸದಸ್ಯರಿಂದ ಈ ಸಭೆ ರೂಪುಗೊಳ್ಳಬೇಕು ರಾಜ್ಯಾಂಗ ನಿರ್ಮಾಣಕಾರ್ಯದಲ್ಲಿ ಈ ಸಭೆಗೆ ಪೂರ್ಣ ಜವಾಬ್ದಾರಿ ಇದೆ ಶ್ರೀಮನ್ಮಹಾರಾಜರವರ ೨೪ ೯ ೪೭ರ ಘೋಷಣೆಯಲ್ಲಿ ೧ ಮತ್ತು ೨ ನೆಯ ಷೆಡ್ಯೂಲಿನಲ್ಲಿ ನಮೂದಿಸಿರುವ ವಿಷಯಗಳಲ್ಲಿಯೂ ಸೂಕ್ತ ಬದಲಾವಣೆಗಳನ್ನು ಮಾಡುವ ಹಕ್ಕು ಈ ರಾಜ್ಯಾಂಗ ರಚನಾ ಸಭೆಗೆ ಇದೆ

ಸಂಪೂರ್ಣ ಜವಾಬ್ದಾರಿ ಸರ್ಕಾರವು ೧೯೪೮ ನೆಯ ಜುಲೈ ಮೊದಲನೆಯ ತಾರೀಖಿನ ಹೊತ್ತಿಗೆ ಅಥವಾ ಅದಕ್ಕಿಂತ ಮುಂಚೆ ಜಾರಿಗೆ ಬರುತ್ತದೆ.

ತಾತ್ಕಾಲಿಕ ಸರಕಾರದ ಹೊಸಮಂತ್ರಿಮಂಡಲ ವಿಜಯದಶಮಿಯ ದಿನ ಅಧಿಕಾರವನ್ನು ವಹಿಸಿಕೊಳ್ಳುತ್ತದೆ, ಎಂದು ತಿಳಿದುಬಂದಿದೆ. ಅಂದೇ ಹಳೆಯ ಮಂತ್ರಿಮಂಡಲವು ರದ್ದಾಗುವುದು.

ಮೈಸೂರು ದೇಶದಲ್ಲಿ ಗೃಹಕೈಗಾರಿಕೆ

ಸರ್ಕಾರದ ಪ್ರೋತ್ಸಾಹ

೧೯೩೯ ರಿಂದ ಸರ್ಕಾರದವರು ಗೃಹಕೈಗಾರಿಕೆಯ ಬೆಳವಣಿಗೆಗೆ ಉತ್ತೇಜನ ಕೊಡುತ್ತಿದ್ದಾರೆ. ಇದರ ಫಲವಾಗಿ ೫೦ ಗೃಹಕೈಗಾರಿಕಾಕೇಂದ್ರಗಳು ಸ್ಥಾಪಿತವಾಗಿವೆ. ಪ್ರತಿಯೊಂದು ಕೇಂದ್ರದಲ್ಲಿಯೂ ಅಲ್ಲಿಯ ಸನ್ನಿವೇಶಕ್ಕನುಗುಣವಾಗಿ ಕೈಗಾರಿಕೆಗಳನ್ನು ಏರ್ಪಡಿಸಿದ್ದಾರೆ. ಮೇಲ್ಕಂಡ ಕೇಂದ್ರಗಳಲ್ಲಿ ಅಲ್ಲಿಗೆ ಹತ್ತಿರದಲ್ಲಿರುವ ನಿವಾಸಿಗಳಿಗೆ ಅನುಕೂಲವಾಗುವಂಥ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇದರಿಂದ ಜನರ ಆರ್ಥಿಕಸ್ಥಿತಿಯು ಬಹಳ ಮುಂದುವರಿದಿದೆ. ಜನರು ಹೆಚ್ಚು ಉತ್ಸಾಹದಿಂದ ಶಿಕ್ಷಣವನ್ನು ಪಡೆಯಲು ಮುಂದುಮುಂದಾಗಿ ಬರುತ್ತಿರುವರು ಇಂತಹವರಿಗೆ ನಮ್ಮ ಘನ ಸರ್ಕಾರದವರು ವೇತನಗಳನ್ನೂ, ಧನಸಾಲವನ್ನೂ ಕೈಗಾರಿಕೆಗೆ ಬೇಕಾದ ಸೌಕರ್ಯ ಸೌಲಭ್ಯಗಳನ್ನೂ ಉದ್ಯೋಗಗಳನ್ನೂ ಕೊಡುತ್ತಿದ್ದಾರೆ

ಮುಖ್ಯ ಗೃಹಕೈಗಾರಿಕೆಗಳು

ಈ ಕೆಳಗೆ ಕೊಟ್ಟಿರುವ ಕೈಗಾರಿಕೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಸ್ಥಾಪಿಸಿದೆ.

೧. ಚಾಪೆ ಹೆಣೆಯುವುದು
೨. ಕೈಕಾಗದ
೩. ಕಮ್ಮಾರನ ಕೆಲಸ
೪. ತೆಂಗಿನ ನಾರಿನ ಕೈಗಾರಿಕೆ
೫ ಮರಗೆಲಸ
೬. ಓಲೆಗರಿಕೈಗಾರಿಕೆ
೭. ಚರ್ಮ ಹದಮಾಡುವುದು
೮. ಚರ್ಮದ ಹೊಲಿಗೆ
೯. ಮಣ್ಣಿನ ಸಾಮಾನಿನ ಕೆಲಸ
೧೦. ಹಿತ್ತಾಳೆ ಕೆಲಸ
೧೧. ಗುಂಡಿ ತಯಾರಿಕೆ
೧೨. ಚಿತ್ರದ ಕೆಲಸ
೧೩. ಜವೆ ಕಟ್ಟುವ ಕೆಲಸ
೧೪ ಬಣ್ಣದ ಸಾಮಾನಿನ ಕೈಗಾರಿಕೆ. ಇತ್ಯಾದಿಗಳು

ಚರ್ಮ ಹದ ಮಾಡುವುದು

ಚರ್ಮ ಹದಮಾಡುವ ಕೇಂದ್ರಗಳಲ್ಲಿ ಪ್ರತಿ ವರುಷವೂ ೧೦ ೧೨ ಜನಗಳಿಗೆ ಶಿಕ್ಷಣವನ್ನು ಕೊಡುತ್ತಿವೆ. ೧೦೦೦ ರೂಪಾಯಿ ಬೆಲೆ ಬಾಳುವ ಸಾಮಾನು ಪ್ರತಿ ವರುಷವೂ ಈ ಕೇಂದ್ರಗಳಲ್ಲಿ ತಯಾರಾಗುತ್ತಿದೆ.

ಕಮ್ಮಾರನ ಕೆಲಸ

ಕಮ್ಮಾರ ಕೈಗಾರಿಕಾ ಕೇಂದ್ರಗಳಲ್ಲಿ ೩೫-೪೦ ಜನಗಳು ಕೆಲಸ ಮಾಡುತ್ತಾರೆ. ಇದರಲ್ಲಿ ವರ್ಷ ಒಂದಕ್ಕೆ ರೂ. ೧೨೮೬೭ ಬೆಲೆಬಾಳುವ, ರೈತರಿಗೆ ಬೇಕಾದ ಸಾಮಾನುಗಳು ತಯಾರಾಗುತ್ತಿವೆ.

ಕೈಕಾಗದ

ಕೈಯಿಂದ ತಯಾರಾಗುವ ಕಾಗದದ ತಯಾರಿಕಾಕೇಂದ್ರಗಳಲ್ಲಿ ೩೨ ೩೫ ಜನಗಳಿಗೆ ಕೆಲಸವನ್ನು ಕೊಡುವುದಲ್ಲದೆ ವರ್ಷ ೧ಕ್ಕೆ ರೂ ೩೮೨೦ ಬೆಲೆಯುಳ್ಳ ಕಾಗದವನ್ನು ತಯಾರುಮಾಡುತ್ತಿದ್ದಾರೆ ಇದರಲ್ಲಿ ೭೧೦೦ ರೂ ಬೆಲೆಯಷ್ಟು [illegible]ದ ಮಾರಾಟವಾಗಿದೆ.

ಚಾಪೆ ಹೆಣೆಯುವುದು

ಚಾಪೆಯ ಕೈಗಾರಿಕೆಗೆ ಜನಗಳ ಬೆಂಬಲ ಚೆನ್ನಾಗಿದೆ. ೧೭ ಕೇಂದ್ರಗಳಲ್ಲಿ ಈ ಕೈಗಾರಿಕೆ ನಡೆಯುತ್ತಿದೆ ಇವುಗಳಲ್ಲಿ ಒಟ್ಟು ೧೦ ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಬೆಲೆಬಾಳುವಷ್ಟು ಚಾಪೆ ತಯಾರಾಗಿದೆ. ೮೦೦೦ ರೂಪಾಯಿಗಳು ಬೆಲೆ ಬಾಳುವಷ್ಟು ಚಾಪೆಗಳು ಆಗಲೆ ಮಾರಾಟವಾಗಿವೆ ಈ ಕೇಂದ್ರಗಳಲ್ಲಿ ಸುಮಾರು ಜನರಿಗೆ ಶಿಕ್ಷಣವನ್ನು ಕೊಟ್ಟಿದ್ದಾರೆ ೧೫ ಜನಗಳಿಗೆ ಮಾಹೆಯಾನ ತಲಾ ೨೫ ರೂ ವೇತನವನ್ನೂ ಕೊಟ್ಟು ಈ ಕೈಗಾರಿಕೆಯನ್ನ ಉಜ್ವಲ ಸ್ಫೂರ್ತಿಯಿಂದ ಮುಂದುವರಿಸಿದ

ಗುಂಡಿ ತಯಾರಿಕೆ

ಗುಂಡಿ ತಯಾರು ಮಾಡುವ ಕೇಂದ್ರಗಳಲ್ಲಿ ೧೧ ಮಂದಿಗೆ ಜೀವನೋಪಾಯವನ್ನು ಕಲ್ಪಿಸಿರುವುದಲ್ಲದೆ, ೭೦೦ ರೂ ಬೆಲೆಬಾಳುವ ಸರಕನ್ನು ತಯಾರಿಸಿದೆ ಇದರಲ್ಲಿ ಕೆಲವು ಭಾಗ ಆಗಲೇ ಮಾರಾಟವಾಗಿದೆ

ತೆಂಗಿನ ನಾರಿನ ಕೈಗಾರಿಕೆ

ತೆಂಗಿನ ನಾರಿನ ಕೈಗಾರಿಕಾ ಕೇಂದ್ರಗಳಲ್ಲಿ ೧೫ ಜನಗಳಿಗೆ ಉದ್ಯೋಗ ಕೊಟ್ಟಿದ ಇವುಗಳಲ್ಲಿ ೧೫೦೦ ರೂಪಾಯಿ ಬೆಲೆಬಾಳುವ ತೆಂಗಿನ ನಾರಿನ ಸಾಮಾನುಗಳು ತಯಾರಾಗಿವೆ ಸುಮಾರು ೫೦೦ ರೂಪಾಯಿ ಬೆಲೆಯ ಸಾಮಾನು ಮಾರಾಟವಾಗಿದೆ

ಮಣ್ಣಿನ ಸಾಮಾನಿನ ಕೆಲಸ

ಮಣ್ಣಿನ ಸಾಮಾನಿನ ಕೈಗಾರಿಕಾ ಕೇಂದ್ರಗಳಲ್ಲಿ ೩೦ ೩೫ ಉದ್ಯೋಗಿಗಳಿಗೆ ಜೀವನದ ಮಾರ್ಗವನ್ನು ಕಲ್ಪಿಸಿದೆ ೩೦೦೦ ರೂಪಾಯಿ ಬೆಲೆಬಾಳುವಷ್ಟು, ಸಾರ್ವಜನಿಕರಿಗೆ ಬೇಕಾದ ಸಾಮಾನುಗಳನ್ನು ಒದಗಿಸಿದೆ

ಹಿತ್ತಾಳೆ ಕೆಲಸ

ಹಿತ್ತಾಳೆ ಸಾಮಾನುಗಳನ್ನು ಮಾಡುವ ಕೇಂದ್ರಗಳಲ್ಲಿ ೧೦ ೧೫ ಜನಗಳು ದಿನ ಕೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಒಂದು ಸಾವಿರ ರೂ. ಬೆಲೆಬಾಳುವಷ್ಟು ವಿಗ್ರಹಗಳೇ ಮೊದಲಾದ ವಸ್ತುಗಳು ತಯಾರಾಗಿವೆ.

ಇತರ ಕೈಗಾರಿಕೆಗಳು

ಇತರ ಗೃಹಕೈಗಾರಿಕೆಗಳಲ್ಲಿಯೂ ಮೇಲೆ ನಮೂದಿಸಿದ ರೀತಿಯಲ್ಲಿ ಶಿಕ್ಷಣವನ್ನು ಕೊಡುವುದಲ್ಲದೆ, ದಿನಕೂಲಿಗರೂ ಕೂಡ ಕೆಲಸಮಾಡಿ ತಯಾರಿಸಿದ ನಾನಾ ರೀತಿಯ ವಸ್ತುಗಳು ಮಾರಾಟವಾಗುತ್ತಿವೆ.

ಕೈಗಾರಿಕೆಗಳನ್ನು ಮುಂದುವರಿಸಲು ಉತ್ಸಾಹವುಳ್ಳ ಸಾರ್ವಜನಿಕರಿಗೆ ಸರ್ಕಾರದವರು ಕೆಲವು ಕೇಂದ್ರಗಳನ್ನು ಎರವಲಾಗಿ ಕೊಟ್ಟಿದ್ದಾರೆ. ಅಲ್ಲದೆ ಕೈಗಾರಿಕೆಯನ್ನು ಸ್ಥಾಪಿಸುವವರಿಗೆ ಬೇಕಾದ ಅನುಕೂಲಗಳನ್ನು ಅಂದರೆ ಉಪಕರಣಗಳು, ಸಾಲ ಮುಂತಾದುವುಗಳನ್ನು ಕೊಟ್ಟಿರುತ್ತಾರೆ.

ಕೃತಕ ಸೌದೆ

ಇನ್ನು ಮುಂದೆ ಒಲೆ ಹೊತ್ತಿಸಲು ಸೌದೆ ಇಲ್ಲವೆಂಬ ಹೆಂಗಸರ ಗೋಳು ತಪ್ಪಬಹುದು ಅಮೆರಿಕದ ವಿಜ್ಞಾನಿಗಳು ಕೆಲವು ರಾಸಾಯನಿಕ ಪದಾರ್ಥಗಳನ್ನು ಸೇರಿಸಿ ಸೌದೆಯಂತೆ ಉರಿಯುವ ವಸ್ತುವನ್ನು ಕಂಡುಹಿಡಿದಿದ್ದಾರೆ. ಇದು ನಿಜವಾದ ಸೌದೆಯೂ ಉರಿಯುವಂತೆಯೇ ಉರಿಯುತ್ತದೆ. ಅದಕ್ಕಿಂತಲೂ ಹೆಚ್ಚು ಶಾಖವಿರುತ್ತದೆ. ಅಲ್ಲದೆ ಹೆಚ್ಚಾಗಿ ಬಾಳಿಕೆ ಬರುತ್ತದೆ ಇಷ್ಟೇ ಅಲ್ಲ; ಇದರಿಂದ ಮರದಲ್ಲಿ ಮಾಡಬಹುದಾದ ಕುರ್ಚಿ, ಮೇಜು, ಬೀರು ಮುಂತಾದುವುಗಳನ್ನೂ ಸಹ ತಯಾರಿಸಬಹುದು

ಗಂಡನನ್ನು ಬಿಡಲು ವಿಚಿತ್ರಕಾರಣ

ಚಿಕಾಗೋ ಎಂಬುದು ಅಮೇರಿಕದಲ್ಲಿ ಒಂದು ಪಟ್ಟಣ. ಅಲ್ಲಿ ಒಬ್ಬ ಹೆಂಗಸು ತನ್ನ ಗಂಡನನ್ನು ಬಿಟ್ಟು ಬಿಡಲು ನಿಶ್ಚಯಿಸಿದ್ದಾಳೆ. ತನ್ನ ಮನೆಯಲ್ಲಿ ತಯಾರಿಸಿದ್ದ ಒಂದು ವಿಧವಾದ ಆಹಾರವನ್ನು ತಿನ್ನಲೇಬೇಕೆಂದು ಆಕೆಯ ಗಂಡನು ಅವಳನ್ನು ಬಲವಂತಪಡಿಸಿದನಂತೆ! ಆದರಂತೆ ಅದನ್ನು ತಿನ್ನಲು ಪ್ರಾರಂಭಮಾಡಿದ ಆರು ತಿಂಗಳೊಳಗಾಗಿ ಆಕೆ ಮೊದಲಿದ್ದ ತೂಕಕ್ಕಿಂತಲೂ ಅರ್ಧದಷ್ಟು ಹೆಚ್ಚಿದಳು. ಅಲ್ಲದೆ ತುಂಬ ದಪ್ಪವಾಗಿಬಿಟ್ಟಳು ದಪ್ಪವಾಗುವುದು ತನಗೆ ಇಷ್ಟವಿಲ್ಲದೇ ಇರುವುದರಿಂದ "ಈ ಗಂಡ ನನಗೆ ಬೇಡ" ಎಂದು ಆತನನ್ನು ಬಿಡುತ್ತಾಳಂತೆ!

ಹನ್ನೊಂದು ಅಡಿ ಉದ್ದ ರೆಕ್ಕೆಯುಳ್ಳ ಹಕ್ಕಿ

"ಡಯೋಮೀಡಿಯಾಎಕ್ಸುಲಾನ್ಸ್" ಎಂಬ ಒಂದುಜಾತಿಯ ಹಕ್ಕಿ ಇದೆ ಇದರ ಒಂದೊಂದು ರೆಕ್ಕೆಯೂ ಹನ್ನೊಂದು ಅಡಿ ಉದ್ದವಿದೆ. ಈ ಜಾತಿಯ ಒಂದು ಹಕ್ಕಿ ಸುಮಾರು ಮೂರು ಸಾವಿರದ ನೂರೈವತ್ತು ಮೈಲಿ ದೂರವನ್ನು ಕೇವಲ ಒಂಬತ್ತು ದಿನಗಳಲ್ಲಿ ಪ್ರಯಾಣಮಾಡಿದೆಯಂತೆ! ಇಷ್ಟು ವೇಗವಾಗಿ ಹಾರಲು ಅದರ ಉದ್ದವಾದ ರೆಕ್ಕೆಗಳೇ ಕಾರಣ.

ಈ ಹಕ್ಕಿ ಬಹಳ ಹೊತ್ತಿನ ವರೆಗೆ ಹಾರುತ್ತಲೇ ಇರುತ್ತದೆ. ಹಾಗೆ ಹಾರುವಾಗ ತನ್ನ ರೆಕ್ಕೆಗಳನ್ನು ಸ್ವಲ್ಪವೂ ಅಲ್ಲಾಡಿಸುವುದಿಲ್ಲ. ಗಾಳಿಯೇ ತಳ್ಳಿಕೊಂಡು ಹೋಗುವಂತೆ ಬಿಚ್ಚಿಕೊಂಡಿರುತ್ತದೆ ಈ ರೀತಿ ಗಾಳಿಯ ಆವಶ್ಯಕತೆ ಇರುವುದರಿಂದ ಯಾವಾಗಲೂ ಗಾಳಿಬೀಸುತ್ತಿರುವ ಪ್ರದೇಶದಲ್ಲೇ ಈ ಹಕ್ಕಿ ವಾಸಿಸುತ್ತದೆ. ಆಹಾರ ಬೇಕಾದಾಗ ಮಾತ್ರ ಅದು ಕೆಳಗಿಳಿದು ಬರುತ್ತದೆ.

ಈ ಹಕ್ಕಿಗೆ ಕಾಲುಗಳು ಹಾರಾಡುವುದಕ್ಕೆ ತಕ್ಕಂತೆ ಇದೆಯೇ ಹೊರತು ನಡೆಯುವುದಕ್ಕೆ ತಕ್ಕಂತೆ ಇಲ್ಲ. ಆದುದರಿಂದ ಆಹಾರವನ್ನು ತಿನ್ನಲು ಕೆಳಗೆ ಬಂದಾಗ ಇದು ಬಹಳ ಕಷ್ಟಪಟ್ಟು ನಡೆಯುತ್ತದೆ. ಪ್ರಪಂಚದಲ್ಲೆಲ್ಲಾ ಅತ್ಯಂತ ಉದ್ದವಾದ ರೆಕ್ಕೆಯುಳ್ಳ ಹಕ್ಕಿಯೆಂದರೆ ಇದೇ.

ಮೈಸೂರು, ಕಟ್ಟೆ ಮಳಲವಾಡಿ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ರಾ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೮ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಅಕ್ಟೋಬರ್ ೧೯೪೭ [ಸಂಚಿಕೆ ೨೭

ಶ್ರೀ ರೇಣುಕ ವಿಜಯ ಮಹಾಪುರಾಣ ಸಮಾಪ್ತಿ ಸಮಾರಂಭ ಉಡಗಿ

ಅಕ್ಕಲಕೋಟಿ ಸಂಸ್ಥಾನದಲ್ಲಿರುವ ಉಡಗಿ ಗ್ರಾಮದ ಸಮಸ್ತ ಧೈವದವರು ತಪೋನಿಷ್ಠರೂ ಪ್ರವಚನ ಪಟುಗಳೂ ಆದ ಶ್ರೀ॥ ಷ॥ ಬ್ರ॥ ಗುರುಸಿದ್ಧಶಿವಾಚಾರ್ಯ ಸ್ವಾಮಿಗಳು ಭೂಸನೂರು ಬೃಹನ್ಮಠ ಇವರನ್ನು ತಮ್ಮ ಗ್ರಾಮಕ್ಕೆ ಬರಮಾಡಿಕೊಂಡು ಶ್ರಾವಣ ಮಾಸದಲ್ಲಿ ಮೇಲ್ಕಂಡ ಮಹಾಪುರಾಣ ಶ್ರವಣವನ್ನು ಬಹು ಭಕ್ತಿಯಿಂದ ಆಚರಿಸಿದರು ಮೇಲ್ಕಂಡ ಸ್ವಾಮಿಗಳವರು ಪುರಾಣವನ್ನು ಬಹು ಮನೋಹರವಾಗಿ ಜನಗಳಿಗೆ ಬೋಧಿಸುತ್ತಿದ್ದರು ವೇ॥ ಫಕೀರಸ್ವಾಮಿ ಉಡಗಿ ಇವರು ತಮ್ಮ ಮಾಜುಳ ಧ್ವನಿಯಿಂದ ಓದುತ್ತಿದ್ದರು ಮ॥ರಾ॥ ಸಿದ್ಧರಾಮಪ್ಪ ಮಾಸ್ತರ್ ಇವರು ಹಾರ್ಮೋನಿಯಂ ಮನೋಹರವಾಗಿ ನುಡಿಸುತ್ತಿದ್ದರು ' ಈ ಪುರಾಣ ಶ್ರವಣಕ್ಕೆ ಬಹು ದೂರ ಪ್ರಾಂತಗಳಿಂದ ಜನರು ಆಗಮಿಸುತ್ತಿದ್ದರು ಜನರು ಸಮರ್ಪಿಸುವ ನಾರಿಕೇಳ ಫಲಾದಿಗಳು ಪರ್ವತಾಕಾರವಾಗಿ ಪ್ರತಿದಿವಸವೂ ಬೀಳುತ್ತಿದ್ದವು ಈರೀತಿ ವೈಭವದೊಡನೆ ಪುರಾಣವು ಭಾದ್ರಪದ ಶುದ್ಧ ಅಷ್ಟಮಿ ವರೆಗೆ ಸಾಗಿ ಅಂದು ಸಮಾಪ್ತಿಗೊಂಡಿತು ಆ ದಿವಸ ಪ್ರಾತಃಕಾಲ ಆಚಾರ್ಯರ ಮೂರ್ತಿಗೆ ಅಭಿಷೇಕಾದಿಗಳು ನಡೆದು ಮಧ್ಯಾಹ್ನ ಗಣಾರಾಧನೆಯು ನೆರವೇರಿತು ಅನೇಕ ಗ್ರಾಮಗಳಿಂದ ಅಸಂಖ್ಯಾಕ ಜನರು ಆಗಮಿಸಿದ್ದರು. ೮-೧೦ ಗ್ರಾಮಗಳಿಂದ ಭಜನಾಸಂಘದವರು ಬಂದಿದ್ದರು ಚಿಕ್ಕ ಚಿಕ್ಕ ಬಾಲಕರು ಶ್ರೀಭೂಸನೂರು ಸ್ವಾಮಿಗಳವರು ರಚಿಸಿದ ಧರ್ಮೋಪದೇಶದ ಪದಗಳನ್ನು ಸುಂದರವಾಗಿ ಹಾಡುತ್ತಿದ್ದರು ಅಗಣಿತ ಜನಸ್ತೋಮದೊಡನೆ ಪುರಾಣ ಮಹೋತ್ಸವವು ಅಭೂತಪೂರ್ವವಾಗಿ ನೆರವೇರಿತು. ಆ ಮಹೋತ್ಸವ ಸಮಯದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಮತ್ತು ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತ್ತು. ಉತ್ಸವವು ಶ್ರೀಮಲ್ಲಿಕಾರ್ಜುನ ದೇವಾಲಯಕ್ಕೆ ಬಂದ ಮೇಲೆ ಶ್ರೀಭೂಸನೂರು ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಮ॥ರಾ॥ ವಿಶ್ವನಾಥ ಮರಾಪಾವಾಡಿ-ಇವರು ಗುರುಭಕ್ತಿ ವಿಷಯವಾಗಿಯೂ, ವೀರಣ್ಣಪ್ಪ, ಭೂಸನೂರಕರ್ ಇವರು ದಾತೃತ್ವ ವಿಷಯವಾಗಿಯೂ, ಶ್ರೀಮಂತ ಗುರುಶಾಂತಪ್ಪ, ಎಲಶೆಟ್ಟಿ, ಇವರು ಗುರುಮಹಿಮೆಯ ವಿಷಯವಾಗಿಯೂ ಜೈನಾಪುರದ ಮಹದೇವಶಾಸ್ತ್ರಿಗಳು ವೀರಶೈವ ಮತದ ಪ್ರಾಚೀನತ್ವದ ವಿಷಯವಾಗಿಯೂ ಶ್ರೀಚನ್ನವೀರ ಶಿವಾಚಾರ್ಯರು, ಭೂಸನೂರು ಇವರು ವರ್ಣಾಶ್ರಮಧರ್ಮಗಳ ವಿಷಯವಾಗಿಯೂ, ಮನೋಹರವಾಗಿ ಭಾಷಣಮಾಡಿದರು ಆಮೇಲೆ ಅಧ್ಯಕ್ಷರು ಸಮಯೋಚಿತ ಭಾಷಣ ಮಾಡಿ ಶ್ರೀಯುತ ಚೆನ್ನಬಸಪ್ಪಣ್ಣ ಪ್ಯಾಟಿ ಉಡಗಿ ಇವರಿಗೆ "ವೀರಶೈವ ಧರ್ಮಾದರ್ಶ" ಎಂಬ ಬಿರುದನ್ನು ದಯಪಾಲಿಸಿದರು ಮತ್ತು ಸಿದ್ಧರಾಮಪ್ಪ ಮಾಸ್ತರ್, ಇವರಿಗೆ ' ಗಾಯನ ಕೋಕಿಲ " ಎಂಬ ಪದವಿಯನ್ನು ಅನುಗ್ರಹಿಸಿದರು ಹೇಮಾದ್ರಿ ಬಳಿಗಾರ ಇವರು ಪಂಚಾಚಾರ್ಯರ ಮಂಗಳವನ್ನು ಮಾಡಿದ ಮೇಲೆ ಸಭೆಯು ಮುಕ್ತಾಯವಾಯಿತು

ಭಾದ್ರಪದ ಶುದ್ಧ ೧೦ ದಿವಸ ಮೇಲ್ಕಂಡ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಸಿದ್ಧಪ್ಪ, ಬಿರಾದಾರ್, ಶಿವಪ್ಪ ಹಾರಕುಡೆ, ಚೆನ್ನಪ್ಪ, ಮೇತ್ರಿ, ಕಂಟ್ಯಪ್ಪ ಹಾರಕುಡೆ, ಮೊದಲಾದವರ ಪ್ರಯತ್ನ ವಿಶೇಷದಿಂದ ವೀರಶೈವಧರ್ಮಸುಧಾರಣ ಸಂಘವು ಸ್ಥಾಪಿಸಲ್ಪಟ್ಟಿತು ಶುದ್ಧ ೧೧ ದಿವಸ ೬೫ ಎತ್ತುಗಳನ್ನು ಹೂಡಿದ ರಥದಲ್ಲಿ ಶ್ರೀಸ್ವಾಮಿಗಳವರ ಅಭೂತಪೂರ್ವವಾದ ಉತ್ಸವವು ನೆರವೇರಿತು ಈರೀತಿ ಮಹಾ ಗುರುಕಾರ್ಯವನ್ನು ನೆರವೇರಿಸಿದ ಉಡಗಿ ಗ್ರಾಮದ ಸದ್ಭಕ್ತರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಸಮಸ್ತ ಸುಖಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ಪಂಚಾಚಾರ್ಯರ ಭಜನೆ ಸಮಾಪ್ತಿ ಭೂಸನೂರು

ನಿಜಾಂ ಇಲಾಖಾ, ಗುಲ್ಬರ್ಗಾ ಜಿಲ್ಲಾ ಭೂಸನೂರು ಗ್ರಾಮದಲ್ಲಿ ಪ್ರತಿವರ್ಷದ ಪದ್ಧತಿಯಂತೆ, ಈ ವರ್ಷವೂ ಸಹ ಶ್ರಾವಣ ಮಾಸ ಪೂರ್ತಿಯಾಗಿ ಜಗದಾಚಾರ್ಯರ ಭಜನೆಯು ಬಹು ಭಕ್ತಿಯಿಂದ ನೆರವೇರಿಸಲ್ಪಟ್ಟಿತು ಭಜನ ಸಮಾಪ್ತಿಯು ಭಾದ್ರಪದ ಬಹುಳ ೭ ಸೋಮವಾರದ ದಿವಸ ನೆರವೇರಿತು ಆ ದಿನ ಪ್ರಾತಃಕಾಲ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನಾದಿಗಳು ನೆರವೇರಿದುವು ಮಧ್ಯಾಹ್ನ ಗಣಾರಾಧನೆಯು ನಡೆಯಿತು ಸಾಯಂಕಾಲ ಸಭೆಗೂಡಿತು ಹೇಮಾದ್ರಿ, ಮಾಸ್ತರ್ ಇವರು ಮನೋಹರವಾಗಿ ಆಚಾರ್ಯರಸ್ತೋತ್ರಗಳನ್ನು ಹಾಡಿದರು ಆಮೇಲೆ ಶ್ರೀಮಂತ ಗುರುಶಾಂತಪ್ಪ, ಎಲಶೆಟ್ಟಿ ಇವರು ಒಗ್ಗಟ್ಟಿನ ಬಗ್ಗೆ ಚೆನ್ನಾಗಿ ಮಾತನಾಡಿದರು ಬಳಿಕ ಮ॥ ರಾ॥ ವೀರಣ್ಣಪ್ಪ, ಚೌಲಿ ಇವರು ಆಚಾರ್ಯರ ಜಯಂತಿ ಬಗ್ಗೆ ಬಹು ಮನೋಹರವಾಗಿ ಭಾಷಣಮಾಡಿದರು ಬಳಿಕ ಶ್ರೀಗುರುಸಿದ್ಧ ಶಿವಾಚಾರ್ಯಸ್ವಾಮಿಗಳವರು ಶಿವನಾಮದ ಮಹತ್ವವನ್ನು ಸಪ್ರಮಾಣವಾಗಿ ಬೋಧಿಸಿದರು ಎಲ್ಲಾ ಮತದವರೂ, ಪ್ರತಿವರ್ಷವೂ ತಪ್ಪದೆ ಶ್ರೀಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ದೊಡ್ಡ ಹಬ್ಬದಂತೆ ಆಚರಿಸುತ್ತೇವೆಂದು ಭಕ್ತಿಪೂರ್ವಕವಾಗಿ ಹೇಳಿದರು ಬಳಿಕ ಶ್ರೀಜಗದ್ಗುರು ಪಂಚಾಚಾರ್ಯರ ಮತ್ತು ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಗುರಪ್ಪ, ನಿಂಬಾಳ.

ಶ್ರೀಸೂಡಿ ಸ್ವಾಮಿಗಳವರು ಶಿವಾಧೀನರಾದರು

ಧಾರವಾಡ ಜಿ॥ ರೋಣ ತಾ॥ ಸೂಡಿಗ್ರಾಮದ ಜುಕ್ತಿ ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಉಮಾಪತಿ ಶಿವಾಚಾರ್ಯಸ್ವಾಮಿಗಳವರು ಇದೇ ತಿಂಗಳು ೨೦ ನೆಯ ತಾರೀಖು ಸೋಮವಾರದ ದಿವಸ ತಮ್ಮ ಗ್ರಾಮದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರು ಬಹುಕಾಲ ಕಾಶೀಕ್ಷೇತ್ರದಲ್ಲಿದ್ದು ಶಾಸ್ತ್ರಾಭ್ಯಾಸವನ್ನು ಮಾಡಿ ದೊಡ್ಡ ಪಂಡಿತರೆನಿಸಿಕೊಂಡಿದ್ದರು ತಮ್ಮ ಗ್ರಾಮಕ್ಕೆ ಒಂದಮೇಲೆ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅನೇಕ ಜನವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದರು ಇವರು ಒಳ್ಳೆಪೂಜಾನಿಷ್ಠರೂ ಶಾಂತಸ್ವಭಾವದವರೂ, ಆಗಿದ್ದರು ಇವರಲ್ಲಿರುವ ಉತ್ತಮ ಸ್ವಭಾವವನ್ನು ಕಂಡು ಬಹು ಜನರು ಇವರಲ್ಲಿ ವಿಶೇಷ ಭಕ್ತಿಯನ್ನಿಟ್ಟು ನಡೆದುಕೊಳ್ಳುತ್ತಿದ್ದರು ಗದಗ ಬೆಟಗೇರಿಯಲ್ಲಿರುವ ಶ್ರೀಮಂತ ಬೇಲೇರಿ ಸಂಗನಬಸವಪ್ಪನವರು ಇವರಲ್ಲಿ ಅಪಾರವಾದ ಭಕ್ತಿಯನ್ನಿಟ್ಟಿದ್ದರಲ್ಲದೆ ಇವರು ಸ್ಥಾಪಿಸಬೇಕೆಂದಿದ್ದ ವಿದ್ಯಾಮಂದಿರಕ್ಕಾಗಿ ಸ್ಟೇಷನ್ನಿಗೆ ಸಮೀಪದಲ್ಲಿ ಬಹು ಬೆಲೆಬಾಳುವ ಭೂಮಿಯನ್ನು ದಾನಮಾಡಿದ್ದರು. ಅಲ್ಲದೆ ಇವರ ಶಿಷ್ಯರಾದ ಮ॥ ರಾ॥ ಹಿರೇಮನೆ ಪಾಟೀಲ, ನೀಲಪ್ಪಗೌಡರು ಇವರಲ್ಲಿ ವಿಶೇಷ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರು ಇವರ ವಿಯೋಗದಿಂದ ಗುರುವರ್ಗಕ್ಕೆ ದೊಡ್ಡ ಹಾನಿಯೆಂದೇ ಹೇಳಬೇಕಾಗಿದೆ ಈಶ್ವರೇಚ್ಛೆಗೆ ಉಪಾಯವಿಲ್ಲ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ

ಸ್ವೀಕಾರ

ಅಕ್ಕಲಕೋಟಿ ಸಂಸ್ಥಾನಕ್ಕೆ ಸೇರಿದ ಉಡಗಿ ಗ್ರಾಮದಲ್ಲಿ ಶ್ರೀರೇಣುಕ ವಿಜಯ ಮಹಾಪುರಾಣ ಸಮಾಪ್ತಿ ಸಮಾರಂಭವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಮ॥ ರಾ॥ ಗುರಪ್ಪ, ಸೊಡ್ಡಿ, ಇವರ ದ್ವಾರಾ ತಲಪಿರುತ್ತವೆ

ನಿಜಾಂ ಇಲಾಖಾ ಗುಲ್ಬರ್ಗ ತಾ॥ ಭೂಸನೂರು ಗ್ರಾಮದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಭಜನೆಯು ಸಮಾಪ್ತಿಗೊಂಡ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮ॥ ರಾ॥ ಗುರಪ್ಪ, ನಿಂಬಾಳ, ಇವರ ದ್ವಾರಾ ತಲಪಿರುತ್ತದೆ

ಅರಸೀಕೆರೆ ತಾ॥ ಒಡೇರಹಳ್ಳಿ ಗ್ರಾಮದ ವೇ॥ ವೀರಭದ್ರಾರಾಧ್ಯರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ವೇ॥ ಎಂ ಬಸವಾರಾಧ್ಯರು ಪ್ರಭಾಪೋಷಣೆಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಚಾಚಾರ್ಯಪ್ರಭಾ.

೧೯೪೭ನೆಯ ಅಕ್ಟೋಬರ್ ತಾ| ೨೭ನೇ ಸೋಮವಾರ

ಗುರುವರ್ಗದವರಿಗೆ ಧಾರ್ಮಿಕವಿದ್ಯೆಯ ಆವಶ್ಯಕತೆ

ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ತಮ್ಮ ಮತದ ಧರ್ಮನಿಯಮಗಳು ಸುಲಲಿತವಾಗಿ ಸಾಗಲೆಂಬ ಸದುದ್ದೇಶದಿಂದ ರಂಭಾಪುರೀ ಉಜ್ಜಯಿನಿ, ಹಿಮಾಲಯ, ಶ್ರೀಶೈಲ ಹಾಗೂ ಕಾಶೀ ಈ ಪಂಚಪುಣ್ಯಕ್ಷೇತ್ರಗಳಲ್ಲಿ ಪಂಚಧರ್ಮಪೀಠಗಳನ್ನು ಸ್ಥಾಪಿಸಿದರು ಅನಂತರ ಮುಖ್ಯಪೀಠಗಳಿಗೆ ಶಾಖಾರೂಪದಿಂದ ಭರತಖಂಡದಲ್ಲಿ ಅನೇಕ ಉಪಮಠಗಳು ಸ್ಥಾಪಿಸಲ್ಪಟ್ಟವು ವೀರಶೈವರಿರತಕ್ಕ ಪ್ರತಿಯೊಂದು ಗ್ರಾಮದಲ್ಲಿಯೂ ಕಾಲೂ ಒಂದೊಂದು ಗುರುವರ್ಗದ ಮಠಗಳು ಉಂಟೇ ಉಂಟು ಗ್ರಾಮಾಧಿಕಾರಿಯು ತನ್ನ ಗ್ರಾಮದ ಯಾವತ್ತು ಜವಾಬ್ದಾರಿಯನ್ನು ವಹಿಸಿರುವಂತೆ ಗ್ರಾಮಾಚಾರ್ಯನೆಂದು ಪ್ರಸಿದ್ಧನಾಗಿರುವ ಗುರುವರ್ಗದ ಮಠಾಧಿಕಾರಿಯು ತನ್ನ ಗ್ರಾಮದಲ್ಲಿರತಕ್ಕ ಸಕಲ ವೀರಶೈವರ ಧರ್ಮದ ಜವಾಬ್ದಾರಿಯನ್ನು ವಹಿಸಿರುವನು ಗ್ರಾಮದ ಮಠಾಧಿಕಾರಿಯು ತನ್ನ ಗ್ರಾಮದಲ್ಲಿರತಕ್ಕ ವೀರಶೈವರ ಧರ್ಮಾಚರಣೆಗಳನ್ನು ಪರೀಕ್ಷಿಸುತ್ತ ಧಾರ್ಮಿಕಪುರುಷರನ್ನು ರಕ್ಷಿಸುತ್ತಲೂ ಅಧಾರ್ಮಿಕಪುರುಷರನ್ನು ಶಿಕ್ಷಿಸುತ್ತಲೂ, ಶಿಷ್ಯರನ್ನುದ್ಧರಿಸಲು ಮೋಕ್ಷಮಾರ್ಗಪ್ರತಿಪಾದಕವಾದ ಸದುಪದೇಶವನ್ನು ಮಾಡುತ್ತಲೂ, ಶಿವಪೂಜಾದಿ ಷಟ್ಕರ್ಮನಿರತರಾಗಿ ಸದಾ ಪ್ರಸನ್ನರಾಗಿ ಲಿಂಗಾಂಗಸಾಮರಸ್ಯಾನುಭಾವಕಳರಾಗುತ್ತಲೂ, ವೇದವೇದಾಂತಾದಿ ಶಾಸ್ತ್ರಪಠನಪಾಠನಾದಿಕ್ರಿಯೆಗಳನ್ನು ನೆರವೇರಿಸುತ್ತಲೂ ಇರಬೇಕು ಹಿಂದಿನ ಕಾಲದ ಮಠಾಧಿಕಾರಿಗಳು ಈ ಗುರುಲಕ್ಷಣಗಳನ್ನನುಸರಿಸಿಯೇ ವರ್ತಿಸುತ್ತಿದ್ದರು ಆದುದರಿಂದಲೇ ಅವರ ಕೀರ್ತಿಪ್ರಭೆಯು ದಶದಿಕ್ಕುಗಳನ್ನು ವ್ಯಾಪಿಸಿತ್ತು ಆದರೆ ಈ ಕಾಲದಲ್ಲಿರತಕ್ಕ ಗುರುವರ್ಗದ ಮಠಾಧಿಕಾರಿಗಳ ಸ್ಥಿತಿಯು ಇದಕ್ಕೆ ಕೇವಲ ವಿಪರೀತವಾಗಿ ಪರಿಣಮಿಸಿಹೋಗಿದೆ ಇವರು ಭಕ್ತರನ್ನುದ್ಧರಿಸುವ ಗೊತ್ತಿಲ್ಲದಿರಲಿ, ತಮ್ಮ ಗ್ರಾಮದಲ್ಲಿ ತಾವೇ ಪಾರ್ಟಿಗಳನ್ನೆಬ್ಬಿಸಿ ಎಲ್ಲರೊಡನೆ ವಿರೋಧವನ್ನು ಕಟ್ಟಿಕೊಳ್ಳಲಿಕ್ಕೆ ಹತ್ತುತ್ತಾರೆ ವೇದವೇದಾಂತಾದಿಗಳ ಅಧ್ಯಯನಾಧ್ಯಾಪನಗಳಂತೂ ಇವರನ್ನು ಬಿಟ್ಟು ಶತಯೋಜನ ದೂರ ಓಡಿಹೋಗಿವೆ ಶಮದಮಾದಿಗಳಿಗೆ ಇವರಲ್ಲಿ ಆಶ್ರಯವೇ ದೊರೆಯುವಂತಿಲ್ಲ ಆದುದರಿಂದಲೇ ಇವರ ವಿಷಯದಲ್ಲಿ ಭಕ್ತರ ಭಕ್ತಿಯು ದಿನೇ ದಿನೇ ಹ್ರಾಸವಾಗುತ್ತ ನಡೆದದೆ ಈ ವಿಷಯವನ್ನು ಗುರುವರ್ಗದ ಮಠಾಧಿಕಾರಿಗಳು ಪೂರ್ಣ ಚಿತ್ತಕ್ಕೆ ತಂದುಕೊಂಡು ತಮ್ಮ ಧರ್ಮನಿಯಮದಂತೆಯೂ, ತಮ್ಮ ಪೂರ್ವಿಕರು ಆಚರಿಸಿದಂತೆಯೂ ಆಚರಿಸಿ ಶಿಷ್ಯೋದ್ಧಾರಕಾರ್ಯವನ್ನು ಕೈಕೊಳ್ಳಬೇಕು ಹಾಗಿಲ್ಲದಿದ್ದರೆ ತಾವೂ ಕೆಡುವರಲ್ಲದೆ ಮತದ ಸ್ವರೂಪವೆಲ್ಲಾ ನಾಶವಾಗಿಹೋಗುವದು ಗುರುವರ್ಗದವರು ಇಷ್ಟು ಹೀನಸ್ಥಿತಿಗೆ ಬರಬೇಕಾದರೆ ಧಾರ್ಮಿಕವಿದ್ಯೆಯ ಅಭಾವವೇ ಇದಕ್ಕೆ ಮೂಲಕಾರಣವಾಗಿದೆ ಇವರು ಪೂರ್ವಕಾಲದಂತೆ ಈ ಕಾಲದಲ್ಲಿಯೂ ಧರ್ಮಶಾಸ್ತ್ರಾಭ್ಯಾಸವನ್ನು ಮಾಡಬೇಕು ಗುರುಕುಲದಲ್ಲಿ ವಾಸವಾಗಿರಬೇಕು ಮ್ಲೇಂಛಭಾಷೆಗೆ ತಿಲಾಂಜಲಿಯನ್ನು ಕೊಡಬೇಕು ಶಮದಮಾದಿ ಗುಣಗಣಭೂಷಿತರಾಗಿರಬೇಕು ಚಿಕ್ಕ ಚಿಕ್ಕ ಮಕ್ಕಳನ್ನು ಸಂಸ್ಕೃತಭಾಷಾಭ್ಯಾಸದಲ್ಲಿ ನಿಯೋಜಿಸಬೇಕು ಹೀಗೆ ಮಾಡಿದರೆ ಇವರು ಮಾನ್ಯರಾಗುವರು ಕಲಿಕಾಲಪ್ರಭಾವದಿಂದ ದಿನೇ ದಿನೇ ಗುರುಗಳ ವಿಷಯದಲ್ಲಿ ಭಕ್ತರಲ್ಲಿಯ ಭಕ್ತಿಯು ಕ್ಷೀಣವಾಗುತ್ತ ನಡೆದದೆ ಗುರುವೆಲ್ಲಿ? ಶಿಷ್ಯನೆಲ್ಲಿ? ಎಂದೆನ್ನುವ ಹೇಯಕಾಲವು ರಭಸದಿಂದ ಪ್ರಾಪ್ತವಾಗಹತ್ತಿದೆ ಲಿಂಗಧಾರಿಗಳಲ್ಲಿ ಕೆಲವು ಪಂಗಡಗಳ ಜನರು ಪ್ರಾಚೀನಗುರುಗಳನ್ನು ಬಿಟ್ಟು ತಮ್ಮತಮ್ಮಲ್ಲಿಯೇ ಗುರುಗಳನ್ನು ಮಾಡಿಕೊಳ್ಳುತ್ತ ಸ್ವೇಚ್ಛೆಯಾಗಿ ವರ್ತಿಸುತ್ತಿರುವರಲ್ಲದೆ ಪೂರ್ವದ ಗುರುಗಳಮೇಲೆ ಬಿದ್ದು ಜಗಳವಾಡಹತ್ತಿದ್ದಾರೆ ಕೆಲವು ಪ್ರಾಂತಗಳಲ್ಲಂತೂ ಪೂರ್ವದ ವಂಶೀಯಗುರುಗಳನ್ನು ದೂರೀಕರಿಸಿ ಭಕ್ತರು ತಾವೇ ಗುರುಗಳಾಗಿ ಮೆರೆಯಹತ್ತಿದ್ದಾರೆ ಗುರುವರ್ಗದ ಎಷ್ಟೋ ಮಠಗಳನ್ನು ಭಕ್ತರು ಆಕ್ರಮಿಸಿ ತಮ್ಮ ಸ್ವಾಧೀನಮಾಡಿಕೊಂಡಿರುತ್ತಾರೆ ಗುರುಭಕ್ತಿಯು ಸ್ವರೂಪವೇ ಕೆಲವು ಪ್ರಾಂತಗಳಲ್ಲಿ ಮಾಯವಾಗಿಹೋಗಿದೆ ಭಕ್ತರೆಲ್ಲರೂ ಗುರುವರ್ಗದವರೆಂದು ಹೇಳಹತ್ತಿದ್ದಾರೆ ಇಂಥ ಕಲಿರಾಜನ ಲೀಲೆಯು ಈ ಕಾಲದಲ್ಲಿ ವಂಶೀಯ ಗುರುಗಳು ವಿದ್ಯಾವಿಹೀನರಾದರೆ ಇವರನ್ನು ಕೇಳುವವರಾರು? ಆದರಿಸುವವರಾರು? ಪೂಜಿಸುವವರಾರು? ಆದುದರಿಂದ ಗುರುವರ್ಗದವರು ಇನ್ನುಮುಂದಾದರೂ ಎಚ್ಚತ್ತು ಸಂಸ್ಕೃತಪಾಠಶಾಲೆಗಳಿಗೆ ತಮ್ಮ ಬಾಲಕರನ್ನು ಕಳುಹಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕಲ್ಲದೆ ಶಿಷ್ಯೋದ್ಧಾರಕಾರ್ಯದಲ್ಲಿ ತೊಡಗಬೇಕು ಧರ್ಮನಿಯಮಗಳನ್ನು ಸರ್ವತ್ರ ರೂಢಿಯಲ್ಲಿ ತರಬೇಕು ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಬೇಕು ವೀರಶೈವಮತದ ಸಿದ್ಧಾಂತವನ್ನು ಸರ್ವತ್ರ ಬೋಧಿಸಬೇಕು ತಮ್ಮ ಮತದ ವೈಭವವನ್ನು ಹೆಚ್ಚಿಸಬೇಕು ಮತಾಂತರದವರಲ್ಲಿ ಬೇರೂರಿರುವ ಅಸಮಂಜಸಾಭಿಪ್ರಾಯವನ್ನು ದೂರಮಾಡಬೇಕು ಇತ್ಯಾದಿ ಕಾರ್ಯಗಳನ್ನು ಇವರು ಕೈಕೊಂಡರೆ ಇವರ ಪ್ರಭೆಯು ಸರ್ವತೋಮುಖವಾಗಿ ವ್ಯಾಪಿಸುವದು ಧರ್ಮಪೀಠಾಧಿಪತಿಗಳು ಗುರುವಂಶೀಯ ಬಾಲಕರ ಸುಧಾರಣಾದಿಗಳ ಬಗ್ಗೆ ಅಲ್ಲಲ್ಲಿ ಗುರುಕುಲಗಳನ್ನೇರ್ಪಡಿಸಬೇಕು ಸದಾ ಇವರ ಸುಧಾರಣೆಯಲ್ಲಿಯೇ ತಮ್ಮ ಕಾಲವನ್ನು ಕಳೆಯಬೇಕು ಅಲ್ಲಿಯವರೆಗೆ ಇವರು ಸುಧಾರಿಸಲಾರರು ಇಲ್ಲದಿದ್ದರೆ ಎಂದಿಗೂ ಸುಧಾರಿಸುವಂತಿಲ್ಲ ಇವರ ಸುಧಾರಣೆಯಿಲ್ಲದೆ ಧರ್ಮರಾಜ್ಯಸ್ಥಾಪನೆಯು ಎಂದೂ ಸುಕರವಾಗಿ ನಡೆಯಲಾರದ ಶಿವನು ಶ್ರೀ ಜಗದ್ಗುರುಗಳನು ಗುರುವರ್ಗದವರಲ್ಲಿ ನಾನಾವಿಧ ಪ್ರಚಾರದ ಮೂಲಕ ಸುಧಾರಣೆಯನು ಶೀಘ್ರವಾಗಿ ಉಂಟುಮಾಡಲೆಂದು ಆ ದಯಾಘನನನ್ನು ಪ್ರಾರ್ಥಿಸುತ್ತೇವೆ

ವರ್ತಮಾನಸಂಗ್ರಹ

ಕಾಶ್ಮೀರದ ಬಗ್ಗೆ ಷೇಕ್ ಅಬ್ದುಲ್ಲಾರವರ ಹೇಳಿಕೆ

ಈಗ ಕಾಶ್ಮೀರದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಒಂದೇ ಮಾರ್ಗ ಪ್ರಜೆಗಳಲ್ಲಿ ನಂಬಿಕೆಯಿಟ್ಟು ಆಡಳಿತಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡಬೇಕು ಕಾಶ್ಮೀರದ ಪ್ರಜಾ ಚಳವಳಿಯ ಬಗ್ಗೆ ಇಂಡಿಯಾ ಸರ್ಕಾರದವರು ಮೊದಲಿನಿಂದಲೂ ಸಹಾನುಭೂತಿ ತೋರಿಸಿದ್ದಾರೆ ಆದರೆ, ಪಾಕಿಸ್ಥಾನವು ವಿರುದ್ಧವಾದ ನೀತಿಯನ್ನು ತೋರಿಸುತ್ತಿದೆ ಕಾಶ್ಮೀರವನ್ನು ತನ್ನ ಕಡೆಗೆ ಸೆಳೆದುಕೊಳ್ಳಬೇಕೆಂಬ ಕಾತುರ ಪಾಕಿಸ್ಥಾನಕ್ಕೆ ಬಹಳವಾಗಿದೆ —ಎಂಬುದಾಗಿ ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನಾಧ್ಯಕ್ಷರಾದ ಷೇಕ್ ಅಬ್ದುಲ್ಲಾರವರು ತಿಳಿಸಿದ್ದಾರೆ

ಕಾಶ್ಮೀರವನ್ನು ತನ್ನ ಅಧೀನಮಾಡಿಕೊಳ್ಳಲು ಪಾಕಿಸ್ಥಾನವು ಕಾತುರವಾಗಿದೆ ಈಗ ಪಾಕಿಸ್ಥಾನವು ಕಾಶ್ಮೀರವನ್ನು ಒತ್ತಾಯಕ್ಕೆ ಗುರಿಪಡಿಸಿರುವುದು ಅಲ್ಲಿಯ ಪ್ರಜೆಗಳ ದೃಷ್ಟಿಯನ್ನು ತಿರುಗಿಸಿ ಅದು ಪಾಕಿಸ್ಥಾನದ ಕೈಗೊಂಬೆಯಾಗುವಂತೆ ಮಾಡುವುದಕ್ಕಾಗಿಯೇ ಇರಬಹುದು ಯಾರ ಬಲವಂತಕ್ಕೂ ಕಾಶ್ಮೀರವು ಬಗ್ಗುವುದಿಲ್ಲವೆಂದು ನಾನು ಹೇಳಬೇಕಾಗಿವೆ

ಪೂಂಚ್‌ನಲ್ಲಿ ನಡೆದ ಘಟನೆಗಳು

ಕಾಶ್ಮೀರದ ಉಪಸಂಸ್ಥಾನವಾದ ಪೂಂಚ್‌ನಲ್ಲಿ ನಡೆದ ಘಟನಾವಳಿಗಳನ್ನು ಪ್ರಸ್ತಾಪಿಸುತ್ತ ಅಬ್ದುಲ್ಲಾರವರು "ತಮ್ಮ ಕುಂದುಕೊರತೆಗಳ ನಿವಾರಣೆಗಾಗಿ ಪೂಂಚ್ ಜನರು ಚಳವಳಿ ಹೂಡಿದ್ದಾರೆ ಕಾಶ್ಮೀರ ಸರ್ಕಾರದವರು ಅಲ್ಲಿಗೆ ತಮ್ಮ ಸೇನೆಯನ್ನು ಕಳಿಸಿದ್ದಾರೆ. ಅಲ್ಲಿನ ಜನರು ಭಯಭ್ರಾಂತರಾಗಿದ್ದಾರೆ ಪೂಂಚಿನ ಜನರಿಗೂ ಝೀಲಂ ಮತ್ತು ರಾವಲ್ಪಿಂಡಿಯವರಿಗೂ ಹತ್ತಿರದ ಸಂಬಂಧವಿ… ಅನೇಕರು ಸಂಸಾರ ಸಮೇತ ಸಂಸ್ಥಾನದ ಗಡಿ ದಾ… ತೆರೇದ್ದಾರೆ ಆಮೇಲೆ ಅವರೇ ಆಯುಧಗಳನ್ನು ಪಡೆ… ಮತ್ತೆ ಗಡಿಯೊಳಕ್ಕೆ ಬಂದಿದ್ದಾರೆ. ಈಗಿನ ಪರಿಸ್ಥಿ… ಯನ್ನು ಕೊನೆಗಾಣಿಸಬೇಕಾಗಿದ್ದರೆ, ಪ್ರಜೆಗಳನ್ನು ನಂ… ಅವರಿಗೇ ಆಡಳಿತದ ಜವಾಬ್ದಾರಿ ವಹಿಸುವುದೊಂ… ದಾರಿ" ಎಂದು ಹೇಳಿದರು

ಕಾಶ್ಮೀರಕ್ಕೆ ಪಾಕಿಸ್ಥಾನ್ ಸರ್ಕಾರದಿಂದ ತೊಂದರೆ

ಕಾಶ್ಮೀರ್ ಸಂಸ್ಥಾನಕ್ಕೆ ಪಾಕಿಸ್ಥಾನ ಸರಕಾ… ಕೊಡುತ್ತಿರುವ ಕಷ್ಟಗಳ ಬಗ್ಗೆ ಕಾಶ್ಮೀರ ಸರಕಾರವು ಪಾಕಿಸ್ಥಾನದ ಗವರ್ನರ್ ಜನರಲ್ಲರಾದ ಮಿ|| ಜಿನ್ನಾರವರಿಗೆ ತಂತಿ ಮೂಲಕ ದೂರು ಕಳುಹಿಸಿದೆ

ಪೆಟ್ರೋಲ್, ಎಣ್ಣೆ, ಉಪ್ಪು ಸಕ್ಕರೆ, ಬಟ್ಟೆ ಮತ್ತು ಅಂಚೆ ಮತ್ತು ಬ್ಯಾಂಕುಗಳ ವ್ಯವಹಾರಕ್ಕೆ ಅಡಚಣೆ ತಂದಿರುವುದಾಗಿ ತಿಳಿಸಲಾಗಿದೆ

ರಾವಲ್ಪಿಂಡಿಯ ಬಳಿ ಮೋಟಾರು ಗಾಡಿಗಳನ್ನು ತಡೆದು ನಿಲ್ಲಿಸಿರುವ ವಿಚಾರವನ್ನೂ ಮತ್ತು ಸಯಾಲ್ಕೋಟೆಯಿಂದ ಜಮ್ಮುವಿಗೆ ರೈಲ್ವೆ ಸಂಚಾರ ಇಲ್ಲದಂತೆ ಮಾಡಿರುವುದನ್ನೂ ಅದರಲ್ಲಿ ಸೂಚಿಸಲಾಗಿದೆ

ಕಾಶ್ಮೀರವನ್ನು ಬಿಟ್ಟುಹೋಗುತ್ತಿದ್ದ ೨೨೦ ಜನಗಳ ಪೈಕಿ ೧೮೦ ಜನರನ್ನು ರಾವಲ್ಪಿಂಡಿ ಬಳಿ ಕೊಂದು ಹಾಕಿರುವ ವಿಚಾರ, ಪೂಂಚ್ ಪ್ರದೇಶಕ್ಕೆ ಜನರು ಆಯುಧಗಳ ಸಮೇತರಾಗಿ ನುಗ್ಗಿಬಂದು ಅತ್ಯಾಚಾರ ನಡೆಸಿರುವ ವಿಚಾರ, ಪಾಕಿಸ್ಥಾನ ರೇಡಿಯೊದಲ್ಲಿನ ಸುಳ್ಳುಪ್ರಚಾರ ಇವೆಲ್ಲವನ್ನೂ ಈ ತಂತಿಯಲ್ಲಿ ತಿಳಿಸಲಾಗಿದೆ

ಕಾಶ್ಮೀರ ವಿಚಾರಣ ಸಮಿತಿಯ ನೇಮಕಕ್ಕೆ ಪಾಕಿಸ್ಥಾನದ ಒಪ್ಪಿಗೆ

ಪಾಕಿಸ್ಥಾನ್ ಪ್ರಜೆಗಳು ಪೂಂಚ್ ಸಂಸ್ಥಾನದ ಮೇಲೆ ಮುತ್ತಿಗೆ ನಡೆಸುತ್ತಿದ್ದಾರೆಂದು ಕಾಶ್ಮೀರವು ಮಾಡಿರುವ ದೂರನ್ನು ವಿಚಾರಿಸಲು ಸಮಿತಿಯೊಂದನ್ನು ನೇಮಿಸಬೇಕೆಂಬ ಕಾಶ್ಮೀರದ ಸಲಹೆಗೆ ಪಾಕಿಸ್ಥಾನದ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ. ಸಮಿತಿಗೆ ಕಾಶ್ಮೀರದ ಪ್ರತಿನಿಧಿಗಳನ್ನು ಆರಿಸುವಂತೆ ಕಾಶ್ಮೀರ ಸರ್ಕಾರಕ್ಕೆ ಪಾಕಿಸ್ಥಾನದ ಮುಖ್ಯ ಸಚಿವರು ತಿಳಿಸಿದ್ದಾರೆ

ಪಾಕಿಸ್ಥಾನದಿಂದ ನಿರಾಶ್ರಿತರನ್ನು ಕರೆತರಲು ಅಗಾಧ ಯೋಜನೆ

ಪಾಕಿಸ್ಥಾನದ ನಾನಾಕ್ಷೇತ್ರಗಳಲ್ಲಿರುವ ಅಸಂಖ್ಯಾತ ಹಿಂದೂ ಮತ್ತು ಸಿಖ್ ನಿರಾಶ್ರಿತರನ್ನು ಪೂರ್ವ ಪಂಜಾಬಿಗೆ ಕರೆತರಲು ಮತ್ತು ಪೂರ್ವ ಪಂಜಾಬಿನಿಂದ ಪಶ್ಚಿಮ ಪಂಜಾಬಿಗೆ ಮುಸ್ಲಿಂ ನಿರಾಶ್ರಿತರನ್ನು ಒಯ್ಯಲು ಭಾರತ ಮತ್ತು ಪಾಕಿಸ್ಥಾನ್ ಸರ್ಕಾರಗಳೆರಡೂ ಅಗಾಧ ಯೋಜನೆಗಳನ್ನು ಸಿದ್ಧಗೊಳಿಸಿವೆಯೆಂದು ಭಾರತ ಸರ್ಕಾರದ ಸಚಿವರಾದ ಶ್ರೀ ಕೆ ಸಿ ನಿಯೋಗಿಯವರು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು

ಇದುವರೆಗೆ ಸುಮಾರು ೨೨,೭೫,೦೦೦ ಹಿಂದೂ ಮತ್ತು ಸಿಖ್ ನಿರಾಶ್ರಿತರನ್ನು ಭಾರತಕ್ಕೆ ಕರೆತರಲಾಗಿದೆ ೨೫,೫೦,೦೦೦ ಮುಸ್ಲಿಮರನ್ನು ಭಾರತದಿಂದ ಪಾಕಿಸ್ಥಾನಕ್ಕೆ ರವಾನಿಸಲಾಗಿದೆ ಪಾಕಿಸ್ಥಾನದಲ್ಲಿ ಇನ್ನೂ ೧೮ ಲಕ್ಷ ಮಂದಿ ಮುಸ್ಲಿಮೇತರ ನಿರಾಶ್ರಿತರು ಭಾರತಕ್ಕೆ ಬರಲಿರುವರು ಪೂರ್ವ ಪಂಜಾಬಿನಲ್ಲಿ ೨೩ ಲಕ್ಷ ಮುಸ್ಲಿಮರು ಹೊರಡಲು ಸಿದ್ಧರಾಗಿರುವರು ಎಂದು ಶ್ರೀ ನಿಯೋಗಿಯವರು ತಿಳಿಸಿದರು.

ಪಾಕಿಸ್ಥಾನದಿಂದ ಭಾರತಕ್ಕೆ ಬರಲಿರುವ ನಿರಾಶ್ರಿತರಿಗೆ ಆಹಾರ ಒದಗಿಸಲು ಸೂಕ್ತ ಏರ್ಪಾಡುಗಳನ್ನೆಲ್ಲಾ ಮಾಡಲಾಗಿದೆ ಪೂರ್ವ ಪಂಜಾಬು ಪ್ರಾಂತದ ಕುರುಕ್ಷೇತ್ರ ಮತ್ತು ಇತರ ಪ್ರದೇಶಗಳಲ್ಲಿ ಸಹಸ್ರಾರು ಬಿಡಾರಗಳನ್ನು ಕಟ್ಟಲು ಅವಶ್ಯಕವಾದ ವಸ್ತುಗಳನ್ನೆಲ್ಲಾ ಕಳುಹಿಸಲಾಗಿದೆ.

ನಿರಾಶ್ರಿತರಿಗೆ ಸಂಸ್ಥಾನಗಳೂ ಆಶ್ರಯಕೊಡುವಂತೆ ಪ್ರಾರ್ಥಿಸಲಾಗಿದೆ ನಿರಾಶ್ರಿತರಿಗೆ ಯಾವುದಾದರೊಂದು ಉಪಯುಕ್ತವಾದ ರೀತಿಯಲ್ಲಿ ಕಾಲಕಳೆಯುವಂತೆ ಸಹಾಯ ಮಾಡಲು ಪೂರ್ವ ಪಂಜಾಬು ಪ್ರಾಂತದ ಜಿಲ್ಲೆಗಳಲ್ಲಿ ಕೈಮಗ್ಗದ ಮತ್ತು ನೂಲುವ ಕೇಂದ್ರಗಳನ್ನು ತೆರೆಯಲಾಗುವುದು

ಪಾಕಿಸ್ಥಾನದಲ್ಲಿರುವ ಸಮಸ್ತ ಮುಸ್ಲಿಮೇತರರನ್ನು ಭಾರತಕ್ಕೆ ಕರೆದೊಯ್ಯಲು ರೈಲು, ನೌಕಾ, ವಿಮಾನ ಸೌಕರ್ಯಗಳನ್ನು ವ್ಯವಸ್ಥೆಮಾಡಲಾಗುವುದು ಸರ್ವಸಾಹಸದಿಂದ ಈ ಸಾಮೂಹಿಕ ಸ್ಥಳ ಬದಲಾವಣೆಯು ಏಳುವಾರಗಳೊಳಗಾಗಿ ಮುಗಿಯುವಂತೆ ಮಾಡಲಾಗುವುದೆಂದು ಶ್ರೀ ನಿಯೋಗಿಯವರು ತಿಳಿಸಿದರು

ಭಾರತ-ಹೈದರಾಬಾದ್ ಸಂಧಾನ

ಹೈದರಾಬಾದ್ ನಿಯೋಗದವರಿಗೂ, ಲಾರ್ಡ್ ಮೌಂಟ್ ಬೇಟನ್ನರವರಿಗೂ ವಿಷಯ ಚರ್ಚೆ ನಡೆಯಿತು ಸಂಸ್ಥಾನಗಳ ಶಾಖಾ ಕಾರ್ಯದರ್ಶಿಯಾದ ಶ್ರೀ ವಿ ಪಿ ಮೆನನ್‌ರವರೂ ಚರ್ಚೆಯಲ್ಲಿ ಮುಖ್ಯ ಪಾತ್ರವಹಿಸಿದ್ದರು ಭಾರತ ಸರ್ಕಾರವು ಸಿದ್ಧಗೊಳಿಸಿರುವ ಒಂದು ವರ್ಷ ಅವಧಿಯ ಸ್ಟಾಂಡ್‌ಸ್ಟಿಲ್ ಒಪ್ಪಂದದ ಕರಡು ಪ್ರತಿಯ ವಿಚಾರ ಕುರಿತು ಚರ್ಚೆ ನಡೆಯಿತು ಹೈದರಾಬಾದ್ ನಿಯೋಗದವರು ಈ ಹೊಸ ಸಲಹೆಗಳನ್ನು ಒಪ್ಪಿರುವರೆಂದು ಹೇಳಲಾಗುತ್ತಿದೆ

ಈ ಕರಡು ಪ್ರತಿಯನ್ನು ನಿಜಾಮರ ಒಪ್ಪಿಗೆಗಾಗಿ ನಿಯೋಗದವರು ತೆಗೆದುಕೊಂಡು ಹೋಗಿದ್ದು, ಒಪ್ಪಿಗೆ ಪಡೆದು ಈ ದಿವಸ ದೆಹಲಿಗೆ ಹಿಂತಿರುಗುವ ಸಂಭವವಿದೆ ಈ ಒಪ್ಪಂದದ ಕರಾರಿನ ವಿವರಗಳು ಇನ್ನೂ ಗೋಪ್ಯವಾಗಿಯೇ ಇವೆ

ಮದ್ರಾಸು ಜಮೀನ್ದಾರಿ ಮಸೂದೆ

ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಯು ಮದರಾಸಿನ ಮುಖ್ಯ ಮಂತ್ರಿಗಳು ಮತ್ತು ಇತರ ಸಚಿವರೊಡನೆ ಜಮೀನ್ದಾರಿ ಮಸೂದೆಯ ವಿಚಾರವನ್ನು ಚರ್ಚಿಸಿತು.

ಜಮೀನ್ದಾರರುಗಳಿಗೆ ಕೊಡಬೇಕಾದ ಪರಿಹಾರ ಮತ್ತು ಮಸೂದೆಯ ಇತರ ಹಲವು ಅಂಶಗಳನ್ನು ಪುನರ್ವಿಮರ್ಶಿಸಬೇಕೆಂದೂ, ಸ್ಥಳೀಯ ಜಮೀನ್ದಾರರ ಅಭಿಮತಗಳನ್ನು ಪಡೆದು, ಸರ್ವಸಮರ್ಪಕವೂ, ನ್ಯಾಯವೂ ಆದ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದೂ ಮದ್ರಾಸು ಮಂತ್ರಿಮಂಡಲವು ಅಭಿಪ್ರಾಯಪಟ್ಟಿದೆ

ಬಾಬಿಲಿಯರಾಜರು, ಪೀಠಾಪುರಂ ಮಹಾರಾಜರೇ ಮುಂತಾದ ಕೆಲವರು ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಯ ಸದಸ್ಯರನ್ನು ಕಂಡು ತಮ್ಮ ಅಹವಾಲನ್ನು ಹೇಳಿಕೊಂಡಿರುವರು

ಮದ್ರಾಸ್ ಪ್ರಾಂತದಲ್ಲಿ ಸಕ್ಕರೆ ಉತ್ಪತ್ತಿ

ಮದ್ರಾಸ್ ಪ್ರಾಂತದಲ್ಲಿ ಈಗ ೧೪ ಸಕ್ಕರೆ ಕಾರ್ಖಾನೆಗಳಿವೆ ಇವುಗಳಲ್ಲಿ ಒಟ್ಟು ದಿನವೊಂದಕ್ಕೆ ೪,೦೦೦ ಟನ್ ಕಬ್ಬಿನಿಂದ ಹಾಲನ್ನು ತೆಗೆಯಬಹುದು ಇನ್ನೂ ೯ ಸಕ್ಕರೆ ಕಾರ್ಖಾನೆಗಳನ್ನು ಹೊಸದಾಗಿ ತೆರೆಯಲು ಸರ್ಕಾರದವರು ಅನುಮತಿ ಇತ್ತಿರುವರೆಂಬುದಾಗಿ ಪ್ರಾಂತದ ಕೈಗಾರಿಕೆ ಶಾಖಾ ಸಚಿವರು ಶಾಸನಸಭೆಯಲ್ಲಿ ತಿಳಿಸಿದರು

ಮದ್ರಾಸಿನಲ್ಲಿ ಧಾನ್ಯ ಸಂಗ್ರಹವು ತೃಪ್ತಿಕರವಾಗಿ ನಡೆಯುತ್ತಿದೆ

ಸಾರ್ವಜನಿಕರಿಂದ ಆಹಾರ ಧಾನ್ಯಗಳನ್ನು ವಶಪಡಿಸಿಕೊಳ್ಳುವ ಕಾರ್ಯವು ಮದ್ರಾಸು ಪ್ರಾಂತದಲ್ಲಿ ಭರದಿಂದ ಸಾಗಿದೆ. ಅಕ್ಟೋಬರ್ ೧೭ಕ್ಕೆ ಅಂತ್ಯವಾದ ಒಂದು ವಾರದಲ್ಲಿ ೩೯,೫೦೦ ಟನ್‌ಗಳಷ್ಟು ಧಾನ್ಯ ಸಂಗ್ರಹ ಮಾಡಲಾಯಿತು. ತಂಜಾವೂರು ಜಿಲ್ಲೆಯೊಂದರಿಂದಲೇ ಸುಮಾರು ೧೫,೯೦೦ ಟನ್‌ಗಳಷ್ಟು ಧಾನ್ಯವನ್ನು ಶೇಖರಿಸಲಾಯಿತು ಈ ಯಶಸ್ವಿಯಾದ ಕಾರ್ಯಕ್ರಮದ ಫಲವಾಗಿ ಮದ್ರಾಸಿನ ಆಹಾರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದೆ

ಮೈಸೂರು ಸಂಸ್ಥಾನದಲ್ಲಿ ನೂತನ ಮಂತ್ರಿಮಂಡಲ

ಶ್ರೀಮನ್ಮಹಾರಾಜರವರು ನೂತನ ಮಂತ್ರಿಮಂಡಲದಲ್ಲಿ ಈ ಕೆಳಗೆ ಕಂಡವರನ್ನು ನೇಮಕಮಾಡಿದ್ದಾರೆ—

ಮುಖ್ಯಸಚಿವರು :

ಶ್ರೀ ಕೆ ಚಂಗಲರಾಯರೆಡ್ಡಿಯವರು, ಬಿ ಎ, ಬಿ ಎಲ್

ಉಪಸಚಿವರು

ಶ್ರೀ ಹೆಚ್ ಸಿ ದಾಸಪ್ಪನವರು, ಬಿ ಎ, ಎಲ್ ಎಲ್ ಬಿ
ಶ್ರೀ ಕೆ ಟಿ ಭಾಷ್ಯಂರವರು, ಬಿ ಎ, ಬಿ ಎಲ್
ಶ್ರೀ ಹೆಚ್ ಸಿದ್ದಯ್ಯನವರು ಬಿ ಎ, ಎಲ್ ಎಲ್ ಬಿ
ಶ್ರೀ ಟಿ ಮರಿಯಪ್ಪನವರು, ಬಿ ಎ ಬಿ ಎಲ್
ಶ್ರೀ ಆರ್ ಚನ್ನಿಗರಾಮಯ್ಯನವರು
ಜ|| ಮಹಮುದ್ ಷರೀಫ್‌ರವರು ಬಿ ಎ, ಬಿ ಎಲ್
ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು, ಬಿ ಎ, ಎಲ್ ಎಲ್ ಬಿ
ರಾಜಸೇವಾಸಕ್ತ ಶ್ರೀ ಪಿ ಸುಬ್ಬರಾಮಚೆಟ್ಟಿಯವರು

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಪ್ರಥಮ ಸೋಪಾನವಾಗಿ ಏರ್ಪಟ್ಟಿರುವ ನೂತನ ಮಂತ್ರಿಮಂಡಲವು ೨೪ನೆಯ ತಾ|| ಮಧ್ಯಾಹ್ನ ೩ ಘಂಟೆಗೆ ಅರಮನೆ ಕಚೇರಿಯಲ್ಲಿ ಅಧಿಕಾರ ಸ್ವೀಕಾರಮಾಡಿತು

ಸಾಲ

[ಲೇಖಕ ಗುರುಸಿದ್ದಾಚಾರ್ಯ, ಹೂವಿನಹಡಗಲಿ]

ಸಾಲವೆಂದರೆ ಬೇರೆಯವರಿಂದ ಹಣವನ್ನು ಕಡವಾಗಿ ತರುವುದು ಇದರಲ್ಲಿ ಮೂರು ಭಾಗಗಳಾಗಿ ವಿಂಗಡಿಸಬಹುದು ಅಡಚಣೆಯ ನಿಮಿತ್ತ ಬೇರೆಯವರಿಂದ ನಿರ್ದಿಷ್ಟದಿವಸಗಳವರೆಗೆ ಬಾಯಿಮಾತಿನಿಂದಲೇ ಕಡವಾಗಿ ತರುವುದು ಮೊದಲನೆಯದು ಎರಡನೆಯದು ಹಣವನ್ನು ಕಡವಾಗಿ ಪಡೆದು, ಬಾಯಿಮಾತಿನಲ್ಲಿ ನಂಬಿಗೆಯಿರದೆ ಬರವಣಿಗೆಪತ್ರ (ಪ್ರಾಮಿಸರಿನೋಟ್) ಬರೆದುಕೊಡುವುದು ಮೂರನೆಯದಾಗಿ ಹಣದ ಜವಾಬ್ದಾರಿಗಾಗಿ ಹೊಲ, ಮನೆ, ಬೆಳ್ಳಿ, ಬಂಗಾರ ಮುಂತಾದವುಗಳನ್ನು ಅಡವಿಡುವುದು ಇದರಲ್ಲಿ ಮೊದಲನೆಯ ಕೈಗಡಕ್ಕೆ ಬಡ್ಡಿ ತೆರಬೇಕಾದುದಿಲ್ಲ ಎರಡನೆಯ ಮತ್ತು ಮೂರನೆಯ ಸಾಲಕ್ಕೆ ಬಡ್ಡಿ ಕೊಡಬೇಕಾಗುತ್ತದೆ ಮೊದಮೊದಲು ಜನರಲ್ಲಿ ಪರಸ್ಪರ ನಂಬಿಗೆಯಿದ್ದುದರಿಂದ ಬಾಯಿ ಮಾತಿನಿಂದಲೇ ಬಡ್ಡಿಯಿಲ್ಲದೆ ಸಾಲತರುವ ವ್ಯವಹಾರವಿತ್ತು ಇತ್ತೀಚೆಗೆ ಜನರಲ್ಲಿ ಸ್ವಾರ್ಥಪರತೆಯೂ ಅವಿಶ್ವಾಸವೂ ಅತಿಯಾಶೆಯೂ ವಂಚಕತನವೂ ಅಪನಂಬಿಕೆಯೂ ಹೆಚ್ಚಿ, ಸಾಲತಂದ ಹಣವನ್ನೇ ಅಪಹರಿಸುವ ದುರ್ಬುದ್ಧಿ ಹುಟ್ಟಿದ್ದರಿಂದ ಎರಡನೇ ಮತ್ತು ಮೂರನೇ ಸಾಲತರುವ ರೀತಿಯು ಆಚರಣೆಯಲ್ಲಿ ಬಂದಿತು ಜನರಲ್ಲಿ ಸಾಲಮಾಡುವ ವ್ಯವಹಾರವು ಹೆಚ್ಚು ಪ್ರಮಾಣದಲ್ಲಿ ಬೆಳೆದಂತೆಲ್ಲಾ ಮೂಲಧನಕ್ಕೆ ಇಂತಿಷ್ಟು ಬಡ್ಡಿ ಕೊಡಬೇಕೆಂಬ ನಿಯಮವೂ ರೂಢಿಯಲ್ಲಿ ಬಂದಿತು

ಸಾಲಮಾಡುವುದು ನಮ್ಮ ದೇಶದ ಜನರಲ್ಲಿ ಹೆಚ್ಚಿನ ಚಟವಾಗಿ ಪರಿಣಮಿಸಿದೆ ಜೂಜು, ರಂಗು, ಮದ್ಯಪಾನ, ಚಹ, ಚುಟ್ಟ ಇವುಗಳು ದುಶ್ಚಟಗಳೆಂದು ಹೇಗೆ ನಿರ್ಣಯಿಸಲ್ಪಟ್ಟಿರುವವೋ ಹಾಗೆಯೇ ಸಾಲಮಾಡುವುದೊಂದು ದುಶ್ಚಟವೆಂಬುವುದಕ್ಕಾವ ಅಭ್ಯಂತರವೂ ಇಲ್ಲ ಈ ಭೂತವು ಇತ್ತೀಚೆಗೆ ಎಲ್ಲರನ್ನೂ ಬಡಿದುಕೊಂಡಿದೆ ಎಂದರೆ ಅತಿಶಯೋಕ್ತಿಯಾಗಲಾರದು ಅಸ್ತು ! ಸಾಲತರುವವರು ಹೆಚ್ಚಿದಂತೆಲ್ಲಾ ಕೊಡುವವರೂ ಹೆಚ್ಚಿದರು ಜನರಲ್ಲಿ ಕಾರ್ಮಿಕತನವು ಕುಂಠಿತವಾದಂತೆಲ್ಲ ಸೋಮಾರಿತನವೂ ಆಲಸ್ಯಭಾವವೂ ಆವರಿಸಿ, ಹಿಂದು ಮುಂದು ನೋಡದೆ ದುಂದುಗಾರಿಕೆಯಿಂದ ಖರ್ಚುಮಾಡುತ್ತ, ಬರಿಗೈಯಾದ ಮೇಲೆ ಬೇರೆಯವರಿಂದ ಸಾಲತರಬೇಕಾಗುವುದು. "ಕುಳಿತುಂಬಗೆ ಕುಡಿಕೆ ಹಣವಾದರೂ ಸಾಲದು" ಎಂಬ ನಾಣ್ನುಡಿಯು ಇವರಿಗೆ ಸ್ವಾಭಾವಿಕವಾಗಿಯೇ ಗಂಟು ಬೀಳುವುದು ಸಾಲ ಹುಟ್ಟಿದಂತೆಲ್ಲ ಅಮಿತ ವ್ಯಯಗಳಾಗಿ ಸಾಲಮಾಡುತ್ತ, ಅದಕ್ಕೆ ತೆರಬೇಕಾದ ಬಡ್ಡಿರೂಪದ ಹಣವೂ ಬೆಳೆದು, ಕೊನೆಗೆ ಮೂಟೆಯಾಗಿ ಸಾಲ ತೀರಿಸಲು ಶಕ್ತಿಯಿಲ್ಲದೆ ಹೊಲ ಮನೆ ಮೊದಲಾದ ಸ್ಥಿರ ಆಸ್ತಿಗಳನ್ನೂ ಕಳೆದುಕೊಂಡು ಆ ಮರಣವೂ ಸಾಲಗಾರರಾಗುವರು ಸಾಲ ತರುವಾಗಿರುವ ಮನಸ್ಸು ಕೊಡುವಾಗ ಉಳಿಯದೆ ಹೋಗುವುದು ಸಾಲಗಾರರನ್ನು ಕುರಿತು ಸರ್ವಜ್ಞಕವಿಯು ಹೀಗೆ ಹೇಳಿರುವನು

ಸಾಲವನು ತರುವಾಗ
ಹಾಲೋಗರುಂಡಂತೆ |
ಸಾಲವನು ತೆರುವಾಗ ಕಿಬ್ಬದಿಯ
ಕೀಲ ಮುರಿದಂತೆ ಸರ್ವಜ್ಞ ||

ಸಾಲದ ಬಾಧೆಯು ಮಹಾಕೆಟ್ಟದ್ದು ಮೊದಲೇ ಸಾಲಮಾಡಬಾರದು ಒಂದುವೇಳೆ ಮಾಡಿದರೆ ಅದನ್ನು ತೀರಿಸಲಿಕ್ಕೆ ವಿಶೇಷಪ್ರಯತ್ನ ಮಾಡಬೇಕು ಸಾಲವನ್ನು ತೀರಿಸಲಿಕ್ಕೆ ಮನಸ್ಸು ಮಾಡದೆ, ಕಟ್ಟೆಗೆ ಕುಳಿತುಕೊಂಡು ಪೋಕು ಮಾತುಗಳನ್ನಾಡುತ್ತ, ಮನಸ್ವಿಯಾಗಿ ಖರ್ಚುಮಾಡುತ್ತ, ಸಾಲದಭಾರ ಹೆಚ್ಚಾದಮೇಲೆ ಅದನ್ನು ತೀರಿಸುವುದು ತನ್ನ ಜೀವಮಾನದಲ್ಲಿಯೇ ಆಗದೆ, ಹೊಳೆ ಬಾವಿ ಕೆರೆಗಳಲ್ಲಿ ಮುಳುಗುವುದು ನೇಣುಹಾಕಿಕೊಂಡು ಸಾಯುವುದು ಇತ್ಯಾದ್ಯಪಮೃತ್ಯುಗಳಿಗೆ ತುತ್ತಾಗುವರು ಸಾಲ ತಂದವನು, ಕೊಟ್ಟವನ ಋಣಬಾಧೆಗೊಳಪಟ್ಟು, ಯಾವಾಗಲೂ ಅವನ ಆಜ್ಞೆಗೆ ಒಳಪಟ್ಟದ್ದು ಅವನ ಅಳುಕಿನಲ್ಲಿ ಪ್ರತಿಯೊಂದು ಕೆಲಸದಲ್ಲಿಯೂ ಪಾಪ ಭೀತಿಯಿಲ್ಲದೆ, ಅಹಿತ ವಿಹಿತಗಳನ್ನೆಣಿಸದೆ ನೆರವಾಗಿರಬೇಕಾಗುತ್ತದೆ "ಚಿಂತೆಯೇ ಮುಪ್ಪು ಸಂತೋಷವೇ ಯೌವನ" ಎಂಬ ಗಾದೆಗನುಸರಿಸಿ ಸಾಲಗಾರನ ಮಾನಸಿಕ ಬಲವು ಯಾವಾಗಲೂ ನೆಮ್ಮದಿಯಾಗಿರದೆ ಚಿಂತೆಯ ಕಾರ್ಮೋಡಗಳಿಂದ ಮುಸುಗಿ ತನ್ಮೂಲಕ ದೈಹಿಕ ಶಕ್ತಿಯೂ ಕುಂದುವುದು ಸಾಲ ಕೊಟ್ಟವನ ಪ್ರಭಾವಕ್ಕೆ ಸಾಲಗಾರನು ಮರಮರನೆ ಮರುಗಿ ಕಂದಿಕುಂದಿ, ಅವನೆದುರಿಗೆ ತಿರುಗಾಡಲು ಧೈರ್ಯವಿಲ್ಲದೆ ತಲೆಬಾಗಿಸಿಕೊಂಡು ಮೈಮರಿಸಿಕೊಂಡು ಬೇರೆ ದಾರಿಯಿಂದ ತಿರುಗಬೇಕಾಗುತ್ತದೆ ಈ ವಿಚಾರದಲ್ಲಿ ಆಯೋಕ್ತಿಯೊಂದು ಹೀಗೆ ಎಚ್ಚರಿಸುತ್ತದೆ. 'ಸಾಲ ಶೂಲ, ಜೀವಕ್ಕೆ ಮೂಲ" ಇದನ್ನು ನಾವು ಆಲೋಚನೆಮಾಡಿ ನೋಡಿದರೆ ವ್ಯಾಜ್ಯಮ್ಮನ್ನುವುದು ಸಾಲವು ಕೊನೆಗೊಮ್ಮೆ ಪ್ರಾಣಕ್ಕೆ ಶೂಲವಾಗುವುದು

ವಿಚಾರ ಶೀಲರಾದ ವಾಚಕ ಮಹಾಶಯರೇ ! ಎಂತಹ ದುರ್ಧರ ಪ್ರಸಂಗವೊದಗಿದರೂ ಬೇರೆಯವರಿಂದ ಸಾಲಮಾಡದೆ, ಜೀವಮಾನದಲ್ಲಿಯೇ ಸಾಲದ ಪಾಶಕ್ಕೆ ಬಿದ್ದು ಒದ್ದಾಡದೆ, ಹಾಸಿಗೆ ಇದ್ದಷ್ಟೇ ಕಾಲುಚಾಚಿ ಇದ್ದುದರಲ್ಲಿಯೇ ತೃಪ್ತರಾಗಬೇಕು ಸೋಮಾರಿಗಳಾಗದೆ, ಉದ್ಯೋಗಪರರಾಗಬೇಕು ಅಂದರೆ ಲಕ್ಷ್ಮಿಯು ನಿಮ್ಮನ್ನು ಆಶ್ರಯಿಸುವಳು ಈರೀತಿ ಆಚರಿಸಿ ಧನ್ಯಜೀವಿಗಳಾಗಬೇಕೆಂದು ಹಾರೈಸುತ್ತೇನೆ

ದುಃಖವಾರ್ತೆ

ಕಡೂರು ತಾ|| ಯಗಟಿ ಹೋಬಳಿ ವಡೇರಹಳ್ಳಿ ಗ್ರಾಮದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದ ಶ್ರೀ ಶಿವಗಂಗಾಗಿರಿ ಕ್ಷೇತ್ರದ ವೈವಾಟುದಾರ್ ವೀರಭದ್ರಾರಾಧ್ಯರು ತಾ|| ೧೧-೧೦-೪೭ನೇ ಶನಿವಾರ ದಿವಸ ಶಿವಾಧೀನರಾದರೆಂದು ತಿಳಿಸಲು ಅತ್ಯಂತವಿಷಾದವೆನಿಸುತ್ತದೆ ಇವರು ವಡೇರಹಳ್ಳಿ ಗ್ರಾಮದಲ್ಲಿ ಬಹಳ ಮುಂದಾಳುಗಳಾಗಿ ಎಲ್ಲಾ ಮತದವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು ಇವರಿಗೆ ಐವತ್ತೈದು ವರುಷ ವಯಸ್ಸಾಗಿತ್ತು. ಧಾರ್ಮಿಕ ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು ಇವರನ್ನು ಎಲ್ಲಾ ಜನಗಳೂ ಪ್ರೀತಿಯಿಂದ ಕಾಣುತ್ತಿದ್ದರು. ಇವರ ಮನೆಯ ಮುಂದೆ ಹೋಗುವವರೆಲ್ಲರೂ ಇಂದಿಗೂ ಕಣ್ಣೀರು ಸುರಿಸುತ್ತಿರುವರು. ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗತ್ಪ್ರಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲಕ್ಕೂ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧಸ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೫—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೫—೦
” ” ” ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳ ಫೋಟೋ	೦—೧—೬
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	६ रु
नन्दिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರ್ ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ನವೆಂಬರ್ ೧೯೪೭ [ಸಂಚಿಕೆ ೨೮

ಶ್ರೀಮನ್ಮಹಾರಾಜರವರ ಆಜ್ಞೆ

ಮಂತ್ರಿ ಮಂಡಲವು ಸಂಯುಕ್ತ ಜವಾಬ್ದಾರಿಯಿಂದ ಕೂಡಿರುತ್ತದೆ.

ರಾಜ್ಯಾಂಗ ರಚನಾ ಸಭೆಯು ಸಿದ್ಧಗೊಳಿಸುವ ರಾಜ್ಯಾಂಗ ವ್ಯವಸ್ಥೆಗೆ ಪ್ರಭುಗಳ ಒಪ್ಪಿಗೆ ದೊರೆತನಂತರ ಆಚರಣೆಗೆ ಬರುವುದು.

ಶ್ರೀಮನ್ಮಹಾರಾಜರವರು ತಾ॥ ೨೯–೧೦ ೧೯೪೭ ನೆಯ ದಿವಸ ಈ ಕೆಳಗೆ ಕಂಡಂತೆ ಅಪ್ಪಣೆಮಾಡಿದ್ದಾರೆ.

ಶಾಸನ ಸಭೆಗಳಲ್ಲಿ ನಮ್ಮ ಪ್ರಜೆಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ ಕೋರಿಕೆಯಂತೆ ಕೆಲವು ಬಾಬುಗಳು ಹೊರತು ಉಳಿದೆಲ್ಲ ಇಲಾಖೆಗಳ ಆಡಳಿತವನ್ನೂ ಮಂತ್ರಿವರ್ಗವು ನಡೆಸುವಂತೆಯೂ ಕೆಲವು ನಮೂದಾದ ಮೂಲತತ್ವಗಳನ್ನೊಳಗೊಂಡ, ಜವಾಬ್ದಾರೀ ಸರಕಾರವನ್ನು ಸ್ಥಾಪಿಸುವ ರಾಜ್ಯಾಂಗ ಮಸೂದೆಯನ್ನು ನಮ್ಮ ಅನುಮೋದನೆಗೆ ಒಪ್ಪಿಸುವಂತೆಯೂ ೧೯೪೭ನೇ ಸೆಪ್ಟೆಂಬರ್ ೨೪ ನೇ ತಾರೀಖಿನ ಘೋಷಣೆಯಲ್ಲಿ ಆಜ್ಞಾಪಿಸಿದ್ದೆವು.

ದಿವಾನರಿಗೂ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೂ ಹೊಸ ಮಂತ್ರಿವರ್ಗ ಸ್ಥಾಪನೆ ಮತ್ತು ರಾಜ್ಯಾಂಗ ನಿರ್ಮಾಣ ಸಭೆಯ ರಚನೆ–ಇವುಗಳ ಬಗ್ಗೆ ಆದ ಒಡಂಬಡಿಕೆಗೆ ೧೯೪೭ನೇ ಅಕ್ಟೋಬರ್ ೧೨ ನೇ ತಾರೀಖಿನ ದಿವಸ ನಮ್ಮ ಅನುಮತಿ ಇತ್ತೆವು ಆ ಒಡಂಬಡಿಕೆಯ ಪ್ರಕಾರ ಹೊಸ ಮಂತ್ರಿವರ್ಗಕ್ಕೆ ಕೆಲವು ಹೆಸರುಗಳು ಸೂಚಿಸಲ್ಪಟ್ಟಿದ್ದು ಅವು ನಮ್ಮಿಂದ ಅನುಮೋದಿಸಲ್ಪಟ್ಟು ಈಗಿನ ಮಂತ್ರಿವರ್ಗ ಸ್ಥಾಪನೆಯಾಯಿತಷ್ಟೆ। ಈಗ ನಾವು ಹೀಗೆ ಅಜ್ಞಾಪಿಸುತ್ತೇವೆ·

ದಿವಾನರೂ ಮಂತ್ರಿವರ್ಗವೂ ಒಂದೇ ಮಂತ್ರಿಮಂಡಲದಂತೆ ವರ್ತಿಸಿ ಸಂಯುಕ್ತ ಜವಾಬ್ದಾರಿಯ ಮೇಲೆ ತಮಗೆ ಸಂಬಂಧ ಪಟ್ಟ ಎಲ್ಲ ವಿಷಯಗಳ ಆಡಳಿತವನ್ನೂ ಬಹುಮತದ ತೀರ್ಮಾನದಂತೆ ನಡೆಸತಕ್ಕದ್ದು ಮತ್ತು ಮಂತ್ರಿವರ್ಗವು ಶಾಸನಸಭೆಗಳ ವಿಶ್ವಾಸ ಪಡೆದಿರುವ ವರೆಗೂ ಅಧಿಕಾರದಲ್ಲಿರತಕ್ಕದ್ದು.

ಮಂತ್ರಿವರ್ಗವು ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳನ್ನೊಳಗೊಂಡ ರಾಜ್ಯಾಂಗ ನಿರ್ಮಾಣ ಸಭೆಯನ್ನೇರ್ಪಡಿಸಿ ಆ ಸಭೆಗೆ ನಮ್ಮ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವ ರಾಜ್ಯಾಂಗ ಮಸೂದೆ ತಯಾರಿಕೆಯ ಕರ್ತವ್ಯವನ್ನು ವಹಿಸತಕ್ಕದ್ದು. ಈ ರಾಜ್ಯಾಂಗ ಸಭೆಯು ನಮ್ಮ ೧೯೪೭ ನೇ ಇಸ್ವಿ ಸೆಪ್ಟೆಂಬರ್ ೨೪ ನೇ ತಾರೀಖಿನ ಆಜ್ಞೆಯ ಒಂದನೇ ಷೆಡ್ಯೂಲಿನಲ್ಲಡಗಿರುವ ಮೂಲತತ್ವಗಳಲ್ಲಾಗಲೀ ಅಥವಾ ಎರಡನೇ ಷೆಡ್ಯೂಲಿನಲ್ಲಿ ಕಂಡುಬರುವ ಅಂಶಗಳಲ್ಲಾಗಲೀ ಅಗತ್ಯ ತೋರಿದ ಸೂಕ್ತವಾದ ಬದಲಾವಣೆಗಳನ್ನು ಮಾಡಬಹುದು.

ರಾಜ್ಯಾಂಗ ಮಸೂದೆಯ ಕರಡು ಪ್ರತಿಯನ್ನು ನಮ್ಮ ಅನುಮೋದನೆಗೆ ಒಪ್ಪಿಸಬೇಕು. ನಂತರ ನಾವು ನಮಗೆ ಅಗತ್ಯವೆನಿಸಿದ ಅಥವಾ ಯುಕ್ತವೆಂದು ತೋರಿದ ಮಾರ್ಪಾಡುಗಳನ್ನು ಮಾಡಿ ರಾಜ್ಯಾಂಗ ಶಾಸನವನ್ನು ಘೋಷಿಸುವೆವು.

ನಮ್ಮ ಪ್ರಿಯ ಪ್ರಜೆಗಳು ಈಗ ಅವರಿಗೆ ಕಲ್ಪಿಸಿಕೊಟ್ಟಿರುವ ಘನವಾದ ಅವಕಾಶವನ್ನು ಮನವರಿಕೆ ಮಾಡಿಕೊಂಡು ಸಮರಸವಾಗಿ ಕೆಲಸ ಮಾಡಲೆಂದು ನಮ್ಮ ಹಾರೈಕೆ ನಮ್ಮ ಮಂತ್ರಿವರ್ಗವು ತನ್ನ ಕರ್ತವ್ಯಗಳನ್ನು ನಿರ್ವಂಚನೆಯಿಂದಲೂ ನಿಷ್ಪಕ್ಷಪಾತವಾಗಿಯೂ ನಿರ್ವಹಿಸಿ ಸಂಸ್ಥಾನದ ಮತ್ತು ಪ್ರಜಾವರ್ಗದ **ಶಾಂತಿ, ಅಭಿವೃದ್ಧಿ ಮತ್ತು ಅಭ್ಯುದಯಗಳನ್ನು** ಸಾಧಿಸುವರೆಂದು ವಿಶ್ವಾಸವುಳ್ಳವರಾಗಿದ್ದೇವೆ.

(ಸಹಿ) **ಜಯಚಾಮರಾಜ ಒಡೆಯರ್**

ಸಚಿವರುಗಳಿಗೆ ಆಡಳಿತ ಶಾಖೆಗಳ ಹಂಚಿಕೆ

ಶ್ರೀಮನ್ಮಹಾರಾಜರವರು ದಿವಾನರು ಮತ್ತು ಸಚಿವರುಗಳಿಗೆ ಈ ಕೆಳಗೆ ಕಂಡಂತೆ ಸರ್ಕಾರದ ನಾನಾ ಆಡಳಿತ ಶಾಖೆಗಳನ್ನು ವಹಿಸಿಕೊಟ್ಟಿರುತ್ತಾರೆ

ದಿವಾನರು—ಅರಮನೆ ಸಾಂಸ್ಥಾನಗಳು, ಆರ್ಥಿಕ ಸಮ್ಮೇಳನ (ಪ್ಲಾನಿಂಗ್)

ಶ್ರೀ ಕೆ ಸಿ ರೆಡ್ಡಿಯವರು—(ಪ್ರಧಾನ ಸಚಿವರು) ರೆವಿನ್ಯೂ, ಆಹಾರ ಮತ್ತು ಸಿವಿಲ್ ಸಪ್ಲೈಸ್, ರಾಜಕೀಯ ಶಾಖೆ, ಸಿವಿಲ್ ಸರ್ವಿಸ್, ಸೆಕ್ರೆಟೆರಿಯೆಟ್ ಮತ್ತು ವಾರ್ತಾ ಶಾಖೆ

ಶ್ರೀ ಹೆಚ್ ಸಿ. ದಾಸಪ್ಪನವರು—ಹಣಕಾಸು, ಕೈಗಾರಿಕೆ ಮತ್ತು ವಾಣಿಜ್ಯ, ಆದಾಯ ತೆರಿಗೆ, ಟ್ರಸ್ಟ್ ಬೋರ್ಡುಗಳು, ಅರಣ್ಯ

ಶ್ರೀ ಕೆ ಟಿ ಭಾಷ್ಯಂರವರು—ನ್ಯಾಯಾಂಗ, ಲೆಜಿಸ್ಲೇಷನ್, ಎಕ್ಸ್‌ಟ್ರಾಡಿಷನ್, ಕಾರ್ಮಿಕ ಶಾಖೆ, ವಿದ್ಯುಚ್ಛಕ್ತಿ ಮತ್ತು ಸೆರೆಮನೆಗಳು

ಶ್ರೀ ಎಚ್ ಸಿದ್ದಯ್ಯನವರು—ಮರಾಮತ್ ಶಾಖೆ, ವ್ಯವಸಾಯ, ಅಗ್ರಿಕಲ್ಚರಲ್ ಮಾರ್ಕೆಟಿಂಗ್, ವೆಟರ್ನರಿ ಮತ್ತು ಲೈವ್‌ಸ್ಟಾಕ್, ಸಹಕಾರ ಸಂಘಗಳು ಮತ್ತು ಪಬ್ಲಿಕ್ ಸರ್ವಿಸ್ ನಿಯಮಗಳು

ಶ್ರೀ ಟಿ ಮರಿಯಪ್ಪನವರು—ಪೋಲೀಸ್, ಮಿಲಿಟರಿ, ರೈಲ್ವೆ, ರಸ್ತೆಯ ಸಂಚಾರ ಸೌಲಭ್ಯಗಳು, ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮಾಭಿವೃದ್ಧಿ

ಶ್ರೀ ಆರ್ ಚೆನ್ನಿಗರಾಮಯ್ಯನವರು—ನಿಮ್ನ ವರ್ಗದವರ ಉದ್ಧಾರ ಶಾಖೆ ಜಿಲ್ಲಾ ಬೋರ್ಡುಗಳು, ಟೌನ್ ಮತ್ತು ಮೈನರ್ ಮುನಿಸಿಪಾಲಿಟಿಗಳು, ಜನರಲ್ ಮಿಸಲೇನಿಯಸ್

ಜನಾಬ್ ಮಹಮ್ಮದ್ ಷರೀಫ್‌ರವರ—ವೈದ್ಯ ಮತ್ತು ಸಾರ್ವಜನಿಕ ಆರೋಗ್ಯ, ಎಕ್ಸೈಸ್, ತೆರಿಗೆಗಳು, ಸ್ಟಾಂಪ್ಸ್, ರೆಜಿಸ್ಟ್ರೇಷನ್, ಮುದ್ರಣ ಮತ್ತು ಸ್ಟೇಷನರಿ, ಜಿಯಾಲಜಿ ಮತ್ತು ಮೈನಿಂಗ್.

ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ವಿಶ್ವವಿದ್ಯಾನಿಲಯ, ವಿದ್ಯಾ ಇಲಾಖೆ, ಪ್ರಜಾಪ್ರತಿನಿಧಿ ಸಭೆ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್, ಆರ್ಕಿಯಾಲಜಿ ಮತ್ತು ಮ್ಯೂಜಿಯಾಲಜಿ

ಶ್ರೀ ಶಾಮಿಟಿ ಸುಬ್ಬರಾಮ ಶ್ರೇಷ್ಠಿಯವರು—ನಗರ ಸಭೆಗಳು, ಕ್ಯಾಪಿಟಲ್ ಇಷ್ಯೂಸ್, ಮುಜರಾಯ್, ಶೇರ್ಸ್ ಮತ್ತು ಜಾಯಿಂಟ್‌ಸ್ಟಾಕ್ ಕಂಪೆನಿಗಳು.

ಕಾಶ್ಮೀರದೇಶವು ಭಯಂಕರ ಕಷ್ಟಕ್ಕೀಡಾಗಿದೆ

ಕಾಶ್ಮೀರ ಸಂಸ್ಥಾನದಲ್ಲಿ ಶಸ್ತ್ರಸಜ್ಜಿತ ಯೋಧರ ದುರಾಕ್ರಮಣದಿಂದ ತಲೆದೋರಿರುವ ಅವ್ಯವಸ್ಥೆಯ ದೃಷ್ಟಿಯಿಂದಲೂ, ಶಾಂತಿಪಾಲನ ಕಾರ್ಯದಲ್ಲಿ ಅಡ್ಡಿ ಆತಂಕಗಳಿಲ್ಲದೆ ಭಾರತದ ಸಹಾಯ ಪಡೆಯುವ ಉದ್ದೇಶದಿಂದಲೂ ಕಾಶ್ಮೀರದ ಶ್ರೀಮನ್ಮಹಾರಾಜರವರು ಭಾರತ ಡೊಮಿನಿಯನ್ನಿಗೆ ಸೇರಲು ನಿರ್ಧರಿಸಿ ಪ್ರವೇಶ ಕರಾರಿಗೆ ಸಹಿ ಹಾಕಿದ್ದಾರೆ ಭಾರತ ಸರ್ಕಾರವು ಅವರ ನಿರ್ಧಾರಕ್ಕೆ ಅಂಗೀಕಾರವಿತ್ತಿದ

ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷರಾದ ಜನಾಬ್ ಷೇಕ್ ಮಹಮದ್ ಅಬ್ದುಲ್ಲಾರವರಿಗೆ ಪ್ರಜಾನುರಾಗವುಳ್ಳ ತಾತ್ಕಾಲಿಕ ಮಂತ್ರಿಮಂಡಲವನ್ನು ಸ್ಥಾಪಿಸುವಂತೆ ಮಹಾರಾಜರು ಆಹ್ವಾನವಿತ್ತಿದ್ದಾರೆ ಪ್ರಜಾವಿಶ್ವಾಸಗಳಿಸಿರುವ ತಾತ್ಕಾಲಿಕ ಮಂತ್ರಿಮಂಡಲ ಸ್ಥಾಪನೆಯ ನಿರ್ಧಾರವು ಭಾರತ ಸರ್ಕಾರಕ್ಕೆ ತೃಪ್ತಿಯನ್ನುಂಟುಮಾಡಿದೆ

ಮೇಲ್ಕಂಡ ಅಂಶಗಳು ಈಗ ಹೊರಬಿದ್ದಿರುವ ಕಾಶ್ಮೀರದ ಮಹಾರಾಜರವರ ಮತ್ತು ಭಾರತದ ಗವರ್ನರ್ ಜನರಲ್‌ರವರ ಪತ್ರವ್ಯವಹಾರದಿಂದ ಬೆಳಕಿಗೆ ಬಂದಿವೆ

ಗವರ್ನರ್ ಜನರಲ್‌ರವರಿಗೆ ಮನವಿ

ಭಾರತದ ಗವರ್ನರ್ ಜನರಲ್‌ರವರಾದ ಲಾರ್ಡ್ ಲೂಯಿ ಮೌಂಟ್ ಬೇಟನ್ನರವರಿಗೆ ಕಾಶ್ಮೀರದ ಶ್ರೀಮನ್ಮಹಾರಾಜರವರು ಒರೆದಿರುವ ಪತ್ರದಲ್ಲಿ ಪಾಕಿಸ್ಥಾನ್ ಸರ್ಕಾರದ ಪ್ರೇರಣೆಯಿಂದ ನಡೆಯುತ್ತಿರುವ ಶಸ್ತ್ರಸಜ್ಜಿತ ಯೋಧರ ದಾಂಧಲೆಯನ್ನು ಭಾರತ ಸರ್ಕಾರದ ಗಮನಕ್ಕೆ ತರಲಾಗಿದೆ ಈ ಕಷ್ಟಪರಿಸ್ಥಿತಿಯಲ್ಲಿ ನೆರವು ನೀಡಬೇಕೆಂದು ಭಾರತ ಸರ್ಕಾರವನ್ನು ಮಹಾರಾಜರು ಪ್ರಾರ್ಥಿಸಿದ್ದಾರೆ

'ಇದುವರೆಗೂ ಕಾಶ್ಮೀರವು ಯಾವ ಡೊಮಿನಿಯನ್ನನ್ನೂ ಸೇರಿರಲಿಲ್ಲ ಭೌಗೋಳಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಕಾಶ್ಮೀರವು ಎರಡು ಡೊಮಿನಿಯನ್‌ಗಳೊಂದಿಗೂ ಸಂಬಂಧಹೊಂದಿದೆ ಈ ಅಂಶಗಳನ್ನೆಲ್ಲಾ ಸಾವಧಾನವಾಗಿ ವಿಮರ್ಶಿಸಿ ಯಾವ ಡೊಮಿನಿಯನ್ ಪ್ರವೇಶಮಾಡಬೇಕೆಂಬುದನ್ನು ನಿರ್ಧರಿಸಲು ಕಾಲಾವಕಾಶ ಅತ್ಯಗತ್ಯವಾಗಿ ಬೇಕಾಗಿದ್ದಿತು ಆದಕಾರಣ ಕಾಶ್ಮೀರವು ಪಾಕಿಸ್ಥಾನದೊಡನೆ "ಸ್ಟ್ಯಾಂಡ್ ಸ್ಟಿಲ್" ಒಪ್ಪಂದ ಮಾಡಿಕೊಂಡಿತು ಆದರೆ ಪಾಕಿಸ್ಥಾನ್ ಸರ್ಕಾರವು ತನ್ನ ವಚನವನ್ನು ಪಾಲಿಸಲಿಲ್ಲ.'

ಎಂಬುದಾಗಿ ತಮ್ಮ ಪತ್ರದಲ್ಲಿ ಮಹಾರಾಜರು ತಿಳಿಸಿದ್ದಾರೆ

ಆಯುಧಪಾಣಿಗಳಿಂದ ಯೋಧರ ದುರಾಕ್ರಮಣ

ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತರಾಗಿ, ಸಾಮಾನ್ಯ ಪೋಷಾಕು ಧರಿಸಿದ್ದ ಯೋಧರು ,ಅಸಂಖ್ಯಾತರಾಗಿ ಸಂಸ್ಥಾನದ ನಾನಾ ಪ್ರದೇಶವನ್ನು ಆಕ್ರಮಿಸಲು ಯತ್ನಿಸಿದರು ಕಾಶ್ಮೀರದ ಸೇನೆಗೆ ನಾನಾ ಪ್ರದೇಶಗಳಲ್ಲಿ ಮುನ್ನುಗ್ಗುತ್ತಿದ್ದ ದಾಂಧಲೆಕಾರರನ್ನು ಮಟ್ಟಹಾಕುವುದು ಕಷ್ಟಸಾಧ್ಯವಾದ ಕಾರ್ಯವಾಗಿದ್ದಿತು ಗಲಭೆಗಾರರು ಭಯಂಕರ ಕೃತ್ಯಗಳನ್ನು ಎಸಗಿದ್ದಾರೆ ಶ್ರೀನಗರಕ್ಕೆಲ್ಲಾ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿದ್ದ "ಮಹೋರ"ವಿದ್ಯುಚ್ಛಕ್ತಿ ಉತ್ಪನ್ನ ಕೇಂದ್ರವು ಭಸ್ಮವಾಗಿದೆ! ಅನೇಕ ಮಹಿಳೆಯರು ಕಣ್ಮರೆಯಾಗಿದ್ದಾರೆ ಶ್ರೀನಗರವನ್ನು ಹಿಡಿಯುವ ದುರುದ್ದೇಶದಿಂದ ಗಲಭೆಗಾರರು ಮುನ್ನುಗ್ಗುತ್ತಿದ್ದಾರೆ ಗಲಭೆಗಾರರ ಹಾವಳಿಯಲ್ಲಿ ಗಡಿನಾಡಿನ ಸರ್ಕಾರ ಮತ್ತು ಪಾಕಿಸ್ಥಾನ ಸರ್ಕಾರಗಳ ಕೈವಾಡ ಸ್ಪಷ್ಟವಾಗಿ ಕಂಡು ಬರುತ್ತಿದೆ."—ಎಂದು ಮಹಾರಾಜರು ಕಾಶ್ಮೀರದ ಘಟನೆಗಳನ್ನು ವರ್ಣಿಸಿದ್ದಾರೆ

ಭಾರತಕ್ಕೆ ಸೇರುವ ನಿರ್ಧಾರ

"ನಮ್ಮ ಸಂಸ್ಥಾನದಲ್ಲಿ ಅಶಾಂತಿ ಪರಿಸ್ಥಿತಿ ತಲೆದೋರಿರುವ ಈ ವಿಷಮ ಸನ್ನಿವೇಶದಲ್ಲಿ ಭಾರತ ಸರ್ಕಾರದ ಸಹಾಯವನ್ನಪೇಕ್ಷಿಸದೆ ವಿಧಿಯಿಲ್ಲ ಕಾಶ್ಮೀರವು ಭಾರತ ಡೊಮಿನಿಯನ್ ಸೇರಿದ ಹೊರತು ಯಾವ ಸಹಾಯ ನೀಡಲೂ ಭಾರತ ಸರ್ಕಾರಕ್ಕೆ ಸಾಧ್ಯವಿಲ್ಲ. ಆದುದರಿಂದ ಕಾಶ್ಮೀರವು ಭಾರತ ಡೊಮಿನಿಯನ್ ಸೇರಬೇಕೆಂದು ನಿರ್ಧರಿಸಿ ಪ್ರವೇಶ ಕರಾರಿಗೆ ಸಹಿ ಹಾಕಿದ್ದೇನೆ '— ಎಂದು ಅವರು ತಿಳಿಸಿದ್ದಾರೆ

ಭಾರತ ಸರ್ಕಾರದ ಸಮ್ಮತಿ

ಕಾಶ್ಮೀರದ ಶ್ರೀಮನ್ಮಹಾರಾಜರವರು ವರ್ಣಿಸಿರುವ ಹೃದಯಭೇದಕವಾದ ಪರಿಸ್ಥಿತಿಯ ದೃಷ್ಟಿಯಿಂದ ಭಾರತ ಸರ್ಕಾರವು ಕಾಶ್ಮೀರದ ಮಹಾರಾಜರ ನಿರ್ಧಾರವನ್ನು ಅಂಗೀಕರಿಸಿದೆಯೆಂದೂ, ಕಾಶ್ಮೀರದಲ್ಲಿ ಪ್ರಶಾಂತ ವಾತಾವರಣ ಕಂಡುಬಂದ ಕೂಡಲೇ ಯಾವ ಡೊಮಿನಿಯನ್ ಸೇರಬೇಕೆಂಬ ವಿಚಾರದಲ್ಲಿ ಜನಮತ ಗಣನೆ ನಡೆಯಬೇಕೆಂದೂ ಗವರ್ನರ್ ಜನರಲ್‌ರವರು ತಿಳಿಸಿದ್ದಾರೆ.

ಷೇಕ್ ಅಬ್ದುಲ್ಲಾರವರ ಮನವಿ

"ನಮ್ಮ ಸುಂದರನಾಡು ಈಗ ಆಕ್ರಮಣಕಾರರ ದಾಂಧಲೆಗೀಡಾಗಿದೆ ನಮ್ಮ ಜನ್ಮಭೂಮಿಯನ್ನು ದುರಾಕ್ರಮಣದಿಂದ ಪಾರುಮಾಡಿ ರಕ್ಷಿಸುವುದು ಪ್ರತಿ ಕಾಶ್ಮೀರ ಪ್ರಜೆಯ ಪವಿತ್ರ ಕರ್ತವ್ಯವಾಗಿದೆ" ಎಂಬುದಾಗಿ ಶ್ರೀನಗರಕ್ಕೆ ತೆರಳುವ ಮುಂಚೆ ಷೇಕ್ ಅಬ್ದುಲ್ಲಾರವರು ಕಾಶ್ಮೀರದ ಪ್ರಜೆಗಳಿಗೆ ಮನವಿಮಾಡಿಕೊಂಡಿದ್ದಾರೆ. ಕಾಶ್ಮೀರದ ಪ್ರಜೆಗಳನ್ನು ಬಲಾತ್ಕಾರದಿಂದ ತಮ್ಮ ಕಡೆಗೆ ಸೆಳೆಯಲು ಪಾಕಿಸ್ಥಾನವು ಹೂಡಿರುವ ಕುತಂತ್ರವಿದೆಂದು ಅಬ್ದುಲ್ಲಾರವರು ಎಚ್ಚರಿಸಿದ್ದಾರೆ

ಕಾಶ್ಮೀರದ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದೇ ರಾಷ್ಟ್ರೀಯ ಸಮ್ಮೇಳನದ ಗುರಿ ಪರರು ನಮ್ಮ ಮೇಲೆ ಹೊಸದಾಗಿ ಗುಲಾಮಗಿರಿ ಹೂರಿಸುವುದನ್ನು ನಾವು ಎಂದಿಗೂ ಸಹಿಸೆವು ರಾಜಕೀಯ ದೃಷ್ಟಿಯಿಂದ ಭಾರತವು ಪ್ರಗತಿ ಪರರಾಷ್ಟ್ರವಾಗಿದ ಭಾರತ ಡೊಮಿನಿಯನ್ ಸೇರಿದರೆ ಕಾಶ್ಮೀರದ ಅಭ್ಯುದಯಕ್ಕೆ ಹೆಚ್ಚು ಅವಕಾಶವಿದೆಯೆಂಬ ಅಭಿಪ್ರಾಯವು ರಾಷ್ಟ್ರೀಯ ಸಮ್ಮೇಳನದ ಮುಖಂಡರುಗಳಲ್ಲಿ ಬಹು ಮಂದಿಗೆ ಇದೆ ಈಗಿನ ಮುಖ್ಯ ಸಮಸ್ಯೆಯೆಂದರೆ ಯಾವ ಡೊಮಿನಿಯನ್ ಪ್ರವೇಶಿಸಬೇಕೆಂಬುದಲ್ಲ, ತ್ವರಿತವಾಗಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು" ಎಂದು ಅವರು ತಿಳಿಸಿದ್ದಾರೆ

ಕಾಶ್ಮೀರಕ್ಕೆ ಭಾರತ ಸೇನೆ

ತಾ॥ ೨೭ ನೇ ದಿವಸ ೯ ಗಂಟೆಗೆ ಕಾಶ್ಮೀರಕ್ಕೆ ಭಾರತ ಸೇನೆ ಆಗಮಿಸಿತು ಈ ಸಂಜೆ 'ಬರಮುಲ" ಎಂಬ ಸ್ಥಳದಲ್ಲಿ ಭಾರತದ ಸೈನಿಕರು ಗಲಭೆಗಾರರೊಡನೆ ಹೋರಾಡಿದರು ಭಾರತದ ಪಡೆಗಳು ಬರುವ ಮುನ್ನ ಶ್ರೀನಗರದಲ್ಲಿ ಆಡಳಿತ ಯಂತ್ರ ಕುಸಿದು ಬಿದ್ದು ಪೂರ್ಣ ಅವ್ಯವಸ್ಥೆಯುಂಟಾಗಿದ್ದಿತು ಭಾರತದ ಸೈನಿಕರ ಸಾಹಸದ ಫಲವಾಗಿ ಈಗ ಪರಿಸ್ಥಿತಿ ಸುಧಾರಿಸುತ್ತಿದೆ ಗಲಭೆಕಾರರು ವೀರಾವೇಶದಿಂದ ಕಾದಾಡುತ್ತಿದ್ದಾರೆ

ಕಾಶ್ಮೀರವನ್ನು ರಕ್ಷಿಸಲು ಭಾರತದ ದೃಢಸಂಕಲ್ಪ

ಪಾಕಿಸ್ಥಾನ್ ಡೊಮಿನಿಯನ್ನಿನೊಂದಿಗೆ ಮೈತ್ರಿಯಿಂದ ಬಾಳಬೇಕೆಂಬುದೇ ಭಾರತ ಸರ್ಕಾರದ ಆಶೆ! ಕಾಶ್ಮೀರ ಸಂಸ್ಥಾನದಲ್ಲಿ ದಾಂಧಲೆ ಮಾಡುತ್ತಿರುವ ಮಾನವ ಜನಾಂಗದ ಪ್ರಬಲ ಶತ್ರುಗಳಾದ ಗಲಭೆಗಾರರನ್ನು ಅಡಗಿಸಲು ಭಾರತ ಸರ್ಕಾರವು ಮಿಲಿಟರಿ ಕಾರ್ಯಾಚರಣೆಯನ್ನು ಕೈಗೊಂಡಿದೆ ಪಾಕಿಸ್ಥಾನದ ಮೇಲೆ ಕೈಮಾಡುವ ದುರುದ್ದೇಶವು ಭಾರತ ಸರ್ಕಾರಕ್ಕಿಲ್ಲ.—ಎಂಬುದಾಗಿ ಕಾಶ್ಮೀರದ ಪರಿಸ್ಥಿತಿಯ ಬಗ್ಗೆ ಹೊರಟಿರುವ ಭಾರತ ಸರ್ಕಾರ ಪ್ರಕಟನೆಯೊಂದರಲ್ಲಿ ತಿಳಿಸಲಾಗಿದೆ.

ಗಲಭೆಗಾರರು ಕಾಶ್ಮೀರವನ್ನು ಪಾಕಿಸ್ಥಾನದಮೂಲಕ ಪ್ರವೇಶಿಸಿರುತ್ತಾರೆ. ಪಾಕಿಸ್ಥಾನದ ಮೂಲಕ ಪ್ರವೇಶ ಮಾಡಲು ಅವಕಾಶ ಕೊಡದಿದ್ದರೆ ಕಾಶ್ಮೀರಕ್ಕೊದಗಿರುವ ಅಪಾಯವನ್ನು ನಿವಾರಿಸುವುದು ಸುಲಭವಾಗುತ್ತದೆ ಕಳೆದ ೨೮ ನೇ ತಾ॥ ದಿವಸ ಪಾಕಿಸ್ಥಾನದ ಮೂಲಕ ಹಾದುಹೋಗಲು ಪುಂಡರಿಗೆ ಅವಕಾಶ ಕೊಡಬಾರದೆಂದು ಪಾಕಿಸ್ಥಾನ ಸರ್ಕಾರವನ್ನು ಪ್ರಾರ್ಥಿಸಲಾಯಿತು.

ಕಾಶ್ಮೀರದ ಘಟನೆಗಳ ಸಿಂಹಾವಲೋಕನ

ಈಗ ಕೆಲಕಾಲದಿಂದ ಜಮ್ಮು ಪ್ರಾಂತದ ಪಶ್ಚಿಮ ಭಾಗದಲ್ಲಿ ಶಸ್ತ್ರಸಜ್ಜಿತ ಪುಂಡರು ದಾಳಿ ಮಾಡುತ್ತಿದ್ದಾರೆಂದು ವರದಿ ಬರುತ್ತಿದೆ ಈ ಪ್ರದೇಶಗಳಲ್ಲಿ ಗಲಭೆಗಾರರ ಹಾವಳಿ ಹೇಳತೀರದು. ಅಕ್ಟೋಬರ್ ೨೪ ರಲ್ಲಿ ಗಲಭೆಗಾರರ ದಾಂಧಲೆಯು ಪ್ರಬಲವಾಯಿತು. ಎರಡು ಸಾವಿರ ಶಸ್ತ್ರಸಜ್ಜಿತ ಯೋಧರು ಮೋಟಾರು ವಾಹನಗಳಲ್ಲಿ ಕಾಶ್ಮೀರ ದೇಶವನ್ನು ಪ್ರವೇಶಿಸಿದರು ಗ್ರಾಮಗಳ ಧ್ವಂಸ, ಲೂಟಿಯಪ್ರಕರಣಗಳು ಸಹಿಸಲಸಾಧ್ಯವಾದುವು

ನೆರೆಯ ಮಿತ್ರ ರಾಷ್ಟ್ರವೊಂದು ಅಪಾಯಕ್ಕೀಡಾದ ವೇಳೆಯಲ್ಲಿ ಅದರ ರಕ್ಷಣೆಗೆ ನೆರವಾಗುವುದು ಆದ್ಯ ಕರ್ತವ್ಯ. ಕಾಶ್ಮೀರಕ್ಕೆ ಅಪಾಯ ಒದಗಿದರೆ ಭಾರತದ ಭದ್ರತೆಗೂ ಧಕ್ಕೆಯೊದಗುವುದೆಂಬುದನ್ನು ಗಮನಿಸಿ ಭಾರತ ಸರ್ಕಾರವು ಕಾಶ್ಮೀರದ ರಕ್ಷಣೆಗೆ ಸಹಾಯ ನೀಡಿತು. ಕಾಶ್ಮೀರವನ್ನು ರಕ್ಷಿಸಲು ಸರ್ವಪ್ರಯತ್ನ ಮಾಡಲಾಗುವುದು ಕಾಶ್ಮೀರದ ರಕ್ಷಣೆ ಮತ್ತು ಅದರ ಭವಿಷ್ಯ ನಿರ್ಧಾರದ ಕಾರ್ಯದಲ್ಲಿ ಕಾಶ್ಮೀರ ಪ್ರಜೆಗಳ ಮತಕ್ಕೆ ಪುರಸ್ಕಾರ ದೊರೆಯುವುದು.

ಭಾರತಸೈನ್ಯದ ಅಧಿಕಾರಿಯ ಮರಣ

ಸೋಮವಾರ ಶ್ರೀನಗರಕ್ಕೆ ಕಳುಹಲ್ಪಟ್ಟ ಭಾರತದ ಪಡೆಗಳು ತತ್‌ಕ್ಷಣ ಕಾರ್ಯೋನ್ಮುಖವಾದುವು. ಮೊಟ್ಟ ಮೊದಲು ಭಾರತ ಸೈನ್ಯವು ವಿಮಾನ ನಿಲ್ದಾಣಗಳ ರಕ್ಷಣೆಗೆ ವ್ಯವಸ್ಥೆ ಮಾಡಿತು ಶತ್ರು ದಾಳಿಗೀಡಾಗಿ ಲೂಟಿ ಮಾಡಲ್ಪಟ್ಟಿದ್ದ "ಬರಮುಲ" ಎಂಬ ಸ್ಥಳಕ್ಕೆ ಲೆ॥ ಕ॥ ರಾಯ್‌ರವರ ನಾಯಕತ್ವದಲ್ಲಿ ಭಾರತದ ಪಡೆಗಳು ನುಗ್ಗಿದವು ಮಾರನೆಯ ದಿನ ಪ್ರಾತಃಕಾಲ "ಬರಮುಲ" ಮೇಲೆ ಮಿಲಿಟರಿ ಕಾರ್ಯಾಚರಣೆಯಾರಂಭವಾಯಿತು ಆದರೆ ಅತ್ಯಾಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತರಾದ ಮತ್ತು ಅಧಿಕ ಸಂಖ್ಯೆಯ ಗಲಭೆಗಾರರನ್ನು ಅಲ್ಪಸಂಖ್ಯೆಯ ಭಾರತದ ಪಡೆಗಳು ಮಟ್ಟಹಾಕುವುದು ಕಷ್ಟವಾಗಿದ್ದಿತು ಗಲಭೆಗಾರರು ಭಾರತದ ಪಡೆಗಳನ್ನು ಸುತ್ತುಗಟ್ಟುವ ಸಂಭವವಿದ್ದುದರಿಂದ ಲೆ॥ ಕ॥ ರಾಯ್‌ರವರು ಹಿಂದೆ ಸರಿಯುವಂತೆ ತಮ್ಮ ಯೋಧರಿಗೆ ಆಜ್ಞೆ, ಇತ್ತರು ಸೈನಿಕರು ಹಿಂದೆ ಸರಿದರು ಆದರೆ ಲೆ॥ ಕ॥ ರಾಯ್‌ರವರು ಹಿಂದೆಯೇ ಉಳಿದುದರ ಫಲವಾಗಿ ಮೃತ್ಯುವಿಗೀಡಾದರು ಎಂಬುದಾಗಿ—ಪ್ರಕಟನೆಯು ವರ್ಣಿಸಿದೆ

ತಮ್ಮ ಸ್ಥಾನಗಳನ್ನು ಭದ್ರವಾಗಿ ಭಾರತದ ಪಡೆಗಳು ರಕ್ಷಿಸುತ್ತಿವೆಯೆಂದೂ, ಭಾರತದಿಂದ ಅಧಿಕ ಸಂಖ್ಯೆಯಲ್ಲಿ ಯೋಧರನ್ನು ಕಾಶ್ಮೀರಕ್ಕೆ ಕಳುಹುತ್ತಿರುವರೆಂದೂ ತಿಳಿದು ಬಂದಿದೆ

ಪಟ್ಟನ್ ಗ್ರಾಮದಬಳಿ ಕಾರ್ಯಾಚರಣೆ

ಶ್ರೀನಗರ, ಬರಮುಲ ರಸ್ತೆಯಲ್ಲಿರುವ ಪಟ್ಟನ್, ಎಂಬ ಗ್ರಾಮದ ಬಳಿ ರಾಯಲ್ ವಿಮಾನ ದಳದವರು ಗಲಭೆಗಾರರ ಮೇಲೆ ಧಾಳಿ ನಡೆಸಿದರು. ಶ್ರೀನಗರಕ್ಕೆ ಯೋಧರನ್ನೂ, ಆಯುಧೋಪಕರಣಗಳನ್ನೂ ಅಧಿಕ ಪ್ರಮಾಣದಲ್ಲಿ ವಿಮಾನಗಳ ಮೂಲಕ ರವಾನಿಸಲಾಗಿದೆ. ಶ್ರೀನಗರಕ್ಕೆ ಸಿವಿಲಿಯನ್ ಸಂಚಾರ ಪೂರ್ಣವಾಗಿ ನಿಂತಿದೆ ಕಾಶ್ಮೀರದಲ್ಲಿ ಮಿಲಿಟರಿ ಕಾರ್ಯಾಚರಣೆಯ ವಿವರಗಳು ಇನ್ನೂ ಖಚಿತವಾಗಿ ತಿಳಿದುಬಂದಿಲ್ಲ. ನಿಖರವಾಗಿ ಸುದ್ದಿ ಬಾರದುದಕ್ಕೆ ಎರಡು ಕಾರಣಗಳಿರಬಹುದೆಂದು ಊಹಿಸಲಾಗಿದೆ. ವಾರ್ತಾಪ್ರಸಾರ ಸೌಲಭ್ಯಗಳಿಲ್ಲದುದು ಮೊದಲನೆಯ ತೊಂದರೆ ಎರಡನೆಯದು ಭಾರತದ ಪಡೆಗಳು ತಮ್ಮ ಕೇಂದ್ರಗಳನ್ನು ಇನ್ನೂ ಸ್ಥಾಪಿಸದಿರುವುದು.

ಶ್ರೀನಗರದಿಂದ ಬಂದವರೊಬ್ಬರು ಕಾಶ್ಮೀರದಲ್ಲಿ ಭಾರತದ ಪಡೆಗಳು ಯಶಸ್ವಿಯಾಗಿ ಗಲಭೆಗಾರರೊಡನೆ ಹೋರಾಡುತ್ತಿವೆಯೆಂದೂ, ಆದರೂ ಶತ್ರುಕಾರ್ಯಾಚರಣೆಯು ಸುವ್ಯವಸ್ಥಿತವಾಗಿಯೂ, ಪ್ರಬಲವಾಗಿಯೂ ಇದೆಯೆಂದೂ ತಿಳಿಸಿದ್ದಾರೆ.

ಭಾರತದ ಪಡೆಗಳು ಪೂರ್ಣವಾಗಿ ಕಾರ್ಯಾಚರಣೆಯನ್ನಾರಂಭಿಸಿಲ್ಲ ಕಾಶ್ಮೀರ ಸಂಸ್ಥಾನದ ಸೈನ್ಯದ ಚಲನವಲನಗಳ ಸುದ್ದಿಯೇ ತಿಳಿಯದು. ಕಾಶ್ಮೀರಸೈನ್ಯದ ಚೀಫ್ ಆಫ್ ಸ್ಟಾಫ್‌ರವರಾದ ಬ್ರಿಗೇಡಿಯರ್ ರಾಜೇಂದ್ರಸಿಂಗ್‌ರವರು ತಪ್ಪಿಸಿಕೊಂಡಿದ್ದಾರೆ. ಶ್ರೀನಗರದಲ್ಲಿ ಪರಿಸ್ಥಿತಿ ಹದಗೆಟ್ಟಿಲ್ಲ. ಜನಜೀವನ ಎಂದಿನಂತೆಯೇ ನಡೆಯುತ್ತಿದೆ ರಾಷ್ಟ್ರೀಯ ಸಮ್ಮೇಳನದ ಸ್ವಯಂಸೇವಕರು ಆಡಳಿತ ನಿರ್ವಹಿಸುತ್ತಿದ್ದಾರೆ ಮತ್ತು ಭಾರತದ ಡೊಮಿನಿಯನ್ ಸೈನ್ಯಕ್ಕೆ ಸರ್ವವಿಧದಲ್ಲೂ ಸಹಕಾರ ನೀಡುತ್ತಿರುವರು. ಎಂದು ಅವರು ತಿಳಿಸಿದರು

ಪಾಕಿಸ್ಥಾನ್ ಪಡೆಗಳನ್ನು ಕಳುಹಿಸಿಲ್ಲ

ಕಾಶ್ಮೀರ ಸಂಸ್ಥಾನದಲ್ಲಿ ಪಾಕಿಸ್ಥಾನ್ ಸೈನ್ಯಗಳು ಕಾರ್ಯಾಚರಣೆಯಲ್ಲಿ ತೊಡಗಿವೆಯೆಂಬುದು ಸುಳ್ಳೆಂದು ರಾವಲ್ಪಿಂಡಿಯಲ್ಲಿರುವ ಪಾಕಿಸ್ಥಾನ್ ಯುದ್ಧಕಚೇರಿಯ ಪ್ರಕಟನೆಯೊಂದು ತಿಳಿಸುತ್ತದೆ

ಹೈದ್ರಾಬಾದಿಗೆ ವಿಮಾನದ ಮೂಲಕ ಶಸ್ತ್ರಾಸ್ತ್ರಗಳು

ನಿಜಾಮರ ಸೇನಾಪತಿಗಳು ಲಂಡನ್ನಿನಲ್ಲಿ ಈಗಾಗಲೇ ೧ ಕೋಟಿ ರೂಪಾಯಿಗೆ ಮೇಲ್ಪಟ್ಟು ಹೊಸ ಮಾದರಿಯ ಶಸ್ತ್ರಾಸ್ತ್ರಗಳನ್ನು ಕೊಂಡಿರುವರೆಂದೂ ಅವೆಲ್ಲವೂ ವಿಮಾನದ ಮೂಲಕ ಹೈದ್ರಾಬಾದಿಗೆ ಬಂದಿಳಿಯುವವೆಂದೂ ತಿಳಿದಿದೆ. ಸೇನಾಪತಿಗಳು ಶಸ್ತ್ರಾಸ್ತ್ರಗಳಿಗೆ ಕೇಳಿದಷ್ಟು ಹಣಕೊಟ್ಟು ಖರೀದಿ ಮಾಡುತ್ತಿದ್ದಾರೆ ಅವರು ಈ ವಾರದೊಳಗಾಗಿ ಹೈದ್ರಾಬಾದಿಗೆ ಒರಲಿದ್ದಾರೆ

ನಿಜಾಮರಿಗೆ ಹೊರಗಿನ ಮುಸ್ಲಿಮರ ನೆರವು

ಉತ್ತರ ಸರ್ಕಾರ ಜಿಲ್ಲೆಯ ೫೦ ಸಾವಿರ ಮುಸ್ಲಿಂ ತರುಣರು ನಿಜಾಮರ ಸಾರ್ವಭೌಮತ್ವ ಸ್ಥಾಪನೆಗಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಾಗಿ ಕುಳಿತಿದ್ದಾರೆಂದು ಅಲ್ಲಿಯ ಮುಸ್ಲಿಂ ಲೀಗು ಕಾರ್ಯದರ್ಶಿಗಳು ನೆನ್ನೆ ಹೈದ್ರಾಬಾದಿನ ಇತ್ತೆಹಾದುಲ್ ಸಂಘದ ಅಧ್ಯಕ್ಷರಾದ ಕಾಸಿಂ ರಜ್ವಿಯವರನ್ನು ಕಂಡು ಭರವಸೆಕೊಟ್ಟರು

ಛತ್ತಾರಿ ನವಾಬರ ರಾಜೀನಾಮೆ

ಹೈದ್ರಾಬಾದ್ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಛತ್ತಾರಿ ನವಾಬರು ರಾಜಿನಾಮೆ ಇತ್ತರು ನಿಜಾಮರು ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ

ಭಾರತ ಸರ್ಕಾರದೊಡನೆ ಸಂಧಾನ ನಡೆಸಲು ನಿಜಾಂ ಸರಕಾರವು ಮೊಯಿನ್ ನವಾಬ್ ಜಂಗ್, ಅಬ್ದುಲ್ ರಹೀಮ್ ಮತ್ತು ವೆಂಕಟರಾವು ರೆಡ್ಡಿಯವರನ್ನೊಳಗೊಂಡ ಒಂದು ಹೊಸ ಸಂಧಾನ ಸಮಿತಿಯನ್ನು ರಚಿಸಿದೆ.

ಭಾರತ ಸರ್ಕಾರದೊಂದಿಗೆ ಗೌರವಯುತವಾದ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂಬುದೇ ಹೈದ್ರಾಬಾದ್ ಸರ್ಕಾರದ ಉದ್ದೇಶ.

ಎಂದು ಹೊಸದಾಗಿ ನೇಮಿಸಿರುವ ಸಂಧಾನ ಸಮಿತಿಯ ನಾಯಕರು ವ್ಯಕ್ತಪಡಿಸಿದ್ದಾರೆ

ಶ್ರೀನಾಗಲಿಂಗೇಶ್ವರ ಪ್ರತಿಷ್ಠಾಮಹೋತ್ಸವ, ಕೊಡ್ಲಿಪೇಟೆ

ಉತ್ತರಕೊಡಗು ಶನಿವಾರಸಂತೆ ಹೋಬಳಿ ಕೊಡ್ಲಿಪೇಟೆ ಗ್ರಾಮದಲ್ಲಿರುವ ಮ|| ರಾ|| ಕೆ ಎಸ್. ಗುರುಲಿಂಗಪ್ಪ ಜನರಲ್ ಮರ್ಚೆಂಟ್ಸ್ ಇವರು ತಮ್ಮ ಮನಃಸಂಕಲ್ಪದ ಮೇರೆಗೆ ತಮ್ಮ ಗ್ರಾಮದಲ್ಲಿರುವ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಇದೇ ವಿಜಯದಶಮಿಯ ದಿವಸ ಶ್ರೀನಾಗಲಿಂಗೇಶ್ವರ ಪ್ರತಿಷ್ಠೆಯನ್ನು ವಿಧ್ಯುಕ್ತಪ್ರಕಾರ ನೆರವೇರಿಸಿದರು. ವೇ|| ಬಸವರಾಜಶಾಸ್ತ್ರಿಗಳು ಎಸಳೂರು ಪೇಟೆ ಇವರ ವೈದಿಕತ್ವದಲ್ಲಿ ಪ್ರತಿಷ್ಠಾಸಮಾರಂಭಕಾರ್ಯಗಳು, ತದಂಗಭೂತವಾದ ಹೋಮಾದಿಕಾರ್ಯಗಳೂ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನಾದಿಗಳೂ, ನೆರವೇರಿದವು ಈ ಮಂಗಲಕಾರ್ಯಕ್ಕಾಗಿ ಹೆಗ್ಗಡಳ್ಳಿ ಮಠದ ಶ್ರೀ ಶಿವಶಂಕರಶಿವಾಚಾರ್ಯಸ್ವಾಮಿಗಳೂ ಮತ್ತು ಮುದ್ದಿನಕಟ್ಟೆ ಮಠದ ಶ್ರೀಸಿದ್ಧಲಿಂಗ ಸ್ವಾಮಿಗಳೂ ದಯಮಾಡಿಸಿದ್ದರು. ಜಂಗಮರಿಗೂ, ಬಡಬಗ್ಗರಿಗೂ ಅನ್ನಸಂತರ್ಪಣೆಯು ನೆರವೇರಿತು ಹೆಗ್ಗಡಳ್ಳಿ ಮಠದ ಶ್ರೀಸ್ವಾಮಿಗಳವರ ಅನುಜ್ಞೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ೫ ರೂಪಾಯಿಗಳು ಸಮರ್ಪಿಸಲ್ಪಟ್ಟವು ಜಗದಾಚಾರ್ಯರು ಕಾರ್ಯಕರ್ತರುಗಳಿಗೆ ಮಂಗಳವನ್ನೀಯಲಿ.

ಪ್ರತ್ಯಕ್ಷದರ್ಶಿ

ಶ್ರೀಕಾಶೀ ಜಗದ್ಗುರುಗಳ ವರ್ಧಂತೀ ಮಹೋತ್ಸವ, ಸೊಲ್ಲಾಪುರ

ಸೊಲ್ಲಾಪುರ ನಗರದಲ್ಲಿರುವ ಶ್ರೀಷಡಕ್ಷರ ಶಿವಾಚಾರ್ಯಸ್ವಾಮಿಗಳವರ ನಂದಿಮಠದಲ್ಲಿ ವಿಜಯದಶಮಿಯ ದಿವಸ ಶ್ರೀಕಾಶೀಜಗದ್ಗುರುಗಳವರ ವರ್ಧಂತಿಮಹೋತ್ಸವವು ವಿಶೇಷ ವೈಭವದೊಡನೆ ನೆರವೇರಿಸಲ್ಪಟ್ಟಿತು. ಕಾಶೀ ಜಗದ್ಗುರುಗಳವರಿಗೆ ಪಟ್ಟಾಭಿಷೇಕವಾಗಿ ೩ ವರ್ಷಗಳು ತುಂಬಿ ೪ ನೇ ವರ್ಷವು ಪ್ರಾಪ್ತವಾದ ಸಂತೋಷಕ್ಕಾಗಿ ಆ ದಿವಸ ಸಮಾರಂಭವು ಸಂಭ್ರಮದೊಡನೆ ನೆರವೇರಿತು ಅಂದು ಪ್ರಾತಃಕಾಲ ನಂದಿಮಠದಲ್ಲಿ ಶ್ರೀಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ, ಗಣಾರಾಧನಾದಿಗಳು ನೆರವೇರಿಸಲ್ಪಟ್ಟವು ಸಾಯಂಕಾಲ ೫ ಘಂಟೆಗೆ ಸಭೆ ಸೇರಿತು ಕು|| ಕಸ್ತೂರಿಬಾಯಿ ನಂದಿಮಠ, ಕು|| ಮಹಾದೇವಿ ಹಿರೇಮಠ, ಕು|| ಶಾಂತಾಬಾಯಿ ಹಬ್ಬು, ಕು|| ಚತುರಾಬಾಯಿ ಗುಂಗೆ ಈ ಬಾಲಿಕೆಯರು ಸಭಾರಂಭದಲ್ಲಿ ಸಂವಾದಮಾಡಿದರು ಆ ಮೇಲೆ ಸೌ|| ದಾನಮ್ಮ ಹಿರೇಮಠ, ಸೌ|| ಬಸಮ್ಮ ನಂದಿಮಠ, ಸೌ|| ಘೋಂಡಾಬಾಯಿ ಇಟಾಕೆ ಮೊದಲಾದವರು ಶ್ರೀಜಗದ್ಗುರುಗಳವರ ಅಗಾಧ ಪಾಂಡಿತ್ಯದ ಬಗ್ಗೆಯೂ, ಕರ್ತೃತ್ವ ಶಕ್ತಿಯ ಬಗ್ಗೆಯೂ ಭಾಷಣಮಾಡಿದರು ಬಳಿಕ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಕಾರ್ಯದರ್ಶಿನಿ

ವೀರಶೈವ ಸದಾಚಾರ ಸ್ತ್ರೀಸಮಾಜ,

ಸೊಲ್ಲಾಪುರ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀಮದ್ರಂಭಾಪುರೀ ಜಗದ್ಗುರುಗಳ ದಸರಾಮಹೋತ್ಸವ, ಯಡಿಯೂರು

ಈ ಸಂವತ್ಸರದ ದಸರಾಮಹೋತ್ಸವವು ಆಶ್ವಯುಜ ಶು|| ೧ ಬುಧವಾರದಿಂದ ಪ್ರಾರಂಭವಾಯಿತು. ಪ್ರತಿದಿನ ಪ್ರಾತಃಕಾಲ ಗಜಾಶ್ವೋತ್ಸವದೊಡನೆ ಗಂಗಾನಯನವೂ, ಶ್ರೀಜಗದ್ಗುರುಗಳವರ ಪೂಜಾತಪೋನುಷ್ಠಾನಾದಿಗಳೂ ನೆರವೇರುತ್ತಿದ್ದವು ಸಾಯಂಕಾಲ ಶ್ರೀಜಗದ್ಗುರುಗಳು ದರ್ಬಾರಮಂಟಪಕ್ಕೆ ದಯಮಾಡಿಸಿ ಸಿಂಹಾಸನಾರೋಹಣವನ್ನು ಮಾಡುತ್ತಿದ್ದರು ವಿರ್ಣಯಿಸಿದ ವೇಳೆಯಲ್ಲಿ ಆಸ್ಥಾನ ವಿದ್ವಾನ್ ಬಿದರಿ ವೇ|| ಬಸವಲಿಂಗಶಾಸ್ತ್ರಿಗಳ ಮತ್ತು ಧರ್ಮಭೂಷಣ ವೇ|| ಹರೀಶ್ವರಶಾಸ್ತ್ರಿಗಳ ಭಾಷಣಗಳೂ, ಬೆಂಗಳೂರು ವೇ|| ಶಿವಕಥಾಪಂಡಿತ ರೇಣುಕಾರಾಧ್ಯ ಮತ್ತು ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳ ಕೀರ್ತನೆಗಳೂ ಹಾಗೂ ವೇ|| ಬಿದರಿ ವಿರೂಪಾಕ್ಷಶರ್ಮರ ಭಾಷಣವೂ ಪೂರೈಸಿದನಂತರ ಮಹಾಸಂಸ್ಥಾನಾಧಿಕಾರಿಗಳ ಮತ್ತು ಭಕ್ತಾದಿಗಳ, ಗಜಾಶ್ವಾರೋಹಿಗಳ ನಜರುಮುಜುರೆಗಳು ನಡೆದು ೯ ಘಂಟೆಗೆ ದರ್ಬಾರು ಪೂರ್ಣವಾಗುತ್ತಲಿದ್ದಿತು. ಪ್ರತಿದಿನವೂ ದೂರ ದೂರ ಗ್ರಾಮಗಳಿಂದ ಮಹಾಜನಗಳು ಆಗಮಿಸುತ್ತಲಿದ್ದರು. ಅನ್ನಸಂತರ್ಪಣೆಯು ಮಹಾಚಾರ್ಯ ಕೃಪಾವಿಶೇಷದಿಂದ ವೈಭವದಿಂದಲೇ ಜರುಗುತ್ತ ಬಂದಿತು. ಕಾರ್ಯನಿರ್ವಾಹಕಮಂಡಲಿಯ ಉತ್ಸಾಹವು ಅಧಿಕವಾಗುತ್ತಿತ್ತು ವಿಜಯದಶಮಿ ದಿವಸ ಪ್ರಾತಃಕಾಲಿಕ ಪೂಜಾದಿಗಳು ಜರುಗಿ ೩ ಗಂಟೆಗೆ ಸಕಲ ಬಿರುದಾವಳಿಗಳೊಡನೆ ಜಗದ್ಗುರುಗಳ ಸುವರ್ಣರಜತಾಂದೋಲಿಕಾಮಹೋತ್ಸವವು ಪ್ರಾರಂಭವಾಯಿತು. ಆ ಸಮಯಕ್ಕೆ ಸುಮಾರು ೮-೧೦ ಸಾವಿರದ ವರೆಗೆ ಜನರು ಸೇರಿದ್ದರು. ಗ್ರಾಮವು ಅಂದವಾಗಿ ಶೃಂಗರಿಸಲ್ಪಟ್ಟಿತ್ತು. ಗುರುಭಜನೆಯೂ, ಗುರುಭಕ್ತರ ಜಯಧ್ವನಿಯೂ ಕಲಿಯ ಕಾಲುಷ್ಯವನ್ನು ದೂರಮಾಡುತ್ತಲಿದ್ದಿತು ಪೋಲೀಸವ್ಯವಸ್ಥೆ ಚೆನ್ನಾಗಿದ್ದಿತು ಇಂತಹ ವೈಭವದಿಂದ ಜಗದ್ಗುರುಗಳು ಶಮೀಮಂಟಪಕ್ಕೆ ದಯಮಾಡಿಸಿ, ಶಮೀಪೂಜಾದಿಗಳನ್ನು ನೆರವೇರಿಸಿ, ಮಹೋತ್ಸವದಿಂದ ದಯಮಾಡಿಸಿ ಸಿಂಹಾಸನಾರೋಹಣ ಮಾಡಿದರು ಪಟ್ಟಚರಾಧಿಕಾರಿಗಳ ಮತ್ತು ಅನೇಕ ಮಹಾಜನಗಳ ವಿಜಯಕಾಣಿಕೆಯು ಸಮರ್ಪಿಸಲ್ಪಟ್ಟಮೇಲೆ ಶ್ರೀಜಗದ್ಗುರುಗಳವರು ವಿಜಯಪ್ರತಕಾರಣವನ್ನು ಅಪ್ಪಣೆ ಕೊಡಿಸಿ ಸನಾತನ ಧರ್ಮಿಗಳು ಸರ್ವರೂ ಧರ್ಮದಿಂದ ನಡೆದು ಇಹಪರಸುಖವನ್ನು ಪಡೆಯಬೇಕೆಂದೂ, ಧರ್ಮವೇ ಸರ್ವಸುಖಕ್ಕೆ ಕಾರಣವೆಂದೂ, ಪಂಡಿತ ಪಾಮರರಿಗೆಲ್ಲಾ ಆನಂದವಾಗುವಂತೆ ಅಪ್ಪಣೆ ಕೊಡಿಸಿ, ವಂಶಪಾರಂಪರ್ಯವಾಗಿ ದೇಶೋದ್ಧಾರ ಮಾಡುತ್ತ ಬಂದಿರುವ ಮೈಸೂರು ರಾಜಮನೆತನಕ್ಕೂ, ಆಳುತ್ತಿರುವ ಮಹಾಪ್ರಭುಗಳವರಿಗೂ ಶ್ರೀಯಸ್ಸನ್ನು ಕೋರಿದರು ಬಳಿಕ ಆಚಾರ್ಯರ ಜಯಘೋಷದೊಡನೆ ವಿಜಯದಶಮಿಯ ಕಾರ್ಯವು ಸಮಾಪ್ತಿಗೊಂಡಿತು

ಪುನಃ ಶನಿವಾರ ಜಗದ್ಗುರುಗಳು ದರ್ಬಾರಮಂಟಪಕ್ಕೆ ದಯಮಾಡಿಸಿ ಸಿಂಹಾಸನಾರೋಹಣಮಾಡಿದರು. ಆಗ್ಗೆ ದೊಡ್ಡಬಳ್ಳಾಪುರದ ವೇ|| ಕೀರ್ತನಕಂಠೀರವ ಶಿವದೇವಶಾಸ್ತ್ರಿಗಳು ಗುರುಮಹತ್ವವಿಷಯಕವಾಗಿ ಶಿವಕಥೆಯನ್ನು ಮನೋಹರವಾಗಿ ಹೇಳಿದರು. ಬಳಿಕ ಮಹಾಜನಗಳ ಕಾಣಿಕೆಯಾಗಿ ಸಮಸ್ತರಿಗೂ ಫಲಾಶೀರ್ವಾದಗಳೂ, ಶಿವಕಥಾಪಂಡಿತರಿಗೂ, ಗಾಯಕರಿಗೂ ಸಂಭಾವನೆಯು ಜರಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಮಧ್ಯೆ ಮಧ್ಯೆ ಮ|| ಡೆಪ್ಯುಟಿ ಕಮಿಷನ್ ಸಾಹೇಬರು, ಸಬ್ ಡಿವಿಜನ್ ಸಾಹೇಬರು, ತಾಲ್ಲೂಕು ಅಮಲ್ದಾರಸಾಹೇಬರೂ, ಪೋಲೀಸ್ ಅಸಿಸ್ಟೆಂಟ್ ಸಾಹೇಬರು ಆಗಮಿಸಿ ಮಹಾಗುರುಗಳ ದರ್ಶನವನ್ನು ಮಾಡಿಕೊಂಡು ನಡೆಯುವ ಕಾರ್ಯಗೌರವವನ್ನು ನೋಡಿ ತಕ್ಕ ಸಹಾಯವನ್ನು ಮಾಡಿ ಪ್ರಜೆಗಳ ಕೋರಿಕೆಯನ್ನು ಸಫಲಮಾಡಿದರು ಅಲ್ಲದೆ ಕೊನೆಯದಿವಸ ಮ|| ಸಬ್ ಡಿವಿಜನ್ ಸಾಹೇಬರು ಆಗಮಿಸಿ ಉತ್ಸವವಾಗುವವರೆ

[೬ನೆಯ ಪುಟವನ್ನು ನೋಡಿ]

ಸ್ವೀಕಾರ

ಉತ್ತರ ಕೊಡಗು ಶನಿವಾರಸಂತೆ ಹೋಬಳಿ ಕೊಡ್ಲಿಪೇಟೆಯಲ್ಲಿರುವ ಮ|| ರಾ|| ಕೆ. ಎಸ್. ಗುರುಲಿಂಗಪ್ಪನವರು ತಮ್ಮ ಗ್ರಾಮದ ಶ್ರೀಬಸವೇಶ್ವರದೇವಸ್ಥಾನದಲ್ಲಿ ಶ್ರೀ ನಾಗಲಿಂಗೇಶ್ವರ ಪ್ರತಿಷ್ಠೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ ಗಳು ವೇ|| ಎಸಳೂರು ಪೇಟೆ ಬಸವರಾಜ ಶಾಸ್ತ್ರಿಗಳ ದ್ವಾರಾ ತಲಪಿರುತ್ತವೆ

ನರಗುಂದ ಪೇಟಾ ಚಿಕ್ಕನರಗುಂದ ಗ್ರಾಮದಲ್ಲಿರುವ ಶ್ರೀಮಾನ್ ಕುಲಕರ್ಣಿ ಅಪ್ಪಯ್ಯನವರು ತಮ್ಮ ಮನೆಯಲ್ಲಿ ಶ್ರೀ|| ಷ|| ಬ್ರ|| ಕೊಣ್ಣೂರು ಹಿರೇಮಠದ ಪಟ್ಟದ ಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಗಿದ್ದು ಜನಗಳ ಮನಸ್ಸಿಗೆ ಆನಂದವನ್ನುಂಟುಮಾಡಿದರು ಶ್ರಾವಣಮಾಸದ ಆದಿಯಿಂದಲೂ ದಸರಾಮಹೋತ್ಸವದ ವರೆಗೂ ಶ್ರೀಮಾನ್ ರೆವಿನ್ಯೂ ಇನ್‌ಸ್ಪೆಕ್ಟರ್ ಮುದ್ದ ನಂಜಪ್ಪನವರೂ, ಫುಡ್ ಇನ್‌ಸ್ಪೆಕ್ಟರ್ ಶ್ರೀಮಾನ್ ಚನ್ನಬಸವಾರಾಧ್ಯರೂ ಸರ್ವವಿಧದಿಂದಲೂ ಸಹಾಯ ಮಾಡಿ ಸ್ತುತ್ಯರಾದರು ಈ ಮಹಾಕಾರ್ಯದಲ್ಲಿ ಸೇವೆ ಸಲ್ಲಿಸಿದ ಮಹಾಶಯರಿಗೆಲ್ಲ ಜಗದ್ಗುರು ಭಗವತ್ಪಾದರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಅನನ್ಯಭಕ್ತಿಯಿಂದ ಪ್ರಾರ್ಥಿಸುವೆನು

ಓರ್ವ ಗುರುಭಕ್ತ

ಶ್ರೀರುದ್ರಾಭಿಷೇಕಸಮಾರಂಭ, ಚಿಕ್ಕನರಗುಂದ

ನರಗುಂದ ಪೇಟಾ, ಚಿಕ್ಕನರಗುಂದ ಗ್ರಾಮದಲ್ಲಿರುವ ಶ್ರೀಮಾನ್ ಅಪ್ಪಯ್ಯನವರು ಕುಲಕರ್ಣಿ ಇವರು ತಮ್ಮ ಗೃಹದಲ್ಲಿ ಇದೇ ಭಾದ್ರಪದ ಶು|| ೪ ರಿಂದ ಶು|| ೬ ರ ವರೆಗೆ ಶ್ರೀ ಷ|| ಬ್ರ|| ಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು ಇವರ ಚರಣಕಮಲಗಳಿಗೆ ರುದ್ರಾಭಿಷೇಕ, ಪೂಜಾದಿಗಳನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು ಕೊನೆಯದಿವಸ ಗಣಾರಾಧನೆಯು ನೆರವೇರಿತು ವೇ|| ಹೂಲಿ ಸಾಂಬಯ್ಯನ ಮಠದ ಸಾಂಬಯ್ಯನವರು ಪೌರೋಹಿತ್ಯವನ್ನು ವಹಿಸಿದ್ದರು ಜಗದೀಶ್ವರನು ಕುಲಕರ್ಣಿಯವರಿಗೂ, ಅವರ ಮನೆಯ ಮಂಡಳಿಗೂ ಆಯುರಾರೋಗ್ಯ ಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ

ಸಿ ಬಿ ಸಪ್ಪಡ್ಲ, ಚಿಕ್ಕನರಗುಂದ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗ ಸ್ವಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ ..	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೮
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ ...	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ...	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ ...	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ..	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ ...	೮ ಆಣೆ
ಸಿದ್ಧಾಂತಸಾರಾವಲಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಬ್ರಹ್ಮಸೂತ್ರ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೯ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As.
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
संक्षिप्तशिवपूजा (संस्कृत) ...	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಕಲ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ನವೆಂಬರ್ ೧೯೪೭ [ಸಂಚಿಕೆ ೨೯

ಸಿದ್ಧಾಂತ ಶಿಖಾಮಣಿ ಪ್ರವಚನ ಮಿಾನ್ನಹಳ್ಳಿ

ಬಳ್ಳಾರಿ ಡಿ|| ರಾಯದುರ್ಗ ತಾ|| ಮಿಾನ್ನಹಳ್ಳಿ ಗ್ರಾಮದ ಸಮಸ್ತ ವೀರಶೈವ ಭಕ್ತಮಂಡಲಿಯವರ ಮತ್ತು, ಕರ್ನಾಟಕ ಸೇವಾ ಸಂಘದ ತರುಣರ ಪ್ರಾರ್ಥನೆಯ ಮೇರೆಗೆ ಆಗಮಿಸಿದ ರಾಯಚೂರು ಜಿಲ್ಲಾ, ರೌಡಕುಂದಿ ಹಿರೇಮಠದ ಚರಪಟ್ಟಾಧ್ಯಕ್ಷ ಷಂ|| ಶ್ರೀ|| ಷ|| ಬ್ರ|| ಶಿವಯೋಗಿ ಶಿವಾಚಾರ್ಯ ಸ್ವಾಮಿಗಳವರು ಇದೇ ಅಶ್ವಯುಜ ಶು|| ೧ ದಿಂದ ವಿಜಯದಶಮಿಯ ವರೆಗೆ ತಮ್ಮ ಘನವಾದ ಪ್ರವಚನವನ್ನು ನಡೆಯಿಸಿದರು ತಮ್ಮ ವಿದ್ವದ್ವಾಣಿಯಿಂದ ಸಮಸ್ತರಿಗೂ ತಿಳಿಯುವಂತೆ ವೀರಶೈವ ಮತತತ್ವ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಇವೇ ಮೊದಲಾದ ವಿಷಯಗಳನ್ನು ಬೋಧಿಸುತ್ತಿದ್ದುದರಿಂದ ಅಜುಬಾಜು ಗ್ರಾಮಗಳ ಭಕ್ತರು ತಂಡೋಪತಂಡವಾಗಿ ಬರುತ್ತಿದ್ದರು ಪ್ರವಚನವು ೧೧ ದಿವಸ ಜರುಗಿದ ನಂತರ ತಾ|| ೨೫-೧೦-೪೭ನೇ ದಿವಸ ಸಾಯಂಕಾಲ ಸಭೆ ಸೇರಿತು ಶ್ರೀ ಸ್ವಾಮಿಗಳವರು ೩ ಘಂಟೆಯ ವರೆಗೆ ವೀರಶೈವ ಮತಸ್ಥಾಪಕರು, ಧರ್ಮತತ್ವ, ಅಷ್ಟಾವರಣ, ಕರ್ನಾಟಕ ವಿಷಯ ವಿಮರ್ಶೆ, ಇತ್ಯಾದಿಗಳ ಬಗ್ಗೆ ಹೃದಯಂಗಮವಾಗುವಂತೆ ಬೋಧಿಸಿದರು. ಅನಂತರ ಶ್ರೀಜಗದ್ಗುರು ಪಂಚಾಚಾರ್ಯರ ಭಾವಚಿತ್ರಕ್ಕೆ ಮಹಾಮಂಗಳಾರತಿಯಾಗಿ ಪ್ರಸಾದ ವಿನಿಯೋಗವಾದನಂತರ ಸಭಾವಿಸರ್ಜನೆಯಾಯಿತು. ಮರುದಿನ ಕರ್ನಾಟಕ ಸೇವಾ ಸಂಘದ ತರುಣ ಕಾರ್ಯಕರ್ತರು ಸಭೆಗೂಡಿ ಕರ್ನಾಟಕ ಭಾಷೆ, ಸಾಹಿತ್ಯ, ಕರ್ನಾಟಕದಲ್ಲಿ ವೀರಶೈವ ಶ್ರಿಪೀಠಾಚಾರ್ಯರು ಈ ವಿಷಯಗಳ ಬಗ್ಗೆ ಚರ್ಚಿಸಿ, ವಿಷಯಗಳನ್ನು ತಿಳಿದುಕೊಂಡು ಆನಂದಭರಿತರಾದರು ಇದೇ ರೀತಿ ಪ್ರತಿ ವರ್ಷವೂ ಜರುಗಿಸುವಂತೆ ಶ್ರೀಜಗದ್ಗುರು ಪಂಚಾಚಾರ್ಯರು ಸರ್ವರಿಗೂ ಸದ್ಬುದ್ಧಿಯನ್ನೀಯಲೆಂದು ಭಜಿಸುತ್ತೇನೆ.

ಕರ್ನಾಟಕ ಸೇವಾ ಸಂಘದ ಗೌರವ ಕಾರ್ಯದರ್ಶಿ
ಎಮ್. ಚಂದ್ರಶೇಖರಶಾಸ್ತ್ರೀ ಮಿಾನ್ನಹಳ್ಳಿ

ಪುರಾಣ ಸಮಾಪ್ತಿ ಸಮಾರಂಭ

ಕುರಂದವಾಡ ಸಂಸ್ಥಾನಕ್ಕೆ ಸೇರಿರುವ "ಮೈಂದರಗಿ" ಗ್ರಾಮದ ಶಿವಛಲ ಮಠದಲ್ಲಿ ಶಿವಛಲೇಶ್ವರ ಪುರಾಣವು ಶ್ರಾವಣ ಮಾಸದಲ್ಲಿ ಪ್ರಾರಂಭವಾಗಿ ಅಶ್ವಯುಜ ಶುದ್ಧ ಪಂಚಮಿಾ ದಿವಸ ಸಮಾಪ್ತಿಗೊಂಡಿತು. ಸದರಿ ಪುರಾಣವನ್ನು ಆ ಗ್ರಾಮದ ಹಿರೇಮಠಾಧ್ಯಕ್ಷರಾದ ಶ್ರೀ|| ವೀರಸಂಗ ಶಿವಾಚಾರ್ಯರು ಬಹು ಮನೋಹರವಾಗಿ ಹೇಳುತ್ತಿದ್ದರು. ಅಶ್ವಯುಜ ಶುದ್ಧ ೬ ಸೋಮವಾರ ಪುರಾಣದ ಮತ್ತು ಶ್ರೀ|| ವೀರಸಂಗ ಶಿವಾಚಾರ್ಯರ ಪಲ್ಲಕ್ಕಿ ಮಹೋತ್ಸವವು ವೈಭವದಿಂದ ನೆರವೇರಿತು. ಈ ಮಹಾ ಸಮಾರಂಭಕ್ಕೆ ಜೇವರಗಿ, ಅಫಜಲ್‌ಪುರ, ಸೊಲ್ಲಾಪುರ, ಮೊದಲಾದ ಗ್ರಾಮಗಳಿಂದ ಪಟ್ಟಚರಮೂರ್ತಿ ಸ್ವಾಮಿಗಳು ಆಗಮಿಸಿದ್ದರಲ್ಲದೆ ಲಿಂಗದಹಳ್ಳಿ, ಭಂರಗಿ, ನಿಂಬಾಳ, ಧುತ್ತರಗಿ, ಮೊದಲಾದ ಗ್ರಾಮಗಳ ಭಜನಾ ಸಂಘದವರು ಒಂದಿದ್ದರು ಎತ್ತ ನೋಡಿದಡತ್ತ ಪಂಚಾಚಾರ್ಯರ ಜಯಘೋಷವೇ ಕೇಳಬರುತ್ತಿತ್ತು ಪೋಲೀಸ್ ಅಧಿಕಾರಿಗಳು ಸರಿಯಾದ ವ್ಯವಸ್ಥೆ ಇಟ್ಟಿದ್ದರು ಉತ್ಸವವು ಮುಗಿದ ಮೇಲೆ ಸಭೆಗೂಡಿತು ಆಗ್ಯೆ ಸೊಲ್ಲಾಪುರದ ಶ್ರೀ|| ನಂದೀಮಠದ ಸ್ವಾಮಿಗಳವರು ಸೌ|| ಒಸಮ್ಮಾ, ನಂದೀಮಠ ಶ್ರೀ|| ಮಳೇಂದ್ರ ಸ್ವಾಮಿಗಳು ಮತ್ತು ಲಿಂಗರಾಜ್ ಇವರು ಸರಸವಾಗಿ ಭಾಷಣ ಮಾಡಿದರು ಕೊನೆಗೆ ಶ್ರೀ|| ವೀರಸಂಗ ಶಿವಾಚಾರ್ಯರು ಭಾಷಣ ಮಾಡಿದ ಮೇಲೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ರಾಮಚಂದ್ರ, ನಿಂಬಾಳ

ಅನುಷ್ಠಾನ ಸಮಾಪ್ತಿ ಸಮಾರಂಭ
ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿರುವ ಶ್ರೀಜಗದ್ಗುರು ಉಜ್ಜಯಿನೀ ಮಠದಲ್ಲಿ ಮೊರಬದ ಶ್ರೀ|| ಗಂಗಾಧರ ಶಿವಾಚಾರ್ಯರು ಭಾದ್ರಪದ ಶುದ್ಧ ೩ ರಿಂದ ಅಶ್ವಯುಜ ಶುದ್ಧ ೧೩ ವರೆಗೆ ಕೇವಲ ಫಲಾಹಾರಿಗಳಾಗಿ ಅನುಷ್ಠಾನವನ್ನು ನೆರವೇರಿಸಿದರು ತಾ|| ೨೮-೧೦-೪೭ ನೆಯ ದಿವಸ ಭಕ್ತರ ಪ್ರಾರ್ಥನೆ ಮೇರೆಗೆ ಉಜ್ಜಯಿನಿ ಜಗದ್ಗುರುಗಳು ಆಗಮಿಸಿ ಸರ್ವರಿಗೂ ತೀರ್ಥಪ್ರಸಾದಗಳನ್ನು ದಯಪಾಲಿಸಿದರು ಆ ದಿನ ಅನ್ನಸಂತರ್ಪಣೆಯು ತೃಪ್ತಿಕರವಾಗಿ ನಡೆಯಿತು ಸಾಯಂಕಾಲ ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆಗೂಡಿತು ಅನೇಕ ಜನರು ಧಾರ್ಮಿಕ ವಿಷಯಗಳ ಬಗ್ಗೆ ಭಾಷಣ ಮಾಡಿದರು ಈ ಕಾರ್ಯದಲ್ಲಿ ನಿರತರಾದವರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರು ಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಪಂಚಾಕ್ಷರಯ್ಯ, ಜಕ್ಕಲಿ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ದುಃಖವಾರ್ತೆ

ತುಮಕೂರು ತಾಲ್ಲೂಕು ಹಾಲನೂರು ಗುರುಮಠದಲ್ಲಿವೀರಪ್ಪಶಾಸ್ತ್ರಿಗಳವರ ಪ್ರಥಮ ಪುತ್ರರೂ, ಕೀರ್ತನ ಕೇಸರಿ ಗುಬ್ಬಿ ಶಿವರುದ್ರ ಶಾಸ್ತ್ರಿಗಳ ಅಣ್ಣಂದಿರೂ ಆದ, ವೇ|| ರುದ್ರದೇವರವರು (ತಾ-16-10-1947) ಗುರುವಾರ ತಮ್ಮ ಅರವತ್ತೈದನೇ ವರ್ಷ ವಯಸ್ಸಿನಲ್ಲಿ ಶಿವೈಕ್ಯರಾದರು ತತ್ಸಂಬಂಧವಾಗಿ ತಾ|| 26 ನೇ ಭಾನುವಾರದಿಂದ ಮೂರು ದಿವಸಗಳವರೆಗೂ ಶ್ರೀ ರೇಣುಕ ಮೂರ್ತಿಗೆ ರುದ್ರಾಭಿಷೇಕವೂ, ಗಣಸಂತರ್ಪಣೆಯೂ ವಿಶೇಷ ವೈಭವದಿಂದ ನಡೆದವು ಕೈ|| ರುದ್ರದೇವರು ದಯಾಪರರೂ ಉದಾರ ಹೃದಯರೂ ಆಗಿದ್ದರು ಇವರು ಗುರುಪೀಠಗಳನ್ನು ಪ್ರಾಣವಂತೆ ತಿಳಿದಿದ್ದರು ಇವರು ತಮ್ಮ ವಿನಯಸೌಶೀಲ್ಯಾದಿ ಗುಣಗಳಿಂದ ದೊಡ್ಡ ದೊಡ್ಡ ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿದ್ದರು ಎಷ್ಟೋ ಮಂದಿ ಸ್ವಮತ ಪರಮತದ ವಿದ್ಯಾರ್ಥಿಗಳು ಇವರ ಸಹಾಯದಿಂದ ಅಭಿವೃದ್ಧಿಯನ್ನೈದಿರುವರು ಕೈ|| ಶ್ರೀ ರಂಭಾಪುರೀ ಜಗದ್ಗುರುಗಳವರಿಂದ ಮಂತ್ರೋಪದೇಶವನ್ನು ಪಡೆದು ಧನ್ಯರಾಗಿದ್ದರು ಇಂತಹ ವ್ಯಕ್ತಿಯು ಕಣ್ಮರೆಯಾದುದು ನಮ್ಮಗಳ ದೌರ್ಭಾಗ್ಯವೇ ಸರಿ ! ಶ್ರೀ ಪರಮೇಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನು ಅನುಗ್ರಹಿಸಲೆಂದು ಹಾರೈಸುವ

ಓರ್ವ ದುಃಖಭಾಗಿ.

ಒಂದು ಲಕ್ಷ ಹಿಂದೂಗಳು ಹೈದರಾಬಾದನ್ನು ಬಿಟ್ಟರು

ಅಕ್ಟೋಬರ್ ೨೭ನೆಯ ತಾರೀಖಿನವರೆಗೆ ಸುಮಾರು ೧ ಲಕ್ಷ ಹಿಂದುಗಳು ಹೈದ್ರಾಬಾದ್ ಸಂಸ್ಥಾನವನ್ನು ಬಿಟ್ಟು ಬೇರೆ ಕಡೆಗೆ ತೆರಳಿದ್ದಾರೆ ದೆಹಲಿಗೆ ಹೊರಟಿದ್ದ ಹೈದ್ರಾಬಾದ್ ನಿಯೋಗವನ್ನು ಮುಸ್ಲಿಂ ಪ್ರದರ್ಶನಕಾರರು ತಡೆದಂದಿನಿಂದ ಹೈದ್ರಾಬಾದ್ ಹಿಂದೂಗಳು ಭಯಭ್ರಾಂತರಾಗಿದ್ದಾರೆ ೫ ನೆಯ ತಾರೀಖಿನ ದಿನ ಬೆಳಗ್ಗೆ, ಹೈದ್ರಾಬಾದಿನಿಂದ ಬೆಜವಾಡ, ವಾಡಿ, ಮನ್ಮಾಡ್ ಮತ್ತು ಕರ್ನೂಲ್‌ಗಳ ಕಡೆ ಹೊರಟ ರೈಲುಗಳು ಹಿಂದೂಪ್ರಯಾಣಿಕರಿಂದ ತುಂಬಿದ್ದುವು ರೈಲುಗಳಲ್ಲಿ ಜಾಗ ಸಿಗದೆ ಅಸಂಖ್ಯಾತ ಹಿಂದೂ ಪ್ರಯಾಣಿಕರು ರೈಲ್ವೇ ನಿಲ್ದಾಣದಲ್ಲಿ ಕಿಕ್ಕಿರಿದು ನೆರೆದಿದ್ದರು.

ಸ್ವೀಕಾರ

ರಾಯದುರ್ಗ ತಾ|| ಮಿಾನ್ನಹಳ್ಳಿ ಗ್ರಾಮದ ವೀರಶೈವ ಮಂಡಲಿಯವರು ಸಿದ್ಧಾಂತ ಶಿಖಾಮಣಿ ಪ್ರವಚನವನ್ನು ತಮ್ಮ ಗ್ರಾಮದಲ್ಲಿ ನಡೆಯಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಸದರಿ ಗ್ರಾಮದ ಕರ್ನಾಟಕ ಸಂಘದ ಸೆಕ್ರೆಟರಿಗಳ ದ್ವಾರಾ ತಲ್ಪಿರುತ್ತವೆ.

ತುಮಕೂರು ತಾ|| ಹಾಲನೂರು ಗ್ರಾಮದಲ್ಲಿರುವ ಗುರು ಮಠದಲ್ಲಿ ವೇ|| ರುದ್ರದೇವರು ಶಿವಾಧೀನರಾದ ಪ್ರಯುಕ್ತ ತತ್ಸಂಬಂಧವಾಗಿ ನೆರವೇರಿದ ಗಣಾರಾಧನಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ಅವರ ಸಹೋದರರಾದ ವೇ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲುಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

೧೯೪೭ನೇ ನವೆಂಬರ್ ತಾ|| ೧೦ನೇ ಸೋಮವಾರ

ಗೋರಕ್ಷಣ

ಭಾರತೀಯರಿಗೆ ಗೋವು ಮಹಾಪೂಜ್ಯವಸ್ತುವಾಗಿರುವುದು ಕೋಟ್ಯನುಕೋಟಿ ಪ್ರಾಣಿಗಳಲ್ಲಿ ಗೋವಿಗೆ ಸಮಾನವಾದ ಪ್ರಾಣಿಯು ಈ ಪ್ರಪಂಚದಲ್ಲಿ ಮತ್ತಾವುದೂ ಇರುವುದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಆದುದರಿಂದ ಸನಾತನ ಭಾರತೀಯರು ಈ ಪ್ರಾಣಿಯನ್ನು ಮಾತೃವಿಗೆ ಸಮಾನವಾಗಿ ಭಾವಿಸಿ ಗೋಮಾತೆಯೆಂದು ಕರೆಯುತ್ತ ಇದನ್ನು ಪೂಜಿಸುತ್ತಿರುವರು ಇದರಿಂದ ಉತ್ಪನ್ನವಾಗುವ ಕ್ಷೀರ ದಧಿ ಘೃತ ಮೊದಲಾದುವುಗಳು ಪರಮಾತ್ಮನಿಗೆ ಪ್ರಿಯವಾಗಿ ಅಭಿಷೇಕಾದಿಗಳಿಗೆ ಯೋಗ್ಯವೆನಿಸಿರುವವು ಗೋಮೂತ್ರ ಗೋಮಯಾದಿಗಳಿಲ್ಲದೆ ಯಾವ ವಸ್ತುವೂ ಶುದ್ಧವಾಗುವಂತಿಲ್ಲ ಮೋಕ್ಷಸಾಧನೀಭೂತವಾದ ಭಸ್ಮವು ಗೋಮಯದಿಂದಲೇ ಸಿದ್ಧವಾಗುವದು ಅಂದಮೇಲೆ ಗೋಮಾತೆಯ ಮಹತ್ತ್ವವು ಎಷ್ಟಿರಬಹುದೆಂಬುದನ್ನು ಕುಶಲರೇ ಯೋಚಿಸಬೇಕಾಗಿದೆ

ಒಕ್ಕಲತನವೇ ಮುಖ್ಯ ಕ್ರಿಯೆಯಾಗುಳ್ಳ ಭಾರತಭೂಮಿಯು ಗೋಮಾತೆಯಿಂದಲೇ ಉದ್ಧಾರವಾಗಬೇಕಾಗಿದೆ ಹಿಂದೂ ಜನಾಂಗದ ಶರೀರಪೋಷಣ, ಮೇಧಾಭಿವೃದ್ಧಿ ಮೊದಲಾದವುಗಳಿಗೆಲ್ಲ ಗೋಸಂತತಿಯೇ ಮೂಲಕಾರಣವಾಗಿದೆ ಆದುದರಿಂದ ನಮ್ಮ ಪೂರ್ವಜರು ಪೂರ್ವಕಾಲದಲ್ಲಿ ಗೋವುಗಳನ್ನು ವಿಶೇಷವಾಗಿ ಸಾಕುತ್ತ ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನೋಡಿಕೊಂಡು ಹೋಗುತ್ತಿದ್ದರು ಆ ಕಾಲದಲ್ಲಿ ಗೋಮಾತೆಯ ಪ್ರಭಾವದಿಂದ ಭಾರತೀಯರು ಧೀಮಂತರೂ, ಶ್ರೀಮಂತರೂ, ಶಕ್ತಿಮಂತರೂ ಆಗಿ ಮೆರೆಯುತ್ತಿದ್ದರು ಈಗಿನ ಭಾರತೀಯರು ಪಾಶ್ಚಾತ್ಯರ ಸಂಸರ್ಗದಿಂದ ಗೋಮಾತೆಯಲ್ಲಿ ಪೂಜ್ಯಬುದ್ಧಿಯನ್ನಿಡದೆ ವರ್ತಿಸಹತ್ತಿದುದರಿಂದ ಐಶ್ವರ್ಯಹೀನರಾಗಿ ದಾರಿದ್ರ್ಯದಿಂದ ಕೊರಗಹತ್ತಿರುವರು

ಯಸ್ಯೈಕಾಪಿ ಗೃಹೇ ನಾಸ್ತಿ ಧೇನುರ್ವತ್ಸಾನುಚಾರಿಣೀ ।
ಮಂಗಲಾನಿ ಕುತಸ್ತಸ್ಯ ಕುತಸ್ತಸ್ಯ ತಮಃಕ್ಷಯಃ ॥

ಯಾವನ ಮನೆಯಲ್ಲಿ ಕರುವಿನಿಂದ ಯುಕ್ತವಾದ ಒಂದಾದರೂ ಗೋವು ಇರುವುದಿಲ್ಲವೋ, ಅವನಿಗೆ ಮಂಗಲವೆಲ್ಲಿಯದು ? ಮತ್ತು ಅಜ್ಞಾನನಾಶವೆಲ್ಲಿಯದು ? ಎಂದು ಅತ್ರಿಮಹರ್ಷಿಯು ಸಾರಿದ್ದಾನೆ ಇದರಿಂದ ಮಂಗಲಾಪೇಕ್ಷಿಯೂ ಜ್ಞಾನಾಪೇಕ್ಷಿಯೂ ಆದ ಮನುಷ್ಯನು ತನ್ನ ಮನೆಯಲ್ಲಿ ಅವಶ್ಯವಾಗಿ ಗೋವುಗಳನ್ನು ರಕ್ಷಿಸಬೇಕೆಂದು ಸ್ಪಷ್ಟವಾಗುವದು

ಗಾವೋ ಭಗೋ ಗಾವ ಇಂದ್ರೋ ಮೇ ಅಚ್ಛಾನ್ ಗಾವಃ ಸೋಮಸ್ಯ ಪ್ರಥಮಸ್ಯ ಭಕ್ಷಃ । ಇಮಾ ಯಾ ಗಾವಃ ಸಜನಾಸ ಇಂದ್ರ ಇಚ್ಛಾಮೀದ್ಧೃದಾ ಮನಸಾ ಚಿದಿಂದ್ರಂ ॥

ಗೋವುಗಳೇ ನನ್ನ ಐಶ್ವರ್ಯವಾಗಲಿ, ಇಂದ್ರನು ನನಗೆ ಗೋವುಗಳನ್ನೇ ಅನುಗ್ರಹಿಸಲಿ, ಆ ಗೋವುಗಳು ಸೋಮನಿಗೆ ಕ್ಷೀರಾದಿಗಳನ್ನು ಕೊಡತಕ್ಕವುಗಳಾದುದರಿಂದ ಭಕ್ಷಣಸಾಧನಗಳಾಗಿರಲಿ ಎಲೈ ಜನರೇ, ಈ ವಿಧವಾದ ಗೋವುಗಳು ಹಾಲು ತುಪ್ಪ ಮೊದಲಾದುವುಗಳಿಂದ ರಕ್ಷಿಸುವ ಕಾರಣ ಅವು ಇಂದ್ರಸ್ವರೂಪವಾಗಿವೆ ಗೋವುಗಳು ಹಾಲು ತುಪ್ಪ ಮೊದಲಾದುವುಗಳನ್ನು ಕೊಡದಿದ್ದರೆ ಯಜ್ಞಾದಿಗಳು ನೆರವೇರಲಾರವು ಯಜ್ಞಾದಿಗಳು ನೆರವೇರದಿದ್ದರೆ ಇಂದ್ರನು ಕೃಶನಾಗಿ ಇಂದ್ರತ್ವಕ್ಕೆ ಅನರ್ಹನಾಗುವನು ಆದುದರಿಂದ ಇಂದ್ರನ ಇಂದ್ರತ್ವವು ಯಾವುಗಳಿಂದ ಪ್ರಾಪ್ತವಾಗುವುದೋ, ಅಂತಹ ಗೋವುಗಳು ಇಂದ್ರನೆಂದು ಹೇಳಿಸಿಕೊಳ್ಳಲ್ಪಡುವವು ಇಂತಹ ಗೋಸ್ವರೂಪ ಇಂದ್ರನನ್ನು ಮನಃಪೂರ್ವಕವಾಗಿ ಬಯಸುವೆನು ಎಂದು ಶ್ರುತಿದೇವಿಯು ಗೋಮಾತೆಯ ಮಹತ್ತ್ವವನ್ನು ಮುಕ್ತಕಂಠದಿಂದ ಕೊಂಡಾಡಿರುವಳು ಬೃಹತ್ಪಾರಾಶರಸ್ಮೃತಿಯಲ್ಲಿ—

ಶೃಂಗಮೂಲೇ ಸ್ಥಿತೋ ಬ್ರಹ್ಮಾ ಶೃಂಗಮಧ್ಯೇ ತು ಕೇಶವಃ ।
ಶೃಂಗಾಗ್ರೇ ಶಂಕರಂ ವಿದ್ಯಾತ್ತ್ರಯೋ ದೇವಾಃ ಪ್ರತಿಷ್ಠಿತಾಃ ॥
ಶೃಂಗಾಗ್ರೇ ಸರ್ವತೀರ್ಥಾನಿ ಸರ್ವದೇವಮಯೀ ಹಿ ಗೌಃ ।

ಗೋವಿನ ಕೋಡುಗಳ ಬುಡದಲ್ಲಿ ಬ್ರಹ್ಮನೂ ಮಧ್ಯಭಾಗದಲ್ಲಿ ವಿಷ್ಣುವೂ, ಅಗ್ರಭಾಗದಲ್ಲಿ ಶಂಕರನೂ ಮತ್ತು ಸರ್ವ ತೀರ್ಥಗಳೂ ವಾಸವಾಗಿರುವದರಿಂದ ಗೋವು ಸಮಸ್ತ ದೇವತಾಸ್ವರೂಪವಾಗಿರುವದೆಂದು ವರ್ಣಿಸಲ್ಪಟ್ಟಿದೆ ಅಂದಮೇಲೆ ಗೋಮಾತೆಯ ರಕ್ಷಣಾದಿಗಳಿಂದ ಎಂತಹ ಫಲವು ಪ್ರಾಪ್ತವಾಗಬಹುದೆಂಬುದನ್ನು ಬೇರೆ ವರ್ಣಿಸಬೇಕಾಗಿಲ್ಲ

ಹರಂತಿ ಸ್ಪರ್ಶನಾತ್ ಪಾಪಂ ಪಯಸಾ ಪೋಷಯಂತಿ ಯಾಃ ।
ಪ್ರಾಪಯಂತಿ ದಿವಂ ದತ್ತಾಃ ಪೂಜ್ಯಾ ಗಾವಃ ಕಥಂ ನ ತಾಃ ।

ಯಾವ ಪ್ರಾಣಿಗಳು ತಮ್ಮ ದೇಹಸ್ಪರ್ಶಮಾತ್ರದಿಂದ ಸಮಸ್ತ ಮಹಾ ಪಾಪಗಳನ್ನು ನಾಶಮಾಡುತ್ತವೆಯೋ, ತಮ್ಮ ಹಾಲಿನಿ ಜನಗಳನ್ನು ರಕ್ಷಣ ಮಾಡುತ್ತವೆಯೋ ತಮ್ಮ ದಾನದಿಂದ (ಗೋದಾನದಿಂದ) ದಾನಮಾಡಿದವರಿಗೆ ಸ್ವರ್ಗಸುಖವನ್ನುಂಟು ಮಾಡುತ್ತವೆಯೋ ಅಂತಹ ಗೋವುಗಳು ಯಾರಿಗೆತಾನೇ ಪೂಜ್ಯವೆನಿಸಲಿಕ್ಕಿಲ್ಲ ? ಎಲ್ಲರಿಗೂ ಪೂಜ್ಯಗಳಾಗಿರುವವೆಂದು ಮಹಾತ್ಮರು ಗೋಮಹಿಮೆಯನ್ನು ನಾನಾರೀತಿಯಾಗಿ ಬಣ್ಣಿಸಿರುವರು

ಇಂತಹ ಪೂಜ್ಯಗೋವುಗಳ ಸ್ಥಿತಿಯು ಈಗ ನಾಯಿಗಿಂತಲೂ ಕೀಳಾಗಿಹೋಗಿದ ಅನೇಕ ಜನರು ನಿಷಿದ್ಧಗಳಾದ ನಾಯಿಗಳನ್ನು ಕಟ್ಟಿಕೊಂಡು, ಅವುಗಳ ಆಹಾರಕ್ಕೂ ರಕ್ಷಣೆಗೂ ನೂರಾರು ರೂಪಾಯಿಗಳನ್ನು ವೆಚ್ಚ ಮಾಡುತ್ತಿರುವರು ಆದರೆ ಗೋವುಗಳನ್ನು ಕಟ್ಟಿಕೊಂಡು ಅವುಗಳ ಸೇವೆಯನ್ನು ಮಾಡುವುದಿಲ್ಲ ಇದು ಕಾಲಮಹಿಮೆಯೆಂದೇ ಹೇಳಬೇಕಾಗುವದು ಇನ್ನು ಕೆಲವರು ವಯಸ್ಸಾದ ಕೂಡಲೇ ಗೋವುಗಳನ್ನು ಕಟುಕರಿಗೆ ಮಾರಲಿಕ್ಕೆ ಕೊಟ್ಟು ಅವುಗಳ ಪ್ರಾಣಹರಣ ಮಾಡುತ್ತಿರುವರು ಈ ಕೃತಘ್ನರಿಗೆ ದಾರಿದ್ರ್ಯ ದುಃಖ ಗೋಹತ್ಯಾದಿ ದೋಷಗಳು ಬಾರದಿರುವವೇ ? ಭರತಖಂಡವು ಬುದ್ಧಿಯಿಂದೇ ಶಕ್ತಿಯಿಂದಲೂ ಐಶ್ವರ್ಯದಿಂದಲೂ ಅವನತಿಯನ್ನು ಹೊಂದುತ್ತಿರುವುದಕ್ಕೆ ಗೋರಕ್ಷಣೆಯ ಅಭಾವವೇ ಮೂಲಕಾರಣವಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ ಆದುದರಿಂದ ಭಾರತೀಯರು ಪರಮಪೂಜ್ಯವಾದ ಗೋವುಗಳಲ್ಲಿ ಅನಾದರಭಾವವನ್ನಿಡದೆ ಪೂಜ್ಯಬುದ್ಧಿಯನ್ನಿಟ್ಟು ರಕ್ಷಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ವರ್ತಮಾನಸಂಗ್ರಹ

ಶ್ರೀನಗರಕ್ಕೆ ೫ ಮೈಲಿಯಲ್ಲಿ ಭೀಕರ ಕದನ !

ಮಧ್ಯರಾತ್ರಿಯಲ್ಲಿ ಶತ್ರುಗಳ ಮೇಲೆ ಕಾರ್ಯಾಚರಣೆ

ಗುರುವಾರ ರಾತ್ರಿ ಸುಮಾರು ೧೩೦ ಗಂಟೆಯ ವೇಳೆಗೆ ಶ್ರೀ ನಗರಕ್ಕೆ ಪಶ್ಚಿಮದಲ್ಲಿ ನಾಲ್ಕೈದು ಮೈಲಿಗಳ ದೂರದಲ್ಲಿ ಶತ್ರುದಾಳಿಯಾರಂಭವಾಯಿತೆಂದೂ, ಭಾರತೀಯ ಸೈನಿಕರು ಮುಂಜಾನೆಯ ವರೆಗೂ ಶತ್ರುಗಳೊಡನೆ ಯಶಸ್ವಿಯಾಗಿ ಹೋರಾಡಿದರೆಂದೂ ಎ ಐ ಆರ್ ವಿಶೇಷ ಪ್ರತಿನಿಧಿಗಳು ವರದಿ ಮಾಡಿದ್ದಾರೆ ಈ ಕಾರ್ಯಾಚರಣೆಯಲ್ಲಿ ಆಕ್ರಮಣಕಾರರಿಗೆ ಉಂಟಾದ ಸಾವು ನೋವುಗಳ ಅಂಕಿ ಅಂಶಗಳು ತಿಳಿದು ಬಂದಿಲ್ಲ

ಭಾರತದ ಪಡೆಗಳನ್ನು ಪ್ರತ್ಯಕ್ಷವಾಗಿ ಎದುರಿಸಲು ಶತ್ರುಗಳು ಹಿಂಜರಿಯುತ್ತಿದ್ದಾರೆ ವಿಮಾನಗಳ ಧಾಳಿಗೆ ಎಲ್ಲಿ ಬಲಿಯಾಗುವೆವೋ ಎಂಬ ಭೀತಿ ಅವರಲ್ಲಿ ಮೂಡಿದೆ ಆದುದರಿಂದ ಅವರು ರಾತ್ರಿ ಹೋರಾಡುವ ನೀತಿಯನ್ನು ಅನುಸರಿಸಿದ್ದಾರೆ ಆಕ್ರಮಣಕಾರರು ಮಿಲಿಟರಿ ಪೋಷಾಕು ಧರಿಸದೆ ಸಾಮಾನ್ಯ ಉಡುಪಿನಲ್ಲೇ ಬರುತ್ತಿದ್ದಾರೆ.

ಶ್ರೀನಗರದ ಪರಿಸ್ಥಿತಿ

ಶ್ರೀನಗರದ ಸುತ್ತಮುತ್ತಲೂ ಗುಂಡಿನೇಟಿನ ಭಯಂಕರ ಶಬ್ದ ಕೇಳಬರುತ್ತಿದ್ದರೂ ಶ್ರೀನಗರದಲ್ಲಿ ಜನರು ಧೈರ್ಯಗೆಡದೆ ಶಾಂತವಾಗಿದ್ದಾರೆ ತಮ್ಮ ತಾಯಿನಾಡಿನ ರಕ್ಷಣೆಗಾಗಿ ಸರ್ವಪ್ರಯತ್ನ ಮಾಡುತ್ತಿದ್ದಾರೆ

ಶಾಂತಿ ಪ್ರಚಾರಕ್ಕಾಗಿ ಮುಂದೆ ಬಂದಿರುವ ೧೦,೦೦೦ ತರುಣರ ಜೊತೆಗೆ ೬೦೦೦ ಮಂದಿ ನ್ಯಾಷನಲ್ ಗಾರ್ಡ್ಸ್‌ಗಳನ್ನು ನೇಮಿಸಲು ಷೇಕ್ ಅಬ್ದುಲ್ಲಾರವರು ಆಜ್ಞೆ ಇತ್ತಿದ್ದಾರೆ

ಕಾಶ್ಮೀರ ಸರ್ಕಾರದ ಪ್ರಕಟಣೆ

ಬರಮುಲ ಎಂಬ ಸ್ಥಳಕ್ಕೆ ೮ ಮೈಲಿ ದೂರದಲ್ಲಿರುವ “ ಸಂಗ್ರಾಮ ’ ಎಂಬ ಗ್ರಾಮವನ್ನು ಭಾರತದ ಸೈನಿಕರು ಪುನಃ ವಶಪಡಿಸಿಕೊಂಡಿದ್ದಾರೆ ಬ್ಯಾಡಗಾಂವ ಕದನದಲ್ಲಿ ಶತ್ರುಗಳಿಗೆ ಅಪಾರ ಸಾವು ಉಂಟಾಯಿತೆಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ ಜಮ್ಮು ಪ್ರಾಂತದ ಮೂಲಕ ಮಿರ್‌ಪುರಕ್ಕೆ ಹೆಚ್ಚು ಹೆಚ್ಚಾಗಿ ಭಾರತದ ಸೈನ್ಯ ಬರುತ್ತದೆ

ಷೇಕ್ ಅಬ್ದುಲ್ಲಾರವರಿಗೆ ವಿಶೇಷಾಧಿಕಾರ

ಪ್ರಜಾ ವಿಶ್ವಾಸಗಳಿಸಿರುವ ತಾತ್ಕಾಲಿಕ ಮಂತ್ರಿಮಂಡಲವು ಸ್ಥಾಪನೆಯಾಗುವವರೆಗೆ ಈಗಿನ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸಲು ಷೇಕ್ ಅಬ್ದುಲ್ಲಾರವರಿಗೆ ಕಾಶ್ಮೀರದ ಶ್ರೀಮನ್ಮಹಾರಾಜರು ವಿಶೇಷ ಅಧಿಕಾರಗಳನ್ನು ವಹಿಸಿದ್ದಾರೆ

ಷೇಕ್ ಅಬ್ದುಲ್ಲಾರವರು ಪೋಲೀಸ್ ಅಧಿಕಾರಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ಪಾಕಿಸ್ತಾನಕ್ಕೆ ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ನೆರವು ನೀಡುವವರಿಗೆ ಉಗ್ರ ಶಿಕ್ಷೆ ವಿಧಿಸಲಾಗುವುದೆಂದು ಎಚ್ಚರಿಸಿದ್ದಾರೆ

ಹೈದ್ರಾಬಾದ್ ಕಡೆಗೆ ಜೀಪುಗಳು

ಹೈದ್ರಾಬಾದ್ ಕಡೆಗೆ ಹೋಗುತ್ತಿದ್ದ ೧೨ ಜೀಪುಗಳನ್ನು ಈ ತಿಂಗಳು ಎರಡನೇ ತಾ|| ದಿವಸ ಕರ್ನೂಲ್ ರೈಲ್ವೆ ಸ್ಟೇಷನ್ ಬಳಿ ತಡೆಯಲಾಯಿತು ಜೀಪಿನಲ್ಲಿ ಬರುತ್ತಿದ್ದ ಮೊಹಮ್ಮದ್ ಅಮೀರ್‌ಖಾನ್ ಮತ್ತು ಇನ್ನೂ ೬ ಜನ ಮುಸ್ಲಿಂ ಪ್ರಮುಖರನ್ನು ದಸ್ತಗಿರಿ ಮಾಡಲಾಗಿದೆ

ಹೈದರಾಬಾದಿನ ಹಿಂದೂಗಳು ಭಯಭ್ರಾಂತರಾಗಿದ್ದಾರೆ

ಹಿಂದೂಗಳು ಹೈದರಾಬಾದು ಮತ್ತು ಸಿಕಂದರಾಬಾದುಗಳಿಂದ ಹೊರಟುಹೋಗುತ್ತಿದ್ದಾರೆ ಸಿಕಂದರಾಬಾದಿನಲ್ಲಿ ಶ್ರೀಮಂತರು ವಾಸಮಾಡುತ್ತಿದ್ದ ‘ಜೀರಾ’ ಎಂಬ ಕ್ಷೇತ್ರವು ಸಹ ಬರಿದಾಗುತ್ತಿದೆ ತತ್‌ಕ್ಷಣ ಹಿಂದುಗಳು ಹೋಗುವಂತೆ ಸೂಚಿಸುವ ಒಂದು ದೊಡ್ಡ ಪಟವನ್ನು ಚಾಲ್ಸಿಗುಡಾರದಲ್ಲಿ ಅಂಟಿಸಲಾಗಿತ್ತು ಇದರಿಂದ ಅಲ್ಲಿನ ಹಿಂದುಗಳು ಭಯಭ್ರಾಂತರಾಗಿ ಆ ಕ್ಷಣ ಬೇರೆ ಕಡೆಗೆ ಹೊರಟುಹೋದರು

ಎರ್ರಗುಡ್ಡ ನಿರಾಶ್ರಿತರ ಶಿಬಿರದ ಬಳಿ ಇರುವ ಬೋವೆನ್‌ಪಲ್ಲಿಯ ನಿವಾಸಿಗಳು ಸಹ ಸುತ್ತಮುತ್ತಲ ಸ್ಥಳಗಳಿಗೆ ತೆರಳಿದರು ಸಿಕಂದರಾಬಾದಿನಲ್ಲಿ ಅರಬ್ಬಿಯವರೂ ಪಠಾಣರೂ ಹಿಂದುಗಳ ಬಗ್ಗೆ ಹೀನಕೃತ್ಯಗಳನ್ನು ನಡೆಸುತ್ತಿದ್ದಾರೆಂದು ತಿಳಿದು ಬಂದಿದೆ

ಹಿಂದೂಗಳ ರಕ್ಷಣೆಗೆ ಗಮನ ಕೊಡಬೇಕು

ಹೈದರಾಬಾದಿನ ಹಿಂದೂಗಳ ರಕ್ಷಣೆಗೆ ಕೇಂದ್ರ ಸರ್ಕಾರ, ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯ ಸರ್ಕಾರಗಳು ಗಮನಕೊಡಬೇಕೆಂದು ಅಖಿಲ ಭಾರತ ಹಿಂದೂಮಹಾಸಭೆಯ ಅಧ್ಯಕ್ಷರಾದ ಶ್ರೀ ಎಲ್ ಬಿ. ಭೋಪಟ್ಕರ್ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ.

ಹೈದ್ರಾಬಾದಿಗೆ ಟಿಕೆಟ್ ಕೊಡಕೂಡ ದೆಂದು ಜಿಲ್ಲಾಧಿಕಾರಿಗಳ ಆಜ್ಞೆ

ಹೈದ್ರಾಬಾದಿಗೆ ತೆರಳುವ ಪ್ರಯಾಣಿಕರಿಗೆ ರೈಲ್ವೆ ಟಿಕೆಟ್‌ಗಳನ್ನು ಕೊಡಕೂಡದೆಂದು ಕರ್ನೂಲ್ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲ ಸ್ಟೇಷನ್‌ಮಾಸ್ಟರುಗಳಿಗೂ ಆಜ್ಞೆ ಜಾರಿಮಾಡಿದ್ದಾರೆ

ಹೈದ್ರಾಬಾದ್ ನೆರೆಯ ಸಂಸ್ಥಾನಗಳಲ್ಲಿ ಶಾಂತಿ ರಕ್ಷಣೆ

ಹೈದ್ರಾಬಾದ್ ನೆರೆಯ ಸಂಸ್ಥಾನಗಳಲ್ಲಿ ಶಾಂತಿ ರಕ್ಷಿಸಲು ಮುಂಜಾಗ್ರತಾಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಬೊಂಬಾಯಿ ಪ್ರಧಾನಿಗಳಾದ ಶ್ರೀ ಬಿ ಜಿ ಖೇರ್ ಅವರು ಹೇಳಿರುವರು

ಆಹಾರಕ್ಕಾಗಿ ಕೇಂದ್ರ ಸರ್ಕಾರವನ್ನೇ ನಂಬಿ ಕೂಡಬಾರದು

ಆಹಾರ ಸಮ್ಮೇಳನವು ದಿಲ್ಲಿಯಲ್ಲಿ ಸೇರಿದಾಗ ಶ್ರೀ ಆರ್ ಕೆ ಷಣ್ಮುಗಂಚೆಟ್ಟಿಯಾರವರು ಹತೋಟಿ ಆಜ್ಞೆಗಳನ್ನು ರದ್ದುಮಾಡುವುದರಿಂದ, ಉಂಟಾಗುವ ಆರ್ಥಿಕ ಪರಿಣಾಮಗಳನ್ನು ವಿವರಿಸಿದರು ಸಂಸ್ಥಾನಗಳೂ, ಪ್ರಾಂತಗಳೂ ಸ್ವಾವಲಂಬನೆ ಕಲಿಯಬೇಕೆಂದೂ, ಕೇಂದ್ರ ಸರ್ಕಾರದ ಸಹಾಯವನ್ನೇ ನಿರೀಕ್ಷಿಸಿ ಸುಮ್ಮನಿರಬಾರದೆಂದೂ ತಿಳಿಸಿದರು

ಮದ್ರಾಸಿಗೆ ೪೦ ಟ್ರಾಕ್ಟರುಗಳು

ಮದ್ರಾಸ್ ಪ್ರಾಂತ್ಯದಲ್ಲಿ ವ್ಯವಸಾಯಾಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಮದ್ರಾಸ್ ಸರ್ಕಾರವು ೪೦ ಟ್ರಾಕ್ಟರುಗಳನ್ನು ಕೊಳ್ಳಲು ನಿರ್ಧರಿಸಿದೆ ಇದರ ಬೆಲೆ ಸುಮಾರು ೪,೦೦,೦೦೦ ರೂಗಳೆಂದು ಅಂದಾಜು ಮಾಡಲಾಗಿದೆ

ಕಾಶ್ಮೀರ ಪರಿಸ್ಥಿತಿ ಕುರಿತು ಪಂ|| ನೆಹ್ರೂ ಅವರ ಬ್ರಾಡ್‌ಕಾಸ್ಟ್ ಭಾಷಣ

'ಶತ್ರು ದಾಳಿಯಿಂದ ರಕ್ಷಿಸುವುದಾಗಿ ಕಾಶ್ಮೀರದ ಪ್ರಜೆಗಳಿಗೆ ನಾವು ವಚನವಿತ್ತಿರುವೆವು ಸರ್ವಪ್ರಯತ್ನದಿಂದ ನಮ್ಮ ವಾಗ್ದಾನವನ್ನು ಪಾಲಿಸಲು ದೃಢಸಂಕಲ್ಪ ಮಾಡಿದ್ದೇವೆ ಅಪಾಯ ಒದಗಿದಾಗ ತಮ್ಮ ರಾಷ್ಟ್ರದ ರಕ್ಷಣೆಗೆ ನಮ್ಮ ತರುಣರು ಹೇಗೆ ನೆರವಾಗುವರೆಂಬುದಕ್ಕೆ ಕಾಶ್ಮೀರವು ಒಂದು ನಿದರ್ಶನವಾಗಿದೆ' ಎಂದು ಪಂಡಿತ ನೆಹರೂ ಅವರು ದೆಹಲಿಯ ರೇಡಿಯೋ ನಿಲಯದಿಂದ ಭಾಷಣಮಾಡುತ್ತ ತಿಳಿಸಿದರು "ಆಕ್ರಮಣಕಾರರು ಶ್ರೀನಗರದ ಕಣಿವೆಯಲ್ಲಿ ಮುನ್ನುಗ್ಗುತ್ತಿದ್ದಾರೆ ಶ್ರೀನಗರದ ಮತ್ತು ಕಾಶ್ಮೀರದ ಭವಿಷ್ಯವು ಈಗ ವಿಧಿಯ ಕೈಯಲ್ಲಿದೆ! ಆಕ್ರಮಣಕಾರರು ಹೇಗೆ ಮತ್ತು ಯಾವ ಉದ್ದೇಶದಿಂದ ಗಡಿನಾಡಿನ 'ಮೂಲಕ ಕಾಶ್ಮೀರವನ್ನು ಪ್ರವೇಶಿಸಲು ಸಾಧ್ಯವಾಯಿತು? ಮತ್ತು ಧಾಳಿಕಾರರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೇಗೆ ಪಡೆದರು? ಎಂಬ ಪ್ರಶ್ನೆಗಳಿಗೆ ಪಾಕಿಸ್ಥಾನವು ಸಮಂಜಸವಾದ ಉತ್ತರ ಕೊಡಬೇಕಲ್ಲವೇ? ಈ ಆಕ್ರಮಣಕಾರರನ್ನು ತಡೆಗಟ್ಟುವಷ್ಟು ಪಾಕಿಸ್ಥಾನ ಸರಕಾರಕ್ಕೆ ಚೈತನ್ಯವಿರಲಿಲ್ಲವೇ? ಅಥವಾ ಈ ಆಕ್ರಮಣ ನಡೆಯಬೇಕೆಂದು ಪಾಕಿಸ್ಥಾನವು ಇಚ್ಛೆಪಟ್ಟಿತೇ? ಈ ಘಟನೆಗೆ ಬೇರೆ ಯಾವ ಅರ್ಥವನ್ನೂ ಕಲ್ಪಿಸುವುದು ಸಾಧ್ಯವಿಲ್ಲ" ಎಂದು ಹೇಳಿದರು

ಕಾಶ್ಮೀರದಲ್ಲಿ ಉತ್ಕಟ ಪರಿಸ್ಥಿತಿ

ಕಳೆದ ಕೆಲವು ವಾರಗಳಿಂದಲೂ ದಾಳಿಕಾರರ ತಂಡಗಳು ಪಾಕಿಸ್ಥಾನ ಗಡಿ ಮೂಲಕ ಜಮ್ಮು ಪ್ರಾಂತಕ್ಕೆ ಬರುತ್ತಿದ್ದುವು ಗಡಿನಾಡು ಪ್ರಾಂತ ಮತ್ತು ಕಾಶ್ಮೀರದ ಗಡಿಯ ಬಳಿ ಈಗ ಕೆಲಕಾಲದಿಂದ ಶಸ್ತ್ರಸಜ್ಜಿತ ದಾಳಿಕಾರರು ಜಮಾಯಿಸುತ್ತಿದ್ದರು. ಜಮ್ಮುವಿನ ನಾನಾ ಪ್ರದೇಶಗಳಲ್ಲಿ ದಾಳಿಕಾರರ ಆಕ್ರಮಣದಿಂದ ೯೫ ಗ್ರಾಮಗಳು ನಿರ್ನಾಮವಾದುವು ಪೂಂಚ್ ಮತ್ತು ಮಿರ್ಪುರದಲ್ಲಿ ಅವರ ದಾಂಧಲೆ ವಿಪರೀತವಾಗಿದ್ದಿತು ಆಕ್ರಮಣಕಾರರ ಹತ್ತಿರ ಅತ್ಯಾಧುನಿಕವಾದ ಯುದ್ಧೋಪಕರಣಗಳೂ, ಟ್ಯಾಂಕ್ ಸಹ ಇದ್ದುವು. ಅಗ್ನ್ಯುತ್ಪಾದಕವಾದ ಭಯಂಕರ ಶಸ್ತ್ರಾಸ್ತ್ರಗಳನ್ನೂ ಸಹ ಆಕ್ರಮಣಕಾರರು ಉಪಯೋಗಿಸುತ್ತಿದ್ದಾರೆ ಅಕ್ಟೋಬರ್ ೨೪ನೆಯ ತಾರೀಖಿನ ರಾತ್ರಿ ಆಕ್ರಮಣಕಾರರು ನೂರಾರು ಲಾರಿಗಳಲ್ಲಿ ಮುಸಫರಬಾದನ್ನು ಪ್ರವೇಶಿಸಿ ಅದನ್ನು ಧ್ವಂಸಮಾಡಿದರು. ಪುರನಿವಾಸಿಗಳು ಅವರ ಹಾವಳಿಗೆ ಸಿಕ್ಕಿ ಹತರಾದರು ಜಿಲ್ಲಾ ಮ್ಯಾಜಿಸ್ಟ್ರೇಟರು ಕೊಲೆ ಮಾಡಲ್ಪಟ್ಟರು ಕೇವಲ ೨ ದಿನಗಳಲ್ಲಿಯೇ ಅನೇಕ ಊರುಗಳು ಶತ್ರುಗಳ ದಾಳಿಯಿಂದ ನೆಲಸಮವಾದುವು ವಿದ್ಯುಚ್ಛಕ್ತಿ ಉತ್ಪತ್ತಿ ಕೇಂದ್ರವನ್ನು ದಾಳಿಕಾರರು ನಾಶಪಡಿಸಿದುದರಿಂದ ಕಾಶ್ಮೀರದಲ್ಲೆಲ್ಲಾ ಕಾರ್ಗತ್ತಲು ಕವಿಯಿತು ಆಕ್ರಮಣಕಾರರು ಅಸಂಖ್ಯಾತರಾಗಿ ಪಶ್ಚಿಮ ಪಂಜಾಬು ಕಡೆಯಿಂದ ಕಾಶ್ಮೀರದ ಕಡೆಗೆ ಸಾಗುತ್ತಿದ್ದರು ಈ ದುರ್ವ್ಯಾಪಾರಗಳು ಅವಿಚ್ಛಿನ್ನವಾಗಿ ನಡೆಯುತ್ತಿದ್ದರೂ ಕಾಶ್ಮೀರದ ಮೇಲೆ ಪಾಕಿಸ್ಥಾನ ಸರ್ಕಾರವು ಆರೋಪಣೆ ಹೊರಿಸುತ್ತಿದೆ"

ಕಾಶ್ಮೀರದ ಮೊರೆಗೆ ಮನ್ನಣೆ

ಕಾಶ್ಮೀರದಲ್ಲಿ ದುರ್ವ್ಯಾಪಾರಗಳು ಅವಿಚ್ಛಿನ್ನವಾಗಿ ನಡೆಯುತ್ತಿದ್ದರೂ ಭಾರತ ಸರಕಾರವು ಅಕ್ಟೋಬರ್ ೨೬ ರ ವರೆಗೂ ಸುಮ್ಮನಿದ್ದಿತು ಆದರೆ ಶ್ರೀನಗರಕ್ಕೆ ತೀವ್ರ ಅಪಾಯ ಒದಗುವ ಸಂಭವವಿದ್ದುದರಿಂದಲೂ, ಮಹಾರಾಜರೂ ಮತ್ತು ಪ್ರಜಾ ನಾಯಕರಾದ ಷೇಕ್ ಅಬ್ದುಲ್ಲಾರವರೂ ತತ್‌ಕ್ಷಣ ಸಹಾಯ ನೀಡಬೇಕೆಂದು ಮೊರೆಯಿಟ್ಟದುದರಿಂದಲೂ ಭಾರತ ಸರಕಾರವು ಪ್ರವೇಶಕರಾರಿಗೆ ಸಮ್ಮತಿ ಇತ್ತು ರಕ್ಷಣಾ ಕಾರ್ಯಕ್ರಮ ಕೈಗೊಂಡಿತು ಎಂದು ಹೇಳಿದರು ಈ ಪರ್ವಕಾಲದಲ್ಲಿ ಷೇಕ್ ಅಬ್ದುಲ್ಲಾರವರು ತಮ್ಮ ನಾಡನ್ನು ಪರಕೀಯರ ದಾಳಿಯಿಂದ ರಕ್ಷಿಸಲು ಪ್ರದರ್ಶಿಸುತ್ತಿರುವ ಅಪ್ರತಿಮ ಸಾಹಸವನ್ನು ನೆಹರೂ ಅವರು ಪ್ರಶಂಸಿಸಿದರು

ಕಾಶ್ಮೀರವು ವಿಪತ್ತಿನಿಂದ ಪಾರಾಗುವವರೆಗೂ ಹೋರಾಟ ನಿಲ್ಲದು!

. ನೆಹರೂ ಅವರ ಹೇಳಿಕೆ

"ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ಧ್ಯೇಯವಾದ ಹಿಂದೂ ಮುಸ್ಲಿಂ ಸಂಘಟನೆಯು ಎಲ್ಲರಿಗೂ ಆದರ್ಶಪ್ರಾಯವಾಗಿದೆ ಅಲ್ಪ ವಿಚಾರಗಳಿಗಾಗಿ ಮಹತ್ತರವಾದ ಸಮಸ್ಯೆಗಳನ್ನು ಮರೆಯಬಾರದೆಂಬುದನ್ನು ಈ ಸಂಸ್ಥೆಯು ತೋರಿಸಿಕೊಟ್ಟಿದೆ. ಶ್ರೀನಗರದ ಒನತಿಯಲ್ಲಿ ಕಳವಳ ಉಂಟಾಗದಿರಲು ರಾಷ್ಟ್ರೀಯ ಸಮ್ಮೇಳನದ ಸ್ವಯಂ ಸೇವಕರ ಪ್ರಯತ್ನವೇ ಮುಖ್ಯ ಕಾರಣ"

ಎಂಬುದಾಗಿ ಮಹಾ ಪ್ರಧಾನರಾದ ಪಂ|| ಜವಹರ್ ಲಾಲ್ ನೆಹ್ರೂ ಅವರು ಡೆಹಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

"ಕಾಶ್ಮೀರದಿಂದ ಕಟ್ಟಕಡೆಯ ದಾಳಿಕಾರರನ್ನು ಹೊರದೂಡುವವರೆಗೂ ಭಾರತದ ಹೋರಾಟ ನಿಲ್ಲಲಾರದು! ಕಳೆದ ಎರಡು ತಿಂಗಳ ಘಟನೆಗಳಿಂದ ಭಾರತಕ್ಕೆ ಎಲ್ಲಾ ಭಾಗಗಳಲ್ಲಿಯೂ ಅಪಾಯ ಪ್ರಾಪ್ತವಾಗಿದೆಯೆಂಬುದು ಸ್ಪಷ್ಟವಾಗಿದೆ ಈ ವಿಪತ್ತನ್ನು ಎದುರಿಸಲು ಭಾರತೀಯರು ತಕ್ಷಣ ಪೂರ್ಣವಾಗಿ ಸಿದ್ಧರಾಗದಿದ್ದರೆ ಭಾರತದ ಸ್ವಾತಂತ್ರ್ಯ ಬಹುಕಾಲ ಉಳಿಯಲಾರದು."
—ಎಂಬುದಾಗಿ ಪಂ|| ನೆಹ್ರೂರವರು ಭಾರತೀಯರನ್ನು ಎಚ್ಚರಿಸಿದರು.

ರಾಷ್ಟ್ರೀಯಸಮ್ಮೇಳನದ ಮನವಿಗೆ ಮನ್ನಣೆ ಕೊಟ್ಟು ಕಾಶ್ಮೀರದ ರಕ್ಷಣೆಗಾಗಿ ಭಾರತದ ಸೇನೆಯನ್ನು ಕಳುಹಲಾಯಿತು ಕೋಮುವಾರು ಭೇದ ಭಾವನೆಗಳಿಲ್ಲದುದರಿಂದಲೇ ಮಿಲಿಟರಿ ಸಹಾಯವಿಲ್ಲದೆಯೇ ಕೆಲ ಕಾಲ ಕಾಶ್ಮೀರದ ರಕ್ಷಣೆಗಾಗಿ ಹೋರಾಡಲು ರಾಷ್ಟ್ರೀಯ ಸಮ್ಮೇಳನಕ್ಕೆ ಸಾಧ್ಯವಾಯಿತು-ಎಂದು ಪಂಡಿತರು ತಿಳಿಸಿದರು

ಶಾಂತಿಪ್ರಿಯ ಪ್ರಜೆಗಳ ಮೇಲೆ ದಾಳಿ

ಕಾಶ್ಮೀರದಲ್ಲಿ ಶಾಂತಿಪ್ರಿಯರಾದ ನಾಗರಿಕ ಹಿಂದೂ ಮುಸ್ಲಿಂ ಪ್ರಜೆಗಳ ಮೇಲೆ ಆಕ್ರಮಣಕಾರರು ಹೋರಾಟ ನಡೆಸುತ್ತಿದ್ದಾರೆ ಭಾರತ ಸರ್ಕಾರದೊಂದಿಗೆ ಯಾವ ಸಂಪರ್ಕವನ್ನೂ ಕಾಶ್ಮೀರದ ಪ್ರಜೆಗಳು ಹೊಂದಿರಕೂಡದೆಂಬುದೇ ಈ ಧಾಳಿಕಾರರ ಉದ್ದೇಶವಾಗಿದೆ. ಕಾಶ್ಮೀರದ ಪ್ರಜಾಕೋಟಿ ಮತ್ತು ಭಾರತ ಸರ್ಕಾರಗಳಿಗೆ ಪರಸ್ಪರ ಸಹಕಾರವಿಲ್ಲದೆ ಕಾಶ್ಮೀರವನ್ನು ವಿಪತ್ತಿನಿಂದ ಪಾರುಮಾಡುವುದು ಕಷ್ಟ ಎಂಬುದಾಗಿ ನೆಹ್ರೂರವರು ಸ್ಪಷ್ಟಪಡಿಸಿದರು

ಗಡಿನಾಡಿನ ಪ್ರಧಾನರ ವರ್ತನೆಯ ಖಂಡನೆ

ಕಾಶ್ಮೀರದ ಆಕ್ರಮಣಕ್ಕೆ ಈಗ ಕೆಲಕಾಲದಿಂದ ಸಿದ್ಧತೆಗಳಾಗುತ್ತಿದ್ದುವು ಕಾಶ್ಮೀರದ ಆಕ್ರಮಣದಲ್ಲಿ ಗಡಿನಾಡಿನ ಮುಖ್ಯ ಮಂತ್ರಿ ಮತ್ತು ಅವರ ಸರ್ಕಾರದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಕಂಡು ಬರುತ್ತಿದೆಯೆಂದು ಗಡಿನಾಡಿನ ಮುಖ್ಯ ಮಂತ್ರಿಯ ವರ್ತನೆಯನ್ನು ಖಂಡಿಸಿದರು

ಪಾಕಿಸ್ಥಾನ ಮುಖ್ಯ ಮಂತ್ರಿಯ ಆರೋಪಣೆಗೆ ಪಟೇಲರ ಉತ್ತರ

"ಪಾಕಿಸ್ಥಾನದ ಪ್ರಧಾನರ ಇತ್ತೀಚಿನ ಭಾಷಣದಿಂದ ಅವರಿಗೆ ಚಿತ್ತಭ್ರಮಣೆಯುಂಟಾಗಿದೆಯೆಂದು ತೋರುತ್ತದೆ ಕಾಶ್ಮೀರದ ಮೇಲೆ ನಡೆಯುತ್ತಿರುವ ದಾಳಿಗೆ ಪ್ರಾಮುಖ್ಯವನ್ನೇ ಕೊಡದೆ, ಶಸ್ತ್ರ ಸಜ್ಜಿತ ಆಕ್ರಮಣಕಾರರ ದಾಳಿಯು ಕಾಶ್ಮೀರ ಸರ್ಕಾರದ ದಬ್ಬಾಳಿಕೆಯ ಫಲವಾಗಿ ಉದ್ರೇಕಗೊಂಡ ಪ್ರಜೆಗಳ ದೊಂಬಿಯೆಂದು ತೋರುವಂತೆ ಅವರು ಮಾತನಾಡಿದ್ದಾರೆ ಮತ್ತು ಆಕ್ರಮಣಕಾರರನ್ನು ದೇಶ ಭಕ್ತರೆಂದು ಕರೆಯುವ ಸಾಹಸ ಮಾಡಿದ್ದಾರೆ"

ಪಾಕಿಸ್ಥಾನವು ಅಪಪ್ರಚಾರ ಮತ್ತು ವಿತಂಡವಾದದಿಂದ ಪ್ರಪಂಚದ ಕಣ್ಣಿಗೆ ಮಣ್ಣೆರಚಲು ಸಾಧ್ಯವಿಲ್ಲ. ಪಾಕಿಸ್ಥಾನದ ಅಪರಾಧದ ಪ್ರತಿಕ್ರಿಯೆಗಾಗಿ ಭಾರತವನ್ನು ಹಳಿಯುವುದು ಪಾಕಿಸ್ಥಾನದ ನೀತಿಯಾಗಿದೆ ಪಾಕಿಸ್ಥಾನದ ದುರ್ವರ್ತನೆಗೆ ಹಿಂದೂ ಮತ್ತು ಸಿಕ್ಕರು ತಲೆಬಾಗಬೇಕೆಂದೇ ಪಾಕಿಸ್ಥಾನದ ಅಭಿಪ್ರಾಯವೆಂದು ತೋರುತ್ತದೆ ಎಂದು ಸರ್ದಾರರು ಪಾಕಿಸ್ಥಾನದ ನೀತಿಯನ್ನು ಕಟುವಾಗಿ ಖಂಡಿಸಿದರು

ಬಡತನದ ಆಧಾರದ ಮೇಲೆ ಫ್ರೀಷಿಪ್ ಹಂಚಿಕೆ

ಮೈಸೂರು ವಿಶ್ವವಿದ್ಯಾನಿಲಯದವರು ಒಂದು ಆಜ್ಞೆ ಹೊರಡಿಸಿ, ಕಾಲೇಜುಗಳಲ್ಲಿ ಫ್ರೀಷಿಪ್‌ಗಳನ್ನು ಕೊಡುವಾಗ ವಿದ್ಯಾರ್ಥಿಗಳ ಬಡತನವನ್ನೇ ಆಧಾರವಾಗಿಟ್ಟುಕೊಳ್ಳಬೇಕೇ ಹೊರತು, ಕೋಮುವಾರು ತತ್ವವನ್ನು ಗಣನೆಗೆ ತೆಗೆದುಕೊಳ್ಳಕೂಡದೆಂದು ಸೂಚನೆ ಮಾಡಿದ್ದಾರೆ

ಮೈಸೂರಿಗೆಹೊರಗಿನಿಂದ ಆಹಾರ

ಇಂಡಿಯಾ ಸರ್ಕಾರದವರು ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಮೈಸೂರಿಗೆ ಕೆಳಗೆ ಕಂಡಂತೆ ಆಹಾರವನ್ನು ಹಂಚಿದ್ದಾರೆ

ಅಕ್ಟೋಬರ್—ಅಕ್ಕಿ ೪೦೦೦ ಟನ್, ಗೋಧಿ ೩೦೦೦ ಟನ್, ಮೈಲೋ ಮತ್ತು ಇತರ ಧಾನ್ಯ ೩೪೫೦ ಟನ್ ನವೆಂಬರ್—ಅಕ್ಕಿ ೬೦೦೦ ಟನ್, ಗೋಧಿ ೪೦೦೦ ಟನ್, ಮೈಲೋ ಮತ್ತು ಇತರ ಧಾನ್ಯ ೧೦,೦೦೦ ಟನ್ ಇವನ್ನು ಆದಷ್ಟು ಬೇಗನೆ ತರಿಸಲು ಮೈಸೂರು ಸರ್ಕಾರವು ಏರ್ಪಾಡುಮಾಡಿದೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜಗದ್ಧಿತಕಾರಣವಾದ ಪ್ರಖ್ಯಾತಿಗೊಂಡ ಹಾಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದ ತಿರುವದ ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದರೆ ಆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) ...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕ ಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೯ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) ..	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As
लिङ्गधारणचन्द्रिका (संस्कृत)	३ रु.
वीरशैवरत्न (मराठी) ..	१ रु.
महानारायणोपनिषत् (वीरशैवभाष्य-संस्कृत)	१ रु.
[illegible]कारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ಕಳ್ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ನೇ ನವೆಂಬರ್ ೧೯೪೭ [ಸಂಚಿಕೆ ೩೦

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸುವರ್ಣರಜತಾಂದೋಲಿಕೋತ್ಸವ ತುರುವೇಕೆರೆ.

ನಮ್ಮಗಳ ಪ್ರಾರ್ಥನಾ ಪ್ರಕಾರ ಶ್ರೀ ಜಗದ್ಗುರುಗಳವರು ನಮ್ಮ ಪೇಟೆಗೆ ಇದೇ ಸರ್ವಜಿತುನಾಮ ಸಂವತ್ಸರದ ಕಾರ್ತೀಕ ಶುದ್ಧ ೭ ಗುರುವಾರ (೨೦ ೧೧-೪೭) ಉದಯ ೯ ಘಂಟೆಗೆ ಸಕಲ ವೈಭವದೊಡನೆ ವಿಜಯಂಗೈಸುವರು ಆದುದರಿಂದ ತಾವುಗಳು ಇಷ್ಟಮಿತ್ರರೊಡನೆ ಆಗಮಿಸಿ ಉತ್ಸವಭಾಗಿಗಳಾಗಿ ಶ್ರೀ ಮಹಾ ಸನ್ನಿಧಿಯ ದರ್ಶನಾಶೀರ್ವಾದಗಳಿಗೆ ಪಾತ್ರವಾಗುವುದರ ಮೂಲಕ ನಮ್ಮಗಳ ಮನಸ್ಸನ್ನು ಸಂತೋಷ ಪಡಿಸಬೇಕಾಗಿಕೋರುವ

ತುರುವೇಕೆರೆ ವೀರಶೈವ ಭಕ್ತಮಂಡಳಿ

ನಿವೇದನೆ

ಶ್ರೀಕಾಶೀಜಗದ್ಗುರುಗಳವರು ಆರೋಗ್ಯಲಾಭಕ್ಕಾಗಿ ಕೇವಲ ಏಕಾಂತದಲ್ಲಿ ಸಂಪೂರ್ಣ ವಿಶ್ರಾಂತಿ ಪಡೆಯುತ್ತಿದ್ದಾರೆ ಮಹಾಜನರಿಂದ ಬಂದಿರುವ ನೂರಾರು ಪತ್ರಗಳಿಗೆ ಪ್ರತ್ಯುತ್ತರವು ಈ ೨-೩ ತಿಂಗಳಲ್ಲಿ ದೊರೆಯಲು ಶಕ್ಯವಿಲ್ಲದಾಗಿದೆ ಈ ಅನಿವಾರ್ಯ ನಿವೇದನೆಯನ್ನು ಅನ್ಯಥಾ ಭಾವಿಸಬಾರದು

ವ್ಯವಸ್ಥಾಪಕ, ಜಂಗಮವಾಡೀಮಠ, ಕಾಶೀ

ಸವಣೂರುಗ್ರಾಮದ ಸಮಾಚಾರ

ಧಾರವಾಡ ಡಿ॥ ಸವಣೂರು ಗ್ರಾಮದಲ್ಲಿ ಈ ತಿಂಗಳ ಆರಂಭದಲ್ಲಿ ಕಾಲರಾ ಬೇನೆಯು ಪ್ರಾರಂಭವಾಯಿತು ಇದನ್ನು ತಿಳಿದ ಕೂಡಲೆ ಸವಣೂರು ಸಂಸ್ಥಾನಾಧಿಪತಿಗಳಾದ ನವಾಬ ಸಾಹೇಬರು ಕೆಲವು ಉಪಾಯಗಳನ್ನು ಕೈಗೊಂಡು ಈ ಬೇನೆಯನ್ನು ತಡೆಗಟ್ಟಿದರು ಬಾವಿಗಳ ನೀರನ್ನು ಶುದ್ಧಪಡಿಸಿದರು ಕೆರೆಯ ನೀರನ್ನು ಕುಡಿಯದಂತೆ ಕಾವಲಿಟ್ಟರು. ಚಹಾದ ಅಂಗಡಿಗಳಲ್ಲಿ ಕರಿದ ಪದಾರ್ಥಗಳನ್ನು ಮಾರದಂತೆ ಪ್ರತಿಬಂಧಿಸಿದರು ಮಾರ್ಕೆಟ್ಟಿನಲ್ಲಿ ಕೊಳೆತ ಹಣ್ಣು ಕಾಯಿಪಲ್ಯಗಳನ್ನು ಮಾರದಂತೆ ನಿರ್ಬಂಧಿಸಿದರು. ೪ ಸಾವಿರಕ್ಕೆ ಮೇಲ್ಪಟ್ಟು ಜನರಿಗೆ ಇನಾಕ್ಯುಲೇಷನ್ ಮಾಡಿಸಿದರು ಇದರಿಂದ ರೋಗವು ಹರಡಲು ಆಸ್ಪದ ದೊರೆಯಲಿಲ್ಲ ಊರೊಳಗಿನ ಭಕ್ತಮಂಡಲಿಯವರು ದೇವೀಪುರಾಣವನ್ನು ಪ್ರಾರಂಭಿಸಿ ೧೫ ದಿನಗಳ ವರೆಗೆ ಭಜನೆಮಾಡಿದರು ಕೊನೆಯ ದಿವಸ ಊರೊಳಗಿನ ಎಲ್ಲಾ ಜನಾಂಗದವರೂ, ಸರ್ಕಾರಿ ಅಧಿಕಾರಿಗಳೂ ಕೂಡಿ ದೇವಿಯ ಉತ್ಸವವನ್ನು ಮಹಾ ವೈಭವದೊಡನೆ ನೆರವೇರಿಸಿದರು ದೇವಿಯನುಗ್ರಹದಿಂದ ರೋಗವು ಶಾಂತವಾದುದಕ್ಕಾಗಿ ಸರ್ವರೂ ಸಂತೋಷ ಪಡುತ್ತಿರುವರು.

ವೀರಭದ್ರಪ್ಪ, ಬಿಕ್ಕಣ್ಣನವರ, ಸವಣೂರು.

ಮೈಸೂರಿನ ಕೈಗಾರಿಕಾಭಿವೃದ್ಧಿಯ ಬಗ್ಗೆ ಡಾ॥ ಮುಖರ್ಜಿಯವರ ಭರವಸೆ

"ಭಾರತದ ಕೈಗಾರಿಕೆಗಳನ್ನು ಪುನರುದ್ಧಾರ ಮಾಡಲೋಸುಗ ಯಾವ ಆರ್ಥಿಕ ಯೋಜನೆಯಲ್ಲಾದರೂ ಸರಿಯೆ, ಅವರಲ್ಲಿ ಮೈಸೂರು ಸಂಸ್ಥಾನಕ್ಕೆ ತಕ್ಕ ಸ್ಥಾನಮಾನಗಳಿದ್ದೇ ಇರುವುವು ವಿವರಗಳನ್ನು ನಿಮ್ಮೊಡನೆ ಚರ್ಚಿಸಲು ನನಗೆ ಕಾಲಾವಕಾಶವಿಲ್ಲ ಆದರೆ ಇಷ್ಟು ಮಾತ್ರ ಹೇಳಬಲ್ಲೆ ಮೈಸೂರಿನ ಕೈಗಾರಿಗೆಗಳು ಇನ್ನೂ ಅಭಿವೃದ್ಧಿಗೊಳ್ಳಲು ನೀವು ಸಮೂದಿಸಿರುವ ಸಲಹೆಗಳೆಲ್ಲನೇಕವು ಭಾರತ ಸರ್ಕಾರದ ಪರ್ಯಾಲೋಚನೆಯಲ್ಲಿವೆ" ಎಂಬುದಾಗಿ ಭಾರತ ಸರ್ಕಾರದ ಕೈಗಾರಿಕಾ ಮತ್ತು ಸರಬರಾಜು ಸಚಿವರಾದ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ಮೈಸೂರು ವಾಣಿಜ್ಯ ಭವನಕ್ಕೆ ಒಂದಾಗ್ಗೆ ಹೇಳಿದರು

ಡಾ॥ ಮುಖರ್ಜಿಯವರು ತಮ್ಮ ಭಾಷಣದಲ್ಲಿ ಭಾರತದ ಕೈಗಾರಿಕೆಗಳ ಅಭಿವೃದ್ಧಿಯ ವಿಷಯವನ್ನು ಪ್ರಸ್ತಾಪಮಾಡಿ, ಆ ಬಗ್ಗೆ ಈಗಿರುವ ತೊಂದರೆಗಳನ್ನು ಸಂಕ್ಷೇಪವಾಗಿ ವಿವರಿಸಿದರು ಎಲ್ಲ ವಿಚಾರಗಳನ್ನೂ ಡಿಸೆಂಬರ್ ತಿಂಗಳ ಮೊದಲನೇ ವಾರದಲ್ಲಿ ಭಾರತ ಸರ್ಕಾರದವರು ಕರೆಯಬೇಕೆಂದಿರುವ ಪ್ರಾಂತ ಮತ್ತು ಸಂಸ್ಥಾನಗಳ ಸರ್ಕಾರಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಪೂರ್ವಭಾವಿಯಾಗಿ ಪರಿಶೀಲಿಸಲಾಗುವುದೆಂದೂ, ಆ ಸಮ್ಮೇಲನದಲ್ಲಿ ನಾನಾ ಪ್ರತಿನಿಧಿಗಳ ದೃಷ್ಟಿ ಕೋಣಗಳನ್ನು ಕ್ರೋಢೀಕರಿಸಿ ಅನಂತರ ಒಂದು ಸರ್ವತೋಮುಖವಾದ ಯೋಜನೆಯನ್ನು ತಯಾರಿಸಲಾಗುವುದೆಂದೂ, ಆ ಸಮಯಕ್ಕೆ ಮೈಸೂರಿನ ವಾಣಿಜ್ಯ ಭವನದವರು ಮೈಸೂರಿನ ಅವಶ್ಯಕತೆಗಳನ್ನು ಸಂಸ್ಥಾನದ ಪ್ರತಿನಿಧಿಗೆ ತಿಳಿಸಿದರೆ ಅವರು ಅವನ್ನು ಸಮ್ಮೇಳನದ ಮುಂದಿಡಲು ಅನುಕೂಲವಾಗುವುದೆಂದೂ ಸಲಹೆ ಮಾಡಿದರು

ಡಾ॥ ಮುಖರ್ಜಿಯವರು ಈಗ ದೇಶದಲ್ಲಿ ಕಲ್ಲಿದ್ದಲು ಉಕ್ಕು ಮೊದಲಾದ ಸಾಮಾನುಗಳ ತಯಾರಿಕೆಗೆ ಇರುವ ಅನನುಕೂಲಗಳನ್ನು ವಿವರಿಸಿದರು

ಕಡೆಯದಾಗಿ ಡಾ॥ ಮುಖರ್ಜಿಯವರು 'ಕೈಗಾರಿಕಾಭಿವೃದ್ಧಿಯಲ್ಲಿ ಮೈಸೂರಿನ ಸ್ಥಾನವು ಎಷ್ಟು ಮುಖ್ಯವಾದುದೆಂಬುದು ನನಗೆ ಗೊತ್ತಿದೆ ಈ ನನ್ನ ಭೇಟಿಯಲ್ಲಿ ನಿಮ್ಮ ಉತ್ಸಾಹಯುತ ಮಂತ್ರಿಗಳೊಡನೆ ನಾನು ನಿಮ್ಮ ಕೈಗಾರಿಕಾ ಕೇಂದ್ರಗಳನ್ನು ನೋಡಿದ್ದೇನೆ ಮೈಸೂರಿನ ಕೈಗಾರಿಕೆಗಳ ಹೆಚ್ಚು ಬೆಳವಣಿಗೆಗೆ ಏನೇನಾಗಬೇಕೆಂಬುದನ್ನು ನೀವು ಅವರಿಗೆ ಪಟ್ಟಿಮಾಡಿ ಹೇಳಿದರೆ, ಅವರು ನಮಗದನ್ನು ತಿಳಿಸುವರು ಏತನ್ಮಧ್ಯೆ ನೀವು ಈಗ ಮಾಡಿರುವ ಸಲಹೆಗಳನ್ನು ಕಾರ್ಯದರ್ಶಿಗಳು ನನ್ನ ಗಮನಕ್ಕೆ ತಂದುಕೊಡುವರು" ಎಂದು ಸೂಚಿಸಿದರು.

ಸರ್ದಾರ್ ಪಟೇಲರು ಸೌರಾಷ್ಟ್ರ ಸೋಮನಾಥ ದೇವಾಲಯವನ್ನು ಸಂದರ್ಶಿಸಿದರು

ಭರತ ಖಂಡದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವ ದ್ವಾದಶಜ್ಯೋತಿರ್ಲಿಂಗಗಳಲ್ಲಿ ಸೌರಾಷ್ಟ್ರ ಸೋಮನಾಥ ಲಿಂಗವು ಒಂದಾಗಿರುವ ವಿಷಯವು ಸಾಮಾನ್ಯವಾಗಿ ಹಿಂದೂಧರ್ಮದವರೆಲ್ಲರಿಗೂ ಗೊತ್ತಿರುವುದು ಪೂರ್ವಕಾಲದಲ್ಲಿ ಈ ದೇವಾಲಯವು ಅಪಾರವಾದ ಸಂಪತ್ತಿನಿಂದ ಕೂಡಿದ್ದಿತು ಇಂತಹ ಸಂಪಚ್ಛಾಲಿಯಾದ ದೇವಾಲಯವನ್ನು ಈಗ್ಗೆ ೯೦೦ ವರ್ಷಗಳ ಪೂರ್ವದಲ್ಲಿ ಘಜ್ನೀ ಮಹಮ್ಮದನೆಂಬವನು ಈ ದೇವಸ್ಥಾನದ ಮೇಲೆ ೧೭ ಸಾರೆ ದಂಡೆತ್ತಿಬಂದು ದೇವಸ್ಥಾನವನ್ನು ಹಾಳುಮಾಡಿ ಅಪಾರವಾದ ಮುತ್ತುರತ್ನಗಳನ್ನು ತೆಗೆದುಕೊಂಡು ತನ್ನ ದೇಶಕ್ಕೆ ಹೋದನು ಅಂದಿನಿಂದಲೂ ದೇವಸ್ಥಾನವು ಪಾಳುಬಿದ್ದಿರುವುದು ಇಂತಹ ಸುಪ್ರಸಿದ್ಧವಾದ ದೇವಸ್ಥಾನವು ಕಾಠೇವಾಡದಲ್ಲಿರುವ ಜುನಾಗಢ ಸಂಸ್ಥಾನಕ್ಕೆ ಸೇರಿರುವುದು. ಇದರಂತೆಯೇ ಇನ್ನೂ ಅನೇಕ ಪ್ರಸಿದ್ಧ ಹಿಂದೂ ಕ್ಷೇತ್ರಗಳು ಈ ರಾಜ್ಯದಲ್ಲಿರುವವು ಇದಕ್ಕೆ ಪ್ರಭಾಸಕ್ಷೇತ್ರವೆನ್ನುವರು ಶ್ರೀಕೃಷ್ಣನು ದೇಹಬಿಟ್ಟ ಸ್ಥಳವೂ ಕೂಡ ಇದೇ ಆಗಿದೆ. ಆದರೆ ಈ ಸಂಸ್ಥಾನಾಧಿಪತಿಗಳ ಮುಸಲ್ಮಾನರಾಗಿರುವುದರಿಂದ ಹಿಂದೂ ದೇವಸ್ಥಾನಗಳ ಅಭಿವೃದ್ಧಿಗೆ ಅವಕಾಶವೇ ಇಲ್ಲದಂತಾಗಿದೆ ಈಗ ಜುನಾಗಢ ಸಂಸ್ಥಾನದ ನವಾಬರು ಪಾಕೀಸ್ಥಾನಕ್ಕೆ ಸೇರಿದ್ದರಿಂದ ಆ ಸಂಸ್ಥಾನದಲ್ಲಿರುವ ಪ್ರಜೆಗಳು ಅದಕ್ಕೆ ವಿರುದ್ಧವಾಗಿ ವರ್ತಿಸಹತ್ತಿದರು ಇದರಿಂದ ನವಾಬರು ತಮ್ಮ ಸಂಸ್ಥಾನವನ್ನು ಬಿಟ್ಟು ಕರಾಚಿಗೆ ಓಡಿಹೋಗಿರುವರು. ಈಗ ಸಂಸ್ಥಾನದಲ್ಲಿ ಅನಾಯಕತ್ವ ಉಂಟಾಗಿರುವದು ತತ್ಪರಿಣಾಮವಾಗಿ ಆ ಸಂಸ್ಥಾನದ ದಿವಾನರ ಪ್ರಾರ್ಥನೆಯ ಮೇರೆಗೆ ಭಾರತ ಸರ್ಕಾರವು ಅದರ ಆಡಳಿತವನ್ನು ತನ್ನ ಅಧೀನಕ್ಕೆ ತೆಗೆದುಕೊಂಡಿದೆ ಇದಕ್ಕಾಗಿ ಸರ್ದಾರ್ ಪಟೇಲರು ಇದೇ ತಿಂಗಳು ೧೩ ನೇ ತಾರೀಖಿನ ದಿವಸ ಜುನಾಗಢ ಸಂಸ್ಥಾನಕ್ಕೆ ಹೋಗಿದ್ದರು ಆ ಸಮಯದಲ್ಲಿ ಲೋಕಪ್ರಸಿದ್ಧವಾಗಿರುವ ಶ್ರೀ ಸೋಮನಾಥ ದೇವಾಲಯದ ದರ್ಶನವನ್ನು ಮಾಡಿಕೊಂಡರು ಆಗ್ಗೆ ಅನೇಕ ಜನ ಹಿಂದುಗಳು ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಪಟೇಲರನ್ನು ಪ್ರಾರ್ಥಿಸಿಕೊಂಡರೆಂಬುದಾಗಿ ತಿಳಿದು ಬರುತ್ತದೆ ಈಗ್ಗೆ ೯೦೦ ವರ್ಷಗಳಿಂದ ದೇವಾಲಯವು ಪಾಳುಬಿದ್ದಿದ್ದರೂ ಭರತ ಖಂಡದ ನಾನಾ ಭಾಗಗಳಿಂದ ಇಂದಿನ ವರೆಗೂ, ಪ್ರತಿ ವರ್ಷ ಲಕ್ಷಾಂತರ ಜನ ಹಿಂದೂಗಳು ಆ ದೇವರ ದರ್ಶನಕ್ಕಾಗಿ ಅಸಾಧಾರಣ ಭಕ್ತಿಯಿಂದ ಹೋಗುತ್ತಿರುವರು. ಇಂತಹ ಪ್ರಸಿದ್ಧ ದೇವಾಲಯವು ಈ ಕಾಲದಲ್ಲಾದರೂ ಜೀರ್ಣೋದ್ಧಾರಗೊಂಡು ಹಿಂದೂಗಳ ಮನಸ್ಸಿಗೆ ಸಂತೋಷವುಂಟಾಗುವಂತಾಗಲೆಂದು ಆಶಿಸುತ್ತೇವೆ.

ಓಂ

ವಿಚಾರಪೂರ್ವಕವಾದ ಪ್ರಾರ್ಥನೆ

ಲೇ-ಎಂ ಎಲ್ ನಾ[illegible], ಆತ್ಮವಿಚಾರಮಂದಿರ,
ಮೈಸೂರು

ಹೇ ಸ್ವಾಮಿಯೇ, ನೀನು ನಿಜವಾಗಿಯೂ ಒಬ್ಬನಾಗಿದ್ದೀಯೆ ಆದರೆ ನಾನಾ ಮಾತ್ರಕ್ಕೆ ಅನೇಕವಾಗಿ ತೋರುತ್ತೀಯೆ ನೀನು ಶೈವರಿಂದ 'ಶಿವ' ನೆಂಬುದಾಗಿಯೂ, ವೇದಾಂತಿಗಳಿಂದ 'ಬ್ರಹ್ಮ' ಎಂಬುದಾಗಿಯೂ ವೈಷ್ಣವರಿಂದ 'ವಿಷ್ಣು' ಎಂಬುದಾಗಿಯೂ, ಶಾಕ್ತೇಯರಿಂದ 'ಶಕ್ತಿ' ಎಂಬುದಾಗಿಯೂ, ಬೌದ್ಧರಿಂದ 'ಬುದ್ಧ' ಎಂಬುದಾಗಿಯೂ, ನೈಯಾಯಿಕರಿಂದ 'ಕರ್ತಾ' ಎಂಬುದಾಗಿಯೂ, ಪೂರ್ವಮೀಮಾಂಸಕರಿಂದ 'ಕರ್ಮ' ಎಂಬುದಾಗಿಯೂ, ಜೈನರಿಂದ 'ಅರ್ಹನ್' ಎಂಬುದಾಗಿಯೂ, ಸ್ವಭಾವವಾದಿಗಳಿಂದ 'ಸ್ವಭಾವ' ಎಂಬುದಾಗಿಯೂ, ಮಹಮ್ಮದೀಯರಿಂದ 'ಅಲ್ಲಾ' ಎಂಬುದಾಗಿಯೂ ಕ್ರೈಸ್ತರಿಂದ 'ಗಾಡ್' ಎಂಬುದಾಗಿಯೂ, ಇತರ ಮತೀಯರಿಂದ ಇತರ ಹೆಸರುಗಳಿಂದಲೂ ಪೂಜಿಸಲ್ಪಡುತ್ತೀಯೆ

ಈ ಪ್ರಪಂಚದಲ್ಲಿ ಪ್ರತಿಯೊಬ್ಬನೂ ಸುಖವನ್ನೇ ಅಪೇಕ್ಷಿಸುತ್ತಾನೆ ಆದರೆ ನಾವು ಸಾಧಾರಣವಾಗಿ ಕೆಲವು ಸ್ವಲ್ಪಜನಗಳು ಮಾತ್ರ ಸುಖಿಗಳಾಗಿಯೂ ಇತರರೆಲ್ಲರೂ ದುಃಖಿಗಳಾಗಿಯೂ ಇರುವರು ಏತಕ್ಕೆ ದರೆ ಮಾವಿನ ಬೀಜವನ್ನು ಬಿತ್ತಿದವನು ಮಾವಿನ ಹಣ್ಣನ್ನೂ ಬೇವಿನ ಬೀಜವನ್ನು ಬಿತ್ತಿದವನು ಬೇವಿನ ಹಣ್ಣನ್ನೂ ಹೇಗೆ ಪಡೆಯುತ್ತಾನೋ, ಹಾಗೆ ಹಿಂದಿನ ಜನ್ಮಗಳಲ್ಲಿ ಪುಣ್ಯ ಕೆಲಸಗಳನ್ನು ಮಾಡಿದವರು ಈ ಜನ್ಮದಲ್ಲಿ ಸುಖಿಗಳಾಗಿಯೂ, ಹಿಂದಿನ ಜನ್ಮದಲ್ಲಿ ಪಾಪಕೆಲಸಗಳನ್ನು ಮಾಡಿದವರು ಈ ಜನ್ಮದಲ್ಲಿ ದುಃಖಿಗಳಾಗಿಯೂ ಇರುತ್ತಾರೆ ಆದುದರಿಂದ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ನಾವು ಸುಖಿಗಳಾಗಬೇಕಾದರೆ ನಾವು ಯಾವಾಗಲೂ ಪುಣ್ಯಕೆಲಸಗಳನ್ನೇ ಮಾಡುತಿರಬೇಕೆಂಬುದಾಗಿ ಹೇಳಬೇಕಾಗಿಲ್ಲ ಹೇ ಸ್ವಾಮಿಯೇ ನಾವು ಯಾವಾಗಲೂ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಶಕ್ತಿಯನ್ನು ದಯಪಾಲಿಸು

ಒಬ್ಬ ನೌಕರನು ಕೆಲಸವನ್ನು ಮಾಡಿದರೆ ಅವನ ಕೆಲಸಕ್ಕೆ ಅವನಿಗೆ ಸಂಬಳವನ್ನು ಕೊಡುವ ಅವನ ಯಜಮಾನನು ಸಂಬಳವನ್ನು ಕೊಡುತ್ತಾನೆ ಒಬ್ಬನು ಕಳ್ಳತನವನ್ನು ಮಾಡಿದರೆ ಅವನ ಕಳ್ಳತನವೇ ಅವನಿಗೆ ಶಿಕ್ಷೆಯನ್ನು ಕೊಡದೆ ಒಬ್ಬ ನ್ಯಾಯಾಧಿಪತಿಯು ಅವನಿಗೆ ಶಿಕ್ಷೆಯನ್ನು ಕೊಡುತ್ತಾನೆ ಇದರಂತೆ ನಾವು ಈ ಜನ್ಮದಲ್ಲಿ ಅನುಭವಿಸುತ್ತಿರುವ ಸುಖದುಃಖಗಳಿಗೆ ನಾವು ಹಿಂದಿನ ಜನ್ಮಗಳಲ್ಲಿ ಮಾಡಿದ ಪುಣ್ಯಪಾಪಕರ್ಮಗಳೇ ಕಾರಣವಾದರೂ ನಮಗೆ ಸುಖದುಃಖಗಳನ್ನು ಕೊಡುವುದಕ್ಕೆ ಒಬ್ಬ ಚೇತನನ ಆವಶ್ಯಕತೆ ಇರುವುದು ಇದೂ ಅಲ್ಲದೆ ಇಂತಹ ಅಪಾರವೂ ವಿಚಿತ್ರವೂ ಆದ ಪ್ರಪಂಚವು ಯಾವ ಮನುಷ್ಯನಿಂದಲೂ ಸೃಷ್ಟಿಸಲ್ಪಡುವುದಕ್ಕೆ ಸಾಧ್ಯವಲ್ಲದ್ದರಿಂದ ಸರ್ವಜ್ಞನೂ, ಸರ್ವಶಕ್ತನೂ ಆದ ಒಬ್ಬ ಚೇತನನೇ ಈ ಪ್ರಪಂಚವನ್ನು ಸೃಷ್ಟಿಸಿರಬೇಕು ಹೇ ಸ್ವಾಮಿಯೇ! ಆ ಚೇತನನೇ ನೀನಾಗಿರುತ್ತೀಯೆ

ಈ ಪ್ರಪಂಚದಲ್ಲಿ ಅನೇಕ ಮತಗಳಿರುತ್ತವೆ ಆ ಎಲ್ಲಾ ಮತಗಳಿಗೂ ನೀನೊಬ್ಬನೇ ದೇವರಾಗಿರುತ್ತೀಯೆ ಏತಕ್ಕೆಂದರೆ ಪ್ರತಿಯೊಂದು ಮತೀಯರೂ ತಮ್ಮ ದೇವರೇ ಪ್ರಪಂಚಕ್ಕೆಲ್ಲಾ ದೇವರು ಎಂಬುದಾಗಿ ಸಮರ್ಥಿಸುತ್ತಾರೆ ಇದೂ ಅಲ್ಲದೆ ಇಬ್ಬರು ಅಥವಾ ಹೆಚ್ಚಾಗಿ ದೇವರುಗಳಿದ್ದಪಕ್ಷದಲ್ಲಿ ಅನೇಕ ಮತೀಯರು ಪರಸ್ಪರ ವ್ಯಾಜ್ಯವಾಡುವಂತೆ ದೇವರುಗಳೂ ತಮ್ಮೊಳಗೆ ವ್ಯಾಜ್ಯಮಾಡಿ ಒಬ್ಬ ದೇವರು ಪ್ರಪಂಚವನ್ನು ಸೃಷ್ಟಿಮಾಡಿದರೆ ಇನ್ನೊಬ್ಬ ದೇವರು ಪ್ರಳಯವನ್ನೂ, ಇನ್ನೊಬ್ಬದೇವರು ಪ್ರಳಯವನ್ನು ಮಾಡಿದರೆ ಮತ್ತೊಬ್ಬ ದೇವರು ಸೃಷ್ಟಿಯನ್ನೂ ಮಾಡುತ್ತಿದ್ದು, ಪ್ರಪಂಚದಲ್ಲಿ ಬಹಳ ಅನರ್ಥವಾಗುತ್ತಿತ್ತು. ಆದುದರಿಂದ ಹೇ ಸ್ವಾಮಿಯೇ, ಎಲ್ಲಾ ಮತಗಳಿಗೂ ನೀನೊಬ್ಬನೇ ದೇವರಾಗಿದ್ದೀಯೆ.

ಅನೇಕ ಮತಗಳ ಅನುಯಾಯಿಗಳು ನಿನ್ನನ್ನು ಬೇರೆ ಬೇರೆ ವಿಧವಾದ ರೂಪಗಳಿಂದ ಭಾವಿಸಿ ನಿನ್ನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ನೀನು ನಿರಾಕಾರನಾಗಿದ್ದೀಯೆ ಹತ್ತು ಜನಗಳು ಹತ್ತು ಬೇರೆ ಬೇರೆ ವಿಧವಾದ ಆಕಾರಗಳುಳ್ಳ ಪಾತ್ರೆಗಳನ್ನು ನೀರನ್ನು ತರುವುದಕ್ಕಾಗಿ ನದಿಗೆ ತೆಗೆದುಕೊಂಡು ಹೋದರೆ ನದಿಯಲ್ಲಿರತಕ್ಕ ನೀರಿಗೆ ಯಾವ ಆಕಾರವೂ ಇಲ್ಲದೇ ಇದ್ದರೂ ಅದು ಆಯಾಯ ಪಾತ್ರೆಗಳ ಆಕಾರವನ್ನು ಹೊಂದಿ ಅವರವರ ಕೆಲಸಕ್ಕೆ ಉಪಯೋಗವಾಗುತ್ತದೆ ಇದರಂತೆ ಒಬ್ಬ ಭಕ್ತನು ತನ್ನ ಮತದ ಪ್ರಕಾರ ನೀನು ಯಾವುದೋ ಒಂದು ರೂಪದಿಂದ ಇರುವೆಯೆಂದು ಭಾವಿಸಿದರೆ ನೀನು ನಿರಾಕಾರನಾಗಿದ್ದರೂ ಅದೇ ರೂಪವನ್ನು ತಾಳಿ ಅದೇ ರೂಪದಿಂದಲೇ ಅವನ ಇಷ್ಟಾರ್ಥವನ್ನು ಪೂರ್ಣಗೊಳಿಸುತ್ತೀಯೆ

ಎಲ್ಲಾ ಮತಗಳ ಸ್ಥಾಪಕನೂ ನೀನೇ ಆಗಿರುತ್ತೀಯೆ ಏತಕ್ಕೆಂದರೆ ಪ್ರತಿಯೊಂದು ಮತಕ್ಕೂ ಒಬ್ಬ ಸ್ಥಾಪಕನುಂಟು ಆ ಮತಸ್ಥಾಪಕನು ನಿನ್ನ ಅವತಾರವಾಗಿದ್ದುದರಿಂದಲೇ ಅವನ ಮತಕ್ಕೆ ಸಹಸ್ರಾರು ಮತ್ತು ಲಕ್ಷಾಂತರ ಜನಗಳು ಸೇರಿದರು ನಿನ್ನ ಅವತಾರವೆಂದರೆ ನೀನೇ ಪರಲೋಕದಿಂದ ಈ ಲೋಕಕ್ಕೆ ಮನುಷ್ಯ ರೂಪದಿಂದ ಬಂದಿದ್ದೆಯೆಂದು ಅರ್ಥವಲ್ಲ ಆದರೆ ಒಬ್ಬ ಮಹಾಪುರುಷನಲ್ಲಿ ನಿನ್ನ ವಿಶೇಷಾಂಶವು ಸೇರಿತ್ತು ಎಂಬುದಾಗಿ ಅರ್ಥ ಆದಕಾರಣ ನೀನೇನು ಮಹಾಪುರುಷರುಗಳ ಮೂಲಕವಾಗಿ ಎಲ್ಲಾ ಮತಗಳನ್ನೂ ಸ್ಥಾಪಿಸಿ ಆಯಾಯ ಕಾಲ ಆಯಾಯ ದೇಶ, ಆಯಾಯ ಸಂದರ್ಭ ಮತ್ತು ಆಯಾಯ ಜನಗಳ ಸಂಸ್ಕೃತಿಗಳಿಗೆ ಅನುಸಾರವಾಗಿ ಒಂದೇ ತತ್ವವನ್ನು ಅನೇಕ ವಿಧವಾಗಿ ಅವರವರ ದೇಶಭಾಷೆಗಳಿಂದ ಬೋಧಿಸಿರುತ್ತೀಯೆ ಎಲ್ಲಾ ಮತಗಳ ಸಾಧಾರಣ ತತ್ವವು "ಒಳ್ಳೆಯದನ್ನು ಮಾಡು ಕೆಟ್ಟದ್ದನ್ನು ಮಾಡಬೇಡ, ದೇವರಲ್ಲಿ ಭಕ್ತಿಯಿಡು" ಎಂಬುದು ಮತ್ತು ಎಲ್ಲಾ ಮತಗಳ ಸಾಧಾರಣ ಗುರಿಯು ದುಃಖಮಿಶ್ರವಲ್ಲದ ನಿತ್ಯವಾದ ಸುಖವನ್ನು ಹೊಂದುವುದೂ ಆಗಿರುತ್ತದೆ ಆದಕಾರಣ ಹೇ ಸ್ವಾಮಿಯೇ ಒಂದು ಮತವು ಕೆಟ್ಟದ್ದಾಗಲೀ ಅಥವಾ ಇನ್ನೊಂದು ಮತಕ್ಕಿಂತ ಕೀಳಾಗಿಯಾಗಲೀ ಇರುವುದಿಲ್ಲ

ಎಲ್ಲಾ ಮತಗಳ ಅನುಯಾಯಿಗಳು ನೀನೂ 'ಸತ್ಯ' ಅಂದರೆ ಯಾವಾಗಲೂ ಬದಲಾವಣೆಯಿಲ್ಲದೆ ಇರತಕ್ಕವನು ಮತ್ತು 'ವ್ಯಾಪಕ'ನು ಅಂದರೆ ಎಲ್ಲೆಲ್ಲಿಯೂ ಇರತಕ್ಕವನು ಎಂಬುದಾಗಿ ಒಪ್ಪುವುದರಿಂದ ಇನ್ನೊಂದು ನಿನ್ನ ಹೊರತಾಗಿ ಸತ್ಯವಾಗಿರತಕ್ಕ ಪದಾರ್ಥವು ಇರುವುದಕ್ಕೆ ಸ್ಥಳವೇ ಇಲ್ಲ ಆದುದರಿಂದ ನೀನು ನಿನ್ನಲ್ಲಿರತಕ್ಕ ಅಘಟನಾಘಟನಶಕ್ತಿಯ ಸಾಮರ್ಥ್ಯದಿಂದ ನೀನೇ ಪ್ರಪಂಚ ಮತ್ತು ಜೀವರುಗಳ ರೂಪನಾಗಿ ತೋರುತ್ತೀಯೆ ಆದುದರಿಂದ ಈ ಕೆಳಗೆ ಹೇಳುವಂತೆ ನೀನು ಪ್ರಪಂಚಕ್ಕಾಗಲೀ ಅಥವಾ ಜೀವರುಗಳಿಗಾಗಲೀ ಭಿನ್ನವಾಗಿರುವುದಿಲ್ಲ

(ಎ) ಒಂದು ಸಿನಿಮಾದಲ್ಲಿ ಪರದೆಯ ಮೇಲೆ ಚಿತ್ರಗಳು ನಿಜವಾಗಿಯೂ, ಸ್ಥಿರವಾಗಿಯೂ ಇರುವಂತೆ ತೋರುತ್ತವೆ ಆದರೆ, ಅವುಗಳು ನಿಜವಾಗಿಯಿಲ್ಲದ ಒಂದು ತೋರಿಕೆಗೆ ಮಾತ್ರ ಇರುತ್ತವೆ. ಏತಕ್ಕೆಂದರೆ ಪರದೆಯನ್ನು ಮುಟ್ಟಿದರೆ ಕೈಗಳಿಗೆ ಚಿತ್ರಗಳು ತೋರುವುದಿಲ್ಲ ಚಿತ್ರಗಳು ಪ್ರತಿ ಕ್ಷಣದಲ್ಲಿಯೂ ಚಲಿಸುವುದರಿಂದ ಅವುಗಳು ಸ್ಥಿರವಾಗಿರುವುದಿಲ್ಲ ಅವುಗಳು ನಿಜವಾಗಿಯೂ ಸ್ಥಿರವಾಗಿಯೂ ಇರುವಂತೆ ತೋರುವುದಕ್ಕೆ ಅವುಗಳಿಗೆ ಆಧಾರವಾಗಿರತಕ್ಕ ಪರದೆಯು ನಿಜವೂ, ಸ್ಥಿರವೂ ಆಗಿರುವುದೇ ಕಾರಣವಾಗಿರುತ್ತದೆ ಇದರಂತೆ ದೇಹಾದಿ ಪ್ರಪಂಚವು ಸೃಷ್ಟಿಗೆ ಪೂರ್ವದಲ್ಲಿಯಾಗಲೀ, ಪ್ರಳಯಾನಂತರದಲ್ಲೇ ಆಗಲೀ ಇಲ್ಲದೇ ಇರುವುದರಿಂದ ಅಸತ್ಯವೂ ಮತ್ತು ಭೌತಿಕಶಾಸ್ತ್ರಜ್ಞರು ಪರೀಕ್ಷೆಮಾಡಿ ಸಿದ್ಧಾಂತಮಾಡಿರುವಂತೆ ಪ್ರತಿಕ್ಷಣದಲ್ಲಿಯೂ ಬದಲಾವಣೆಯನ್ನು ಹೊಂದುತ್ತಿರುವುದರಿಂದ ಅನಿತ್ಯವೂ ಆಗಿರುತ್ತದೆ ಆದರೆ ಈ ದೇಹಾದಿಪ್ರಪಂಚಕ್ಕೆ ಆಧಾರವಾಗಿರತಕ್ಕ ದೇವರು ಸತ್ಯನೂ ಮತ್ತು ನಿತ್ಯನೂ ಆಗಿರುವುದರಿಂದ ಈ ಪ್ರಪಂಚವು ಸತ್ಯವೂ ಮತ್ತು ನಿತ್ಯವೂ ಆಗಿರುವಂತೆ ತೋರುತ್ತದೆ

(ಬಿ) ಒಂದು ಸಹಸ್ರ ನೀರು ತುಂಬಿದ ಗಡಿಗೆಗಳನ್ನು ಸೂರ್ಯನ ಎದುರಿನಲ್ಲಿ ಇಟ್ಟರೆ ಸೂರ್ಯನು ಪ್ರತಿಯೊಂದು ಗಡಿಗೆಯ ನೀರಿನಲ್ಲಿಯೂ ಪ್ರತಿಬಿಂಬಿಸುವುದರಿಂದ ಆ ಗಡಿಗೆಯಲ್ಲಿ ನೀರಿರುವ ವರೆಗೂ ಪ್ರತಿಬಿಂಬವು ಇರುತ್ತದೆ ಪ್ರತಿಯೊಂದು ಗಡಿಗೆಯ ನೀರಿನಲ್ಲಿರತಕ್ಕ ಪ್ರತಿಬಿಂಬವು ಸೂರ್ಯನಿಗಿಂತ ಅನ್ಯನಲ್ಲ. ಅಂದರೆ ಗಡಿಗೆಯಲ್ಲಿ ನೀರಿರುವುದರಿಂದ ಸೂರ್ಯನು ಪ್ರತಿಯೊಂದು ಗಡಿಗೆಯ ನೀರಿನಲ್ಲಿಯೂ ತಾನೇ ಪ್ರತಿಬಿಂಬರೂಪನಾಗಿ ತೋರುತ್ತಾನೆ ಇದರಂತೆ ಈ ಪ್ರಪಂಚದಲ್ಲಿರತಕ್ಕ ಪ್ರತಿಯೊಂದು ಪ್ರಾಣಿಗೂ ಗಡಿಗೆಯಂತೆ ಒಂದು ಸ್ಥೂಲದೇಹವಿರುತ್ತದೆ ಗಡಿಗೆಯಲ್ಲಿ ನೀರಿರುವಂತೆ ಪ್ರತಿಯೊಂದು ಸ್ಥೂಲದೇಹದಲ್ಲಿಯೂ ಅಂತಃಕರಣವಿರುತ್ತದೆ ಹೇಗೆ ಸೂರ್ಯನು ಪ್ರತಿಯೊಂದು ಗಡಿಗೆಯಲ್ಲಿರತಕ್ಕ ನೀರಿನಲ್ಲಿಯೂ ಪ್ರತಿಬಿಂಬಿಸುತ್ತಾನೋ ಅದರಂತೆ ಎಲ್ಲಾ ಕಡೆಯೂ ಪೂರ್ಣವಾಗಿರತಕ್ಕ ದೇವರೂ ಪ್ರತಿಯೊಂದು ಅಂತಃಕರಣದಲ್ಲಿಯೂ ಪ್ರತಿಬಿಂಬಿಸಿರುತ್ತಾನೆ ಅಂತಃಕರಣದಲ್ಲಿರತಕ್ಕ ದೇವರ ಪ್ರತಿಬಿಂಬವೇ ಜೀವಾತ್ಮನಾಗಿರುತ್ತದೆ ಸೂರ್ಯನ ಪ್ರತಿಬಿಂಬವು ಸೂರ್ಯನಿಗೆ ಹೇಗೆ ಅನ್ಯವಲ್ಲವೋ ಜೀವಾತ್ಮನೂ ಕೂಡ ದೇವರಿಗೆ ಅನ್ಯವಲ್ಲ

ಪ್ರತಿಯೊಂದು ಮತದ ಅನುಯಾಯಿಗಳೂ ತಾವು ಮತ್ತು ಇತರ ಪ್ರಾಣಿಗಳು ನಿನ್ನ ಸ್ವರೂಪವೇ ಎಂಬುದಾಗಿ ತಿಳಿದರೆ ಅವರು ತಮಗೂ ಮತ್ತು ಇತರ ಪ್ರಾಣಿಗಳಿಗೂ ಇರತಕ್ಕ ಸಹಜವಾದ ಸಂಬಂಧವನ್ನು ತಿಳಿದು ತಮ್ಮ ಮತೀಯರು ಅನ್ಯಮತೀಯರು? ಎಂಬ ಭೇದವಿಲ್ಲದೆ ಇತರರ ಸುಖವೇ ತಮ್ಮ ಸುಖ, ಮತ್ತು ಇತರರ ದುಃಖವೇ ತಮ್ಮ ದುಃಖ ಎಂಬುದಾಗಿ ತಿಳಿಯುತ್ತಾರೆ.

ಆದಕಾರಣ ಪ್ರತಿಯೊಂದು ಮತದ ಅನುಯಾಯಿಗಳು ತಮ್ಮ ಮತೀಯರು ಮತ್ತು ಇತರ ಮತೀಯರು ಎಂಬ ಭೇದವನ್ನು ಮಾಡದೆ ಯಾವ ಕಾರಣದಿಂದಲಾದರೂ ಯಾವಾಗಲಾದರೂ ಯಾರಿಗಾದರೂ ಕೇಡನ್ನು ಮನಸ್ಸಿನಲ್ಲಿಯಾದರೂ ಯೋಚಿಸದೆ ತಮ್ಮ ಕೈಯಿಂದಾದ ಮಟ್ಟಿಗೆ ಕಷ್ಟದಲ್ಲಿರುವವರಿಗೆ ಸಹಾಯವನ್ನು ಮಾಡತಕ್ಕದ್ದಲ್ಲದೆ, ಒಂದು ಕುಟುಂಬದಲ್ಲಿರತಕ್ಕ ಜನಗಳು ಮತ್ತು ಒಂದು ರಾಜ್ಯದಲ್ಲಿರತಕ್ಕ ಪ್ರಜೆಗಳು ತಮ್ಮನ್ನು ಕಾಪಾಡತಕ್ಕ ಕುಟುಂಬದ ಯಜಮಾನನಲ್ಲಿಯೂ ಮತ್ತು ರಾಜನಲ್ಲಿಯೂ ಅನುಕ್ರಮವಾಗಿ ಹೇಗೆ ಕೃತಜ್ಞತೆಯಿಂದ ಪೂಜ್ಯಬುದ್ಧಿಯುಳ್ಳವರಾಗಿರುತ್ತಾರೋ ಹಾಗೆ ನೀನು ನಮ್ಮ ಭೋಗಕ್ಕೋಸ್ಕರ ಈ ಪ್ರಪಂಚವನ್ನು ಸೃಷ್ಟಿಸಿರುವುದರಿಂದಲೂ, ಜೀವರಿಗೆ ಅವರ ಪೂರ್ವಕರ್ಮಗಳಿಗನುಸಾರವಾಗಿ ಫಲಗಳನ್ನು ಕೊಟ್ಟು ರಕ್ಷಿಸುತ್ತಿರುವುದರಿಂದಲೂ, ನಿನ್ನಲ್ಲಿ ಕೃತಜ್ಞತೆಯಿಂದ ಪೂಜ್ಯಬುದ್ಧಿಯನ್ನಿಟ್ಟು ನಿನ್ನನ್ನು ಸದಾ ಧ್ಯಾನಮಾಡುವುದು ಕರ್ತವ್ಯವಾಗಿರುತ್ತದೆ

ಆದರೆ ಈ ಪ್ರಪಂಚದಲ್ಲಿ ಬಹು ಜನಗಳು ಸ್ವಾರ್ಥತೆಯಿಂದ ಇತರರಿಗೆ ಕಷ್ಟನಷ್ಟಗಳನ್ನುಂಟುಮಾಡುವುದರಲ್ಲೇ ನಿರತರಾಗಿರುವರಲ್ಲದೆ, ಹಿಂದೆ ಕಾಪಾಡಿದವನೂ ಈಗ ಕಾಪಾಡುತ್ತಿರುವವನೂ ಮತ್ತು ಮುಂದೆ ಕಾಪಾಡುವವನೂ ಆದ ನಿನ್ನನ್ನು ಸ್ವಪ್ನದಲ್ಲಿಯಾದರೂ ಸ್ಮರಿಸುವುದಿಲ್ಲ ಯಾವ ಮತದ ಸ್ಥಾಪಕನೂ ಕೂಡ ತನ್ನ ಮತಾನುಯಾಯಿಗಳು ಇತರ ಮತಾನುಯಾಯಿಗಳನ್ನು ದ್ವೇಷಿಸಿ ಹಿಂಸಿಸಬೇಕೆಂದು ಹೇಳದೇ ಇದ್ದರೂ, ಕೆಲವು ಮತಗಳ ಅನುಯಾಯಿಗಳ ಪೈಕಿ ಕೆಲವರು ತಮ್ಮ ರಾಜಕೀಯಪ್ರಯೋಜನಕ್ಕೋಸ್ಕರ ತಮ್ಮ ಮತಾನುಯಾಯಿಗಳು ಇತರ ಮತಾನುಯಾಯಿಗಳನ್ನೂ ದ್ವೇಷಿಸುವಂತೆ ಮಾಡುತ್ತಾರೆ ಜನಗಳಲ್ಲಿರತಕ್ಕ ಈ ವಿಧವಾದ ಅಧರ್ಮವು ಮತ್ತು ಪರಸ್ಪರ ಮತದ್ವೇಷವು ಘೋರವಾದ ಯುದ್ಧ, ಕೋಮುವಾರು ಗಲಭೆ, ದುರ್ಭಿಕ್ಷ, ಸಾಂಕ್ರಾಮಿಕರೋಗ ಇವೇ ಮುಂತಾದವುಗಳಿಗೆ ಕಾರಣವಾಗಿ ಈ ಪ್ರಪಂಚದ ಎಲ್ಲಾ ಭಾಗದಲ್ಲಿರುವ ಜನಗಳು ಅತ್ಯಂತ ಕಷ್ಟಕ್ಕೆ ಗುರಿಯಾಗಿರುತ್ತಾರೆ

ಆದುದರಿಂದ ಸ್ತ್ರೀ ಅಥವಾ ಪುರುಷ ಎಂಬ ವ್ಯತ್ಯಾಸವಿಲ್ಲದೆ ಪ್ರತಿಯೊಬ್ಬರೂ ತನ್ನ ಮತವನ್ನು ಬಿಡದೆ ತನ್ನ ಮತಧರ್ಮಗಳನ್ನು ಕಟ್ಟುನಿಟ್ಟಾಗಿ ಆಚರಿಸಿ, ತಮಗೆ ಇಷ್ಟವಾದ ಆಕಾರದಿಂದ ನಿನ್ನ ಪೂಜೆ ಮತ್ತು ಉಪಾಸನೆಯನ್ನು ಮಾಡತಕ್ಕದ್ದು ಜನಗಳು ಎಲ್ಲಾ ಪ್ರಾಣಿಗಳನ್ನೂ ತಮ್ಮಂತೆಯೇ ಭಾವಿಸಿ ಯಾವ ಪ್ರಾಣಿಯನ್ನೂ ಹಿಂಸಿಸದೆ ತಮ್ಮ ಕೈಯ್ಯಿಂದಾದಮಟ್ಟಿಗೆ ಕಷ್ಟದಲ್ಲಿರತಕ್ಕವರಿಗೆ ಕೇವಲ ಕರುಣೆಯಿಂದ ಸಹಾಯವನ್ನು ಮಾಡತಕ್ಕದ್ದು. ಅವರು ಈರೀತಿಯಾಗಿ ಮಾಡಿದರೆ ಈ ಪ್ರಪಂಚದಲ್ಲಿ ಅಧರ್ಮವು ಹೋಗಿ ಧರ್ಮವು ಉಂಟಾಗುತ್ತದೆ. ಇದರಿಂದ ಮೇಲೆ ಹೇಳಿದ ಘೋರವಾದ ಯುದ್ಧವೇ ಮುಂತಾದ ಮಹಾ ದುಃಖಗಳು

ಹೋಗಿ ಎಲ್ಲರೂ ಈ ಲೋಕದಲ್ಲಿ ಸುಖವಾಗಿರುವುದಲ್ಲದೆ ಈ ಲೋಕವನ್ನು ಬಿಟ್ಟನಂತರವೂ ದುಃಖವಿಲ್ಲದ ಮತ್ತು ಶಾಶ್ವತವಾದ ಸುಖವನ್ನು ನಿನ್ನ ಕೃಪೆಯಿಂದ ಪಡೆಯುತ್ತಾರೆ ಈ ಕಲಿಯುಗದಲ್ಲಿ ನಿನ್ನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ಅತ್ಯಂತ ಸುಲಭವಾಗಿರತಕ್ಕ ಮಾರ್ಗವೆಂದರೆ ಒಂದೇ ಮನಸ್ಸಿನಿಂದ ಯಾವಾಗಲೂ ನಿನ್ನ ನಾಮವನ್ನು ಉಚ್ಚಾರಣೆಮಾಡತಕ್ಕದ್ದಾಗಿರುತ್ತದೆ

ಹೇ ಜಗದೀಶ್ವರನೇ, ಎಲ್ಲರೂ ಧರ್ಮನಿರತರಾಗಿ ಮೇಲ್ಕಂಡ ಎಲ್ಲಾ ವಿಧವಾದ ದುಃಖಗಳಿಂದ ಬಿಡುಗಡೆ ಹೊಂದಿ ಸುಖವಾಗಿರುವಂತೆ ಮಾಡು

ಓಂ ತತ್ಸತ್

ವರ್ತಮಾನಸಂಗ್ರಹ

ದೆಹಲಿಗೆ ತ್ರಿಪುರಸಂಸ್ಥಾನದ ಮಹಾರಾಣಿಯವರ ಆಗಮನ

ಭಾರತ ಸರ್ಕಾರದೊಂದಿಗೆ ಸಮಾಲೋಚನೆ

ತ್ರಿಪುರ ಸಂಸ್ಥಾನದ ಮಹಾರಾಣಿಯವರು ಮತ್ತು ಮುಖ್ಯ ಮಂತ್ರಿ ಮಿ|| ಎಸ್ ವಿ ಮುಖರ್ಜಿಯವರು ತ್ರಿಪುರ ಸಂಸ್ಥಾನದಲ್ಲುಂಟಾಗಿರುವ ಬಿಕ್ಕಟ್ಟಿನ ವಿಚಾರದ ಬಗ್ಗೆ ಇಂಡಿಯ ಸರ್ಕಾರದೊಂದಿಗೆ ಮಾತುಕತೆಗಳನ್ನು ನಡೆಸಲು ದೆಹಲಿಗೆ ಬಂದಿರುತ್ತಾರೆ

ಪಾಕಿಸ್ಥಾನ್ ವಿಮಾನದಲ್ಲಿ ಶಸ್ತ್ರಾಸ್ತ್ರಗಳು

ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳು ತುಂಬಿದ್ದ ಪಾಕಿಸ್ಥಾನದ ವಿಮಾನವೊಂದು ಕಾನ್‌ಪುರ ವಿಮಾನ ನಿಲ್ದಾಣದಲ್ಲಿ ಬಲಾತ್ಕಾರವಾಗಿ ಇಳಿಯಬೇಕಾಯಿತು ವಿಮಾನದಲ್ಲಿದ್ದ ರಿವಾಲ್ವರುಗಳನ್ನು ಮತ್ತು ಮದ್ದು ಗುಂಡುಗಳನ್ನು ಪೋಲೀಸಿನವರು ಶೋಧಿಸಿ ವಶಪಡಿಸಿಕೊಂಡರು

ಕಾಶ್ಮೀರಕ್ಕೆ ಪಂಡಿತ ನೆಹರೂ ಅವರ ಭೇಟಿ

೧೨ ನೆಯ ತಾರೀಖಿನ ದಿವಸ ಶ್ರೀನಗರದಿಂದ ಪಂ|| ಜವಹರ್‌ಲಾಲ್ ನೆಹರೂರವರೂ, ಷೇಕ್ ಅಬ್ದುಲ್ಲಾರವರೂ ಶತ್ರುದಾಳಿಗೀಡಾಗಿ ನೆಲಸಮವಾಗಿರುವ "ಬಾರಮುಲ' ನಗರಕ್ಕೆ ತೆರಳಿದರು ಬಾರಮುಲ ನಗರದ ಬಂದೂ ಪ್ರದೇಶವೊಂದಕ್ಕೆ ಅವರು ಭೇಟಿ ಇತ್ತಾಗ ಅನೇಕಜನ ಮಹಿಳೆಯರು ಪಂ|| ನೆಹರೂ ಮತ್ತು ಷೇಕ್ ಅಬ್ದುಲ್ಲಾರವರನ್ನು ನೋಡಿ ಹೊರಸೂಸುತ್ತಿದ್ದ ದುಃಖವನ್ನು ಸಹಿಸಲಾರದೆ ಕಣ್ಣೀರು ಸುರಿಸಿದರು

"ಪ್ರತಿ ಹಿಂದೂ, ಮುಸ್ಲಿಂ, ಸಿಕ್ಕರ ಪುನರ್ವಸತಿಗಾಗಿ ಪ್ರಪಂಚದಲ್ಲೆಲ್ಲಾ ಯಾಚನೆಮಾಡಲು ನಾನು ಸಿದ್ಧ! ಜನಜೀವನವು ಎಂದಿನಂತೆ ಸುಗಮವಾಗಿ ನಡೆಯ ಲಾರಂಭವಾಗುವವರೆಗೂ ನನಗೆ ವಿಶ್ರಾಂತಿಯಿಲ್ಲ"—ಎಂಬುದಾಗಿ ಷೇಕ್ ಅಬ್ದುಲ್ಲಾರವರು ಬಾರಮುಲ ನಗರದಲ್ಲಿ ನೆರೆದಿದ್ದ ಸಭೆಯಲ್ಲಿ ಭಾಷಣಮಾಡುತ್ತಾ ತಿಳಿಸಿದರು ಪಂ|| ನೆಹ್ರೂರವರು ಭಾಷಣ ಮಾಡುತ್ತಾ ಕಾಶ್ಮೀರದ ರಕ್ಷಣೆಗಾಗಿ ಭಾರತ ಪಡೆಗಳು ಎಂತಹ ತ್ಯಾಗವನ್ನಾದರೂ ಮಾಡಲು ಸಿದ್ಧವಾಗಿವೆಯೆಂದೂ, ಜನರು ದುಃಖಪಡಬಾರದೆಂದೂ ತಿಳಿಸಿದರು

ಬಾರಮುಲ-ಊರಿ ರಸ್ತೆಯಲ್ಲಿ ಭಾರತ ಸೇನೆಯ ಮುಂದೋಟ

ಕಾಶ್ಮೀರದ ಬಾರಮುಲ-ಊರಿ ರಸ್ತೆಯಲ್ಲಿ ತಡೆಯಿಲ್ಲದೆ ಮುಂದೆ ಸಾಗುತ್ತಿರುವ ಭಾರತ ಸೇನೆಯು 'ಮಹೋರ' ವನ್ನು ವಶಪಡಿಸಿಕೊಂಡಿತೆಂದು ಭಾರತ ಸರ್ಕಾರದ ಪ್ರಕಟನೆಯೊಂದರಿಂದ ತಿಳಿದುಬಂದಿದೆ. ಕಾಶ್ಮೀರದ ಬಹು ಭಾಗಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿದ್ದ ಮಹೋರ ವಿದ್ಯುಚ್ಛಕ್ತಿ ಉತ್ಪನ್ನ ಕೇಂದ್ರಕ್ಕೆ ದಾಳಿಕಾರರು ಬಹಳಮಟ್ಟಿಗೆ ನಷ್ಟ ಉಂಟುಮಾಡಿರುತ್ತಾರೆ ಮಹೋರಕ್ಕೆ ಪೂರ್ವಭಾಗದಲ್ಲಿರುವ ಅತ್ಯಂತ ಭಾರಿಯಾದ ಸೇತುವೆಯೊಂದನ್ನು ದಾಳಿಕಾರರು ಧ್ವಂಸ ಮಾಡಿರುತ್ತಾರೆ ಈ ಸೇತುವೆಯ ಬಳಿ ಭಾರತದ ಪಡೆಗಳು ಒಂದಾಗ ಸುತ್ತಮುತ್ತಲ ಬೆಟ್ಟಗುಡ್ಡಗಳಲ್ಲಿ ತಲೆ ಮರೆಸಿಕೊಂಡಿದ್ದ ಶತ್ರುಗಳು ಗುಂಡುಹಾರಿಸಲುಪಕ್ರಮಿಸಿದರು ಭಾರತದ ಭೂಸೇನೆಗೆ ವೈಮಾನಿಕ ಪಡೆಗಳು ಸಹಾಯ ನೀಡಿದವು

ಜಮ್ಮುವಿನಲ್ಲಿ ಕಾರ್ಯಾಚರಣೆ

ಭಾರತದ ಸೈನಿಕರು ಜಮ್ಮು ಪ್ರಾಂತದಲ್ಲಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದಾರೆ ಚದುರಿ ಹೋಗಿರುವ ಕಾಶ್ಮೀರದ ಸೈನ್ಯ ಪಡೆಗಳಿಗೆ ವಿಮಾನಗಳ ಮೂಲಕ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ

ಹೈದರಾಬಾದಿಗೆ ಸರ್ದಾರ ಪಟೇಲರ ಎಚ್ಚರಿಕೆ

ಭಾರತದ ಉಪಪ್ರಧಾನರಾದ ಸರ್ದಾರ್ ಪಟೇಲರು ರಾಜಕೋಟೆಯಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತಾ—ಜುನಾಗಢದ ದಿವಾನರು ಆ ನವಾಬರ ಸಮ್ಮತಿ ಪಡೆದು, ಪ್ರಜಾಭಿಪ್ರಾಯವನ್ನೂ ಅರಿತು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿರುವರೆಂದು ತಿಳಿಸಿದರು ಕಾಶ್ಮೀರದ ವಿಚಾರದಲ್ಲಿ ಪಾಕಿಸ್ಥಾನವು ಅನುಸರಿಸಿದ ನೀತಿಯು ತಲೆ ತಗ್ಗಿಸುವಂತಿದೆಯೆಂದು ಅವರು ಅಭಿಪ್ರಾಯಪಟ್ಟರು ಜುನಾಗಢ, ಕಾಶ್ಮೀರ ಮತ್ತು ಹೈದರಾಬಾದ್‌ಗಳ ಭವಿಷ್ಯವನ್ನು ನಿರ್ಧರಿಸುವವರು ಪ್ರಜೆಗಳು ಹೈದರಾಬಾದಿಗೆ ವಿವೇಕೋದಯವಾಗದಿದ್ದರೆ ಜುನಾಗಢದ ಗತಿಯೇ ಅದಕ್ಕೂ ಪ್ರಾಪ್ತವಾಗುವುದು ಖಂಡಿತವೆಂದು ಸರ್ದಾರರು ಹೈದರಾಬಾದನ್ನು ಎಚ್ಚರಿಸಿದ್ದಾರೆ

ಸುಪ್ರೀಂ ದಂಡನಾಯಕರ ಕಚೇರಿ ರದ್ದು

ಭಾರತ ಮತ್ತು ಪಾಕಿಸ್ಥಾನ್ ಡೊಮಿನಿಯನ್‌ಗಳಿಗೆ ಪರಸ್ಪರ ಸಹಕಾರ ಸೌಹಾರ್ದವಿಲ್ಲದುದರಿಂದ ಈ ತಿಂಗಳು ೩೦ ರಿಂದ ಸುಪ್ರೀಂ ದಂಡನಾಯಕರ ಕಚೇರಿಯನ್ನು ರದ್ದು ಮಾಡಲು ಬ್ರಿಟಿಷ್ ಸರ್ಕಾರವು ನಿರ್ಧರಿಸಿದೆ ಭಾರತ ಮತ್ತು ಪಾಕಿಸ್ಥಾನ್‌ಗಳಲ್ಲಿರುವ ಬ್ರಿಟಿಷ್ ಭೂ ಮತ್ತು ವೈಮಾನಿಕ ಸೈನ್ಯದ ಮೇಲ್ವಿಚಾರಣೆಗಾಗಿ ದೆಹಲಿಯಲ್ಲಿ ಒಂದು ಕೇಂದ್ರ ಕಚೇರಿಯನ್ನು ಸ್ಥಾಪಿಸಲಾಗುವುದು ಇದು ಡಿಸೆಂಬರ್ ಅಂತ್ಯದ ವರೆಗೂ ಕೆಲಸ ಮಾಡುವುದು ಜನವರಿಯಿಂದ ಬ್ರಿಟಿಷ್ ಅಧಿಕಾರಿಗಳ ಸೇವೆಯ ಆವಶ್ಯಕತೆ ಇದ್ದರೆ ಭಾರತ ಮತ್ತು ಪಾಕಿಸ್ಥಾನ್ ಡೊಮಿನಿಯನ್‌ಗಳು ಬ್ರಿಟಿಷ್ ಸರ್ಕಾರದೊಂದಿಗೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳಬೇಕಾಗುವುದು

ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿ

ಆಹಾರಪದಾರ್ಥಗಳ ಮೇಲಿನ ಹತೋಟಿಗಳ ವಿಷಯವನ್ನು ನಿರ್ಧರಿಸಲು ಭಾರತ ಸರ್ಕಾರದಿಂದ ನೇಮಿತವಾದ ಆಹಾರ ಪದಾರ್ಥಗಳ ಸಮಿತಿಯು ನವೆಂಬರ್ ೫ ನೇ ತಾ|| ನವದೆಹಲಿಯಲ್ಲಿ ಸೇರಿತ್ತು ಪ್ರಧಾನ ಸಚಿವರಾದ ಶ್ರೀ ಕೆ ಚೆಂಗಲರಾಯರೆಡ್ಡಿಯವರೂ ಆಹಾರ ಇಲಾಖೆಯ ಡೈರೆಕ್ಟರ್ ಆದ ಶ್ರೀ ಗುರುದತ್ ರವರೂ ಸಮಿತಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು.

ಪ್ರಧಾನ ಮಂತ್ರಿಗಳು ಹತೋಟಿಗಳನ್ನು ಕ್ರಮವಾಗಿ ರದ್ದುಗೊಳಿಸಬೇಕೆಂಬ ನೀತಿಗೆ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾ ಮುಖ್ಯವಾದ ಆಹಾರ ಪದಾರ್ಥಗಳ ಮೇಲೆ ೧೯೪೮ ರ ವರೆಗೂ ಹತೋಟಿಗಳನ್ನು ಮುಂದುವರಿಸಬೇಕೆಂದು ತಿಳಿಸಿದರು. ಅಲ್ಲದೆ, ಹೊರಗಿನಿಂದ ಆಹಾರ ವಸ್ತುಗಳನ್ನು ಆಮದು ಮಾಡಲು ತಕ್ಕ ಏರ್ಪಾಟು ಮಾಡಿ, ಆಹಾರವು ತೀರ ಕಡಿಮೆ ಬೀಳುವ ಮೈಸೂರು ಮುಂತಾದ ಪ್ರದೇಶಗಳಿಗೆ ನ್ಯಾಯವೆನಿಸುವ ಮಟ್ಟಿಗಾದರೂ ಅವು ದೊರೆಯುವಂತೆ ಮಾಡಬೇಕೆಂದೂ ಮೈಸೂರಿಗೆ ವರ್ಷಕ್ಕೆ ೧ ಲಕ್ಷ ಟನ್ ಆಹಾರ ಹೊರಗಿನಿಂದ ದೊರೆಯಬೇಕಾಗಿದೆಯೆಂದೂ ತಿಳಿಸಿದರು.

೧ ರೈತರಿಗೆ ತಮ್ಮ ಬೆಳೆಗಳಿಗೆ ಸಾಕಾದಷ್ಟು ಬೆಲೆ ಸಿಗುವಂತೆ ಬೆಲೆಗಳನ್ನು ನಿರ್ಧರಿಸಬೇಕು ೨ ಆಹಾರ ಸರಬರಾಜಿನ ವಿಷಯದಲ್ಲಿ ಕೇಂದ್ರ ಸರ್ಕಾರದವರು ಪ್ರಾಂತ್ಯಗಳಿಗೆ ಕೊಡಬಹುದಾದ ಪರಿಹಾರದಲ್ಲಿ ಮೈಸೂರನ್ನು ಗಣನೆಗೆ ತೆಗೆದುಕೊಳ್ಳಬೇಕು

ಮೈಸೂರಿನಲ್ಲಿ ಈಗ ೧೫ ದಿವಸಗಳಿಗೆ ಆಗುವಷ್ಟು ಆಹಾರ ಪದಾರ್ಥಗಳು ಮಾತ್ರ ಇವೆ ಅಕ್ಟೋಬರ್ ತಿಂಗಳಲ್ಲಿ ಬರಬೇಕಾಗಿದ್ದ ೧೦,೪೫೦ ಟನ್‌ಗಳಷ್ಟು ಆಹಾರ ಪದಾರ್ಥಗಳಲ್ಲಿ ೧,೮೫೨ ಟನ್ ಗೋಧಿ ಬಂದಿದೆ ಮತ್ತು ಮದರಾಸ್ ಪ್ರಾಂತದಿಂದ ೨೦೦ ಟನ್ ಅಕ್ಕಿಯನ್ನು ಸಾಲವಾಗಿ ತೆಗೆದುಕೊಳ್ಳಲಾಗಿದೆ ಅಕ್ಟೋಬರ್ ತಿಂಗಳಲ್ಲಿ ಬಾಕಿ ಉಳಿದಿರುವ ೧,೧೦೦ ಟನ್ ಗೋಧಿ ೩,೪೫೦ ಟನ್ ಮಿಲೊ, ೪೦೨೦ ಟನ್ ಅಕ್ಕಿ ಮದರಾಸ್ ಮತ್ತು ಮರ್ಮಗೋವಾ ಬಂದರುಗಳಿಂದ ಈಗ ಬರುತ್ತಿದೆ ಮದರಾಸಿನ ಅಧಿಕಾರಿಗಳು ಅಕ್ಕಿಯ ಸಾಲವನ್ನು ಹಿಂತಿರುಗಿ ಕೊಡುವ ವಿಷಯದಲ್ಲಿ ಸ್ವಲ್ಪ ಕಾಲಾವಧಿಯನ್ನು ಕೊಟ್ಟಿದ್ದಾರೆ.

ಈಗಾಗಲೆ ಮರ್ಮಗೋವಾ ಬಂದರಿಗೆ ೨೦೦೦ ಟನ್ ಮಿಲೊ, ೩೦೦೦ ಟನ್ ಅಕ್ಕಿ ಬಂದು ತಲುಪಿದೆ ೯೭,೫೦ ಟನ್ ಮಿಲೊ ಮತ್ತು ೪,೦೨೦ ಟನ್ ಗೋಧಿ ಈ ತಿಂಗಳ ಮಧ್ಯಭಾಗದಲ್ಲಿ ಬರುವುದು ಅಕ್ಕಿಯ ಸರಬರಾಜು ಸಾಕಾದಷ್ಟು ಇಲ್ಲದೆ ಇರುವುದರಿಂದ ಅಕ್ಕಿಯ ವಿಷಯದಲ್ಲಿ ತೊಂದರೆಯಾದಾಗ್ಯೂ ನವೆಂಬರ್ ತಿಂಗಳು ಮತ್ತು ಡಿಸಂಬರ್ ತಿಂಗಳ ಪ್ರಾರಂಭದಲ್ಲಿ ಆಹಾರ ಪದಾರ್ಥಗಳ ಸರಬರಾಜು ಉತ್ತಮವಾಗಿರುವ ನಿರೀಕ್ಷೆ ಇದೆ

ಡಾ|| ರಾಯರ್‌ರವರ ನಿಧನ

ಮೈಸೂರು ಸರ್ಕಾರದ ಮಾಜಿ ಶಿಕ್ಷಣ ಮಂತ್ರಿಗಳಾಗಿದ್ದ ಡಾ|| ಟಿ ಸಿ ಎಮ್ ರಾಯರ್‌ರವರು 12 ನೇ ತಾ|| ದಿವಸ ಹೃದಯ ಚಲನೆ ನಿಂತು ಮೃತರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರಿಗೆ ೬೩ ವಯಸ್ಸಾಗಿದ್ದಿತು ದಿವಂಗತರು ಬಹುಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದರು ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ

ಸ್ವೀಕಾರ

ಬೆಳಗಾಂವ ತಾ|| ಅರಳೀಕಟ್ಟೆಯಲ್ಲಿರುವ ಶ್ರೀತೋಂಟದಾರ್ಯಮಠದಲ್ಲಿ ಸದರಿ ಮಠಾಧ್ಯಕ್ಷರಾದ ಶ್ರೀ ಚಿಕ್ಕವೀರ ಶಿವಾಚಾರ್ಯರು "ವೇದಶಾಸ್ತ್ರೀ" ಇವರು ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ವೈದಿಕ ಮತ್ತು ಹಿಂದಿ ಪಾಠಶಾಲೆಯನ್ನು ಪ್ರಾರಂಭಿಸಿದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಹೊಳೆಯಪ್ಪ, ಗಾಣಿಗರ ಇವರ ದ್ವಾರಾ ತಲುಪಿರುತ್ತದೆ

ಅರಸೀಕೆರೆ ಮಂಡಿ ಮ|| ರಾ|| ಚೆನ್ನವೀರಪ್ಪ ಕಲ್ಯಾಣಶೆಟ್ಟರ ಇವರು ತಾ|| 13-11-47 ನೇ ದಿವಸ ಧನಲಕ್ಷ್ಮಿ ಮತ್ತು ಶಾರದಾ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು, ಅರಸೀಕೆರೆ ಮಂಡಿ ಮ|| ರಾ|| ನಾರಿಯಲ್‌ವಾಲಾ ಅಂಡ್ ಸನ್ಸ್ ಇವರು ಧನಲಕ್ಷ್ಮಿ ಮತ್ತು ಶಾರದಾ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು, ಮತ್ತು ಅರಸೀಕೆರೆ ಮಂಡಿ ಮ|| ರಾ|| ವೆಂಕಪ್ಪ ಸಕ್ಕರಿ, ಮುಚಖಂಡಪ್ಪ ಕುಪ್ಪಸದ ಇವರು ಧನಲಕ್ಷ್ಮಿ ಮತ್ತು ಶಾರದಾಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಒಟ್ಟು 6 ರೂ. ಗಳು ತುಂಬಾಪುರಮಠದ ವೇ|| ಪುರೋಹಿತ ನಂಜುಂಡಯ್ಯನವರ ದ್ವಾರಾ ತಲುಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲ್ಯಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೭೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೧—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೇ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
[illegible] (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರ ಕಲ್ಯಾಣಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ನವೆಂಬರ್ ೧೯೪೭ [ಸಂಚಿಕೆ ೩೧

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸಂಚಾರ

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಎಡೆಯೂರಲ್ಲಿರುವ ತಮ್ಮ ಸಂಸ್ಥಾನ ಮಠದಲ್ಲಿ ದಸರಾ ಮಹೋತ್ಸವವನ್ನು ನೆರವೇರಿಸಿದ ಮೇಲೆ ಅಲ್ಲಿಯ ಭಕ್ತಾದಿಗಳೆಲ್ಲರೂ ಸೇರಿ ಸಹಸ್ರಕಮಲಗಳಿಂದ ಶ್ರೀಜಗದ್ಗುರುಗಳವರ ಪಾದಪೂಜೆಯನ್ನು ಮಹಾ ವೈಭವದೊಡನೆ ನೆರವೇರಿಸಿದರು ಬಳಿಕ ಜಗದ್ಗುರುಗಳವರು ಕುಣಿಗಲ್ ತಾ॥ ಹಳೇ ಊರು ಗ್ರಾಮದ ಭಕ್ತರ ಪ್ರಾರ್ಥನೆಯ ಮೇರೆಗೆ ಇದೇ ತಿಂಗಳು ೬ ನೇ ತಾ॥ ನ ದಿವಸ ಸಕಲ ಬಿರುದಾವಳಿಗಳೊಡನೆ ಚತುರಂಗ ಬಲ ಸಮೇತ ಅಲ್ಲಿಗೆ ಬಿಜಯಂಗೈಸಿದರು ಪುರವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು ಉತ್ಸವ ದರ್ಶನಕ್ಕಾಗಿ ಬಹುಜನರು ಆಗಮಿಸಿದ್ದರು ಪೋಲೀಸ್ ವ್ಯವಸ್ಥೆಯು ತೃಪ್ತಿಕರವಾಗಿತ್ತು ಸುವರ್ಣರಜತಾಂದೋಲಿಕೋತ್ಸವವು ಆನಂದದಿಂದ ಜರುಗಿತು ಉತ್ಸವವು ಮುಗಿದ ಮೇಲೆ ಶ್ರೀ ಜಗದ್ಗುರುಗಳು ಸಿಂಹಪೀಠವನ್ನಲಂಕರಿಸಿದರು ಆಮೇಲೆ ಕುಣಿಗಲದ ಯಜಮಾನ್ ರುದ್ರಪ್ಪನವರು ಸನ್ಮಾನ ಪತ್ರಿಕೆಯನ್ನು ಸಮರ್ಪಿಸಿದರು ಅನಂತರ ವೇ॥ ಆಸ್ಥಾನ ವಿದ್ವಾನ್ ಬಿದರೆ ಬಸವಲಿಂಗಶಾಸ್ತ್ರಿಗಳವರು ಸಮಯೋಚಿತ ಭಾಷಣವನ್ನು ಮಾಡಿದರು ಬಳಿಕ ಜಗದ್ಗುರುಗಳು ಧರ್ಮಜಾಗೃತಿಯ ಬಗ್ಗೆ ಅಮೋಘವಾದ ಭಾಷಣವನ್ನು ಅಪ್ಪಣೆ ಕೊಡಿಸಿ ಸಭಿಕರನ್ನು ಸಂತೋಷಪಡಿಸಿದರು ಆಮೇಲೆ ಧರ್ಮಬುದ್ಧಿಯಿಂದ ಈ ದೇಶವನ್ನು ಪರಿಪಾಲಿಸುತ್ತಿರುವ ಧರ್ಮಮೂರ್ತಿ ಕರ್ಣಾಟಕ ಸಾರ್ವಭೌಮ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರವರ ಶ್ರೇಯಃಪ್ರಾರ್ಥನೆಯಾಗಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಜಗದ್ಗುರುಗಳವರು ಈ ಗ್ರಾಮದ ಭಕ್ತರ ಭಕ್ತಿಯಲ್ಲಿ ಪೂಜಾದಿಗಳನ್ನು ನೆರವೇರಿಸುತ್ತ ಅವರಿಂದ ಗುರುಕಾಣಿಕೆಯನ್ನು ಸ್ವೀಕರಿಸಿ ಆನಂದದಿಂದ ಇರುವ ಸಮಯದಲ್ಲಿ ಇಲ್ಲಿಯ ಜೈನ ಮತದ ಪ್ರಮುಖರಾದ ಶ್ರೀಮಾನ್ ನಾಗಕುಮಾರಯ್ಯನವರು ಮತ್ತು ಶ್ರೀಮಾನ್ ಕೆಂಪೆ ಮಲ್ಲೇಗೌಡರು ಶ್ರೀ ಸಿದ್ಧಲಿಂಗ ತೋಟದಲ್ಲಿ ಸಾವಿರಾರು ಜನರಿಗೆ ಅನ್ನ ಸಂತರ್ಪಣೆಯನ್ನು ಮಾಡಿದರು ಅವರ ಪ್ರಾರ್ಥನೆಯ ಮೇರೆಗೆ ಶ್ರೀಗಳವರು ಅಲ್ಲಿಗೆ ದಯಮಾಡಿಸಿ ಸರ್ವವನ್ನೂ ಪರಾಮರ್ಶಿಸಿ ಸಕಲರಿಗೂ ಆಶೀರ್ವದಿಸಿ ಬಿಡಾರಕ್ಕೆ ದಯಮಾಡಿಸಿದರು

ಅನಂತರ ಹುಲಿಯೂರುದುರ್ಗದ ಭಕ್ತರ ಪ್ರಾರ್ಥನೆಯ ಮೇರೆಗೆ ಈ ತಿಂಗಳು 13 ನೇ ತಾರೀಖು ಗುರುವಾರದ ದಿವಸ ಅಲ್ಲಿಗೆ ಬಿಜಯಂಗೈಸಿದರು ಗ್ರಾಮವು ತಳಿರುತೋರಣಗಳಿಂದಲೂ ಎಲ್ಲಾ ಕೋಮಿನವರು ಭಕ್ತಿಯಿಂದ ರಚಿಸಿದ್ದ ಭವ್ಯ ಮಂಟಪಗಳಿಂದಲೂ ಬಹು ರಮಣೀಯವಾಗಿತ್ತು ಪ್ರತಿಯೊಂದು ಕೋಮಿನವರೂ ಗುರುಭಾವನೆಯಿಂದ ವರ್ತಿಸಿದುದನ್ನು ನೋಡಿ ಸರ್ವರಿಗೂ ಸಂತೋಷವುಂಟಾಯಿತು ಜನಸ್ತೋಮವು ವಿಶೇಷವಾಗಿ ಸೇರಿದ್ದರಿಂದ ಪೋಲೀಸ್ ವ್ಯವಸ್ಥೆಯು ಸಮರ್ಪಕವಾಗಿತ್ತು ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಸಾಹೇಬರವರು ಉತ್ಸವವನ್ನು ಶಾಂತರೀತಿಯಿಂದ ನೆರವೇರಿಸಿದರು. ಮುಸ್ಲಿಂ ಪ್ರಮುಖರಾದ ಶ್ರೀಮಾನ್ ಸೇಟ್ ಮಹಮ್ಮದ್ ಸಾಹೇಬರು ಮತ್ತು ಶ್ರೀಮಾನ್ ಅಕ್ಬರ್ ಸಾಹೇಬರ ಪುತ್ರರಾದ ರಹಿಮತುಲ್ಲಾ ಸಾಹೇಬರೂ, ತಮ್ಮ ಮಂಟಪಗಳಲ್ಲಿ ಸನ್ಮಾನಪತ್ರವನ್ನು ಓದಿ ಸಮರ್ಪಿಸಿ ಆಶೀರ್ವಾದವನ್ನು ಪಡೆದರು ಆಗ್ಯೆ ಜಗದ್ಗುರುಗಳು ಹಿಂದೀ ಭಾಷೆಯಲ್ಲಿ ಉತ್ತರವನ್ನು ದಯಪಾಲಿಸಿ ಸರ್ವರನ್ನೂ ಸಂತೋಷಪಡಿಸಿದರು ಶ್ರೀಮಾನ್ ಡಾಕ್ಟರ್ ಸಾಹೇಬರೂ ಮತ್ತು ಒಕ್ಕಲಿಗ ಸಮುದಾಯದವರೂ ತಮ್ಮ ತಮ್ಮ ಬಿಡಾರಗಳಲ್ಲಿ ಅಡ್ರೆಸ್ಸನ್ನು ಒಪ್ಪಿಸಿ ಆಶೀರ್ವಾದವನ್ನು ಪಡೆದರು ಇದೇ ರೀತಿ ಸುತ್ತಮುತ್ತ ಗ್ರಾಮಗಳ ಗುರುಭಕ್ತರ ಕಾಣಿಕೆಯನ್ನು ಸ್ವೀಕರಿಸಿ 19 ನೆಯ ತಾರೀಖಿನ ದಿವಸ ಎಡೆಯೂರು ಮಠಕ್ಕೆ ದಯಮಾಡಿಸಿದರು

ಗುರುಭಕ್ತ

ಕೆಲವು ಮುಖ್ಯ ಚಿಕಿತ್ಸೆಗಳು

ಬೆಂಕಿಯಿಂದ ಆಗುವ ಅಪಾಯಕ್ಕೆ

ಯಾರಾದರೂ ಬೆಂಕಿಯಲ್ಲಿ ಸಿಕ್ಕಿ ಸುಟ್ಟುಕೊಂಡರೆ, ಮೊದಲು ಬಟ್ಟೆಗಳನ್ನು ತೆಗೆದುಬಿಡಬೇಕು ಇದನ್ನು ಸಾವಧಾನದಿಂದ ಮಾಡಬೇಕು ಸುಲಭವಾಗಿ ತೆಗೆಯಲಾಗದಿದ್ದಲ್ಲಿ ಚಾಕು ಕತ್ತರಿಯಿಂದ ಕತ್ತರಿಸಿಬಿಡಬೇಕು ಅನಂತರ ಸುಟ್ಟುಹೋಗಿರುವ ಭಾಗಕ್ಕೆ ಅಗಸೆ ಎಣ್ಣೆ ಮತ್ತು ಸುಣ್ಣದ ತಿಳಿನೀರನ್ನು ಸಮವಾಗಿ ಸೇರಿಸಿ, ಮಲ್ಮಲ್ ಬಟ್ಟೆಯನ್ನು ಈ ಮಿಶ್ರಣದಲ್ಲಿ ಅದ್ದಿ ಕಟ್ಟಬೇಕು ಒಂದು ವೇಳೆ ಅಗಸೆ ಎಣ್ಣೆ ದೊರೆಯದಿದ್ದರೆ, ಹರಳೆಣ್ಣೆ, ಬೆಣ್ಣೆ, ವ್ಯಾಸ್ಲೀನ್, ಕೊಬ್ಬರಿ ಎಣ್ಣೆ, ತುಪ್ಪ ಇವುಗಳನ್ನಾದರೂ ಉಪಯೋಗಿಸಬಹುದು

ಸುಟ್ಟ ನಂತರ ಗಾಯವಾಗದಿದ್ದರೆ, (ಗುಳ್ಳೆಗಳೇಳದಿದ್ದರೆ) ಊಟಮಾಡುವ ಉಪ್ಪನ್ನು ನೀರಿನಲ್ಲಿ ಸೇರಿಸಿ, ಗಟ್ಟಿಯಾದ ಲೇಪವನ್ನು ಮಾಡಿಕೊಂಡು, ಒದ್ದೆಬಟ್ಟೆಯ ಪಟ್ಟಿಯನ್ನು ಕಟ್ಟಬೇಕು ಇದರಿಂದ ವ್ರಣಗಳಾಗುವುದಿಲ್ಲ ಅಲ್ಲದೆ ಸ್ವಲ್ಪ ಹೊತ್ತಿನಲ್ಲಿಯೇ ಉರಿಯೂ ಕಡಿಮೆಯಾಗುವುದು ಒಂದು ವೇಳೆ ಹುಣ್ಣು ಆಗಿಹೋಗಿದ್ದರೆ, ಸೂಜಿಯ ಮೊನೆಯನ್ನು ಸ್ಪಿರಿಟ್ಟಿನಲ್ಲಿ ಅದ್ದಿ ಶುದ್ಧಿ ಮಾಡಿಕೊಂಡು ಆ ಗಾಯದ ನೀರನ್ನು ಸೂಜಿಯಿಂದ ಹೊರಗೆ ತೆಗೆಯಬೇಕು ಆ ಹುಣ್ಣಿನ ಮೇಲಿನ ಸಿಪ್ಪೆಯನ್ನು ಆಗಲೇ ತೆಗೆದುಬಿಡಬಾರದು. ಇದು ಮುಖ್ಯವಾದ ವಿಚಾರ. ಅಲ್ಲದೆ ಸುಟ್ಟ ಜಾಗಕ್ಕೆ ಗಾಳಿ ತಗಲದಂತೆ ನೋಡಿಕೊಳ್ಳಬೇಕು. ಇದರಿಂದ ಉರಿಯು ಹೆಚ್ಚಾಗುವುದಲ್ಲದೆ ಧೂಳು ಸೇರಲವಕಾಶವಾಗುವುದು. ಕಟ್ಟಿರುವ ಪಟ್ಟಿಯು ಗಟ್ಟಿಯಾಗಿ ಅಂಟುಕೊಂಡಿದ್ದರೆ ಬಿಸಿನೀರಿನಲ್ಲಿ ಸ್ವಲ್ಪಹೊತ್ತು ನೆನೆಸುವುದರಿಂದ ಜಾರಿಕೊಳ್ಳುವುದು ಸುಟ್ಟ ಜಾಗವನ್ನು ಯಾವಾಗಲೂ ಮುಚ್ಚಿರಬೇಕು

ರೋಗಿಗೆ ಹಾಲು, ಕಾಫಿ, ಟೀ ಮೊದಲಾದುವನ್ನು ಕುಡಿಸುತ್ತಿರಬೇಕು

ನೀರಿನಲ್ಲಿ ಮುಳುಗಿದರೆ

ಆ ಮನುಷ್ಯನನ್ನು ಹೊರಗೆ ತಂದು ಮಣ್ಣಿನ ಹರವಿಯನ್ನು ನೆಲದಮೇಲೆ ಬೋರಲಿಟ್ಟು ಆ ಮನುಷ್ಯನನ್ನು ಅದರ ಮೇಲೆ ಹೊಟ್ಟೆ ಕೆಳಗಿರುವಂತೆ ಮಲಗಿಸಬೇಕು ಇದರಿಂದ ಹೊಟ್ಟೆಯಮೇಲೆ ಭಾರಬಿದ್ದು ಒಳಗಿರುವ ನೀರೆಲ್ಲ ಹೊರಗೆ ಬರುವುದು ಅನಂತರ ಉಟ್ಟಿದ್ದ ಬಟ್ಟೆಗಳನ್ನು ತೆಗೆದು, ರೋಗಿಯ ಕಾಲನ್ನು ಹಿಡಿದು, ಕಾಲು ಮೇಲಾಗಿ ನೇತುಹಾಕಬೇಕು, ಹೊಟ್ಟೆ ಮತ್ತು ಎದೆಯನ್ನದುಮಿ ನೀರು ಹೊರಗೆ ಬರುವಂತೆ ಮಾಡಬೇಕು ತಲೆಕೆಳಗಾಗಿ ಮಾಡುವುದರಿಂದ ನೀರೆಲ್ಲಾ ಮೂಗು ಬಾಯಿಗಳ ಮೂಲಕ ಹೊರಗೆ ಬಂದುಬಿಡುವುದು ಈ ರೀತಿ ಸ್ವಲ್ಪಹೊತ್ತು ಮಾಡಿ ಆಮೇಲೆ ಮಲಗಿಸಬೇಕು ಅವನ ಕೈಗಳನ್ನು ಅವನ ತಲೆಯ ಕೆಳಗಿಡಬೇಕು ಎದೆಯನ್ನು ನೀವಬೇಕು ಸ್ವಲ್ಪಸ್ವಲ್ಪವಾಗಿ ಬಾಯಿಂದ ನಾಲಗೆಯನ್ನು ತೆಗೆಯುತ್ತಿರಬೇಕು ಇದರಿಂದ ಉಸಿರಾಡಲು ಪ್ರಾರಂಭವಾಗುವುದು ಉಸಿರಾಡುವುದು ಆರಂಭವಾದರೆ, ಕಂಬಳಿಯನ್ನು ಹೊದ್ದಿಸಿ ಕೈಕಾಲುಗಳಿಗೆ ಬ್ರಾಂದಿಯನ್ನು ತಿಕ್ಕಿ ಶಾಖಕೊಟ್ಟು, ಬಿಸಿಬಿಸಿ ಕಾಫಿ ಕುಡಿಸಬೇಕು

ಈರೀತಿ ಮಾಡಿದ ಮೇಲೂ ಉಸಿರಾಡದೆ ಇದ್ದರೆ, ಹೊಟ್ಟೆ ಕೆಳಗೆ ಮಾಡಿ ಮಲಗಿಸಿ ನಮ್ಮ ಎರಡು ಕೈಗಳನ್ನು ಅವನ ಬೆನ್ನಿನ ಮೇಲಿಟ್ಟು ಜೋರಾಗಿ ತಿಕ್ಕುತ್ತ ಕೃತ್ರಿಮ ಶ್ವಾಸವಾಡುವಂತೆ ಪ್ರಯತ್ನ ಮಾಡಬೇಕು ಈರೀತಿ ಮಾಡುವುದರಿಂದ ಶ್ವಾಸಕೋಶಗಳಲ್ಲಿ ತುಂಬಿರುವ ನೀರು ಹೊರಗೆ ಬಂದು, ಉಸಿರಾಡಲವಕಾಶವಾಗುವುದು ಇನ್ನೊಂದು ರೀತಿ ರೋಗಿಯನ್ನು ಉಲ್ಲಂಗತ್ತನಾಗಿ ಮಲಗಿಸಿ ಅವನ ಎರಡು ಕೈಗಳನ್ನೂ ಮೊಳಕೈ ಬಳಿ ಮಡಿಸಿ, ರೋಗಿಯ ತಲೆಯ ಬಳಿ ಕೂತುಕೊಂಡು ಆರೀತಿ ಮಡಿಸಿದ ತೋಳುಗಳನ್ನು ಹಿಂದಕ್ಕೂ ಮುಂದಕ್ಕೂ ಆಡಿಸುವುದರಿಂದಲೂ ಉಸಿರಾಡುವುದು ಅಮೋನಿಯವನ್ನು ಮೂಸಿಸುವುದರಿಂದಲೂ ಲಾಭವುಂಟು.

ಹಾವು, ಚೇಳು ಕಡಿದರೆ

ಕಡಿದ ಜಾಗದಿಂದ ಸ್ವಲ್ಪ ಮೇಲಕ್ಕೆ ಪಟ್ಟಿಯನ್ನು ಕಟ್ಟಿ ಅನಂತರ ಪುನಃ ಸ್ವಲ್ಪ ಮೇಲ್ಭಾಗಕ್ಕೆ ಮತ್ತೊಂದು ಪಟ್ಟಿಯನ್ನು ಕಟ್ಟಬೇಕು. ಇದರಿಂದ ವಿಷವೇರುವುದಿಲ್ಲ. ಅನಂತರ ಹರಿತವಾದ ಚಾಕುವಿನಿಂದ ಕಡಿದ ಜಾಗವನ್ನು ಕತ್ತರಿಸಿ ಅಲ್ಲಿಂದ ರಕ್ತವನ್ನು ತೆಗೆದುಬಿಡಬೇಕು ಅಲ್ಲದೆ ಆ ಜಾಗಕ್ಕೆ ಪೊಟಾಸಿಯಂಪರ್ ಮ್ಯಾಂಗನೇಟನ್ನು ಪುಡಿಮಾಡಿ ತುಂಬಬೇಕು ನಿರ್ಬಲತೆಯಿದ್ದರೆ ಉತ್ತೇಜಕ ಔಷಧಿ ಕೊಡಬೇಕು ಪ್ರಜ್ಞೆ ಬಂದಮೇಲೆ ಕಟ್ಟನ್ನು ಬಿಚ್ಚಬೇಕು.

ಪಂಚಾಚಾರ್ಯಪ್ರಭಾ.

೧೯೪೭ ನೆಯ ನವೆಂಬರ್ ತಾ|| ೨೪ನೇ ಸೋಮವಾರ

ವೇದಾಜ್ಞೆಯಂತೆ ವರ್ತಿಸಬೇಕು

ವೇದವೆಂಬುದು ಪರಮೇಶ್ವರನ ದಿವ್ಯವಾಣಿಯಾದುದರಿಂದ ಅದು ಅಪೌರುಷೇಯವೆನಿಸಿಕೊಂಡಿರುವುದಲ್ಲದೆ ಅಲ್ಲಿ ಹೇಳಿರತಕ್ಕುದೆಲ್ಲವೂ ಯಥಾರ್ಥವಾದುದಾಗಿದೆ ಸಕಲ ಶಾಸ್ತ್ರಕಾರರೂ ಈ ವೇದವನ್ನು ನಿತ್ಯವೆಂದು ಒಪ್ಪಿಕೊಂಡಿರುವುದರಿಂದ, ವೇದದಲ್ಲಿ ಹೇಳಲ್ಪಟ್ಟುದುದೆಲ್ಲವೂ ಪ್ರಮಾಣವೆಂದು ಸಿದ್ಧವಾಗುತ್ತದೆ ವೇದವು ಪರಮೇಶ್ವರನ ಆಜ್ಞಾರೂಪವಾಗಿರುತ್ತದೆ ಈ ಪರಮೇಶ್ವರಾಜ್ಞೆಯನ್ನು ಯಾರೂ ಮೀರಬಾರದು ತಂದೆಯ ಆಜ್ಞೆಯನ್ನು ಪಾಲಿಸುವವನೇ ಸತ್ಪುತ್ರನೆನಿಸುವಂತೆ ಭಾರತೀಯರೆಲ್ಲರೂ ಪರಮೇಶ್ವರನ ಆಜ್ಞಾರೂಪವಾದ ವೇದವಾಣಿಯನ್ನು ಪಾಲಿಸಿ ಆಸ್ತಿಕರೆನಿಸಿಕೊಳ್ಳಬೇಕು. ಯಾವನು ವೇದವನ್ನು ಸುಳ್ಳೆಂದು ಹೇಳುವನೋ ಅವನು ದೇವರಿಲ್ಲವೆಂದು ಹೇಳಲು ಹಿಂಜರಿಯುವುದಿಲ್ಲ ದೇವರನ್ನು ಪ್ರತ್ಯಕ್ಷವಾಗಿ ನೋಡಿಯೇ ದೇವರುಂಟೆಂದು ಯಾರೂ ಹೇಳುವುದಿಲ್ಲ ದೇವರಿದ್ದಾನೆಂಬುದನ್ನು ಆಪ್ತವಾಕ್ಯದಿಂದಲೇ ನಿಶ್ಚಯಮಾಡಿಕೊಳ್ಳಬೇಕಾಗಿದೆ

ಅಂಥ ಆಪ್ತವಾಕ್ಯವೆಂದರೆ ಈಶ್ವರನ ವಾಣಿಯೇ ಹೊರತು ಇನ್ನಾವುದೂ ಆಗಲಾರದು ಇದನ್ನೇ ಶಾಸ್ತ್ರಕಾರರು ಶಬ್ದಪ್ರಮಾಣವೆನ್ನುತ್ತಾರೆ ಲೋಕದಲ್ಲಿ ಆಪ್ತನಾದ ಪುರುಷನು ಏನು ಹೇಳಿದರೂ ಅದನ್ನು ನಂಬಲೇಬೇಕು ಅವನು ಹೇಳುವುದೆಲ್ಲವೂ ಹಿತಕ್ಕಾಗಿಯೇ ಹೊರತು ಅಹಿತಕ್ಕಾಗಿ ಯಾವುದೂ ಇರುವುದಿಲ್ಲ ಅಹಿತವನ್ನು ಕೋರುವವನು ಆಪ್ತನೇ ಅಲ್ಲ ಇದ್ದುದನ್ನು ಇದ್ದಹಾಗೆ ಬೋಧಿಸುವವನೇ ಆಪ್ತನು ಈ ಜಗತ್ತಿನಲ್ಲಿ ಪ್ರಾಣಿಗಳ ತಾರತಮ್ಯಾನುಸಾರವಾಗಿ ಹಿತಾನುಕೂಲವಾದ ಧರ್ಮಮಾರ್ಗವನ್ನೂ ಅಹಿತಾನುಕೂಲವಾದ ಅಧರ್ಮಮಾರ್ಗವನ್ನೂ ಸರ್ವತೋಮುಖವಾಗಿ ವೇದವು ಬೋಧಿಸುತ್ತದೆ ಈಶ್ವರನ ಮಕ್ಕಳಂತಿರುವ ಮಾನವರೆಲ್ಲರೂ ಪರಮಾಪ್ತನಾದ ಪರಮೇಶ್ವರನ ವೇದರೂಪವಾದ ಶಾಸನವನ್ನು ಶ್ರದ್ಧೆಯಿಂದ ಪಾಲಿಸುವುದರಿಂದ ಅವರಿಗೆಂದೂ ಹಾನಿಯು ತಟ್ಟುವುದಿಲ್ಲ ವೇದವು ಒಳ್ಳೆಯ ಕೆಲಸವನ್ನು ಮಾಡುವುದರಿಂದಾಗುವ ಸುಖವನ್ನೂ ಕೆಟ್ಟಕೆಲಸವನ್ನು ಮಾಡುವುದರಿಂದಾಗುವ ದುಃಖವನ್ನೂ ಬೋಧಿಸುತ್ತದೆ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನೂ ತಾನು ಸುಖವನ್ನು ಪಡೆಯಬೇಕೆಂದು ಬಯಸುವನಲ್ಲದೆ ದುಃಖವನ್ನು ಬಯಸುವುದಿಲ್ಲ ಆದರೂ ಕೆಲವರು ದುಃಖಸಾಧನಗಳಾದ ಕೆಲಸಗಳನ್ನು ಸುಖಸಾಧನಗಳೆಂದು ಭ್ರಮಿಸಿ ವೇದಶಾಸನವನ್ನು ಮೀರಿ ತಾವು ಮಾಡುವುದೆಲ್ಲವೂ ನ್ಯಾಯವೆಂದು ಭ್ರಮಿಸಿರುತ್ತಾರೆ ಇದು ಶುದ್ಧ ತಪ್ಪು!

ಪರಮೇಶ್ವರನು ಶಿಷ್ಟಮಾರ್ಗವೇ ಧರ್ಮವೆಂದೂ ಅನಿಷ್ಟಮಾರ್ಗವೇ ಅಧರ್ಮವೆಂದೂ ಒಂದು ನಿಯಮವನ್ನು ಮಾಡಿರುತ್ತಾನೆ "ವೇದಬೋಧಿತೇಷ್ಟಸಾಧನತಾಕೋ ಧರ್ಮಃ" "ವೇದಬೋಧಿತಾನಿಷ್ಟಸಾಧನತಾಕೋ ಅಧರ್ಮಃ" ಎಂಬ ಆರ್ಯೋಕ್ತಿಯು ಸಹ ಇದನ್ನೇ ಬೋಧಿಸುತ್ತದೆ ಆದುದರಿಂದ ವೇದವು ಯಾವುದನ್ನು ಅನಿಷ್ಟವೆಂದು ಬೋಧಿಸುತ್ತದೆಯೋ ಅದನ್ನು ಅಧರ್ಮವೆಂತಲೂ, ಯಾವುದನ್ನು ಇಷ್ಟವಾದುದೆಂದು ಬೋಧಿಸುತ್ತದೆಯೋ ಅದನ್ನು ಧರ್ಮವೆಂತಲೂ ತಿಳಿದುಕೊಂಡು ಧರ್ಮಾಧರ್ಮಗಳನ್ನು ನಿಶ್ಚಯಗೊಳಿಸಿಕೊಳ್ಳಬೇಕಲ್ಲದೆ ತಮಗಿಷ್ಟವಾದುದೆಲ್ಲವೂ ಧರ್ಮವೆಂದೂ ತಮಗನಿಷ್ಟವಾದುದೆಲ್ಲವೂ ಅಧರ್ಮವೆಂದೂ ಯಾರೂ ತಿಳಿಯಬಾರದು. ಇದೇ ಸನಾತನಧರ್ಮದ ರಹಸ್ಯವು. ಲೋಕದಲ್ಲಿ ಮಹಾರಾಜನು ತನ್ನ ಪ್ರಜಾಸುಖಕ್ಕಾಗಿ ಒಂದು ಶಾಸನವನ್ನು ಮಾಡಿ ಆ ಶಾಸನವನ್ನು ಯಾರು ಮುರಿಯುತ್ತಾರೆಯೋ ಅವರು ರಾಜದ್ರೋಹಿಗಳೆಂದು ಭಾವಿಸಿ ಅಂಥವರಿಗೆ ಶಾಸನಪ್ರಕಾರವಾಗಿ ಶಿಕ್ಷೆಯನ್ನು ವಿಧಿಸುತ್ತಾನೆ. ಯಾರು ಆ ಶಾಸನವನ್ನು ಪಾಲಿಸುತ್ತಾರೆಯೋ ಅವರನ್ನು ಅನುಗ್ರಹಿಸುತ್ತಾನೆ ಅದರಂತೆ ಚತುರ್ದಶಭುವನಗಳನ್ನೂ ಲೀಲಾಮಾತ್ರದಿಂದ ಆಳುತ್ತಿರುವ ದೇವತಾಸಾರ್ವಭೌಮನಾದ ಪರಮೇಶ್ವರನು ವೇದವೆಂಬ ಶಾಸನದ್ವಾರಾ ಈ ಲೋಕವನ್ನು ಆಳುತ್ತಿರುವನು ಯಾವನು ವೇದದಲ್ಲಿ ನಿಷೇಧಿಸಲ್ಪಟ್ಟಿರುವ ದುರ್ಮಾರ್ಗದಲ್ಲಿ ಪ್ರವೇಶಿಸುತ್ತಾನೆಯೋ ಅವನು ಘೋರವಾದ ಶಿಕ್ಷೆಗೆ ಗುರಿಮಾಡಲ್ಪಟ್ಟು ಸೂಕರಾದಿ ಹೀನಜನ್ಮಗಳಿಗೆ ಒಯ್ಯಲ್ಪಡುತ್ತಾನೆ ಯಾವನು ಈಶ್ವರ ಶಾಸನವನ್ನು ಸ್ವಲ್ಪಮಾತ್ರವೂ ಮೀರದಂತೆ ಪಾಲಿಸುತ್ತಾನೆಯೋ ಅವನು ಈ ಮನುಷ್ಯಜನ್ಮಕ್ಕಿಂತಲೂ ಉತ್ತಮವಾದ ದೇವತಾಜನ್ಮಕ್ಕೇರಿಸಲ್ಪಡುವನು.

ಹೀಗಿದ್ದರೂ ಕೆಲವರು ಪರಮಾಪ್ತನಾದ ಪರಮೇಶ್ವರನ ಶಾಸನವನ್ನು ಒಮಳ ಹಗುರಾಗಿ ಕಾಣುತ್ತ ಬಂದಿರುವುದನ್ನು ನೋಡಿದರೆ ಇದು ಪಾಪಮಯವಾದ ಕಲಿಯುಗದ ಪ್ರಭಾವವೆಂದೇ ಹೇಳಬೇಕಾಗಿದೆ ಈಗ ಎಲ್ಲಿ ನೋಡಿದರೂ ವೇದಶಾಸನೋಲ್ಲಂಘನಕಾರಿಯಾದ ವರ್ತನೆಯೂ, ದದನ್ನು ಪ್ರಚಾರಮಾಡುವ ಗುರುಗಳ ತಿರಸ್ಕಾರಶಬ್ದವೂ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡುತ್ತಿರುವ ಪ್ರಭುತ್ವನಿರಾಕರಣ ಶಬ್ದಗಳೂ ಕೇಳಿಬರುವವಲ್ಲದೆ, ತಮ್ಮಗಳ ಮೇಲೆ ಯಾರ ಶಾಸನವೂ ಇಲ್ಲದಂತೆ ನಿರಂಕುಶರಾಗಬೇಕೆಂಬ ಹವಣಿಕೆಯು ಅನೇಕರಲ್ಲಿ ಒಡಮೂಡುತ್ತಲಿರುವುದು ಇದರಿಂದ ಪ್ರಪಂಚವು ಅನಾಯಕತ್ವವನ್ನಾಗಲಿ ಬಹುನಾಯಕತ್ವವನ್ನಾಗಲಿ ಹೊಂದಿ ಉತ್ತರೋತ್ತರ ಅನರ್ಥಪರಂಪರೆಯನ್ನನುಭವಿಸುವುದೇ ಫಲವಲ್ಲದೆ ಇನ್ನಾವುದೂ ಫಲವಿಲ್ಲ

ಅಷ್ಟಾಭಿಸ್ತು ಸುರೇಂದ್ರಾಣಾಂ ಮಾತ್ರಾಭಿರ್ನಿರ್ಮಿತೋ ನೃಪಃ ।

ಎಂಬಂತೆ ಪ್ರಜಾಪಾಲಕರಾದ ಮಹಾರಾಜರು ಕೇವಲ ದೇವಾಂಶಸಂಭೂತರಾದುದರಿಂದ ವೇದಶಾಸನವನ್ನು ಯಾರೂ ಮೀರದಂತೆ ನೋಡುವುದು ಅವರ ಮುಖ್ಯ ಕರ್ತವ್ಯವಾಗಿದೆ ಪ್ರಜೆಗಳಾದರೂ ಮನಃಬಂದಂತೆ ನಡೆಯದೆ ಮಹಾಪ್ರಭುಗಳಲ್ಲಿ ನಿರ್ಮಲವಾದ ಭಕ್ತಿಯನ್ನಿಟ್ಟು ಅವರ ಆಜ್ಞೆಯಂತೆ ನಡೆಯುವುದು ಕ್ಷೇಮಕರವಾದುದು ಹಾಗೆ ಮಾಡದೆ ಮನಸ್ಸಿಗೆ ಬಂದಂತೆ ರಾಜದ್ರೋಹದಿಂದ ನಡೆದರೆ ಅಂತಹವರಿಗೆ ಇಹಪರಗಳಲ್ಲಿ ಯಾವ ಸುಖವೂ ದೊರೆಯುದಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ಪ್ರಜೆಗಳು ರಾಜರನ್ನು ಪ್ರತ್ಯಕ್ಷದೇವರೆಂದು ತಿಳಿಯಬೇಕು ವೇದವನ್ನು ಸಾಕ್ಷಾತ್ ಪರಮೇಶ್ವರನ ದಿವ್ಯವಾಣಿಯೆಂದು ಭಾವಿಸಬೇಕು ಈ ರೀತಿಯಾಗಿ ನಡೆದರೆ ಅಂತಹವರಿಗೆ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸುಖವುಂಟಾಗುವುದು ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ ಅಂತ್ಯದಲ್ಲಿ ಯಮ ಶಾಸನವು ಮಾತ್ರ ತಪ್ಪುವುದಿಲ್ಲ ಆದುದರಿಂದ ಪ್ರತಿಯೊಬ್ಬರೂ ನಾಸ್ತಿಕಮಾರ್ಗವನ್ನು ಅವಲಂಬಿಸದೆ ಆಸ್ತಿಕಮಾರ್ಗವನ್ನು ಅವಲಂಬಿಸಿ ವೇದಾಜ್ಞೆಯಂತೆ ನಡೆದು ಪರಮೇಶ್ವರನ ಕೃಪೆಗೆ ಪಾತ್ರರಾಗಿ ಧನ್ಯರಾಗಬೇಕೆಂದು ಆಶಿಸುತ್ತೇವೆ

ವರ್ತಮಾನ ಸಂಗ್ರಹ

ಆಹಾರ ಧಾನ್ಯಗಳ ಬೆಲೆಯ ಪುನರ್ವಿಮರ್ಶೆ

ಆಹಾರ ಧಾನ್ಯಗಳ ಹೊಸ ಬೆಲೆಗಳನ್ನು ಒಂದು ವಾರದೊಳಗಾಗಿ ಪ್ರಕಟಿಸಲಾಗುವುದೆಂದು ಕೇಂದ್ರ ಸರ್ಕಾರವು ಮದರಾಸ್ ಸರ್ಕಾರಕ್ಕೆ ತಿಳಿಸಿದೆ.

ಜೈ ಹಿಂದ್ ಸ್ಟಾಂಪುಗಳು

ಭಾರತಕ್ಕೆ ಸ್ವಾತಂತ್ರ್ಯ ದೊರೆತುದರ ಜ್ಞಾಪಕಾರ್ಥವಾಗಿ ಹೊಸ ವರ್ಷದಲ್ಲಿ ಜೈ ಹಿಂದ್ ಸ್ಟಾಂಪುಗಳನ್ನು ಹೊರಡಿಸಲಾಗುವುದು ಮೂರುವರೆ ಆಣೆ, ಒಂದೂವರೆ ಆಣೆ ಮತ್ತು ೧೨ ಆಣೆ ಬೆಲೆಯ ಮೂರು ವಿಧದ ಸ್ಟಾಂಪುಗಳನ್ನು ಪ್ರಕಟಿಸಲಾಗುತ್ತದೆ. ಸ್ಟಾಂಪುಗಳ ಮೇಲೆ "ಜೈ ಹಿಂದ್" ಎಂದು ಹಿಂದಿಯಲ್ಲಿ ಅಚ್ಚುಮಾಡಲಾಗುವುದು. ೧೯೪೮ ನೇ ಏಪ್ರಿಲ್ ೩೦ ರವರೆಗೆ ಈ ಸ್ಟಾಂಪುಗಳು ಮಾರಾಟಕ್ಕಿರುವವು.

ಭಾರತಕ್ಕೆ ೪೮ ಹಡಗುಗಳಷ್ಟು ಆಹಾರಧಾನ್ಯ

ಡಿಸೆಂಬರ್ ೧೦ರ ಒಳಗಾಗಿ ಭಾರತಕ್ಕೆ ಆಹಾರ ಧಾನ್ಯಗಳು ತುಂಬಿದ ೪೮ ಹಡಗುಗಳು ಬರುವ ನಿರೀಕ್ಷೆ ಇದೆಯೆಂದು ವರದಿಯಾಗಿದೆ ಈ ಹಡಗುಗಳಲ್ಲಿ ಒಟ್ಟು ೨೪೩,೦೦೦ ಟನ್ನುಗಳಷ್ಟು ಆಹಾರಧಾನ್ಯಗಳು ಇರುವುವು

ಕಂಟ್ರೋಲ್ ರದ್ದಾಗಬೇಕು

ಕೇಂದ್ರ ಸರ್ಕಾರವೂ, ಪ್ರಾಂತ ಸರ್ಕಾರಗಳೂ ಹತೋಟಿ ಆಜ್ಞೆಗಳನ್ನು ರದ್ದುಮಾಡುವ ಸಮಸ್ಯೆಗೆ ತೀವ್ರ ಗಮನಕೊಡಬೇಕೆಂದು ಶ್ರೀ ಎಸ್ ಕೆ ಪಾಟೀಲರು ಮಂಡಿಸಿದ ನಿರ್ಣಯವು ಕೇಂದ್ರಸಭೆಯಲ್ಲಿ ಅಂಗೀಕೃತವಾಯಿತು

ಹೈದರಾಬಾದ ಸಂಸ್ಥಾನದ ಸಂಧಾನ

ಈಗ ತಟಸ್ಥವಾಗಿರುವ ಸಂಸ್ಥಾನವೆಂದರೆ ಹೈದರಾಬಾದು ಒಂದೇ ಒಂದು ಈಗ ದೆಹಾಮರ ಸರ್ಕಾರಕ್ಕೂ ಭಾರತ ಸರ್ಕಾರಕ್ಕೂ ಸಂಧಾನ ನಡೆಯುತ್ತಿದೆ ಸಂಧಾನದ ವಿವರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಸಲು ಸಾಧ್ಯವಿಲ್ಲ ಈ ತಿಂಗಳು ೨೫ ನೆಯ ತಾರೀಖಿನ ದಿವಸ ಮತ್ತೆ ಸಂಧಾನ ಆರಂಭವಾಗುವುದು. ಆನಂತರ ಸಂಧಾನ ಮುಗಿಯಲು ಹೆಚ್ಚು ಕಾಲಾವಕಾಶ ಕೊಡುವುದಿಲ್ಲ" ಎಂಬುದಾಗಿ ಸರದಾರ್ ಪಟೇಲ್‌ರವರು ಶಾಸನ ಸಭೆಯಲ್ಲಿ ತಿಳಿಸಿದರು ಹೈದರಾಬಾದ್ ನಿಯೋಗದವರು ಈಗ ದಿಲ್ಲಿಗೆ ಬಂದಿರುವರು. ಸಂಧಾನವು ಪ್ರಾರಂಭವಾಗಿದೆ

ಕಾಶ್ಮೀರದ ದುಃಸ್ಥಿತಿಯ ಬಗ್ಗೆ ಷೇಕ್ ಅಬ್ದುಲ್ಲಾರವರ ಹೇಳಿಕೆ

ಶತ್ರುದಾಳಿಯಿಂದ ಅಪಾರ ಕಷ್ಟನಷ್ಟಗಳಿಗೆ ಗುರಿಯಾಗಿರುವವರ ಪುನರ್ವಸತಿಯ ಕಾರ್ಯವೇ ಕಾಶ್ಮೀರ ಸರ್ಕಾರದ ಮುಂದಿರುವ ದೊಡ್ಡ ಸಮಸ್ಯೆಯಾಗಿದೆ ಈ ಮಹತ್ಕಾರ್ಯದಲ್ಲಿ ಕಾಶ್ಮೀರದ ಪ್ರಜೆಗಳೆಲ್ಲರೂ ಸರ್ಕಾರಕ್ಕೆ ಪೂರ್ಣ ಸಹಕಾರ ನೀಡಬೇಕು ಅತ್ಯಾಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತರಾಗಿ ಯುದ್ಧಪ್ರವೀಣರ ನೇತೃತ್ವದಲ್ಲಿ ದಾಳಿಕಾರರು ಕಾಶ್ಮೀರಕ್ಕೆ ಮುತ್ತಿಗೆ ಹಾಕಿದರು. ಶತ್ರುಗಳು ಮನೆ ಮಠಗಳನ್ನು ನೆಲಸಮಮಾಡಿದ್ದಾರೆ ಅನಾಥ ಮಹಿಳೆಯರಿಗೆ ಮಾನಭಂಗವನ್ನುಂಟುಮಾಡಿದ್ದಾರೆ ನೂರಾರು ಗ್ರಾಮಗಳನ್ನು ಧ್ವಂಸಮಾಡಿದ್ದಾರೆ ಆಕ್ರಮಣಕಾರರ ದಾಳಿಯಿಂದ ಸುಂದರವಾದ ಬಾರಾಮೂಲಾ, ಊರಿ ಮತ್ತು ಪಟ್ಟನ್ ನಗರಗಳು ಭಸ್ಮೀಕೃತವಾಗಿವೆ ಮುಸ್ಲಿಮರ ಪ್ರಾರ್ಥನಾ ಮಂದಿರಗಳನ್ನು ಶತ್ರುಗಳು ಹೇಯವಾದ ಕೃತ್ಯಗಳಿಗಾಗಿ ಉಪಯೋಗಿಸಿಕೊಂಡಿದ್ದಾರೆ ಎಂಬುದಾಗಿ ಷೇಕ್ ಅಬ್ದುಲ್ಲಾರವರು ಕಾಶ್ಮೀರದ ದುಃಸ್ಥಿತಿಯನ್ನು ವರ್ಣಿಸಿರುತ್ತಾರೆ.

ಜುನಾಗಢ ಪ್ರಜಾಮಂಡಲಕ್ಕೆ

ಮುಸಲ್ಮಾನರು ಸೇರಲು ನಿರ್ಧಾರ

ಜುನಾಗಢದಲ್ಲಿರುವ ಮುಸ್ಲಿಂ ಜಮೈಯತ್ ನಾಯಕರು ತಮ್ಮ ಸಂಸ್ಥೆಯನ್ನು ರದ್ದುಗೊಳಿಸಿ, ಜುನಾಗಢದ ಮುಸಲ್ಮಾನರು ಅಲ್ಲಿನ ಪ್ರಜಾಮಂಡಲಕ್ಕೆ ಸೇರುವಂತೆ ಚಳುವಳಿ ನಡೆಸುವುದಾಗಿ ನಿರ್ಧರಿಸಿರುತ್ತಾರೆಂದು ತಿಳಿದು ಬಂದಿದೆ ಜುನಾಗಢದ ಮುಸ್ಲಿಂ ಜಮೈಯತ್ ಸಂಸ್ಥೆಯ ನಿಯೋಗವೊಂದು ಜುನಾಗಢ ಸಂಸ್ಥಾನದ ತಾತ್ಕಾಲಿಕ ಸರಕಾರದ ಅಧ್ಯಕ್ಷರಾದ ಶ್ರೀ ಶ್ಯಾಮಲದಾಸ್ ಗಾಂಧಿಯವರನ್ನು ಭೇಟಿಮಾಡಿ, ತಾತ್ಕಾಲಿಕ ಸರಕಾರಕ್ಕೆ ತಮ್ಮ ಪೂರ್ಣ ಸಹಾಯವನ್ನು ನೀಡುವುದಾಗಿ ವಾಗ್ದಾನ ಮಾಡಿದರು ಜಮೈಯತ್ ಸಂಸ್ಥೆಯ ಸದಸ್ಯರು ಜುನಾಗಢದ ಪ್ರಜಾಮಂಡಲಕ್ಕೆ ಸೇರಲು ನಿರ್ಧರಿಸಿರುತ್ತಾರೆ. ಈಗಿನ ತಾತ್ಕಾಲಿಕ ಸರಕಾರದ ಬಹು ಮುಖ್ಯ ಕರ್ತವ್ಯ

...ಳನ್ನು ಇನ್ನು ಮುಂದೆ ಈ ಪ್ರಜಾಮಂಡಲಕ್ಕೆ ವಹಿಸಲಾಗುವುದು ಪ್ರಜಾಮಂಡಲ ಮತ್ತು ಜವೈಯುತ್ಸ್ಟೆಯು ಈ ಒಪ್ಪಂದದ ಏರ್ಪಾಡುಗಳನ್ನು ಪೂರ್ಣಗೊಳಿಸಲು, ಶ್ರೀ ಶ್ಯಾಮಲದಾಸ್ ಗಾಂಧಿಯವರು ಜುನಾಪಕ್ಕೆ ತೆರಳುವವರಿದ್ದಾರೆಂದು ತಿಳಿದುಬಂದಿದೆ

ಮುಷ್ಕರ ಹೂಡಲು ಮದರಾಸ್ ಸರ್ಕಾರೀ ನೌಕರರ ನಿರ್ಧಾರ

ಮದರಾಸಿನ ನಾನ್‌ಗೆಜೆಟೆಡ್ ಸರ್ಕಾರೀ ನೌಕರರ ಸಂಘದವರು ತಮ್ಮ ಬೇಡಿಕೆಗಳನ್ನು ಸರ್ಕಾರದವರು ಅಂಗೀಕರಿಸದ ಪಕ್ಷದಲ್ಲಿ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ ಮುಷ್ಕರವನ್ನು ಹೂಡುವ ವಿಷಯದಲ್ಲಿ ೮೯೧ ಜನರು ಪರವಾಗಿಯೂ ೪೭೩ ಜನರು ವಿರೋಧವಾಗಿಯೂ ಓಟುಮಾಡಿದ್ದಾರೆ.

ಜನವರಿಯಿಂದ ರೈಲ್ವೆ ದರಗಳು ಹೆಚ್ಚುವವು

ನಿರೀಕ್ಷಿಸಲಾಗಿರುವ ೧೨,೩೪,೦೦,೦೦೦ ರೂ. ಗಳ ನಷ್ಟವನ್ನು ಸರಿಪಡಿಸಲು ಹೊಸವರ್ಷದಲ್ಲಿ ರೈಲ್ವೆ ದರಗಳನ್ನು ಹೆಚ್ಚಿಸುವ ಯೋಚನೆ ಮಾಡಿದೆ

ಪ್ರಯಾಣಿಕರ ದರಗಳನ್ನು ಎಲ್ಲ ತರಗತಿಗಳಲ್ಲೂ ಹೆಚ್ಚಿಸಲಾಗುವುದು ಆದರೆ, ಮೇಲಿನ ತರಗತಿಗಳ ದರಗಳು ಅಧಿಕ ಪ್ರಮಾಣದಲ್ಲಿ ಹೆಚ್ಚುವುವು. ಬಹಳ ಅಲ್ಪ ದೂರ ಪ್ರಯಾಣ ಮಾಡುವ ಬಡವರ ಮೇಲೆ ಇದರಿಂದ ಬೀಳಬಹುದಾದ ಹೊರೆ ತೀರ ಅಲ್ಪ. ಹಲವು ಸಂದರ್ಭಗಳಲ್ಲಿ ಇತರ ರೈಲ್ವೆಗಳಿಗಿಂತ ಇದು ಕಡಿಮೆಯಾಗಿಯೇ ಇರುವುದು—ಎಂಬುದಾಗಿ ಭಾರತ ಸರ್ಕಾರದ ಪ್ರಥಮ ರೈಲ್ವೆ ಆಯವ್ಯಯದ ಅಂದಾಜನ್ನು ಡೊಮಿನಿಯನ್ ಶಾಸನ ಸಭೆಯು ಮುಂದಿಡುತ್ತ ಟ್ರಾನ್ಸ್‌ಪೋರ್ಟ್ ಸಚಿವರಾದ ಡಾ|| ಜಾನ್ ಮ್ಯಾಥಾಯ್ ಅವರು ತಿಳಿಸಿದರು.

ನೂತನ ಯೋಜನೆಯ ಪ್ರಕಾರ ಪ್ರಥಮ ತರಗತಿಯ ದರವನ್ನು ಮೈಲಿಯೊಂದಕ್ಕೆ ೨೪ ಕಾಸುಗಳಿಂದ ೩೬ ಕಾಸುಗಳಿಗೂ, ದ್ವಿತೀಯ ತರಗತಿಯ ದರವನ್ನು ಮೈಲಿಗೆ ೧೨ ಕಾಸುಗಳಿಂದ ೧೬ ಕಾಸುಗಳಿಗೂ, ಇಂಟರ್ ತರಗತಿಯ ದರವನ್ನು ಸರಾಸರಿ ೫ ಕಾಸುಗಳಿಂದ ಸಾಧಾರಣ ರೈಲು ಬಂಡಿಗಳಲ್ಲಿ ೭|| ಕಾಸುಗಳಿಗೂ, ಮೇಲ್ ಗಾಡಿಯಲ್ಲಿ ೯ ಕಾಸುಗಳಿಗೂ, ಮೂರನೆಯ ತರಗತಿಯ ದರವನ್ನು ಈಗಿನ ೩|| ಕಾಸುಗಳಿಂದ ೪ ಕಾಸುಗಳಿಗೂ ಹೆಚ್ಚಿಸಲಾಗುವದು

ನೂತನ ಅಭಿವೃದ್ಧಿ ಯೋಜನೆಗಳು

ಬಜೆಟ್ಟಿನಲ್ಲಿ ಹೊಸದಾಗಿ ಮೂರು ರೈಲ್ವೆ ರಸ್ತೆಗಳನ್ನು ತಯಾರಿಸುವ ಯೋಜನೆಗೆ ಅವಕಾಶ ಕಲ್ಪಿಸಲಾಗಿದೆ ಈ ಯೋಜನೆಯಲ್ಲಿ ಅಸ್ಸಾಮಿಗೂ ಭಾರತದ ಉಳಿದ ಭಾಗಗಳಿಗೂ ನೇರವಾದ ರೈಲ್ವೆ ಸಂಬಂಧವನ್ನೇರ್ಪಡಿಸುವುದು ಮುಖ್ಯವಾದುದು

ನೌಕರರಿಗೆ ಹೆಚ್ಚು ಸಂಬಳ

ಸಂಬಳ ಸಮಿತಿಯ ಸಲಹೆಗಳ ಪ್ರಕಾರ ರೈಲ್ವೆ ನೌಕರರಿಗೆ ಹೆಚ್ಚು ಸಂಬಳ ಕೊಡಲು ೨೨|| ಕೋಟಿ ರೂಗಳಷ್ಟು ಹೆಚ್ಚು ಮೊಬಲಗನ್ನು ಒದಗಿಸಲಾಗಿದೆ

ಭಾರತ-ಪಾಕಿಸ್ಥಾನಗಳ ಆದಾಯ ಹಂಚಿಕೆ

ಭಾರತ ಮತ್ತು ಪಾಕಿಸ್ಥಾನ ಸರಕಾರಗಳ ಆದಾಯ ಹಂಚಿಕೆಯ ವಿಚಾರವಾಗಿ ಶಾಸನ ಸಭೆಯಲ್ಲಿ ಶ್ರೀ ಕೆ. ಸಂತಾನಂರವರ ಪ್ರಶ್ನೆಗೆ ಉತ್ತರ ಕೊಡುತ್ತಾ ಸರದಾರ್ ಪಟೇಲರು —ದೇಶ ವಿಭಜನೆಯಾದ ದಿನ ಸಂಯುಕ್ತ ಭಾರತ ಸರಕಾರದ ಒಟ್ಟು ಆದಾಯ ಸುಮಾರು ೨೮೧೦ ಕೋಟಿ ರೂಪಾಯಿ, ವೆಚ್ಚ ಸುಮಾರು ೩೨೦೦ ಕೋಟಿ ರೂಪಾಯಿ ಇದ್ದಿತು.

ಹಿಂದಿನ ಸರಕಾರದ ಲೆಕ್ಕಾಚಾರಪೂರ್ಣವಾಗುವವರೆಗೆ ಈ ವಿಚಾರದಲ್ಲಿ ಖಚಿತವಾದ ಅಂಕಿ ಅಂಶಗಳನ್ನು ಕೊಡಲಾಗುವುದಿಲ್ಲ. ಈ ಅಂಶಗಳಲ್ಲಿ ಹಲವು ಬಾಬುಗಳನ್ನು ಪಂಚಾಯತಿಯ ತೀರ್ಮಾನಕ್ಕೆ ಒಪ್ಪಿಸಬೇಕಾಗಬಹುದು. ಈ ಆದಾಯ ಹಂಚಿಕೆಯ ಬಗ್ಗೆ ಎರಡು ಡೊಮಿನಿಯನ್ ರಾಷ್ಟ್ರಗಳ ಅಭಿಪ್ರಾಯ ಮತ್ತು ಕೋರಿಕೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹೇಳಲಾಗುವುದಿಲ್ಲ ಎಂದು ತಿಳಿಸಿದರು.

ಪಾಕಿಸ್ಥಾನ ಸರಕಾರಕ್ಕೆ ೨೨ ಕೋಟಿ ರೂ. ಕೊಡಲಾಗಿದೆ

ಹಿಂದಿನ ಸಂಯುಕ್ತ ಭಾರತ ಸರಕಾರದ ಉಳಿತಾಯದ ನಿಧಿಯಿಂದ ಪಾಕಿಸ್ಥಾನ ಸರಕಾರಕ್ಕೆ ೨೨ ಕೋಟಿ ರೂಪಾಯಿಗಳನ್ನು ಕೊಡಲಾಯಿತು ಪಾಕಿಸ್ಥಾನ ಸರಕಾರಕ್ಕೆ ಭಾರತ ಸರಕಾರದವರು ಯಾವ ಹಣವನ್ನೂ ಸಾಲವಾಗಿ ಕೊಟ್ಟಿಲ್ಲ ಎಂಬುದಾಗಿ ಆರ್ಥಿಕ ಸಚಿವರಾದ ಶ್ರೀ ಷಣ್ಮುಗಂ ಚೆಟ್ಟಿಯಾರ್‌ರವರು ಸೇಟ್ ಗೋವಿಂದದಾಸರ ಪ್ರಶ್ನೆಗೆ ಉತ್ತರ ಕೊಟ್ಟರು.

ಭಾರತಶಾಸನ ಸಭೆ

ಮಸೂದೆಗಳ ಮೇಲೆ ಚರ್ಚೆ

೧೯ ನೆಯ ತಾ|| ದಿವಸ ಭಾರತ ಡೊಮಿನಿಯನ್ ಶಾಸನ ಸಭೆಯಲ್ಲಿ, ಕಾರ್ಮಿಕ ಶಾಖಾ ಸಚಿವರು ಮಂಡಿಸಿದ್ದ ೧೯೨೬ ರ ಭಾರತ ಟ್ರೇಡ್ ಯೂನಿಯನ್ ಆಕ್ಟಿನ ತಿದ್ದುಪಡಿಮಸೂದೆ ಅಂಗೀಕೃತವಾಯಿತು

ಈ ದಿನ ಮೂರು ಜನ ಸದಸ್ಯರು ಈ ಮಸೂದೆಯ ಪರವಾಗಿ ಮಾತನಾಡಿ, ಕಾರ್ಮಿಕರ ಸಂಘಟನೆಗೆ ಹೆಚ್ಚಿನ ಸೌಕರ್ಯಗಳಿರಬೇಕೆಂದು ಕೋರಿದರು ಸಚಿವರು ಮಸೂದೆಯ ಮೇಲಿನ ಟೀಕೆಗಳಿಗೆ ಉತ್ತರಕೊಡುತ್ತಾ, "ಈ ತಿದ್ದುಪಡಿಯಲ್ಲಿ ಕಾರ್ಮಿಕರಿಗೆ ಅನ್ಯಾಯವಾಗಿ ತೊಂದರೆಯಾಗದಂತೆ ರಕ್ಷಣೆಗಳನ್ನು ಕೊಡಲಾಗಿದೆ" ಎಂದು ತಿಳಿಸಿ 'ಕಾರ್ಮಿಕರು ಮತ್ತು ಕಾರ್ಖಾನೆಗಳ ಮಾಲೀಕರು ತಮ್ಮ ಸಮಸ್ಯೆಗಳನ್ನು ಪರಸ್ಪರ ಸಂಧಾನ ಸಮಾಲೋಚನೆಗಳಿಂದ ಪರಿಹರಿಸಿಕೊಳ್ಳಬೇಕು ಕಾರ್ಮಿಕರು ಕೈಗಾರಿಕೋದ್ಯಮಗಳಲ್ಲಿ ಪಾಲುದಾರರಾಗಿ, ಮಾಲೀಕರು–ಕಾರ್ಮಿಕರು ಎಂಬ ಭೇದ ಸಂಪೂರ್ಣವಾಗಿ ಇಲ್ಲದೇ ಇರುವ ಕಾಲ ಒದಗಲಿ" ಎಂದು ಹಾರೈಸಿದರು

ಚೀಫ್ ಕಮೀಷನರ್ ಪ್ರಾಂತಗಳಲ್ಲಿ ವಾರ್ತಾ ಪ್ರಚಾರದ ಹತೋಟಿ

ಭಾರತದ ಚೀಫ್ ಕಮೀಷನರ್ ಪ್ರಾಂತಗಳಲ್ಲಿ, ಅನಪೇಕ್ಷಿತವಾದ ಸುದ್ದಿಗಳು ಹರಡದಂತೆ ತಡೆಯಲು ಹಲವು ವಿಶೇಷ ಅಧಿಕಾರಗಳಿರಬೇಕೆಂದು, ಭಾರತದ ಉಪಪ್ರಧಾನಿ ಸರದಾರ್ ಪಟೇಲರು ಒಂದು ಮಸೂದೆಯನ್ನು ಮಂಡಿಸಿದರು

ಸರದಾರ್ ಪಟೇಲರು ಇದರ ಅವಶ್ಯಕತೆಯನ್ನು ವಿವರಿಸುತ್ತಾ 'ಸುದ್ದಿ ಸಮಾಚಾರಗಳ ಪ್ರಕಟನೆಯಲ್ಲಿ ವೃತ್ತಪತ್ರಿಕೆಗಳಿಗೆ ಸಾಧ್ಯವಾದಷ್ಟು ಸ್ವಾತಂತ್ರ್ಯವಿರಬೇಕಾದುದು ನ್ಯಾಯ! ಪತ್ರಿಕೆಗಳಿಗೆ ಈಗಿರುವುದಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯವೂ ಇರಬೇಕಾದುದೇ! ಆದರೆ ಹಲವು ಸನ್ನಿವೇಶ ಮತ್ತು ಘಟನೆಗಳಿಂದ ಅನಿವಾರ್ಯವಾಗಿ ಈ ಮಸೂದೆಯನ್ನು ಈಗ ತರಲೇಬೇಕಾಗಿದೆ" ಎಂದು ತಿಳಿಸಿದರು

'ಭಾರತದಲ್ಲಿ ಮುಸ್ಲಿಂ ಲೀಗಿನವರು ಕೈಗೊಂಡ 'ಡೈರೆಕ್ಟ್ ಆಕ್ಷನ್' ಪರಿಣಾಮವಾಗಿ ಕಲ್ಕತ್ತಾ ಮತ್ತು ಇತರ ಪ್ರದೇಶಗಳಲ್ಲಿ ನಡೆದ ಅಪಾರವಾದ ನರಹತ್ಯೆಯಿಂದ ವೃತ್ತಪತ್ರಿಕಾ ಸ್ವಾತಂತ್ರ್ಯವನ್ನು ತಡೆಯಬೇಕಾಯಿತು. ಈ ವಿಧವಾದ ಸುದ್ದಿ ಪ್ರಕಟನೆಗಳ ಹತೋಟಿಯನ್ನು ನಾನಾ ಪ್ರಾಂತ ಸರಕಾರಗಳು ಜಾರಿಗೆ ತಂದವು

ಆದರೆ ಈ ವಿಚಾರದಲ್ಲಿ ಕೇಂದ್ರ ಸರಕಾರದವರು ಸೂಕ್ತವಾದ ಯಾವ ಕ್ರಮವನ್ನೂ ಕೈಕೊಳ್ಳಲಿಲ್ಲ ಅನಂತರ ದೆಹಲಿಯಲ್ಲಿ ನೆರೆದ ಪತ್ರಿಕಾ ಸಂಪಾದಕರ ಸಮ್ಮೇಳನದಲ್ಲಿ ಸಮಾಚಾರಗಳ ಪ್ರಕಟನೆಯಲ್ಲಿ ಎಲ್ಲಾ ವೃತ್ತ ಪತ್ರಿಕೆಗಳೂ ಅನುಸರಿಸಬೇಕಾದ ಹಲವು ನಿಯಮಗಳು ಅಂಗೀಕೃತವಾದವು. ಆದರೆ ಈ ನಿಯಮಗಳು ನಿರ್ಬಂಧವಾಗಿರಲಿಲ್ಲ.

ಈಚೆಗೆ ಹಲವು ಪ್ರಾಂತ ಸರಕಾರಗಳು ಕೋಮುವಾರು ಘಟನೆಗಳು ಘೋರವಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವಾಗ, ಈ ವಿಧವಾದ ಕೆಟ್ಟ ಸುದ್ದಿಗಳು ಹರಡದಂತೆ ಕೇಂದ್ರ ಸರಕಾರದವರು ತಡೆಯಬೇಕೆಂದು ಕೋರಿದವು. ಇದರಿಂದ ಕೇಂದ್ರ ಸರಕಾರದವರು ಒಂದು ಆರ್ಡಿನೆನ್ಸ್ ಜಾರಿಗೆ ತಂದರು ಎಂದು ತಿಳಿಸಿ 'ಈಗ ಡೊಮಿನಿಯನ್ ಶಾಸನ ಸಭೆ ನೆರೆದಿರುವಾಗ, ಈ ವಿಶೇಷ ಅಧಿಕಾರಗಳು ಇನ್ನೂ ಸ್ವಲ್ಪ ಕಾಲವಿರಬೇಕೆಂದು ಈ ಮಸೂದೆಯಲ್ಲಿ ಕೋರಲಾಗಿದೆ. ಈ ಮಸೂದೆಯು ಕೇವಲ ವಿಶೇಷ ಪರಿಸ್ಥಿತಿಗೊಳಗಾಗಿರುವ ದೆಹಲಿ, ಅಜ್ಮೀರ್, ಮಾರವಾಡ ಮೊದಲಾದ ಚೀಫ್ ಕಮೀಷನರ್, ಪ್ರಾಂತಗಳಿಗೆ ಮಾತ್ರ ಅನ್ವಯಿಸುವುದು" ಎಂದು ಸೂಚಿಸಿದರು.

ಕೊನೆಯಲ್ಲಿ ಪಟೇಲರು ವಿಶೇಷ ಪರಿಸ್ಥಿತಿ ಶೀಘ್ರ ಕೊನೆಗಂಡು ಈ ವಿಶೇಷ ಅಧಿಕಾರಗಳೂ ರದ್ದಾಗುವಂತಾಗಲಿ ಎಂದು ಹಾರೈಸಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆ

ಡಿಸೆಂಬರ್ ೧೧ ನೇ ತಾರೀಖು

ಪ್ರಜಾಪ್ರತಿನಿಧಿ ಸಭೆಯ ನವರಾತ್ರಿ ಅಧಿವೇಶನವು ಮುಂದಿನ ತಿಂಗಳು ೧೧ನೇ ತಾ|| ಗುರುವಾರ ಮಧ್ಯಾಹ್ನ ಎರಡು ಘಂಟೆಗೆ ಸರ್ ಪುಟ್ಟಣ್ಣಶೆಟ್ಟಿ ನಗರ ಭವನದಲ್ಲಿ, ನಡೆಯುವುದೆಂದು ಸರ್ಕಾರದ ಪ್ರಕಟನೆಯಾಗಿದೆ.

ಪಂಚಾಚಾರ್ಯ ಭಜನ ಸಂಘ ಹೊಳೆ ಹನಸವಾಡಿ

ಶಿವಮೊಗ್ಗಾ ತಾ|| ಹೊಳೆಹನಸವಾಡಿ ಗ್ರಾಮದಲ್ಲಿರುವ ಮೇಲ್ಕಂಡ ಭಜನ ಸಂಘದವರು ಪ್ರತಿವರ್ಷದ ಪದ್ಧತಿಯಂತೆ ಅಶ್ವಯುಜ ಶುದ್ಧ ೧ ರಿಂದ ವಿಜಯದಶಮಿಯವರೆಗೆ ಪ್ರತಿ ದಿನವೂ ಪಂಚಾಚಾರ್ಯರ ಭಾವಚಿತ್ರದೊಂದಿಗೆ ಮನೋಹರವಾಗಿ ಆಚಾರ್ಯರ ಭಜನೆಯನ್ನು ಮಾಡುತ್ತ ಪ್ರತಿ ಒಂದು ಬೀದಿಯಲ್ಲಿಯೂ ಸಂಚರಿಸುತ್ತಿದ್ದರು ಈ ಭಜನ ಮಂಡಲಿಯವರು ಪ್ರತಿ ದಿವಸ ಹಿರೇಕಲ್ಲು ಮಠದಿಂದ ಹೊರಟು ನಂದೀಶ್ವರ ದೇವಸ್ಥಾನಕ್ಕೆ ಬಂದು ತಮ್ಮ ಭಜನವನ್ನು ಸಮಾಪ್ತಿಗೊಳಿಸುತ್ತಿದ್ದರು ಭಜನವು ಸಮಾಪ್ತಿಗೊಂಡ ಮೇಲೆ ಪ್ರತಿ ದಿವಸವೂ ವೇ|| ಪುರೋಹಿತ ಚೆನ್ನಾರಾಧ್ಯರು ಪಂಚಾಚಾರ್ಯರ ಮಹಿಮೆಯ ಬಗ್ಗೆ ಉಪನ್ಯಾಸವನ್ನು ಮಾಡಿ ಸಭಿಕರನ್ನು ಸಂತೋಷಪಡಿಸುತ್ತಿದ್ದರು. ವಿಜಯದಶಮಿಯ ದಿವಸ ನಂದೀಶ್ವರ ದೇವಸ್ಥಾನದಲ್ಲಿ ರುದ್ರಾಭಿಷೇಕಾದಿಗಳು ನಡೆದು ಅನ್ನ ಸಂತರ್ಪಣೆಯು ನೆರವೇರಿತು. ವಿಜಯದಶಮಿಯದಿವಸ ಸಾಯಂಕಾಲ ಶ್ರೀಜಗದ್ಗುರು ಪಂಚಾಚಾರ್ಯರ ಭಾವಚಿತ್ರದೊಡನೆ ಉತ್ಸವವು ವಾದ್ಯವೈಭವದೊಡನೆ ಹಿರೇಕಲ್ಲು ಮಠದಿಂದ ಹೊರಟು ನಂದೀಶ್ವರ ದೇವಸ್ಥಾನಕ್ಕೆ ಬಂದು ತಲುಪಿತು ಆಮೇಲೆ ವೇ|| ಪುರೋಹಿತ ಚೆನ್ನಾರಾಧ್ಯರು "ಹರ ಪೂಜೆ ಗುರು ಸೇವೆ" ಎಂಬ ವಿಷಯದ ಮೇಲೆ ೩ ತಾಸುಗಳವರೆಗೆ ಅಮೋಘವಾದ ಭಾಷಣವನ್ನು ಮಾಡಿ ಸರ್ವ ಸಭಿಕರನ್ನೂ ಸಂತೋಷಪಡಿಸಿದರು ಆಮೇಲೆ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು ಮಹಾಗುರುಭಕ್ತರಾದ ಹೊಳೆಹನಸವಾಡಿ ಗ್ರಾಮದವರಿಗೂ, ಪುರೋಹಿತ ಚೆನ್ನಾರಾಧ್ಯರಿಗೂ, ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ

ಎಚ್ ಬಿ ಚನ್ನಬಸಪ್ಪಗೌಡ,
ಗೋಳಿಹಳ್ಳಿ

ಸ್ವೀಕಾರ

ತಿಪ್ಪೂರು ಟವನ್ನಿನಲ್ಲಿರುವ ಅಥಣಿ ಮ||ರಾ|| ಮರುಳಸಿದ್ಧಪ್ಪ ಸಿಂದಗಿ ಇವರು ಇದೇ ತಿಂಗಳು 13 ನೆಯ ತಾ|| ದಿವಸ ತಮ್ಮ ಪುತ್ರನಿಗೆ "ವೀರಭದ್ರಸ್ವಾಮಿ" ಎಂದು ನಾಮಕರಣಮಾಡಿದ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 1 ರೂ. ಯು ವೇ|| ಆರ್. ಎಂ. ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲುಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಒಸ್ಮ ಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವೆ ಪ್ರಾಣವೆಂದೆನಿಸುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಸ್ಕೃತ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವದು ಈ ಗ್ರಂಥವು ಈಗ್ಗೆ ಸುಮಾರು **೫ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರಿಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಇತರ ವ್ಯಾಖ್ಯಾನದ ಸತ್ಯಸತ್ಯವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ಶ್ರೀಹರಿಹರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य—संस्कृत)	१ रु.
षट्स्थलकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಕಬ್ಬಾಳಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ವರ್ತಮಾನಸಂಗ್ರಹ

ಭಾರತಸರ್ಕಾರಕ್ಕೂ ಹೈದ್ರಾಬಾದಿಗೂ ತಾತ್ಕಾಲಿಕ ಒಪ್ಪಂದ

ಮೊನ್ನೆ ಶನಿವಾರ ೨೯ ನೆಯ ತಾರೀಖಿನ ದಿವಸ ನಿಜಾಮರಿಗೂ ಭಾರತ ಸರಕಾರಕ್ಕೂ ೧ ವರ್ಷದ ಮಟ್ಟಿಗೆ ತಾತ್ಕಾಲಿಕ ಒಪ್ಪಂದವಾಯಿತು ಈ ಬಗ್ಗೆ ಸರ್ದಾರ್ ಪಟೇಲರು ಮೊನ್ನೆ ದಿವಸ ಭಾರತ ಶಾಸನಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತ—" ಹೈದರಾಬಾದ್ ಸಂಸ್ಥಾನವು ಈವರೆಗೆ ಭಾರತ ಡೊಮಿನಿಯನ್ನಿಗೆ ಸೇರದಿದ್ದರೂ ಪಾಕೀಸ್ಥಾನಕ್ಕೆ ಸೇರುವುದಿಲ್ಲವೆಂಬ ವಿಷಯವು ವ್ಯಕ್ತಪಟ್ಟಿದೆಯೆಂದೂ, ವಿದೇಶ ವ್ಯವಹಾರ–ರಕ್ಷಣೆ–ಸಂಚಾರ–ಸಮಾಚಾರಾದಿಗಳು ಭಾರತ ಸರಕಾರದ ಅಧೀನದಲ್ಲಿರುವವೆಂದೂ, ನಿಜಾಮರು ತಮ್ಮ ಏಜಂಟರನ್ನು ವ್ಯಾಪಾರದೃಷ್ಟಿಯಿಂದ ಪರದೇಶಗಳಲ್ಲಿ ಇಡಬಹುದೆಂದೂ, ಆದರೆ ಆ ಏಜಂಟರು ರಾಜಕೀಯದಲ್ಲಿ ಪ್ರವೇಶಿಸಬಾರದೆಂದೂ, ಹೈದರಾಬಾದ್ ಸಂಸ್ಥಾನಕ್ಕೆ ನ್ಯಾಯವಾಗಿ ಸಲ್ಲಬೇಕಾದಷ್ಟು ಶಸ್ತ್ರಾಸ್ತ್ರಗಳನ್ನು ಭಾರತ ಸರಕಾರವೇ ಒದಗಿಸುವುದೆಂದೂ, ಹೈದರಾಬಾದಿನಲ್ಲಿರತಕ್ಕ ಭಾರತ ಸೈನವನ್ನು ಮುಂದಿನ ಫೆಬ್ರುವರಿ ತಿಂಗಳೊಳಗಾಗಿ ವಾಪಸು ಕರೆಯಿಸಿಕೊಳ್ಳಬೇಕೆಂದೂ ಈ ಕರಾರಿನಿಂದ ತೊಂದರೆಯು ಪರಿಹಾರವಾದಂತಾಯಿತೆಂದೂ, ಆದುದರಿಂದ ಆ ಸಂಸ್ಥಾನವನ್ನು ಬಿಟ್ಟುಹೋಗಿರುವ ಪ್ರಜೆಗಳು ತಿರುಗಿ ತಮ್ಮ ತಮ್ಮ ಗ್ರಾಮಗಳಿಗೆ ಬರಬೇಕೆಂದೂ, ಇನ್ನು ಮುಂದೆ ಹೈದರಾಬಾದ್ ಸಂಸ್ಥಾನದಲ್ಲಿ ಶಾಂತಿಯು ನೆಲಸುವಂತಾಗಲೆಂದೂ ನುಡಿದರು

ಲಾರ್ಡ್ ಮೌಂಟ್ ಬೇಟನ್ನರವರಿಗೆ ನಿಜಾಮರು ಬರೆದಿರುವ ಪತ್ರದ ಸಾರಾಂಶ

ಡೊಮಿನಿಯನ್ ಪ್ರವೇಶ ವಿಚಾರವೊಂದನ್ನು ಬಿಟ್ಟು ಎಲ್ಲ ವಿಷಯಗಳಲ್ಲಿಯೂ ಸಂಧಾನ ನಡೆಸಲು ಸಿದ್ಧವಾಗಿದ್ದೇನೆ ತಾತ್ಕಾಲಿಕ ಒಪ್ಪಂದದ ಅವಧಿಯಲ್ಲಿ ಭಾರತ ಹೈದರಾಬಾದುಗಳ ಸಂಬಂಧವು ಪರಸ್ಪರ ಮೈತ್ರಿ ಅನುರಾಗಗಳಿಂದ ಕೂಡಿದ್ದರೆ ಮುಂದೆ ಭಾರತ ಹೈದರಾಬಾದುಗಳ ಸಂಬಂಧದ ಬಗ್ಗೆ ತೃಪ್ತಿಕರವಾದ, ಸಮಂಜಸವಾದ ಒಪ್ಪಂದಕ್ಕೆ ಬರಲು ಸಾಧ್ಯವಾಗುವುದು ಎಂದು ನಿಜಾಮರು ತಿಳಿಸಿದ್ದಾರೆ ಈಗಿನ ಒಪ್ಪಂದದಿಂದ ತಮ್ಮ ಪರಮಾಧಿಕಾರಕ್ಕೆ ಲೇಶವೂ ಚ್ಯುತಿ ಬಂದಿಲ್ಲವೆಂಬ ಅಂಶವನ್ನು ಅವರು ಒತ್ತಿ ಹೇಳಿದ್ದಾರೆ ಹೈದರಾಬಾದಿಗೆ ಅತ್ಯಾವಶ್ಯಕವಾಗಿಯೂ, ತ್ವರಿತವಾಗಿಯೂ ಬೇಕಾದ ಆಯುಧ ಸಾಮಗ್ರಿಗಳನ್ನು ಒದಗಿಸಬೇಕೆಂದು ನಿಜಾಮರು ಭಾರತ ಸರ್ಕಾರವನ್ನು ಪ್ರಾರ್ಥಿಸಿದ್ದಾರೆ ಜಾತಿ ಮತಗಳ ಭೇದಭಾವನೆಯಿಲ್ಲದೆ ಪ್ರಜೆಗಳೆಲ್ಲರಿಗೂ ಪೂರ್ಣ ರಕ್ಷಣೆಯೊದಗಿಸುವುದಾಗಿಯೂ ಅವರು ತಿಳಿಸಿದ್ದಾರೆ

ಹೈದರಾಬಾದಿನಲ್ಲಿ ತಾತ್ಕಾಲಿಕ ಮಂತ್ರಿಮಂಡಲದ ರಚನೆ

ನಿಜಾಮರು ಮೊದಲಿನ ಮಂತ್ರಿಮಂಡಲವನ್ನು ರದ್ದುಗೊಳಿಸಿ ಮಿ|| ಮೀರ್ ಲಾಯಕ್ ಅಲಿಯವರನ್ನು ಮುಖ್ಯಮಂತ್ರಿಗಳನ್ನಾಗಿ ನೇಮಕ ಮಾಡಿರುವರು ನೂತನ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಚಿತವಾಗಲಿರುವ ತಾತ್ಕಾಲಿಕ ಮಂತ್ರಿಮಂಡಲದಲ್ಲಿ ಅಧಿಕಾರಿ ವರ್ಗಕ್ಕೆ ಸೇರಿದ ನಾಲ್ವರು ಸಚಿವರೂ, ನಾಲ್ವರು ಹಿಂದೂ ಖಾಸಗಿ ಸಚಿವರೂ, ನಾಲ್ವರು ಮುಸ್ಲಿಂ ಖಾಸಗಿ ಸಚಿವರೂ ಇರುವರೆಂದು ಪ್ರಕಟವಾಗಿದೆ. ಒಟ್ಟು ೧೩ ಜನ ಮಂತ್ರಿಗಳಿರುವರು

ಸ್ವತಂತ್ರ ಭಾರತದ ಪ್ರಥಮ ಬಜೆಟ್

ಸ್ವತಂತ್ರ ಭಾರತದ ಪ್ರಥಮ ಬಜೆಟ್ಟನ್ನು ಭಾರತದ ಡೊಮಿನಿಯನ್ ಶಾಸನ ಸಭೆಯಲ್ಲಿ ಹಣಕಾಸಿನ ಸಚಿವ ಶ್ರೀ ಷಣ್ಮುಗಂ ಚೆಟ್ಟಿಯವರು ಮಂಡಿಸಿದರು ಬಜೆಟ್ಟಿನ ಮುಖ್ಯ ಅಂಶಗಳನ್ನು ವಿವರಿಸುತ್ತಾ ಭಾರತದ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿದೆಯೆಂದೂ, ಭಾರತದ ಆರ್ಥಿಕ ಪ್ರಗತಿಯಲ್ಲಿ ತಮಗೆ ಗಾಢ ವಿಶ್ವಾಸವಿದೆಯೆಂದೂ ಸಚಿವರು ತಿಳಿಸಿದರು

ಆಗಸ್ಟ್ ೧೫ರಿಂದ ಈ ವರ್ಷ ಅಂತ್ಯದವರೆಗೆ ಆದಾಯ ೧೭೧ ಕೋಟಿ ೧೫ ಲಕ್ಷ ರೂಗಳು ವೆಚ್ಚ ೧೯೭ ಕೋಟಿ ೩೯ ಲಕ್ಷ ಖೋತಾ ೨೬ ಕೋಟಿ ೨೪ ಲಕ್ಷ ರೂಗಳೆಂದು ಅಂದಾಜು ಮಾಡಲಾಗಿದೆ ಖೋತಾ ಪ್ರಮಾಣವನ್ನು ಕಡಿಮೆ ಮಾಡಲು ಹತ್ತಿ ಬಟ್ಟೆ ಮತ್ತು ನೂಲಿನ ರಫ್ತು ಸುಂಕದ ಪ್ರಮಾಣವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸುವುದಾಗಿ ಮಂತ್ರಿಗಳು ತಿಳಿಸಿದರು

ಭಾರತದ ವಿಭಜನೆಯ ಪರಿಣಾಮವಾಗಿ ತಲೆದೋರಿದ ಅಸಾಧಾರಣ ಪರಿಸ್ಥಿತಿಯೇ ಅಧಿಕ ವೆಚ್ಚಕ್ಕೆ ಮುಖ್ಯ ಕಾರಣ ! ಭಾರತವನ್ನು ಎರಡು ಭಾಗ ಮಾಡಿದುದರಿಂದ ಎರಡೂ ಡೊಮಿನಿಯನ್ನುಗಳ ಆರ್ಥಿಕಭದ್ರತೆ ಕುಂದಿದೆ ಆದರೂ ಭಾರತ ಡೊಮಿನಿಯನ್ನಿನ ಕ್ಷೇತ್ರ ಪಾಕಿಸ್ಥಾನಕ್ಕಿಂತಲೂ ವಿಶಾಲವಾಗಿದೆ ಭಾರತದ ಜನಬಲ ಸಾಧನ ಸಂಪತ್ತುಗಳು, ಕೈಗಾರಿಕೋನ್ನತಿಗೆ ಅವಶ್ಯಕವಾದ ಅನುಕೂಲಗಳು ಹೇರಳವಾಗಿವೆ ಭಾರತದ ಆರ್ಥಿಕ ಪ್ರಗತಿಯಲ್ಲಿ ನನಗೆ ಗಾಢ ವಿಶ್ವಾಸವಿದೆ—ಎಂದು ಸಚಿವರು ಆಶಾಭಾವನೆಯನ್ನು ವ್ಯಕ್ತಪಡಿಸಿದರು

ಪರರ ಸಹಾಯ ನಂಬಿಕೊಳ್ಳಬಾರದು

ಆಹಾರ ಪರಿಸ್ಥಿತಿಯ ಪ್ರಸ್ತಾಪವೆತ್ತಿ ಸಚಿವರು ಭಾರತ ಪರದೇಶಗಳ ಸಹಾಯವನ್ನು ಸದಾ ಅಪೇಕ್ಷಿಸುವುದು ಸಾಧ್ಯವಿಲ್ಲವೆಂದೂ, ಆಹಾರವಸ್ತುಗಳನ್ನು ತರಿಸಿಕೊಳ್ಳುವುದಕ್ಕೆ ಅಧಿಕ ವೆಚ್ಚವಾದರೆ ಕೈಗಾರಿಕೆ ಮತ್ತು ಇತರ ಅಭಿವೃದ್ಧಿ ಯೋಜನೆಗಳಿಗೆ ಹಣ ಒದಗಿಸುವುದು ಕಷ್ಟವೆಂದೂ ತಿಳಿಸಿದರು

ಯುದ್ಧಾನಂತರದ ಯೋಜನೆಗಳು

ಈಗ ಸಿದ್ಧವಾಗಿರುವ ಯುದ್ಧಾನಂತರ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಾಂತಗಳಿಗೆ ಸಹಾಯ ನೀಡಲು ಬಜೆಟ್ಟಿನಲ್ಲಿ ೨೦ ಕೋಟಿ ೨೯ ಲಕ್ಷ ರೂಗಳನ್ನು ವಿನಿಯೋಗಿಸಲಾಗಿದೆ ಇದರ ಜೊತೆಗೆ ಪ್ರಾಂತಗಳಿಗೆ ಸಾಲರೂಪವಾಗಿ ಸಹಾಯ ಮಾಡಲು ೧೫ ಕೋಟಿ ರೂಗಳನ್ನು ಒದಗಿಸಲಾಗಿದೆ ಭಾರತದ ವಿಭಜನೆಯ ದುಷ್ಪರಿಣಾಮವಾಗಿ ಭಾರತದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರೂ ಈ ಯೋಜನೆಗಳನ್ನು ಕೈಗೊಳ್ಳಲು ಪ್ರಾಂತಗಳಿಗೆ ಸಾಧ್ಯವಾದ ಎಲ್ಲಾ ಸಹಾಯವನ್ನೂ ನೀಡಲು ಭಾರತ ಸರ್ಕಾರವು ಸಿದ್ಧವಿದೆಯೆಂದೂ, ಪ್ರಾಂತಗಳೂ ಸಹ ಅಧಿಕ ವೆಚ್ಚಕ್ಕೆ ಅವಕಾಶಕೊಡದೆ ತಮ್ಮ ಸಾಧನ ಸಂಪತ್ತನ್ನು ವಿವೇಕದಿಂದ ವಿನಿಯೋಗಿಸಬೇಕೆಂದೂ ಸಚಿವರು ತಿಳಿಸಿದರು

ಕಾಶ್ಮೀರದ ಕಣಿವೆಗಳಲ್ಲಿ ದಾಳಿಕಾರರಿಗೆ ಶಸ್ತ್ರಾಸ್ತ್ರಗಳ ಸಹಾಯ

ಜಮ್ಮುವಿನ ಪಶ್ಚಿಮಭಾಗದಲ್ಲಿ ೬೦ ಮೈಲಿ ದೂರದಲ್ಲಿರುವ ದೇವ ಪಾಟಲ ಎಂಬಲ್ಲಿ ದಾಳಿಕಾರರು ಉಗ್ರವಾಗಿ ಪ್ರತಿಭಟಿಸುತ್ತಿದ್ದಾರೆ ವ್ಯವಸ್ಥಿತ ರೀತಿಯಲ್ಲಿ ಅವರು ಭಾರತ ಸೈನ್ಯದೊಂದಿಗೆ ಕದನ ನಡೆಸುತ್ತಿದ್ದಾರೆ ಜಮ್ಮು ಪ್ರಾಂತ್ಯದ ಪ್ರಮುಖ ಎಮರ್ಜೆನ್ಸಿ ಅಧಿಕಾರಿಗಳಾದ ಶ್ರೀ ಭಕ್ಷಿ ಗುಲಾಂ ಮಹಮದ್‌ರವರು ದೇವಪಾಟಲಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿಕೊಂಡು ಬಂದರು ದೇವ ಪಾಟಲ ಮತ್ತು ಅದರ ಅಕ್ಕಪಕ್ಕದ ಹಳ್ಳಿಗಳು ಸಂಪೂರ್ಣವಾಗಿ ನಾಶವಾಗಿವೆ ಎಂದು ಭಕ್ಷಿಯವರು ತಿಳಿಸಿದ್ದಾರೆ

ಕಾಶ್ಮೀರದ ಕಣಿವೆಗಳಲ್ಲಿ ಕಾದಾಡುತ್ತಿರುವ ದಾಳಿಕಾರರಿಗೆ ಪಾಕಿಸ್ತಾನ್ ಸರ್ಕಾರದಿಂದ ಶಸ್ತ್ರಾಸ್ತ್ರಗಳು, ಟ್ರಕ್ಕುಗಳು, ಪೆಟ್ರೋಲು ಮತ್ತು ಆಹಾರ ಸರಬರಾಜಾಗುತ್ತಿದೆ. ಆಪಾಯಕ್ಕೀಡಾದ ಮುಸ್ಲಿಮರನ್ನು ಸಂರಕ್ಷಿಸಲು ಒಂದ ನಿರಪರಾಧಿ ಹಿಂದೂಗಳನ್ನು ಶಸ್ತ್ರಸಜ್ಜಿತ ಗಲಭೆಗಾರರು ಹತಮಾಡಿದ್ದಾರೆ ಪ್ರಾಣ ಸಂರಕ್ಷಣೆಗೋಸ್ಕರ ಕಾಶ್ಮೀರಿಗಳಿಗೆ ಶಸ್ತ್ರಗಳನ್ನು ಕೊಡಬೇಕೆಂದು ಗುಲಾಂ ಮಹಮದ್ ಭಕ್ಷಿಯವರು ಒತ್ತಾಯಮಾಡಿದ್ದಾರೆ

ಆಕ್ರಮಣಕಾರರಿಂದ ಸುತ್ತಲ್ಪಟ್ಟ ಸೈನ್ಯದ ವಿಮೋಚನೆ

ಕೋಟ್ಲಿ ರಣಕ್ಷೇತ್ರದಲ್ಲಿ ಶತ್ರುಗಳಿಂದ ಸುತ್ತಲ್ಪಟ್ಟಿದ್ದ ಕಾಶ್ಮೀರ ಮತ್ತು ಜಮ್ಮು ಪ್ರಾಂತ್ಯದ ರಕ್ಷಣೆ ಸೈನ್ಯಗಳನ್ನು ವಿಮೋಚನಗೊಳಿಸಲಾಗಿದೆ ಭಾರತ ಸೈನ್ಯ ಕೋಟ್ಲಿ ರಣಕ್ಷೇತ್ರವನ್ನು ಭೇದಿಸಿಕೊಂಡು ಮುಂದು ವರಿಯಲು ಪ್ರಾರಂಭಿಸಿದ ಕೂಡಲೆ ಶತ್ರುಗಳು ಪಲಾಯನಮಾಡಲಾರಂಭಿಸಿದ್ದಾರೆ ಉರಿಕ್ಷೇತ್ರದಲ್ಲಿ ಭಾರತ ಸೈನ್ಯ, ಗಲಭೆಕಾರರ ಒಂದು ಗುಂಪನ್ನು ಸೆರೆ ಹಿಡಿದಿದೆ ಗಲಭೆಗಾರರ ಗುಪ್ತಸ್ಥಳಗಳನ್ನು ಭಾರತ ವೈಮಾನಿಕ ಪಡೆಗಳು ಪತ್ತೆ ಹಚ್ಚುತ್ತಿವೆ

ಜಮ್ಮು ಪಾಕಿಸ್ತಾನ್ ಗಡಿಯಲ್ಲಿ ಘರ್ಷಣೆ

ಜಮ್ಮು ಪಾಕಿಸ್ತಾನ್ ಗಡಿಯಲ್ಲಿ ೫೦ ಮೈಲಿ ದೂರದ ಕ್ಷೇತ್ರದಲ್ಲಿ ಘರ್ಷಣೆಗಳು ಕೆಲವು ದಿನಗಳೀಚೆಗೆ ಪ್ರಬಲವಾಗಿವೆ

ಮೀರ್‌ಪುರಜಿಲ್ಲೆಯಲ್ಲಿ ಸಶಸ್ತ್ರ ದಾಳಿ

ಶತ್ರುಗಳು ಅತ್ಯಾಧುನಿಕ ಶಸ್ತ್ರಗಳನ್ನು ಪಡೆದಿದ್ದಾರೆ ಮೀರ್‌ಪುರ ಜಿಲ್ಲೆಯ ಎರಡು ಗ್ರಾಮಗಳನ್ನು ರಾತ್ರಿ ದಾಳಿಕಾರರು ಮುತ್ತಿದರು ಈ ಎರಡು ಗ್ರಾಮಗಳಲ್ಲಿಯೂ ಸುಮಾರು ೫,೦೦೦ ಪ್ರಜೆಗಳನ್ನು ತಕ್ಷಣ ರಕ್ಷಿಸಲಾಯಿತು ಇನ್ನು ಕೆಲವರು ದಾಳಿಕಾರರೊಡನೆ ಧೈರ್ಯವಾಗಿ ಕಾದಾಡಿಮಡಿದರು ಇನ್ನೊಂದಿಷ್ಟು ಜನರು ಆತ್ಮರಕ್ಷಣೆಗೋಸ್ಕರ ತಲೆತಪ್ಪಿಸಿಕೊಂಡು ಓಡಿದರು ಈ ಪ್ರದೇಶದ ಸುತ್ತುಮುತ್ತಲಿರುವ ಸುಮಾರು ೪೫ ಹಳ್ಳಿಗಳ ಮೇಲೆ ಶತ್ರುಗಳು ದಾಳಿ ನಡೆಸಿದ್ದಾರೆಂದು ಅದೇ ಬಾತ್ಮೀದಾರರು ತಿಳಿಸಿದ್ದಾರೆ ಜಮ್ಮು ಪ್ರಾಂತ್ಯದಲ್ಲಿ ನಾಲ್ಕು ನಿರಾಶ್ರಿತ ಶಿಬಿರಗಳನ್ನು ಈಗ ಸ್ಥಾಪಿಸಲಾಗಿದೆ.

ಜಮ್ಮುವಿಗೆ ಮೇಜರ್‌ಜನರಲ್ ತಿಮ್ಮಯ್ಯನವರ ಭೇಟಿ

ಮೇಜರ್ ಜನರಲ್ ತಿಮ್ಮಯ್ಯನವರು ಜಮ್ಮುವಿಗೆ ಭೇಟಿ ಕೊಟ್ಟಿದ್ದರು ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತ ಸೈನ್ಯದ ಕಮ್ಯಾಂಡರ್ ಆದ ಮೇಜರ್ ಜನರಲ್ ಕಲ್ಯಾಣ್‌ಸಿಂಗ್‌ರವರೊಂದಿಗೆ ಶ್ರೀ ತಿಮ್ಮಯ್ಯನವರು ಭೇಟಿ ಮಾಡಿ ಮಾತುಕತೆ ನಡೆಸಿದರು

ಪಶ್ಚಿಮ ಪಂಜಾಬಿನಲ್ಲಿ ಸಂಗ್ರಾಮ ಕ್ಷೇತ್ರ

ಪಶ್ಚಿಮ ಪಂಜಾಬಿನಲ್ಲಿರುವ ಗುಜ್ರಾತ್ ಎಂಬಲ್ಲಿ ದಾಳಿಕಾರರು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ ಸಾವಿರಾರು ಜನ ಶಸ್ತ್ರಸಜ್ಜಿತರಾದ ಪಠಾಣರು ಗುಜ್ರಾತಿಗೆ ಬಸ್ಸುಗಳಲ್ಲಿ ಬರುತ್ತಿದ್ದಾರೆ ಕುದುರೆಗಳ ಮೇಲೂ ಅನೇಕ ಜನರು ಬರುತ್ತಿದ್ದಾರೆ

ದೇಶದ ರಕ್ಷಣೆಗೆ ರಾಷ್ಟ್ರೀಯ ಸೈನ್ಯ ನಿರ್ಮಾಣವಾಗಬೇಕು

ವಿಪತ್ತಿನಿಂದ ದೇಶವನ್ನುಳಿಸಲು ರಾಷ್ಟ್ರೀಯ ಸೈನ್ಯ ನಿರ್ಮಾಣವಾಗಬೇಕು ದೇಶವನ್ನು ಗಂಡಾಂತರಗಳಿಂದ ಪಾರುಮಾಡಿ ರಕ್ಷಿಸುವ ಜವಾಬ್ದಾರಿ ಹೊತ್ತ ಸೈನಿಕರಿಗೆ ಸಹಾಯ ಮಾಡಲು ಪ್ರಾದೇಶಿಕ ಸೈನ್ಯ ನಿರ್ಮಾಣ ಅತ್ಯಗತ್ಯ ಈ ತತ್ವವನ್ನು ಸರ್ಕಾರವು ಒಪ್ಪಿದೆ ಇದಕ್ಕಾಗಿ ಸೈನ್ಯ ಯೋಜನೆಯೊಂದನ್ನು ತಯಾರಿಸಲು ಮಿಲಿಟರಿ ಪ್ರವೀಣರನ್ನು ಕೇಳಲಾಗಿದೆ.

ದೇಶದ ಸ್ವಾತಂತ್ರ್ಯ ಮತ್ತು ಮರ್ಯಾದೆಯನ್ನು ಕಾಪಾಡುವುದು ನಮ್ಮ ಆದ್ಯ ಕರ್ತವ್ಯ ರಾಷ್ಟ್ರರಕ್ಷಣೆಯ ಹೊಣೆಯನ್ನು ಸರ್ಕಾರವು ಅರಿತಿದೆ ಸೈನ್ಯಶಿಕ್ಷಣ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಿಂದ ದೇಶದ ರಕ್ಷಣಸೈನ್ಯಗಳನ್ನು ಮಾತ್ರ ಕಟ್ಟಿದಂತಾಗುವುದಿಲ್ಲ ಅದರ ಜೊತೆಗೆ ನಾಡಿನ ಅಸಂಖ್ಯಾತ ಯುವಕರು ನೀತಿವಂತರಾಗಿಯೂ, ದೃಢಕಾಯರಾಗಿಯೂ ಬಾಳಲು ಸಹಾಯಮಾಡಿದಂತಾಗುತ್ತದೆ ಎಂದು ಭಾರತ ಸರ್ಕಾರದ ರಕ್ಷಣ ಸಚಿವರಾದ ಸರ್ದಾರ್ ಬಲದೇವಸಿಂಗರು ಡೊಮಿನಿಯನ್ ಶಾಸನ ಸಭೆಯಲ್ಲಿ ಹೇಳಿದರು.

[೨ನೆಯ ಪುಟದಿಂದ ಮುಂದುವರಿದುದು]

ವಾಗಿ ಇಂದ್ರಿಯಗಳನ್ನು ಕಟ್ಟಿಕೊಂಡು ಕಾರ್ಯಮಾಡು ವುದು ಸ್ವಪ್ನಾವಸ್ಥೆಯಲ್ಲಿ ಮುಖ್ಯವಾಗಿ ತಾನೊಂದೇ ಕೆಲಸಮಾಡುವುದು ಅಂದಮೇಲೆ ಇದರ ಉದ್ಯೋಗ ತತ್ಪರತೆಯು ಎಷ್ಟೆಂಬುದನ್ನು ವಾಚಕರು ತರ್ಕಿಸಬಹು ದು ಇದು ಮಾಡದಿರುವುದೂ ಪಡೆಯದಿರುವುದೂ ಯಾವುದೂ ಇಲ್ಲ ಇದರ ಆಶೆಗಂತೂ ಕೊನೆಮೊದಲಿಲ್ಲ ಆದ್ದರಿಂದಲೇ ಮನವೆಂಬ ಮರ್ಕಟವ ತಡೆಯಲಾ ರೆನು ದೇವ ಎನಿಸಿದರ ಚಪಲಚೇಷ್ಟೆಗಳ ವಣಿ ಸಲಿ ಎಂದು ಅನುಭವಿಗಳು ಹೇಳಿರುವರು

ಆದರೆ ಪ್ರಿಯವಾಚಕರೆ! ಕಟ್ಟವರ್ಗದಲ್ಲಿ ಬೀಳುವ ಈ ಮನವು ಮೊದಲು ಮೋಹವನ್ನುಂಟುಮಾಡಿ ಬಳಿಕ ಅನರ್ಥಪರಂಪರೆಯನ್ನುಂಟುಮಾಡಿ ಅಧೋಗತಿಗಿಳಿಯು ವಂತೆ ಮಾಡುತ್ತದೆ ಭವಕ್ಕೆ ಬೀಜಸ್ವರೂಪವಾಗಿರುವ ಈ ಮನಸ್ಸನ್ನು ನಿಲ್ಲಿಸಿದರೆ ಇಂದ್ರಿಯವೃತ್ತಿಗಳು ತಾಟ ಸ್ಥ್ಯವನ್ನು ಹೊಂದಿ ಪುನರ್ಜನ್ಮಕ್ಕೆ ಅವಕಾಶವಿಲ್ಲದಂತಾ ಗುವುದು ಇದಕ್ಕೆ ಮೋಕ್ಷವೆನ್ನುವರು ಮನಸ್ಸಿನ ಹೊಯ್ದಾಟವೇ ಜೀವಭಾವ ನಿಲುಗಡೆಯೇ ಶಿವಭಾವ ಅದು ಕಾರಣವೇ ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ಎಂದು ಅಮೃತಬಿಂದೂಪನಿಷತ್ತು ಸಾರುತ್ತಿರುವುದ

ಸಾರಾಂಶ ಮನಸ್ಸೆಂಬುದು ಮನನಮಾಡುವ ಒಂದು ಯಂತ್ರವು ಇದನ್ನು ಸರಿಯಾಗಿ ಉಪಯೋಗಿಸಿಕೊಂ ಡರೆ ದೇವನಾಗಬಹುದು ಇಲ್ಲದಿದ್ದರೆ ಅಧೋಗತಿಗಿಳಿಯ ಬಹುದು ಆದುದರಿಂದ ಮನಸ್ಸಿಗೆ ಸರಿಯಾದ ಸಂಸ್ಕಾರ ವನ್ನು ಮಾಡಿಕೊಡುವ ಅಧ್ಯಾತ್ಮವಿದ್ಯೆಯನ್ನು ಸಂಪಾ ದಿಸಿಕೊಳ್ಳುವುದೇ ಮಾನವನ ಮುಖ್ಯ ಕರ್ತವ್ಯವಾಗಿರು ವದು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಗಳ್ಕೆ	೦—೩—೦
ಶ್ರೀ ರೇಣುಕಾಚಾರ್ಯರ ಲಿಂಗಾವತರಣ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಗಳ್ಕೆ	೦—೩—೦
,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀ ಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಗಳ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಗಳ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಳ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಳ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—•—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೬ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ನಿಗಮಪರಿಜ್ಞಾನ	೬ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಬ್ರಹ್ಮಸೂತ್ರೀ)	೧| ರೂ
ವೀರಶೈವರತ್ನ (೪ನೆಯ ಆವೃತ್ತಿ ೩೦ ಮಹಾತ್ಮರ ಫೋಟೋಗಳಿರುವ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀ ಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१– रु.
महानारायणोपनिषत् (वीरशैवभाष्य–संस्कृत)	१ रु.
संक्षिप्तव्याकरणकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಕಲ್ಯಾಣಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧| ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೮ನೇ ಡಿಸೆಂಬರ್ ೧೯೪೭ [ಸಂಚಿಕೆ ೩೩

। ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ।

ಭಗವಂತನಲ್ಲಿ ಬೇಡಿಕೆ

ಎಲೈ ಪ್ರಭುವೆ! ನಿನ್ನಲ್ಲಿ ನಾನೇನ ಬೇಡಲಿ? ನೀನೇನೋ ಸಕಲ ಬ್ರಹ್ಮಾಂಡಗಳಿಗೆ ಆಧಾರನೂ ಲೋಕೈಕ ಪ್ರಭುವೂ ಸಮಸ್ತ ಸಂಪದಗಳ ಖನಿಯೂ ದಯಾಸಾಗರನೂ ಭಕ್ತಜನಕಲ್ಪದ್ರುಮನೂ ಆಗಿರುವೆ ನಿನ್ನ ಕಾರುಣ್ಯರಸದ ಕೆಲವು ತೊಟ್ಟುಗಳೇ ಸಪ್ತ ಸಮುದ್ರಗಳು ನಿನ್ನ ಕ್ಷಮೆಯ ಒಂದು ಅಂಶವೇ ಈ ವಿಶಾಲ ಪೃಥ್ವಿಯು ನಿನ್ನ ಸ್ಥೈರ್ಯದ ಒಂದಿನಿತಿನಿತು ಭಾಗಗಳೇ ಸಪ್ತಕುಲಪರ್ವತಗಳು ನಿನ್ನ ತೇಜದ ಒಂದು ಕಣವೇ ಜಗವನ್ನು ಬೆಳಗುತ್ತಿರುವ ಸೂರ್ಯನು ನಿನ್ನ ಶಾಂತಿಯ ಅಲ್ಪಾಂಶವೇ ಚಂದ್ರಮನು ನಿನ್ನ ಪ್ರತಾಪದ ಕಿರಿದಾದ ಲೇಶವೇ ಭುವನವನ್ನು ದಹಿಸಬಲ್ಲ ಅಗ್ನಿಯು ನಿನ್ನ ಸೂಕ್ಷ್ಮ ನಿಶ್ವಾಸವೇ ಸಕಲ ಜೀವಿಗಳ ಪ್ರಾಣವಾಯುವು ನಿನ್ನ ನಿರಾಕಾರತ್ವದ ಒಂದಿನಿತು ಭಾಗವೇ ಆಕಾಶವು ನಿನ್ನ ಅಪಾರ ಮಹಿಮೆಯನ್ನು ಎಂತು ಬಣ್ಣಿಪುದು? ಬಣ್ಣಿಸಿ ಬಣ್ಣಿಸಿ ನಿನ್ನ ನಿಜ ನೆಲೆಯನರಿಯದೆ ವೇದಗಳೂ 'ನೇತಿ ನೇತಿ' ಎಂದಿರು ವಾಗ ಯಾರಿಗೆ ತಾನೇ ನಿನ್ನನ್ನು ಬಣ್ಣಿಸಲು ಸಾಧ್ಯ? ನಿನ್ನ ಅಪಾರ ಅನಂತ ಗುಣರೂಪೈಶ್ವರ್ಯಗಳಿಗೆ ಇತಿ ಮಿತಿಯಿಲ್ಲ ನಾನೇನುಬೇಡಿದರೂ ಒಡನೆ ನೀನು ಕೊಡುವಿಯೆಂಬುದರಲ್ಲಿ ಸಂದೇಹವೇ ಇಲ್ಲ ಆದರೆ ನಾನೇನ ಬೇಡಬೇಕೆಂಬುದೇ ಒಂದು ಮಹಾಸಮಸ್ಯೆ!

ಎಲೈ ಪರಮೇಶ್ವರನೆ, ನಿನ್ನ ಸರಿದೊರೆಯಿಲ್ಲದ ಮಹಿಮೈಶ್ವರ್ಯಗಳಿಂದಲೂ ವಿಚಿತ್ರರೀತಿಯಿಂದಲೂ ನಾನು ನಿಬ್ಬೆರಗಾಗಿ ಏನ ಕೇಳಬೇಕೆಂಬುದನ್ನು ನಿರ್ಧರಿಸ ಲಾರದವನಾಗಿದ್ದೇನೆ, ಓ ಲೀಲಾಮೂರ್ತಿಯೇ! ಸುರರಿ ಗೆಲ್ಲ ಜೀವಿಸಲು ಅಮೃತವನ್ನು ದಯಪಾಲಿಸಿರುವ ನಿನ್ನನ್ನು ಅಮೃತವನ್ನೋ ಭಕ್ಷ್ಯಭೋಜ್ಯಗಳನ್ನೋ ಕೇಳಬೇಕೆಂದೆ ಆದರೆ ನೀನೇ ಭಿಕ್ಷುಕನೂ, ನಂಜನ್ನು ಉಂಡಿರುವವನೂ ಆದುದರಿಂದ ನಿನ್ನ ದಾಸರದಾಸನಾದ ನಾನು ಅವುಗಳನ್ನು ಬಯಸುವುದು ಉಚಿತವಲ್ಲ ಬಹು ಮೂಲ್ಯ ವಸ್ತ್ರಗಳನ್ನೂ ಆಭರಣೈಶ್ವರ್ಯಗಳನ್ನೂ ಕೇಳಲು ಯೋಚಿಸಿದೆ ಆದರೆ ನೀನೇ ಎಲ್ಲವನ್ನೂ ತೊರೆದು ದಿಗಂಬರನಾಗಿರುವುದರಿಂದ ಅವುಗಳನ್ನು ನಾನು ಕೇಳುವಂತೆಯೇ ಇಲ್ಲ ಸತೀಸುತರನ್ನು ಕೇಳಬೇಕೆಂದರೆ ನೀನೇ ನಿಷ್ಕಾಮನೂ ಸಂಗರಹಿತನೂ ಆಗಿರುವೆಯಾದುದ ರಿಂದ ನನಗೆ ಅವರನ್ನು ಕೇಳಿಕೊಳ್ಳುವ ವಿಚಾರವನ್ನು ಕೂಡ ಮಾಡುವ ಅಧಿಕಾರವೂ ಇಲ್ಲ ನಿನ್ನ ಶ್ರೀಚರ ಣೋಪಜೀವಿಗಳಾದ ಅಸಂಖ್ಯಾತ ಭಕ್ತರೇ ಎನಗೆ ಬಂಧು ಗಳಾಗಿರುವುದರಿಂದ ಮತ್ತೆ ಬೇರೆ ಬಂಧುಬಳಗದವರನ್ನು ಕೇಳುವ ಆಶೆಯು ಎನಗೆ ಇಲ್ಲವೇ ಇಲ್ಲ ನಿವಾಸಿಸಲು ಭವ್ಯವಾದ ಅರಮನೆಯನ್ನೂ ಅಧಿಕಾರ ನಡೆಸಲು ವಿಶಾಲವಾದ ಸಾಮ್ರಾಜ್ಯವನ್ನೂ ಕೇಳಬೇಕೆಂತಲೂ ಬಗೆದೆ. ಆದರೆ ಎನ್ನ ಅಧೀಶ್ವರನಾದ ನೀನೇ ಸರ್ವ ವನ್ನೂ ತೊರೆದು ಮಹಾಸ್ಮಶಾನ ವಾಸಿಯಾಗಿರುವುದ ರಿಂದ ಅವುಗಳನ್ನು ಕೊಡು ಎಂದು ಬೇಡಲು ನನ್ನ ಮನವು ಒಪ್ಪದು ಇದೇ ಕಾರಣದಿಂದಲೇ ಅಜಹರಿ ಸುರರ ಪದವಿಗಳನ್ನೂ ನಾನು ಕೇಳುವಂತಿಲ್ಲ ಮತ್ತೆ ಇದರಿಂದ ಅವರ ಮನಸ್ಸೂ ನೋಯ ಬಹುದು. ತೀಕ್ಷ್ಣ ವಾದ ಬುದ್ಧಿಯನ್ನು ಬೇಡಿಕೊಳ್ಳಬೇಕೆಂದರೆ ಮಾತು ಮನಂಗಳಿಂದತ್ತತ್ತ ವಿಹಾರಿದ ಮೂರ್ತಿಯಾದ ನಿನ್ನ ಸ್ವರೂಪನಿಶ್ಚಯವನ್ನು ಅದು ಎಷ್ಟು ಮಾತ್ರವೂ ಮಾಡ ಲಾರದಾದುದರಿಂದ ಅದರಿಂದ ಪ್ರಯೋಜನವೇನು?

ಓ ಎನ್ನ ಮನೋಮಂದಿರನಿವಾಸಿ ಚಂದ್ರಮೌಳಿ! ಎನ್ನ ಶರೀರದಲ್ಲಿ ಎನಗೆ ಆಸ್ಥೆಯೇ ಇಲ್ಲ ಎಂದ ಮೇಲೆ ಸೌಂದರ್ಯವನ್ನೂ ಅಪ್ರತಿಮವಾದ ದೇಹಶಕ್ತಿಯನ್ನೂ ನಾನು ಏತ್ತಕೆ ಬಯಸುವುದು? ನಿನ್ನ ಮರೆಹೊಕ್ಕವ ರಿಗೆ ಮೃತಿಯೇ ಇಲ್ಲವಾದುದರಿಂದ ಚಿರಂಜೀವಿತ್ವವ ನ್ನಾಗಲಿ ಅಮರತ್ವವನ್ನಾಗಲಿ ಕೋರಲೇಕೆ? ಸಕಲ ಭಕ್ತರ ಯೋಗಕ್ಷೇಮವನ್ನು ನೀನು ಯಾವಾಗಲೂ ನೋಡಿಕೊಳ್ಳುತ್ತಿರುವುದರಿಂದ ಮತ್ತೆ ನನ್ನ ಯೋಗ ಕ್ಷೇಮಗಳ ಬಗ್ಗೆ ನಿನ್ನನ್ನು ಕೋರುವುದೆಂದರೆ ಅನಭಿ ಜ್ಞತೆಯೇ ಅದೀತು! ನಿನ್ನ ಹೊರತು ಬೇರಾವ ವಸ್ತುವಿ ನಲ್ಲಿಯೂ ಎನಗೆ ಅನುರಾಗ ಹುಟ್ಟುವುದಿಲ್ಲವಾದಕಾರಣ ಮತ್ತೆ ವೈರಾಗ್ಯದಿಂದ ಲಾಭವೇನು? "ನೀನು ನನ್ನ ಸ್ವಾಮಿಯು ಎಂಬ ಜ್ಞಾನವು ನನಗಾಗಿರುವುದರಿಂದ ಮತ್ತೆ ಜ್ಞಾನವನ್ನೂ ಬಯಸುವಂತಿಲ್ಲ ಕಡೆಗೆ ನಿನ್ನನ್ನಾದರೂ ಕೇಳಿಕೊಳ್ಳಬೇಕೆಂದರೆ ಸರ್ವಾಂತ ರ್ಯಾಮಿಯೂ ನಟರಾಜರಾಜನೂ ಅನಂತಕೋಟಿ ಮನ್ಮಥರ ಸೌಂದರ್ಯರಾಶಿಯೋ ಮೂರ್ತಿವೆತ್ತಂತಿರು ವವನೂ ಆದ ನೀನು ಎಂದಿನಿಂದಲೋ ನನ್ನ ಭವ್ಯ ವಾದ ಹೃದಯಮಂದಿರದ ಕೋಮಲಕಮಲದಳಾಚ್ಛಾ ದಿತವಾದ ರಂಗಮಂಟಪದಲ್ಲಿ ನಾಟ್ಯವಾಡುತ್ತಿರುವೆ ಪರಮಪುರುಷಾರ್ಥವೆನಿಸಿರುವ ಮುಕ್ತಿಯನ್ನು ಬೇಡ ಬೇಕೆಂದರೂ ನಿನ್ನ ಭಕ್ತರಾದವರಿಗೆ ಬಂಧನವೇ ಇಲ್ಲ ವಾಗಿ ಅದನ್ನು ಬೇಡುವುದು ಅಸಮಂಜಸವೇಸರಿ! ಆದರೆ ನಿನ್ನಲ್ಲಿ ಮತ್ತೇನನ್ನು ಬೇಡಲಿ?

ಎಲೈ ಭೂತಭಾವನನಾದ ಭಗವಂತನೆ! ಹೀಗೆ ನಾನು ವಿವಿಧವಾಗಿ ಯೋಚಿಸಿ ಏನನ್ನೂ ಕೇಳಲಾರದವ ನಾಗಿದ್ದೇನೆ ಮತ್ತು ಕೇಳದೆ ಇರುವುದಕ್ಕೂ ನನ್ನಿಂದ ಆಗದು 'ಪ್ರೀತಿಯು ಹೊರಗಣ ಉಪಾಧಿಯನ್ನು ಆಶ್ರಯಿಸಿರುವುದಿಲ್ಲ ಎಂಬ ಮಾತು ಸರಿಯಾದರೂ ಪರಸ್ಪರ ಸಂಬಂಧವು ಹೆಚ್ಚು ಶೋಭಿಸಲು ಮಧ್ಯದಲ್ಲಿ ಯಾವುದೊಂದು ವಸ್ತುವಿನ ಅವಶ್ಯಕತೆಯುಂಟೆಂದು ಸಹೃದಯರು ಒಪ್ಪುತ್ತಾರೆ ಆದುದರಿಂದ ನಾನು ನಿನ್ನಲ್ಲಿ ಏನನ್ನೂ ಬೇಡಿಕೊಳ್ಳದಿರುವುದೂ ಸರಿಯಾಗಿ ತೋರುವುದಿಲ್ಲ ಅಂತು ನಾನು ನಿನ್ನಲ್ಲಿ ಬೇಡಲೇಬೇಕೆಂ ದಿದ್ದೇನೆ ಅದಕ್ಕೆ ಮನವೂ ತವಕಿಸುತ್ತಿದೆ

'ಸಕಲ ಭುವನೈಕಪತಿಯೇ! ನಿನ್ನ ಅಡಿದಾ ವರೆಯ ಬಳಿಯಲ್ಲಿ ನಲ್ಗಂಬನಿಗಳುದುರುತ್ತಿರೆ ಗದ್ಗದ ಕಂಠ ದಿಂದ ಅಂಜಲಿಬದ್ಧನಾಗಿ ಬೇಡುತ್ತಲಿದ್ದೇನೆ. ದೇವಾ! ಈ ನಿನ್ನ ಚರಣಕಿಂಕರನಿಗೆ ಜನ್ಮಜನ್ಮಗಳ ಲ್ಲಿಯೂ ನಿನ್ನ ಪಾದಾರವಿಂದದಲ್ಲಿ ಅನಿವ್ಯಾಜವಾದ ಭಕ್ತಿಯಿರುವಂತೆ ಕರುಣಿಸು ನಿನ್ನ ಶ್ರೀಚರಣದಲ್ಲಿ ಗಾಢ ವಾದ ಭಕ್ತಿಯೊಂದನ್ನೇ ಅನುಗ್ರಹಿಸು

ಕಾವ್ಯತೀರ್ಥ ಸಾಹಿತ್ಯಶಾಸ್ತ್ರೀ
ಶ್ರೀ ಸಿದ್ಧರಾಮಶಿವಾಚಾರ್ಯ ರೌಡಕುಂದಿ
ಹಿರೇಮಠ, ಕಾಶೀ

ಬಟ್ಟೆ ಮೇಲಿನ ಹತೋಟಿ ಹೋಗುವುದರಲ್ಲಿದೆ

ಬಟ್ಟೆ, ಹಂಚಿಕೆ, ದರ ನಿರ್ಧಾರ ಇವುಗಳ ಮೇಲಿನ ಹತೋಟಿಯನ್ನು ತೆಗೆದುಹಾಕುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸರಬರಾಯಿ ಸಚಿವರು ಭಾರತ ಶಾಸನ ಸಭೆಯಲ್ಲಿ ತಿಳಿಸಿದರು

ಆಹಾರದ ಕಂಟ್ರೋಲ್ ತೆಗೆದ ಮೇಲೆ ಜನರು ಏನುಮಾಡಬೇಕೆಂಬ ಬಗ್ಗೆ ಗಾಂಧೀಜಿಯವರ ಸಲಹೆ

"ಹತೋಟಿ ಆಜ್ಞೆಗಳನ್ನು ತೆಗೆದು ಹಾಕಿದ ಮಾತ್ರಕ್ಕೆ ಕಳವಳ ಪಡಲು ಕಾರಣವಿಲ್ಲ ಕಂಟ್ರೋಲು ಆಜ್ಞೆಗಳು ರದ್ದಾದಾಗ ರೈತ ಜನರು ತಮ್ಮ ಬಳಿ ಇರುವ ಹೆಚ್ಚು ಧಾನ್ಯವನ್ನು ಹೊರಗೆ ತರಬೇಕು ವ್ಯಾಪಾರಿ ಗಳು ಲಾಭಗಳಿಸುವ ಮನೋವೃತ್ತಿಯನ್ನು ಬಿಡಬೇಕು ಕಂಟ್ರೋಲುಗಳು ರದ್ದಾದ ಮೇಲೆ ಜನರು ಆಹಾರ ಧಾನ್ಯಗಳನ್ನು ಮಿತವಾಗಿ ಉಪಯೋಗಿಸಬೇಕು ಕಾಳಸಂತೆ ಮತ್ತು ಲಾಭಕೋರತನವನ್ನು ನಿರ್ಮೂಲ ಮಾಡಲು ಪ್ರಜೆಗಳೇ ಪ್ರಯತ್ನ ಮಾಡಬೇಕು ಎಂದು ಹೇಳಿದರು

ಸ್ವೀಕಾರ

ತರೀಕೆರೆ ತಾ॥ ನಾರಣಾಪುರ ಮಠದ ವೇ॥ ಎಸ್ ನಂಜುಂಡಯ್ಯನವರ ಮಕ್ಕಳು ಶ್ರೀ॥ ಎನ್ ಎನ್ ವೀರ ಭದ್ರಾರಾಧ್ಯರು ಬಿ ಎ, ಇವರಿಗೆ ತಾ॥ ೧೯ ೧೧ ೪೭ನೇ ದಿವಸ ಪುತ್ರರತ್ನವು ಜನಿಸಿದ್ದು, ಆ ಮಗುವಿಗೆ ತಾ॥ ೩೦-೧೧ ೪೭ ರಲ್ಲಿ "ಚಿರಂಜೀವಿ" ಎಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷ ಣಕ್ಕಾಗಿ ಸಮರ್ಪಿಸಿದ ೧ ರೂ ಯು ಬೀರೂರು ಟವ ನ್ನಿನಲ್ಲಿರುವ ವೇ॥ ಎಂ ವಿ ಮದ್ದೀರಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಚಾಚಾರ್ಯಪ್ರಭಾ.

೧೯೪೭ನೆಯ ಡಿಸೆಂಬರ್ ತಾ|| ೮ನೇ ಸೋಮವಾರ

ಲೌಕಿಕಸುಖಕ್ಕಾಗಿ ಧರ್ಮವನ್ನು ಬಿಡಬಾರದು

ಆಸ್ತಿಕ್ಯದ ಆಧಾರದ ಮೇಲೆ ನಿಂತಿರುವ ನಮ್ಮ ಭಾರತದಲ್ಲಿ ಕಾಲಮಹತ್ವದಿಂದ ಈಗ ಎತ್ತ ನೋಡಿದರೂ ಸ್ವಧರ್ಮದ್ವೇಷವೆಂಬುದು ವಿಷದಂತೆ ವ್ಯಾಪಿಸುತ್ತ ಬರುತ್ತಿದೆ. ಪಾಶ್ಚಾತ್ಯರ ಅಮಂಗಲವಿದ್ಯಾಸಂಸ್ಕೃತಿಯ ಸೆಳವಿಗೆ ಸಿಕ್ಕ ಅನೇಕರು ಸ್ವಾತಂತ್ರ್ಯ ಲಾಭವೇ ಮಹಾಪುರುಷಾರ್ಥವೆಂದು ಭಾವಿಸುತ್ತ ಆತ್ಮೋದ್ಧಾರಸಾಧಕಗಳಾದ ಧರ್ಮಗಳನ್ನು ಬಹು ಹೀನವಾಗಿ ಕಾಣುತ್ತ ಒರಸುತ್ತಿರುತ್ತಾರೆ. ಇವರ ಉಪಟಳದಿಂದ ಸನಾತನಧರ್ಮವೇ ಮೂಲೋತ್ಪಾಟನವಾಗುತ್ತ ನಡೆದಿರುವುದಲ್ಲದೆ ಸನಾತನಧರ್ಮಾಂತರ್ಗತಗಳಾದ ಬೇರೆಬೇರೆ ಮತಧರ್ಮಗಳಂತೂ ಭಿನ್ನಭಿನ್ನಗಳಾಗಿಹೋಗುತ್ತಲಿವೆ. ನಮ್ಮ ಸನಾತನಧರ್ಮಕ್ಕೆ ವಿರೋಧಿಗಳವರಿಂದ ಇತರ ವಿಪ್ಲವಗಳುಂಟಾಗುತ್ತಿದ್ದರೆ ಸನಾತನಿಗಳೆಲ್ಲರೂ ಒಟ್ಟುಗೂಡಿ ಅಂಥ ಧರ್ಮವಿರೋಧಿಗಳನ್ನು ನಿಗ್ರಹಿಸಿ ಸುಲಭವಾಗಿ ಧರ್ಮರಕ್ಷಣೆ ಮಾಡಬಹುದಾಗಿತ್ತು. ಆದರೆ ಈಗ ಇತರರಾರೂ ನಮ್ಮ ಧರ್ಮದ ಬುಡವನ್ನು ಹರಿಯಲು ಬಂದಿಲ್ಲ. ಕುಳಿತ ಕೊಂಬೆಯನ್ನೇ ಕಡಿಯುವ ಕಾಳಿದಾಸನಂತೆ ನಮ್ಮ ಭಾರತೀಯರಲ್ಲಿಯೇ ಕೆಲವರು ಧರ್ಮವನ್ನು ನಾಶಮಾಡಲು ಕಟಿಬದ್ಧರಾಗಿ ನಿಂತಿರುತ್ತಾರೆ.

ಭಾರತೀಯರು ಧರ್ಮದ್ವೇಷಿಗಳಾಗಿ ಧರ್ಮವನ್ನು ಹಾಳುಮಾಡುತ್ತಾ ಬಂದರೆ ಭಾರತದ ಭಾಗ್ಯಲಕ್ಷ್ಮಿಯು ಈ ದೇಶದಲ್ಲಿ ಎಂದೂ ನಿಲ್ಲಲಾರಳು. ಅನಾದಿಯಿಂದ ನಾವುಗಳು ಯಾವ ದೇಶದಲ್ಲಿ ವಾಸಮಾಡಿರುವೆವೋ ಆ ದೇಶದ ನಡೆನುಡಿಗಳು ಯಾವ ರೀತಿಯಾಗಿರುವವೋ ಮತ್ತು ಯಾವ ಯಾವ ಧರ್ಮಗಳು ಇಹಪರಸುಖಗಳಿಗೆ ಸಾಧನಗಳೆಂದು ಸರ್ವಜ್ಞರಾದ ಋಷಿಗಳು ನಿಯಾಮಕಮಾಡಿರುವರೋ ಅವುಗಳನ್ನು ಬಿಟ್ಟು ಕದಲದಿರುವುದೇ ಭಾರತೀಯರ ಮುಖ್ಯಕರ್ತವ್ಯವಾಗಿರುವದು. ಇದರಿಂದ ಭಾರತೀಯರಿಗೆ ಸ್ವಾತಂತ್ರ್ಯವು ಬೇಡವೆಂದಾಗಲಿ, ನಾಗರಿಕತೆಯು ಬೇಡವೆಂದಾಗಲಿ ಯಾರೂ ಹೇಳುವದಿಲ್ಲ. ಆದರೆ ಸ್ವಧರ್ಮವಿರೋಧಿಯಾದ ಸ್ವಾತಂತ್ರ್ಯವನ್ನಾಗಲಿ, ನಾಗರಿಕತೆಯನ್ನಾಗಲಿ ಯಾರೂ ಅಪೇಕ್ಷಿಸಬಾರದು. ಧರ್ಮವನ್ನು ಬಿಟ್ಟು ಕೇವಲ ಧರ್ಮವಿರೋಧಿಯಾದ ಸ್ವಾತಂತ್ರ್ಯವನ್ನೇ ಅಪೇಕ್ಷಿಸುವುದಾದರೆ ಅದು ಮಾನವಲಕ್ಷಣದಲ್ಲಿ ಸೇರುವುದಿಲ್ಲ. ಮಾನವನು ಯಾವಾಗಲೂ ಧರ್ಮನಿಬಂಧನೆಗೆ ಒಳಪಟ್ಟಿರಬೇಕು. ಅವನು ಐಹಿಕಸೌಖ್ಯವನ್ನು ಹೇಗೆ ಬಯಸುವನೋ ಹಾಗೆಯೇ ಪಾರಮಾರ್ಥಿಕಸೌಖ್ಯವನ್ನೂ ಬಯಸಬೇಕು. ಯಾವ ಖಂಡದಲ್ಲಿ ನೋಡಿದರೂ ಪ್ರತಿಯೊಂದು ಜನಾಂಗವೂ ತಮ್ಮ ಧರ್ಮದಂತೆ ನಡೆಯುತ್ತಿರುವದು. ಪಾಶ್ಚಾತ್ಯರು ನಾಗರಿಕತೆಯ ಪರಾಕಾಷ್ಠತೆಯನ್ನು ಪಡೆದಿದ್ದರೂ ಅವರು ತಮ್ಮ ಧರ್ಮಗಳನ್ನು ಬಿಟ್ಟಿಲ್ಲವು. ಮುಸಲ್ಮಾನರಂತೂ ತಮ್ಮ ಧರ್ಮರಕ್ಷಣೆಗಾಗಿ ಪ್ರಾಣವನ್ನರ್ಪಿಸುತ್ತಿರುವ ವಿಷಯವು ಸರ್ವರಿಗೂ ತಿಳಿದೇ ಇದೆ. ಆದರೆ ದೇವರು ಹಿಂದುಗಳಿಗೆ ಈ ವಿಧವಾದ ಧರ್ಮದ್ರೋಹಬುದ್ಧಿಯನ್ನು ಏಕೆ ಕೊಟ್ಟಿರುವನೋ ತಿಳಿಯದಾಗಿದೆ. ನಾವು ಹಿಂದಿನ ಜನ್ಮದಲ್ಲಿ ಧರ್ಮಮಾರ್ಗದಲ್ಲಿದ್ದು ಈಶ್ವರಪ್ರೀತಿಸಾಧಕಗಳಾದ ಕರ್ಮಗಳನ್ನು ಮಾಡಿದ್ದುದರಿಂದಲೇ ಈ ಜನ್ಮದಲ್ಲಿ ಧರ್ಮಾಧರ್ಮಜ್ಞಾನಶಕ್ತಿಯುಳ್ಳ ಮನುಷ್ಯಜನ್ಮವನ್ನು ಪಡೆದಿರುವೆವೆಂಬುದನ್ನು ಶ್ರುತಿ ಸ್ಮೃತಿ ವಾಕ್ಯಗಳಿಂದ ಚೆನ್ನಾಗಿ ಅರಿತಿದ್ದರೂ ಕೇವಲ ಸ್ವಾತಂತ್ರ್ಯಸೌಖ್ಯವನ್ನೇ ಮುಖ್ಯಧ್ಯೇಯವನ್ನಾಗಿಟ್ಟುಕೊಳ್ಳುವುದು ಭಾರತೀಯರಿಗೆ ಅತ್ಯಂತ ಹೇಯಾಸ್ಪದವೇ ಸರಿ! ನಮ್ಮ ಭಾರತೀಯ ಜನಾಂಗಕ್ಕೆ ಧರ್ಮವೆಂಬುದು ಪ್ರಾಣದಂತಿರುತ್ತದೆ. ಅಂತಹ ಧರ್ಮರಕ್ಷವನ್ನೇ ಹಾಳುಮಾಡಿಕೊಂಡು ಕೇವಲ ಐಹಿಕಸುಖಕ್ಕಾಗಿ ವಿಜೃಂಭಿಸುತ್ತಿದ್ದರೆ ಅಂಥವರನ್ನು ಜೀವವಿಲ್ಲದ ಹೆಣದಂತೆ ಭಾವಿಸಬೇಕಾಗುತ್ತದೆ. ನಮ್ಮ ದೇಹವು ಎತ್ತ ಚಲಿಸಿದರೂ ಅತ್ತ ಪ್ರಾಣವೂ ಚಲಿಸುವಂತೆ ನಾವು ಎಂಥ ರಾಜಕೀಯ ಸ್ವಾತಂತ್ರ್ಯದಲ್ಲಿ ಪ್ರವೇಶಿಸಿದರೂ ಧರ್ಮದೊಂದಿಗೆ ಪ್ರವೇಶಿಸಬೇಕು. ಹಾಗೆ ಮಾಡದೆ ಮೋಕ್ಷದಾಯಕವಾದ ಧರ್ಮವನ್ನು ನಿರಾಕರಿಸಿ ಮನಸ್ವಿಯಾಗಿ ವರ್ತಿಸುವುದರಿಂದ ನಮ್ಮ ಆತ್ಮವನ್ನು ನಾವೇ ಘಾತಿಸಿಕೊಂಡಂತಾಗುತ್ತದೆ. ಈ ಪ್ರಪಂಚವೆಂಬ ರಂಗಸ್ಥಲದಲ್ಲಿ ಅನಾದಿಕಾಲದಿಂದಲೂ ಪ್ರತಿಯೊಬ್ಬರೂ ವ್ಯವಹರಿಸುತ್ತಲೇ ಇದ್ದಾರೆ. ಈ ಪ್ರಪಂಚವ್ಯವಹಾರವನ್ನು ಬಿಡುವುದು ಯಾರಿಂದಲೂ ಸಾಧ್ಯವಿಲ್ಲ. ಮಗುವು ತಾಯಿಯ ಒಂದು ಸ್ತನವನ್ನು ಪಾನಮಾಡುತ್ತಿದ್ದರೂ ಇನ್ನೊಂದು ಸ್ತನದ ಮೇಲೆ ಕೈಯನ್ನು ಇಟ್ಟುಕೊಂಡಿರುವಂತೆ ಪ್ರತಿಯೊಬ್ಬನೂ ಪ್ರಪಂಚವ್ಯವಹಾರದಲ್ಲಿ ದೃಷ್ಟಿಯನ್ನಿಟ್ಟಿದ್ದರೂ ಇನ್ನೊಂದು ದೃಷ್ಟಿಯನ್ನು ಧಾರ್ಮಿಕದಲ್ಲಿಡಲೇಬೇಕು. ಇದೇ ವಿವೇಕಭೂಯಿಷ್ಠವಾದ ಮಾನವನ ಮುಖ್ಯಗುಣವಾಗಿರುತ್ತದೆ. ಆದರೆ ಏಕಕಾಲದಲ್ಲಿಯೇ ಧಾರ್ಮಿಕ-ಲೌಕಿಕ ವ್ಯವಹಾರಗಳೆರಡರಲ್ಲಿಯೂ ದೃಷ್ಟಿಯನ್ನಿಡುವದು ಅಸಂಭವವೆಂದೂ, ಲೌಕಿಕಕರ್ಮಾನುಷ್ಠಾನಸಮಯದಲ್ಲಿ ಧಾರ್ಮಿಕಕರ್ಮಗಳನ್ನೂ ಧಾರ್ಮಿಕಕರ್ಮಾನುಷ್ಠಾನಸಮಯದಲ್ಲಿ ಲೌಕಿಕಕರ್ಮಗಳನ್ನೂ ನಡೆಸಲು ಅಸಾಧ್ಯವಾದುದರಿಂದ ಒಂದನ್ನು ಬಿಡಲೇಬೇಕಾಗುವದೆಂದೂ ಅನೇಕರು ಆಶಂಕೆಯನ್ನು ಮಾಡುವರು. ನರ್ತಕಿಯು ತನ್ನ ತಲೆಯ ಮೇಲೆ ಕುಂಭವನ್ನಿರಿಸಿ ರಂಗಸ್ಥಲದಲ್ಲಿ ನರ್ತನಮಾಡುತ ಹಾವಭಾವಾದಿವಿಲಾಸಗಳನ್ನು ತೋರಿಸುತ್ತಿದ್ದರೂ ಆಕೆಯ ಮನೋಭಾವವೆಲ್ಲವೂ ತಲೆಯಮೇಲಿರುವ ಕುಂಭದಲ್ಲಿಯೇ ನಾಟಿಕೊಂಡಿರುವಂತೆ, ಪರಮಾಸ್ತಿಕರಾದ ನಮ್ಮ ಭಾರತೀಯರು ಕಾಲಾನುಸಾರವಾಗಿ ರಾಜಕೀಯ ನರ್ತನಾಂಗಣದಲ್ಲಿ ಪ್ರವೇಶಿಸಿದರೂ ತಮ್ಮ ಇಹಪರಸುಖಕ್ಕೆ ಸಾಧನವಾದ ಧರ್ಮದಲ್ಲಿ ಮನಸ್ಸನ್ನಿಟ್ಟಿರಬೇಕು. ಇದೇ ವಿಷಯವನ್ನು ಶ್ರೀಮನ್ನಿಜಗುಣಾರಾಧ್ಯರು "ಜಾಣನು ಲೌಕಿಕ ಪರಮಾರ್ಥವೆರಡನು ಮಾಣದೆ ಕೂಡಿ ನಡೆಸುತಿಹನಿಂತು" ಎಂದು ಹೇಳಿರುವರು. ಆದುದರಿಂದ ಪ್ರತಿಯೊಬ್ಬರೂ ಕೇವಲ ಲೌಕಿಕಸುಖದಲ್ಲಿಯೇ ದೃಷ್ಟಿಯನ್ನಿಡದೆ ಲೌಕಿಕ ಧಾರ್ಮಿಕಗಳೆರಡರಲ್ಲಿಯೂ ದೃಷ್ಟಿಯನ್ನಿಟ್ಟು ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ವರ್ತಮಾನಸಂಗ್ರಹ

ಧಾನ್ಯವನ್ನು ಕೊಳ್ಳುವ ಬೆಲೆ ಹೆಚ್ಚಿತು

ಈಗ ರೈತನಿಂದ ಕೊಳ್ಳುವ ಧಾನ್ಯದ ಬೆಲೆಯನ್ನು ಅಂದರೆ ಬತ್ತ ಮತ್ತು ಜೋಳ, ರಾಗಿ ಪಲ್ಲ ಒಂದಕ್ಕೆ ಎರಡು ರೂಪಾಯಿಗಳಂತೆ ಹೆಚ್ಚಿಸಲು ಸರ್ಕಾರದ ತೀರ್ಮಾನವಾಗಿದೆ.

ಸಕ್ಕರೆ ಕಂಟ್ರೋಲು ರದ್ದು

ಭಾರತ ಸರ್ಕಾರದ ನೀತಿಯನ್ನನುಸರಿಸಿ ಸಕ್ಕರೆ ಮೇಲಿನ "ಕಂಟ್ರೋಲ್" ತೆಗೆದುಹಾಕಲು ಮೈಸೂರು ಸರ್ಕಾರದ ನಿರ್ಧಾರವಾಗಿದೆ. ೮ನೇ ತಾರೀಖಿನಿಂದ ಸಕ್ಕರೆ ಬಗ್ಗೆ ಹತೋಟಿ ಇರುವುದಿಲ್ಲ. ಪರ್ಮಿಟ್ಟುಗಳನ್ನು ಪಡೆದು ಸಕ್ಕರೆಯನ್ನು ಸಂಸ್ಥಾನದಿಂದ ರಫ್ತುಮಾಡಲು ಅವಕಾಶವನ್ನು ಕಲ್ಪಿಸಲಾಗುವುದು. ಕಂಟ್ರೋಲು ರದ್ದಾಯಿತೆಂದು ತಿಳಿದು ಹೆಚ್ಚಾಗಿ ಸಕ್ಕರೆಯನ್ನು ದಾಸ್ತಾನು ಮಾಡುವವರಿಗೂ ಹೆಚ್ಚು ಬೆಲೆಗೆ ಮಾರುವವರಿಗೂ ಶಿಕ್ಷೆಯು ಮಾತ್ರ ತಪ್ಪಿದ್ದಲ್ಲ!

ಲೈಸೆನ್ಸ್ ಇಲ್ಲದ ರೇಡಿಯೋಗಳ ಪತ್ತೆ

ಲೈಸೆನ್ಸ್ ಪಡೆಯದೆ ಇದ್ದ ೨೦ ರೇಡಿಯೋ ಟ್ರಾನ್ಸ್‌ಮಿಟರ್‌ಗಳೂ ಮತ್ತು ಕೋಮುವಾರು ಭಾಷಣಗಳನ್ನು ಪ್ರಸಾರಮಾಡಲು ಉಪಯೋಗಿಸುವ ಸ್ಪೆಷಲ್ ಕೋಡೊಂದನ್ನು ಬೊಂಬಾಯಿ ಪೋಲೀಸರು ಪತ್ತೆಹಚ್ಚಿ ವಶಪಡಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಇಬ್ಬರು ಮುಸ್ಲಿಂ ವರ್ತಕರು ದಸ್ತಗಿರಿಮಾಡಲ್ಪಟ್ಟಿದ್ದಾರೆ. ವಶಪಡಿಸಿಕೊಂಡ ಈ ರೇಡಿಯೋ ಟ್ರಾನ್ಸ್‌ಮಿಟರುಗಳನ್ನು ಹೈದ್ರಾಬಾದ್ ಸಂಸ್ಥಾನಕ್ಕೆ ಕಳುಹಿಸಲು ಏರ್ಪಾಟುಗಳಾಗುತ್ತಿದ್ದವಂತೆ!

ರಾಜಕೋಟೆಯಲ್ಲಿ ಶಸ್ತ್ರಾಸ್ತ್ರಗಳ ಶೋಧನೆ

ಜುನಗಢದಲ್ಲಿ ಪೋಲೀಸಿನವರು ಶಸ್ತ್ರಾಸ್ತ್ರಗಳ ಶೋಧನೆ ನಡೆಸುತ್ತಿದ್ದಾರೆ. ಇದುವರೆಗೂ ಗುಪ್ತವಾಗಿ ಶೇಖರಿಸಿಡಲಾಗಿದ್ದ ಅನೇಕ ಶಸ್ತ್ರಾಸ್ತ್ರಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ. ಜುನಾಗಢದ ಪ್ರಾಣಿಸಂಗ್ರಹಾಲಯದಲ್ಲಿ ಅನೇಕಶಸ್ತ್ರಾಸ್ತ್ರಗಳು ಪತ್ತೆಯಾಗಿವೆ.

ಲೀಗಿನವರಿಗೆ ಮದ್ರಾಸ್ ಗೃಹ ಸಚಿವರ ಎಚ್ಚರಿಕೆ

ಮಲಬಾರಿನಿಂದ ಮುಸ್ಲಿಂ ಅಧಿಕಾರಿಗಳನ್ನೆಲ್ಲಾ ಬೇರೆ ಕಡೆಗೆ ವರ್ಗಾಯಿಸಿರುವ ವಿಚಾರದಲ್ಲಿ ಮದ್ರಾಸ್ ಶಾಸನ ಸಭೆಯಲ್ಲಿ ವಿಪುಲ ಚರ್ಚೆ ನಡೆಯಿತು. ಮುಸ್ಲಿಂ ಲೀಗ್ ಸದಸ್ಯರು ಹಾಕಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಗೃಹ ಸಚಿವರಾದ ಡಾ|| ಸುಬ್ಬರಾಯರವರು ಸರ್ಕಾರವನು ಭಯಭ್ರಾಂತರಾಗಿಲ್ಲವೆಂದೂ, ಎಂತಹ ಪರಿಸ್ಥಿತಿಯೊದಗಿದರೂ ಅದನ್ನು ಎದುರಿಸುವ ಶಕ್ತಿ ಸರ್ಕಾರಕ್ಕೆ ಇದೆಯೆಂದೂ ತಿಳಿಸಿ, ಲೀಗಿನ ಎರಡು ಜನಾಂಗಗಳ ತತ್ವವನ್ನು ಖಂಡಿಸಿ ಈ ತತ್ವದಲ್ಲಿ ವಿಶ್ವಾಸವುಳ್ಳವರು ಪಾಕಿಸ್ಥಾನಕ್ಕೆ ಹೊರಟುಹೋಗಬಹುದು ಎಂದು ನುಡಿದರು.

ಭೂಪಾಲದಲ್ಲಿ ಸುಧಾರಣೆಗಳ ಬಗ್ಗೆ ಅತೃಪ್ತಿ

ಭೂಪಾಲ್ ನವಾಬರು ಪ್ರಕಟಿಸಿರುವ ಸುಧಾರಣೆಗಳು ತೀರ ಅತೃಪ್ತಿಕರವಾಗಿವೆಯೆಂದು ಭೂಪಾಲ್ ಪ್ರಜಾಸಮ್ಮೇಳನದ ಅಧ್ಯಕ್ಷರು ಖಂಡಿಸಿದ್ದಾರೆ. ಪ್ರಜಾಪ್ರತಿನಿಧಿಗಳ ಅಭಿಪ್ರಾಯವನ್ನು ಕೇಳದೆ ರಾಜ್ಯಾಂಗ ಸಭೆಯನ್ನು ಸ್ಥಾಪಿಸಲಿರುವುದರಿಂದ, ಶಿಫಾರಸು ಮಾಡುವುದಕ್ಕಿಂತ ಹೆಚ್ಚಿನ ಕೆಲಸ ಅದರ ಪಾಲಿಗೆ ಬೀಳುವುದಿಲ್ಲವೆಂದೂ, ಆದ್ದರಿಂದ ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಪ್ರಜಾಪರಿಷತ್, ಹಿಂದೂಸಭೆ ಮತ್ತು ಕಿಸಾನ್ ಸಭೆಗಳವರು ಚಳುವಳಿ ಮಾಡದೆ ಬೇರೆ ಮಾರ್ಗವೇ ಇಲ್ಲವೆಂದು ತಿಳಿಸಿದ್ದಾರೆ.

ಪ್ಯಾಲೆಸ್ಟೈನ್ ವಿಭಜನೆ

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಒಪ್ಪಿಗೆ

ಪ್ಯಾಲೆಸ್ಟೈನನ್ನು ಯೆಹೂದೀ ಮತ್ತು ಅರಬ ರಾಷ್ಟ್ರಗಳೆಂದು ಎರಡು ಸ್ವತಂತ್ರ ರಾಷ್ಟ್ರಗಳಾಗಿ ವಿಭಾಗಿಸಲು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ನಿರ್ದಿಷ್ಟವಾದ ಬಹುಮತ ದೊರೆಯಿತು. ವಿಭಜನೆಯ ಪರವಾಗಿ ಅಸೆಂಬ್ಲಿಯಲ್ಲಿ ೩೩ ಓಟುಗಳೂ, ವಿರೋಧವಾಗಿ 13 ಓಟುಗಳೂ ದೊರೆತವು. 10 ಜನ ಸದಸ್ಯರು ಓಟು ಮಾಡಲಿಲ್ಲ. ಒಬ್ಬ ಸದಸ್ಯರು ಹಾಜರಿರಲಿಲ್ಲ. ಅಮೆರಿಕಾ, ರಷ್ಯಾ, ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಮೊದಲಾದ ರಾಷ್ಟ್ರಗಳು ವಿಭಜನೆಯ ಪರವಾಗಿ ಓಟುಮಾಡಿದುವು. ಇಂಡಿಯಾ, ಪಾಕಿಸ್ತಾನ ಮತ್ತು ಅರಬ ರಾಷ್ಟ್ರಗಳು ಇದಕ್ಕೆ ವಿರೋಧವಾಗಿ ಅಭಿಮತ ಕೊಟ್ಟವು. ಬ್ರಿಟನ್ ತಟಸ್ಥವಾಗಿದ್ದಿತು.

ಸ್ವತಂತ್ರರಾಷ್ಟ್ರಗಳ ಸ್ಥಾಪನೆಯವರೆಗೆ ಆಡಳಿತ ವ್ಯವಸ್ಥೆ

ಈ ವಿಭಜನೆಯ ನಿರ್ಧಾರದ ಪ್ರಕಾರ ಪ್ಯಾಲೆಸ್ಟೈನಿನಲ್ಲಿ ಬ್ರಿಟನ್ನಿನ ಮ್ಯಾಂಡೇಟ್ ಪ್ರಭುತ್ವ ಕೊನೆಗೊಂಡು, ಈ ಎರಡು ಸ್ವತಂತ್ರ ರಾಷ್ಟ್ರಗಳು ರಚಿತವಾಗುವವರೆಗೆ, ವಿಶ್ವಸಂಸ್ಥೆಯ ಸಮಿತಿಯೊಂದು ಈ ಪ್ರದೇಶದ ಆಡಳಿತವನ್ನು ನಿರ್ವಹಿಸುತ್ತದೆ. ಈ ಸಮಿತಿಯಲ್ಲಿ ಜೆಕೊಸ್ಲೊವೇಕಿಯಾ, ಡೆನ್ಮಾರ್ಕ್, ಫಿಲಿಫೈನ್ಸ್, ಬೋಲೀವಿಯಾ ಮತ್ತು ಪನಾಮಾ ರಾಷ್ಟ್ರಗಳ ಪ್ರತಿನಿಧಿಗಳಿರುತ್ತಾರೆ.

1948ರ ಆಗಸ್ಟ್ 1 ನೇ ತಾರೀಖಿನ ಹೊತ್ತಿಗೆ ಪ್ಯಾಲೆಸ್ಟೈನಿನಿಂದ ಬ್ರಿಟಿಷ್ ಸೈನ್ಯಗಳು ಪೂರ್ಣವಾಗಿ ಹಿಂತಿರುಗುವುವು ಈ ತಾರೀಖಿಗೆ ಸ್ವಲ್ಪ ಮುಂಚೆಯೇ ಬ್ರಿಟನ್ನಿನ ಮ್ಯಾಂಡೇಟ್ ಪ್ರಭುತ್ವವೂ ಮುಗಿಯುವುದು.

ಅರಬ ಪ್ರತಿನಿಧಿಗಳ ಪ್ರತಿಭಟನೆ

ಈ ವಿಚಾರದಲ್ಲಿ ಬಹುಮತ ನಿರ್ಣಯವಾದ ಕೂಡಲೇ ಅರಬ ಪ್ರತಿನಿದಿಗಳು ಒಬ್ಬೊಬ್ಬರಾಗಿ, ತಾವು ಅಸೆಂಬ್ಲಿಯ ನಿರ್ಧಾರವನ್ನು ಮನ್ನಿಸುವುದಿಲ್ಲವೆಂದೂ, ಈ ನಿರ್ಧಾರವು ವಿಶ್ವಸಂಸ್ಥೆಯ ಪ್ರಣಾಳಿಕೆಗೆ ವಿರುದ್ಧವಾಗಿದೆ ಎಂದೂ ಪ್ರತಿಭಟಿಸಿದರು

ಭಾರತವನ್ನು ಕಂಟಕಗಳಿಂದ ಉಳಿಸಲು ಸಂಕಲ್ಪ ಮಾಡಬೇಕು

ಡಾ|| ರಾಜೇಂದ್ರ ಪ್ರಸಾದರ ಮನವಿ

ಕಾಂಗ್ರೆಸ್ಸಿನ ಘನ ಆದರ್ಶಗಳು ವಿಫಲವಾದುವೆಂಬುದನ್ನು ನಾನು ನಂಬಲಾರೆ ಸ್ವತಂತ್ರ ಭಾರತವು ಇನ್ನೂ ಕೇವಲ ಮೂರು ತಿಂಗಳ ಮಗು ಅದು ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ, ನಾನಾತೆರನಾದ ವ್ಯಾಧಿಗಳಿಂದಲೂ, ಕಂಟಕಗಳಿಂದಲೂ ನರಳುತ್ತಿರುವ ಆ ಮಗುವನ್ನು ಎಚ್ಚರಿಕೆಯಿಂದ ರಕ್ಷಿಸಿಕೊಳದಿದ್ದರೆ ಅದನ್ನು ಉಳಿಸಿಕೊಳ್ಳುವುದು ಬಹು ಕಷ್ಟವಾಗುವುದು

—ಎಂಬುದಾಗಿ ಬೊಂಬಾಯಿ ನಗರದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಡಾ|| ರಾಜೇಂದ್ರ ಪ್ರಸಾದರು ಮನವಿಮಾಡಿಕೊಂಡರು ದೇಶದಲ್ಲಿ ಶಾಂತಿ, ಮತ್ತು ಶಿಸ್ತು ಪಾಲಿಸಲು ಎಲ್ಲರೂ ದೃಢ ಸಂಕಲ್ಪ ಮಾಡಬೇಕೆಂದೂ, ಸರ್ಕಾರಕ್ಕೆ ಶಾಂತಿಪಾಲನ ಕಾರ್ಯದಲ್ಲಿ ಪೂರ್ಣ ಬೆಂಬಲ ಕೊಡಬೇಕೆಂದೂ ಅವರು ಪ್ರಾರ್ಥಿಸಿದರು

ಆಹಾರ ವಿಚಾರದಲ್ಲಿ ಕಳವಳ ಬೇಡ

ಭಾರತದ ಆಹಾರ ಪರಿಸ್ಥಿತಿಯ ಉಗ್ರಸ್ವರೂಪವು ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ ಹತೋಟಿ ಆಜ್ಞೆಗಳನ್ನು ತೆಗೆದುಹಾಕುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಪ್ರಾಂತ ಸರ್ಕಾರಗಳ ಅಭಿಪ್ರಾಯ ಪಡೆದು ಎಚ್ಚರಿಕೆಯಿಂದ ನಡೆಯುವುದೆಂದು ಡಾ| ಪ್ರಸಾದರು ಭರವಸೆ ನೀಡಿದರು

ನಾವು ಶಾಂತಿಪ್ರಿಯರು

ಪಾಕಿಸ್ತಾನದ ಮೇಲೆ ಆಕ್ರಮಣ ನಡೆಸಬೇಕೆಂಬ ದುರುದ್ದೇಶ ಭಾರತಕ್ಕಿಲ್ಲ ನೆರೆಹೊರೆಯವರೊಡನೆ ಮೈತ್ರಿಯಿಂದ ಬಾಳಬೇಕೆಂಬುದೇ ನಮ್ಮ ಮಹದಾಶಯ ಭಾರತೀಯರು ಶಾಂತಪ್ರಿಯರು, ಅವರು ಯುದ್ಧ ಪ್ರೇಮಿಗಳಲ್ಲ ಎಂಬುದಾಗಿ ಹೇಳಿದರು

ಹೈದರಾಬಾದಿಗೂ ಭಾರತ ಸರಕಾರಕ್ಕೂ ಆಗಿರುವ ತಾತ್ಕಾಲಿಕ ಒಪ್ಪಂದದ ವಿವರ

ಹೈದಾರಾಬಾದ್ ಮತ್ತು ಬೀರಾರಿನ ನಿಜಾಮರು ಭಾರತ ಸರ್ಕಾರದೊಡನೆ ಮಾಡಿಕೊಂಡಿರುವ ಗೌರವಯುತವಾದ ಒಪ್ಪಂದಕ್ಕೆ ಭಾರತದ ಗವರ್ನರ್-ಜನರಲ್‌ರವರು ಸಹಿ ಹಾಕಿದರು ಈ ಒಪ್ಪಂದ ಪ್ರಕಾರ ನಿಜಾಮರ ಪರಮಾಧಿಕಾರಕ್ಕೂ, ಅವರ ಸ್ಥಾನಮಾನಗಳಿಗೂ ಲೇಶವೂ ಚ್ಯುತಿ ಬಾರದೆ ಅವರು ಹೈದರಾಬಾದ್ ಮತ್ತು ಬೀರಾರಿನ ಸರ್ವತಂತ್ರ ಸ್ವತಂತ್ರರಾದ ಪ್ರಭುಗಳಾಗಿಯೇ ಇರುವರು ಹೈದರಾಬಾದಿನ ಮೇಲೆ ಸಾರ್ವಭೌಮಾಧಿಕಾರವನ್ನು ನಡೆಯಿಸುವ ಹಕ್ಕುಬಾಧ್ಯತೆ ಭಾರತ ಸರ್ಕಾರಕ್ಕೆ ಇರುವುದಿಲ್ಲ. ಎಂಬ ಮುಖ್ಯ ಅಂಶಗಳನ್ನು ಒಪ್ಪಂದದ ಷರತ್ತುಗಳಲ್ಲಿ ಸ್ಪಷ್ಟಗೊಳಿಸಲಾಗಿದೆ

ಒಪ್ಪಂದದ ಷರತ್ತುಗಳು

ಪರಸ್ಪರ ಸಹಕಾರ ಸೌಹಾರ್ದಗಳಿಂದ ನಡೆದುಕೊಳ್ಳಬೇಕೆಂಬುದೇ ಭಾರತ, ಹೈದರಾಬಾದು ಸರ್ಕಾರಗಳ ಧ್ಯೇಯ ಮತ್ತು ನೀತಿಯಾಗಿದೆ ಭಾರತ-ಹೈದರಾಬಾದಿನ ಸಂಬಂಧದ ಬಗ್ಗೆ ಇನ್ನೂ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಿಲ್ಲವಾದುದರಿಂದಲೂ, ಉಭಯರ ಹಿತಸಾಧನೆಯ ದೃಷ್ಟಿಯಿಂದ ಮುಂದೆ ಒಪ್ಪಂದವಾಗುವವರೆಗೆ ಈಗಿರುವ ಆಡಳಿತ ವ್ಯವಸ್ಥೆಯನ್ನೇ ಮುಂದುವರಿಸುವುದು ಪ್ರಯೋಜನಕಾರಿಯಾದುದರಿಂದಲೂ ಹೈದರಾಬಾದಿನ ನಿಜಾಮರೂ, ಭಾರತ ಸರ್ಕಾರದವರೂ ಕೆಳಗೆ ಕಂಡಂತೆ ಒಪ್ಪಂದ ಮಾಡಿಕೊಂಡಿರುತ್ತಾರೆ

1 ಮುಂದೆ ನೂತನ ಒಪ್ಪಂದಗಳು ಆಗುವವರೆಗೆ ವಿದೇಶ ವ್ಯವಹಾರ, ರಕ್ಷಣೆ, ಸಂಚಾರ ಸೌಲಭ್ಯಗಳೇ ಆದಿಯಾಗಿ ಸಮಸ್ತ ವಿಚಾರಗಳಲ್ಲಿಯೂ ಬ್ರಿಟಿಷ್ ಸಾರ್ವಭೌಮರು ಮತ್ತು ನಿಜಾಮರು ಆಗಸ್ಟ್ ೧೫ ಕ್ಕೆ ಮುಂಚೆ ಏರ್ಪಡಿಸಿಕೊಂಡಿದ್ದ ಆಡಳಿತ ವ್ಯವಸ್ಥೆಯನ್ನೇ ಇನ್ನು ಮುಂದೆ ಭಾರತ ಸರ್ಕಾರ ಮತ್ತು ನಿಜಾಮರು ನೂತನ ಸನ್ನಿವೇಶಕ್ಕೆ ಸಮಂಜಸವಾಗಿರುವಂತೆ ಮುಂದುವರಿಸಬೇಕು

ಒಳನಾಡಿನ ಶಾಂತಿ ಶಿಸ್ತುಗಳ ಪಾಲನೆಯ ವಿಶಿಷ್ಟ ಅಧಿಕಾರವೂ ನಿಜಾಮರಿಗೆ ಸೇರಿದುದು ಈ ವಿಚಾರದಲ್ಲಿ ಪ್ರವೇಶಿಸಲು ಭಾರತ ಸರ್ಕಾರಕ್ಕೆ ಅಧಿಕಾರವಿಲ್ಲ ಶಾಂತಿಪಾಲನೆಗಾಗಿ ನಿಜಾಮರ ಸಹಾಯಕ್ಕೆ ಭಾರತ ಸರ್ಕಾರವು ಸೈನ್ಯಪಡೆಗಳನ್ನು ಕಳುಹಿಸಕೂಡದು

ಶಾಂತಿ ಕಾಲದಲ್ಲಿ ಹೈದರಾಬಾದಿನ ಯಾವ ಪ್ರದೇಶದಲ್ಲಿಯೂ ಭಾರತ ಸೇನೆ ಇರಕೂಡದು ಆದರೆ ಯುದ್ಧ ಭೀತಿ ತಲೆ ದೋರಿದಾಗ ನಿಜಾಮರ ಅನುಮತಿ ಪಡೆದು ಭಾರತ ಸರ್ಕಾರದವರು ನಿಜಾಮರ ರಾಜ್ಯದಲ್ಲಿ ತಮ್ಮ ಸೇನಾ ದಳಗಳನ್ನು ಇಡಲು ಬಾಧಕವಿಲ್ಲ ಯುದ್ಧ ಮುಗಿದ ಆರು ತಿಂಗಳ ಅವಧಿಯೊಳಗಾಗಿ ಭಾರತ ಸೇನೆಯು ಹೈದರಾಬಾದ್ ಸಂಸ್ಥಾನವನ್ನು ಬಿಟ್ಟು ವಾಪಸು ಹೊರಟುಹೋಗಬೇಕು ಅಸಾಧಾರಣ ಸಂದರ್ಭಗಳಲ್ಲಿ ನಿಷ್ಕಾರಣವಾಗಿ ನಿಜಾಮರು ಭಾರತ ಸೇನೆಯ ಪ್ರವೇಶಕ್ಕೆ ಅನುಮತಿ ನಿರಾಕರಿಸುವುದಿಲ್ಲ

2 ಈ ಕರಾರಿನ ಉದ್ದೇಶ ಸಫಲಗೊಳ್ಳಲು ಮತ್ತು ಒಪ್ಪಂದದ ನಿಯಮಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಭಾರತ ಹೈದರಾಬಾದುಗಳು ಪ್ರತಿನಿಧಿಗಳ ವಿನಿಯಮ ಮಾಡಿಕೊಳ್ಳುವವು

3 ಭಾರತ ಸರ್ಕಾರಕ್ಕೆ ಹೈದರಾಬಾದಿನ ಮೇಲೆ ಸಾರ್ವಭೌಮಾಧಿಕಾರಗಳನ್ನು ನಡೆಯಿಸುವ ಅಧಿಕಾರವಿಲ್ಲ ಭಾರತ ಹೈದರಾಬಾದುಗಳಿಗೆ ಸಾರ್ವಭೌಮ ಸಂಬಂಧಗಳನ್ನು ಕಲ್ಪಿಸಲು ಅವಕಾಶ ಲೇಶವೂ ಇರುವುದಿಲ್ಲ

ಈ ಕರಾರಿನ ಅವಧಿಯು ಮುಕ್ತಾಯವಾದನಂತರ ಒಪ್ಪಂದವು ರದ್ದಾಗುವುದು ಈ ಒಪ್ಪಂದ ಷರತ್ತುಗಳ ಫಲವಾಗಿ ದತ್ತವಾದ ಯಾವ ಹಕ್ಕುಬಾಧ್ಯತೆಗಳನ್ನೂ ಅವಧಿ ಮೀರಿದನಂತರ ಯಾವ ಪಕ್ಷವೂ ಮುಂದುವರಿಸಬಾರದು

4 ಈ ಒಪ್ಪಂದ ಅಥವಾ ಮುಂದುವರಿಸಲಾಗಿರುವ ಒಪ್ಪಂದಗಳ ವಿಚಾರಗಳಲ್ಲಿ ಎರಡು ಪಕ್ಷಗಳಿಗೂ ಉದ್ಭವಿಸಬಹುದಾದ ಭಿನ್ನಾಭಿಪ್ರಾಯ, ವೈಮನಸ್ಯ ಇವುಗಳನ್ನು ಬಗೆಹರಿಸಲು ಪ್ರತಿಪಕ್ಷದವರೂ ಒಬ್ಬೊಬ್ಬ ಪಂಚಾಯಿತರನ್ನು ನೇಮಿಸಬೇಕು ಈ ಇರ್ವರು ಪಂಚಾಯಿತರೂ ಸೇರಿ ಬೇರೊಬ್ಬ ತೀರ್ಪುಗಾರರನ್ನು ನಿಯಮಿಸಬೇಕು

5 ಈ ಒಪ್ಪಂದವು ತತ್‌ಕ್ಷಣ ಜಾರಿಗೆ ಬರುವುದು ಇದರ ಜೀವಮಾನ ಒಂದು ವರ್ಷ

ಈ ಒಪ್ಪಂದಕ್ಕೆ ಹೈದರಾಬಾದಿನ ನಿಜಾಮರಾದ ಜನಾಬ್ ಮಾರ್ ಉಸ್ಮಾನ್ ಅಲಿಖಾನರೂ, ಭಾರತದ ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬೇಟನ್‌ರವರೂ ರುಜುಹಾಕಿದ್ದಾರೆ

ಹೈದರಾಬಾದಿನ ಪ್ರಜೆಗಳಿಗೆ ನಿಜಾಮರ ಪ್ರಾರ್ಥನೆ

ಹೈದರಾಬಾದಿನ ನಿಜಾಮರು ಹೊರಡಿಸಿರುವ ರಾಜಘೋಷಣೆಯಲ್ಲಿ ಜಾತಿಮತಗಳ ಭೇದಭಾವವಿಲ್ಲದೆ ಪ್ರಜೆಗಳೆಲ್ಲರ ಹಕ್ಕುಬಾಧ್ಯತೆಗಳನ್ನೂ, ಪ್ರಾಣಮಾನಗಳನ್ನೂ, ಪೂರ್ಣವಾಗಿ ರಕ್ಷಿಸುವುದಾಗಿ ಭರವಸೆ ನೀಡಿದ್ದಾರೆ ಹೈದರಾಬಾದಿನಲ್ಲಿ ಭದ್ರವಾದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವ ಕಾರ್ಯದಲ್ಲಿ ಪ್ರಜೆಗಳೆಲ್ಲರೂ ರಾಜಭಕ್ತಿಯುತವಾದ ಸಹಕಾರ ನೀಡಬೇಕೆಂದು ಕೋರಿದ್ದಾರೆ.

ನಿಜಾಂ ಸರ್ಕಾರದ ನೂತನ ಸಲಹೆಗಳಿಗೆ ಕಾಂಗ್ರೆಸ್ ಅಧ್ಯಕ್ಷರ ಒಪ್ಪಿಗೆ ದೊರೆಯಲಿಲ್ಲ

ರಾಜ್ಯಾಂಗ ಸುಧಾರಣೆಗಳು ಮತ್ತು ತಾತ್ಕಾಲಿಕ ಸರ್ಕಾರ ರಚನೆಯಲ್ಲಿ ಕಾಂಗ್ರೆಸ್ಸಿನ ಸಹಕಾರ ಪಡೆಯಲು ಹೈದರಾಬಾದಿನ ಕಾಂಗ್ರೆಸ್ ಅಧ್ಯಕ್ಷರೊಡನೆ ಶ್ರೀ ಪಿಂಗಳೆ ವೆಂಕಟರಾಮರೆಡ್ಡಿಯವರು ೯೦ ನಿಮಿಷಗಳ ಕಾಲ ಅವಿಚ್ಛಿನ್ನವಾಗಿ ಸಂಧಾನ ನಡೆಸಿದರು ನಿಜಾಂ ಸರ್ಕಾರದವರ ನೂತನ ಸಲಹೆಗಳು ಅಂಗೀಕಾರ ಯೋಗ್ಯವಾಗಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷರು ಅಭಿಪ್ರಾಯಪಟ್ಟುದುದರಿಂದ ಸಂಧಾನ ವಿಫಲವಾಯಿತು

ನೂತನ ಸಲಹೆಗಳು

ಸರ್ಕಾರದ ನೂತನ ಸಲಹೆಗಳ ಪ್ರಕಾರ ಕಾಂಗ್ರೆಸ್ಸಿನ ಪ್ರಧಾನ ಬೇಡಿಕೆಯಾದ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಧ್ಯೇಯವನ್ನು ನಿಜಾಮರು ಅಂಗೀಕರಿಸಿದ್ದಾರೆ ಆದರೆ ಇದನ್ನು ಕ್ರಮೇಣ ಜಾರಿಗೆ ತರಲಾಗುವುದು. ಮೊದಲು ಮಂತ್ರಿ ಮಂಡಲದಲ್ಲಿ ಹಿಂದುಗಳಿಗೂ, ಮಹಮ್ಮದೀಯರಿಗೂ ಸಮಪ್ರಾತಿನಿಧ್ಯವಿರುವುದು. ಕ್ರಮವಾಗಿ ಪ್ರಜಾಸಂಖ್ಯೆಗನುಗುಣವಾಗಿ ಬಹು ಸಂಖ್ಯಾತರಿಗೆ ಹೆಚ್ಚು ಸ್ಥಾನಗಳು ದೊರೆಯುವುವು ಇವು ನೂತನ ಸಲಹೆಗಳು

ಹಿಂದುಗಳಿಗೂ ಮುಸಲ್ಮಾನರಿಗೂ ಸಮಪ್ರಾತಿನಿಧ್ಯವಿರಬೇಕೆಂಬ ತತ್ವಕ್ಕೆ ಕಾಂಗ್ರೆಸ್ ಅಧ್ಯಕ್ಷರು ವಿರೋಧ ಸೂಚಿಸಿ, ತತ್‌ಕ್ಷಣ ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದೂ, ಅಲ್ಪ ಸಂಖ್ಯಾತರಾದ ಮುಸ್ಲಿಮರಿಗೆ ಸೂಕ್ತ ಪ್ರಾತಿನಿಧ್ಯ ಕೊಡಬಹುದೆಂದೂ ಖಚಿತವಾಗಿ ತಿಳಿಸಿದರು

ಹೈದರಾಬಾದ್ ನಿಜಾಮರ ಕೊಲೆಯ ಪ್ರಯತ್ನ

ತಮ್ಮ ಸಾಯಂಕಾಲದ ಪ್ರಾರ್ಥನೆಗಾಗಿ ೪ ನೆಯ ತಾ|| ದಿವಸ ನಿಜಾಮರು ಅರಮನೆಯಿಂದ ಕಾರಿನಲ್ಲಿ ಹೋಗುತ್ತಿದ್ದಾಗ ದಾರಿಯಲ್ಲಿ ಒಬ್ಬ ವಿದ್ಯಾರ್ಥಿಯು ಅವರ ಕಾರಿನ ಕಡೆಗೆ ನಾಡು ಬಾಂಬೊಂದನ್ನು ಎಸೆದನು. ಬಾಂಬು ನಿಜಾಮರ ಕಾರಿಗೆ ತಗುಲಿ ರಸ್ತೆಯಲ್ಲಿ ಬಿದ್ದು ಸಿಡಿಯಿತು ಪಾದಚಾರಿಗಳಾಗಿ ಹೋಗುತ್ತಿದ್ದ ಇಬ್ಬರಿಗೆ ಗಾಯವಾಯಿತು. ನಿಜಾಮರು ಮೃತ್ಯುವಿನಿಂದ ಪಾರಾದರು

ಈ ಬಗ್ಗೆ ೬ ಜನರ ದಸ್ತಗಿರಿ

ಸರ್ಕಾರದ ಪ್ರಕಟನೆಯೊಂದು ಹೀಗೆ ತಿಳಿಸುತ್ತದೆ—ನಿಜಾಮರ ಕೊಲೆಗೆ ಯತ್ನ ನಡೆದ ಸಂಬಂಧದಲ್ಲಿ ೬ ಜನರ ದಸ್ತಗಿರಿ ಆಗಿವೆ ಕೊಲೆಗೆ ಯತ್ನಿಸಿದನೆಂದು ಆಪಾದಿಸಲಾಗಿರುವವನು ಸಹ ಇವರಲ್ಲಿ ಸೇರಿದ್ದಾನೆ ಕೊಲೆಗೆ ಯತ್ನಿಸಿದವನನ್ನು ಪೋಲೀಸರು ಪ್ರಶ್ನಿಸಲಾಗಿ ತನ್ನ ಹೆಸರು ನಾರಾಯಣರಾವ್ ಎಂದೂ ಕಾಲೇಜಿನ ವಿದ್ಯಾರ್ಥಿಯೆಂದೂ ಹೇಳಿದನು ನಿಜಾಮರು ಬರುವುದಾಗಿದ್ದ ರಾಜಮಾರ್ಗಕ್ಕೆ ಸೇರುವ ಗಲ್ಲಿಯೊಂದರಲ್ಲಿ ಆಪಾದಿತನು ತನ್ನ ಇಬ್ಬರು ಮಿತ್ರರೊಂದಿಗೆ ಕಾದು ಕುಳಿತಿದ್ದನಂತೆ ! ನಿಜಾಮರ ಕಾರು ಬಂದೊಡನೆಯೇ ಆಪಾದಿತನು ತನ್ನ ಜೇಬಿನಿಂದ ಹ್ಯಾಂಡ್ ಗ್ರೆನೇಡ್ ಒಂದನ್ನು ತೆಗೆದು ಕಾರಿನ ಕಡೆ ಎಸೆದನೆಂದು ಹೇಳಲಾಗಿವೆ ಆಪಾದಿತನ. ಇನ್ನೊಂದು ಹ್ಯಾಂಡ್ ಗ್ರೆನೇಡನ್ನು ಜೇಬಿನಿಂದ ತೆಗೆದು ಎಸೆಯುವುದರೊಳಗೆ ಅದನ್ನು ಕಿತ್ತುಕೊಂಡರು ಆಪಾದಿತನು ತಾನು ಯಾವ ಪಕ್ಷಕ್ಕೂ ಸೇರಿದವನಲ್ಲವೆಂದೂ, ರಾಜಕೀಯ ಆದರ್ಶಗಳನ್ನು ಹಿಂಸಾಕೃತ್ಯಗಳಿಂದ ಗಳಿಸಬಹುದೆಂದು ನಂಬುವವರ ಗುಂಪಿಗೆ ತಾನು ಸೇರಿರುವುದಾಗಿಯೂ ತಿಳಿಸಿದನು

ಕಾಂಗ್ರೆಸ್ ಅಧ್ಯಕ್ಷರ ವಿಷಾದ

ನಿಜಾಮರನ್ನು ಕೊಲೆ ಮಾಡಲು ನಡೆದ ಪ್ರಯತ್ನವು ಖಂಡನೀಯವಾಗಿದೆ. ನಿಜಾಮರು ಅಪಘಾತದಿಂದ ಪಾರಾದುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂಬುದಾಗಿ ಹೈದರಾಬಾದ್ ಕಾಂ|| ಅಧ್ಯಕ್ಷರು ತಿಳಿಸಿದ್ದಾರೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣವಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಧ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ದೊರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೪೪೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ ಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕ ಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೪೦ ಮಹತ್ತ್ವದ ಫೋಟೋಗಳಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಡಿಸೆಂಬರ್ ೧೯೪೭ [ಸಂಚಿಕೆ ೩೫

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಸ್ತ್ರೀ ಧರ್ಮ

ನಮ್ಮ ಭಾರತ ಸ್ತ್ರೀಯರಿಗೆ ಎಲ್ಲಾ ಧರ್ಮಗಳಲ್ಲಿಯೂ ಪಾತಿವ್ರತ್ಯವೆಂಬುದು ಮುಖ್ಯ ಧರ್ಮವಾಗಿದೆ ಈ ಪಾತಿವ್ರತ್ಯವೆಂಬ ಒಂದು ಧರ್ಮವನ್ನು ಯಾವ ಸ್ತ್ರೀಯಳು ತ್ರಿಕರಣಶುದ್ಧಿಯಿಂದ ಪಾಲಿಸುತ್ತಾಳೆಯೋ ಅವಳೇ ಕುಲಸ್ತ್ರೀ ಎನಿಸಿಕೊಳ್ಳುತ್ತಾಳೆ ಸ್ತ್ರೀಧರ್ಮದ ವಿಚಾರದಲ್ಲಿ ಪುರಂದರದಾಸರು ಈರೀತಿ ಹೇಳಿದ್ದಾರೆ

"ಬುದ್ಧಿಮಾತ ಹೇಳಿದರೆ ಕೇಳಬೇಕಮ್ಮ । ಮಗಳೆ । ಮನಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮ ॥ ಅತ್ತೆ ಮಾವಗಂಜಿಕೊಂಡು ನಡೆಯಬೇಕಮ್ಮ । ಮಗಳೆ ಚತ್ತ ದೊಲ್ಲಭನಕ್ಕರೆಯನ್ನು ಪಡೆಯಬೇಕಮ್ಮ ॥ ಹೊತ್ತು ಹೊತ್ತಿಗೆ ಮನೆಯಕೆಲಸ ಮಾಡಬೇಕಮ್ಮ ॥ ಮಗಳೆ ಹತ್ತುಮಂದಿ ಒಪ್ಪುವಹಾಗೆ ನಡೆಯಬೇಕಮ್ಮ ॥೧॥ ಕೊಟ್ಟು ಕೊಂಬುವ ನೆಂಟರೊಡನೆ ದ್ವೇಷಬೇಡಮ್ಮ । ಮಗಳೆ । ಅಟ್ಟು ಉಂಬುವ ಕಾಲದಲ್ಲಿ ಆಡಬೇಡಮ್ಮ ॥ ಹಟ್ಟಿಬಾಗಿಲಲ್ಲಿ ಬಂದು ನಿಲ್ಲಬೇಡಮ್ಮ । ಮಗಳೆ । ಕಟ್ಟಿ ಆಳುವ ಗಂಡನೊಡನೆ ಸಿಟ್ಟುಬೇಡಮ್ಮ ॥೨॥ ನೆರೆಹೊರೆಯವರಿಗೆ ನ್ಯಾಯವನ್ನು ಹೇಳಬೇಡಮ್ಮ । ಗರುವ, ಕೋಪ, ಮತ್ಸರವನ್ನು ಮಾಡಬೇಡಮ್ಮ ॥ ಪರರ ನಿಂದಿಪ ಹೆಂಗಳೆಯೊಡನೆ ಸೇರಬೇಡಮ್ಮ । ಮಗಳೆ । ಗುರುಪುರಂದರವಿಠಲನ ಸ್ಮರಣೆ ಮರೆಯಬೇಡಮ್ಮ ॥೩॥

ಮಹಿಳೆಯೇ ಮಕ್ಕಳ ಹಾಗೂ ದೇಶಾಭಿವೃದ್ಧಿಯ ನಿಜಜ್ಞಾನದ ಬೀಜ ಬೀಜದಂತೆ ಫಲವೆಂಬುದು ಸುಳ್ಳಲ್ಲ. ಮಕ್ಕಳ ಪೋಷಕಳು ಹೆಚ್ಚಾಗಿಯೆಂದರೆ ತಾಯಿ ! ಮಕ್ಕಳು ತಾಯಿಯ ನಡವಳಿಕೆ, ಆಚಾರ, ವಿಚಾರಾದಿಗಳನ್ನು ನೋಡಿ, ಮುಂದೆ ಅವರಂತೆಯೇ ಆಗುವರು ಮಕ್ಕಳು ಉತ್ತಮರು ಇಲ್ಲವೆ ಕೆಟ್ಟವರಾಗಲು ಅದಕ್ಕೆ ಮುಖ್ಯ ಕಾರಣ ತಾಯಿ ತಾಯಿ ಉತ್ತಮಳಾದರೆ ಮಕ್ಕಳು ಉತ್ತಮರಾಗುವರು ಮಕ್ಕಳು ಉತ್ತಮರಾದರೆ ಮನೆಯಷ್ಟೇ ಉತ್ತಮವಾಗದೆ ದೇಶವೆಲ್ಲವೂ ಉತ್ತಮಸ್ಥಿತಿಗೇರುವುದು ಅಂದಮೇಲೆ ದೇಶೋನ್ನತಿಯ ಮೂಲ ಕರ್ತೃವೆಂದರೆ ತಾಯಿ ಶ್ಲೋಕ— ಶುಶ್ರೂಷಾಂ ಪರಿಚರ್ಯಾಂ ಚ ದೇವತುಲ್ಯಾಂ ಪ್ರಕುರ್ವತೀ । ವಶ್ಯಭಾವೇನ ಸುಮನಾ ಸುವ್ರತಾ ಶುಭದರ್ಶನಾ ॥ ಅಂದರೆ ಒಳ್ಳೆ ನಡತೆಯುಳ್ಳ ರೂಪವತಿಯಾದ ಪತಿವ್ರತಾಸ್ತ್ರೀಯು ತನ್ನ ಪತಿಗೆ ವಶಳಾಗಿದ್ದು ಒಳ್ಳೆ ಮನಸ್ಸಿನಿಂದ ದೇವರಿಗೆ ಸಮವಾಗಿ ತನ್ನ ಪತಿಯ ಸೇವೆಯನ್ನೂ ಹರಗುರು ಪೂಜಾದಿಗಳನ್ನೂ ಪರಿಚರ್ಯೆಯನ್ನೂ ಮಾಡಬೇಕು ಶ್ಲೋಕ—ಪತಿಪ್ರಿಯಹಿತೇ ಯುಕ್ತಾ ಸ್ವಾಚಾರಾ ವಿಜಿತೇಂದ್ರಿಯಾ । ಸೇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಾಂ ಗತಿಂ ॥ ಅಂದರೆ ಯಾವ ಸ್ತ್ರೀಯು ಪತಿಗೆ ಪ್ರೀತಳಾಗಿಯೂ ಅನುಕೂಲಳಾಗಿಯೂ, ಸದಾಚಾರಸಂಪನ್ನಳಾಗಿಯೂ 'ಇಂದ್ರಿಯ ನಿಗ್ರಹವುಳ್ಳವಳಾಗಿಯೂ ಇರುವಳೋ ಅವಳು ಮರಣಾನಂತರ ಉತ್ತಮಗತಿಯನ್ನು ಪಡೆಯುವಳು. ಅದಕ್ಕೆ ಹಿಂದೆ ಅನುಸೂಯೆ, ಅರುಂಧತಿ, ಚಂದ್ರಮತಿ, ಅಹಲ್ಯಾ ಸೀತಾ, ದ್ರೌಪದಿ, ದಮಯಂತಿ ಮೊದಲಾದ ಮಹಾ ಮಹಾ ಪತಿವ್ರತಾಶಿರೋಮಣಿಗಳ ಚರಿತ್ರೆಗಳೇ ದೃಷ್ಟಾಂತವಾಗಿವೆ

ಈಗ ಕಲಿಕಾಲದ ಪ್ರಭಾವದಿಂದ ಸ್ತ್ರೀಧರ್ಮವೆಲ್ಲಾ ನಾಶವಾಗಿ ಸ್ತ್ರೀಸ್ವಾತಂತ್ರ್ಯ, ವಿಧವಾವಿವಾಹ, ವ್ಯಭಿಚಾರ, ಶಿಶುಹತ್ಯೆ, ಪತಿಘಾತಕತನ ಮೊದಲಾದ ನಾನಾ ತರಹದ ಪಾಪಗಳು ಸ್ತ್ರೀಯರಲ್ಲಿ ನಡೆಯುತ್ತಿ ಮಹಾ ರೌರವನರಕಕ್ಕೆ ಗುರಿಯಾಗುತ್ತಿರುವರು ಪರಮಾತ್ಮನು ಭಾರತ ಸ್ತ್ರೀಯರಲ್ಲಿ ಮೇಲ್ಕಂಡ ದುರ್ಗುಣಗಳು ನಾಶವಾಗುವಂತೆ ಮಾಡಿ ಪತಿವ್ರತಾಧರ್ಮವು ಅವರ ಹೃದಯದಲ್ಲಿ ಯಾವಾಗಲೂ ಸ್ಥಿರವಾಗಿ ನೆಲಸುವಂತೆ ಅನುಗ್ರಹಿಸಲೆಂದು ಆಶಿಸುತ್ತೇನೆ

ಎಸ್ ಜಿ ಚನ್ನಬಸವನಗೌಡ ಪಾಟೀಲ
ಒಸವಾಪಟ್ಟಣ ಚನ್ನಗಿರಿ ತಾ॥

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಮಿತಿಮೀರಿದ ಶಾಂತಿಯಿಂದ ಹಾನಿ

ಲೇ॥ ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

ವಾಚಕಮಹಾಶಯರೇ ! "ಹೊತ್ತು ಬಂದಂತೆ ಕೊಡೆ ಹಿಡಿಯಬೇಕು" ಎಂಬ ಗಾದೆಯಮಾತಿನಂತೆ ಕಾಲಕ್ಕನುಸಾರವಾಗಿಯೂ, ಪ್ರಸಂಗಾನುಸಾರವಾಗಿಯೂ ಜನರ ಸ್ವಭಾವಕ್ಕನುಸಾರವಾಗಿಯೂ ಹೋಗಬೇಕು ದುಷ್ಟರಲ್ಲಿ ಉಗ್ರಸ್ವರೂಪವನ್ನೂ, ಶಿಷ್ಟರಲ್ಲಿ ಶಾಂತಸ್ವರೂಪವನ್ನೂ ತಾಳಬೇಕು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪರಿಪಾಲನೆಮಾಡುವದು ಸರಕಾರದವರ ಹಾಗೂ ಸತ್ಪುರುಷರ ಆದ್ಯಕರ್ತವ್ಯವಾಗಿದೆ ಸಾಧುಜನರಲ್ಲಿ ಶಾಂತಿಯನ್ನು ತೋರಿಸುವಂತೆ ದುಷ್ಟರಲ್ಲಿ ಶಾಂತಿಯನ್ನು ತೋರಿಸಿದರೆ ಕಾವ ಕಬ್ಬಿಣದ ಮೇಲೆ ನೀರು ಚೆಲ್ಲಿದಂತೆ ವ್ಯರ್ಥವಾಗುವುದಲ್ಲದೆ ಸಾರ್ಥಕವಾಗಲಾರದು ದುಷ್ಟರಲ್ಲಿ ಶಾಂತಿಯನ್ನು ತಾಳಿದರೆ ಅವರು ನಮ್ಮ ಕಾರ್ಯದಲ್ಲಿ ಮತ್ತಷ್ಟು ವಿಘ್ನವನ್ನುಂಟುಮಾಡಿ ಹೆಚ್ಚಿಗೆ ತ್ರಾಸುಕೊಡುತ್ತಾರೆ ಆದ್ದರಿಂದ ಅವರಲ್ಲಿ ಶಾಂತಿಯನ್ನು ತೋರಿಸದೆ ಉಗ್ರಸ್ವರೂಪವನ್ನು ತಾಳಲೇಬೇಕು ಅಂದರೆ ಕಾರ್ಯವು ಸರಳವಾಗಿ ಸಾಗುವದು ಶಾಂತಿ, ಶಾಂತಿ ಎಂದು ಕುಳಿತರೆ ಕಡೆಗೆ ಎಲ್ಲಾ ಕೆಟ್ಟುಹೋಗುವದು ಮಿತಿಮೀರಿದ ಶಾಂತಿಯಿಂದುಂಟಾಗುವ ಪರಿಣಾಮವನ್ನು ವಾಚಕರ ಅವಗಾಹನೆಗಾಗಿ ಈ ಕೆಳಗೆ ದೃಷ್ಟಾಂತರೂಪವಾಗಿ ವಿವರಿಸಲಾಗುವದು.

ಒಂದು ಊರಲ್ಲಿ ನದಿಯ ದಂಡೆಯಬಳಿ ಒಂದು ಸರ್ಪವು ವಾಸಮಾಡಿಕೊಂಡಿತ್ತು. ಅದು ನದಿಗೆ ಬರಹೋಗುವ ಜನರಿಗೆ ಬಹಳ ಅಂಜಿಕೆಯನ್ನುಂಟು ಮಾಡಿತ್ತು ಹಲವರನ್ನು ಕಚ್ಚಿತ್ತು. ಅದರ ಈ ಉಪಟಳವನ್ನು ಕಂಡು ಒಬ್ಬ ಸಾಧುವು ಮಂತ್ರವನ್ನು ಪಠಿಸಿ ಆ ಸರ್ಪಕ್ಕೆ "ನೀನು ಇನ್ನುಮುಂದೆ ಯಾರನ್ನೂ ಕಚ್ಚಬೇಡ, ಯಾರು ಏನು ಮಾಡಿದರೂ ಸುಮ್ಮನಿರು" ಎಂದು ಅಪ್ಪಣೆ ಮಾಡಿದನು ಸರ್ಪವು ಸಾಧುವಿನ ಮಂತ್ರವನ್ನು ಮೀರಲು ಸಮರ್ಥವಾಗದೆ ಅಂದಿನಿಂದ ಸುಮ್ಮನೆ ಇರತೊಡಗಿತು ಕೆಲವು ದಿನಗಳಾದಮೇಲೆ ಸರ್ಪವು ಕಚ್ಚುವುದಿಲ್ಲವೆಂದೂ ಏನೂ ಮಾಡುವುದಿಲ್ಲವೆಂದೂ ಜನರಿಗೆ ನಂಬಿಗೆಯಾಯಿತು ಆಮೇಲೆ ಕೇಳುವುದೇನ ? ಜನರು ಅದಕ್ಕೆ ಕಲ್ಲು ಒಗೆಯಲಾರಂಭಿಸಿದರಲ್ಲದೆ ಅದನ್ನು ತುಳಿದು ಹೋಗಲಾರಂಭಿಸಿದರು ಹುಡುಗರಿಗೆ ಅದೊಂದು ಆಟವಾಗಿಹೋಯಿತು ಒಂದು ದಿವಸ ಸಿಂಬೆಯನ್ನು ಮರೆತು ನೀರಿಗೆ ಹೋಗಿದ್ದ ಒಬ್ಬ ಹೆಂಗಸು ಅತ್ತಿತ್ತ ನೋಡುವಷ್ಟರಲ್ಲಿ ನಿರುಪದ್ರವಿಎಂದು ಗೊತ್ತಾಗಿದ್ದ ಆ ಸರ್ಪವನ್ನು ಸಿಂಬೆಯಂತೆ ಮಾಡಿ ಅದನ್ನು ತಲೆಯಮೇಲಿಟ್ಟು ಅದರ ಮೇಲೆ ನೀರು ತುಂಬಿದ ಭಾರವಾದ ಕೊಡವನ್ನು ಹೇರಿಕೊಂಡು ನಡೆದಳು ಆ ದಿವಸ ದಾರಿಯಲ್ಲಿ ಆ ಸಾಧುವು ಅಕಸ್ಮಾತ್ತಾಗಿ ಬರುತ್ತಿದ್ದನು ಆಗ ಸರ್ಪವು—ಸ್ವಾಮಿಾ ! ತಮ್ಮ ಅಪ್ಪಣೆಯನ್ನು ಪಾಲಿಸುವ ನನ್ನ ಈ ದುರವಸ್ಥೆಯನ್ನು ನೋಡಿದಿರಾ ? ಎಂದು ಕೇಳಿತು ಆಗ ಸಾಧುವು ಸರ್ಪದ ಆ ಅವಹೇಳನವನ್ನು ನೋಡಲಾರದೆ ತನ್ನ ಮಂತ್ರವನ್ನು ಮರಳಿ ತೆಗೆದುಕೊಂಡು "ಸರ್ಪವೇ ಇನ್ನು ನೀನು ಮೊದಲಿನಂತೆ ಇರು" ಎಂದು ಹೇಳಿದನು ಕೂಡಲೇ ಸರ್ಪವು ಅಲ್ಲಿಯೇ ಭುಸ್ ಎಂದು ಆರ್ಭಟಿಸಿತು ಹೆಂಗಸು ಕೊಡವನ್ನು ಚೆಲ್ಲಿ, ತಲೆಯನ್ನು ಕೊಡವಿ ಹತ್ತುಮೊಳ ಹಾರಿ ನಿಂತಳು ಅಲ್ಲಿದ್ದವರೆಲ್ಲ ದೂರ ಸರಿದು ಓಡಿಹೋದರು ಆದುದರಿಂದ ದುಷ್ಟರಲ್ಲಿ ಶಾಂತಿಯನ್ನು ತಾಳದೆ ಸರಕಾರವೂ ಸಜ್ಜನರೂ ಉಗ್ರಭಾವವನ್ನು ತಾಳಿ, ಅವರಿಗೆ ತಕ್ಕ ಶಾಸನವನ್ನು ಮಾಡಲೇಬೇಕು ಅಂದರೆ ಎಲ್ಲರಿಗೂ ಸುಖವಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ

ಗೋಕರ್ಣಕ್ಷೇತ್ರದಲ್ಲಿ ಅನುಷ್ಠಾನ.

ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಚರಮೂರ್ತಿಸ್ವಾಮಿಗಳವರು ಗೋಕರ್ಣಕ್ಷೇತ್ರದಲ್ಲಿ ವೀರಶೈವರಿಗಾಗಿ ಒಂದು ಮಠವನ್ನು ಕಟ್ಟಿಸುತ್ತಿರುವ ವಿಷಯವು ಎಲ್ಲರಿಗೂ ತಿಳಿದೇ ಇದೆ. ಶ್ರೀಗಳವರು ಸದ್ಯಃ ಗೋಕರ್ಣಕ್ಷೇತ್ರದಲ್ಲಿಯೇ ಇದ್ದು ಧನುರ್ಮಾಸ ನಿಮಿತ್ತವಾಗಿ ತಾ॥ ೧೬-೧೨-೪೭ ರಿಂದ ೧೫-೧-೪೮ ರ ವರೆಗೆ ಪೂಜಾನುಷ್ಠಾನವನ್ನು ಇಲ್ಲಿಯೇ ಪ್ರಾರಂಭಿಸಿದ್ದಾರೆ ಮಠದ ಕಟ್ಟಡಕ್ಕೆ ವಾಗ್ದಾನಮಾಡಿರುವ ಮಹನೀಯರು ಆದಷ್ಟು ಬೇಗ ಗೋಕರ್ಣಕ್ಕೆ ಹಣವನ್ನು ಕಳುಹಿಸಿಕೊಡಬೇಕೆಂದು ಈ ಮೂಲಕ ಕೋರಲಾಗಿದೆ.

ಸೆಕ್ರೆಟರಿ ವೀರಶೈವಮಠ
ಪೋ॥ ಗೋಕರ್ಣ, ಜಿ॥ ಕಾರವಾರ.

ಪಂಚಾಚಾರ್ಯಪ್ರಭಾ.

೧೯೪೭ನೆಯ ಡಿಸೆಂಬರ್ ತಾ|| ೨೨ ನೇ ಸೋಮವಾರ

ಆತ್ಮೋದ್ಧಾರ

ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವನೂ ತನ್ನ ದೇಹರಕ್ಷಣೆಯನ್ನು ಮಾಡಿಕೊಳ್ಳುವುದರಲ್ಲಿ ಹೇಗೆ ಆಸಕ್ತನಾಗಿರುವನೋ ಹಾಗೆಯೇ ದೇಹದೊಳಗೆ ವಾಸಮಾಡಿಕೊಂಡಿರುವ ಆತ್ಮನ ರಕ್ಷಣೆಯಲ್ಲಿಯೂ ಆಸಕ್ತನಾಗಿರಬೇಕು ಆತ್ಮರಕ್ಷಣೆಗೆ ಧರ್ಮಾಚರಣೆಯೇ ಮುಖ್ಯ ಸಾಧನವಾಗಿದೆ ನಾವು ಈ ದೇಹವಿರುವವರೆಗೂ ಎಷ್ಟುಮಟ್ಟಿಗೆ ಧರ್ಮಾಚರಣೆಯನ್ನು ಮಾಡುತ್ತ ಬರುತ್ತೇವೆಯೋ, ಅಷ್ಟುಮಟ್ಟಿಗೆ ದೇಹದಲ್ಲಿ ಗೂಢವಾಗಿರುವ ಆತ್ಮಶಕ್ತಿಯು ಕ್ರಮೇಣ ವಿಕಾಸವಾಗುತ್ತ ಹೋಗುವದು ಕೃಷೀವಲನು ಕೃಷಿಕರ್ಮಾಚರಣೆಯಿಂದ ತನ್ನ ಗದ್ದೆಯನ್ನು ಹೇಗೆ ಹೇಗೆ ಹಸನುಮಾಡುತ್ತ ಬರುವನೋ ಹಾಗೆ ಹಾಗೆ ಆ ಗದ್ದೆಯಲ್ಲಿ ಬಿತ್ತಿದ ಬೀಜದಲ್ಲಿದ್ದ ಗುಪ್ತವಾದ ಶಕ್ತಿಯು ಪ್ರಕಾಶಹೊಂದುತ್ತ ಅಂಕುರಿಸಿ ಪಲ್ಲವಿಸಿ ಕುಸುಮಿತವಾಗಿ ಫಲಿತವಾಗುತ್ತದೆ ಭೂಮಿಯಲ್ಲಿ ಬಿತ್ತಿದ ಬೀಜದಲ್ಲಿ ಅಂಕುರಿಸುವ ಶಕ್ತಿಯು ಸ್ವಾಭಾವಿಕವಾಗಿ ಇದ್ದರೂ ಅದಕ್ಕನುಕೂಲವಾದ ಉಪಕಾರಿಕಾರಣಗಳಿಲ್ಲದೆ ಇದ್ದರೆ ಆ ಶಕ್ತಿಯು ಅಲ್ಲಿಯೇ ಕುಂಠಿತವಾಗಿ ಹೋಗುತ್ತದೆ ಅದರಂತೆ ನಮ್ಮ ದೇಹವೆಂಬ ಸುಕ್ಷೇತ್ರದಲ್ಲಿ ಗುಪ್ತನಾಗಿರುವ ಆತ್ಮನು ಪರಮಾತ್ಮನ ಅಂಶಭೂತನಾಗಿದ್ದುದರಿಂದ ಸ್ವಾಭಾವಿಕವಾಗಿ ಪರಮಾತ್ಮನನ್ನು ಸೇರುವ ಶಕ್ತಿಯನ್ನು ತಾನು ಪಡೆದಿದ್ದರೂ, ಆ ಶಕ್ತಿಯನ್ನು ವಿಕಾಸಗೊಳಿಸಲು ಉಪಕಾರಿಕಾರಣಗಳಾದ ಧರ್ಮಾಚರಣೆಗಳಿಲ್ಲದಿದ್ದರೆ ಆತ್ಮನ ಶಕ್ತಿಯು ಅಲ್ಲಿಯೇ ಸಂಕುಚಿತಾವಸ್ಥೆಯನ್ನು ಹೊಂದಿ ಕಾರಾಗೃಹದಲ್ಲಿ ಸಿಕ್ಕಿಬಿದ್ದ ಮನುಷ್ಯನಂತೆ ಪರಿತಪಿಸಬೇಕಾಗುವದು ಮನುಷ್ಯದೇಹಧಾರಿಯಾದ ಆತ್ಮನಿಗೆ ಮುಕ್ತಿಯೇ ಮುಖ್ಯ ಪ್ರಯೋಜನವು ಮಾನವಜನ್ಮಧಾರಿಗಳಲ್ಲಿ ಮೋಕ್ಷವನ್ನು ಸಂಪಾದಿಸುವವನೇ ಉತ್ತಮನು ಮೋಕ್ಷವನ್ನು ಬಿಟ್ಟು ಅರ್ಥಾರ್ಜನಪೂರ್ವಕವಾಗಿ ಧರ್ಮಕಾಮಗಳನ್ನು ಸಂಪಾದಿಸುವವನೇ ಮಧ್ಯಮನು, ಧರ್ಮ ಮೋಕ್ಷಗಳನ್ನು ಬಿಟ್ಟು ಕೇವಲ ಅರ್ಥಕಾಮಗಳನ್ನು ಸಂಪಾದಿಸುವವನೇ ಅಧಮನು ಎಂದು ಶಾಸ್ತ್ರವು ಬೋಧಿಸುತ್ತಿರುವುದರಿಂದ ಮಾನವರು ಮೋಕ್ಷವೆಂಬ ಮಹಾಪ್ರಯೋಜನವನ್ನು ಲಕ್ಷ್ಯವಾಗಿಟ್ಟುಕೊಂಡು ಅದಕ್ಕನುಕೂಲವೆನಿಸಿದ ಧರ್ಮವನ್ನೂ, ಅರ್ಥವನ್ನೂ, ಕಾಮವನ್ನೂ, ಪಡೆಯಬೇಕಲ್ಲದೆ ಮುಖ್ಯಧ್ಯೇಯವಾದ ಮೋಕ್ಷವನ್ನೇ ಬಿಟ್ಟು ಕೇವಲ ಅರ್ಥಕಾಮಗಳಲ್ಲಿಯೇ ಆಸಕ್ತರಾಗಬಾರದು ಇದೇ ಉತ್ತಮಪುರುಷರ ಲಕ್ಷಣವಾಗಿದೆ

ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ। ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ॥ ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ ತಸ್ಮಾನ್ಮಾಂ ಶರಣಾಗತಂ ಕರುಣಯಾ ತ್ವಂ ರಕ್ಷರಕ್ಷಾಧುನಾ।

ನಮ್ಮ ಕಣ್ಣೆದುರಿಗೇನೇ ಆಯುಷ್ಯವು ನಶಿಸಿಹೋಗುತ್ತಲಿದೆ ಯೌವನವು ಪ್ರತಿದಿವಸವೂ ಕ್ಷೀಣಿಸುತ್ತಲೇ ಬರುತ್ತದೆ ಕಳೆದ ದಿವಸಗಳೆಲ್ಲವೂ ಮುಂದೆ ಬರಲಾರವು ಸಂಪತ್ತಾದರೂ ನೀರಿನ ಮೇಲೆ ಏಳುವ ಅಲೆಗಳಂತೆ ಅತ್ಯಂತ ಚಂಚಲವಾಗಿದೆ ಪ್ರಾಣವು ಮಿಂಚಿನಂತೆ ತೋರಿ ಅಡಗುವ ಸ್ವಭಾವವುಳ್ಳದ್ದಾಗಿದೆ ಆದುದರಿಂದ ಎಲೈ ಪರಮಾತ್ಮನೇ, ನಿನ್ನನ್ನು ಮರೆಹೊಕ್ಕಿರುವೆನು; ರಕ್ಷಿಸು ಎಂದು ಆತ್ಮಾನಾತ್ಮವಿಚಾರವುಳ್ಳ ಮಹಾತ್ಮರು ಪರಮೇಶ್ವರನನ್ನು ಪ್ರಾರ್ಥಿಸಿರುವರು ಆ ಮಹಾತ್ಮರ ದಿವ್ಯವಾಣಿಯನ್ನು ಪರಿಶೀಲಿಸಿ ನೋಡಿದ್ದಾದರೆ ಆತ್ಮನು ಪುನಃ ಈ ಕ್ಷಣಿಕವಾದ ದೇಹವನ್ನು ಧರಿಸದಂತೆ ಮಾಡಿಕೊಳ್ಳುವುದೇ ಮಾನವಜನ್ಮದ ಮುಖ್ಯಧ್ಯೇಯವೆಂದು ತಿಳಿದುಬರುತ್ತದೆ ಸೃಷ್ಟಿ ಸ್ಥಿತಿ ಸಂಹಾರಕರ್ತನಾದ ಪರಮೇಶ್ವರನು ಸರ್ವರೂ ದುಃಖವೆಂಬ ಮಹಾಭಾರವನ್ನು ಇಳುಹಿ ವಿಶ್ರಾಂತರಾಗಲೆಂದೇ ವಿವೇಕಶಕ್ತಿಯಿಂದೊಡಗೂಡಿದ ಮನುಷ್ಯದೇಹವನ್ನು ಸೃಷ್ಟಿಸಿ ಈತನ ಸೌಕರ್ಯಕ್ಕಾಗಿಯೇ ಭೂಮಿ, ಜಲ, ತೇಜಸ್ಸು, ವಾಯು, ಆಕಾಶ ಮುಂತಾದವುಗಳನ್ನು ದಯಪಾಲಿಸಿರುತ್ತಾನೆ ಇಂಥ ಸಲಕರಣೆಗಳನ್ನೆಲ್ಲಾ ಒದಗಿಸಿರುವ ಪರಮಾತ್ಮನಲ್ಲಿ ಮನುಷ್ಯನು ತಾನಿರುವವರೆಗೂ ಕೃತಜ್ಞತಾಭಾವವುಳ್ಳವನಾಗಿರಬೇಕು ಆತನು ಕೊಟ್ಟ ಕೈಗಳಿಂದ ಆತನನ್ನು ಪೂಜಿಸುತ್ತಿರುವುದು, ಆತನು ಕೊಟ್ಟ ಕಿವಿಗಳಿಂದ ಆತನ ಕಥೆಗಳನ್ನು ಕೇಳುತ್ತಲಿರುವುದು, ಆತನು ಕೊಟ್ಟ ನಾಲಗೆಯಿಂದ ಆತನ ಗುಣಗಾನವನ್ನು ಮಾಡುತ್ತಲಿರುವುದು ಆತನು ಕೊಟ್ಟ ಶಿರಸ್ಸಿನಿಂದ ಆತನನ್ನು ನಮಸ್ಕರಿಸುತ್ತಿರುವುದು, ಆತನು ಕೊಟ್ಟ ಮನಸ್ಸಿನಿಂದ ಆತನನ್ನು ಧ್ಯಾನಿಸುತ್ತಲಿರುವುದು ಇತ್ಯಾದಿ ಪರಮಾತ್ಮಸಂಬಂಧ ಕ್ರಿಯೆಗಳೇ ಮೋಕ್ಷವನ್ನು ಸಾಧಿಸುವ ಧರ್ಮಾಚರಣೆಗಳಾಗಿರುತ್ತವೆ ಪರಮಾತ್ಮನು ತನ್ನ ಸ್ವರೂಪವನ್ನು ತಿಳಿಯುವುದಕ್ಕಾಗಿ ಕೊಟ್ಟ ಬುದ್ಧಿಯನ್ನೂ, ಇಂದ್ರಿಯಗಳನ್ನೂ ಸಫಲಗೊಳಿಸದೆ ಕೇವಲ ಬಾಹ್ಯಾಡಂಬರದ ಸೊಬಗಿಗಾಗಿ ಉಪಯೋಗಿಸುವವನು ದೈವದ್ರೋಹಿಯೂ ಕೃತಘ್ನನೂ ಆಗುವನೆಂಬುದರಲ್ಲಿ ಯಾವ ಸಂಶಯವೂ ಇಲ್ಲ

ಕರಾಳರೂಪದಿಂದ ವ್ಯಾಪಿಸುತ್ತಿರುವ ಈಗಿನ ವಿದ್ಯಾಸಂಸರ್ಗಜಾಡ್ಯದಿಂದ ನಮ್ಮ ಭಾರತೀಯರಲ್ಲಿ ಇಂಥ ಮೋಕ್ಷಸಾಧನವಾದ ಸನಾತನ ಪದ್ಧತಿಗಳೆಲ್ಲವೂ ಒಂದೊಂದಾಗಿ ನಷ್ಟವಾಗುತ್ತ ಸ್ರಕ್ಚಂದನವನಿತಾದಿಗಳಲ್ಲಿ ವಿಷಯಾಸಕ್ತಿಯು ಹೆಚ್ಚುತ್ತ ಒರಲುವಕ್ರಮವಾಗಿರುವುದನ್ನು ನೋಡಿದರೆ ಇವರು ದೇಹವೇ ಆತ್ಮವೆಂದು ತಿಳಿದುಕೊಂಡಿರುವ ಚಾರ್ವಾಕಮತವನ್ನು ಅನುಕರಿಸಬಹುದೆಂದು ತೋರುತ್ತದೆ

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ
ಯಾವಜ್ಜೀವೇತ್ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್।

ದೇಹವು ಅಗ್ನಿಯಲ್ಲಿ ಸುಟ್ಟು ಬೂದಿಯಾದಮೇಲೆ ಪುನಃ ಹುಟ್ಟುವದೆಂತು? ಆದರಿಂದ ಈ ದೇಹವಿರುವುದರೊಳಗಾಗಿಯೇ ಯಾರ ಮನೆ ಮುರಿದರೇನು? ಯಾರಿಗೆ ವ್ಯಥೆಯನ್ನುಂಟುಮಾಡಿದರೇನು? ತಾನು ಮಾತ್ರ ಸುಖವಾಗಿದ್ದರೆ ಅಲ್ಲಿಗೆ ಪುರುಷಾಯುಷ್ಯದ ಫಲವಾಯಿತೆಂದು ತಿಳಿದು ಪಶುಗಳಂತೆ ವರ್ತಿಸುವವನೇ ಚಾರ್ವಾಕನೆನಿಸುತ್ತಾನೆ ಇಂತಹ ನಾಸ್ತಿಕವಾದಿಗಳು ಹಿಂದಿನಿಂದಲೂ ನಮ್ಮ ಭರತಖಂಡದಲ್ಲಿ ಇದ್ದರು ಆದರೆ ಅಂಥವರು ನಮ್ಮ ಸನಾತನಧರ್ಮದಲ್ಲಿ ಸೇರಿಸಲ್ಪಟ್ಟಿರಲಿಲ್ಲ ಕೊಳ್ಳೆಗಡುಕನಾದ ಮಹಾಪರಾಧಿಯನ್ನು ರಾಜಾಧಿಕಾರಿಯು ಮುದ್ರೆಯನ್ನೊತ್ತಿ ಪ್ರತ್ಯೇಕವಾದ ಒಂದು ಸ್ಥಾನದಲ್ಲಿರಿಸುವಂತೆ ನಮ್ಮ ಪೂರ್ವದ ಋಷಿಗಳು ಇಂಥ ದೇಹಾತ್ಮವಾದಿಗಳ ತಂಡವನ್ನು 'ನಾಸ್ತಿಕ' ಎಂಬ ಒಂದು ಮುದ್ರೆಯನ್ನೊತ್ತಿ ಸನಾತನಗುಂಪಿನಿಂದ ಪ್ರತ್ಯೇಕವಾಗಿರಿಸುತ್ತಿದ್ದರು

ಇತ್ತೀಚೆಗೆ ಇಂಥ ದುರ್ವಾದವು ಆಸ್ತಿಕರಲ್ಲಿಯೇ ಹಬ್ಬುತ್ತ ಬಂದಿರುವುದು ಬಹು ವಿಷಾದಾಸ್ಪದವಾದ ಸಂಗತಿಯಾಗಿದೆ ದೇಹವೇ ಬೇರೆ, ಆತ್ಮನೇ ಬೇರೆಯೆಂದು ಶ್ರುತಿಸ್ಮೃತ್ಯಾಗಮಗಳು ಸಾರುತ್ತಿರುವುವಲ್ಲದೆ ಪ್ರತ್ಯಕ್ಷಾನುಭವದಿಂದಲೂ ಸಿದ್ಧವಾಗುತ್ತದೆ ದೇಹಕ್ಕಿಂತಲೂ ಪ್ರತ್ಯೇಕವಾಗಿರುವ ಮತ್ತು ಪುಣ್ಯಪಾಪಗಳ ವಾಸನಾನುಗುಣವಾಗಿ ಫಲಾಫಲಗಳನ್ನು ಅನುಭವಿಸುವುದಕ್ಕೆ ಸಿದ್ಧನಾಗಿರುವ ಆತ್ಮನಿಗೆ ಧರ್ಮವೆಂಬ ಮಹಾಕವಚವನ್ನು ಹಾಕಿ ಅವನನ್ನು ರಕ್ಷಿಸಬೇಕಲ್ಲದೆ ಈ ಕವಚವನ್ನು ಕಿತ್ತುಹಾಕಿ ಅಧರ್ಮವೆಂಬ ವಿಷವನ್ನು ಲೇಪಿಸಿ ಆತ್ಮನನ್ನು ಅಧೋಗತಿಗೀಡುಮಾಡಬಾರದು ಆದುದರಿಂದ ಸನಾತನ ಧರ್ಮಾನುಯಾಯಿಗಳು ದೇಹಾತ್ಮವಾದಿಗಳಾಗದೆ ತಮ್ಮ ಪೂರ್ವಜರಂತೆ ಧರ್ಮದಿಂದ ನಡೆದು ಆತ್ಮೋದ್ಧಾರಮಾಡಿಕೊಂಡು ಧನ್ಯರಾಗಬೇಕೆಂದಾಶಿಸುತ್ತೇವೆ

ಬೆಂಗಳೂರಿನ ಪರಿಸ್ಥಿತಿಯು ಶಾಂತವಾಗಿದೆ

ಬೆಂಗಳೂರು ನಗರದ ಪರಿಸ್ಥಿತಿಯು ಈಗ ಪೂರ್ಣ ಶಾಂತವಾಗಿದೆ. ಈವರೆಗೆ ಒಟ್ಟು ೧೨ ಜನರು ಸತ್ತು ೧೦೦ ಜನರು ಗಾಯಗೊಂಡಿದ್ದಾರೆ ಈ ಸಂಬಂಧದಲ್ಲಿ ೩೩೨ ಜನರನ್ನು ಬಂಧಿಸಲಾಗಿದೆ.

ವರ್ತಮಾನಸಂಗ್ರಹ

ಹಿಂದೂ-ಮುಸ್ಲಿಂ ಮೈತ್ರಿಯ ಬಗ್ಗೆ ಜನಾಬ್ ಮಹಮದ್ ಷರೀಫರ ಮನವಿ

"ಬೆಂಗಳೂರು ನಗರದಲ್ಲಿ ಕಳೆದವಾರ ನಡೆದ ದುರ್ಘಟನೆಗಳು ಪ್ರತಿ ಮೈಸೂರಿನ ಪ್ರಜೆಗೂ ಅಪಾರ ದುಃಖವನ್ನುಂಟುಮಾಡಿವೆ ಮೈಸೂರಿನ ಹಿಂದೂಗಳೂ ಮುಸಲ್ಮಾನರೂ ಬಹುಕಾಲದಿಂದ ಸ್ನೇಹ ಸೌಹಾರ್ದಗಳಿಂದ ಸೋದರರಂತೆ ಬಾಳಿ ಜೀವನದ ಕಷ್ಟಸುಖಗಳಲ್ಲಿ ಪರಸ್ಪರ ಭಾಗಿಯಾಗಿದ್ದಾರೆ ಈ ಮೈತ್ರಿಯು ಪುನಃ ಬೆಳೆದು ಈಗ ನಡೆದುಹೋದ ದುರಂತವು ಮತ್ತೆ ಸಂಭವಿಸದಿರಲಿ!

ಎಂಬುದಾಗಿ ಮೈಸೂರಿನ ಆರೋಗ್ಯ ಸಚಿವರೂ, ಸಂಸ್ಥಾನದ ಮುಸ್ಲಿಂಲೀಗ್ ಅಧ್ಯಕ್ಷರೂ ಆದ ಜನಾಬ್ ಷರೀಫ್‌ರವರು ಮನವಿಮಾಡಿದ್ದಾರೆ

ಕೋಟೆ ಹೈಸ್ಕೂಲಿನಲ್ಲಿ ನಡೆದ ಒಂದು ಸಣ್ಣ ಪ್ರಕರಣವು ಇಷ್ಟೊಂದು ಆಸ್ತಿಪಾಸ್ತಿಗಳು ಮತ್ತು ಪ್ರಾಣಹಾನಿಗೆ ಕಾರಣವಾದುದಕ್ಕಾಗಿ ಸಚಿವರು ತಮ್ಮ ಅಪಾರ ವ್ಯಸನವನ್ನು ವ್ಯಕ್ತಪಡಿಸಿದ್ದಾರೆ

ಎರಡು ಕೋಮಿನವರೂ ಶಾಂತಚಿತ್ತರಾಗಿ, ಪರಸ್ಪರ ಸಂಶಯ ಮನೋವೃತ್ತಿಯನ್ನು ಬಿಟ್ಟು ಮೈಸೂರಿನ ಧವಳ ಕೀರ್ತಿಗೆ ಕುಂದಕ ಬರದಂತೆ ವರ್ತಿಸಬೇಕೆಂದೂ, ಹಿಂದೂಗಳು ತಮ್ಮ ಮುಸ್ಲಿಂ ಬಾಂಧವರಿಗೆ ಸಹಾಯ, ಸಹಕಾರ ನೀಡಬೇಕೆಂದೂ ಕೋರಿ ಮುಸ್ಲಿಮರು ಶ್ರೀಮನ್ಮಹಾರಾಜರವರ ರತ್ನ ಸಿಂಹಾಸನದಲ್ಲಿ ಅಚಲ ಭಕ್ತಿಯುಳ್ಳವರಾಗಿದ್ದಾರೆಂದು ಹೇಳಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ನಿರಾಶ್ರಿತರಿಗೆ ಪರಿಹಾರ

ಮೈಸೂರು ಸಂಸ್ಥಾನಕ್ಕೆ ಉತ್ತರ ಭಾರತದಿಂದ ಬಂದಿರುವ (ಈಗಾಗಲೇ ೨೦೦೦ ಮಂದಿ ನಿರಾಶ್ರಿತರು ಬಂದಿದ್ದಾರೆ) ಮತ್ತು ಬರಲಿರುವ ನಿರಾಶ್ರಿತರಿಗೆ ಸರ್ವತೋಮುಖವಾದ ವ್ಯವಸ್ಥೆಯನ್ನು ಮಾಡುವುದರಲ್ಲಿ ಸರ್ಕಾರದವರಿಗೆ ಸಲಹೆ ಸಹಕಾರಗಳನ್ನು ನೀಡುವುದಕ್ಕಾಗಿ ಸರ್ಕಾರದವರು ಧರ್ಮಪ್ರಕಾಶ ಎಲ್ ಎಸ್ ವೆಂಕಾಜಿರಾಯರ ಅಧ್ಯಕ್ಷತೆಯಲ್ಲಿ ಒಂದು ಖಾಸಗಿ ಸಮಿತಿಯನ್ನು ನೇಮಿಸಿದ್ದಾರೆ ಸಮಿತಿಯಲ್ಲಿ ಸಂಸ್ಥಾನದ ೨೭ ಮಂದಿ ಖಾಸಗಿ ಪ್ರಮುಖರಿದ್ದಾರೆ ಸಮಿತಿಗೆ ಉಪಸಮಿತಿಗಳನ್ನು ರಚಿಸಲು ಅಧಿಕಾರಕೊಡಲಾಗಿದೆ ಸಮಿತಿಯು ಕೂಡಲೇ ಸೇರಿ ಕೆಲಸ ಪ್ರಾರಂಭಮಾಡಬೇಕೆಂದು ಸರ್ಕಾರದ ಸೂಚನೆಯಾಗಿದೆ

ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಗಳಾದ ಶ್ರೀ ಕೆ ಪಿ ರಾಮನಾಥಯ್ಯನವರನ್ನು ನಿರಾಶ್ರಿತರ ಕೆಲಸದ ಕಮಿಷನರ್ ಮತ್ತು ಎಕ್ಸ್ ಅಫೀಷಿಯೋ ಕಾರ್ಯದರ್ಶಿಗಳನ್ನಾಗಿ ನೇಮಕಮಾಡಲಾಗಿದೆ ಮಿಸೆಸ್ ಲಕ್ಷ್ಮಿ ಪಿ ಕೃಷ್ಣಪ್ಪನವರನ್ನು ಉಪಕಾರ್ಯದರ್ಶಿಗಳನ್ನಾಗಿ ನೇಮಕಮಾಡಲಾಗಿದೆ ಅ|| ಕಮಿಷನರಾದ ಶ್ರೀ ಎಂ. ಡಿ. ಶಿವನಂಜಪ್ಪನವರನ್ನು ಈ ಸಂಬಂಧದ "ಲಯಸನ್" ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ

ಹೈದರಾಬಾದ್ ಸಂಸ್ಥಾನದ ಬಗ್ಗೆ ಪಟೇಲರ ಹೇಳಿಕೆ

ಹೈದರಾಬಾದ್ ಸಂಸ್ಥಾನವು ಇಂದಲ್ಲ ನಾಳೆಯಾದರೂ ಭಾರತ ಡೊಮಿನಿಯನ್ ಸೇರುವುದೆಂದೂ, ಅದರ ಹಿತದೃಷ್ಟಿಯಿಂದ ಇದು ಅನಿವಾರ್ಯವೆಂದೂ ನನ್ನ ಅಭಿಪ್ರಾಯ ನರೇಂದ್ರರು ಕಾಲಧರ್ಮವನ್ನರಿತು ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡಬೇಕು ಪ್ರಪಂಚದಲ್ಲಿಯೇ ಅತ್ಯಂತ ಬಲಿಷ್ಠವಾದ ಬ್ರಿಟಿಷ್ ಸಾಮ್ರಾಜ್ಯವೇ ಭಾರತದ ಪ್ರಜಾಶಕ್ತಿಯ ಮುಂದೆ ತತ್ತರಿಸಿ ಹೋಯಿತು. ಎಂಬುದಾಗಿ ಭಾರತದ ಉಪಪ್ರಧಾನರಾದ ಸರ್ದಾರ್ ವಲ್ಲಭಭಾಯಿ ಪಟೇಲರು ಜಯಪುರದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತ ತಿಳಿಸಿದರು.

ಹೈದರಾಬಾದಿನಲ್ಲಿ ತಾತ್ಕಾಲಿಕ ಮಂತ್ರಿಮಂಡಲ ರಚನೆ

ಹೈದರಾಬಾದಿನಲ್ಲಿ ತಾತ್ಕಾಲಿಕ ಮಂತ್ರಿಮಂಡಲ ರಚನೆಯಾಗಿದೆ ನೂತನ ಮಂತ್ರಿಮಂಡಲದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳಿಲ್ಲ ಸದಸ್ಯರ ಆಯ್ಕೆಯ ಬಗ್ಗೆ ಅಧಿಕೃತ ಪ್ರಕಟನೆ ಹೊರಡಿದೆ

ಮಂತ್ರಿಮಂಡಲದ ಸದಸ್ಯರುಗಳು

ಮುಖ್ಯ ಪ್ರಧಾನರು ಮಿ|| ಲಿಯಾಕ್ ಅಲಿ, ಡೆಪ್ಯುಟಿ ಪ್ರಧಾನರು ಶ್ರೀ ಪಿ ವೆಂಕಟರಾಮರೆಡ್ಡಿ ಅಧಿಕಾರವರ್ಗದ ಸದಸ್ಯರು ನವಾಬ್ ಮೊಯಿನ್ ನವಾಜ್ ಜಂಗ್ ಬಹದ್ದೂರ್, ಜಸ್ಟಿಸ್ ಅಬ್ದುಲ್ ಹಮಿದ್ ಖಾನ್, ಜಸ್ಟಿಸ್ ರಾಜಮೋಹನಲಾಲ್, ಮುಸ್ಲಿಂ ಸದಸ್ಯರು ಮಜ್ಲಿಸ್ ಸದಸ್ಯರಾದ ಅಬ್ದುಲ್ ರೂಫ್, ಯಾಮಿನ್, ಜುಬೇರಿ, ಅಬ್ದುಲ್ ರಹೀಂ ಮತ್ತು ಇಕ್ರಮುಲ್ಲ

ಹಿಂದೂ ಸದಸ್ಯರು ಶ್ರೀಯುತರಾದ ಜಿ ರಾಮಾಚಾರಿ, ಅಸೆಂಬ್ಲಿ ಸದಸ್ಯರಾದ ಮಲ್ಲಿಕಾರ್ಜುನಪ್ಪ, ಸ್ವತಂತ್ರ ಪಕ್ಷದ ಸದಸ್ಯರಾದ ಜೋಷಿ, ನಿಮ್ನ ವರ್ಗದ ಸಂಘದ ಅಧ್ಯಕ್ಷರಾದ ಪಿ ಎಸ್ ವೆಂಕಟರಾವ್

ಹೈದ್ರಾಬಾದ್ ಮುಖ್ಯಮಂತ್ರಿಗಳ ರೇಡಿಯೋ ಭಾಷಣ

ನೂತನ ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸಿದ ಕೂಡಲೇ ಹೈದ್ರಾಬಾದಿನ ಮುಖ್ಯಮಂತ್ರಿಗಳಾದ ಮಿ|| ಲಿಯಾಕ ಆಲಿಯವರು ಹೈದ್ರಾಬಾದ್ ರೇಡಿಯೊ ದ್ವಾರ ಭಾಷಣಮಾಡುತ್ತ ಸಂಸ್ಥಾನದಲ್ಲಿರುವ ಅನೇಕ ಪಕ್ಷಸಂಗಡಗಳ ಸಹಕಾರವನ್ನು ಕೋರಿ ಸಾಧ್ಯವಾದ ಮಟ್ಟಿಗೆ ಈ ತಾತ್ಕಾಲಿಕ ಮಂತ್ರಿಮಂಡಲವನ್ನು ಸ್ಥಾಪಿಸಲಾಗಿದೆ ನಾವು ಎಲ್ಲರ ಹಿತದೃಷ್ಟಿಯಿಂದ ಕಾರ್ಯ ತತ್ಪರರಾಗಲು ಕಂಕಣಬದ್ಧರಾಗಿದ್ದೇವೆ ಮತ್ತು ಭಾರತ ಸರ್ಕಾರದೊಡನೆಯೂ ಸಾಧ್ಯವಾದಷ್ಟು ಹೆಚ್ಚಿನ ಸಂಪರ್ಕವನ್ನು ಇಟ್ಟುಕೊಳ್ಳುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು

ಹೈದರಾಬಾದ್ ಮಂತ್ರಿಗಳ ಮನೆಯ ಮುಂದೆ ವಿದ್ಯಾರ್ಥಿಗಳ ಪ್ರದರ್ಶನ

ಹೈದ್ರಾಬಾದ್ ತಾತ್ಕಾಲಿಕ ಮಂತ್ರಿಮಂಡಲದಲ್ಲಿ ವ್ಯವಸಾಯ ಮತ್ತು ಪುರೋಭಿವೃದ್ಧಿ ಸಚಿವರಾಗಿ ನೇಮಕಹೊಂದಿರುವ ಶ್ರೀ ಜಿ ರಾಮಾಚಾರಿಯವರ ಮನೆಯ ಮುಂದೆ ಬಹುಜನ ವಿದ್ಯಾರ್ಥಿಗಳು ಪ್ರದರ್ಶನಗೈದು ಕೂಡಲೇ ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕೆಂದು ಸಚಿವರನ್ನು ಬೇಡಿಕೊಂಡರು

ಜರ್ಮನಿಯ ಪುನರುದ್ಧಾರ!

ನಾಜಿ ತತ್ವವನ್ನು ಭಯಂಕರವಾಗಿ ದ್ವೇಷಿಸಿ, ಜರ್ಮನಿಯನ್ನು ಪಾತಾಳಕ್ಕೆ ತುಳಿದ ಬ್ರಿಟಿಷ್ ಮತ್ತು ಅಮೇರಿಕನ್ನರು ಈಗ ಜರ್ಮನಿಯನ್ನು ಮತ್ತೆ ಪ್ರಬಲ ರಾಷ್ಟ್ರವನ್ನಾಗಿಮಾಡಲು ಸರ್ವಪ್ರಯತ್ನ ಮಾಡುತ್ತಿದ್ದಾರೆ ಯೂರೋಪಿನಲ್ಲಿ ರಷ್ಯಾದ ಪ್ರಾಬಲ್ಯಕ್ಕೆ ಬೆದರಿ ಜರ್ಮನಿಯನ್ನು ಅದಕ್ಕೆ ಅಡ್ಡಿಯಾಗಿ ನಿಲ್ಲಿಸಬೇಕೆನ್ನುವುದೇ ಈ ಪ್ರಯತ್ನಕ್ಕೆ ಮೂಲಕಾರಣವೆಂದು ಹೇಳಲಾಗುತ್ತಿದೆ.

ವಿದ್ಯುಚ್ಛಕ್ತಿ ಕೆಲಸಗಾರರ ಮುಷ್ಕರ ಸಿದ್ಧತೆ

ರಾಜಧಾನಿಯ ವಿದ್ಯುಚ್ಛಕ್ತಿ ಕೆಲಸಗಾರರೆಲ್ಲರೂ ಮುಷ್ಕರದ ಬ್ಯಾಡ್ಜನ್ನು ಧರಿಸಿ ಮುಂದಿನ ಜನವರಿ ೧ ನೇ ತಾ|| ಒಳಗಾಗಿ ಸರ್ಕಾರವು ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ಸಂಘದ ಅಧ್ಯಕ್ಷರಾದ ಮಿ|| ಮಹಮದ್ ಹುಸೇನರವರ ಅಧ್ಯಕ್ಷತೆಯಲ್ಲಿ ಸೇರಿದ ಬಹಿರಂಗ ಸಭೆಯಲ್ಲಿ ನಿರ್ಧರಿಸಿರುವರು.

ಕೈಗಾರಿಕಾ ಸಮ್ಮೇಳನದಲ್ಲಿ ಪಂ|| ನೆಹರೂ ಅವರ ಭಾಷಣ

“ದೇಶದ ಕೈಗಾರಿಕೋತ್ಪನ್ನಗಳ ಇಳಿಮುಖ ನಿಲ್ಲಬೇಕಾದರೆ, ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಅತ್ಯಂತ ಮುಖ್ಯವಾಗಿದೆ” ಎಂಬುದಾಗಿ ಕೈಗಾರಿಕಾ ಸಮ್ಮೇಳನದಲ್ಲಿ ಭಾಷಣಮಾಡುತ್ತಾ, ಪಂ|| ನೆಹರೂರವರು ತಿಳಿಸಿದರು ದೇಶದ ಆರ್ಥಿಕ ಸ್ಥಿತಿ ದಿನದಿನಕ್ಕೆ ಕೆಡುತ್ತಿರುವುದನ್ನು ಸೂಚಿಸುತ್ತಾ ಈ ವಿಚಾರದಲ್ಲಿ ಯಾವ ಒಂದು ಪಕ್ಷವನ್ನೂ ಆಕ್ಷೇಪಿಸುವುದರಿಂದ ಯಾವ ಪ್ರಯೋಜನವೂ ಇಲ್ಲ ದೇಶದ ಉತ್ಪನ್ನಗಳು ಹೆಚ್ಚಿದ ಹೊರತು ದೇಶದಲ್ಲಿ ಸಮಾನವಾದ ಹಂಚಿಕೆ ಸಾಧ್ಯವಿಲ್ಲ ಈಗ ಕೈಗಾರಿಕಾ ಕ್ಷೇತ್ರದಲ್ಲಿ ಅತ್ಯವಶ್ಯಕವಾಗಿ ಈ ಉತ್ಪನ್ನಗಳನ್ನು ವೃದ್ಧಿಮಾಡಲು ತಕ್ಕ ಶಕ್ತಿ ಮತ್ತು ಮನೋಭಾವನೆ ಬೇಕಾಗಿದೆ ಈ ಸಂದರ್ಭದಲ್ಲಿ ಕಾರ್ಮಿಕವರ್ಗದವರಲ್ಲಿ ತಮಗೆ ಸರಿಯಾದ ಪ್ರತಿಫಲ ದೊರೆಯುತ್ತದೆ ಎಂಬ ಮನೋಭಾವನೆಯನ್ನುಂಟುಮಾಡಬೇಕಾಗಿದೆ ಇದು ಬಹು ಮುಖ್ಯವಾದುದು

ಈ ಭಾವನೆ ಇಲ್ಲದೆ ಇರುವುದರಿಂದಲೇ ಕಾರ್ಮಿಕರಿಗೂ ಕಾರ್ಖಾನೆಗಳ ಮಾಲೀಕರಿಗೂ ಘರ್ಷಣೆಗಳುಂಟಾಗಿ ಮುಷ್ಕರಗಳು ಸಂಭವಿಸುತ್ತವೆ ದೇಶದಲ್ಲಿ ತೊಂದರೆಯುಂಟಾಗಿರುವ ಸಮಯದಲ್ಲೆಲ್ಲಾ ಕಾರ್ಮಿಕ ವರ್ಗದವರು ಈ ಮುಷ್ಕರಗಳನ್ನು ನಡೆಸುತ್ತ ಬಂದರೆ, ಈ ವರ್ಗಕ್ಕೆ ಇರುವ ಸಾರ್ವಜನಿಕರ ಸಹಾನುಭೂತಿ ತಪ್ಪುವುದೆಂದೂ, ಬಂಡವಾಳಗಾರರೂ ಕೂಡ ಕಾರ್ಮಿಕ ವರ್ಗದೊಂದಿಗೆ ನ್ಯಾಯವಾಗಿ ನಡೆದುಕೊಳ್ಳಬೇಕೆಂದೂ ಸೂಚಿಸಿದರು

ಈಗ ದೇಶಕ್ಕೊದಗಿರುವ ನಾನಾ ತೊಂದರೆಗಳಲ್ಲಿ ಈ ಆರ್ಥಿಕ ಕಷ್ಟನಷ್ಟವೇ ದಾರುಣವಾದುದು ಪ್ರಪಂಚದಲ್ಲಿ ಶಾಂತಿ ನೆಲೆಯಾಗಿರುವುದೆಂದು ಯಾರೂ ಹೇಳಲಾರರು ಯಾವಾಗಲಾದರೂ ಈ ಶಾಂತಿಭಂಗವಾಗಬಹುದು ಭಾರತ ದೇಶವು ಕೈಗಾರಿಕೆಗಳಲ್ಲಿ ಮುಂದುವರಿದು ಬಲಯುತವಾಗಿದ್ದರೆ ತಕ್ಕ ಸೈನ್ಯಬಲವನ್ನು ಕಟ್ಟಲು ಸಮರ್ಥವಾಗುತ್ತದೆ ಎಂದು ತಿಳಿಸಿದರು

ಕೊನೆಯಲ್ಲಿ ಪಂ|| ನೆಹರೂರವರು, ದೇಶದ ಈಗಿನ ಕೈಗಾರಿಕೆಯ ಇಳಿಮುಖವನ್ನು ನಿಲ್ಲಿಸಲು ಸರ್ವರೂ ಸಹಾಯಮಾಡಬೇಕೆಂದು ಮನವಿ ಮಾಡುತ್ತಾ, “ಕೈಗಾರಿಕಾಕ್ಷೇತ್ರದಲ್ಲಿ ಶಾಂತಿಯಿಲ್ಲದೆ ಉತ್ಪನ್ನವು ಹೆಚ್ಚಲು ಸಾಧ್ಯವಿಲ್ಲ ದೇಶದಲ್ಲಿ ಈ ಆಗತ್ಯವಾದ ಶಾಂತಿಯನ್ನುಂಟುಮಾಡುವುದೇ ಈ ಸಮ್ಮೇಳನದ ಮುಖ್ಯ ಗುರಿ” ಎಂದು ಸೂಚಿಸಿದರು

ಭಾರತದ ಕೈಗಾರಿಕಾಭಿವೃದ್ಧಿ

ಕೈಗಾರಿಕಾ ಸಮ್ಮೇಳನದ ಸಲಹೆಗಳು

ದೇಶದ ಕೈಗಾರಿಗೋತ್ಪನ್ನವನ್ನು ಹೆಚ್ಚಿಸಲು ಅತ್ಯವಶ್ಯಕವಾದ ಹತ್ತು ಮಾರ್ಗಗಳನ್ನು ದಿಲ್ಲಿಯಲ್ಲಿ ನಡೆದ ಕೈಗಾರಿಕಾ ಸಮ್ಮೇಳನದಲ್ಲಿ ಒಂದು ನಿರ್ಣಯದ ಮೂಲಕ ಸಲಹೆಮಾಡಲಾಯಿತು

ಈ ನಿರ್ಣಯವನ್ನು ಶ್ರೀ ಜೆ ಆರ್ ಡಿ ಟಾಟಾ ರವರು ಮಂಡಿಸಿದರು ಶ್ರೀ ಎಂ ಎ ಶ್ರೀನಿವಾಸನ್ ರವರು ಅದನ್ನು ಅನುಮೋದಿಸಿದರು

ಪದಾರ್ಥಗಳ ರವಾನೆಗೆ ಬೇಕಾದ ಸೌಕರ್ಯಗಳ ವಿಚಾರದಲ್ಲಿ ಈಗಿನ ಆವಶ್ಯಕತೆಗೆ ಅನುಸಾರವಾಗಿ, ಕಲ್ಲಿದ್ದಲನ್ನು ಈಗಿರುವುದಕ್ಕಿಂತ ವರ್ಷಕ್ಕೆ ೪೦ ಲಕ್ಷ ಟನ್ ಹೆಚ್ಚಾಗಿ ಸಾಗಿಸುವ ಏರ್ಪಾಡಾಗಬೇಕು. ಈ ಅತ್ಯವಶ್ಯಕವಾದ ಪದಾರ್ಥಗಳ ಸಾಗುವಿಕೆಯು, ರಸ್ತೆ, ಸಮುದ್ರ ಮತ್ತು ವಿಮಾನ ಮಾರ್ಗವಾಗಿ ನಡೆಯಬೇಕು. ಇವುಗಳಿಗಾಗಿ ಇರುವ ಎಲ್ಲಾ ವಿಧವಾದ ಸಂಚಾರ ಸೌಕರ್ಯಗಳನ್ನೂ ಉಪಯೋಗಿಸಿಕೊಳ್ಳಬೇಕು.

ದೇಶದ ಕೈಗಾರಿಕೆಗಳಿಗೆ ಅತ್ಯವಶ್ಯಕವಾಗಿರುವ ಕಚ್ಚಾ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಮತ್ತು ಅವುಗಳನ್ನು ಸಮರ್ಪಕವಾದ ರೀತಿಯಲ್ಲಿ ಅನವಶ್ಯಕವಾಗಿ ವ್ಯರ್ಥವಾಗದಂತೆ ಉಪಯೋಗಿಸಿಕೊಳ್ಳಲು ಸರಕಾರದ ಸಹಾಯ ಬೇಕೆಂದು ಸೂಚಿಸಲಾಗಿದೆ.

ಅಲ್ಲದೆ ಅತಿ ಮುಖ್ಯವಾದ ಉಕ್ಕು, ಹಲವು ವಿಧವಾದ ಲೋಹಗಳು, ಕಾಸ್ಟಿಕ್ ಸೋಡಾ ಮತ್ತು ಇತರ ರಸಾಯನಿಕವಸ್ತುಗಳನ್ನು ಹೆಚ್ಚು ಹೆಚ್ಚಾಗಿ ಇತರ ದೇಶಗಳಿಂದ ತರಿಸಿಕೊಳ್ಳಬೇಕು

ಈ ಕೈಗಾರಿಕೆಗಳಲ್ಲಿ ಪೂರ್ಣ ಜ್ಞಾನ ಕೌಶಲ್ಯವನ್ನು ಹೊಂದಿದ ನಿಪುಣ ಕಾರ್ಮಿಕ ವರ್ಗದವರು ದೊರೆಯುವುದಕ್ಕಾಗಿ ವಿದೇಶಗಳಿಂದ ಇಂತಹ ನಿಪುಣ ಕೆಲಸಗಾರರನ್ನು ಆರಿಸಿ, ಒದಗಿಸಲು ಒಂದು ವೈಜ್ಞಾನಿಕ ಮತ್ತು ಪಾರಿಭಾಷಿಕ ಪ್ರವೀಣರನ್ನೊಳಗೊಂಡ ಸಂಸ್ಥೆಯನ್ನು ಸ್ಥಾಪಿಸಬೇಕು. ಮತ್ತು ಭಾರತದಲ್ಲಿಯೇ ಇಂತಹ ನಿಪುಣ ಕೆಲಸಗಾರರ ವೈಜ್ಞಾನಿಕ ಮತ್ತು ಪಾರಿಭಾಷಿಕ ಶಿಕ್ಷಣಕ್ಕೆ ತಕ್ಕ ವ್ಯವಸ್ಥೆಯಾಗಬೇಕು

ಇದಲ್ಲದೆ ರೈಲ್ವೆ ಸಲಕರಣೆಗಳು, ಉಕ್ಕು, ಸೀಮೆಂಟ್ ವಿದ್ಯುಚ್ಛಕ್ತಿ, ಕಲ್ಲಿದ್ದಲು ಪೆಟ್ರೋಲಿಯಂ ಈ ವಸ್ತುಗಳ ಉತ್ಪತ್ತಿಯನ್ನು ಹೆಚ್ಚಿಸಲು ಹಲವು ಮಾರ್ಗಗಳನ್ನು ಸಮ್ಮೇಳನದಲ್ಲಿ ಸೂಚಿಸಲಾಯಿತು

[೬ನೆಯ ಪುಟವನ್ನು ನೋಡಿ]

ಹುಣಸಮಾರನಹಳ್ಳಿ ಮಠದ ಶ್ರೀಗಳವರು ಶಿವಾಧೀನರಾದರು

ಬೆಂಗಳೂರು ಡಿ|| ಹುಣಸಮಾರನಹಳ್ಳಿ ಮಠದ ಪಟ್ಟಾಧ್ಯಕ್ಷ ಶ್ರೀನಂಜೇಸ್ವಾಮಿಗಳವರು ಇದೇ ತಿಂಗಳು ೧೨ ನೇ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ ಇವರು ಒಳ್ಳೆ ದಯಾರ್ದ್ರಹೃದಯರೂ, ಉದಾರಿಗಳೂ, ವಿದ್ಯಾಭಿಮಾನಿಗಳೂ, ಶಿವಪೂಜಾಲೋಲರೂ, ಆಗಿದ್ದು ಬಹುಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು ತಮ್ಮ ಮಠದಲ್ಲಿ ಒಂದು ಫ್ರೀ ಬೋರ್ಡಿಂಗನ್ನು ಸ್ಥಾಪಿಸಿ ೩೫ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಅನ್ನದಾನ ಮಾಡುತ್ತಾ ವಿದ್ಯಾದಾನವನ್ನು ಮಾಡುತ್ತಿದ್ದರು ಈ ಮಠವು ಬೆಂಗಳೂರು ಪ್ರಾಂತದಲ್ಲಿ ಒಳ್ಳೆ ಪ್ರಸಿದ್ಧಿಯನ್ನು ಪಡೆದಿರುವುದಲ್ಲದ, ಈ ಮಠಕ್ಕೆ ಅನೇಕ ಇನಾಮು ಗ್ರಾಮಗಳೂ ಸಹ ಇರುವುವು ಶ್ರೀಗಳವರು ತಮ್ಮ ಬುದ್ಧಿಪ್ರತಿಭೆಯಿಂದ ಈ ಮಠವನ್ನು ಒಳ್ಳೇ ಕೀರ್ತಿಗೆ ತಂದರು ಈ ಮಠಕ್ಕೆ ಇಂತಹ ಅಧಿಕಾರಿಗಳು ಯಾವ ಕಾಲದಲ್ಲಿಯೂ ಆಗಿದ್ದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸದು ಶ್ರೀಗಳವರಿಗೆ ಅವಸಾನಕಾಲದಲ್ಲಿ ೬೯ ವರ್ಷಗಳಾಗಿದ್ದುವು. ಇವರ ಅಂತ್ಯದರ್ಶನಕ್ಕಾಗಿ ಸಾವಿರಾರು ಜನರು ಬಹು ಭಕ್ತಿಯಿಂದ ಆಗಮಿಸಿದ್ದರು. ರಾಜಾಪುರಮಠದ ಶ್ರೀಪಟ್ಟಾಧ್ಯಕ್ಷರ ನೇತೃತ್ವದಲ್ಲಿ ಶಿವೈಕ್ಯ ಶ್ರೀಗಳವರಿಂದ ೧೦ ವರ್ಷಗಳ ಹಿಂದೆಯೇ ಅನುಗ್ರಹೀತರಾಗಿ ತಮ್ಮ ಪೋಷಣೆಯಲ್ಲಿಯೇ ಇಟ್ಟುಕೊಂಡಿದ್ದ ಉತ್ತರಾಧಿಕಾರಿಗಳಾದ ಶ್ರೀಸೋಮಶೇಖರ ಒಡೆಯರವರಿಂದ ಅಂತ್ಯೇಷ್ಟಿಕ್ರಿಯೆಗಳೆಲ್ಲವೂ ವಿಧ್ಯುಕ್ತವಾಗಿ ನೆರವೇರಿದುವು ಇವರ ವಿಯೋಗದಿಂದ ವೀರಶೈವಸಮಾಜಕ್ಕೆ ದೊಡ್ಡಹಾನಿಯೆಂದು ಬಹು ವಿಷಾದದಿಂದ ಹೇಳಬೇಕಾಗಿದೆ ಶ್ರೀಜಗದ್ಗುರು ಪಂಚಾಚಾರ್ಯರು ಶ್ರೀಗಳವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಓರ್ವ ದುಃಖಭಾಗಿ.

ಸ್ವೀಕಾರ

ಬೆಂಗಳೂರು ಡಿ| ಹುಣಸಮಾರನಹಳ್ಳಿ ಮಠದ ಪಟ್ಟಾಧ್ಯಕ್ಷ ಶ್ರೀ|| ಷ|| ಬ್ರ|| ನಂಜೇಸ್ವಾಮಿಗಳವರು ಇದೇ ತಿಂಗಳು ೧೨ ನೇ ತಾರೀಖಿನ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂ ಗಳು ಮಠದ ಏಜೆಂಟ್ ಶ್ರೀ ಎಸ್. ಕೋಂಟದಾರ್ಯರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ಮಂಡಿ ಮ|| ರಾ|| ಎಚ್. ಎಸ್. ಚಂದ್ರಶೇಖರಪ್ಪ ಮತ್ತು ಮ|| ರಾ|| ಟಿ ಆರ್ ಪುಟ್ಟಪ್ಪ ಇವರು ತಾ|| ೨೪-೧೦-೧೯೪೭ ನೆಯ ದಿವಸ ಅಂಗಡಿಯನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ತುಂಬಾಪುರ ಮಠದ ಪುರೋಹಿತ ನಂಜುಂಡಯ್ಯನವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಕೈಗಾರಿಕಾ ವಿಚಾರಗಳಲ್ಲಿ ಒಂದು ಕೇಂದ್ರ ಸಲಹಾ ಸಮಿತಿ, ಸರಕಾರಕ್ಕೆ ಪದಾರ್ಥಗಳ ತಯಾರಿಕೆ ಮತ್ತು ಸಾಗುವಿಕೆಯ ವಿಚಾರದಲ್ಲಿ ಕ್ರಮಸಿಯುಮವನ್ನು ಸೂಚಿಸುವ ಸಂಸ್ಥೆ ಒಂದು ಯೋಜನೆಯ ಅಧ್ಯಾ ಅಭಿವೃದ್ಧಿ ಸಂಸ್ಥೆ ಅಲ್ಲದ ಕೈಗಾರಿಕೆಗಳಿಗೆ ಅನ್ವಯಿಸುವ ಅಂಕಿ ಅಂಶಗಳನ್ನು ಶೇಖರಿಸಲು ಕೇಂದ್ರ ಮತ್ತು ಪ್ರಾಂತಗಳಲ್ಲಿ ಸರಿಯಾದ ಖಾಯಂ ವ್ಯವಸ್ಥೆ ಈ ಏರ್ಪಾಡುಗಳೂ ಆಗಬೇಕೆಂದು ಸಲಹೆ ಮಾಡಲಾಗಿದೆ

ದೇಶದ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಸರಕಾರವು ರಾಷ್ಟ್ರೀಯ ನೀತಿಯನ್ನು ಅನುಸರಿಸಬೇಕೆಂದು ಮತ್ತೊಂದು ನಿರ್ಣಯದಲ್ಲಿ ಸೂಚಿಸಲಾಗಿದೆ ಈ ನೀತಿಯಲ್ಲಿ ಗಮನಿಸಬೇಕಾದ ಮುಖ್ಯಾಂಶಗಳು ದೇಶದ ಸಂಪತ್ತು ಮತ್ತು ಉತ್ಪತ್ತಿ ಸಮಾನವಾಗಿ ದೇಶದ ಎಲ್ಲಾ ಭಾಗಗಳಲ್ಲೂ ಹಂಚಿಕೆಯಾಗಿ ಆದರಿಂದ ಕೈಗಾರಿಕೆಗಳು ಜಾಗ್ರತೆ ಅಭಿವೃದ್ಧಿಯಾಗಲು ಅವಕಾಶವಿರಬೇಕು, ದೇಶದಲ್ಲಿನ ಅನುಕೂಲ್ಯ ನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಈ ಕೈಗಾರಿಕಾ ಅಭಿವೃದ್ಧಿಯ ಯೋಜನೆಗಳು ಕೇಂದ್ರೀಕೃತವಾಗಬೇಕು ಮತ್ತು ಕೈಗಾರಿಕೆಗಳು ರಾಷ್ಟ್ರೀಯವಾದುವು ಖಾಸಗೀ ಕೈಗಾರಿಕೋದ್ಯಮಿಗಳಿಂದ ನಡೆಯತಕ್ಕುವು ಎಂಬುದಾಗಿ ವಿಭಾಗವಾಗಬೇಕು

ದೇಶದ ಕೈಗಾರಿಕೆಗಳಿಗೆ ಹೊರಗಿನ ಬಂಡವಾಳವನ್ನು ಉಪಯೋಗಿಸಿಕೊಳ್ಳಬೇಕಾದರೆ, ಅದು ರಾಷ್ಟ್ರಹಿತಕ್ಕೆ ಅನುಗುಣವಾಗಿದ್ದರೆ ಮಾತ್ರ ಈ ಸಹಾಯವನ್ನು ಪಡೆಯ ಪಡೆಯಬಹುದು ಖಾಸಗೀ ಕೈಗಾರಿಕೆಗಳಲ್ಲಿ ವಿದೇಶಗಳ ಬಂಡವಾಳವಾದ ಸಹಾಯವನ್ನು ಕೋರಿದರೆ ಈ ಪ್ರಯತ್ನಕ್ಕೆ ಕೇಂದ್ರ ಸರಕಾರದ ಒಪ್ಪಿಗೆ ಮುಂಚಿತವಾಗಿ ದೊರೆಯಬೇಕು ಎಂದು ಸಮ್ಮೇಳನದಲ್ಲಿ ಸಲಹೆ ಮಾಡಲಾಗಿದೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೫ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶಿ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೭ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೯೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषद् (वीरशैवभाष्य–संस्कृत)	१ रु.
[illegible]कारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೨ ರೂ ೮ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಡಿಸೆಂಬರ್ ೧೯೪೭ [ಸಂಚಿಕೆ ೩೬

ಶ್ರೀಮದ್ರಂಭಾಪುರೀಜಗದ್ಗುರುಗಳವರ ಆಗಮನ ನೊಣವಿನಕೆರೆ

ಶ್ರೀಮದ್ರಂಭಾಪುರೀಜಗದ್ಗುರುಗಳವರು ತುರುವೇಕೆರೆ ಮುಕ್ಕಾಂ ಮಾಡಿ ಅಲ್ಲಿಯ ಮತ್ತು ಸುತ್ತಮುತ್ತಲ ಗ್ರಾಮಗಳ ಶಿಷ್ಯಮಂಡಲಿಯಿಂದ ಕಾಣಿಕೆಗಳನ್ನು ಸ್ವೀಕರಿಸಿ, ಕೊನೆಗೆ ಅಲ್ಲಿಯ ತಾಲ್ಲೂಕ್ ಪೋಲೀಸ್ ಇನ್ಸ್‌ಪೆಕ್ಟರ್ ಎಂ ಎಸ್ ಪ್ರಭಣ್ಣನವರ ಪ್ರಾರ್ಥನೆಯ ಮೇರೆಗೆ ಅವರ ಮನೆಗೆ ದಯಮಾಡಿಸಿ ಅಲ್ಲಿ ಪೂಜಾದಿಗಳನ್ನು ನೆರವೇರಿಸಿ, ಬಳಿಕ ಅಮಲ್ದಾರ್ ಡಿ ಸಿ ಆದಿಮೂಲಂ ಅವರ ಮನೆಗೆ ದಯಮಾಡಿಸಿ ಅವರಿಂದ ಪೂಜೆಗೊಂಡು ಇದೇ ತಿಂಗಳು ೧೮ನೆಯ ತಾರೀಖಿನ ದಿವಸ ಪ್ರಾತಃಕಾಲ ೯ ಘಂಟೆಗೆ ನೊಣವಿನಕೆರೆ ಗ್ರಾಮಕ್ಕೆ ದಯಮಾಡಿಸಿದರು ಮೊದಲೇ ನಿಲ್ದಾಣದಲ್ಲಿ ತುಮಕೂರು ಡಿ॥ ಸಬ್ ಡಿವಿಜನ್ ಸಾಹೇಬರು, ತಿಪಟೂರು ತಾ॥ ಅಮಲ್ದಾರ್ ಸಾಹೇಬರು, ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರು, ಪೋಲೀಸ್ ಸಿಬ್ಬಂದಿಯೊಡನೆ ಆಗಮಿಸಿದ್ದರು ಯಜಮಾನ ಪುಟ್ಟಪ್ಪಶೆಟ್ಟರು ಶ್ರೀಗಳವರಿಗೆ ಎಲ್ಲಾ ಅಧಿಕಾರಿಗಳ ಪರಿಚಯವನ್ನು ಮಾಡಿಕೊಟ್ಟರು. ಆಮೇಲೆ ರಜತಾಂದೋಲಿಕೋತ್ಸವವು ಪ್ರಾರಂಭವಾಯಿತು ನಾನಾವಿಧವಾದ ವಾದ್ಯಗಳಿಂದಲೂ ಜಗದಾಚಾರ್ಯರ ಜಯಘೋಷಗಳಿಂದಲೂ ವೈದಿಕರ ವೇದಘೋಷದಿಂದಲೂ ಉತ್ಸವವು ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಮಹಾ ವೈಭವದಿಂದ ನಡೆಯಿತು ಸಕಲ ಮತೀಯರೂ ತಮ್ಮ ತಮ್ಮ ಮನೆಯ ಮುಂಭಾಗದಲ್ಲಿ ಚಪ್ಪರಗಳನ್ನು ಶೃಂಗರಿಸಿ ಆಶೀರ್ವಾದವನ್ನು ಪಡೆಯುತ್ತಿದ್ದರು ಮುಹಮದೀಯರೂ ಸಹ ಮಸೀದಿಯ ಮುಂದೆ ಫಲಪುಷ್ಪಗಳನ್ನು ಸಮರ್ಪಿಸಿದರು ಈರೀತಿ ಉತ್ಸವವು ನಗರದ ಎಲ್ಲಾ ಭಾಗದಲ್ಲಿಯೂ ನೆರವೇರಿ ಯಜಮಾನ್ ಪುಟ್ಟಪ್ಪಶೆಟ್ಟರ ಮನೆಯ ಮುಂಭಾಗದಲ್ಲಿ ಸುಂದರವಾಗಿ ನಿರ್ಮಿತವಾಗಿದ್ದ ಮಂಟಪಕ್ಕೆ ಬಂದು ತಲಪಿತು ಆಮೇಲೆ ಜಗದ್ಗುರುಗಳವರು ಸಿಂಹಾಸನವನ್ನಲಂಕರಿಸಿ ಧರ್ಮದ ಸ್ವರೂಪವನ್ನು ಬೋಧಿಸುತ್ತಾ ಸಕಲ ಮತೀಯರೂ ಪರಸ್ಪರ ಸೌಹಾರ್ದದಿಂದಿದ್ದು ಸ್ವಧರ್ಮಪರಾಯಣರಾಗಿ ತಮ್ಮ ಮತಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ವರ್ತಿಸಿ ಜನ್ಮಸಾಫಲ್ಯ ಮಾಡಿಕೊಳ್ಳಬೇಕೆಂದು ಹೃದಯಂಗಮವಾಗಿ ಬೋಧಿಸಿದರು ಬಳಿಕ ಶ್ರೀಮನ್ಮಹಾರಾಜರವರ ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು ಈ ಮಹೋತ್ಸವಕ್ಕೆ ಬೆಂಗಳೂರು, ತುಮಕೂರು, ತಿಪಟೂರು, ತುರುವೇಕೆರೆ, ಚನ್ನರಾಯಪಟ್ಟಣ, ಎಡಹೊರೆ, ಬಾಗೂರು, ಹಿರೇಸಾವಿ, ಸುಗ್ಗೀಹಳ್ಳಿ ಮೊದಲಾದ ಅನೇಕ ಗ್ರಾಮಗಳಿಂದ ೮ ೧೦ ಸಾವಿರದ ವರೆಗೆ ಜನರು ಆಗಮಿಸಿದ್ದರು ಉತ್ಸವಭಾಗಿಗಳಾದ ಸರ್ವರಿಗೂ ನೊಣವಿನಕೆರೆ ಮಹಾಜನಗಳು ಅನ್ನಸಂತರ್ಪಣೆಯನ್ನು ತೃಪ್ತಿಕರವಾಗಿ ಮಾಡಿದರು. ಇದೇ ತಿಂಗಳು ೧೬ ನೇ ತಾರೀಖಿನಿಂದ ಧನುರ್ಮಾಸ ಪೂಜಾ ನಿಮಿತ್ತವಾಗಿ ಶ್ರೀಗಳವರು ಒಂದು ತಿಂಗಳವರೆಗೆ ಇದೇ ಗ್ರಾಮದಲ್ಲಿಯೇ ಅನುಷ್ಠಾನವನ್ನು ನೆರವೇರಿಸುವವರಾಗಿದ್ದಾರೆ ಧನುರ್ಮಾಸವು ಸಮಾಪ್ತಿಯಾಗುವವರೆಗೆ ಪ್ರತಿದಿನ ಸಾಯಂಕಾಲ ಆಸ್ಥಾನ ವಿದ್ವಾನ್ ವೇ॥ ಒಡೆಯ ಬಸವಲಿಂಗಶಾಸ್ತ್ರಿಗಳವರಿಂದ ಶ್ರೀ ಜಗದ್ಗುರು ರೇಣುಕವಿಜಯದ ಪುರಾಣಪ್ರವಚನವು ನಡೆಯುವುದು ಮಹಾ ಗುರುಸೇವಾನಿರತರಾದ ಸಮಸ್ತ ಸದ್ಭಕ್ತರಿಗೂ ಶ್ರೀಜಗದ್ಗುರುಗಳವರು ಸಮಸ್ತ ಸನ್ಮಂಗಲಗಳನ್ನ ನುಗ್ರಹಿಸಲೆಂದ ಪ್ರಾರ್ಥಿಸುತ್ತೇನೆ

ಓರ್ವ ಗುರುಭಕ್ತ

ಅಭಿನಂದನಸಭೆ ಕಾಶಿ

ಧರ್ಮಾತ್ಮರೂ ದಾನಶೂರರೂ ಆದ ಸಿಗ್ಗಿ ಕೂಡಲಮಠದ ವೇ॥ ಸಿದ್ಧಪ್ಪಯ್ಯನವರು ತಮ್ಮ ವೃದ್ಧಾಪ್ಯದಲ್ಲಿ ಕುಟುಂಬ ಸಮೇತರಾಗಿ ಕಾಶೀಕ್ಷೇತ್ರವನ್ನು ಸಂದರ್ಶಿಸಿ ಕೃತಾರ್ಥರಾದರು ಅನೇಕ ಸಂಘ ಸಂಸ್ಥೆಗಳಿಗೆ ಉದಾರ ದಾನವನ್ನಿತ್ತಿರುವ ಈ ಮಹನೀಯರು ಕಾಶೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಪ್ಪಣೆಯ ಮೇರೆಗೆ ಈ ಪೀಠದ ಮಹಾದ್ವಾರ ನಿರ್ಮಾಣಕ್ಕಾಗಿ ಸ್ವಸಂತೋಷದಿಂದ ಹತ್ತುಸಾವಿರ ರೂ ಗಳ ಮಹಾದಾನವನ್ನಿತ್ತಿರುವುದು ಎಲ್ಲರಿಗೂ ತಿಳಿದವಿಷಯವಾಗಿದೆ ಯಾವ ಪೀಠದ ಜಗದ್ಗುರು ಮಲ್ಲಿಕಾರ್ಜುನಶಿವಯೋಗಿಗಳ ತಪಃಪ್ರಭಾವದಿಂದ ಹಿಂದೂಮತದ ಮಹಾವೈರಿಯೆನಿಸಿದ್ದ ಮೊಗಲ ಚಕ್ರವರ್ತಿ ಔರಂಗಜೇಬನು ದುಃಖಿತನಾಗಿ ಯಾವ ಸ್ಥಳದಲ್ಲಿ ಶರಣಾಗತನಾದನೋ ಅದೇ ಸ್ಥಳದಲ್ಲಿಯೇ ಮಹಾದ್ವಾರ ನಿರ್ಮಾಣವನ್ನು ಕೈಗೊಂಡಿರುವ ಶ್ರೀ ಕೂಡಲಮಠದ ಸಿದ್ಧಪ್ಪಯ್ಯನವರ ನಾಮವು ಹಿಂದುಗಳ ಇತಿಹಾಸದಲ್ಲಿ ಸ್ಥಿರವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ

ಇವರ ಆಗಮನದಿಂದ ಸಂತುಷ್ಟರಾದ ಕಾಶೀ ವೀರಶೈವ ವಿದ್ಯಾರ್ಥಿಸಂಘದವರು ತಾ॥ ೩ ೧೨ ೪೭ ನೆಯ ಬುಧವಾರ ಸಭೆಯನ್ನೇರ್ಪಡಿಸಿ ಅಭಿನಂದನ ಪತ್ರಿಕೆಯನ್ನು ಸಲ್ಲಿಸಿದರು ಶ್ರೀಜಗದ್ಗುರುಗಳ ಉಪದೇಶ ಭಾಷಣವೂ ಜರುಗಿತು ಮಹಾಸಂಸ್ಥಾನದಿಂದ ಶ್ರೀ ಸಿದ್ಧಪ್ಪಯ್ಯನವರಿಗೆ "ದಾನಧರ್ಮಧುರೀಣ" ಎಂಬ ಪ್ರಶಸ್ತಿಯು ದಯಪಾಲಿಸಲ್ಪಟ್ಟಿತು ಶ್ರೀಕಾಶೀ ವಿಶ್ವನಾಥನ ಶ್ರೀ ಜಗದ್ಗುರು ವಿಶ್ವಾರಾಧ್ಯಮೂರ್ತಿಯ ಸಂದರ್ಶನ ಮತ್ತು ರುದ್ರಾಭಿಷೇಕ, ಶಿವಲಿಂಗಸ್ಥಾಪನೆ, ಜ್ಞಾನಪೀಠಾಭಿಷೇಕ ಜಂಗಮಾರ್ಚನೆ, ವ್ಯಾಸಕಾಶೀ ಪಂಚಕ್ರೋಶಯಾತ್ರಾ ಇತ್ಯಾದಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿ ದಾನವೀರರು ಪರಮಾನಂದಭರಿತರಾದರು ಮಹಾ ಗುರುಭಕ್ತಿಧುರೀಣರಾದ ವೇ॥ ಸಿದ್ಧಪ್ಪಯ್ಯನವರಿಗೂ ಅವರ ಪುತ್ರಪೌತ್ರಾದಿಗಳಿಗೂ ಶ್ರೀ ಪರಮಾತ್ಮನು ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ತುಗಳನ್ನಿತ್ತು ಸರ್ವದಾ ಕಾಪಾಡಲೆಂದು ಹಾರೈಸುತ್ತೇನೆ

ಪ್ರತ್ಯಕ್ಷದರ್ಶಿ

ಕಾಶೀ ಜ್ಞಾನಮಂದಿರದ ಕಟ್ಟಡಕ್ಕೆ ದಾನ

ಹಾಸನ ಡಿ॥ ಆಲೂರು ಟೌನ್‌ನಲ್ಲಿರುವ ಶ್ರೀಮಾನ್ ಎ ನಂಜಪ್ಪ ರೈಸ್ ಮಿಲ್ ಪ್ರೊಪ್ರೈಟರ್, ಇವರು ತಮ್ಮ ತಂದೆಯವರಾದ ಪಟೇಲ್ ಲಿಂಗಪ್ಪಗೌಡರ ಸ್ಮಾರಕವಾಗಿ ಕಾಶೀ ಜಗದ್ಗುರು ಪೀಠದಲ್ಲಿ ಸ್ಥಾಪಿತವಾಗಿರುವ ಜ್ಞಾನಮಂದಿರದ ಕಟ್ಟಡಕ್ಕೋಸ್ಕರ ವಾಗ್ದಾನ ಮಾಡಿದ್ದ ೨೦೦ ರೂ ಗಳನ್ನು ಕಳುಹಿಸಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿರುತ್ತಾರೆ

ಶಿವ ಕೀರ್ತನೆ

ಹೊಸನಗರ ತಾ॥ ಮಸರೂರು ಗ್ರಾಮದ ಪಟೇಲ್ ಮುರಿಗಪ್ಪಗೌಡರು ಶಿವಾಧೀನರಾದ ಸಂಬಂಧವಾಗಿ ಈ ತಿಂಗಳ ೧೮ ನೇ ತಾರೀಖಿನ ದಿವಸ ನೆರವೇರಿದ ಗಣಾರಾಧನಾ ಸಮಯದಲ್ಲಿ ಕೀರ್ತನಕೇಸರಿ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳು "ರಾಜಶೇಖರವಿಲಾಸ" ಎಂಬ ಶಿವಕೀರ್ತನವನ್ನು ಬಹು ಹೃದಯಂಗಮವಾಗಿ ಮಾಡಿದರು ಈ ಸಮಾರಂಭಕ್ಕೆ ಅನೇಕ ಜನ ಬಂಧುಮಿತ್ರರು ಆಗಮಿಸಿದ್ದರು

ಪ್ರತ್ಯಕ್ಷದರ್ಶಿ

ಸ್ತುತ್ಯವಾದ ಕಾರ್ಯ ಗುಡದನಾಳ

ನಿಜಾಂ ಇಲಾಖಾ ಗುಡಗುಂಟಿ ಸಂಸ್ಥಾನಕ್ಕೆ ಸೇರಿರುವ ಗುಡದನಾಳ ಎಂಬ ಗ್ರಾಮದಲ್ಲಿ ಬಹು ಕಾಲದಿಂದಲೂ ಸಿಹಿನೀರಿನ ತೊಂದರೆಯು ವಿಶೇಷವಾಗಿತ್ತು. ಈ ಊರಿನ ಜನರು ಸಾವಿರಾರು ವರ್ಷಗಳಿಂದ ಸಿಹಿನೀರನ್ನೇ ಕಂಡಿರಲಿಲ್ಲ ಇಲ್ಲಿ ಉಪ್ಪು ನೀರೇ ಹೆಚ್ಚಾಗಿರುವುದು ಇಲ್ಲಿಯ ಉಪ್ಪು ಬಹಳ ಪ್ರಸಿದ್ಧವಾಗಿರುವುದು ಇಲ್ಲಿಯ ಜನರಿಗೆ ಈ ವಿಧವಾದ ನೀರಿನ ತೊಂದರೆ ಇರುವುದನ್ನು ಗ್ರಾಮದ ಪ್ರಮುಖರು ಪರ್ಯಾಲೋಚಿಸಿ ಈ ಕ್ಷಾಮಕಾಲದಲ್ಲಿ ಬಡವರ ರಕ್ಷಣೆಗಾಗಿ ಹೊಸದಾಗಿ ಒಂದು ಕೆರೆಯನ್ನು ನಿರ್ಮಿಸಿದರು. ಈ ವರ್ಷ ಆ ಕೆರೆಯು ನೀರಿನಿಂದ ತುಂಬಿ ಶೋಭಿಸುತ್ತಿರುವುದು ಅಮೃತ ಸದೃಶವಾಗಿರುವ ಆ ನೀರನ್ನು ಕುಡಿದು ಇಲ್ಲಿಯ ಜನರು ಯಾವಾಗಲೂ ಗ್ರಾಮದ ಪ್ರಮುಖರನ್ನು ಸ್ತುತಿಸುತ್ತಿರುವರು ಈ ಮಹಾಕಾರ್ಯದಲ್ಲಿ ಮ॥ರಾ॥ ಶಿವಲಿಂಗಪ್ಪ ಹಂಪಣ್ಣ, ಕಲಕೇರಿ, ಮಾಲೀ ಪಾಟೀಲ್ ಬಸವನಗೌಡರು, ಪೋಲೀಸ್ ಪಾಟೀಲ ತಿಮ್ಮನಗೌಡರು, ಎರಡೋಣಿ ಹಂಪಪ್ಪ, ಅಮರಪ್ಪಶಾಸ್ತ್ರಿ, ಹುಚ್ಚಪ್ಪ, ಹನುಮಂತರಾಯ ಹಟ್ಟಿಯಾನಪ್ಪ, ಯಮನಪ್ಪ, ಮಲ್ಲಪ್ಪ, ಸಣ್ಣಮಲ್ಲಪ್ಪ, ಇವರೇ ಮೊದಲಾದವರು ಭಾಗವಹಿಸಿದ್ದರು ಇವರಿಗೆ ದೇವರು ಮಂಗಲವನ್ನೀಯಲಿ

ವಿ ಎಸ್ ವಿರೂಪಾಕ್ಷಶಾಸ್ತ್ರೀ
ವಂದಲೀಕರ್.

ಪಂಚಾಚಾರ್ಯಪ್ರಭಾ.

೧೯೪೭ನೆಯ ಡಿಸೆಂಬರ್ ತಾ|| ೨೯ ನೇ ಸೋಮವಾರ

ಜ್ಞಾನಕಾಂಡದ ಶ್ರೇಷ್ಠತೆ

'ನಾವೇದವಿನ್ಮನುತೇ ತಂ ಬೃಹಂತಂ' ಯಾವನು ವೇದವನ್ನು ತಿಳಿಯುವುದಿಲ್ಲವೋ ಅವನಿಗೆ ದೇವರ ಸ್ವರೂಪವು ಗೋಚರವಾಗುವುದಿಲ್ಲವೆಂದು ಶ್ರುತಿಯು ಬೋಧಿಸಿರುವುದರಿಂದ ಮುಮುಕ್ಷುಗಳಾದ ಪುರುಷರು ವೇದೋಕ್ತಕರ್ಮಾನುಷ್ಠಾನವನ್ನು ಮಾಡಬೇಕೆಂದು ಸ್ಪಷ್ಟವಾಗುತ್ತದೆ ವೇದದಲ್ಲಿ ಕರ್ಮಕಾಂಡವೆಂತಲೂ ಜ್ಞಾನಕಾಂಡವೆಂತಲೂ ಎರಡು ಭಾಗಗಳುಂಟು ಇವುಗಳಲ್ಲಿ ಕರ್ಮಕಾಂಡವು ಸ್ವರ್ಗಾದಿ ನಶ್ವರ ಫಲಸಾಧನಗಳಾದ ಯಾಗಾದಿ ಕರ್ಮಕಲಾಪವನ್ನು ಬೋಧಿಸುತ್ತದೆ ಜ್ಞಾನಕಾಂಡವು ಮುಕ್ತಿಸಾಧನವಾದ ಪರಮಾತ್ಮಸ್ವರೂಪವನ್ನು ಬೋಧಿಸುತ್ತದೆ ವೇದವತಾಸ ಯಾಯಿಗಳೆಲ್ಲರೂ ಪೂರ್ವಕಾಂಡ, ಉತ್ತರಕಾಂಡಗಳೆರಡನ್ನೂ ಪ್ರಮಾಣವೆಂದು ಒಪ್ಪಲೇಬೇಕು ವೇದೋಕ್ತಗಳಾದ ಕರ್ಮಗಳನ್ನು ಯಾರು ಆಚರಿಸುವರೋ ಅವರೇ ವೈದಿಕರೆಂತಲೂ, ಯಾರು ವೇದವಿಧಿಯನ್ನು ಮೀರುವರೋ ಅವರೇ ಅವೈದಿಕರೆಂತಲೂ ಸನಾತನಧರ್ಮಾವಲಂಬಿಗಳಲ್ಲಿ ದೃಢವಾದ ನಂಬಿಕೆಯು ಅನಾದಿಕಾಲದಿಂದ ಬಂದಿರುವುದಲ್ಲದೆ ಅನೇಕ ಪ್ರಮಾಣಗಳೂ ಇದೇ ಅಭಿಪ್ರಾಯವನ್ನು ಪ್ರತಿಪಾದಿಸುತ್ತವೆ

ನಮ್ಮ ಸನಾತನಧರ್ಮಾವಲಂಬಿಗಳಾದ ವೈದಿಕರಲ್ಲಿ ಕೆಲವರು ಆ ವೇದದೊಳಗಿರುವ [illegible] ದವನ್ನೇ ಅವಲಂಬಿಸಿ ಅಲ್ಲಿ ಹೇಳುವ ಅಸಂಖ್ಯ ಕರ್ಮಗಳೊಳಗೆ ಯಾವುವಾದರೂ ಕೆಲವು ಕರ್ಮಗಳನ್ನು ಮಾತ್ರ ಅನುಷ್ಠಿಸುತ್ತ ಅಷ್ಟರಲ್ಲಿಯೇ ವಿಶ್ರಾಂತರಾಗಿದ್ದಾರೆ ಇನ್ನು ಕೆಲ ವೈದಿಕರು ಮುಂದಣ ಜ್ಞಾನಕಾಂಡೋಕ್ತಗಳಾದ ಬ್ರಹ್ಮವಿಚಾರದಲ್ಲೂ ತತ್ಸಾಧಕಗಳಾದ ಬ್ರಹ್ಮೋಪಾಸನೆಯಲ್ಲೂ ಆಸಕ್ತರಾಗಿರುತ್ತಾರೆ ಇನ್ನು ಕೆಲವರು ನಿಷ್ಕಾಮಬುದ್ಧಿಯಿಂದ ಕರ್ಮಕಾಂಡೋಕ್ತಗಳಾದ ಕರ್ಮಗಳನ್ನು ಅನುಷ್ಠಿಸಿ ಬ್ರಹ್ಮಕಾಂಡೋಕ್ತವಾದ ಉಪಾಸನಾಮಾರ್ಗದಲ್ಲೂ ಪ್ರವೇಶಿಸುತ್ತಾರೆ ಹೀಗೆ ಅವರವರ ಮತಸಿದ್ಧಾಂತಾನುಸಾರವಾಗಿ ಸಕಲ ವೈದಿಕಮತಾನುಯಾಯಿಗಳು ವೇದವೆಂಬ ಮಹಾವೃಕ್ಷವನ್ನವಲಂಬಿಸಿಯೇ ತಮ್ಮ ತಮ್ಮ ಇಚ್ಛಾನುಗುಣವಾದ ಕರ್ಮ ಬ್ರಹ್ಮೋಪಾಸನೆಗಳನ್ನು ಮಾಡುತ್ತ ಫಲಗಳನ್ನು ಪಡೆಯುತ್ತಿರುವರು ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಪೂರ್ವಕಾಂಡೋಕ್ತ ಕರ್ಮಗಳಿಗೆಲ್ಲಾ ಪ್ರಾಮಾಣ್ಯವನ್ನು ಅಂಗೀಕರಿಸಿದ್ದರೂ, ಸ್ವರ್ಗಾದಿಸಾಧನವಾದ ಜ್ಯೋತಿಷ್ಟೋಮಾದಿಯಾಗಗಳ ಸ್ವರೂಪವನ್ನು ಪ್ರತಿಪಾದಿಸುವ ಪೂರ್ವಕಾಂಡಕ್ಕಿಂತಲೂ ನಿತ್ಯಸುಖಪ್ರದವಾದ ಬ್ರಹ್ಮಸ್ವರೂಪವನ್ನೂ ಬ್ರಹ್ಮೋಪಾಸನಾಕ್ರಮವನ್ನೂ ಪ್ರತಿಪಾದಿಸುವ ಉತ್ತರಕಾಂಡಕ್ಕೆ ಪ್ರಾಬಲ್ಯವನ್ನು ಹೇಳಿರುತ್ತಾರೆ

ಕರ್ಮಕಾಂಡೋಕ್ತಕರ್ಮಭ್ಯೋ ವಾಕ್ಯಂ ಪ್ರಾಬಲ್ಯಮೇವ ಹಿ।
ಬ್ರಹ್ಮಕಾಂಡಸ್ಯ ಕಾಚಾರತ್ನಯೋರಿವ ಯತ್ನಯೋಃ ॥

ಅಂಗಾಂಗಿತ್ವಸ್ಯ ಚೋಕ್ತತ್ವಾತ್ ಜ್ಞಾನಪ್ರಾಬಲ್ಯವಾದತಃ।
ನಕರ್ಮಣಾ ನಪ್ರಜಯಾ ಧನೇನೇತ್ಯಾದಿವಾಕ್ಯತಃ ॥

ಜ್ಞಾನೈಕನಾಶ್ಯತಾ ಪಾಶಸ್ಯೇತ್ಯೇವಂ ಚ ವ್ಯವಸ್ಥಿತೇ।
ನ ಕರ್ಮಕಾಂಡವೈಯರ್ಥ್ಯಂ ಶಿಷ್ಟವ್ಯಾಖ್ಯಾಂತಪುರಸ್ಸರಂ ॥

ಈ ರೀತಿಯಾಗಿ ಕ್ರಿಯಾಸಾರವೆಂಬ ವೀರಶೈವಸಿದ್ಧಾಂತಗ್ರಂಥವು ಆಚಾರ್ಯಭಗವತ್ಪಾದರ ಅಭಿಪ್ರಾಯವನ್ನೇ ಅನುವಾದಮಾಡಿರುತ್ತದೆ ಅಂದರೆ ಪೂರ್ವಕಾಂಡದಲ್ಲಿ ಹೇಳಲ್ಪಟ್ಟ ಕರ್ಮಗಳೆಲ್ಲವೂ ಅನಿತ್ಯಫಲಪ್ರದವಾದುದರಿಂದ ದುರ್ಬಲವಾದವುಗಳು ಬ್ರಹ್ಮಕಾಂಡದಲ್ಲಿ ಹೇಳಲ್ಪಟ್ಟ ಕ್ರಿಯೆಗಳೆಲ್ಲವೂ ನಿತ್ಯಫಲಪ್ರದವಾದುದರಿಂದ ಪ್ರಬಲವಾದವುಗಳು ಗಾಜಿನ ಮಣಿಗಳಿಗೂ ರತ್ನಗಳಿಗೂ ಬಹಳ ವ್ಯತ್ಯಾಸವುಂಟು ಗಾಜಿನ ಮಣಿಗಳು ಅತ್ಯಲ್ಪ ಬೆಲೆಯುಳ್ಳವುಗಳಾಗಿಯೂ, ರತ್ನಗಳು ಬಹಳ ಬೆಲೆಯುಳ್ಳವುಗಳಾಗಿಯೂ ಇರುವುದರಿಂದ ಕರ್ಮಕಾಂಡದಲ್ಲಿ ಹೇಳಿದ ಹಿಂಸಾಪ್ರದವಾದ ಪಶುಕರ್ಮಗಳನ್ನು ಅನುಷ್ಠಿಸಿ ಅಲ್ಪಫಲವನ್ನು ಹೊಂದುವುದಕ್ಕಿಂತಲೂ, ಜ್ಞಾನಕಾಂಡದಲ್ಲಿ ಹೇಳಿದ ಮೋಕ್ಷದಾಯಕಗಳಾದ ಪತಿಕರ್ಮಗಳನ್ನನುಷ್ಠಿಸಿ ಅನಾದಿಕಾಲದಿಂದ ಜೀವಾತ್ಮನೆಂಬ ಪಶುವಿನ ಕೊರಳಿಗೆ ಬಿದ್ದಿರುವ ಅಜ್ಞಾನಪಾಶವನ್ನು ನಾಶಗೊಳಿಸಿ ಮುಕ್ತಿಸೌಖ್ಯವನ್ನು ಹೊಂದುವುದೇ ಉತ್ತಮವೆಂದು ವ್ಯವಸ್ಥೆಗೊಳಿಸಲ್ಪಟ್ಟಿರುತ್ತದೆ ಇದರಿಂದ ಕರ್ಮಕಾಂಡಕ್ಕಿಂತ ಜ್ಞಾನಕಾಂಡವೇ ಆತ್ಮೋದ್ಧಾರಕ್ಕೆ ಅತ್ಯಂತ ಪ್ರಬಲವಾದ ಸಾಧನವೆಂದು ಹೇಳುವುದೇ ವೀರಶೈವಸಿದ್ಧಾಂತದ ಆಶಯವಾಗಿದೆ

"ಭಿನ್ನರುಚಿರ್ಹಿಲೋಕಃ" ಎಂಬುಕ್ತಿಯಂತೆ ಒಬ್ಬೊಬ್ಬರ ಇಷ್ಟವು ಒಂದೊಂದು ವಿಧವಾಗಿರುತ್ತದೆ ಕೆಲವರು ಐಹಿಕಸೌಖ್ಯದಲ್ಲಿ ಲೋಲರಾಗಿದ್ದಾರೆ ಕೆಲವರು ಐಹಿಕಸೌಖ್ಯದೊಂದಿಗೆ ಸ್ವರ್ಗಾದಿ ಸೌಖ್ಯಾಭಿಲಾಷಿಗಳಾಗಿದ್ದಾರೆ ಇನ್ನು ಕೆಲವರು ಪರಮಾತ್ಮನ ಸ್ವರೂಪವನ್ನು ತಿಳಿದು ಘೋರವಾದೀ ಭವಪಾಶವನ್ನು ನಾಶಗೊಳಿಸಲಪೇಕ್ಷೆಯುಳ್ಳವರಾಗಿದ್ದಾರೆ

ವೃಷೀಕಾಪಃ ಸ್ವಸಾಮರ್ಥ್ಯಾನುಗುಣ್ಯೇನೈವ ಕೇವಲಂ।
ವೃಷ್ಣಂತಿ ನೈವ ಚಾನ್ಯಸ್ಯ ದೂಷಣಾಯ್ಯೈವ ಕಲ್ಪ್ಯತೇ ॥
ಏವಂ ಸಾಮಾನ್ಯತೋ ವೇದಪ್ರಾಮಾಣ್ಯೇ ಸತಿ ತತ್ಪುನಃ।
ಸ್ವಾಧಿಕಾರಾನುಸಾರೇಣ ವೈದಿಕೇಷು ಪ್ರವರ್ತತೇ ॥

ಈ ರೀತಿಯಾಗಿ ವೀರಶೈವಸಿದ್ಧಾಂತಗ್ರಂಥಗಳಲ್ಲಿ ಹೇಳಿರುವುದರಿಂದ ಯಾರಿಗೆ ಎಷ್ಟೆಷ್ಟು ಕರ್ಮಗಳನ್ನು ಮಾಡಲಿಚ್ಛೆಯಿರುವುದೋ, ಅವರವರ ಸಾಮರ್ಥ್ಯವು ಎಷ್ಟೆಷ್ಟಿರುವುದೋ, ಯಾರಿಗೆ ಯಾವ ಯಾವ ಫಲದಲ್ಲಿ ಪ್ರವೃತ್ತಿಯಿರುವುದೋ, ಯಾರು ತಮ್ಮ ತಮ್ಮ ಮತಸಿದ್ಧಾಂತಕ್ಕೆ ವಿರುದ್ಧವಿಲ್ಲದಂತೆ ವೇದೋಕ್ತ ಕರ್ಮಗಳಲ್ಲಿ ಅಧಿಕಾರವನ್ನು ಪಡೆದಿರುತ್ತಾರೆಯೋ ಆಯಾ ಮತಾಚಾರ್ಯರ ಅನುಜ್ಞೆಯು ಎಷ್ಟರಮಟ್ಟಿಗೆ ಆಗಿರುವುದೋ, ಅಷ್ಟುಮಟ್ಟಿಗೆ ವೈದಿಕಕರ್ಮಾನುಷ್ಠಾನದಲ್ಲಿ ತೊಡಗುವುದು ಸಮಸ್ತ ವೈದಿಕಮತೀಯರ ಕರ್ತವ್ಯವಾಗಿದೆ ಇದರಿಂದ ವೇದವು ಯಾರಿಗೂ ಅಪ್ರಮಾಣಭೂತವಾದಂತಾಗಲಿಲ್ಲ ವೇದದಲ್ಲಿರುವ ಅನಂತ ಕರ್ಮಾನುಷ್ಠಾನವನ್ನಾಗಲಿ ಅನಂತ ಪರಮಾತ್ಮಾನುಸಂಧಾನವನ್ನಾಗಲಿ ಮಾಡಲು ಯಾರಿಂದಲೂ ಶಕ್ಯವಿಲ್ಲ ಕ್ರಮವಾಗಿ ವೇದದಲ್ಲಿರುವ ಪೂರ್ವಕಾಂಡೋಕ್ತ ಕರ್ಮಗಳನ್ನೆಲ್ಲಾ ಮಾಡಿಯೇ ಮುಂದಕ್ಕೆ ಪ್ರವೇಶಿಸಬೇಕೆಂಬ ನಿಯಮವಿಲ್ಲ ತಮ್ಮ ತಮ್ಮ ಅಧಿಕಾರಾನುಗುಣವಾಗಿ ವೇದದ ಯಾವ ಭಾಗವನ್ನು ಆಚರಿಸಿದರೂ ವೈದಿಕತ್ವವು ಸಿದ್ಧವೇ ಆಗಿದೆ ಅಂಥವರಿಗೆ ಯಾವ ದೋಷವೂ ಸಂಭವಿಸಲಾರದು

ಕ್ರಮಸೋಪಾನಮಾರ್ಗೇಷು ತ್ರಯಾಣಾಮಥವಾ ದ್ವಯೋಃ।
ಅತಿಕ್ರಮೇಣ ಚಾರೂಢೇ ಸೋಪಾನೋತ್ಪಾಟನಂ ನಹಿ ॥

ಒಂದು ಸರೋವರಕ್ಕಿಳಿದು ಸ್ನಾನಪಾನಾದಿಗಳನ್ನು ಮಾಡುವುದರ ಸೌಕರ್ಯಕ್ಕಾಗಿ ಅನೇಕ ಸೋಪಾನ(ಮೆಟ್ಟಲು)ಗಳು ಏರ್ಪಡಿಸಲ್ಪಟ್ಟಿದ್ದರೂ, ಶಕ್ತಿಯುಳ್ಳ ಪುರುಷನು ಅವುಗಳಲ್ಲಿ ಒಂದೆರಡು ಮೆಟ್ಟಲುಗಳನ್ನು ಬಿಟ್ಟು ಏರುತ್ತಿದ್ದರೂ ಇಳಿಯುತ್ತಿದ್ದರೂ ಅದು ಹೇಗೆ ಸೋಪಾನೋತ್ಪಾಟನವನ್ನು ಮಾಡಿದಂತಾಗುವುದಿಲ್ಲವೋ ಹಾಗೆ ಸಮುದ್ರದಂತೆ ವಿಸ್ತೃತವಾದ ವೇದದಲ್ಲಿ ಅವರವರ ಅಧಿಕಾರಾನುಗುಣವಾಗಿ ಯಾವ ಭಾಗವನ್ನನುಸರಿಸಿದರೂ ವೈದಿಕತ್ವವೆಂಬುದು ಎಲ್ಲರಲ್ಲಿಯೂ ಅಪ್ರತಿಹತವಾಗಿ ವರ್ತಿಸುತ್ತದೆ ಸನ್ಯಾಸಿಗಳು ಅನುಷ್ಠಿಸುವ ವೇದಭಾಗವನ್ನು ಗೃಹಸ್ಥರು ಅನುಷ್ಠಿಸುವುದಿಲ್ಲ ಗೃಹಸ್ಥರು ಅನುಷ್ಠಿಸುವ ವೇದಭಾಗವನ್ನು ಸನ್ಯಾಸಿಗಳು ಅನುಷ್ಠಿಸುವುದಿಲ್ಲ ಹೀಗಿದ್ದರೂ ಇವರೆಲ್ಲರೂ ತಮ್ಮ ತಮ್ಮ ಮತಾನುಸಾರವಾಗಿಯೂ, ಆಶ್ರಮಾನುಸಾರವಾಗಿಯೂ ವೇದಮತಾನುಯಾಯಿಗಳೆನಿಸಿಕೊಂಡಿರುತ್ತಾರೆ ಬ್ರಹ್ಮಕಾಂಡದಲ್ಲಿಯೂ ಸಹ ಕೆಲವರು ಶಿವಾಧಿಕ್ಯಪ್ರತಿಪಾದಕವಾದ ಮಂತ್ರಭಾಗವನ್ನು ಅನುಷ್ಠಿಸುತ್ತಾರೆ ಕೆಲವರು ವಿಷ್ಣ್ವಾಧಿಕ್ಯಪ್ರತಿಪಾದಕವಾದ ಮಂತ್ರಭಾಗವನ್ನು ಅನುಷ್ಠಿಸುತ್ತಾರೆ ಅಷ್ಟುಮಾತ್ರದಿಂದ ಯಾರೂ ಅವೈದಿಕರೆನಿಸದೆ ವೈದಿಕರೆನಿಸಿಕೊಂಡೇ ಬಂದಿರುತ್ತಾರೆ ಇದರಿಂದ ಅವರವರ ಸಿದ್ಧಾಂತಾನುಸಾರವಾಗಿ ವೇದದಲ್ಲಿ ಯಾವ ಭಾಗವನ್ನಾದರೂ ಅನುಸರಿಸಬಹುದಲ್ಲದೆ ವೇದಭಾಗವನ್ನೆಲ್ಲಾ ಅನುಸರಿಸಬೇಕೆಂಬ ನಿಯಮವಿಲ್ಲವೆಂದು ಸ್ಪಷ್ಟವಾಗುವುದು. ಪ್ರಕೃತದಲ್ಲಿ ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು "ಅಮೃತಸ್ಯ ದೇವಧಾರಣೋ ಭೂಯಾಸಂ" "ಶಿವ ಏಕೋ ಧ್ಯೇಯಃ ಶಿವಂಕರಸ್ಸರ್ವಮನ್ಯತ್ಪರಿತ್ಯಜ್ಯ" ಇತ್ಯಾದಿ ಪ್ರಬಲ ಶ್ರುತಿಗಳ ಆಧಾರದಿಂದ ಶಿವೇತರ ದೇವತಾತ್ಯಾಗಬುದ್ಧಿಯಿಂದ ಶಿವನೊಬ್ಬನಲ್ಲಿಯೇ ಲೋಲಾಡಲೆಂಬುದ್ದೇಶದಿಂದ ಅನಿತ್ಯಫಲದಾಯಕವಾದ ಪಶುಯಾಗಾದಿಗಳನ್ನು ಹೇಳುವ ವೇದವಾಕ್ಯಗಳಿಗೆ ದುರ್ಬಲತ್ವವನ್ನು ಹೇಳಿ ನಿತ್ಯಫಲಪ್ರದವಾದ ಬ್ರಹ್ಮಕಾಂಡಕ್ಕೆ ಪ್ರಾಬಲ್ಯವನ್ನು ಹೇಳಿರುತ್ತಾರೆ ಈ ಅರ್ಥದಲ್ಲಿ—

ಪೂರ್ವಕಾಂಡಪ್ರಸಿದ್ಧಾನಾಮಗ್ನಿಷ್ಟೋಮಾದಿಕರ್ಮಣಾಂ।
ವೀರಶೈವೀಯಧರ್ಮಾಣಾಂ ಪರಸ್ಪರವಿರೋಧತಃ ॥

ಅಗ್ನಿಷ್ಟೋಮಾದಿಮಂತ್ರಾಣಾಮೇವಂ ಶಮಷಯೋಗಿನಾಂ।
ಸರ್ವೇಷಾಂ ವೇದಭಾಗಾನಾಂ ವೀರಶೈವೀಯಕರ್ಮಣಿ ॥

ಕೇಷಾಂಚಿದುಪಯುಕ್ತಾನಾಮಮೃತಸ್ಯಾದಿರೂಪಿಣಃ।
ಪರಸ್ಪರವಿರೋಧೇನ ಬಹುವೇದಾನುಸಾರತಃ।
ವೀರಶೈವೋಪಯುಕ್ತಾನಾಂ ಮಂತ್ರಾಣಾಮೇವ ವೈಭವಃ ॥

ಎಂಬ ಕ್ರಿಯಾಸಾರೋಕ್ತಿಗಳು ಜಾಗರೂಕಗಳಾಗಿರುತ್ತವೆ ಆದುದರಿಂದ ನಶ್ವರಫಲದಾಯಕಗಳಾದ ಪೂರ್ವಕಾಂಡಕರ್ಮಗಳಿಗಿಂತಲೂ, ಶಾಶ್ವತಫಲದಾಯಕಗಳಾದ ಬ್ರಹ್ಮಕಾಂಡೋಕ್ತ ಪತಿಕರ್ಮಗಳನ್ನಾಚರಿಸಿ ಮುಕ್ತಾತ್ಮರಾಗುವುದು ಸರ್ವರ ಕರ್ತವ್ಯವಾಗಿದೆ.

ವರ್ತಮಾನಸಂಗ್ರಹ

ಭಾರತೀಯ ಪ್ರಧಾನ ದಂಡನಾಯಕರು

೧೯೪೮ ರ ಏಪ್ರಿಲ್ ತಿಂಗಳಿಂದ ಭಾರತದ ಪ್ರಧಾನ ದಂಡನಾಯಕರ ಪದವಿಗೆ ಭಾರತೀಯ ಅಧಿಕಾರಿಯೊಬ್ಬರನ್ನು ನೇಮಿಸಲಾಗುವುದು

ಬೊಂಬಾಯಿಯ ನೂತನ ಗವರ್ನರ್

ರಾಜಾ ಸರ್ ಮಹಾರಾಜ್ ಸಿಂಗ್‌ರವರನ್ನು ಬೊಂಬಾಯಿ ಗವರ್ನರಾಗಿ ಭಾರತದ ಗವರ್ನರ್ ಜನರಲ್‌ರವರು ನೇಮಕ ಮಾಡಿದ್ದಾರೆಂದು ಅಧಿಕೃತ ಪ್ರಕಟನೆ ಹೊರಟಿದೆ

ಹೈದ್ರಾಬಾದಿನಲ್ಲಿ ನೂತನ ಸಮಿತಿ

ಹೈದ್ರಾಬಾದ್ ಸಂಸ್ಥಾನದಲ್ಲಿ ಮಿ|| ಪಿ ವೆಂಕಟರಾಮರೆಡ್ಡಿ, ನವಾಬ್ ಮೊಯಿನ್ ನವಾಜ್ ಜಂಗ್ ಮತ್ತು ಅಬ್ದುಲ್ ರಹೀಂ ಈ ಮೂರು ಜನ ಮಂತ್ರಿಗಳನ್ನೊಳಗೊಂಡ ಒಂದು ನೂತನ ಸಮಿತಿಯು ರಚಿತವಾಗಿರುವುದು ಈ ಸಮಿತಿಯು ಭಾರತ ಮತ್ತು ಹೈದ್ರಾಬಾದ್ ಸಂಸ್ಥಾನಕ್ಕಾಗಿರುವ ಒಪ್ಪಂದವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಪಡುವದಂತೆ !

ಪಾಕೀಸ್ಥಾನಕ್ಕೆ ಹೈದ್ರಾಬಾದಿನಿಂದ ಧನಸಹಾಯ

ಪಾಕೀಸ್ತಾನದ ಹಣಕಾಸಿನ ಮಂತ್ರಿಗಳಾದ ಮಿ|| ಗುಲಾಂ ಮಹಮದ್‌ರವರು ಹೈದ್ರಾಬಾದಿಗೆ ಮೊನ್ನೆ ಬಂದಿದ್ದಾಗ ಅಲ್ಲಿಯ ಪ್ರಸಿದ್ಧ ವರ್ತಕರೊಬ್ಬರು ಹೈದ್ರಾಬಾದ್ ಸಂಸ್ಥಾನವು ಪಾಕಿಸ್ಥಾನಕ್ಕೆ ಕೋಟಿಗಟ್ಟಲೆ ದ್ರವ್ಯವನ್ನು ಸಾಲ ಕೊಡಲು ಒಪ್ಪಿದೆಯೆಂದು ತಿಳಿಸಿದ್ದಾರೆ

ಸಿಂಗಪುರದಲ್ಲಿ ಭಾರತೀಯ ವಾಣಿಜ್ಯ ಪ್ರದರ್ಶನ

ವಿಜ್ಞಾನ, ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಭಾರತದ ಪ್ರಗತಿಯನ್ನು ಪ್ರದರ್ಶಿಸಲು ಜನವರಿ ಅಂತ್ಯದಲ್ಲಿ ಸಿಂಗಪುರದಲ್ಲಿ ಭಾರತೀಯ ಪ್ರದರ್ಶನವನ್ನು ಏರ್ಪಡಿಸಲಾಗುವುದು. ಭಾರತವು ಹೊರದೇಶಗಳೊಡನೆ ವ್ಯಾಪಾರವನ್ನು ಹೆಚ್ಚಿಸುವುದೇ ಇದರ ಉದ್ದೇಶವಾಗಿದೆ

ಪಾಕೀಸ್ಥಾನದಲ್ಲಿ ಬೆಂಕಿಪೆಟ್ಟಿಗೆಗಳ ಅಭಾವ

ಪಶ್ಚಿಮ ಪಂಜಾಬಿನಲ್ಲಿ ಬೆಂಕಿಪೆಟ್ಟಿಗೆಗಳು ಸಿಗದೆ ಜನರು ಬಹಳ ಕಷ್ಟಪಡುತ್ತಿರುವುದಾಗಿ ತಿಳಿದುಬರುತ್ತದೆ ಹೆಂಗಸರು ಯಾವಾಗಲೂ ಮನೆಯಲ್ಲಿ ದೀಪವನ್ನಿಟ್ಟುಕೊಂಡಿರುತ್ತಾರಂತೆ! ಗಂಡಸರು ಚಕಮುಕಿ ಕಲ್ಲುಗಳನ್ನು ಉಪಯೋಗಿಸುತ್ತಿರುವರಂತೆ! ಅಲ್ಲಿ ಒಂದು ಪೆಟ್ಟಿಗೆಯ ಬೆಲೆ ೬ ಆಣೆಯವರೆಗೆ ಏರಿಹೋಗಿದೆಯಂತೆ!

ಭಾರತ-ಪಾಕಿಸ್ಥಾನ ಸಂಧಾನ

ಭಾರತ ಮತ್ತು ಪಾಕಿಸ್ತಾನ ಮುಖ್ಯ ಮಂತ್ರಿಗಳು ಕಾಶ್ಮೀರದ ಸಮಸ್ಯೆ ಕುರಿತು ದೀರ್ಘಕಾಲ ಚರ್ಚಿಸಿದರು ಸಂಧಾನದ ಫಲಿತಾಂಶ ಖಚಿತವಾಗಿ ಬೆಳಕಿಗೆ ಬಂದಿಲ್ಲವಾದರೂ ಎರಡು ಡೊಮಿಯನ್‌ಗಳ ಭಿನ್ನತೆ ಬಗೆಹರಿಯಲಿಲ್ಲವೆಂದೂ, ಕಾಶ್ಮೀರ ಸಮಸ್ಯೆ ಹಾಗೆಯೇ ಉಳಿದಿದೆಯೆಂದೂ ರಾಜಕೀಯ ಕ್ಷೇತ್ರಗಳಲ್ಲಿ ಅಭಿಪ್ರಾಯ ಪಡಲಾಗಿದೆ

ಕಾಶ್ಮೀರ ಸಮಸ್ಯೆಯು ಭಾರತದ ಮತ್ತು ಅಂತರರಾಷ್ಟ್ರೀಯ ದೃಷ್ಟಿಯಿಂದ ಮಹತ್ವವುಳ್ಳ ಪ್ರಶ್ನೆ ಕಾಶ್ಮೀರದಲ್ಲಿ ದಾಳಿ ಮಾಡುತ್ತಿರುವ ಆಕ್ರಮಣಕಾರರಿಗೆ ಪಾಕಿಸ್ತಾನದ ಮೂಲಕ ಹಾದುಹೋಗಲು ಅವಕಾಶ ಕೊಡುತ್ತಿರುವುದೂ, ದಾಳಿಕಾರರಿಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಹಾಯ ಮಾಡುತ್ತಿರುವುದೂ ಅಂತರರಾಷ್ಟ್ರ ನಿಯಮಕ್ಕೆ ತೀವ್ರ ವಿರುದ್ಧವಾಗಿದೆ ಆದಕಾರಣ ಇದು ವಿಶ್ವಸಂಸ್ಥೆಯ ಪರಿಶೀಲನೆಗೆ ಬರಲು ಅರ್ಹವಾದ ಪ್ರಶ್ನೆ ಎಂಬುದಾಗಿ ರಾಜಕೀಯ ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ

ನಿರಾಶ್ರಿತರ ವ್ಯವಸ್ಥೆ

ಪಶ್ಚಿಮ ಪಂಜಾಬಿನಿಂದ ಬಂದಿರುವ ನಿರಾಶ್ರಿತರನ್ನು ನೆಲೆಗೊಳಿಸುವ ವ್ಯವಸ್ಥೆಯ ವಿವರಗಳನ್ನು ಭಾರತ ಸರಕಾರದ ಪ್ರಕಟನೆಯೊಂದು ಹೀಗೆ ತಿಳಿಸುತ್ತದೆ

ಒಟ್ಟು ೪೩ ಲಕ್ಷ ನಿರಾಶ್ರಿತರಲ್ಲಿ ೨೦ ಲಕ್ಷ ಜನರು ಆಗಲೇ ನೆಲೆಗೊಂಡಿದ್ದಾರೆ ೧೫ ಲಕ್ಷಕ್ಕಿಂತ ಹೆಚ್ಚು ಜನಕ್ಕೆ ಪೂರ್ವ ಪಂಜಾಬಿನಲ್ಲಿ ಜಮೀನನ್ನು ಕೊಡಲಾಗಿದೆ ಇನ್ನೂ ಐದುವರೆ ಲಕ್ಷಕ್ಕೆ ಸಿಗುವ ಅವಕಾಶವಿದೆ ಸಂಸ್ಥಾನಗಳು ಎರಡೂ ಕಾಲು ಲಕ್ಷ ಜನಕ್ಕೆ ಆಶ್ರಯ ಕೊಟ್ಟಿವೆ. ಕೆಲಸಗಳ ಮೂಲಕ ೭೫೦೦೦ ಜನ ನೆಲೆಗೊಂಡಿದ್ದಾರೆ

ಪಾಟಿಯಾಲಾ ಸಂಸ್ಥಾನವು ಆಗಲೇ ಒಂದೂಕಾಲು ಲಕ್ಷ ಜನರಿಗೆ ಆಶ್ರಯಕೊಟ್ಟು ಇನ್ನೂ ೭೫೦೦೦ ಜನರಿಗೆ ಆಶ್ರಯ ಕೊಡುವ ಯೋಚನೆಯಲ್ಲಿದೆ

ಮೈಸೂರು ೫೦೦೦ ಜನರಿಗೆ ಆಶ್ರಯ ಕೊಡಲು ಒಪ್ಪಿದೆ

ಸಂಯುಕ್ತ ಪ್ರಾಂತ ಸರ್ಕಾರವು ಇವರಿಗಾಗಿ ಕೆಲವು ಔದ್ಯೋಗಿಕ ಯೋಜನೆಗಳ ಆಲೋಚನೆಗಳನ್ನು ಮಾಡುತ್ತಿದೆ ಪೂರ್ವ ಪಂಜಾಬಿನಲ್ಲಿ ಮುಂದಿನ ಮಾರ್ಚಿಯ ಹೊತ್ತಿಗೆ ೨೨೦ ಟ್ರಾಕ್ಟರುಗಳನ್ನು ತರಿಸಲು ಕೇಂದ್ರ ವ್ಯವಸಾಯ ಶಾಖೆ ಯೋಚಿಸುತ್ತದೆ ಸುಮಾರು ೧೨ ಲಕ್ಷ ನಿರಾಶ್ರಿತರು ಇನ್ನೂ ಶಿಬಿರಗಳಲ್ಲಿದ್ದಾರೆ

ಕಾಶ್ಮೀರದಲ್ಲಿ ಉಗ್ರವಾದ ಯುದ್ಧ

೧೦೦೦ ದಾಳಿಕಾರರಿಗೆ ಸಾವುನೋವು

ಜಾಂಗರ್-ನೌಷೇರಾ ಪ್ರದೇಶದಲ್ಲಿ ಇದುವರೆಗೆ ನಡೆದ ಕದನಗಳಿಗಿಂತಲೂ ಈಗ ಅತ್ಯಂತ ಉಗ್ರವಾದ ಹೋರಾಟ ನಡೆಯುತ್ತಿದೆ ಶತ್ರುಸಮೂಹದ ಮೇಲೆ ಭಾರತದ ಪಡೆಗಳು ಫಲಕಾರಿಯಾದ ಕಾರ್ಯಾಚರಣೆ ನಡೆಸಿದುದರ ಪರಿಣಾಮವಾಗಿ ನೂರಾರುಮಂದಿ ದಾಳಿಕಾರರಿಗೆ ಸಾವುನೋವುಗಳುಂಟಾಗಿವೆ ಭಾರತದ ವೈಮಾನಿಕ ಪಡೆಗಳು ಭೂಸೇನೆಗೆ ಸಹಾಯ ನೀಡುತ್ತಿವೆ—ಎಂಬುದಾಗಿ ಭಾರತದ ರಕ್ಷಣಾ ಶಾಖೆಯ ಪ್ರಕಟನೆ ಹೊರಟಿದೆ

ಜಮ್ಮುವಿನಲ್ಲಿ ಕದನ ಬಹಳ ಬಿರುಸಾಗಿದೆ ಎಡಬಿಡದೆ ಮಂಜು ಸುರಿಯುತ್ತಿದ್ದರೂ, ಮಂಜಿನಿಂದ ಮುಚ್ಚಿಹೋಗಿರುವ ರಣಕ್ಷೇತ್ರದಲ್ಲಿ ಭಾರತ ಯೋಧರು ಸಾಹಸದಿಂದ ಹೋರಾಡುತ್ತಿದ್ದಾರೆ ಈ ಹೋರಾಟದಲ್ಲಿ ೧೦೦೦ ಮಂದಿ ದಾಳಿಕಾರರಿಗೆ ಸಾವುನೋವುಗಳುಂಟಾಗಿವೆಯೆಂದೂ, ಭಾರತ ವಿಮಾನಗಳು ಒಂದು ಸಾವಿರ ಪೌಂಡು ತೂಕವುಳ್ಳ ಬಾಂಬುಗಳನ್ನು ಹಾಕುತ್ತಿರುವವೆಂದೂ ತಿಳಿದು ಬಂದಿದೆ

ಮೂರನೆಯ ಮಹಾಯುದ್ಧ

ಚೀನಾ ಸರ್ಕಾರಕ್ಕೂ ಅಲ್ಲಿಯ ಕಮ್ಯೂನಿಸ್ಟರಿಗೂ ನಡೆದಿರುವ ಘೋರವಾದ ಯುದ್ಧವೇ ಮೂರನೆಯ ಮಹಾ ಯುದ್ಧವಾಗಿ ಪರಿಣಮಿಸಬಹುದೆಂದೂ, ರಷ್ಯಾ ದೇಶವು ಕಮ್ಯೂನಿಸ್ಟರಿಗೆ ಸಹಾಯ ಮಾಡುತ್ತಿರುವುದೆಂದೂ ಅಮೇರಿಕಾ ದೇಶವು ಚೀನಾ ಸರ್ಕಾರಕ್ಕೆ ಸಹಾಯ ಮಾಡುತ್ತಿರುವುದೆಂದೂ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರೊಬ್ಬರು ಅಭಿಪ್ರಾಯಪಟ್ಟಿದ್ದಾರೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಆಹಾರ ಮುಖ್ಯಾಧಿಕಾರಿಗಳ ಹೇಳಿಕೆ

ಆಹಾರ ಮುಖ್ಯಾಧಿಕಾರಿಗಳಾದ ಶ್ರೀ ಕೆ ಗುರುದತ್ತರವರು ಚರ್ಚೆಯಲ್ಲಿ ಸದಸ್ಯರು ಎತ್ತಿದ ಆಕ್ಷೇಪಣೆಗಳಿಗೆ ಸದುತ್ತರಗಳನ್ನಿತ್ತರು

ಮಾನ್ಯ ಸದಸ್ಯರು ಅನೇಕ ತತ್ವಗಳನ್ನು ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದ್ದಾರೆ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ ಮುಖ್ಯವಾಗಿ ಸರ್ಕಾರದವರು ಕಂಟ್ರೋಲುಗಳನ್ನು ತೆಗೆದುಹಾಕಬೇಕೆಂಬ ತತ್ವವನ್ನು ಅಂಗೀಕರಿಸಿದ್ದಾರೆ

ಆದರೆ ಕೂಡಲೇ ತೆಗೆದು ಹಾಕಲು ಸಾಧ್ಯವೇ ಎಂಬುದು ಯೋಚಿಸಬೇಕಾದ ವಿಷಯ ಈಗಾಗಲೇ ಇಂಡಿಯಾ ಸರ್ಕಾರವು ಸಕ್ಕರೆ ಹತೋಟಿಯನ್ನು ತೆಗೆದು ಹಾಕಿದುದರಿಂದ ಅದರ ಬಾರಣೆ ಮಿತಿಮೀರಿ ಹೆಚ್ಚಿ, ಈಗ ಸಕ್ಕರೆ ದಾಸ್ತಾನನ್ನು ಸೀಲು ಮಾಡಲು ಆಜ್ಞೆ ಇತ್ತಿದ್ದಾರೆ ಎಂದು ಹೇಳಿದರು

ಇಂದಿನ ಪರಿಸ್ಥಿತಿಯಲ್ಲಿ ಹತೋಟಿಗಳನ್ನು ತೆಗೆದು ಹಾಕಿದರೆ ಅನರ್ಥ ಪರಂಪರೆಗೆ ಎಡೆಗೊಟ್ಟಂತಾಗುವುದು ಇದೇ ಅಭಿಪ್ರಾಯವನ್ನು ಮೊನ್ನೆ ದೆಹಲಿಯಲ್ಲಿ ನಡೆದ ಆಹಾರ ಸಮ್ಮೇಳನದಲ್ಲಿ ೧೬ ಪ್ರಾಂತೀಯ ಪ್ರಜಾ ಸರ್ಕಾರಗಳ ಪೈಕಿ ೧೪ ಸರ್ಕಾರಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ ಸಮೃದ್ಧವಾಗಿ ಬೆಳೆಯಾಗುತ್ತಿರುವ ಅಮೇರಿಕಾದಲ್ಲೂ ಈಗ ಹತೋಟಿ ವ್ಯವಸ್ಥೆ ಜಾರಿಗೆ ಬರುತ್ತಿರುವಾಗ ಅಭಾವವಿರುವ ನಮ್ಮ ದೇಶದಲ್ಲಿ ಅವುಗಳನ್ನು ತೆಗೆದು ಹಾಕುವುದಾದರೂ ಹೇಗೆ?

ಈಗಿನ ಕಂಟ್ರೋಲು ಪದ್ಧತಿಯ ನ್ಯೂನತೆಗಳು ಸರಕಾರಕ್ಕೆ ಗೊತ್ತಿವೆ ಅವುಗಳ ನಿವಾರಣೆಗೆ ಎಲ್ಲಾ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ ಸಾರ್ವಜನಿಕರ ಹಿತ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಕಂಟ್ರೋಲುಗಳನ್ನು ಸಡಿಲಿಸಬಹುದು

ಅವಶ್ಯಕ ವಸ್ತುಗಳ ಹಂಚಿಕೆಯಲ್ಲಿ ವಿತರಣೆ ಮತ್ತು ಪರಸ್ಪರ ಹೊಂದಾಣಿಕೆ ಇರುವುದು ಅಗತ್ಯವೆಂದೂ ಅದು ಸ್ವೇಚ್ಛೆಯಾಗಿ ನಡೆಯಲು ಅವಕಾಶಕೊಡಲು ಇದು ಕಾಲವಲ್ಲವೆಂದೂ ಇಂಡಿಯಾ ಸರ್ಕಾರದ ನಾಯಕರು ಘಂಟಾಘೋಷವಾಗಿ ಸಾರುತ್ತಿದ್ದಾರೆ ನಾವು ಇದರ ಸತ್ಯತೆಯನ್ನು ಗಮನಿಸುವುದಾವಶ್ಯಕ

ಅನಂತರ ಆಹಾರ ಮುಖ್ಯಾಧಿಕಾರಿಗಳು ೧೯೪೩ ರಲ್ಲಿ ಒಂದೂ ಮುಕ್ಕಾಲು ಕೋಟಿ ರೂಗಳಷ್ಟು ನಷ್ಟವಾಗಲು ಕಾರಣವನ್ನು ತಿಳಿಸಿದರು ಆ ವರ್ಷ ಸಂಸ್ಥಾನದಲ್ಲಿ ಕ್ಷಾಮವು ತಲೆದೋರಿತು ಇದರ ಪರಿಹಾರ ಕಾರ್ಯ ಕೈಗೊಳ್ಳಲು ಆ ವರ್ಷ ಶ್ರೀಮನ್ಮಹಾರಾಜರವರೂ, ವೈಸರಾಯರೂ, ಅಮೇರಿಕದ ಶ್ರೀ ಹೂವರ್‌ರವರೂ ಸಂಸ್ಥಾನದ ಕ್ಷಾಮಪೀಡಿತ ಪ್ರದೇಶಗಳಲ್ಲಿ ಸಂಚರಿಸಿದರು ಆಗಿನ ಸಂದರ್ಭದಲ್ಲಿ ನಾವು ಬೆಲೆಯನ್ನು ಮೊದಲೇ ಗಮನಿಸದೆ ಹೊರಗಡೆಯಿಂದ ಜರೂರಾಗಿ ಧಾನ್ಯ ಕೊಳ್ಳುವ ಪ್ರಮೇಯವಿತ್ತು ನಾವು ಹಾಗೆ ಮಾಡದಿದ್ದರೆ ಅನೇಕ ಅಮೂಲ್ಯ ಪ್ರಾಣಗಳು ಕ್ಷುದ್ಬಾಧೆಗೆ ಆಹುತಿಯಾಗಿ ನಾವು ದೇಶದ್ರೋಹಿಗಳಾಗುತ್ತಿದ್ದೆವು ಎಂದು ಹೇಳಿದರು.

ಡಾ॥ ಎಂ ಎಚ್. ಕೃಷ್ಣರವರು ಕಣ್ಮರೆಯಾದರು

ಮೈಸೂರು ಸಂಸ್ಥಾನದ ಆರ್ಕಿಯಾಲಜಿ ಇಲಾಖೆಯ ಡೈರೆಕ್ಟರಾದ ಡಾ॥ ಎಂ ಎಚ್ ಕೃಷ್ಣರವರು ೨೩ನೆಯ ತಾ॥ ರಾತ್ರಿ ಸುಮಾರು ೧೧ ಗಂಟೆಯ ವೇಳೆಯಲ್ಲಿ ಮೈಸೂರು ನಗರದಲ್ಲಿ ಇಲ್ವಾಲ್ ರಸ್ತೆಯಲ್ಲಿರುವ ತಮ್ಮ ಗೃಹದಲ್ಲಿ ಹೃದಯಕ್ರಿಯೆ ನಿಂತು ನಿಧನರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ ದಿವಂಗತ ಕೃಷ್ಣರವರು ಸುಪ್ರಸಿದ್ಧ ಇತಿಹಾಸಜ್ಞರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸಶಾಸ್ತ್ರದ ಪ್ರೊಫೆಸರಾಗಿದ್ದರು ಮತ್ತು ಆರ್ಕಿಯಾಲಜಿ ರಿಸರ್ಚ್ ಇಲಾಖೆಯ ಡೈರೆಕ್ಟರಾಗಿಯೂ ಇದ್ದರು

ವರ್ಧಂತ್ಯುತ್ಸವ ಇಲಕಲ್ಲು

ವಿಜಾಪುರ ಡಿ॥ ಇಲಕಲ್ಲು ಗ್ರಾಮದಲ್ಲಿರುವ ಡಾ॥ ಚಂದ್ರಶೇಖರಸ್ವಾಮಿ ಶಾಸ್ತ್ರೀ ಮ.ಠ ಇವರು ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಸಹ ಕಾರ್ತಿಕ ಶುದ್ಧ ಸಪ್ತಮಾ ಗುರುವಾರದ ದಿವಸ ತಮ್ಮ ಮಠದಲ್ಲಿ ತಮ್ಮ ವರ್ಧಂತ್ಯುತ್ಸವವನ್ನು ಮ.ಹಾ ಸಂಭ್ರಮದೊಡನೆ ನೆರವೇರಿಸಿದರು ಆ ದಿವಸ ಮಠದಲ್ಲಿ ರುದ್ರಾಭಿಷೇಕ ಆಚಾರ್ಯ ಪೂಜಾದಿಗಳು ನೆರವೇರಿದವು ಭಕ್ತಮಾಹೇಶ್ವರರಿಗೆ ಅನ್ನ ಸಂತರ್ಪಣೆಯು ನಡೆಯಿತು ಕುರುಡರು, ಕುಂಟರು, ಮೂಕರು, ಇತ್ಯಾದಿ ಅಂಗ ಹೀನರಿಗೆ ಅನ್ನದಾನ ವಸ್ತ್ರದಾನಗಳು ಮಾಡಲ್ಪಟ್ಟವು ಸಾಯಂಕಾಲ ಶಿವಕೀರ್ತನೆಯು ನೆರವೇರಿತು ಆ ಮೇಲೆ ಸದರಿ ಡಾ॥ ರವರು ಅಂಗಹೀನರಿಗೆ ಸರ್ವರೂ, ಸಹಾಯ ಮಾಡಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದೂ, ವೀರಶೈವರು ಧರ್ಮಭ್ರಷ್ಟರಾಗದೆ ಆಚ್ಛಾದನಗಳಲ್ಲಿ ನಿಷ್ಠೆಯನ್ನಿಟ್ಟು ಧನ್ಯರಾಗಬೇಕೆಂದೂ, ಭಾಷಣ ಮಾಡಿದರು ಇವರು ಬ್ರಹ್ಮಚಾರಿಗಳಾಗಿದ್ದು ಶಿವಪೂಜಾನಿಷ್ಠರೂ ಪರೋಪಕಾರಿಗಳೂ, ಸದ್ಗುಣಿಗಳೂ ಆಗಿರುವರು ಇವರು ಹೊಳೆ ಆಲೂರು ಗ್ರಾಮದಲ್ಲಿ ಶಿವಮಂದಿರವನ್ನು ಕಟ್ಟಿಸಿ ಪೂರ್ವಾಶ್ರಮದಲ್ಲಿದ್ದ ಈಗಿನ ರಂಭಾಪುರೀ ಜಗದ್ಗುರುಗಳವರ ಅಮೃತ ಹಸ್ತದಿಂದ ಉಮಾಮಹೇಶ್ವರ ಮೂರ್ತಿಯನ್ನು ಸ್ಥಾಪಿಸಿ ಮಹೋಪಕಾರವನ್ನು ಮಾಡಿರುವರು. ಈ ಮಹನೀಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ

ರೇವಣಸಿದ್ಧಯ್ಯ ಬಿಕ್ಷಾವರ್ತಿ, ಹಿರೇಮಠ
ಹೊಳೆ-ಆಲೂರು

ಸ್ವೀಕಾರ

ವಿಜಾಪುರ ಡಿ॥ ಇಲಕಲ್ಲು ಗ್ರಾಮದಲ್ಲಿರುವ ಡಾ॥ ಚಂದ್ರಶೇಖರಸ್ವಾಮಿ ಶಾಸ್ತ್ರಿಮಠ ಇವರ ವರ್ಧಂತ್ಯುತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ॥ ಹೊಳೆ-ಆಲೂರು ಬಿಕ್ಷಾವೃತ್ತಿ ಹಿರೇಮಠದ ರೇವಣಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಗದಗ ಟೌನಿನಲ್ಲಿರುವ ಶ್ರೀ ರಾಚೋಟಿ ವೀರಭದ್ರದೇವಸ್ಥಾನದಲ್ಲಿ ಕಳೆದ ಶ್ರಾವಣ ಮಾಸದಲ್ಲಿ ಶ್ರೀ ಶಿರಣಬಸವೇಶ್ವರ ಪುರಾಣವನ್ನು ಪ್ರವಚನಪಟು ವೇ॥ ಸಿದ್ಧಲಿಂಗದೇವರು ಹಿರೇಮಠ ಕುಂದಗೋಳ ಇವರಿಂದ ಹೇಳಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ರೂ. **1-8-0** ಗಳು ಮೇಲ್ಕಂಡ ದೇವಸ್ಥಾನದ ಕಮಿಟಿ ಅಧ್ಯಕ್ಷ ವೇ॥ ಗುಡ್ಡಿಮಠದ ಸಂಗಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವರ ಗಳಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರೂ ಸಿದ್ಧಾಂತಶಿಖಾಮಣಿಗ್ರಂಥವನ್ನು ಪ್ರಾಂಡ ತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಋಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸಮಸ್ತ ... ಗ್ರಂಥಗಳೆಲ್ಲಕ್ಕೂ ಇದೇ ಮೂಲಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವೆನಿಸಿರುವುದರಿಂದ ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಹೇಳಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವ ಉದ್ದೇಶದಿಂದ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹಳ ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರಿಗೆ ಈ ಗ್ರಂಥದ ವ್ಯಾಖ್ಯಾನದ ಮಹತ್ತ್ವವು ಗೊತ್ತಾಗದೆ ಇರದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೨೩೨ ಪುಟಗಳಿಂದ ಕೂಡಿದ್ದು ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೬ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ).	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಬಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೭೦ ಮಹತ್ವದ ಫೋಟೋಗಳಿರುವವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕೆ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*)	8 As.
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore